ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಾಲಂಕಾರದೊಂದಿಗೆ

ಭಾಗ–30

ಶಾಂತಿಪರ್ವ – ಮೋಕ್ಷಧರ್ಮಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩೦

ಶಾಂತಿಪರ್ವ - ಮೋಕ್ಷಧರ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ, ಮೈಸೂರು.

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಾಂತಿಪರ್ವ - ಮೋಕ್ಷಧರ್ಮಪರ್ವ - ಭಾರತತಾತ್ಪರ್ಯನಿರ್ಣಯ - ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಶಾಂತಿಪರ್ವ - ಮೋಕ್ಷಧರ್ಮಪರ್ವ - ಭಾಗ ೩೦

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-34-1

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	X + 598 = 608
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ, ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ವಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೦

ಶಾಂತಿಪರ್ವ - ಮೋಕ್ಷಧರ್ಮಪರ್ವ

ಪುಟ ಸಂ.

137. ಕರಾಲಜನಕ-ವಸಿಷ್ಠ ಸಂವಾದ 1

139. ವಸಿಷ್ಠ-ಜನಕರ ಸಂವಾದ 13

140. ವಸಿಷ್ಠ-ಜನಕರ ಸಂವಾದವು ಮುಂದುವರೆದುದು 25

141. ಜನಕ ವಂಶೀಯನಾದ ವಸುಮಂತನಿಗೆ ಭಾರ್ಗವಮುನಿ ಮಾಡಿದ ಧರ್ಮೋಪದೇಶ 40

142. ಯಾಜ್ಞವಲ್ಕ್ಯರು ಜನಕರಾಜನಿಗೆ ಉಪದೇಶಿಸಿದುದು 46

143. ಜನಕ-ಯಾಜ್ಞವಲ್ಕ್ಯರ ಸಂವಾದ 51

144. ಜನಕ-ಯಾಜ್ಞವಲ್ಕ್ಯರ ಸಂವಾದ 56

145. ಜನಕ-ಯಾಜ್ಞವಲ್ಕ್ಯ ಸಂವಾದ 60

146. ಜನಕ-ಯಾಜ್ಞವಲ್ಕ್ಯ ಸಂವಾದ 66

147. ಜನಕ-ಯಾಜ್ಞವಲ್ಕ್ಯ ಸಂವಾದ 71

148. ಜನಕ-ಯಾಜ್ಞವಲ್ಕ್ಯ ಸಂವಾದ 76

149. ಜನಕ-ಯಾಜ್ಞವಲ್ಕ್ಯ ಸಂವಾದ 83

150. ಯಾಜ್ಞವಲ್ಕ್ಯನು ಜನಕನಿಗೆ ಅನೇಕ ತತ್ತ್ವಗಳನ್ನು ಉಪದೇಶಿಸಿದುದು 88

151. ಜನಕನಿಗೂ ಪಂಚಶಿಖನಿಗೂ ನಡೆದ ಆಧ್ಯಾತ್ಮಿಕ ಸಂವಾದ 115

152. ಮುಕ್ತರ ಲಕ್ಷಣಗಳನ್ನು ಕುರಿತು ಸುಲಭೆಗೂ ಜನಕನಿಗೂ ನಡೆದ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು 119

153. ವೇದವ್ಯಾಸರಿಂದ ಶುಕಮುನಿಗಳಿಗೆ ವೈರಾಗ್ಯದ ಉಪದೇಶ 162

154. ಶುಭಾಶುಭ ಕರ್ಮಗಳ ಫಲವನ್ನು ಅನುಭವಿಸಬೇಕು ಎಂಬುದರ ವಿವರಣೆ 186

155. ವೇದವ್ಯಾಸರ ತಪಶ್ಚರಣೆ 190

156. ಶುಕಮುನಿಯ ಜನ್ಮ ಮೊದಲಾದ ವೃತ್ತಾಂತ 197

157. ವ್ಯಾಸರ ಆದೇಶದಂತೆ ಶುಕಮುನಿಯು ಮಿಥಿಲಾಪಟ್ಟಣಕ್ಕೆ ಆಗಮಿಸಿ, ಅಲ್ಲಿ ಸತ್ಕಾರವನ್ನು ಹೊಂದಿದುದು 201

158. ಶುಕ-ಜನಕರ ಸಂವಾದ 211

159. ವ್ಯಾಸರಿಂದ ಶುಕಮುನಿಗೆ ಧರ್ಮೋಪದೇಶ 222

160. ವ್ಯಾಸ ಕಥಾ 234

161. ನಾರದರಿಂದ ಶುಕಮುನಿಗೆ ವೇದಾಧ್ಯಯನ, ಜ್ಞಾನಗಳ ಉಪದೇಶ 251

162. ನಾರದರು ಶುಕಮುನಿಗೆ ನೀಡಿದ ಉಪದೇಶಗಳು 264

163. ನಾರದರಿಂದ ಶುಕಮುನಿಗೆ ವೈರಾಗ್ಯದ ಉಪದೇಶ 271

164. ಶುಕದೇವನ ಊರ್ಧ್ವಗತಿಯ ವರ್ಣನೆ 285

165. ಶುಕಮುನಿಯ ವೃತ್ತಾಂತ. ವ್ಯಾಸರಿಗೆ ಮಹದೇವನ ಉತ್ತರ 291

166. ನಾರದ-ನಾರಾಯಣ ಸಂವಾದ 300

167. ನಾರದರಿಂದ ಉಪರಿಚರ ವಸುವಿನ ಚರಿತೆ 310

168. ಬೃಹಸ್ಪತಿಯು ಉಪರಿಚರ ವಸುವಿನಿಂದ ಯಜ್ಞವನ್ನು ಮಾಡಿಸಿದಾಗ ಭಗವಂತನೇ ಆ ಯಜ್ಞಕ್ಕೆ ಆಗಮಿಸಿ ಭಾಗವಹಿಸಿದುದು. ಬೃಹಸ್ಪತಿಯು ಕೋಪಗೊಂಡಾಗ ಏಕತನೇ ಮೊದಲಾದ ಋಷಿಗಳು ಸಮಾಧಾನಪಡಿಸಿದುದು 323

169. ಉಪರಿಚರ ವಸುವು ಸ್ವರ್ಗಭ್ರಷ್ಟನಾಗಲು ಕಾರಣವೇನೆಂಬುದನ್ನು ನಿರೂಪಿಸಿದುದು 335

170. ನಾರದರಿಂದ ಶ್ವೇತದ್ವೀಪಪತಿ ಶ್ರೀಪತಿ ಸ್ತುತಿ 344

171. ಶ್ವೇತದ್ವೀಪದಲ್ಲಿ ನಾರದರಿಗಾದ ಭಗವಂತನ ದರ್ಶನ 349

172. ಶ್ರೀಹರಿಯು ಬ್ರಹ್ಮಾದಿಗಳಿಗೆ ಉಪದೇಶಿಸಿದ ಧರ್ಮರಹಸ್ಯವನ್ನು ವ್ಯಾಸರು ತಮ್ಮ ಶಿಷ್ಯರಿಗೆ ಬೋಧಿಸಿದುದು 383

173. ಕೃಷ್ಣನು ಅರ್ಜುನನಿಗೆ ತನ್ನ ನಾಮನಿರ್ವಚನಗಳನ್ನು
ಹೇಳುವ ಮೂಲಕ ಮಹಿಮೆಯನ್ನು ತಿಳಿಸಿದುದು 406

174. ಮಧುಸೂದನನು ಗಾಂಡೀವಿಗೆ ಬೋಧಿಸಿದ ಭಗನ್ಮಹಿಮೆ 421

175. ಕೃಷ್ಣನು ತನ್ನ ನಾಮಗಳ ನಿರ್ವಚನವನ್ನು ತಿಳಿಸಿ, ಶಿವನಿಗೂ
ನಾರಾಯಣನಿಗೂ ನಡೆದ ಯುದ್ಧವನ್ನು ಅರ್ಜುನನಿಗೆ ತಿಳಿಸಿದುದು 446

176. ನಾರದರು ಶ್ವೇತದ್ವೀಪಕ್ಕೆ ತೆರಳಿ ನರ-ನಾರಾಯಣರನ್ನು
ದರ್ಶನ ಮಾಡಿದುದು. ಶ್ವೇತದ್ವೀಪದ ಮಹಿಮೆ 464

177. ನರ-ನಾರಾಯಣರಿಂದ ನಾರದರ ಪ್ರಶಂಸೆ.
ವಾಸುದೇವ ಮಹಿಮಾ ಕಥನ 475

178. ವರಾಹರೂಪಿಯಾದ ಹರಿಯು ನಿರೂಪಿಸಿದ ಪಿತೃಪೂಜೆ 481

179. ನಾರಾಯಣನ ಮಹಿಮೆಯ ಉಪಸಂಹಾರ 487

180. ವೇದ ಉದ್ಧರಿಸಿದ ಹಯಗ್ರೀವನ ಕಥೆ 492

181. ಧರ್ಮಬೋಧೆ 511

182. ವ್ಯಾಸಾವತಾರ 528

183. ಬ್ರಹ್ಮನಿಂದ ನಾರಾಯಣನ ಮಹಿಮೆಯ ಕಥನ 544

184. ನಾರಾಯಣನ ಮಹಿಮೆಯ ವರ್ಣನೆ 550

185. ಇಂದ್ರನಿಗೆ ನಾರದರು ಉಪದೇಶಿಸಿದ ಬ್ರಾಹ್ಮಣನ ಕಥೆ 556

186. ಮಹಾಪದ್ಮಪುರದ ಬ್ರಾಹ್ಮಣನ ಕಥೆ 559

187. ಅತಿಥಿಯಿಂದ ಅನೇಕ ಧರ್ಮಗಳ ಕಥನ 561

188. ನಾಗರಾಜನ ಸದಾಚಾರವನ್ನು ವರ್ಣಿಸಿದುದು 565

189. ಅತಿಥಿಯ ಮಾತಿನಂತೆ ನಾಗರಾಜನ ಬಳಿ ತೆರಳಿದ ಬ್ರಾಹ್ಮಣ 567

190. ಬ್ರಾಹ್ಮಣನು ಪದ್ಮರಾಜನ ಮನೆಗೆ ಆಗಮಿಸಿದುದು.
ಅವನ ಪತ್ನಿಯಿಂದ ಸತ್ಕಾರ 570

191. ನಾಗರಾಜನ ದರ್ಶನಕ್ಕಾಗಿ ಬ್ರಾಹ್ಮಣನ ತಪಶ್ಚರಣೆ 573

192. ನಾಗರಾಜನು ಮನೆಗೆ ಆಗಮಿಸಿದುದು. ನಾಗಪತ್ನಿಯು ಬ್ರಾಹ್ಮಣನನ್ನು ನೋಡಲು ಒತ್ತಾಯಿಸಿದುದು 576

193. ಪತ್ನಿಯ ಮಾತಿನಿಂದ ಪದ್ಮರಾಜನು ಬ್ರಾಹ್ಮಣನ ಬಳಿ ಹೋಗಲು ನಿಶ್ಚಯಿಸಿದುದು 579

194. ಬ್ರಾಹ್ಮಣ-ನಾಗರಾಜರ ಸಂಭಾಷಣೆ 584

195. ನಾಗರಾಜನಿಂದ ಬ್ರಾಹ್ಮಣನಿಗೆ ಸೂರ್ಯಲೋಕದ ಆಶ್ಚರ್ಯಸಂಗತಿಗಳ ವಿವರಣೆ 587

196. ಉಂಛವೃತ್ತಿಯಿಂದ ಸಿದ್ಧಿಯನ್ನು ಪಡೆದ ಸಾಧಕನ ಗತಿಯ ವರ್ಣನೆ 591

197. ಉಂಛವೃತ್ತಿಯ ಮಹಿಮೆಯನ್ನು ತಿಳಿದ ಬ್ರಾಹ್ಮಣನು ಹಾಗೆಯೇ ಅನುಷ್ಠಾನ ಮಾಡುವುದಾಗಿ ಹೇಳಿ ಮನೆಗೆ ಹೊರಟನು. 593

198. ನಾಗರಾಜನ ಅನುಮತಿಯನ್ನು ಪಡೆದು ಚ್ಯವನಮಹರ್ಷಿಯ ಬಳಿ ಸಾಗಿದ ಬ್ರಾಹ್ಮಣನು ಉಂಛವೃತ್ತಿಯ ದೀಕ್ಷೆಯನ್ನು ಸ್ವೀಕರಿಸಿದುದು 596

* * * * *

ಮಹಾಭಾರತ

ಮೋಕ್ಷಧರ್ಮಪರ್ವ

ನೂರ ಮೂವತ್ತೆಂಟನೆಯ ಅಧ್ಯಾಯ

ಕರಾಲಜನಕ-ವಸಿಷ್ಠ ಸಂವಾದ

ಕರಾಲಜನಕಃ

ನಾನಾತ್ವೈಕತ್ವಮಿತ್ಯುಕ್ತಂ ತ್ವಯೈತದೃಷಿಸತ್ತಮ ।
ಪಶ್ಯಾಮಿ ಚಾಭಿಸಂದಿಗ್ಧಮೇತಯೋರ್ವೈ ನಿದರ್ಶನಮ್ ॥೧॥

ಕರಾಲಜನಕ– ಮಹರ್ಷಿಗಳೇ, ಕ್ಷರ ಪುರುಷನಲ್ಲಿ ಅನೇಕ ಭೇದಗಳಿವೆ ಎಂದು ಅಕ್ಷರ ಪುರುಷನಾದವನು ಭಗವಂತನೊಬ್ಬನೇ ಎಂದು ಹೇಳಿದ್ದೀರಿ. ನೀಡಿರುವ ದೃಷ್ಟಾಂತಗಳಲ್ಲಿ ನನಗೆ ಸಂದೇಹವುಂಟಾಗಿದೆ.

ತಥಾಪ್ರಬುದ್ಧಬುದ್ಧಾಭ್ಯಾಂ ಬುದ್ಧ್ಯಮಾನಸ್ಯ ಚಾನಘ ।
ಸ್ಥೂಲಬುದ್ಧ್ಯಾ ನ ಪಶ್ಯಾಮಿ ತತ್ತ್ವಮೇತನ್ನ ಸಂಶಯಃ ॥೨॥

ಅಜ್ಞಾನಿಗಳು, ಜ್ಞಾನಿಗಳು ಕಾಣುವ ದೃಷ್ಟಿಕೋನಗಳು ಏನೆಂಬುದನ್ನು ಸ್ಥೂಲಬುದ್ಧಿಯಾದವನಾದ ನಾನು ತಿಳಿದಿರುವುದಿಲ್ಲ. ಈ ವಿಷಯದಲ್ಲಿ ನನಗೆ ಅಜ್ಞಾನವಿದೆ.

ಅಕ್ಷರಕ್ಷರಯೋರುಕ್ತಂ ತ್ವಯಾ ಯದಪಿ ಕಾರಣಮ್ ।
ತದಪ್ಯಸ್ಥಿರಬುದ್ಧಿತ್ವಾತ್ ಪ್ರನಷ್ಟಮಿವ ಮೇಽನಘ ॥೩॥

ಅನಘರೇ, ನೀವು ಕ್ಷರ ಅಕ್ಷರ ವಸ್ತುಗಳ ಸ್ವರೂಪವನ್ನು ತಿಳಿಸಲು ಅನೇಕ ವಿಧವಾದ ದೃಷ್ಟಾಂತಗಳನ್ನು ಹೇಳಿದ್ದೀರಿ. ನನ್ನ ಬುದ್ಧಿಯು ಅಸ್ಥಿರವಾಗಿರುವುದರಿಂದ ತಾವು ಹೇಳಿರುವ ಮಾತುಗಳು ಸ್ಮರಣೆಯಿಂದ ನಷ್ಟವಾದಂತೆ ತೋರುತ್ತಿದೆ.

ತದೇತಚ್ಛ್ರೋತುಮಿಚ್ಛಾಮಿ ನಾನಾತ್ವೈಕತ್ವದರ್ಶನಮ್ ।
ಬುದ್ಧಮಪ್ರತಿಬುದ್ಧಂ ಚ ಬುದ್ಧ್ಯಮಾನಂ ಚ ತತ್ತ್ವತಃ ॥೪॥

ಆದ್ದರಿಂದ ನಾನು ನಾನಾತ್ವ, ಏಕತ್ವಗಳ ವಿಷಯದಲ್ಲಿ ಪುನಃ ತಿಳಿಯಲು ಬಯಸಿದ್ದೇನೆ. ಜ್ಞಾನಿ-ಅಜ್ಞಾನಿಗಳ ವಿಷಯದಲ್ಲಿ, ಜ್ಞೇಯ ವಿಷಯದಲ್ಲಿಯೂ ಯಥಾರ್ಥವಾಗಿ ತಿಳಿಯಬೇಕೆಂದಿದ್ದೇನೆ.

ವಿದ್ಯಾವಿದ್ಯೇ ಚ ಭಗವನ್ಕ್ಷರಂ ಕ್ಷರಮೇವ ಚ ।
ಸಾಂಖ್ಯಂ ಯೋಗಂ ಚ ಕಾರ್ತ್ಸ್ನ್ಯೇನ ಪೃಥಕ್ಚೈವಾಪೃಥಕ್ಚ ಹ ॥೫॥

ಪೂಜ್ಯರೇ, ವಿದ್ಯೆ-ಅವಿದ್ಯೆ, ಕ್ಷರ-ಅಕ್ಷರ, ಸಾಂಖ್ಯ-ಯೋಗ ಇವುಗಳ ವಿಷಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪೂರ್ಣವಾಗಿ ತಿಳಿಯಬೇಕೆಂದಿದ್ದೇನೆ.

ವಸಿಷ್ಠಃ

ಹಂತ ತೇ ಸಂಪ್ರವಕ್ಷ್ಯಾಮಿ ಯದೇತದನುಪೃಚ್ಛಸಿ ।
ಯೋಗಕೃತ್ಯಂ ಮಹಾರಾಜ ಪೃಥಗೇವ ಶೃಣುಷ್ವ ಮೇ ॥೬॥

ವಸಿಷ್ಠರು– ಮಹಾರಾಜನೇ, ನೀನು ಯಾವ ಪ್ರಶ್ನೆಗಳನ್ನು ಕೇಳಿದ್ದೀಯೋ ಅವೆಲ್ಲದಕ್ಕೂ ಸಮಂಜಸವಾದ ಉತ್ತರವನ್ನು ಹೇಳುತ್ತೇನೆ. ಮೊದಲು ಯೋಗದ ವಿಷಯವನ್ನು ಕೇಳಿಸಿಕೊ.

ಯೋಗಕೃತ್ಯಂ ತು ಯೋಗಾನಾಂ ಧ್ಯಾನಮೇವ ಪರಂ ಬಲಮ್ ।
ತಚ್ಚಾಪಿ ದ್ವಿವಿಧಂ ಧ್ಯಾನಮಾಹುರ್ವೇದವಿದೋ ಜನಾಃ ॥೭॥

ಯೋಗಿಗಳ ಪ್ರಧಾನವಾದ ಕರ್ತವ್ಯವು ಧ್ಯಾನವೆನಿಸಿದೆ. ಧ್ಯಾನವೇ ಪರಮ ಬಲವಾಗಿದೆ. ಧ್ಯಾನವನ್ನು ವೇದವಿದರು ಎರಡು ರೀತಿಯಾಗಿ ತಿಳಿಸುತ್ತಾರೆ.

ಏಕಾಗ್ರತಾ ಚ ಮನಸಃ ಪ್ರಾಣಾಯಾಮಸ್ತಥೈವ ಚ ।
ಪ್ರಾಣಾಯಾಮಸ್ತು ಸಗುಣೋ ನಿರ್ಗುಣೋ ಮನಸಸ್ತಥಾ ॥೮॥

ಮನಸ್ಸಿನ ಏಕಾಗ್ರತೆ ಮೊದಲನೆಯದ್ದಾದರೆ ಪ್ರಾಣಾಯಾಮವು ಎರಡನೆಯದ್ದಾಗಿದೆ. ಪ್ರಾಣಾಯಾಮವಾದರೂ ರೇಚಕ, ಪೂರಕ, ಕುಂಭಕ ಎಂಬ ಗುಣಗಳಿಂದ ಕೂಡಿದ್ದಾಗಿದೆ. ಮನಸ್ಸಿಗೆ ಸಂಬಂಧಪಟ್ಟ ಏಕಾಗ್ರತೆಯ ಧ್ಯಾನದಲ್ಲಿ ಪರಮಾತ್ಮನು ಪ್ರಾಕೃತ ಗುಣರಹಿತ ಎಂದು ಚಿಂತಿಸಬೇಕು.

ಮೂತ್ರೋತ್ಸರ್ಗೇ ಪುರೀಷೇ ಚ ಭೋಜನೇ ಚ ನರಾಧಿಪ ।
ತ್ರಿಕಾಲಂ ನಾಭಿಯುಂಜೀತ ಶೇಷಂ ಯುಂಜೀತ ತತ್ಪರಃ ॥೯॥

ಜನಕರಾಜನೇ, ಮಲತ್ಯಾಗ, ಮೂತ್ರೋತ್ಸರ್ಜನೆ, ಭೋಜನ ಈ ಮೂರು ಕಾಲಗಳಲ್ಲಿ ಯೋಗಾಭ್ಯಾಸವನ್ನು ಮಾಡಬಾರದು. ಉಳಿದ ಕಾಲಗಳಲ್ಲಿ ಯೋಗಾಭ್ಯಾಸ ರತನಾಗಿರಬೇಕು.

ಇಂದ್ರಿಯಾಣೀಂದ್ರಿಯಾರ್ಥೇಭ್ಯೋ ನಿವರ್ತ್ಯ ಮನಸಾ ಮುನಿಃ ।
ದಶದ್ವಾದಶಭಿರ್ವಾಪಿ ಚತುರ್ವಿಂಶಾತ್ ಪರಂ ತತಃ ॥೧೦॥

ಇಂದ್ರಿಯಗಳನ್ನು ವಿಷಯ ಸುಖಗಳಿಂದ ಹಿಂದಿರುಗಿಸಿ ಪರಿಶುದ್ಧವಾದ ಮನಸ್ಸಿನಿಂದ ಇಪ್ಪತ್ತೆರಡು ಅಥವಾ ಇಪ್ಪತ್ನಾಲ್ಕು ತತ್ತ್ವಗಳಿಂದ ಆಚೆಯಿರುವ ಭಗವಂತನನ್ನು ಧ್ಯಾನಿಸಬೇಕು.

ವ್ಯಾಖ್ಯಾನ ವಿಶೇಷ– ನೆತ್ತಿಯಿಂದ ಕಾಲಿನ ತನಕ ಹದಿನೆಂಟು ಸ್ಥಾನಗಳಲ್ಲಿ ಪ್ರಾಣವಾಯುವನ್ನು ಕ್ರಮವಾಗಿ ಒಂದರಿಂದ ಒಂದಕ್ಕೆ ಸೇರಿಸುವುದರೊಡನೆ ಧ್ಯಾನ, ಧಾರಣ, ಸಮಾಧಿ, ಪ್ರಕೃತಿ–ಪುರುಷ ವಿವೇಚನೆ ಎಲ್ಲ ಸೇರಿ ಇಪ್ಪತ್ತೆರಡು ವಿವೇಚನೆಗಳಾಗುತ್ತವೆ.

ತಂ ಚೋದನಾಭಿರ್ಮತಿಮಾನಾತ್ಮಾನಂ ಚೋದಯೇದಥ ।
ತಿಷ್ಠಂತಮಜರಂ ತಂ ತು ಯತ್ತದುಕ್ತಂ ಮನೀಷಿಭಿಃ ॥೧೧॥

ಇಪ್ಪತ್ತೆರಡುವಿಧವಾದ ಪ್ರೇರಣೆಗಳಿಂದ ಪರಮಾತ್ಮನನ್ನು ತಿಳಿಯಲು ಜೀವಾತ್ಮನನ್ನು ಪ್ರಚೋದಿಸಬೇಕು. ಧ್ಯಾನಿಗಳು ಅಜರನಾದ ಭಗವಂತನು ನಮ್ಮ ಅಂತರ್ಯಾಮಿಯಾಗಿದ್ದಾನೆ ಎಂದು ಹೇಳಿರುತ್ತಾರೆ.

ತೈಶ್ಚಾತ್ಮಾ ಸತತಂ ಜ್ಞೇಯ ಇತ್ಯೇವಮನುಶುಶ್ರುಮ ।
ದ್ರವ್ಯಂ ಹ್ಯಹೀನಮನಸೋ ನಾನ್ಯಥೇತಿ ವಿನಿಶ್ಚಯಃ ॥೧೨॥

ನಿಯತೇಂದ್ರಿಯರಾದ ವ್ಯಕ್ತಿಗಳು ಯಾವಾಗಲೂ ಆ ಭಗವಂತನನ್ನು ಚಿಂತಿಸಬೇಕು ಎಂದು ಕೇಳಿದ್ದೇವೆ. ವಿಷಯಪದಾರ್ಥಗಳಿಂದ ದೂರವಾದ ಮನಸ್ಸು ಭಗವಂತನನ್ನು ಧ್ಯಾನಿಸುತ್ತದೆ ಇಲ್ಲವಾದಲ್ಲಿ ಇಲ್ಲ ಎಂಬುದು ನಿಶ್ಚಯವು.

ವಿಮುಕ್ತಃ ಸರ್ವಸಂಗೇಭ್ಯೋ ಲಘ್ವಾಹಾರೋ ಜಿತೇಂದ್ರಿಯಃ ।
ಪೂರ್ವರಾತ್ರೇ ಪರೇ ಚೈವ ಧಾರಯೇತ ಮನೋऽऽತ್ಮನಿ ॥೧೩॥

ಎಲ್ಲ ವಿಧವಾದ ಬಾಹ್ಯ ಆಸಕ್ತಿಗಳಿಂದ ದೂರನಾಗಿ, ಮಿತಾಹಾರಿಯಾದ, ಜಿತೇಂದ್ರಿಯನಾದ ಯೋಗಿಯು ರಾತ್ರಿಯ ಮೊದಲನೆಯ ಯಾಮದಲ್ಲಾಗಲಿ, ರಾತ್ರಿಯ ಕೊನೆಯ ಯಾಮದಲ್ಲಾಗಲಿ ಮನಸ್ಸನ್ನು ಪರಮಾತ್ಮನಲ್ಲಿ ಏಕಾಗ್ರತೆಗೊಳಿಸಿಕೊಳ್ಳಬೇಕು.

ಸ್ಥಿರೀಕೃತ್ಯೇಂದ್ರಿಯಗ್ರಾಮಂ ಮನಸಾ ಮಿಥಿಲೇಶ್ವರ ।
ಮನೋ ಬುದ್ಧ್ಯಾ ಸ್ಥಿರಂ ಕೃತ್ವಾ ಪಾಷಾಣ ಇವ ನಿಶ್ಚಲಃ ॥೧೪॥

ಸ್ಥಾಣುವಚ್ಚಾಪ್ಯಕಂಪಃ ಸ್ಯಾದ್ ಗಿರಿವಚ್ಚಾಪಿ ನಿಶ್ಚಲಃ ।
ಬುಧಾ ವಿಧಿವಿಧಾನಜ್ಞಾಸ್ತದಾ ಯುಕ್ತಂ ಪ್ರಚಕ್ಷತೇ ॥೧೫॥

ಮಿಥಿಲೇಶ್ವರನೇ, ಯಾವಾಗ ಯೋಗಿಯು ಮನಸ್ಸಿನಿಂದ ಇಂದ್ರಿಯ ಸಮುದಾಯಗಳನ್ನು ನಿಶ್ಚಂಚಲಗೊಳಿಸಿ ಬುದ್ಧಿಯಿಂದ ಮನಸ್ಸನ್ನು ಏಕಾಗ್ರಗೊಳಿಸಿ ಕಲ್ಲಿನಂತೆ ನಿಶ್ಚಂಚಲನಾಗಿ, ಮೋಟು ಮರದಂತೆ ಕಂಪನವಿಲ್ಲದವನಾಗಿ, ಪರ್ವತದಂತೆ ನಿಶ್ಚಲನಾಗಿರುತ್ತಾನೋ ಅವನನ್ನು ಆಗ ಬುದ್ಧಿಯಿಂದ ಯೋಗಶಾಸ್ತ್ರದ ವಿಧಿ ವಿಧಾನಗಳನ್ನು ತಿಳಿದ ಜ್ಞಾನಿಗಳು ಯೋಗಯುಕ್ತನೆಂದು ಹೇಳುತ್ತಾರೆ.

ನ ಶೃಣೋತಿ ನ ಚಾಘ್ರಾತಿ ನ ರಸ್ಯತಿ ನ ಪಶ್ಯತಿ ।
ನ ಚ ಸ್ಪರ್ಶಂ ವಿಜಾನಾತಿ ನ ಸಂಕಲ್ಪಯತೇ ಮನಃ ॥೧೬॥

ನ ಚಾಭಿಮನ್ಯತೇ ಕಿಂಚಿನ್ನ ಚ ಬುದ್ಧ್ಯತಿ ಕಾಷ್ಠವತ್ ।
ತದಾ ಪ್ರಕೃತಿಮಾಪನ್ನಂ ಯುಕ್ತಮಾಹುರ್ಮನೀಷಿಣಃ ॥೧೭॥

ಬಾಹ್ಯವಾಗಿ ಶಬ್ದವು ಉಂಟಾಗುತ್ತಿದ್ದರೂ ಯೋಗಾರೂಢನಾದವನಿಗೆ ಆ ಶಬ್ದವು ಯಾವಾಗ ಕೇಳಿಸುವುದಿಲ್ಲವೋ, ವಾಸನೆ ಬರುತ್ತಿದ್ದರೂ ಆಘ್ರಾಣಿಸುವುದಿಲ್ಲವೋ, ನಾಲಿಗೆಯ ಮೇಲೆ ಭಕ್ಷ್ಯವನ್ನಿಟ್ಟಿದ್ದರೂ ರುಚಿಯನ್ನು ತಿಳಿಯುವುದಿಲ್ಲವೋ, ಮುಟ್ಟಿದರೂ ಸ್ಪರ್ಶದ ಅರಿವಾಗುವುದಿಲ್ಲವೋ, ಮನಸ್ಸಿಗೆ ಬಾಹ್ಯಸಂಕಲ್ಪಗಳ ಯೋಚನೆ ಇರುವುದಿಲ್ಲವೋ, ಯಾವುದರ ಬಗ್ಗೆಯೂ ಅಭಿಮಾನವನ್ನು ಹೊಂದುವುದಿಲ್ಲವೋ, ಬುದ್ಧಿಯು ಕಟ್ಟಿಗೆಯಂತೆ ಬಾಹ್ಯವಿಷಯದಲ್ಲಿ ಜಡವಾಗಿರುತ್ತದೋ ಇಂತಹ ಸ್ವಭಾವವನ್ನು ಹೊಂದಿದ ವ್ಯಕ್ತಿಯನ್ನು ಯೋಗಯುಕ್ತನೆಂದು ಜ್ಞಾನಿಗಳು ಹೇಳುತ್ತಾರೆ.

ನಿವಾತೇ ಚ ಯಥಾ ದೀಪ್ಯಂದೀಪಸ್ತದ್ವತ್ಸ ದೃಶ್ಯತೇ ।
ನಿರಿಂಗಶ್ಚಾಚಲಶ್ಚೋರ್ಧ್ವಂ ನ ತಿರ್ಯಗ್ಗತಿಮಾಪ್ನುಯಾತ್ ॥೧೮॥

ಗಾಳಿ ಇಲ್ಲದಿರುವ ಸ್ಥಳದಲ್ಲಿ ದೀಪವು ಚಲಿಸದಂತೆ ಪ್ರಕಾಶ ಹೇಗೆ ನೀಡುತ್ತದೋ, ಇದರಂತೆ ಸಾಧಕನು ನಿಶ್ಚಂಚಲನಾಗಿರುತ್ತಾನೆ. ಯಾವುದೇ ಆಕಾಂಕ್ಷೆಗಳಿಲ್ಲದೆ ಅಚಲವಾಗಿರುವ ಬುದ್ಧಿಯಿಂದ ಭಗವಂತನನ್ನೇ ಯೋಚಿಸುವ ವ್ಯಕ್ತಿಯು ತಿರ್ಯಗ್ಯೋನಿಗಳಲ್ಲಿ ಹುಟ್ಟುವುದಿಲ್ಲ.

ತದಾ ತಮನುಪಶ್ಯೇತ ಯಸ್ಮಿನ್ ದೃಷ್ಟೇ ತು ಕಥ್ಯತೇ ।
ಹೃದಯಸ್ಥೋಽಂತರಾತ್ಮೇತಿ ಜ್ಞೇಯೋ ಜ್ಞಸ್ತಾತ ಮದ್ವಿಧೈಃ ॥೧೯॥

ಅಂತಹ ಯೋಗದಲ್ಲಿ ಭಗವಂತನನ್ನು ಆ ಯೋಗಿಯು ಕಂಡಾನು. ಆ ಭಗವಂತನನ್ನು ಕಂಡಾಗ ಅವನನ್ನು ಜ್ಞಾನಿ ಎಂದು ಕರೆಯುತ್ತಾರೆ. ಜ್ಞೇಯನಾದ, ಹೃದಯಸ್ಥನಾದ ಅಂತರಾತ್ಮನು ತಿಳಿಯಲ್ಪಟ್ಟನು ಎಂದು ನಮ್ಮಂಥವರು ಹೇಳುತ್ತಾರೆ.

ವಿಧೂಮ ಇವ ಸಪ್ತಾರ್ಚಿರಾದಿತ್ಯ ಇವ ರಶ್ಮಿಮಾನ್ ।
ವೈದ್ಯುತೋಽಗ್ನಿರಿವಾಕಾಶೇ ದೃಶ್ಯತೇಽತ್ಮಾ ತಥಾತ್ಮನಿ ॥೨೦॥

ಹೊಗೆ ಇಲ್ಲದಿರುವ ಅಗ್ನಿಯಂತೆ, ಕಿರಣಗಳಿಂದ ಕೂಡಿದ ಸೂರ್ಯನಂತೆ, ಆಕಾಶದಲ್ಲಿ ಉಂಟಾದ ಮಿಂಚಿನಂತೆ ಯೋಗಿಯ ಹೃದಯದಲ್ಲಿ ಪರಮಾತ್ಮನು ಕಾಣಿಸಿಕೊಳ್ಳುತ್ತಾನೆ.

ಯಂ ಪಶ್ಯಂತಿ ಮಹಾತ್ಮಾನೋ ಧೃತಿಮಂತೋ ಮನೀಷಿಣಃ ।
ಬ್ರಾಹ್ಮಣಾ ಬ್ರಹ್ಮಯೋನಿಷ್ಠಾ ಹ್ಯಯೋನಿಮಮೃತಾತ್ಮಕಮ್ ॥೨೧॥

ನಿರ್ಧಾರವಾದ ಬುದ್ಧಿಯಿಂದ ಕೂಡಿದ ವಿದ್ವಾಂಸರು, ಬ್ರಹ್ಮಬೋಧಕ ಶಾಸ್ತ್ರದಲ್ಲಿ ನಿಷ್ಠರಾದ ಬ್ರಾಹ್ಮಣರು ಅಜನ್ಮನೆನಿಸಿದ ಅಮೃತಸ್ವರೂಪನಾದ ಬ್ರಹ್ಮನನ್ನು ಬುದ್ಧಿಯ ಧೃತಿಯಿಂದ ಹೃದಯ ಗುಹೆಯಲ್ಲಿ ಕಂಡುಕೊಳ್ಳುತ್ತಾರೆ.

ತದೇವಾಹುರಣುಭ್ಯೋಽಣು ತನ್ಮಹದ್ಭ್ಯೋ ಮಹತ್ತರಮ್ ।
ತದಂತಃ ಸರ್ವಭೂತೇಷು ಧ್ರುವಂ ತಿಷ್ಠನ್ನ ದೃಶ್ಯತೇ ॥೨೨॥

ಆತ್ಮದರ್ಶಿಗಳಾದ ಜ್ಞಾನಿಗಳು ಬ್ರಾಹ್ಮಣರನ್ನು ಅಣುವಿಗಿಂತಲೂ ಅಣುವೆಂದು, ಮಹತ್ತಿಗಿಂತಲೂ ಮಹತ್ತೆಂದು, ಸಮಸ್ತ ಪ್ರಾಣಿಗಳ ಅಂತರ್ಯಾಮಿ ಎಂದು, ಅದೃಶ್ಯನೆಂದು, ಶಾಶ್ವತನೆಂದು ತಿಳಿದಿರುತ್ತಾರೆ.

ಬುದ್ಧಿದ್ರವ್ಯೇಣ ದೃಶ್ಯೇತ ಮನೋದೀಪೇನ ಲೋಕಕೃತ್ ।
ಮಹತಸ್ತಮಸಸ್ತಾತ ಪಾರೇ ತಿಷ್ಠನ್ನತಾಮಸಃ ॥೨೩॥

ಬುದ್ಧಿ ಎಂಬ ತುಪ್ಪದಿಂದ, ಮನಸ್ಸೆಂಬ ದೀಪದಿಂದ, ಲೋಕಕರ್ತೃವಾದ ಪರಮಾತ್ಮನನ್ನು ಹೃದಯಾಕಾಶದಲ್ಲಿ ಕಂಡುಕೊಳ್ಳಬೇಕು. ಮಹಾಂಧಕಾರದಿಂದ ಆಚೆ ಇರುವ, ತಮೋಗುಣದಿಂದ ರಹಿತನಾದವನೆಂದು ಪರಮಾತ್ಮನನ್ನು ತಿಳಿಯಬೇಕು.

ಸ ತಮೋನುದ ಇತ್ಯುಕ್ತಸ್ತತ್ತ್ವಜ್ಞೈರ್ವೇದಪಾರಗೈಃ ।
ವಿಮಲೋ ವಿತಮಸ್ಕಶ್ಚ ನಿರ್ಲಿಂಗೋ ಲಿಂಗಸಂಜ್ಞಿತಃ ॥೨೪॥

ಈ ರೀತಿಯಾಗಿ ಪರಮಾತ್ಮನನ್ನು ಅರಿತವನನ್ನು ವೇದಪಾರಂಗತರು ತತ್ತ್ವಜ್ಞನೆಂದು ಮತ್ತೊಬ್ಬರ ಅಜ್ಞಾನವನ್ನು ಪರಿಹರಿಸುವವನೆಂದು ಹೇಳುತ್ತಾರೆ. ವಿಮಲನೂ, ಅಜ್ಞಾನವಿಲ್ಲದವನೂ, ಯಾವುದೇ ಬಾಹ್ಯಲಿಂಗವಿಲ್ಲದೇ ಇದ್ದವನೂ ಆದ್ದರಿಂದಲೇ ಲಿಂಗ ಎಂದು ಕರೆಸಿಕೊಳ್ಳುವವವನು ಆಗಿದ್ದಾನೆ.

ಯೋಗಮೇತದ್ಧಿ ಯೋಗಾನಾಂ ಮನ್ಯೇ ಯೋಗಸ್ಯ ಲಕ್ಷಣಮ್ ।
ಏವಂ ಪಶ್ಯನ್ ಪ್ರಪಶ್ಯಂತಿ ಆತ್ಮಾನಮಜರಂ ಪರಮ್ ॥೨೫॥

ಯೋಗಗಳ ಮಧ್ಯದಲ್ಲಿ ಭಗವಂತನನ್ನು ಕಾಣುವುದೇ ನಿಜವಾದ ಯೋಗದ ಲಕ್ಷಣವು. ಜರಾರಹಿತವಾದ ಪರಬ್ರಹ್ಮನೆಂಬ ಪರಮಾತ್ಮನನ್ನು ನೋಡಬೇಕಾದ ವಸ್ತುವೆಂದು ಯೋಗಿಗಳು ನೋಡುತ್ತಾರೆ.

ಯೋಗದರ್ಶನಮೇತಾವದುಕ್ತಂ ತೇ ತತ್ತ್ವತೋ ಮಯಾ ।
ಸಾಂಖ್ಯಜ್ಞಾನಂ ಪ್ರವಕ್ಷ್ಯಾಮಿ ಪರಿಸಂಖ್ಯಾನದರ್ಶನಮ್ ॥೨೬॥

ಜನಕರಾಜನೇ, ಇಷ್ಟರತನಕ ನಿನಗೆ ಯೋಗದರ್ಶನವನ್ನು ಯಥಾರ್ಥವಾಗಿ ತಿಳಿಸಿರುತ್ತೇನೆ. ಇನ್ನು ಮುಂದೆ ನಿಯಮ ಪೂರ್ವಕವಾಗಿ ವಿಧಿಸಲ್ಪಡುವ ದೃಷ್ಟಾಂತದಿಂದ ತತ್ತ್ವಪರಿಗಣನೆ ಇರುವ ಸಾಂಖ್ಯಜ್ಞಾನವನ್ನು ತಿಳಿಸಿಕೊಡುತ್ತೇನೆ.

ಅವ್ಯಕ್ತಮಾಹುಃ ಪ್ರಕೃತಿಂ ಪರಾಂ ಪ್ರಕೃತಿವಾದಿನಃ ।
ತಸ್ಮಾನ್ಮಹತ್ ಸಮುತ್ಪನ್ನಂ ದ್ವಿತೀಯಂ ರಾಜಸತ್ತಮ ॥೨೭॥

ರಾಜನೇ, ಪ್ರಕೃತಿಯ ವಿಷಯದಲ್ಲಿ ತಿಳಿವಳಿಕೆಯುಳ್ಳ ವಿದ್ವಾಂಸರು ಮೂಲ ಪ್ರಕೃತಿಯನ್ನು ಅವ್ಯಕ್ತವೆಂದು ಹೇಳುತ್ತಾರೆ. ಆ ಅವ್ಯಕ್ತತತ್ತ್ವದಿಂದಲೇ ಎರಡನೆಯದ್ದಾದ ಮಹತ್ತತ್ತ್ವವು ಉತ್ಪತ್ತಿಯನ್ನು ಹೊಂದಿರುತ್ತದೆ.

ಅಹಂಕಾರಸ್ತು ಮಹತಸ್ತೃತೀಯಮಿತಿ ನಃ ಶ್ರುತಮ್ ।
ಪಂಚ ಭೂತಾನ್ಯಹಂಕಾರಾದಾಹುಃ ಸಾಂಖ್ಯಾನುದರ್ಶಿನಃ ॥೨೮॥

ಆ ಮಹತ್ತತ್ತ್ವದ ದೆಸೆಯಿಂದ ಮೂರನೆಯದ್ದಾದ ಅಹಂಕಾರತತ್ತ್ವವು ಉತ್ಪನ್ನವಾಗಿದೆ ಎಂದು ನಾವು ತಿಳಿದಿರುತ್ತೇವೆ. ಅಹಂಕಾರದಿಂದ ಪಂಚಭೂತಗಳು ಹುಟ್ಟಿದವೆಂದು ಸಾಂಖ್ಯಯೋಗಿಗಳು ತಿಳಿದಿರುತ್ತಾರೆ.

ಏತಾಃ ಪ್ರಕೃತಯಸ್ತ್ವಷ್ಟೌ ವಿಕಾರಾಶ್ಚಾಪಿ ಷೋಡಶ ।
ಪಂಚ ಚೈವ ವಿಶೇಷಾ ವೈ ತಥಾ ಪಂಚೇಂದ್ರಿಯಾಣಿ ಚ ॥೨೯॥

ಹೀಗೆ ಪ್ರಕೃತಿ ಎನಿಸಿದ ಮೂಲಪ್ರಕೃತಿ, ಮಹತ್ತತ್ತ್ವ, ಅಹಂಕಾರತತ್ತ್ವ, ಪಂಚಭೂತಗಳೆಂಬ ಎಂಟು ವಿಕಾರವೆನಿಸಿದ ಪಂಚತನ್ಮಾತ್ರಗಳು, ಏಕಾದಶೇಂದ್ರಿಯಗಳು ಎಂಬ ಹದಿನಾರು, ಇವುಗಳ ಮಧ್ಯದಲ್ಲಿ ಪಂಚತನ್ಮಾತ್ರಗಳು

ವಿಶೇಷವಾಗಿ ಪರಿಗಣಿಸಲ್ಪಡುತ್ತವೆ. ಇದರಂತೆ ಚಕ್ಷುರಾದಿ ಪಂಚ ಜ್ಞಾನೇಂದ್ರಿಯಗಳು ವಿಶೇಷವಾಗಿ ಪರಿಗಣಿಸಲ್ಪಡುತ್ತವೆ. ಪಂಚತನ್ಮಾತ್ರಗಳಲ್ಲಿ ದ್ರವಣಗಳನ್ನು ಹೊಂದುವುದರಿಂದ ಇಂದ್ರಿಯಗಳಿಗೆ ಇಂದ್ರಿಯ ಎಂದು ಹೆಸರು.

ಏತಾವದೇವ ತತ್ತ್ವಾನಾಂ ಸಾಂಖ್ಯಮಾಹುರ್ಮನೀಷಿಣಃ ।
ಸಾಂಖ್ಯೇ ವಿಧಿವಿಧಾನಜ್ಞಾ ನಿತ್ಯಂ ಸಾಂಖ್ಯಪಥೇ ರತಾಃ ॥೩೦॥

ಸಾಂಖ್ಯಶಾಸ್ತ್ರದ ವಿಧಿ-ವಿಧಾನಗಳನ್ನು ತಿಳಿದಿರುವ, ಯಾವಾಗಲೂ ಸಾಂಖ್ಯ ಮಾರ್ಗದ ಅನುಷ್ಠಾನದಲ್ಲಿಯೇ ನಿರತರಾಗಿರುವ ವಿದ್ವಾಂಸರು ಇಪ್ಪತ್ನಾಲ್ಕು ತತ್ತ್ವಗಳನ್ನೇ ಸಾಂಖ್ಯತತ್ತ್ವಕ್ಕೆ ಸಮ್ಮತವಾದ ತತ್ತ್ವಗಳೆಂದು ಹೇಳುತ್ತಾರೆ.

ಯಸ್ಮಾದ್ಯದಭಿಜಾಯೇತ ತತ್ತಸ್ಮೈವ ಪ್ರಲೀಯತೇ ।
ಲೀಯಂತೇ ಪ್ರತಿಲೋಮಾನಿ ಸೃಜ್ಯಂತೇ ಚಾಂತರಾತ್ಮನಾ ॥೩೧॥

ಯಾವ ತತ್ತ್ವದಿಂದ ಯಾವ ತತ್ತ್ವವು ಹುಟ್ಟುತ್ತದೋ ಆ ಹುಟ್ಟಿದ ತತ್ತ್ವವು ತನ್ನಜನಕ ಎನಿಸಿದ ತತ್ತ್ವದಲ್ಲಿಯೇ ಲಯವನ್ನು ಹೊಂದುತ್ತದೆ. ಆ ಅನುಲೋಮಕ್ರಮದಿಂದ ಉತ್ಪನ್ನವಾದ ತತ್ತ್ವಗಳು ವಿಲೋಮ ಕ್ರಮದಿಂದ ಲಯವನ್ನು ಹೊಂದುತ್ತವೆ. ಈ ಎಲ್ಲ ತತ್ತ್ವಗಳು ಪರಮಾತ್ಮನಿಂದಲೇ ಸೃಷ್ಟಿಸಲ್ಪಟ್ಟಿವೆ.

ಅನುಲೋಮೇನ ಜಾಯಂತೇ ಲೀಯಂತೇ ಪ್ರತಿಲೋಮತಃ ।
ಗುಣಾ ಗುಣೇಷು ಸತತಂ ಸಾಗರಸ್ಯೋರ್ಮಯೋ ಯಥಾ ॥೩೨॥

ಸಮುದ್ರದಲ್ಲಿ ಹುಟ್ಟಿದ ಅಲೆಗಳು ಹೇಗೆ ಸಮುದ್ರದಲ್ಲೇ ಲಯವನ್ನು ಹೊಂದುತ್ತವೋ ಅದರಂತೆ ಅನುಲೋಮ ಕ್ರಮದಲ್ಲಿ ಹುಟ್ಟಿದ ತತ್ತ್ವಗಳು ವಿಲೋಮ ಕ್ರಮದಲ್ಲಿ ಕಾರಣಭೂತವಾದ ತತ್ತ್ವದಲ್ಲಿ ಲಯವನ್ನು ಹೊಂದುತ್ತವೆ.

ಸರ್ಗಪ್ರಲಯ ಏತಾವಾನ್ ಪ್ರಕೃತೇರ್ನೃಪಸತ್ತಮ ।
ಏಕತ್ವಂ ಪ್ರಲಯೇ ಚಾಸ್ಯ ಬಹುತ್ವಂ ಚ ಯದಾಸೃಜತ್ ।
ಏವಮೇವ ಚ ರಾಜೇಂದ್ರ ವಿಜ್ಞೇಯಂ ಜ್ಞೇಯಚಿಂತಕೈಃ ॥೩೩॥

ನೃಪಶ್ರೇಷ್ಠನೇ, ಅವ್ಯಕ್ತ ತತ್ತ್ವವೆನಿಸಿದ ಪ್ರಕೃತಿಯ ಸೃಷ್ಟಿ ಮತ್ತು ಪ್ರಳಯ ಹೀಗೆ ನಿರೂಪಿತವಾಗಿದೆ. ಪ್ರಳಯ ಕಾಲದಲ್ಲಿ ಪ್ರಕೃತಿಗೆ ಏಕತ್ವವಿರುತ್ತದೆ, ಸೃಷ್ಟಿಕಾಲದಲ್ಲಿ

ಬಹುತ್ವ ಉಂಟಾಗುತ್ತದೆ. ಹೀಗೆ ಜ್ಞಾನಕೋವಿದರು ಪ್ರಕೃತಿಯ ನಾನಾತ್ವವನ್ನು ತಿಳಿಯಬೇಕು.

ಅಧಿಷ್ಠಾತಾರಮವ್ಯಕ್ತಮಸ್ಯಾಪ್ಯೇತನ್ನಿದರ್ಶನಮ್ ।
ಏಕತ್ವಂ ಚ ಬಹುತ್ವಂ ಚ ಪ್ರಕೃತೇರನು ತತ್ತ್ವವಿತ್ ।
ಏಕತ್ವಂ ಪ್ರಲಯೇ ಚಾಸ್ಯ ಬಹುತ್ವಂ ಚ ಪ್ರವರ್ತನಾತ್ ॥೩೪॥

ಎಲ್ಲರಿಗೂ ಆಧಾರನಾದವನು ಭಗವಂತನೇ ಆಗಿದ್ದಾನೆ. ಅವನು ಅವ್ಯಕ್ತ ಸ್ವಭಾವದವನಾಗಿದ್ದಾನೆ. ಈ ಪರಮಾತ್ಮನ ಗುಣಗಳಿಗೆ ನಿದರ್ಶನ ಅವ್ಯಕ್ತತತ್ತ್ವವಾಗಿದೆ. ಅವ್ಯಕ್ತತತ್ತ್ವವೇ ಸಕಲ ಜಗತ್ತಿಗೆ ಕಾರಣ ಹೇಗೋ ಹಾಗೆ ನಾರಾಯಣನು ಸಮಸ್ತ ಜಗತ್ತಿಗೆ ಮೂಲಕಾರಣನಾಗಿದ್ದಾನೆ. ಮೂಲಪ್ರಕೃತಿಯು ಅಸ್ವತಂತ್ರವಾಗಿ ಜಗತ್ತಿಗೆ ಕಾರಣವಾಗಿದ್ದರೆ ಭಗವಂತನು ಸ್ವತಂತ್ರನಾಗಿ ಜಗತ್ತಿಗೆ ಕಾರಣನಾಗಿದ್ದಾನೆ ಎಂದು ಭಾವ. ಹೀಗೆ ಪ್ರಳಯಕಾಲದಲ್ಲಿ ಏಕತ್ವವನ್ನು, ಸೃಷ್ಟಿಕಾಲದಲ್ಲಿ ಅನೇಕತ್ವವು ಪ್ರಕೃತಿ ತತ್ತ್ವದಲ್ಲಿ ಇದೆ ಎಂದು ತಿಳಿದವನು ಏಕತ್ವ, ಬಹುತ್ವಗಳನ್ನು ಸರಿಯಾಗಿ ತಿಳಿದಿರಬೇಕು.

ಬಹುಧಾತ್ಮಾ ಪ್ರಕುರ್ವೀತ ಪ್ರಕೃತಿಂ ಪ್ರಸವಾತ್ಮಿಕಾಮ್ ।
ತಚ್ಚ ಕ್ಷೇತ್ರಂ ಮಹಾನಾತ್ಮಾ ಪಂಚವಿಂಶೋऽಧಿತಿಷ್ಠತಿ ॥೩೫॥

ಪ್ರಸವ ಗುಣವುಳ್ಳ ಪ್ರಕೃತಿಯನ್ನು ಪರಮಾತ್ಮನೇ ಅನೇಕ ರೂಪವುಳ್ಳದ್ದಾಗಿ ಮಾಡುತ್ತಾನೆ. ಹೀಗೆ ಪ್ರಕೃತಿಯನ್ನು ಕ್ಷೇತ್ರವನ್ನಾಗಿ ಮಾಡಿಕೊಂಡು ಸ್ವಯಂ ಭಗವಂತನು ಇಪ್ಪತ್ತೈದನೆಯ ತತ್ತ್ವವಾಗಿ, ಇಪ್ಪತ್ನಾಲ್ಕು ತತ್ತ್ವಗಳಿಗೆ ಅಧಿಷ್ಠಾತೃವಾಗಿ ಇರುತ್ತಾನೆ.

ಅಧಿಷ್ಠಾತೇತಿ ರಾಜೇಂದ್ರ ಪ್ರೋಚ್ಯತೇ ಯತಿಸತ್ತಮೈಃ ।
ಅಧಿಷ್ಠಾನಾದಧಿಷ್ಠಾತಾ ಕ್ಷೇತ್ರಾಣಾಮಿತಿ ನಃ ಶ್ರುತಮ್ ॥೩೬॥

ಯತಿಗಳು ಭಗವಂತನನ್ನು ಅಧಿಷ್ಠಾತೃ ಎಂದು ಕರೆಯುತ್ತಾರೆ. ಆಯಾ ಅಧಿಷ್ಠಾನಗಳಲ್ಲಿ ಕುಳಿತು ಕ್ಷೇತ್ರಗಳನ್ನು ನಿಯಂತ್ರಿಸುವ ಶಕ್ತಿಯನ್ನು ಹೊಂದಿರುವುದರಿಂದಲೇ ಭಗವಂತನು ಅಧಿಷ್ಠಾತೃ ಎನಿಸಿದ್ದಾನೆ.

ಕ್ಷೇತ್ರಂ ಜಾನಾತಿ ಚಾವ್ಯಕ್ತಂ ಕ್ಷೇತ್ರಜ್ಞ ಇತಿ ಚೋಚ್ಯತೇ ।
ಅವ್ಯಕ್ತಿಕೇ ಪುರೇ ಶೇತೇ ಪುರುಷಶ್ಚೇತಿ ಕಥ್ಯತೇ ॥೩೭॥

ಅವ್ಯಕ್ತ ಎಂಬ ಕ್ಷೇತ್ರವನ್ನು ಭಗವಂತನು ತಿಳಿದಿರುವುದರಿಂದ ಕ್ಷೇತ್ರಜ್ಞ ಎಂದು ಕರೆಸಿಕೊಳ್ಳುತ್ತಾನೆ. ಪ್ರಕೃತಿಗೆ ಸಂಬಂಧಿಸಿದ ಶರೀರದಲ್ಲಿ ಅವ್ಯಕ್ತನಾಗಿ ಅಂತರ್ಯಾಮಿ ಆಗಿರುವುದರಿಂದ ಭಗವಂತನು ಪುರುಷ ಎಂದು ಕರೆಸಿಕೊಳ್ಳುತ್ತಾನೆ.

ಅನ್ಯದೇವ ಚ ಕ್ಷೇತ್ರಂ ಸ್ಯಾದನ್ಯಃ ಕ್ಷೇತ್ರಜ್ಞ ಉಚ್ಯತೇ ।
ಕ್ಷೇತ್ರಮವ್ಯಕ್ತಮಿತ್ಯುಕ್ತಂ ಜ್ಞಾತಾ ವೈ ಪಂಚವಿಂಶಕಃ ॥೩೮॥

ಆದ್ದರಿಂದ ಕ್ಷೇತ್ರವೇ ಬೇರೆ, ಕ್ಷೇತ್ರಜ್ಞನೇ ಬೇರೆ. ಕ್ಷೇತ್ರವೆಂದರೆ ಅವ್ಯಕ್ತವು, ಅವ್ಯಕ್ತ ಪ್ರಕೃತಿಯನ್ನು ತಿಳಿಯುವ ಭಗವಂತನು ಇಪ್ಪತ್ತೈದನೆಯ ತತ್ತ್ವವೆನಿಸಿದ ಕ್ಷೇತ್ರಜ್ಞನಾಗಿರುತ್ತಾನೆ.

ಅನ್ಯದೇವ ಚ ಜ್ಞಾನಂ ಸ್ಯಾದನ್ಯಜ್ಜ್ಞೇಯಂ ತದುಚ್ಯತೇ ।
ಜ್ಞಾನಮವ್ಯಕ್ತಮಿತ್ಯುಕ್ತಂ ಜ್ಞೇಯೋ ವೈ ಪಂಚವಿಂಶಕಃ ॥೩೯॥

ಜ್ಞಾನವನ್ನು ಅನ್ಯವಸ್ತು ಎನ್ನುತ್ತಾರೆ. ಜ್ಞೇಯವನ್ನು ಜ್ಞಾನದಿಂದ ಭಿನ್ನವೆನ್ನುತ್ತಾರೆ. ಬುದ್ಧಿಯನ್ನು ಅವ್ಯಕ್ತವೆಂದೂ, ಇವುಗಳನ್ನು ತಿಳಿಯುವ ಭಗವಂತನನ್ನು ಇಪ್ಪತ್ತೈದನೆಯ ತತ್ತ್ವವಾದ ಪರಮಾತ್ಮನೆಂದು ಹೇಳುತ್ತಾರೆ.

ಅವ್ಯಕ್ತಂ ಕ್ಷೇತ್ರಮಿತ್ಯುಕ್ತಂ ತಥಾ ಸತ್ತ್ವಂ ತಥೇಶ್ವರಮ್ ।
ಅನೀಶ್ವರಮತತ್ತ್ವಂ ಚ ತತ್ತ್ವಂ ತತ್ಪಂಚವಿಂಶಕಮ್ ॥೪೦॥

ಅವ್ಯಕ್ತವನ್ನು ಕ್ಷೇತ್ರವೆಂದು ಹೇಳುತ್ತಾರೆ. ಪ್ರಕೃತಿ ತತ್ತ್ವವನ್ನು ಸೃಷ್ಟಿ-ಪ್ರಲಯದಲ್ಲಿ ನಿಯಮನ ಮಾಡುವ ಸಾಮರ್ಥ್ಯವಿರುವ ಭಗವಂತನನ್ನು ಸತ್ತ್ವ ಎನ್ನುತ್ತಾರೆ. ಈಶ್ವರನಿಗಿಂತ ಭಿನ್ನನಾದ ಜೀವನನ್ನು ಅನೀಶ್ವರನೆಂದೂ, ಪ್ರಾಕೃತದೇಹದಲ್ಲಿ ಅಭಿಮಾನ ಹೊಂದಿರುವುದರಿಂದ ತತ್ತ್ವಜ್ಞಾನ ರಹಿತನಾದ ಜೀವನನ್ನು ಅತತ್ತ್ವನೆಂದೂ, ಅಸಾರವಾದ ಪ್ರಾಕೃತ ಪದಾರ್ಥಗಳಲ್ಲಿ ಎಂದಿಗೂ ಸಾರಬುದ್ಧಿಯನ್ನು ಹೊಂದದಿರುವುದರಿಂದ ತತ್ತ್ವಜ್ಞಾನದಿಂದ ತುಂಬಿರುವ ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಬ್ರಹ್ಮನನ್ನು ತತ್ತ್ವವೆಂದು ಜ್ಞಾನಿಗಳು ಹೇಳುತ್ತಾರೆ.

ಸಾಂಖ್ಯದರ್ಶನಮೇತಾವತ್ ಪರಿಸಂಖ್ಯಾನದರ್ಶನಮ್ ।
ಸಾಂಖ್ಯಂ ಪ್ರಕುರುತೇ ಚೈವ ಪ್ರಕೃತಿಂ ಚ ಪ್ರಚಕ್ಷತೇ ॥೪೧॥

ಜನಕರಾಜನೇ, ಸಾಂಖ್ಯಯೋಗಿಗಳು ತತ್ತ್ವಗಳ ಸಂಖ್ಯೆಯನ್ನು ಹೀಗೆ ಎಣಿಕೆ ಮಾಡುತ್ತಾ ಇದನ್ನೇ ಸಾಂಖ್ಯವೆಂದು ಹೇಳುತ್ತಾರೆ. ಇದನ್ನೇ ಜಗತ್ತಿಗೆ ಕಾರಣವೆಂದು ಹೇಳುತ್ತಾರೆ.

ತತ್ತ್ವಾನಿ ಚ ಚತುರ್ವಿಂಶತ್ ಪರಿಸಂಖ್ಯಾಯ ತತ್ತ್ವತಃ ।
ಸಾಂಖ್ಯಾಃ ಸಹ ಪ್ರಕೃತ್ಯಾ ತು ನಿಸ್ತತ್ತ್ವಃ ಪಂಚವಿಂಶಕಃ ॥೪೨॥

ಸಾಂಖ್ಯವಿದ್ವಾಂಸರು ಪ್ರಕೃತಿಯಿಂದ ಕೂಡಿದ ಇಪ್ಪತ್ನಾಲ್ಕು ತತ್ತ್ವಗಳನ್ನು ಎಣಿಕೆ ಮಾಡಿ, ಇಪ್ಪತ್ತೈದನೆಯ ತತ್ತ್ವವೆನಿಸಿದ ಭಗವಂತನನ್ನು ಇವರಂತೆ ಪ್ರಾಕೃತಿಕ ಗುಣನಲ್ಲದವನಾದ್ದರಿಂದ ಭಿನ್ನನೆಂದೂ, ತತ್ತ್ವವಲ್ಲವೆಂದೂ ಹೇಳುತ್ತಾರೆ. ಇಲ್ಲಿ ನಿಸ್ತತ್ತ್ವನೆಂದರೆ ಚತುರ್ವಿಂಶತಿತತ್ತ್ವಗಳಲ್ಲಿ ಅಭಿಮಾನರಹಿತ ಎಂದು ಅರ್ಥ. ತತ್ತ್ವವೇ ಅಲ್ಲ ಎಂದು ಅರ್ಥವಲ್ಲ.

ಪಂಚವಿಂಶೋಽಪ್ರಬುದ್ಧಾತ್ಮಾ ಬುದ್ಧ್ಯಮಾನ ಇತಿ ಸ್ಮೃತಃ ।
ಯದಾ ತು ಬುದ್ಧ್ಯತೇಽತ್ಮಾನಂ ತದಾ ಭವತಿ ಕೇವಲಃ ॥೪೩॥

ಅಪ್ರಬುದ್ಧನೆನಿಸಿದ ಜೀವನು ಇಪ್ಪತ್ತೈದನೆಯ ತತ್ತ್ವವೆನಿಸಿದ ಭಗವಂತನನ್ನು ತಿಳಿದಾಗ ಪ್ರಬುದ್ಧನೆನಿಸುತ್ತಾನೆ. ಯಾವಾಗ ಪರಮಾತ್ಮನನ್ನು ಜೀವಾತ್ಮನು ತಿಳಿಯುತ್ತಾನೋ ಆಗ ಮೋಕ್ಷವನ್ನು ಹೊಂದುತ್ತಾನೆ.

ಸಮ್ಯಗ್ದರ್ಶನಮೇತಾವದ್ ಭಾಷಿತಂ ತವ ತತ್ತ್ವತಃ ।
ಏವಮೇತದ್ ವಿಜಾನಂತಃ ಸಾಮ್ಯತಾಂ ಪ್ರತಿಯಾಂತ್ಯುತ ॥೪೪॥

ಹೀಗೆ ವಸ್ತುವು ಹೇಗಿದೆಯೋ ಅದೇ ರೀತಿಯಾಗಿ ಜ್ಞಾನವನ್ನು ಹೊಂದುವುದಕ್ಕೆ ಸಾಂಖ್ಯತತ್ತ್ವ ಎಂದು ಹೇಳುತ್ತಾರೆ. ಈ ತತ್ತ್ವವನ್ನು ತಿಳಿದವರೆಲ್ಲ ಆ ತತ್ತ್ವದ ಭಾವದ ಸಾಮ್ಯವನ್ನು ಹೊಂದಿದವರು, ಯಥಾರ್ಥ ಜ್ಞಾನಿಗಳು ಎಂದು ಹೇಳಲಾಗುತ್ತದೆ.

ಸಮ್ಯಗ್ ನಿದರ್ಶನಂ ನಾಮ ಪ್ರತ್ಯಕ್ಷಂ ಪ್ರಕೃತೇಸ್ತಥಾ ।
ಗುಣತತ್ತ್ವವ್ಯಪೇತಾನಿ ನಿರ್ಗುಣೋಽನ್ಯಸ್ತಥಾ ಭವೇತ್ ॥೪೫॥

ನಾನು ನಿನಗೆ ಸಾಂಖ್ಯದರ್ಶನವನ್ನು ಯಥಾರ್ಥವಾಗಿ ಹೇಳಿರುತ್ತೇನೆ. ಪ್ರಕೃತಿ ಪುರುಷರ ಪ್ರತ್ಯಕ್ಷದರ್ಶನವೇ ಸಮ್ಯಗ್ದರ್ಶನವಾಗಿದೆ. ಪ್ರಕೃತಿ ಸಹಿತವಾದ ಮಹದಾದಿ

ತತ್ತ್ವಗಳೇ ತ್ರಿಗುಣಾತ್ಮಕ ತತ್ತ್ವಗಳೆನಿಸಿವೆ. ಈ ಗುಣಗಳಿಂದ ರಹಿತನಾದ ಭಗವಂತನು ಭಿನ್ನನಾಗಿದ್ದಾನೆ.

ನ ತ್ವೇವಂ ವರ್ತಮಾನಾನಾಮಾವೃತ್ತಿರ್ವಿದ್ಯತೇ ಪುನಃ ।
ವಿದ್ಯತೇಽಕ್ಷರಭಾವತ್ವೇ ಸ ಪರಾತ್ಪರಮವ್ಯಯಮ್ ॥೪೬॥

ಪಶ್ಯೇರನ್ನೇಕಮತಯೋ ನ ಸಮ್ಯಕ್ತೇಷು ದರ್ಶನಮ್ ।
ತೇಽವ್ಯಕ್ತಂ ಪ್ರತಿಪದ್ಯಂತೇ ಪುನಃ ಪುನರರಿಂದಮ ॥೪೭॥

ಈ ಕ್ರಮದಲ್ಲಿ ಸಾಂಖ್ಯದರ್ಶನಕ್ಕೆ ಅನುಗುಣವಾಗಿ ಜ್ಞಾನವನ್ನು ಪಡೆದುಕೊಂಡವನು ಪ್ರಕೃತಿಗೆ ಪುನಃ ಬರಬೇಕಾಗಿರುವುದಿಲ್ಲ. ಜನನ-ಮರಣಗಳಿಂದ ಮುಕ್ತನಾಗುತ್ತಾನೆ. ಯಾರಿಗೆ ಅಕ್ಷರನಾದ ಪರಮಾತ್ಮನಲ್ಲಿ ಭಕ್ತಿಯು ದೃಢವಾಗಿದೆಯೋ ಅಂತಹ ಪರಮಾತ್ಮಜ್ಞಾನಿಯು ಪರಾತ್ಪರನಾದ ಅವ್ಯಯನಾದ, ಪರಮಾತ್ಮನನ್ನೇ ಹೊಂದುತ್ತಾನೆ. ಯಾರು ಕ್ಷರಾಕ್ಷರನೆನಿಸಿದ ಜೀವ-ಪರಮಾತ್ಮರಿಗೆ ಐಕ್ಯವನ್ನೇ ತಿಳಿಯುತ್ತಾರೋ ಅವರಿಗೆ ಸರಿಯಾದ ಜ್ಞಾನವು ಇಲ್ಲವೆಂದು ಅರ್ಥ. ಯಾರು ಈ ಮಿಥ್ಯಾಜ್ಞಾನವನ್ನು ಹೊಂದಿರುತ್ತಾರೋ ಅವರು ಅವ್ಯಕ್ತ ಎನಿಸಿದ ಪ್ರಕೃತಿ ತತ್ತ್ವವನ್ನು ಪುನಃ ಪುನಃ ಹೊಂದುತ್ತಲೇ ಇರುತ್ತಾರೆ. ಜನನ ಮರಣಗಳಿಗೆ ತುತ್ತಾಗುತ್ತಾರೆ.

ಸರ್ವಮೇತದ್ ವಿಜಾನಂತೋ ನ ಸರ್ವಸ್ಯ ಪ್ರಬೋಧನಾತ್ ।
ವ್ಯಕ್ತಭೂತಾ ಭವಿಷ್ಯಂತಿ ವ್ಯಕ್ತಸ್ಯ ವಶವರ್ತಿನಃ ॥೪೮॥

ಪ್ರಪಂಚದಲ್ಲಿರುವ ಪ್ರಕೃತಿಗೆ ಸಂಬಂಧಿಸಿದ ಎಲ್ಲವನ್ನೂ ತಿಳಿದು, ಇದಕ್ಕಿಂತ ಭಿನ್ನನಾದ ಪರಮಾತ್ಮನನ್ನು ತಿಳಿಯದಿದ್ದಲ್ಲಿ ಅವರು ಪ್ರಾಕೃತದೇಹದಿಂದ ಪುನಃ ಪುನಃ ಹುಟ್ಟುತ್ತಲೇ ಇರುತ್ತಾರೆ.

ವ್ಯಾಖ್ಯಾನ ವಿಶೇಷ- ಸರ್ವಶಾಸ್ತ್ರಗಳನ್ನು ವಿಮರ್ಶಿಸಿ ಪ್ರಕೃತಿ ಮೊದಲಾದ ತತ್ತ್ವಗಳ ಸೃಷ್ಟಿ, ಅವುಗಳ ಪ್ರಳಯದ ಪ್ರಕಾರಗಳನ್ನೂ, ಮಹದಾದಿ-ಅಹಂಕಾರಾದಿ ತತ್ತ್ವಗಳಿಗೆ ಅಭಿಮಾನಿಗಳಾದ ಬ್ರಹ್ಮಾದಿದೇವತೆಗಳ ತಾರತಮ್ಯವನ್ನೂ, ಕ್ಷರ-ಅಕ್ಷರ ಪದಗಳಿಂದ ಹೇಳಿದ ಜೀವ-ಪರಮಾತ್ಮರ ತತ್ತ್ವವಿವೇಕವನ್ನೂ, ಮಿಥ್ಯಾಜ್ಞಾನದ ವಿಭಾಗವನ್ನೂ, ಇದಕ್ಕಿಂತಲೂ ಹೆಚ್ಚಾಗಿ ಬ್ರಹ್ಮಮೀಮಾಂಸಾದಿ ಸಕಲ ತತ್ತ್ವಗಳಲ್ಲಿಯೂ ವಿಚಾರ ಮಾಡುವ ಸಾಂಖ್ಯಯೋಗವನ್ನೂ, ಸಮಸ್ತ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ಮನಸ್ಸನ್ನು ಏಕಾಗ್ರಗೊಳಿಸಿ, ಯಥಾರ್ಥಜ್ಞಾನದಿಂದ ತನಗೆ ಯೋಗ್ಯವಾದ

ಭಗವಂತನ ಗುಣಗಳನ್ನು ಮನಸ್ಸಿನಲ್ಲಿ ನಿರಂತರ ಧ್ಯಾನಿಸುವ, ಭಗವದ್ವಿಷಯಕ ಕರ್ಮ ಕುಶಲನಾದವನೇ ಯೋಗಿಯು ಎಂದು ಕರೆಯಲ್ಪಡುತ್ತಾನೆ ಎಂಬುದಾಗಿ ಈ ಸಮಗ್ರ ಅಧ್ಯಾಯದಲ್ಲಿ ವಸಿಷ್ಠರು ನಿರೂಪಿಸಿರುತ್ತಾರೆ.

ಸರ್ವಮವ್ಯಕ್ತಮಿತ್ಯುಕ್ತಮಸರ್ವಃ ಪಂಚವಿಂಶಕಃ ।
ಯ ಏನಮಭಿಜಾನಂತಿ ನ ಭಯಂ ತೇಷು ವಿದ್ಯತೇ ॥೪೯॥

ಇಪ್ಪತ್ನಾಲ್ಕು ತತ್ತ್ವಗಳು ಅವ್ಯಕ್ತ ಪ್ರಕೃತಿಗೆ ಸಂಬಂಧಿಸಿದವು. ಇವುಗಳಿಗೆ ಸೇರದೆ ಇರುವ ಇಪ್ಪತ್ತೈದನೆಯ ತತ್ತ್ವವೆನಿಸಿದ ಭಗವಂತನು ಪರಮ ಚೇತನನು. ಯಾರು ಈ ಭಗವಂತನನ್ನು ತಿಳಿದುಕೊಳ್ಳುತ್ತಾರೋ ಅವರಿಗೆ ಹುಟ್ಟು-ಸಾವುಗಳ ಭಯವು ಇರುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟತ್ರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೊಂಬತ್ತನೆಯ ಅಧ್ಯಾಯ

ವಸಿಷ್ಠ-ಜನಕರ ಸಂವಾದ

ವಸಿಷ್ಠಃ

ಸಾಂಖ್ಯದರ್ಶನಮೇತಾವದುಕ್ತಂ ತೇ ನೃಪಸತ್ತಮ ।
ವಿದ್ಯಾವಿದ್ಯೇ ತ್ವಿದಾನೀಂ ಮೇ ತ್ವಂ ನಿಬೋಧಾನುಪೂರ್ವಶಃ ॥೧॥

ವಸಿಷ್ಠ- ನೃಪಶ್ರೇಷ್ಠನೇ, ಇಲ್ಲಿಯ ತನಕ ಸಾಂಖ್ಯದರ್ಶನದ ವಿಷಯಗಳನ್ನು ಹೇಳಿರುತ್ತೇನೆ. ವಿದ್ಯೆ-ಅವಿದ್ಯೆಗಳ ಸ್ವರೂಪವನ್ನು ನಿನಗೆ ಕ್ರಮವಾಗಿ ತಿಳಿಸುತ್ತೇನೆ.

ಅವಿದ್ಯಾಮಾಹುರವ್ಯಕ್ತಂ ಸರ್ಗಪ್ರಲಯಧರ್ಮಿ ವೈ ।
ಸರ್ಗಪ್ರಲಯನಿರ್ಮುಕ್ತಂ ವಿದ್ಯಾಂ ವೈ ಪಂಚವಿಂಶಕಮ್ ॥೨॥

ಜಡವಾಗಿರುವುದರಿಂದ ಅಯೋಗ್ಯವಾಗಿರುವ ಅವ್ಯಕ್ತ ತತ್ತ್ವವನ್ನು ಅವಿದ್ಯೆ ಎಂದು ಹೇಳುತ್ತಾರೆ. ಸಕಲ ವಿಷಯಕ ಜ್ಞಾನರೂಪನಾದುದರಿಂದ ಪರಮಾತ್ಮನು

ವಿದ್ಯಾಮಯನೆನಿಸಿದ್ದಾನೆ. ಜೀವನು ಚೇತನನಾಗಿದ್ದರೂ ಪ್ರಾಕೃತ ಅವಿದ್ಯೆಯಿಂದ ಅಂಧನಾಗಿರುವುದರಿಂದ ಅವಿದ್ಯೆ ಎಂದು ಕರೆಸಿಕೊಳ್ಳುತ್ತಾನೆ. ಆದ್ದರಿಂದ 'ಯೋ ಅವಿದ್ಯಾ ಅಂಧಃ ಸ ತು ನಿತ್ಯಬದ್ಧಃ। ವಿದ್ಯಾಮಯೋ ಯಃ ಸ ತು ನಿತ್ಯಮುಕ್ತಃ' ಎಂದು ಭಾಗವತದಲ್ಲಿ ಭಗವಂತನೇ ಅವಿದ್ಯೆಯಿಂದ ಅಂಧನಾದ ಜೀವನು ನಿತ್ಯಬದ್ಧನು, ವಿದ್ಯಾಮಯನೆನಿಸಿದ ಭಗವಂತನು ನಿತ್ಯಮುಕ್ತನು ಎಂದು ಹೇಳಿರುತ್ತಾನೆ. ಹಿಂದೆ ಹೇಳಿದಂತೆ ಭಗವಂತನು ಏಕತ್ವವನ್ನು, ಬಹುತ್ವವನ್ನು ಹೊಂದುತ್ತಾನೆ. ಮೂಲರೂಪದಿಂದ ಪ್ರಕೃತಿಯಲ್ಲಿ ಏಕನಾಗಿಯೂ, ಸೃಷ್ಟಿಯನ್ನು ಹೊಂದಿರುವ ಮಹತ್ತತ್ತ್ವಾದಿಗಳಲ್ಲಿ ಬಹುರೂಪನಾಗಿಯೂ ಭಗವಂತ ಪ್ರವೇಶಿಸಿ ವ್ಯಾಪಾರಗಳನ್ನು ಮಾಡುತ್ತಿರುತ್ತಾನೆ. ಆವಾಗಲೂ ಭಗವಂತನು ಜ್ಞಾನಿಯಾಗಿಯೇ ಇರುತ್ತಾನೆ. ಜೀವನಂತೆ ಎಂದಿಗೂ ಅಂಧನಾಗಿರುವುದಿಲ್ಲ ಎಂದು ಭಾವ. ಇಂತಹ ಭಗವಂತನು ಸೃಷ್ಟಿ-ಪ್ರಳಯಗಳಿಂದ ಮುಕ್ತನಾಗಿದ್ದಾನೆ. ಇಪ್ಪತ್ತೈದನೆಯ ತತ್ತ್ವವೆನಿಸಿದ್ದಾನೆ. ಇವನನ್ನೇ ವಿದ್ಯೆ ಎಂದು ಹೇಳುತ್ತಾರೆ.

ಪರಸ್ಪರಮವಿದ್ಯಾಂ ವೈ ತನ್ನಿಬೋಧಾನುಪೂರ್ವಶಃ ।
ಯಥೋಕ್ತಮೃಷಿಭಿಸ್ತಾತ ಸಾಂಖ್ಯಸ್ಯಾಸ್ಯ ನಿದರ್ಶನಮ್ ॥೩॥

ವಿದ್ಯೆ-ಅವಿದ್ಯೆಗಳ ಸಂಬಂಧಗಳನ್ನು ನೀನು ಕ್ರಮವಾಗಿ ತಿಳಿದುಕೊ. ಯಾವ ರೀತಿಯಲ್ಲಿ ಋಷಿಗಳು ಸಾಂಖ್ಯಯೋಗದಲ್ಲಿ ನಿದರ್ಶನವನ್ನು ನೀಡಿರುತ್ತಾರೋ ಹಾಗೆ ತಿಳಿಸುತ್ತೇನೆ.

ಕರ್ಮೇಂದ್ರಿಯಾಣಾಂ ಸರ್ವೇಷಾಂ ವಿದ್ಯಾ ಬುದ್ಧೀಂದ್ರಿಯಂ ಸ್ಮೃತಮ್।
ಬುದ್ಧೀಂದ್ರಿಯಾಣಾಂ ಚ ತಥಾ ವಿಶೇಷಾ ಇತಿ ನಃ ಶ್ರುತಮ್ ॥೪॥

ಸಮಸ್ತವಾದ ಕರ್ಮೇಂದ್ರಿಯಗಳಿಗೆ ಜ್ಞಾನೇಂದ್ರಿಯವು ವಿದ್ಯಾ ಸಾಧನವಾಗಿರುವುದರಿಂದ ವಿದ್ಯೆ ಎನಿಸಿದೆ. ಜ್ಞಾನೇಂದ್ರಿಯಗಳಲ್ಲಿಯೂ ದೇಹಾರಂಭಕಗಳಾದ ಪಂಚಭೂತಗಳು ವಿಶೇಷವೆಂದು ನಾವು ತಿಳಿದಿದ್ದೇವೆ.

ವಿಶೇಷಾಣಾಂ ಮನಸ್ತೇಷಾಂ ವಿದ್ಯಾಮಾಹುರ್ಮನೀಷಿಣಃ ।
ಮನಸಃ ಪಂಚಭೂತಾನಿ ವಿದ್ಯಾ ಇತ್ಯಭಿಚಕ್ಷತೇ ॥೫॥

ಸ್ಥೂಲ ಪಂಚಭೂತಗಳ ವಿದ್ಯೆಯು ಮನಸ್ಸೆಂದು ಜ್ಞಾನಿಗಳು ಹೇಳುತ್ತಾರೆ. ಪಂಚಭೂತಗಳು ವಿದ್ಯಾಹೇತುಗಳಾಗಿರುವುದರಿಂದ ವಿದ್ಯೆ ಎನಿಸಿವೆ. ಎಲ್ಲರಿಗೂ 'ಅಹಂ ಜಾನಾಮಿ' ಎಂಬ ಅನುಭವವು ಇರುತ್ತದೆ.

ಅಹಂಕಾರಸ್ತು ಭೂತಾನಾಂ ಪಂಚಾನಾಂ ನಾತ್ರ ಸಂಶಯಃ ।
ಅಹಂಕಾರಸ್ಯ ಚ ತಥಾ ಬುದ್ಧಿರ್ವಿದ್ಯಾ ನರೇಶ್ವರ ॥೬॥

ನರೇಶ್ವರನೇ, ಸೂಕ್ಷ್ಮವಾದ ಪಂಚಭೂತಗಳಿಗೆ ಅಹಂಕಾರವೇ ವಿದ್ಯೆಯ ಸ್ಥಾನದಲ್ಲಿದೆ. ಈ ವಿಷಯದಲ್ಲಿ ಸಂಶಯವಿಲ್ಲ. ಅಹಂಕಾರಕ್ಕೆ ಬುದ್ಧಿಯೇ ವಿದ್ಯೆಯು.

ಬುದ್ಧೇಃ ಪ್ರಕೃತಿರವ್ಯಕ್ತಂ ತತ್ತ್ವಾನಾಂ ಪರಮೇಶ್ವರಮ್ ।
ವಿದ್ಯಾ ಜ್ಞೇಯಾ ನರಶ್ರೇಷ್ಠ ವಿಧಿಶ್ಚ ಪರಮಃ ಸ್ಮೃತಃ ॥೭॥

ಅವ್ಯಕ್ತಸ್ಯ ಪರಂ ಪ್ರಾಹುರ್ವಿದ್ಯಾಂ ವೈ ಪಂಚವಿಂಶಕಮ್ ।
ಸರ್ವಸ್ಯ ಸರ್ವಮಿತ್ಯುಕ್ತಂ ಜ್ಞೇಯಂ ಜ್ಞಾನಸ್ಯ ಪಾರ್ಥಿವ ॥೮॥

ಅವ್ಯಕ್ತನೆಂಬ ಹೆಸರಿನ ಮೂಲಪ್ರಕೃತಿಯು ಬುದ್ಧಿಯೇ ಮೊದಲಾದ ಪ್ರಕೃತಿಗಳಿಗೂ ತತ್ತ್ವವೆನಿಸಿದೆ. ಈ ವಿದ್ಯೆಯನ್ನು ಅವಶ್ಯವಾಗಿ ತಿಳಿಯಬೇಕು. ಇದರ ವಿಧಿಯು ಶ್ರೇಷ್ಠವಾದುದೆಂದು ಹೇಳುತ್ತಾರೆ. ಇಪ್ಪತ್ತೈದನೆಯ ತತ್ತ್ವವೆನಿಸಿದ, ಪರಮಚೇತನನಾದ ಭಗವಂತನು ಅವ್ಯಕ್ತ ಪ್ರಕೃತಿಯ ಪರಮವಿದ್ಯೆ ಎನಿಸಿದ್ದಾನೆ. ಈ ಭಗವಂತನೇ ಸಂಪೂರ್ಣ ಜ್ಞಾನರೂಪದ ಜ್ಞೇಯನಾಗಿದ್ದಾನೆ. ಈಶ್ವರಕ್ಕೆ ಸರ್ವ ಎಂದು ಹೆಸರು.

ಜ್ಞಾನಮವ್ಯಕ್ತಮಿತ್ಯುಕ್ತಂ ಜ್ಞೇಯಂ ವೈ ಪಂಚವಿಂಶಕಮ್ ।
ತಥೈವ ಜ್ಞಾನಮವ್ಯಕ್ತಂ ವಿಜ್ಞಾತಾ ಪಂಚವಿಂಶಕಃ ॥೯॥

ಪ್ರಾಕೃತ ಮನೋವೃತ್ತಿ ರೂಪವಾದ ಜ್ಞಾನವನ್ನು ಅವ್ಯಕ್ತ ಎಂದು ಹೇಳುತ್ತಾರೆ. ಇಪ್ಪತ್ತೈದನೆಯ ತತ್ತ್ವವೆನಿಸಿದ ಭಗವಂತನೇ ಜ್ಞೇಯ ಎನಿಸಿದ್ದಾನೆ. ಅದರಂತೆ ಅವ್ಯಕ್ತ ಜ್ಞಾನವನ್ನು ಚೆನ್ನಾಗಿ ಹೊಂದುವವನು ಇಪ್ಪತ್ತೈದನೆಯ ತತ್ತ್ವವೆನಿಸಿದ ಭಗವಂತನೇ ಆಗಿದ್ದಾನೆ.

ವಿದ್ಯಾವಿದ್ಯಾರ್ಥತತ್ತ್ವೇನ ಮಯೋಕ್ತಂ ತೇ ವಿಶೇಷತಃ ।
ಅಕ್ಷರಂ ಚ ಕ್ಷರಂ ಚೈವ ಯದುಕ್ತಂ ತನ್ನಿಬೋಧ ಮೇ ॥೧೦॥

ಮಹಾರಾಜನೇ, ನಾನು ವಿದ್ಯಾ ಸಹಿತವಾದ ವಿದ್ಯೆಯನ್ನು ಯಥಾವತ್ತಾಗಿ ಹೇಳಿದ್ದೇನೆ. ಈಗ ಅಕ್ಷರ ಮತ್ತು ಕ್ಷರಗಳೆಂಬ ತತ್ತ್ವಗಳ ಬಗ್ಗೆ ಹೇಳುತ್ತೇನೆ, ಕೇಳು.

ಉಭಾವೇತೌ ಕ್ಷರಾವುಕ್ತಾವುಭಾವೇತೌ ಚ ನಕ್ಷರೌ ।
ಕಾರಣಂ ತು ಪ್ರವಕ್ಷ್ಯಾಮಿ ಯಥಾ ಖ್ಯಾತೌ ತು ತತ್ತ್ವತಃ ॥೧೧॥

ಇವರಿಬ್ಬರ (ಕ್ಷರ-ಅಕ್ಷರ) ಬಗ್ಗೆ ನನಗೆ ತಿಳಿದಿರುವಷ್ಟು ಕಾರಣಗಳನ್ನು ಯಥಾರ್ಥವಾಗಿ ತಿಳಿಸುತ್ತೇನೆ.

ಅನಾದಿನಿಧನಾವೇತಾವುಭಾವೇವೇಶ್ವರೌ ಮತೌ ।
ತತ್ತ್ವಸಂಜ್ಞಾವುಭಾವೇತೌ ಪ್ರೋಚ್ಯೇತೇ ಜ್ಞಾನಚಿಂತಕೈಃ ॥೧೨॥

ಈ ಜೀವ-ಪರಮಾತ್ಮರು ಆದ್ಯಂತಗಳಿಲ್ಲದವರು. ಆದ್ದರಿಂದಲೇ ಈಶ್ವರ ಎನಿಸಿದ್ದಾರೆ. ಸ್ವತಂತ್ರ-ಅಸ್ವತಂತ್ರ ಎಂದು ಎರಡು ತತ್ತ್ವಗಳಾಗಿರುವುದರಿಂದ ಇಬ್ಬರಿಗೂ ತತ್ತ್ವ ಎಂಬ ಹೆಸರು ಜ್ಞಾನಚಿಂತಕರಿಂದ ಹೇಳಲ್ಪಟ್ಟಿದೆ.

ಸರ್ಗಪ್ರಲಯಧರ್ಮಿತ್ವಾದವ್ಯಕ್ತಂ ಪ್ರಾಹುರಕ್ಷರಮ್ ।
ತದೇತದ್ ಗುಣಸರ್ಗಾಯ ವಿಕುರ್ವಾಣಂ ಪುನಃ ಪುನಃ ॥೧೩॥

ಮಹದಾದಿ ತತ್ತ್ವಗಳಿಂದ ಹುಟ್ಟುವ ಸೃಷ್ಟಿ-ಸಂಹಾರಗಳಲ್ಲಿ ಭೂತಳದಂತೆ ಧರ್ಮತ್ವವು ಇರುವುದರಿಂದ ಪ್ರಕೃತಿಯನ್ನು ಅಕ್ಷರವೆಂದು ಹೇಳುತ್ತಾರೆ. ಮಹದಾದಿ ತತ್ತ್ವಗಳ ಸೃಷ್ಟಿಗಾಗಿ ಪುನಃ ಪುನಃ ಪ್ರಕೃತಿಯು ವಿಕಾರವನ್ನು ಹೊಂದುವುದರಿಂದ ಅದನ್ನು ಕ್ಷರವೆಂದು ಹೇಳುತ್ತಾರೆ.

ಗುಣಾನಾಂ ಮಹದಾದೀನಾಮುತ್ಪದ್ಯತಿ ಪರಸ್ಪರಮ್ ।
ಅಧಿಷ್ಠಾನಾತ್ ಕ್ಷೇತ್ರಮಾಹುರೇತತ್ತತ್ಪಂಚವಿಂಶಕಮ್ ॥೧೪॥

ಮಹದಾದಿಗುಣಗಳ ಉತ್ಪತ್ತಿಯು ಪ್ರಕೃತಿ ಮತ್ತು ಪುರುಷರ ಪರಸ್ಪರ ಸಂಯೋಗದಿಂದ ಉಂಟಾಗುವುದರಿಂದ ಪ್ರಕೃತಿಯು ಪುರುಷನಿಗೂ, ಪುರುಷನು ಪ್ರಕೃತಿಗೂ ಆಶ್ರಯವಾಗಿರುವುದರಿಂದ ಇಪ್ಪತ್ತೈದನೆಯ ತತ್ತ್ವವನ್ನು ಕ್ಷೇತ್ರವೆಂದು ಹೇಳುತ್ತಾರೆ.

ಯದಾ ತು ಗುಣಜಾಲಂ ತದವ್ಯಕ್ತಾತ್ಮನಿ ಸಂಕ್ಷಿಪೇತ್ ।
ತದಾ ಸಹ ಗುಣೈಸ್ತೈಸ್ತು ಪಂಚವಿಂಶೋಽಪಿ ಲೀಯತೇ ॥೧೫॥

ಯಾವಾಗ ಯೋಗಿಯು ಮಹದಾದಿ ಗುಣಗಳಿಂದ ಕೂಡಿದ ಅವ್ಯಕ್ತ ಪ್ರಕೃತಿಯನ್ನು ಪರಮಾತ್ಮನಲ್ಲಿ ಲಯಗೊಳಿಸುತ್ತಾನೋ ಆಗ ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನು ಮಹದಾದಿ ಪ್ರೇರಕವಾದ ತನ್ನ ಅನಂತರೂಪವನ್ನು ತನ್ನ ಮೂಲರೂಪದಲ್ಲಿ ಲಯಗೊಳಿಸುತ್ತಾನೆ.

ಗುಣಾ ಗುಣೇಷು ಲೀಯಂತೇ ತದೈಕಾ ಪ್ರಕೃತಿರ್ಭವೇತ್ ।
ಕ್ಷೇತ್ರಜ್ಞೋಽಪಿ ಯದಾ ತಾತ ತತ್ಕ್ಷೇತ್ರೇ ಸಂಪ್ರಲೀಯತೇ ॥೧೬॥

ಗುಣಗಳೆಲ್ಲವೂ ಕಾರಣಭೂತವಾದ ಗುಣಗಳಲ್ಲಿ ಲಯಹೊಂದಿದಾಗ ಕೇವಲ ಪ್ರಕೃತಿಮಾತ್ರವೇ ಉಳಿದುಕೊಂಡಿರುತ್ತದೆ. ಭಗವಂತನು ಉಪಚಯವನ್ನು ಹೊಂದಿರುವ ಪ್ರಕೃತಿಗಿಂತ ಹೊರಗೆ ಆಗಮಿಸುತ್ತಾನೆ.

ತದಾ ಕ್ಷರತ್ವಂ ಪ್ರಕೃತಿರ್ಗಚ್ಛತೇ ಗುಣಸಂಜ್ಞಿತಾ ।
ನಿರ್ಗುಣತ್ವಂ ಚ ವೈದೇಹ ಗುಣೇಷ್ವಪ್ರತಿವರ್ತನಾತ್ ॥೧೭॥

ಆಗ ಮೂಲಪ್ರಕೃತಿಯಲ್ಲಿ ಉಪಚಾರಿಕ ಶಕ್ತಿಯು ನಾಶವಾಗಿರುವುದರಿಂದ ಅದು ಕ್ಷರಣವನ್ನು ಹೊಂದುತ್ತದೆ. ಆದ್ದರಿಂದಲೇ ಮೂಲಪ್ರಕೃತಿಯು ಕ್ಷರವೆನಿಸಿದೆ. ಸತ್ತ್ವ, ರಜಸ್, ತಮೋಗುಣಗಳಲ್ಲಿ ಪ್ರವೃತ್ತಿಯನ್ನು ಹೊಂದದಿರುವುದರಿಂದ ನಿರ್ಗುಣತ್ವವನ್ನು ಹೊಂದುತ್ತದೆ.

ಏವಮೇವ ಚ ಕ್ಷೇತ್ರಜ್ಞಃ ಕ್ಷೇತ್ರಜ್ಞಾನಪರಿಕ್ಷಯೇ ।
ಪ್ರಕೃತ್ಯಾ ನಿರ್ಗುಣಸ್ತ್ವೇಷ ಇತ್ಯೇವಮನುಶುಶ್ರುಮ ॥೧೮॥

ಇದೇ ರೀತಿ ಕ್ಷೇತ್ರಜ್ಞನು ಕ್ಷೇತ್ರಜ್ಞಾನದಿಂದ ದೂರನಾದಾಗ, ಪ್ರಕೃತಿಗುಣಗಳಿಂದ ರಹಿತನಾದಾಗ ನಿರ್ಗುಣ ಎಂದೇ ಕರೆಯುತ್ತೇವೆ. ಹೊರತು ಸ್ವತಃ ಗುಣರಹಿತನಾದುದರಿಂದ ಅಲ್ಲ.

ಕ್ಷರೋ ಭವತ್ಯೇಷ ಯದಾ ತದಾ ಗುಣವತೀಮಥ ।
ಪ್ರಕೃತಿಂ ತ್ವಭಿಜಾನಾತಿ ನಿರ್ಗುಣತ್ವಂ ತಥಾತ್ಮನಃ ॥೧೯॥

ಯಾವಾಗ ಚೇತನನು ಕ್ಷರನಾಗುತ್ತಾನೋ ಆಗ ಪ್ರಕೃತಿಯ ಗುಣವನ್ನು ಕಳೆದುಕೊಂಡು ಅವನೂ ನಿರ್ಗುಣನೆನಿಸುತ್ತಾನೆ.

ತದಾ ವಿಶುದ್ಧೋ ಭವತಿ ಪ್ರಕೃತೇಃ ಪರಿವರ್ಜನಾತ್ ।
ಅನ್ಯೋಽಹಮನ್ಯೇಯಮಿತಿ ಯದಾ ಬುಧ್ಯತಿ ಬುದ್ಧಿಮಾನ್ ॥೨೦॥

ಪ್ರಳಯಕಾಲದಲ್ಲಿ ಯಾವ ಕಾರಣದಿಂದಲೂ ಜಡದ ಸಂಬಂಧವು ಜೀವನಿಗೆ ಇಲ್ಲದಿರುವ ಕಾರಣ ಜೀವನು ವಿಶುದ್ಧನೆನಿಸುತ್ತಾನೆ. ಪರಮಾತ್ಮನು ಬೇರೆ, ನಾನು ಬೇರೆ ಎಂಬ ಜ್ಞಾನವನ್ನು ಹೊಂದಿರುವುದರಿಂದ ಬುದ್ಧಿವಂತನೂ ಆಗುತ್ತಾನೆ.

ತದೈಷೋಽನ್ಯತ್ವತಾಮೇತಿ ನ ಚ ಮಿಶ್ರತ್ವಮಾವ್ರಜೇತ್ ।
ಪ್ರಕೃತ್ಯಾ ಚೈವ ರಾಜೇಂದ್ರ ನಮಿಶ್ರೋಽನ್ಯಶ್ಚ ದೃಶ್ಯತೇ ॥೨೧॥

ಎಂದಿಗೂ ಜೀವನು ಪರಮಾತ್ಮನಿಂದ ಭಿನ್ನನೇ ಆಗಿರುತ್ತಾನೆ ಹೊರತು ಎಂದಿಗೂ ಪರಮಾತ್ಮನ ಜೊತೆಗೆ ಮೇಲನವನ್ನು ಹೊಂದುವುದಿಲ್ಲ. ಪ್ರಕೃತಿಯೊಂದಿಗೂ ಮೇಲನ ಹೊಂದದೆ ಪ್ರಕೃತಿಗಿಂತಲೂ ವಿಲಕ್ಷಣನಾಗಿಯೇ ಜೀವನು ಇರುತ್ತಾನೆ.

ಯದಾ ತು ಗುಣಜಾಲಂ ತತ್ ಪ್ರಾಕೃತಂ ವಿಜುಗುಪ್ಸತೇ ।
ಪಶ್ಯತೇ ಚಾಪರಂ ಪಶ್ಯನ್ ತದಾ ಪಶ್ಯನ್ನ ಸಂಜ್ವರೇತ್ ॥೨೨॥

ಯಾವಾಗ ಜೀವನು ಪ್ರಕೃತಿ ಸಂಬಂಧವಾದ ಗುಣಗಳ ಸಮೂಹವನ್ನು ಪ್ರಾಕೃತವೆಂದು ಭಾವಿಸಿ, ಜುಗುಪ್ಸೆಯನ್ನು ತಾಳುತ್ತಾನೋ, ಜೀವನಿಗಿಂತ ಭಿನ್ನನಾದ ಸರ್ವಜ್ಞನಾದ ನಾರಾಯಣನನ್ನು ನೋಡುತ್ತಾನೋ ಆಗ ಜೀವನ ಆಯಾಸವನ್ನು ಕಂಡ ಭಗವಂತನು ಕರುಣೆಯಿಂದ ತುಂಬಿದ ಕಣ್ಣುಗಳಿಂದ ಜೀವನನ್ನು ನೋಡುತ್ತಾನೆ. ಬಳಿಕ ಆ ಜೀವನು ಎಂದಿಗೂ ಪ್ರಕೃತಿಯ ಸಂಬಂಧವನ್ನು ಹೊಂದುವುದಿಲ್ಲ. ನಿತ್ಯಮುಕ್ತನಾಗುತ್ತಾನೆ.

ಕಿಂ ಮಯಾ ಕೃತಮೇತಾವದ್ಯೋಽಹಂ ಕಾಲಮಿಮಂ ಜನಮ್ ।
ಯಥಾ ಮತ್ಸ್ಯೋದಕೇ ಜಾಲಮನುವರ್ತಿತವಾನಿಹ ।
ಮತ್ಸ್ಯೋ ಜಾಲಂ ಹ್ಯವಿಜ್ಞಾನಾದನುವರ್ತಿತವಾಂಸ್ತಥಾ ॥೨೩॥

ಪರಮಾತ್ಮನ ಜ್ಞಾನವನ್ನು ಹೊಂದಿದ ಬಳಿಕ ಚೇತನನು ಹೀಗೆ ಯೋಚಿಸುತ್ತಾನೆ: ನಾನು ಇಲ್ಲಿಯ ತನಕ ಎಂತಹ ತಪ್ಪನ್ನು ಮಾಡಿದೆ. ಅಜ್ಞಾನದಿಂದ ಮೀನು ತಾನಾಗಿಯೇ ಹೋಗಿ ಬಲೆಯಲ್ಲಿ ಸಿಕ್ಕಿಬೀಳುವಂತೆ ನಾನು ಈ ಪ್ರಕೃತಿ ಸಂಬಂಧದಲ್ಲಿ ಅಜ್ಞಾನಿಯಾಗಿ ವರ್ತಿಸಿದೆನು ಎಂದು ಪಶ್ಚಾತ್ತಾಪ ಪಡುತ್ತಾನೆ.

ಅಹಮೇವ ಹಿ ಸಮ್ಮೋಹಾದನ್ಯಂ ಮನ್ಯೇಜನಾಜನಮ್ ।
ಮತ್ಸ್ಯೋ ಯಥೋದಕಜ್ಞಾನಾದನುವರ್ತಿತವಾನಿಹ ॥೨೪॥

ಯಾವ ರೀತಿ ಒಂದು ಮೀನು ಸಮೃದ್ಧವಾಗಿ ನೀರಿರುವ ಒಂದು ಕಡೆ ಹೋಗಬೇಕೆಂದು ಬೇರೆ ಜಲಾಶಯಕ್ಕೆ ಹೋಗಲು ಬಯಸುತ್ತದೋ ನಾನು ಇದೇ ರೀತಿ ಬಂಧು ಜನರನ್ನು, ಧನ-ಕನಕಾದಿಗಳನ್ನು, ಚೇತನರನ್ನು ನೋಡುತ್ತಾ, ಆ ಪರಮಾತ್ಮನನ್ನು ನಾನೇ ಎಂದು ಭಾವಿಸಿ, ತಪ್ಪಾಗಿ ತಿಳಿದು ದೇಹದಿಂದ ದೇಹಕ್ಕೆ ಚಲಿಸುತ್ತಾ ದುಃಖಕ್ಕೆ ಈಡಾದೆನು.

ಮತ್ಸ್ಯೋಽನ್ಯತ್ವಂ ಯಥಾಜ್ಞಾನಾದುದಕಾನ್ನಾಭಿಮನ್ಯತೇ ।
ಆತ್ಮಾನಂ ತದ್ವದಜ್ಞಾನಾದನ್ಯತ್ವಂ ಚೈವ ವೇದ್ಮ್ಯಹಮ್ ॥೨೫॥

ಮೀನು ಅಜ್ಞಾನದ ಕಾರಣದಿಂದ ತನಗಿಂತ ಭಿನ್ನವಾಗಿರುವ ನೀರನ್ನು ಹೇಗೆ ತಿಳಿದುಕೊಂಡಿಲ್ಲವೋ ಅದೇ ರೀತಿ ನಾನು ನನಗೆ ಆಶ್ರಯನಾದ ಪರಮಾತ್ಮನಿಗಿಂತ ಭಿನ್ನನೆಂದು ತಿಳಿಯದಾದೆನು.

ಮಮಾಸ್ತು ಧಿಗಬುದ್ಧಸ್ಯ ಯೋಽಹಂ ಮಗ್ನ್ಮಮಂ ಪುನಃ ।
ಅನುವರ್ತಿತವಾ ಮೋಹಾದನ್ಯಮನ್ಯಂ ಜನಾಜ್ಜನಮ್ ॥೨೬॥

ನನ್ನ ಮೂರ್ಖತನಕ್ಕೆ ಧಿಕ್ಕಾರವಿರಲಿ. ಸಂಸಾರ ಸಾಗರದಲ್ಲಿ ಮುಳುಗಿದ್ದ ನಾನು ಮೋಹವಶನಾಗಿ ಒಂದು ದೇಹದಿಂದ ಇನ್ನೊಂದು ದೇಹವನ್ನು ಅನುಸರಿಸುತ್ತಲೇ ದುಃಖಕ್ಕೆ ತುತ್ತಾಗಿದ್ದೆನು.

ಅಯಂ ಮಮ ಭವೇದ್ ಬಂಧುರನೇನ ಸಹ ಮೋಕ್ಷಣಮ್ ।
ಸಾಮ್ಯಮೇಕತ್ವಮಾಯಾತೋ ಯಾದೃಶಸ್ತಾದೃಶಸ್ತ್ವಹಮ್ ॥೨೭॥

ಈ ಜಗತ್ತಿನಲ್ಲಿ ನನಗೆ ಪರಮಾತ್ಮನೇ ಬಂಧುವಾಗಿದ್ದಾನೆ. ಅವನ ಸಂಗವೇ ಉಚಿತವಾದುದು. ಅವನ ಪಾದಗಳ ಸನಿಹವನ್ನು ಹೊಂದಿ ಅವನಂತೆ ಆಗುತ್ತೇನೆ. ಅವನು ಹೇಗಿದ್ದಾನೋ ಅವನಂತೆ ನಾನು ಇದ್ದೇನೆ.

ತುಲ್ಯತಾಮಿಹ ಪಶ್ಯಾಮಿ ಸದೃಶೋಽಹಮನೇನ ವೈ ।
ಅಯಂ ಹಿ ವಿಮಲೋ ವ್ಯಕ್ತಮಹಮೀದೃಶಕಸ್ತಥಾ ॥೨೮॥

ನಾನು ಪರಮಾತ್ಮನಂತೆ ಇರುವುದನ್ನು, ಅವನ ಪ್ರತಿಬಿಂಬನೆಂಬುದನ್ನು ಕಾಣುತ್ತಿದ್ದೇನೆ. ಅವನಿಗೆ ಸದೃಶನಾದವನು, ಪರಮಾತ್ಮನು ಅತ್ಯಂತ ಪರಿಶುದ್ಧನು ಎಂಬುದನ್ನು ಸ್ಪಷ್ಟವಾಗಿ ಕಾಣುತ್ತಿದ್ದೇನೆ. ನಾನೂ ಅವನ ಅನುಗ್ರಹದಿಂದ ಪರಿಶುದ್ಧನೇ ಆಗಿರುತ್ತೇನೆ.

ಯೋಽಹಮಜ್ಞಾನಸಮ್ಮೋಹಾದಜ್ಞಯಾ ಸಂಪ್ರವರ್ತವಾನ್ ।
ಸಸಂಗಯಾಹಂ ನಿಃಸಂಗಃ ಸ್ಥಿತಃ ಕಾಲಮಿಮಂ ತ್ವಹಮ್ ॥೨೯॥

ನಾನು ಸ್ವಾಭಾವಿಕವಾಗಿ ತ್ರಿಗುಣಗಳ ಸಂಬಂಧದಿಂದ ದೂರನಾಗಿದ್ದರೂ ಪ್ರಕೃತಿಯ ಸಂಬಂಧದಿಂದ ಇಷ್ಟರ ತನಕ ಜಡವಾದ ಪ್ರಕೃತಿಯ ಜೊತೆಗೇ ಇದ್ದುಬಿಟ್ಟೆನು.

ಅನಯಾಹಂ ವಶೀಭೂತಃ ಕಾಲಮೇತಂ ನ ಬುದ್ಧವಾನ್ ।
ಉಚ್ಚಮಧ್ಯಮನೀಚಾನಾಂ ತಾಮಹಂ ಕಥಮಾವಸೇ ॥೩೦॥

ಈ ಪ್ರಕೃತಿಯಿಂದ ವಶನಾಗಿ ನನ್ನ ಕಾಲವೆಲ್ಲವೂ ವ್ಯರ್ಥವಾಗಿ ಕಳೆದು ಹೋಯಿತು. ಇದನ್ನು ತಿಳಿಯದಾದೆನು. ಪ್ರಕೃತಿಯು ಉತ್ತಮ, ಮಧ್ಯಮ, ನೀಚರಲ್ಲಿ ಯಾವ ತಾರತಮ್ಯವೂ ಇಲ್ಲದೆ ಸೇರಿಕೊಂಡಿದ್ದಾಳೆ. ಅಂತಹ ಪ್ರಕೃತಿಯ ಜೊತೆಗೆ ಇನ್ನು ಮುಂದೆ ನಾನು ಹೇಗೆ ವಾಸಮಾಡಲಿ?

ಸಮಾನಯಾನಯಾ ಚೇಹ ಸಹವಾಸಮಹಂ ಕಥಮ್ ।
ಗಚ್ಛಾಮ್ಯಬುದ್ಧಭಾವತ್ವಾದೇಷೇದಾನೀಂ ಸ್ಥಿರೋ ಭವೇತ್ ॥೩೧॥

ಅಜ್ಞಾನದ ಕಾರಣದಿಂದ ಈ ಪ್ರಕೃತಿಯ ಸಂಗದಲ್ಲಿದ್ದೆನು. ಇನ್ನು ಮುಂದೆ ಭಗವದ ಜ್ಞಾನವನ್ನು ಪಡೆದಿರುವ ನಾನು ಬಂಧಕವಾದ ಈ ಪ್ರಕೃತಿಯ ಸಂಬಂಧವನ್ನು ಹೇಗೆ

ತಾನೆ ಮಾಡಲಿ? ಪರಮಾತ್ಮನ ಜ್ಞಾನದಲ್ಲಿ ಸ್ಥಿರವಾದ ಬುದ್ಧಿ ಇರುವುದರಿಂದ ನಾನು ಇನ್ನೆಂದಿಗೂ ಪ್ರಕೃತಿಯ ಸಂಬಂಧವನ್ನು ಹೊಂದೆನು. ಸ್ಥಿರವಾಗಿ ಇರುತ್ತೇನೆ.

ಸಹವಾಸಂ ನ ಯಾಸ್ಯಾಮಿ ಕಾಲಮೇತದ್ಧಿ ವಂಚನಾತ್ ।
ವಂಚಿತೋಽಸ್ಮ್ಯನಯಾ ಯದ್ಧಿ ನಿರ್ವಿಕಾರೋ ವಿಕಾರಯಾ ॥೩೨॥

ನಾನು ನಿರ್ವಿಕಾರನಾದ ಸಚ್ಚಿದಾನಂದನಾಗಿದ್ದರೂ ಪ್ರಕೃತಿಯ ಸಂಬಂಧದಿಂದ ವಂಚಿಸಲ್ಪಟ್ಟು ವಿಕಾರವನ್ನು ಹೊಂದುತ್ತಿದ್ದೆನು. ಇನ್ನು ಮುಂದೆ ಈ ಪ್ರಕೃತಿಯ ಸಹವಾಸವನ್ನು ಎಂದಿಗೂ ನಾನು ಮಾಡುವುದಿಲ್ಲ. ಅವಳ ವಂಚನೆಗೆ ನಾನು ತುತ್ತಾಗುವುದಿಲ್ಲ.

ನ ಚಾಯಮಪರಾಧೋಽಸ್ಯಾ ಅಪರಾಧೋ ಹ್ಯಯಂ ಮಮ ।
ಯೋಽಹಮತ್ರಾಭವಂ ಸಕ್ತಃ ಪರಾಙ್ಮುಖಮುಪಸ್ಥಿತಃ ॥೩೩॥

ನಿರ್ವಿಕಾರನಾದ ನಾನು ಪ್ರಕೃತಿಯ ಜೊತೆಗೆ ಸೇರಿ ವಿಕಾರವನ್ನು ಹೊಂದಿದುದಕ್ಕೆ ಇವಳ ಅಪರಾಧವು ಇರುವುದಿಲ್ಲ. ನಾನೇ ಅಪರಾಧಿಯು. ಅಂತರ್ಯಾಮಿಯಾದ ಪರಮಾತ್ಮನನ್ನು ಅರಿಯದೆ ಇವಳಲ್ಲಿ ಆಸಕ್ತವಾಗಿದ್ದುದೇ ಅಪರಾಧವಾಗಿದೆ.

ತತೋಽಸ್ಮಿ ಬಹುರೂಪಾಸು ಸ್ಥಿತೋ ಮೂರ್ತಿಷ್ವಮೂರ್ತಿಮಾನ್ ।
ಅಮೂರ್ತಶ್ಚಾಪಿ ಮೂರ್ತಾತ್ಮಾ ಮಮತ್ವೇನ ಪ್ರಧರ್ಷಿತಃ ॥೩೪॥

ನಾನು ಒಬ್ಬನೇ ಆಗಿದ್ದರೂ ಪ್ರಾಕೃತಿಕವಾದ ಅನೇಕ ರೂಪಗಳನ್ನು, ದೇಹಗಳನ್ನು ಧರಿಸಿ, ದೇಹದಿಂದ ರಹಿತನಾಗಿದ್ದರೂ ಮಮಕಾರದಿಂದ ಆಕ್ರಾಂತನಾಗಿ ದೇಹವೇ ನಾನೆಂಬ ಮಮಕಾರದಿಂದ ತುಳಿಯಲ್ಪಟ್ಟೆನು.

ಪ್ರಕೃತೇರನಯತ್ವೇನ ತಾಸು ತಾಸ್ವಿಹ ಯೋನಿಷು ।
ನಿರ್ಮಮಸ್ಯ ಮಮತ್ವೇನ ಕಿಂ ಕೃತಂ ತಾಸು ತಾಸು ಚ ।
ಯೋನೀಷು ವರ್ತಮಾನೇನ ನಷ್ಟಸಂಜ್ಞೇನ ಚೇತಸಾ ॥೩೫॥

ಆ ಪ್ರಕೃತಿಯ ಸಂಬಂಧದಿಂದ ನಾನಾ ಶರೀರಗಳ ಯೋನಿಗಳಲ್ಲಿ ಬಳಲುತ್ತಾ, ನಿರ್ಮಮನಾದ ನಾನು ಮಮಕಾರವನ್ನು ಹೊಂದಿ, ಆಯಾ ಯೋನಿಗಳಲ್ಲಿ ಮಾಡಿದ

ಸಾಧನೆಯಾದರೂ ಯಾವುದೆಂಬುದನ್ನು ಅರಿಯದವನಾಗಿದ್ದೇನೆ. ಆಯಾ ಯೋನಿಗಳಲ್ಲಿ ತೊಳಲಾಡಿದ ನಾನು ತತ್ತ್ವ ಜ್ಞಾನದಿಂದ ವಂಚಿತನಾಗಿದ್ದೆನು ಎಂಬುದಂತು ಸತ್ಯ ಸಂಗತಿಯು.

ನ ಮಮಾತ್ರಾನಯಾ ಕಾರ್ಯಮಹಂಕಾರಕೃತಾತ್ಮಯಾ ।
ಆತ್ಮಾನಂ ಬಹುಧಾ ಕೃತ್ವಾ ಯೇಯಂ ಭೂಯೋ ಯುನಕ್ತಿ ಮಾಮ್ ।
ಇದಾನೀಮೇಷ ಬುದ್ಧೋಸ್ಮಿ ನಿರ್ಮಮೋ ನಿರಹಂಕೃತಃ ॥೩೬॥

ನಾನು ನನ್ನ ತನವನ್ನು ಅರಿತಿದ್ದೇನೆ. ಆದ್ದರಿಂದ ಈ ಪ್ರಕೃತಿಯ ಕಾರ್ಯವಾದ ಅಹಂಕಾರದಿಂದ ಮಾಡಲ್ಪಟ್ಟ ಆಕಾರದಿಂದ ನನಗೆ ಯಾವ ಪ್ರಯೋಜನವೂ ಆಗಬೇಕಾಗಿಲ್ಲ. ಪ್ರಕೃತಿಯು ಮನಮೋಹಕವಾದ ಬಹುರೂಪವನ್ನು ತಾಳಿ ನನ್ನನ್ನು ತನ್ನೊಡನೆ ಸೇರಿಸಿಕೊಂಡು ಬಿಡುತ್ತಾಳೆ. ಆದರೆ ನಾನು ಈಗ ಜ್ಞಾನ ಸಂಪನ್ನನಾಗಿದ್ದೇನೆ. ಮಮಕಾರವನ್ನು ತೊರೆದಿದ್ದೇನೆ. ಅಹಂಕಾರದಿಂದ ರಹಿತನಾಗಿದ್ದೇನೆ.

ಮಮತ್ವಮನಯಾ ನಿತ್ಯಮಹಂಕಾರಕೃತಾತ್ಮಕಮ್ ।
ಅಪೇತ್ಯಾಹಮಿಮಾಂ ಹಿತ್ವಾ ಸಂಶ್ರಯಿಷ್ಯೇ ನಿರಾಮಯಮ್ ॥೩೭॥

ಈ ಅಹಂಕಾರ-ಮಮಕಾರಗಳು ಪ್ರಕೃತಿಯಿಂದಲೇ ನನಗೆ ಉಂಟಾದವು. ನಾನು ಈಗ ಮಮತ್ವವನ್ನು ತ್ಯಜಿಸಿ ಪ್ರಕೃತಿಯ ಆಶ್ರಯವನ್ನೂ ತೊರೆದು ನಿರಾಮಯನಾದ ಪರಮಾತ್ಮನನ್ನೇ ಚೆನ್ನಾಗಿ ಆಶ್ರಯಿಸುತ್ತೇನೆ.

ಅನೇನ ಸಾಮ್ಯಂ ಯಾಸ್ಯಾಮಿ ನಾನಯಾಹಮಚೇತಸಾ ।
ಕ್ಷಮಂ ಮಮ ಸಹಾನೇನ ನೈಕತ್ವಮನಯಾ ಸಹ ।
ಏವಂ ಪರಮಸಂಬೋಧಾತ್ ಪಂಚವಿಂಶೋऽನುಬುದ್ಧವಾನ್ ॥೩೮॥

ನಾನು ಪರಮಾತ್ಮನಂತೆ ಸಾದೃಶ್ಯವನ್ನು ಹೊಂದುತ್ತೇನೆ. ಜಡಪ್ರಕೃತಿಯ ಸಾಮ್ಯವನ್ನು ಎಂದಿಗೂ ಹೊಂದುವುದಿಲ್ಲ. ಹೀಗೆ ಇಪ್ಪತ್ತೈದನೆಯ ತತ್ತ್ವವಾದ ಪರಮಾತ್ಮನನ್ನು ಚೆನ್ನಾಗಿ ತಿಳಿದುಕೊಂಡು ಪರಮಾತ್ಮನ ಜ್ಞಾನದಿಂದಲೇ ಅವನ ಮಹತ್ವವನ್ನು ತಿಳಿದಿರುತ್ತೇನೆ.

ಅಕ್ಷರತ್ವಂ ನಿಯಚ್ಛೇತ ತ್ಯಕ್ತಾ ತ್ವಕ್ಷರಮನಾಮಯಮ್ ।
ಅವ್ಯಕ್ತಂ ವ್ಯಕ್ತಧರ್ಮಾಣಂ ಸಗುಣಂ ನಿರ್ಗುಣಂ ತಥಾ ।
ನಿರ್ಗುಣಂ ಪರಮಂ ದೃಷ್ಟ್ವಾ ತಾದೃಗ್ಭವತಿ ಮೈಥಿಲ ॥೩೯॥

ಅನಾದಿ-ಅನಂತ ಕಾಲಗಳಿಂದ ಜನನ-ಮರಣವೆಂಬ ರೋಗರಹಿತನಾದ, ಪರಮ ಅಕ್ಷರಸ್ವರೂಪನಾದ ನಾರಾಯಣನನ್ನು ಬಿಟ್ಟು ಅರ್ಥಾತ್ ಅವನಿಂದ ಮೋಕ್ಷವನ್ನು ಹೊಂದುವುದನ್ನು ಬಿಟ್ಟು ಮೋಕ್ಷವನ್ನು ಬಯಸಬಹುದು. ಭಗವಂತನು ಸ್ವಭಾವತಃ ಅಜ್ಞೇಯನಾಗಿದ್ದಾನೆ. ಆದ್ದರಿಂದಲೇ ಅವ್ಯಕ್ತನೆನಿಸಿದ್ದಾನೆ. ಸ್ವಾತಂತ್ರ್ಯಾದಿ, ಸರ್ವಜ್ಞಾದಿ ಧರ್ಮಗಳನ್ನು ಹೊಂದಿರುವುದರಿಂದ ವ್ಯಕ್ತ ಧರ್ಮಿ ಎನಿಸಿದ್ದಾನೆ. ಎಲ್ಲ ಗುಣಗಳಿಂದಲೂ ಪೂರ್ಣನಾಗಿದ್ದಾನೆ. ಅನಾದ್ಯನಂತ ಕಾಲದಿಂದ ಗುಣತ್ರಯ ರಹಿತನಾದ ನಾರಾಯಣನನ್ನು ನೋಡಿ, ಅವನ ಅನುಗ್ರಹದಿಂದ ನನಗೆ ಬಂಧಕವಾದ ಪ್ರಕೃತಿಗುಣಗಳಿಂದ ಮುಕ್ತನಾಗಿ, ಆ ಭಗವಂತನಂತೆ ಸಾಮ್ಯವನ್ನು ಹೊಂದುತ್ತೇನೆ. ಪ್ರಾಕೃತಿಕ ಗುಣಗಳಿಂದ ದೂರನಾಗಿರುವುದರಿಂದ ನಾನು ಭಗವಂತನಂತೆ ಆಗುತ್ತೇನೆ. ಹೊರತು ಭಗವಂತನೇ ಆಗುತ್ತೇನೆ ಎಂದು ಅರ್ಥವಲ್ಲ. ನಾರಾಯಣನು ಅನಾದ್ಯನಂತ ಕಾಲದಿಂದ ಪ್ರಕೃತಿಗುಣಗಳಿಂದ ಮುಕ್ತನಾಗಿದ್ದಾನೆ. ಜೀವನು ಯಾವುದೋ ಒಂದು ಸಮಯದಲ್ಲಿ ಪ್ರಕೃತಿಯ ಗುಣರಾಹಿತ್ಯವನ್ನು ಹೊಂದುವುದರಿಂದ ಅವನಂತೆ ಸರ್ವಸಾಮ್ಯವನ್ನಾಗಲಿ, ಅವನಂತೆ ಸರ್ವಾತ್ಮನಾ ಪ್ರಾಕೃತಗುಣರಾಹಿತ್ಯವನ್ನಾಗಲಿ ಹೊಂದಲು ಸಾಧ್ಯವಿಲ್ಲ. ಅಂತಹ ಗುಣತ್ರಯರಹಿತನಾದ ಪರಮಾತ್ಮನ ದರ್ಶನವನ್ನು ಮಾಡಿದ ಜೀವನು ಭಗವಂತನಂತೆ ಯತ್ಕಿಂಚಿತ್ ಸಾಮ್ಯವನ್ನು ಹೊಂದುತ್ತಾನೆ ಎಂದು ಭಾವ.

ವ್ಯಾಖ್ಯಾನ ವಿಶೇಷ– ನಲವತ್ತೈದನೆಯ ಶ್ಲೋಕದಲ್ಲಿ 'ಪಂಚವಿಂಶಾತ್ ಪರಂ ತತ್ತ್ವಮ್' ಎಂದು ಹೇಳಿದ್ದಾರೆ. ಚತುರ್ವಿಂಶತಿ ತತ್ತ್ವಗಳು ಜಡತತ್ತ್ವಗಳು, ಆದುದರಿಂದ ಅಧಮ ತತ್ತ್ವಗಳು ಎನಿಸಿವೆ. ಇಪ್ಪತ್ನಾಲ್ಕು ತತ್ತ್ವಗಳ ಒಳಗೆ ತತ್ತಾ ಭಿಮಾನಿ ದೇವತೆಗಳು ಅವರಲ್ಲಿ ಇಪ್ಪತ್ನಾಲ್ಕು ಭಗವಂತನ ರೂಪಗಳು ನಿಯಾಮಕವಾಗಿವೆ. ಜೀವರಿಗೆ ಇಪ್ಪತ್ನಾಲ್ಕು ತತ್ತ್ವಗಳು ಜನನ-ಮರಣಾದಿ ದುಃಖವನ್ನು ನೀಡುವುದರಿಂದ ನೀಚತತ್ತ್ವವೆನಿಸಿವೆ. ಇಪ್ಪತ್ನಾಲ್ಕನೆಯ ತತ್ತ್ವವೆನಿಸಿದ ಲಕ್ಷ್ಮೀದೇವಿಯಾದರೂ ಭಗವಂತನ ಅನುಗ್ರಹದಿಂದ ಪ್ರಕೃತಿ ತತ್ತ್ವಕ್ಕೆ ಅಭಿಮಾನಿಯಾಗಿ ಪ್ರಕೃತಿ ಪದದಿಂದ ಸೂಚಿತವಾದ ಸ್ತ್ರೀತ್ವವನ್ನು ಹೊಂದಿರುವುದರಿಂದ ಭಗವಂತನ ದೆಸೆಯಿಂದ ಅಧಮಳಾಗಿಯೇ ಇದ್ದಾಳೆ.

ಭಗವಂತನು ಇಪ್ಪತ್ತೈದನೆಯ ತತ್ತ್ವ ಎನಿಸಿದ್ದಾನೆ. ಆದ್ದರಿಂದ ಇಪ್ಪತ್ತೈದನೆಯ ತತ್ತ್ವಕ್ಕಿಂತ ಉತ್ತಮವಾದ ತತ್ತ್ವವನ್ನು ನಾನು ನೋಡಿಲ್ಲ ಎಂದು ' 'ಪಂಚವಿಶಾತ್ ಪರಂ ತತ್ತ್ವಂ ನ ಪಶ್ಯಾಮಿ ನರಾಧಿಪ' ಎಂದು ಹೇಳಿದ್ದಾರೆ.

ಅಕ್ಷರಕ್ಷರಯೋರೇತದುಕ್ತಂ ತವ ನಿದರ್ಶನಮ್ ।
ಮಯೀಹ ಜ್ಞಾನಸಂಪನ್ನಂ ಯಥಾಶ್ರುತಿನಿದರ್ಶನಾತ್ ॥೪೦॥

ಶ್ರುತಿಗಳಲ್ಲಿರುವ ದೃಷ್ಟಾಂತಕ್ಕನುಗುಣವಾಗಿ ಕ್ಷರ-ಅಕ್ಷರಗಳ ವಿವೇಕ ಜ್ಞಾನವನ್ನು ನಿನಗೆ ನಿದರ್ಶನ ಪೂರ್ವಕವಾಗಿ ತಿಳಿಸಿರುತ್ತೇನೆ.

ನಿಃಸಂದಿಗ್ಧಂ ಚ ಸೂಕ್ಷ್ಮಂ ಚ ವಿಬುದ್ಧಂ ವಿಮಲಂ ತಥಾ ।
ಪ್ರವಕ್ಷ್ಯಾಮಿ ತು ತೇ ಭೂಯಸ್ತನ್ನಿಬೋಧ ಯಥಾಶ್ರುತಮ್ ॥೪೧॥

ನಾನು ಶ್ರುತಿಗೆ ಅನುಗುಣವಾಗಿ ಸಂದೇಹರಹಿತವಾದ, ಸೂಕ್ಷ್ಮವಾದ, ಅತ್ಯಂತ ನಿರ್ಮಲವಾದ, ವಿಶಿಷ್ಟವಾದ ಜ್ಞಾನವನ್ನು ನಿನಗೆ ಹೇಳುತ್ತೇನೆ, ಕೇಳು.

ಸಾಂಖ್ಯಯೋಗೌ ಮಯಾ ಪ್ರೋಕ್ತೌ ಶಾಸ್ತ್ರದ್ವಯನಿದರ್ಶನಾತ್ ।
ಯದೇವ ಶಾಸ್ತ್ರಂ ಸಾಂಖ್ಯೋಕ್ತಂ ಯೋಗದರ್ಶನಮೇವ ತತ್ ॥೪೨॥

ನಾನು ಸಾಂಖ್ಯ ಮತ್ತು ಯೋಗ ಎರಡೂ ಶಾಸ್ತ್ರಗಳ ನಿದರ್ಶನಸಹಿತವಾಗಿ ಸಾರವನ್ನು ತಿಳಿಸಿರುತ್ತೇನೆ. ಆದರೆ ಸಾಂಖ್ಯೋಕ್ತ ಶಾಸ್ತ್ರವು ಯಾವುದಿದೆಯೋ ಅದೇ ಯೋಗಶಾಸ್ತ್ರವಾಗಿದೆ.

ವ್ಯಾಖ್ಯಾನ ವಿಶೇಷ- 'ಏಕಂ ಸಾಂಖ್ಯಂ ಚ ಯೋಗಂ ಚ ಯಃಪಶ್ಯತಿ ಸ ಪಶ್ಯತಿ' ಎಂಬ ಗೀತೆಯ ವಚನವು ಈ ಮಾತಿಗೆ ಪೂರಕವಾಗಿದೆ.

ಪ್ರಬೋಧನಕರಂ ಜ್ಞಾನಂ ಸಾಂಖ್ಯಾನಾಮವನೀಪತೇ ।
ವಿಸ್ಪಷ್ಟಂ ಪ್ರೋಚ್ಯತೇ ತತ್ರ ಶಿಷ್ಯಾಣಾಂ ಹಿತಕಾಮ್ಯಯಾ ॥೪೩॥

ಸಾಂಖ್ಯಯೋಗಿಗಳ ಜ್ಞಾನವು ಭಗವಂತನ ಜ್ಞಾನವನ್ನು ಚೆನ್ನಾಗಿ ಹುಟ್ಟಿಸುತ್ತದೆ. ಶಿಷ್ಯರಿಗೆ ಹಿತವಾಗಬೇಕೆಂಬ ಕಾರಣದಿಂದ ಸಾಂಖ್ಯಶಾಸ್ತ್ರದಲ್ಲಿ ಸ್ಪಷ್ಟವಾಗಿ ಭಗವತ್ತತ್ತ್ವವು ನಿರೂಪಿಸಲ್ಪಟ್ಟಿದೆ.

ಬೃಹಚ್ಚೈವ ಹಿ ತಚ್ಚಾಸ್ತ್ರಮಿತ್ಯಾಹುಃ ಕುಶಲಾ ಜನಾಃ ।
ಅಸ್ಮಿಂಶ್ಚ ಶಾಸ್ತ್ರೇ ಯೋಗಾನಾಂ ಪುನರ್ವೇದ್ಯೈಃ ಪುರಃಸರಃ ॥೪೪॥

ವಿದ್ವಾಂಸರಾದ ಪುರುಷರು ಸಾಂಖ್ಯಶಾಸ್ತ್ರವನ್ನು ಮಹಾಶಾಸ್ತ್ರವೆಂದು ಕರೆಯುತ್ತಾರೆ. ಸಾಂಖ್ಯಶಾಸ್ತ್ರಗಳಲ್ಲಿ ಯೋಗಶಾಸ್ತ್ರಗಳ ಜ್ಞಾನವು ಅಡಕವಾಗಿದೆ. ವೇದದ ಜ್ಞಾನವೂ ಅಡಕವಾಗಿದೆ.

ಪಂಚವಿಂಶಾತ್ ಪರಂ ತತ್ತ್ವಂ ನ ಪಶ್ಯಾಮಿ ನರಾಧಿಪ ।
ಸಾಂಖ್ಯಾನಾಂ ತು ಪರಂ ತತ್ರ ಯಥಾವದನುವರ್ಣಿತಮ್ ॥೪೫॥

ಮಹಾರಾಜನೇ, ಸಾಂಖ್ಯಶಾಸ್ತ್ರದಲ್ಲಿ ಇಪ್ಪತ್ತೈದನೆಯ ತತ್ತ್ವಕ್ಕಿಂತಲೂ ಅಧಿಕವಾದ ಯಾವ ತತ್ತ್ವವೂ ಹೇಳಲ್ಪಟ್ಟಿಲ್ಲ. ಇಂತಹ ಸಾಂಖ್ಯರ ಭಗವತ್ತತ್ತ್ವ ಪ್ರಧಾನವೆನಿಸಿದ ತತ್ತ್ವವನ್ನು ಯಥಾವತ್ತಾಗಿ ತಿಳಿಸಿದ್ದೇನೆ.

ಬುದ್ಧಮಪ್ರತಿಬುದ್ಧಂ ಚ ಬುದ್ಧ್ಯಮಾನಂ ಚ ತತ್ತ್ವತಃ ।
ಬುದ್ಧ್ಯಮಾನಂ ಚ ಬುದ್ಧಂ ಚ ಪ್ರಾಹುರ್ಯೋಗನಿದರ್ಶನಮ್ ॥೪೬॥

ಚೇತನ, ಜಡ ಇವುಗಳ ಬಗ್ಗೆ ಅಜ್ಞಾನಿಗಳಿಂದ ತಪ್ಪಾಗಿ ತಿಳಿದ ಪ್ರಬುದ್ಧರಿಂದ ಯಥಾರ್ಥವಾಗಿ ತಿಳಿದ ಪರಮಾತ್ಮತತ್ತ್ವದ ಬಗ್ಗೆ ಶಾಸ್ತ್ರವು ಹೇಗೆ ವಿವೇಚನೆ ಮಾಡಿ ಹೇಳಿದೆಯೋ ಅಂತಹ ಯೋಗಕ್ಕೆ ನಿದರ್ಶನವು ಸಾಂಖ್ಯತತ್ತ್ವವೇ ಆಗಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತನೆಯ ಅಧ್ಯಾಯ

ವಸಿಷ್ಠ-ಜನಕರ ಸಂವಾದವು ಮುಂದುವರೆದುದು.

ವಸಿಷ್ಠಃ

ಅಪ್ರಬುದ್ಧಮಥಾವ್ಯಕ್ತಮಿಮಂ ಗುಣವಿಧಿಂ ಶೃಣು ।
ಗುಣಾಂಧಾರಯತೇ ಹ್ಯೇಷಾ ಸೃಜತ್ಯಾಕ್ಷಿಪತೇ ತಥಾ ॥೧॥

ವಸಿಷ್ಠ– ರಾಜನೇ, ಜ್ಞಾನರಹಿತವಾದ ಜಡಪ್ರಕೃತಿಯನ್ನು, ಅದರ ಗುಣ-ವಿಧಿಗಳನ್ನು ಹೇಳುತ್ತೇನೆ. ಜಡಪ್ರಕೃತಿಯು ಗುಣಗಳನ್ನು ಸೃಷ್ಟಿಸುತ್ತದೆ, ಪೋಷಿಸುತ್ತದೆ, ನಾಶ ಮಾಡುತ್ತದೆ.

ಅಜಸ್ರಂ ತ್ವಿಹ ಕ್ರೀಡಾರ್ಥಂ ವಿಕುರ್ವಂತೀ ನರಾಧಿಪ ।
ಆತ್ಮಾನಂ ಬಹುಧಾ ಕೃತ್ವಾ ತಾನ್ಯೇವ ಚ ವಿಚಕ್ಷತೇ ॥೨॥

ಆ ಜಡಪ್ರಕೃತಿಯು ಯಾವಾಗಲೂ ಕ್ರೀಡಾರ್ಥವಾಗಿ ತನ್ನನ್ನು ಅನೇಕ ರೀತಿಯಲ್ಲಿ ವಿಕಾರಗೊಳಿಸಿಕೊಂಡು ಇರುತ್ತದೆ. ತಾನು ಹೊಂದಿದ ಅನೇಕ ವಿಕಾರಗಳನ್ನೆಲ್ಲ ತಾನೆಂದೇ ತಿಳಿದುಕೊಂಡಿರುತ್ತದೆ.

ಏತದೇವಂ ವಿಕುರ್ವಾಣಾಂ ಬುದ್ಧ್ಯಮಾನೋ ನ ಬುದ್ಧ್ಯತೇ ।
ಅವ್ಯಕ್ತಬೋಧನಾಚ್ಚೈವ ಬುದ್ಧ್ಯಮಾನಂ ವದಂತ್ಯಪಿ ॥೩॥

ವಾಸ್ತವಿಕವಾಗಿ ಜ್ಞಾನಸಂಪನ್ನನಾದ ಜೀವನು ಈ ಜಡಪ್ರಕೃತಿಯ ಸಂಸರ್ಗದಿಂದ ವಿಕಾರವನ್ನು ಹೊಂದುತ್ತಲೇ ಇರುವ ತನ್ನನ್ನು ತಿಳಿದುಕೊಂಡಿರುವುದಿಲ್ಲ. ಪ್ರಕೃತಿಯ ಸಂಬಂಧವಾದ ಅನುಮಿತಿ ರೂಪ ಜ್ಞಾನವನ್ನು ಹೊಂದಿರುವ ಕಾರಣದಿಂದ ತಿಳಿಯಲ್ಪಡತಕ್ಕವನು ಎಂದು ವಿದ್ವಾಂಸರು ಹೇಳುತ್ತಾರೆ.

ನ ತ್ವೇವ ಬುದ್ಧ್ಯತೇವ್ಯಕ್ತಂ ಸಗುಣಂ ವಾಥ ನಿರ್ಗುಣಮ್ ।
ಕದಾಚಿತ್ತ್ವೇವ ಖಲ್ವೇತದಾಹುರಪ್ರತಿಬುದ್ಧಕಮ್ ॥೪॥

ಈ ಪ್ರಕೃತಿಯು ಗುಣದಿಂದ ಕೂಡಿರಲಿ, ಇಲ್ಲದಿರಲಿ, ಇದನ್ನು ಜೀವನು ಎಂದಿಗೂ ತಿಳಿಯುವುದಿಲ್ಲ. ಒಂದು ವೇಳೆ ತಿಳಿದರೂ ಅವ್ಯಕ್ತವನ್ನು ಅಸ್ಪಷ್ಟವಾಗಿ ತಿಳಿದಿರುತ್ತಾನೆ. ಅದರ ಪೂರ್ಣ ಅರಿವು ಅವನಿಗೆ ಇರುವುದಿಲ್ಲ. ಪ್ರಕೃತಿಯ ಕೊನೆಯನ್ನು ತಿಳಿದಿರುವುದಿಲ್ಲ.

ಬುದ್ಧ್ಯತೇ ಯದಿ ವಾವ್ಯಕ್ತಮೇತದ್ವೈ ಪಂಚವಿಂಶಕಮ್ ।
ಬುದ್ಧ್ಯಮಾನೋ ಭವತ್ಯೇಷ ಸಂಗಾತ್ಮಕ ಇತಿ ಶ್ರುತಿಃ ॥೫॥

ಒಂದು ವೇಳೆ ಇಪ್ಪತ್ತೈದನೆಯ ತತ್ತ್ವವಾದ ಭಗವಂತನನ್ನು ತಿಳಿದಲ್ಲಿ ಅವ್ಯಕ್ತ ತತ್ತ್ವವನ್ನು ಜೀವನು ತಿಳಿದಂತಾಗುತ್ತದೆ. ಭಗವಂತನಿಗೆ ಎಲ್ಲದರ ಸಂಬಂಧವು ಇರುವುದರಿಂದ ಅವನನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ.

ಅನೇನಾಪ್ರತಿಬುದ್ಧೇತಿ ವದಂತ್ಯವ್ಯಕ್ತಮಚ್ಯುತಮ್ ।
ಅವ್ಯಕ್ತಬೋಧನಾಚ್ಚಾಪಿ ಬುದ್ಧ್ಯಮಾನಂ ವದಂತ್ಯುತ ॥೬॥

ಅವ್ಯಕ್ತವೂ, ಅಚ್ಯುತವೂ, ಅನಂತವೂ ಆದ ಕಾರಣದಿಂದ ಅವ್ಯಕ್ತವನ್ನು ಜೀವನು ಅರಿಯಲಾರ ಎಂದು ಹೇಳುತ್ತಾರೆ. ಭಗವಂತನನ್ನು ಅರಿತಿರುವ ಕಾರಣದಿಂದ, ಅವನ ಸಂಬಂಧವು ಪ್ರಕೃತಿಗೆ ಇರುವ ಕಾರಣದಿಂದ ಅವ್ಯಕ್ತತತ್ತ್ವವನ್ನು ಅರಿತವನು ಎಂದೂ ಹೇಳುತ್ತಾರೆ.

ಪಂಚವಿಂಶಂ ಮಹಾತ್ಮಾನಂ ನ ಚಾಸಾವಪಿ ಬುಧ್ಯತೇ ।
ಷಟ್‌ವಿಂಶಂ ವಿಮಲಂ ಬುದ್ಧಮಪ್ರಮೇಯಂ ಸನಾತನಮ್ ॥೭॥

ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನನ್ನು ಈ ಜೀವಾತ್ಮನು ಸ್ಪಷ್ಟವಾಗಿಯೂ ಅರಿಯುವುದಿಲ್ಲ. ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನೇ ಇಪ್ಪತ್ತಾರನೆಯ ವಿಮಲವಾದ, ಸನಾತನವಾದ, ಅಪ್ರಮೇಯವಾದ ತತ್ತ್ವಎಂದು ಕರೆಸಿಕೊಳ್ಳುತ್ತಾನೆ.

ವ್ಯಾಖ್ಯಾನ ವಿಶೇಷ– 'ತತ್‌ಸೃಷ್ಟ್ವಾ ತದೇವಾನುಪ್ರಾವಿಶತ್' ಎಂಬ ಶ್ರುತಿಯಲ್ಲಿ ಭಗವಂತನು ತಾನು ಸೃಷ್ಟಿಮಾಡಿದ ಇಪ್ಪತ್ನಾಲ್ಕು ತತ್ತ್ವಗಳಲ್ಲಿ ಅಂತರ್ಯಾಮಿಯಾಗಿ ಪ್ರವೇಶಿಸಿದನು. ಇಪ್ಪತ್ನಾಲ್ಕು ತತ್ತ್ವಗಳಿಗೂ ಆಶ್ರಯವನ್ನು ನೀಡಿರುವುದರಿಂದ ಭಗವಂತನು ಇಪ್ಪತ್ನಾಲ್ಕು ತತ್ತ್ವನು ಎಂದು ಜ್ಞಾನಿಗಳಿಂದ ತಿಳಿಯಲ್ಪಡುತ್ತಾನೆ. ಅಥವಾ ನಾರಾಯಣನು ಸ್ವಯಂ ತಾನೊಬ್ಬನೇ ನಿರಂತರವೂ ಅನಾದಿ, ಅನಂತ ಕಾಲಗಳಿಂದ ಇಪ್ಪತ್ನಾಲ್ಕು ತತ್ತ್ವಗಳನ್ನು ಸ್ವತಂತ್ರವಾಗಿ ಸೃಷ್ಟಿಸುತ್ತಿದ್ದಾನೆ. ತನ್ನದೇ ಬಿಂಬರೂಪಗಳಾದ ಇಪ್ಪತ್ನಾಲ್ಕು ತತ್ತ್ವಗಳ ಮೇಲೆ ತಾನೇ ಇರುವುದರಿಂದ ಇಪ್ಪತ್ತೈದನೆಯ ತತ್ತ್ವವೆಂದು ಜ್ಞಾನಿಗಳಿಂದ ಕರೆಸಿಕೊಳ್ಳುತ್ತಾನೆ. ಅಥವಾ ಭಗವಂತನು ವ್ಯಾಪ್ತನೂ, ಅಪ್ರಮೇಯನೂ, ಜಗತ್ತಿನ ಸೃಷ್ಟಿ–ನಿಯಮನ–ಸಂಹಾರಗಳನ್ನು ಮಾಡುತ್ತಿದ್ದರೂ ಅವುಗಳಲ್ಲಿ ತಾನು ಸಿಲುಕಿಕೊಳ್ಳದೆ ಏಕಪ್ರಕಾರ ವಿಮಲನೂ, ಶುದ್ಧಜ್ಞಾನರೂಪಿಯೂ ಆಗಿರುವ ನಾರಾಯಣ ಸ್ವರೂಪವು ಇಪ್ಪತ್ತೈದನೆಯ ತನ್ನದ್ದೇ ಆದ ರೂಪಕ್ಕಿಂತಲೂ ಉತ್ತಮವಾದುದು ಯಾವುದು ಎಂದು ವಿಚಾರ ಮಾಡಿದಾಗ ಇಪ್ಪತ್ತಾರನೆಯ ತತ್ತ್ವವಾಗಿ ಜ್ಞಾನಿಗಳಿಂದ ಅವನೇ ತೋರುತ್ತಾನೆ. 'ಷಡ್‌ವಿಂಶಕೋ ಮಹಾವಿಷ್ಣುಃ' ಎಂಬ ಪ್ರಮಾಣದಂತೆ ಕೆಲವು ಕಡೆ ಪುರಾಣಗಳಲ್ಲಿ ಇಪ್ಪತ್ನಾಲ್ಕು ಇಪ್ಪತ್ತೈದು, ಇಪ್ಪತ್ತಾರು ಈ ಎಲ್ಲ ಸಂಖ್ಯೆಗಳಿಂದ ವಾಚ್ಯನಾದವನು ಭಗವಂತನೇ ಎಂದು ಹೇಳುತ್ತಾರೆ. ಈ ವಿಷಯವನ್ನು ಸ್ಪಷ್ಟಪಡಿಸಲು, ಏಕವಾಕ್ಯತ್ವವನ್ನು ಬೋಧಿಸಲು ಇಲ್ಲಿ 'ಷಡ್‌ವಿಂಶಂ ವಿಮಲಂ ಬುದ್ಧಂ' ಎಂದು ಹೇಳಲಾಗಿದೆ. ಇದನ್ನೇ ಮುಂದೆ ವಿವರಿಸುತ್ತಾರೆ.

ಸತತಂ ಪಂಚವಿಂಶಂ ಚ ಚತುರ್ವಿಂಶಂ ಚ ಬುದ್ಧ್ಯತೇ ।
ದೃಶ್ಯಾದೃಶ್ಯೇ ಹ್ಯನುಗತಮುಭಾವೇವ ಮಹಾದ್ಯುತೇ ॥೮॥

ಜ್ಞಾನಿಗಳು ಈ ಭಗವಂತನನ್ನು ಚತುರ್ವಿಂಶ ಎಂದು, ಪಂಚವಿಂಶನೆಂದು ಹೇಳುತ್ತಾರೆ. ಇಪ್ಪತ್ನಾಲ್ಕು ತತ್ತ್ವಗಳಲ್ಲಿ ಭಗವಂತನು ವ್ಯಕ್ತರೂಪದಿಂದಲೂ, ಇಪ್ಪತ್ತೈದನೆಯ ತತ್ತ್ವದಲ್ಲಿ ಅವ್ಯಕ್ತನಾಗಿಯೂ ನೆಲೆಸಿರುತ್ತಾನೆ.

ಅವ್ಯಕ್ತಂ ನ ತು ತದ್ ಬ್ರಹ್ಮ ಬುದ್ಧ್ಯತೇ ತಾತ ಕೇವಲಮ್ ।
ಕೇವಲಂ ಪಂಚವಿಂಶಂ ಚ ಚತುರ್ವಿಂಶಂ ನ ಪಶ್ಯತಿ ॥೯॥

ಜೀವನು ಎಂದಿಗೂ ಅವ್ಯಕ್ತಸ್ವಭಾವನಾದ, ಗುಣಪರಿಪೂರ್ಣನಾದ ಬ್ರಹ್ಮನನ್ನು ತಿಳಿದಿರುವುದಿಲ್ಲ. ಪಂಚವಿಂಶನು, ಚತುರ್ವಿಂಶನು ಆದ ಭಗವಂತನನ್ನು ಸಾಕಲ್ಯೇನ ತಿಳಿಯಲು ಅಸಮರ್ಥನಾಗಿದ್ದಾನೆ.

ಬುದ್ಧ್ಯಮಾನೋ ಯದಾತ್ಮಾನಮನ್ಯೋಽಹಮಿತಿ ಮನ್ಯತೇ ।
ತದಾ ಪ್ರಕೃತಿಮಾನೇಷ ಭವತ್ಯವ್ಯಕ್ತಲೋಚನಃ ॥೧೦॥

ಜ್ಞಾನವನ್ನು ಹೊಂದಲು ಅರ್ಹನಾದ ಜೀವನು ಪರಮಾತ್ಮನು ಬೇರೆ, ನಾನು ಬೇರೆ ಎಂದು ಯಾವಾಗ ತಿಳಿಯುತ್ತಾನೋ ಆಗ ಅವ್ಯಕ್ತತತ್ತ್ವದಲ್ಲಿಯೂ ದೃಷ್ಟಿಯುಳ್ಳವನು ಈ ಜೀವನಾಗುತ್ತಾನೆ.

ಬುದ್ಧ್ಯತೇ ಚ ಪರಾಂ ಬುದ್ಧಿಂ ವಿಶುದ್ಧಾಮಮಲಾಂ ಯದಾ ।
ಷಡ್ವಿಂಶೋ ರಾಜಶಾರ್ದೂಲ ತದಾ ಬುದ್ಧತ್ವಮಾವ್ರಜೇತ್ ॥೧೧॥

ಯಾವ ವಿಶುದ್ಧವಾದ, ನಿರ್ಮಲವಾದ, ಸರ್ವೋತ್ಕೃಷ್ಟವಾದ ಬುದ್ಧಿಯನ್ನು ಹೊಂದುತ್ತಾನೋ ಆಗ ಪ್ರಕೃತಿ ತತ್ತ್ವಕ್ಕಿಂತ ಅತ್ಯಂತ ದೂರನಾದ ಭಗವಂತನ ಬಗ್ಗೆಯೂ ಜೀವನು ಜ್ಞಾನವನ್ನು ಹೊಂದುತ್ತಾನೆ.

ತತಸ್ಸೃಜತಿ ಸೋಽವ್ಯಕ್ತಂ ಸರ್ಗಪ್ರಲಯಧರ್ಮಿಣಮ್ ।
ನಿರ್ಗುಣಃ ಪ್ರಕೃತಿಂ ವೇದ ಗುಣಯುಕ್ತಾಮಚೇತನಾಮ್ ॥೧೨॥

ತತಃ ಕೇವಲಧರ್ಮಾಸೌ ಭವತ್ಯವ್ಯಕ್ತದರ್ಶನಾತ್ ।
ಕೇವಲೇನ ಸಮಾಗಮ್ಯ ವಿಮುಕ್ತೋಽಽತ್ಮಾನಮಾಪ್ನುಯಾತ್ ॥೧೩॥

ಬಳಿಕ ಜೀವನು ಹುಟ್ಟು-ಸಾವುಗಳಿಗೆ ಕಾರಣವಾದ ಅವ್ಯಕ್ತ ಪ್ರಕೃತಿಯನ್ನು ಸಂಪೂರ್ಣವಾಗಿ ತ್ಯಜಿಸುತ್ತಾನೆ. ಪ್ರಾಕೃತ ಗುಣರಹಿತನಾದ ಜೀವನು ತ್ರಿಗುಣಗಳಿಂದ ಕೂಡಿದ ಜಡಪ್ರಕೃತಿಯನ್ನು ಯಾವಾಗ ಅರಿಯುತ್ತಾನೋ ಆಗ ಕೇವಲ ಧರ್ಮಿ ಎನಿಸಿದ ಜೀವನು ವಿಮುಕ್ತನಾಗಿ ಪರಮಾತ್ಮನನ್ನು ಹೊಂದುತ್ತಾನೆ. ಅವ್ಯಕ್ತ ತತ್ತ್ವವನ್ನು ಚೆನ್ನಾಗಿ ಅರಿತಿರುವ ಕಾರಣದಿಂದ ಮುಕ್ತನಾಗುತ್ತಾನೆ.

ಏತದ್ ವೈ ತತ್ವಮಿತ್ಯಾಹುರ್ನಿಸ್ತತ್ತ್ವಮಜರಾಮರಮ್ ।
ತತ್ತ್ವಸಂಶ್ರಯಣಾದೇತತ್ ತತ್ತ್ವವನ್ನ ಚ ಮಾನದ ।
ಪಂಚವಿಂಶತಿತತ್ತ್ವಾನಿ ಪ್ರವದಂತಿ ಮನೀಷಿಣಃ ॥೧೪॥

ಇಪ್ಪತ್ನಾಲ್ಕು ತತ್ತ್ವಗಳಿಂದ ಅತಿರಿಕ್ತವಾದ ಇಪ್ಪತ್ತೈದನೆಯ ತತ್ತ್ವವನ್ನೇ ಜ್ಞಾನಿಗಳು ತತ್ತ್ವ ಎಂದು ಹೇಳುತ್ತಾರೆ. ಅಜರಾಮರವಾದ ಈ ಬ್ರಹ್ಮತತ್ತ್ವವನ್ನು ಆಶ್ರಯಿಸುವುದೇ ನಿಜವಾದ ತತ್ತ್ವ. ಭಗವತ್ತತ್ತ್ವವು ಜೀವತತ್ತ್ವದಂತೆ ಆಗಲಿ, ಜಡತತ್ತ್ವದಂತೆ ಆಗಲಿ ಪೂಜ್ಯನೇ ಇರುವುದಿಲ್ಲ. ಹೀಗೆ ಜ್ಞಾನಿಗಳಾದವರು ಇಪ್ಪತ್ತೈದು ತತ್ತ್ವಗಳನ್ನು ತಿಳಿಸಿರುತ್ತಾರೆ.

ನ ಚೈಷ ತತ್ತ್ವವಾಂಸ್ತಾತ ನಿಸ್ತತ್ತ್ವಸ್ತ್ವೇಷ ಬುದ್ಧಿಮಾನ್ ।
ಏಷ ಮುಂಚತಿ ತತ್ತ್ವಂ ಹಿ ಕ್ಷಿಪ್ರಾಂ ಬುದ್ಧಸ್ಯ ಲಕ್ಷಣಮ್ ॥೧೫॥

ಜೀವನು ಇಪ್ಪತ್ನಾಲ್ಕು ತತ್ತ್ವಗಳನ್ನು ತಿಳಿದಾಗ ಬುದ್ಧಿವಂತನಾಗುವುದಿಲ್ಲ. ಇಪ್ಪತ್ನಾಲ್ಕು ತತ್ತ್ವಗಳನ್ನು ನಿಯಮಿಸುವ ಇಪ್ಪತ್ತೈದನೆಯ ತತ್ತ್ವವಾದ ಭಗವಂತನನ್ನು ತಿಳಿದಾಗ ಬುದ್ಧಿವಂತನಾಗುತ್ತಾನೆ. ಭಗವಂತನ ಈ ಜ್ಞಾನದಿಂದ ಇಪ್ಪತ್ನಾಲ್ಕು ತತ್ತ್ವಗಳ ಪ್ರಕೃತಿಯ ಸಂಬಂಧವನ್ನು ಪರಮಾತ್ಮನು ಯಾವಾಗಲೂ ಬಿಟ್ಟಿರುತ್ತಾನೆ. ಅಸಂಗವಾಗಿ ನಿಂತು ಇಪ್ಪತ್ನಾಲ್ಕು ತತ್ತ್ವವನ್ನು ನಿಯಮಿಸುತ್ತಾನೆ ಎಂದು ಭಾವ.

ಷಡ್ವಿಂಶೋಽಹಮಿತಿ ಪ್ರಾಜ್ಞೋ ಗೃಹ್ಯಮಾಣೋಽಜರಾಮರಃ ।
ಕೇವಲೇನ ಬಲೇನೈವ ಸಮತಾಂ ಯಾತ್ಯಸಂಶಯಮ್ ॥೧೬॥

ಭಗವಂತನು ತನ್ನ ಸಾಕ್ಷಿಯಿಂದ ಇನ್ನೊಬ್ಬರ ಪ್ರಸಾದವನ್ನು ಅವಲಂಬಿಸದೆ ಇಪ್ಪತ್ತಾರನೆಯದ್ದಾದ ತನ್ನ ಸ್ವರೂಪವನ್ನು ಯಾವಾಗಲೂ ಒಂದೇ ರೀತಿಯಲ್ಲಿ

ತಿಳಿದಿರುತ್ತಾನೆ. ಯಾರ ಅನುಗ್ರಹವೂ ಇಲ್ಲದೆ ತನ್ನಿಂದಲೇ ತಾನು ಸಮತ್ವವನ್ನು ಹೊಂದಿರುವವನು ಭಗವಂತನೊಬ್ಬನೇ.

ಷಡ್‌ವಿಂಶೇನ ಪ್ರಬುದ್ಧೇನ ಬುದ್ಧ್ಯಮಾನೋಽಪ್ಯಬುದ್ಧಿಮಾನ್ ।
ಏತನ್ನಾನಾತ್ವಮಿತ್ಯುಕ್ತಂ ಸಾಂಖ್ಯಶ್ರುತಿನಿದರ್ಶನಾತ್ ॥೧೭॥

ಇಪ್ಪತ್ತಾರನೆಯ ತತ್ತ್ವವೆನಿಸಿದ ಭಗವಂತನನ್ನು ಜೀವಾತ್ಮನು ಶ್ರವಣಾದಿ ಜನ್ಯ ಭಗವತ್ಪ್ರಸಾದದ ಬಳಿಕ, ಚೆನ್ನಾಗಿ ತಿಳಿದ ಬಳಿಕ ಅಪರೋಕ್ಷಜ್ಞಾನಿಯಾಗುತ್ತಾನೆ. ಹೀಗೆ ಸಾಂಖ್ಯಶ್ರುತಿ ನಿದರ್ಶನದಿಂದ ಈ ನಾನಾತ್ವವು ವರ್ಣಿಸಲ್ಪಟ್ಟಿದೆ

ಚೇತನೇನ ಸಮೇತಸ್ಯ ಪಂಚವಿಂಶತಿಕಸ್ಯ ಚ ।
ಏಕತ್ವಂ ವೈ ಭವತ್ಯಸ್ಯ ಯದಾ ಬುದ್ಧ್ಯಾ ನ ಬುದ್ಧ್ಯತೇ ॥೧೮॥

ಬುದ್ಧ್ಯಮಾನೋಽಪ್ರಬುದ್ಧೇನ ಸಮತಾಂ ಯಾತಿ ಮೈಥಿಲ ।
ಸಂಗಧಮಾ ಭವತ್ಯೇಷ ನಿಃಸಂಗಾತ್ಮಾ ನರಾಧಿಪ ॥೧೯॥

ಯಾವಾಗ ಈ ಜೀವನು ಶಾಸ್ತ್ರಾರ್ಥಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳನೋ ಆಗ ಒಂದೇ ಜೀವನ ಶರೀರದಲ್ಲಿ ಪರಮಾತ್ಮನು ಸನ್ನಿಹಿತನಾಗಿರುವುದರಿಂದ ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನು ಜೀವಾತ್ಮನೇ ಆಗಿದ್ದಾನೆ ಎಂದು ತಿಳಿದುಕೊಳ್ಳುತ್ತಾನೆ. ಸರಿಯಾಗಿ ಭಗವತ್ತತ್ತ್ವವನ್ನು ಜೀವತತ್ತ್ವವನ್ನು ತಿಳಿಯದೆ, ಅದ್ವೈತ ಜ್ಞಾನವನ್ನು ಹೊಂದಿದ ವ್ಯಕ್ತಿಯಿಂದ ಪ್ರವಚನ ಕೇಳಿಸಿಕೊಂಡ ಇನ್ನೊಬ್ಬನೂ ಅವನಂತೆ ಅದ್ವೈತ ಜ್ಞಾನಿಯಾಗುತ್ತಾನೆ. ಹೀಗೆ ಅಂಧಪರಂಪರೆಯಿಂದ ದುರ್ಮತದ ಪ್ರವೃತ್ತಿಯು ಉಂಟಾಗುತ್ತದೆ. ಜೀವಾತ್ಮರಿಗೂ, ಪರಮಾತ್ಮರಿಗೂ ಎಂದಿಗೂ ಐಕ್ಯ ಸಲ್ಲದು. ರಾಜನೇ, ಅಜ್ಞಾನದಿಂದಾಗಿ ಹೀಗೆ ಅಂಧ ಪರಂಪರೆಯನ್ನು ಸೃಷ್ಟಿಸುತ್ತಾರೆ. ಐಕ್ಯಕ್ಕೆ ಸಾಂಖ್ಯಶಾಸ್ತ್ರವು ಮೂಲವಾಗಿರುವುದಿಲ್ಲ ಎಂದು ವಸಿಷ್ಠರ ಅಭಿಪ್ರಾಯವಾಗಿದೆ.

ನಿಃಸಂಗಾತ್ಮಾನಮಾಸಾದ್ಯ ಷಡ್‌ವಿಂಶಕಮಜಂ ವಿದುಃ ।
ವಿಭುಸ್ಯಜತಿ ಚಾವ್ಯಕ್ತಂ ಯದಾ ತ್ವೇತದ್ ವಿಬುದ್ಧ್ಯತೇ ।
ಚತುರ್ವಿಂಶಮಗಾಧಂ ಚ ಷಡ್‌ವಿಂಶಸ್ಯ ಪ್ರಬೋಧನಾತ್ ॥೨೦॥

ಯಾವಾಗ ಇಪ್ಪತ್ತಾರನೆಯ ತತ್ತ್ವನೆನಿಸಿದ ಭಗವಂತನನ್ನು ಆಶ್ರಯಿಸಿಕೊಂಡು ಸಾಂಖ್ಯಶಾಸ್ತ್ರವನ್ನು ಜೀವನು ಅರ್ಥಮಾಡಿಕೊಳ್ಳುತ್ತಾನೋ ಆ ಇಪ್ಪತ್ತಾರನೆಯ ತತ್ತ್ವವನ್ನು ತಿಳಿದ ಕಾರಣದಿಂದ ಅಪರೋಕ್ಷಜ್ಞಾನದ ಸಾಮರ್ಥ್ಯವನ್ನು ಹೊಂದಿದ ಜೀವನು ಪ್ರಕೃತಿ ಮೂಲವಾದ ನಾನೇ ಬ್ರಹ್ಮನೆಂಬ ಅಹಂಕಾರವನ್ನು ಅಥವಾ ಇಪ್ಪತ್ನಾಲ್ಕು ತತ್ತಾ ತ್ತ್ವಕವಾದ ದೇಹವನ್ನು ತ್ಯಜಿಸುತ್ತಾನೆ ಎಂದು ಜ್ಞಾನಿಗಳು ತಿಳಿಸುತ್ತಾರೆ.

ಏಷ ಹ್ಯಪ್ರತಿಬುದ್ಧಶ್ಚ ಬುದ್ಧ್ಯಮಾನಶ್ಚ ತೇऽನಘ ।
ಪ್ರೋಕ್ತೋ ಬುದ್ಧಶ್ಚ ತತ್ತ್ವೇನ ಯಥಾಶ್ರುತಿನಿದರ್ಶನಾತ್ ।
ನಾನಾತ್ವೈಕತ್ವಮೇತಾವದ್ ದ್ರಷ್ಟವ್ಯಂ ಶಾಸ್ತ್ರದೃಷ್ಟಿಭಿಃ ॥೨೧॥

ಈ ರೀತಿಯಾಗಿ ಅಜ್ಞಾನಿಗಳಿಂದ ತಿಳಿಯಲಾಗದ, ಸುಜ್ಞಾನಿಗಳಿಂದ ತಿಳಿಯಲಾಗುವ ನಾರಾಯಣನೆಂಬ ತತ್ತ್ವವನ್ನು ಶ್ರುತಿಗಳ ನಿದರ್ಶನದಿಂದ ನಾನು ಯಥಾರ್ಥವಾಗಿ ತಿಳಿಸಿರುತ್ತೇನೆ. ಜೀವ-ಪರಮಾತ್ಮರಿಗೆ ಅಲ್ಲಲ್ಲಿ ಭೇದವನ್ನು ಹೇಳುತ್ತಾರೆ, ಐಕ್ಯವನ್ನೂ ಹೇಳುತ್ತಾರೆ. ಯಾಕೆ ಹೇಳುತ್ತಾರೆ ಎಂಬುದಕ್ಕೆ ಸರಿಯಾದ ನಿದರ್ಶನಗಳನ್ನು ತೋರಿಸಿ ನಿನಗೆ ತಿಳಿಸಿರುತ್ತೇನೆ. ಶಾಸ್ತ್ರದಲ್ಲಿ ದೃಷ್ಟಿಯುಳ್ಳವರು ಯಾವುದನ್ನು ನೋಡಿದ್ದರೋ ಅಂತಹ ಭೇದಜ್ಞಾನವನ್ನೇ ನೀನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. (ಅಸಮ್ಮತದಲ್ಲಿ ಸ್ಥಾಪಿತವಾದ ಅಭೇದವನ್ನಾಗಲಿ, ಭೇದಾಭೇದಗಳನ್ನಾಗಲಿ ತಿಳಿಯಬಾರದು ಎಂದು ಭಾವ).

ಮಶಕೋದುಂಬರೇ ಯದ್ವದನ್ಯತ್ವಂ ತದ್ವದೇತಯೋಃ ।
ಮತ್ಸ್ಯೋऽಂಭಸಿ ಯಥಾ ತದ್ವದನ್ಯತ್ವಮುಪಲಭ್ಯತೇ ॥೨೨॥

ಅತ್ತಿಯ ಹಣ್ಣಿನಲ್ಲಿರುವ ಹುಳುವಿಗೂ, ಅತ್ತಿಯ ಹಣ್ಣಿಗೂ ಇರುವ ಆಧಾರ-ಆಧೇಯ ಭಾವದಂತೆ ಜೀವ-ಪರಮಾತ್ಮರಲ್ಲಿರುವ ಆಧಾರ-ಆಧೇಯ ಭಾವದಿಂದ ಭಿನ್ನತ್ವವನ್ನು ತಿಳಿಯಬೇಕು. ನೀರಿಗೂ ಮತ್ಸ್ಯಕ್ಕೂ ಇರುವ ಭೇದವನ್ನು ಜೀವ-ಪರಮಾತ್ಮರಲ್ಲಿ ತಿಳಿಯಬೇಕು.

ಏವಮೇವಾವಗಂತವ್ಯಂ ನಾನಾತ್ವೈಕತ್ವಮೇತಯೋಃ ।
ಏತದ್ ವಿಮೋಕ್ಷ ಇತ್ಯುಕ್ತಮವ್ಯಕ್ತಜ್ಞಾನಸಂಹಿತಮ್ ॥೨೩॥

ಜೀವರಲ್ಲಿರುವ ನಾನಾತ್ವವನ್ನು, ಪರಮಾತ್ಮನಲ್ಲಿರುವ ಏಕತ್ವವನ್ನು ಈ ದೃಷ್ಟಾಂತದಿಂದ ತಿಳಿದುಕೊಳ್ಳಬೇಕು. ಈ ಅವ್ಯಕ್ತ ಜ್ಞಾನಸಂಹಿತೆಯನ್ನು ಸರಿಯಾಗಿ ತಿಳಿದಾಗಲೇ ಜೀವನು ಮುಕ್ತಿಯನ್ನು ಹೊಂದುತ್ತಾನೆ.

ವ್ಯಾಖ್ಯಾನ ವಿಶೇಷ– ಅತ್ತಿ ಹಣ್ಣಿನಲ್ಲಿರುವ ನುಸಿಗಳಿಗೂ ಅತ್ತಿಯ ಹಣ್ಣಿಗೂ, ನೀರಿನಲ್ಲಿರುವ ಮತ್ಸ್ಯಕ್ಕೂ ನೀರಿಗೂ ಆಧಾರ-ಆಧೇಯ ಭಾವದಿಂದ ಭೇದವು ನಿರ್ಣಯವಾಗಿದೆ. ಮಶಕ-ಮತ್ಸ್ಯಗಳಂತೆ ಜೀವರಲ್ಲಿ ನಾನಾತ್ವವಿದೆ. ಔದುಂಬರ-ಜಲದಂತೆ ಆಧಾರಭೂತನಾದ ಬ್ರಹ್ಮನಲ್ಲಿ ಏಕತ್ವವನ್ನು, ಸ್ವಗತಭೇದವರ್ಜಿತತ್ವವನ್ನು ತಿಳಿದುಕೊಳ್ಳಬೇಕು. ಭೇದಾಭೇದ ಜ್ಞಾನವನ್ನು ನಿರಾಕರಿಸಲು ಹೀಗೆ ವ್ಯಾಸರು ತಿಳಿಸಿರುತ್ತಾರೆ. ಬುದ್ಧಿವಂತನು ಮಶಕ-ಔದುಂಬರಗಳಿಗೆ, ಜಲ-ಮತ್ಸ್ಯಗಳಿಗೆ ಭೇದಾಭೇದಗಳನ್ನು ಹೇಳುವುದಿಲ್ಲವಷ್ಟೆ? ಜೀವ-ಪರಮಾತ್ಮರಿಗೆ ಅತ್ಯಂತ ಭೇದವೇ ಇದೆ ಎಂದು ಸಮರ್ಥನೆ ಮಾಡಿದಾಗಲೂ ಭೇದಾಭೇದವೆಂಬ ವಾದವು ನಿರಾಕೃತವಾಗುತ್ತಿರಲು ಪ್ರತ್ಯೇಕವಾಗಿ ನಿರಾಕರಿಸಲು ಕಾರಣ 'ಏಕಮೇವಾದ್ವಿತೀಯಂ ಬ್ರಹ್ಮ' ಮೊದಲಾದ ಶ್ರುತಿಗಳನ್ನು ಪರರು ತಪ್ಪಾಗಿ ವ್ಯಾಖ್ಯಾನ ಮಾಡಿದ್ದರಿಂದ ಈ ಶ್ರುತಿಯು ಪರಬ್ರಹ್ಮನಲ್ಲಿ ಸಾವಕಾಶವಾಗಿದೆ ಎಂದು ಪರಮತವನ್ನು ನಿಷೇಧಿಸಲು ನಾನಾತ್ವ, ಏಕತ್ವಗಳನ್ನು ಹೇಳಿದ್ದಾರೆ. 'ನಾನಾತ್ವಂ ಏಕತ್ವಂ' ಎಂದು ದ್ವಂದ್ವಸಮಾಸವನ್ನು ಮಾಡಿ ಪುನಃ ಅದನ್ನೂ ಏಕೀಭಾವ ಮಾಡಿದರೆ 'ನಾನಾತ್ವೈಕತ್ವಂ' ಎಂಬ ಶಬ್ದನಿಷ್ಪತ್ತಿಯು ಸಾಧುವಾಗಿಯೇ ಇರುತ್ತದೆ ಎಂದು ತಿಳಿಯಬೇಕು. ಈ ರೀತಿಯಾದ ಸಮಾಸವನ್ನು ವ್ಯಾಸರು ಮಾಡಲು ಕಾರಣ ಬ್ರಹ್ಮಧರ್ಮಿಕ ಏಕತ್ವವು ಹೇಗೆ ಪಾರಮಾರ್ಥಿಕವೋ ಹಾಗೆ ಜೀವ-ಬ್ರಹ್ಮ ಭೇದವೂ ಪಾರಮಾರ್ಥಿಕವೇ ಎಂದು ತಿಳಿಸಲು ದ್ವಂದ್ವ ಸಮಾಸವನ್ನು ಏಕೀಭಾವಗೊಳಿಸಿದ್ದಾರೆ. ಆದ್ದರಿಂದ ಜೀವ-ಬ್ರಹ್ಮರ ತತ್ತ್ವವನ್ನು ಅವಲಂಬಿಸಿ ತಮ್ಮ ಮತವನ್ನು ಸ್ಥಾಪನೆ ಮಾಡುತ್ತಾ ಪರಮತವನ್ನು ದೂಷಿಸಿದ ಮುನಿಶ್ರೇಷ್ಠರಾದ ವಸಿಷ್ಠರು ಸಕಲ ಜ್ಞಾನಿಗಳಲ್ಲಿ ಶ್ರೇಷ್ಠರೆನಿಸಿದ್ದಾರೆ.

ಪಂಚವಿಂಶತಿಕಸ್ಯಾಸ್ಯ ಯೋಽಯಂ ದೇಹೇಷು ವರ್ತತೇ ।
ಏಷ ಮೋಕ್ಷಯಿತವ್ಯೇತಿ ಪ್ರಾಹುರವ್ಯಕ್ತಗೋಚರಾತ್ ॥೨೪॥

ಯಾವ ಜೀವನು ದೇಹಗಳಲ್ಲಿ ಇದ್ದಾನೋ ಇವನನ್ನು **'ಅವ್ಯಕ್ತಗೋಚರಾತ್'** ಎಂದರೆ ಸಂಸಾರಾದಿ ವಿಷಯಗಳಿಂದ ಬಿಡುಗಡೆಗೊಳಿಸಬೇಕು. ಇವನ ಬಿಡುಗಡೆಗೆ ಇಪ್ಪತ್ತೈದನೆಯ ತತ್ತ್ವವೆನಿಸಿದ ನಾರಾಯಣನ ದಯವೇ ಕಾರಣ ಎಂದು ಜ್ಞಾನಿಗಳು ಹೇಳಿರುತ್ತಾರೆ.

ಪೀಠಿಕೆ– ಹಿಂದೆ ಮುಕ್ತಜೀವರಿಗೆ ಪರಮಾತ್ಮನ ಗುಣದ ಜೊತೆಗೆ ಇರುವ ಸಾಮ್ಯವು ತುಂಬಾ ಅಲ್ಪವಾದುದು ಎಂದು ಹೇಳಿದ್ದರು. ಈಗ ಆ ರೀತಿಯಾದ ಅಲ್ಪಗುಣಸಾಮ್ಯವನ್ನು ಭಗವಂತನ ಕೆಲವೇ ಗುಣದ ಜೊತೆಗೆ ಹೇಳಬೇಕೇ ವಿನಾ ಎಲ್ಲಾಗುಣಗಳಿಂದ ಹೇಳಲಾಗದು ಎಂದು ತಿಳಿಸಲು ಮುಂದಿನ ಶ್ಲೋಕವು ಹೊರಟಿದೆ.

ಸೋऽಯಮೇವಂ ವಿಮುಚ್ಯೇತ ನಾನ್ಯಥೇತಿ ವಿನಿಶ್ಚಯಃ ।
ಪರೇಣ ಪರಧರ್ಮಾ ಚ ಭವತ್ಯೇಷ ಸಮೇತ್ಯ ವೈ ॥೨೫॥

ಭಗವಂತನನ್ನು ಚೆನ್ನಾಗಿ ಅರಿತ ಜೀವನು ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಭಗವತ್ಪ್ರಜ್ಞೆ ಇಲ್ಲದಿದ್ದಲ್ಲಿ ಮುಕ್ತಿಯನ್ನು ಹೊಂದುವುದಿಲ್ಲ. ಇದು ನಿಶ್ಚಯವು. ಭಗವಂತನ ಅನುಗ್ರಹದಿಂದ ಭಗವಂತನಂತೆ ಕೆಲವು ಗುಣಗಳನ್ನು ಭಗವಂತನನ್ನು ಹೊಂದಿ ಭಗವಂತನಿಂದ ಜೀವಾತ್ಮನು ಪಡೆಯುತ್ತಾನೆ.

ವ್ಯಾಖ್ಯಾನ ವಿಶೇಷ– 'ಪರೇಣ ಪರಧರ್ಮಾ ಚ' ಎಂದರೆ ಪರೇಣ= ಸಂಸಾರಿಗಳಿಗಿಂತ ಭಿನ್ನನಾದ ನಾರಾಯಣನಿಂದ ಕೂಡಿರುವ ಸ್ವಯಂ ಜೀವನು, ಸಂಸಾರಿಗಳಿಗಿಂತ ಭಿನ್ನಧರ್ಮವುಳ್ಳವನಾಗುತ್ತಾನೆ ಎಂದು ಅರ್ಥ.

ವಿಶುದ್ಧಧರ್ಮಾ ಶುದ್ಧೇನ ಬುದ್ಧೇನ ಚ ಸ ಬುದ್ಧಿಮಾನ್ ।
ವಿಮುಕ್ತಧರ್ಮಾ ಮುಕ್ತೇನ ಸಮೇತ್ಯ ಪುರುಷರ್ಷಭ ॥೨೬॥

ಸಂಸಾರವೆಂಬ ಮಲ ಇಲ್ಲದಿರುವ ಪರಮಾತ್ಮನ ಸಂಗದಿಂದ ಜೀವಾತ್ಮನು ಸಂಸಾರ ಮಲರಾಹಿತ್ಯವನ್ನು ಹೊಂದುತ್ತಾನೆ. ಸರ್ವಜ್ಞನಾದ ಭಗವಂತನ ಸಂಗದಿಂದ ಜೀವಾತ್ಮನು ತನ್ನ ಯೋಗ್ಯತೆಗನುಗುಣವಾದ ಪ್ರಜ್ಞೆಯನ್ನು ಹೊಂದುತ್ತಾನೆ. ಪುಣ್ಯವೆಂಬ ಧರ್ಮದಿಂದ ನಿತ್ಯಮುಕ್ತನಾದ ಭಗವಂತನಿಂದ ಜೀವಾತ್ಮನು ಮುಕ್ತಪುಣ್ಯನಾಗುತ್ತಾನೆ.

ವಿಯೋಗಧರ್ಮಣಾ ಚೈವ ವಿಯೋಗಾತ್ಮಾ ಭವತ್ಯಪಿ ।
ವಿಮೋಕ್ಷಿಣಾ ವಿಮೋಕ್ಷಶ್ಚ ಸಮೇತ್ಯೇಹ ತಥಾ ಭವೇತ್ ॥೨೭॥

ಪಾಪವಿಯೋಗವೆಂಬ ಧರ್ಮವುಳ್ಳ ಭಗವಂತನ ಸಂಗದಿಂದ ಜೀವನು ಪಾಪ ವಿಯೋಗ ಸ್ವಭಾವದವನಾಗುತ್ತಾನೆ. 'ಪುಣ್ಯ-ಪಾಪೇ ವಿದೋಯ' ಎಂಬ ಶ್ರುತಿಯು ಈ ವಚನಕ್ಕೆ ಸಹಕಾರಿಯಾಗಿದೆ. ಜನನ-ಮರಣ-ದುಃಖಾದಿ ಸಾಂಸಾರಿಕ

ಧರ್ಮದಿಂದ ನಿತ್ಯಮುಕ್ತನಾಗಿರುವ ಪರಮಾತ್ಮನ ಸಂಗದಿಂದ ಜೀವಾತ್ಮನು ಸ್ವರೂಪ ಭೂತವಾದ ಸುಖ-ಜ್ಞಾನಾತ್ಮಕವಾದ ನಿರ್ಮಲ ದೇಹವನ್ನು ಹೊಂದುತ್ತಾನೆ.

ಶುಚಿಕರ್ಮಾ ಶುಚಿಶ್ಚೈವ ಭವತ್ಯಮಿತದೀಪ್ತಿಮಾನ್ ।
ವಿಮಲಾತ್ಮಾ ಚ ಭವತಿ ಸಮೇತ್ಯ ವಿಮಲಾತ್ಮನಾ ॥೨೮॥

ಶುಚಿಯಾದ ಭಗವಂತನ ಸಂಗದಿಂದ ನಿರ್ಮಲ ಕರ್ಮವುಳ್ಳವನಾಗುತ್ತಾನೆ. ವಿಮಲಾತ್ಮನಾದ ಭಗವಂತನ ಸಂಗದಿಂದ ಜೀವಾತ್ಮನೂ ವಿಮಲಾತ್ಮನಾಗುತ್ತಾನೆ. ಅಮಿತ ಕಾಂತಿಯುಳ್ಳವನಾಗುತ್ತಾನೆ.

ಕೇವಲಾತ್ಮಾ ತಥಾ ಚೈವ ಕೇವಲೇನ ಸಮೇತ್ಯ ವೈ ।
ಸ್ವತಂತ್ರಶ್ಚ ಸ್ವತಂತ್ರೇಣ ಸ್ವತಂತ್ರತ್ವಮವಾಪ್ನುತೇ ॥೨೯॥

ಜಡದ ಮೇಲನವನ್ನು ಹೊಂದದೆ ಸ್ವತಂತ್ರನಾಗಿರುವ ಕಾರಣದಿಂದ ಕೇವಲ ಎನಿಸಿದ ಪರಮಾತ್ಮನ ಸಂಗದಿಂದ ಜೀವನು ಜಡದ ಸಂಬಂಧವನ್ನು ತೊರೆದುಕೊಂಡು ತನಗಿಂತ ಅಧಮರಾದ ಜೀವರಿಗೆ ನಿಯಾಮಕತ್ವ ಎಂಬ ಸ್ವಾತಂತ್ರ್ಯವನ್ನು ಹೊಂದುತ್ತಾನೆ. ಹೀಗೆ ಪರತ್ವ, ಶುದ್ಧತ್ವ, ಮುಕ್ತತ್ವ, ವಿಯೋಗತ್ವ, ವಿಮೋಕ್ಷತ್ವ, ಶುಚಿತ್ವ, ವಿಮಲತ್ವ, ಕೇವಲತ್ವ, ಸ್ವಾತಂತ್ರ್ಯ ಎಂಬ ಒಂಬತ್ತು ಗುಣಗಳ ಜೊತೆಗೆ ಜೀವನು ಸಾದೃಶ್ಯವನ್ನು ಹೊಂದುತ್ತಾನೆ ಹೊರತು ಸರ್ವೋತ್ತಮತ್ವ, ಸರ್ವಕರ್ತೃತ್ವ, ಸರ್ವಜ್ಞತ್ವ, ಲಕ್ಷ್ಮೀನಾರಾಯಣತ್ವಾದಿ ಗುಣಗಳ ಜೊತೆಗೆ ಎಂದಿಗೂ ಸಾಮ್ಯವನ್ನಾಗಲಿ, ಸಾದೃಶ್ಯವನ್ನಾಗಲಿ ಜೀವನು ಹೊಂದಲು ಅರ್ಹನಾಗುವುದಿಲ್ಲ ಎಂದು ಅಭಿಪ್ರಾಯ.

ಏತಾವದೇತತ್ ಕಥಿತಂ ಮಯಾ ತೇ
ತಥ್ಯಂ ಮಹಾರಾಜ ಯಥಾರ್ಥತತ್ತ್ವಮ್ ।
ಅಮತ್ಸರತ್ವಂ ಪ್ರತಿಗೃಹ್ಯ ಚಾರ್ಥಂ
ಸನಾತನಂ ಬ್ರಹ್ಮ ವಿಶುದ್ಧಮಾದ್ಯಮ್ ॥೩೦॥

ಮಹಾರಾಜನೇ, ಈರ್ಷೆ-ಅಸೂಯೆಗಳಿಂದ ದೂರವಾದ ಭಾವವನ್ನು ಆಶ್ರಯಿಸಿ ನಿನಗೆ ಇದರಿಂದ ಪ್ರಯೋಜನವಾಗುತ್ತದೆಂದು ತಿಳಿದು ಸನಾತನನಾದ, ವಿಶುದ್ಧನಾದ ಬ್ರಹ್ಮತತ್ವದ ಬಗ್ಗೆ ಪ್ರೇಮಪೂರ್ವಕವಾಗಿ ಬೋಧಿಸಿರುತ್ತೇನೆ.

ನ ವೇದನಿಷ್ಠಸ್ಯ ಜನಸ್ಯ ರಾಜನ್
ಪ್ರದೇಯಮೇತತ್ ಪರಮಂ ತ್ವಯಾ ಭವೇತ್ ।
ವಿವಿತ್ಸಮಾನಾಯ ವಿಬೋಧಕಾರಕಂ
ಪ್ರಬೋಧಹೇತೋಃ ಪ್ರಣತಸ್ಯ ಶಾಸನಮ್ ॥೩೧॥

ಯಾವ ಮನುಷ್ಯನಿಗೆ ವೇದಗಳಲ್ಲಿ ಆಸಕ್ತಿ ಇಲ್ಲವೋ ಅಂತಹ ವ್ಯಕ್ತಿಗೆ ಈ ಶ್ರೇಷ್ಠವಾದ ಬ್ರಹ್ಮಜ್ಞಾನವನ್ನು ಉಪದೇಶಿಸಬಾರದು. ವಿಶೇಷವೆನಿಸಿದ ಈ ಬ್ರಹ್ಮಜ್ಞಾನದ ವಿಷಯವನ್ನು ಯಾರು ಹೆಚ್ಚು ತಿಳಿಯಬೇಕೆಂಬ ಆಸೆಯುಳ್ಳವ- ರಾಗಿರುತ್ತಾರೋ, ಜ್ಞಾನಕ್ಕಾಗಿ ಶರಣಾಗತರಾಗಿ ಬರುತ್ತಾರೋ ಅಂತಹವರಿಗೆ ಮಾತ್ರವೇ ಇದನ್ನು ಉಪದೇಶಿಸಬೇಕು.

ನ ದೇಯಮೇತಚ್ಚ ತಥಾನೃತಾತ್ಮನೇ
ಶಠಾಯ ಕ್ಲೀಬಾಯ ನ ಜಿಹ್ಮಬುದ್ಧಯೇ ।
ನ ಪಂಡಿತಜ್ಞಾನಪರೋಪತಾಪಿನೇ
ದೇಯಂ ತ್ವಯೇದಂ ವಿನಿಬೋಧ ಯಾದೃಶೇ ॥೩೨॥

ಸುಳ್ಳು ಹೇಳುವವನಿಗೆ, ಮೂರ್ಖನಿಗೆ, ನೀಚನಿಗೆ, ಕಪಟಿಗೆ, ತಾನೇ ಪಂಡಿತನೆಂದು ಭಾವಿಸುವವನಿಗೆ, ಪಾಂಡಿತ್ಯದ ಮೂಲಕ ಇನ್ನೊಬ್ಬರಿಗೆ ಪರಿತಾಪವನ್ನುಂಟು ಮಾಡುವವನಿಗೆ ಈ ವಿದ್ಯೆಯನ್ನು ಉಪದೇಶಿಸಲೇಬಾರದು. ಯಾರಿಗೆ ಉಪದೇಶಿಸಬೇಕೆಂದು ಹೇಳುತ್ತೇನೆ, ಕೇಳು.

ಶ್ರದ್ಧಾನ್ವಿತಾಯಾಥ ಗುಣಾನ್ವಿತಾಯ
ಪರಾಪವಾದಾದ್ ವಿರತಾಯ ನಿತ್ಯಮ್ ।
ವಿಶುದ್ಧಯೋಗಾಯ ಬುಧಾಯ ಚೈವ
ಕ್ರಿಯಾವತೇಽಥ ಕ್ಷಮಿಣೇ ಹಿತಾಯ ॥೩೩॥

ಶ್ರದ್ಧೆಯಿಂದ ಕೂಡಿದವನಿಗೆ, ಗುಣವಂತನಿಗೆ, ಪರನಿಂದನೆಯಿಂದ ದೂರನಾದವನಿಗೆ, ವಿಶುದ್ಧನಾದ ಯೋಗಿಗೆ, ವಿದ್ವಾಂಸನಿಗೆ, ಸತ್ಕರ್ಮಶೀಲನಿಗೆ, ಕ್ಷಮಾಶೀಲನಿಗೆ, ಸರ್ವರಿಗೂ ಹಿತವನ್ನು ಬಯಸುವವನಿಗೆ;

ವಿವಿಕ್ತಶೀಲಾಯ ವಿಧಿಪ್ರಿಯಾಯ
ವಿವಾದಹೀನಾಯ ಬಹುಶ್ರುತಾಯ ।
ವಿಜಾನತೇ ಚೈವ ನ ಚಾಹಿತಕ್ಷಮೇ
ದಮೇ ಚ ಶಕ್ತಾಯ ಶಮೇ ಚ ದೇಹಿನಾಮ್ ॥೩೪॥

ಏಕಾಂತಸ್ಥಳವನ್ನು ಅಪೇಕ್ಷಿಸುವವನಿಗೆ, ಶಾಸ್ತ್ರವಿಧಿಗಳನ್ನು ಆದರಿಸುವವನಿಗೆ, ವಿವಾದಗಳಲ್ಲಿ ತೊಡಗಿಸಿಕೊಳ್ಳದವನಿಗೆ, ಅನೇಕ ಶಾಸ್ತ್ರಗಳನ್ನು ತಿಳಿದವನಿಗೆ, ತಿಳಿವಳಿಕೆ ಉಳ್ಳವನಿಗೆ, ಯಾರಿಗೂ ಅಹಿತವನ್ನು ಮಾಡದಿರುವವನಿಗೆ, ಇಂದ್ರಿಯಗಳನ್ನು ಸ್ವಾಧೀನ ಪಡಿಸಿಕೊಂಡವನಿಗೆ, ಮನಸ್ಸನ್ನು ನಿಗ್ರಹಿಸಲು ಸಮರ್ಥನಾದವನಿಗೆ ಈ ಬ್ರಹ್ಮವಿದ್ಯೆಯನ್ನು ಉಪದೇಶಿಸಬೇಕು.

ಏತೈರ್ಗುಣೈರ್ಹೀನತಮೇ ನ ದೇಯಮೇತತ್
ಪರಂ ಬ್ರಹ್ಮ ವಿಶುದ್ಧಮಾಹುಃ ।
ನ ಶ್ರೇಯಸಾ ಯೋಕ್ಷ್ಯತಿ ತಾದೃಶೇ
ಕೃತಂ ಧರ್ಮಪ್ರವಕ್ತಾರಮಪಾತ್ರದಾನಾತ್ ॥೩೫॥

ಯಾವನು ಈ ಗುಣಗಳಿಂದ ಹೀನನಾಗಿರುತ್ತಾನೋ ಅವನಿಗೆ ಇದನ್ನು ಉಪದೇಶಿಸಬಾರದು. ಬ್ರಹ್ಮಜ್ಞಾನವನ್ನು ವಿಶುದ್ಧಜ್ಞಾನ ಎನ್ನುತ್ತಾರೆ. ಗುಣಹೀನರಿಗೆ ಉಪದೇಶಿಸಿದರೆ ಮಂಗಳವಾಗುವುದಿಲ್ಲ. ಅಪಾತ್ರರಿಗೆ ಬ್ರಹ್ಮವಿದ್ಯೆಯನ್ನು ದಾನ ಮಾಡುವುದರಿಂದ ಧರ್ಮೋಪದೇಶಕರಿಗೂ ಶ್ರೇಯಸ್ಸಾಗದು.

ಪೃಥ್ವೀಮಿಮಾಂ ಯದ್ಯಪಿ ರತ್ನಪೂರ್ಣಾಂ
ದದ್ಯಾನ್ನದೇಯಂ ತ್ವಿದಮವ್ರತಾಯ ।
ಜಿತೇಂದ್ರಿಯಾಯೈತದಸಂಶಯಂ ತೇ
ಭವೇತ್ ಪ್ರದೇಯಂ ಪರಮಂ ನರೇಂದ್ರ ॥೩೬॥

ಯಾವನು ವ್ರತ-ನಿಯಮಗಳನ್ನು ಅನುಷ್ಠಾನ ಮಾಡದೆ ರತ್ನಪೂರ್ವಕವಾದ ಭೂಮಂಡಲವನ್ನೇ ದಾನ ಮಾಡಲು ಬಂದರೂ ಅವನಿಗೆ ಈ ವಿದ್ಯೆಯನ್ನು ಉಪದೇಶಿಸಬಾರದು. ಜಿತೇಂದ್ರಿಯನಾದವನಿಗೆ ಈ ವಿದ್ಯೆಯನ್ನು ಉಪದೇಶಿಸಬೇಕು. ಈ ವಿಷಯದಲ್ಲಿ ನಿನಗೆ ಸಂಶಯವು ಬೇಡ.

ಕರಾಲ ಮಾ ತೇ ಭಯಮಸ್ತು ಕಿಂ ಚಿ-
ದೇತಚ್ಛ್ರುತಂ ಬ್ರಹ್ಮ ಪರಂ ತ್ವಯಾದ್ಯ ।
ಯಥಾವದುಕ್ತಂ ಪರಮಂ ಪವಿತ್ರಂ
ನಿಃಶೋಕಮತ್ಯಂತಮನಾದಿಮಧ್ಯಮ್ ॥೩೭॥

ಕರಾಲಜನಕನೇ, ನೀನು ನನ್ನಿಂದ ಪರಬ್ರಹ್ಮನಿಗೆ ಸಂಬಂಧಿಸಿದ ತತ್ತ್ವಜ್ಞಾನವನ್ನು ಹೊಂದಿರುವೆ. ಇದರಿಂದ ನಿನ್ನ ಮನದ ದುಗುಡವೆಲ್ಲವೂ ದೂರವಾಗಲಿ. ನಾನು ಹೇಳಿದಂತೆ ಪರಬ್ರಹ್ಮವಸ್ತುವು ಪರಮ ಪವಿತ್ರವಾದುದು, ಶೋಕರಹಿತವಾದುದು, ಆದಿ-ಮಧ್ಯಾಂತ ಶೂನ್ಯವಾದುದು.

ಅಗಾಧಜನ್ಮಾಮರಣಂ ಚ ರಾಜನ್
ನಿರಾಮಯಂ ವೀತಭಯಂ ಶಿವಂ ಚ ।
ಸಮೀಕ್ಷ್ಯ ಮೋಹಂ ತ್ಯಜ ಚಾದ್ಯ ಸರ್ವಂ
ಜ್ಞಾನಸ್ಯ ತತ್ತ್ವಾರ್ಥಮಿದಂ ವಿದಿತ್ವಾ ॥೩೮॥

ಅಗಾಧವೆನಿಸಿದ ಜನ್ಮ-ಮರಣಗಳಿಂದ ದೂರವಾದುದು, ರೋಗಗಳಿಂದ ರಹಿತವಾದುದು, ಭಯರಹಿತವಾದುದು, ಕಲ್ಯಾಣಪ್ರದವಾದುದು. ಇಂತಹ ಪರಬ್ರಹ್ಮವಸ್ತುವನ್ನು ಹೃದಯದಲ್ಲಿ ಧರಿಸಿ, ಯಥಾರ್ಥವಾಗಿ ತಿಳಿದುಕೊಂಡು ಮೋಹವನ್ನು ತ್ಯಜಿಸು.

ಅವಾಪ್ತಮೇತದ್ಧಿ ಪುರಾ ಸನಾತನಾದ್
ಹಿರಣ್ಯಗರ್ಭಾದ್ ಗದತೋ ನರಾಧಿಪ ।
ಪ್ರಸಾದ್ಯ ಯತ್ನೇನ ತಮುಗ್ರತೇಜಸಂ
ಸನಾತನಂ ಬ್ರಹ್ಮ ಯಥಾದ್ಯ ವೈ ತ್ವಯಾ ॥೩೯॥

ನರಾಧಿಪನೇ, ಯಾವ ರೀತಿ ನೀನು ನನ್ನಿಂದ ಈ ಸನಾತನ ಬ್ರಹ್ಮನ ಜ್ಞಾನವನ್ನು ಪಡೆದುಕೊಂಡೆಯೋ ಈ ರೀತಿ ನಾನು ಮಹಾತೇಜಸ್ವಿಯಾದ ಚತುರ್ಮುಖ ಬ್ರಹ್ಮನನ್ನು ಪ್ರಯತ್ನದಿಂದ ಪ್ರಸನ್ನಗೊಳಿಸಿ ಈ ಬ್ರಹ್ಮಜ್ಞಾನವನ್ನು ಪಡೆದುಕೊಂಡಿರುತ್ತೇನೆ.

ಪೃಷ್ಟಸ್ತ್ವಯಾ ಚಾಸ್ಮಿ ಯಥಾ ನರೇಂದ್ರ
ತಥಾ ಮಯೇದಂ ತ್ವಯಿ ಚೋಕ್ತಮದ್ಯ ।

ತಥಾವಾಪ್ತಂ ಬ್ರಹ್ಮಣೋ ಮೇ ನರೇಂದ್ರ
ಮಹಜ್ಜ್ಞಾನಂ ಮೋಕ್ಷವಿದಾಂ ಪುರಾಣಮ್ ॥೪೦॥

ನೀನು ಸಾಂಖ್ಯಯೋಗಗಳ ವಿಷಯವಾಗಿ ಪ್ರಶ್ನಿಸಿದಂತೆ ನಾನೂ ಚತುರ್ಮುಖ ಬ್ರಹ್ಮನನ್ನು ಪ್ರಶ್ನಿಸಿದೆನು. ನಾನು ನಿನಗೆ ಜ್ಞಾನೋಪದೇಶವನ್ನು ಮಾಡಿದಂತೆ ಹಿರಣ್ಯಗರ್ಭನು ನನಗೆ, ಮೋಕ್ಷಜ್ಞಾನಿಗಳಿಗೆ ಆಶ್ರಯವಾದ ಈ ಸಾಂಖ್ಯಜ್ಞಾನವನ್ನು ಉಪದೇಶಿಸಿದನು. ಅವನಿಂದ ಈ ಯಥಾರ್ಥ ಜ್ಞಾನವನ್ನು ಪಡೆದುಕೊಂಡಿರುತ್ತೇನೆ.

ಭೀಷ್ಮಃ

ಏತದುಕ್ತಂ ಪರಂ ಬ್ರಹ್ಮ ಯಸ್ಮಾನ್ನಾವರ್ತತೇ ಪುನಃ ।
ಪಂಚವಿಂಶೋ ಮಹಾರಾಜ ಪರಮರ್ಷಿನಿದರ್ಶನಾತ್ ॥೪೧॥

ಭೀಷ್ಮ– ಯುಧಿಷ್ಠಿರನೇ, ಮಹರ್ಷಿಗಳಾದ ವಸಿಷ್ಠರು ಕರಾಲಜನಕನಿಗೆ ಉಪದೇಶಿಸಿದಂತೆ ಇಪ್ಪತ್ತೈದನೆಯ ತತ್ತ್ವವೆನಿಸಿದ ಬ್ರಹ್ಮತತ್ತ್ವವನ್ನು ನಿನಗೆ ಬೋಧಿಸಿದ್ದೇನೆ.

ಪುನರಾವೃತ್ತಿಮಾಪ್ನೋತಿ ಪರಂ ಜ್ಞಾನಮವಾಪ್ಯ ಚ ।
ನಾವಬುದ್ಧ್ಯತಿ ತತ್ತ್ವೇನ ಬುದ್ಧ್ಯಮಾನೋऽಜರಾಮರಃ ॥೪೨॥

ಈ ಪರಬ್ರಹ್ಮನ ಜ್ಞಾನವನ್ನು ಹೊಂದಿದವನು ಸಂಸಾರಕ್ಕೆ ಮರಳಿ ಬರುವುದಿಲ್ಲ. ಇಂತಹ ಪರಬ್ರಹ್ಮನ ಜ್ಞಾನವನ್ನು ಜ್ಞಾನಿಗಳು ಉಪದೇಶಿಸಿದಾಗಲೂ ಯಾವನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲವೋ ಅವನು ಈ ಸಂಸಾರವನ್ನು ಕುರಿತು ಪುನಃ ಪುನಃ ಆಗಮಿಸುತ್ತಾನೆ.

ಏತನ್ನಿಃಶ್ರೇಯಸಕರಂ ಜ್ಞಾನಾನಾಂ ತೇ ಪರಂ ಮಯಾ ।
ಕಥಿತಂ ತತ್ತ್ವತಸ್ತಾತ ಶ್ರುತ್ವಾ ದೇವರ್ಷಿತೋ ನೃಪ ॥೪೩॥

ಯಾವಾತನು ಗುರುವಿನಿಂದ ಈ ಮಹಾಜ್ಞಾನವನ್ನು ಪಡೆದು, ಭಗವತ್ಸಾಕ್ಷಾತ್ಕಾರವನ್ನು ಮಾಡಿಕೊಳ್ಳುತ್ತಾನೋ ಅವನು ಹುಟ್ಟು-ಸಾವುಗಳಿಂದ ಮುಕ್ತನಾಗುತ್ತಾನೆ. ಹೀಗೆ ಪರಮಶ್ರೇಯಸ್ಕರವಾದ ಬ್ರಹ್ಮಜ್ಞಾನವನ್ನು ನಾರದರಿಂದ ನಾನು ತಿಳಿದಿರುತ್ತೇನೆ. ನಾನು ತಿಳಿದಿರುವುದನ್ನೇ ನಿನಗೆ ಯಥಾವತ್ತಾಗಿ ಹೇಳಿದ್ದೇನೆ.

ಹಿರಣ್ಯಗರ್ಭಾದೃಷಿಣಾ ವಸಿಷ್ಠೇನ ಮಹಾತ್ಮನಾ ।
ವಸಿಷ್ಠಾದೃಷಿಶಾರ್ದೂಲಾನ್ನಾರದೋಽವಾಪ್ತವಾನಿದಮ್ ॥೪೪॥

ನಾರದಾದ್ ವಿದಿತಂ ಮಹ್ಯಮೇತದ್ ಬ್ರಹ್ಮ ಸನಾತನಮ್ ।
ಮಾ ಶುಚಃ ಕೌರವೇಂದ್ರ ತ್ವಂ ಶ್ರುತ್ವೈತತ್ ಪರಮಂ ಪದಮ್ ॥೪೫॥

ಮಹಾತ್ಮರಾದ ವಸಿಷ್ಠರು ಹಿರಣ್ಯಗರ್ಭನಿಂದ ಈ ಜ್ಞಾನವನ್ನು ಪಡೆದುಕೊಂಡರು. ಮಹರ್ಷಿಗಳಾದ ವಸಿಷ್ಠರಿಂದ ನಾರದರು ಪಡೆದುಕೊಂಡರು. ನಾರದರಿಂದ ಸನಾತನ ಬ್ರಹ್ಮಜ್ಞಾನವು ನನಗೆ ದೊರೆಯಿತು. ಈ ಬ್ರಹ್ಮಜ್ಞಾನವನ್ನು ಕೇಳಿದ ಬಳಿಕವೂ ನೀನು ದುಃಖಿಸಲು ಅವಕಾಶವಿರುವುದಿಲ್ಲ. ಪರಮಪದವನ್ನು ಸಾಧಿಸಿಕೊಡುವ ಸಾಮರ್ಥ್ಯವು ಈ ಬ್ರಹ್ಮಜ್ಞಾನಕ್ಕೆ ಇರುತ್ತದೆ.

ಯೇನ ಕ್ಷರಾಕ್ಷರೇ ವಿತ್ತೇ ನ ಭಯಂ ತಸ್ಯ ವಿದ್ಯತೇ ।
ವಿದ್ಯತೇ ತು ಭಯಂ ತಸ್ಯ ಯೋ ನೈತದ್ ವೇತ್ತಿ ಪಾರ್ಥಿವ ॥೪೬॥

ಕ್ಷರ ಮತ್ತು ಅಕ್ಷರಗಳ ತತ್ತ್ವವನ್ನು ಯಾವನು ತಿಳಿದಿರುತ್ತಾನೋ ಅವನಿಗೆ ಭಯವೆಂಬುದು ಇರುವುದಿಲ್ಲ. ಯಾವನು ಈ ತತ್ತ್ವಗಳನ್ನು ತಿಳಿದಿಲ್ಲವೋ ಅವನಿಗೆ ಭಯವು ತಪ್ಪಿದ್ದಲ್ಲ.

ಅವಿಜ್ಞಾನಾಚ್ಚ ಮೂಢಾತ್ಮಾ ಪುನಃ ಪುನರುಪದ್ರವನ್ ।
ಪ್ರೇತ್ಯ ಜಾತಿಸಹಸ್ರಾಣಿ ಮರಣಾಂತಾನ್ಯುಪಾಶ್ನುತೇ ॥೪೭॥

ಇಂತಹ ಶ್ರೇಷ್ಠವಾದ ತತ್ತ್ವವನ್ನು ಮೂಢಾತ್ಮನು ತಿಳಿಯದೆ ಪುನಃ ಪುನಃ ಈ ಸಂಸಾರದ ಉಪದ್ರವಗಳಲ್ಲಿ ಸಿಕ್ಕುತ್ತಲೇ ಇರುತ್ತಾನೆ. ಮರಣಕ್ಕೆ ಕಾರಣವಾದ ಸಾವಿರಾರು ಜನ್ಮಗಳನ್ನು ಪಡೆಯುತ್ತಾ ಕಷ್ಟಗಳನ್ನು ಅನುಭವಿಸುತ್ತಿರುತ್ತಾನೆ.

ದೇವಲೋಕಂ ತಥಾ ತಿರ್ಯಙ್ಮಾನುಷ್ಯಮಪಿ ಚಾಶ್ನುತೇ ।
ಯದಿ ಶುದ್ಧ್ಯತಿ ಕಾಲೇನ ತಸ್ಮಾದಜ್ಞಾನಸಾಗರಾತ್ ॥೪೮॥

ದೇವಯೋನಿಗಳಲ್ಲಿ, ತಿರ್ಯಗ್ಯೋನಿಗಳಲ್ಲಿ, ಮನುಷ್ಯಯೋನಿಗಳಲ್ಲಿ ಪುನಃ ಪುನಃ ಹುಟ್ಟುತ್ತಲೇ ಇರುತ್ತಾನೆ. ಕಾಲಿಕವಾಗಿ ಈ ಪರಮಾತ್ಮನ ಜ್ಞಾನದಿಂದ ಶುದ್ಧನಾದರೆ ಅಜ್ಞಾನವೆಂಬ ಸಂಸಾರ ಸಾಗರದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಅಜ್ಞಾನಸಾಗರೋ ಘೋರೋ ಹ್ಯವ್ಯಕ್ತೋಽಗಾಧ ಉಚ್ಯತೇ ।
ಅಹನ್ಯಹನಿ ಮಜ್ಜಂತಿ ಯತ್ರ ಭೂತಾನಿ ಭಾರತ ॥೪೯॥

ಅಜ್ಞಾನವೆಂಬ ಸಾಗರವು ಘೋರವೂ, ಅವ್ಯಕ್ತವೂ, ಅಗಾಧವೂ ಆಗಿದೆ. ಈ ಅಜ್ಞಾನ ಸಾಗರದಲ್ಲಿ ಪ್ರತಿದಿನವೂ ಪ್ರಾಣಿಗಳು ಮುಳುಗುತ್ತಲೇ ಇವೆ.

ಯಸ್ಮಾದಗಾಧಾದವ್ಯಕ್ತಾದುತ್ತೀರ್ಣಸ್ತ್ವಂ ಸನಾತನಾತ್ ।
ತಸ್ಮಾತ್ತ್ವಂ ವಿರಜಾಶ್ಚೈವ ವಿತಮಸ್ಕಶ್ಚ ಪಾರ್ಥಿವ ॥೫೦॥

ಸನಾತನವಾದ, ಅಗಾಧವಾದ, ಅವ್ಯಕ್ತವಾದ ಅಜ್ಞಾನ ಸಾಗರದಿಂದ ನೀನು ಉತ್ತೀರ್ಣನಾಗಿರುವಿ. ಆದ್ದರಿಂದಲೇ ರಜೋಗುಣ, ತಮೋಗುಣಗಳಿಂದ ರಹಿತನೂ ಆಗಿರುವಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂದನೆಯ ಅಧ್ಯಾಯ

ಜನಕ ವಂಶೀಯನಾದ ವಸುಮಂತನಿಗೆ ಭಾರ್ಗವಮುನಿ ಮಾಡಿದ ಧರ್ಮೋಪದೇಶ.

ಭೀಷ್ಮಃ

ಮೃಗಯಾಂ ವಿಚರನ್ ಕಶ್ಚಿದ್ ವಿಜನೇ ಜನಕಾತ್ಮಜಃ ।
ವನೇ ದದರ್ಶ ವಿಪ್ರೇಂದ್ರಮೃಷಿಂ ವಂಶಧರಂ ಭೃಗೋಃ ॥೧॥

ಭೀಷ್ಮ– ಯುಧಿಷ್ಠಿರನೇ, ಹಿಂದೊಂದು ಬಾರಿ ಜನಕ ವಂಶೀಯನಾದ ಒಬ್ಬ ರಾಜಕುಮಾರನು ಬೇಟೆಗಾಗಿ ನಿರ್ಜನವಾದ ಅರಣ್ಯದಲ್ಲಿ ಸಂಚರಿಸುತ್ತಾ ಭೃಗು ವಂಶೋತ್ಪನ್ನನಾದ ಒಬ್ಬ ಶ್ರೇಷ್ಠ ಬ್ರಾಹ್ಮಣನನ್ನು ನೋಡಿದನು.

ತಮಾಸೀನಮುಪಾಸೀನಃ ಪ್ರಣಮ್ಯ ಶಿರಸಾ ಮುನಿಮ್ ।
ಪಶ್ಚಾದನುಮತಸ್ತೇನ ಪಪ್ರಚ್ಛ ವಸುಮಾನಿದಮ್ ॥೨॥

ಋಷಿಯ ಬಳಿ ಸಾಗಿದ ವಸುಮಂತನು ಆಸನದಲ್ಲಿ ಕುಳಿತಿರುವ ಮುನಿಗೆ ಶಿರಬಾಗಿ ನಮಸ್ಕರಿಸಿ ಅವನ ಅನುಮತಿಯನ್ನು ಪಡೆದು ಹೀಗೆ ಪ್ರಶ್ನಿಸಿದನು.

ಭಗವನ್ ಕಿಮಿದಂ ಶ್ರೇಯಃ ಪ್ರೇತ್ಯ ವಾಪೀಹ ವಾ ಭವೇತ್ ।
ಪುರುಷಸ್ಯಾಧ್ರುವೇ ದೇಹೇ ಕಾಮಸ್ಯ ವಶವರ್ತಿನಃ ॥೩॥

ಪೂಜ್ಯರೇ, ಕ್ಷಣಿಕವಾದ ಈ ಶರೀರದಲ್ಲಿ ಕಾಮವಶನಾದ ಈ ಮನುಷ್ಯನಿಗೆ ಇಹ-ಪರಲೋಕಗಳಲ್ಲಿ ಯಾವುದರಿಂದ ಶ್ರೇಯಸ್ಸಾಗುತ್ತದೆ?

ಸತೃತ್ಯ ಪರಿಪೃಷ್ಟಃ ಸನ್ ಸುಮಹಾತ್ಮಾ ಮಹಾತಪಾಃ ।
ನಿಜಗಾದ ತತಸ್ತಸ್ಮೈ ಶ್ರೇಯಸ್ಕರಮಿದಂ ವಚಃ ॥೪॥

ವಸುಮಂತನು ಮುನಿಯನ್ನು ಸತ್ಕರಿಸಿ ಹೀಗೆ ಪ್ರಶ್ನಿಸಿದ ಬಳಿಕ ಸಂತುಷ್ಟನಾದ, ತಪಸ್ವಿಯಾದ, ಮಹಾತ್ಮನಾದ, ಆ ಮುನಿಯು ವಸುಮಂತನಿಗೆ ಶ್ರೇಯಸ್ಕರವಾದ ಈ ಮಾತುಗಳನ್ನು ಆಡಿದನು.

ಮನಸೋಽಪ್ರತಿಕೂಲಾನಿ ಪ್ರೇತ್ಯ ಚೇಹ ಚ ವಾಂಛಸಿ ।
ಭೂತಾನಾಂ ಪ್ರತಿಕೂಲೇಭ್ಯೋ ನಿವರ್ತಸ್ವ ಯತೇಂದ್ರಿಯಃ ॥೫॥

ರಾಜನೇ, ನೀನು ಇಹ-ಪರಲೋಕಗಳಲ್ಲಿ ನಿನ್ನ ಮನೋಭಿಲಾಷೆಗೆ ತಕ್ಕಂತೆ ಪದಾರ್ಥಗಳನ್ನು ಪಡೆಯುವ ಆಸೆಯುಳ್ಳವನಾಗಿದ್ದಲ್ಲಿ ಇಂದ್ರಿಯಗಳನ್ನು ನಿಯಂತ್ರಿಸಿಕೊಂಡು, ಪ್ರಾಣಿಗಳಿಗೆ ಪ್ರತಿಕೂಲವಾಗುವ ಕರ್ಮಗಳಿಂದ ನಿವೃತ್ತನಾಗು.

ಧರ್ಮಃ ಸತಾಂ ಹಿತಃ ಪುಂಸಾಂ ಧರ್ಮಶ್ಚೈವಾಶ್ರಯಃ ಸತಾಮ್ ।
ಧರ್ಮಾಲ್ಲೋಕಾಸ್ತ್ರಯಸ್ತಾತ ಪ್ರವೃತ್ತಾಃ ಸಚರಾಚರಾಃ ॥೬॥

ಸತ್ಪುರುಷರಿಗೆ ಹಿತವನ್ನುಂಟು ಮಾಡುವುದು ಧರ್ಮವೇ ಆಗಿದೆ. ಧರ್ಮವೇ ಸಜ್ಜನರಿಗೆ ಆಶ್ರಯವು. ಚರಾಚರ ಪ್ರಾಣಿಗಳಿಂದ ಕೂಡಿದ ಸಮಸ್ತ ಜಗತ್ತು ಧರ್ಮದಿಂದಲೇ ನಡೆಯುತ್ತಿದೆ.

ಸ್ವಾದುಕಾಮುಕ ಕಾಮಾನಾಂ ವೈತೃಷ್ಣ್ಯಂ ಕಿಂ ನ ಗಚ್ಛಸಿ ।
ಮಧು ಪಶ್ಯಸಿ ದುರ್ಬುದ್ಧೇ ಪ್ರಪಾತಂ ನಾನುಪಶ್ಯಸಿ ॥೭॥

ರುಚಿಕರ ವಾದ ಭೋಗಗಳನ್ನು ಬಯಸುವವನೇ, ದುರ್ಬುದ್ಧಿಯುಳ್ಳವನೇ, ನಿನ್ನ ಕಾಮ ಪಿಪಾಸೆಯು ಇನ್ನೂ ಏಕೆ ಶಾಂತವಾಗಿಲ್ಲ? ನೀನು ವೃಕ್ಷದ ಮೇಲಿರುವ ಜೇನಿನ ತುಪ್ಪವನ್ನು ಮಾತ್ರವೇ ನೋಡುತ್ತಿರುವೆ. ಕೆಳಗಿರುವ ಪ್ರಪಾತವನ್ನು ನೋಡುತ್ತಿಲ್ಲ.

ಯಥಾ ಜ್ಞಾನೇ ಪರಿಚಯಃ ಕರ್ತವ್ಯಸ್ತತ್ಫಲಾರ್ಥಿನಾ ।
ತಥಾ ಧರ್ಮೇ ಪರಿಚಯಃ ಕರ್ತವ್ಯಸ್ತತ್ಫಲಾರ್ಥಿನಾ ॥೮॥

ಜ್ಞಾನದ ಫಲವನ್ನು ಬಯಸುವವನಿಗೆ ಜ್ಞಾನದ ಪರಿಚಯವು ಆವಶ್ಯಕ. ಇದರಂತೆ ಧರ್ಮದ ಫಲವನ್ನು ಬಯಸುವವನಿಗೆ ಧರ್ಮದ ಪರಿಚಯವು ಕರ್ತವ್ಯವೆನಿಸಿದೆ.

ಅಸತಾ ಧರ್ಮಕಾಮೇನ ವಿಶುದ್ಧಂ ಕರ್ಮ ದುಷ್ಕರಮ್ ।
ಸತಾ ತು ಧರ್ಮಕಾಮೇನ ಸುಕರಂ ಕರ್ಮ ದುಷ್ಕರಮ್ ॥೯॥

ದುಷ್ಟನು ಧರ್ಮಾಪೇಕ್ಷೆಯುಳ್ಳವನಾಗಿದ್ದರೂ ವಿಶುದ್ಧವಾದ ಕರ್ಮಾಚರಣೆಯು ಅವನಿಂದ ಮಾಡಲಾಗದು. ಧರ್ಮವನ್ನು ಬಯಸುವ ಸಜ್ಜನನು ಕಠಿಣವಾದ ಸತ್ಕರ್ಮಗಳನ್ನು ಸುಲಭವಾಗಿಯೇ ಆಚರಿಸುತ್ತಾನೆ.

ವನೇ ಗ್ರಾಮ್ಯಸುಖಾಚಾರೋ ಯಥಾ ಗ್ರಾಮ್ಯಸ್ತಥೈವ ಸಃ ।
ಗ್ರಾಮೇ ವನಸುಖಾಚಾರೋ ಯಥಾ ವನಚರಸ್ತಥಾ ॥೧೦॥

ಅರಣ್ಯದಲ್ಲಿದ್ದರೂ ಗ್ರಾಮ್ಯಸುಖಗಳನ್ನು ಉಪಭೋಗಿಸಬೇಕೆಂಬ ಬಯಕೆಯುಳ್ಳವನಾಗಿದ್ದರೆ ಅವನು ಗ್ರಾಮವಾಸಿಯೇ ಸರಿ. ಗ್ರಾಮವಾಸಿಯಾಗಿದ್ದರೂ ವನವಾಸಿಗಳಂತೆ ಆಚರಣಶೀಲನಾಗಿದ್ದಲ್ಲಿ ಅವನು ವನವಾಸಿಯೇ ಸರಿ.

ಮನೋವಾಕ್ಕರ್ಮಕೇ ಧರ್ಮೇ ಕುರು ಶ್ರದ್ಧಾಂ ಸಮಾಹಿತಃ ।
ನಿವೃತ್ತೌ ವಾ ಪ್ರವತ್ತೌ ವಾ ಸಂಪ್ರಧಾರ್ಯ ಗುಣಾಗುಣಾನ್ ॥೧೧॥

ನೀನು ಏಕಾಗ್ರತೆಯಿಂದ ಮನಸ್ಸು, ಮಾತು, ಕೃತಿಗಳ ಮೂಲಕ ಧರ್ಮದಲ್ಲಿ ಶ್ರದ್ಧೆಯನ್ನು ಇಡು. ಪ್ರವೃತ್ತಿ-ನಿವೃತ್ತಿ ಕರ್ಮಗಳಲ್ಲಿರುವ ಗುಣ-ದೋಷಗಳನ್ನು ಚೆನ್ನಾಗಿ ಪರಿಶೀಲಿಸು.

ನಿತ್ಯಂ ಚ ಬಹು ದಾತವ್ಯಂ ಸಾಧುಭ್ಯಶ್ಚಾನಸೂಯತಾ ।
ಪ್ರಾರ್ಥಿತಂ ವ್ರತಶೌಚಾಭ್ಯಾಂ ಸತತಂ ದೇಶಕಾಲಯೋಃ ॥೧೨॥

ಪ್ರತಿದಿನವೂ ವ್ರತ-ಶೌಚಾಚಾರಗಳನ್ನು ಪರಿಪಾಲಿಸುತ್ತಾ, ಉತ್ತಮವಾದ ದೇಶ-ಕಾಲಗಳಲ್ಲಿ ಸಜ್ಜನರು ಬಯಸಿದ ಬಯಕೆಗಳನ್ನು ಅಸೂಯಾರಹಿತನಾಗಿ ನೀಡುತ್ತಿರಬೇಕು.

ಶುಭೇನ ವಿಧಿನಾ ಲಬ್ಧಮರ್ಹಾಯ ಪ್ರತಿಪಾದಯೇತ್ ।
ಕ್ರೋಧಮುತ್ಸೃಜ್ಯ ದತ್ತ್ವಾ ಚ ನಾನುತಪ್ಯೇನ್ನ ಕೀರ್ತಯೇತ್ ॥೧೩॥

ಸತ್ಕರ್ಮದಿಂದ ಲಭಿಸಿದ ಧನವನ್ನು ಸತ್ಪಾತ್ರರಿಗೆ ದಾನ ಮಾಡಬೇಕು. ಕ್ರೋಧವನ್ನು ತ್ಯಜಿಸಿ ದಾನ ಮಾಡಬೇಕು. ದಾನಮಾಡಿದ ಬಳಿಕ ಪಶ್ಚಾತ್ತಾಪ ಪಡಬಾರದು. ದಾನ ಮಾಡಿದ್ದನ್ನೂ ಹೇಳಿಕೊಳ್ಳಲೂ ಬಾರದು.

ಅನೃಶಂಸಃ ಶುಚಿರ್ದಾಂತಃ ಸತ್ಯವಾಗಾರ್ಜವೇ ಸ್ಥಿತಃ ।
ಯೋನಿಕರ್ಮವಿಶುದ್ಧಶ್ಚ ಪಾತ್ರಂ ಸ್ಯಾದ್ ವೇದವಿದ್ ದ್ವಿಜಃ ॥೧೪॥

ದಯಾಳುವೂ, ಪವಿತ್ರನೂ, ಜಿತೇಂದ್ರಿಯನೂ, ಸತ್ಯನಿಷ್ಠನೂ, ಸರಳನೂ, ಜನ್ಮದಿಂದ, ಕರ್ಮದಿಂದ ಪರಿಶುದ್ಧನಾದವನೂ, ವೇದಜ್ಞನೂ ಆದ ಬ್ರಾಹ್ಮಣನು ದಾನಕ್ಕೆ ಯೋಗ್ಯನಾಗಿರುತ್ತಾನೆ.

ಸತೃತಾ ಚೈಕಪತ್ನೀ ಚ ಜಾತ್ಯಾ ಯೋನಿರಿಹೇಷ್ಯತೇ ।
ಋಗ್ಯಜುಃಸಾಮಗೋ ವಿದ್ವಾನ್ ಷಟ್ಕರ್ಮಾ ಪಾತ್ರಮುಚ್ಯತೇ ॥೧೫॥

ಸತ್ಪುರುಷರಿಂದ ಸತ್ಕೃತಳಾದ, ಏಕಪತ್ನಿಯಾದ ಪತಿವ್ರತೆಯಾದ ಸ್ತ್ರೀಯು ಪುತ್ರೋತ್ಪತ್ತಿಗೆ ಒಳ್ಳೆಯ ಸ್ಥಾನಳು ಎಂದು ಹೇಳುತ್ತಾರೆ. ಅಂಥವಳಿಂದ ಜನ್ಮವನ್ನು ಪಡೆದವಳು ಶುದ್ಧಿಯನ್ನು ಹೊಂದಿರುತ್ತಾನೆ. ಋಗ್ವೇದ, ಯಜುರ್ವೇದ, ಸಾಮವೇದಗಳಲ್ಲಿ ಮತ್ತು ಬ್ರಾಹ್ಮಣರಿಗೆ ವಿಹಿತವಾದ ಷಟ್ಕರ್ಮಗಳಲ್ಲಿ ನಿರತನಾದ ಬ್ರಾಹ್ಮಣನು ದಾನಕ್ಕೆ ಅರ್ಹನೆಂದು ಶಾಸ್ತ್ರಸಾರಿದೆ.

ಸ ಏವ ಧರ್ಮಃ ಸೋಽಧರ್ಮಸ್ತಂ ತಂ ಪ್ರತಿನರಂ ಭವೇತ್ ।
ಪಾತ್ರಕರ್ಮವಿಶೇಷೇಣ ದೇಶಕಾಲಾವವೇಕ್ಷ್ಯ ಚ ॥೧೬॥

ದೇಶ-ಕಾಲ-ಪಾತ್ರ-ಕರ್ಮವಿಶೇಷ ಇವುಗಳನ್ನು ವಿಚಾರ ಮಾಡಿದಾಗ ಒಂದೇ ಧರ್ಮವೇ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಧರ್ಮವೂ ಆಗುತ್ತದೆ, ಅಧರ್ಮವೂ

ಆಗುತ್ತದೆ. ಯೋಗ್ಯನಲ್ಲಿ ಮಾಡಿದಾಗ ಧರ್ಮವೂ, ಅಯೋಗ್ಯನಲ್ಲಿ ಆಚರಿಸಿದಾಗ ಅಧರ್ಮವೂ ಆಗುತ್ತದೆ.

ಲೀಲಯಾಲ್ಪಂ ಯಥಾ ಗಾತ್ರಾತ್ ಪ್ರಮಜ್ಯಾದ್ ರಜಸಃ ಪುಮಾನ್ ।
ಬಹುಯತ್ನೇನ ಮಹತಾ ಪಾಪನಿರ್ಹರಣಂ ತಥಾ ॥೧೭॥

ಮನುಷ್ಯನು ಮೈಮೇಲೆ ಕುಳಿತಿರುವ ಧೂಳನ್ನು ಅನಾಯಾಸದಿಂದ ಕೊಡವಿಕೊಳ್ಳುತ್ತಾನೆ. ಆದರೆ ಕೆಸರಂಟಿಕೊಂಡಾಗ ಸ್ನಾನದಿಂದಲೇ ಅದನ್ನು ತೊಳೆದುಕೊಳ್ಳಬೇಕಾಗುತ್ತದೆ. ಇದರಂತೆ ಸ್ವಲ್ಪ ಪಾಪವು ಅಲ್ಪ ಪ್ರಯತ್ನದಿಂದ ಪರಿಹಾರವಾಗಬಹುದು. ಬಲಿಷ್ಠವಾದ ಪಾಪಗಳಿದ್ದರೆ ಪ್ರಾಯಶ್ಚಿತ್ತವೇ ಪಾಪಕ್ಕೆ ಪರಿಹಾರವೆನಿಸಿದೆ.

ವಿರಕ್ತಸ್ಯ ಯಥಾ ಸಮ್ಯಗ್ ಘೃತಂ ಭವತಿ ಭೇಷಜಮ್ ।
ತಥಾ ನಿರ್ಹೃತದೋಷಸ್ಯ ಪ್ರೇತ್ಯಧರ್ಮಃ ಸುಖಾವಹಃ ॥೧೮॥

ಅನ್ನದಲ್ಲಿ ಆಸಕ್ತಿಯನ್ನು ಹೊಂದದವನಿಗೆ ತುಪ್ಪವೇ ಹೇಗೆ ಔಷಧಿಆಗಿರುತ್ತದೆಯೋ ಹಾಗೆ ಸಮಸ್ತ ದೋಷಗಳಿಂದ ವಿಮುಕ್ತನಾದವನಿಗೆ ಧರ್ಮವೇ ಪರಲೋಕದಲ್ಲಿ ಸುಖವನ್ನುಂಟು ಮಾಡುತ್ತದೆ.

ಮಾನಸಂ ಸರ್ವಭೂತೇಷು ವರ್ತತೇ ವೈ ಶುಭಾಶುಭೇ ।
ಅಶುಭೇಭ್ಯಃ ಸಮಾಕ್ಷಿಪ್ಯ ಶುಭೇಷ್ವೇವಾವತಾರಯೇತ್ ॥೧೯॥

ಸಮಸ್ತ ಪ್ರಾಣಿಗಳ ಮನಸ್ಸಿನಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ವಿಚಾರಗಳು ಇದ್ದೇ ಇರುತ್ತವೆ. ವಿವೇಕಿಯಾದವನು ಕೆಟ್ಟ ವಿಚಾರಗಳನ್ನು ಮನಸ್ಸಿನಿಂದ ಹೊಡೆದೋಡಿಸಿ ಸದ್ವಿಚಾರಗಳಲ್ಲಿಯೇ ಆಸಕ್ತನಾಗಿರಬೇಕು.

ಸರ್ವಂ ಸರ್ವೇಣ ಸರ್ವತ್ರ ಕ್ರಿಯಮಾಣಂ ಚ ಪೂಜಯ ।
ಸ್ವಧರ್ಮೇ ಯತ್ರ ರಾಗಸ್ತೇ ಕಾಮಂ ಧರ್ಮೋ ವಿಧೀಯತಾಮ್ ॥೨೦॥

ಎಲ್ಲ ವರ್ಣೀಯರಿಂದ ಆಶ್ರಮಧರ್ಮಗಳಿಗನುಗುಣವಾಗಿ ಮಾಡುವ ಧರ್ಮಗಳನ್ನು, ಆಚಾರಗಳನ್ನು ನೀನು ಗೌರವಿಸು. ನಿನ್ನ ಧರ್ಮದಲ್ಲಿ ನಿನಗೆ ಆಸಕ್ತಿ ಉಂಟಾಗಲಿ. ಯಥೇಷ್ಟವಾಗಿ ಸ್ವಧರ್ಮಗಳನ್ನು ಆಚರಿಸುವವನಾಗು.

ಅಧೃತಾತ್ಮನ್ ಧೃತೌ ತಿಷ್ಠ ದುರ್ಬುದ್ಧೇ ಬುದ್ಧಿಮಾನ್ ಭವ ।
ಅಪ್ರಶಾಂತ ಪ್ರಶಾಮ್ಯ ತ್ವಮಪ್ರಾಜ್ಞ ಪ್ರಾಜ್ಞವಚ್ಚರ ॥೨೧॥

ಅಧೀರನಾದ ವಸುಮಂತನೇ, ಧೈರ್ಯವನ್ನು ಆಶ್ರಯಿಸು. ದುರ್ಬುದ್ಧಿಯೇ, ಬುದ್ಧಿವಂತನಾಗು. ಅಶಾಂತನೇ, ಶಾಂತಿಯನ್ನು ಹೊಂದು. ನೀನು ಮೂರ್ಖನಂತೆ ವ್ಯವಹರಿಸುತ್ತಿರುವಿ. ಮುಂದೆ ಪ್ರಾಜ್ಞನಂತೆ ವ್ಯವಹರಿಸು.

ತೇಜಸಾ ಶಕ್ಯತೇ ಪ್ರಾಪ್ತುಮುಪಾಯಸಹಚಾರಿಣಾ ।
ಇಹ ಚ ಪ್ರೇತ್ಯ ಚ ಶ್ರೇಯಸ್ತಸ್ಯ ಮೂಲಂ ಧೃತಿಃ ಪರಾ ॥೨೨॥

ರಾಜರ್ಷಿರಧೃತಿಃ ಸ್ವರ್ಗಾತ್ ಪತಿತೋ ಹಿ ಮಹಾಭಿಷಃ ।
ಯಯಾತಿಃ ಕ್ಷೀಣಪುಣ್ಯಶ್ಚ ಧೃತ್ಯಾ ಲೋಕಾನವಾಪ್ತವಾನ್ ॥೨೩॥

ಸತ್ಪುರುಷರ ಸಂಗವನ್ನು ಮಾಡುವ ವ್ಯಕ್ತಿ ಇಹ-ಪರಲೋಕಗಳಲ್ಲಿ ಶ್ರೇಯಸ್ಸನ್ನು ಹೊಂದುವ ಉಪಾಯವನ್ನು ಧೈರ್ಯದಿಂದ ಹೊಂದುತ್ತಾನೆ. ಧೈರ್ಯವೇ ಶ್ರೇಯಸ್ಸಿಗೆ ಮೂಲಸಾಧನವಾಗಿದೆ. ರಾಜರ್ಷಿಯಾದ ಮಹಾಭಿಷಕ್ ಎಂಬ ರಾಜನು ಅಧೈರ್ಯದಿಂದಲೇ ಸ್ವರ್ಗದಿಂದ ಚ್ಯುತನಾದನು. ಯಯಾತಿಯು ಪುಣ್ಯವನ್ನು ನಾಶಪಡಿಸಿಕೊಂಡು ಸ್ವರ್ಗದಿಂದ ಬೀಳುವಾಗಲೂ ಧೈರ್ಯವನ್ನು ಆಶ್ರಯಿಸಿ ಪುನಃ ಉತ್ತಮ ಲೋಕವನ್ನು ಹೊಂದಿದನು.

ತಪಸ್ವಿನಾಂ ಧರ್ಮವತಾಂ ವಿದುಷಾಂ ಚೋಪಸೇವನಾತ್ ।
ಪ್ರಾಪ್ಸ್ಯಸೇ ವಿಪುಲಾಂ ಬುದ್ಧಿಂ ತಥಾ ಶ್ರೇಯೋऽಭಿಪತ್ಸ್ಯಸೇ ॥೨೪॥

ವಸುಮಂತನೇ, ವಿದ್ವಾಂಸರಾದ, ಧರ್ಮವಿದರಾದ ತಪಸ್ವಿಗಳನ್ನು ಸೇವಿಸುವುದರಿಂದ ವಿಶಾಲವಾದ ಬುದ್ಧಿಯನ್ನು ಹೊಂದುತ್ತಿ. ಹಾಗೆ ಶ್ರೇಯಸ್ಸನ್ನು ಪಡೆದುಕೊಳ್ಳುತ್ತಿ.

ಭೀಷ್ಮಃ

ಸ ತು ಸ್ವಭಾವಸಂಪನ್ನಸ್ತಚ್ಛ್ರುತ್ವಾ ಮುನಿಭಾಷಿತಮ್ ।
ವಿನಿವರ್ತ್ಯ ಮನಃ ಕಾಮಾದ್ಧರ್ಮೇ ಬುದ್ಧಿಂ ಚಕಾರ ಹ ॥೨೫॥

ಭೀಷ್ಮ– ಯುಧಿಷ್ಠಿರನೇ, ಉತ್ತಮ ಸ್ವಭಾವದಿಂದ ಕೂಡಿದ್ದ ವಸುಮಂತನು ಭಾರ್ಗವ ಮುನಿಯ ಮಾತುಗಳನ್ನು ಕೇಳಿಸಿಕೊಂಡು, ಕಾಮೋಪಭೋಗಗಳಿಂದ ವಿರಕ್ತನಾಗಿ ಧರ್ಮದಲ್ಲಿಯೇ ಸ್ಥಿರವಾದ ಬುದ್ಧಿಯನ್ನು ಹೊಂದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೆರಡನೆಯ ಅಧ್ಯಾಯ

ಯಾಜ್ಞವಲ್ಕ್ಯರು ಜನಕರಾಜನಿಗೆ ಉಪದೇಶಿಸಿದುದು.

ಯುಧಿಷ್ಠಿರಃ

ಧರ್ಮಾಧರ್ಮವಿಮುಕ್ತಂ ಯದ್ ವಿಮುಕ್ತಂ ಸರ್ವಸಂಶ್ರಯಾತ್ ।
ಜನ್ಮಮೃತ್ಯುವಿಮುಕ್ತಂ ಚ ವಿಮುಕ್ತಂ ಪುಣ್ಯಪಾಪಯೋಃ ॥೧॥

ಯಚ್ಛಿವಂ ನಿತ್ಯಮಭಯಂ ನಿತ್ಯಂ ಚಾಕ್ಷರಮವ್ಯಯಮ್ ।
ಶುಚಿ ನಿತ್ಯಮನಾಯಾಸಂ ತದ್ ಭವಾನ್ ವಕ್ತುಮರ್ಹತಿ ॥೨॥

ಯುಧಿಷ್ಠಿರ– ಪಿತಾಮಹನೇ, ಯಾವುದು ಧರ್ಮಾಧರ್ಮಗಳಿಂದ ವಿಮುಕ್ತವಾಗಿದೆಯೋ, ಸಕಲ ವಿಧವಾದ ಆಶ್ರಯಗಳಿಂದಲೂ ದೂರವಾಗಿದೆಯೋ, ಪುಣ್ಯ-ಪಾಪಗಳಿಂದ, ಹುಟ್ಟು-ಸಾವುಗಳಿಂದ ಬಿಡುಗಡೆಯನ್ನು ಹೊಂದಿದೆಯೋ, ಕಲ್ಯಾಣಮಯವೂ, ನಿರ್ಭಯವೂ, ಅಕ್ಷರವೂ, ನಿತ್ಯವೂ, ಪವಿತ್ರವೂ, ಕ್ಲೇಶರಹಿತವೂ ಆಗಿದೆಯೋ ಅಂತಹ ಪರತತ್ತ್ವವನ್ನು ಉಪದೇಶಿಸು.

ಭೀಷ್ಮಃ

ಅತ್ರ ತೇ ವರ್ತಯಿಷ್ಯೇऽಹಮಿತಿಹಾಸಂ ಪುರಾತನಮ್ ।
ಯಾಜ್ಞವಲ್ಕ್ಯಸ್ಯ ಸಂವಾದಂ ಜನಕಸ್ಯ ಚ ಭಾರತ ॥೩॥

ಭೀಷ್ಮ– ಯುಧಿಷ್ಠಿರನೆ, ಈ ವಿಷಯದಲ್ಲಿ ಜನಕ ಮತ್ತು ಯಾಜ್ಞವಲ್ಕ್ಯರಿಗೆ ನಡೆದ ಸಂವಾದ ರೂಪವಾದ ಪುರಾತನವಾದ ಇತಿಹಾಸವನ್ನು ಹೇಳುತ್ತೇನೆ.

ಯಾಜ್ಞವಲ್ಕ್ಯಮೃಷಿಶ್ರೇಷ್ಠಂ ದೈವರಾತಿರ್ಮಹಾಯಶಾಃ ।
ಪಪ್ರಚ್ಛ ಜನಕೋ ರಾಜಾ ಪ್ರಶ್ನ ಪ್ರಶ್ನವಿದಾಂ ವರಃ ॥೪॥

ಮಹಾಯಶೋವಂತನಾದ, ದೇವರಾತರ ಮಗನಾದ ಜನಕನು ರಹಸ್ಯಗಳನ್ನು ತಿಳಿದವರಲ್ಲಿ ಶ್ರೇಷ್ಠರಾದ ಯಾಜ್ಞವಲ್ಕ್ಯರಲ್ಲಿ ಪ್ರಶ್ನಿಸಿದನು.

ಕತೀಂದ್ರಿಯಾಣಿ ವಿಪ್ರರ್ಷೇ ಕತಿ ಪ್ರಕೃತಯಃ ಸ್ಮೃತಾಃ ।
ಕಿಮವ್ಯಕ್ತಂ ಪರಂ ಬ್ರಹ್ಮ ತಸ್ಮಾಚ್ಚ ಪರತಸ್ತು ಕಿಮ್ ॥೫॥

ವಿಪ್ರಶ್ರೇಷ್ಠರೇ, ಇಂದ್ರಿಯಗಳು ಎಷ್ಟು? ಪ್ರಕೃತಿಯಲ್ಲಿ ಎಷ್ಟು ಭೇದಗಳಿವೆ? ಅವ್ಯಕ್ತವೆನಿಸಿದ ಪರಬ್ರಹ್ಮನ ಸ್ವರೂಪವೇನು? ಅವನಿಗಿಂತ ಮಿಗಿಲಾದುದು ಯಾವುದು?

ಪ್ರಭವಂ ಚಾಪ್ಯಯಂ ಚೈವ ಕಾಲಸಂಖ್ಯಾಂ ತಥೈವ ಚ ।
ವಕ್ತುಮರ್ಹಸಿ ವಿಪ್ರೇಂದ್ರ ತ್ವದನುಗ್ರಹಕಾಂಕ್ಷಿಣಃ ॥೬॥

ಸೃಷ್ಟಿ ಮತ್ತು ಪ್ರಳಯಗಳ ಸ್ವರೂಪವೇನು? ಕಾಲದ ಗಣನೆಯು ಎಷ್ಟು? ನಿಮ್ಮ ಅನುಗ್ರಹವನ್ನು ಅಪೇಕ್ಷಿಸುವ ನನಗೆ ಇವೆಲ್ಲವನ್ನೂ ತಿಳಿಸಿರಿ.

ಅಜ್ಞಾನಾತ್ ಪರಿಪೃಚ್ಛಾಮಿ ತ್ವಂ ಹಿ ಜ್ಞಾನಮಯೋ ನಿಧಿಃ ।
ತದಹಂ ಶ್ರೋತುಮಿಚ್ಛಾಮಿ ಸರ್ವಮೇತದಸಂಶಯಮ್ ॥೭॥

ನನ್ನಲ್ಲಿ ಅಜ್ಞಾನ ಇರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನೀವು ಜ್ಞಾನ ಸ್ವರೂಪರಾಗಿದ್ದೀರಿ. ಈ ವಿಷಯಗಳನ್ನು ಸಂಶಯವಿಲ್ಲದಂತೆ ನಿಮ್ಮಿಂದ ತಿಳಿಯಬಯಸುತ್ತೇನೆ.

ಯಾಜ್ಞವಲ್ಕ್ಯಃ

ಶ್ರೂಯತಾಮವನೀಪಾಲ ಯದೇತದನುಪೃಚ್ಛಸಿ ।
ಯೋಗಾನಾಂ ಪರಮಂ ಜ್ಞಾನಂ ಸಾಂಖ್ಯಾನಾಂ ಚ ವಿಶೇಷತಃ ॥೮॥

ಯಾಜ್ಞವಲ್ಕ್ಯ– ಜನಕರಾಜನೇ, ನೀನು ಕೇಳಿದ ಪ್ರಶ್ನೆಗಳು ವಿಶೇಷವಾಗಿ ಸಾಂಖ್ಯಯೋಗದ ಪರಮಜ್ಞಾನವೆನಿಸಿವೆ.

ನ ತವಾವಿದಿತಂ ಕಿಂಚಿನ್ಮಾಂ ತು ಜಿಜ್ಞಾಸತೇ ಭವಾನ್ ।
ಪೃಷ್ಟೇನ ಚಾಪಿ ವಕ್ತವ್ಯಮೇಷ ಧರ್ಮಃ ಸನಾತನಃ ॥೯॥

ನೀನು ತಿಳಿಯದ ವಿಷಯಗಳೇ ಇಲ್ಲ. ಆದರೂ ನನ್ನಿಂದ ತಿಳಿಯಬೇಕೆಂದು ಬಯಸುತ್ತಿರುವಿ. ಶ್ರದ್ಧೆಯಿಂದ ಯಾರು ಪ್ರಶ್ನಿಸಿದರೂ ಯೋಗ್ಯ ಉತ್ತರವನ್ನು ಹೇಳಬೇಕೆಂಬುದು ಸನಾತನ ಧರ್ಮವಾಗಿದೆ.

ಅಷ್ಟೌ ಪ್ರಕೃತಯಃ ಪ್ರೋಕ್ತಾ ವಿಕಾರಾಶ್ಚಾಪಿ ಷೋಡಶ ।
ಅಥ ಸಪ್ತ ತು ವ್ಯಕ್ತಾನಿ ಪ್ರಾಹುರಧ್ಯಾತ್ಮಚಿಂತಕಾಃ ॥೧೦॥

ಪ್ರಕೃತಿಯು ಎಂಟು. ವಿಕಾರಗಳು ಹದಿನಾರು. ಇವುಗಳಲ್ಲಿ ಏಳು ಸ್ಪಷ್ಟವಾಗಿ ಗೋಚರವಾಗುತ್ತವೆ ಎಂದು ಅಧ್ಯಾತ್ಮ ಚಿಂತಕರು ಹೇಳುತ್ತಾರೆ.

ಅವ್ಯಕ್ತಂ ಚ ಮಹಾಂಶ್ಚೈವ ತಥಾಹಂಕಾರ ಏವ ಚ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ॥೧೧॥

ಏತಾಃ ಪ್ರಕೃತಯಸ್ತ್ವಷ್ಟೌ ವಿಕಾರಾನಪಿ ಮೇ ಶೃಣು ।
ಶ್ರೋತ್ರಂ ತ್ವಕ್ಚೈವ ಚಕ್ಷುಶ್ಚ ಜಿಹ್ವಾ ಘ್ರಾಣಂ ಚ ಪಂಚಮಮ್ ॥೧೨॥

ಶಬ್ದಸ್ಪರ್ಶೌ ಚ ರೂಪಂ ಚ ರಸೋ ಗಂಧಸ್ತಥೈವ ಚ ।
ವಾಕ್ಚ ಹಸ್ತೌ ಚ ಪಾದೌ ಚ ಪಾಯುರ್ಮೇಢ್ರಂ ತಥೈವ ಚ ॥೧೩॥

ಅವ್ಯಕ್ತ, ಮಹತ್ತತ್ತ್ವ, ಅಹಂಕಾರತತ್ತ್ವ, ಪೃಥಿವಿ, ವಾಯು, ಆಕಾಶ, ಜಲ, ಜ್ಯೋತಿ - ಹೀಗೆ ಪ್ರಕೃತಿಗಳು ಎಂಟು. ಇವುಗಳ ವಿಕಾರವನ್ನು ಹೇಳುತ್ತೇನೆ, ಕೇಳು. ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವಾ, ಘ್ರಾಣ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ.

ಏತೇ ವಿಶೇಷಾ ರಾಜೇಂದ್ರ ಮಹಾಭೂತೇಷು ಪಂಚಸು ।
ಬುದ್ಧೀಂದ್ರಿಯಾಣ್ಯಥೈತಾನಿ ಸವಿಶೇಷಾಣಿ ಮೈಥಿಲ ॥೧೪॥

ವಾಕ್-ಪಾಣಿಗಳೇ ಮೊದಲಾದ ಐದು ಕರ್ಮೇಂದ್ರಿಯಗಳು, ಶಬ್ದ-ಸ್ಪರ್ಶ ಮೊದಲಾದ ಇಂದ್ರಿಯಾರ್ಥಗಳು ವಿಶೇಷವೆಂದು ಕರೆಯಲ್ಪಡುತ್ತವೆ. ಐದು ಜ್ಞಾನೇಂದ್ರಿಯಗಳನ್ನು ಸವಿಶೇಷಗಳೆಂದು ಹೇಳುತ್ತಾರೆ.

ಮನಃ ಷೋಡಶಕಂ ಪ್ರಾಹುರಧ್ಯಾತ್ಮಗತಿಚಿಂತಕಾಃ ।
ತ್ವಂ ಚೈವಾನ್ಯೇ ಚ ವಿದ್ವಾಂಸಸ್ತತ್ತ್ವಬುದ್ಧಿವಿಶಾರದಾಃ ॥೧೫॥

ಅಧ್ಯಾತ್ಮ ಗತಿಯನ್ನು ಚಿಂತಿಸುವ, ತತ್ತ್ವಬುದ್ಧಿ ವಿಶಾರದರಾದ ವಿದ್ವಾಂಸರು ಮನಸ್ಸನ್ನು ಹದಿನಾರನೆಯ ವಿಕಾರ ಎನ್ನುತ್ತಾರೆ. ನೀನೂ ಹೀಗೆ ಹೇಳುತ್ತಿ.

ಅವ್ಯಕ್ತಾಚ್ಚ ಮಹಾನಾತ್ಮಾ ಸಮುತ್ಪದ್ಯತಿ ಪಾರ್ಥಿವ ।
ಪ್ರಥಮಂ ಸರ್ಗಮಿತ್ಯೇತದಾಹುಃ ಪ್ರಾಧಾನಿಕಂ ಬುಧಾಃ ॥೧೬॥

ಅವ್ಯಕ್ತವೆನಿಸಿದ ಮೂಲಪ್ರಕೃತಿಯಿಂದ ಮಹತ್ತತ್ತ್ವವು ಉತ್ಪನವಾಗುತ್ತದೆ. ವಿದ್ವಾಂಸರು ಇದನ್ನು ಮೊದಲನೆಯ ಸೃಷ್ಟಿ ಎಂದೂ, ಪ್ರಧಾನವೆಂದೂ ಹೇಳುತ್ತಾರೆ.

ಮಹತಶ್ಚಾಪ್ಯಹಂಕಾರ ಉತ್ಪದ್ಯತಿ ನರಾಧಿಪ ।
ದ್ವಿತೀಯಂ ಸರ್ಗಮಿತ್ಯಾಹುರೇತದ್ ಬುದ್ಧ್ಯಾತ್ಮಕಂ ಸ್ಮೃತಮ್ ॥೧೭॥

ಮಹತ್ತತ್ತ್ವದಿಂದ ಅಹಂಕಾರತತ್ತ್ವವು ಸೃಷ್ಟಿಹೊಂದುತ್ತದೆ. ಇದನ್ನು ಎರಡನೆಯ ಸೃಷ್ಟಿ ಎಂದು ಹೇಳುತ್ತಾರೆ. ಬುದ್ಧಿತತ್ತ್ವನಿಯಾಮಕವೇ ಅಹಂಕಾರತತ್ತ್ವವೆನಿಸಿದೆ.

ಅಹಂಕಾರಾಚ್ಚ ಸಂಭೂತಂ ಮನೋ ಭೂತಗುಣಾತ್ಮಕಮ್ ।
ತೃತೀಯಃ ಸರ್ಗ ಇತ್ಯೇಷ ಆಹಂಕಾರಿಕ ಉಚ್ಯತೇ ॥೧೮॥

ಪಂಚಭೂತಗಳ ಸ್ವರೂಪವೆನಿಸಿದ ಮನಸ್ಸು ಅಹಂಕಾರತತ್ತ್ವದಿಂದ ಹುಟ್ಟಿದೆ. ಇದು ಮೂರನೆಯ ಸೃಷ್ಟಿ. ಇದಕ್ಕೆ ಅಹಂಕಾರಿಕ ಎಂದು ಹೆಸರು.

ಮನಸಸ್ತು ಸಮುದ್ಭೂತಾ ಮಹಾಭೂತಾ ನರಾಧಿಪ ।
ಚತುರ್ಥಂ ಸರ್ಗಮಿತ್ಯೇತನ್ಮಾನಸಂ ಪರಿಚಕ್ಷತೇ ॥೧೯॥

ಮನಸ್ಸಿನಿಂದ ಸೂಕ್ಷ್ಮ ಪಂಚಭೂತಗಳು ಸೃಷ್ಟಿಗೊಂಡಿವೆ. ಮಾನಸ ಎಂದು ಕರೆಯುವ ಇದನ್ನು ನಾಲ್ಕನೆಯ ಸೃಷ್ಟಿ ಎನ್ನುತ್ತಾರೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಸ್ತಥೈವ ಚ ।
ಪಂಚಮಂ ಸರ್ಗಮಿತ್ಯಾಹುರ್ಭೌತಿಕಂ ಭೂತಚಿಂತಕಾಃ ॥೨೦॥

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ವಿಷಯಗಳು ಸೂಕ್ಷ್ಮ ಪಂಚಭೂತಗಳಿಂದ ಹುಟ್ಟಿವೆ. ಇದನ್ನು ಐದನೆಯ ಸೃಷ್ಟಿ ಎನ್ನುತ್ತಾರೆ. ಭೂತಚಿಂತಕರು ಇದನ್ನು ಭೌತಿಕ ಸೃಷ್ಟಿ ಎನ್ನುತ್ತಾರೆ.

ಶ್ರೋತ್ರಂ ತ್ವಕ್ ಚೈವ ಚಕ್ಷುಶ್ಚ ಜಿಹ್ವಾ ಘ್ರಾಣಂ ಚ ಪಂಚಮಮ್ ।
ಸರ್ಗಂ ತು ಷಷ್ಠಮಿತ್ಯಾಹುರ್ಬಹುಚಿಂತಾತ್ಮಕಂ ಸ್ಮೃತಮ್ ॥೨೧॥

ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವಾ, ಘ್ರಾಣ ಎಂಬ ಐದು ಜ್ಞಾನೇಂದ್ರಿಯಗಳ ಸೃಷ್ಟಿಯನ್ನು ಆರನೆಯ ಸೃಷ್ಟಿ ಎಂದು, ಬಹುಚಿಂತಾತ್ಮಕ ಎಂದು ವಿದ್ವಾಂಸರು ಹೇಳುತ್ತಾರೆ.

ಅಧಃಸ್ರೋತೇಂದ್ರಿಯಗ್ರಾಮಮ್ ಉತ್ಪದ್ಯತಿ ನರಾಧಿಪ ।
ಸಪ್ತಮಂ ಸರ್ಗಮಿತ್ಯಾಹುರೇತದ್ಯೈಂದ್ರಿಯಕಂ ಸ್ಮೃತಮ್ ॥೨೨॥

ಕೆಳಗೆ ಸೋರುವಿಕೆಯನ್ನು ಹೊಂದುವ ಇಂದ್ರಿಯಗಳು ಅರ್ಥಾತ್ ಪಾಯು-ಉಪಸ್ಥಗಳು ಏಳನೆಯ ಸೃಷ್ಟಿ ಎನಿಸಿವೆ. ಇವುಗಳನ್ನು ಐಂದ್ರಿಕ ಸೃಷ್ಟಿ ಎಂದು ಕರೆಯುತ್ತಾರೆ.

ಊರ್ಧ್ವಂ ಚಾಧಸ್ತಥಾ ತಿರ್ಯಗುತ್ಪದ್ಯತಿ ನರಾಧಿಪ ।
ಅಷ್ಟಮಂ ಸರ್ಗಮಿತ್ಯಾಹುರೇತದಾರ್ಜವಕಂ ಬುಧಾಃ ॥೨೩॥

ಮೇಲೆ, ಕೆಳಗೆ, ಅಡ್ಡವಾಗಿ ಸಂಚರಿಸುವ ಸಾಮರ್ಥ್ಯವುಳ್ಳ ಪಾಣಿಯನ್ನು ಎಂಟನೆಯ ಸೃಷ್ಟಿ ಎಂದು ಕರೆಯುತ್ತಾರೆ. ಕೈಗಳಿಂದ ತಲೆಯಿಂದ ಕಾಲಿನ ತನಕ ತುರಿಸಿಕೊಳ್ಳುವ ಸಾಮರ್ಥ್ಯವಿರುವುದರಿಂದ ಹೀಗೆ ಕರೆಯಲಾಗಿದೆ. ಇದನ್ನು ಆರ್ಜವಕ ಎಂಬ ಹೆಸರಿನಿಂದ ಕರೆದಿದ್ದಾರೆ.

ತಿರ್ಯಕ್ಸ್ರೋತಸ್ತ್ವಧಃಸ್ರೋತ ಉತ್ಪದ್ಯತಿ ನರಾಧಿಪ ।
ನವಮಂ ಸರ್ಗಮಿತ್ಯಾಹುರೇತದಾರ್ಜವಕಂ ಬುಧಾಃ ॥೨೪॥

ಅಡ್ಡ ಮತ್ತು ಕೆಳಭಾಗದಲ್ಲಿ ಸ್ರವಣವನ್ನು ಹೊಂದುವ ವಾಗಿಂದ್ರಿಯವನ್ನು ಒಂಬತ್ತನೆಯ ಸೃಷ್ಟಿ ಎಂದು ಹೇಳುತ್ತಾರೆ. ಬಾಯಲ್ಲಿನ ಲಾಲಾ ಜಲವು ಬಾಯೊಳಗೆ ಎರಡು ತುಟಿಗಳ ದ್ವಾರ ಅಡ್ಡವಾಗಿಯೂ, ಕೆಳಗೂ ಸ್ರವಣ ಹೊಂದುತ್ತದೆ. ಮಕ್ಕಳಲ್ಲಿ

ಈ ವಾಗಿಂದ್ರಿಯ ವ್ಯಾಪಾರವು ಕೊನೆಯದಾಗಿ ಕಾಣುವುದರಿಂದ ನವಮ ಎಂದು ಹೇಳಿದ್ದಾರೆ. ಕರ್ಮೇಂದ್ರಿಯಗಳ ಸೃಷ್ಟಿಯನ್ನು ವ್ಯುತ್ಕ್ರಮದಲ್ಲಿ ಹೇಳಿದ್ದಾರೆ ಎಂದು ತಿಳಿಯಬೇಕು. ಈ ವಾಗಿಂದ್ರಿಯಕ್ಕೆ ಆರ್ಜವಕ ಎಂದೇ ಹೆಸರನ್ನು ಜ್ಞಾನಿಗಳು ಹೇಳುತ್ತಾರೆ.

ಏತಾನಿ ನವ ಸರ್ಗಾಣಿ ತತ್ತ್ವಾನಿ ಚ ನರಾಧಿಪ ।
ಚತುರ್ವಿಂಶತಿರುಕ್ತಾನಿ ಯಥಾಶ್ರುತಿ ನಿದರ್ಶನಾತ್ ॥೨೫॥

ಶ್ರುತಿಗೆ ಅನುಗುಣವಾಗಿ ಹೇಳಿರುವ ಒಂಬತ್ತು ಸೃಷ್ಟಿಗಳು ಇಪ್ಪತ್ನಾಲ್ಕು ತತ್ತ್ವಗಳೂ ಆಗಿವೆ.

ಅತ ಊರ್ಧ್ವಂ ಮಹಾರಾಜ ಗುಣಸ್ಯೈತಸ್ಯ ತತ್ತ್ವತಃ ।
ಮಹಾತ್ಮಭಿರನುಪ್ರೋಕ್ತಾಂ ಕಾಲಸಂಖ್ಯಾಂ ನಿಬೋಧ ಮೇ ॥೨೬॥

ಮಹಾರಾಜನೇ, ಇನ್ನು ಮುಂದೆ ಮಹಾತ್ಮರಾದ ಪುರುಷರು ಹೇಳಿರುವ ಗುಣಯುಕ್ತವಾದ ಈ ಸೃಷ್ಟಿಯ ಕಾಲಪರಿಗ್ರಹಣೆಯನ್ನು ಹೇಳುತ್ತೇನೆ. ಏಕಾಗ್ರತೆಯಿಂದ ಕೇಳು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಿಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ಮೂರನೆಯ ಅಧ್ಯಾಯ

ಜನಕ-ಯಾಜ್ಞವಲ್ಕ್ಯರ ಸಂವಾದ

ಯಾಜ್ಞವಲ್ಕ್ಯಃ

ಅವ್ಯಕ್ತಸ್ಯ ನರಶ್ರೇಷ್ಠ ಕಾಲಸಂಖ್ಯಾಂ ನಿಬೋಧ ಮೇ ।
ಪಂಚ ಕಲ್ಪಸಹಸ್ರಾಣಿ ದ್ವಿಗುಣಾನ್ಯಹರುಚ್ಯತೇ ॥೧॥

ಯಾಜ್ಞವಲ್ಕ್ಯ- ನರಶ್ರೇಷ್ಠನೇ, ನಾನು ಹೇಳಲಿರುವ ಅವ್ಯಕ್ತತತ್ತ್ವದ ಕಾಲದ ಪರಿಮಿತಿಯನ್ನು ಕೇಳು. ಹತ್ತುಸಾವಿರ ಕಲ್ಪಗಳು ಒಂದು ಹಗಲೆನಿಸುತ್ತವೆ.

ರಾತ್ರಿರೇತಾವತೀ ಚಾಸ್ಯ ಪ್ರತಿಬುದ್ಧೋ ನರಾಧಿಪ ।
ಸೃಜತ್ಯೋಷಧಿಮೇವಾಗ್ರೇ ಜೀವನಂ ಸರ್ವದೇಹಿನಾಮ್ ॥೨॥

ಅವ್ಯಕ್ತದ ರಾತ್ರಿಯು ಇಷ್ಟೇ ಪ್ರಮಾಣವುಳ್ಳದ್ದಾಗಿದೆ. ಅವ್ಯಕ್ತ ಪುರುಷನು ಎಚ್ಚರಗೊಂಡ ಕೂಡಲೇ ಮೊದಲು ಸಕಲ ಪ್ರಾಣಿಗಳಿಗೆ ಜೀವಾಧಾರವಾದ ಓಷಧಿಗಳನ್ನು ಸೃಷ್ಟಿಸುತ್ತಾನೆ.

ತತೋ ಬ್ರಹ್ಮಾಣಮಸೃಜದ್ಧೈರಣ್ಯಾಂಡಸಮುದ್ಭವಮ್ ।
ಸಾ ಮೂರ್ತಿಃ ಸರ್ವಭೂತಾನಾಮಿತ್ಯೇವಮನುಶುಶ್ರುಮ ॥೩॥

ಬಳಿಕ ಸುವರ್ಣಮಯವಾದ ಅಂಡದಿಂದ ಬ್ರಹ್ಮನನ್ನು ಸೃಷ್ಟಿಸುತ್ತಾನೆ. ಇವನೇ ಎಲ್ಲ ಪ್ರಾಣಿಗಳ ಶರೀರವೆಂದು ನಾನು ಕೇಳಿದ್ದೇನೆ.

ಸಂವತ್ಸರಮುಷಿತ್ವಾಂಡೇ ನಿಷ್ಪದ್ಯ ಚ ಮಹಾಮುನಿಃ ।
ಸಂದಧೇರ್ಧಂ ಮಹೀಂ ಕೃತ್ಸ್ನಾಂ ದಿವಮರ್ಧಂ ಪ್ರಜಾಪತಿಃ ॥೪॥

ಮಹಾಮುನಿಯಾದ ಚತುರ್ಮುಖ ಬ್ರಹ್ಮನು ಒಂದು ವರ್ಷ ಪರ್ಯಂತ ಅಂಡದಲ್ಲಿ ವಾಸವಾಗಿದ್ದು, ಬಳಿಕ ಅದರಿಂದ ಹೊರಬಂದು ಆ ಅಂಡದ ಅರ್ಧ ಭಾಗವನ್ನು ಭೂಮಿಯನ್ನಾಗಿಯೂ ಉಳಿದ ಅರ್ಧಭಾಗವನ್ನು ಸ್ವರ್ಗವನ್ನಾಗಿಯೂ ಭಾಗಿಸಿದನೆಂದು ಹೇಳುತ್ತಾರೆ.

ದ್ಯಾವಾಪೃಥಿವ್ಯೋರಿತ್ಯೇಷ ರಾಜನ್ ವೇದೇಷು ಪಠ್ಯತೇ ।
ತಯೋಃ ಶಕಲಯೋರ್ಮಧ್ಯಮಾಕಾಶಮಕರೋತ್ ಪ್ರಭುಃ ॥೫॥

ತನ್ನ ವಿಶ್ವರೂಪದಲ್ಲಿ ದ್ಯಾವಾಪೃಥಿವಿಗಳನ್ನು ಉರುಟಾದ ಜಘನ ಪ್ರದೇಶಗಳನ್ನಾಗಿ ತೋರಿಸುತ್ತಾನೆ ಎಂದು ವೇದಗಳಲ್ಲಿ ಹೇಳಿರುತ್ತಾರೆ. ಸರ್ವಸಮರ್ಥನಾದ ಭಗವಂತನು ಈ ಎರಡು ತುಂಡುಗಳ ಮಧ್ಯದಲ್ಲಿ ಆಕಾಶವನ್ನು ಸೃಷ್ಟಿಸಿದನು.

ಏತಸ್ಯಾಪಿ ಚ ಸಂಖ್ಯಾನಂ ವೇದವೇದಾಂಗಪಾರಗೈಃ ।
ದಶ ಕಲ್ಪಸಹಸ್ರಾಣಿ ಪಾದೋನಾನ್ಯಹರುಚ್ಯತೇ ।
ರಾತ್ರಿಮೇತಾವತೀಂ ಚಾಸ್ಯ ಪ್ರಾಹುರಧ್ಯಾತ್ಮಚಿಂತಕಾಃ ॥೬॥

ವೇದವೇದಾಂಗ ಪಾರಂಗತರಾದ ವಿದ್ವಾಂಸರು ಬ್ರಹ್ಮನ ಕಾಲಪ್ರಮಾಣವು ಎಷ್ಟೆಂಬುದನ್ನು ವಿಚಾರ ಮಾಡಿ ಹೇಳಿದ್ದಾರೆ. ಬ್ರಹ್ಮಾಂಡಸ್ಥಿತನಾದ, ಚತುರ್ದಶ ಭುವನಗಳನ್ನು ಸೃಷ್ಟಿಸುವ ಚತುರ್ಮುಖ ಬ್ರಹ್ಮನ ಕಾಲವು ಹತ್ತು ಸಾವಿರ ವರ್ಷಗಳಿಗೆ ಒಂದು ಪಾದ ಊನವಾಗುತ್ತದೆ ಎಂದು ಹೇಳಿದ್ದಾರೆ. ಎರಡೂವರೆ ಸಾವಿರ ಕಡಿಮೆಯಾದುದು ಅರ್ಥಾತ್ ದಶಾವರಣೋಪೇತ ಬ್ರಹ್ಮಾಂಡ ಸೃಷ್ಟಿಯಲ್ಲಿ ಕಾಲು ಪಾದ ಕಾಲವು ಕಳೆದುಹೋಗುತ್ತದೆ ಎಂದು ಭಾವ. ಏಳು ಸಾವಿರದ ಐದು ನೂರು ಕಲ್ಪಗಳು ವಿಶ್ವರೂಪಿಯಾದ ಬ್ರಹ್ಮನಿಗೆ ಒಂದು ಹಗಲಾಗುತ್ತದೆ. ಇಷ್ಟೇ ಸಂಖ್ಯೆಯುಳ್ಳದ್ದು ಬ್ರಹ್ಮನ ರಾತ್ರಿಯು ಎಂದು ಹೇಳುತ್ತಾರೆ.

ಸೃಜತ್ಯಹಂಕಾರಮೃಷಿರ್ಭೂತಂ ದಿವ್ಯಾತ್ಮಕಂ ತಥಾ ।
ಚತುರಶ್ಚಾಪರಾನ್ ಪುತ್ರಾನ್ ದೇಹಾತ್ ಪೂರ್ವಂ ಮಹಾನೃಷಿಃ ।
ತೇ ವೈ ಪಿತೃಭ್ಯಃ ಪಿತರಃ ಶ್ರೂಯಂತೇ ರಾಜಸತ್ತಮ ॥೭॥

ಈ ವಿಶ್ವರೂಪಿಯಾದ ಬ್ರಹ್ಮನು ದ್ಯಾವಾ-ಪೃಥಿಗಳನ್ನು ಅವುಗಳ ಮಧ್ಯದಲ್ಲಿ ಆಕಾಶವನ್ನು ಸೃಷ್ಟಿಸಿದ ಬಳಿಕ ಅಹಂಕಾರವೆಂಬ ದಿವ್ಯವಾದ ಭೂತವನ್ನು ಸೃಷ್ಟಿಸಿದನು. ರಾಜಸತ್ತಮನೇ, ಮಹಾನೃಷಿ ಎನಿಸಿದ ಬ್ರಹ್ಮನು ಭೌತಿಕವಾದ ದೇಹವನ್ನು ಸೃಷ್ಟಿಸುವ ಮೊದಲೇ ಬುದ್ಧಿ, ಅಹಂಕಾರ, ಮನಸ್ಸು, ಚಿತ್ತ ಎಂಬ ನಾಲ್ಕು ಮಕ್ಕಳನ್ನು ಪಡೆದುಕೊಂಡನು. ಈ ನಾಲ್ಕು ಮಕ್ಕಳು ಪಂಚಮಹಾಭೂತಗಳೆಂಬ ಪಿತೃಗಳಿಗೂ ಪಿತೃಗಳು ಎಂದು ಹೇಳಲ್ಪಟ್ಟಿದ್ದಾರೆ.

ದೇವಾಃ ಪಿತೄಣಾಂ ಚ ಸುತಾ ದೇವೈರ್ಲೋಕಾಃ ಸಮಾವೃತಾಃ ।
ಚರಾಚರಾ ನರಶ್ರೇಷ್ಠ ಇತ್ಯೇವಮನುಶುಶ್ರುಮ ॥೮॥

ನರಶ್ರೇಷ್ಠನೇ, ಶ್ರೋತ್ರೇಂದ್ರಿಯವೇ ಮೊದಲಾದ ಇಂದ್ರಿಯಗಳಿಂದ ಪಂಚ ಮಹಾಭೂತಗಳಿಗೆ ಮಕ್ಕಳೆಂದು ಕೇಳಿದ್ದೇವೆ. ಎಲ್ಲ ಇಂದ್ರಿಯಗಳು ಪಂಚ ಮಹಾಭೂತಗಳು ಉತ್ಪನ್ನವಾಗಿವೆ. ಇಂದ್ರಿಯಗಳಿಂದಲೇ ಚರಾಚರಾತ್ಮಕವಾದ ಸರ್ವಪ್ರಪಂಚವು ಆವೃತವಾಗಿದೆ.

ಪರಮೇಷ್ಠೀ ತ್ವಹಂಕಾರೋಽಸೃಜದ್ ಭೂತಾನಿ ಪಂಚಧಾ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ॥೯॥

ಅಹಂಕಾರತತ್ತ್ವವು ಪೃಥಿವಿ, ವಾಯು, ಆಕಾಶ, ಜಲ, ತೇಜಸ್ಸುಗಳೆಂಬ ಪಂಚ ಭೂತಗಳನ್ನು ಸೃಷ್ಟಿಸಿದೆ.

ಏತಸ್ಯಾಪಿ ನಿಶಾಮಾಹುಸ್ತತೀಯಮಿಹ ಕುರ್ವತಃ ।
ಪಂಚ ಕಲ್ಪಸಹಸ್ರಾಣಿ ತಾವದೇವಾಹರುಚ್ಯತೇ ॥೧೦॥

ಈ ಅಹಂಕಾರತತ್ತ್ವದ ಕಾಲಪರಿಮಾಣವನ್ನು ಐದು ಸಾವಿರ ಕಲ್ಪವೆಂದು ವಿದ್ವಾಂಸರು ಹೇಳಿದ್ದಾರೆ. ಅಷ್ಟೇ ಪರಿಮಾಣದ ಹಗಲು ಸೇರಿಕೊಂಡಾಗ ಅಹಂಕಾರದ ಒಂದು ದಿನವಾಗುತ್ತದೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಪಂಚಮಃ ।
ಏತೇ ವಿಶೇಷಾ ರಾಜೇಂದ್ರ ಮಹಾಭೂತೇಷು ಪಂಚಸು ।
ಯೈರಾವಿಷ್ಟಾನಿ ಭೂತಾನಿ ಅಹನ್ಯಹನಿ ಪಾರ್ಥಿವ ॥೧೧॥

ಅನ್ಯೋನ್ಯಂ ಸ್ಪೃಹಯಂತ್ಯೇತೇ ಅನ್ಯೋನ್ಯಸ್ಯ ಹಿತೇ ರತಾಃ ।
ಅನ್ಯೋನ್ಯಮಭಿಮನ್ಯಂತೇ ಅನ್ಯೋನ್ಯಸ್ಪರ್ಧಿನಸ್ತಥಾ ॥೧೨॥

ತೇ ವಧ್ಯಮಾನಾ ಅನ್ಯೋನ್ಯಂ ಗುಣೈರ್ಹಾರಿಭಿರವ್ಯಯಾಃ ।
ಇಹೈವ ಪರಿವರ್ತಂತೇ ತಿರ್ಯಗ್ಯೋನಿಪ್ರವೇಶಿನಃ ॥೧೩॥

ಆಕಾಶ, ವಾಯು, ಅಗ್ನಿ, ಜಲ, ಭೂಮಿಗಳೆಂಬ ಪಂಚಭೂತಗಳಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಶೇಷ ಗುಣಗಳು ಉತ್ಪನ್ನವಾಗಿವೆ. ಸಮಸ್ತ ಪ್ರಾಣಿಗಳು ಮನೋಹರವಾದ, ಸರ್ವಕಾಲದಲ್ಲಿಯೂ ಇರುವ ಶಬ್ದಸ್ಪರ್ಶಾದಿ ವಿಷಯಗಳಿಂದ ಒಬ್ಬರು ಮತ್ತೊಬ್ಬರ ಹಿತಚಿಂತಕರಾಗಿರುತ್ತಾರೆ. ಒಬ್ಬರು ಇನ್ನೊಬ್ಬರನ್ನು ಪ್ರೀತಿಸುತ್ತಾರೆ, ಸ್ಪರ್ಧಿಸುತ್ತಾರೆ, ಅತಿಕ್ರಮಿಸುತ್ತಾರೆ, ಪರಸ್ಪರ ಬಡಿದಾಡುತ್ತಾರೆ, ಕೊಂದು ಹಾಕುತ್ತಾರೆ. ಹೀಗೆ ವಿಷಯಾಸಕ್ತಿಗಳಾದ ಪ್ರಾಣಿಗಳು ಪಶು-ಪಕ್ಷಿಗಳೇ ಮೊದಲಾದ ತಿರ್ಯಗ್ಯೋನಿಗಳಲ್ಲಿ ಪ್ರವೇಶಿಸಿ ಪ್ರಪಂಚದಲ್ಲಿ ಸುತ್ತುತ್ತಿದ್ದಾರೆ.

ತ್ರೀಣಿ ಕಲ್ಪಸಹಸ್ರಾಣಿ ಏತೇಷಾಮಹರುಚ್ಯತೇ ।
ರಾತ್ರಿರೇತಾವತೀ ಚೈವ ಮನಸಶ್ಚ ನರಾಧಿಪ ॥೧೪॥

ಮೂರು ಸಾವಿರ ಕಲ್ಪಗಳು ಈ ಶಬ್ದಾದಿ ವಿಷಯಗಳಿಗೆ ಒಂದು ಹಗಲಾಗುತ್ತದೆ. ಅಷ್ಟೇ ಪರಿಮಾಣದ ಕಲ್ಪಗಳು ಒಂದು ರಾತ್ರಿಯಾಗುತ್ತದೆ. ಮನಸ್ಸಿಗೆ ಇದೇ ಕಾಲದ ಗಣನೆಯನ್ನು ಹೇಳಿದ್ದಾರೆ.

ಮನಶ್ಚರತಿ ರಾಜೇಂದ್ರ ಚರಿತಂ ಸರ್ವಮಿಂದ್ರಿಯೈಃ ।
ನ ಚೇಂದ್ರಿಯಾಣಿ ಪಶ್ಯಂತಿ ಮನ ಏವಾತ್ರ ಪಶ್ಯತಿ ॥೧೫॥

ಸಮಸ್ತ ಇಂದ್ರಿಯಗಳ ಮೂಲಕ ಮನಸ್ಸು ಎಲ್ಲ ವಿಷಯಗಳ ಬಳಿ ಸಂಚರಿಸುತ್ತದೆ. ಯಾವ ವಿಷಯಗಳನ್ನೂ ಇಂದ್ರಿಯಗಳು ನೋಡಲಾರವು , ಮನಸ್ಸೇ ನೋಡುತ್ತದೆ.

ಚಕ್ಷುಃ ಪಶ್ಯತಿ ರೂಪಾಣಿ ಮನಸಾ ತು ನ ಚಕ್ಷುಷಾ ।
ಮನಸಿ ವ್ಯಾಕುಲೇ ಚಕ್ಷುಃ ಪಶ್ಯನ್ನಪಿ ನ ಪಶ್ಯತಿ ।
ತಥೇಂದ್ರಿಯಾಣಿ ಸರ್ವಾಣಿ ಪಶ್ಯಂತೀತ್ಯಭಿಚಕ್ಷತೇ ॥೧೬॥

ಕಣ್ಣು ರೂಪವನ್ನು ನೋಡಿದರೂ ಮನಸ್ಸಿನ ಮೂಲಕವೇ ನೋಡುತ್ತದೆ. ಸ್ವತಂತ್ರವಾಗಿ ಕಣ್ಣು ರೂಪವನ್ನು ನೋಡದು. ಮನಸ್ಸು ಚಂಚಲವಾದಾಗ ಚಕ್ಷುರಿಂದ್ರಿಯವು ನೋಡುತ್ತಿದ್ದರೂ ನೋಡುವುದಿಲ್ಲ ಎಂದೇ ಭಾವ. ಇದೇ ರೀತಿ ಎಲ್ಲ ಇಂದ್ರಿಯಗಳು ಮನಸ್ಸಿನ ಮೂಲಕವೇ ಎಂದು ಜ್ಞಾನಿಗಳು ಹೇಳುತ್ತಾರೆ.

ಮನಸ್ಯುಪರತೇ ರಾಜನ್ನಿಂದ್ರಿಯೋಪರಮೋ ಭವೇತ್ ।
ನ ಚೇಂದ್ರಿಯವ್ಯುಪರಮೇ ಮನಸ್ಯುಪರಮೋ ಭವೇತ್ ।
ಏವಂ ಮನಃಪ್ರಧಾನಾನಿ ಇಂದ್ರಿಯಾಣಿ ವಿಭಾವಯೇತ್ ॥೧೭॥

ಮನಸ್ಸೊಂದು ವಿಶ್ರಾಂತಿಯನ್ನು ಹೊಂದಲು ಎಲ್ಲ ಇಂದ್ರಿಯಗಳು ವಿಶ್ರಾಂತಿಯನ್ನು ಹೊಂದುತ್ತವೆ. ಆದರೆ ಇಂದ್ರಿಯಗಳು ವಿಶ್ರಾಂತಿಯನ್ನು ಹೊಂದಿದ್ದರೂ ಮನಸ್ಸು ವಿಶ್ರಾಂತಿಯನ್ನು ಹೊಂದಬೇಕೆಂಬ ನಿಯಮವಿಲ್ಲ. ಇದೇ ರೀತಿ ಸಮಸ್ತ ಇಂದ್ರಿಯಗಳು ಮನಸ್ಸಿನ ಮೂಲಕವೇ ಗ್ರಹಿಸುತ್ತವೆ ಎಂದು ತಿಳಿಯಬೇಕು. ಮನಸ್ಸೇ ಪ್ರಧಾನವಾಗಿ ಉಳ್ಳ ಇಂದ್ರಿಯಗಳು ಎಂದು ತಿಳಿಯಬೇಕು.

ಇಂದ್ರಿಯಾಣಾಂ ಹಿ ಸರ್ವೇಷಾಮೀಶ್ವರಂ ಮನ ಉಚ್ಯತೇ ।
ಏತದ್ ವಿಶಂತಿ ಭೂತಾನಿ ಸರ್ವಾಣೀಹ ಮಹಾಯಶಾಃ ॥೧೮॥

ಮಹಾಯಶೋವಂತನೇ, ಮನಸ್ಸನ್ನು ಎಲ್ಲ ಇಂದ್ರಿಯಗಳಿಗೂ ಒಡೆಯನೆಂದು ಹೇಳುತ್ತಾರೆ. ಜಗತ್ತಿನಲ್ಲಿ ಸಮಸ್ತ ಪ್ರಾಣಿಗಳು ಮನಸ್ಸನ್ನೇ ಆಶ್ರಯಿಸಿರುತ್ತವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ನಾಲ್ಕನೆಯ ಅಧ್ಯಾಯ

ಜನಕ-ಯಾಜ್ಞವಲ್ಕ್ಯರ ಸಂವಾದ

ಯಾಜ್ಞವಲ್ಕ್ಯಃ

ತತ್ತ್ವಾನಾಂ ಸರ್ಗಸಂಖ್ಯಾ ಚ ಕಾಲಸಂಖ್ಯಾ ತಥೈವ ಚ ।
ಮಯಾ ಪ್ರೋಕ್ತಾನುಪೂರ್ವ್ಯೇಣ ಸಂಹಾರಮಪಿ ಮೇ ಶೃಣು ॥೧॥

ಯಾಜ್ಞವಲ್ಕ್ಯ– ಜನಕರಾಜನೇ, ನಾನು ಇಲ್ಲಿಯ ತನಕ ತತ್ತ್ವಗಳ ಹೆಸರುಗಳನ್ನು, ಕಾಲದ ಸಂಖ್ಯೆಯನ್ನು ನಿನಗೆ ತಿಳಿಸಿರುತ್ತೇನೆ. ಇನ್ನು ಮುಂದೆ ಸೃಷ್ಟಿಯ ಸಂಹಾರದ ವಿಷಯವನ್ನು ತಿಳಿಸುತ್ತೇನೆ, ಕೇಳು.

ಯಥಾ ಸಂಹರತೇ ಜನ್ತೂನ್ ಸಸರ್ಜ ಚ ಪುನಃ ಪುನಃ ।
ಅನಾದಿನಿಧನೋ ಬ್ರಹ್ಮಾ ನಿತ್ಯಶ್ಚಾಕ್ಷರ ಏವ ಚ ॥೨॥

ಅನಾದಿನಿಧನನಾದ, ನಿತ್ಯನಾದ, ಅಕ್ಷರನಾದ ಬ್ರಹ್ಮನು ಹೇಗೆ ಜಂತುಗಳನ್ನು ಸಂಹರಿಸುತ್ತಾನೋ ಹಾಗೆ ಪುನಃ ಸೃಷ್ಟಿಯನ್ನು ಮಾಡುತ್ತಿರುತ್ತಾನೆ.

ಅಹಃಕ್ಷಯಮಥೋ ಬುದ್ಧ್ವಾ ನಿಶಿ ಸ್ವಪ್ನಮನಾಸ್ತಥಾ ।
ಚೋದಯಾಮಾಸ ಭಗವಾನವ್ಯಕ್ತೋಹಂಕೃತಂ ನರಮ್ ॥೩॥

ಸೃಷ್ಟಿಗೆ ಮೂಲಕಾರಣನಾದ ಬ್ರಹ್ಮನು ಹಗಲು ಕಳೆಯಿತೆಂದು, ರಾತ್ರಿಯಲ್ಲಿ ಮಲಗಬೇಕೆಂದು ಅವ್ಯಕ್ತತತ್ತ್ವನಿಯಾಮಕನಾದ ಭಗವಂತನು ಅಹಂಕಾರಾಭಿಮಾನಿ ಆದ ರುದ್ರನನ್ನು ಪ್ರಚೋದಿಸುತ್ತಾನೆ.

ತತಃ ಶತಸಹಸ್ರಾಂಶುರವ್ಯಕ್ತೇನಾಭಿಚೋದಿತಃ ।
ಕೃತ್ವಾ ದ್ವಾದಶಧಾತ್ಮಾನಮಾದಿತ್ಯೋ ಜ್ವಲದಗ್ನಿವತ್ ॥೪॥

ಬಳಿಕ ಅವ್ಯಕ್ತನಿಂದ ಚೋದಿತನಾದ, ಸಹಸ್ರಾರು ಕಿರಣಗಳುಳ್ಳ ಸೂರ್ಯನು ತನ್ನನ್ನು ಹನ್ನೆರಡು ರೂಪಗಳನ್ನಾಗಿ ವಿಭಾಗಿಸಿಕೊಂಡು ಅಗ್ನಿಯಂತೆ ಪ್ರಜ್ವಲಿಸುತ್ತಾನೆ.

ಚತುರ್ವಿಧಂ ಪ್ರಜಾಜಾಲಂ ನಿರ್ದಹತ್ಯಾಶು ತೇಜಸಾ ।
ಜರಾಯ್ವಂಡಸ್ವೇದಜಾತಮುದ್ಭಿಜ್ಜಂ ಚ ನರಾಧಿಪ ॥೫॥

ಹನ್ನೆರಡು ರೂಪಗಳಿಂದ ಪ್ರಜ್ವಲಿಸುವ ಸೂರ್ಯನು ತನ್ನ ಪ್ರಖರವಾದ ತೇಜಸ್ಸಿನಿಂದ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜಗಳೆಂಬ ನಾಲ್ಕು ಪ್ರಕಾರದ ಪ್ರಾಣಿಗಳನ್ನು ಭಸ್ಮ ಮಾಡುತ್ತಾನೆ.

ಏತದುನ್ಮೇಷಮಾತ್ರೇಣ ವಿನಿಷ್ಟಂ ಸ್ಥಾಣುಜಂಗಮಮ್ ।
ಕೂರ್ಮಪೃಷ್ಠಸಮಾ ಭೂಮಿರ್ಭವತ್ಯಥ ಸಮಂತತಃ ॥೬॥

ಕಣ್ಣಿನ ರೆಪ್ಪೆಯನ್ನು ಮಿಟುಕಿಸುವುದರೊಳಗೆ ಸ್ಥಾವರ-ಜಂಗಮಗಳೆಲ್ಲ ನಾಶ ಹೊಂದುತ್ತವೆ. ಭೂಮಿಯ ಸುತ್ತಲು ಆಮೆಯ ಬೆನ್ನಿನಂತೆ ಕಾಣಿಸುತ್ತದೆ.

ಜಗದ್ದಗ್ಧ್ವಾಮಿತಬಲಃ ಕೇವಲಂ ಜಗತೀಂ ತತಃ ।
ಅಂಭಸಾ ಬಲಿನಾ ಕ್ಷಿಪ್ರಮಾಪೂರ್ಯತ ಸಮಂತತಃ ॥೭॥

ಅಮಿತಬಲನಾದ ಭಗವಂತನು ಚರಾಚರಗಳಿಂದ ಕೂಡಿದ ಜಗತ್ತೆಲ್ಲವನ್ನೂ ಭಸ್ಮ ಮಾಡಿ ಏಕಾಕಿಯಾಗಿ ಉಳಿದ ಭೂಮಿಯನ್ನು ಪ್ರಬಲವಾದ ನೀರಿನ ಪ್ರವಾಹದಿಂದ ಬಹಳ ಬೇಗ ತುಂಬುತ್ತಾನೆ.

ತತಃ ಕಾಲಾಗ್ನಿಮಾಸಾದ್ಯ ತದಂಭೋ ಯಾತಿ ಸಂಕ್ಷಯಮ್ ।
ವಿನಷ್ಟೇऽಂಭಸಿ ರಾಜೇಂದ್ರ ಜಾಜ್ವಲೀತ್ಯನಲೋ ಮಹಾನ್ ॥೮॥

ಕಾಲಾಗ್ನಿಯ ಜ್ವಾಲೆಯಿಂದ ಅಪಾರವಾದ ಜಲರಾಶಿಯು ಇಂಗಿಹೋಗುತ್ತದೆ. ನೀರು ನಷ್ಟವಾಗಿ ಹೋದಬಳಿಕ ಭಯಂಕರವಾದ ಬೆಂಕಿಯು ಉಗ್ರರೂಪವನ್ನು ತಾಳಿ ಎಲ್ಲೆಡೆಯೂ ಝಗಮಗಿಸುತ್ತದೆ.

ತಮಪ್ರಮೇಯೋಽತಿಬಲಂ ಜ್ವಲಮಾನಂ ವಿಭಾವಸುಮ್ ।
ಊಷ್ಮಾಣಂ ಸರ್ವಭೂತಾನಾಂ ಸಪ್ತಾರ್ಚಿಷಮಥಾಂಜಸಾ ॥೯॥

ಭಕ್ಷಯಾಮಾಸ ಬಲವಾನ್ ವಾಯುರಷ್ಟಾತ್ಮಕೋ ಬಲೀ ।
ವಿಚರನ್ನಮಿತಪ್ರಾಣಸ್ತಿರ್ಯಗೂರ್ಧ್ವಮಧಸ್ತಥಾ ॥೧೦॥

ಏಳು ವಿಧದ ಜ್ವಾಲೆಗಳಿಂದ ಕೂಡಿರುವ, ಎಲ್ಲ ಪ್ರಾಣಿಗಳನ್ನು ದಹಿಸುವಂತಹ ಮಹಾಬಲನಾದ ಅಗ್ನಿಯು, ಮಹಾಬಲಿಷ್ಠನಾದ ಭಗವಾನ್ ವಾಯುವು ತನ್ನ ಎಂಟು ವಿಧವಾದ ರೂಪವನ್ನು ಧರಿಸಿ ಮೇಲೆ, ಕೆಳಗೆ, ಅಡ್ಡಲಾಗಿ ರಭಸದಿಂದ ಬೀಸುತ್ತಾ ಭಕ್ಷಿಸುತ್ತಾನೆ.

ತಮಪ್ರತಿಬಲಂ ಭೀಮಮಾಕಾಶಂ ಗ್ರಸತೇಽಽತ್ಮನಾ ।
ಆಕಾಶಮಪ್ಯತಿನದನ್ಮನೋ ಗ್ರಸತಿ ಚಾರಿಕಮ್ ॥೧೧॥

ಬಳಿಕ ಆಕಾಶವು ಅತ್ಯಂತ ಬಲಿಷ್ಠವಾದ, ಭಯಂಕರವಾದ ವಾಯುವನ್ನು ಭಕ್ಷಿಸುತ್ತದೆ. ಜೋರಾಗಿ ಶಬ್ದವನ್ನು ಮಾಡುವ ಆಕಾಶವನ್ನು ಅದಕ್ಕಿಂತಲೂ ಅಧಿಕ ಶಕ್ತಿಯನ್ನು ಹೊಂದಿದ ಮನಸ್ಸು ನುಂಗುತ್ತದೆ.

ಮನೋ ಗ್ರಸತಿ ಸರ್ವಾತ್ಮಾ ಸೋಽಹಂಕಾರಃ ಪ್ರಜಾಪತಿಃ ।
ಅಹಂಕಾರಂ ಮಹಾನಾತ್ಮಾ ಭೂತಭವ್ಯಭವಿಷ್ಯವಿತ್ ॥೧೨॥

ಭೂತ, ಭವಿಷ್ಯಗಳನ್ನು ತಿಳಿದಿರುವ ಮಹತ್ತತ್ತ್ವವು ಅಹಂಕಾರತತ್ತ್ವವನ್ನು ನುಂಗುತ್ತದೆ. ಆ ಅಹಂಕಾರನಾಮಕ ಪ್ರಜಾಪತಿಯು ಮನಸ್ಸನ್ನು ನುಂಗುತ್ತದೆ.

ತಮಪ್ಯನುಪಮಾತ್ಮಾನಂ ವಿಶ್ವಶಂಭುಃ ಪ್ರಜಾಪತಿಃ ।
ಅಣಿಮಾ ಲಘಿಮಾ ಪ್ರಾಪ್ತಿರೀಶಾನೋ ಜ್ಯೋತಿರವ್ಯಯಃ ॥೧೩॥

'ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್' ಎಂದು ಶ್ರುತಿಯು ತಿಳಿಸಿದಂತೆ ವಿಶ್ವಶಂಭು ಎನಿಸಿದ ಪ್ರಜಾಪತಿಯಾದ ನಾರಾಯಣನು ಆ ಮಹತತ್ತ್ವವನ್ನು ನುಂಗುತ್ತಾನೆ. ನಾರಾಯಣನಾದರೂ ಅಣಿಮಾ, ಲಘಿಮಾ, ಪ್ರಾಪ್ತಿ, ಈಶಾನ, ಜ್ಯೋತಿ, ಅವ್ಯಯ ಎನಿಸಿದ್ದಾನೆ.

ಸರ್ವತಃಪಾಣಿಪಾದಾಂತಃ ಸರ್ವತೋಕ್ಷಿಶಿರೋಮುಖಃ ।
ಸರ್ವತಃಶ್ರುತಿಮಾಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೧೪॥

ಹೃದಯಂ ಸರ್ವಭೂತಾನಾಂ ಪರ್ವಣೋಽಂಗುಷ್ಠಮಾತ್ರಕಃ ।
ಅನುಗ್ರಸತ್ಯನಂತಂ ಹಿ ಮಹಾತ್ಮಾ ವಿಶ್ವಮೀಶ್ವರಃ ॥೧೫॥

ಎಲ್ಲೆಡೆಯೂ ಯಾವನಿಗೆ ಕೈ-ಕಾಲುಗಳಿವೆಯೋ, ಎಲ್ಲೆಡೆಯೂ ಯಾರಿಗೆ ಕಣ್ಣುಗಳು, ಶಿರಸ್ಸುಗಳು, ಮುಖಗಳಿವೆಯೋ, ಎಲ್ಲೆಡೆಯೂ ಕಿವಿಗಳಿವೆಯೋ, ಯಾವನು ಸಮಸ್ತ ಲೋಕವನ್ನು ಆವರಿಸಿಕೊಂಡು ನಿಂತಿದ್ದಾನೋ, ಎಲ್ಲ ಪ್ರಾಣಿಗಳ ಹೃದಯದಲ್ಲಿ ಅಂಗುಷ್ಠದಷ್ಟು ಆಕಾರವನ್ನು ಹೊಂದಿ ಅಂತರ್ಯಾಮಿಯಾಗಿದ್ದಾನೋ ಅಂತಹ ಭಗವಂತನು ಮಹತ್ತತ್ತ್ವದಲ್ಲಿ ಅಡಕವಾದ ಸಮಗ್ರ ಜಗತ್ತನ್ನು ನುಂಗಿಬಿಡುತ್ತಾನೆ.

ತತಃ ಸಮಭವತ್ ಸರ್ವಮಕ್ಷಯಾವ್ಯಯಮವ್ರಣಮ್ ।
ಭೂತಭವ್ಯಮನುಷ್ಯಾಣಾಂ ಸ್ರಷ್ಟಾರಮನಘಂ ತಥಾ ॥೧೬॥

ಜಗತ್ತೆಲ್ಲವೂ ಅಕ್ಷಯನಾದ, ಅವ್ಯಯನಾದ, ಅವ್ರಣನಾದ ಪರಮಾತ್ಮನಲ್ಲಿಯೇ ಲಯವನ್ನು ಹೊಂದುತ್ತದೆ. ಭೂತ-ಭವ್ಯ-ಭವಿಷ್ಯತ್ತುಗಳ ಸೃಷ್ಟಿಕರ್ತವಾದ ನಿರ್ದುಷ್ಟನಾದ ಬ್ರಹ್ಮನ ಸೃಷ್ಟಿಯು ಇವನಿಂದಲೇ ಉಂಟಾಗುತ್ತದೆ.

ಏಷೋಽಪ್ಯಯಸ್ತೇ ರಾಜೇಂದ್ರ ಯಥಾವತ್ ಪರಿಭಾಷಿತಃ ।
ಅಧ್ಯಾತ್ಮಮಧಿಭೂತಂ ಚ ಅಧಿದೈವಂ ಚ ಶ್ರೂಯತಾಮ್ ॥೧೭॥

ರಾಜೇಂದ್ರನೇ, ಭಗವಂತನು ನಡೆಸುವ ಸಂಹಾರ ಕ್ರಮವನ್ನು ಯಥಾವತ್ತಾಗಿ ಹೇಳಿರುತ್ತೇನೆ. ಮುಂದೆ ಅಧ್ಯಾತ್ಮ, ಅಧಿಭೂತ, ಅಧಿದೈವಗಳ ವಿಷಯವನ್ನು ಕೇಳಿಸಿಕೊ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವ್ಯೆಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಚತುಶ್ಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೈದನೆಯ ಅಧ್ಯಾಯ

ಜನಕ-ಯಾಜ್ಞವಲ್ಕ್ಯ ಸಂವಾದ

ಯಾಜ್ಞವಲ್ಕ್ಯಃ

ಪಾದಾವಧ್ಯಾತ್ಮಮಿತ್ಯಾಹುರ್ಬ್ರಹ್ಮಣಾಸ್ತತ್ತ್ವದರ್ಶಿನಃ ।
ಗಂತವ್ಯಮಧಿಭೂತಂ ಚ ವಿಷ್ಣುಸ್ತತ್ರಾಧಿದೈವತಮ್ ॥೧॥

ಯಾಜ್ಞವಲ್ಕ್ಯ– ಜನಕರಾಜನೇ, ಎರಡು ಪಾದಗಳನ್ನು ತತ್ತ್ವವನ್ನು ತಿಳಿದ ಬ್ರಾಹ್ಮಣರು ಅಧ್ಯಾತ್ಮವೆನ್ನುತ್ತಾರೆ. ಹೋಗಬೇಕಾದ ಸ್ಥಾನವು ಅಧಿಭೂತವೆಂದು, ವಿಷ್ಣುವು ಅಧಿದೈವತವೆಂದು ಕರೆಸಿಕೊಳ್ಳುತ್ತಾನೆ.

ಪಾಯುರಧ್ಯಾತ್ಮಮಿತ್ಯಾಹುರ್ಯಥಾತತ್ತ್ವಾರ್ಥದರ್ಶಿನಃ ।
ವಿಸರ್ಗಮಧಿಭೂತಂ ಚ ಮಿತ್ರಸ್ತತ್ರಾಧಿದೈವತಮ್ ॥೨॥

ಯಥಾವತ್ತಾಗಿ ತತ್ತಾ ್ವರ್ಥಗಳನ್ನು ನೋಡುವ ಅಧ್ಯಾತ್ಮವಿದರು ಪಾಯುವನ್ನು ಅಧ್ಯಾತ್ಮವೆನ್ನುತ್ತಾರೆ. ಪೃಥಿವಿಯ ಅನ್ನವಿಕಾರಾತ್ಮಕವಾದ ಮಲತ್ಯಾಗವನ್ನು ಅಧಿಭೂತ ಎನ್ನುತ್ತಾರೆ. ಪಾಯುವಿಗೆ ಮಿತ್ರನು ಅಧಿದೈವತೆ ಎನಿಸಿದ್ದಾನೆ.

ಉಪಸ್ಥೋऽಧ್ಯಾತ್ಮಮಿತ್ಯಾಹುರ್ಯಥಾಯೋಗನಿದರ್ಶನಮ್ ।
ಅಧಿಭೂತಂ ತಥಾನಂದೋ ದೈವತಂ ಚ ಪ್ರಜಾಪತಿಃ ॥೩॥

ಯೋಗಮತವನ್ನು ತಿಳಿದಿರುವ ವಿದ್ವಾಂಸರು ಜನನೇಂದ್ರಿಯವನ್ನು ಅಧ್ಯಾತ್ಮ ಎನ್ನುತ್ತಾರೆ. ಆನಂದವೆನಿಸಿದ ರೇತಸ್ಸು ಅಧಿಭೂತ ಎನಿಸಿದೆ. ಇದಕ್ಕೆ ಪ್ರಜಾಪತಿಯು ಅಧಿದೇವತೆಯಾಗಿದ್ದಾನೆ.

ಹಸ್ತಾವಧ್ಯಾತ್ಮಮಿತ್ಯಾಹುರ್ಯಥಾಸಾಂಖ್ಯನಿದರ್ಶನಮ್ ।
ಕರ್ತವ್ಯಮಧಿಭೂತಂ ತು ಇಂದ್ರಸ್ತತ್ರಾಧಿದೈವತಮ್ ॥೪॥

ಸಾಂಖ್ಯದರ್ಶಿಗಳು ಕೈಗಳನ್ನು ಅಧ್ಯಾತ್ಮ ಎನ್ನುತ್ತಾರೆ. ಕರ್ತವ್ಯವನ್ನು ಅಧಿಭೂತ ಎನ್ನುತ್ತಾರೆ. ಈ ಕೈಗಳಿಗೆ ಇಂದ್ರನು ಅಧಿದೇವತೆಯಾಗಿದ್ದಾನೆ.

ವಾಗಧ್ಯಾತ್ಮಮಿತಿ ಪ್ರಾಹುರ್ಯಥಾಶ್ರುತಿನಿದರ್ಶನಮ್ ।
ವಕ್ತವ್ಯಮಧಿಭೂತಂ ತು ವಹ್ನಿಸ್ತತ್ರಾಧಿದೈವತಮ್ ॥೫॥

ವೇದಾರ್ಥಜ್ಞರಾದ ಪಂಡಿತರು ಮಾತನ್ನು ಅಧ್ಯಾತ್ಮವೆನ್ನುತ್ತಾರೆ. ಹೇಳಬೇಕಾದ ಶಬ್ದವನ್ನು ಅಧಿಭೂತ ಎನ್ನುತ್ತಾರೆ. ಅಗ್ನಿಯು ಈ ವಾಗಿಂದ್ರಿಯಕ್ಕೆ ಅಧಿದೇವತೆ ಆಗಿದ್ದಾನೆ.

ಚಕ್ಷುರಧ್ಯಾತ್ಮಮಿತ್ಯಾಹುರ್ಯಥಾಶ್ರುತಿನಿದರ್ಶನಮ್ ।
ರೂಪಮತ್ರಾಧಿಭೂತಂ ತು ಸೂರ್ಯಸ್ತತ್ರಾಧಿದೈವತಮ್ ॥೬॥

ವೇದದ ನಿದರ್ಶನವನ್ನು ಹೇಳುವ ಜ್ಞಾನಿಗಳು ಕಣ್ಣನ್ನು ಅಧ್ಯಾತ್ಮವೆನ್ನುತ್ತಾರೆ. ರೂಪವನ್ನು ಅಧಿಭೂತ ಎನ್ನುತ್ತಾರೆ. ಕಣ್ಣಿಗೆ ಸೂರ್ಯನು ಅಧಿದೇವತೆಯಾಗಿದ್ದಾನೆ.

ಶ್ರೋತ್ರಮಧ್ಯಾತ್ಮಮಿತ್ಯಾಹುರ್ಯಥಾಶ್ರುತಿನಿದರ್ಶನಮ್ ।
ಶಬ್ದಸ್ತತ್ರಾಧಿಭೂತಂ ತು ದಿಶಸ್ತತ್ರಾಧಿದೈವತಮ್ ॥೭॥

ವೇದ ಸಿದ್ಧಾಂತಜ್ಞರು ಕಿವಿಯನ್ನು ಅಧ್ಯಾತ್ಮವೆನ್ನುತ್ತಾರೆ. ಶಬ್ದವನ್ನು ಅಧಿಭೂತ ಎನ್ನುತ್ತಾರೆ. ದಿಗಭಿಮಾನಿಗಳೇ ಶ್ರೋತ್ರೇಂದ್ರಿಯಕ್ಕೆ ಅಧಿದೇವತೆಗಳಾಗಿದ್ದಾರೆ.

ಜಿಹ್ವಾಮಧ್ಯಾತ್ಮಮಿತ್ಯಾಹುರ್ಯಥಾತತ್ತ್ವನಿದರ್ಶನಮ್ ।
ರಸ ಏವಾಧಿಭೂತಂ ತು ಆಪಸ್ತತ್ರಾಧಿದೈವತಮ್ ॥೮॥

ವೇದನಿದರ್ಶನವನ್ನು ಹೇಳುವ ವಿದ್ವಾಂಸರು ಜಿಹ್ವೆಯನ್ನು ಅಧ್ಯಾತ್ಮವೆನ್ನುತ್ತಾರೆ. ರಸವನ್ನು ಅಧಿಭೂತವೆಂದೂ, ಅಪ್ ಅಭಿಮಾನಿಯಾದ ವರುಣನನ್ನು ಜಿಹ್ವೆಗೆ ಅಧಿದೇವತೆ ಎಂದು ಹೇಳುತ್ತಾರೆ.

ಘ್ರಾಣಮಧ್ಯಾತ್ಮಮಿತ್ಯಾಹುರ್ಯಥಾಶ್ರುತಿನಿದರ್ಶನಮ್ ।
ಗಂಧ ಏವಾಧಿಭೂತಂ ತು ಪೃಥಿವೀ ಚಾಧಿದೈವತಮ್ ॥೯॥

ವೇದದೃಷ್ಟಾಂತವನ್ನು ಹೇಳುವ ವಿದ್ವಾಂಸರು ಘ್ರಾಣೇಂದ್ರಿಯವನ್ನು ಅಧ್ಯಾತ್ಮವೆಂದು, ಗಂಧವನ್ನು ಅಧಿಭೂತವೆಂದು, ಪೃಥಿವಿಗೆ ಅಭಿಮಾನಿನಿಯಾದ ಪಾರ್ವತಿಯನ್ನು ಅಧಿದೇವತೆ ಎಂದು ಹೇಳುತ್ತಾರೆ.

ತ್ವಗಧ್ಯಾತ್ಮಮಿತಿ ಪ್ರಾಹುಸ್ತತ್ತ್ವಬುದ್ಧಿವಿಶಾರದಾಃ ।
ಸ್ಪರ್ಶ ಏವಾಧಿಭೂತಂ ತು ಪವನಶ್ಚಾಧಿದೈವತಮ್ ॥೧೦॥

ತತ್ತ್ವಜ್ಞರಾದ ಜ್ಞಾನಿಗಳು ಚರ್ಮವನ್ನು ಅಧ್ಯಾತ್ಮವೆಂದು, ಸ್ಪರ್ಶವನ್ನು ಅಧಿಭೂತ ಎಂದು, ಅಹಂಕಾರಿಕ ವಾಯುವನ್ನು ಅಧಿದೇವತೆ ಎಂದು ಹೇಳುತ್ತಾರೆ.

ಮನೋಽಧ್ಯಾತ್ಮಮಿತಿ ಪ್ರಾಹುರ್ಯಥಾಶ್ರುತಿನಿದರ್ಶನಮ್ ।
ಮಂತವ್ಯಮಧಿಭೂತಂ ತು ಚಂದ್ರಮಾಶ್ಚಾಧಿದೈವತಮ್ ॥೧೧॥

ಶಾಸ್ತ್ರಜ್ಞರಾದ ವಿದ್ವಾಂಸರು ಮನಸ್ಸನ್ನು ಅಧ್ಯಾತ್ಮವೆಂದು, ಮನನ ಮಾಡಬೇಕಾದ ವಿಷಯವನ್ನು ಅಧಿಭೂತವೆಂದು, ಮನಸ್ಸಿಗೆ ಅಭಿಮಾನಿಯಾದ ಚಂದ್ರನನ್ನು ಅಧಿದೇವತೆ ಎಂದು ಹೇಳುತ್ತಾರೆ.

ಅಹಂಕಾರಿಕಮಧ್ಯಾತ್ಮಮಾಹುಸ್ತತ್ತ್ವನಿದರ್ಶನಮ್ ।
ಅಭಿಮಾನ್ಯಧಿಭೂತಂ ತು ಭವಸ್ತತ್ರಾಧಿದೈವತಮ್ ॥೧೨॥

ತತ್ತ್ವನಿದರ್ಶನವನ್ನು ಹೇಳುವ ವಿದ್ವಾಂಸರು ಅಹಂಕಾರವನ್ನೇ ಅಧ್ಯಾತ್ಮವೆಂದು, ಅಭಿಮಾನಕ್ಕೆ ವಿಷಯವಾದ ಧನ-ಕನಕಾದಿಗಳನ್ನು ಅಧಿಭೂತವೆಂದು, ರುದ್ರದೇವನನ್ನು ಈ ಅಹಂಕಾರತತ್ತ್ವಕ್ಕೆ ಅಧಿದೇವತೆ ಎಂದು ಹೇಳುತ್ತಾರೆ.

ಬುದ್ಧಿರಧ್ಯಾತ್ಮಮಿತ್ಯಾಹುರ್ಯಥಾವೇದನಿದರ್ಶನಮ್ ।
ಬೋದ್ಧವ್ಯಮಧಿಭೂತಂ ತು ಕ್ಷೇತ್ರಜ್ಞೋಽತ್ರಾಧಿದೈವತಮ್ ॥೧೩॥

ಪರತತ್ತ್ವವನ್ನು ಯಥಾರ್ಥವಾಗಿ ಬಲ್ಲವರು ಬುದ್ಧಿಯನ್ನು ಅಧ್ಯಾತ್ಮವೆಂದು, ತಿಳಿಯಬೇಕಾದುದನ್ನು ಅಧಿಭೂತವೆಂದು, ಕ್ಷೇತ್ರಜ್ಞನಾದ ಚತುರ್ಮುಖ ಬ್ರಹ್ಮನನ್ನು ಅಧಿದೇವತೆ ಎಂದು ಹೇಳುತ್ತಾರೆ.

ಏಷಾ ತೇ ವ್ಯಕ್ತತೋ ರಾಜನ್ ವಿಭೂತಿರನುವರ್ಣಿತಾ ।
ಆದೌ ಮಧ್ಯೇ ತಥಾ ಚಾಂತೇ ಯಥಾತತ್ತ್ವೇನ ತತ್ತ್ವವಿತ್ ॥ ೧೪॥

ತತ್ತ್ವವಿದನೇ, ನಿನಗೆ ಇಷ್ಟು ಹೊತ್ತು ಸೃಷ್ಟಿ-ಸ್ಥಿತಿ-ಲಯಗಳಲ್ಲಿ ಪ್ರಕಾಶವನ್ನು ಹೊಂದುವ ಗುಣಗಳನ್ನು, ವಿಭೂತಿಗಳನ್ನು ಯಥಾರ್ಥವಾಗಿ ತಿಳಿಸಿದ್ದೇನೆ.

ಪ್ರಕೃತಿರ್ಗುಣಾನ್ ವಿಕುರುತೇ ಸ್ವಚ್ಛಂದೇನಾತ್ಮಕಾಮ್ಯಯಾ ।
ಕ್ರೀಡಾರ್ಥಂ ತು ಮಹಾರಾಜ ಶತಶೋಥ ಸಹಸ್ರಶಃ ॥೧೫॥

ಪ್ರಕೃತಿಯು ತನಗೆ ಮನಬಂದಂತೆ ಸ್ವಚ್ಛಂದವಾಗಿ ವಿಹರಿಸಲು ತನ್ನ ಇಚ್ಛೆಯಿಂದಲೇ ತನ್ನ ಗುಣಗಳಾದ ಸತ್ತ್ವ-ರಜಸ್-ತಮೋಗುಣಗಳನ್ನು ಅನಂತ ಸಂಖ್ಯೆಯಲ್ಲಿ ಸೃಷ್ಟಿಸುತ್ತದೆ.

ಯಥಾ ದೀಪಸಹಸ್ರಾಣಿ ದೀಪಾನ್ಮರ್ತ್ಯಾಃ ಪ್ರಕುರ್ವತೇ ।
ಪ್ರಕೃತಿಸ್ತಥಾ ವಿಕುರುತೇ ಪುರುಷಸ್ಯ ಗುಣಾನ್ ಬಹೂನ್ ॥೧೬॥

ಯಾವ ರೀತಿ ಒಂದು ದೀಪದಿಂದ ಸಾವಿರಾರು ದೀಪಗಳನ್ನು ಮನುಷ್ಯನು ಬೆಳಗುತ್ತಾನೋ ಇದರಂತೆ ಪ್ರಕೃತಿಯೂ ಪುರುಷನ ದೃಷ್ಟಿಯಿಂದ ಒಂದು ಗುಣದಿಂದ ಅನೇಕ ಗುಣಗಳನ್ನು ಸೃಷ್ಟಿಸುತ್ತದೆ.

ಸತ್ತ್ವಮಾನಂದ ಉದ್ರೇಕಃ ಪ್ರೀತಿಃ ಪ್ರಾಕಾಶ್ಯಮೇವ ಚ ।
ಸುಖಂ ಶುದ್ಧಿತ್ವಮಾರೋಗ್ಯಂ ಸಂತೋಷಃ ಶ್ರದ್ದಧಾನತಾ ॥೧೭॥

ಅಕಾರ್ಪಣ್ಯಮಸಂರಂಭಃ ಕ್ಷಮಾ ಧೃತಿರಹಿಂಸತಾ ।
ಸಮತಾ ಸತ್ಯಮಾನೃಣ್ಯಂ ಮಾರ್ದವಂ ಹ್ರೀರಚಾಪಲಮ್ ॥೧೮॥

ಶೌಚಮಾರ್ಜವಮಾಚಾರಮಲೌಲ್ಯಂ ಹೃದ್ಯಸಂಭ್ರಮಃ ।
ಇಷ್ಟಾನಿಷ್ಟವಿಯೋಗಾನಾಂ ಕೃತಾನಾಮವಿಕತ್ಥನಮ್ ॥೧೯॥

ದಾನೇನ ಚಾನುಗ್ರಹಣಮಸ್ಪೃಹಾರ್ಥೇ ಪರಾರ್ಥತಾ ।
ಸರ್ವಭೂತದಯಾ ಚೈವ ಸತ್ತ್ವಸ್ಯೈತೇ ಗುಣಾಃ ಸ್ಮೃತಾಃ ॥೨೦॥

ಅಂತಃಸತ್ತ್ವ, ಆನಂದ, ಪ್ರೀತಿ, ಉತ್ಕರ್ಷ, ಜ್ಞಾನಶಕ್ತಿ, ಸುಖ, ಶುದ್ಧಿ, ಆರೋಗ್ಯ, ಸಂತೋಷ, ಶ್ರದ್ಧೆ, ಅಕಾರ್ಪಣ್ಯ, ದೀನನಾಗಿ ಇಲ್ಲದಿರುವುದು, ಕ್ರೋಧವಿಲ್ಲದಿರುವಿಕೆ, ಕ್ಷಮೆ, ಧೈರ್ಯ, ಅಹಿಂಸೆ, ಸಮತೆ, ಸತ್ಯ, ಯಾರ ಋಣವನ್ನು ಹೊತ್ತುಕೊಳ್ಳದಿರುವುದು, ಮೃದುತ್ವ, ಲಜ್ಜೆ, ಚಂಚಲತೆ ಹೊಂದದಿರುವಿಕೆ, ಶೌಚ, ಸರಳತೆ, ಸದಾಚಾರ, ವಿಷಯಗಳಲ್ಲಿ ಅಭಿಲಾಷೆ ಇಲ್ಲದಿರುವಿಕೆ, ಇಷ್ಟಪ್ರಾಪ್ತಿಯಾಗಿ ಅನಿಷ್ಟ ನಿವಾರಣೆಯಾದರೂ ಅಥವಾ ಇಷ್ಟವು ವಿಯೋಗವಾಗಿ ಅನಿಷ್ಟಪ್ರಾಪ್ತಿಯಾದರೂ

ತ್ವಗಧ್ಯಾತ್ಮಮಿತಿ ಪ್ರಾಹುಸ್ತತ್ತ್ವಬುದ್ಧಿವಿಶಾರದಾಃ ।
ಸ್ಪರ್ಶ ಏವಾಧಿಭೂತಂ ತು ಪವನಶ್ಚಾಧಿದೈವತಮ್ ॥೧೦॥

ತತ್ತ್ವಜ್ಞರಾದ ಜ್ಞಾನಿಗಳು ಚರ್ಮವನ್ನು ಅಧ್ಯಾತ್ಮವೆಂದು, ಸ್ಪರ್ಶವನ್ನು ಅಧಿಭೂತ ಎಂದು, ಅಹಂಕಾರಿಕ ವಾಯುವನ್ನು ಅಧಿದೇವತೆ ಎಂದು ಹೇಳುತ್ತಾರೆ.

ಮನೋಽಧ್ಯಾತ್ಮಮಿತಿ ಪ್ರಾಹುರ್ಯಥಾಶ್ರುತಿನಿದರ್ಶನಮ್ ।
ಮಂತವ್ಯಮಧಿಭೂತಂ ತು ಚಂದ್ರಮಾಶ್ಚಾಧಿದೈವತಮ್ ॥೧೧॥

ಶಾಸ್ತ್ರಜ್ಞರಾದ ವಿದ್ವಾಂಸರು ಮನಸ್ಸನ್ನು ಅಧ್ಯಾತ್ಮವೆಂದು, ಮನನ ಮಾಡಬೇಕಾದ ವಿಷಯವನ್ನು ಅಧಿಭೂತವೆಂದು, ಮನಸ್ಸಿಗೆ ಅಭಿಮಾನಿಯಾದ ಚಂದ್ರನನ್ನು ಅಧಿದೇವತೆ ಎಂದು ಹೇಳುತ್ತಾರೆ.

ಅಹಂಕಾರಿಕಮಧ್ಯಾತ್ಮಮಾಹುಸ್ತತ್ತ್ವನಿದರ್ಶನಮ್ ।
ಅಭಿಮಾನ್ಯಧಿಭೂತಂ ತು ಭವಸ್ತತ್ರಾಧಿದೈವತಮ್ ॥೧೨॥

ತತ್ತ್ವನಿದರ್ಶನವನ್ನು ಹೇಳುವ ವಿದ್ವಾಂಸರು ಅಹಂಕಾರವನ್ನೇ ಅಧ್ಯಾತ್ಮವೆಂದು, ಅಭಿಮಾನಕ್ಕೆ ವಿಷಯವಾದ ಧನ-ಕನಕಾದಿಗಳನ್ನು ಅಧಿಭೂತವೆಂದು, ರುದ್ರದೇವನನ್ನು ಈ ಅಹಂಕಾರತತ್ತ್ವಕ್ಕೆ ಅಧಿದೇವತೆ ಎಂದು ಹೇಳುತ್ತಾರೆ.

ಬುದ್ಧಿರಧ್ಯಾತ್ಮಮಿತ್ಯಾಹುರ್ಯಥಾವೇದನಿದರ್ಶನಮ್ ।
ಬೋದ್ಧವ್ಯಮಧಿಭೂತಂ ತು ಕ್ಷೇತ್ರಜ್ಞೋಽತ್ರಾಧಿದೈವತಮ್ ॥೧೩॥

ಪರತತ್ತ್ವವನ್ನು ಯಥಾರ್ಥವಾಗಿ ಬಲ್ಲವರು ಬುದ್ಧಿಯನ್ನು ಅಧ್ಯಾತ್ಮವೆಂದು, ತಿಳಿಯಬೇಕಾದುದನ್ನು ಅಧಿಭೂತವೆಂದು, ಕ್ಷೇತ್ರಜ್ಞನಾದ ಚತುರ್ಮುಖ ಬ್ರಹ್ಮನನ್ನು ಅಧಿದೇವತೆ ಎಂದು ಹೇಳುತ್ತಾರೆ.

ಏಷಾ ತೇ ವ್ಯಕ್ತತೋ ರಾಜನ್ ವಿಭೂತಿರನುವರ್ಣಿತಾ ।
ಆದೌ ಮಧ್ಯೇ ತಥಾ ಚಾಂತೇ ಯಥಾತತ್ತ್ವೇನ ತತ್ತ್ವವಿತ್ ॥ ೧೪॥

ತತ್ತ್ವವಿದನೇ, ನಿನಗೆ ಇಷ್ಟು ಹೊತ್ತು ಸೃಷ್ಟಿ-ಸ್ಥಿತಿ-ಲಯಗಳಲ್ಲಿ ಪ್ರಕಾಶವನ್ನು ಹೊಂದುವ ಗುಣಗಳನ್ನು, ವಿಭೂತಿಗಳನ್ನು ಯಥಾರ್ಥವಾಗಿ ತಿಳಿಸಿದ್ದೇನೆ.

ಪ್ರಕೃತಿರ್ಗುಣಾನ್ ವಿಕುರುತೇ ಸ್ವಚ್ಛಂದೇನಾತ್ಮಕಾಮ್ಯಯಾ ।
ಕ್ರೀಡಾರ್ಥಂ ತು ಮಹಾರಾಜ ಶತಶೋಥ ಸಹಸ್ರಶಃ ॥೧೫॥

ಪ್ರಕೃತಿಯು ತನಗೆ ಮನಬಂದಂತೆ ಸ್ವಚ್ಛಂದವಾಗಿ ವಿಹರಿಸಲು ತನ್ನ ಇಚ್ಛೆಯಿಂದಲೇ ತನ್ನ ಗುಣಗಳಾದ ಸತ್ತ್ವ-ರಜಸ್-ತಮೋಗುಣಗಳನ್ನು ಅನಂತ ಸಂಖ್ಯೆಯಲ್ಲಿ ಸೃಷ್ಟಿಸುತ್ತದೆ.

ಯಥಾ ದೀಪಸಹಸ್ರಾಣಿ ದೀಪಾನ್ಮರ್ತ್ಯಾಃ ಪ್ರಕುರ್ವತೇ ।
ಪ್ರಕೃತಿಸ್ತಥಾ ವಿಕುರುತೇ ಪುರುಷಸ್ಯ ಗುಣಾನ್ ಬಹೂನ್ ॥೧೬॥

ಯಾವ ರೀತಿ ಒಂದು ದೀಪದಿಂದ ಸಾವಿರಾರು ದೀಪಗಳನ್ನು ಮನುಷ್ಯನು ಬೆಳಗುತ್ತಾನೋ ಇದರಂತೆ ಪ್ರಕೃತಿಯೂ ಪುರುಷನ ದೃಷ್ಟಿಯಿಂದ ಒಂದು ಗುಣದಿಂದ ಅನೇಕ ಗುಣಗಳನ್ನು ಸೃಷ್ಟಿಸುತ್ತದೆ.

ಸತ್ತ್ವಮಾನಂದ ಉದ್ರೇಕಃ ಪ್ರೀತಿಃ ಪ್ರಾಕಾಶ್ಯಮೇವ ಚ ।
ಸುಖಂ ಶುದ್ಧಿತ್ವಮಾರೋಗ್ಯಂ ಸಂತೋಷಃ ಶ್ರದ್ದಧಾನತಾ ॥೧೭॥

ಅಕಾರ್ಪಣ್ಯಮಸಂರಂಭಃ ಕ್ಷಮಾ ಧೃತಿರಹಿಂಸತಾ ।
ಸಮತಾ ಸತ್ಯಮಾನೃಣ್ಯಂ ಮಾರ್ದವಂ ಹ್ರೀರಚಾಪಲಮ್ ॥೧೮॥

ಶೌಚಮಾರ್ಜವಮಾಚಾರಮಲೌಲ್ಯಂ ಹೃದ್ಯಸಂಭ್ರಮಃ ।
ಇಷ್ಟಾನಿಷ್ಟವಿಯೋಗಾನಾಂ ಕೃತಾನಾಮವಿಕತ್ಥನಮ್ ॥೧೯॥

ದಾನೇನ ಚಾನುಗ್ರಹಣಮಸ್ಪೃಹಾರ್ಥೇ ಪರಾರ್ಥತಾ ।
ಸರ್ವಭೂತದಯಾ ಚೈವ ಸತ್ತ್ವಸ್ಯೈತೇ ಗುಣಾಃ ಸ್ಮೃತಾಃ ॥೨೦॥

ಅಂತಃಸತ್ತ್ವ, ಆನಂದ, ಪ್ರೀತಿ, ಉತ್ಕರ್ಷ, ಜ್ಞಾನಶಕ್ತಿ, ಸುಖ, ಶುದ್ಧಿ, ಆರೋಗ್ಯ, ಸಂತೋಷ, ಶ್ರದ್ಧೆ, ಅಕಾರ್ಪಣ್ಯ, ದೀನನಾಗಿ ಇಲ್ಲದಿರುವುದು, ಕ್ರೋಧವಿಲ್ಲದಿರುವಿಕೆ, ಕ್ಷಮೆ, ಧೈರ್ಯ, ಅಹಿಂಸೆ, ಸಮತೆ, ಸತ್ಯ, ಯಾರ ಋಣವನ್ನು ಹೊತ್ತುಕೊಳ್ಳದಿರುವುದು, ಮೃದುತ್ವ, ಲಜ್ಜೆ, ಚಂಚಲತೆ ಹೊಂದದಿರುವಿಕೆ, ಶೌಚ, ಸರಳತೆ, ಸದಾಚಾರ, ವಿಷಯಗಳಲ್ಲಿ ಅಭಿಲಾಷೆ ಇಲ್ಲದಿರುವಿಕೆ, ಇಷ್ಟಪ್ರಾಪ್ತಿಯಾಗಿ ಅನಿಷ್ಟ ನಿವಾರಣೆಯಾದರೂ ಅಥವಾ ಇಷ್ಟವು ವಿಯೋಗವಾಗಿ ಅನಿಷ್ಟಪ್ರಾಪ್ತಿಯಾದರೂ

ತ್ವಗಧ್ಯಾತ್ಮಮಿತಿ ಪ್ರಾಹುಸ್ತತ್ತ್ವಬುದ್ಧಿವಿಶಾರದಾಃ ।
ಸ್ಪರ್ಶ ಏವಾಧಿಭೂತಂ ತು ಪವನಶ್ಚಾಧಿದೈವತಮ್ ॥೧೦॥

ತತ್ತ್ವಜ್ಞರಾದ ಜ್ಞಾನಿಗಳು ಚರ್ಮವನ್ನು ಅಧ್ಯಾತ್ಮವೆಂದು, ಸ್ಪರ್ಶವನ್ನು ಅಧಿಭೂತ ಎಂದು, ಅಹಂಕಾರಿಕ ವಾಯುವನ್ನು ಅಧಿದೇವತೆ ಎಂದು ಹೇಳುತ್ತಾರೆ.

ಮನೋಽಧ್ಯಾತ್ಮಮಿತಿ ಪ್ರಾಹುರ್ಯಥಾಶ್ರುತಿನಿದರ್ಶನಮ್ ।
ಮಂತವ್ಯಮಧಿಭೂತಂ ತು ಚಂದ್ರಮಾಶ್ಚಾಧಿದೈವತಮ್ ॥೧೧॥

ಶಾಸ್ತ್ರಜ್ಞರಾದ ವಿದ್ವಾಂಸರು ಮನಸ್ಸನ್ನು ಅಧ್ಯಾತ್ಮವೆಂದು, ಮನನ ಮಾಡಬೇಕಾದ ವಿಷಯವನ್ನು ಅಧಿಭೂತವೆಂದು, ಮನಸ್ಸಿಗೆ ಅಭಿಮಾನಿಯಾದ ಚಂದ್ರನನ್ನು ಅಧಿದೇವತೆ ಎಂದು ಹೇಳುತ್ತಾರೆ.

ಅಹಂಕಾರಿಕಮಧ್ಯಾತ್ಮಮಾಹುಸ್ತತ್ತ್ವನಿದರ್ಶನಮ್ ।
ಅಭಿಮಾನ್ಯಧಿಭೂತಂ ತು ಭವಸ್ತತ್ರಾಧಿದೈವತಮ್ ॥೧೨॥

ತತ್ತ್ವನಿದರ್ಶನವನ್ನು ಹೇಳುವ ವಿದ್ವಾಂಸರು ಅಹಂಕಾರವನ್ನೇ ಅಧ್ಯಾತ್ಮವೆಂದು, ಅಭಿಮಾನಕ್ಕೆ ವಿಷಯವಾದ ಧನ-ಕನಕಾದಿಗಳನ್ನು ಅಧಿಭೂತವೆಂದು, ರುದ್ರದೇವನನ್ನು ಈ ಅಹಂಕಾರತತ್ತ್ವಕ್ಕೆ ಅಧಿದೇವತೆ ಎಂದು ಹೇಳುತ್ತಾರೆ.

ಬುದ್ಧಿರಧ್ಯಾತ್ಮಮಿತ್ಯಾಹುರ್ಯಥಾವೇದನಿದರ್ಶನಮ್ ।
ಬೋದ್ಧವ್ಯಮಧಿಭೂತಂ ತು ಕ್ಷೇತ್ರಜ್ಞೋಽತ್ರಾಧಿದೈವತಮ್ ॥೧೩॥

ಪರತತ್ತ್ವವನ್ನು ಯಥಾರ್ಥವಾಗಿ ಬಲ್ಲವರು ಬುದ್ಧಿಯನ್ನು ಅಧ್ಯಾತ್ಮವೆಂದು, ತಿಳಿಯಬೇಕಾದುದನ್ನು ಅಧಿಭೂತವೆಂದು, ಕ್ಷೇತ್ರಜ್ಞನಾದ ಚತುರ್ಮುಖ ಬ್ರಹ್ಮನನ್ನು ಅಧಿದೇವತೆ ಎಂದು ಹೇಳುತ್ತಾರೆ.

ಏಷಾ ತೇ ವ್ಯಕ್ತತೋ ರಾಜನ್ ವಿಭೂತಿರನುವರ್ಣಿತಾ ।
ಆದೌ ಮಧ್ಯೇ ತಥಾ ಚಾಂತೇ ಯಥಾತತ್ತ್ವೇನ ತತ್ತ್ವವಿತ್ ॥ ೧೪॥

ತತ್ತ್ವವಿದನೇ, ನಿನಗೆ ಇಷ್ಟು ಹೊತ್ತು ಸೃಷ್ಟಿ-ಸ್ಥಿತಿ-ಲಯಗಳಲ್ಲಿ ಪ್ರಕಾಶವನ್ನು ಹೊಂದುವ ಗುಣಗಳನ್ನು, ವಿಭೂತಿಗಳನ್ನು ಯಥಾರ್ಥವಾಗಿ ತಿಳಿಸಿದ್ದೇನೆ.

ಪ್ರಕೃತಿರ್ಗುಣಾನ್ ವಿಕುರುತೇ ಸ್ವಚ್ಛಂದೇನಾತ್ಮಕಾಮ್ಯಯಾ ।
ಕ್ರೀಡಾರ್ಥಂ ತು ಮಹಾರಾಜ ಶತಶೋಥ ಸಹಸ್ರಶಃ ॥೧೫॥

ಪ್ರಕೃತಿಯು ತನಗೆ ಮನಬಂದಂತೆ ಸ್ವಚ್ಛಂದವಾಗಿ ವಿಹರಿಸಲು ತನ್ನ ಇಚ್ಛೆಯಿಂದಲೇ ತನ್ನ ಗುಣಗಳಾದ ಸತ್ತ್ವ-ರಜಸ್-ತಮೋಗುಣಗಳನ್ನು ಅನಂತ ಸಂಖ್ಯೆಯಲ್ಲಿ ಸೃಷ್ಟಿಸುತ್ತದೆ.

ಯಥಾ ದೀಪಸಹಸ್ರಾಣಿ ದೀಪಾನ್ಮರ್ತ್ಯಾಃ ಪ್ರಕುರ್ವತೇ ।
ಪ್ರಕೃತಿಸ್ತಥಾ ವಿಕುರುತೇ ಪುರುಷಸ್ಯ ಗುಣಾನ್ ಬಹೂನ್ ॥೧೬॥

ಯಾವ ರೀತಿ ಒಂದು ದೀಪದಿಂದ ಸಾವಿರಾರು ದೀಪಗಳನ್ನು ಮನುಷ್ಯನು ಬೆಳಗುತ್ತಾನೋ ಇದರಂತೆ ಪ್ರಕೃತಿಯೂ ಪುರುಷನ ದೃಷ್ಟಿಯಿಂದ ಒಂದು ಗುಣದಿಂದ ಅನೇಕ ಗುಣಗಳನ್ನು ಸೃಷ್ಟಿಸುತ್ತದೆ.

ಸತ್ತ್ವಮಾನಂದ ಉದ್ರೇಕಃ ಪ್ರೀತಿಃ ಪ್ರಾಕಾಶ್ಯಮೇವ ಚ ।
ಸುಖಂ ಶುದ್ಧಿತ್ವಮಾರೋಗ್ಯಂ ಸಂತೋಷಃ ಶ್ರದ್ದಧಾನತಾ ॥೧೭॥

ಅಕಾರ್ಪಣ್ಯಮಸಂರಂಭಃ ಕ್ಷಮಾ ಧೃತಿರಹಿಂಸತಾ ।
ಸಮತಾ ಸತ್ಯಮಾನೃಣ್ಯಂ ಮಾರ್ದವಂ ಹ್ರೀರಚಾಪಲಮ್ ॥೧೮॥

ಶೌಚಮಾರ್ಜವಮಾಚಾರಮಲೌಲ್ಯಂ ಹೃದ್ಯಸಂಭ್ರಮಃ ।
ಇಷ್ಟಾನಿಷ್ಟವಿಯೋಗಾನಾಂ ಕೃತಾನಾಮವಿಕತ್ಥನಮ್ ॥೧೯॥

ದಾನೇನ ಚಾನುಗ್ರಹಣಮಸ್ಪೃಹಾರ್ಥೇ ಪರಾರ್ಥತಾ ।
ಸರ್ವಭೂತದಯಾ ಚೈವ ಸತ್ತ್ವಸ್ಯೈತೇ ಗುಣಾಃ ಸ್ಮೃತಾಃ ॥೨೦॥

ಅಂತಃಸತ್ತ್ವ, ಆನಂದ, ಪ್ರೀತಿ, ಉತ್ಕರ್ಷ, ಜ್ಞಾನಶಕ್ತಿ, ಸುಖ, ಶುದ್ಧಿ, ಆರೋಗ್ಯ, ಸಂತೋಷ, ಶ್ರದ್ಧೆ, ಅಕಾರ್ಪಣ್ಯ, ದೀನನಾಗಿ ಇಲ್ಲದಿರುವುದು, ಕ್ರೋಧವಿಲ್ಲದಿರುವಿಕೆ, ಕ್ಷಮೆ, ಧೈರ್ಯ, ಅಹಿಂಸೆ, ಸಮತೆ, ಸತ್ಯ, ಯಾರ ಋಣವನ್ನು ಹೊತ್ತುಕೊಳ್ಳದಿರುವುದು, ಮೃದುತ್ವ, ಲಜ್ಜೆ, ಚಂಚಲತೆ ಹೊಂದದಿರುವಿಕೆ, ಶೌಚ, ಸರಳತೆ, ಸದಾಚಾರ, ವಿಷಯಗಳಲ್ಲಿ ಅಭಿಲಾಷೆ ಇಲ್ಲದಿರುವಿಕೆ, ಇಷ್ಟಪ್ರಾಪ್ತಿಯಾಗಿ ಅನಿಷ್ಟ ನಿವಾರಣೆಯಾದರೂ ಅಥವಾ ಇಷ್ಟವು ವಿಯೋಗವಾಗಿ ಅನಿಷ್ಟಪ್ರಾಪ್ತಿಯಾದರೂ

ಸಮತ್ವವನ್ನು ಮನಸ್ಸಿನಲ್ಲಿ ಕಾಪಾಡಿಕೊಳ್ಳುವಿಕೆ, ಸತ್ಕರ್ಮವನ್ನು ಕೀರ್ತನ ಮಾಡದಿರುವಿಕೆ, ದಾನ ಮಾಡಿ ಪರಮಾತ್ಮನ ಪ್ರೀತಿಯನ್ನು ಬಯಸುವಿಕೆ, ಇತರರ ವಸ್ತುಗಳಲ್ಲಿ ನಿಸ್ಪೃಹತೆ, ಪರೋಪಕಾರ ಬುದ್ಧಿ, ಸಮಸ್ತ ಪ್ರಾಣಿಗಳಲ್ಲಿ ದಯೆ - ಇವೆಲ್ಲವೂ ಸತ್ತ್ವದ ಗುಣಗಳೆಂದು ಹೇಳಲ್ಪಟ್ಟಿವೆ.

ರಜೋಗುಣಾನಾಂ ಸಂಘಾತೋ ರೂಪಮೈಶ್ವರ್ಯವಿಗ್ರಹೇ ।
ಅತ್ಯಾಶಿತ್ವಮಕಾರುಣ್ಯಂ ಸುಖದುಃಖೋಪಸೇವನಮ್ ॥೨೧॥

ಪರಾಪವಾದೇಷು ರತಿರ್ವಿವಾದಾನಾಂ ಚ ಸೇವನಮ್ ।
ಅಹಂಕಾರಸ್ತ್ವಸತ್ಕಾರಶ್ಚಿಂತಾ ವೈರೋಪಸೇವನಮ್ ॥೨೨॥

ಪರಿತಾಪೋಽಪಹರಣಂ ಹ್ರೀನಾಶೋಽನಾರ್ಜವಂ ತಥಾ ।
ಭೇದಃ ಪರುಷತಾ ಚೈವ ಕಾಮಕ್ರೋಧೌ ಮದಸ್ತಥಾ ।
ದರ್ಪೋ ದ್ವೇಷೋಽತಿವಾದಶ್ಚ ಏತೇ ಪ್ರೋಕ್ತಾ ರಜೋಗುಣಾಃ ॥೨೩॥

ರೂಪ, ಐಶ್ವರ್ಯ, ಕಲಹ, ಲೋಭ, ನಿಷ್ಕರುಣೆ, ಸುಖ-ದುಃಖಗಳ ಸೇವನೆ, ಮತ್ತೊಬ್ಬರನ್ನು ಅಪಾದಿತರನ್ನಾಗಿ ಮಾಡುವವರಲ್ಲಿ ಆಸಕ್ತಿ, ವಾದ-ವಿವಾದಗಳಲ್ಲಿ ಅಭಿರುಚಿ, ಅಹಂಕಾರ, ಪೂಜ್ಯರಲ್ಲಿ ಅಸತ್ಕಾರ, ಚಿಂತೆ, ವೈರಭಾವ, ಸಂತಾಪ, ಪರವಿತ್ತಾಪಹಾರ, ನಿರ್ಲಜ್ಜೆ, ಕುಟಿಲತೆ, ಭೇದ ಬುದ್ಧಿ, ಕ್ರೌರ್ಯ, ಕಾಮ, ಕ್ರೋಧ, ಮದ, ದರ್ಪ, ದ್ವೇಷ, ಅಧಿಕ ಮಾತು - ಇವೆಲ್ಲವೂ ರಜೋಗುಣಗಳೆಂದು ಹೇಳಲ್ಪಟ್ಟಿವೆ.

ತಾಮಸಾನಾಂ ತು ಸಂಘಾತಂ ಪ್ರವಕ್ಷ್ಯಾಮ್ಯುಪಧಾರ್ಯತಾಮ್ ।
ಮೋಹೋಽಪ್ರಕಾಶಸ್ತಾಮಿಸ್ರಮಂಧತಾಮಿಸ್ರಸಂಜ್ಞಿತಮ್ ॥೨೪॥

ಮುಂದೆ ತಮಸ್ಸಿನ ಗುಣಗಳನ್ನು ಹೇಳುತ್ತೇನೆ, ಆಸಕ್ತಿಯಿಂದ ಕೇಳು. ಮೋಹ, ಅಪ್ರಕಾಶ, ತಾಮಿಸ್ರ, ಅಂಧತಾಮಿಸ್ರ ಎಂಬವು ಸಾಕ್ಷಾತ್ ಮೂಲ ತಮಸ್ಸಿನ ರೂಪಾಂತರಗಳು.

ವ್ಯಾಖ್ಯಾನ ವಿಶೇಷ– ಇಲ್ಲಿ ಮೋಹವೆಂದರೆ ಅಜ್ಞಾನ ಎಂದರ್ಥ.

ಮರಣಂ ಚಾಂಧತಾಮಿಸ್ರಂ ತಾಮಿಸ್ರಂ ಕ್ರೋಧ ಉಚ್ಯತೇ ।
ತಮಸೋ ಲಕ್ಷಣಾನೀಹ ಭಕ್ಷಾಣಾಮಭಿರೋಚನಮ್ ॥೨೫॥

ಅಂಧತಾಮಿಸ್ರದ ವಿಕಾರವಾದ ಮರಣ ಇದು ಎಲ್ಲ ರೀತಿಯ ವಿಸ್ಮರಣೆಯನ್ನು ನೀಡುತ್ತದೆ. ಕ್ರೋಧವು ಅವಿವೇಕರೂಪವಾದುದರಿಂದ ತಾಮಿಸ್ರದ ವಿಕಾರವೆನಿಸಿದೆ. ಇವೆಲ್ಲವೂ ತಮಸ್ಸಿನ ಲಕ್ಷಣಗಳು. ತಿನ್ನಬೇಕೆಂಬುದರಲ್ಲಿ ಅತಿಯಾದ ಆಸಕ್ತಿ.

ಭೋಜನಾನಾಮಪರ್ಯಾಪ್ತಿಸ್ತಥಾ ಪೇಯೇಷ್ವತೃಪ್ತತಾ ।
ಗಂಧವಾಸೋ ವಿಹಾರೇಷು ಶಯನೇಷ್ವಾಸನೇಷು ಚ ॥೨೬॥

ಎಷ್ಟು ಊಟ ಮಾಡಿದರೂ ತೃಪ್ತಿಯಾಗದಿರುವಿಕೆ. ಎಷ್ಟು ಕುಡಿದರೂ ಅತೃಪ್ತಿ. ದುರ್ಗಂಧವಾದ ಬಟ್ಟೆಗಳನ್ನು ಧರಿಸುವುದು, ಅನುಚಿತವಾದ ವಿಹಾರಗಳಲ್ಲಿ, ಅನುಚಿತವಾಗಿ ಮಲಗುವುದರಲ್ಲಿ, ಯಾವಾಗಲೂ ಸುಮ್ಮನೆ ಕುಳಿತಿರುವುದರಲ್ಲಿ ಹೆಚ್ಚಿನ ಆಸಕ್ತಿ.

ದಿವಾಸ್ವಪ್ನೇ ವಿವಾದೇ ಚ ಪ್ರಮಾದೇಷು ಚ ವೈ ರತಿಃ ।
ನೃತ್ಯವಾದಿತ್ರಗೀತಾನಾಮಜ್ಞಾನಾಚ್ಚ್ರದ್ದಧಾನತಾ ।
ದ್ವೇಷೋ ಧರ್ಮವಿಶೇಷಾಣಾಮೇತೇ ವೈ ತಾಮಸಾ ಗುಣಾಃ ॥೨೭॥

ಹಗಲು ನಿದ್ದೆ, ವಾದ-ವಿವಾದ, ಪ್ರಮಾದಗಳಲ್ಲಿ ಆಸಕ್ತಿ, ನೃತ್ಯ, ಗೀತ, ವಾದ್ಯ, ಸಂಗೀತಗಳಲ್ಲಿ ಅಜ್ಞಾನದಿಂದ ಅತಿಯಾದ ಶ್ರದ್ಧೆ, ಧರ್ಮಕಾರ್ಯಗಳಲ್ಲಿ ದ್ವೇಷ - ಇವೆಲ್ಲವೂ ತಾಮಸ ಗುಣ ಎನಿಸಿವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತಾರನೆಯ ಅಧ್ಯಾಯ

ಜನಕ-ಯಾಜ್ಞವಲ್ಕ್ಯರ ಸಂವಾದ

ಯಾಜ್ಞವಲ್ಕ್ಯಃ

ಏತೇ ಪ್ರಧಾನಸ್ಯ ಗುಣಾಸ್ತ್ರಯಃ ಪುರುಷಸತ್ತಮ ।
ಕೃತ್ಸ್ನಸ್ಯ ಚೈವ ಜಗತಸ್ತಿಷ್ಠಂತ್ಯನಪಗಾಃ ಸದಾ ॥೧॥

ಯಾಜ್ಞವಲ್ಕ್ಯ– ಜನಕರಾಜನೇ, ಹಿಂದೆ ಹೇಳಿದ ಪ್ರಕೃತಿಯ ಮೂರು ಗುಣಗಳು ಪ್ರಪಂಚದ ಜೊತೆಗೆ ಯಾವಾಗಲೂ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಜಗತ್ತನ್ನು ಬಿಟ್ಟು ಪ್ರಕೃತಿ ಗುಣಗಳು ಇರುವುದಿಲ್ಲ.

ದಶಧಾ ಸಹಸ್ರಧಾ ಚೈವ ತಥಾ ಶತಸಹಸ್ರಧಾ ।
ಕೋಟಿಶಶ್ಚ ಕರೋತ್ಯೇಷ ಪ್ರತ್ಯಗಾತ್ಮಾನಮಾತ್ಮನಾ ॥೨॥

ಅವ್ಯಕ್ತ ರೂಪನಾದ ಭಗವಂತನು ಪ್ರಕೃತಿಯ ಸ್ವಭಾವದ ಜೊತೆಗೆ ತನ್ನ ಇಚ್ಛೆಯಿಂದ ತನ್ನನ್ನು ಅವತಾರಾದಿ ರೂಪಭೇದದಿಂದ ಅಭಿವ್ಯಕ್ತಿಗೊಳಿಸಿಕೊಳ್ಳುತ್ತಾನೆ. ಸಮಸ್ತ ಪ್ರಕೃತಿಯ ಅಂತರ್ಯಾಮಿಯಾಗಿ ಹತ್ತು, ನೂರು, ಸಾವಿರ, ಹತ್ತುಸಾವಿರ, ಲಕ್ಷ, ಕೋಟಿ - ಈ ರೀತಿಯಾಗಿ ತನ್ನ ರೂಪಗಳನ್ನು ಅಭಿವ್ಯಕ್ತಿಗೊಳಿಸುತ್ತಾನೆ.

ಸಾತ್ತ್ವಿಕಸ್ಯೋತ್ತಮಂ ಸ್ಥಾನಂ ರಾಜಸಸ್ಯೇಹ ಮಧ್ಯಮಮ್ ।
ತಾಮಸಸ್ಯಾಧಮಂ ಸ್ಥಾನಂ ಪ್ರಾಹುರಧ್ಯಾತ್ಮಚಿಂತಕಾಃ ॥೩॥

ಆತ್ಮತತ್ತ್ವಜ್ಞರು ಸಾತ್ವಿಕರಿಗೆ ಉತ್ತಮಸ್ಥಾನವನ್ನು, ರಜೋಗುಣವುಳ್ಳವರಿಗೆ ಇದೇ ಜನ್ಮದಲ್ಲಿ ಮಧ್ಯಮಸ್ಥಾನವನ್ನು, ತಮೋಗುಣವುಳ್ಳವರಿಗೆ ಅಧೋಗತಿಯನ್ನು ಹೇಳುತ್ತಾರೆ. ಮನುಷ್ಯನು ಪುಣ್ಯಕರ್ಮದಿಂದ ಉತ್ತಮ ಗತಿಯನ್ನು, ಪಾಪ ಕರ್ಮದಿಂದ ಮನುಷ್ಯಗತಿಯನ್ನು, ಕೇವಲ ಪಾಪಕರ್ಮದಿಂದ ಅಧೋಗತಿಯನ್ನು ಹೊಂದುತ್ತಾನೆ.

ಕೇವಲೇನೇಹ ಪುಣ್ಯೇನ ಗತಿಮೂರ್ಧ್ವಮವಾಪ್ನುಯಾತ್ ।
ಪುಣ್ಯಪಾಪೇನ ಮಾನುಷ್ಯಮಧರ್ಮೇಣಾಪ್ಯಧೋಗತಿಮ್ ॥೪॥

ಈ ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಲ್ಲಿ ಪರಸ್ಪರ ಮೂರು ಗುಣಗಳ ಮಿಲನವು ಉಂಟಾಗುತ್ತದೆ. ಅರ್ಥಾತ್ ಸತ್ವ-ರಜಸ್ಸುಗಳು, ರಜಸ್ಸು-ತಮಸ್ಸುಗಳು, ತಮಸ್ಸು-ಸತ್ತ್ವಗಳು, ರಜಸ್ಸು-ತಮಸ್ಸುಗಳು ಪರಸ್ಪರ ಮೇಲನವಾಗುತ್ತವೆ.

ವ್ಯಾಖ್ಯಾನ ವಿಶೇಷ– ಸಾತ್ವಿಕರಾದ ಇಂದ್ರಾದಿ ದೇವತೆಗಳಲ್ಲಿ ಕೆಲವೊಮ್ಮೆ ರಾಗಾದಿ ದೋಷಗಳಿರುವುದರಿಂದ ಅಲ್ಲಿಯೂ ರಜೋದೋಷವಿದೆ ಎಂಬುದನ್ನು ಅನುಮಾನ ಮಾಡಬಹುದು. ಮನುಷ್ಯಾದಿಗಳಲ್ಲಿ ಕೆಲವೊಮ್ಮೆ ಕ್ರೋಧಗಳು ಕಾಣಿಸುವುದರಿಂದ ರಜೋಗುಣದಲ್ಲಿತಮೋಗುಣದ ಮೇಲನವನ್ನು ಅನುಮಾನ ಮಾಡಬಹುದು. ತಾಮಸ ಜೀವರಲ್ಲಿ ಕೆಲವೊಮ್ಮೆ ತಪಸ್ಸು ಮಾಡುವಿಕೆಯು ಕಾಣಿಸುವುದರಿಂದ ತಮೋಗುಣದಲ್ಲಿಯೂ ಸತ್ವಗುಣವು ಇದೆ ಎಂಬುದನ್ನು ಊಹಿಸಬಹುದು. ಸತ್ತ್ವಗುಣದಲ್ಲಿ ತಮೋಗುಣದ ಕಿಂಚಿತ್ ಮಿಲನವೂ ಆಗುತ್ತದೆ ಎಂದು ತಿಳಿಯಬಹುದು. ಇದರಂತೆ ರಜೋಗುಣದಲ್ಲಿಯೂ ಸತ್ತ್ವಗುಣದ ಕಿಂಚಿತ್ ಮಿಲವನ್ನು ಊಹಿಸಬಹುದು. ಇಂದ್ರಾದಿಗಳಲ್ಲಿ ಕೆಲವೊಮ್ಮೆ ಅಸುರಾವೇಷದಿಂದ ವಿಷ್ಣು ವಿರೋಧವು ಕಾಣಿಸುವುದರಿಂದ ಸತ್ತ್ವಗುಣದಲ್ಲಿಯೂ ಕಿಂಚಿತ್ ತಮೋಗುಣದ ಪ್ರವೇಶವನ್ನು ಕಾಣಬಹುದು. ಆದ್ದರಿಂದಲೇ ಸತ್ತ್ವಗುಣದಲ್ಲಿತಮೋಗುಣದ ಪ್ರವೇಶವು ಅತ್ಯಂತ ಅಲ್ಪಪ್ರಮಾಣ ಉಳ್ಳದ್ದು. ರಾಜಸರಲ್ಲಿಯೂ ಅಲ್ಪಗುಣವಾದದ್ದೇ. ಸತ್ತ್ವಗುಣವು ರಾಜಸರಲ್ಲಿಅಲ್ಪಪ್ರಮಾಣದಲ್ಲಿ ಇರುತ್ತದೆ. ತಾಮಸರಲ್ಲಿ ಮತ್ತೂ ಅಲ್ಪಪ್ರಮಾಣದಲ್ಲಿ ಸತ್ತ್ವಗುಣದ ಪ್ರಮಾಣವು ಇರುತ್ತದೆ. ರಜೋಗುಣವು ತಾಮಸರಲ್ಲಿಅಲ್ಪಪ್ರಮಾಣದಲ್ಲೇ ಇರುತ್ತದೆ. ಹೀಗೆ ಒಂದೊಂದು ಗುಣಗಳು ಎಲ್ಲ ಗುಣದಲ್ಲಿಯೂ ಸ್ವಲ್ಪ ಪ್ರಮಾಣದಲ್ಲಿ ಮೇಲನವನ್ನು ಹೊಂದಿರುವುದರಿಂದ 'ಈಶಾಂ ತ್ರಯಾಣಾಂ ದ್ವಂದ್ವಂ' ಎಂದು ವ್ಯಾಸರು ಹೇಳಿರುತ್ತಾರೆ. ವಾಸ್ತವಿಕವಾಗಿ ಗುಣತ್ರಯಗಳ ಮೇಲನವು ಎಲ್ಲ ಕಡೆಯೂ ಆಗಿದೆ ಎಂದು ತಿಳಿಯಬೇಕು. ಸತ್ತ್ವಗುಣವು ರಜಸ್-ತಮೋಗುಣಗಳಿಂದ ಕಿಂಚಿತ್ ಅವ್ಯಕ್ತವಾಗಿದೆ. ಅಲ್ಪರಜಸ್ಸು, ತಮಸ್ಸುಗಳಿಂದ ಕೂಡಿದೆ ಎಂದು ತಿಳಿಯಬೇಕು.

ದ್ವಂದ್ವಮೇಷಾಂ ತ್ರಯಾಣಾಂ ತು ಸನ್ನಿಪಾತಂ ಚ ತತ್ತ್ವತಃ ।
ಸತ್ತ್ವಸ್ಯ ರಜಸಶ್ಚೈವ ತಮಸಶ್ಚ ಶೃಣುಷ್ವ ಮೇ ॥೫॥

ಹೀಗೆ ಈ ಜೋಡಿಗಳಲ್ಲಿ ತಾತ್ವಿಕ ಮಿಶ್ರಣವು ಕಾಣುತ್ತದೆ. ಸತ್ವ, ರಜೋಗುಣ, ತಮೋಗುಣದ ಮೇಲನವನ್ನು ಹೇಳುವೆನು, ಕೇಳು.

ಸತ್ತ್ವಸ್ಯ ತು ರಜೋ ದೃಷ್ಟಂ ರಜಸಶ್ಚ ತಮಸ್ತಥಾ ।
ತಮಸಶ್ಚ ತಥಾ ಸತ್ತ್ವಂ ಸತ್ತ್ವಸ್ಯಾವ್ಯಕ್ತಮೇವ ಚ ॥೬॥

ಸತ್ವಗುಣದಲ್ಲಿ ರಜೋಗುಣದ ಮೇಲಿನ, ರಜೋಗುಣದ ಜೊತೆಗೆ ತಮೋಗುಣದ ಮೇಲನ, ಹಾಗೆಯೇ ತಮೋಗುಣದ ಜೊತೆಗೆ ಅವ್ಯಕ್ತವಾಗಿ ಸತ್ವಗುಣವು ಬೆರೆಯುತ್ತದೆ.

ಅವ್ಯಕ್ತಸತ್ತ್ವಸಂಯುಕ್ತೋ ದೇವಲೋಕಮವಾಪ್ನುಯಾತ್ ।
ರಜಃಸತ್ತ್ವಸಮಾಯುಕ್ತೋ ಮನುಷ್ಯೇಷೂಪಪದ್ಯತೇ ॥೭॥

ಯಾವ ಪುರುಷನಲ್ಲಿ ಅಧಿಕವಾದ ಸತ್ತ್ವಗುಣವು ಇರುತ್ತದೋ ಅವನು ದೇವಲೋಕಕ್ಕೆ ಹೋಗುತ್ತಾನೆ. ರಜ-ಸತ್ತ್ವಮಿಶ್ರಣದಿಂದ ಮನುಷ್ಯನಾಗುತ್ತಾನೆ.

ರಜಸ್ತಮೋಭ್ಯಾಂ ಸಂಯುಕ್ತಸ್ತಿರ್ಯಗ್ಯೋನಿಷು ಜಾಯತೇ ।
ರಜಸ್ತಾಮಸಸತ್ತ್ವಶ್ಚ ಯುಕ್ತೋ ಮಾನುಷ್ಯಮಾಪ್ನುಯಾತ್ ॥೮॥

ರಜಸ್ಸು, ತಮಸ್ಸುಗಳ ಮಿಶ್ರಣವುಳ್ಳವನು ತಿರ್ಯಗ್ಯೋನಿಯಲ್ಲಿ ಹುಟ್ಟುತ್ತಾನೆ. ಸತ್ತ್ವವು ರಾಜಸ-ತಾಮಸ ಗುಣಗಳ ಜೊತೆಗೆ ಸೇರಿದ್ದರೂ ಮನುಷ್ಯ ಜನ್ಮವನ್ನು ತಾಳುತ್ತಾನೆ.

ಪುಣ್ಯಪಾಪವಿಯುಕ್ತಾನಾಂ ಸ್ಥಾನಮಾಹುರ್ಮನೀಷಿಣಾಮ್ ।
ಶಾಶ್ವತಂ ಚಾವ್ಯಯಂ ಚೈವ ಅಕ್ಷರಂ ಚಾಭಯಂ ಚ ಯತ್ ॥೯॥

ರಾಜೇಂದ್ರನೇ, ಪುಣ್ಯ-ಪಾಪಗಳೆಂಬ ಕರ್ಮಗಳನ್ನೆಲ್ಲ ಪರಿಹರಿಸಿಕೊಂಡವರಿಗೆ ಶಾಶ್ವತವೂ, ನಿರ್ವಿಕಾರವೂ, ಅವ್ಯಯವೂ ಆದ ಮರಣವಿಲ್ಲದೆ ಇರುವಂತಹ ಸ್ಥಾನವು ದೊರಕುತ್ತದೆ ಎಂದು ಹೇಳುತ್ತಾರೆ.

ಜ್ಞಾನಿನಾಂ ಸಂಭವಂ ಶ್ರೇಷ್ಠಂ ಸ್ಥಾನಮವ್ರಣಮಚ್ಯುತಮ್ ।
ಅತೀಂದ್ರಿಯಮಬೀಜಂ ಚ ಜನ್ಮಮೃತ್ಯುತಮೋನುದಮ್ ॥೧೦॥

ಇದರಂತೆ ಜ್ಞಾನಿಗಳಿಗೆ ದೊರೆಯುವ ಸ್ಥಾನವು ಎಂದಿಗೂ ಚ್ಯುತಿ ಇಲ್ಲದ ಉತ್ತಮ ಸ್ಥಾನವು. ಆ ಸ್ಥಾನವು ಇಂದ್ರಿಯಗಳಿಗೆ ಗೋಚರಿಸುವುದಿಲ್ಲ. ಕರ್ಮದ ಬೀಜವನ್ನು ಹೊಂದಿರುವುದಿಲ್ಲ. ಚ್ಯುತಿ ಇಲ್ಲದೆ ಇರುವ ಉತ್ತಮ ಸ್ಥಾನವು ಆಗಿರುತ್ತದೆ. ಜನನ-ಮರಣಗಳಿಲ್ಲದೆ ಇರುವಂತಹ, ಅಜ್ಞಾನವನ್ನು ಪರಿಹರಿಸಿಕೊಂಡಿರುವಂತಹ ಸ್ಥಾನವಾಗಿದೆ.

ಅವ್ಯಕ್ತಸ್ಥಃ ಪರಶ್ಚೈವ ಪೃಷ್ಟಸ್ತೇಽಹಂ ನರಾಧಿಪ ।
ಸ ಏಷ ಪ್ರಕೃತಿಸ್ಥೋ ಹಿ ತಸ್ಥುರಿತ್ಯಭಿಧೀಯತೇ ॥೧೧॥

ಜನಕನೇ, ನನ್ನನ್ನು ಯಾವ ಅವ್ಯಕ್ತನಾದ ಪರಮಾತ್ಮನ ಬಗ್ಗೆ ಪ್ರಶ್ನೆ ಮಾಡಿದೆಯೋ ಆ ಪರವಸ್ತುವು ಪ್ರಕೃತಿಯಲ್ಲಿದ್ದರೂ ಸ್ವರೂಪತಃ ಅವ್ಯಕ್ತವೆಂದೇ ಜ್ಞಾನಿಗಳು ಹೇಳುತ್ತಾರೆ.

ಅಚೇತನಶ್ಚೈಷ ಮತಃ ಪ್ರಕೃತಿಸ್ಥಶ್ಚ ಪಾರ್ಥಿವ ।
ಏತೇನಾಧಿಷ್ಠಿತಶ್ಚಾಯಂ ಸೃಜತೇ ಸಂಹರತ್ಯಪಿ ॥೧೨॥

ಪ್ರಕೃತಿಯು ಅಚೇತನವಾದುದು. ಈ ಅಚೇತನವಾದ ಪ್ರಕೃತಿಯ ಒಳಗೆ ಅಂತರ್ಯಾಮಿಯಾದ ಪರಮಾತ್ಮನು ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ನಡೆಸುತ್ತಾನೆ.

ವ್ಯಾಖ್ಯಾನ ವಿಶೇಷ– ಇಲ್ಲಿ ಅವ್ಯಕ್ತಸ್ಥಃ ಎಂದರೆ ಪ್ರಕೃತಿಯ ಒಳಗಡೆ ಇರುವ ಜೀವ ಮತ್ತು ಪರಮಾತ್ಮ ಇಬ್ಬರನ್ನು ಸ್ವೀಕರಿಸಬಹುದು. ಅಜ್ಞಾನವು ಅಧಿಕವಾಗಿ ಇರುವುದರಿಂದ, ತತ್ತ್ವಜ್ಞಾನವಿಲ್ಲದಿರುವುದರಿಂದ ಜೀವನು ಅಚೇತನನೆನಿಸಿದ್ದಾನೆ. ಈ ಅವ್ಯಕ್ತ ಎನಿಸಿದ ಪ್ರಕೃತಿ ಒಳಗೆ ಇರುವ ಅಚೇತನನಾದ ಜೀವಾತ್ಮನ ಒಳಗಡೆ ಅಂತರ್ಯಾಮಿಯಾಗಿ ಪರಮಾತ್ಮನು ಇದ್ದಾನೆ. ಅವನ ಅನುಗ್ರಹದಿಂದ ಜೀವಾತ್ಮನು ಮುಕ್ತಿ ಸಾಧನಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಪರಮಾತ್ಮನ ಅನುಗ್ರಹದಿಂದ ಸಂಸಾರವನ್ನು ಸಂಹರಿಸಿಕೊಳ್ಳುತ್ತಾನೆ ಎಂದು ಗುರುರಾಜರು ಲಕ್ಷಾಲಂಕಾರದಲ್ಲಿ ವ್ಯಾಖ್ಯಾನಿಸಿರುತ್ತಾರೆ.

ಜನಕಃ

ಅನಾದಿನಿಧನಾವೇತಾವುಭಾವೇವ ಮಹಾಮುನೇ ।
ಅಮೂರ್ತಿಮಂತಾವಚಲಾವಪ್ರಕಂಪ್ಯೌ ಚ ನಿರ್ವ್ರಣೌ ॥೧೩॥

ಜನಕ– ಮಹಾಮುನಿಯೇ, ಈ ಪರಮಾತ್ಮ ಜೀವಾತ್ಮರು ಆದ್ಯಂತವಿಲ್ಲದವರು. ನಿರ್ದಿಷ್ಟವಾದ ಶರೀರ ಇಲ್ಲದವರು, ನಿಶ್ಚಲರಾದವರು. ಯಾರಿಂದಲೂ ವಿಕಾರಕ್ಕೆ ಗುರಿಯಾಗದವರು. ಯಾವುದೇ ಛೇದಾದಿಗಳು ಇಲ್ಲದವರು.

ಅಗ್ರಾಹ್ಯಾವೃಷಿಶಾರ್ದೂಲ ಕಥಮೇಕೋ ಹ್ಯಚೇತನಃ ।
ಚೇತನಾವಾಂಸ್ತಥಾ ಚೈಕಃ ಕ್ಷೇತ್ರಜ್ಞ ಇತಿ ಭಾಷಿತಃ ॥೧೪॥

ಈ ಇಬ್ಬರು ಅಗ್ರಾಹ್ಯರಾಗಿರುವಾಗ ಒಂದನ್ನು ಅಚೇತನ, ಇನ್ನೊಂದು ಚೇತನ, ಒಬ್ಬನೇ ಕ್ಷೇತ್ರಜ್ಞ ಎಂದು ಹೇಗೆ ಹೇಳಬಹುದು?

ತ್ವಂ ಹಿ ವಿಪ್ರೇಂದ್ರ ಕಾರ್ತ್ಸ್ನ್ಯೇನ ಮೋಕ್ಷಧರ್ಮಮುಪಾಸಸೇ ।
ಸಾಕಲ್ಯಂ ಮೋಕ್ಷಧರ್ಮಸ್ಯ ಶ್ರೋತುಮಿಚ್ಛಾಮಿ ತತ್ತ್ವತಃ ॥೧೫॥

ಮಹರ್ಷಿಯೇ, ಮೋಕ್ಷಧರ್ಮಗಳೆಲ್ಲವನ್ನೂ ತಿಳಿದುಕೊಂಡ ನಿನ್ನಿಂದ ನಾನು ಇದರ ಬಗ್ಗೆ ತಿಳಿಯಲು ಅಪೇಕ್ಷೆ ಹೊಂದಿರುತ್ತೇನೆ.

ಅಸ್ತಿತ್ವಂ ಕೇವಲತ್ವಂ ಚ ವಿನಾಭಾವಂ ತಥೈವ ಚ ।
ತಥೈವೋತ್ಕ್ರಮಣಸ್ಥಾನಂ ದೇಹಿನೋಽಪಿ ವಿಯುಜ್ಯತಃ ॥೧೬॥

ಆದ್ದರಿಂದ ಆಸ್ತಿಕತ್ವದ ಬಗ್ಗೆ, ಮೋಕ್ಷದ ಬಗ್ಗೆ, ದೇಹೋತ್ಕ್ರಮಣ ರೂಪ ವಿನಾಶದ ಬಗ್ಗೆ, ಜೀವನಿಗೆ ದೇಹವನ್ನು ತ್ಯಜಿಸಿ ಉತ್ಕ್ರಮಣ ಹೊಂದಿದ ಬಳಿಕ ಸಿಗುವ ಸ್ಥಾನದ ಬಗ್ಗೆ ತಿಳಿಸಿರಿ.

ಕಾಲೇನ ಯದ್ಧಿ ಪ್ರಾಪ್ನೋತಿ ಸ್ಥಾನಂ ತದ್ ಬ್ರೂಹಿ ಮೇ ದ್ವಿಜ ।
ಸಾಂಖ್ಯಜ್ಞಾನಂ ಚ ತತ್ತ್ವೇನ ಪೃಥಗ್ಯೋಗಂ ತಥೈವ ಚ ॥೧೭॥

ಕಾಲಿಕವಾಗಿ ಯಾವ ಸ್ಥಾನವನ್ನು ಜೀವನು ಹೊಂದುತ್ತಾನೆ ಅದನ್ನು ನನಗೆ ತಿಳಿಸಿರಿ. ಯಥಾರ್ಥವಾಗಿ ಹೊಂದಲು ಯೋಗ್ಯವಾದ ಸಾಂಖ್ಯಜ್ಞಾನದ ಗತಿಯ ಕುರಿತು ನನಗೆ ಅರಿವನ್ನು ಮೂಡಿಸಿರಿ.

ಅರಿಷ್ಟಾನಿ ಚ ತತ್ತ್ವೇನ ವಕ್ತುಮರ್ಹಸಿ ಸತ್ತಮ ।
ವಿದಿತಂ ಸರ್ವಮೇತತ್ತೇ ಪಾಣಾವಾಮಲಕಂ ಯಥಾ ॥೧೮॥

ಜೀವನಿಗೆ ಒದಗುವ ಅನಿಷ್ಟಗಳು ಯಾವುದೆಂಬುದನ್ನು ಹೇಳಲು ಅರ್ಹನಾಗಿರುತ್ತಿ. ಈ ಎಲ್ಲ ವಿಚಾರಗಳನ್ನು ಕೈಯಲ್ಲಿರುವ ನೆಲ್ಲೀಕಾಯಿಯಂತೆ ನೀನು ತಿಳಿದು ಕೊಂಡಿರುವಿಯಷ್ಟೆ!

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಡ್‌ಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೇಳನೆಯ ಅಧ್ಯಾಯ

ಜನಕ-ಯಾಜ್ಞವಲ್ಕ್ಯರ ಸಂವಾದ

ಯಾಜ್ಞವಲ್ಕ್ಯಃ

ನ ಶಕ್ಯೋ ನಿರ್ಗುಣಸ್ತಾತ ಗುಣೇಕರ್ತುಂ ವಿಶಾಂ ಪತೇ ।
ಗುಣವಾಂಶ್ಚಾಪ್ಯಗುಣವಾನ್ಯಥಾತತ್ತ್ವಂ ನಿಬೋಧ ಮೇ ॥೧॥

ಯಾಜ್ಞವಲ್ಕ್ಯ- ಜನಕರಾಜನೇ, ಸತ್ವ-ರಜಸ್-ತಮೋಗುಣಗಳಿಲ್ಲದ ಭಗವಂತನನ್ನು ತ್ರಿಗುಣವಂತನಾದ ಜೀವನನ್ನಾಗಿ ಮಾಡಲು ಸಾಧ್ಯವಿಲ್ಲ. ಜೀವ-ಬ್ರಹ್ಮರಿಗೆ ಐಕ್ಯವನ್ನು ಹೇಳಲು ಸಾಧ್ಯವಿಲ್ಲ. ಗುಣಬದ್ಧನಾಗಿರುವಂತಹ ಜೀವನನ್ನು ಗುಣಗಳ ಸಂಬಂಧ ಇಲ್ಲದೆ ಇರುವ ನಾರಾಯಣನನ್ನಾಗಿ ಮಾಡಲು ಸಾಧ್ಯವಿಲ್ಲ. ಇದನ್ನು ಯಥಾವತ್ತಾಗಿ ಉಪದೇಶಿಸುತ್ತೇನೆ, ತಿಳಿದುಕೊ.

ಗುಣೈರ್ಹಿ ಗುಣವಾನೇವ ನಿರ್ಗುಣಶ್ಚಾಗುಣಸ್ತಥಾ ।
ಪ್ರಾಹುರೇವಂ ಮಹಾತ್ಮಾನೋ ಮುನಯಸ್ತತ್ತ್ವದರ್ಶಿನಃ ॥೨॥

ತತ್ತ್ವಜ್ಞರು, ಮಹಾತ್ಮರೂ ಆದ ಋಷಿಗಳು ತ್ರಿಗುಣಗಳ ಸಂಬಂಧದಿಂದ ಜೀವನು ಗುಣಿಯಾಗುತ್ತಾನೆ ಎಂದು ಹೇಳುತ್ತಾರೆ. ತ್ರಿಗುಣಗಳ ಸಂಬಂಧವೇ ಇಲ್ಲದೇ ಇರುವಂತಹ ಭಗವಂತನು ಅಗುಣ ಎಂದು ಕರೆಸಿಕೊಳ್ಳುತ್ತಾನೆ.

ಗುಣಸ್ವಭಾವಸ್ತ್ವವ್ಯಕ್ತೋ ಗುಣಾನೇವಾಭಿವರ್ತತೇ ।
ಉಪಯುಂಕ್ತೇ ಚ ತಾನೇವ ಸ ಚೈವಾಜ್ಞಃ ಸ್ವಭಾವತಃ ॥೩॥

ಸ್ವಾಭಾವಿಕವಾಗಿ ಪ್ರಕೃತಿಯ ಗುಣಗಳಿಂದ ಬದ್ಧನಾಗಿರುವಂತಹ ಜೀವನು ಪರಮಾತ್ಮನಿಂದ ಭಿನ್ನನಾಗಿಯೇ ಇದ್ದು ತ್ರಿಗುಣಗಳ ಸಂಬಂಧದಿಂದ ಸಂಸಾರಕ್ಕೆ ಮರಳುತ್ತಾನೆ. ಈ ಪ್ರಕೃತಿಯ ಗುಣಗಳ ಸಂಬಂಧವನ್ನು ಬಿಡಿಸಿಕೊಳ್ಳಲಾಗದೆ ಅವುಗಳಲ್ಲಿಯೇ ಜೀವಾತ್ಮನು ತೊಳಲುತ್ತಿರುತ್ತಾನೆ.

ಅವ್ಯಕ್ತಸ್ತು ನ ಜಾನೀತೇ ಪುರುಷೋಽಜ್ಞಃ ಸ್ವಭಾವತಃ ।
ನ ಮತ್ತಃ ಪರಮೋಽಸ್ತೀತಿ ನಿತ್ಯಮೇವಾಭಿಮನ್ಯತೇ ॥೪॥

ಪ್ರಕೃತಿಯ ಕಾರ್ಯಗಳಿಂದ ಬದ್ಧನಾಗಿರುವಂತಹ ಜೀವನು ಸ್ವಾಭಾವಿಕವಾಗಿ ಅಜ್ಞಾನವನ್ನು ಹೊಂದಿದವನಾಗಿ, ನನಗಿಂತ ಸರ್ವೋತ್ತಮನಾಗಿದ್ದಾನೆ ಎಂಬುದನ್ನು ತಿಳಿಯದೆ ತನ್ನಲ್ಲಿಯೇ ಪರಬ್ರಹ್ಮನ ಆರೋಪವನ್ನು ಅಭಿಮಾನವನ್ನು ಹೊಂದಿರುತ್ತಾನೆ.

ಅನೇನ ಕಾರಣೇನೈತದವ್ಯಕ್ತಂ ಸ್ಯಾದಚೇತನಮ್ ।
ನಿತ್ಯತ್ವಾದಕ್ಷರತ್ವಾಚ್ಚ ಕ್ಷರಾಣಾಂ ನ ತದನ್ಯಥಾ ॥೫॥

ಈ ಕಾರಣದಿಂದ ಜಡವಾದ ತ್ರಿಗುಣಗಳ ಸಂಬಂಧವನ್ನು ಹೊಂದಿರುವಂತಹ ಜೀವನು ಅಚೇತನನೆಂದೇ ಕರೆಸಿಕೊಳ್ಳುತ್ತಾನೆ. ವಸ್ತುತಃ ನಿತ್ಯ ನಾಶರಹಿತನೂ, ನಿತ್ಯನೂ, ದೈಹಿಕವಾಗಿ ನಾಶವುಳ್ಳವನೂ ಆಗಿದ್ದಾನೆ. ಎಂದಿಗೂ ಪರಬ್ರಹ್ಮನು ತನಗಿಂತ ವಿರುದ್ಧವಾದಂತಹ ಜೀವನ ಸ್ವರೂಪವನ್ನು ಹೊಂದುವುದಿಲ್ಲ.

ಯದಾऽಜ್ಞಾನೇನ ಕುರ್ವೀತ ಗುಣಸರ್ಗಂ ಪುನಃ ಪುನಃ ।
ಯದಾತ್ಮಾನಂ ನ ಜಾನೀತೇ ತದಾವ್ಯಕ್ತಮಿಹೋಚ್ಯತೇ ॥೬॥

ಯಾವ ಕಾರಣದಿಂದ ಅಜ್ಞಾನದಿಂದಾಗಿ ಜೀವನು ಪುನಃ ಪುನಃ ಪ್ರಕೃತಿಗಳ ಸಂಬಂಧವನ್ನು ಹೊಂದುತ್ತಿರುತ್ತಾನೋ, ತನ್ನ ಸ್ವರೂಪವನ್ನು ತಿಳಿಯದೆ ಇದ್ದಾಗ ಈ ಜೀವನನ್ನು ಅವ್ಯಕ್ತ ಎಂದೇ ಹೇಳುತ್ತಾರೆ.

ಕರ್ತೃತ್ವಾಚ್ಚಾಪಿ ತತ್ತ್ವಾನಾಂ ತತ್ತ್ವಧರ್ಮಾತಥೋಚ್ಯತೇ ।
ಕರ್ತೃತ್ವಾಚ್ಚೈವ ಯೋನೀನಾಂ ಯೋನಿಧರ್ಮಾ ತಥೋಚ್ಯತೇ ॥೭॥

ಭಗವಂತನಾದರೂ ಇಪ್ಪತ್ನಾಲ್ಕು ತತ್ತ್ವಗಳನ್ನು ಸೃಷ್ಟಿಸುವವನಾದ್ದರಿಂದ ತತ್ತ್ವವೆಂಬ ಧರ್ಮವುಳ್ಳವನು ಎಂದು ಕರೆಸಿಕೊಳ್ಳುತ್ತಾನೆ. ಧನಸ್ವಾಮಿಯನ್ನು ಧನಿ ಎಂದು ಕರೆಯುವಂತೆ ತತ್ತ್ವಗಳನ್ನು ನಿರ್ಮಿಸುವುದರಿಂದ ತತ್ತ್ವವಾನ್ ಎಂದು ಭಗವಂತನನ್ನು ಕರೆಯಲಾಗುತ್ತದೆ. ಜೀವನಂತೆ ಪರಮಾತ್ಮನು ಎಂದಿಗೂ ಇಪ್ಪತ್ನಾಲ್ಕು ತತ್ತ್ವಗಳಿಂದ ಬದ್ಧನಾಗಿರುವುದಿಲ್ಲ.

ಕರ್ತೃತ್ವಾತ್ ಪ್ರಕೃತೀನಾಂ ತು ತಥಾ ಪ್ರಕೃತಿಧರ್ಮಿತಾ ।
ಕರ್ತೃತ್ವಾಚ್ಚಾಪಿ ಬೀಜಾನಾಂ ಬೀಜಧರ್ಮೀ ತಥೋಚ್ಯತೇ ॥೮॥

ಪರಮಾತ್ಮನು ಜೀವನಿಗೆ ಅಚೇತನತ್ವವನ್ನು ಸೃಷ್ಟಿ ಮಾಡುವವನಾಗಿದ್ದಾನೆ. ಪ್ರಕೃತಿಯ ಸಂಬಂಧವನ್ನು ಜೀವನಿಗೆ ನಿರ್ಮಾಣ ಮಾಡುವುದರಿಂದ ಪ್ರಕೃತಿ ಧರ್ಮನೆಂದೂ, ಬೀಜಗಳನ್ನುಂಟು ಮಾಡುವುದರಿಂದ ಬೀಜಧರ್ಮನೆಂದೂ ಭಗವಂತನನ್ನು ಕರೆಯುತ್ತಾರೆ.

ಗುಣಾನಾಂ ಪ್ರಸವತ್ವಾಚ್ಚ ತಥಾ ಪ್ರಸವಧರ್ಮವಾನ್ ।
ಕರ್ತೃತ್ವಾತ್ ಪ್ರಲಯಾನಾಂ ಚ ತಥಾ ಪ್ರಲಯಧರ್ಮಿತಾ ॥೯॥

ಶ್ರೀಹರಿಯು ಗುಣಗಳ ಉತ್ಪತ್ತಿಗೂ ಗುಣಗಳ ನಾಶಕ್ಕೂ ನಿಯಾಮಕನಾಗಿರುತ್ತಾನೆ. ಕರ್ತೃತ್ವ ಎಂಬ ಧರ್ಮವುಳ್ಳವನೂ, ಪ್ರಳಯವೆಂಬ ಧರ್ಮವುಳ್ಳವನೂ ಆಗಿದ್ದಾನೆ.

ಬೀಜತ್ವಾತ್ ಪ್ರಕೃತಿತ್ವಾಚ್ಚ ಪ್ರಲಯತ್ವಾತ್ತಥೈವ ಚ ।
ಉಪೇಕ್ಷಕತ್ವಾದನ್ಯತ್ವಾದಭಿಮಾನಾಚ್ಚ ಕೇವಲಮ್ ॥೧೦॥

ಮನ್ಯಂತೇ ಯತಯಃ ಶುದ್ಧಾ ಅಧ್ಯಾತ್ಮವಿಗತಜ್ವರಾಃ ।
ಅನಿತ್ಯಂ ನಿತ್ಯಮವ್ಯಕ್ತಮೇವಮೇತದ್ಧಿ ಶುಶ್ರುಮ ॥೧೧॥

ಜೀವಾತ್ಮನು ಉತ್ಪತ್ತಿ ಎನ್ನುವ ದೋಷವನ್ನು ಹೊಂದಿರುವುದರಿಂದ, ಪ್ರಕೃತಿಯ ಗುಣಗಳಿಂದ ಬದ್ಧನಾಗಿರುವುದರಿಂದ, ಪ್ರಳಯವೆಂಬ ನಾಶದ ಸ್ಥಿತಿಯನ್ನು ಹೊಂದಿರುವುದರಿಂದ, ಸಚ್ಛಾಸ್ತ್ರಗಳನ್ನು ಅಸಡ್ಡೆ ಮಾಡುವುದರಿಂದ, ತನ್ನ ಸ್ವಭಾವಕ್ಕೆ ವಿರುದ್ಧವಾದ ವಿಚಾರವನ್ನು ಹೊಂದಿರುವುದರಿಂದ, ಅನಿತ್ಯವಾದ ದೇಹದಲ್ಲಿ ನಿತ್ಯವೆಂದು ಅಭಿಮಾನವನ್ನು ಹೊಂದಿರುವುದರಿಂದ, ಪ್ರಕೃತಿಬದ್ಧನಾದ ಜೀವನನ್ನು ಅನಾದಿಕಾಲಿಯನಾಗಿದ್ದರೂ ಯತಿಗಳಾದರೂ ಅನಿತ್ಯನೆಂದೇ ಹೇಳುತ್ತಾರೆ. ಅಧ್ಯಾತ್ಮ ಚಿಂತಕರಾದ ಜ್ಞಾನಿಗಳು ಜೀವನನ್ನು ಅವ್ಯಕ್ತನೆಂದು ಹೇಳುತ್ತಾರೆ.

ಅವ್ಯಕ್ತೈಕತ್ವಮಿತ್ಯಾಹುರ್ನಾನಾತ್ವಂ ಪುರುಷೇ ತಥಾ ।
ಸರ್ವಭೂತದಯಾವಂತಃ ಕೇವಲಂ ಜ್ಞಾನಮಾಸ್ಥಿತಾಃ ॥೧೨॥

ಜಿತೇಂದ್ರಿಯರಾದ ಜ್ಞಾನಿಗಳು ಪ್ರಕೃತಿಯಲ್ಲಿ ಏಕತ್ವವನ್ನು ಹೇಳುತ್ತಾರೆ. ಪ್ರಕೃತಿಯು ಒಂದೇ ಎಂದು ಹೇಳುತ್ತಾ, ಪ್ರಕೃತಿಯ ಸಂಬಂಧವನ್ನು ಹೊಂದಿರುವಂತಹ ಜೀವರಲ್ಲಿ

ನಾನಾತ್ವವನ್ನು, ಅನಂತತ್ವವನ್ನು ಹೇಳುತ್ತಾರೆ. ಜ್ಞಾನಿಗಳಾದವರು ಸಮಸ್ತ ಭೂತಗಳಲ್ಲಿ ದಯೆ ಉಳ್ಳವರು. ಕೇವಲ ಭಗವಂತನ ಧ್ಯಾನದಲ್ಲಿಯೇ ಆಸಕ್ತಿಯನ್ನು ಹೊಂದಿರುತ್ತಾರೆ.

ಅನ್ಯಃ ಸ ಪುರುಷೋಽವ್ಯಕ್ತಾದಧ್ರುವಾತ್ ಧ್ರುವಸಂಜ್ಞಕಃ ।
ಯಥಾ ಮುಂಜ ಇಷೀಕಾಯಾಸ್ತಥೈವೈತದ್ಧಿ ಜಾಯತೇ ॥೧೩॥

ಪರಮಪುರುಷನಾಗಿರುವಂತಹ ಪರಮಾತ್ಮನು ಪ್ರಕೃತಿಬಂಧನವನ್ನು ಹೊಂದಿರುವಂತಹ, ಅಧ್ರುವನೆನಿಸಿದ ಜೀವನಿಗಿಂತಲೂ ಭಿನ್ನನೆನಿಸಿದ್ದಾನೆ. ಧ್ರುವನೆನಿಸಿದ ಪರಮಾತ್ಮನು ಅಧ್ರುವನಾದ ಜೀವನಿಗಿಂತಲೂ ಭಿನ್ನನಾಗಿದ್ದಾನೆ. ಪರಬ್ರಹ್ಮನು ಮುಂಜ ಎಂಬ ಹುಲ್ಲಿನಿಂದ ಬೇರ್ಪಡುವ ಇಷೀಕದಂತೆ ಜೀವಾತ್ಮನಿಂದ ಅತ್ಯಂತ ಭಿನ್ನನಾಗಿಯೇ ಇರುತ್ತಾನೆ.

ಅನ್ಯಂ ಚ ಮಶಕಂ ವಿದ್ಯಾದನ್ಯಚ್ಚೋದುಂಬರಂ ತಥಾ ।
ನ ಚೋದುಂಬರಸಂಯೋಗೈರ್ಮಶಕಸ್ತತ್ರ ಲಿಪ್ಯತೇ ॥೧೪॥

ಅತ್ತಿಯ ಹಣ್ಣಿನಲ್ಲಿರುವಂತಹ ನುಸಿಗೂ ಅತ್ತಿ ಹಣ್ಣಿಗೂ ಹೇಗೆ ಅತ್ಯಂತ ಭೇದವು ನಿಶ್ಚಿತವಾಗಿದೆಯೋ, ಉದುಂಬರ ಹಣ್ಣಿನ ಸಂಯೋಗವಿದ್ದರೂ ಅದರ ಒಳಗಡೆ ಇರುವಂತಹ ನುಸಿಯು ಅದರ ಸಂಬಂಧವನ್ನು ಹೇಗೆ ಹೊಂದುವುದಿಲ್ಲವೋ ಇದರಂತೆ ಜೀವನಿಗೂ ಪರಮಾತ್ಮನಿಗೂ ಪರಸ್ಪರ ಭೇದವು ನಿರ್ಣಯವಾಗಿದೆ.

ಅನ್ಯ ಏವ ತಥಾ ಮತ್ಸ್ಯಸ್ತಥಾನ್ಯದುದಕಂ ಸ್ಮೃತಮ್ ।
ನ ಚೋದಕಸ್ಯ ಸ್ಪರ್ಶೇನ ಮತ್ಸ್ಯೋ ಲಿಪ್ಯತಿ ಸರ್ವಶಃ ॥೧೫॥

ಜಲದಲ್ಲಿ ಸಂಚರಿಸುವಂತಹ ಮತ್ಸ್ಯಕ್ಕೂ, ನೀರಿಗೂ ಹೇಗೆ ಭೇದವಿದೆಯೋ, ನೀರಿನ ಸ್ಪರ್ಶದಿಂದ ಮತ್ಸ್ಯವು ನೀರಿನ ತಾದಾತ್ಮ್ಯವನ್ನು ಎಂದಿಗೂ ಹೇಗೆ ಹೊಂದುವುದಿಲ್ಲವೋ ಅದರಂತೆ ಪರಮಾತ್ಮನಿಗೂ ಜೀವಾತ್ಮನಿಗೂ, ಜಡವಾದ ಪ್ರಪಂಚಕ್ಕೂ ಪರಮಾತ್ಮನಿಗೂ ಭೇದವೇ ನಿರ್ಣಯವಾಗಿದೆ.

ಅನ್ಯೋ ಹ್ಯಗ್ನಿರುಖಾಪ್ಯನ್ಯಾ ನಿತ್ಯಮೇವಮವೈಹಿ ಭೋಃ ।
ನ ಚೋಪಲಿಪ್ಯತೇ ಸೋಽಗ್ನಿರುಖಾಸಂಸ್ಪರ್ಶನೇನ ವೈ ॥೧೬॥

ಅಗ್ನಿಗೂ ಲೋಹಗಳಿಗೆ ಕಾಯಿಸುವುದಕ್ಕೆ ಬೇಕಾದ ಕುಮಟಿಗೂ ನಿತ್ಯವೂ ಭೇದವೇ ಇದೆ. ಲೋಹವನ್ನು ಕಾಯಿಸುವ ಸ್ಥಿತಿಗೂ ಅಗ್ನಿಗೂ ಸಂಬಂಧವಿರುವುದಿಲ್ಲ. ಇದರಂತೆ ಜೀವಾತ್ಮನಿಗೂ ಪರಮಾತ್ಮನಿಗೂ ಅಭೇದವು ಇರುವುದಿಲ್ಲ.

ಪುಷ್ಕರಂ ತ್ವನ್ಯದೇವಾತ್ರ ತಥಾನ್ಯದುದಕಂ ಸ್ಮೃತಮ್ ।
ನ ಚೋದಕಸ್ಯ ಸ್ಪರ್ಶೇನ ಲಿಪ್ಯತೇ ತತ್ರ ಪುಷ್ಕರಮ್ ॥೧೭॥

ನೀರಿನಲ್ಲಿರುವ ತಾವರೆ ಎಲೆಗೂ ನೀರಿಗೂ ಪರಸ್ಪರ ಭೇದವೇ ಇರುವಂತೆ ತಾವರೆ ಎಲೆಯು ನೀರಿನ ಸಂಬಂಧವನ್ನು ಹೊಂದಿದ್ದರೂ ನಿರ್ಲಿಪ್ತವಾಗಿರುವಂತೆ, ಜೀವಾತ್ಮನ ಶರೀರದಲ್ಲಿ ಜೀವಾತ್ಮ-ಪರಮಾತ್ಮ ಇಬ್ಬರಿದ್ದರೂ ಪರಮಾತ್ಮನಿಗೆ ಜೀವಾತ್ಮನ ಶರೀರಕೃತವಾದ ಲೇಪವು ಇರುವುದಿಲ್ಲ.

ಏತೇಷಾಂ ಸಹ ಸಂವಾಸಂ ನಿವಾಸಂ ಚೈವ ನಿತ್ಯಶಃ ।
ಯಥಾ ತಥೈನಂ ಪಶ್ಯಂತಿ ನ ನಿತ್ಯಂ ಪ್ರಾಕೃತಾ ಜನಾಃ ॥೧೮॥

ಈ ಜೀವಾತ್ಮ-ಪರಮಾತ್ಮರ ವಾಸವು ಒಂದೇ ದೇಹದಲ್ಲಿ ಉಂಟಾಗಿದ್ದರೂ ಜೀವಾತ್ಮನು ಪ್ರಕೃತಿಯ ಸಂಬಂಧದಿಂದ ದುಃಖಿತವಾಗಿ ವಾಸಿಸುವಂತೆ ಪರಮಾತ್ಮನು ಎಂದಿಗೂ ದುಃಖದ ಸಂಬಂಧದಿಂದ ಜೀವಾತ್ಮನ ಶರೀರದಲ್ಲಿ ವಾಸಿಸುವುದಿಲ್ಲ. ಪ್ರಕೃತಿಯ ಸಂಬಂಧವನ್ನು ಹೊಂದಿದ ಜೀವಾತ್ಮರು ಪರಮಾತ್ಮನು ಹೇಗೆ ನಿರ್ಲಿಪ್ತನಾಗಿದ್ದಾನೆ ಎಂಬ ವಿಷಯವನ್ನು ತಿಳಿಯುವುದೇ ಇಲ್ಲ.

ಯೇ ತ್ವನ್ಯಥೈವ ಪಶ್ಯಂತಿ ನ ಸಮ್ಯಕ್ತೇಷು ದರ್ಶನಮ್ ।
ತೇ ವ್ಯಕ್ತಂ ನಿರಯಂ ಘೋರಂ ಪ್ರವಿಶಂತಿ ಪುನಃ ಪುನಃ ॥೧೯॥

ಯಾರು ಈ ತತ್ತ್ವಕ್ಕೆ ವಿರುದ್ಧವಾಗಿ ಬ್ರಹ್ಮನೇ ಜೀವಾಕಾರದಿಂದ ಲೇಪವನ್ನು ಹೊಂದಿರುತ್ತಾನೆ ಎಂದು ತಿಳಿಯುತ್ತಾರೋ ಅವರಿಗೆ ಸರಿಯಾದ ಶಾಸ್ತ್ರಜ್ಞಾನವು ಉಂಟಾಗಿರುವುದಿಲ್ಲ. ಅವರು ಈ ಅನ್ಯಥಾ ಜ್ಞಾನದಿಂದಾಗಿ ಪುನಃ ಪುನಃ ಘೋರವಾದ ನರಕವನ್ನು ಪ್ರವೇಶಿಸುತ್ತಲೇ ಇರುತ್ತಾರೆ.

ಸಾಂಖ್ಯದರ್ಶನಮೇತತ್ತೇ ಪರಿಸಂಖ್ಯಾತಮುತ್ತಮಮ್ ।
ಏವಂ ಹಿ ಪರಿಸಂಖ್ಯಾಯ ಸಾಂಖ್ಯಾಃ ಕೇವಲತಾಂ ಗತಾಃ ॥೨೦॥

ನಾನಾತ್ವವನ್ನು, ಅನಂತತ್ವವನ್ನು ಹೇಳುತ್ತಾರೆ. ಜ್ಞಾನಿಗಳಾದವರು ಸಮಸ್ತ ಭೂತಗಳಲ್ಲಿ ದಯೆ ಉಳ್ಳವರು. ಕೇವಲ ಭಗವಂತನ ಧ್ಯಾನದಲ್ಲಿಯೇ ಆಸಕ್ತಿಯನ್ನು ಹೊಂದಿರುತ್ತಾರೆ.

ಅನ್ಯಃ ಸ ಪುರುಷೋಽವ್ಯಕ್ತಾದಧ್ರುವಾತ್ ಧ್ರುವಸಂಜ್ಞಕಃ ।
ಯಥಾ ಮುಂಜ ಇಷೀಕಾಯಾಸ್ತಥೈವೈತದ್ಧಿ ಜಾಯತೇ ॥೧೩॥

ಪರಮಪುರುಷನಾಗಿರುವಂತಹ ಪರಮಾತ್ಮನು ಪ್ರಕೃತಿಬಂಧನವನ್ನು ಹೊಂದಿರುವಂತಹ, ಅಧ್ರುವನೆನಿಸಿದ ಜೀವನಿಗಿಂತಲೂ ಭಿನ್ನನೆನಿಸಿದ್ದಾನೆ. ಧ್ರುವನೆನಿಸಿದ ಪರಮಾತ್ಮನು ಅಧ್ರುವನಾದ ಜೀವನಿಗಿಂತಲೂ ಭಿನ್ನನಾಗಿದ್ದಾನೆ. ಪರಬ್ರಹ್ಮನು ಮುಂಜ ಎಂಬ ಹುಲ್ಲಿನಿಂದ ಬೇರ್ಪಡುವ ಇಷೀಕದಂತೆ ಜೀವಾತ್ಮನಿಂದ ಅತ್ಯಂತ ಭಿನ್ನನಾಗಿಯೇ ಇರುತ್ತಾನೆ.

ಅನ್ಯಂ ಚ ಮಶಕಂ ವಿದ್ಯಾದನ್ಯಚ್ಚೋದುಂಬರಂ ತಥಾ ।
ನ ಚೋದುಂಬರಸಂಯೋಗೈರ್ಮಶಕಸ್ತತ್ರ ಲಿಪ್ಯತೇ ॥೧೪॥

ಅತ್ತಿಯ ಹಣ್ಣಿನಲ್ಲಿರುವಂತಹ ನುಸಿಗೂ ಅತ್ತಿ ಹಣ್ಣಿಗೂ ಹೇಗೆ ಅತ್ಯಂತ ಭೇದವು ನಿಶ್ಚಿತವಾಗಿದೆಯೋ, ಉದುಂಬರ ಹಣ್ಣಿನ ಸಂಯೋಗವಿದ್ದರೂ ಅದರ ಒಳಗಡೆ ಇರುವಂತಹ ನುಸಿಯು ಅದರ ಸಂಬಂಧವನ್ನು ಹೇಗೆ ಹೊಂದುವುದಿಲ್ಲವೋ ಇದರಂತೆ ಜೀವನಿಗೂ ಪರಮಾತ್ಮನಿಗೂ ಪರಸ್ಪರ ಭೇದವು ನಿರ್ಣಯವಾಗಿದೆ.

ಅನ್ಯ ಏವ ತಥಾ ಮತ್ಸ್ಯಸ್ತಥಾನ್ಯದುದಕಂ ಸ್ಮೃತಮ್ ।
ನ ಚೋದಕಸ್ಯ ಸ್ಪರ್ಶೇನ ಮತ್ಸ್ಯೋ ಲಿಪ್ಯತಿ ಸರ್ವಶಃ ॥೧೫॥

ಜಲದಲ್ಲಿ ಸಂಚರಿಸುವಂತಹ ಮತ್ಸ್ಯಕ್ಕೂ, ನೀರಿಗೂ ಹೇಗೆ ಭೇದವಿದೆಯೋ, ನೀರಿನ ಸ್ಪರ್ಶದಿಂದ ಮತ್ಸ್ಯವು ನೀರಿನ ತಾದಾತ್ಮ್ಯವನ್ನು ಎಂದಿಗೂ ಹೇಗೆ ಹೊಂದುವುದಿಲ್ಲವೋ ಅದರಂತೆ ಪರಮಾತ್ಮನಿಗೂ ಜೀವಾತ್ಮನಿಗೂ, ಜಡವಾದ ಪ್ರಪಂಚಕ್ಕೂ ಪರಮಾತ್ಮನಿಗೂ ಭೇದವೇ ನಿರ್ಣಯವಾಗಿದೆ.

ಅನ್ಯೋ ಹ್ಯಗ್ನಿರುಖಾಪ್ಯನ್ಯಾ ನಿತ್ಯಮೇವಮವೈಹಿ ಭೋಃ ।
ನ ಚೋಪಲಿಪ್ಯತೇ ಸೋಽಗ್ನಿರುಖಾಸಂಸ್ಪರ್ಶನೇನ ವೈ ॥೧೬॥

ಅಗ್ನಿಗೂ ಲೋಹಗಳಿಗೆ ಕಾಯಿಸುವುದಕ್ಕೆ ಬೇಕಾದ ಕುಮಟಿಗೂ ನಿತ್ಯವೂ ಭೇದವೇ ಇದೆ. ಲೋಹವನ್ನು ಕಾಯಿಸುವ ಸ್ಥಿತಿಗೂ ಅಗ್ನಿಗೂ ಸಂಬಂಧವಿರುವುದಿಲ್ಲ. ಇದರಂತೆ ಜೀವಾತ್ಮನಿಗೂ ಪರಮಾತ್ಮನಿಗೂ ಅಭೇದವು ಇರುವುದಿಲ್ಲ.

ಪುಷ್ಕರಂ ತ್ವನ್ಯದೇವಾತ್ರ ತಥಾನ್ಯದುದಕಂ ಸ್ಮೃತಮ್ ।
ನ ಚೋದಕಸ್ಯ ಸ್ಪರ್ಶೇನ ಲಿಪ್ಯತೇ ತತ್ರ ಪುಷ್ಕರಮ್ ॥೧೭॥

ನೀರಿನಲ್ಲಿರುವ ತಾವರೆ ಎಲೆಗೂ ನೀರಿಗೂ ಪರಸ್ಪರ ಭೇದವೇ ಇರುವಂತೆ ತಾವರೆ ಎಲೆಯು ನೀರಿನ ಸಂಬಂಧವನ್ನು ಹೊಂದಿದ್ದರೂ ನಿರ್ಲಿಪ್ತವಾಗಿರುವಂತೆ, ಜೀವಾತ್ಮನ ಶರೀರದಲ್ಲಿ ಜೀವಾತ್ಮ-ಪರಮಾತ್ಮ ಇಬ್ಬರಿದ್ದರೂ ಪರಮಾತ್ಮನಿಗೆ ಜೀವಾತ್ಮನ ಶರೀರಕೃತವಾದ ಲೇಪವು ಇರುವುದಿಲ್ಲ.

ಏತೇಷಾಂ ಸಹ ಸಂವಾಸಂ ನಿವಾಸಂ ಚೈವ ನಿತ್ಯಶಃ ।
ಯಥಾ ತಥೈನಂ ಪಶ್ಯಂತಿ ನ ನಿತ್ಯಂ ಪ್ರಾಕೃತಾ ಜನಾಃ ॥೧೮॥

ಈ ಜೀವಾತ್ಮ-ಪರಮಾತ್ಮರ ವಾಸವು ಒಂದೇ ದೇಹದಲ್ಲಿ ಉಂಟಾಗಿದ್ದರೂ ಜೀವಾತ್ಮನು ಪ್ರಕೃತಿಯ ಸಂಬಂಧದಿಂದ ದುಃಖಿತವಾಗಿ ವಾಸಿಸುವಂತೆ ಪರಮಾತ್ಮನು ಎಂದಿಗೂ ದುಃಖದ ಸಂಬಂಧದಿಂದ ಜೀವಾತ್ಮನ ಶರೀರದಲ್ಲಿ ವಾಸಿಸುವುದಿಲ್ಲ. ಪ್ರಕೃತಿಯ ಸಂಬಂಧವನ್ನು ಹೊಂದಿದ ಜೀವಾತ್ಮರು ಪರಮಾತ್ಮನು ಹೇಗೆ ನಿರ್ಲಿಪ್ತನಾಗಿದ್ದಾನೆ ಎಂಬ ವಿಷಯವನ್ನು ತಿಳಿಯುವುದೇ ಇಲ್ಲ.

ಯೇ ತ್ವನ್ಯಥೈವ ಪಶ್ಯಂತಿ ನ ಸಮ್ಯಕ್ತೇಷು ದರ್ಶನಮ್ ।
ತೇ ವ್ಯಕ್ತಂ ನಿರಯಂ ಘೋರಂ ಪ್ರವಿಶಂತಿ ಪುನಃ ಪುನಃ ॥೧೯॥

ಯಾರು ಈ ತತ್ತ್ವಕ್ಕೆ ವಿರುದ್ಧವಾಗಿ ಬ್ರಹ್ಮನೇ ಜೀವಾಕಾರದಿಂದ ಲೇಪವನ್ನು ಹೊಂದಿರುತ್ತಾನೆ ಎಂದು ತಿಳಿಯುತ್ತಾರೋ ಅವರಿಗೆ ಸರಿಯಾದ ಶಾಸ್ತ್ರಜ್ಞಾನವು ಉಂಟಾಗಿರುವುದಿಲ್ಲ. ಅವರು ಈ ಅನ್ಯಥಾ ಜ್ಞಾನದಿಂದಾಗಿ ಪುನಃ ಪುನಃ ಘೋರವಾದ ನರಕವನ್ನು ಪ್ರವೇಶಿಸುತ್ತಲೇ ಇರುತ್ತಾರೆ.

ಸಾಂಖ್ಯದರ್ಶನಮೇತತ್ತೇ ಪರಿಸಂಖ್ಯಾತಮುತ್ತಮಮ್ ।
ಏವಂ ಹಿ ಪರಿಸಂಖ್ಯಾಯ ಸಾಂಖ್ಯಾಃ ಕೇವಲತಾಂ ಗತಾಃ ॥೨೦॥

ಚೆನ್ನಾಗಿ ವಿಚಾರಿಸಲ್ಪಟ್ಟ ಯಥಾರ್ಥಜ್ಞಾನವನ್ನು ನೀಡುವ ಸಾಂಖ್ಯದರ್ಶನದ ಯೋಗವು ಪರಮಾತ್ಮನ ಸ್ವರೂಪವನ್ನು ಸ್ಪಷ್ಟವಾಗಿ ನಿರೂಪಿಸಿದೆ. ಈ ಸಾಂಖ್ಯ ದರ್ಶನವನ್ನು ಅವಲಂಬಿಸಿ ಯಥಾರ್ಥವಾಗಿ ಭಗವತ್ತತ್ತ್ವವನ್ನು ಹೊಂದಿದ ಜೀವಾತ್ಮರು ಪ್ರಕೃತಿಯ ಸಂಬಂಧವನ್ನು ದೂರೀಕರಿಸಿಕೊಂಡು ಶುದ್ಧರಾಗಿರುತ್ತಾರೆ.

ಯೇ ತ್ವನ್ಯೇ ತತ್ತ್ವಕುಶಲಾಸ್ತೇಷಾಮೇತನ್ನಿದರ್ಶನಮ್ ।
ಅತಃ ಪರಂ ಪ್ರವಕ್ಷ್ಯಾಮಿ ಯೋಗಾನಾಮಪಿ ದರ್ಶನಮ್ ॥೨೧॥

ತತ್ತ್ವಜ್ಞರಾದ ಇತರ ಶಾಸ್ತ್ರಜ್ಞರ ನಿಶ್ಚಯವು ಇದೇ ಆಗಿದೆ. ಯೋಗಿಗಳ ಜ್ಞಾನವು ಯಾವ ಕ್ರಮದಲ್ಲಿ ಇರುತ್ತದೆ ಎಂಬುದನ್ನು ಇನ್ನು ಮುಂದೆ ನಿನಗೆ ತಿಳಿಸುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೆಂಟನೆಯ ಅಧ್ಯಾಯ

ಜನಕ-ಯಾಜ್ಞವಲ್ಕ್ಯರ ಸಂವಾದ

ಯಾಜ್ಞವಲ್ಕ್ಯಃ

ಸಾಂಖ್ಯಜ್ಞಾನಂ ಮಯಾ ಪ್ರೋಕ್ತಂ ಯೋಗಜ್ಞಾನಂ ನಿಬೋಧ ಮೇ ।
ಯಥಾಶ್ರುತಂ ಯಥಾದೃಷ್ಟಂ ತತ್ತ್ವೇನ ನೃಪಸತ್ತಮ ॥೧॥

ಯಾಜ್ಞವಲ್ಕ್ಯ- ರಾಜೇಂದ್ರನೇ, ಇಲ್ಲಿಯ ತನಕ ಸಾಂಖ್ಯಯೋಗವನ್ನು ನಿನಗೆ ತಿಳಿಸಿದ್ದೇನೆ. ಜ್ಞಾನಯೋಗವನ್ನು ನಿನಗೆ ತಿಳಿಸುತ್ತೇನೆ, ಕೇಳು. ನಾನು ಹಿಂದೆ ಜ್ಞಾನಿಗಳಿಂದ ಹೇಗೆ ಕೇಳಿದ್ದೇನೋ ಅದೇ ಕ್ರಮದಲ್ಲಿ ನಿನಗೆ ತಿಳಿಸುತ್ತೇನೆ.

ನಾಸ್ತಿ ಸಾಂಖ್ಯಸಮಂ ಜ್ಞಾನಂ ನಾಸ್ತಿ ಯೋಗಸಮಂ ಬಲಮ್ ।
ತಾವುಭಾವೇಕಚರ್ಯೌ ತು ಉಭಾವನಿಧನೌ ಸ್ಮೃತೌ ॥೨॥

ಜ್ಞಾನಯೋಗಕ್ಕೆ ಸಮಾನವಾದ ಜ್ಞಾನವು ಜಗತ್ತಿನಲ್ಲಿ ಯಾವುದೂ ಇರುವುದಿಲ್ಲ. ಯೋಗಕ್ಕೆ ಸಮಾನವಾದ ಬಲವೂ ಇರುವುದಿಲ್ಲ. ಈ ಸಾಂಖ್ಯತತ್ತ್ವವು ಯೋಗವು,

ಯೋಗಶಾಸ್ತ್ರವು ಇವೆರಡು ಒಂದೇ ಮಾರ್ಗವನ್ನು ಅನುಸರಿಸುವವುಗಳಾಗಿವೆ. ಈ ಎರಡು ಮಾರ್ಗಗಳು ಜೀವರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಮರ್ಥಗಳಾಗಿವೆ.

ಪೃಥಕ್‌ಪೃಥಕ್ತು ಪಶ್ಯಂತಿ ಯೇಲ್ಪಬುದ್ಧಿರತಾ ನರಾಃ ।
ವಯಂ ತು ರಾಜನ್ ಪಶ್ಯಾಮ ಏಕಮೇವ ತು ನಿಶ್ಚಯಾತ್ ॥೩॥

ಯಾವ ಮನುಷ್ಯರಿಗೆ ಅಲ್ಪವಾದ ಬುದ್ಧಿ ಇದೆಯೋ, ಅಲ್ಪ ಬುದ್ಧಿಯಲ್ಲೇ ಆಸಕ್ತರೋ ಅವರು ಈ ಸಾಂಖ್ಯಶಾಸ್ತ್ರ ಯೋಗಶಾಸ್ತ್ರಗಳಲ್ಲಿ ಭೇದವನ್ನು ನೋಡುತ್ತಾರೆ. ನಾವಾದರೂ ದೃಢವಾದ ನಿಶ್ಚಯದಿಂದ ಅವೆರಡನ್ನೂ ಒಂದೇ ಎಂದು ತಿಳಿದಿದ್ದೇವೆ.

ಯದೇವ ಯೋಗಾಃ ಪಶ್ಯಂತಿ ತತ್ ಸಾಂಖ್ಯೈರಪಿ ದೃಶ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ತತ್ತ್ವವಿತ್ ॥೪॥

ಯೋಗಶಾಸ್ತ್ರಜ್ಞರು ನೋಡುವುದನ್ನೇ ಸಾಂಖ್ಯಯೋಗಿಗಳು ನೋಡುತ್ತಾರೆ. ಈ ಎರಡೂ ಶಾಸ್ತ್ರಗಳನ್ನು ಒಂದೇ ಎಂದು ಭಾವಿಸುವವನೇ ನಿಜವಾದ ತತ್ತ್ವಜ್ಞನಾಗಿದ್ದಾನೆ.

ರುದ್ರಪ್ರಧಾನಾನಪರಾನ್ ವಿದ್ಧಿ ಯೋಗಾನ್ ಪರಂತಪ ।
ತೇನೈವ ಚಾಥ ದೇಹೇನ ವಿಚರಂತಿ ದಿಶೋ ದಶ ॥೫॥

ಈ ಸಾಂಖ್ಯಶಾಸ್ತ್ರವನ್ನು ಮೊದಲು ಉಪದೇಶಿಸಿದವನು ಮಹಾರುದ್ರ ದೇವನಾಗಿದ್ದಾನೆ. ಬಳಿಕ ಅನೇಕರು ಈ ಸಾಂಖ್ಯಯೋಗವನ್ನು ಅವಲಂಬಿಸಿರುತ್ತಾರೆ. ಈ ಸಾಂಖ್ಯಯೋಗದಿಂದಲೇ ಮನಬಂದಲ್ಲಿ ಸ್ವೇಚ್ಛೆಯಾಗಿ ಸಂಚರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ.

ಯಾವದ್ಧಿ ಪ್ರಲಯಸ್ತಾತ ಸೂಕ್ಷ್ಮೇಣಾಷ್ಟಗುಣೇನ ವೈ ।
ಯೋಗೇನ ಲೋಕಾನ್ ವಿಚರನ್ ಸುಖಂ ಸನ್ನ್ಯಸ್ಯ ಚಾನಘ ॥೬॥

ಯೋಗಿಗಳು ತಮ್ಮ ಸ್ಥೂಲದೇಹವನ್ನು ಬಿಟ್ಟು ಪ್ರಳಯ ಕಾಲದ ತನಕ ಅಣಿಮಾ, ಲಘಿಮಾದಿ ಎಂಟುಸಿದ್ಧಿಗಳನ್ನು ಹೊಂದಿರುವ ಸೂಕ್ಷ್ಮವಾದ ದೇಹಗಳಿಂದ ಸುಖವಾಗಿ ಲೋಕಗಳಲ್ಲಿ ಸಂಚರಿಸುತ್ತಾರೆ.

ವೇದೇಷು ಚಾಷ್ಟಗುಣಿತಂ ಯೋಗಮಾಹುರ್ಮನೀಷಿಣಃ ।
ಸೂಕ್ಷ್ಮೇಣಾಷ್ಟಗುಣೇನೈವ ನೇತರಂ ನೃಪಸತ್ತಮ ॥೭॥

ಧೀಮಂತರಾದ ಯೋಗಿಗಳಿಗೆ ಅಣಿಮಾದಿ ಅಷ್ಟಗುಣಗಳಿವೆ. ವೇದಗಳಲ್ಲಿ ಹೇಳಿದ ಅಷ್ಟಾಂಗ ಯೋಗಗಳನ್ನು ಜ್ಞಾನಿಗಳಾದವರು ತಿಳಿದು ಸೂಕ್ಷ್ಮವಾದ ಈ ಅಣಿಮಾದಿ ಅಷ್ಟಗುಣಗಳನ್ನು ಹೊಂದಿದವರಾಗಿರುತ್ತಾರೆ. ಈ ಶಾಸ್ತ್ರಜ್ಞರನ್ನು ಹೊರತು ಬೇರೆಯವರಿಗೆ ಇವುಗಳನ್ನು ಹೊಂದಲು ಸಾಧ್ಯವಾಗುವುದಿಲ್ಲ.

ದ್ವಿಗುಣಂ ಯೋಗಕೃತ್ಯಂ ತು ಯೋಗಾನಾಂ ಪ್ರಾಹುರುತ್ತಮಮ್ ।
ಸಗುಣಂ ನಿರ್ಗುಣಂ ಚೈವ ಯಥಾಶಾಸ್ತ್ರನಿದರ್ಶನಮ್ ॥೮॥

ಯೋಗಿಗಳು ಯೋಗಕಾರ್ಯವನ್ನು ಶಾಸ್ತ್ರೀಯವಾಗಿ ಸಗುಣವೆಂದೂ, ನಿರ್ಗುಣವೆಂದೂ ಹೇಳಿರುತ್ತಾರೆ.

ಧಾರಣಾ ಚೈವ ಮನಸಃ ಪ್ರಾಣಾಯಾಮಶ್ಚ ಪಾರ್ಥಿವ ।
ಪ್ರಾಣಾಯಾಮೋ ಹಿ ಸಗುಣೋ ನಿರ್ಗುಣಂ ಧಾರಣಂ ಮನಃ ॥೯॥

ರಾಜೇಂದ್ರನೇ, ಮನಸ್ಸನ್ನು ಮೂಲಾಧಾರಮೊದಲಾದ ಸ್ಥಳಗಳಲ್ಲಿ ಧರಿಸುವುದು, ಪ್ರಾಣಧಾರಣೆ ಮಾಡುವುದು ಈ ರೀತಿಯಾದ ಪ್ರಾಣಾಯಾಮವು ಸಗುಣ ಯೋಗ ಎನಿಸಿದರೆ, ಮನಸ್ಸನ್ನು ಏಕಾಗ್ರತೆಯಿಂದ ನಿಲ್ಲಿಸುವುದು, ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಮನಸ್ಸನ್ನು ತ್ರಿಗುಣಗಳಸಂಬಂಧವನ್ನು ಹೊಂದದಿರುವ ಭಗವಂತನಲ್ಲಿಯೇ ಏಕಾಗ್ರಗೊಳಿಸುವುದು ನಿರ್ಗುಣ ಯೋಗ ಎನಿಸಿದೆ.

ಯತ್ರ ದೃಶ್ಯೇತ ಮುಂಚನ್ ವೈ ಪ್ರಾಣಾನ್ಮೈಥಿಲಸತ್ತಮ ।
ವಾತಾಧಿಕ್ಯಂ ಭವತ್ಯೇವ ತಸ್ಮಾದ್ಧಿ ನ ಸಮಾಚರೇತ್ ॥೧೦॥

ಮಿಥಿಲಾಧಿಪನೇ, ಇಂದ್ರಿಯಗಳು ಎಲ್ಲಿ ನೋಡಲು ಬಯಸುತ್ತವೋ ಅಲ್ಲಿಗೆ ಅವುಗಳನ್ನು ಬಿಡುತ್ತಾ ಒಂದು ವಸ್ತುವಿನ ಏಕಾಗ್ರತೆಯನ್ನು ಹೊಂದದಿದ್ದಲ್ಲಿ ಇಂದ್ರಿಯಗಳಿಗೆ ಪರಮಾತ್ಮನೆಂಬ ಒಂದೇ ವಸ್ತುವಿನ ಧ್ಯಾನವನ್ನು ನೀಡದೆ ಪ್ರಾಣಾಯಾಮಾದಿಗಳಲ್ಲಿ ನಿರತನಾದಲ್ಲಿ ವಾತರೋಗವು ಅಧಿಕವಾಗುತ್ತದೆ.ಆದ್ದರಿಂದ ಧ್ಯಾನವಿಲ್ಲದಿರುವ ಪ್ರಾಣಾಯಾಮವನ್ನು ಎಂದಿಗೂ ಆಚರಿಸಬಾರದು.

ನಿಶಾಯಾಃ ಪ್ರಥಮೇ ಯಾಮೇ ಚೋದನಾ ದ್ವಾದಶ ಸ್ಮೃತಾಃ ।
ಮಧ್ಯೇ ಸುಪ್ತ್ವಾ ಪರೇ ಯಾಮೇ ದ್ವಾದಶೈವ ತು ಚೋದನಾಃ ॥೧೧॥

ರಾತ್ರಿಯ ಪ್ರಥಮ ಯಾಮದಲ್ಲಿ ಹನ್ನೆರಡು ಘಟಿಕಾ ಪರ್ಯಂತ ಯೋಗಾಭ್ಯಾಸವನ್ನು ಮಾಡಬೇಕು. ಹನ್ನೆರಡು ಗಂಟೆಯ ತನಕ ಯೋಗಾಭ್ಯಾಸದ ಕಾಲ ಎಂದು ನಿರ್ಧರಿಸಲ್ಪಟ್ಟಿದೆ. ಮಧ್ಯರಾತ್ರಿ ನಿದ್ರೆಯ ಕಾಲವು. ಆ ಸಮಯದಲ್ಲಿ ಯೋಗಾಭ್ಯಾಸವು ಉಚಿತವಾದುದಲ್ಲ. ನಂತರದ ಪ್ರಾತಃಕಾಲದ ಕೊನೆಯ ಯಾಮದಲ್ಲಿ ಹನ್ನೆರಡು ಘಟಿಕಾಪರ್ಯಂತ ಪ್ರಾಣಾಯಾಮವನ್ನು, ಯೋಗಾಭ್ಯಾಸವನ್ನು ನಡೆಸಬೇಕು (ಒಟ್ಟಿನಲ್ಲಿ ಬೆಳಿಗ್ಗೆ ನಾಲ್ಕು ಗಂಟೆಯಿಂದ ರಾತ್ರಿ ಹನ್ನೆರಡು ಗಂಟೆಯ ತನಕ ಭಗವದ್ಧ್ಯಾನವನ್ನು ವಿಧ ವಿಧವಾಗಿ ಆಚರಿಸಲು ಯೋಗ್ಯಕಾಲವೇ ಎನಿಸಿದೆ).

ತದೇವಮುಪಶಾಂತೇನ ದಾಂತೇನೈಕಾಂತಶೀಲಿನಾ ।
ಆತ್ಮಾರಾಮೇಣ ಬುದ್ಧೇನ ಯೋಕ್ತವ್ಯೋಽಽತ್ಮಾ ನ ಸಂಶಯಃ ॥೧೨॥

ಹೀಗೆ ಮನಸ್ಸಿನ ಶಾಂತಿಯನ್ನು, ಇಂದ್ರಿಯಜಯವನ್ನು, ಏಕಾಂತಶೀಲವನ್ನು ಸಾಧಿಸುತ್ತಾ, ಆತ್ಮಾರಾಮನಾಗಿ ಜ್ಞಾನಿಯಾದವನಿಗೆ ಮನಸ್ಸು ಪರಮಾತ್ಮನಲ್ಲೇ ಏಕಾಗ್ರತೆಯನ್ನು ಹೊಂದುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಪಂಚಾನಾಮಿಂದ್ರಿಯಾಣಾಂ ತು ದೋಷಾನಾಕ್ಷಿಪ್ಯ ಪಂಚಧಾ ।
ಶಬ್ದಂ ಸ್ಪರ್ಶಂ ತಥಾ ರೂಪಂ ರಸಂ ಗಂಧಂ ತಥೈವ ಚ ॥೧೩॥

ಪ್ರತಿಭಾಮಪವರ್ಗಂ ಚ ಪ್ರತಿಸಂಹೃತ್ಯ ಮೈಥಿಲ ।
ಇಂದ್ರಿಯಗ್ರಾಮಮಖಿಲಂ ಮನಸ್ಯಭಿನಿವೇಶ್ಯ ಹ ॥೧೪॥

ಜ್ಞಾನಿಗಳಾದವರು ಇಂದ್ರಿಯಗಳ ದೋಷವೆನಿಸಿದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು ನೀಗಿಸಿಕೊಂಡು ಭಗವಂತನ ಜ್ಞಾನವನ್ನು ಮೋಕ್ಷದ ವಿಚಾರವನ್ನು ಮನಸ್ಸಿನಲ್ಲಿ ಸಂಚರಿಸಿಕೊಂಡು ಸಮಸ್ತ ಇಂದ್ರಿಯಗಳನ್ನು ಮನಸ್ಸಿನಲ್ಲಿಯೇ ನೆಲೆಗೊಳಿಸಿಕೊಂಡು ಭಗವಂತನನ್ನು ಚಿಂತಿಸಬೇಕು.

ಮನಸ್ತಥೈವಾಹಂಕಾರೇ ಪ್ರತಿಷ್ಠಾಪ್ಯ ನರಾಧಿಪ ।
ಅಹಂಕಾರಂ ತಥಾ ಬುದ್ಧೌ ಬುದ್ಧಿಂ ಚ ಪ್ರಕೃತಾವಪಿ ॥೧೫॥

ಇಂದ್ರಿಯಗಳೆಲ್ಲ ಮನಸ್ಸಿನಲ್ಲಿ ನೆಲೆಗೊಂಡ ಬಳಿಕ ಮನಸ್ತತ್ತ್ವವನ್ನು ಅಹಂಕಾರ ತತ್ತ್ವದಲ್ಲಿ ಪ್ರತಿಷ್ಠಾಪಿಸಿ, ಅಹಂಕಾರತತ್ತ್ವವನ್ನು ಬುದ್ಧಿತತ್ತ್ವದಲ್ಲಿ ನೆಲೆಗೊಳಿಸಿ, ಬುದ್ಧಿತತ್ತ್ವವನ್ನು ಮೂಲಪ್ರಕೃತಿ ಅಭಿಮಾನಿಯಾದ ಲಕ್ಷ್ಮೀತತ್ತ್ವದಲ್ಲಿ ಏಕಾಗ್ರಗೊಳಿಸಿಕೊಳ್ಳಬೇಕು.

ಏವಂ ಹಿ ಪರಿಸಂಖ್ಯಾಯ ತತೋ ಧ್ಯಾಯೇತ ಕೇವಲಮ್ ।
ವಿರಜಸ್ಕಮಲಂ ನಿತ್ಯಮನಂತಂ ಶುದ್ಧಮವ್ರಣಮ್ ॥೧೬॥

ಈ ರೀತಿಯಾಗಿ ತತ್ತ್ವಗಳನ್ನು ಸರಿಯಾಗಿ ನಿರ್ವಹಿಸಿಕೊಳ್ಳುತ್ತಾ ಪ್ರಕೃತಿ ಸಂಬಂಧ ದೂರನಾದ ಭಗವಂತನನ್ನು ಆ ಪ್ರಕೃತಿತತ್ತ್ವದಲ್ಲಿ ಧ್ಯಾನ ಮಾಡಬೇಕು. ಭಗವಂತನಾದರೂ ರಜೋದೋಷದಿಂದ ರಹಿತನೂ, ನಿರ್ಮಲನೂ, ನಿತ್ಯನೂ, ಅನಂತನೂ, ಶುದ್ಧನೂ, ದೋಷರಹಿತನೂ ಆಗಿರುತ್ತಾನೆ.

ತಮ್ಷುಷಂ ಪುರುಷಂ ಸತ್ತ್ವಮಭೇದ್ಯಮಜರಾಮರಮ್ ।
ಶಾಶ್ವತಂ ಚಾವ್ಯಯಂ ಚೈವ ಈಶಾನಂ ಬ್ರಹ್ಮ ಚಾವ್ಯಯಮ್ ॥೧೭॥

ಸಮಸ್ತ ಜೀವರಿಗೆ ಅಂತರ್ಯಾಮಿಯೂ, ಪೂರ್ಣನೂ, ಅಭೇದ್ಯನೂ, ಜರಾ-ಮರಣ ರಹಿತನೂ, ಶಾಶ್ವತನೂ, ಅವ್ಯಯನೂ, ಸಮಸ್ತ ಜೀವರಿಗೆ ನಿಯಾಮಕನೂ, ಗುಣಪರಿಪೂರ್ಣನೂ ಆಗಿರುತ್ತಾನೆ.

ಯುಕ್ತಸ್ಯ ತು ಮಹಾರಾಜ ಲಕ್ಷಣಾನ್ಯುಪಧಾರಯೇತ್ ।
ಲಕ್ಷಣಂ ತು ಪ್ರಸಾದಸ್ಯ ಯಥಾ ತೃಪ್ತಃ ಸುಖಂ ಸ್ವಪೇತ್ ॥೧೮॥

ಈ ಪರಬ್ರಹ್ಮನಲ್ಲಿಯೇ ಮನಸ್ಸನ್ನು ಧರಿಸುವವನಾಗು. ಯೋಗದ ಲಕ್ಷಣಗಳನ್ನು ತಿಳಿದು ಭಗವಂತನನ್ನೇ ಚಿಂತಿಸಬೇಕು. ಯೋಗಯುಕ್ತನಾದ ವ್ಯಕ್ತಿಗೆ ಪ್ರಸನ್ನತೆಯ ಲಕ್ಷಣವೇನೆಂದರೆ ತೃಪ್ತಿಯನ್ನು ಹೊಂದಿದವನಾಗಿ ಸುಖವಾಗಿ ನಿದ್ರಿಸುತ್ತಾನೆ.

ನಿವಾತೇ ತು ಯಥಾ ದೀಪೋ ಜ್ವಲೇತ್ ಸ್ನೇಹಸಮನ್ವಿತಃ ।
ನಿಶ್ಚಲೋರ್ಧ್ವಶಿಖಸ್ತದ್ವದ್ಯುಕ್ತಮಾಹುರ್ಮನೀಷಿಣಃ ॥೧೯॥

ಯೋಗಿಯು, ಗಾಳಿ ಇಲ್ಲದ ಸ್ಥಳದಲ್ಲಿ ನಿಶ್ಚಲವಾಗಿ ಉರಿಯುವ ದೀಪಜ್ವಾಲೆಯಂತೆ ಇರುತ್ತಾನೆಂದು ಜ್ಞಾನಿಗಳು ಹೇಳುತ್ತಾರೆ.

ಪಾಷಾಣ ಇವ ಮೇಘೋತ್ಕೃರ್ಯಥಾ ಬಿಂದುಭಿರಾಹತಃ ।
ನಾಲಂ ಚಾಲಯಿತುಂ ಶಕ್ಯಸ್ತಥಾ ಯುಕ್ತಸ್ಯ ಲಕ್ಷಣಮ್ ॥೨೦॥

ಮೇಘಗಳಿಂದ ಅತ್ಯಂತ ಪ್ರಬಲವಾದ ನೀರಿನ ಧಾರೆಗಳು ಧರೆಗೆ ಉರುಳುತ್ತಿದ್ದರೂ ಆ ನೀರಿನ ಧಾರೆಗಳು ಕಲ್ಲುಬಂಡೆಯನ್ನು ಹೇಗೆ ಕದಲಿಸಲು, ಕರಗಿಸಲು ಹೇಗೆ ಸಮರ್ಥವಾಗುವುದಿಲ್ಲವೋ ಅದರಂತೆ ಯೋಗಿಯ ನಿರಂತರ ಭಗವಂತನ ಪ್ರಜ್ಞೆಯು ಜಗತ್ತಿನ ಬಾಹ್ಯವಿಚಾರ ಧಾರೆಗಳಿಂದ ಅಲುಗಾಡಿಸಲಾಗದು.

ಶಂಖದುಂದುಭಿನಿರ್ಘೋಷೈರ್ವಿವಿಧೈರ್ಗೀತವಾದಿತ್ರೈಃ ।
ಕ್ರಿಯಮಾಣೈರ್ನ ಕಂಪೇತ ಯುಕ್ತಸ್ಯೈತನ್ನಿದರ್ಶನಮ್ ॥೨೧॥

ಶಂಖದುಂದುಭಿಯ ಘೋಷಗಳಿಗೂ, ಅನೇಕ ರೀತಿಯ ದಾನಗಳಿಗೂ ಮನಸ್ಸು ಕದಡದಿರುವುದೇ ಪಕ್ವಯೋಗಿಯ ಲಕ್ಷಣವು.

ತೈಲಪಾತ್ರಂ ಯಥಾ ಪೂರ್ಣಂ ಕರಾಭ್ಯಾಂ ಗೃಹ್ಯ ಪೂರುಷಃ ।
ಸೋಪಾನಮಾರುಹೇದ್ಭೀತಸ್ತರ್ಜ್ಯಮಾನೋಽಸಿಪಾಣಿಭಿಃ ॥೨೨॥

ಸಂಯತಾತ್ಮಾ ಭಯಾತ್ ತೇಷಾಂ ನ ಪಾತ್ರಾದಿ ಕಮುತ್ಸೃಜೇತ್ ।
ತಥೈವೋತ್ತರಮಾಣಸ್ಯ ಏಕಾಗ್ರಮನಸಸ್ತಥಾ ॥೨೩॥

ಒಬ್ಬನು ಎಣ್ಣೆತುಂಬಿದ ಪಾತ್ರೆಯನ್ನು ಕೈಗಳಲ್ಲಿ ಹಿಡಿದುಕೊಂಡು ಅತ್ಯಂತ ಕಡಿದಾದ ಬೆಟ್ಟಗಳನ್ನು ಏರುವಾಗ ಖಡ್ಗಪಾಣಿಗಳಾದ ಶತ್ರುಗಳು ಬಂದು ಅವನನ್ನು ಕೊಲ್ಲುವುದಾಗಿ ಹೆದರಿಸಿದರೂ ಅವರ ಭಯಕ್ಕೆ ಮನಸ್ಸನ್ನು ಕೆಡಿಸಿಕೊಳ್ಳದೆ ಒಂದು ಹನಿ ಎಣ್ಣೆಯೂ ಕೆಳಗೆ ಬೀಳದಂತೆ ತನ್ನ ಗುರಿಯನ್ನು ಹೇಗೆ ಹೊಂದುತ್ತಾನೋ ಅದರಂತೆ ಯೋಗಿಯಾದವನು ಯೋಗದ ಬಲದಿಂದ ಮನಸ್ಸನ್ನು, ಇಂದ್ರಿಯಗಳನ್ನು ಸ್ವಲ್ಪ ಮಾತ್ರವೂ ಕದಡದಂತೆ ತನ್ನ ವಶದಲ್ಲಿಟ್ಟುಕೊಳ್ಳುತ್ತಾನೆ.

ಸ್ಥಿರತ್ವಾದಿಂದ್ರಿಯಾಣಾಂ ತು ನಿಶ್ಚಲತ್ವಾತ್ತಥೈವ ಚ ।
ಏವಂ ಯುಕ್ತಸ್ಯ ತು ಮುನೇರ್ಲಕ್ಷಣಾನ್ಯುಪಧಾರಯೇತ್ ॥೨೪॥

ಇಂದ್ರಿಯಗಳು ಸ್ಥಿರವಾಗಿ ಭಗವಂತನಲ್ಲಿ ನೆಲೆಗೊಂಡಿರುವುದರಿಂದ ವಿಷಯ ಪದಾರ್ಥಗಳ ಕಡೆ ಚಲಿಸದಿರುವುದರಿಂದ ಯೋಗಿಯು ಭಗವಂತನಲ್ಲಿಯೇ ಯುಕ್ತನಾಗಿದ್ದಾನೆ ಎಂದು ಮುನಿಯ ಲಕ್ಷಣವನ್ನು ತಿಳಿದುಕೊಳ್ಳಬಹುದು.

ಸ ಯುಕ್ತಃ ಪಶ್ಯತಿ ಬ್ರಹ್ಮ ಯತ್ತತ್ ಪರಮಮವ್ಯಯಮ್ ।
ಮಹತಸ್ತಮಸೋ ಮಧ್ಯೇ ಸ್ಥಿತಂ ಜ್ವಲನಸನ್ನಿಭಮ್ ॥೨೫॥

ಅಂತಹ ಯೋಗಯುಕ್ತನಾದ ಸಾಧಕನು ಸರ್ವೋತ್ತಮನಾದ, ನಾಶರಹಿತನಾದ, ಗುಣಪರಿಪೂರ್ಣನಾದ ಪರಮಾತ್ಮನನ್ನು ನೋಡುತ್ತಾನೆ. ಮಹತ್ತಾದ ಕತ್ತಲೆಯ ನಡುವೆಯೂ ಅಗ್ನಿಗೆ ಸಮಾನವಾಗಿ ಜ್ವಲಿಸುವ ಪರಬ್ರಹ್ಮನನ್ನು ಕಾಣಲು ಸಮರ್ಥನಾಗುತ್ತಾನೆ.

ಏತೇನ ಕೇವಲಂ ಯಾತಿ ತ್ಯಕ್ತ್ವಾ ದೇಹಮಸಾಕ್ಷಿಕಮ್ ।
ಕಾಲೇನ ಮಹತಾ ರಾಜನ್ ಶ್ರುತಿರೇಷಾ ಸನಾತನೀ ॥೨೬॥

ಈ ಮಹಾಯೋಗಜ್ಞಾನದ ಬಲದಿಂದ ಹೇಯವಾದ ಪ್ರಾಕೃತಿಕ ದೇಹವನ್ನು ಪರಿಹರಿಸಿಕೊಂಡು, ಕಾಲಕ್ರಮದಲ್ಲಿ ಪರಮಾತ್ಮನ ಸ್ಥಾನವೆನಿಸಿದ ಮೋಕ್ಷವನ್ನೇ ಹೊಂದುತ್ತಾನೆ. ಹೀಗೆ ಸನಾತನವಾದ ವೇದಗಳು ಹೇಳುತ್ತಿವೆ.

ಏತದ್ಧಿ ಯೋಗಂ ಯೋಗಾನಾಂ ಕಿಮನ್ಯದ್ ಯೋಗಲಕ್ಷಣಮ್ ।
ವಿಜ್ಞಾಯ ತದ್ಧಿ ಮನ್ಯಂತೇ ಕೃತಕೃತ್ಯಾ ಮನೀಷಿಣಃ ॥೨೭॥

ಇದನ್ನು ಹೊರತುಪಡಿಸಿ ಯೋಗಕ್ಕೆ ಬೇರೆಯ ಲಕ್ಷಣಗಳಿರುವುದಿಲ್ಲ. ಜ್ಞಾನಿಗಳು ಇದನ್ನು ತಿಳಿದು ತಮ್ಮನ್ನು ಕೃತಾರ್ಥರನ್ನಾಗಿ ಭಾವಿಸಿಕೊಳ್ಳುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂಬತ್ತನೆಯ ಅಧ್ಯಾಯ

ಜನಕ-ಯಾಜ್ಞವಲ್ಕ್ಯ ಸಂವಾದ

ಯಾಜ್ಞವಲ್ಕ್ಯಃ

ತಥೈವೋತ್ಕ್ರಮಮಾಣಂ ತು ಶೃಣುಷ್ವಾವಹಿತೋ ನೃಪ ।
ಪದ್ಭ್ಯಾಮುತ್ಕ್ರಮಮಾಣಸ್ಯ ವೈಷ್ಣವಂ ಸ್ಥಾನಮುಚ್ಯತೇ ॥೧॥

ಯಾಜ್ಞವಲ್ಕ್ಯ– ಜನಕರಾಜನೇ, ನಾನು ನಿನಗೆ ಶರೀರದಿಂದ ಉತ್ಕ್ರಮಣವನ್ನು ಹೊಂದುವ ಜೀವಾತ್ಮನ ಸ್ಥಾನಗಳನ್ನು ತಿಳಿಸುತ್ತೇನೆ. ಭಗವಂತನ ಪಾದತಲವನ್ನು ಧ್ಯಾನಿಸುತ್ತಾ ಉತ್ಕ್ರಮಣವನ್ನು ಹೊಂದಿದ ವ್ಯಕ್ತಿಗೆ ವಿಷ್ಣುವಿನ ಸ್ಥಾನವು ದೊರಕುತ್ತದೆ.

ವ್ಯಾಖ್ಯಾನ ವಿಶೇಷ– ಭಗವಂತನ ವಿರಾಟ್‌ರೂಪದಲ್ಲಿ ಪಾದತಲವನ್ನು ಚಿಂತಿಸುತ್ತಾ ಜೀವನ ದೇಹದಲ್ಲಿರುವ ಪ್ರಾಣವು ಉತ್ಕ್ರಮಣವನ್ನು ಹೊಂದಿದರೆ ವೈಷ್ಣವ ಸ್ಥಾನವು ದೊರೆಯುತ್ತದೆ. ಈ ರೀತಿಯಾಗಿ ಭಗವಂತನ ಪಾದದ ಚಿಂತನೆಯ ಪ್ರಯತ್ನವನ್ನು ಮಾಡಿದ ಸಾಧಕನಿಗೆ ಧ್ರುವಲೋಕವೇ ಮೊದಲಾದ ವಿಷ್ಣುವಿನ ಸ್ಥಾನವು ಫಲರೂಪವಾಗಿ ದೊರೆಯುತ್ತದೆ. ಯಾವನು ತನ್ನ ಶರೀರದಲ್ಲಿ ಪರಮಾತ್ಮನ ಪಾದದಿಂದ ಆರಂಭಿಸಿ ತಲೆಯ ತನಕ ಇರುವ ಬ್ರಹ್ಮನಾಡಿಯ ಪರ್ಯಂತವಾದ ಭಗವಂತನ ವಿರಾಡ್ರೂಪವನ್ನು ಚಿಂತಿಸುತ್ತಿರುತ್ತಾನೋ ಅವನಿಗೆ ಕ್ರಮವಾಗಿ ಉತ್ತಮವಾದ ಫಲಗಳು ದೊರೆಯುತ್ತವೆ ಎಂದು ತಿಳಿಯಬೇಕು. ಜೀವನು ಉತ್ಕ್ರಮಣವನ್ನು ಹೊಂದುವುದು ಬ್ರಹ್ಮನಾಡಿಯ ಮೂಲಕವೇ ಎಂದು ತಿಳಿದುಕೊಳ್ಳಬೇಕು.

ಜಂಘಾಭ್ಯಾಂ ತು ವಸೂನ್ ದೇವಾನಾಪ್ನುಯಾದಿತಿ ನಃ ಶ್ರುತಮ್ ।
ಜಾನುಭ್ಯಾಂ ಚ ಮಹಾಭಾಗಾನ್ ದೇವಾನ್ ಸಾಧ್ಯಾನವಾಪ್ನುಯಾತ್ ॥

ಜೀವನು ತನ್ನ ಶರೀರದಲ್ಲಿ ಭಗವಂತನನ್ನು ಧ್ಯಾನಿಸುತ್ತಾ ಮೊಳಕಾಲುಗಳ ತನಕ ಧ್ಯಾನವನ್ನು ಮಾಡಿ, ಉತ್ಕ್ರಾಂತಿಯನ್ನು ಹೊಂದಿದರೆ ವಸುಗಳೆಂಬ ದೇವತೆಗಳ ಸ್ಥಾನವು ದೊರಕುತ್ತದೆ ಎಂದು ಕೇಳುತ್ತೇವೆ. ಇದರಂತೆ ಮಂಡಿಯ ತನಕ ಧ್ಯಾನವನ್ನು ಮಾಡಿ ಉತ್ಕ್ರಾಂತಿಯನ್ನು ಹೊಂದಿದವನು ಸಾಧ್ಯರನ್ನು ಹೊಂದುತ್ತಾನೆ.

ಪಾಯುನೋತ್ಕ್ರಮಮಾಣಸ್ತು ಮೈತ್ರಂ ಸ್ಥಾನಮವಾಪ್ನುಯಾತ್ ।
ಪೃಥಿವೀಂ ಜಘನೇನಾಥ ಊರುಭ್ಯಾಂ ತು ಪ್ರಜಾಪತಿಮ್ ॥೩॥

ಪಾಯುವಿನ ತನಕ ಧ್ಯಾನ ಮಾಡಿ ಉತ್ಕ್ರಾಂತಿಯನ್ನು ಹೊಂದಿದವನು ಮಿತ್ರನಾಮಕ ಸೂರ್ಯನ ಸ್ಥಾನವನ್ನು ಹೊಂದುತ್ತಾನೆ. ಭಗವಂತನ ಜಘನದ ತನಕ ತನ್ನ ಶರೀರದಲ್ಲಿ ಧ್ಯಾನಿಸಿದ ಯೋಗಿಯು ಉತ್ಕ್ರಮಣವನ್ನು ಹೊಂದಿದವನಾಗಿ ಪಿತೃಲೋಕವನ್ನು ಹೊಂದುತ್ತಾನೆ.

ಪಾರ್ಶ್ವಾಭ್ಯಾಂ ಮರುತೋ ದೇವಾನ್ನಾಸಾಭ್ಯಾಮಿಂದುಮೇವ ಚ ।
ಬಾಹುಭ್ಯಾಮಿಂದ್ರಮಿತ್ಯಾಹುರುರಸಾ ರುದ್ರಮೇವ ಚ ॥೪॥

ತೊಡೆಗಳ ತನಕ ಧ್ಯಾನವನ್ನು ಮಾಡಿದ ಯೋಗಿಯು ಉತ್ಕ್ರಮಣವನ್ನು ಹೊಂದಿ ಬ್ರಹ್ಮಲೋಕವನ್ನು ಹೊಂದುತ್ತಾನೆ. ಪಾರ್ಶ್ವಗಳ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದ ಯೋಗಿಯು ಮರುತ್ತುಗಳ ಸ್ಥಾನವನ್ನು ಹೊಂದುತ್ತಾನೆ. ಮೂಗಿನ ರಂಧ್ರಗಳ ತನಕ ಧ್ಯಾನಿಸಿ ಉತ್ಕ್ರಮಣವನ್ನು ಹೊಂದಿದ ವ್ಯಕ್ತಿಯು ಚಂದ್ರನ ಲೋಕವನ್ನು, ತೋಳುಗಳ ತನಕ ಧ್ಯಾನಿಸಿದ ವ್ಯಕ್ತಿಯು ಇಂದ್ರನ ಲೋಕವನ್ನು, ಉರಸ್ಸಿನ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ರುದ್ರನ ಲೋಕವನ್ನು ಹೊಂದುತ್ತಾನೆ.

ಗ್ರೀವಾಯಾಸ್ತಮೃಷಿಶ್ರೇಷ್ಠಂ ನರಮಾಪ್ನೋತ್ಯನುತ್ತಮಮ್ ।
ವಿಶ್ವೇದೇವಾನ್ ಮುಖೇನಾಥ ದಿಶಃ ಶ್ರೋತ್ರೇಣ ಚಾಪ್ನುಯಾತ್ ॥೫॥

ಕಂಠದ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ನರನೆಂಬ ಭಗವಂತನ ಸ್ಥಾನವನ್ನು, ಮುಖದ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ವಿಶ್ವೇದೇವತೆಗಳ ಸ್ಥಾನವನ್ನು, ಕಿವಿಯ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ದಿಗ್ದೇವತೆಗಳ ಲೋಕವನ್ನು ಹೊಂದುತ್ತಾನೆ.

ಘ್ರಾಣೇನ ಗಂಧವಹನಂ ನೇತ್ರಾಭ್ಯಾಂ ಸೂರ್ಯಮೇವ ಚ ।
ಭ್ರೂಭ್ಯಾಂ ಚೈವಾಶ್ವಿನೌ ದೇವೌ ಲಲಾಟೇನ ಪಿತೄನಥ ॥೬॥

ಘ್ರಾಣೇಂದ್ರಿಯದ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ವಾಯು ಲೋಕವನ್ನು, ನೇತ್ರದ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ಸೂರ್ಯ ಲೋಕವನ್ನು, ಹುಬ್ಬುಗಳ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ಅಶ್ವಿನೀ ದೇವತೆಗಳ ಲೋಕವನ್ನು, ಹಣೆಯ ತನಕ ಧ್ಯಾನಿಸಿ ಉತ್ಕ್ರಮಣ ಹೊಂದಿದವನು ಪಿತೃಗಳ ಲೋಕವನ್ನು ಹೊಂದುತ್ತಾನೆ.

ಬ್ರಹ್ಮಾಣಮಾಪ್ನೋತಿ ವಿಭುಂ ಮೂರ್ಧ್ನಾ ದೇವಾಗ್ರಜಂ ತಥಾ ।
ಏತಾನ್ಯುತ್ತಮಣಸ್ಥಾನಾನ್ಯುಕ್ತಾನಿ ಮಿಥಿಲೇಶ್ವರ ॥೭॥

ತಲೆಯ ತನಕ ಧ್ಯಾನಿಸಿ ಉತ್ತಮಣ ಹೊಂದಿದವನು ದೇವಶ್ರೇಷ್ಠನಾದ ಬ್ರಹ್ಮನ ಲೋಕವನ್ನು ಹೊಂದುತ್ತಾನೆ ಎಂದು ಹೇಳುತ್ತಾರೆ. ಮಿಥಿಲಾಧಿಪನೇ, ಹೀಗೆ ಉತ್ತಮಣಗಳ ಸ್ಥಾನದಿಂದಾಗುವ ಫಲಭೇದಗಳನ್ನು ನಿನಗೆ ತಿಳಿಸಿರುತ್ತೇನೆ.

ಅರಿಷ್ಟಾನಿ ತು ವಕ್ಷ್ಯಾಮಿ ವಿಹಿತಾನಿ ಮನೀಷಿಭಿಃ ।
ಸಂವತ್ಸರವಿಯೋಗಸ್ಯ ಸಂಭವೇಯುಃ ಶರೀರಿಣಃ ॥೮॥

ಇನ್ನು ಮನುಷ್ಯರಿಗೆ ತೋರುವಂತಹ ಮರಣಸೂಚಕಗಳಾದ ಅನಿಷ್ಟಗಳನ್ನು ತಿಳಿಸುತ್ತೇನೆ, ಕೇಳು. ಒಂದು ವರ್ಷದ ಒಳಗಡೆ ಮರಣವನ್ನು ಹೊಂದುತ್ತಾರೆ ಎಂದು ಸೂಚಿಸುವ ಅನಿಷ್ಟಗಳ್ಯಾವುವೆಂಬುದನ್ನು ನಿನಗೆ ತಿಳಿಸುತ್ತೇನೆ.

ಯೋಽರುಂಧತೀಂ ನ ಪಶ್ಯೇತ ದೃಷ್ಟಪೂರ್ವಾಂ ಕದಾಚನ ।
ತಥೈವ ಧ್ರುವಮಿತ್ಯಾಹುಃ ಪೂರ್ಣೇಂದುಂ ದೀಪಮೇವ ಚ ।
ಖಂಡಾಭಾಸಂ ದಕ್ಷಿಣತಸ್ತೇಽಪಿ ಸಂವತ್ಸರಾಯುಷಃ ॥೯॥

ಯಾವನು ತಾನು ಮೊದಲು ನೋಡಿದ ಅರುಂಧತೀ ನಕ್ಷತ್ರವನ್ನು, ಧ್ರುವ ನಕ್ಷತ್ರವನ್ನು ಪುನಃ ನೋಡಲು ಸಮರ್ಥನಾಗುವುದಿಲ್ಲವೋ, ಯಾರಿಗೆ ಪೂರ್ಣಚಂದ್ರನಾಗಲಿ, ದೀಪವಾಗಲಿ ನವಿಲಿನ ಗರಿಯಂತೆ ಕಾಣಿಸುತ್ತದೋ, ಕೇವಲ ಎಡಗಣ್ಣಿನಲ್ಲಿ ಮಾತ್ರ ನೋಡುತ್ತಾರೋ ಅವರು ಒಂದುವರ್ಷದ ಒಳಗೆ ಮರಣವನ್ನು ಹೊಂದುತ್ತಾರೆ.

ಪರಚಕ್ಷುಷಿ ಚಾತ್ಮಾನಂ ಯೇ ನ ಪಶ್ಯಂತಿ ಪಾರ್ಥಿವ ।
ಆತ್ಮಚ್ಛಾಯಾಕೃತೀಭೂತಂ ತೇಽಪಿ ಸಂವತ್ಸರಾಯುಷಃ ॥೧೦॥

ಮತ್ತೊಬ್ಬರ ಕಣ್ಣಿನಲ್ಲಿ ತನ್ನ ಪ್ರತಿಕೃತಿಯನ್ನು ಯಾವನು ಕಾಣುವುದಿಲ್ಲವೋ ಅವನೂ ಒಂದು ಸಂವತ್ಸರದಲ್ಲಿ ಮರಣವನ್ನು ಹೊಂದುತ್ತಾನೆ.

ಅತಿದ್ಯುತಿರತಿಪ್ರಜ್ಞಾ ಅಪ್ರಜ್ಞಾ ಚಾದ್ಯುತಿಸ್ತಥಾ ।
ಪ್ರಕೃತೇರ್ವಿಕ್ರಿಯಾಪತ್ತಿಃ ಷಣ್ಮಾಸಾನ್ಮೃತ್ಯುಲಕ್ಷಣಮ್ ॥೧೧॥

ಅತ್ಯಂತ ಕಾಂತಿಯಾಗಲಿ, ಅತ್ಯಂತ ಪ್ರಜ್ಞೆಯಾಗಲಿ, ಹಾಗೆಯೇ ಕೇವಲ ಶೂನ್ಯ ಪ್ರಜ್ಞೆಯಾಗಲಿ, ಶೂನ್ಯಕಾಂತಿಯಾಗಲಿ ತಮ್ಮ ಸ್ವಭಾವ ಸ್ಥಿತಿಯನ್ನು ಬಿಟ್ಟು ಒಮ್ಮೆಲೆ ವಿಕಾರವನ್ನು ಹೊಂದಿದಾಗ ಅವನಿಗೆ ಆರು ತಿಂಗಳೊಳಗೆ ಮರಣ ಪ್ರಾಪ್ತಿಯಾಗುತ್ತದೆ ಎಂದು ಹೇಳುತ್ತಾರೆ.

ದೈವತಾನ್ಯವಜಾನಾತಿ ಬ್ರಾಹ್ಮಣೈಶ್ಚ ವಿರುದ್ಧ್ಯತೇ ।
ಕೃಷ್ಣಶ್ಯಾವಚ್ಛವಿಚ್ಛಾಯಃ ಷಣ್ಮಾಸಾನ್ಮೃತ್ಯುಲಕ್ಷಣಮ್ ॥೧೨॥

ದೇವತೆಗಳನ್ನು ಅವಮಾನಿಸುವುದು, ಬ್ರಾಹ್ಮಣರನ್ನು ದ್ವೇಷಿಸುವುದು, ಕಪ್ಪಾದ ಮೊಲದಂತೆ ಮುಖದ ಕಳೆಯು ಕರಿಹೊಗೆಯಂತೆ ಮಾರ್ಪಾಡಾಗುವುದು ಇವುಗಳೆಲ್ಲವೂ ಆರು ತಿಂಗಳಿನ ಮರಣಕ್ಕೆ ಸೂಚಕಗಳಾಗಿವೆ.

ಶೀರ್ಣನಾಭಿ ಯಥಾ ಚಕ್ರಂ ಛಿದ್ರಂ ಸೋಮಂ ಪ್ರಪಶ್ಯತಿ ।
ತಥೈವ ಚ ಸಹಸ್ರಾಂಶುಂ ಸಪ್ತರಾತ್ರೇಣ ಮೃತ್ಯುಭಾಕ್ ॥೧೩॥

ಯಾವಾತನಿಗೆ ಆಕಾಶದಲ್ಲಿರುವ ಸೂರ್ಯಬಿಂಬವಾಗಲಿ, ಚಂದ್ರಬಿಂಬವಾಗಲಿ ಛಿದ್ರ ಸಹಿತವಾಗಿ ತೋರುತ್ತದೋ, ರಥದ ಚಕ್ರದಲ್ಲಿ ನಾಭಿ ಇಲ್ಲದಂತೆ ಕಾಣಿಸುತ್ತದೋ ಅವನು ಏಳು ರಾತ್ರಿಗಳಲ್ಲಿ ಮರಣವನ್ನು ಹೊಂದುತ್ತಾನೆಂದು ಹೇಳುತ್ತಾರೆ.

ಶವಗಂಧಮುಪಾಘ್ರಾತಿ ಸುರಭಿಂ ಪ್ರಾಪ್ಯ ಯೋ ನರಃ ।
ದೇವತಾಯತನಸ್ಥಸ್ತು ಷಡ್ರಾತ್ರೇಣ ಸ ಮೃತ್ಯುಭಾಕ್ ॥೧೪॥

ಯಾವನು ದೇವಾಲಯಕ್ಕೆ ಹೋದಾಗ ಅಲ್ಲಿ ಒಳ್ಳೆಯ ಸುಗಂಧದ ಧೂಪದ ಪರಿಮಳವು ಬರುತ್ತಿದ್ದರೂ ಅವನಿಗೆ ಹೆಣದ ವಾಸನೆಯಂತೆ ಸೌರಭ್ಯವು ತೋರದೆ ದುರ್ಗಂಧವೇ ತೋರುತ್ತದೋ ಅವನು ಆರು ರಾತ್ರಿಗಳಲ್ಲಿ ಮರಣವನ್ನು ಹೊಂದುತ್ತಾನೆ.

ಕರ್ಣನಾಸಾವನಮನಂ ದಂತದೃಷ್ಟಿವಿರಾಗಿತಾ ।
ಸಂಜ್ಞಾಲೋಪೋ ನಿರೂಷ್ಮತ್ವಂ ಸದ್ಯೋ ಮೃತ್ಯುನಿದರ್ಶನಮ್ ॥೧೫॥

ಕಿವಿ-ಮೂಗುಗಳು ಸೊಟ್ಟಾಗುವುದು, ಕಣ್ಣಿನಲ್ಲಿ ಹಲ್ಲಿನಲ್ಲಿ ದ್ರವವಿಲ್ಲದಿರುವುದು,

ಬುದ್ಧಿಯು ತಬ್ಬಿಬ್ಬಾಗುವುದು, ದೇಹದ ಉಷ್ಣತೆಯು ನಾಶವಾಗುವುದು - ಇವುಗಳು ಸದ್ಯವೇ ಮರಣವನ್ನು ಹೊಂದುತ್ತಾನೆ ಎಂಬುದರ ಸೂಚನೆಯಾಗಿವೆ.

ಅಕಸ್ಮಾಚ್ಚ ಸ್ರವೇದ್ ಯಸ್ಯ ವಾಮಮಕ್ಷಿ ನರಾಧಿಪ ।
ಮೂರ್ಧತಶ್ಚೋತ್ಪತೇದ್ ಧೂಮಃ ಸದ್ಯೋಮೃತ್ಯುನಿದರ್ಶನಮ್ ॥೧೬॥

ಅಕಸ್ಮಾತ್ತಾಗಿ ಯಾರ ಎಡಗಣ್ಣಿನಿಂದ ನೀರು ಸುರಿಯುತ್ತದೋ, ತಲೆಯ ನಡುನೆತ್ತಿಯಿಂದ ಹೊಗೆ ಮೇಲೆದ್ದಂತೆ ಕಾಣಿಸುತ್ತದೋ ಇವೆರಡೂ ಸದ್ಯದಲ್ಲೇ ಆಗುವ ಮರಣದ ಲಕ್ಷಣಗಳು.

ಏತಾವಂತಿ ತ್ವರಿಷ್ಟಾನಿ ವಿದಿತ್ವಾ ಮಾನವೋಽಽತ್ಮವಾನ್ ।
ನಿಶಿ ಚಾಹನಿ ಚಾತ್ಮಾನಂ ಯೋಜಯೇತ್ ಪರಮಾತ್ಮನಿ ॥೧೭॥

ರಾಜೇಂದ್ರನೇ, ಧೀರನಾದವನು ಈ ಮರಣದ ಲಕ್ಷಣಗಳನ್ನು ತಿಳಿದ ಕೂಡಲೇ ದೇಹವನ್ನು ಬಿಡುವುದಕ್ಕೆ ಸಿದ್ಧನಾಗಿ, ರಾತ್ರಿ-ಹಗಲು ಎನ್ನದೆ ನಿರಂತರ ಪರಮಾತ್ಮನನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು.

ಪ್ರತೀಕ್ಷಮಾಣಸ್ತತ್ಕಾಲಂ ಯತ್ಕಾಲಂ ಪ್ರತಿ ತದ್ಭವೇತ್ ।
ಯದ್ಯಸ್ಯ ನೇಷ್ಟಂ ಮರಣಂ ಸ್ಥಾತುಮಿಚ್ಛೇದಿಮಾಂ ಕ್ರಿಯಾಮ್ ॥೧೮॥

ಯೋಗಿಯಾದವನು ಆ ಮರಣದ ಕಾಲವು ಸನ್ನಿಹಿತವಾಗುತ್ತದೆಂದು ಅರಿತು ಆ ಮರಣಕ್ಕೆ ವಿರುದ್ಧವಾದ ಫಲವನ್ನು ನೀಡುವ ಭಗವಂತನನ್ನು ಹೃದಯದಲ್ಲಿ ಧ್ಯಾನಿಸಬೇಕು. ಯೋಗಿಗೆ ಮರಣವು ಇಷ್ಟವಾಗದಿದ್ದಲ್ಲಿ ನಿರಂತರ ಭಗವಂತನ ಧ್ಯಾನವನ್ನು ಆಚರಿಸಬೇಕು. ಇಂತಹ ನಿರಂತರ ಧ್ಯಾನದಿಂದ ತುಷ್ಟನಾದ ಪರಮಾತ್ಮನು ಮರಣವನ್ನು ಪರಿಹರಿಸಿ ಆಯುಷ್ಯವನ್ನು ಅಭಿವೃದ್ಧಿ ಮಾಡುತ್ತಾನೆ ಎಂದು ಭಾವ.

ಸರ್ವಗಂಧಾನ್ ರಸಾಂಶ್ಚೈವ ಧಾರಯೇತ ಸಮಾಹಿತಃ ।
ತಥಾ ಹಿ ಮೃತ್ಯುಂ ಜಯತಿ ತತ್ಪರೇಣಾಂತರಾತ್ಮನಾ ॥೧೯॥

ಎಲ್ಲವಿಧವಾದ ರಸ-ಗಂಧಗಳನ್ನು ತನ್ನ ಸಮಾಧಿಯ ಬಲದಿಂದ ಜಯಿಸಿರಬೇಕು. ಹೀಗೆ ಜಯಿಸಿಕೊಂಡು ಹೃದಯದಲ್ಲಿ ಪರಮಾತ್ಮನನ್ನು ಧ್ಯಾನಿಸುವುದರಿಂದ ಆ ವ್ಯಕ್ತಿಯು ಮರಣವನ್ನು ಜಯಿಸಲು ಸಮರ್ಥನಾಗುತ್ತಾನೆ.

ಸಸಾಂಖ್ಯಧಾರಣಂ ಚೈವ ವಿದಿತ್ವಾ ಮನುಜರ್ಷಭ ।
ಜಯೇಚ್ಚ ಮೃತ್ಯುಂ ಯೋಗೇನ ತತ್ಪರೇಣಾಂತರಾತ್ಮನಾ ॥೨೦॥

ಸಾಂಖ್ಯಯೋಗಶಾಸ್ತ್ರದ ಆಧಾರದಿಂದ ಮನಸ್ಸಿನಲ್ಲಿ ಭಗವಂತನನ್ನು ಧ್ಯಾನಿಸುತ್ತಾ ಸರ್ವೋತ್ತಮನಾದ ಭಗವಂತನ ಅನುಗ್ರಹದಿಂದ, ಯೋಗದ ಬಲದಿಂದ ಮೃತ್ಯುವನ್ನು ಜಯಿಸುವವನಾಗುತ್ತಾನೆ.

ಗಚ್ಛೇತ್ ಪ್ರಾಪ್ಯಾಕ್ಷಯಂ ಕೃತ್ಸ್ನಮಜನ್ಮ ಶಿವಮವ್ಯಯಮ್ ।
ಶಾಶ್ವತಂ ಸ್ಥಾನಮಚಲಂ ದುಷ್ಪ್ರಾಪಮಕೃತಾತ್ಮಭಿಃ ॥೨೧॥

ಮೃತ್ಯುವನ್ನು ಜಯಿಸಿದ ಆ ವ್ಯಕ್ತಿಯು ಕೊನೆಗೊಂದು ದಿನ ಅಕ್ಷಯವೂ, ಜನನ-ಮರಣ ರಹಿತವೂ, ಪರಮಮಂಗಳವೂ, ಅವ್ಯಯವೂ, ಶಾಶ್ವತವೂ, ಅಚಲವೂ, ಅಯೋಗ್ಯರಿಂದ ಹೊಂದಲಾಗದಿರುವ ಸ್ಥಾನವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಪಂಚಾಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತನೆಯ ಅಧ್ಯಾಯ

ಯಾಜ್ಞವಲ್ಕ್ಯನು ಜನಕನಿಗೆ ಅನೇಕ ತತ್ತ್ವಗಳನ್ನು ಉಪದೇಶಿಸಿದುದು

ಯಾಜ್ಞವಲ್ಕ್ಯಃ

ಅವ್ಯಕ್ತಸ್ಥಂ ಪರಂ ಯತ್ತತ್ ಪೃಷ್ಟಸ್ತೇಽಹಂ ನರಾಧಿಪ ।
ಪರಂ ಗುಹ್ಯಮಿಮಂ ಪ್ರಶ್ನಂ ಶೃಣುಷ್ವಾವಹಿತೋ ನೃಪ ॥೧॥

ಯಾಜ್ಞವಲ್ಕ್ಯ– ಮಹಾರಾಜನೇ, ಅವ್ಯಕ್ತ ತತ್ತ್ವದಲ್ಲಿ ಅಂತರ್ಯಾಮಿ ಆಗಿರುವ ಸರ್ವೋತ್ತಮವಾದ ವಸ್ತುವಿನ ಬಗ್ಗೆ ನಿನಗೆ ಹೇಳಿರುತ್ತೇನೆ. ಅತ್ಯಂತ ರಹಸ್ಯವಾದ ಇನ್ನೂ ಅನೇಕ ಉತ್ತಮವಾದ ತತ್ತ್ವಗಳನ್ನು ನಿನಗೆ ಹೇಳುತ್ತೇನೆ, ಸಮಾಧಾನದಿಂದ ಕೇಳು.

ಯಥಾರ್ಷೇಣೇಹ ವಿಧಿನಾ ಚರತಾವಮತೇನ ಹ ।
ಮಯಾದಿತ್ಯಾದವಾಪ್ತಾನಿ ಯಜೂಂಷಿ ಮಿಥಿಲಾಧಿಪ ॥೨॥

ಹಿಂದೆ ಈ ಲೋಕದಲ್ಲಿ ಋಷಿಗಳಿಗೆ ಯೋಗ್ಯವಾದ ವಿಧಿಗಳನ್ನು ಆಚರಿಸುತ್ತಿದ್ದೆನು. ಒಮ್ಮೆ ನನ್ನ ಗುರುವಿನಿಂದ ಅಪಮಾನಿತನಾದ ನಾನು ಸೂರ್ಯನನ್ನು ಮೆಚ್ಚಿಸಿ ಕೆಲವು ಯಜುರ್ಮಂತ್ರಗಳನ್ನು ಪಡೆದುಕೊಂಡೆನು.

ಮಹತಾ ತಪಸಾ ದೇವಸ್ತಪಿಷ್ಠಃ ಸೇವಿತೋ ಮಯಾ ।
ಪ್ರೀತೇನ ಚಾಹಂ ವಿಭುನಾ ಸೂರ್ಯೇಣೋಕ್ತಸ್ತದಾನಘ ॥೩॥

ದೊಡ್ಡದಾದ ತಪಸ್ಸಿನಿಂದ ಸೂರ್ಯನನ್ನು ಆರಾಧಿಸಿದೆನು. ಆಗ ಪ್ರಭುವಾದ ಸೂರ್ಯದೇವನು ನನ್ನಲ್ಲಿ ಪ್ರಸನ್ನನಾಗಿ ನನ್ನನ್ನು ಕುರಿತು ಹೀಗೆ ಹೇಳಿದನು.

ವರಂ ವೃಣೀಷ್ವ ವಿಪ್ರರ್ಷೇ ಯದಿಷ್ಟಂ ತೇ ಸುದುರ್ಲಭಮ್ ।
ತತ್ತೇ ದಾಸ್ಯಾಮಿ ಪ್ರೀತಾತ್ಮಾ ಮತ್ಪ್ರಸಾದೋ ಹಿ ದುರ್ಲಭಃ ॥೪॥

ಬ್ರಹ್ಮರ್ಷಿಯೇ, ನಿನಗೆ ಬೇಕಾದ ವರವನ್ನು ಕೇಳು. ಅದು ಅತ್ಯಂತ ದುರ್ಲಭವಾಗಿದ್ದರೂ ನಾನು ಪ್ರೀತಿಯಿಂದ ನಿನಗೆ ದಯಪಾಲಿಸುತ್ತೇನೆ. ನನ್ನ ಅನುಗ್ರಹವು ಯಾರಿಗೂ ಅಷ್ಟು ಸುಲಭವಾಗಿ ದೊರೆಯುವುದಿಲ್ಲ.

ತತಃ ಪ್ರಣಮ್ಯ ಶಿರಸಾ ಮಯೋಕ್ತಸ್ತಪತಾಂ ವರಃ ।
ಯಜೂಂಷಿ ನೋಪಯುಕ್ತಾನಿ ಕ್ಷಿಪ್ರಮಿಚ್ಛಾಮಿ ವೇದಿತುಮ್ ॥೫॥

ಈ ರೀತಿಯಾಗಿ ಸೂರ್ಯದೇವನು ಹೇಳಲು ನಾನು ಸೂರ್ಯದೇವನನ್ನು ಶಿರಸಾ ನಮಿಸಿ, 'ಪ್ರಭೋ, ಇದುವರೆಗೂ ಯಾರೂ ಉಪಯೋಗಿಸದಿರುವ, ಯಾತಯಾಮ ಎನಿಸದಿರುವ ಯಜುರ್ವೇದದ ಮಂತ್ರಗಳನ್ನು ನಿನ್ನಿಂದ ಬೇಗ ತಿಳಿಯಬೇಕೆಂದು ಬಯಸುತ್ತಿದ್ದೇನೆ' ಎಂದು ಹೇಳಿದೆನು.

ತತೋ ಮಾಂ ಭಗವಾನಾಹ ವಿತರಿಷ್ಯಾಮಿ ತೇ ದ್ವಿಜ ।
ಸರಸ್ವತೀಹ ವಾಗ್ಭೂತಾ ಶರೀರಂ ತೇ ಪ್ರವೇಕ್ಷ್ಯತಿ ॥೬॥

ಆ ಸಮಯದಲ್ಲಿ ಸೂರ್ಯದೇವನು 'ವಿಪ್ರೋತ್ತಮನೇ, ನೀನು ಕೇಳಿದ ಯಜುರ್ವೇದಮಂತ್ರಗಳನ್ನು ನೀಡುತ್ತೇನೆ. ಈಗಾಗಲೇ ವಾಗ್‌ರೂಪಿಣಿಯಾದ ಸರಸ್ವತಿಯು ನಿನ್ನ ಶರೀರವನ್ನು ಪ್ರವೇಶಿಸುತ್ತಿದ್ದಾಳೆ'.

ತತೋ ಮಾಮಾಹ ಭಗವಾನಾಸ್ಯಂ ಸ್ವಂ ವಿವೃತಂ ಕುರು ।
ವಿವೃತಂ ಚ ತತೋ ಮೇऽऽಸ್ಯಂ ಪ್ರವಿಷ್ಟಾ ಚ ಸರಸ್ವತೀ ॥೭॥

ಬಳಿಕ ಭಗವಾನ್ ಸೂರ್ಯದೇವನು ನನ್ನನ್ನು ಕುರಿತು, ನೀನು ನಿನ್ನ ಬಾಯನ್ನು ತೆರೆ ಎಂದು ಹೇಳಿದನು. ಅದರಂತೆ ನಾನು ನನ್ನ ಬಾಯನ್ನು ತೆರೆದ ಕೂಡಲೆ ಸರಸ್ವತೀ ದೇವಿಯು ನನ್ನ ಬಾಯಲ್ಲಿ ಪ್ರವೇಶಿಸಿದಳು.

ತತೋ ವಿದಹ್ಯಮಾನೋಹಂ ಪ್ರವಿಷ್ಟೋऽಂಭಸ್ತದಾನಘ ।
ಅವಿಜ್ಞಾನಾದಮರ್ಷಾಚ್ಚ ಭಾಸ್ಕರಸ್ಯ ಮಹಾತ್ಮನಃ ॥೮॥

ತತೋ ವಿದಹ್ಯಮಾನಂ ಮಾಮುವಾಚ ಭಗವಾನ್ ರವಿಃ ।
ಮುಹೂರ್ತಂ ಸಹ್ಯತಾಂ ದಾಹಸ್ತತಃ ಶೀತೀಭವಿಷ್ಯಸಿ ॥೯॥

ಕೂಡಲೇ ಆ ಸರಸ್ವತಿಯ ಪ್ರವೇಶದಿಂದ ನನ್ನ ದೇಹವೆಲ್ಲವೂ ಉರಿಯಲು ಆರಂಭಿಸಿತು. ಆ ತಾಪವನ್ನು ತಡೆಯಲಾಗದೆ ನಾನು ನೀರಿನಲ್ಲಿ ಪ್ರವೇಶಿಸಿದೆನು. ನಾನು ಮಹಾತ್ಮನಾದ ಸೂರ್ಯನ ಪ್ರಭಾವವನ್ನು ತಿಳಿಯದೆ ದಡ್ಡತನದಿಂದ ನೀರಿನಲ್ಲಿ ಪ್ರವೇಶಿಸಿರುವುದನ್ನು ನೋಡಿ ಸೂರ್ಯನು 'ಬ್ರಾಹ್ಮಣನೇ, ಒಂದು ಮುಹೂರ್ತದ ತನಕ ಆ ತಾಪವನ್ನು ಸಹಿಸಿಕೊ. ಬಳಿಕ ನಿನ್ನ ದೇಹವು ತಾನಾಗಿಯೇ ತಂಪಾಗುತ್ತದೆ' ಎಂದು ಹೇಳಿದನು.

ಶೀತೀಭೂತಂ ಚ ಮಾಂ ದೃಷ್ಟ್ವಾ ಭಗವಾನಾಹ ಭಾಸ್ಕರಃ ।
ಪ್ರತಿಷ್ಠಾಸ್ಯತಿ ತೇ ವೇದಃ ಸೋತ್ತರಃ ಸಖಿಲೋ ದ್ವಿಜ ॥೧೦॥

ಅದರಂತೆ ನನ್ನ ದೇಹವು ತಂಪಾಯಿತು. ಬಳಿಕ ಸೂರ್ಯನು ನನ್ನ ಕಂಡು 'ವಿಪ್ರಶ್ರೇಷ್ಠನೇ, ನಿನಗೆ ಕೆಲವು ಮಂತ್ರಗಳ ಜೊತೆಗೆ ಉಪನಿಷತ್ತಿನಿಂದ ಸಹಿತವಾದ ವೇದವು ತನ್ನಿಂದ ತಾನೇ ಸ್ಫುರಣೆಯನ್ನು ಹೊಂದುತ್ತದೆ.

ಕೃತ್ಸ್ನಂ ಶತಪಥಂ ಚೈವ ಪ್ರಣೇಷ್ಯಸಿ ದ್ವಿಜರ್ಷಭ ।
ತಸ್ಯಾಂತೇ ಚಾಪುನರ್ಭಾವೇ ಬುದ್ಧಿಸ್ತವ ಭವಿಷ್ಯತಿ ॥೧೧॥

ಬಳಿಕ ಸಮಗ್ರವಾದ ಶತಪಥ ಎಂಬ ಬ್ರಾಹ್ಮಣ ಭಾಗವನ್ನು ಪೂರ್ಣವಾಗಿ ನೀನೇ ಜಗತ್ತಿಗೆ ಉಪದೇಶಿಸುತ್ತಿ. ಬಳಿಕ ನಿನ್ನ ಬುದ್ಧಿಯು ಜನ್ಮರಹಿತವಾದ ಮೋಕ್ಷದಲ್ಲಿ ಪ್ರವೃತ್ತಿಯನ್ನು ಹೊಂದುತ್ತದೆ.

ಪ್ರಾಪ್ಸ್ಯಸೇ ಚ ಯದಿಷ್ಟಂ ತತ್ ಸಾಂಖ್ಯಯೋಗೇಪ್ಸಿತಂ ಪದಮ್ ।
ಏತಾವದುಕ್ತ್ವಾ ಭಗವಾನಸ್ತಮೇವಾಭ್ಯವರ್ತತ ॥೧೨॥

ಸಾಂಖ್ಯರಿಂದಲೂ ಯೋಗಿಗಳಿಂದಲೂ ಆದರಿಸುವಂತಹ ನೀನು ಬಯಸುವ ಬ್ರಹ್ಮಪದವು ನಿನಗೆ ಲಭಿಸುತ್ತದೆ'. ಈ ರೀತಿಯಾಗಿ ಸೂರ್ಯದೇವನು ಹೇಳಿ ಅಲ್ಲಿಯೇ ಕಣ್ಮರೆಯಾದನು.

ತತೋಽನುವ್ಯಾಹೃತಂ ಶ್ರುತ್ವಾ ಗತೇ ದೇವೇ ವಿಭಾವಸೌ ।
ಗೃಹಮಾಗತ್ಯ ಸಂಹೃಷ್ಟೋಽಚಿಂತಯಂ ವೈ ಸರಸ್ವತೀಮ್ ॥೧೩॥

ಸೂರ್ಯನು ಹೊರಟ ಬಳಿಕ ನಾನು ಅವನು ಹೇಳಿದ ಮಾತುಗಳನ್ನೇ ಚಿಂತಿಸುತ್ತಾ ಸಂತೋಷದಿಂದ ನನ್ನ ಮನೆಗೆ ಆಗಮಿಸಿ ಸಾವಿತ್ರಿಯನ್ನು ವಿಶೇಷವಾಗಿ ಧ್ಯಾನಿಸಿದೆನು.

ತತಃ ಪ್ರವತ್ತಾತಿಶುಭಾ ಸ್ವರವ್ಯಂಜನಭೂಷಿತಾ ।
ಓಂಕಾರಮಾದಿತಃ ಕೃತ್ವಾ ಮಮ ದೇವೀ ಸರಸ್ವತೀ ॥೧೪॥

ಕೂಡಲೇ ಸ್ವರ-ವ್ಯಂಜನಗಳಿಂದ ಅಲಂಕೃತಳಾದ ಸರಸ್ವತಿಯು ಮೂರ್ತಿಮತ್ತಾಗಿ ಹೊರಗೆ ಬಂದು ನನಗೆ ಕಾಣಿಸಿದಳು.

ತತೋಽಹಮರ್ಘ್ಯಂ ವಿಧಿವತ್ ಸರಸ್ವತ್ಯೈ ನ್ಯವೇದಯಮ್ ।
ತಪತಾಂ ಚ ವರಿಷ್ಠಾಯ ನಿಷಣ್ಣಸ್ತತ್ಪರಾಯಣಃ ॥೧೫॥

ನಾನು ಆ ದೇವತೆಗೆ ವಿಧಿಬದ್ಧವಾಗಿ ಅರ್ಘ್ಯಾದಿಗಳನ್ನು ನೀಡಿ ಪೂಜಿಸಿದೆನು. ಮಹಾಪ್ರಯತ್ನದಿಂದ ಸರಸ್ವತಿಯನ್ನೇ ಶರಣು ಹೊಂದಿ ಚಿಂತಿಸುತ್ತಾ ಒಂದು ಕಡೆಯಲ್ಲಿ ಕುಳಿತುಕೊಂಡೆನು.

ತತಃ ಶತಪಥಂ ಕೃತ್ಸ್ನಂ ಸರಹಸ್ಯಂ ಸಸಂಗ್ರಹಮ್ ।
ಚಕ್ರೇ ಸಪರಿಶೇಷಂ ಚ ಹರ್ಷೇಣ ಪರಮೇಣ ಹ ॥೧೬॥

ಬಳಿಕ ಉಪನಿಷತ್ತುಗಳೊಡನೆ ಸಂಗ್ರಹ ವಾಕ್ಯಗಳ ಜೊತೆಗೆ ಪರಿಶಿಷ್ಟ ವಾಕ್ಯಗಳ ಜೊತೆಗೆ ಶತಪಥವೆಂಬ ಮಂತ್ರವು ಪೂರ್ಣವಾಗಿ ನನ್ನ ಬಾಯಿಂದ ಹೊರಹೊಮ್ಮಿತು. ಇದರಿಂದ ಪರಮಸಂತೋಷವು ನನಗೆ ಉಂಟಾಯಿತು.

ಕೃತ್ವಾ ಚಾಧ್ಯಯನಂ ತೇಷಾಂ ಶಿಷ್ಯಾಣಾಂ ಶತಮುತ್ತಮಮ್ ।
ವಿಪ್ರಿಯಾರ್ಥಂ ಸಶಿಷ್ಯಸ್ಯ ಮಾತುಲಸ್ಯ ಮಹಾತ್ಮನಃ ॥೧೭॥

ನನ್ನ ಮಾವನಾದ ವೈಶಂಪಾಯನನಿಗೆ ನನ್ನಲ್ಲಿ ವಿಶೇಷವಾಗಿ ಪ್ರೀತಿಯುಂಟಾಗ ಬೇಕೆಂಬ ಭಾವನೆಯಿಂದ ಆ ಶತಪಥ ಬ್ರಾಹ್ಮಣವನ್ನು ನೂರು ಮಂದಿ ಶಿಷ್ಯರಿಗೆ ಅಧ್ಯಯನ ಮಾಡಿಸಿದೆನು.

ತತಃ ಸಶಿಷ್ಯೇಣ ಮಯಾ ಸೂರ್ಯೇಣೇವ ಗಭಸ್ತಿಭಿಃ ।
ವ್ಯಾಪ್ತೋ ಯಜ್ಞೋ ಮಹಾರಾಜ ಪಿತುಸ್ತವ ಮಹಾತ್ಮನಃ ॥೧೮॥

ಕಿರಣಗಳಿಂದ ಕೂಡಿದ ಸೂರ್ಯನಂತೆ ನಾನು ಎಲ್ಲ ಶಿಷ್ಯರಿಂದ ಪರಿವೃತನಾಗಿ ಮಹಾತ್ಮನಾದ ನಿನ್ನ ತಂದೆಯ ಯಜ್ಞವನ್ನು ನಡೆಸಿದೆನು.

ಮಿಷತೋ ದೇವಲಸ್ಯಾಪಿ ತತೋಽರ್ಧಂ ಹೃತವಾನಹಮ್ ।
ಸ್ವವೇದದಕ್ಷಿಣಾಯಾಥ ವಿಮರ್ದೇ ಮಾತುಲೇನ ಹ ॥೧೯॥

ಆ ಯಜ್ಞದಲ್ಲಿ ವೇದದಕ್ಷಿಣೆಯು ಯಾರಿಗೆ ಸೇರಬೇಕೆಂದು ವಿವಾದವು ಉಂಟಾದಾಗ, ನಾನು ನಮ್ಮ ಮಾವನ ಪಕ್ಷದಲ್ಲಿದ್ದ ದೇವಲನು ನೋಡುತ್ತಿರುವಂತೆ ನನ್ನ ವೇದದಕ್ಷಿಣೆಯ ನಿಮಿತ್ತವಾಗಿ ಅರ್ಧವನ್ನು ನಾನು ಆ ಜನರ ಮಧ್ಯದಲ್ಲಿ ಸ್ವೀಕರಿಸಿದೆನು.

ಸುಮಂತುನಾಥ ಪೈಲೇನ ತಥಾ ಜೈಮಿನಿನಾ ಚ ವೈ ।
ಪಿತ್ರಾ ತೇ ಮುನಿಭಿಶ್ಚೈವ ತತೋಹಮನುಮಾನಿತಃ ॥೨೦॥

ಆ ಸಮಯದಲ್ಲಿ ಸುಮಂತು, ಪೈಲ, ಜೈಮಿನಿ, ನಿನ್ನ ತಂದೆ, ಇತರ ಮುನಿಗಳು ನನ್ನ ಅಭಿಪ್ರಾಯವನ್ನು ಅನುಮೋದಿಸಿದರು.

ದಶ ಪಂಚ ಚ ಪ್ರಾಪ್ತಾನಿ ಯಜೂಂಷ್ಯರ್ಕಾನ್ಮಯಾನಘ ।
ತಥೈವ ಲೋಮಹರ್ಷಾಚ್ಚ ಪುರಾಣಮವಧಾರಿತಮ್ ॥೨೧॥

ನಾನು ಸೂರ್ಯದೇವನಿಂದ ಹದಿನೈದು ಯಜುಸ್ಸುಗಳನ್ನು, ಸೂತನಾದ ಲೋಮಹರ್ಷನಿಂದ ಅದೇ ವೇದಪ್ರತಿಪಾದಕವಾದ ಪುರಾಣವನ್ನು ತಿಳಿದುಕೊಂಡೆನು.

ಬೀಜಮೇತತ್ ಪುರಸ್ಕೃತ್ಯ ದೇವೀಂ ಚೈವ ಸರಸ್ವತೀಮ್ ।
ಸೂರ್ಯಸ್ಯ ಚಾನುಭಾವೇನ ಪ್ರವರ್ತೋಽಹಂ ನರಾಧಿಪ ॥೨೨॥

ಹೀಗೆ ಭಗವಾನ್ ಸೂರ್ಯನ ಅನುಗ್ರಹದಿಂದ, ಸರಸ್ವತೀ ದೇವಿಯಿಂದ ಶತಪಥ ಬ್ರಾಹ್ಮಣವನ್ನೇ ಮೂಲವನ್ನಾಗಿ ಮಾಡಿಕೊಂಡು ಹೊಸದಾಗಿ ತತ್ತ್ವವನ್ನು ಪ್ರಚಾರ ಮಾಡಿದೆನು.

ಕರ್ತುಂ ಶತಪಥಂ ವೇದಮಪೂರ್ವಂ ಕಾರಿತಂ ಚ ಮೇ ।
ಯಥಾಭಿಲಷಿತಂ ಮಾರ್ಗಂ ತಥಾ ತಚ್ಚೋಪಪಾದಿತಮ್ ॥೨೩॥

ನನಗೆ ಇಷ್ಟವಾದ ಶತಪಥ ಬ್ರಾಹ್ಮಣವನ್ನು ಅಪೂರ್ವವಾಗಿ ಅಧ್ಯಯನ ಮಾಡಿಕೊಂಡು ನನ್ನ ಮನಸ್ಸಿನಲ್ಲಿ ತೋರಿದಂತೆ ಶ್ರೇಷ್ಠವಾದ ಮಾರ್ಗವನ್ನು ಶಿಷ್ಯರಿಗೆ ಬೋಧಿಸಿದೆನು.

ಶಿಷ್ಯಾಣಾಮಖಿಲಂ ಕೃತ್ಸ್ನಮನುಜ್ಞಾತಂ ಸಸಂಗ್ರಹಮ್ ।
ಸರ್ವೇ ಚ ಶಿಷ್ಯಾಃ ಶುಚಯೋ ಗತಾಃ ಪರಮಹರ್ಷಿತಾಃ ॥೨೪॥

ಸೂತ್ರವಾಕ್ಯದ ಜೊತೆಗೆ ಶತಪಥ ಬ್ರಾಹ್ಮಣವನ್ನು ಪೂರ್ಣವಾಗಿ ಶಿಷ್ಯರಿಗೆ ಉಪದೇಶಿಸಿದೆನು. ಅವರೆಲ್ಲರೂ ಶುಚಿರ್ಭೂತರಾಗಿ ಸಂತೋಷದಿಂದ ಆ ವೇದಗಳನ್ನು ಪಠಿಸಿದರು.

ಶಾಖಾಃ ಪಂಚದಶೇಮಾಸ್ತು ವಿದ್ಯಾ ಭಾಸ್ಕರದರ್ಶಿತಾಃ ।
ಪ್ರತಿಷ್ಠಾಪ್ಯ ಯಥಾಕಾಮಂ ವೇದ್ಯಂ ತದನುಚಿಂತಯಮ್ ॥೨೫॥

ಹೀಗೆ ಹದಿನೈದು ಶಾಖೆಗಳನ್ನು ನನ್ನ ಇಷ್ಟದಂತೆ ಲೋಕದಲ್ಲಿ ನೆಲೆಗೊಳಿಸಿದ ಬಳಿಕ ನಾನು ಅದರ ಅರ್ಥವೇನೆಂದು ತಿಳಿಯಲು ಯೋಚಿಸಿದೆನು.

ಕಿಮತ್ರ ಬ್ರಹ್ಮಣ್ಯಮೃತಂ ಕಿಂ ಚ ವೇದ್ಯಮನುತ್ತಮಮ್ ।
ಚಿಂತಯೇ ತತ್ರ ಚಾಗತ್ಯ ಗಂಧರ್ವೋ ಮಾಮಪೃಚ್ಛತ ॥೨೬॥

ಈ ವಿದ್ಯೆಯಲ್ಲಿ ಬ್ರಾಹ್ಮಣರಿಗೆ ಹಿತವೂ, ಸತ್ಯವೂ ಆದ ಅನುತ್ತಮವಾದ ವಿಚಾರಗಳು ಯಾವವು ಎಂದು ಚಿಂತಿಸುತ್ತಿರುವಾಗಲೇ ವೇದಾಂತ ವಿಮರ್ಶಕನಾದ ವಿಶ್ವಾವಸು ಎಂಬ ಗಂಧರ್ವನು ಅಲ್ಲಿಗೆ ಆಗಮಿಸಿದನು.

ವಿಶ್ವಾವಸುಸ್ತತೋ ರಾಜನ್ ವೇದಾಂತಜ್ಞಾನಕೋವಿದಃ ।
ಚತುರ್ವಿಂಶತಿಕಾನ್ ಪ್ರಶ್ನಾನ್ ಪೃಷ್ಟ್ವಾ ವೇದಸ್ಯ ಪಾರ್ಥಿವ ।
ಪಂಚವಿಂಶತಿಮಂ ಪ್ರಶ್ನಂ ಪಪ್ರಚ್ಛಾನ್ವೀಕ್ಷಿಕೀಂ ತಥಾ ॥೨೭॥

ವಿಶ್ವಾವಸು ಎಂಬ ಗಂಧರ್ವನಾದರೂ ವೇದಾಂತ ಜ್ಞಾನದಲ್ಲಿ ನಿಷ್ಣಾತನಾಗಿದ್ದನು. ಅವನು ನನ್ನನ್ನು ನೋಡಿ ವೇದಕ್ಕೆ ಸಂಬಂಧಿಸಿದ ಇಪ್ಪತ್ತಾಲ್ಕು ಪ್ರಶ್ನೆಗಳನ್ನು ಕೇಳಿದನು. ಬಳಿಕ ಆನ್ವೀಕ್ಷಿಕೀ ಎಂಬ ಇಪ್ಪತ್ತೈದನೆಯ ಪ್ರಶ್ನೆಯನ್ನೂ ಕೇಳಿದನು.

ವಿಶ್ವಾವಿಶ್ವಂ ತಥಾಶ್ವಾಶ್ವಂ ಮಿತ್ರಂ ವರುಣಮೇವ ಚ ।
ಜ್ಞಾನಂ ಜ್ಞೇಯಂ ತಥಾಜ್ಞೋ ಜ್ಞಃ ಕಸ್ತಪಾ ಅತಪಾಸ್ತಥಾ ।
ಸೂರ್ಯಾದಃ ಸೂರ್ಯ ಇತಿ ಚ ವಿದ್ಯಾವಿದ್ಯೇ ತಥೈವ ಚ ॥೨೮॥

ವೇದ್ಯಾವೇದ್ಯಂ ತಥಾ ರಾಜನ್ನಚಲಂ ಚಲಮೇವ ಚ ।
ಅಪೂರ್ವಮಕ್ಷಯಂ ಕ್ಷಯ್ಯಮೇತತ್ ಪ್ರಶ್ನಮನುತ್ತಮಮ್ ॥೨೯॥

ವಿಶ್ವಾವಿಶ್ವಗಳು, ಅಶ್ವಾಶ್ವಗಳು, ಮಿತ್ರ, ವರುಣ, ಜ್ಞಾನ, ಜ್ಞೇಯ, ಅಜ್ಞ, ಪ್ರಾಜ್ಞ, ತಪಸ್ವಿಗಳು, ಅತಪಸ್ವಿಗಳು, ಸೂರ್ಯಾದ, ಸೂರ್ಯ, ವಿದ್ಯೆ, ಅವಿದ್ಯೆ, ವೇದ್ಯ,ಅವೇದ್ಯ, ಚಲ, ಅಚಲ, ಅಪೂರ್ವ, ಅಕ್ಷಯ, ಕ್ಷಯ- ಈ ರೀತಿಯಾದ ವಿಚಾರಗಳಲ್ಲಿ ಅನುತ್ತಮವಾದ ಪ್ರಶ್ನೆಗಳನ್ನು ಮಾಡಿದನು.

ಅಥೋಕ್ತಶ್ಚ ಮಯಾ ರಾಜನ್ ರಾಜಾ ಗಂಧರ್ವಸತ್ತಮಃ ।
ಪೃಷ್ಟವಾನನುಪೂರ್ವೇಣ ಪ್ರಶ್ನಮುತ್ತಮಮರ್ಥವತ್ ॥೩೦॥

ಬಳಿಕ ನಾನು ವಿಶ್ವಾವಸುವನ್ನು ನೋಡಿ, 'ಎಲೈಗಂಧರ್ವಶ್ರೇಷ್ಠನೇ, ನೀನು ಉತ್ತಮವಾದ, ರಸವತ್ತಾದ ಪ್ರಶ್ನೆಯನ್ನೇ ಕೇಳಿರುವೆ.

ಮುಹೂರ್ತಂ ಮೃಷ್ಯತಾಂ ತಾವದ್ ಯಾವದೇನಂ ವಿಚಿಂತಯೇ ।
ಬಾಢಮಿತ್ಯೇವ ಕೃತ್ವಾ ಸ ತೂಷ್ಣೀಂ ಗಂಧರ್ವ ಆಸ್ಥಿತಃ ॥೩೧॥

ಒಂದು ಮುಹೂರ್ತದ ತನಕ ಸಹಿಸಿಕೊಂಡರೆ ನೀನು, ನಾನು ಆಲೋಚಿಸಿ ನೋಡುತ್ತೇನೆ' ಎಂದು ಹೇಳಲು ಆ ಗಂಧರ್ವನು ಹಾಗೆಯೇ ಆಗಲೆಂದು ಮೌನದಲ್ಲಿದ್ದನು.

ತತೋಽನ್ವಚಿಂತಯಮಹಂ ಭೂಯೋ ದೇವೀಂ ಸರಸ್ವತೀಮ್ ।
ಮನಸಾ ಸ ಚ ಮೇ ಪ್ರಶ್ನೋ ದಧ್ನೋ ಘೃತಮಿವೋದ್ಧತಮ್ ॥೩೨॥

ಬಳಿಕ ನಾನು ಸರಸ್ವತಿಯನ್ನು ಧ್ಯಾನಿಸಿದೆನು. ಕೂಡಲೇ ಮೊಸರಿನಲ್ಲಿ ಬೆಣ್ಣೆಯು ಹೇಗೋ ಹಾಗೆ ನನ್ನ ಮನಸ್ಸಿನಲ್ಲಿ ಆ ಪ್ರಶ್ನೆಗಳಿಗೆಲ್ಲ ಉತ್ತರವು ಸುಲಭವಾಗಿ ತೋರುತ್ತಾ ಬಂದಿತು.

ತತ್ರೋಪನಿಷದಂ ಚೈವ ಪರಿಶೇಷಂ ಚ ಪಾರ್ಥಿವ ।
ಮಥ್ನಾಮಿ ಮನಸಾ ತಾತ ದೃಷ್ಟ್ವಾ ಚಾನ್ವೀಕ್ಷಿಕೀಂ ಪರಾಮ್ ॥೩೩॥

ನಾನು ಉಪನಿಷತ್ತನ್ನು ಪರಿಶೇಷವೆಂಬ ಉಳಿದ ವಾಕ್ಯವನ್ನು, ಅದರಲ್ಲಿಯೇ ಮಥನ ಮಾಡಿ, ಅದರ ಸಾರಾರ್ಥವನ್ನು ಪುನಃ ಚಿಂತಿಸಿದೆನು. ಹೀಗೆ ಚಿಂತಿಸುತ್ತಾ ಶ್ರೇಷ್ಠವಾದ ಆನ್ವೀಕ್ಷಿಕೀ ಎಂಬ ವಿದ್ಯೆಯನ್ನು ತಿಳಿದುಕೊಂಡೆನು.

ಚತುರ್ಥೀ ರಾಜಶಾರ್ದೂಲ ವಿದ್ಯೈಷಾ ಸಾಂಪರಾಯಿಕೀ ।
ಉದೀರಿತಾ ಮಯಾ ತುಭ್ಯಂ ಪಂಚವಿಂಶೇಽಧಿಧಿಷ್ಠಿತಾ ॥೩೪॥

ಆನ್ವೀಕ್ಷಿಕೀ ಎಂಬ ವಿದ್ಯೆಯು ನಾಲ್ಕನೆಯ ವಿದ್ಯೆ ಎನಿಸಿ ಮೋಕ್ಷಕ್ಕೆ ಸಾಧಕವಾಗಿದೆ. ಅಂತಹ ಶ್ರೇಷ್ಠವಾದ ವಿದ್ಯೆಯನ್ನು ಇಪ್ಪತ್ತೈದನೆಯ ವಿದ್ಯೆಯಲ್ಲಿ ಸೇರಿಸಿಕೊಂಡು ನಿನಗೆ ತಿಳಿಸಿರುತ್ತೇನೆ. ಅರ್ಥಾತ್ ಪರಮಾತ್ಮನಿಗೆ ಸಂಬಂಧಿಸಿದಂತೆ ನಿನಗೆ ಬೋಧಿಸಿರುತ್ತೇನೆ.

ಅಥೋಕ್ತಸ್ತು ಮಯಾ ರಾಜನ್ರಾಜಾ ವಿಶ್ವಾವಸುಸ್ತದಾ ।
ಶ್ರೂಯತಾಂ ಯದ್ಬವಾನಸ್ಮಾನ್ ಪ್ರಶ್ನಂ ಸಂಪೃಷ್ಟವಾನಿಹ ॥೩೫॥

ವಿಶ್ವಾವಿಶ್ವೇತಿ ಯದಿದಂ ಗಂಧರ್ವೇಂದ್ರಾನುಪೃಚ್ಛಸಿ ।
ವಿಶ್ವಾವ್ಯಕ್ತಂ ಪರಂ ವಿದ್ಯಾದ್ಭೂತಭವ್ಯಭಯಂಕರಮ್ ॥೩೬॥

ಆಗ ನಾನು ವಿಶ್ವಾವಸುವನ್ನು ನೋಡಿ, 'ಗಂಧರ್ವರಾಜನೇ, ನೀನು ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರವನ್ನು ಹೇಳುತ್ತೇನೆ. ನೀನು ಕೇಳಿದ ವಿಶ್ವಾವಿಶ್ವ ಎಂಬುದರಲ್ಲಿ ವಿಶ್ವ ಎಂದರೆ ಸರ್ವೋತ್ತಮನೂ, ಹಿಂದೆಯೂ ಮುಂದೆಯೂ ಸಂಸಾರವೆಂಬ ಭಯಾನಕವಾದ ಶೃಂಖಲೆಗಳನ್ನು ತಂದೊಡ್ಡುವುದು ಆಗಿರುತ್ತದೆ.

ತ್ರಿಗುಣಂ ಗುಣಕರ್ತೃತ್ವಾದವಿಶ್ವೋ ನಿಷ್ಕಲಸ್ತಥಾ ।
ವಿಶ್ವೋಽಸ್ತಿ ವೇತಿ ಮಿಥುನಮೇವಮೇವಾನುದೃಶ್ಯತೇ ॥೩೭॥

ಮೂರು ಗುಣಗಳಿಂದ ಕೂಡಿರುವಂತಹದ್ದು ಆಗಿರುವುದೇ ಅವಿಶ್ವ ಎನಿಸಿದೆ, ನಿಶ್ಚಲವೆನಿಸಿದೆ. ವಿಶ್ವವು ಇದೆಯೋ, ಇಲ್ಲವೋ ಎಂಬ ಅಸಂಗತವಾದ ಪ್ರಶ್ನೆಯೇ ಅವಿಶ್ವಸ್ಥ ಎನಿಸಿದೆ.

ಅವ್ಯಕ್ತಂ ಪ್ರಕೃತಿಂ ಪ್ರಾಹುಃ ಪುರುಷೇತಿ ಚ ನಿರ್ಗುಣಮ್ ।
ತಥೈವ ಮಿತ್ರಂ ಪುರುಷಂ ವರುಣಂ ಪ್ರಕೃತಿಂ ತಥಾ ॥೩೮॥

ಅವ್ಯಕ್ತವನ್ನು ಪ್ರಕೃತಿ ಎಂದೂ, ನಿರ್ಗುಣನನ್ನು ಪುರುಷನೆಂದೂ ಹೇಳುತ್ತಾರೆ. ಅದರಂತೆ ವರುಣನನ್ನು ಪ್ರಕೃತಿಯೆಂದು, ಮಿತ್ರನನ್ನು ಪುರುಷನೆಂದು ಹೇಳುತ್ತಾರೆ.

ಜ್ಞಾನಂ ತು ಪ್ರಕೃತಿಂ ಪ್ರಾಹುರ್ಜ್ಞೇಯಂ ನಿಷ್ಕಲಮೇವ ಚ ।
ಅಜ್ಞಶ್ಚ ಜ್ಞಶ್ಚ ಪುರುಷಸ್ತಸ್ಮಾನ್ನಿಷ್ಕಲ ಉಚ್ಯತೇ ॥೩೯॥

ಜ್ಞಾನವು ಪ್ರಕೃತಿಯು, ಜ್ಞೇಯವು ಪುರುಷನು. ತಿಳಿಯದಿರುವ ಪುರುಷನು ಅಜ್ಞ ಎಂದೇ ಕರೆಸಿಕೊಳ್ಳುತ್ತಾನೆ. ಪುರುಷನು ಪ್ರಕೃತಿಯನ್ನು ಅಜ್ಞವನ್ನಾಗಿ ಮಾಡುತ್ತಾನಾದ್ದರಿಂದ ಪುರುಷನೂ ಅಜ್ಞನೆನಿಸಿದ್ದಾನೆ, ತಿಳಿದವನೂ ಎನಿಸಿದ್ದಾನೆ. ಆದ್ದರಿಂದಲೇ ನಿಷ್ಕಲನೂ ಎನಿಸುತ್ತಾನೆ. ಜ್ಞಾನವು ಪ್ರಕೃತಿ ಎಂದೂ, ಜ್ಞೇಯವು ಪುರುಷನೆಂದು, ಅಜ್ಞವಾದುದು ಅವ್ಯಕ್ತವೆಂದು, ಜ್ಞಾತನಾದವನನ್ನು ಆತ್ಮನೆಂದು ಹೇಳಲಾಗಿದೆ.

ವ್ಯಾಖ್ಯಾನ ವಿಶೇಷ– ಪ್ರಕೃತಿ–ಪುರುಷರ ಬಗ್ಗೆ ಇಲ್ಲಿ ಪ್ರಶ್ನೆ ಮಾಡಲಾಗಿದೆ. ಪ್ರಕೃತಿಯು ವ್ಯಾಪಕವಾಗಿರುವಂತಹದ್ದು. ಪುರುಷನು ವಿಶ್ವಕ್ಕಿಂತ ಭಿನ್ನನಾದವನು. ಅವಿದ್ಯಾತ್ಮಕವಾದುದು ಪ್ರಕೃತಿಯು, ವಿದ್ಯಾ ರೂಪನಾದವನು ಪುರುಷನು. ವಾಸ್ತವಿಕವಾಗಿ ಈ ರೀತಿಯಾದ ಪ್ರಶ್ನೆಗಳು

ಹಿಂದೆ ಬಂದಿದ್ದರೂ ಪುರುಷನಲ್ಲಿರುವ ಗುಣವಿಶೇಷಣಗಳನ್ನು ತೋರಿಸಲು ಪುನಃ ಪುನಃ ಪ್ರಶ್ನಿಸಲಾಗಿದೆ ಎಂದು ತಿಳಿಯಬೇಕು.

ಕಸ್ತಪಾ ಅತಪಾಃ ಪ್ರೋಕ್ತಃ ಕೋಽಸೌ ಪುರುಷ ಉಚ್ಯತೇ ।
ತಪಾಃ ಪ್ರಕೃತಿರಿತ್ಯಾಹುರತಪಾ ನಿಷ್ಕಲಃ ಸ್ಮೃತಃ ॥೪೦॥

ಯಾವುದನ್ನು ತಪಸ್ಸು ಎನ್ನುತ್ತಾರೆ? ಯಾವುದನ್ನು ತಪಸ್ಸಲ್ಲವೆಂದು ಹೇಳುತ್ತಾರೆ? ಯಾರನ್ನು ಪುರುಷ ಎಂದು ಹೇಳುತ್ತಾರೆ? ಎಂದರೆ ಪ್ರಕೃತಿಯೇ ತಪಸ್ಸೆಂದು ಕರೆಸಿಕೊಳ್ಳುತ್ತದೆ. ನಿಷ್ಕಲನಾದ ಆತ್ಮನು ಅತಪ ಎನಿಸಿಕೊಳ್ಳುತ್ತಾನೆ.

ತಥೈವಾವೇದ್ಯಮವ್ಯಕ್ತಂ ವೇದ್ಯಃ ಪುರುಷ ಉಚ್ಯತೇ ।
ಚಲಾಚಲಮಿತಿ ಪ್ರೋಕ್ತಂ ತ್ವಯಾ ತದಪಿ ಮೇ ಶೃಣು ॥೪೧॥

ತಿಳಿಯಲಾಗದೆ ಇರುವುದನ್ನು ಅವ್ಯಕ್ತ ಎನ್ನುತ್ತಾರೆ. ತಿಳಿಯಲಾಗುವವನನ್ನು ಪುರುಷ ಎನ್ನುತ್ತಾರೆ. ಚಲಾಚಲ ಎಂದರೆ ಯಾವುದು ಎಂಬುದನ್ನೂ ಹೇಳುತ್ತೇನೆ, ಕೇಳು.

ಚಲಾಂ ತು ಪ್ರಕೃತಿಂ ಪ್ರಾಹುಃ ಕಾರಣಂ ಕ್ಷೇಪಸರ್ಗಯೋಃ ।
ಅಕ್ಷೇಪಸರ್ಗಯೋಃ ಕರ್ತಾ ನಿಶ್ಚಲಃ ಪುರುಷಃ ಸ್ಮೃತಃ ॥೪೨॥

ಚಲಾ ಎಂದರೆ ಸೃಷ್ಟಿ-ಪ್ರಳಯಗಳಿಗೆ ಕಾರಣವಾದ ಪ್ರಕೃತಿ ಎಂದೂ, ಸೃಷ್ಟಿ-ಪ್ರಳಯಗಳಿಗೆ ಕರ್ತೃವಾದ ನಿಶ್ಚಲನಾದ ವ್ಯಕ್ತಿಯು ಪುರುಷನೆಂದು ಹೇಳಲ್ಪಟ್ಟಿದೆ.

ಅಜಾವುಭಾವಪ್ರಜೌ ಚ ಅಕ್ಷಯೌ ಚಾಪ್ಯುಭಾವಪಿ ।
ಅಜೌ ನಿತ್ಯಾವುಭೌ ಪ್ರಾಹುರಧ್ಯಾತ್ಮಗತಿನಿಶ್ಚಯಾಃ ॥೪೩॥

ಪ್ರಕೃತಿ-ಪುರುಷ ಎರಡೂ ಅಜ-ಅಕ್ಷಯ-ನಿತ್ಯ ಎಂದು ಅಧ್ಯಾತ್ಮಗತಿಯನ್ನು ನಿಶ್ಚಯಿಸಿರುವ ಪ್ರಾಜ್ಞರು ಹೇಳುತ್ತಾರೆ.

ಅಕ್ಷಯತ್ವಾತ್ ಪ್ರಜನನೇ ಅಜಮತ್ರಾಹುರವ್ಯಯಮ್ ।
ಅಕ್ಷಯಂ ಪುರುಷಂ ಪ್ರಾಹುಃ ಕ್ಷಯೋ ಹ್ಯಸ್ಯ ನ ವಿದ್ಯತೇ ॥೪೪॥

ಸೃಷ್ಟಿಯಲ್ಲಿ ಜನನವಿಲ್ಲದುದಕ್ಕೆ ಅಜವೆಂದು, ಅವ್ಯಯವೆಂದು ಹೇಳುತ್ತಾರೆ. ಪುರುಷನನ್ನು ಅಕ್ಷಯನೆಂದು ಹೇಳುತ್ತಾರೆ. ಕ್ಷಯವಿಲ್ಲದೆ ಇರುವ ಕಾರಣದಿಂದ ಪುರುಷನು ಅಕ್ಷಯನೆನಿಸಿದ್ದಾನೆ.

ಗುಣಕ್ಷಯತ್ವಾತ್ ಪ್ರಕೃತಿಃ ಕರ್ತೃತ್ವಾದಕ್ಷಯಂ ಬುಧಾಃ ।
ಏಷಾ ತೇऽऽನ್ವೀಕ್ಷಿಕೀ ವಿದ್ಯಾ ಚತುರ್ಥೀ ಸಾಂಪರಾಯಿಕೀ ॥೪೫॥

ಗುಣಕ್ಷಯದಿಂದ ಪ್ರಕೃತಿಯನ್ನು ಕ್ಷರವೆಂದು, ಸೃಷ್ಟಿಗೆ ಕರ್ತೃವಾದುದರಿಂದ ಅಕ್ಷಯವೆಂದು ಹೇಳುತ್ತಾರೆ. ಗಂಧರ್ವರಾಜನೇ, ನಾನು ನಿನಗೆ ಮೋಕ್ಷಕ್ಕೆ ಸಾಧನವಾದ ನಾಲ್ಕನೆಯದ್ದಾದ ಜ್ಞಾನವಿದ್ಯೆಯನ್ನು ಹೇಳಿರುತ್ತೇನೆ.

ವಿದ್ಯೋಪೇತಂ ಧನಂ ಕೃತ್ವಾ ಕರ್ಮಣಾ ನಿತ್ಯಕರ್ಮಣಿ ।
ಏಕಾಂತದರ್ಶನಾ ವೇದಾಃ ಸರ್ವೇ ವಿಶ್ವಾವಸೋ ಸ್ಮೃತಾಃ ॥೪೬॥

ವೇದವಾದಿಗಳೆಲ್ಲರೂ ಕರ್ಮಮೂಲಕವಾಗಿ ವಿದ್ಯೆಯೊಡನೆ ಅರ್ಥವನ್ನು ಹುಡುಕುತ್ತಾ ಕರ್ಮಗಳನ್ನು ಒಂದೇ ದೃಷ್ಟಿಯುಳ್ಳವರಂತೆ ತಿಳಿಯುತ್ತಾರೆ. ಏಕಾಂತ ದರ್ಶನವುಳ್ಳ ಸಮಸ್ತ ವೇದಗಳು ವಿಶ್ವಾವಸುವಿಗೆ ಸಂಬಂಧಿಸಿದ್ದು ಎಂದು ಹೇಳಿರುತ್ತಾರೆ.

ಜಾಯಂತೇ ಚ ಮ್ರಿಯಂತೇ ಚ ಯಸ್ಮಿನ್ನೇತೇ ಯತಶ್ಚ್ಯುತಾಃ ।
ವೇದಾರ್ಥಂ ಯೇ ನ ಜಾನಂತಿ ವೇದ್ಯಂ ಗಂಧರ್ವಸತ್ತಮ ॥೪೭॥

ತಿಳಿಯಬೇಕಾದುದನ್ನು ಯಾರು ತಿಳಿಯುವುದಿಲ್ಲವೋ ಅವರು ಹುಟ್ಟುತ್ತಲೂ ಸಾಯುತ್ತಲೂ ಇರುತ್ತಾರೆ. ತಿಳಿಯಬೇಕಾದ ವೇದಾರ್ಥವನ್ನು ತಿಳಿಯದಿದ್ದಲ್ಲಿ ಜನನ-ಮರಣಗಳ ಚಕ್ರವು ಗಂಧರ್ವರಾಜನೇ, ತಪ್ಪುವುದಿಲ್ಲ.

ಸಾಂಗೋಪಾಂಗಾನಪಿ ಯದಿ ಪಂಚ ವೇದಾನಧೀಯತೇ ।
ವೇದವೇದ್ಯಂ ನ ಜಾನೀತೇ ವೇದಭಾರವಹೋ ಹಿ ಸಃ ॥೪೮॥

ಒಬ್ಬನು ಸಾಂಗೋಪಾಂಗವಾದ ಸಮಸ್ತ ವೇದಗಳನ್ನೆಲ್ಲ ಓದಿದ್ದರೂ ಅದರಿಂದ ತಿಳಿಯಬೇಕಾದ ಜ್ಞೇಯವಸ್ತುವನ್ನು ಶ್ರೀಹರಿಯನ್ನು ತಿಳಿಯದಿದ್ದಲ್ಲಿ ಅವನು ಕೇವಲ ವೇದಗಳ ಭಾರವನ್ನು ಹೊತ್ತವನೇ ಸರಿ.

ಯೋ ಘೃತಾರ್ಥೀ ಖರೀಕ್ಷೀರಂ ಮಥೇದ್ ಗಂಧರ್ವಸತ್ತಮ ।
ವಿಷ್ಠಾಂ ತತ್ರಾನುಪಶ್ಯೇತ ನ ಮಂಡಂ ನಾಪಿ ವಾ ಘೃತಮ್ ॥೪೯॥

ವಿಶ್ವಾವಸುವೇ, ಒಳ್ಳೆಯ ತುಪ್ಪವನ್ನು ಅಪೇಕ್ಷಿಸುವವನು ಕತ್ತೆಯ ಹಾಲನ್ನು ಕರೆದರೆ

ಏನು ಪ್ರಯೋಜನ? ಅದರಿಂದ ಅಶುದ್ಧವಾದ ವಸ್ತುವು ದೊರೆತೀತೇ ವಿನಾ ಬೆಣ್ಣೆಯಾಗಲಿ, ತುಪ್ಪವಾಗಲಿ ದೊರೆಯಲು ಸಾಧ್ಯವಿಲ್ಲ.

ತಥಾ ವೇದ್ಯಮವೇದ್ಯಂ ಚ ವೇದವಿದ್ಯೋ ನ ವಿಂದತಿ ।
ಸ ಕೇವಲಂ ಮೂಢಮತಿರ್ಜ್ಞಾನಭಾರವಹಃ ಸ್ಮೃತಃ ॥೫೦॥

ಅದರಂತೆ ಕೇವಲ ವೇದವನ್ನು ಓದಿದವನು ವೇದದ ಭಾರವನ್ನು ಹೊತ್ತವನೇ ಹೊರತು ವೇದ್ಯಾವೇದ್ಯಗಳನ್ನು ತಿಳಿಯಲು ಸಮರ್ಥನಾಗುವುದಿಲ್ಲ.

ದ್ರಷ್ಟವ್ಯೌ ನಿತ್ಯಮೇವೈತೌ ತತ್ಪರೇಣಾಂತರಾತ್ಮನಾ ।
ಯಥಾಸ್ಯ ಜನ್ಮನಿಧನೇ ನ ಭವೇತಾಂ ಪುನಃ ಪುನಃ ॥೫೧॥

ಅಜಸ್ರಂ ಜನ್ಮನಿಧನಂ ಚಿಂತಯಿತ್ವಾ ತ್ರಯೀಮಿಮಾಮ್ ।
ಪರಿತ್ಯಜ್ಯ ಕ್ಷಯಮಿಹ ಅಕ್ಷಯಂ ಧರ್ಮಮಾಸ್ಥಿತಃ ॥೫೨॥

ಆದ್ದರಿಂದ ತನಗೆ ಜನನ-ಮರಣಗಳು ಒದಗದಂತೆ ವೇದ್ಯ-ಅವೇದ್ಯಗಳನ್ನು ಏಕಾಗ್ರ ಮನಸ್ಸಿನಿಂದ ದೇವರನ್ನೇ ಧ್ಯಾನಿಸುತ್ತಾ ಚಿಂತಿಸಬೇಕು. ಜನನ-ಮರಣಗಳು ತನ್ನನ್ನು ಬಿಡದೆ ಪುನಃ ಪುನಃ ಹಿಂಬಾಲಿಸುವುದನ್ನು ಯೋಚಿಸಿ, ಮೂರುವೇದಗಳನ್ನು ಅಧ್ಯಯನ ಮಾಡುತ್ತಾ, ಅದರಲ್ಲಿ ಅಶಾಶ್ವತವಾದ ಧರ್ಮಗಳನ್ನು ನಿರಾಕರಿಸಿ ಶಾಶ್ವತವಾದ ಮೋಕ್ಷಧರ್ಮವನ್ನೇ ಆಚರಿಸುತ್ತಿರಬೇಕು.

ಯದಾ ತು ಪಶ್ಯತೇತ್ಯಂತಮಹನ್ಯಹನಿ ಕಾಶ್ಯಪ ।
ತದಾ ಸ ಕೇವಲೀಭೂತಃ ಷಡ್ವಂಶಮನುಪಶ್ಯತಿ ॥೫೩॥

ನಿರಂತರವೂ ವೇದ್ಯ-ಅವೇದ್ಯಗಳು ಯಾವುದೆಂದು ಆದರದಿಂದ ತಿಳಿಯುತ್ತಿದ್ದರೆ ಅವನು ಕೇವಲನೆನಿಸಿ ಇಪ್ಪತ್ತಾರನೆಯ ತತ್ತ್ವವೆನಿಸಿದ ಪರಮಾತ್ಮನನ್ನು ಕಾಣಬಲ್ಲನು.

ಅನ್ಯಶ್ಚ ಶಾಶ್ವತೋವ್ಯಕ್ತಸ್ತಥಾನ್ಯಃ ಪಂಚವಿಂಶಕಃ ।
ತಸ್ಯ ದ್ವಾವನುಪಶ್ಯೇತ ತಮೇಕಮಿತಿ ಸಾಧವಃ ॥೫೪॥

ಅವ್ಯಕ್ತಸ್ವಭಾವನೆನಿಸಿದ, ಇಪ್ಪತ್ತಾರನೆಯ ತತ್ತ್ವವೆನಿಸಿದ ಪರಮಾತ್ಮನಾಗಲಿ, ಇಪ್ಪತ್ನಾಲ್ಕು ತತ್ತ್ವಗಳಿಗಿಂತ ಭಿನ್ನನಾದ ಇಪ್ಪತ್ತೈದನೆಯ ತತ್ತ್ವವೆನಿಸಿದ ಭಗವಂತನ

ರೂಪವಾಗಲಿ ಎರಡೂ ಬೇರೆಯಾಗಿರುವುದಿಲ್ಲ. ಇಪ್ಪತ್ತೈದು ಇಪ್ಪತ್ತಾರು ಈ ಎರಡು ಸಂಖ್ಯೆಯಿಂದ ವೇದ್ಯನಾದವನು ಪರಮಾತ್ಮನೇ ಆಗಿರುತ್ತಾನೆ ಎಂದು ಸಾಧುಗಳಾದವರು ಭಗವಂತನ ಅಂತರ್ಯಾಮಿ ರೂಪಗಳಲ್ಲಿಯೂ, ಮೂಲರೂಪಗಳಲ್ಲಿಯೂ ಐಕ್ಯವನ್ನೇ ಚಿಂತಿಸುತ್ತಾರೆ (ಈ ವಿಷಯವು ಹಿಂದೆ ತಿಳಿಸಲ್ಪಟ್ಟಿದೆ).

ವ್ಯಾಖ್ಯಾನ ವಿಶೇಷ– ಹಿಂದೆ ವಸಿಷ್ಠರು ಇಪ್ಪತ್ತೈದನೆಯ ತತ್ತ್ವ ಶ್ರೀಹರಿಯೇ ಆಗಿದ್ದಾನೆ ಎಂದು ವಿಸ್ತಾರವಾಗಿ ನಿರೂಪಿಸಿದ್ದಾರೆ. ಷಡ್ವಿಂಶ ಮನುಪಶ್ಯಂತಿ ಎಂಬಲ್ಲಿ ಯಾಜ್ಞವಲ್ಕ್ಯರು ಇಪ್ಪತ್ತಾರನೆಯ ತತ್ತ್ವವು ಭಗವಂತನೆಂದು ತಿಳಿಯಬೇಕೆಂದು ಹೇಳಿದ್ದಾರೆ. ಹೀಗಾಗಿ ವಸಿಷ್ಠರ ಅಭಿಪ್ರಾಯಕ್ಕೂ ಯಾಜ್ಞವಲ್ಕ್ಯರ ಅಭಿಪ್ರಾಯಕ್ಕೂ ವಿರೋಧವು ಉಂಟಾಯಿತು ಎಂದು ಆಶಂಕಿಸಿಕೊಂಡು ಹೇಳುತ್ತಿದ್ದಾರೆ. ಮಹದಾದಿ ಚತುರ್ವಿಂಶತಿ ತತ್ತ್ವಗಳಲ್ಲಿ ಜೀವರನ್ನೂ ಸೇರಿಸಿಕೊಂಡರೆ ಇಪ್ಪತ್ತೈದನೆಯ ತತ್ತ್ವ ಭಗವಂತನೇ ಆಗುತ್ತಾನೆ. ಇದನ್ನು ಹಿಂದೆ ವಸಿಷ್ಠರು ಹೇಳಿರುತ್ತಾರೆ. ಜಡ–ಜೀವ ಎಂದು ವಿಭಾಗಿಸಿಕೊಂಡು ಹೇಳಿದಾಗ ಇಪ್ಪತ್ನಾಲ್ಕನೆಯ ತತ್ತ್ವ ಜಡವಾಗುತ್ತದೆ, ಇಪ್ಪತ್ತೈದನೆಯ ತತ್ತ್ವ ಜೀವನಾಗುತ್ತಾನೆ, ಇಪ್ಪತ್ತಾರನೆಯ ತತ್ತ್ವ ನಾರಾಯಣನಾಗುತ್ತಾನೆ. ಹೀಗಾಗಿ ಇಪ್ಪತ್ತೈದನೆಯ ತತ್ತ್ವ ಜೀವನೂ ಆಗುತ್ತಾನೆ ಎಂಬುದು ಯಾಜ್ಞವಲ್ಕ್ಯರ ಅಭಿಪ್ರಾಯ. ಆದ್ದರಿಂದ ಯಾಜ್ಞವಲ್ಕ್ಯರು ತಮ್ಮ ಅಭಿಪ್ರಾಯವನ್ನು ಹೀಗೆ ತಿಳಿಸಿದ್ದಾರೆ ಎಂದು ತಿಳಿದುಕೊಳ್ಳಬೇಕು. ಶಾಶ್ವತೋऽವ್ಯಕ್ತಃ ಎಂದು ಮೂಲಶ್ಲೋಕದಲ್ಲಿರುವ ಪದಕ್ಕೆ ಪ್ರಕೃತಿಯಲ್ಲಿರುವ ಪ್ರಧಾನ ತತ್ತ್ವ ಎಂದು ಅರ್ಥ. ಆ ಪ್ರಕೃತಿ ಎಂಬ ಪ್ರಧಾನ ತತ್ತ್ವಕ್ಕಿಂತ ಶ್ರೀಹರಿಯು ಭಿನ್ನನಾಗಿದ್ದಾನೆ ಎಂದು ಚಿಂತಿಸಬೇಕು. ಇದರಂತೆ ಇಪ್ಪತ್ತೈದನೆಯ ತತ್ತ್ವನಾದ ಜೀವನು ಭಗವಂತನಿಗಿಂತ ಭಿನ್ನನೇ ಆಗಿದ್ದಾನೆ. ಆದ್ದರಿಂದ ಜಡ–ಜೀವ ಎಂಬ ಭೇದದಲ್ಲಿ ಜೀವನೇ ಇಪ್ಪತ್ತೈದನೆಯ ತತ್ತ್ವನಾಗುತ್ತಾನೆ. ಜೀವರೆಲ್ಲರೂ ಜಡತತ್ತ್ವಕ್ಕೆ ಅಭಿಮಾನಿಗಳಾಗಿರುವುದರಿಂದ ಜಡದ ಸಮುದಾಯದಲ್ಲೇ ಜೀವನನ್ನು ಸೇರಿಸಿದರೆ ಇಪ್ಪತ್ನಾಲ್ಕನೆಯ ತತ್ತ್ವದಲ್ಲಿ ಜೀವನು ಸೇರಿಕೊಳ್ಳುವುದರಿಂದ ಇಪ್ಪತ್ತೈದನೆಯ ತತ್ತ್ವ ಶ್ರೀಹರಿಯಾಗುತ್ತಾನೆ. ಆದ್ದರಿಂದ ಇಪ್ಪತ್ತೈದನೆಯ ತತ್ತ್ವದಲ್ಲಿ ಜೀವಾತ್ಮನನ್ನೂ ಚಿಂತಿಸಬಹುದು, ಪರಮಾತ್ಮನನ್ನೂ ಚಿಂತಿಸಬಹುದು. ಆದರೆ ಇಪ್ಪತ್ತಾರನೆಯ ತತ್ತ್ವದಲ್ಲಿ ಜೀವಾತ್ಮನನ್ನು ಚಿಂತಿಸುವ ಅವಕಾಶವೇ ಇರುವುದಿಲ್ಲ. ಭಗವಂತನನ್ನೇ ಇಪ್ಪತ್ತಾರನೆಯ ತತ್ತ್ವ ಎಂದು ಜ್ಞಾನಿಗಳು ತಿಳಿದಿರುತ್ತಾರೆ. ಇಪ್ಪತ್ತೈದನೆಯ ತತ್ತ್ವದಲ್ಲಿರುವ ಎರಡು ಅಭಿಪ್ರಾಯಗಳಂತೆ ಇಪ್ಪತ್ತಾರನೆಯ ತತ್ತ್ವದಲ್ಲಿ ಅಭಿಪ್ರಾಯಭೇದಗಳು ಇರುವುದಿಲ್ಲ. ಆದಕಾರಣದಿಂದ ಮುಂದಿನ ಶ್ಲೋಕದಲ್ಲಿ 'ಪಂಚವಿಂಶಕಮಚ್ಯುತಮ್ ನಾಭಿಜಾನಂತಿ' ಅಚ್ಯುತನನ್ನೇ ಇಪ್ಪತ್ತೈದನೆಯ ತತ್ತ್ವವೆಂದು ಹೇಳುವುದಿಲ್ಲ. ಕಿಂತು ವಿವಕ್ಷಾಭೇದ್ದಿಂದ ಮುಖ್ಯನಾಗಿ ಭಗವಂತನು ಇಪ್ಪತ್ತೈದನೆಯ ತತ್ತ್ವವೆಂದು, ಅಮುಖ್ಯನಾಗಿ ಜೀವನೂ ಇಪ್ಪತ್ತೈದನೆಯ ತತ್ತ್ವವೆಂದು ಜ್ಞಾನಿಗಳು ಹೇಳುತ್ತಾರೆ ಎಂದು

ಅಭಿಪ್ರಾಯ. ಪರಮಾತ್ಮನು ಇಪ್ಪತ್ತೈದನೆಯ ತತ್ತ್ವವಾಗಿ ಹೇಗೆ ಪ್ರಾಧಾನ್ಯವನ್ನು ಹೊಂದುತ್ತಾನೋ, ಈ ರೀತಿಯಾದ ಇಪ್ಪತ್ತೈದನೆಯ ತತ್ತ್ವವೆಂಬ ಮಹತ್ವವು ಜೀವಾತ್ಮನಿಗೆ ಇರುವುದಿಲ್ಲ. ಆದ್ದರಿಂದ ಪ್ರತ್ಯೇಕವಾಗಿ ಪರಮಾತ್ಮನ ಮಹತ್ವವನ್ನು ತಿಳಿಸಲು ಷಡ್ವಿಂಶ ಎಂದು ಹೇಳಿದ್ದಾರೆ. ಇಪ್ಪತ್ತಾರನೆಯ ತತ್ತ್ವ ಭಗವಂತನಾಗಿದ್ದಾನೆ. ಅಪ್ರಧಾನವಾಗಿಯೂ ಇಲ್ಲಿ ಜೀವನನ್ನು ಇಪ್ಪತ್ತಾರನೆಯ ತತ್ತ್ವದಲ್ಲಿ ಅನುಸಂಧಾನ ಮಾಡಲು ಬರುವುದಿಲ್ಲ. ಆದ್ದರಿಂದ ನೀನೂ ಹೀಗೆ ಭಗವಂತನ ಸರ್ವೋತ್ತಮತ್ವವನ್ನು ಹೇಳಲು ಯೋಗ್ಯನಾಗಿರುತ್ತಿ. ಜೀವನ ಇಪ್ಪತ್ತೈದನೆಯ ತತ್ತ್ವದ ಮಹತ್ವವು ಏನೆಂಬುದನ್ನು ಹೇಳಲು ಯೋಗ್ಯನಾಗಿರುತ್ತಿ ಎಂದು ಭಾವ.

ತೇನೈತನ್ನಾಭಿಜಾನಂತಿ ಪಂಚವಿಂಶಕಮಚ್ಯುತಮ್ ।
ಜನ್ಮಮೃತ್ಯುಭಯಾದ್ಯೋಗಾಃ ಸಾಂಖ್ಯಾಶ್ಚ ಪರಮೈಷಿಣಃ ॥೫೫॥

ಭಗವಂತನನ್ನು ಇಪ್ಪತ್ತೈದನೆಯ ತತ್ತ್ವವೆಂದೇ ಹೇಳಲು ಬರುವುದಿಲ್ಲ. ಕಿಂತು ವಿವಕ್ಷಾ ಭೇದೇನ ಮುಖ್ಯಾಮುಖ್ಯ ಎಂಬ ರೀತಿಯಲ್ಲಿ ಜೀವ-ಪರಮಾತ್ಮರನ್ನು ಇಪ್ಪತ್ತೈದರಲ್ಲಿ ಹೇಳಲಾಗುತ್ತದೆ. ಸರ್ವೋತ್ತಮನಾದ ಭಗವಂತನಲ್ಲಿ ಜನನ-ಮರಣ ಭಯಾದಿಗಳ ಸಂಬಂಧವನ್ನು ಸಾಂಖ್ಯರು ಹೇಳುವುದಿಲ್ಲ.

ವಿಶಾವಸುಃ

ಪಂಚವಿಂಶಂ ಯದೇತತ್ತೇ ಪ್ರೋಕ್ತಂ ಬ್ರಾಹ್ಮಣಸತ್ತಮ ।
ತಥಾ ತನ್ನ ತಥಾ ವೇತಿ ತದ್ಭವಾನ್ವಕ್ತುಮರ್ಹತಿ ॥೫೬॥

ವಿಶಾವಸು– ಬ್ರಾಹ್ಮಣಶ್ರೇಷ್ಠನೇ, ಇಪ್ಪತ್ತೈದು ಎಂಬುದಾಗಿ ಯಾವ ತತ್ತ್ವವನ್ನು ನೀನು ಹೇಳಿದ್ದೆಯೋ ಅದು ನೀನು ಹೇಳಿದಂತೆ ಸತ್ಯವೋ, ಅಸತ್ಯವೋ ಎಂಬುದಾಗಿ ನೀನೇ ಹೇಳಲು ಅರ್ಹನಾಗಿರುತ್ತಿ.

ಜೈಗೀಷವ್ಯಸ್ಯಾಸಿತಸ್ಯ ದೇವಲಸ್ಯ ಚ ಮೇ ಶ್ರುತಮ್ ।
ಪರಾಶರಸ್ಯ ವಿಪ್ರರ್ಷೇರ್ವಾರ್ಷಗಣ್ಯಸ್ಯ ಧೀಮತಃ ॥೫೭॥

ಭಿಕ್ಷೋಃ ಪಂಚಶಿಖಸ್ಯಾಥ ಕಪಿಲಸ್ಯ ಶುಕಸ್ಯ ಚ ।
ಗೌತಮಸ್ಯಾರ್ಷ್ಟಿಷೇಣಸ್ಯ ಗರ್ಗಸ್ಯ ಚ ಮಹಾತ್ಮನಃ ॥೫೮॥

ನಾರದಸ್ಯಾಸುರೇಶ್ಚೈವ ಪುಲಸ್ತ್ಯಸ್ಯ ಚ ಧೀಮತಃ ।
ಸನತ್ಕುಮಾರಸ್ಯ ತತಃ ಶುಕ್ರಸ್ಯ ಚ ಮಹಾತ್ಮನಃ ॥೫೯॥

ಕಶ್ಯಪಸ್ಯ ಪಿತುಶ್ಚೈವ ಪೂರ್ವಮೇವ ಮಯಾ ಶ್ರುತಮ್ ।
ತದನಂತರಂ ಚ ರುದ್ರಸ್ಯ ವಿಶ್ವರೂಪಸ್ಯ ಧೀಮತಃ ॥೬೦॥

ದೈವತೇಭ್ಯಃ ಪಿತೃಭ್ಯಶ್ಚ ದೈತ್ಯೇಭ್ಯಶ್ಚ ತತಸ್ತತಃ ।
ಪ್ರಾಪ್ತಮೇತನ್ಮಯಾ ಕೃತ್ಸ್ನಂ ವೇದ್ಯಂ ನಿತ್ಯಂ ವದಂತ್ಯುತ ॥೬೧॥

ಜೈಗೀಷವ್ಯನು, ಅಸಿತನು, ದೇವಲನು ಹೇಳಿದ ತತ್ತ್ವವನ್ನು ನಾನು ಮೊದಲೇ ಕೇಳಿದ್ದೇನೆ. ಪರಾಶರನು, ಜ್ಞಾನಿಯಾದ ವಾರ್ಷಗಣ್ಯನು, ಸಂನ್ಯಾಸಿಯಾದ ಪಂಚಶಿಖನು, ಕಪಿಲನು, ಶುಕನು, ಗೌತಮನು, ಆರ್ಷ್ಟಿಷೇಣನು, ಮಹಾತ್ಮನಾದ ಗರ್ಗಮುನಿಯು, ನಾರದನು, ಆಸುರಿಯು, ಪುಲಸ್ತ್ಯನು, ಸನತ್ಕುಮಾರನು, ಶುಕ್ರನು, ನನ್ನ ತಂದೆಯಾದ ಕಶ್ಯಪನು ಇವರೆಲ್ಲರಿಂದ ನಾನು ಈ ತತ್ತ್ವವನ್ನು ಕೇಳಿದ್ದೆನು. ನಂತರ ವಿಶ್ವರೂಪಿಯಾದ ರುದ್ರನು, ದೇವತೆಗಳು, ಪಿತೃಗಳು, ಅಸುರರು ಇವರಿಂದಲೂ ಈ ತತ್ತ್ವವನ್ನು ಕೇಳಿರುವೆನು. ಅವರೂ ಕೂಡ ವೇದ್ಯವಾದ ವಸ್ತುವನ್ನು ನಿತ್ಯವೆಂದೇ ಹೇಳುತ್ತಾರೆ.

ತಸ್ಮಾತ್ತದ್ವೈ ಭವದ್ ಬುದ್ಧ್ಯಾ ಶ್ರೋತುಮಿಚ್ಛಾಮಿ ಬ್ರಾಹ್ಮಣ ।
ಭವಾನ್ ಪ್ರಬರ್ಹಃ ಶಾಸ್ತ್ರಾಣಾಂ ಪ್ರಗಲ್ಭಶ್ಚಾತಿಬುದ್ಧಿಮಾನ್ ॥೬೨॥

ಆದ್ದರಿಂದ ನಿನ್ನ ಮಾತಿನಿಂದಲೂ ನಾನು ಸಂಶಯವನ್ನು ಹೊಂದಿ ಮತ್ತೆ ಕೇಳಬೇಕು ಎಂದು ತವಕಗೊಂಡಿದ್ದೇನೆ. ನೀನು ಅನೇಕ ಶಾಸ್ತ್ರಗಳನ್ನು ತಿಳಿದವನು. ಅತ್ಯಂತ ಬುದ್ಧಿವಂತನು. ಉಪದೇಶ ಮಾಡಲು ಸಮರ್ಥನು.

ನ ತವಾವಿದಿತಂ ಕಿಂಚಿದ್ ಭವಾನ್ ಶ್ರುತಿನಿಧಿಃ ಸ್ಮೃತಃ ।
ಕಥ್ಯತೇ ದೇವಲೋಕೇ ಚ ಪಿತೃಲೋಕೇ ಚ ಬ್ರಾಹ್ಮಣ ॥೬೩॥

ಬ್ರಹ್ಮಲೋಕಗತಾಶ್ಚೈವ ಕಥಯಂತಿ ಮಹರ್ಷಯಃ ।
ಪತಿಶ್ಚ ತಪತಾಂ ಶಶ್ವದಾದಿತ್ಯಸ್ತವ ಭಾಷತೇ ॥೬೪॥

ನೀನು ತಿಳಿಯದಿರುವ ಯಾವ ಸಂಗತಿಯೂ ಇರುವುದಿಲ್ಲ. ನಿನ್ನನ್ನು ಶ್ರುತಿನಿಧಿ ಎಂದು ಹೇಳುತ್ತಾರೆ. ದೇವಲೋಕ, ಪಿತೃಲೋಕ, ಮಹರ್ಷಿಗಳಲ್ಲಿಯೂ ನಿನ್ನನ್ನು

ಕೊಂಡಾಡುತ್ತಾರೆ. ತೇಜಸ್ಸಿಗೆ ಅಧಿಪತಿಯಾದ ಸೂರ್ಯದೇವನೇ ನಿನಗೆ ಸಾಕ್ಷಾತ್ತಾಗಿ ತತ್ತ್ವವನ್ನು ಉಪದೇಶಿಸಿರುತ್ತಾನೆ.

ಸಾಂಖ್ಯಜ್ಞಾನಂ ತ್ವಯಾ ಬ್ರಹ್ಮನ್ನವಾಪ್ತಂ ಕೃತ್ಸ್ನಮೇವ ಚ ।
ತಥೈವ ಯೋಗಜ್ಞಾನಂ ಚ ಯಾಜ್ಞವಲ್ಕ್ಯ ವಿಶೇಷತಃ ॥೬೫॥

ಯಾಜ್ಞವಲ್ಕ್ಯನೇ, ಪೂರ್ಣವಾದ ಸಾಂಖ್ಯಜ್ಞಾನವು, ಅದಕ್ಕಿಂತಲೂ ವಿಶೇಷವಾಗಿ ಯೋಗಶಾಸ್ತ್ರಜ್ಞಾನವು ನಿನ್ನಲ್ಲಿ ನೆಲೆಗೊಂಡಿರುವುದನ್ನು ತಿಳಿದಿರುತ್ತೇನೆ.

ನಿಃಸಂದಿಗ್ಧಂ ಪ್ರಬುದ್ಧಸ್ತ್ವಂ ಬುಧ್ಯಮಾನಶ್ಚರಾಚರಮ್ ।
ಶ್ರೋತುಮಿಚ್ಛಾಮಿ ತಜ್ಜ್ಞಾನಂ ಘೃತಂ ಮಂಡಮಯಂ ಯಥಾ ॥೬೬॥

ನೀನು ನಿಸ್ಸಂದೇಹವಾದ ನಿಶ್ಚಯಜ್ಞಾನವುಳ್ಳವನು. ತುಂಬಾ ಪ್ರಬುದ್ಧನು. ಚರಾಚರ ಪ್ರಾಣಿಗಳನ್ನೆಲ್ಲ ತಿಳಿಯಬಲ್ಲವನು. ಮೊಸರಿನಿಂದ ಬೆಣ್ಣೆಯನ್ನು ತೆಗೆಯುವಂತೆ ನಿನ್ನ ಜ್ಞಾನದ ಸಾರವನ್ನು ನನಗೆ ಉಪದೇಶಿಸಿ ಅನುಗ್ರಹಿಸು ಎಂದನು.

ಯಾಜ್ಞವಲ್ಕ್ಯಃ

ಕೃತ್ಸ್ನಧಾರಿಣಮೇವ ತ್ವಾಂ ಮನ್ಯೇ ಗಂಧರ್ವಸತ್ತಮ ।
ಜಿಜ್ಞಾಸಸಿ ಚ ಮಾಂ ರಾಜಂಸ್ತನ್ನಿಬೋಧ ಯಥಾಶ್ರುತಮ್ ॥೬೭॥

ಯಾಜ್ಞವಲ್ಕ್ಯ– ವಿಶ್ವಾವಸುವೇ, ನೀನೂ ಎಲ್ಲವನ್ನೂ ತಿಳಿದಿರುವಿ ಎಂದು ನಾನು ಬಲ್ಲೆನು. ಆದರೂ ಜಿಜ್ಞಾಸೆಯಿಂದ ಕೇಳುತ್ತಿರುವ ನಿನಗೆ ನಾನು ತಿಳಿದಷ್ಟು ಹೇಳುತ್ತೇನೆ, ಕೇಳಿಸಿಕೊ.

ಅಬುಧ್ಯಮಾನಾಂ ಪ್ರಕೃತಿಂ ಬುಧ್ಯತೇ ಪಂಚವಿಂಶಕಃ ।
ನ ತು ಬುಧ್ಯತಿ ಗಂಧರ್ವ ಪ್ರಕೃತಿಃ ಪಂಚವಿಂಶಕಮ್ ॥೬೮॥

ಇಪ್ಪತ್ತೈದನೆಯ ತತ್ತ್ವವೆನಿಸಿದ ಜೀವನು ಜಡವಾಗಿರುವ ಪ್ರಕೃತಿಯನ್ನು ತಾನು ತಿಳಿದಿರುತ್ತಾನೆ. ಆದರೆ ಇಪ್ಪತ್ತೈದನೆಯ ತತ್ತ್ವವೆನಿಸಿದ ಜೀವಾತ್ಮನನ್ನು, ಇಪ್ಪತ್ನಾಲ್ಕನೆಯ ತತ್ತ್ವವಾದ ಜಡಪ್ರಕೃತಿಯು ಜಡವಾದ ಕಾರಣದಿಂದಲೇ ತಿಳಿದಿರುವುದಿಲ್ಲ.

ಅನೇನಾಪ್ರತಿಬೋಧೇನ ಪ್ರಧಾನಂ ಪ್ರವದಂತಿ ತಮ್ ।
ಸಾಂಖ್ಯಯೋಗಾಶ್ಚ ತತ್ತ್ವಜ್ಞಾ ಯಥಾಶ್ರುತಿನಿದರ್ಶನಾತ್ ॥೬೯॥

ಈ ರೀತಿಯಾಗಿ ತಿಳಿಯದಿರುವ ಕಾರಣದಿಂದಲೇ ಜೀವರು ಪ್ರಧಾನ ಪ್ರಕೃತಿ ಎಂದು ಹೇಳುತ್ತಾರೆ. ಶ್ರುತಿಯ ನಿದರ್ಶನಕ್ಕೆ ಅನುಗುಣವಾಗಿ ತತ್ತ್ವಜ್ಞರಾದ ಸಾಂಖ್ಯ ಯೋಗಿಯ ನುಡಿಯು ಈ ರೀತಿಯಾಗಿದೆ.

ಪಶ್ಯಂಸ್ತಥೈವ ಚಾಪಶ್ಯನ್ ಪಶ್ಯತ್ಯನ್ಯಸ್ತಥಾನಘ ।
ಷಡ್ವಂಶಃ ಪಂಚವಿಂಶಂ ಚ ಚತುರ್ವಿಂಶಂ ಚ ಪಶ್ಯತಿ ।
ನ ತು ಪಶ್ಯತಿ ಪಶ್ಯಂಸ್ತು ಯಶ್ಚೈನಮನುಪಶ್ಯತಿ ॥೭೦॥

ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನಿಗಿಂತ ಭಿನ್ನನಾದ ಜೀವಾತ್ಮನು ದೇಹ-ಗೇಹಾದಿಗಳನ್ನೆಲ್ಲ ನೋಡುತ್ತಾ ಪರಮಾತ್ಮನನ್ನು ನೋಡುವುದಿಲ್ಲ. ಆದರೆ ಇಪ್ಪತ್ತಾರನೆಯ ತತ್ತ್ವವೆನಿಸಿದ ಪರಮಾತ್ಮನು ಇಪ್ಪತ್ತೈದನೆಯ ತತ್ತ್ವವೆನಿಸಿದ ಜೀವನನ್ನು, ಇಪ್ಪತ್ನಾಲ್ಕನೆಯ ತತ್ತ್ವವೆನಿಸಿದ ಜಡತತ್ತ್ವವನ್ನು ನೋಡುತ್ತಾನೆ. ನೋಡುತ್ತಿರುವ ಜೀವಾತ್ಮನನ್ನು ಪರಮಾತ್ಮನು ನೋಡುತ್ತಾನೆ. ಆದರೆ ನೋಡುತ್ತಿರುವ ಪರಮಾತ್ಮನನ್ನು ಇಪ್ಪತ್ತೈದನೆಯ ತತ್ತ್ವವೆನಿಸಿದ ಜೀವಾತ್ಮನು ನೋಡುವುದಿಲ್ಲ.

ಪಂಚವಿಂಶೋಽಭಿಮನ್ಯೇತ ನಾನ್ಯೋಽಸ್ತಿ ಪರಮೋ ಮಮ ।
ನ ಚತುರ್ವಿಂಶಕೋಽಗ್ರಾಹ್ಯೋ ಮನುಜೈರ್ಜ್ಞಾನದರ್ಶಿಭಿಃ ॥೭೧॥

ಇಪ್ಪತ್ತೈದನೆಯ ತತ್ತ್ವವೆನಿಸಿದ ಜೀವಾತ್ಮನು ನನಗಿಂತ ಸರ್ವೋತ್ತಮನಾದವನು ಯಾರೂ ಇಲ್ಲ ಎಂದು ಅಭಿಮಾನವನ್ನು ಹೊಂದಿರುತ್ತಾನೆ. ಆದರೆ ಜ್ಞಾನಚಕ್ಷುಸ್ಸುಳ್ಳ ಮನುಷ್ಯರು ಯಾರೂ ಜಡವಾದ ತತ್ತ್ವವೇ ನಾನು ಎಂದು ಇಪ್ಪತ್ನಾಲ್ಕನೆಯ ತತ್ತ್ವದ ಬಗ್ಗೆ ಅಜ್ಞಾನವನ್ನು ಹೊಂದಿರುವುದಿಲ್ಲ.

ಮತ್ಸ್ಯೋವೋದಕಮನ್ವೇತಿ ಪ್ರವರ್ತತಿ ಪ್ರವರ್ತನಾತ್ ।
ಯಥೈವ ಬುಧ್ಯತೇ ಮತ್ಸ್ಯಸ್ತಥೈವೋಽಪ್ಯನುಪಶ್ಯತಿ ।
ಸಸ್ನೇಹಃ ಸಹವಾಸಾಚ್ಚ ಸಾಭಿಮಾನಶ್ಚ ನಿತ್ಯಶಃ ॥೭೨॥

ಮೀನು ನೀರನ್ನೇ ಅವಲಂಬಿಸಿಕೊಂಡು ಹೋಗುವಂತೆ ಜೀವನು ಪ್ರಕೃತಿಯನ್ನೇ ಅನುಸರಿಸಿ ಸಾಗುತ್ತಾನೆ. ಮೀನು ನೀರನ್ನು ತಿಳಿಯುವ ಹಾಗೆ ಜೀವನು ಯಾವಾಗಲೂ ತನಗಿರುವ ಸ್ನೇಹ-ಸಹವಾಸಗಳಿಂದ, ಅಭಿಮಾನದಿಂದ ಪ್ರಕೃತಿಯನ್ನು ತನ್ನೊಡನೆ ನಿತ್ಯ

ಸಂಬಂಧವನ್ನು ಹೊಂದಿದೆ ಎಂದು ತಿಳಿಯುತ್ತಾನೆ. ಅಜ್ಞಾನಿಯ ತಿಳಿವಳಿಕೆಯು ಈ ರೀತಿಯಾಗಿರುತ್ತದೆ ಎಂದು ಭಾವ.

ಸ ನಿಮಜ್ಜತಿ ಕಾಲಸ್ಯ ಯದೈಕತ್ವಂ ನ ಬುಧ್ಯತೇ ।
ಉನ್ಮಜ್ಜತಿ ಹಿ ಕಾಲಸ್ಯ ಮಮತ್ವೇನಾಭಿಸಂವೃತಃ ॥೭೩॥

ಕಾಲವು ಮುಖ್ಯ ಎಂಬುದನ್ನು ಜೀವಾತ್ಮನು ಎಲ್ಲಿಯತನಕ ತಿಳಿಯುವುದಿಲ್ಲವೋ ಅವನು ಈ ಅಜ್ಞಾನದ ಪ್ರಭಾವದಿಂದ ಕಾಲಾಖ್ಯ ಭಗವಂತನ ಅನುಗ್ರಹವಿಲ್ಲದೆ ಮುಳುಗಿ ಹೋಗುತ್ತಾನೆ. ಮಮಕಾರದಿಂದ ಆವೃತನಾದ ಜೀವನು ಈ ಕಾಲಪ್ರವಾಹದಲ್ಲೇ ಮುಳುಗುವುದು, ಏಳುವುದು ಮಾಡುತ್ತಿರುತ್ತಾನೆ.

ಯದಾ ತು ಮನ್ಯತೇಽನ್ಯೋಹಮನ್ಯ ಏಷ ಇತಿ ದ್ವಿಜಃ ।
ತದಾ ಸ ಕೇವಲೀಭೂತಃ ಷಡ್ವಿಂಶಮನುಪಶ್ಯತಿ ॥೭೪॥

ಯಾವಾಗ ಜೀವನು ನಾನು ಬೇರೆ, ನನ್ನಿಂದ ಪರಮಾತ್ಮನು ಅತ್ಯಂತ ಭಿನ್ನನು ಎಂದು ಈ ಭೇದಜ್ಞಾನವನ್ನು ಹೊಂದುತ್ತಾನೋ ಆಗ ಪ್ರಕೃತಿಯ ಗುಣದಿಂದ ದೂರನಾದ ಜೀವಾತ್ಮನು ಇಪ್ಪತ್ತಾರನೆಯ ತತ್ತ್ವವೆನಿಸಿದ ಪರಮಾತ್ಮನನ್ನು ನೋಡುತ್ತಾನೆ.

ಅನ್ಯಶ್ಚ ರಾಜನ್ನವರಸ್ತಥಾನ್ಯಃ ಪಂಚವಿಂಶಕಃ ।
ತತ್ಸ್ಥಾತ್ವಾದನುಪಶ್ಯಂತಿ ಏಕ ಏವೇತಿ ಸಾಧವಃ ॥೭೫॥

ಇಪ್ಪತ್ತೈದನೆಯ ತತ್ತ್ವವೆನಿಸಿದ ಜೀವಾತ್ಮನು ಪರಮಾತ್ಮನಿಗಿಂತ ಭಿನ್ನನಾಗಿದ್ದಾನೆ, ಅಧಮನೂ ಆಗಿದ್ದಾನೆ. ಪರಮಾತ್ಮನು ಆ ಜೀವನ ಅಂತರ್ಯಾಮಿಯಾಗಿದ್ದಾನೆ ಎಂಬುದಾಗಿ ಪರಮಾತ್ಮನ ಸರ್ವೋತ್ತಮತ್ವವನ್ನೇ ಸಜ್ಜನರು ತಿಳಿದಿರುತ್ತಾರೆ.

ತೇನೈತನ್ನಾಭಿನಂದಂತಿ ಪಂಚವಿಂಶಕಮಚ್ಯುತಮ್ ।
ಜನ್ಮಮೃತ್ಯುಭಯಾದ್ಭೀತಾ ಯೋಗಾಃ ಸಾಂಖ್ಯಾಶ್ಚ ಕಾಶ್ಯಪ ।
ಷಡ್ವಿಂಶಮನುಪಶ್ಯಂತಿ ಶುಚಯಸ್ತತ್ಪರಾಯಣಾಃ ॥೭೬॥

ಆದ್ದರಿಂದಲೇ ಯಾಜ್ಞವಲ್ಕ್ಯನೇ, ಜನ್ಮ-ಮರಣದಿಂದ ಭೀತರಾದ ಯೋಗರು ಮತ್ತು ಸಾಂಖ್ಯರು ಇಪ್ಪತ್ತೈದನೆಯ ತತ್ತ್ವ ಅಚ್ಯುತ ಎಂದು ಹೇಳುವ ಅಭಿಪ್ರಾಯವನ್ನು

ಅಭಿನಂದಿಸುವುದಿಲ್ಲ. ಅಲ್ಲಿಗೊಂದಲಕ್ಕೆ ಅವಕಾಶವಿದೆ. ಗೊಂದಲಕ್ಕೆ ಅವಕಾಶವಿಲ್ಲದ ಇಪ್ಪತ್ತಾರನೆಯ ತತ್ತ್ವ ಭಗವಂತನು ಎಂಬುದನ್ನೇ ಭಗವಂತನಲ್ಲಿ ದೃಢವಾದ ನಿಶ್ಚಯ ಉಳ್ಳ ಶುದ್ಧಚೇತನರು ಕಂಡುಕೊಂಡಿರುತ್ತಾರೆ.

ಯದಾ ಸ ಕೇವಲೀಭೂತಃ ಷಡ್ವಿಂಶಮನುಪಶ್ಯತಿ ।
ತದಾ ಸ ಸರ್ವವಿದ್ ವಿದ್ವಾನ್ನ ಪುನರ್ಜನ್ಮ ವಿಂದತಿ ॥೭೭॥

ಯಾವಾಗ ಜೀವನು ಪ್ರಾಕೃತ ಗುಣರಹಿತನಾಗಿ ಇಪ್ಪತ್ತಾರನೆಯ ತತ್ತ್ವವೆನಿಸಿದ ಭಗವಂತನನ್ನು ಅನುಭೋಗದಿಂದ ಕಂಡುಕೊಳ್ಳುತ್ತಾನೋ ಅವನು ಸರ್ವಜ್ಞನಾಗಿ ಪುನಃ ಜನ್ಮವನ್ನು ಹೊಂದುವುದಿಲ್ಲ.

ಏವಮಪ್ರತಿಬುದ್ಧಶ್ಚ ಬುಧ್ಯಮಾನಶ್ಚ ತೇऽನಘ ।
ಬುದ್ಧಶ್ಚೋಕ್ತೋ ಯಥಾತತ್ತ್ವಂ ಮಯಾ ಶ್ರುತಿನಿದರ್ಶನಾತ್ ॥೭೮॥

ನಿರ್ದೋಷನೇ, ಈ ರೀತಿಯಾಗಿ ನಾನು ಶ್ರುತಿಗಳ ನಿರ್ದೇಶದಂತೆ ತಿಳಿಯದವನ್ಯಾರು, ತಿಳಿಯುವವನ್ಯಾರು, ತಿಳಿದವನ್ಯಾರು ಎಂಬುದನ್ನು ಯಥಾರ್ಥವಾಗಿ ಹೇಳಿರುತ್ತೇನೆ.

ಪಶ್ಯಾಪಶ್ಯಂ ಯೋऽನುಪಶ್ಯೇತ್ಕ್ಷೇಮಂ ತತ್ತ್ವಂ ಚ ಕಾಶ್ಯಪ ।
ಕೇವಲಾಕೇವಲಂ ಚಾದ್ಯಂ ಪಂಚವಿಂಶಾತ್ ಪರಂ ಚ ಯತ್ ॥೭೯॥

ಕಶ್ಯಪಸುತನೇ, ಯಾವಾತನು ಭಗವತ್ತತ್ತ್ವವು ಪ್ರಾಕೃತ ಕಣ್ಣಿನಿಂದ ನೋಡಲಾಗದು, ಅಪ್ರಾಕೃತ ಕಣ್ಣಿನಿಂದ ನೋಡಲು ಸಾಧ್ಯವು ಎಂಬುದನ್ನು ಕಾಣುತ್ತಾನೋ ಅಂತಹ ಕ್ಷೇಮಕರವಾದ ತತ್ತ್ವವನ್ನು ಪ್ರಕೃತಿಗುಣದಿಂದ ದೂರವಾದುದೆಂದು, ಮಹತ್ತ್ವ ಪೂರ್ಣವಾದುದೆಂದು, ಇಪ್ಪತ್ತೈದನೆಯ ತತ್ತ್ವಕ್ಕಿಂತಲೂ ಶ್ರೇಷ್ಠವಾದುದೆಂದು ಜ್ಞಾನಿಯಾದವನು ತಿಳಿದುಕೊಳ್ಳುತ್ತಾನೆ.

ವಿಶ್ವಾವಸುಃ

ತಥ್ಯಂ ಶುಭಂ ಚೈತದುಕ್ತಂ ತ್ವಯಾ ಭೋಃ
ಸಮ್ಯಕ್ ಕ್ಷೇಮ್ಯಂ ದೇವತಾದ್ಯಂ ಯಥಾವತ್ ।

ಸ್ವಸ್ತ್ಯಕ್ಷಯಂ ಭವತಶ್ಚಾಸ್ತು ನಿತ್ಯಂ
ಬುದ್ಧ್ಯಾ ಸದಾ ಬುದ್ಧಿಯುಕ್ತಂ ನಮಸ್ತೇ ॥೮೦॥

ವಿಶ್ವಾವಸು– ಯಾಜ್ಞವಲ್ಕ್ಯನೇ, ಯಥಾರ್ಥವಾದ, ಶುಭಕರವಾದ ತತ್ತ್ವವನ್ನು ನೀನು ತಿಳಿಸಿರುತ್ತಿ. ಕ್ಷೇಮವೆನಿಸಿದ, ದೇವತೆಗಳಿಗೆಲ್ಲ ಆದಿಯಾದ ತತ್ತ್ವವನ್ನು ಯಥಾರ್ಥವಾಗಿ ತಿಳಿಸಿರುತ್ತಿ. ಇಂತಹ ತತ್ತ್ವವನ್ನು ತಿಳಿಸಿದ ನಿನಗೆ ನಿತ್ಯವೂ ಮಂಗಳವಾಗಲಿ. ಭಗವಂತನ ಬುದ್ಧಿಯಿಂದ ಯಾವಾಗಲೂ ಕೂಡಿರುವಂತಹ ನಿನಗೆ ನಮಸ್ಕಾರವು.

ಯಾಜ್ಞವಲ್ಕ್ಯಃ

ಏವಮುಕ್ತ್ವಾ ಸಂಪ್ರಯಾತೋ ದಿವಂ ಸ
ವಿಭ್ರಾಜನ್ ವೈ ಶ್ರೀಮತಾ ದರ್ಶನೇನ ।
ತುಷ್ಟಶ್ಚ ತುಷ್ಟ್ಯಾ ಪರಯಾಭಿನಂದ್ಯ
ಪ್ರದಕ್ಷಿಣಂ ಮಮ ಕೃತ್ವಾ ಮಹಾತ್ಮಾ ॥೮೧॥

ಯಾಜ್ಞವಲ್ಕ್ಯ– ಹೀಗೆ ಶ್ರೇಷ್ಠವಾದ ಬೆಳಕಿನಿಂದ ದರ್ಶನವನ್ನು ನೀಡಿದ ವಿಶ್ವಾವಸು ಎಂಬ ಗಂಧರ್ವನು ನನ್ನ ಮಾತುಗಳಿಂದ ಸಂತೋಷಗೊಂಡು ಅಭಿನಂದಿಸಿ ಮಹಾತ್ಮನಾದ ಅವನು ನನಗೆ ಪ್ರದಕ್ಷಿಣೆಯನ್ನು ಮಾಡಿ ಸ್ವರ್ಗಲೋಕವನ್ನು ಕುರಿತು ಹೊರಟು ಹೋದನು.

ಬ್ರಹ್ಮಾದೀನಾಂ ಖೇಚರಾಣಾಂ ಕ್ಷಿತೌ ಚ
ಯೇ ಚಾಧಸ್ತಾತ್ ಸಂವಸಂತೇ ನರೇಂದ್ರ ।
ತತ್ಸೈವ ತದ್ದರ್ಶನಂ ದರ್ಶಯನ್ ವೈ
ಸಮ್ಯಕ್ ಕ್ಷೇಮ್ಯಂ ಯೇ ಪಥಂ ಸಂಶ್ರಿತಾ ವೈ ॥೮೨॥

ರಾಜೇಂದ್ರನೇ, ಆದಿತ್ಯನು ಬ್ರಹ್ಮಾದಿ ದೇವತೆಗಳಿಗೂ, ಭೂಮಿಯಲ್ಲಿಯೂ, ಪಾತಾಳದಲ್ಲಿಯೂ ಇರುವವರಿಗೆ ಕ್ಷೇಮಕ್ಕಾಗಿ ಈ ಶಾಸ್ತ್ರವನ್ನು ಹೊರಹೊಮ್ಮಿಸಿದ್ದಾನೆ.

ಸಾಂಖ್ಯಾಃ ಸರ್ವೇ ಸಾಂಖ್ಯಧರ್ಮೇ ರತಾಶ್ಚ
ತದ್ವದ್ಯೋಗಾ ಯೋಗಧರ್ಮೇ ರತಾಶ್ಚ ।

ಯೇ ಚಾಪ್ಯನ್ಯೇ ಮೋಕ್ಷಕಾಮಾ ಮನುಷ್ಯಾ-
ಸ್ತೇಷಾಮೇತದ್ದರ್ಶನಂ ಜ್ಞಾನದೃಷ್ಟಮ್ ॥೮೩॥

ಸಾಂಖ್ಯಧರ್ಮದಲ್ಲಿ ನಿರತರಾದ ವ್ಯಕ್ತಿಗಳು, ಎಲ್ಲ ಸಾಂಖ್ಯರು, ಯೋಗ ಧರ್ಮಗಳಲ್ಲಿ ರತರಾದ ಯೋಗಸಿದ್ಧರು, ಇನ್ನು ಉಳಿದ ಮೋಕ್ಷವನ್ನು ಬಯಸುವ ಮನುಷ್ಯರು ಎಲ್ಲರಿಗೂ ಈ ಶಾಸ್ತ್ರವು ಅತ್ಯಂತ ಮುಖ್ಯವಾದುದು.

ಜ್ಞಾನಾನ್ಮೋಕ್ಷೋ ಜಾಯತೇ ಪೂರುಷಾಣಾಂ
ನಾಸ್ಯಜ್ಞಾನಾದೇವಮಾಹುರ್ನರೇಂದ್ರ ।
ತಸ್ಮಾಜ್ಜ್ಞಾನಂ ತತ್ತ್ವತೋऽನ್ವೇಷಿತವ್ಯಂ
ಯೇನಾತ್ಮಾನಂ ಮೋಕ್ಷಯೇಜ್ಜನ್ಮಮೃತ್ಯೋಃ ॥೮೪॥

ಜ್ಞಾನದಿಂದಲೇ ಪುರುಷರಿಗೆ ಮೋಕ್ಷವಾಗುತ್ತದೆ. ಎಂದಿಗೂ ಅಜ್ಞಾನದಿಂದ ಮೋಕ್ಷವಾಗುವುದಿಲ್ಲ ಎಂದು ವಿದ್ವಾಂಸರು ನಿಶ್ಚಯಿಸಿರುತ್ತಾರೆ. ಈ ಕಾರಣದಿಂದ ಜ್ಞಾನವನ್ನು ಯಥಾರ್ಥವಾಗಿ ಅನ್ವೇಷಣೆ ಮಾಡಬೇಕು. ಜನನ-ಮರಣಗಳಿಂದ ಬಿಡುಗಡೆಯನ್ನು ಹೊಂದಿಸುವ ಸಾಮರ್ಥ್ಯ ಈ ಜ್ಞಾನಶಕ್ತಿಗೆ ಇರುತ್ತದೆ.

ಪ್ರಾಪ್ಯ ಜ್ಞಾನಂ ಬ್ರಾಹ್ಮಣಾತ್ ಕ್ಷತ್ರಿಯಾದ್ವಾ
ವೈಶ್ಯಾಚ್ಛೂದ್ರಾದಪಿ ನೀಚಾದಭೀಕ್ಷ್ಣಮ್ ।
ಶ್ರದ್ಧಾತವ್ಯಂ ಶ್ರದ್ದಧಾನೇನ ನಿತ್ಯಂ
ನ ಶ್ರದ್ದಿನಂ ಜನ್ಮಮೃತ್ಯೂ ವಿಶೇತಾಮ್ ॥೮೫॥

ಶ್ರದ್ಧೆಯುಳ್ಳವನು ಈ ಜ್ಞಾನವನ್ನು ಬ್ರಾಹ್ಮಣನಿಂದಲೂ, ಕ್ಷತ್ರಿಯನಿಂದಲೂ, ವೈಶ್ಯನಿಂದಲೂ, ಶೂದ್ರನಿಂದಲೋ ಅಥವಾ ಅದಕ್ಕಿಂತಲೂ ನೀಚನಾದ ವ್ಯಕ್ತಿಯಿಂದ ಪಡೆದರೂ ಅದರಲ್ಲಿ ಪೂರ್ಣಶ್ರದ್ಧೆಯನ್ನು ಇಡಬೇಕು. ಶ್ರದ್ಧೆಯುಳ್ಳವನನ್ನು ಜನನ-ಮರಣಗಳು ಎಂದಿಗೂ ಪೀಡಿಸಲಾರವು.

ಸರ್ವೇ ವರ್ಣಾ ಬ್ರಾಹ್ಮಣಾ ಬ್ರಹ್ಮಜಾಶ್ಚ
ಸರ್ವೇ ನಿತ್ಯಂ ವ್ಯಾಹರಂತೇ ಚ ಬ್ರಹ್ಮ ।
ತತ್ತ್ವಂ ಶಾಸ್ತ್ರಂ ಬ್ರಹ್ಮಬುದ್ಧ್ಯಾ ಬ್ರವೀಮಿ
ಸರ್ವಂ ವಿಶ್ವಂ ಬ್ರಹ್ಮ ಚೈತತ್ ಸಮಸ್ತಮ್ ॥೮೬॥

ಚತುರ್ಮುಖಬ್ರಹ್ಮನಿಂದ ಉತ್ಪತ್ತಿಯನ್ನು ಹೊಂದಿರುವ ಎಲ್ಲ ವರ್ಣದವರೂ ಬ್ರಾಹ್ಮಣರೇ. ಎಲ್ಲರೂ ಯಾವಾಗಲೂ ಬ್ರಹ್ಮನನ್ನು ವ್ಯವಹರಿಸಲು ಯೋಗ್ಯರಾದವರೆ. ಯಾವ ತತ್ತ್ವದಿಂದ ಜೀವಾತ್ಮನು ಜನನ-ಮರಣಗಳನ್ನು ತಪ್ಪಿಸಿಕೊಳ್ಳುತ್ತಾನೋ ಅಂತಹ ಬ್ರಹ್ಮಜ್ಞಾನಿಯಿಂದ ಕೂಡಿರುವಂಥ ಶಾಸ್ತ್ರದ ಸಾರವನ್ನೇ ನಿನಗೆ ನಾನು ಹೇಳಿರುತ್ತೇನೆ.

ಬ್ರಹ್ಮಾಸ್ಯತೋ ಬ್ರಾಹ್ಮಣಾಃ ಸಂಪ್ರಸೂತಾ
ಬಾಹುಭ್ಯಾಂ ವೈ ಕ್ಷತ್ರಿಯಾಃ ಸಂಪ್ರಸೂತಾಃ ।
ನಾಭ್ಯಾಂ ವೈಶ್ಯಾಃ ಪಾದತಶ್ಚಾಪಿ ಶೂದ್ರಾಃ
ಸರ್ವೇ ವರ್ಣಾ ನಾನ್ಯಥಾ ವೇದಿತವ್ಯಾಃ ॥೮೭॥

ಸಕಲ ಜಗತ್ತು ಭಗವಂತನಿಂದಲೇ ಸೃಷ್ಟಿಯಾಗಿದೆ. ಬ್ರಹ್ಮನ ಮುಖದಿಂದ ಬ್ರಾಹ್ಮಣರು, ಬಾಹುಗಳಿಂದ ಕ್ಷತ್ರಿಯರು, ನಾಭಿಯಿಂದ ವೈಶ್ಯರು ಪಾದಗಳಿಂದ ಶೂದ್ರರು ಜನ್ಮವನ್ನು ಹೊಂದಿರುತ್ತಾರೆ. ಎಲ್ಲ ವರ್ಣಗಳನ್ನೂ ಬ್ರಹ್ಮಜ್ಞಾನಕ್ಕಾಗಿಯೇ ಸೃಷ್ಟಿ ಮಾಡಲಾಗಿದೆ ಎಂಬುದಾಗಿ ತಿಳಿಯಬೇಕೇ ವಿನಾ ಈ ಉದ್ದೇಶಕ್ಕಿಂತ ವ್ಯತಿರಿಕ್ತವಾಗಿ ತಿಳಿಯಬಾರದು.

ಅಜ್ಞಾನತಃ ಕರ್ಮಯೋನಿಂ ಭಜಂತೇ
ತಾಂ ತಾಂ ರಾಜಂಸ್ತೇ ಯಥಾ ಯಾಂತ್ಯಭಾವಮ್ ।
ತಥಾ ವರ್ಣಾ ಜ್ಞಾನಹೀನಾಃ ಪತಂತೇ
ಘೋರಾದಜ್ಞಾನಾತ್ ಪ್ರಾಕೃತಂ ಯೋನಿಜಾಲಮ್ ॥೮೮॥

ಅಜ್ಞಾನದಿಂದಾಗಿ ಅನೇಕ ಕರ್ಮಯೋನಿಗಳಲ್ಲಿ ಹುಟ್ಟನ್ನು ಹೊಂದುತ್ತಾರೆ. ಅಜ್ಞಾನ ನಿಮಿತ್ತದಿಂದಲೇ ಪ್ರಾಕೃತವೆನಿಸಿದ ಅನೇಕ ಜನ್ಮಗಳಲ್ಲಿ ತೊಳಲಾಡುತ್ತಾರೆ. ಬಳಿಕ ಕರ್ಮಾನುಸಾರವಾಗಿ ನೀಚಭಾವವನ್ನೂ ಹೊಂದುತ್ತಾರೆ. ಆದ್ದರಿಂದ ಪ್ರಕೃತಿಯ ಅನೇಕ ಯೋನಿಗಳಲ್ಲಿ ಮುಳುಗಿಸುವ ಘೋರವಾದ ಅಜ್ಞಾನದಿಂದ ನಿವೃತ್ತಿಯನ್ನು ಹೊಂದಬೇಕು.

ತಸ್ಮಾಜ್ಜ್ಞಾನಂ ಸರ್ವತೋ ಮಾರ್ಗಿತವ್ಯಂ
ಸರ್ವತ್ರಸ್ಥಂ ಚೈತದುಕ್ತಂ ಮಯಾ ತೇ ।

ತಸ್ಮೈ ಬ್ರಹ್ಮಾ ತಸ್ಥಿವಾಂಶ್ಚಾಪರೋ ಯ-
ಸ್ತಸ್ಮೈ ನಿತ್ಯಂ ಮೋಕ್ಷಮಾಹುರ್ದ್ವಿಜೇಂದ್ರಾಃ ॥೪೯॥

ಆದ್ದರಿಂದ ಎಲ್ಲ ರೀತಿಯಿಂದಲೂ ಜ್ಞಾನಮಾರ್ಗವನ್ನೇ ಅನ್ವೇಷಣೆ ಮಾಡಬೇಕು. ಎಲ್ಲೆಡೆಯೂ ಅಂತರ್ಯಾಮಿಯಾಗಿರುವ ಪರಮಾತ್ಮನನ್ನೇ ಚಿಂತಿಸಬೇಕು ಎಂಬುದಾಗಿ ಹಿಂದೆ ಹೇಳಿರುತ್ತೇನೆ. ಬ್ರಹ್ಮನು ಎಲ್ಲಕಡೆಯಲ್ಲಿಯೂ ನೆಲೆನಿಂತಿರುತ್ತಾನೆ. ಬ್ರಹ್ಮನಿಗಿಂತ ಭಿನ್ನನಾದ ಜೀವನು ಅವನ ಅನುಗ್ರಹದಿಂದ ನೆಲೆ ಹೊಂದಿರುತ್ತಾನೆ. ಈ ರೀತಿಯಾಗಿ ಯಾವನು ತಿಳಿದಿರುತ್ತಾನೋ ಅವನು ನಿತ್ಯವೂ ಬಿಡುಗಡೆಯನ್ನು ಹೊಂದುತ್ತಾನೆ.

ಯತ್ತೇ ಪೃಷ್ಟಂ ತನ್ಮಯಾ ಚೋಪದಿಷ್ಟಂ
ಯಾಥಾತಥ್ಯಂ ತದ್ ವಿಶೋಕೋ ಭವಸ್ವ ।
ರಾಜನ್ ಗಚ್ಛಸ್ವೈತದರ್ಥಸ್ಯ ಪಾರಂ
ಸಮ್ಯಕ್ಪ್ರೋಕ್ತಂ ಸ್ವಸ್ತಿ ತೇಽಸ್ತ್ವತ್ರ ನಿತ್ಯಮ್ ॥೫೦॥

ರಾಜೇಂದ್ರನೇ, ನೀನು ಕೇಳಿದ ಪ್ರಶ್ನೆಗನುಗುಣವಾಗಿ ಯಥಾರ್ಥವಾಗಿ ನಾನು ಉತ್ತರವನ್ನು ನೀಡಿರುತ್ತೇನೆ. ನೀನು ನಾನು ತಿಳಿಸಿದ ಅರ್ಥವನ್ನು ಅನುಸರಿಸಿದಲ್ಲಿ ಪುರುಷಾರ್ಥದ ಕೊನೆಯನ್ನು ಮುಟ್ಟುತ್ತಿ. ನಿನಗೆ ನಿತ್ಯವೂ ಕ್ಷೇಮವುಂಟಾಗಲಿ.

ಭೀಷ್ಮಃ

ಸ ಏವಮನುಶಾಸ್ತಸ್ತು ಯಾಜ್ಞವಲ್ಕ್ಯೇನ ಧೀಮತಾ ।
ಪ್ರೀತಿಮಾನಭವದ್ರಾಜಾ ಮಿಥಿಲಾಧಿಪತಿಸ್ತದಾ ॥೫೧॥

ಭೀಷ್ಮ– ಧರ್ಮರಾಜನೇ, ಮಹಾಜ್ಞಾನಿಯಾದ ಯಾಜ್ಞವಲ್ಕ್ಯನು ಮಿಥಿಲಾಧಿಪತಿಯಾದ ಜನಕನಿಗೆ ಈ ರೀತಿಯಾಗಿ ಉಪದೇಶಿಸಿದ ಬಳಿಕ ಆ ರಾಜನು ಬಹಳ ಸಂತುಷ್ಟನಾದನು.

ಗತೇ ಮುನಿವರೇ ತಸ್ಮಿನ್ ಕೃತೇ ಚಾಪಿ ಪ್ರದಕ್ಷಿಣೇ ।
ದೈವರಾತಿರ್ನರಪತಿರಾಸೀನಸ್ತತ್ರ ಮೋಕ್ಷವಿತ್ ॥೫೨॥

ದೇವರಾತನ ಮಗನೂ, ಮೋಕ್ಷಜ್ಞನೂ ಆದ ಜನಕನು ಆ ಮಹರ್ಷಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದ ಬಳಿಕ ಆ ಮಹರ್ಷಿಯು ಅಲ್ಲಿಂದ ಹೊರಟು ಹೋದನು.

ಗೋಕೋಟಿಂ ಸ್ಪರ್ಶಯಾಮಾಸ ಹಿರಣ್ಯಸ್ಯ ತಥೈವ ಚ ।
ರತ್ನಾಂಜಲಿಮಥೈಕಂ ಚ ಬ್ರಾಹ್ಮಣೇಭ್ಯೋ ದದೌ ತದಾ ॥೯೩॥

ಬಳಿಕ ಜನಕ ಮಹಾರಾಜನು ಒಂದು ಕೋಟಿ ಗೋವುಗಳನ್ನು, ಒಂದು ಕೋಟಿ ಸುವರ್ಣಗಳನ್ನು ಬ್ರಾಹ್ಮಣರಿಗೆ, ಬೊಗಸೆಗಳಿಂದ ರತ್ನಗಳನ್ನು ದಾನ ಮಾಡಿದನು.

ವಿದೇಹರಾಜ್ಯಂ ಚ ತಥಾ ಪ್ರತಿಷ್ಠಾಪ್ಯ ಸುತಸ್ಯ ವೈ ।
ಯತಿಧರ್ಮಮುಪಾಸಂಶ್ಚಾಪ್ಯವಸನ್ಮಿಥಿಲಾಧಿಪಃ ॥೯೪॥

ಬಳಿಕ ವಿದೇಹರಾಜ್ಯದಲ್ಲಿ ತನ್ನ ಮಗನಿಗೆ ಉತ್ತರಾಧಿಕಾರವನ್ನು ಕೊಟ್ಟು ತಾನು ಯತಿಧರ್ಮವನ್ನು ಅವಲಂಬಿಸಿದನು.

ಸಾಂಖ್ಯಿಜ್ಞಾನಮಧೀಯಾನೋ ಯೋಗಶಾಸ್ತ್ರಂ ಚ ಕೃತ್ಸ್ನಶಃ ।
ಧರ್ಮಾಧರ್ಮೌ ಚ ರಾಜೇಂದ್ರ ಪ್ರಾಕೃತಂ ಪರಿಗರ್ಹಯನ್ ॥೯೫॥

ಅನಂತಮಿತಿ ಕೃತ್ವಾ ಸ ನಿತ್ಯಂ ಕೇವಲಮೇವ ಚ ।
ಧರ್ಮಾಧರ್ಮೌ ಪುಣ್ಯಪಾಪೇ ಸತ್ಯಾಸತ್ಯೇ ತಥೈವ ಚ ॥೯೬॥

ಜನ್ಮಮೃತ್ಯೂ ಚ ರಾಜೇಂದ್ರ ಪ್ರಾಕೃತಂ ತದಚಿಂತಯತ್ ।
ಬ್ರಹ್ಮಾವ್ಯಕ್ತಸ್ಯ ಕರ್ಮೇದಮಿತಿ ನಿತ್ಯಂ ನರಾಧಿಪ ॥೯೭॥

ಆ ಜನಕನು ಸಾಂಖ್ಯಯೋಗಶಾಸ್ತ್ರಗಳನ್ನು ಸಮಗ್ರವಾಗಿ ಅಧ್ಯಯನ ಮಾಡುತ್ತಾ, ಧರ್ಮಾಧರ್ಮಗಳನ್ನು ಸರಿಯಾಗಿ ಚಿಂತಿಸುತ್ತಾ, ಪ್ರಕೃತಿಯ ಸಂಬಂಧವನ್ನು ನಿಂದಿಸುತ್ತಾ ಸರ್ವೋತ್ತಮನಾದ ಭಗವಂತನನ್ನು ಅನಂತನೆಂದೂ, ನಿತ್ಯನೆಂದೂ, ಪ್ರಕೃತಿ ಸಂಬಂಧ ಇಲ್ಲದವನೆಂದೂ,ಧರ್ಮಾಧರ್ಮಗಳಾಗಲಿ, ಪುಣ್ಯ-ಪಾಪಗಳ ಸಂಬಂಧವಾಗಲಿ, ಸತ್ಯಾಸತ್ಯಗಳಾಗಲಿ, ಜನನ-ಮರಣಗಳಾಗಲಿ, ಪ್ರಾಕೃತವಾದ ಯಾವ ವಿಕಾರಗಳೂ ಪರಮಾತ್ಮನಿಗೆ ಇಲ್ಲವೆಂದೂ, ಇವೆಲ್ಲವೂ ಜೀವಾತ್ಮನಿಗೆ ಪ್ರಕೃತಿಯ ಸಂಬಂಧದಿಂದಲೇ ಉಂಟಾಗುತ್ತವೆಂದು ಚಿಂತಿಸಿದನು. ಜೀವನು ಪ್ರಕೃತಿಯ ಸಂಬಂಧದಿಂದ ಕರ್ಮದ ಸಂಬಂಧವನ್ನು ಹೊಂದಿರುತ್ತಾನೆ ಎಂಬುದನ್ನೂ ರಾಜನು ತಿಳಿದುಕೊಂಡನು.

ಪಶ್ಯಂತಿ ಯೋಗಾಃ ಸಾಂಖ್ಯಾಶ್ಚ ಸ್ವಶಾಸ್ತ್ರಕೃತಲಕ್ಷಣಾಃ ।
ಇಷ್ಟಾನಿಷ್ಟವಿಯುಕ್ತಂ ಹಿ ತಸ್ಮೌ ಬ್ರಹ್ಮ ಪರಾತ್ ಪರಮ್ ।
ನಿತ್ಯಂ ತಮಾಹುರ್ವಿದ್ವಾಂಸಃ ಶುಚಿಸ್ತಸ್ಮಾಚ್ಛುಚಿರ್ಭವ ॥೯೮॥

ತಮ್ಮ ಶಾಸ್ತ್ರಗಳ ಲಕ್ಷಣಗಳನ್ನು ಸಾಂಖ್ಯರು-ಯೋಗರು ಚೆನ್ನಾಗಿ ತಿಳಿದಿರುತ್ತಾರೆ. ಸರ್ವೋತ್ತಮವಾದ ಪರಬ್ರಹ್ಮವೆಂಬ ವಸ್ತುವು ಇಷ್ಟಾನಿಷ್ಟಗಳಿಂದ ದೂರವಾಗಿದೆ ಎಂಬುದನ್ನು ತಿಳಿದಿರುತ್ತಾರೆ. ಅಂತಹ ಭಗವಂತನನ್ನು ನಿತ್ಯವೂ ವಿದ್ವಾಂಸರು ಶುಚಿ ಎಂದು ಹೇಳುತ್ತಾರೆ. ಅಂತಹ ಭಗವಂತನ ಅನುಗ್ರಹದಿಂದಲೇ ನೀನು ಪ್ರಕೃತಿಯ ಸಂಬಂಧದಿಂದ ದೂರವಾಗಿ ಶುಚಿಯಾಗು.

ದೀಯತೇ ಯಚ್ಚ ಲಭತೇ ದತ್ತಂ ಯಚ್ಚಾನುಮನ್ಯತೇ ।
ದದಾತಿ ಚ ನರಶ್ರೇಷ್ಠ ಪ್ರತಿಗೃಹ್ಣಾತಿ ಯಚ್ಚ ಹ ।
ದದಾತ್ಯವ್ಯಕ್ತಮೇವೈತತ್ ಪ್ರತಿಗೃಹ್ಣಾತಿ ತಚ್ಚ ವೈ ॥೯೯॥

ದಾನ ಮಾಡುವುದು, ಸ್ವೀಕರಿಸುವುದು, ದಾನ ಮಾಡಿದ್ದನ್ನು ಅನುಮೋದಿಸುವುದು, ಸ್ವಯಂ ತಾನೇ ದಾನ ಮಾಡುವುದು, ದಾನವನ್ನು ಸ್ವೀಕರಿಸುವುದು ಇದೆಲ್ಲವೂ ಅವ್ಯಕ್ತದಿಂದ ಉಂಟಾಗುವ ಕಾರ್ಯವೆಂದು, ಸ್ವೀಕರಿಸುವ ಪದಾರ್ಥಗಳಲ್ಲಿ ಜಡವಾದುದನ್ನೇ ಸ್ವೀಕರಿಸುತ್ತಾನೆಂಬುದನ್ನು ತಿಳಿದುಕೊ.

ಆತ್ಮಾ ಹ್ಯೇವಾತ್ಮನೋ ಹ್ಯೇಕಃ ಕೋऽನ್ಯಸ್ತ್ವತ್ತೋಧಿಕೋ ಭವೇತ್ ।
ಏವಂ ಮನ್ಯಸ್ವ ಸತತಮನ್ಯಥಾ ಮಾ ವಿಚಿಂತಯ ॥೧೦೦॥

ಜೀವಾತ್ಮನ ದೆಸೆಗಿಂತ ಮುಖ್ಯನಾದವನು ಪರಮಾತ್ಮನೇ ಆಗಿದ್ದಾನೆ. ಆ ಪರಮಾತ್ಮನಿಗಿಂತ ಅಧಿಕನಾದವನು ಬೇರೆ ಯಾರಿರಲು ಸಾಧ್ಯ ? ಈ ರೀತಿಯಾಗಿಯೇ ನಿನ್ನ ಮನಸ್ಸಿನಲ್ಲಿ ಯಾವಾಗಲೂ ಆಲೋಚಿಸು. ಇದಕ್ಕೆ ತಪ್ಪಾಗಿ ಎಂದೂ ಚಿಂತಿಸಬೇಡ.

ಯಸ್ಯಾವ್ಯಕ್ತಂ ನ ವಿದಿತಂ ಸಗುಣಂ ನಿರ್ಗುಣಂ ಪುನಃ ।
ತೇನ ತೀರ್ಥಾನಿ ಯಜ್ಞಾಶ್ಚ ಸೇವಿತವ್ಯಾವಿಪಶ್ಚಿತಾ ॥೧೦೧॥

ಯಾರಿಗೆ ಅವ್ಯಕ್ತವೆನಿಸಿದ ಪ್ರಕೃತಿಯ ಬಗ್ಗೆಯಾಗಲಿ, ಸಗುಣನೆನಿಸಿದ ಜೀವನ ಬಗ್ಗೆಯಾಗಲಿ, ನಿರ್ಗುಣನೆನಿಸಿದ ಪರಮಾತ್ಮನ ಬಗ್ಗೆಯಾಗಲಿ ಸರಿಯಾದ ಜ್ಞಾನ

ಉಂಟಾಗುವುದಿಲ್ಲವೋ ಅವನು ತೀರ್ಥಗಳನ್ನು, ಯಜ್ಞಗಳನ್ನು ಅಜ್ಞಾನಿ ಆದುದರಿಂದ ಸೇವಿಸಬೇಕು.

ನ ಸ್ವಾಧ್ಯಾಯೈಸ್ತಪೋಭಿರ್ವಾ ಯಜ್ಞೈರ್ವಾ ಕುರುನಂದನ ।
ಲಭತೇಽವ್ಯಕ್ತಸಂಸ್ಥಾನಂ ಜ್ಞಾತ್ವಾವ್ಯಕ್ತಂ ಮಹೀಪತೇ ॥೧೦೨॥

ಕುರುನಂದನನೇ, ಕೇವಲ ತಪಸ್ಸು, ಅಧ್ಯಯನ, ಯಾಗಗಳಿಂದ ಅವ್ಯಕ್ತದ ಸಂಸ್ಥಾನವು ದೊರೆಯುವುದಿಲ್ಲ. ಅವ್ಯಕ್ತವನ್ನುತಿಳಿದ ಮೇಲೆಯೇ ಜ್ಞಾನಿಯು ಸ್ಥಾನವನ್ನು ಹೊಂದುತ್ತಾನೆ.

ತಥೈವ ಮಹತಃ ಸ್ಥಾನಮಾಹಂಕಾರಿಕಮೇವ ಚ ।
ಅಹಂಕಾರಾತ್ ಪರಂ ಚಾಪಿ ಸ್ಥಾನಾನಿ ಸಮವಾಪ್ನುಯಾತ್ ॥೧೦೩॥

ಇದರಂತೆ ಮಹತ್ತತ್ತ್ವವನ್ನು, ಅದರ ಸ್ಥಾನವನ್ನು, ಅಹಂಕಾರತತ್ತ್ವವನ್ನು, ಅಹಂಕಾರ ತತ್ತ್ವಕ್ಕಿಂತಲೂ ಮೇಲಾದ ಸ್ಥಾನಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಾಗ ಉತ್ತಮ ಸ್ಥಾನಗಳನ್ನು ಹೊಂದುತ್ತಾನೆ.

ಯೇ ತ್ವವ್ಯಕ್ತಾತ್ ಪರಂ ನಿತ್ಯಂ ಜಾನತೇ ಶಾಸ್ತ್ರತತ್ಪರಾಃ ।
ಜನ್ಮಮೃತ್ಯುವಿಯುಕ್ತಂ ಚ ವಿಯುಕ್ತಂ ಸದಸಚ್ಚ ಯತ್ ॥೧೦೪॥

ಯಾರು ಅವ್ಯಕ್ತ ತತ್ತ್ವಕ್ಕಿಂತಲೂ ಭಗವಂತನು ಸರ್ವೋತ್ತಮನೆಂದು ಶಾಸ್ತ್ರದಲ್ಲಿ ಆಸಕ್ತರಾಗಿ ನಿತ್ಯವೂ ತಿಳಿಯುತ್ತಾರೋ ಅವರು ಜನನ-ಮರಣಗಳಿಂದ ದೂರವಾಗುತ್ತಾರೆ. ಮೂರ್ತಾಮೂರ್ತ ಪ್ರಪಂಚದಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ.

ಏತನ್ಮಯಾಪ್ತಂ ಜನಕಾತ್ ಪುರಸ್ತಾತ್
ತೇನಾಪಿ ಚಾಪ್ತಂ ನೃಪ ಯಾಜ್ಞವಲ್ಕ್ಯಾತ್ ।
ಜ್ಞಾನಂ ವಿಶಿಷ್ಟಂ ನ ತಥಾ ಹಿ ಯಜ್ಞಾ
ಜ್ಞಾನೇನ ದುರ್ಗಂ ತರತೇ ನ ಯಜ್ಞೈಃ ॥೧೦೫॥

ಎಲೈ ಧರ್ಮರಾಜನೇ, ಈ ತತ್ತ್ವಜ್ಞಾನವನ್ನು ಹಿಂದೆ ನಾನು ಜನಕನಿಂದ ಕೇಳಿದೆನು. ಆ ಜನಕನಿಗೆ ಯಾಜ್ಞವಲ್ಕ್ಯನಿಂದ ಈ ಜ್ಞಾನವು ಉಪದೇಶಿಸಲ್ಪಟ್ಟಿತು. ಎಲ್ಲದಕ್ಕಿಂತಲೂ

ಮಿಗಿಲಾದುದು ಜ್ಞಾನವೇ ಹೊರತು ಯಜ್ಞಾದಿ ಕರ್ಮಗಳಲ್ಲ. ಜ್ಞಾನದಿಂದ ಮನುಷ್ಯನು ಕಷ್ಟಗಳನ್ನು ದಾಟುತ್ತಾನೆ. ಯಾಗಗಳಿಂದ ಕಷ್ಟಗಳನ್ನು ದಾಟಲು ಸಾಧ್ಯವಿಲ್ಲ.

ದುರ್ಗಂ ಜನ್ಮ ನಿಧನಂ ಚಾಪಿ ರಾಜನ್
ನ ಭೂತಿಕಂ ಜ್ಞಾನವಿದೋ ವದಂತಿ ।
ಯಜ್ಞೈಸ್ತಪೋಭಿರ್ನಿಯಮೈರ್ವಜೈಶ್ಚ
ದಿವಂ ಸಮಾಸಾದ್ಯ ಪತಂತಿ ಭೂಮೌ ॥೧೦೬॥

ಜ್ಞಾನಿಗಳಾದವರು ಜನನ-ಮರಣಗಳನ್ನೇ ಕಷ್ಟವಾದವುಗಳೆಂದು ಹೇಳುತ್ತಾರೆ ಹೊರತು ಕಲ್ಲು-ಮಣ್ಣು ಮುಂತಾದವುಗಳಿಂದ ಕಟ್ಟಿದ ಕೋಟೆಯನ್ನು ಕಷ್ಟವೆಂದು ಎಣಿಸುವುದಿಲ್ಲ. ತಪಸ್ಸು, ಯಾಗ, ವ್ರತನಿಯಮಾದಿಗಳಿಂದ ಸ್ವರ್ಗವನ್ನು ಪಡೆದವರಾಗಿದ್ದರೂ ಪುಣ್ಯನಾಶವಾದ ಬಳಿಕ ಪುನಃ ನಿಯಮೇನ ಭೂಮಿಯಲ್ಲಿ ಪತನವನ್ನು ಹೊಂದುತ್ತಾರೆ.

ತಸ್ಮಾದುಪಾಸಸ್ವ ಪರಂ ಮಹಚ್ಛುಚಿ
ಶಿವಂ ವಿಮೋಕ್ಷಂ ವಿಮಲಂ ಪವಿತ್ರಮ್ ।
ಕ್ಷೇತ್ರಜ್ಞವಿತ್ ಪಾರ್ಥಿವ ಜ್ಞಾನಯಜ್ಞ-
ಮುಪಾಸ್ಯ ವೈ ತತ್ತ್ವಮೃಷಿರ್ಭವಿಷ್ಯಸಿ ॥೧೦೭॥

ಆದ್ದರಿಂದ ಶ್ರೇಷ್ಠವಾದ, ಶುದ್ಧವಾದ, ಮಂಗಳಕರವಾದ, ಮೋಕ್ಷರೂಪವಾದ ಆ ಪರಬ್ರಹ್ಮವಸ್ತುವನ್ನೇ ವಿಮಲವೂ, ಪವಿತ್ರವೂ ಎಂದು ತಿಳಿ. ಕ್ಷೇತ್ರಜ್ಞನಾದ ಭಗವಂತನನ್ನು ರಾಜನೇ ಚೆನ್ನಾಗಿ ತಿಳಿದು ಜ್ಞಾನಯಜ್ಞದಿಂದ ಉಪಾಸನೆ ಮಾಡಿ ತತ್ತ್ವಜ್ಞಾನವನ್ನು ಹೊಂದಿರುವ ನೀನು ಋಷಿಯಾಗುತ್ತಿ.

ಉಪನಿಷದಮುಪಾಕರೋತ್ತದಾ ವೈ
ಜನಕನೃಪಸ್ಯ ಪುರಾ ಹಿ ಯಾಜ್ಞವಲ್ಕ್ಯಃ ।
ಯದುಪಗಣಿತಶಾಶ್ವತಾವ್ಯಯಂ ತತ್
ಶುಭಮಮೃತತ್ವಮಶೋಕಮೃಚ್ಛತೀತಿ ॥೧೦೮॥

ಹಿಂದೆ ಯಾಜ್ಞವಲ್ಕ್ಯನು ಜನಕನಿಗೆ ಬ್ರಹ್ಮವಿಷಯಕವಾದ ಈ ಉಪನಿಷತ್ತನ್ನೇ ಉಪದೇಶಿಸಿದ್ದಾನೆ. ಅದರ ಬಲದಿಂದಲೇ ಜನಕನು ಆದ್ಯಂತಗಳಿಲ್ಲದ, ಜ್ಞಾನಿಗಳ

ಧ್ಯಾನಕ್ಕೆ ಯೋಗ್ಯನಾದ, ಮೋಕ್ಷದಾಯಕನಾದ, ದುಃಖದಿಂದ ದೂರನಾದ ಪರಬ್ರಹ್ಮನನ್ನು ಹೊಂದಿದನು ಎಂದು ಹೇಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಾಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂದನೆಯ ಅಧ್ಯಾಯ

ಜನಕನಿಗೂ ಪಂಚಶಿಖನಿಗೂ ನಡೆದ ಆಧ್ಯಾತ್ಮಿಕ ಸಂವಾದ.

ಯುಧಿಷ್ಠಿರಃ

ಐಶ್ವರ್ಯಂ ವಾ ಮಹತ್ ಪ್ರಾಪ್ಯ ಧನಂ ವಾ ಭರತರ್ಷಭ ।
ದೀರ್ಘಮಾಯುರವಾಪ್ಯಾಥ ಕಥಂ ಮೃತ್ಯುಮತಿಕ್ರಮೇತ್ ॥೧॥

ಯುಧಿಷ್ಠಿರ– ಪಿತಾಮಹನೇ, ಅಧಿಕವಾದ ಐಶ್ವರ್ಯವನ್ನು ಹೊಂದಿ ಅಥವಾ ಮಹತ್ತರವಾದ ಧನವನ್ನು ಹೊಂದಿ, ದೀರ್ಘವಾದ ಆಯುಷ್ಯವನ್ನು ಹೊಂದಿ ಮೃತ್ಯುವನ್ನು ದಾಟಬಹುದೆ? ಮೃತ್ಯುವನ್ನು ದಾಟಲು ಉಪಾಯವೇನು?

ತಪಸಾ ವಾ ಸುಮಹತಾ ಕರ್ಮಣಾ ವಾ ಶ್ರುತೇನ ವಾ ।
ರಸಾಯನಪ್ರಯೋಗೈರ್ವಾ ಕೈರ್ನೋಪೈತಿ ಜರಾಂತಕೌ ॥೨॥

ಮಹತ್ವಪೂರ್ಣವಾದ ತಪಸ್ಸಿನಿಂದ ಮೃತ್ಯುವನ್ನು ದಾಟಬಹುದೆ? ಸತ್ಕರ್ಮಗಳ ಅನುಷ್ಠಾನದಿಂದಲೋ ಅಥವಾ ಅಧ್ಯಯನದಿಂದಲೋ ಅಥವಾ ಬೇರೆ ಯಾವುದಾದರೂ ರಸಾಯನ ಸೇವನೆಯಿಂದಲೋ ಜರಾ-ಮರಣಗಳನ್ನು, ಹೀಗೆ ಯಾವ ಉಪಾಯಗಳಿಂದ ದಾಟಬಹುದು ಎಂದು ತಿಳಿಸಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಭಿಕ್ಷೋಃ ಪಂಚಶಿಖಸ್ಯೇಹ ಸಂವಾದಂ ಜನಕಸ್ಯ ಚ ॥೩॥

ಭೀಷ್ಮ– ಧರ್ಮರಾಜನೇ, ಈ ವಿಷಯದಲ್ಲಿ ಹಿಂದೆ ಪಂಚಶಿಖಿನಿಗೂ ಜನಕನಿಗೂ ನಡೆದ ಸಂವಾದ ರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ.

ವೈದೇಹೋ ಜನಕೋ ರಾಜಾ ಮಹರ್ಷಿಂ ವೇದವಿತ್ತಮಮ್ ।
ಪರ್ಯಪೃಚ್ಛತ್ ಪಂಚಶಿಖಿಂ ಛಿನ್ನಧರ್ಮಾರ್ಥಸಂಶಯಮ್ ॥೪॥

ಒಮ್ಮೆ ವಿದೇಹ ನಗರದ ರಾಜನಾದ ಜನಕನು ವೇದಗಳ ಸಾರಗಳನ್ನೆಲ್ಲ ಬಲ್ಲವನಾಗಿದ್ದನು. ಧರ್ಮಾರ್ಥದ ವಿಚಾರದಲ್ಲಿ ಎಲ್ಲ ಸಂಶಯಗಳನ್ನು ಪರಿಹರಿಸಿಕೊಂಡು ನಿಶ್ಚಯ ಜ್ಞಾನವನ್ನು ಹೊಂದಿರುವ ಪಂಚಶಿಖಿನೆಂಬ ಮಹರ್ಷಿಯನ್ನು ಕಂಡು ನೀನು ಕೇಳಿದ ಪ್ರಶ್ನೆಗಳನ್ನೇ ಕೇಳಿದನು.

ಕೇನ ವೃತ್ತೇನ ಭಗವನ್ನತಿಕ್ರಾಮೇಜ್ಜರಾಂತಕೌ ।
ತಪಸಾ ವಾಥ ಬುದ್ಧ್ಯಾ ವಾ ಕರ್ಮಣಾ ವಾ ಶ್ರುತೇನ ವಾ ॥೫॥

ಮನುಷ್ಯನು ತಪಸ್ಸು, ವೇದಾಧ್ಯಯನ, ಯಜ್ಞ-ಯಾಗಾದಿ ಕರ್ಮಗಳು ಇವುಗಳಲ್ಲಿ ಯಾವುದರಿಂದ ಜರಾ-ಮರಣಗಳನ್ನು ಜಯಿಸಬಹುದು?

ಏವಮುಕ್ತಃ ಸ ವೈದೇಹಂ ಪ್ರತ್ಯುವಾಚ ಪರೋಕ್ಷವಿತ್ ।
ನಿವೃತ್ತಿರ್ನೈತಯೋರಸ್ತಿ ನಾನಿವೃತ್ತಿಃ ಕಥಂಚನ ॥೬॥

ಈ ರೀತಿಯಾಗಿ ಜನಕರಾಜನು ಪ್ರಶ್ನಿಸಿದಾಗ, ಎಲ್ಲವನ್ನೂ ಪ್ರತ್ಯಕ್ಷವಾಗಿ ಕಾಣುವ ಶಕ್ತಿಯುಳ್ಳ ಪಂಚಶಿಖಿನು ವಿದೇಹರಾಜನನ್ನು ಕುರಿತು ಮಹಾರಾಜನೇ, ಜರಾ-ಮರಣಗಳನ್ನು ದಾಟುವ ಯಾವ ಉಪಾಯಗಳೂ ಇರುವುದಿಲ್ಲ. ಇವುಗಳಿಂದ ನಿವೃತ್ತಿಯೂ ಇರುವುದಿಲ್ಲ.

ನ ಹ್ಯಹಾನಿ ನಿವರ್ತಂತೇ ನ ಮಾಸಾ ನ ಪುನಃ ಕ್ಷಪಾಃ ।
ಸೋಽಯಂ ಪ್ರಪದ್ಯತೇಽಧ್ವಾನಂ ಚಿರಾಯ ಧ್ರುವಮಧ್ರುವಃ ॥೭॥

ಸರ್ವಭೂತಸಮುಚ್ಛೇದಃ ಸ್ರೋತಸೇವೋಹ್ಯತೇ ಸದಾ ।
ಉಹ್ಯಮಾನಂ ನಿಮಜ್ಜಂತಮಪ್ಲವೇ ಕಾಲಸಾಗರೇ ।
ಜರಾಮೃತ್ಯುಮಹಾಗ್ರಾಹೇ ನ ಕಶ್ಚಿದಭಿಪದ್ಯತೇ ॥೮॥

ಕಳೆದು ಹೋದ ದಿವಸಗಳಾಗಲಿ, ರಾತ್ರಿಗಳಾಗಲಿ, ತಿಂಗಳುಗಳಾಗಲಿ ಹೇಗೆ ಹಿಂದಿರುಗಿ ಬರುವುದಿಲ್ಲವೋ, ಎಲ್ಲ ಪ್ರಾಣಿಗಳನ್ನು ಕಬಳಿಸುತ್ತಾ ತಾನೊಂದೇ ಅನಂತ ಕಾಲದಿಂದ ಒಂದೇ ರೀತಿಯಾಗಿ ನಡೆದು ಹೋಗುವ ಕಾಲವು ಒಂದು ಪ್ರವಾಹದಂತೆ ಇದೆ. ಆ ಪ್ರವಾಹದಲ್ಲಿ ಎಲ್ಲ ಪ್ರಾಣಿಗಳು ಕೊಚ್ಚಿಕೊಂಡು ಹೋಗುತ್ತಲೇ ಇವೆ. ಪ್ರವಾಹದಿಂದ ಸೆಳೆಯಲ್ಪಡುವ ಪ್ರಾಣಿಗಳನ್ನು ಆಧಾರವಿಲ್ಲದ ಈ ಭಯಂಕರ ಸಮುದ್ರದಲ್ಲಿ ಯಾರೂ ಹಿಡಿದು ನಿಲ್ಲಿಸಲು ಸಮರ್ಥರಾಗುವುದಿಲ್ಲ. ನಿರಂತರವೂ ಜರಾ-ಮರಣಗಳೆಂಬ ಭಯಂಕರವಾದ ಮೊಸಳೆಗಳು ಸಮಸ್ತ ಜೀವರನ್ನು ಕಬಳಿಸಲು ಕಾದು ನಿಂತಿವೆ.

ನೈವಾಸ್ಯ ಭವಿತಾ ಕಶ್ಚಿನ್ನಾಸೌ ಭವತಿ ಕಸ್ಯಚಿತ್ ।
ಪಥಿ ಸಂಗತಮೇವೇದಂ ದಾರೈರನ್ಯೈಶ್ಚ ಬಂಧುಭಿಃ ।
ನಾಯಮತ್ಯಂತಸಂವಾಸೋ ಲಬ್ಧಪೂರ್ವೋ ಹಿ ಕೇನಚಿತ್ ॥೯॥

ಈ ಜೀವನಿಗೆ ಸಂಬಂಧಿಸಿದವನು ಈ ಪ್ರಪಂಚದಲ್ಲಿ ಯಾರೂ ಇರುವುದಿಲ್ಲ. ಯಾವ ಜೀವನಿಗೂ ಒಬ್ಬ ಸಂಬಂಧಿ ಎಂಬುವವನು ಇರುವುದಿಲ್ಲ. ದಾರಿಯಲ್ಲಿ ಪ್ರಯಾಣಿಸುವಾಗ ಅನೇಕರು ಒಟ್ಟಾಗಿ ತೆರಳುವಂತೆ ಈ ಸಂಸಾರದಲ್ಲಿಯೂ ಹೆಂಡತಿ, ಮಕ್ಕಳು ಮೊದಲಾದ ಬಂಧುಗಳ ಸಂಬಂಧವು ಅನೇಕ ಕಡೆಗಳಿಂದ ಪ್ರಯಾಣಿಕರ ಕೂಟದಂತೆ ಬಂದು ಸೇರುತ್ತಾರೆ, ಬೇರೆ ಮಾರ್ಗದಿಂದಲೇ ಹೊರಟು ಹೋಗುತ್ತಾರೆ. ಇವರೊಡನೆ ಹಿಂದೆಯಾಗಲಿ, ಮುಂದೆಯಾಗಲಿ ಆತ್ಯಂತಿಕ ಸಂಬಂಧವು ಇರುವುದಿಲ್ಲ.

ಕ್ಷಿಪ್ಯಂತೇ ತೇನ ತೇನೈವ ನಿಷ್ಪನಂತಃ ಪುನಃ ಪುನಃ ।
ಕಾಲೇನ ಜಾತಾ ಜಾತಾ ಹಿ ವಾಯುನೇವಾಭ್ರಸಂಚಯಾಃ ॥೧೦॥

ಇಂತಹ ಪರಿವಾರಗಳ ಜೊತೆಗೆ ಜೀವಾತ್ಮನು ಪುನಃ ಪುನಃ ಸಂಯೋಗ, ವಿಯೋಗಗಳನ್ನು ಹೊಂದುತ್ತಲೇ ಇರುತ್ತಾನೆ. ಹೀಗೆ ಕಾಲಗತಿಯಿಂದ ಒಟ್ಟುಗೂಡಿದ ಪ್ರಾಣಿಗಳು ಮೇಘಗಳು ಬಿರುಗಾಳಿಯಿಂದ ಹೊಡೆತಕ್ಕೆ ತುತ್ತಾದಾಗ ಚದುರಿಸಿ ಹೋಗುವಂತೆ ಯಾವುದೋ ಒಂದು ಕಾರಣವನ್ನು ನೆಪವಾಗಿಸಿಕೊಂಡು ಅಗಲಿ ಹೋಗುತ್ತವೆ.

ಜರಾಮೃತ್ಯೂ ಹಿ ಭೂತಾನಾಂ ಖಾದಿತಾರೌ ವೃಕಾವಿವ ।
ಬಲಿನಾಂ ದುರ್ಬಲಾನಾಂ ಚ ಹ್ರಸ್ವಾನಾಂ ಮಹತಾಮಪಿ ॥೧೧॥

ಎಲ್ಲ ಪ್ರಾಣಿಗಳನ್ನು ಜರಾ-ಮೃತ್ಯುಗಳೆಂಬವು ತೋಳಗಳಂತೆ ಹಿಡಿದು ಭಕ್ಷಿಸುತ್ತವೆ. ಬಲಶಾಲಿಗಳೆಂದು, ದುರ್ಬಲರೆಂದು ಅವು ನೋಡುವುದಿಲ್ಲ. ದೊಡ್ಡವರೆಂದ ಸಣ್ಣವರೆಂದು ನೋಡುವುದಿಲ್ಲ. ಎಲ್ಲರನ್ನೂ ಕಬಳಿಸುತ್ತವೆ.

ಏವಂಭೂತೇಷು ಭೂತೇಷು ನಿತ್ಯಭೂತಾಧ್ರುವೇಷು ಚ ।
ಕಥಂ ಹೃಷ್ಯೇತ ಜಾತೇಷು ಮೃತೇಷು ಚ ಕಥಂ ಜ್ವರೇತ್ ॥೧೨॥

ಹೀಗೆ ಎಲ್ಲ ಭೂತಗಳಿಗೂ ಅಸ್ಥಿರತೆ ಸ್ಥಿರವಾದುದು. ಇಂತಹ ಭೂತಗಳು ಈ ಲೋಕದಲ್ಲಿ ಹುಟ್ಟಿದಾಗ ಸಂತೋಷಪಡಲು ಏನು ಕಾರಣವಿಲ್ಲವೋ ಸತ್ತಾಗಲೂ ದುಃಖಕ್ಕೆ ಕಾರಣವಿಲ್ಲ.

ಕುತೋಽಹಮಾಗತಃ ಕೋಽಸ್ಮಿ ಕ್ವ ಗಮಿಷ್ಯಾಮಿ ಕಸ್ಯ ವಾ ।
ಕಸ್ಮಿನ್ ಸ್ಥಿತಃ ಕ್ವ ಭವಿತಾ ಕಸ್ಮಾತ್ ಕಿಮನುಶೋಚಸಿ ॥೧೩॥

ನಾನು ಯಾರು? ಎಲ್ಲಿಂದ ಬಂದಿದ್ದೇನೆ? ಮುಂದೆ ಎಲ್ಲಿಗೆ ಸಾಗುತ್ತೇನೆ? ಯಾರಿಗೆ ಸಂಬಂಧಿಸಿದವನು? ಈಗ ಎಲ್ಲಿದ್ದೇನೆ? ಮುಂದೆ ಏನಾಗುತ್ತೇನೆ? ಯಾವ ಕಾರಣಕ್ಕಾಗಿ ಇಲ್ಲಿ ಬಂದಿದ್ದೇನೆ? ಎಂಬುದನ್ನು ಕುರಿತು ಯಾಕೆ ಚಿಂತಿಸುತ್ತಿ ? ನಾವು ಈ ವಿಷಯದಲ್ಲಿ ಅಸ್ವತಂತ್ರರು.

ದ್ರಷ್ಟಾ ಸ್ವರ್ಗಸ್ಯ ನ ಹ್ಯಸ್ತಿ ತಥೈವ ನರಕಸ್ಯ ಚ ।
ಆಗಮಾಂಸ್ತ್ವನತಿಕ್ರಮ್ಯ ದದ್ಯಾಚ್ಚೈವ ಯಜೇತ ಚ ॥೧೪॥

ರಾಜೇಂದ್ರನೇ, ಸ್ವರ್ಗವನ್ನಾಗಲಿ, ನರಕವನ್ನಾಗಲಿ ಬದುಕಿನಲ್ಲೇ ಇದ್ದು ನೋಡಿದವರು ಯಾರೂ ಇಲ್ಲ. ಆದ್ದರಿಂದ ವೇದವಿಧಿಗಳನ್ನು ನಂಬಿ, ಅವುಗಳು ತಿಳಿಸಿದಂತೆ ವಿಧಿಗಳನ್ನು ಮೀರದೆ ಯಜ್ಞ-ದಾನಾದಿಗಳನ್ನು ಮಾಡುತ್ತಿರಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕಪಂಚಾಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೆರಡನೆಯ ಅಧ್ಯಾಯ

ಮುಕ್ತರ ಲಕ್ಷಣಗಳನ್ನು ಕುರಿತು ಸುಲಭೆಗೂ ಜನಕನಿಗೂ ನಡೆದ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು.

ಯುಧಿಷ್ಠಿರಃ

ಅಪರಿತ್ಯಜ್ಯ ಗಾರ್ಹಸ್ಥ್ಯಂ ಕುರುರಾಜರ್ಷಿಸತ್ತಮ ।
ಕಃ ಪ್ರಾಪ್ತೋ ವಿನಯಂ ಬುದ್ಧ್ಯಾ ಮೋಕ್ಷತತ್ತ್ವಂ ವದಸ್ವ ಮೇ ॥೧॥

ಯುಧಿಷ್ಠಿರ– ಪಿತಾಮಹನೇ, ಹಿಂದೆ ಯಾವ ರಾಜನಾದರೂ ಗೃಹಸ್ಥನಾಗಿದ್ದು ಕೊಂಡೇ ಸಿದ್ಧಿಯನ್ನು ಪಡೆದಿದ್ದಕ್ಕೆ ನಿದರ್ಶನವಿದೆಯೇ? ಇಂತಹ ಮೋಕ್ಷತತ್ತ್ವದ ಬಗ್ಗೆ ನನಗೆ ತಿಳಿಸಿರಿ.

ಸಂನ್ಯಸ್ಯತೇ ಯಥಾತ್ಮಾಯಂ ಸಂನ್ಯಸ್ತಾತ್ಮಾ ಯಥಾ ಚ ಯಃ ।
ಪರಂ ಮೋಕ್ಷಸ್ಯ ಯಚ್ಚಾಪಿ ತನ್ಮೇ ಬ್ರೂಹಿ ಪಿತಾಮಹ ॥೨॥

ಸಾಧಕನಾದ ಗೃಹಸ್ಥನು ತನ್ನ ಮನಸ್ಸನ್ನು ಹೇಗೆ ವೈರಾಗ್ಯದಿಂದ ಹದಗೊಳಿಸಿ-ಕೊಳ್ಳುತ್ತಾನೆ? ವಿಷಯವೈರಾಗ್ಯವನ್ನು ಹೊಂದಿದ ಯಾವ ವ್ಯಕ್ತಿಯು ಮೋಕ್ಷ ಮಾರ್ಗದಲ್ಲಿ ಹೇಗೆ ಸಾಗುತ್ತಾನೆ? ಈ ವಿಷಯವನ್ನು ನನಗೆ ತಿಳಿಸಿರಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಜನಕಸ್ಯ ಚ ಸಂವಾದಂ ಸುಲಭಾಯಾಶ್ಚ ಭಾರತ ॥೩॥

ಭೀಷ್ಮ– ಯುಧಿಷ್ಠಿರನೇ, ಈ ವಿಷಯದಲ್ಲಿ ಜನಕನಿಗೂ ಸುಲಭೆಗೂ ನಡೆದ ಪುರಾತನವಾದ ಇತಿಹಾಸವನ್ನು ಶಾಸ್ತ್ರಜ್ಞರು ತಿಳಿಸುತ್ತಾರೆ.

ಸಂನ್ಯಾಸಫಲಿಕಃ ಕಶ್ಚಿದ್ ಬಭೂವ ನೃಪತಿಃ ಪುರಾ ।
ಮೈಥಿಲೋ ಜನಕೋ ನಾಮ ಧರ್ಮಧ್ವಜ ಇತಿ ಶ್ರುತಃ ॥೪॥

ಸ ವೇದೇ ಮೋಕ್ಷಶಾಸ್ತ್ರೇ ಚ ಸ್ವೇ ಚ ಶಾಸ್ತ್ರೇ ಕೃತಾಗಮಃ ।
ಇಂದ್ರಿಯಾಣಿ ಸಮಾಧಾಯ ಶಶಾಸ ವಸುಧಾಮಿಮಾಮ್ ॥೫॥

ಹಿಂದೆ ಸಂನ್ಯಾಸ ಧರ್ಮದ ಫಲವನ್ನು ಪಡೆದ ಧರ್ಮಧ್ವಜನೆಂಬ ಒಬ್ಬ ಪ್ರಸಿದ್ಧನಾದ ಜನಕನೆಂಬ ರಾಜನು ಮಿಥಿಲಾನಗರವನ್ನು ಆಳುತ್ತಿದ್ದನು. ಅವನು ವೇದಗಳ ವಿಷಯದಲ್ಲಿ, ಮೋಕ್ಷಶಾಸ್ತ್ರದ ವಿಷಯದಲ್ಲಿ, ತನ್ನ ಕುಲಕರ್ಮವಾದ ರಾಜಧರ್ಮಗಳ ವಿಷಯದಲ್ಲಿಯೂ ಚೆನ್ನಾಗಿ ಜ್ಞಾನವನ್ನು ಹೊಂದಿದ್ದನು. ಎಲ್ಲ ಇಂದ್ರಿಯಗಳನ್ನು ಜಯಿಸಿಕೊಂಡಿದ್ದನು. ಹೀಗಿದ್ದೂ ಸಮಗ್ರ ಈ ಭೂಮಂಡಲವನ್ನು ಸಂರಕ್ಷಿಸುತ್ತಿದ್ದನು.

ತಸ್ಯ ವೇದವಿದಃ ಪ್ರಾಜ್ಞಾಃ ಶ್ರುತ್ವಾ ತಾಂ ಸಾಧುವೃತ್ತತಾಮ್ ।
ಲೋಕೇಷು ಸ್ಪೃಹಯಂತ್ಯನ್ಯೇ ಪುರುಷಾಃ ಪುರುಷೇಶ್ವರ ॥೬॥

ಅವನಲ್ಲಿರುವ ಸಚ್ಚಾರಿತ್ರ್ಯಗಳನ್ನು ಕೇಳಿಸಿಕೊಂಡ ವೇದಜ್ಞರಾದ ಪ್ರಾಜ್ಞರು ಅವನಲ್ಲಿನ ಪ್ರೀತಿಯಿಂದ ಅವನ ಬಳಿಗೆ ಬಂದು ಸೇರುತ್ತಿದ್ದರು.

ಅಥ ಧರ್ಮಯುಗೇ ತಸ್ಮಿನ್ ಯೋಗಧರ್ಮಮನುಷ್ಠಿತಾ ।
ಮಹೀಮನುಚಚಾರೈಕಾ ಸುಲಭಾ ನಾಮ ಭಿಕ್ಷುಕೀ ॥೭॥

ಹೀಗಿರುವಾಗ ಧರ್ಮಪ್ರಧಾನವಾದ ಆ ಕಾಲದಲ್ಲಿ ಯೋಗನಿರತಳಾದ ಸುಲಭೆ ಎಂಬ ಸಂನ್ಯಾಸಿನಿಯೊಬ್ಬಳು ಭೂಮಿಯಲ್ಲಿ ಸಂಚಾರ ಮಾಡುತ್ತಿದ್ದಳು.

ತಯಾ ಜಗದಿದಂ ಸರ್ವಮಟಂತ್ಯಾ ಮಿಥಿಲೇಶ್ವರಃ ।
ತತ್ರ ತತ್ರ ಶ್ರುತೋ ಮೋಕ್ಷೇ ಕಥ್ಯಮಾನಸ್ತ್ರಿದಂಡಿಭಿಃ ॥೮॥

ಹೀಗೆ ಸಂಚರಿಸುತ್ತಿರುವಾಗ ಅವಳಿಗೆ ಅಲ್ಲಲ್ಲಿ ತ್ರಿದಂಡಿಗಳಾದ ಸಂನ್ಯಾಸಿಗಳು ಮಿಥಿಲಾ ನಗರದ ರಾಜರನ್ನು ಕುರಿತು ಹೇಳುತ್ತಿದ್ದ ಪ್ರಶಂಸೆಯ ಮಾತುಗಳು ಕಿವಿಗೆ ಬೀಳುತ್ತಿದ್ದವು.

ಸಾ ಸುಸೂಕ್ಷ್ಮಾಂ ಕಥಾಂ ಶ್ರುತ್ವಾ ತಥ್ಯಂ ನೇತಿ ಸಸಂಶಯಾ ।
ದರ್ಶನೇ ಜಾತಸಂಕಲ್ಪಾ ಜನಕಸ್ಯ ಬಭೂವ ಹ ॥೯॥

ಜನಕನು ಮೋಕ್ಷಶಾಸ್ತ್ರವಿಷಯದಲ್ಲಿ ಜಾಣನಾಗಿದ್ದಾನೆ ಎಂಬ ವಿಷಯವನ್ನು, ಅವನ ಸಚ್ಚಾರಿತ್ರ್ಯವನ್ನು ಕೇಳಿಸಿಕೊಂಡ ಆಕೆಗೆ ಈ ವಿಚಾರಗಳು ಯಥಾರ್ಥವೋ,

ಅಲ್ಲವೋ ಎಂಬ ಸಂದೇಹವು ಉಂಟಾಯಿತು. ಆದ್ದರಿಂದ ಜನಕರಾಜನನ್ನು ನೋಡಲೇಬೇಕೆಂಬ ಸಂಕಲ್ಪವು ಅವಳ ಹೃದಯದಲ್ಲಿ ಉದ್ಭವಿಸಿತು.

ತತಃ ಸಾ ವಿಪ್ರಹಾಯಾಥ ಪೂರ್ವರೂಪಂ ಹಿ ಯೋಗತಃ ।
ಅಬಿಭ್ರದನವದ್ಯಾಂಗೀ ರೂಪಮನ್ಯದನುತ್ತಮಮ್ ॥೧೦॥

ಕೂಡಲೇ ಆ ಸುಲಭೆಯು ತನ್ನ ಯೋಗಶಕ್ತಿಯಿಂದ ತನ್ನ ಪೂರ್ವರೂಪವಾದ ಸಂನ್ಯಾಸಿ ರೂಪವನ್ನು ಮರೆಮಾಚಿ ಉತ್ತಮವಾದ ಸುಂದರಸ್ತ್ರೀರೂಪವನ್ನು ಧರಿಸಿದಳು.

ಚಕ್ಷುರ್ನಿಮೇಷಮಾತ್ರೇಣ ಲಘ್ವಸ್ತ್ರಗತಿಗಾಮಿನೀ ।
ವಿದೇಹಾನಾಂ ಪುರೀಂ ಸುಭ್ರೂರ್ಜಗಾಮ ಕಮಲೇಕ್ಷಣಾ ॥೧೧॥

ಉತ್ತಮವಾದ ಹುಬ್ಬುಗಳಿಂದ ಕೂಡಿದ, ಕಮಲದಳದಂತೆ ವಿಸ್ತಾರವಾದ ಕಣ್ಣುಗಳಿಂದ ಶೋಭಿಸುತ್ತಿರುವ ಸುಲಭೆಯು ಕಣ್ಣಿನ ರೆಪ್ಪೆಯನ್ನು ಮಿಟುಕಿಸುವ ಸಮಯದ ಒಳಗಡೆ ಅತ್ಯಂತ ವೇಗವಾಗಿ ಸಾಗುವ ಬಾಣದಂತೆ ವಿದೇಹರಾಜನ ಪಟ್ಟಣವನ್ನು ಕುರಿತು ಹೋದಳು.

ಸಾ ಪ್ರಾಪ್ಯ ಮಿಥಿಲಾಂ ರಮ್ಯಾಂ ಸಮೃದ್ಧಜನಸಂಕುಲಾಮ್ ।
ಭೈಕ್ಷಚರ್ಯಾಪದೇಶೇನ ದದರ್ಶ ಮಿಥಿಲೇಶ್ವರಮ್ ॥೧೨॥

ಆ ಸುಲಭೆಯು ಜನಕರಾಜನ ಪಟ್ಟಣಕ್ಕೆ ಸಾಗಿ, ರಮಣೀಯವಾದ ಜನ ಸಮೃದ್ಧವಾಗಿರುವ ಆ ನಗರದಲ್ಲಿ ಭಿಕ್ಷೆಯನ್ನು ಬೇಡುವ ನೆಪದಿಂದ ಜನಕರಾಜನ ಅರಮನೆಗೆ ಸಾಗಿ ರಾಜನನ್ನು ನೋಡಿದಳು.

ರಾಜಾ ತಸ್ಯಾಃ ಪರಂ ದೃಷ್ಟ್ವಾ ಸೌಕುಮಾರ್ಯಂ ವಪುಸ್ತಥಾ ।
ಕೇಯಂ ಕಸ್ಯ ಕುತೋ ವೇತಿ ಬಭೂವಾಗತವಿಸ್ಮಯಃ ॥೧೩॥

ಆ ವಿದೇಹರಾಜನಾದರೂ ಆ ಸುಲಭೆಯ ತೇಜಸ್ಸನ್ನು, ಸೌಂದರ್ಯವನ್ನು, ಅತ್ಯಂತ ಕೋಮಲವಾದ ಶರೀರದ ಮಾಟವನ್ನು ಕಂಡು ಇವಳು ಯಾರು? ಎಲ್ಲಿಂದ ಆಗಮಿಸಿದ್ದಾಳೆ? ಯಾರಿಗೆ ಸಂಬಂಧಿಸಿದವಳು? ಎಂದು ಆಶ್ಚರ್ಯದಿಂದ ಯೋಚಿಸುವವನಾದನು.

ತತೋಽಸ್ಯಾಃ ಸ್ವಾಗತಂ ಕೃತ್ವಾ ವ್ಯಾದಿಶ್ಯ ಚ ವರಾಸನಮ್ ।
ಪೂಜಿತಾಂ ಪಾದಶೌಚೇನ ವರಾನ್ನೇನಾಪ್ಯತರ್ಪಯತ್ ॥೧೪॥

ಬಳಿಕ ಆಗಮಿಸಿರುವಂತಹ ಸುಲಭೆಗೆ ಉತ್ತಮವಾದ ಆಸನವನ್ನು ಕಲ್ಪಿಸಿಕೊಟ್ಟನು. ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿದನು. ಉತ್ತಮವಾದ ಅನ್ನವನ್ನು ನೀಡಿ ಸತ್ಕರಿಸಿದನು.

ಅಥ ಭುಕ್ತವತೀ ಪ್ರೀತಾ ರಾಜಾನಂ ಮಂತ್ರಿಭಿರ್ವೃತಮ್ ।
ಸರ್ವಭಾಷ್ಯವಿದಾಂ ಮಧ್ಯೇ ಚೋದಯಾಮಾಸ ಭಿಕ್ಷುಕೀ ॥೧೫॥

ಅವಳು ತೃಪ್ತಿಯಿಂದ ಭೋಜನವನ್ನು ಮಾಡಿದ ಬಳಿಕ, ಪ್ರೀತಳಾದ ಅವಳು ಉಂಡಬಳಿಕ ರಾಜನು ಮಂತ್ರಿಗಳ ಜೊತೆಗೆ ಸೇರಿ ಅನೇಕ ಸೂತ್ರಾರ್ಥಗಳನ್ನು ತಿಳಿದ ಪಂಡಿತರ ಮಧ್ಯದಲ್ಲಿ ಆ ಭಿಕ್ಷುಕಿಯನ್ನು ಮಾತನಾಡಿಸಲು ಆರಂಭಿಸಿದನು.

ಸುಲಭಾ ತ್ವಸ್ಯ ಧರ್ಮೇಷು ಮುಕ್ತೋ ನೇತಿ ಸಸಂಶಯಾ ।
ಸತ್ತ್ವಂ ಸತ್ತ್ವೇನ ಯೋಗಜ್ಞಾ ಪ್ರವಿವೇಶ ಮಹೀಪತೇ ॥೧೬॥

ಆ ಸುಲಭೆಯಾದರೂ ಯೋಗದ ಮರ್ಮಗಳನ್ನು ಚೆನ್ನಾಗಿ ತಿಳಿದವಳಾದ್ದರಿಂದ ರಾಜನು ಯೋಗಧರ್ಮಗಳಲ್ಲಿ ತನ್ನಂತೆ ಮುಕ್ತನಾಗಿದ್ದಾನೋ, ಇಲ್ಲವೋ ಎಂಬ ಸಂದೇಹವುಳ್ಳವಳಾಗಿ ತನ್ನ ಯೋಗಬಲವನ್ನು ಆಶ್ರಯಿಸಿ ಅವನ ಒಳಗೆ ಪ್ರವೇಶಿಸಿದಳು.

ನೇತ್ರಾಭ್ಯಾಂ ನೇತ್ರಯೋರಸ್ಯ ರಶ್ಮೀನ್ ಸಂಯೋಜ್ಯ ರಶ್ಮಿಭಿಃ ।
ಸಾ ಸ್ಮ ಸಂಚೋದಯಿಷ್ಯಂತಂ ಯೋಗಬಂಧೈರ್ಬಬಂಧ ಹ ॥೧೭॥

ತನ್ನ ಕಣ್ಣುಗಳಿಂದ ಜನಕರಾಜನ ಕಣ್ಣುಗಳನ್ನು, ತನ್ನ ಕಣ್ಣಿನ ಕಿರಣಗಳಿಂದ ಜನಕ ರಾಜನ ಕಣ್ಣಿನ ಕಿರಣಗಳನ್ನು ಪ್ರವೇಶಿಸಿದಳು. ಹೀಗೆ ಜನಕರಾಜನನ್ನು ತನ್ನ ಯೋಗದ ಬಲಗಳಿಂದ ಬಂಧಿಸಿಬಿಟ್ಟಳು.

ಜನಕೋಽಪ್ಯುತ್ಸ್ಮಯನ್ರಾಜಾ ಭಾವಮಸ್ಯಾ ವಿಶೇಷಯನ್ ।
ಪ್ರತಿಜಗ್ರಾಹ ಭಾವೇನ ಭಾವಮಸ್ಯಾ ನೃಪೋತ್ತಮಃ ॥೧೮॥

ಜನಕರಾಜನು ತನ್ನನ್ನು ಮೂಕನನ್ನಾಗಿ ಮಾಡಬೇಕೆಂಬ ಸುಲಭೆಯ ದುರುದ್ದೇಶವನ್ನು ತಿಳಿದು ನಸುನಗುತ್ತಾ ತಾನೇ ತನ್ನ ಮನಸ್ಸಿನಿಂದ ಅವಳ ಮನಸ್ಸನ್ನು ಬಂಧಿಸಿ ಇಟ್ಟನು.

ತದೇಕಸ್ಮಿನ್ನಧಿಷ್ಠಾನೇ ಸಂವಾದಃ ಶ್ರೂಯತಾಮಯಮ್ ।
ಛತ್ರಾದಿಷು ವಿಮುಕ್ತಸ್ಯ ಮುಕ್ತಾಯಾಶ್ಚ ತ್ರಿದಂಡಕೇ ॥೧೯॥

ಆ ಸುಲಭೆಯಾದರೂ ತ್ರಿದಂಡಿಯಾಗಿ ಸಂನ್ಯಾಸದ ಚಿಹ್ನೆಗಳಿಂದ ಮುಕ್ತಳಾಗಿದ್ದಳು. ಜನಕರಾಜನಾದರೂ ತನ್ನ ರಾಜಸೂಚಕವಾದ ಛತ್ರವೇ ಮೊದಲಾದ ಚಿಹ್ನೆಗಳಿಂದ ವಿಮುಕ್ತನಾಗಿದ್ದನು. ಇಂತಹ ಈರ್ವರಿಗೂ ಒಂದೇ ಮನಸ್ಸೆಂಬ ಅಧಿಷ್ಠಾನದಲ್ಲಿ ಸಂವಾದವು ಆರಂಭವಾಯಿತು.

ಭಗವತ್ಯಾಃ ಕ್ವ ಚರ್ಯೇಯಂ ಕೃತಾ ಕ್ವ ಚ ಗಮಿಷ್ಯಸಿ ।
ಕಸ್ಯ ಚ ತ್ವಂ ಕುತೋ ವೇತಿ ಪಪ್ರಚ್ಛೈನಾಂ ಮಹೀಪತಿಃ ॥೨೦॥

ಜನಕರಾಜನು ಅವಳನ್ನು ಕುರಿತು- 'ಎಲೈ ಪೂಜ್ಯಳೇ, ನೀನು ಈ ಯೋಗಚರ್ಯೆಯನ್ನು ಎಲ್ಲಿಂದ ಅಭ್ಯಾಸ ಮಾಡಿರುವಿ? ಈಗ ಎಲ್ಲಿಗೆ ಹೋಗುತ್ತಿರುವಿ? ಈಗ ಎಲ್ಲಿಂದ ಬಂದಿರುವಿ? ನೀನು ಯಾರಿಗೆ ಸಂಬಂಧಪಟ್ಟವಳು?' ಎಂಬುದಾಗಿ ಪ್ರಶ್ನಿಸಿದನು.

ಶ್ರುತೇ ವಯಸಿ ಜಾತೌ ಚ ಸದ್ಭಾವೋ ನಾಧಿಗಮ್ಯತೇ ।
ಏಷ್ವರ್ಥೇಷೂತ್ತರಂ ತಸ್ಮಾತ್ ಪ್ರವೇದ್ಯಂ ಸತ್ಸಮಾಗಮೇ ॥೨೧॥

ನಿನ್ನ ಶಾಸ್ತ್ರದ ವಿಷಯದಲ್ಲಾಗಲಿ, ವಯಸ್ಸಿನಲ್ಲಾಗಲಿ, ಜಾತಿಯ ವಿಷಯದಲ್ಲಾಗಲಿ ನಿನ್ನ ಒಳ್ಳೆತನ ಏನೆಂಬುದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಈ ವಿಷಯಗಳನ್ನು ಸತ್ಸಮಾಗಮವಾಗುವುದಕ್ಕಿಂತ ಮೊದಲು ನಾನು ತಿಳಿಯಬೇಕಾಗಿದೆ.

ಛತ್ರಾದಿಷು ವಿಶೇಷೇಷು ಮುಕ್ತಂ ಮಾಂ ವಿದ್ಧಿ ಸರ್ವಶಃ ।
ಸ ತ್ವಾಂ ಸಮ್ಮಂತುಮಿಚ್ಛಾಮಿ ಮಾನಾರ್ಹಾಸಿ ಮತಾ ಹಿ ಮೇ ॥೨೨॥

ನಾನು ರಾಜನಾಗಿದ್ದರೂ ರಾಜಚಿಹ್ನೆಗಳಾದ ಛತ್ರಾದಿ ವೈಭವಗಳಿಂದ ಎಲ್ಲ ರೀತಿಯಾಗಿಯೂ ಮುಕ್ತನಾಗಿದ್ದೇನೆ ಎಂಬುದನ್ನು ತಿಳಿ. ನೀನು ನನಗೆ ಪೂಜ್ಯಳೆಂದು ತೋರುತ್ತಿರುವುದರಿಂದ ನಿನ್ನ ವಿಷಯವನ್ನು ಕೇಳಲು ಅಪೇಕ್ಷಿಸಿದ್ದೇನೆ. ನನ್ನಿಂದ ನೀನು ಸನ್ಮಾನಕ್ಕೆ ಅರ್ಹಳಾಗಿರುವಿ.

ಯಸ್ಮಾಚ್ಚೈತನ್ಮಯಾ ಪ್ರಾಪ್ತಂ ಜ್ಞಾನಂ ವೈಶೇಷಿಕಂ ಪುರಾ ।
ಯಸ್ಯ ನಾನ್ಯಃ ಪ್ರವಕ್ತಾಸ್ತಿ ಮೋಕ್ಷೇ ತಮಪಿ ಮೇ ಶೃಣು ॥೨೩॥

ಭಗವಂತನ ಜ್ಞಾನವು ಯಾರಿಂದ ನನಗೆ ದೊರೆಯಿತು ಎಂದು ನೀನು ನನ್ನನ್ನು ಪ್ರಶ್ನಿಸುತ್ತಿರುವಿ. ನನಗೆ ನೀನು ಮೋಕ್ಷದ ವಿಷಯದಲ್ಲಿ ಯಾರು ಗುರುವಾಗಿದ್ದಾರೆ? ಅವರಿಗಿಂತ ಅತಿಶಯರಾದ ಪ್ರವಚನಪಟುವು ಮತ್ತೊಬ್ಬನು ಇರುವುದಿಲ್ಲ. ಅಂತಹವನು ಯಾರು ಎಂಬುದನ್ನು ಕೇಳು.

ಪಾರಾಶರ್ಯಸಗೋತ್ರಸ್ಯ ವೃದ್ಧಸ್ಯ ಸುಮಹಾತ್ಮನಃ ।
ಭಿಕ್ಷೋಃ ಪಂಚಶಿಖಸ್ಯಾಹಂ ಶಿಷ್ಯಃ ಪರಮಸಮ್ಮತಃ ॥೨೪॥

ಪರಮಜ್ಞಾನಿಯಾದ, ಮಹಾನುಭಾವನಾದ, ಸಜ್ಜನರಿಗೆಲ್ಲ ಸಮ್ಮತನಾದ, ಪರಾಶರ ಗೋತ್ರೋದ್ಭವನಾದ ಪಂಚಶಿಖನೆಂಬ ಜ್ಞಾನಿಯಾದ ಸಂನ್ಯಾಸಿಯ ಶಿಷ್ಯನು ನಾನು.

ಸಾಂಖ್ಯಜ್ಞಾನೇ ತಥಾ ಯೋಗೇ ಮಹೀಪಾಲವಿಧೌ ತಥಾ ।
ತ್ರಿವಿಧೇ ಮೋಕ್ಷಧರ್ಮೇಽಸ್ಮಿನ್ ಗತಾಧ್ವಾ ಛಿನ್ನಸಂಶಯಃ ॥೨೫॥

ಆ ಪಂಚಶಿಖನಾದರೂ ಸಾಂಖ್ಯಶಾಸ್ತ್ರದಲ್ಲಿ, ಯೋಗಶಾಸ್ತ್ರದಲ್ಲಿ, ರಾಜನೀತಿಗಳೆಂದು ಕರೆಯಲ್ಪಡುವ ವಿಧಿಗಳಲ್ಲಿ ಈ ರೀತಿಯಾದ ಮೂರು ವಿಧವಾದ ಮೋಕ್ಷಧರ್ಮಗಳನ್ನು ಬಹುದೂರದ ತನಕ ಪರಿಶೀಲನೆಯನ್ನು ಮಾಡಿ, ಎಲ್ಲ ಸಂದೇಹಗಳನ್ನು ಪರಿಹರಿಸಿಕೊಂಡಿರುವನು.

ಸ ಯಥಾಶಾಸ್ತ್ರದೃಷ್ಟೇನ ಮಾರ್ಗೇಣೇಹ ಪರಿವ್ರಜನ್ ।
ವಾರ್ಷಿಕಾಂಶ್ಚತುರೋ ಮಾಸಾನ್ ಪುರಾ ಮಯಿ ಸುಖೋಷಿತಃ ॥೨೬॥

ಶಾಸ್ತ್ರಾನುಸಾರಿಯಾಗಿ ಕಾಣಿಸುವ ಸನ್ಮಾರ್ಗದಲ್ಲಿ ಪ್ರಯಾಣ ಮಾಡುತ್ತಿರುವ ಅಂತಹ ಪರಿವ್ರಾಜಕನಾದ ಪಂಚಶಿಖನು ಈ ಪಟ್ಟಣಕ್ಕೆ ಆಗಮಿಸಿದ್ದಾಗ ಒಂದು ಚಾತುರ್ಮಾಸ್ಯ ಕಾಲದಲ್ಲಿ ನನ್ನಿಂದ ಚೆನ್ನಾಗಿ ಸೇವಿಸಲ್ಪಟ್ಟನು.

ತೇನಾಹಂ ಸಾಂಖ್ಯಮುಖ್ಯೇನ ಸುದೃಷ್ಟಾರ್ಥೇನ ತತ್ತ್ವತಃ ।
ಶ್ರಾವಿತಸ್ತ್ರಿವಿಧಂ ಮೋಕ್ಷಂ ನ ಚ ರಾಜ್ಯಾದ್ ವಿಚಾಲಿತಃ ॥೨೭॥

ಸಾಂಖ್ಯಶಾಸ್ತ್ರದಲ್ಲಿ ಯಥಾರ್ಥಜ್ಞಾನವನ್ನು ಹೊಂದಿರುವ ಆ ಪಂಚಶಿಖಿನಿಂದ ನಾನು ಮೂರುವಿಧವಾದ ಮೋಕ್ಷಗಳ ಧರ್ಮಗಳನ್ನು ಚೆನ್ನಾಗಿ ತಿಳಿದುಕೊಂಡೆನು. ಆದರೆ ಆ ಪಂಚಶಿಖಿನು ನನ್ನನ್ನು ರಾಜ್ಯವನ್ನು ಬಿಟ್ಟುಹೋಗು ಎಂದು ಪ್ರೇರಿಸಲಿಲ್ಲ.

ಸೋಽಹಂ ತಾಮಖಿಲಾಂ ವೃತ್ತಿಂ ತ್ರಿವಿಧಾಂ ಮೋಕ್ಷಸಂಹಿತಾಮ್ ।
ಮುಕ್ತರಾಗಶ್ಚರಾಮ್ಯೇಕಃ ಪದೇ ಪರಮಕೇ ಸ್ಥಿತಃ ॥೨೮॥

ನಾನು ಅವನು ಹೇಳಿದಂತೆ ಮೂರುವಿಧವಾದ ಮೋಕ್ಷಮಾರ್ಗವನ್ನು ಬಿಡದೆ ವರ್ತಿಸುತ್ತಿದ್ದೇನೆ. ರಾಗಾದಿಗಳನ್ನೆಲ್ಲ ತ್ಯಜಿಸಿ, ದೃಢವಾದ ಬುದ್ಧಿಯಿಂದ ಅವನ ಉಪದೇಶವನ್ನೇ ನಂಬಿ ನಡೆಯುತ್ತಿದ್ದೇನೆ.

ವೈರಾಗ್ಯಂ ಪುನರೇತಸ್ಯ ಮೋಕ್ಷಸ್ಯ ಪರಮೋ ವಿಧಿಃ ।
ಜ್ಞಾನಾದೇವ ಚ ವೈರಾಗ್ಯಂ ಜಾಯತೇ ಯೇನ ಮುಚ್ಯತೇ ॥೨೯॥

ಮೋಕ್ಷಕ್ಕೆ ವೈರಾಗ್ಯವು ಉತ್ತಮ ಸ್ಥಾನವು. ವಿರಕ್ತಿಯು ಜ್ಞಾನದಿಂದಲೇ ಲಭಿಸುತ್ತದೆ. ಆ ಜ್ಞಾನದಿಂದ ಜ್ಞಾನ-ವೈರಾಗ್ಯವು ಉತ್ಪನ್ನವಾಗುತ್ತದೆ. ವೈರಾಗ್ಯದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಜ್ಞಾನೇನ ಕುರುತೇ ಯತ್ನಂ ಯತ್ನೇನ ಪ್ರಾಪ್ಯತೇ ಮಹತ್ ।
ಮಹದ್ದ್ವಂದ್ವಪ್ರಮೋಕ್ಷಾಯ ಸಾ ಸಿದ್ಧಿರ್ಯಾ ವಯೋತಿಗಾ ॥೩೦॥

ಜ್ಞಾನದಿಂದ ಭಗದ್ವಿಷಯದಲ್ಲಿ ಪ್ರಯತ್ನವನ್ನು ಮಾಡುತ್ತಾನೆ, ಭಗವದ್ವಿಷಯಕವಾದ ಪ್ರಯತ್ನವೇ ಪರಬ್ರಹ್ಮನ ಬಳಿ ಕರೆದೊಯ್ಯುತ್ತದೆ. ಸುಖ-ದುಃಖಾದಿ ದ್ವಂದ್ವಗಳನ್ನು ನೀಗಿಸಿಕೊಳ್ಳಲು ಭಗವದ್‌ಜ್ಞಾನದ ಸಿದ್ಧಿಯು ಕಾರಣವಾಗುತ್ತದೆ.

ಸೇಯಂ ಪರಮಿಕಾ ಬುದ್ಧಿಃ ಪ್ರಾಪ್ತಾ ನಿರ್ದ್ವಂದ್ವತಾ ಮಯಾ ।
ಇಹೈವ ಗತಮೋಹೇನ ಚರತಾ ಮುಕ್ತಸಂಗಿನಾ ॥೩೧॥

ಹೀಗೆ ಯಾವುದೇ ಗೊಂದಲವಿಲ್ಲದೇ ಇರುವ ಪರಮಾತ್ಮವಿಷಯಕವಾದ ಬುದ್ಧಿಯು ನನಗೆ ಆ ಪಂಚಶಿಖಿನ ಮೂಲಕ ದೊರೆತಿದೆ. ಈ ಭೂಮಿಯಲ್ಲಿ ನಾನು ರಾಜನಾಗಿ ಸಂಚರಿಸುತ್ತಿದ್ದರೂ ಯಾವುದೇ ಅತಿಯಾದ ಸಂಬಂಧಗಳಿಗೂ ಸಿಲುಕಿಕೊಳ್ಳದೆ ಮೋಹವನ್ನು ತ್ಯಜಿಸಿ ಸಂಚರಿಸುತ್ತಿದ್ದೇನೆ.

ಯಥಾ ಕ್ಷೇತ್ರಂ ಮೃದೂಭೂತಮದ್ಭಿರಾಪ್ಲಾವಿತಂ ತಥಾ ।
ಜನಯತ್ಯಂಕುರಂ ಕರ್ಮ ನೃಣಾಂ ತದ್ವತ್ ಪುನರ್ಭವಮ್ ॥೩೨॥

ಯಾವ ರೀತಿಯಾಗಿ ನೀರಿನಿಂದ ಚೆನ್ನಾಗಿ ಒದ್ದೆಯಾಗಿರುವ ಭೂಮಿಯು ಸುಲಭವಾಗಿ ಬಿತ್ತಿದ ಬೆಳೆಯನ್ನು ಮೊಳಕೆ ಒಡೆಯುವಂತೆ ಮಾಡುತ್ತದೋ ಇದರಂತೆ ಮನುಷ್ಯನಿಗೆ ಕರ್ಮಬೀಜವೇ ಪುನರ್ಜನ್ಮಕ್ಕೆ ಕಾರಣವಾಗುತ್ತದೆ.

ಯಥಾ ಚೋತ್ತಾಪಿತಂ ಬೀಜಂ ಕಪಾಲೇ ಯತ್ರ ತತ್ರ ವಾ ।
ಪ್ರಾಪ್ಯಾಪ್ಯಂಕುರಹೇತುತ್ವಮಬೀಜತ್ವಾನ್ನ ಜಾಯತೇ ॥೩೩॥

ತದ್ವದ್ ಭಗವತಾ ತೇನ ಶಿಖಾಪ್ರೋಕ್ತೇನ ಭಿಕ್ಷುಣಾ ।
ಜ್ಞಾನಂ ಕೃತಮಬೀಜಂ ಮೇ ವಿಷಯೇಷು ನ ಜಾಯತೇ ॥೩೪॥

ಮಡಿಕೆಯಲ್ಲಿ ಬಿಸಿ ಮಾಡಿ ಹುರಿದ ಬೀಜವು ಹೆಸರಿಗೆ ಬೀಜವೆನಿಸಿದ್ದರೂ ಅದು ಅಂಕುರೋತ್ಪತ್ತಿಯನ್ನು ಹೊಂದಲು ಸಮರ್ಥವಾಗದು. ಅದರಂತೆ ಪಂಚಶಿಖನೆಂಬ ಪೂಜ್ಯನಾದ ಸಂನ್ಯಾಸಿಯಿಂದ ನನ್ನಲ್ಲಿ ಸ್ಥಾಪಿಸಲ್ಪಟ್ಟ ಜ್ಞಾನವು ಕರ್ಮಬೀಜವನ್ನು ಹುರಿದು ವಿಷಯಗಳಲ್ಲಿ ಪ್ರವೃತ್ತಿಯನ್ನು ಹೊಂದುವಂತೆ ಮಾಡಿದೆ.

ನಾಭಿಷಜ್ಜತಿ ಕಸ್ಮಿಂಶ್ಚಿನ್ನಾನರ್ಥೇ ನ ಪರಿಗ್ರಹೇ ।
ನಾಭಿರಜ್ಯತಿ ಚೈತೇಷು ವ್ಯರ್ಥತ್ವಾದ್ರಾಗದೋಷಯೋಃ ॥೩೫॥

ನನ್ನ ಮನಸ್ಸು ಅನಿಷ್ಟ ಹೊಂದಿದಾಗಲೂ, ಇಷ್ಟಪ್ರಾಪ್ತಿಯಾದಾಗಲೂ, ದುಃಖವನ್ನಾಗಲಿ, ಸುಖವನ್ನಾಗಲಿ ಹೊಂದುವುದಿಲ್ಲ. ಈ ಜಗತ್ತಿನಲ್ಲಿರುವ ಎಲ್ಲವೂ ರಾಗ-ದ್ವೇಷಗಳಿಂದ ಕೂಡಿರುವುದರಿಂದ ವ್ಯರ್ಥವಾಗಿವೆ ಎಂದು ಅನಾಸಕ್ತನಾಗಿದ್ದೇನೆ.

ಯಶ್ಚ ಮೇ ದಕ್ಷಿಣಂ ಬಾಹುಂ ಚಂದನೇನ ಸಮುಕ್ಷಯೇತ್ ।
ಸವ್ಯಂ ವಾಶ್ಯ ಚ ಯಸ್ತಕ್ಷೇತ್ ಸಮಾವೇತಾವುಭೌ ಮಮ ॥೩೬॥

ಒಬ್ಬ ವ್ಯಕ್ತಿಯು ನನ್ನ ಬಲತೋಳಿಗೆ ಒಳ್ಳೆಯ ಚಂದನದ ಲೇಪವನ್ನು ಮಾಡಿ ಉಪಚಾರವನ್ನು ಮಾಡಿ ಅಲಂಕಾರ ಮಾಡಿದ್ದರೂ, ಇನ್ನೊಬ್ಬನು ನನ್ನ ಎಡತೋಳನ್ನು ಬಾಚಿ ಕತ್ತರಿಸಿ ತೆಗೆದಿದ್ದರೂ ನನ್ನ ವಿಷಯದಲ್ಲಿ ಅವರಿಬ್ಬರೂ ಸಮಾನರೇ.

ಸುಖೀ ಸೋಽಹಮವಾಪ್ತಾರ್ಥಃ ಸಮಲೋಷ್ಟಾಶ್ಮಕಾಂಚನಃ ।
ಮುಕ್ತಸಂಗಃ ಸ್ಥಿತೋ ರಾಜ್ಯೇ ವಿಶಿಷ್ಟೋಽನ್ಯೈಸ್ತ್ರಿದಂಡಿಭಿಃ ॥೩೭॥

ನಾನು ಯಾವಾಗಲೂ ಕೃತಕೃತ್ಯನಂತೆ ಸುಖಿಯಾಗಿಯೇ ಇರುತ್ತೇನೆ. ಕಲ್ಲು, ಮಣ್ಣು, ಬಂಗಾರ - ಈ ಮೂರನ್ನು ಸಮಾನವಾಗಿ ತಿಳಿದುಕೊಂಡಿರುತ್ತೇನೆ. ನಾನು ಈ ರಾಜ್ಯದಲ್ಲಿದ್ದರೂ ಮುಕ್ತಸಂಗನಾಗಿ ವಾಸ ಮಾಡಿಕೊಂಡಿದ್ದೇನೆ. ಇನ್ನೂ ಅನೇಕ ತ್ರಿದಂಡಿ ಸಂನ್ಯಾಸಿಗಳಿಂದ ಉತ್ತಮವಾದ ಉಪದೇಶವನ್ನು ನಾನು ಹೊಂದಿರುತ್ತೇನೆ.

ಮೋಕ್ಷೇ ಹಿ ತ್ರಿವಿಧಾ ನಿಷ್ಠಾ ದೃಷ್ಟಾ ಪೂರ್ವೈರ್ಮಹರ್ಷಿಭಿಃ ।
ಜ್ಞಾನಂ ಲೋಕೋತ್ತರಂ ಯಚ್ಚ ಸರ್ವತ್ಯಾಗಶ್ಚ ಕರ್ಮಣಾಮ್ ॥೩೮॥

ಜ್ಞಾನನಿಷ್ಠಾಂ ವದಂತ್ಯೇಕೇ ಮೋಕ್ಷಶಾಸ್ತ್ರವಿದೋ ಜನಾಃ ।
ಕರ್ಮನಿಷ್ಠಾಂ ತಥೈವಾನ್ಯೇ ಯತಯಃ ಸೂಕ್ಷ್ಮದರ್ಶಿನಃ ॥೩೯॥

ಮೋಕ್ಷತತ್ತ್ವಜ್ಞರು ಮೋಕ್ಷದಲ್ಲಿಯೂ ಮೂರು ವಿಧವಾದ ನಿಷ್ಠೆಯನ್ನು ಹೇಳುತ್ತಾರೆ. ಕೆಲವರು ಉತ್ತಮ ಜ್ಞಾನವನ್ನೂ, ಕೆಲವರು ಸಕಲ ಕರ್ಮಗಳ ತ್ಯಾಗವನ್ನೂ, ಕೆಲವರು ಜ್ಞಾನದ ನಿಷ್ಠೆಯನ್ನು ಹೇಳುತ್ತಾರೆ. ಇನ್ನು ಕೆಲವರು ನೀತಿಜ್ಞರಾದ ಯತಿಗಳು ಕರ್ಮನಿಷ್ಠೆಯನ್ನೇ ಮೋಕ್ಷಕ್ಕೆ ಕಾರಣವೆಂದು ಸೂಕ್ಷ್ಮದರ್ಶಿಗಳಾಗಿ ಹೇಳುತ್ತಾರೆ.

ಪ್ರಹಾಯೋಭಯಮಪ್ಯೇತಜ್ಜ್ಞಾನಂ ಕರ್ಮ ಚ ಕೇವಲಮ್ ।
ತೃತೀಯೇಯಂ ಸಮಾಖ್ಯಾತಾ ನಿಷ್ಠಾ ತೇನ ಮಹಾತ್ಮನಾ ॥೪೦॥

ಕೇವಲವಾದ ಕರ್ಮವಾಗಲಿ, ಕೇವಲವಾದ ಜ್ಞಾನವಾಗಲಿ ಮೋಕ್ಷಕ್ಕೆ ಕಾರಣವಾಗದು. ಸರ್ವತ್ಯಾಗರೂಪವಾದ ನಿಷ್ಠೆಯೇ ಮೋಕ್ಷಕ್ಕೆ ಕಾರಣವು ಎಂದು ಮಹಾತ್ಮನಾದ ಪಂಚಶಿಖನು ನನಗೆ ಉಪದೇಶಿಸಿರುತ್ತಾನೆ.

ಯಮೇ ಚ ನಿಯಮೇ ಚೈವ ದ್ವೇಷೇ ಕಾಮೇ ಪರಿಗ್ರಹೇ ।
ಮಾನೇ ದಂಭೇ ತಥಾ ಸ್ನೇಹೇ ಸದೃಶಾಸ್ತೇ ಕುಟುಂಬಿಭಿಃ ॥೪೧॥

ಯಮ, ನಿಯಮಾದಿ ಗುಣಗಳಾಗಲಿ, ಕಾಮ-ದ್ವೇಷ-ಪರಿಗ್ರಹ-ಮಾನ-ದಂಭ-ಸ್ನೇಹ ಎನ್ನುವ ದೋಷಗಳಾಗಲೀ ಯತಿಗಳಿಗೂ, ಗೃಹಸ್ಥರಿಗೂ ಸಮಾನವೇ ಆಗಿವೆ.

ತ್ರಿದಂಡಾದಿಷು ಯದ್ಯಸ್ತಿ ಮೋಕ್ಷೋ ಜ್ಞಾನೇನ ಕೇನಚಿತ್ ।
ಛತ್ರಾದಿಷು ಕಥಂ ನ ಸ್ಯಾತ್ತುಲ್ಯಹೇತೌ ಪರಿಗ್ರಹೇ ॥೪೨॥

ಯೇನ ಯೇನ ಹಿ ಯಸ್ಯಾರ್ಥಃ ಕಾರಣೇನೇಹ ಕಸ್ಯಚಿತ್ ।
ತತ್ತದಾಲಂಬತೇ ದ್ರವ್ಯಂ ಸರ್ವಃ ಸ್ವೇ ಸ್ವೇ ಪರಿಗ್ರಹೇ ॥೪೩॥

ತ್ರಿದಂಡವನ್ನು ಧರಿಸಿದವರಿಗೆ ಅವರ ಜ್ಞಾನ ಒಂದರಿಂದಲೇ ಮೋಕ್ಷ ಉಂಟಾಗುವುದಾದರೆ ನನ್ನಂತೆ ಛತ್ರಾದಿಗಳನ್ನು ಹಿಡಿಸಿಕೊಂಡ ರಾಜರಿಗೂ ಮೋಕ್ಷವೇತಕ್ಕೆ ಸಿಗಬಾರದು? ಪರಿಗ್ರಹವೆಂಬುದು ಇಬ್ಬರಿಗೂ ಸಮಾನವಾದ ಕಾರಣವೇ ಆಗಿರುವುದಲ್ಲವೆ? ಆದ್ದರಿಂದ ಈ ಲೋಕದಲ್ಲಿ ಯಾವನಿಗೆ ಯಾವ ಸಾಧನದಿಂದ ಫಲವು ದೊರೆಯುತ್ತದೋ ಅವನು ಆ ಫಲಸಾಧನಕ್ಕಾಗಿ ಅಂತಹ ದ್ರವ್ಯವನ್ನೇ ಅವಲಂಬಿಸುತ್ತಾನೆ. ಲೋಕದಲ್ಲಿರುವ ಸಮಸ್ತ ದ್ರವ್ಯಗಳು ತಮ್ಮ ತಮ್ಮ ಪುರುಷಾರ್ಥವನ್ನು ಪಡೆಯಲು ಪರಿಗ್ರಹವೆಂದೇ ಕರೆಸಿಕೊಳ್ಳುತ್ತದೆ.

ದೋಷದರ್ಶೀ ತು ಗಾರ್ಹಸ್ಥ್ಯೇ ಯೋ ವ್ರಜತ್ಯಾಶ್ರಮಾಂತರಮ್ ।
ಉತ್ಸೃಜನ್ ಪರಿಗೃಹ್ಣಂಶ್ಚ ಸೋಽಪಿ ಸಂಗಾನ್ನ ಮುಚ್ಯತೇ ॥೪೪॥

ಯಾವನು ಗೃಹಸ್ಥಧರ್ಮದಲ್ಲಿ ದೋಷಗಳಿವೆ ಎಂದು ಕಂಡುಕೊಂಡು ಬೇರೆ ಆಶ್ರಮವಾದ ಸಂನ್ಯಾಸವನ್ನು ಅವಲಂಬಿಸುತ್ತಾನೋ ಅವನು ಹೆಂಡತಿ, ಮನೆ ಮೊದಲಾದವನ್ನು ತ್ಯಜಿಸಿ ಕಮಂಡಲು, ಕಾಷಾಯಗಳನ್ನು ಸ್ವೀಕರಿಸಿದರೂ ಸಂಗದಿಂದ ಬಿಡುಗಡೆಯನ್ನು ಹೊಂದುವುದಿಲ್ಲ.

ಆಧಿಪತ್ಯೇ ತಥಾ ತುಲ್ಯೇ ನಿಗ್ರಹಾನುಗ್ರಹಾತ್ಮನಿ ।
ರಾಜರ್ಷಿಭಿಕ್ಷುಕಾಚಾರ್ಯಾ ಮುಚ್ಯಂತೇ ಕೇನ ಹೇತುನಾ ॥೪೫॥

ಇದರಂತೆ ರಾಜನು ಪ್ರಜೆಗಳ ವಿಷಯದಲ್ಲಿ ನಿಗ್ರಹ, ಅನುಗ್ರಹ ಸಮರ್ಥನು. ರಾಜನಿಗೆ ರಾಜ್ಯವನ್ನು ಅಪಹರಿಸುವುದರಲ್ಲಿ ಆಸಕ್ತಿಯಿದ್ದರೆ, ಸಂನ್ಯಾಸಿಗಳಿಗೆ ಕಮಂಡಲುವನ್ನು ಅಪಹರಿಸುವುದರಲ್ಲಿ ಆಸಕ್ತಿ ಇರುತ್ತದೆ. ರಾಜನಿಗೆ ಧನವನ್ನು ತ್ಯಾಗ ಮಾಡಲು ಆಸಕ್ತಿ ಇದ್ದರೆ, ಭಿಕ್ಷುವಿಗೆ ಕೊಟ್ಟ ಪದಾರ್ಥಗಳನ್ನು ಸ್ವೀಕರಿಸಲು ಆಸಕ್ತಿ ಇರುತ್ತದೆ. ನಿಗ್ರಹ, ಅನುಗ್ರಹ ಸಮರ್ಥರಾಗಿರುವಾಗ ರಾಜ-ಭಿಕ್ಷುಕರು ಯಾವ ಉಪಾಯದಿಂದ ಬಿಡುಗಡೆಯನ್ನು ಹೊಂದುತ್ತಾರೆ?

ಅಥ ಸತ್ಯಾಧಿಪತ್ಯೇಽಪಿ ಜ್ಞಾನೇನೈವೇಹ ಕೇವಲಮ್ ।
ಮುಚ್ಯಂತೇ ಕಿಂ ನ ಮುಚ್ಯಂತೇ ಪದೇ ಪರಮಕೇ ಸ್ಥಿತಾಃ ॥೪೬॥

ಕೇವಲ ಜ್ಞಾನದಿಂದಲೇ ಮೋಕ್ಷವೆಂದು ಹೇಳುವ ಪಕ್ಷದಲ್ಲಿ ರಾಜನು ಅಧಿಕಾರ ಸ್ಥಾನದಲ್ಲಿದ್ದರೂ ಜ್ಞಾನಿಯಾದಲ್ಲಿ ಅವನಿಗೆ ಮುಕ್ತಿ ಇಲ್ಲ ಎಂದು ಹೇಳುವುದು ಹೇಗೆ?

ಕಾಷಾಯಧಾರಣಂ ಮೌಂಡ್ಯಂ ತ್ರಿವಿಷ್ಟಬ್ಧಃ ಕಮಂಡಲುಃ ।
ಲಿಂಗಾನ್ಯತ್ಯರ್ಥಮೇತಾನಿ ನ ಮೋಕ್ಷಾಯೇತಿ ಮೇ ಮತಿಃ ॥೪೭॥

ಯದಿ ಸತ್ಯಪಿ ಲಿಂಗೇಽಸ್ಮಿಂಚಿಹ್ನಮೇವಾತ್ರ ಕಾರಣಮ್ ।
ನಿರ್ಮೋಕ್ಷಾಯೇಹ ದುಃಖಸ್ಯ ಲಿಂಗಮಾತ್ರಂ ನಿರರ್ಥಕಮ್ ॥೪೮॥

ಕಾಷಾಯವನ್ನು ಧರಿಸುವುದು, ಮುಂಡನ ಮಾಡಿಸಿಕೊಳ್ಳುವುದು, ತ್ರಿದಂಡವನ್ನು ಧರಿಸುವುದು, ಕಮಂಡಲುವನ್ನು ಧರಿಸುವುದು ಇವು ಮಾತ್ರವೇ ಮೋಕ್ಷಕ್ಕೆ ಕಾರಣವಾದ ಚಿಹ್ನೆಗಳೆಂದು ನಾನು ಭಾವಿಸುವುದಿಲ್ಲ. ಇವೆಲ್ಲ ಬಹಿರಂಗದ ಚಿಹ್ನೆಗಳು ಮಾತ್ರ. ದುಃಖದಿಂದ ಬಿಡುಗಡೆಯನ್ನು ಹೊಂದಲು ಈ ಚಿಹ್ನೆಗಳು ಯಾವುದೇ ರೀತಿಯಾದ ಉಪಕಾರವನ್ನು ಮಾಡವು.

ವ್ಯಾಖ್ಯಾನ ವಿಶೇಷ– ಈ ಲಕ್ಷಣವಿದ್ದರೂ ಇಲ್ಲದಿದ್ದರೂ ದುಃಖನಿವೃತ್ತಿಗೆ ಜ್ಞಾನವೇ ಕಾರಣವಾಗುವ ಪಕ್ಷದಲ್ಲಿ ಈ ಬಾಹ್ಯಲಕ್ಷಣವೆಲ್ಲವೂ ವ್ಯರ್ಥವೇ ಆಗುವುದಿಲ್ಲವೇ ಎಂದು ಭಾವ.

ಅಥ ವಾ ದುಃಖಶೈಥಿಲ್ಯಂ ವೀಕ್ಷ್ಯ ಲಿಂಗೇ ಕೃತಾ ಮತಿಃ ।
ಕಿಂ ತದೇವಾರ್ಥಸಾಮಾನ್ಯಂ ಛತ್ರಾದಿಷು ನ ಲಕ್ಷ್ಯತೇ ॥೪೯॥

ಅಥವಾ ದುಃಖವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ನೀನು ಈ ವಿರಕ್ತರ ಚಿಹ್ನೆಗಳನ್ನು ಹೊಂದುವುದರಲ್ಲಿ ಬುದ್ಧಿ ಉಳ್ಳವನಾಗಿದ್ದರೆ ರಾಜತಂತ್ರವೇ ಮೊದಲಾದ ಛತ್ರವನ್ನು ಧರಿಸುವ ರಾಜಲಕ್ಷಣದಲ್ಲಿಯೂ ಒಂದು ಬಗೆಯ ದುಃಖನಿವೃತ್ತಿಯು, ದಾರಿದ್ರ್ಯದಿಂದ ಉಂಟಾಗಬಹುದಾದ ದುಃಖಗಳ ಪರಿಹಾರವು ಇದ್ದೇ ಇರುತ್ತದೆ. ಈ ರೀತಿಯಾಗಿ ಎರಡಕ್ಕೂ ದುಃಖ ನಿವೃತ್ತಿ ರೂಪವಾದ ಫಲಸಾದೃಶ್ಯವು ಇದೆ ಎಂದಾಗಲಿಲ್ಲವೇ?

ಆಕಿಂಚನ್ಯೇ ನ ಮೋಕ್ಷೋಽಸ್ತಿ ಕೈಂಚನ್ಯೇ ನಾಸ್ತಿ ಬಂಧನಮ್ ।
ಕೈಂಚನ್ಯೇ ಚೇತರೇ ಚೈವ ಜಂತುರ್ಜ್ಞಾನೇನ ಮುಚ್ಯತೇ ॥೫೦॥

ಮನುಷ್ಯನು ದಾರಿದ್ರ್ಯವನ್ನು ಹೊಂದುವುದರಿಂದಲೇ ಮೋಕ್ಷವು ಲಭಿಸುವುದಿಲ್ಲ. ತನ್ನಲ್ಲಿ ಸಂಪತ್ತು ಇದ್ದ ಮಾತ್ರಕ್ಕೆ ಮೋಕ್ಷವಿಲ್ಲ ಎಂಬ ನಿಯಮವೂ ಇಲ್ಲ. ಸಂಪತ್ತು, ದಾರಿದ್ರ್ಯಗಳು ಮೋಕ್ಷಕ್ಕೆ ಕಾರಣವಾದವುಗಳಲ್ಲ. ಐಶ್ವರ್ಯವಿರಲಿ, ಇಲ್ಲದಿರಲಿ ಜ್ಞಾನದಿಂದಲೇ ಮುಕ್ತಿಯನ್ನು ಹೊಂದುತ್ತಾನೆ.

ತಸ್ಮಾದ್ಧರ್ಮಾರ್ಥಕಾಮೇಷು ತಥಾ ರಾಜ್ಯಪರಿಗ್ರಹೇ ।
ಬಂಧನಾಯತನೇಷ್ವೇಷು ವಿದ್ಧ್ಯಬಂಧೇ ಪದೇ ಸ್ಥಿತಮ್ ॥೫೧॥

ಆದ್ದರಿಂದ ಬಂಧನಕ್ಕೆ ಕಾರಣವಾದ ಧರ್ಮಾರ್ಥಕಾಮಗಳಲ್ಲಿ, ರಾಜ್ಯಭಾರದಲ್ಲಿ ನನ್ನನ್ನು ನಾನು ತೊಡಗಿಸಿಕೊಂಡಿದ್ದರೆ, ನನ್ನನ್ನು ಬಂಧರಹಿತನನ್ನಾಗಿ ನೀನು ತಿಳಿಯಬೇಕು.

ರಾಜ್ಯೈಶ್ವರ್ಯಮಯಃ ಪಾಶಃ ಸ್ನೇಹಾಯತನಬಂಧನಃ ।
ಮೋಕ್ಷಾಶ್ಮನಿಶಿತೇನೇಹ ಛಿನ್ನಸ್ತ್ಯಾಗಾಸಿನಾ ಮಯಾ ॥೫೨॥

ಈ ಜಗತ್ತಿನಲ್ಲಿ ಐಶ್ವರ್ಯ, ಅಧಿಕಾರ, ಭೋಗ, ಸ್ನೇಹರೂಪವಾದ ಬಾಂಧವ್ಯ ಇವೆಲ್ಲವೂ ಪಾಶದಂತೆ ಬಂಧಿಸಲು ಸಮರ್ಥವಾಗಿದ್ದರೂ ಮೋಕ್ಷವೆಂಬ ತೀಕ್ಷ್ಣವಾದ ಸಾಣೆಯಲ್ಲಿ ತಿಕ್ಕಿತೀಡಿದ ತ್ಯಾಗಶಕ್ತಿಯಿಂದ ಆ ಪಾಶವನ್ನು ನಾನು ಸುಲಭವಾಗಿ ಕತ್ತರಿಸಿಕೊಂಡಿರುತ್ತೇನೆ.

ಸೋಽಹಮೇವಂಗತೋ ಮುಕ್ತೋ ಜಾತಾಸ್ಥಸ್ತ್ವಯಿ ಭಿಕ್ಷುಕಿ ।
ಅಯಥಾರ್ಥೋ ಹಿ ತೇ ವರ್ಣೋ ವಕ್ಷ್ಯಾಮಿ ಶೃಣು ತನ್ಮಮ ॥೫೩॥

ಇಂತಹ ಸ್ಥಿತಿಯಲ್ಲಿ ಮುಕ್ತನಾಗಿರುವ ನಾನು ನಿನ್ನ ಸ್ಥಿತಿಯನ್ನು ಕಂಡು ಕನಿಕರ ಹೊಂದಿರುತ್ತೇನೆ. ಭಿಕ್ಷುಕಿಯೇ, ನಿನ್ನ ರೂಪವು ನಿನಗೆ ಅನುಗುಣವಾಗಿಲ್ಲ. ಅದರ ತತ್ತ್ವವನ್ನು ತಿಳಿಸುತ್ತೇನೆ, ಕೇಳು.

ಸೌಕುಮಾರ್ಯಂ ತಥಾ ರೂಪಂ ವಪುರಗ್ರ್ಯಂ ತಥಾ ವಯಃ ।
ನಚೈತಾನಿ ಸಮಸ್ತಾನಿ ನಿಯಮಶ್ಚೇತಿ ಸಂಶಯಃ ॥೫೪॥

ಸೌಕುಮಾರ್ಯ, ಸೌಂದರ್ಯ, ವಯಸ್ಸು, ರೂಪ ಇವೆಲ್ಲವೂ ನಿನಗೆ ಸಂಬಂಧಿಸಿದವುಗಳು. ಹಿಂದೆ ಇದ್ದ ವೃದ್ಧಭಿಕ್ಷುಕಿ ವ್ರತನಿಯಮವು ನಿನ್ನಲ್ಲೀಗ ಇರುವುದಿಲ್ಲ.

ಸಂನ್ಯಾಸಿನಿಗೆ ಮಾಯಾರೂಪವು ಅಪ್ರಾಮಾಣಿಕವಾದುದು ಎಂಬ ಕಾರಣದಿಂದ ನಿನ್ನ ವಿಷಯದಲ್ಲಿ ನೀನು ಸಜ್ಜನನೋ, ಅಸಜ್ಜನನೋ? ಎಂಬ ಸಂಶಯವು ನನಗೆ ಉಂಟಾಗಿದೆ.

ಯಚ್ಚಾಪ್ಯನನುರೂಪಂ ತೇ ಲಿಂಗಸ್ಯಾಸ್ಯ ವಿಚೇಷ್ಟಿತಮ್ ।
ಮುಕ್ತೋಯಂ ಸ್ಯಾನ್ನ ವೇತ್ಯಸ್ಮಾದ್ಧರ್ಷಿತೋ ಮತ್ಪರಿಗ್ರಹಃ ॥೫೫॥

ಇಂತಹ ಈ ಭಿಕ್ಷುಕಿಯ ವೇಷದಲ್ಲಿ ನಡೆದ ಈ ವ್ಯಾಪಾರಗಳು ಆ ಸಂನ್ಯಾಸಿನಿಯ ವೇಷಕ್ಕೆ ಯೋಗ್ಯವಾದವುಗಳಲ್ಲ. ನನ್ನನ್ನು ವಿಷಯಸಂಗದಿಂದ ಮುಕ್ತನೋ, ಅಲ್ಲವೋ ಎಂದು ತಿಳಿಯುವ ಭಾವನೆಯಿಂದ ನನ್ನ ಒಳಗೆ ನೀನು ಪ್ರವೇಶಿಸಿಕೊಂಡಿರುವಂತಹ ವ್ಯಾಪಾರವೂ ಯೋಗ್ಯವಾದುದಲ್ಲ.

ನ ಚ ಕಾಮಸಮಾಯುಕ್ತೇ ಮುಕ್ತೇಽಪ್ಯಸ್ತಿ ತ್ರಿದಂಡಕಮ್ ।
ನ ರಕ್ಷ್ಯತೇ ತ್ವಯಾ ಚೇದಂ ನ ಮುಕ್ತಸ್ಯಾಸ್ತಿ ಗೋಪನಾ ॥೫೬॥

ಕಾಮಾದಿಗಳಿಂದ ಕೂಡಿದ ವ್ಯಕ್ತಿಯು ತ್ರಿದಂಡಗಳನ್ನು ಧರಿಸಿದ್ದರೂ ಮುಕ್ತಿಗೆ ಆ ತ್ರಿದಂಡಗಳು ಸಹಕಾರಿಯಾಗವು. ತ್ರಿದಂಡದ ಉದ್ದೇಶವನ್ನು ನೀನು ಸರಿಯಾಗಿ ರಕ್ಷಿಸಿಕೊಳ್ಳುತ್ತಿಲ್ಲ. ಮುಕ್ತನಾದ ಚೇತನನು ಎಂದಿಗೂ ತನ್ನನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸುವುದಿಲ್ಲ. ನೀನು ನಿನ್ನ ನಿಜರೂಪವನ್ನು ಮುಚ್ಚಿಟ್ಟುಕೊಂಡು ವೇಷಾಂತರದಿಂದ ನನ್ನಲ್ಲಿ ಪ್ರವೇಶಿಸಿರುವುದು ಮುಕ್ತಳಾದ ನಿನಗೆ ಲಕ್ಷಣವೆನಿಸುವುದಿಲ್ಲ.

ಮತ್ಪಕ್ಷಸಂಶ್ರಯಾಚ್ಚಾಯಂ ಶೃಣು ಯಸ್ತೇ ವ್ಯತಿಕ್ರಮಃ ।
ಆಶ್ರಯಂತ್ಯಾಃ ಸ್ವಭಾವೇನ ಮಮ ಪೂರ್ವಪರಿಗ್ರಹಮ್ ॥೫೭॥

ನೀನು ನನ್ನ ಶರೀರವನ್ನು ರಹಸ್ಯವಾಗಿ ನಿನ್ನ ನಿಜಸ್ಥಿತಿಯನ್ನು ಉಲ್ಲಂಘಿಸಿ ಪ್ರವೇಶಿಸಿರುವೆ. ನಿನ್ನಲ್ಲಿರುವ ಬುದ್ಧಿಯ ದೋಷದಿಂದ ನನ್ನ ಶರೀರವನ್ನು ಪ್ರವೇಶಿಸಿ ನನ್ನ ದೇಹದಲ್ಲಿ ಕಾಮಾದಿಗಳಿವೆಯೋ ಎಂದು ಪರೀಕ್ಷಿಸುತ್ತಿರುವೆ. ನಾನು ಹಿಂದಿನ ಸ್ಥಿತಿಯಲ್ಲಿ ಅನುರಕ್ತನಾಗಿದ್ದರೂ ಈಗ ಈ ದೇಹದಲ್ಲಿ ವಿರಕ್ತನಾಗಿಯೇ ಇದ್ದೇನೆ.

ಪ್ರವೇಶಸ್ತೇ ಕೃತಃ ಕೇನ ಮಮ ರಾಷ್ಟ್ರೇ ಪುರೇ ತಥಾ ।
ಕಸ್ಯ ವಾ ಸನ್ನಿಸರ್ಗಾತ್ತ್ವಂ ಪ್ರವಿಷ್ಟಾ ಹೃದಯಂ ಮಮ ॥೫೮॥

ನೀನು ಯಾವ ಕಾರಣದಿಂದ ನನ್ನ ರಾಜ್ಯದಲ್ಲಿ, ನನ್ನ ಪಟ್ಟಣದಲ್ಲಿ ಪ್ರವೇಶಿಸಿರುವಿ? ನನ್ನ ಸಂಬಂಧದಿಂದ ನೀನು ನನ್ನ ಮನಸ್ಸಿನಲ್ಲಿ ಏಕೆ ಪ್ರವೇಶಿಸಿರುವಿ?

ವರ್ಣಪ್ರವರಮುಖ್ಯಾಸಿ ಬ್ರಾಹ್ಮಣೇ ಕ್ಷತ್ರಿಯೋ ಹ್ಯಹಮ್ ।
ನಾವಯೋರೇಕಯೋಗೋಽಸ್ತಿ ಮಾ ಕೃಥಾ ವರ್ಣಸಂಕರಮ್ ॥೫೯॥

ನೀನಾದರೂ ವರ್ಣಗಳಲ್ಲಿ ಶ್ರೇಷ್ಠವೆನಿಸಿದ ಬ್ರಾಹ್ಮಣ ಕುಲದ ಸ್ತ್ರೀಯಾಗಿರುವಿ. ನಾನಾದರೂ ಕ್ಷತ್ರಿಯನಾಗಿರುವೆ. ನಮ್ಮಿಬ್ಬರಿಗೆ ಯಾವ ವಿಧದಲ್ಲಿಯೂ ಸಂಬಂಧ ಇರುವುದಿಲ್ಲ. ಆದ್ದರಿಂದ ನೀನು ವರ್ಣಸಂಕರವನ್ನು ಮಾಡಬಾರದು.

ವರ್ತಸೇ ಮೋಕ್ಷಧರ್ಮೇಷು ಗಾರ್ಹಸ್ಥ್ಯೇ ತ್ವಹಮಾಶ್ರಮೇ ।
ಅಯಂ ಚಾಪಿ ಸುಕಷ್ಟಸ್ತೇ ದ್ವಿತೀಯೋಽಽಶ್ರಮಸಂಕರಃ ॥೬೦॥

ನೀನು ಮೋಕ್ಷಧರ್ಮವನ್ನು ಆಶ್ರಯಿಸಿದವಳು. ನಾನು ಗೃಹಸ್ಥಾಶ್ರಮನಾಗಿ ಇರುತ್ತೇನೆ. ಆದ್ದರಿಂದ ನಿನ್ನಿಂದ ಅತ್ಯಂತ ದಾರುಣವಾದ ಆಶ್ರಮಗಳ ಸಾಂಕರ್ಯವು ಮಾಡಲ್ಪಟ್ಟಿದೆ.

ಸಗೋತ್ರಾಂ ವಾಸಗೋತ್ರಾಂ ವಾ ನ ವೇದ ತ್ವಾಂ ನ ವೇತ್ಥ ಮಾಮ್ ।
ಸಗೋತ್ರಮಾವಿಶಂತ್ಯಾಸ್ತೇ ತೃತೀಯೋ ಗೋತ್ರಸಂಕರಃ ॥೬೧॥

ಇಷ್ಟೇ ಅಲ್ಲದೆ, ನೀನು ಸಗೋತ್ರಳೋ, ಭಿನ್ನ ಗೋತ್ರಳೋ ಅದನ್ನೂ ನಾನು ಕಾಣದಾಗಿದ್ದೇನೆ. ನೀನು ನನ್ನನ್ನು ತಿಳಿದವಳಲ್ಲ. ಒಂದು ವೇಳೆ ನೀನು ಸಗೋತ್ರಳೇ ಆಗಿದ್ದಲ್ಲಿ ಅದರಿಂದ ನಿನಗೆ ಮೂರನೆಯದ್ದಾದ ಗೋತ್ರಸಾಂಕರ್ಯದ ದೋಷವೂ ಬಂದಂತಾಗುತ್ತದೆ.

ಅಥ ಜೀವತಿ ತೇ ಭರ್ತಾ ಪ್ರೋಷಿತೋಽಪ್ಯಥ ವಾ ಕ್ವಚಿತ್ ।
ಅಗಮ್ಯಾ ಪರಭಾರ್ಯೇತಿ ಚತುರ್ಥೋ ಧರ್ಮಸಂಕರಃ ॥೬೨॥

ಇಷ್ಟೇ ಅಲ್ಲದೆ ನಿನ್ನ ಪತಿಯು ಜೀವಿಸಿರುತ್ತಾನೋ ಅಥವಾ ನಿನ್ನನ್ನು ಬಿಟ್ಟು ವಿರಕ್ತನಾಗಿ ಹೋಗಿರುತ್ತಾನೋ ಅದೂ ನನಗೆ ತಿಳಿಯದು. ಪರಸ್ತ್ರೀಯ ಸ್ಪರ್ಶವು ದೋಷಕ್ಕೆ ಕಾರಣವಾದುದರಿಂದ ನೀನು ನನ್ನ ಹೃದಯವನ್ನು ಪ್ರವೇಶಿಸಿದ ಕಾರಣದಿಂದ ನಾಲ್ಕನೆಯದ್ದಾದ ಧರ್ಮಸಾಂಕರ್ಯವೂ ನಿನ್ನಿಂದ ಮಾಡಲ್ಪಟ್ಟಿದೆ.

ಸಾ ತ್ವಮೇತಾನ್ಯಕಾರ್ಯಾಣಿ ಕಾರ್ಯಾಪೇಕ್ಷಾ ವ್ಯವಸ್ಯಸಿ ।
ಅವಿಜ್ಞಾನೇನ ವಾ ಯುಕ್ತಾ ಮಿಥ್ಯಾಜ್ಞಾನೇನ ವಾ ಪುನಃ ॥೬೩॥

ಹೀಗಿರುವಾಗ ಯಾವುದನ್ನೂ ತಿಳಿಯಬೇಕು ಎಂಬ ಇಂತಹ ಅಕಾರ್ಯವನ್ನು ನೀನು ಮಾಡಬಹುದೆ? ಒಂದು ವೇಳೆ ನೀನು ಅಜ್ಞಾನದಿಂದಾಗಲಿ, ಮಿಥ್ಯಾಜ್ಞಾನದಿಂದಾಗಲಿ ಇಂತಹ ಅಸತ್ಕರ್ಮವನ್ನು ಮಾಡಿರುತ್ತೀಯೋ?

ಅಥ ವಾಪಿ ಸ್ವತಂತ್ರಾಸಿ ಸ್ವದೋಷೇಣೇಹ ಕೇನಚಿತ್ ।
ಯದಿ ಕಿಂಚಿಚ್ಛ್ರುತಂ ತೇಸ್ತಿ ಸರ್ವಂ ಕೃತಮನರ್ಥಕಮ್ ॥೬೪॥

ಅಥವಾ ನಿನ್ನಲ್ಲಿ ಯಾವುದಾದರೂ ಇರುವ ನಿನ್ನದ್ದೇ ಆದ ದೋಷದಿಂದಾಗಿ ಸ್ವತಂತ್ರವಾಗಿ ವರ್ತಿಸಿರುತ್ತೀಯಾ? ಹಾಗಿದ್ದಲ್ಲಿ ನೀನು ಅಲ್ಪಸ್ವಲ್ಪ ಶಾಸ್ತ್ರಶ್ರವಣ-ಗಳನ್ನೇನಾದರೂ ಮಾಡಿದ್ದಲ್ಲಿ ಅದೆಲ್ಲವೂ ಈ ನಿನ್ನ ವ್ಯಾಪಾರದಿಂದ ವ್ಯರ್ಥವೇ ಆದಂತಾಗುತ್ತದೆ.

ಇದಮನ್ಯತ್ ಚತುರ್ಥಂ ತೇ ಭಾವಸ್ಪರ್ಶವಿಘಾತಕಮ್ ।
ದುಷ್ಟಾಯಾ ಲಕ್ಷ್ಯತೇ ಲಿಂಗಂ ಪ್ರವಕ್ತವ್ಯಂ ಪ್ರಕಾಶಿತಮ್ ॥೬೫॥

ಇಷ್ಟೇ ಅಲ್ಲದೆ ನಾಲ್ಕನೆಯದ್ದಾದ ಇನ್ನೊಂದು ನೀನು ಮಾಡಿದ ಅಪರಾಧ- ನನ್ನ ಮನಸ್ಸಿನ ಜೊತೆಗೆ ಸೇರಿ ಅಪರಾಧವನ್ನು ಮಾಡಿರುವಿ. ನಿನ್ನ ಹೃದಯದಲ್ಲಿರುವಂತಹ ದೋಷಲಿಂಗವನ್ನು ನೀನಾಗಿಯೇ ಪ್ರಕಟಪಡಿಸಿದಂತಾಯಿತು.

ನ ಮಯ್ಯೇವಾಭಿಸಂಧಿಸ್ತೇ ಜಯೈಷಿಣ್ಯಾ ಜಯೇ ಕೃತಃ ।
ಯೇಯಂ ಮತ್ಪರಿಷತ್ ಕೃತ್ಸ್ನಾ ಜೇತುಮಿಚ್ಛಸಿ ತಾಮಪಿ ॥೬೬॥

ಜಯವನ್ನು ಅಪೇಕ್ಷಿಸಿರುವ ನೀನು ನನ್ನನ್ನು ಜಯಿಸುವ ಪ್ರಯತ್ನದಿಂದ ಆಗಮಿಸಿ ನನ್ನ ಬಳಿ ಇರುವ ವಿದ್ವತ್ ಪರಿಷತ್ತನ್ನೆಲ್ಲ ಜಯಿಸಬೇಕೆಂದು ಇಚ್ಛಿಸುತ್ತಿರುವಿ.

ತಥಾ ಹ್ಯೇವಂ ಪುನಶ್ಚ ತ್ವಂ ದೃಷ್ಟಿಂ ಸ್ವಾಂ ಪ್ರತಿಮುಂಚಸಿ ।
ಮತ್ಕ್ಷಪ್ರತಿಘಾತಾಯ ಸ್ವಪಕ್ಷೋದ್ಭಾವನಾಯ ಚ ॥೬೭॥

ಇಷ್ಟೇ ಅಲ್ಲದೆ ನಿನ್ನ ಸ್ತ್ರೀ ಸಹಜವಾದ ದೃಷ್ಟಿಯನ್ನು ಜಯದ ಅಪೇಕ್ಷೆಯಿಂದ ನನ್ನ

ನೀನು ಯಾವ ಕಾರಣದಿಂದ ನನ್ನ ರಾಜ್ಯದಲ್ಲಿ, ನನ್ನ ಪಟ್ಟಣದಲ್ಲಿ ಪ್ರವೇಶಿಸಿರುವಿ? ನನ್ನ ಸಂಬಂಧದಿಂದ ನೀನು ನನ್ನ ಮನಸ್ಸಿನಲ್ಲಿ ಏಕೆ ಪ್ರವೇಶಿಸಿರುವಿ?

ವರ್ಣಪ್ರವರಮುಖ್ಯಾಸಿ ಬ್ರಾಹ್ಮಣೇ ಕ್ಷತ್ರಿಯೋ ಹ್ಯಹಮ್ ।
ನಾವಯೋರೇಕಯೋಗೋಽಸ್ತಿ ಮಾ ಕೃಥಾ ವರ್ಣಸಂಕರಮ್ ॥೫೯॥

ನೀನಾದರೂ ವರ್ಣಗಳಲ್ಲಿ ಶ್ರೇಷ್ಠವೆನಿಸಿದ ಬ್ರಾಹ್ಮಣ ಕುಲದ ಸ್ತ್ರೀಯಾಗಿರುವಿ. ನಾನಾದರೂ ಕ್ಷತ್ರಿಯನಾಗಿರುವೆ. ನಮ್ಮಿಬ್ಬರಿಗೆ ಯಾವ ವಿಧದಲ್ಲಿಯೂ ಸಂಬಂಧ ಇರುವುದಿಲ್ಲ. ಆದ್ದರಿಂದ ನೀನು ವರ್ಣಸಂಕರವನ್ನು ಮಾಡಬಾರದು.

ವರ್ತಸೇ ಮೋಕ್ಷಧರ್ಮೇಷು ಗಾರ್ಹಸ್ಥ್ಯೇ ತ್ವಹಮಾಶ್ರಮೇ ।
ಅಯಂ ಚಾಪಿ ಸುಕಷ್ಟಸ್ತೇ ದ್ವಿತೀಯೋಽಽಶ್ರಮಸಂಕರಃ ॥೬೦॥

ನೀನು ಮೋಕ್ಷಧರ್ಮವನ್ನು ಆಶ್ರಯಿಸಿದವಳು. ನಾನು ಗೃಹಸ್ಥಾಶ್ರಮನಾಗಿ ಇರುತ್ತೇನೆ. ಆದ್ದರಿಂದ ನಿನ್ನಿಂದ ಅತ್ಯಂತ ದಾರುಣವಾದ ಆಶ್ರಮಗಳ ಸಾಂಕರ್ಯವು ಮಾಡಲ್ಪಟ್ಟಿದೆ.

ಸಗೋತ್ರಾಂ ವಾಸಗೋತ್ರಾಂ ವಾ ನ ವೇದ ತ್ವಾಂ ನ ವೇತ್ಥ ಮಾಮ್ ।
ಸಗೋತ್ರಮಾವಿಶಂತ್ಯಾಸ್ತೇ ತೃತೀಯೋ ಗೋತ್ರಸಂಕರಃ ॥೬೧॥

ಇಷ್ಟೇ ಅಲ್ಲದೆ, ನೀನು ಸಗೋತ್ರಳೋ, ಭಿನ್ನ ಗೋತ್ರಳೋ ಅದನ್ನೂ ನಾನು ಕಾಣದಾಗಿದ್ದೇನೆ. ನೀನು ನನ್ನನ್ನು ತಿಳಿದವಳಲ್ಲ. ಒಂದು ವೇಳೆ ನೀನು ಸಗೋತ್ರಳೇ ಆಗಿದ್ದಲ್ಲಿ ಅದರಿಂದ ನಿನಗೆ ಮೂರನೆಯದ್ದಾದ ಗೋತ್ರಸಾಂಕರ್ಯದ ದೋಷವೂ ಬಂದಂತಾಗುತ್ತದೆ.

ಅಥ ಜೀವತಿ ತೇ ಭರ್ತಾ ಪ್ರೋಷಿತೋಽಪ್ಯಥ ವಾ ಕ್ವಚಿತ್ ।
ಅಗಮ್ಯಾ ಪರಭಾರ್ಯೇತಿ ಚತುರ್ಥೋ ಧರ್ಮಸಂಕರಃ ॥೬೨॥

ಇಷ್ಟೇ ಅಲ್ಲದೆ ನಿನ್ನ ಪತಿಯು ಜೀವಿಸಿರುತ್ತಾನೋ ಅಥವಾ ನಿನ್ನನ್ನು ಬಿಟ್ಟು ವಿರಕ್ತನಾಗಿ ಹೋಗಿರುತ್ತಾನೋ ಅದೂ ನನಗೆ ತಿಳಿಯದು. ಪರಸ್ತ್ರೀಯ ಸ್ಪರ್ಶವು ದೋಷಕ್ಕೆ ಕಾರಣವಾದುದರಿಂದ ನೀನು ನನ್ನ ಹೃದಯವನ್ನು ಪ್ರವೇಶಿಸಿದ ಕಾರಣದಿಂದ ನಾಲ್ಕನೆಯದ್ದಾದ ಧರ್ಮಸಾಂಕರ್ಯವೂ ನಿನ್ನಿಂದ ಮಾಡಲ್ಪಟ್ಟಿದೆ.

ಸಾ ತ್ವಮೇತಾನ್ಯಕಾರ್ಯಾಣಿ ಕಾರ್ಯಾಪೇಕ್ಷಾ ವ್ಯವಸ್ಯಸಿ ।
ಅವಿಜ್ಞಾನೇನ ವಾ ಯುಕ್ತಾ ಮಿಥ್ಯಾಜ್ಞಾನೇನ ವಾ ಪುನಃ ॥೬೩॥

ಹೀಗಿರುವಾಗ ಯಾವುದನ್ನೂ ತಿಳಿಯಬೇಕು ಎಂಬ ಇಂತಹ ಅಕಾರ್ಯವನ್ನು ನೀನು ಮಾಡಬಹುದೆ? ಒಂದು ವೇಳೆ ನೀನು ಅಜ್ಞಾನದಿಂದಾಗಲಿ, ಮಿಥ್ಯಾಜ್ಞಾನದಿಂದಾಗಲಿ ಇಂತಹ ಅಸತ್ಕರ್ಮವನ್ನು ಮಾಡಿರುತ್ತೀಯೋ?

ಅಥ ವಾಪಿ ಸ್ವತಂತ್ರಾಸಿ ಸ್ವದೋಷೇಣೇಹ ಕೇನಚಿತ್ ।
ಯದಿ ಕಿಂಚಿಚ್ಛ್ರುತಂ ತೇಸ್ತಿ ಸರ್ವಂ ಕೃತಮನರ್ಥಕಮ್ ॥೬೪॥

ಅಥವಾ ನಿನ್ನಲ್ಲಿ ಯಾವುದಾದರೂ ಇರುವ ನಿನ್ನದ್ದೇ ಆದ ದೋಷದಿಂದಾಗಿ ಸ್ವತಂತ್ರವಾಗಿ ವರ್ತಿಸಿರುತ್ತೀಯಾ? ಹಾಗಿದ್ದಲ್ಲಿ ನೀನು ಅಲ್ಪಸ್ವಲ್ಪ ಶಾಸ್ತ್ರಶ್ರವಣ-ಗಳನ್ನೇನಾದರೂ ಮಾಡಿದ್ದಲ್ಲಿ ಅದೆಲ್ಲವೂ ಈ ನಿನ್ನ ವ್ಯಾಪಾರದಿಂದ ವ್ಯರ್ಥವೇ ಆದಂತಾಗುತ್ತದೆ.

ಇದಮನ್ಯತ್ ಚತುರ್ಥಂ ತೇ ಭಾವಸ್ಪರ್ಶವಿಘಾತಕಮ್ ।
ದುಷ್ಟಾಯಾ ಲಕ್ಷ್ಯತೇ ಲಿಂಗಂ ಪ್ರವಕ್ತವ್ಯಂ ಪ್ರಕಾಶಿತಮ್ ॥೬೫॥

ಇಷ್ಟೇ ಅಲ್ಲದೆ ನಾಲ್ಕನೆಯದ್ದಾದ ಇನ್ನೊಂದು ನೀನು ಮಾಡಿದ ಅಪರಾಧ- ನನ್ನ ಮನಸ್ಸಿನ ಜೊತೆಗೆ ಸೇರಿ ಅಪರಾಧವನ್ನು ಮಾಡಿರುವಿ. ನಿನ್ನ ಹೃದಯದಲ್ಲಿರುವಂತಹ ದೋಷಲಿಂಗವನ್ನು ನೀನಾಗಿಯೇ ಪ್ರಕಟಪಡಿಸಿದಂತಾಯಿತು.

ನ ಮಯ್ಯೇವಾಭಿಸಂಧಿಸ್ತೇ ಜಯೈಷಿಣ್ಯಾ ಜಯೇ ಕೃತಃ ।
ಯೇಯಂ ಮತ್ಪರಿಷತ್ ಕೃತ್ಸ್ನಾ ಜೇತುಮಿಚ್ಛಸಿ ತಾಮಪಿ ॥೬೬॥

ಜಯವನ್ನು ಅಪೇಕ್ಷಿಸಿರುವ ನೀನು ನನ್ನನ್ನು ಜಯಿಸುವ ಪ್ರಯತ್ನದಿಂದ ಆಗಮಿಸಿ ನನ್ನ ಬಳಿ ಇರುವ ವಿದ್ವತ್ ಪರಿಷತ್ತನ್ನೆಲ್ಲ ಜಯಿಸಬೇಕೆಂದು ಇಚ್ಛಿಸುತ್ತಿರುವಿ.

ತಥಾ ಹ್ಯೇವಂ ಪುನಶ್ಚ ತ್ವಂ ದೃಷ್ಟಿಂ ಸ್ವಾಂ ಪ್ರತಿಮುಂಚಸಿ ।
ಮತ್ಕ್ಷಪ್ರತಿಘಾತಾಯ ಸ್ವಪಕ್ಷೋದ್ಭಾವನಾಯ ಚ ॥೬೭॥

ಇಷ್ಟೇ ಅಲ್ಲದೆ ನಿನ್ನ ಸ್ತ್ರೀ ಸಹಜವಾದ ದೃಷ್ಟಿಯನ್ನು ಜಯದ ಅಪೇಕ್ಷೆಯಿಂದ ನನ್ನ

ಪಕ್ಷದವರನ್ನೆಲ್ಲ ಸೋಲಿಸಬೇಕೆಂಬ ಅಭಿಪ್ರಾಯದಿಂದ ಬೀಗುತ್ತಿರುವಿ. ನಿನ್ನ ಪಕ್ಷದ ಜಯದ ಆಕಾಂಕ್ಷೆಯಲ್ಲಿ ಇಂತಹ ತಪ್ಪುಗಳನ್ನು ಮಾಡುತ್ತಿರುವಿ.

ಸಾ ಸ್ವೇನಾಮರ್ಷಜೇನ ತ್ವಮೃದ್ಧಿಮೋಹೇನ ಮೋಹಿತಾ ।
ಭೂಯಃ ಸೃಜಸಿ ಯೋಗಾಸ್ತ್ರಂ ವಿಷಾಮೃತಮಿವೈಕಧಾ ॥೬೮॥

ಹೀಗೆ ಅಸೂಯೆಯಿಂದಲೂ, ಯೋಗಸಿದ್ಧಿಯಲ್ಲಿ ನಿನಗಿರುವ ಶ್ರೇಷ್ಠತೆಯ ಮೋಹದಿಂದಲೂ ಮರುಳಾದ ನೀನು ವಿಷವನ್ನು, ಅಮೃತವನ್ನು ಮೇಲನ ಮಾಡಿದಂತೆ ನಿನ್ನ ಬುದ್ಧಿಯನ್ನು ನನ್ನ ಬುದ್ಧಿಯ ಜೊತೆಗೆ ಸೇರಿಸುತ್ತಿರುವಿ.

ಇಚ್ಛತೋರ್ಹಿ ದ್ವಯೋರ್ಲಾಭಃ ಸ್ತ್ರೀಪುಂಸೋರಮೃತೋಪಮಃ ।
ಅಲಾಭಶಾಪ್ಯರಕ್ತಸ್ಯ ಸೋಽತ್ರ ದೋಷೋ ವಿಷೋಪಮಃ ॥೬೯॥

ಪರಸ್ಪರ ಪ್ರೀತಿಯನ್ನು ಹೊಂದಿರುವ ಸ್ತ್ರೀ-ಪುರುಷರ ಮಿಲನವು ಅಮೃತಕ್ಕೆ ಸಮಾನವು. ಆದರೆ ಸ್ತ್ರೀಯರಿಗೆ ಆಸಕ್ತಿಯುಳ್ಳ ಮನುಷ್ಯನು ದೊರೆಯದಿರುವುದು ವಿಷಕ್ಕೆ ಸಮಾನವು. ನೀನು ವಿಷಕ್ಕೆ ಸಮಾನವಾದ ದೋಷವನ್ನು ಇಲ್ಲಿ ಹೊಂದಿರುತ್ತಿ.

ಮಾ ಸ್ಮಾಕ್ಷೀಃ ಸಾಧು ಜಾನೀಹಿ ಸ್ವಶಾಸ್ತ್ರಮನುಪಾಲಯ ।
ಕೃತೇಯಂ ಹಿ ವಿಜಿಜ್ಞಾಸಾ ಮುಕ್ತೋ ನೇತಿ ತ್ವಯಾ ಮಮ ।
ಏತತ್ ಸರ್ವಂ ಪ್ರತಿಚ್ಛನ್ನಂ ಮಯಿ ನಾರ್ಹಸಿ ಗೂಹಿತುಮ್ ॥೭೦॥

ನೀನು ನನ್ನ ಮನಸ್ಸನ್ನು ಮುಟ್ಟಬೇಡ. ಚೆನ್ನಾಗಿ ತಿಳಿದುಕೊ, ನಿನ್ನ ಶಾಸ್ತ್ರವನ್ನು ಸಂರಕ್ಷಿಸು. ನೀನು ಇವನು ಮುಕ್ತನೋ, ಅಲ್ಲವೋ ಎಂದು ನನ್ನ ನಿಜಸ್ಥಿತಿಯನ್ನು ತಿಳಿಯಬೇಕೆಂಬ ಜಿಜ್ಞಾಸೆಯನ್ನು ಈಗ ಮಾಡಿರುತ್ತಿ. ಇಂತಹ ಗೂಢಚಾರದ ಪ್ರಯತ್ನಗಳನ್ನು ನೀನು ನನ್ನಲ್ಲಿ ಎಂದಿಗೂ ಮಾಡಲು ಯೋಗ್ಯಳಾಗಿರುವುದಿಲ್ಲ.

ಸಾ ಯದಿ ತ್ವಂ ಸ್ವಕಾರ್ಯೇಣ ಯದ್ಯನ್ಯಸ್ಯ ಮಹೀಪತೇಃ ।
ತತ್ತ್ವಂ ಸತ್ರಪ್ರತಿಚ್ಛನ್ನಾ ಮಯಿ ನಾರ್ಹಸಿ ಗೂಹಿತುಮ್ ॥೭೧॥

ನೀನು ನಿನ್ನ ಪ್ರಯೋಜನಕ್ಕಾಗಲಿ, ಬೇರೊಬ್ಬ ರಾಜನ ಪ್ರಯೋಜನಕ್ಕಾಗಲಿ ವೇಷವನ್ನು ಬದಲಾಯಿಸಿಕೊಂಡು, ನೀನು ನಿನ್ನ ನಿಜಸ್ಥಿತಿಯನ್ನು ಮುಚ್ಚಿಟ್ಟುಕೊಂಡು ನನ್ನಲ್ಲಿ ವ್ಯವಹಾರ ಮಾಡಬಾರದಾಗಿತ್ತು.

ನ ರಾಜಾನಂ ಮೃಷಾ ಗಚ್ಛೇನ್ನ ದ್ವಿಜಾತಿಂ ಕಥಂಚನ ।
ನ ಸ್ತ್ರಿಯಂ ಸ್ತ್ರೀಗುಣೋಪೇತಾಂ ಹನ್ಯುರ್ಹ್ಯೇತೇ ಮೃಷಾಗತಾಃ ॥೭೨॥

ಎಂದಿಗೂ ರಾಜರ ವಿಷಯದಲ್ಲಿ ಮೋಸಮಾರ್ಗದಿಂದ ನಡೆಯಬಾರದು. ವಿಶೇಷವಾಗಿ ಬ್ರಾಹ್ಮಣರಲ್ಲಿ ಹಾಗೆ ನಡೆಯಲೇಬಾರದು. ಸತಿಧರ್ಮವುಳ್ಳ ಸ್ತ್ರೀಯರಲ್ಲಿಯೂ ಕಳ್ಳತನದಿಂದ ವರ್ತಿಸಬಾರದು. ಈ ಮೂವರ ವಿಷಯದಲ್ಲಿ ಮಾಡುವ ಕಪಟತನವು ಕಪಟಿಗಳನ್ನು ನಾಶಮಾಡುತ್ತದೆ.

ರಾಜ್ಞಾಂ ಹಿ ಬಲಮೈಶ್ವರ್ಯಂ ಬ್ರಹ್ಮ ಬ್ರಹ್ಮವಿದಾಂ ಬಲಮ್ ।
ರೂಪಯೌವನಸೌಭಾಗ್ಯಂ ಸ್ತ್ರೀಣಾಂ ಬಲಮನುತ್ತಮಮ್ ॥೭೩॥

ರಾಜರಿಗೆ ಅಧಿಕಾರವೇ ಬಲವು. ಬ್ರಾಹ್ಮಣರಿಗೆ ವೇದವು ಬಲವು. ಸ್ತ್ರೀಯರಿಗೆ ರೂಪ-ಯೌವನ-ಸೌಭಾಗ್ಯಗಳೇ ಶ್ರೇಷ್ಠವಾದ ಬಲವು.

ಅತ ಏತೈರ್ಬಲೈರೇತೇ ಬಲಿನಃ ಸ್ವಾರ್ಥಮಿಚ್ಛತಾ ।
ಆರ್ಜವೇನಾಭಿಗಂತವ್ಯಾ ವಿನಾಶಾಯ ಹ್ಯನಾರ್ಜವಮ್ ॥೭೪॥

ಆದ್ದರಿಂದ ತಮ್ಮ ಶ್ರೇಯಸ್ಸನ್ನು ಬಯಸುವವರು ಈ ಮೂರು ವಿಧವಾದ ಬಲವುಳ್ಳ ಮೂವರನ್ನು ಋಜುಮಾರ್ಗದಿಂದಲೇ ಸಮೀಪಿಸಬೇಕು. ಅವರಲ್ಲಿ ಮಾಡುವ ಕಪಟತನವು ಅನರ್ಥಕ್ಕೆ ಕಾರಣವಾಗುತ್ತದೆ.

ಸಾ ತ್ವಂ ಜಾತಿಂ ಶ್ರುತಂ ವೃತ್ತಂ ಭಾವಂ ಪ್ರಕೃತಿಮಾತ್ಮನಃ ।
ಕೃತ್ಯಮಾಗಮನೇ ಚೈವ ವಕ್ತುಮರ್ಹಸಿ ತತ್ತ್ವತಃ ॥೭೫॥

ಆದ್ದರಿಂದ ನೀನು ಮೊದಲೇ ನಿನ್ನ ಜಾತಿ, ನಿನ್ನ ವಿದ್ಯೆ, ನಿನ್ನ ಆಚಾರ, ನಿನ್ನ ಅಭಿಪ್ರಾಯ, ನಿನ್ನ ನಡತೆ, ನೀನು ಇಲ್ಲಿಗೆ ಬಂದಿರುವ ಉದ್ದೇಶ ಇವುಗಳನ್ನೆಲ್ಲ ಯಥಾರ್ಥವಾಗಿ ನನಗೆ ಹೇಳಲು ಅರ್ಹಳಾಗಿರುತ್ತಿ.

ಇತ್ಯೇತೈರಸುಖೈರ್ವಾಕ್ಯೈರಯುಕ್ತೈರಸಮಂಜಸೈಃ ।
ಪ್ರತ್ಯಾದಿಷ್ಟಾ ನರೇಂದ್ರೇಣ ಸುಲಭಾ ನ ವ್ಯಕಂಪತ ॥೭೬॥

ಧರ್ಮರಾಜನೇ, ಹೀಗೆ ಜನಕನು ಅಹಿತವಾಗಿಯೂ, ಅಯೋಗ್ಯವಾಗಿಯೂ, ತಪ್ಪಾಗಿಯೂ ತೋರುವ ಮಾತುಗಳನ್ನಾಡಿ ಆಕೆಯನ್ನು ನಿರಾಕರಿಸಿದರೂ ಸುಲಭೆಯು ಜನಕನ ಮನಸ್ಸಿನಿಂದ ಕದಲಲಿಲ್ಲ.

ಉಕ್ತವಾಕ್ಯೇ ತು ನೃಪತೌ ಸುಲಭಾ ಚಾರುದರ್ಶನಾ ।
ತತಶ್ಚಾರುತರಂ ವಾಕ್ಯಂ ಪ್ರಚಕ್ರಾಮಾಥ ಭಾಷಿತುಮ್ ॥೭೭॥

ರಾಜನ ಆ ಮಾತುಗಳನ್ನೆಲ್ಲ ಕೇಳಿಸಿಕೊಂಡ ಬಳಿಕ ಸುಲಭೆಯು ಆ ಜನರ ಮುಂದೆ ತನ್ನ ರೂಪಕ್ಕಿಂತಲೂ ಸುಂದರವಾದ ಮಾತುಗಳಿಂದ ರಾಜನ ಜೊತೆ ಮಾತನಾಡಲು ಆರಂಭಿಸಿದಳು.

ನವಭಿರ್ನವಭಿಶ್ಚೈವ ದೋಷೈರ್ವಾಗ್ಬುದ್ಧಿದೂಷಣೈಃ ।
ಅಪೇತಮುಪಪನ್ನಾರ್ಥಮಷ್ಟಾದಶಗುಣಾನ್ವಿತಮ್ ॥೭೮॥

ರಾಜನೇ, ಮಾತು-ಬುದ್ಧಿಗೆ ಸಂಬಂಧಪಟ್ಟ ಹದಿನೆಂಟು ದೋಷಗಳಿವೆ. ದೋಷದಿಂದ ಕೂಡಿರದ ಹದಿನೆಂಟು ಗುಣಗಳೂ ಇವೆ.

ಸೌಕ್ಷ್ಮ್ಯಂ ಸಂಖ್ಯಾ ಕ್ರಮೌ ಚೋಭೌ ನಿರ್ಣಯಃ ಸಪ್ರಯೋಜನಃ ।
ಪಂಚೈತಾನ್ಯರ್ಥಜಾತಾನಿ ವಾಕ್ಯಮಿತ್ಯುಚ್ಯತೇ ನೃಪ ॥೭೯॥

ಸೂಕ್ಷ್ಮವು, ಸಂಖ್ಯವು ಎಂಬ ಎರಡು ಕ್ರಮಗಳು ಎಂದರೆ ದೇವದತ್ತ ಆನಯ ಎಂಬ ವಾಕ್ಯಗಳಲ್ಲಿ ದೇವದತ್ತ ಎಂಬ ಕರ್ತೃಪದವು ಗಾಂ ಎಂಬುದಾಗಿ ಮಧ್ಯದಲ್ಲಿ ಕರ್ಮಪದವು, ಆನಯ ಎಂಬುದಾಗಿ ಕೊನೆಯಲ್ಲಿ ಕ್ರಿಯಾಪದವು. ಹೀಗೆ ಪದಗಳಲ್ಲಿ ಪೂರ್ವತ್ವ, ಅಪರತ್ವಕ್ರಮಗಳ ಸಂಬಂಧವು ಸೂಕ್ಷ್ಮವು, ಸಂಖ್ಯೆಯು ಸಂಖ್ಯಾ ಎರಡು ಕ್ರಮಗಳು ನಿರ್ಣಯ, ಪ್ರಯೋಜನ ಎಂಬುದಾಗಿ ಐದು ವಿಷಯಗಳಿಂದ ಕೂಡಿದ ಶಬ್ದಸರಣಿಯವು ವಾಕ್ಯ ಎನಿಸುತ್ತದೆ.

ಏಷಾಮೇಕೈಕಶೋರ್ಥಾನಾಂ ಸೌಕ್ಷ್ಮ್ಯಾದೀನಾಂ ಸುಲಕ್ಷಣಮ್ ।
ಶೃಣು ಸಂಸಾರ್ಯಮಾಣಾನಾಂ ಪದಾರ್ಥೈಃ ಪದವಾಕ್ಯತಃ ॥೮೦॥

ಇವುಗಳಲ್ಲಿಯೂ ಒಂದೊಂದರಲ್ಲಿರುವಂತಹ ಅರ್ಥಗಳಲ್ಲಿ ಸೂಕ್ಷ್ಮ

ಮೊದಲಾದವುಗಳ ಯಥಾರ್ಥವಾದ ಲಕ್ಷಣಗಳನ್ನು ನಿನಗೆ ನೆನಪಿಸುತ್ತೇನೆ. ಪದ, ಪದವಾಕ್ಯಗಳ ಕ್ರಮಗಳನ್ನು ನಿನಗೆ ನೆನಪಿಸುತ್ತೇನೆ, ಕೇಳು.

ಜ್ಞಾನಂ ಜ್ಞೇಯೇಷು ಭಿನ್ನೇಷು ಯಥಾಭೇದೇನ ವರ್ತತೇ ।
ತತ್ರಾತಿಶಯಿನೀ ಬುದ್ಧಿಸ್ತತ್ ಸೌಕ್ಷ್ಮ್ಯಮಿತಿ ವರ್ತತೇ ॥೮೧॥

ಬೇರೆ ಬೇರೆ ವಿಷಯಗಳಲ್ಲಿ ಬೇರೆ ಬೇರೆಯಾಗಿ ಪ್ರವೃತ್ತಿಯನ್ನು ಹೊಂದುವ ಭಿನ್ನ ಜ್ಞಾನಗಳಲ್ಲಿ ಬುದ್ಧಿಯನ್ನು ಬಗ್ಗಿಸಿ ಅದನ್ನು ಗ್ರಹಿಸುವುದೇ ಸೂಕ್ಷ್ಮತೆ ಎನಿಸಿದೆ.

ದೋಷಾಣಾಂ ಚ ಗುಣಾನಾಂ ಚ ಪ್ರಮಾಣಂ ಪ್ರವಿಭಾಗಶಃ ।
ಕಂಚಿದರ್ಥಮಭಿಪ್ರೇತ್ಯ ಸಾ ಸಂಖ್ಯೇತ್ಯುಪಧಾರ್ಯತಾಮ್ ॥೮೨॥

ಅದರ ಗುಣ-ದೋಷಗಳನ್ನು ವಿಚಾರ ಮಾಡಿ ನಿಜವಾದ ಅರ್ಥವನ್ನು ತಿಳಿಯುವುದು ಸಂಖ್ಯಾ ಎಂದು ಕರೆಸಿಕೊಳ್ಳುತ್ತದೆ ಎಂಬುದಾಗಿ ತಿಳಿದುಕೊ.

ಇದಂ ಪೂರ್ವಮಿದಂ ಪಶ್ಚಾದ್ವಕ್ತವ್ಯಂ ಯದ್ ವಿವಕ್ಷಿತಮ್ ।
ಕ್ರಮಯೋಗಂ ತಮಪ್ಯಾಹುರ್ವಾಕ್ಯಂ ವಾಕ್ಯವಿದೋ ಜನಾಃ ॥೮೩॥

ಇದನ್ನು ಮೊದಲು ಹೇಳಬೇಕು, ಇದನ್ನು ನಂತರ ಹೇಳಬೇಕು ಎಂಬುದನ್ನು ನಿರ್ಣಯಿಸುವುದೇ ಕ್ರಮವೆಂದು ವಾಕ್ಯಲಕ್ಷಣವನ್ನು ಬಲ್ಲವರು ಹೇಳುತ್ತಾರೆ.

ಧರ್ಮಾರ್ಥಕಾಮಮೋಕ್ಷೇಷು ಪ್ರತಿಜ್ಞಾಯ ವಿಶೇಷತಃ ।
ಇದಂ ತದಿತಿ ವಾಕ್ಯಾಂತೇ ಪ್ರೋಚ್ಯತೇ ಸ ವಿನಿರ್ಣಯಃ ॥೮೪॥

ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಬೇಕಾದುದ್ದನ್ನು ಇಚ್ಛಿಸಿ ಇದೇ ಅದು ಎಂದು ನಿಶ್ಚಯಿಸಿ ಹೇಳುವುದೇ ನಿರ್ಣಯ ಎನಿಸುತ್ತದೆ.

ಇಚ್ಛಾದ್ವೇಷಭವೈರ್ದುಃಖೈಃ ಪ್ರಕರ್ಷೋ ಯತ್ರ ಜಾಯತೇ ।
ತತ್ರ ಯಾ ನೃಪತೇ ವೃತ್ತಿಸ್ತತ್ಪ್ರಯೋಜನಮಿಷ್ಯತೇ ॥೮೫॥

ಇಚ್ಛಾದ್ವೇಷಗಳಿಂದ ಉಂಟಾಗುವ ದುಃಖಗಳಲ್ಲಿ ಕ್ರಮವಾಗಿ ಇದನ್ನು ನಡೆಸಬೇಕು, ಇದನ್ನು ಬಿಡಬೇಕು ಎಂಬ ಪ್ರವೃತ್ತಿ-ನಿವೃತ್ತಿಗಳೇ ಪ್ರಯೋಜನವೆನಿಸುತ್ತವೆ.

ತಾನ್ಯೇತಾನಿ ಯಥೋಕ್ತಾನಿ ಸೌಕ್ಷ್ಮ್ಯಾದೀನಿ ಜನಾಧಿಪ ।
ಏಕಾರ್ಥಸಮವೇತಾನಿ ವಾಕ್ಯಂ ಮಮ ನಿಶಾಮಯ ॥೮೬॥

ರಾಜೇಂದ್ರನೇ, ಒಂದೇ ಅರ್ಥದಲ್ಲಿ ಈ ಬಗೆಯ ಸೂಕ್ಷ್ಮತ್ವಾದಿಗಳೆಲ್ಲ ಸೇರಿದ್ದರೆ ಮಾತ್ರ ವಾಕ್ಯ ಎನಿಸುತ್ತದೆ. ನಾನು ಹೇಳುವ ವಾಕ್ಯಗಳನ್ನು ಕೇಳಿಸಿಕೊ.

ಉಪೇತಾರ್ಥಮಭಿನ್ನಾರ್ಥಂ ನಾಪವೃತ್ತಂ ನ ಚಾಧಿಕಮ್ ।
ನಾಲಕ್ಷಣಂ ನ ಚ ಸಂದಿಗ್ಧಂ ವಕ್ಷ್ಯಾಮಿ ಪರಮಂ ತವ ॥೮೭॥

ನನ್ನ ಮಾತಿನಲ್ಲಿ ಉಚಿತವಾದ ಅರ್ಥಗಳಿವೆ, ಅಯೋಗ್ಯವಾದ ಅರ್ಥಗಳಿಲ್ಲ. ಅಧಿಕವಾದ ಮಾತುಗಳೂ ಇಲ್ಲ. ಯುಕ್ತಿಯುಕ್ತವಾದ, ಸಂದೇಹಕ್ಕೆ ಅವಕಾಶವಿಲ್ಲದ, ಕಠಿಣವಲ್ಲದ, ಶ್ರೇಷ್ಠವಾದ ಮಾತುಗಳನ್ನು ನಿನಗೆ ಹೇಳುತ್ತೇನೆ.

ನ ಗುರ್ವಕ್ಷರಸಂಬದ್ಧಂ ಪರಾಙ್ಮುಖಿಮುಖಂ ನ ಚ ।
ನಾನೃತಂ ನ ತ್ರಿವರ್ಗೇಣ ವಿರುದ್ಧಂ ನಾಪ್ಯಸಂಸ್ಕೃತಮ್ ॥೮೮॥

ನನ್ನ ಮಾತುಗಳಲ್ಲಿ ಅತಿಯಾದ, ಅಧಿಕವಾದ ಅಕ್ಷರಗಳಿಂದ ಕೂಡಿದ ವಾಕ್ಯಗಳಿರುವುದಿಲ್ಲ, ಸತ್ಯಕ್ಕೆ ವಿರುದ್ಧವಾದ ಮಾತುಗಳಿರುವುದಿಲ್ಲ. ಅರ್ಥವು ತಿಳಿಯಲಿಕ್ಕಾಗದಿರುವ ಪದಗಳೂ ಇರುವುದಿಲ್ಲ. ಧರ್ಮಾರ್ಥಕಾಮಗಳೆಂಬ ತ್ರಿವರ್ಗಕ್ಕೆ ವಿರುದ್ಧವಾದ ಪದಗಳಿರುವುದಿಲ್ಲ. ವ್ಯಾಕರಣಶಾಸ್ತ್ರಕ್ಕೆ ವಿರುದ್ಧವಾದ ಅಸಂಸ್ಕೃತ ಶಬ್ದಗಳೂ ಇರುವುದಿಲ್ಲ.

ನ ನ್ಯೂನಂ ಕಷ್ಟಶಬ್ದಂ ವಾ ವ್ಯತ್ಕ್ರಮಾಭಿಹಿತಂ ನ ಚ ।
ನ ಶೇಷಂ ನಾನುಕಲ್ಪೇನ ನಿಷ್ಕಾರಣಮಹೇತುಕಮ್ ॥೮೯॥

ನನ್ನ ವಾಕ್ಯದಲ್ಲಿ ನ್ಯೂನತೆ ಇರುವುದಿಲ್ಲ. ಕಷ್ಟಕರ ಶಬ್ದಗಳಿರುವುದಿಲ್ಲ. ಕ್ರಮವನ್ನು ಉಲ್ಲಂಘಿಸಿ ಹೇಳಿದ ಶಬ್ದಗಳಿರುವುದಿಲ್ಲ. ಮಾತಿನಲ್ಲಿ ಅತಿಕ್ರಮವೂ ಇಲ್ಲ. ಕಲ್ಪಿಸಿಕೊಂಡು ಗ್ರಹಿಸಬೇಕಾದ ಅರ್ಥವಿರುವುದಿಲ್ಲ. ಕಾರಣವಿಲ್ಲದ, ಯುಕ್ತಿಯುಕ್ತವಲ್ಲದ ಶಬ್ದಪ್ರಯೋಗಗಳೂ ಇರುವುದಿಲ್ಲ.

ಕಾಮಾತ್ ಕ್ರೋಧಾದ್ ಭಯಾಲ್ಲೋಭಾದ್ ದೈನ್ಯಾದಾನಾರ್ಯಕಾತ್ತಥಾ।
ಹ್ರೀತೋನುಕ್ರೋಶತೋ ಮಾನಾನ್ನ ವಕ್ಷ್ಯಾಮಿ ಕಥಂಚನ ॥೯೦॥

ವಕ್ತಾ ಶ್ರೋತಾ ಚ ವಾಕ್ಯಂ ಚ ಯದಾ ತ್ವವಿಕಲಂ ನೃಪ ।
ಸ ಮಮೇತಿ ವಿವಕ್ಷಾಯಾಂ ತದಾ ಸೋಽರ್ಥಃ ಪ್ರಕಾಶತೇ ॥೯೦॥

ಕಾಮ-ಕ್ರೋಧ-ಭಯಗಳಿಂದಾಗಲಿ, ಲೋಭ-ದೈನ್ಯಗಳಿಂದಾಗಲಿ, ದೌರ್ಜನ್ಯದಿಂದಾಗಲಿ, ಲಜ್ಜೆಯಿಂದಾಗಲಿ, ಕರುಣೆಯಿಂದಾಗಲಿ, ಹೆಮ್ಮೆಯಿಂದಾಗಲಿ ನಾನು ಮಾತನಾಡುತ್ತಿಲ್ಲ. ನಾನು ಮಾತನಾಡುವ ಉದ್ದೇಶವುಳ್ಳ ಕಾಲದಲ್ಲಿ ಯಾವನು ಮಾತನಾಡುತ್ತಾನೋ, ಅದನ್ನು ಕೇಳಿಸಿಕೊಳ್ಳುತ್ತಾನೋ, ತಪ್ಪಾಗದಂತೆ ತಿರುಗಿ ಹೇಳುತ್ತಾನೋ ಅವನು ಹೇಳುವ ಅರ್ಥವು ನನಗೆ ಸಂಬಂಧಿಸಿದೆ ಎಂದು ತಿಳಿದಾಗ ಮಾತ್ರ ಅದರ ಅರ್ಥವು ಶೋಭೆಯನ್ನು ಹೊಂದುತ್ತದೆ.

ವಕ್ತವ್ಯೇ ತು ಯದಾ ವಕ್ತಾ ಶ್ರೋತಾರಮವಮನ್ಯತೇ ।
ಸ್ವಾರ್ಥಮಾಹ ಪರಾರ್ಥಂ ವಾ ತದಾ ವಾಕ್ಯಂ ನ ರೋಹತಿ ॥೯೨॥

ಮಾತನಾಡುವ ವಿಷಯದಲ್ಲಿ ಯಾವಾಗ ವಕ್ತೃವು ಶ್ರೋತೃವನ್ನು ಅವಮಾನಿಸುತ್ತಾನೋ ಆಗ ಅವನ ಮಾತು ಅವನಿಗೆ ಮಾತ್ರ ಶೋಭೆಯನ್ನು ತರಬಹುದೇ ವಿನಾ ಶ್ರೋತೃವಾಗಿ ಕುಳಿತವನಿಗೆ ಅವನ ಮಾತು ಅಂಗೀಕಾರಾರ್ಹ ಆಗುವುದಿಲ್ಲ.

ಅಥ ಯಃ ಸ್ವಾರ್ಥಮುತ್ಸೃಜ್ಯ ಪರಾರ್ಥಂ ಪ್ರಾಹ ಮಾನವಃ ।
ವಿಶಂಕಾ ಜಾಯತೇ ತಸ್ಮಿನ್ ವಾಕ್ಯಂ ತದಪಿ ದೋಷವತ್ ॥೯೩॥

ಯಾವ ವ್ಯಕ್ತಿಯು ತನ್ನ ಸ್ವಾರ್ಥವನ್ನು ತೊರೆದು ವಿರಕ್ತನಾದವನಿಗೆ ವಾಣಿಜ್ಯವನ್ನು ಉಪದೇಶ ಮಾಡುತ್ತಾನೋ ಅಂತಹ ವ್ಯಕ್ತಿಯ ವಿಷಯದಲ್ಲಿ ವ್ಯಾಪಾರವನ್ನು ವಿರಕ್ತನಾದವನು ಬೋಧಿಸಿದ್ದರಿಂದ ಸಂಶಯವೇ ಹುಟ್ಟುತ್ತದೆ. ಅಂತಹ ವಾಕ್ಯವೂ ದೋಷವುಳ್ಳದ್ದೇ ಎಂದು ಭಾವಿಸಬೇಕು.

ಯಸ್ತು ವಕ್ತಾ ದ್ವಯೋರರ್ಥಮವಿರುದ್ಧಂ ಪ್ರಭಾಷತೇ ।
ಶ್ರೋತುಶ್ಚೈವಾತ್ಮನಶ್ಚೈವ ಸ ವಕ್ತಾ ನೇತರೋ ನೃಪ ॥೯೪॥

ಯಾವ ವಕ್ತೃವು ತನಗೂ ವಂಚನೆಯಿಲ್ಲದೆ, ಮತ್ತೊಬ್ಬನಿಗೂ ವಂಚಿಸದೆ ಪ್ರಯೋಜನದಿಂದ ಕೂಡಿರುವ, ಧರ್ಮವಿರುದ್ಧವಲ್ಲದ ಮಾತುಗಳನ್ನು ಹೇಳುತ್ತಾನೋ

ಅಂತಹ ವಕ್ತವು ತನಗೂ, ಶ್ರೋತೃವಿಗೂ ಹಿತಚಿಂತಕನೆನಿಸುತ್ತಾನೆ. ಇದಕ್ಕೆ ವಿರುದ್ಧವಾದ ವಕ್ತವು ಹಿತಚಿಂತಕನಾಗುವುದಿಲ್ಲ.

ತದರ್ಥವದಿದಂ ವಾಕ್ಯಮುಪೇತಂ ವಾಕ್ಯಸಂಪದಾ ।
ಅವಿಕ್ಷಿಪ್ತಮನಾ ರಾಜನ್ನೇಕಾಗ್ರಃ ಶ್ರೋತುಮರ್ಹಸಿ ॥೯೫॥

ಆದ್ದರಿಂದ ರಾಜನೇ, ಅರ್ಥವತ್ತಾಗಿರುವ ವಾಕ್ಯಲಕ್ಷಣದಿಂದ ಪೂರ್ಣವಾದ ನನ್ನ ಮಾತುಗಳನ್ನು ಏಕಾಗ್ರಮನಸ್ಸಿನಿಂದ ಕೇಳಿಸಿಕೊ. ನನ್ನ ಮಾತನ್ನು ಕೇಳಿಸಿಕೊಳ್ಳಲು ನೀನು ಅರ್ಹನಾಗಿರುತ್ತಿ.

ಕಾಸಿ ಕಸ್ಯ ಕುತೋ ವೇತಿ ತ್ವಯಾಹಮಭಿಚೋದಿತಾ ।
ತತ್ರೋತ್ತರಮಿದಂ ವಾಕ್ಯಂ ರಾಜನ್ನೇಕಮನಾಃ ಶೃಣು ॥೯೬॥

ನೀನು ನನ್ನನ್ನು ನೋಡಿ ನೀನು ಯಾರು? ಯಾರ ಕಡೆಯವಳು? ಎಲ್ಲಿಂದ ಬಂದಿರುವೆ? ಎಂದು ಪ್ರಶ್ನೆ ಮಾಡಿರುವೆ. ಅದನ್ನು ನಿನಗೆ ಹೇಳುತ್ತೇನೆ, ಏಕಾಗ್ರತೆಯಿಂದ ಕೇಳಿಸಿಕೊ.

ಯಥಾ ಜತು ಚ ಕಾಷ್ಠಂ ಚ ಪಾಂಸವಶ್ಚೋದಬಿಂದುಭಿಃ ।
ಸುಶ್ಲಿಷ್ಟಾನಿ ತಥಾ ರಾಜನ್ ಪ್ರಾಣಿನಾಮಿಹ ಸಂಭವಃ ॥೯೭॥

ಹೇಗೆ ಅರಗು, ಕಟ್ಟಿಗೆ, ಧೂಳಿಗೂ ನೀರಿಗೂ ಸಂಬಂಧಗಳು ಯದೃಚ್ಛೆಯಿಂದ ತಾತ್ಕಾಲಿಕವಾಗಿ ಒದಗಿಬರುತ್ತವೋ ಇದರಂತೆ ಪ್ರಾಣಿಗಳಿಗೆ ಆಗುವ ಪರಸ್ಪರ ಸಂಬಂಧವು ಯಾದೃಚ್ಛಿಕವೇ ಆಗಿದೆ.

ಶಬ್ದಃ ಸ್ಪರ್ಶೋ ರಸೋ ರೂಪಂ ಗಂಧಃ ಪಂಚೇಂದ್ರಿಯಾಣಿ ಚ ।
ಪೃಥಗಾತ್ಮಾನಮಾತ್ಮಾನಂ ಸಂಶ್ಲಿಷ್ಟಾ ಜತುಕಾಷ್ಠವತ್ ॥೯೮॥

ಶಬ್ದ, ಸ್ಪರ್ಶ, ರಸ, ರೂಪ, ಗಂಧ, ಪಂಚಜ್ಞಾನೇಂದ್ರಿಯಗಳು, ಜೀವನ ಪ್ರತ್ಯೇಕವಾಗಿರುವ ಸ್ವರೂಪವನ್ನು, ಜೀವನ ಜೊತೆ ಇವೆಲ್ಲವುಗಳು ಯಾದೃಚ್ಛಿಕವಾಗಿ ಸಂಬಂಧ ಹೊಂದಿರುತ್ತವೆ. ಜತು ಕಾಷ್ಠಗಳು ಯದೃಚ್ಛೆಯಿಂದ ಹೇಗೆ ಒಟ್ಟಾಗಿರುತ್ತವೋ ಅದರಂತೆ.

ನ ಚೈಷಾಂ ಚೋದನಾ ಕಾಚಿದಸ್ತೀತ್ಯೇಷ ವಿನಿಶ್ಚಯಃ ।
ಏಕೈಕಸ್ಯೇಹ ವಿಜ್ಞಾನಂ ನಾಸ್ತ್ಯಾತ್ಮನಿ ತಥಾ ಪರೇ ॥೯೯॥

ಇಂತಹ ಶರೀರದಲ್ಲಿ ಸಂಬಂಧ ಹೊಂದಿರುವ ವಸ್ತುಗಳ ವಿಷಯದಲ್ಲಿ ನೀನು ಯಾಕೆ ನನ್ನ ಶರೀರದಲ್ಲಿ ಸೇರಿರುವಿ ಎಂಬ ಪ್ರಶ್ನೆಯು ಹೇಗೆ ಅಪ್ರಾಮಾಣಿಕವಾದುದೋ, ಯಾರು ಈ ರೀತಿಯಾದ ಪ್ರಶ್ನೆಯನ್ನು ಮಾಡುವರೋ, ತನ್ನಲ್ಲಿ ಸೇರಿರುವ ಅನೇಕ ಪದಾರ್ಥಗಳ ಜ್ಞಾನವು ಆತ್ಮನಿಗೆ ಹೇಗೆ ಇರುವುದಿಲ್ಲವೋ ಅದರಂತೆ ಮತ್ತೊಬ್ಬರ ಸಂಬಂಧವೂ ಆತ್ಮನಲ್ಲಿ ಬಂದಾಗ ಏಕೆ ಎಂದು ಪ್ರಶ್ನಿಸಲು ಯೋಗ್ಯವಾಗುವುದಿಲ್ಲ.

ನ ವೇದ ಚಕ್ಷುಶ್ಚಕ್ಷುಷ್ಟ್ವಂ ಶ್ರೋತ್ರಂ ನಾತ್ಮನಿ ವರ್ತತೇ ।
ತಥೈವ ವ್ಯಭಿಚಾರೇಣ ನ ವರ್ತಂತೇ ಪರಸ್ಪರಮ್ ।
ಸಂಶ್ಲಿಷ್ಟಾ ನಾಭಿಜಾಯಂತೇ ಯಥಾಪ ಇಹ ಪಾಂಸವಃ ॥೧೦೦॥

ಬಾಹ್ಯಾನನ್ಯಾನಪೇಕ್ಷಂತೇ ಗುಣಾಂಸ್ತಾನಪಿ ಮೇ ಶೃಣು ।
ರೂಪಂ ಚಕ್ಷುಃ ಪ್ರಕಾಶಶ್ಚ ದರ್ಶನೇ ಹೇತವಸ್ತ್ರಯಃ ।
ಯಥೈವಾತ್ರ ತಥಾನ್ಯೇಷು ಜ್ಞಾನಜ್ಞೇಯೇಷು ಹೇತವಃ ॥೧೦೧॥

ನಮ್ಮಲ್ಲಿರುವ ಕಣ್ಣು ತನ್ನನ್ನು ನೋಡಿಕೊಳ್ಳಲಾಗದು. ಕಿವಿಯು ತನ್ನನ್ನು ಕೇಳಲಾಗದು. ನೀರು, ಧೂಳು ಒಂದಾಗಿ ಸೇರಿದ್ದರೂ ಒಂದು ಇನ್ನೊಂದನ್ನು ತಿಳಿಯಲಾಗದು. ಹೀಗೆ ಒಂದೊಂದಾಗಿ ಸೇರಿದ್ದರೂ ಒಂದು ಇನ್ನೊಂದನ್ನು ತಿಳಿಯಲಾರವು. ಇವು ಹೊರಗಿನ ವಿಷಯವನ್ನೇ ಅಪೇಕ್ಷಿಸುತ್ತವೆ. ರೂಪ-ನೇತ್ರ-ಪ್ರಕಾಶ ಈ ಮೂರು ಒಟ್ಟಾಗಿ ಇದ್ದರೂ ಅವುಗಳು ಪರಸ್ಪರ ತಮ್ಮನ್ನು ತಿಳಿಯಲಾರವು. ಕೆಲವೊಮ್ಮೆ ಕಿವಿಯು ಕೇಳುತ್ತಿರುವಾಗ ಕಣ್ಣು ನೋಡುವುದಿಲ್ಲ. ಕಣ್ಣು ನೋಡುತ್ತಿರುವಾಗ ಕಿವಿಯು ಕೇಳುವುದಿಲ್ಲ. ಆದರೆ ಕಣ್ಣು ನೋಡುತ್ತಿದೆ, ಕಿವಿಯು ಕೇಳುತ್ತಿದೆ ಎಂಬುದು ಪರಸ್ಪರ ಅವುಗಳಿಗೆ ತಿಳಿದಿರುವುದಿಲ್ಲ. ಇದರಂತೆ ಬೇರೆ ವಿಧವಾದ ಜ್ಞಾನ-ಜ್ಞೇಯಗಳ ವಿಷಯದಲ್ಲಿಯೂ ಕಾರಣಗಳಿವೆ.

ಜ್ಞಾನಜ್ಞೇಯಾಂತರೇ ತಸ್ಮಿನ್ ಮನೋ ನಾಮಾಪರೋ ಗುಣಃ ।
ವಿಚಾರಯತಿ ಯೇನಾಯಂ ನಿಶ್ಚಯೇ ಸಾಧ್ವಸಾಧುನೀ ॥೧೦೨॥

ಈ ಜ್ಞಾನ-ಜ್ಞೇಯಗಳ ನಡುವೆ ಮನಸ್ಸೆಂಬುದು ಬೇರೆಯಾದ ಗುಣವು. ಈ ಮನಸ್ಸು ಕಂಡ ವಿಷಯದ ಬಗ್ಗೆ ಇದು ಸಾಧುವೋ, ಅಸಾಧುವೋ ಎಂಬುದಾಗಿ ವಿಚಾರ ಮಾಡುತ್ತದೆ.

ದ್ವಾದಶಸ್ತ್ವಪರಸ್ತತ್ರ ಬುದ್ಧಿರ್ನಾಮ ಗುಣಃ ಸ್ಮೃತಃ ।
ಯೇನ ಸಂಶಯಪೂರ್ವೇಷು ಬೋದ್ಧವ್ಯೇಷು ವ್ಯವಸ್ಯತಿ ॥೧೦೩॥

ಈ ಹನ್ನೊಂದು ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಮನಸ್ಸಿನ ಜೊತೆಗೆ ಹನ್ನೆರಡನೆಯದ್ದಾದ ಬುದ್ಧಿ ಎಂಬ ಗುಣವೂ ಇದೆ. ಮನಸ್ಸಿನಲ್ಲಿ ಉಂಟಾದ ಸಂಶಯವನ್ನು ಪರಿಹರಿಸಿ ತಿಳಿಯಬೇಕಾದ ವಸ್ತುವಿನ ಬಗ್ಗೆ ನಿರ್ಣಯವನ್ನು ತಂದುಕೊಡುವುದೇ ಈ ಬುದ್ಧಿಯು.

ಅಥ ದ್ವಾದಶಕೇ ತಸ್ಮಿನ್ ಸತ್ತ್ವಂ ನಾಮಾಪರೋ ಗುಣಃ ।
ಮಹಾಸತ್ತ್ವೋಲ್ಪಸತ್ತ್ವೋ ವಾ ಜಂತುರ್ಯೇನಾನುಮೀಯತೇ ॥೧೦೪॥

ಈ ಹನ್ನೆರಡನೆಯದ್ದಾದ ಬುದ್ಧಿಯಲ್ಲಿಯೂ ಸತ್ತ್ವ ಎಂಬ ಮತ್ತೊಂದು ಗುಣವಿದೆ. ಅದರಿಂದಲೇ ಒಬ್ಬನು ಅಧಿಕ ಸತ್ತ್ವನೆಂದೂ, ಮತ್ತೊಬ್ಬನು ಅಲ್ಪಸತ್ತ್ವನೆಂದೂ ಅನುಮಾನದಿಂದ ತಿಳಿಯುತ್ತೇವೆ. ಆದ್ದರಿಂದ ಈ ಸತ್ತ್ವವೆಂಬುದು ಹದಿಮೂರನೆಯ ಗುಣವು.

ಅಹಂಕಾರೇತಿ ಚಾಪ್ಯನ್ಯೋ ಗುಣಸ್ತತ್ರ ಚತುರ್ದಶಃ ।
ಮಮಾಯಮಿತಿ ಯೇನಾಯಂ ಮನ್ಯತೇ ನ ಚ ಮನ್ಯತೇ ॥೧೦೫॥

ಸತ್ತ್ವಗುಣದಿಂದಲೂ ಮುಂದೆ ಹದಿನಾಲ್ಕನೆಯದ್ದಾದ ಅಹಂಕಾರವೆಂಬ ಗುಣವಿದೆ. ಈ ಗುಣದಿಂದಾಗಿಯೇ ಇವನು ನನ್ನವನು, ಇವನು ನನ್ನವನಲ್ಲ ಎಂಬ ಅಭಿಮಾನವು ಉಂಟಾಗುತ್ತದೆ.

ಅಥ ಪಂಚದಶೋ ರಾಜನ್ ಗುಣಸ್ತತ್ರಾಪರಃ ಸ್ಮೃತಃ ।
ಪೃಥಕ್ಕಾಲಸಮೂಹಸ್ಯ ಸಾಮಗ್ರ್ಯಂ ತದಿಹೋಚ್ಯತೇ ॥೧೦೬॥

ಬಳಿಕ ಹದಿನೈದನೆಯ ಮತ್ತೊಂದು ಗುಣವಿದೆ. ಆ ಗುಣವು ತಮ್ಮ ತಮ್ಮ ಉದಯಕಾಲದ ಗ್ರಹಾದಿಗಳ ಅನುಕೂಲ, ಪ್ರತಿಕೂಲಾದಿ ಕಾಲಕ್ಕೆ ಸಾಮಗ್ರಿ ಎನಿಸಿದ ಗುಣ.

ಗುಣಸ್ತ್ವೇಕೋಽಪರಸ್ತತ್ರ ಸಂಘಾತ ಇತಿ ಷೋಡಶಃ ।
ಆಕೃತಿರ್ವ್ಯಕ್ತಿರಿತ್ಯೇತೌ ಗುಣೌ ಯಸ್ಮಿನ್ ಸಮಾಶ್ರಿತೌ ॥೧೦೭॥

ಇದರ ಬಳಿಕ ಯೋನಿಸಂಘಾತ ಎಂಬ ಹದಿನಾರನೆಯ ಗುಣವು ಇದೆ. ಈ ಗುಣವು ಪಶುಪಕ್ಷ್ಯಾದಿ ಆಕಾರದ ಅಭಿವೃದ್ಧಿಗೆ ಕಾರಣವಾದ ಗುಣವು. ಆಕೃತಿ, ವ್ಯಕ್ತಿ ಎಂಬ ಗುಣಗಳಿಗೆ ಯೋನಿಸಂಘಾತ ಎಂಬ ಹದಿನಾರನೆಯ ಗುಣವೇ ಕಾರಣವಾಗಿದೆ. ಆಕೃತಿ, ವ್ಯಕ್ತಿಗಳು ಹದಿನೇಳು, ಹದಿನೆಂಟನೆಯ ಗುಣಗಳೆನಿಸಿವೆ.

ಸುಖದುಃಖೇ ಜರಾಮೃತ್ಯೂ ಲಾಭಾಲಾಭೌ ಪ್ರಿಯಾಪ್ರಿಯೇ ।
ಇತಿ ಚೈಕೋನವಿಂಶೋಯಂ ದ್ವಂದ್ವಯೋಗ ಇತಿ ಸ್ಮೃತಃ ॥೧೦೮॥

ಸುಖ-ದುಃಖಗಳು, ಜರಾ-ಮರಣಗಳು, ಲಾಭಾಲಾಭಗಳು, ಪ್ರಿಯಾಪ್ರಿಯಗಳು ಈ ದ್ವಂದ್ವಗಳು ಹತ್ತೊಂಬತ್ತನೆಯ ಗುಣವಾಗಿ ಎಣಿಸಲ್ಪಡುತ್ತವೆ.

ಊರ್ಧ್ವಮೇಕೋನವಿಂಶತ್ಯಾಃ ಕಾಲೋ ನಾಮಾಪರೋ ಗುಣಃ ।
ಇತೀಮಂ ವಿದ್ಧಿ ವಿಂಶತ್ಯಾ ಭೂತಾನಾಂ ಪ್ರಭವಾಪ್ಯಯಮ್ ॥೧೦೯॥

ಹತ್ತೊಂಬತ್ತರ ನಂತರ ಕಾಲವೆಂಬ ಬೇರೆ ಗುಣವು ಇಪ್ಪತ್ತನೆಯ ಗುಣ ಎನಿಸಿದೆ. ಭೂತಗಳ ಜನನ-ಮರಣಗಳೆಲ್ಲ ಈ ಇಪ್ಪತ್ತನೆಯ ಕಾಲವೆಂಬ ಗುಣದಿಂದಲೇ ಆಗುತ್ತವೆ ಎಂದು ತಿಳಿ.

ವಿಂಶಕಶ್ಚೈಷ ಸಂಘಾತೋ ಮಹಾಭೂತಾನಿ ಪಂಚ ಚ ।
ಸದಸದ್ಭಾವಯೋಗೌ ಚ ಗುಣಾವನ್ಯೌ ಪ್ರಕಾಶಕೌ ॥೧೧೦॥

ಇತ್ಯೇವಂ ವಿಂಶತಿಶ್ಚೈವ ಗುಣಾಃ ಸಪ್ತ ಚ ಯೇ ಸ್ಮೃತಾಃ ।
ವಿಧಿಃ ಶುಕ್ರಂ ಬಲಂ ಚೇತಿ ತ್ರಯ ಏತೇ ಗುಣಾಃ ಪರೇ ॥೧೧೧॥

ಏವಂ ವಿಂಶಶ್ಚ ದಶ ಚ ಕಲಾಃ ಸಂಖ್ಯಾನತಃ ಸ್ಮೃತಾಃ ।
ಸಮಗ್ರಾ ಯತ್ರ ವರ್ತಂತೇ ತಚ್ಛರೀರಮಿತಿ ಸ್ಮೃತಮ್ ॥೧೧೨॥

ಈ ಇಪ್ಪತ್ತು ಗುಣಗಳ ಸಮೂಹಗಳು, ಪಂಚಮಹಾಭೂತಗಳು, ಸದ್ಭಾವ, ಅಸದ್ಭಾವ ಎಂಬ ಸಂಬಂಧಗಳು ಬೇರೆ ಗುಣಗಳ ಪ್ರಕಾಶಕವಾದವುಗಳು. ಈ

ರೀತಿಯಾಗಿ ಇಪ್ಪತ್ತು ಮತ್ತು ಏಳು ಗುಣಗಳು ಸೇರಿದರೆ ಇಪ್ಪತ್ತೇಳು ಗುಣಗಳಾಗುತ್ತವೆ. ಇದರ ನಂತರ ವಿಧಿ, ಶುಕ್ರ , ಬಲ ಎಂಬ ಮೂರು ಗುಣಗಳು ಇವೆ. ಹೀಗೆ ಇಪ್ಪತ್ತು ಹತ್ತು ಕಲೆಗಳು ಸೇರಿ ಸಂಖ್ಯೆಯಿಂದ ಮೂವತ್ತು ಗುಣಗಳು, ಮೂವತ್ತು ಕಲೆಗಳಿಂದ ಪೂರ್ಣವಾದುದೇ ಶರೀರವೆಂದು ಹೇಳಲ್ಪಟ್ಟಿದೆ.

ಅವ್ಯಕ್ತಂ ಪ್ರಕೃತಿಂ ತ್ವಾಸಾಂ ಕಲಾನಾಂ ಕಶ್ಚಿದಿಚ್ಛತಿ ।
ವ್ಯಕ್ತಂ ಚಾಸಾಂ ತಥೈವಾನ್ಯಃ ಸ್ಥೂಲದರ್ಶೀ ಪ್ರಪಶ್ಯತಿ ॥೧೧೩॥

ಈ ಕಲೆಗಳಿಗೆ ಅವ್ಯಕ್ತವೆನಿಸಿದ ಮೂಲಪ್ರಕೃತಿಯೇ ಕಾರಣವೆಂದು ಕೆಲವರು ಹೇಳುತ್ತಾರೆ. ಸ್ಥೂಲದೃಷ್ಟಿಯಿಂದ ನೋಡುವ ಕೆಲವರು ವ್ಯಕ್ತ ತತ್ತ್ವವೆನಿಸಿದ ಇಪ್ಪತ್ನಾಲ್ಕು ತತ್ತ್ವಗಳೇ ಈ ಕಲೆಗಳಿಗೆ ಕಾರಣವೆಂದು ಹೇಳುತ್ತಾರೆ.

ಅವ್ಯಕ್ತಂ ಯದಿ ವಾ ವ್ಯಕ್ತಂ ದ್ವಯಂ ವಾಥ ಚತುಷ್ಟಯಮ್ ।
ಪ್ರಕೃತಿಂ ಸರ್ವಭೂತಾನಾಂ ಪಶ್ಯಂತ್ಯಧ್ಯಾತ್ಮಚಿಂತಕಾಃ ॥೧೧೪॥

ಕೆಲವರು ಈ ಶರೀರಕ್ಕೆ ಅವ್ಯಕ್ತವೋ, ವ್ಯಕ್ತವೋ ಅಥವಾ ವ್ಯಕ್ತಾವ್ಯಕ್ತವೋ, ಜರಾಯುಜ, ಉದ್ಭಿಜ, ಅಂಡಜ, ಸ್ವೇದಜ ಎಂಬ ನಾಲ್ಕೋ , ಅವ್ಯಕ್ತವಾದ ಪ್ರಕೃತಿ ಸಮಸ್ತ ಭೂತಗಳ ಉತ್ಪತ್ತಿಗೆ ಕಾರಣವಾಗಿದೆ ಎಂದು ಅಧ್ಯಾತ್ಮಚಿಂತಕರು ಹೇಳುತ್ತಾರೆ.

ಸೇಯಂ ಪ್ರಕೃತಿರವ್ಯಕ್ತಾ ಕಲಾಭಿರ್ವ್ಯಕ್ತತಾಂ ಗತಾ ।
ಅಹಂ ಚ ತ್ವಂ ಚ ರಾಜೇಂದ್ರ ಯೇ ಚಾಪ್ಯನ್ಯೇ ಶರೀರಿಣಃ ॥೧೧೫॥

ಈ ಅವ್ಯಕ್ತವಾದ ಪ್ರಕೃತಿಯು ಮೂವತ್ತು ಕಲೆಗಳಿಂದ ಶರೀರರೂಪ ಅಭಿವ್ಯಕ್ತಿಯನ್ನು ಹೊಂದಿದೆ. ರಾಜನೇ, ನಾನು ನೀನು ಇತರ ಪ್ರಾಣಿಗಳು ಈ ಪ್ರಕೃತಿಯ ಕಾರ್ಯವೆಂದೇ ನೀನು ತಿಳಿದುಕೊ.

ಬಿಂದುನ್ಯಾಸಾದಯೋಽವಸ್ಥಾಃ ಶುಕ್ರಶೋಣಿತಸಂಭವಾಃ ।
ಯಾಸಾಮೇವ ನಿಪಾತೇನ ಕಲಲಂ ನಾಮ ಜಾಯತೇ ॥೧೧೬॥

ಗರ್ಭದಲ್ಲಿ ವೀರ್ಯವನ್ನು ಇಡುವುದೇ ಮೊದಲಾದ ಅವಸ್ಥೆಗಳೆಲ್ಲ ಶುಕ್ಲಶೋಣಿತ ಸಂಬಂಧದಿಂದಲೇ ಉಂಟಾದವುಗಳು. ಅವುಗಳ ಮಿಶ್ರಣದಿಂದ ತಾಯಿಯ ಗರ್ಭದಲ್ಲಿ ಕಲಲ ಎಂಬುದು ಉತ್ಪನ್ನವಾಗುತ್ತದೆ.

ಕಲಲಾದ್ಬುದ್ಬುದುತ್ಪತ್ತಿಃ ಪೇಶೀ ಚಾಪ್ಯರ್ಬುದೋದ್ಭವಾ ।
ಪೇಶ್ಯಾಸ್ತ್ವಂಗಾಭಿನಿರ್ವೃತ್ತಿರ್ನಖರೋಮಾಣಿ ಚಾಂಗತಃ ॥೧೧೭॥

ಈ ಕಲಲದಿಂದ ಬುದ್ಬುದವೂ, ಬುದ್ಬುದದಿಂದ ಪೇಶಿಯು, ಪೇಶಿಯಿಂದ ಅವಯವಗಳು, ಅವಯವಗಳಿಂದ ನಖ-ರೋಮಗಳು ಉಂಟಾಗುತ್ತವೆ.

ಸಂಪೂರ್ಣೇ ನವಮೇ ಮಾಸೇ ಜಂತೋರ್ಜಾತಸ್ಯ ಮೈಥಿಲ ।
ಜಾಯತೇ ನಾಮರೂಪತ್ವಂ ಸ್ತ್ರೀ ಪುಮಾನ್ ವೇತಿ ಲಿಂಗತಃ ॥೧೧೮॥

ಒಂಬತ್ತನೆಯ ತಿಂಗಳು ಪೂರ್ಣವಾದ ಬಳಿಕ ಹುಟ್ಟಿದ ಪ್ರಾಣಿಗಳ ಚಿಹ್ನೆಯನ್ನು ನೋಡಿ ಹೆಣ್ಣು-ಗಂಡೆಂದು ವ್ಯವಹಾರ ಮಾಡುತ್ತಾರೆ. ನಂತರ ಅವುಗಳಿಗೆ ನಾಮ, ರೂಪವು ಏರ್ಪಡುತ್ತದೆ.

ಜಾತಮಾತ್ರಂ ತು ತದ್ರೂಪಂ ದೃಷ್ಟ್ವಾ ತಾಮ್ರನಖಾಂಗುಲಿ ।
ಕೌಮಾರರೂಪಮಾಪನ್ನಂ ರೂಪತೋ ನೋಪಲಭ್ಯತೇ ॥೧೧೯॥

ಹುಟ್ಟಿದ ಕೂಡಲೇ ಆ ಉತ್ಪನ್ನ ಶಿಶುವಿನ ರೂಪವನ್ನು ಕಂಡು ಕೆಂಪಾಗಿರುವ ನಖಗಳು ಬೆರಳುಗಳು ಕೌಮಾರರೂಪವನ್ನು ಹೊಂದಿರುವ ಆ ಶಿಶುವನ್ನು ಅರ್ಥಾತ್ ಸ್ಥೂಲಶರೀರವನ್ನು ನೋಡುತ್ತಾರೆ ವಿನಾ ಆ ಜೀವನ ಯೋಗ್ಯತೆಯನ್ನು ಯಾರೂ ನೋಡರು.

ಕೌಮಾರಾದ್ಯೌವನಂ ಚಾಪಿ ಸ್ಥಾವಿರ್ಯಂ ಚಾಪಿ ಯೌವನಾತ್ ।
ಅನೇನ ಕ್ರಮಯೋಗೇನ ಪೂರ್ವಂ ಪೂರ್ವಂ ನ ಲಭ್ಯತೇ ॥೧೨೦॥

ಬಳಿಕ ಕೌಮಾರಾವಸ್ಥೆಯನ್ನು, ಯೌವನಾವಸ್ಥೆಯನ್ನು, ವಾರ್ಧಕ್ಯಾವಸ್ಥೆಯನ್ನು ಕ್ರಮವಾಗಿ ಕಾಣುತ್ತಾ ಹೋಗುತ್ತೇವೆ. ಈ ಕ್ರಮದಿಂದ ಮುಂದಿನ ಅವಸ್ಥೆಯನ್ನು ಹೊಂದುವಾಗ ಹಿಂದಿನ ಅವಸ್ಥೆಯು ಕಾಣಲ್ಪಡುವುದಿಲ್ಲ.

ಕಲಾನಾಂ ಪೃಥಗರ್ಥಾನಾಂ ಪ್ರತಿಭೇದಃ ಕ್ಷಣೇ ಕ್ಷಣೇ ।
ವರ್ತತೇ ಸರ್ವಭೂತೇಷು ಸೌಕ್ಷ್ಮ್ಯಾತ್ತು ನ ವಿಭಾವ್ಯತೇ ॥೧೨೧॥

ಬೇರೆ ಬೇರೆ ರೂಪಾಂತರಗಳಿಂದ ಕಲೆಗಳು ಕ್ಷಣಕ್ಷಣಕ್ಕೆ ವ್ಯತ್ಯಾಸವನ್ನು ಹೊಂದುತ್ತಿರುತ್ತವೆ. ಸಮಸ್ತ ಭೂತಗಳಲ್ಲಿ ಆಗುವ ಈ ವ್ಯತ್ಯಾಸವು ತುಂಬಾ ಸೂಕ್ಷ್ಮವಾಗಿರುವುದರಿಂದ ವಿಭಾಗಿಸಿ ತಿಳಿಯಲಾಗುವುದಿಲ್ಲ.

ನ ಚೈಷಾಮಪ್ಯಯೋ ರಾಜಲ್ಲಕ್ಷ್ಯತೇ ಪ್ರಭವೋ ನ ಚ ।
ಅವಸ್ಥಾಯಾಮವಸ್ಥಾಯಾಂ ದೀಪಸ್ಯೇವಾರ್ಚಿಷೋ ಗತಿಃ ॥೧೨೨॥

ಇವುಗಳ ಉತ್ಪತ್ತಿ-ವಿನಾಶಗಳೂ ತಿಳಿಯುವುದಿಲ್ಲ. ದೀಪ-ಜ್ವಾಲೆಯಲ್ಲಿ ಉಂಟಾಗುವ ಗತಿಯಂತೆ ಒಂದೊಂದು ಅವಸ್ಥೆಯೂ ತಿಳಿಯದಂತೆ ನಡೆದು ಹೋಗುತ್ತದೆ.

ತಸ್ಯಾಪ್ಯೇವಂಪ್ರಭಾವಸ್ಯ ಸದಶ್ವಸ್ಯೇವ ಧಾವತಃ ।
ಅಜಸ್ರಂ ಸರ್ವಲೋಕಸ್ಯ ಕಃ ಕುತೋ ವಾ ನ ವಾ ಕುತಃ ॥೧೨೩॥

ಕಸ್ಯೇದಂ ಕಸ್ಯ ವಾ ನೇದಂ ಕುತೋ ವೇದಂ ನ ವಾ ಕುತಃ ।
ಸಂಬಂಧಃ ಕೋಽಸ್ತಿ ಭೂತಾನಾಂ ಸ್ವೈರಪ್ಯವಯವೈರಿಹ ॥೧೨೪॥

ಸಮಸ್ತ ಜಗತ್ತು ಇದೇ ಸ್ವಭಾವದಿಂದ ಕೂಡಿದೆ. ಈ ಪ್ರಪಂಚವು ಉತ್ತಮ ಆರೋಗ್ಯವಂತ ಕುದುರೆಯ ವೇಗದಂತೆ ಯಾವಾಗಲೂ ಓಡುತ್ತಲೇ ಇದೆ. ಹೀಗಿರುವಾಗ ಯಾವನು ಎಲ್ಲಿಂದ ಬಂದಿದ್ದಾನೆ? ಎಲ್ಲಿಂದ ಬರಲಿಲ್ಲ? ಯಾರಿಗೆ ಸಂಬಂಧಿಸಿದೆ? ಯಾರಿಗೆ ಸಂಬಂಧವಿಲ್ಲ? ಇದು ಎಲ್ಲಿಂದ ಬಂದಿದೆ? ಎಲ್ಲಿಂದ ಬರಲಿಲ್ಲ? ಇದರಲ್ಲಿ ಪ್ರಾಣಿಗಳಿಗೆ ತಮ್ಮ ಅವಯವಗಳ ಜೊತೆಗೆ ಯಾವ ಸಂಬಂಧವಿದೆ? ಈ ರೀತಿಯಾದ ಪ್ರಶ್ನೆಗಳಿಗೆ ಅವಕಾಶವು ಇರುವುದಿಲ್ಲ.

ಯಥಾದಿತ್ಯಾನ್ಮಣೇಶ್ಚೈವ ವೀರುದ್ಭ್ಯಶ್ಚೈವ ಪಾವಕಃ ।
ಭವತ್ಯೇವಂ ಸಮುದಯಾತ್ ಕಲಾನಾಮಪಿ ಜಂತವಃ ॥೧೨೫॥

ಸೂರ್ಯನಿಂದಲೂ, ಸೂರ್ಯಕಾಂತಿಯ ಮಣಿಯಿಂದಲೂ, ಲತೆಗಳಿಂದಲೂ ಲತೆಗಳಿಂದುಂಟಾಗುವ ಬೆಂಕಿಯಿಂದಲೂ ಕಲೆಗಳ ಸಮುದಾಯದಿಂದ ಜಂತುಗಳ ಉತ್ಪತ್ತಿಯು ಆಗುತ್ತಿರುತ್ತದೆ.

ಆತ್ಮನ್ಯೇವಾತ್ಮನಾತ್ಮಾನಂ ಯಥಾ ತ್ವಮನುಪಶ್ಯಸಿ ।
ಏವಮೇವಾತ್ಮನಾತ್ಮಾನಮನ್ಯಸ್ಮಿನ್ ಕಿಂ ನ ಪಶ್ಯಸಿ ।
ಯದ್ಯಾತ್ಮನಿ ಪರಸ್ಮಿಂಶ್ಚ ಸಮತಾಮಧ್ಯವಸ್ಯಸಿ ॥೧೨೬॥

ನಿನ್ನ ಮನಸ್ಸಿನಲ್ಲಿ ನಿನ್ನ ಅಂತರ್ಯಾಮಿಯಾದ ಪರಮಾತ್ಮನನ್ನು ಯಾವಾಗಲೂ ನೀನು ಹೇಗೆ ನೋಡುತ್ತಿಯೋ ಅದರಂತೆ ಬೇರೆ ಇರುವ ಆತ್ಮನನ್ನು ಏಕೆ ನೀನು ನೋಡುತ್ತಿಲ್ಲ? ನೀನು ನಿನ್ನಲ್ಲಿಯೂ ಪರರಲ್ಲಿಯೂ ಸಮಾನವಾದ ಬುದ್ಧಿ ಉಳ್ಳವನಾಗಿದ್ದರೆ ಸಮತ್ವವನ್ನೇ ನೋಡಬೇಕಲ್ಲವೆ?

ಅಥ ಮಾಂ ಕಾಸಿ ಕಸ್ಯೇತಿ ಕಿಮರ್ಥಮನುಪೃಚ್ಛಸಿ ।
ಇದಂ ಮೇ ಸ್ಯಾದಿದಂ ನೇತಿ ದ್ವಂದ್ವೈರ್ಮುಕ್ತಸ್ಯ ಮೈಥಿಲ ।
ಕಾಸಿ ಕಸ್ಯ ಕುತೋ ವೇತಿ ವಚನೇ ಕಿಂ ಪ್ರಯೋಜನಮ್ ॥೧೨೭॥

ಹೀಗಿದ್ದರೂ ನೀನು ಯಾರು, ಎಲ್ಲಿಯವಳು, ಯಾರಿಗೆ ಸೇರಿದವಳು ಎಂದೇಕೆ ಪ್ರಶ್ನೆಯನ್ನು ಮಾಡುತ್ತಿ ? ಇದು ನಮಗೆ ಬೇಕು, ಇದು ನಮಗೆ ಬೇಡ ಎಂಬ ಇಚ್ಛಾ-ದ್ವೇಷಗಳೆಂಬ ದ್ವಂದ್ವವಿಲ್ಲದವನಿಗೆ ಮತ್ತೊಬ್ಬರನ್ನು ನೋಡಿ ನೀನು ಯಾರು, ಎಲ್ಲಿಯವಳು ಎಂಬ ಪ್ರಶ್ನೆಗಳು ಹುಟ್ಟುವುದೇ ಇಲ್ಲ. ಈ ಪ್ರಶ್ನೆಗಳಿಂದ ಅವನಿಗೆ ಆಗುವ ಪ್ರಯೋಜನವಾದರೂ ಏನು?

ರಿಪೌ ಮಿತ್ರೇऽಥ ಮಧ್ಯಸ್ಥೇ ವಿಜಯೇ ಸಂಧಿವಿಗ್ರಹೇ ।
ಕೃತವಾನ್ ಯೋ ಮಹೀಪಾಲ ಕಿಂ ತಸ್ಮಿನ್ಮುಕ್ತಲಕ್ಷಣಮ್ ॥೧೨೮॥

ಶತ್ರುಗಳು, ಉದಾಸೀನರು, ಜಯಾಪಜಯಗಳು, ಸಂಧಿವಿಗ್ರಹಗಳು ಇವುಗಳಲ್ಲಿ ಅದಕ್ಕೆ ತಕ್ಕಂತೆ ಬೇರೆ ಬೇರೆ ಪ್ರವೃತ್ತಿ ಸ್ವಭಾವವುಳ್ಳ ರಾಜರಲ್ಲಿ ಮುಕ್ತರ ಲಕ್ಷಣ ಎಲ್ಲಿರಲು ಸಾಧ್ಯ ?

ತ್ರಿವರ್ಗೇ ಸಪ್ತಧಾ ನ್ಯಸ್ತಂ ಯೋ ನ ವೇದೇಹ ಕರ್ಮಸು ।
ಸಂಗವಾನ್ ಯಸ್ತ್ರಿವರ್ಗೇ ಚ ಕಿಂ ತಸ್ಮಿನ್ಮುಕ್ತಲಕ್ಷಣಮ್ ॥೧೨೯॥

ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗಗಳಲ್ಲಿ ಅಗ್ನಿಷ್ಟೋಮಾದಿ ಏಳು ಕ್ರತುರೂಪವಾದ ಕರ್ಮಗಳು ಅಭಿವ್ಯಕ್ತವಾಗಿವೆ. ಯಾವನು ಏಳು ವಿಧವಾದ

ಕರ್ಮಗಳನ್ನು ತಿಳಿಯದೆ ಅವುಗಳಲ್ಲಿ ಸಂಗವನ್ನು ಹೊಂದಿರುತ್ತಾನೋ ಅವನಲ್ಲಿ ಮುಕ್ತಿಯ ಲಕ್ಷಣವು ಎಲ್ಲಿರಲು ಸಾಧ್ಯ ?

ಪ್ರಿಯೇ ಚೈವಾಪ್ರಿಯೇ ಚೈವ ದುರ್ಬಲೇ ಬಲವತ್ಯಪಿ ।
ಯಸ್ಯ ನಾಸ್ತಿ ಸಮಂ ಚಕ್ಷುಃ ಕಿಂ ತಸ್ಮಿನ್ಮುಕ್ತಲಕ್ಷಣಮ್ ॥೧೩೦॥

ಯಾವನ ದೃಷ್ಟಿಯಲ್ಲಿ ಪ್ರಿಯನಲ್ಲಿಯೂ ಅಪ್ರಿಯನಲ್ಲಿಯೂ, ಬಲಿಷ್ಠನಲ್ಲಿಯೂ ದುರ್ಬಲನಲ್ಲಿಯೂ ಸಮಾನಭಾವವು ಇರುವುದಿಲ್ಲವೋ ಅವನಲ್ಲಿ ಮುಕ್ತನ ಲಕ್ಷಣವು ಎಲ್ಲಿರಲು ಸಾಧ್ಯ ?

ತದಮುಕ್ತಸ್ಯ ತೇ ಮೋಕ್ಷೇ ಯೋಭಿಮಾನೋ ಭವೇನ್ನೃಪ ।
ಸುಹೃದ್ಭಿಃ ಸ ನಿವಾರ್ಯಸ್ತೇ ವಿಚಿತ್ತಸ್ಯೇವ ಭೇಷಜೈಃ ॥೧೩೧॥

ಆದ್ದರಿಂದ ಯೋಗಬಲ ಇಲ್ಲದವನಿಗೆ ಮೋಕ್ಷದಲ್ಲಿ ಇಚ್ಛೆ ಹುಟ್ಟುವುದು ಅಪಥ್ಯವನ್ನಾಚರಿಸುವವನಿಗೆ ಔಷಧಿಯ ಸೇವನೆಯಂತೆ ನಿರರ್ಥಕವಾಗುತ್ತದೆ.

ತಾನಿ ತಾನ್ಯನುಸಂದಶ್ಯ ಸಂಗಸ್ಥಾನಾನ್ಯರಿಂದಮ ।
ಆತ್ಮನ್ಯಾತ್ಮನಿ ಸಂಪಶ್ಯೇತ್ ಕಿಮನ್ಯನ್ಮುಕ್ತಲಕ್ಷಣಮ್ ॥೧೩೨॥

ಇಮಾನ್ಯನ್ಯಾನಿ ಸೂಕ್ಷ್ಮಾಣಿ ಮೋಕ್ಷಮಾಶ್ರಿತ್ಯ ಕಾನಿಚಿತ್ ।
ಚತುರಂಗಪ್ರವೃತ್ತಾನಿ ಸಂಗಸ್ಥಾನಾನಿ ಮೇ ಶೃಣು ॥೧೩೩॥

ಸಂಗಸ್ಥಾನಗಳು ಯಾವುದ್ಯಾವುದೆಂದು ಅಲ್ಲಲ್ಲೇ ಚೆನ್ನಾಗಿ ಬುದ್ಧಿಪೂರ್ವಕವಾಗಿ ಅರ್ಥ ಮಾಡಿಕೊಂಡು ಹೃದಯದಲ್ಲಿ ಪರಮಾತ್ಮನನ್ನು ಕಾಣುವವನಿಗೆ ಇದಕ್ಕಿಂತ ಬೇರೆಯಾದ ಮುಕ್ತಲಕ್ಷಣವು ಯಾವುದಿದೆ? ಮೋಕ್ಷವನ್ನುದ್ದೇಶಿಸಿರುವ ನಿನಗೆ ಪಟ್ಟಣ, ಪಟ್ಟಣದೊಳಗಿರುವ ಮನೆ, ಮನೆಯೊಳಗಿರುವ ಹಾಸಿಗೆ, ಆ ಹಾಸಿಗೆಯಲ್ಲಿರುವ ಪತ್ನಿ, ಅದರ ಅರ್ಧಭಾಗಕ್ಕೆ ಮಾತ್ರ ಅಧಿಕಾರವನ್ನು ಹೊಂದಿರುವ ನೀನು ಈ ರೀತಿಯಾದ ಅನೇಕ ಸೂಕ್ಷ್ಮವಿಚಾರಗಳನ್ನು, ಸಂಗಸ್ಥಾನಗಳನ್ನು ತಿಳಿಸುತ್ತೇನೆ, ಕೇಳು.

ಯ ಇಮಾಂ ಪೃಥಿವೀಂ ಕೃತ್ಸ್ನಮೇಕಚ್ಛತ್ರಾಂ ಪ್ರಶಾಸ್ತಿ ಹ ।
ಏಕಮೇವ ಸ ವೈ ರಾಜಾ ಪುರಮಧ್ಯಾವಸತ್ಯುತ ॥೧೩೪॥

ನೀನು ಈ ಸಮಗ್ರವಾದ ಭೂಮಿಗೆ ಏಕಚ್ಛತ್ರಾಧಿಪತಿಯಾಗಿ ಆಡಳಿತವನ್ನು ನಡೆಸುತ್ತಿರುವಿ. ಆಳುವ ಚಕ್ರವರ್ತಿಯಾದ ನಿನಗೆ ವಾಸಿಸುವ ಪಟ್ಟಣವು ಒಂದೇ ಆಗಿದೆ. ಅರ್ಥಾತ್ ಸಮಗ್ರಭೂಮಂಡಲದಲ್ಲಿ ರಾಜನೆಂದು ಕರೆಸಿಕೊಂಡರೂ ನೀನು ವಾಸಮಾಡುವುದು ಒಂದು ಪಟ್ಟಣದಲ್ಲಿ ಮಾತ್ರ.

ತತ್ಪುರೇ ಚೈಕಮೇವಾಸ್ಯ ಗೃಹಂ ಯದಧಿತಿಷ್ಠತಿ ।
ಗೃಹೇ ಶಯನಮಪ್ಯೇಕಂ ನಿಶಾಯಾಂ ಯತ್ರ ಲೀಯತೇ ॥೧೩೫॥

ಆ ಪಟ್ಟಣದಲ್ಲಿಯೂ ನೀನು ವಾಸಮಾಡುವ ಸ್ಥಳವು ಒಂದೇ ಮನೆಯಾಗಿದೆ. ಆ ಮನೆಯಲ್ಲಿಯೂ ಮಲಗುವ ಕೋಣೆ ಒಂದೇ ಆಗಿದೆ. ಕತ್ತಲೆಯ ಆ ಕೋಣೆಯನ್ನು ಹೊಕ್ಕುವಿ.

ಶಯ್ಯಾರ್ಧಂ ತಸ್ಯ ಚಾಪ್ಯತ್ರ ಸ್ತ್ರೀಪೂರ್ವಮಧಿತಿಷ್ಠತಿ ।
ತದನೇನ ಪ್ರಸಂಗೇನ ಫಲೇನೈವೇಹ ಯುಜ್ಯತೇ ॥೧೩೬॥

ಆ ಮಲಗುವ ಕೋಣೆಯಲ್ಲಿಯೂ ಒಂದು ಹಾಸಿಗೆಯನ್ನು ಆಶ್ರಯಿಸುವಿ. ಆ ಹಾಸಿಗೆಯಲ್ಲಿಯೂ ಅರ್ಧಭಾಗವನ್ನು ಹೆಂಡತಿ ಆಕ್ರಮಿಸಿಕೊಂಡಿರುತ್ತಾಳೆ, ಉಳಿದ ಅರ್ಧಭಾಗಕ್ಕೆ ಮಾತ್ರ ನೀನು ಅಧಿಕಾರಿಯಾಗಿರುತ್ತಿ. ಈ ರೀತಿಯಾದ ಪ್ರಸಂಗದಿಂದ ಸ್ವಲ್ಪವೇ ಫಲವನ್ನು ನೀನು ಹೊಂದಿರುತ್ತಿ.

ಏವಮೇವೋಪಭೋಗೇಷು ಭೋಜನಾಚ್ಛಾದನೇಷು ಚ ।
ಗುಣೇಷು ಪರಿಮೇಯೇಷು ನಿಗ್ರಹಾನುಗ್ರಹೌ ಪ್ರತಿ ॥೧೩೭॥

ಇದರಂತೆ ರಾಜನು ಸಂಪತ್ತಿನಲ್ಲಿಯೂ, ವಸ್ತ್ರಭೋಜನಾದಿಗಳಲ್ಲಿಯೂ ತನಗಿರುವ ಪೂರ್ಣಬಾಧ್ಯತೆಯಿಂದ ಅನುಭವಿಸುವ ಫಲವು ಅತ್ಯಲ್ಪವಾದುದೇ. ಶಿಕ್ಷೆ, ರಕ್ಷೆಯ ವಿಷಯದಲ್ಲಿಯೂ ರಾಜನು ಯಾವಾಗಲೂ ತನ್ನ ವಶನಾಗಿರುವುದಿಲ್ಲ.

ಪರತಂತ್ರಃ ಸದಾ ರಾಜಾ ಸ್ವಲ್ಪೇ ಸೋऽಪಿ ಪ್ರಸಜ್ಜತೇ ।
ಸಂಧಿವಿಗ್ರಹಯೋಗೇ ಚ ಕುತೋ ರಾಜ್ಞಃ ಸ್ವತಂತ್ರತಾ ॥೧೩೮॥

ಯಾವಾಗಲೂ ಅಸ್ವತಂತ್ರನಾಗಿರುವ ರಾಜನು ಸ್ವಲ್ಪ ಫಲದಲ್ಲಿಯೇ ತುಂಬಾ ಸಂತೋಷವನ್ನು ಹೊಂದುತ್ತಾನೆ. ಸಂಧಿ-ವಿಗ್ರಹಗಳಲ್ಲಿ ರಾಜನಿಗೆ ಸ್ವಾತಂತ್ರ್ಯ ಇರುವುದಿಲ್ಲ.

ಸ್ತ್ರೀಷು ಕ್ರೀಡಾವಿಹಾರೇಷು ನಿತ್ಯಮಸ್ಯಾಸ್ವತಂತ್ರತಾ ।
ಮಂತ್ರೇ ಚಾಮಾತ್ಯಸಮಿತೌ ಕುತ ಏವ ಸ್ವತಂತ್ರತಾ ॥೧೩೯॥

ರಾಜನು ಸ್ತ್ರೀಯರ ವಿಷಯದಲ್ಲಿ, ಕ್ರೀಡಾವಿಹಾರಗಳಲ್ಲಿ ನಿತ್ಯವೂ ಅಸ್ವತಂತ್ರನಾಗಿರುತ್ತಾನೆ. ಮಂತ್ರಿಗಳೊಡನೆ ಮಂತ್ರಾಲೋಚನೆಯಲ್ಲಿಯೂ ಕೂಡ ಅವರಿಗೆ ಸ್ವಾತಂತ್ರ್ಯ ಇರುವುದಿಲ್ಲ.

ಯದಾ ತ್ವಾಜ್ಞಾಪಯತ್ಯನ್ಯಾಂಸ್ತದಾಸ್ಯೋಕ್ತಾ ಸ್ವತಂತ್ರತಾ ।
ಅವಶಃ ಕಾರ್ಯತೇ ತತ್ರ ತಸ್ಮಿಂಸ್ತಸ್ಮಿನ್ ಗುಣೇ ಸ್ಥಿತಃ ॥೧೪೦॥

ಮತ್ತೊಬ್ಬನಿಗೆ ಆಜ್ಞೆ ಮಾಡುವಾಗ ಮಾತ್ರ ಅವನು ತನಗೆ ಸ್ವಾತಂತ್ರ್ಯವಿದೆ ಎಂದು ತಿಳಿಯಬಹುದು. ಆದರೆ ಒಂದೊಂದು ಕ್ಷಣದಲ್ಲಿಯೂ ಅವನು ಆಯಾ ಗುಣಗಳಿಗೆ ಅಧೀನನಾಗಿ ತನ್ನ ವಶವಿಲ್ಲದೆ ಕಾರ್ಯವನ್ನು ನಡೆಸುತ್ತಿರುತ್ತಾನೆ.

ಸ್ವಪ್ತುಕಾಮೋ ನ ಲಭತೇ ಸ್ವಪ್ತುಂ ಕಾರ್ಯಾರ್ಥಿಭಿರ್ಜನೈಃ ।
ಶಯನೇ ಚಾಪ್ಯನುಜ್ಞಾತಃ ಸುಪ್ತ ಉತ್ಥಾಪ್ಯತೇವಶಃ ॥೧೪೧॥

ಅವನಿಗೆ ನಿದ್ರೆಯಿಂದ ಕಣ್ಣು ಸೆಳೆಯುತ್ತಿರುವಾಗಲೂ ರಾಜಕಾರ್ಯದ ನಿರ್ಬಂಧದಿಂದ ಕೆಲವೊಂದು ಬಾರಿ ಅವನಿಗೆ ನಿದ್ರೆ ಮಾಡಲೂ ಸ್ವಾತಂತ್ರ್ಯ ಇರುವುದಿಲ್ಲ. ಹಾಸಿಗೆಯ ಮೇಲೆ ಮಲಗಿದ್ದರೂ ಬಲಾತ್ಕಾರದಿಂದ ಎಚ್ಚರಗೊಳ್ಳುತ್ತಾನೆ. ಯಾವ ಕಾರ್ಯವನ್ನೂ ಮಾಡಲು ಅವನಿಗೆ ಸ್ವಾತಂತ್ರ್ಯವಿರುವುದಿಲ್ಲ.

ಸ್ನಾಹ್ಯಾಲಭ ಪಿಬ ಪ್ರಾಶ ಜುಹುಧ್ಯಗ್ನೀನ್ ಯಜೇತಿ ಚ ।
ವದಸ್ವ ಶೃಣು ಚಾಪೀತಿ ವಿವಶಃ ಕಾರ್ಯತೇ ಪರೈಃ ॥೧೪೨॥

ಆ ಪ್ರಸಂಗದಲ್ಲಿ ಒಬ್ಬ ದೂತನು ಬಂದು ಏಳು, ಸ್ನಾನ ಮಾಡು, ಭೋಜನಕ್ಕೆ ಬಾ, ಪಾನೀಯವನ್ನು ಸ್ವೀಕರಿಸು, ಹೋಮವನ್ನು ಮಾಡು, ಯಾಗ ಮಾಡು, ಇದನ್ನು ಕೇಳು, ಅದನ್ನು ಕೇಳು ಎಂದು ಇನ್ನೊಬ್ಬರ ವಶನಾಗಿಯೇ ರಾಜನಾದವನು ಕಾರ್ಯವನ್ನು ಮಾಡುತ್ತಿರುತ್ತಾನೆ.

ಅಭಿಗಮ್ಯಾಭಿಗಮ್ಯೈನಂ ಯಾಚಂತೇ ಸತತಂ ನರಾಃ ।
ನ ಚಾಪ್ಯುತ್ಸಹತೇ ದಾತುಂ ವಿತ್ತರಕ್ಷೀ ಮಹಾಜನಾತ್ ॥೧೪೩॥

ಇದಲ್ಲದೆ ಆಗಾಗ ಜನರು ಬಂದು ಯಾಚಿಸುತ್ತಾರೆ. ಭಂಡಾರವನ್ನು ವೃದ್ಧಿಗೊಳಿಸಬೇಕೆಂಬ ಅಪೇಕ್ಷೆಯುಳ್ಳ ರಾಜನಿಗೆ ದಾನ ಮಾಡುವುದಕ್ಕೂ ಮನಸ್ಸು ಬರುವುದಿಲ್ಲ.

ದಾನೇ ಕೋಶಕ್ಷಯೋ ಹ್ಯಸ್ಯ ವೈರಂ ಚಾಪ್ಯಪ್ರಯಚ್ಛತಃ ।
ಕ್ಷಣೇನಾಸ್ಯೋಪವರ್ತಂತೇ ದೋಷಾ ವೈರಾಗ್ಯಕಾರಕಾಃ ॥೧೪೪॥

ಕೈಬಿಟ್ಟು ದಾನ ಮಾಡುತ್ತಿದ್ದರೆ ಬೊಕ್ಕಸವೆಲ್ಲ ಬರಿದಾಗುತ್ತದೆ. ಉದಾರಿಯಾದ ರಾಜನಿಗೆ ಅವನ ಕಡೆಯಲ್ಲಿಯೇ ಇರುವ ವ್ಯಕ್ತಿಗಳಿಂದ ವಿರೋಧವು ಒದಗಿಬರುತ್ತದೆ. ದಾನ ಮಾಡದಿದ್ದಲ್ಲಿ ಇನ್ನೊಂದು ಕ್ರಮದ ವೈರವು ಉತ್ಪತ್ತಿಯಾಗುತ್ತದೆ. ಒಂದೇ ಕ್ಷಣದಲ್ಲಿ ಅವನಿಗೆ ಬೇಸರವನ್ನುಂಟು ಮಾಡುವ ಎಷ್ಟೋ ದೋಷಗಳು ಬಂದು ಒದಗುತ್ತವೆ.

ಪ್ರಾಜ್ಞಾನ್ ಶೂರಾಂಸ್ತಥೈವಾಢ್ಯಾನೇಕಸ್ಥಾನೇऽಪಿ ಶಂಕತೇ ।
ಭಯಮಪ್ಯಭಯೇ ರಾಜ್ಞೋ ಯೈಶ್ಚ ನಿತ್ಯಮುಪಾಸ್ಯತೇ ॥೧೪೫॥

ತನ್ನ ಸಮೀಪದಲ್ಲೇ ಇದ್ದು ತನ್ನನ್ನು ಸೇವಿಸುತ್ತಿದ್ದರೂ ಪ್ರಾಜ್ಞರು, ಶೂರರು, ವೈದ್ಯರು ಇವರ ವಿಷಯದಲ್ಲಿ ರಾಜನಿಗೆ ಅನುಮಾನವು ಇದ್ದೇ ಇರುತ್ತದೆ. ಭಯ ಕಾರಣವಿಲ್ಲದಿದ್ದಾಲೂ ತನ್ನ ಸೇವಕರ ವಿಷಯದಲ್ಲಿ ಪ್ರತಿಕ್ಷಣವೂ ಭಯವನ್ನು ಅನುಭವಿಸುತ್ತಿರುತ್ತಾನೆ.

ಯದಾ ಚೈತೇ ಪ್ರದುಷ್ಯಂತಿ ರಾಜನ್ಯೇ ಕೀರ್ತಿತಾ ಮಯಾ ।
ತದೈವಾಸ್ಯ ಭಯಂ ತೇಭ್ಯೋ ಜಾಯತೇ ಪಶ್ಯ ಯಾದೃಶಮ್ ॥೧೪೬॥

ರಾಜನೇ, ಹೀಗಿರುವುದರಿಂದ ಹಿಂದೆ ಹೇಳಿದವರೆಲ್ಲರೂ ರಾಜರ ವಿಷಯದಲ್ಲಿ ಸಂಶಯಕ್ಕೆ ಆಸ್ಪದರಾದವರೇ. ಇವರಿಗೆ ಅವನಿಂದ ಎಷ್ಟು ಭೀತಿ ಇರುತ್ತದೆಂಬುದನ್ನು ಯೋಚಿಸಿ ನೋಡು.

ಸರ್ವಃ ಸ್ವೇ ಸ್ವೇ ಗೃಹೇ ರಾಜಾ ಸರ್ವಃ ಸ್ವೇ ಸ್ವೇ ಗೃಹೇ ಗೃಹೀ ।
ನಿಗ್ರಹಾನುಗ್ರಹೌ ಕುರ್ವಂಸ್ತುಲ್ಯೋ ಜನಕ ರಾಜಭಿಃ ॥೧೪೭॥

ಪ್ರತಿಯೊಬ್ಬನೂ ತನ್ನ ಮನೆಯಲ್ಲಿ ತಾನು ರಾಜನೇ. ತಮ್ಮ ತಮ್ಮ ಮನೆಯಲ್ಲಿ ಶಿಕ್ಷೆ ಮತ್ತು ರಕ್ಷೆಗಳನ್ನು ಮಾಡುವ ಸ್ವಾತಂತ್ರ್ಯವುಳ್ಳ ಪ್ರತಿಯೊಬ್ಬ ಗೃಹಸ್ಥನೂ ತನಗೆ ತಾನು ಅರಸನಿಗೆ ಸಮಾನನು.

ಪುತ್ರಾ ದಾರಾಸ್ತಥೈವಾತ್ಮಾ ಕೋಶೋ ಮಿತ್ರಾಣಿ ಸಂಚಯಃ ।
ಪರೈಃ ಸಾಧಾರಣಾ ಹ್ಯೇತೇ ತೈಸ್ತೈರೇವಾಸ್ಯ ಹೇತುಭಿಃ ॥೧೪೮॥

ಹೆಂಡತಿ, ಮಕ್ಕಳು, ಶರೀರ, ಬೊಕ್ಕಸ, ಮಿತ್ರರು, ಇತರ ಸಂಗ್ರಹಗಳು ಎಲ್ಲವೂ ಆಯಾ ಕಾರಣಗಳನ್ನನುಸರಿಸಿ ರಾಜನಿಗೂ ಇತರರಿಗೂ ಸಮಾನವೇ ಆಗಿವೆ.

ಹತೋ ದೇಶಃ ಪುರಂ ದಗ್ಧಂ ಪ್ರಧಾನಃ ಕುಂಜರೋ ಮೃತಃ ।
ಲೋಕಸಾಧಾರಣೇಷ್ವೇಷು ಮಿಥ್ಯಾಜ್ಞಾನೇನ ತಪ್ಯತೇ ॥೧೪೯॥

ದೇಶವು ಹಾಳಾಗಿಹೋಯಿತು, ಪಟ್ಟಣವು ಉರಿದು ಹೋಯಿತು, ಪಟ್ಟದಾನೆಯು ಸತ್ತುಹೋಯಿತು ಎಂಬ ವಿಚಾರಗಳು ಲೋಕಕ್ಕೆಲ್ಲ ಸರ್ವಸಾಮಾನ್ಯವಾಗಿದ್ದರೂ ರಾಜನು ಅವುಗಳೆಲ್ಲವನ್ನೂ ತನ್ನದು ಎಂದು ಪ್ರತ್ಯೇಕವಾದ ಮಮತೆಯಿಂದ ತನ್ನಲ್ಲಿ ತಾನು ತಿಳಿದುಕೊಂಡು ಮಿಥ್ಯಾಜ್ಞಾನದಿಂದ ಸಂಕಟಕ್ಕೆ ತುತ್ತಾಗುತ್ತಾನೆ.

ಅಮುಕ್ತೋ ಮಾನಸೈರ್ದುಃಖೈರಿಚ್ಛಾದ್ವೇಷಪ್ರಿಯೋದ್ಭವೈಃ ।
ಶಿರೋರೋಗಾದಿಭೀ ರೋಗೈಸ್ತಥೈವ ವಿನಿಪಾತಿಭಿಃ ॥೧೫೦॥

ಇಚ್ಛೆ, ದ್ವೇಷ, ಪ್ರೀತಿ ಮುಂತಾದವುಗಳಿಂದ ಉಂಟಾದ ಮನಸ್ಸಿನ ದುಃಖಗಳು ರಾಜನನ್ನೂ ಬಿಟ್ಟಿರುವುದಿಲ್ಲ. ತಲೆನೋವು ಮೊದಲಾದ ರೋಗಗಳಿಂದ ಅವನೂ ಪೀಡಿತನಾಗಿರುತ್ತಾನೆ.

ದ್ವಂದ್ವೈಸ್ತೈಸ್ತೈರುಪಹತಃ ಸರ್ವತಃ ಪರಿಶಂಕಿತಃ ।
ಬಹುಪ್ರತ್ಯರ್ಥಿಕಂ ರಾಜ್ಯಮುಪಾಸ್ತೇ ಗಣಯನ್ನಿಶಾಃ ॥೧೫೧॥

ದುಃಖಕಾರಣಗಳಾದ ದ್ವಂದ್ವಗಳಿಂದ ಸಂಕಟಕ್ಕೆ ತುತ್ತಾಗುತ್ತಾನೆ, ಪ್ರತಿಯೊಂದಕ್ಕೂ ಹೆದರುತ್ತಾನೆ. ಅನೇಕರಿಗೆ ಆಸೆ ಹುಟ್ಟಿಸುವ ರಾಜ್ಯದಲ್ಲಿ ಶತ್ರುಗಳು ಕಣ್ಣಿಟ್ಟು ಕಾದಿರುತ್ತಾರೆ. ಅವರ ಭಯದಿಂದ ನೆಮ್ಮದಿಯೇ ಇಲ್ಲದೆ ರಾತ್ರಿ-ಹಗಲುಗಳನ್ನು ಎಣಿಸುತ್ತಾ ಕಾಲವನ್ನು ಕಳೆಯುತ್ತಾನೆ.

ತದಲ್ಪಸುಖಮತ್ಯರ್ಥಂ ಬಹುದುಃಖಮಸಾರವತ್ ।
ಕೋ ರಾಜ್ಯಮಭಿಪದ್ಯೇತ ಪ್ರಾಪ್ಯ ಚೋಪಶಮಂ ಲಭೇತ್ ॥೧೫೨॥

ಮಹಾರಾಜನೇ, ರಾಜ್ಯವೆಂಬುದು ಅಲ್ಪಸುಖವುಳ್ಳದ್ದು, ಅಪಾರದುಃಖವುಳ್ಳದ್ದು, ಏನೂ ಸಾರವಿಲ್ಲದ್ದು. ಹುಲ್ಲಿನಲ್ಲಿ ಅಡಗಿದ ಬೆಂಕಿಯಂತೆ ಅಪಾಯಕ್ಕೆ ಕಾರಣವಾಗಿದೆ.

ಮಮೇದಮಿತಿ ಯಚ್ಚೇದಂ ಪುರಂ ರಾಷ್ಟ್ರಂ ಚ ಮನ್ಯಸೇ ।
ಬಲಂ ಕೋಶಮಮಾತ್ಯಾಂಶ್ಚ ಕಸ್ಯೈತಾನಿ ನ ವಾ ನೃಪ ॥೧೫೩॥

ರಾಜ್ಯ, ಕೋಶ, ನಗರ, ಸೈನ್ಯ, ಮಂತ್ರಿ ಪರಿವಾರಗಳೆಲ್ಲ ನೀನು ನಿನ್ನದ್ದೆಂದು ತಿಳಿದುಕೊಂಡಿರುವಿ. ಇವು ಒಂದೂ ಯಾರದ್ದೂ ಅಲ್ಲ.

ಮಿತ್ರಾಮಾತ್ಯಂ ಪುರಂ ರಾಷ್ಟ್ರಂ ದಂಡಃ ಕೋಶೋ ಮಹೀಪತಿಃ ।
ಸಪ್ತಾಂಗಶ್ಚಕ್ರಸಂಘಾತೋ ರಾಜ್ಯಮಿತ್ಯುಚ್ಯತೇ ನೃಪ ॥೧೫೪॥

ಮಿತ್ರ, ಅಮಾತ್ಯ, ಪುರ, ರಾಷ್ಟ್ರ, ದಂಡ, ಕೋಶ, ಮಹೀಪತಿ ಎಂಬ ಸಪ್ತಾಂಗಗಳ ಚಕ್ರಗಳ ಸಂಘಾತವೇ ರಾಜ್ಯ ಎಂದು ಕರೆಸಿಕೊಳ್ಳುತ್ತದೆ.

ಸಪ್ತಾಂಗಸ್ಯಾಸ್ಯ ರಾಜ್ಯಸ್ಯ ತ್ರಿದಂಡಸ್ಯೇವ ತಿಷ್ಠತಃ ।
ಅನ್ಯೋನ್ಯಗುಣಯುಕ್ತಸ್ಯ ಕಃ ಕೇನ ಗುಣತೋಧಿಕಃ ॥೧೫೫॥

ಹೀಗೆ ಏಳು ಅಂಗಗಳಿಂದ ಕೂಡಿದ ಸಮುದಾಯವೇ ರಾಜ್ಯವೆನಿಸುತ್ತದೆ. ಈ ಸಪ್ತಾಂಗಗಳಿಂದ ಕೂಡಿದ ರಾಜ್ಯವು ಒಂದೇ ಹಗ್ಗದಿಂದ ಬಿಗಿಯಲ್ಪಟ್ಟ ತ್ರಿದಂಡದಂತೆ ಪರಸ್ಪರ ಆಶ್ರಯದಿಂದ ನೆಲೆನಿಂತಿದೆ. ಒಂದರ ಗುಣವನ್ನು ಒಂದು ಆಶ್ರಯಿಸಿದಾಗ ಯಾರಿಗಿಂತ ಯಾರು ಗುಣದಲ್ಲಿ ಹೆಚ್ಚೆಂದು ಹೇಳಲಾಗುತ್ತದೆ?

ತೇಷು ತೇಷು ಹಿ ಕಾಲೇಷು ತತ್ತದಂಗಂ ವಿಶಿಷ್ಯತೇ ।
ಯೇನ ಯತ್ ಸಿದ್ಧ್ಯತೇ ಕಾರ್ಯಂ ತತ್ತಧಾನ್ಯಾಯ ಕಲ್ಪತೇ ॥೧೫೬॥

ಆಯಾ ಕಾಲದಲ್ಲಿ ಆಯಾ ಅಂಗವು ವಿಶಿಷ್ಟವಾಗಿ ತೋರುತ್ತದೆ. ಒಂದರಿಂದ ಒಂದು ಕಾರ್ಯ ಸಾಧನವಾದಾಗ ಅದಕ್ಕೆ ಪ್ರಾಧಾನ್ಯವು ದೊರೆಯುತ್ತದೆ.

ಸಪ್ತಾಂಗಶ್ಚಾಪಿ ಸಂಘಾತಸ್ತ್ರಯಶ್ಚಾನ್ಯೇ ನೃಪೋತ್ತಮ ।
ಸಂಭೂಯ ದಶವರ್ಗೋಯಂ ಭುಂಕ್ತೇ ರಾಜ್ಯಂ ಹಿ ರಾಜವತ್ ॥

ಸಪ್ತಾಂಗಗಳ ಈ ಸಮುದಾಯವು ಧರ್ಮ, ಅರ್ಥ, ಕಾಮಗಳೆಂಬ ಮೂರು ವರ್ಗವು ಸೇರಿಕೊಂಡು ದಶವರ್ಗವೇ ರಾಜ್ಯವನ್ನು ನಡೆಸುತ್ತಿರುತ್ತದೆ. ಕ್ಷತ್ರಿಯ ಧರ್ಮದಲ್ಲಿ ಉತ್ಸಾಹಿಯಾಗಿರುವ ರಾಜನು ಈ ಹತ್ತು ಭಾಗಗಳಿಂದ ರಾಜನೆಂದು ಸಂತೋಷಪಡುತ್ತಾನೆ.

ಯಶ್ಚ ರಾಜಾ ಮಹೋತ್ಸಾಹಃ ಕ್ಷತ್ರಧರ್ಮರತೋ ಭವೇತ್ ।
ಸ ತುಷ್ಯೇದ್ದಶಭಾಗೇನ ತತಸ್ತ್ವನ್ಯೋ ದಶಾವರೈಃ ॥೧೫೮॥

ಯಾವನು ರಾಜನಾಗಿದ್ದಾನೋ, ಉತ್ಸಾಹಧರ್ಮದಿಂದ ಕ್ಷತ್ರಧರ್ಮ ರತನಾದ ರಾಜನು ಈ ಹತ್ತು ಭಾಗಗಳಿಂದ ಸಂತೋಷವನ್ನು ಹೊಂದಿದರೆ ಉಳಿದ ವ್ಯಕ್ತಿಯು ಅದಕ್ಕಿಂತ ಕಡಿಮೆಯಾದ ಭಾಗಗಳಿಂದ ಸಂತೋಷವನ್ನು ಹೊಂದುತ್ತಾನೆ.

ನಾಸ್ಯಸಾಧಾರಣೋ ರಾಜಾ ನಾಸ್ತಿ ರಾಜ್ಯಮರಾಜಕಮ್ ।
ರಾಜ್ಯೇಽಸತಿ ಕುತೋ ಧರ್ಮೋ ಧರ್ಮೇಽಸತಿ ಕುತಃ ಪರಮ್ ॥

ಆದ್ದರಿಂದ ರಾಜನಿಗೂ, ಗೃಹಸ್ಥನಿಗೂ ಇರುವ ಭೇದವು ಇಷ್ಟೇ. ಆದ್ದರಿಂದ ರಾಜನು ಅಸಾಧಾರಣ ಎಂದು ಕರೆಸಿಕೊಳ್ಳಲು ಯಾವ ಯುಕ್ತಿಯೂ ಇರುವುದಿಲ್ಲ. ರಾಜನಿಲ್ಲದೆ ರಾಜ್ಯವು ಇರುವುದಿಲ್ಲ. ರಾಜ್ಯವಿಲ್ಲದ ಬಳಿಕ ಧರ್ಮಕ್ಕೆ ಸ್ಥಾನವೆಲ್ಲಿ? ಧರ್ಮವೇ ಇಲ್ಲದ ಬಳಿಕ ಪರಲೋಕವಾದರೂ ಹೇಗೆ ದೊರೆಯುತ್ತದೆ?

ಯೋಽಪ್ಯತ್ರ ಪರಮೋ ಧರ್ಮಃ ಪವಿತ್ರಂ ರಾಜರಾಜ್ಯಯೋಃ ।
ಪೃಥಿವೀ ದಕ್ಷಿಣಾ ಯಸ್ಯ ಸೋಽಶ್ವಮೇಧೋ ನ ವಿದ್ಯತೇ ॥೧೬೦॥

ಈ ಲೋಕದಲ್ಲಿ ರಾಜನನ್ನು, ರಾಜ್ಯವನ್ನು ಪವಿತ್ರಗೊಳಿಸಲು ಭೂಮಿಯನ್ನೇ ದಕ್ಷಿಣೆಯನ್ನಾಗಿ ನೀಡುವ ಅಶ್ವಮೇಧವೆಂಬ ಪರಮಧರ್ಮಕ್ಕೆ ಅವಕಾಶ ಇರುವುದಿಲ್ಲ.

ಸಾಹಮೇತಾನಿ ಕರ್ಮಾಣಿ ರಾಜ್ಯದುಃಖಾನಿ ಮೈಥಿಲ ।
ಸಮರ್ಥಾ ಶತಶೋ ವಕ್ತುಮಥ ವಾಪಿ ಸಹಸ್ರಶಃ ॥೧೬೧॥

ರಾಜನೇ, ಹೀಗೆ ಅರಸರಿಗೆ ದುಃಖಕ್ಕೆ ಕಾರಣವಾದ ಇಂತಹ ಕಾರ್ಯವನ್ನು ನೂರು ವರ್ಷಕ್ಕಿಂತಲೂ ಅಧಿಕವಾಗಿ ಗುಣಿಸಿ ನಾನು ಹೇಳಬಲ್ಲೆನು.

ಸ್ವದೇಹೇ ನಾಭಿಷಂಗೋ ಮೇ ಕುತಃ ಪರಪರಿಗ್ರಹೇ ।
ನ ಮಾಮೇವಂವಿಧಾಂ ಮುಕ್ತಾಮೀದೃಶಂ ವಕ್ತುಮರ್ಹಸಿ ॥೧೬೨॥

ನನ್ನ ಶರೀರದಲ್ಲಿಯೇ ನನಗೆ ಸಂಬಂಧವಿಲ್ಲ. ಅನ್ಯರ ಶರೀರದಲ್ಲಿ ಸಂಬಂಧವೆಂದರೇನು? ಹೀಗೆ ವಿರಕ್ತಳಾಗಿ ಯೋಗನಿರತಳಾದ ನನ್ನನ್ನು ಕುರಿತು ನೀನು ಅಂತಹ ಮಾತುಗಳನ್ನು ಏಕೆ ಆಡಿದೆ? ಹೀಗೆ ಆಡಲು ಹೇಗೆ ಅರ್ಹನಾಗುತ್ತಿ ?

ನನು ನಾಮ ತ್ವಯಾ ಮೋಕ್ಷಃ ಕೃತ್ಸ್ನಃ ಪಂಚಶಿಖಾಚ್ಛ್ರುತಃ ।
ಸೋಪಾಯಃ ಸೋಪನಿಷದಃ ಸೋಪಾಸಂಗಃ ಸನಿಶ್ಚಯಃ ॥೧೬೩॥

ನೀನು ಪಂಚಶಿಖ ಮುನಿಯಿಂದ ಉಪಾಯಗಳಿಂದ ಕೂಡಿದ, ರಹಸ್ಯಗಳಿಂದ ಕೂಡಿದ, ಯಮ ಮೊದಲಾದ ಉಪಾಸಾಂಗಗಳ ಜೊತೆ ಕೂಡಿದ ಮೋಕ್ಷಧರ್ಮವನ್ನು ಪೂರ್ಣವಾಗಿ ಕೇಳಿದ್ದೇನೆ ಎಂದು ಹೇಳಿರುವಿ.

ತಸ್ಯ ತೇ ಮುಕ್ತಸಂಗಸ್ಯ ಪಾಶಾನಾಕ್ರಮ್ಯ ತಿಷ್ಠತಃ ।
ಛತ್ರಾದಿಷು ವಿಶೇಷೇಷು ಕಥಂ ಸಂಗಃ ಪುನರ್ನೃಪ ॥೧೬೪॥

ಹಾಗೆ ಪಂಚಶಿಖನಿಂದ ಕೇಳಿಸಿಕೊಂಡು ಸಂಗಗಳನ್ನೆಲ್ಲ ಬಿಟ್ಟು, ಪಾಶಗಳನ್ನು ಛೇದಿಸಿಕೊಂಡು ಜಯಿಸಿರುವ ನಿನಗೆ ರಾಜಕ್ಷೇತ್ರವೇ ಮೊದಲಾದ ಈ ವಿಶೇಷವಾದ ವಸ್ತುಗಳಲ್ಲಿ ಇನ್ನೂ ಅಭಿಮಾನವೇಕೆ ಹೋಗಲಿಲ್ಲ?

ಶ್ರುತಂ ತೇ ನ ಶ್ರುತಂ ಮನ್ಯೇ ಮಿಥ್ಯಾ ವಾಪಿ ಶ್ರುತಂ ಶ್ರುತಮ್ ।
ಅಥ ವಾ ಶ್ರುತಸಂಕಾಶಂ ಶ್ರುತಮನ್ಯಚ್ಛ್ರುತಂ ತ್ವಯಾ ॥೧೬೫॥

ಇದನ್ನೆಲ್ಲನೋಡಿದರೆ ನಿನ್ನ ಶಾಸ್ತ್ರಶ್ರವಣಗಳ್ಯಾವುವು ಶ್ರವಣಗಳೆಂದು ತೋರುತ್ತಿಲ್ಲ. ಅಥವಾ ನೀನು ಕೇವಲ ಡಂಭಕ್ಕಾಗಿ ಶ್ರವಣ ಮಾಡುತ್ತಿರಬೇಕು ಅಥವಾ ಶಾಸ್ತ್ರದಂತೆ ಭಾವಿಸುವ ಅನ್ಯಶಾಸ್ತ್ರಗಳನ್ನು, ತಪ್ಪಾದ ವಿಚಾರಗಳನ್ನು ನೀನು ಕೇಳಿರಬೇಕು.

ಅಥಾಪೀಮಾಸು ಸಂಜ್ಞಾಸು ಲೌಕಿಕೀಷು ಪ್ರತಿಷ್ಠಸಿ ।
ಅಭಿಷಂಗಾವರೋಧಾಭ್ಯಾಂ ಬದ್ಧಸ್ತ್ವಂ ಪ್ರಾಕೃತೋ ಮಯಾ ॥೧೬೬॥

ಸತ್ತೇ ತ್ವೇನಾನುಪ್ರವೇಶೋ ಹಿ ಯೋಯಂ ತ್ವಯಿ ಕೃತೋ ಮಯಾ ।
ಕಿಂ ತವಾಪಕೃತಂ ತತ್ರ ಯದಿ ಮುಕ್ತೋಽಸಿ ಸರ್ವತಃ ॥೧೬೭॥

ನೀನು ಅವುಗಳನ್ನೆಲ್ಲ ಶ್ರವಣ ಮಾಡಿದ್ದರೂ ಸಾಧಾರಣ ಮನುಷ್ಯನಂತೆ ಇಚ್ಛಾ-ದ್ವೇಷಗಳಿಗೆ ತುತ್ತಾಗಿ, ಈ ಲೌಕಿಕ ವಿಷಯಗಳಲ್ಲಿಯೇ ಪ್ರಾಕೃತ ಮನುಷ್ಯನಂತೆ ವರ್ತಿಸುತ್ತಿರುವಿ. ನಾನು ನಿನ್ನ ಬುದ್ಧಿಯಲ್ಲಿ ಪ್ರವೇಶಿಸಿದೆನೆಂದು ನೀನು ಹೇಳಿರುತ್ತಿ. ಇದರಿಂದ ನಿನಗೆ ಆದ ಅಪಕಾರವಾದರೂ ಏನು? ನೀನು ವಿಷಯಸಂಗದಿಂದ ಮುಕ್ತನಾದ ಬಳಿಕ ನಿನಗೆ ಕೇಡಾಗಲು ಹೇಗೆ ಸಾಧ್ಯ ?

ನಿಯಮೋ ಹ್ಯೇಷ ಧರ್ಮೇಷು ಯತೀನಾಂ ಶೂನ್ಯವಾಸಿತಾ ।
ಶೂನ್ಯಮಾವಾಸಯಂತ್ಯಾ ಚ ಮಯಾ ಕಿಂ ಕಸ್ಯ ದೂಷಿತಮ್ ॥೧೬೮॥

ಯತಿಗಳಾದವರಿಗೆ ಯಾರೂ ಇಲ್ಲದಿರುವ ಸ್ಥಳದಲ್ಲಿ ವಾಸಿಸುವುದೇ ಧರ್ಮವು ಎಂಬ ವಿಧಿಯಿದೆ. ಶೂನ್ಯವಾದ ನಿನ್ನ ಹೃದಯದಲ್ಲಿ ನಾನು ಇದ್ದುದರಿಂದ ಯಾರಿಗೆ ಹಾನಿಯಾಗಿದೆ? ಏಕೆ ನನ್ನನ್ನು ದೂಷಿಸಿದೆ?

ನ ಪಾಣಿಭ್ಯಾಂ ನ ಬಾಹುಭ್ಯಾಂ ಪಾದೋರೂಭ್ಯಾಂ ನ ಚಾನಘ ।
ನ ಗಾತ್ರಾವಯವೈರನ್ಯೈಃ ಸ್ಪೃಶಾಮಿ ತ್ವಾ ನರಾಧಿಪ ॥೧೬೯॥

ನಾನಾದರೂ ಕೈಗಳಿಂದಾಗಲಿ, ತೋಳುಗಳಿಂದಾಗಲಿ, ಪಾದಗಳಿಂದಾಗಲಿ, ತೊಡೆಗಳಿಂದಾಗಲಿ, ಇತರ ದೇಹದ ಅವಯವಗಳಿಂದಾಗಲಿ ನಿನ್ನನ್ನು ನಾನು ಸ್ಪರ್ಶಿಸಿದವಳಲ್ಲ.

ಕುಲೇ ಮಹತಿ ಜಾತೇನ ಹ್ರೀಮತಾ ದೀರ್ಘದರ್ಶಿನಾ ।
ನೈತತ್ ಸದಸಿ ವಕ್ತವ್ಯಂ ಸದಾಸದ್ವಾ ಮಿಥಃ ಕೃತಮ್ ॥೧೭೦॥

ಹೀಗಿರುವಾಗ ಉತ್ತಮ ಕುಲದಲ್ಲಿ ಹುಟ್ಟಿದವನು, ಅಕಾರ್ಯಗಳಿಗೆ ಲಜ್ಜೆ ಪಡುವವನು, ದೀರ್ಘ ಆಲೋಚನೆಗಳುಳ್ಳವನು ಆದ ಯಾವ ಮನುಷ್ಯನು ತಾನೇ ಒಳ್ಳೆಯದಾಗಲಿ, ಕೆಟ್ಟದ್ದಾಗಲಿ, ರಹಸ್ಯವಾಗಿ ನಡೆದ ವಿಚಾರವನ್ನು ಇಂತಹ ದೊಡ್ಡ ಸಭೆಯಲ್ಲಿ ಹೇಳಬಹುದು? ಒಳಗೆ ನಡೆದ ಈ ರಹಸ್ಯವನ್ನು ಹೊರಗೆ ಏಕೆ ಪ್ರಚಾರ ಮಾಡುತ್ತಿರುವಿ?

ಬ್ರಾಹ್ಮಣಾ ಗುರವಶ್ಚೇಮೇ ತಥಾಮಾತ್ಯಾ ಗುರೂತ್ತಮಾಃ ।
ತ್ವಂ ಚಾಥ ಗುರುರಪ್ಯೇಷಾಮೇವಮನ್ಯೋನ್ಯಗೌರವಮ್ ॥೧೭೧॥

ಇಲ್ಲಿರುವ ಬ್ರಾಹ್ಮಣರಲ್ಲಿನಿನಗೆ ಗುರುಗಳು, ಪರಮಗುರುಗಳು ಆದವರು ಇದ್ದಾರೆ. ಇನ್ನೊಂದು ರೀತಿಯಲ್ಲಿ ನೀನು ಶಿಕ್ಷೆ-ರಕ್ಷೆಗಳಿಂದ ಅವರಿಗೆ ಗುರುವೆನಿಸಿದ್ದಿ. ಹೀಗೆ ಒಬ್ಬರಿಗೆ ಒಬ್ಬರು ಒಂದು ವಿಧದಿಂದ ಗುರುತ್ವದ ಅತಿಶಯವನ್ನೇ ಹೊಂದಿರುತ್ತೀರಿ.

ತದೇವಮನುಸಂದೃಶ್ಯ ವಾಚ್ಯಾವಾಚ್ಯಂ ಪರೀಕ್ಷತಾ ।
ಸ್ತ್ರೀಪುಂಸೋಃ ಸಮವಾಯೋಯಂ ತ್ವಯಾ ವಾಚ್ಯೋ ನ ಸಂಸದಿ ॥

ಇದನ್ನೆಲ್ಲ ತಿಳಿದಿರುವ ನೀನು ಇಂತಹ ಸ್ಥಳದಲ್ಲಿ ಈ ರೀತಿಯಾಗಿ ಮಾತನಾಡಬಹುದೆ? ಇದನ್ನು ಆಡಬಹುದು, ಇದನ್ನು ಆಡಬಾರದು ಎಂಬ ವಿವೇಚನ ಶಕ್ತಿ ಉಳ್ಳವನಾಗಿದ್ದು ಸ್ತ್ರೀ-ಪುರುಷರ ಸೇರುವಿಕೆಯನ್ನು ಕುರಿತು ಸಭೆಯ ಮುಂದೆ ಸ್ಪಷ್ಟವಾದ ಮಾತುಗಳಿಂದ ಹೀಗೆ ಹೇಳಬಹುದೆ? ಎಂದಿಗೂ ಹೇಳಬಾರದು.

ಯಥಾ ಪುಷ್ಕರಪರ್ಣಸ್ಥಂ ಜಲಂ ತತ್ ಪರ್ಣಸಂಸ್ಥಿತಮ್ ।
ತಿಷ್ಠತ್ಯಸ್ಪೃಶತೀ ತದ್ವತ್ ತ್ವಯಿ ವತ್ಸ್ಯಾಮಿ ಮೈಥಿಲ ॥೧೭೩॥

ರಾಜನೇ, ನಾನು ನಿನ್ನಲ್ಲಿ ಸೇರಿಕೊಂಡಿರುವುದು ವಸ್ತುಸ್ಥಿತಿಯಾದರೂ ತಾವರೆ ಎಲೆಯಲ್ಲಿಸೇರಿದ ನೀರಿನಂತೆ ನಿನ್ನ ಸಂಬಂಧವಿಲ್ಲದಂತೆಯೇ ಸೇರಿದ್ದೇನೆ.

ಯದಿ ವಾಪ್ಯಸ್ಪೃಶಂತ್ಯಾ ಮೇ ಸ್ಪರ್ಶಂ ಜಾನಾಸಿ ಕಂಚನ ।
ಜ್ಞಾನಂ ಕೃತಮಬೀಜಂ ತೇ ಕಥಂ ತೇನೇಹ ಭಿಕ್ಷುಣಾ ॥೧೭೪॥

ಒಂದು ವೇಳೆ ನಿನ್ನನ್ನು ಸ್ಪರ್ಶಿಸದ ನನ್ನ ವಿಷಯದಲ್ಲಿ ಸ್ಪರ್ಶವನ್ನು ನೀನು ತಿಳಿದಿರುವೆಯಾದರೆ ನಿನಗೆ ಆ ಪಂಚಶಿಖಿನಿಂದ ಲಭಿಸಿದ ಜ್ಞಾನವು ನಿಷ್ಫಲವೇ ಆಗುತ್ತದೆ. ಅದು ಸಂಸಾರ ತಾರಕವು ಎಂದು ನಾನು ತಿಳಿಯುವುದಿಲ್ಲ.

ಸ ಗಾರ್ಹಸ್ಥ್ಯಚ್ಚ್ಯುತಶ್ಚ ತ್ವಂ ಮೋಕ್ಷಂ ನಾವಾಪ್ಯ ದುರ್ವಿದಮ್ ।
ಉಭಯೋರಂತರಾಲೇ ಚ ವರ್ತಸೇ ಮೋಕ್ಷವಾತಿಕಃ ॥೧೭೫॥

ಈಗ ನೀನು ಗೃಹಸ್ಥಾಶ್ರಮದಿಂದಲೂ ಭ್ರಷ್ಟನಾಗಿ, ದುರ್ಲಭವಾದ ಮೋಕ್ಷ ಧರ್ಮದಿಂದಲೂ ಭ್ರಷ್ಟನಾಗಿ, ಉಭಯಭ್ರಷ್ಟನಾಗಿ ಕಾಣುತ್ತಿರುವೆ. ಬಾಯಲ್ಲಿಮಾತ್ರ ಮೋಕ್ಷದ ವಿಚಾರವನ್ನು ಹೇಳುತ್ತಾ ತ್ರಿಶಂಕುವಿನ ಸ್ಥಿತಿಯಲ್ಲಿ ಅವೆರಡರ ನಡುವೆ ಓಡಾಡುತ್ತಿರುವಿ.

ನ ಹಿ ಮುಕ್ತಸ್ಯ ಮುಕ್ತೇನ ಜ್ಞಸ್ಯೈಕತ್ವಪೃಥಕ್ತ್ವಯೋಃ ।
ಭಾವಾಭಾವಸಮಾಯೋಗೇ ಜಾಯತೇ ವರ್ಣಸಂಕರಃ ॥೧೭೬॥

ಯಾವಾತನು ಒಬ್ಬ ಮುಕ್ತನಲ್ಲಿ ಮತ್ತೊಬ್ಬ ಮುಕ್ತನಲ್ಲಿ ವಿಚಾರದಿಂದ ಸಾಮ್ಯವನ್ನು, ಪರಸ್ಪರ ಭೇದವನ್ನು ಅರಿತಿರುತ್ತಾನೋ ಅವನಿಗೆ ವರ್ಣಸಂಕರದ ಬುದ್ಧಿಯು ಹೇಗೆ ಹುಟ್ಟಲು ಸಾಧ್ಯ ? ವಿರುದ್ಧಗುಣವುಳ್ಳವರ ಸಮಾಯೋಗವಾದಲ್ಲಿ ಸಾಂಕರ್ಯವನ್ನು ಹೇಳಬಹುದು.

ವರ್ಣಾಶ್ರಮಪೃಥಕ್ತ್ವೇ ಚ ದೃಷ್ಟಾರ್ಥಸ್ಯಾಪೃಥಕ್ತ್ವನಃ ।
ನಾನ್ಯದನ್ಯದಿತಿ ಜ್ಞಾತ್ವಾ ನಾನ್ಯದನ್ಯತ್ ಪ್ರವರ್ತತೇ ॥೧೭೭॥

ಯಾವನು ವರ್ಣಾಶ್ರಮಗಳು ಭಿನ್ನವಾಗಿದ್ದರೂ ಆ ವರ್ಣಾಶ್ರಮಗಳಿಂದ ಕಾಣಲ್ಪಡುವ ವಸ್ತುವಿನಲ್ಲಿ ಅಭೇದವನ್ನೇ ತಿಳಿಯುತ್ತಾನೋ, ನನ್ನ ಸ್ವರೂಪವು ಬೇರೆಯವರ ಸ್ವರೂಪದಂತೆ ಅಲ್ಲ ಎಂದು ಜೀವ-ಜೀವರಲ್ಲಿ ಭೇದವನ್ನೇ ತಿಳಿದಿರುತ್ತಾನೋ ಅವನು ಅಸನ್ಮಾರ್ಗದಲ್ಲಿ ಸಾಗಲು ಸಾಧ್ಯವಿಲ್ಲ.

ಪಾಣೌ ಕುಂಡಂ ತಥಾ ಕುಂಡೇ ಪಯಃ ಪಯಸಿ ಮಕ್ಷಿಕಾಃ ।
ಆಶ್ರಿತಾಶ್ರಯಯೋಗೇನ ಪೃಥಕ್ತ್ವೇನಾಶ್ರಯಾ ವಯಮ್ ॥೧೭೮॥

ಕೈಯಲ್ಲಿ ಪಾತ್ರೆಯು, ಪಾತ್ರೆಯಲ್ಲಿ ಹಾಲು, ಹಾಲಿನಲ್ಲಿ ಸೊಳ್ಳೆಗಳು ಪರಸ್ಪರ ಒಂದನ್ನೊಂದು ಆಶ್ರಯಿಸಿವೆ. ಆಧಾರಾಧೇಯ ಸಂಬಂಧದಿಂದ ಒಂದನ್ನೊಂದು ಆಶ್ರಯಿಸಿದ್ದರೂ ಅವು ಒಂದಕ್ಕೊಂದು ಬೇರೆಯಾಗಿಯೇ ಇರುತ್ತವೆ.

ನ ತು ಕುಂಡೇ ಪಯೋಭಾವಃ ಪಯಶ್ಚಾಪಿ ನ ಮಕ್ಷಿಕಾಃ ।
ಸ್ವಯಮೇವಾಶ್ರಯಂತ್ಯೇತೇ ಭಾವಾ ನ ತು ಪರಾಶ್ರಯಮ್ ॥೧೭೯॥

ಪಾತ್ರೆಯು ಎಂದಿಗೂ ಹಾಲಾಗುವುದಿಲ್ಲ, ಹಾಲು ಎಂದಿಗೂ ನೊಣವಾಗುವುದಿಲ್ಲ. ಆಯಾ ಪದಾರ್ಥಗಳ ತಮ್ಮ ತಮ್ಮ ಸ್ವಭಾವದಲ್ಲಿ ಇವೆಯೇ ಹೊರತು ಮತ್ತೊಂದರ ಸ್ವರೂಪವನ್ನು ಮತ್ತೊಂದು ಹೊಂದುವುದಿಲ್ಲ.

ಪೃಥಕ್ತ್ವಾದಾಶ್ರಮಾಣಾಂ ಚ ವರ್ಣಾನ್ಯತ್ವೇ ತಥೈವ ಚ ।
ಪರಸ್ಪರಪೃಥಕ್ತ್ವಾಚ್ಚ ಕಥಂ ತೇ ವರ್ಣಸಂಕರಃ ॥೧೮೦॥

ಇದರಂತೆ ಬೇರೆ ಬೇರೆ ಆಶ್ರಮಗಳು, ಬೇರೆ ಬೇರೆ ವರ್ಣಗಳು ಇವೆ. ಅವು ಒಂದಕ್ಕಿಂತ ಮತ್ತೊಂದು ಭಿನ್ನವಾಗಿಯೇ ಇದ್ದಾಗ ಅವುಗಳಿಗೆ ಸಾಂಕರ್ಯವು ಹೇಗೆ ಉಂಟಾಗಲು ಸಾಧ್ಯ ?

ನಾಸ್ಮಿ ವರ್ಣೋತ್ತಮಾ ಜಾತ್ಯಾ ನ ವೈಶ್ಯಾ ನಾವರಾ ತಥಾ ।
ತವ ರಾಜನ್ ಸವರ್ಣಾಸ್ಮಿ ಶುದ್ಧಯೋನಿರವಿಪ್ಲುತಾ ॥೧೪೧॥

ನಾನು ಜಾತಿಯಲ್ಲಿ ಶ್ರೇಷ್ಠಳೆಂದು ನೀನು ಹೇಳಿರುವಿ, ಅದು ತಪ್ಪು. ನಾನು ಜಾತಿಯಲ್ಲಿ ನಿನಗೆ ಮೇಲಾದವಳೂ ಅಲ್ಲ, ನಿನಗಿಂತ ಕೀಳಾದವಳೂ ಅಲ್ಲ.

ಪ್ರಧಾನೋ ನಾಮ ರಾಜರ್ಷಿರ್ವ್ಯಕ್ತಂ ತೇ ಶ್ರೋತ್ರಮಾಗತಃ ।
ಕುಲೇ ತಸ್ಯ ಸಮುತ್ಪನ್ನಾಂ ಸುಲಭಾಂ ನಾಮ ವಿದ್ಧಿ ಮಾಮ್ ॥೧೪೨॥

ರಾಜನೇ, ಪ್ರಧಾನವೆಂಬ ರಾಜರ್ಷಿಯ ಹೆಸರು ನಿನ್ನ ಕಿವಿಗೆ ಬಿದ್ದಿರಬಹುದು. ನಾನು ಆ ರಾಜರ್ಷಿಯ ಕುಲದಲ್ಲಿ ಹುಟ್ಟಿದವಳು. ನನಗೆ ಸುಲಭಾ ಎಂದು ಹೆಸರು.

ದ್ರೋಣಶ್ಚ ಶತಶೃಂಗಶ್ಚ ಶಕ್ರದ್ವಾರಶ್ಚ ಪರ್ವತಃ ।
ಮಮ ಸತ್ರೇಷು ಪೂರ್ವೇಷಾಂ ಚಿತಾ ಮಘವತಾ ಸಹ ॥೧೪೩॥

ದ್ರೋಣಗಿರಿ, ಶತಶೃಂಗಗಿರಿ, ಶಕ್ರದ್ವಾರಗಳೆಂಬ ಬೆಟ್ಟಗಳೇ ನನ್ನ ವಂಶದವರಿಂದ ಯಾಗದಲ್ಲಿ ಯೂಪಸ್ತಂಭಗಳಾದವು. ನನ್ನ ಪೂರ್ವಿಕರು ಮಾಡಿದ ಯಜ್ಞದಲ್ಲಿ ಮಘವನ್ ಎಂಬ ಹೆಸರಿನ ಪರ್ವತದಿಂದ ಸಹಿತವಾದ ಈ ಎಲ್ಲ ಬೆಟ್ಟಗಳು ಯಜ್ಞಕ್ಕೆ ಯೂಪಸ್ತಂಭಗಳಂತೆ ಒಟ್ಟಾಗಿದ್ದವು.

ಸಾಹಂ ತಸ್ಮಿನ್ ಕುಲೇ ಜಾತಾ ಭರ್ತಾರ್ಯಸತಿ ಮದ್ವಿಧೇ ।
ವಿನೀತಾ ಮೋಕ್ಷಧರ್ಮೇಷು ಚರಾಮ್ಯೇಕಾ ಮುನಿವ್ರತಮ್ ॥೧೪೪॥

ಮಿಥಿಲಾಧಿಪತಿಯೇ, ಅಂತಹ ಕುಲದಲ್ಲಿ ಹುಟ್ಟಿದ ನಾನು ಬ್ರಾಹ್ಮಣವೇಷವನ್ನು ತ್ಯಜಿಸಿ ವೇಷಾಂತರದಿಂದ ಬಂದವಳಲ್ಲ. ನನಗೆ ತಕ್ಕ ಪತಿಯು ದೊರೆಯದ ಕಾರಣದಿಂದ ಮೋಕ್ಷಧರ್ಮಕ್ಕೆ ಮಾರುಹೋಗಿ ಏಕಾಕಿನಿಯಾಗಿ ಈ ಮುನಿವ್ರತವನ್ನು ಆಚರಿಸುತ್ತಿದ್ದೇನೆ.

ನಾಸ್ಮಿ ಸತ್ರಪ್ರತಿಚ್ಛನ್ನಾ ನ ಪರಸ್ವಾಭಿಮಾನಿನೀ ।
ನ ಧರ್ಮಸಂಕರಕರೀ ಸ್ವಧರ್ಮೇಽಸ್ಮಿ ಧೃತವ್ರತಾ ॥೧೮೫॥

ಮಿಥಿಲಾಧಿಪತಿಯೇ, ನಾನು ವೇಷಾಂತರವನ್ನು ಧರಿಸಿದವಳಲ್ಲ. ಪರರ ಧನದಲ್ಲಿ ಆಸೆಯುಳ್ಳವಳೂ ಅಲ್ಲ. ಧರ್ಮಸಾಂಕರ್ಯ ಮಾಡಿದವಳೂ ಅಲ್ಲ. ಸ್ವಧರ್ಮದಲ್ಲಿ ದೃಢವಾದ ವ್ರತವನ್ನು ಹೊಂದಿರುತ್ತೇನೆ.

ನಾಸ್ಥಿರಾ ಸ್ವಪ್ರತಿಜ್ಞಾಯಾಂ ನಾಸಮೀಕ್ಷ್ಯಪ್ರವಾದಿನೀ ।
ನಾಸಮೀಕ್ಷ್ಯಾಗತಾ ಚಾಹಂ ತತ್ತ್ವಕಾಶಂ ಜನಾಧಿಪ ॥೧೮೬॥

ನನ್ನ ಪ್ರತಿಮೆಯು ಅಸ್ಥಿರವಾದುದಲ್ಲ. ನಾನು ವಿಮರ್ಶೆಯಿಲ್ಲದೆ ಮಾತನಾಡುವುದೂ ಇಲ್ಲ. ಈಗ ನಾನು ಇಲ್ಲಿಗೆ ಬಂದಿರುವುದು ವಿವೇಚನೆ ಇಲ್ಲದೆ ನಡೆಸಿದ ಕಾರ್ಯವೂ ಅಲ್ಲ.

ಮೋಕ್ಷೇ ತೇ ಭಾವಿತಾಂ ಬುದ್ಧಿಂ ಶ್ರುತ್ವಾಹಂ ಕುಶಲೈಷಿಣೇ ।
ತವ ಮೋಕ್ಷಸ್ಯ ಚಾಪ್ಯಸ್ಯ ಜಿಜ್ಞಾಸಾರ್ಥಮಿಹಾಗತಾ ॥೧೮೭॥

ನಿನ್ನ ಬುದ್ಧಿಯು ಮೋಕ್ಷದಲ್ಲಿ ನೆಲೆಸಿದೆ ಎಂದು ಕೇಳಿಸಿಕೊಂಡು ನಿನ್ನ ಕ್ಷೇಮವನ್ನು ಉದ್ದೇಶಿಸಿಕೊಂಡೇ ನಾನು ನಿನ್ನನ್ನು ಪರೀಕ್ಷಿಸಬೇಕು ಎಂಬ ಜಿಜ್ಞಾಸೆಯಿಂದ ನಾನು ಇಲ್ಲಿಗೆ ಬಂದಿರುತ್ತೇನೆ.

ನ ವರ್ಗಸ್ಥಾ ಬ್ರವೀಮ್ಯೇತತ್ ಸ್ವಪಕ್ಷಪರಪಕ್ಷಯೋಃ ।
ಮುಕ್ತೋ ನ ಮುಚ್ಯತೇ ಯಶ್ಚ ಶಾಂತೋ ಯಶ್ಚ ನ ಶಾಪ್ಯತಿ ॥೧೮೮॥

ನನ್ನ ಪಕ್ಷ ಇನ್ನೊಬ್ಬರ ಪಕ್ಷ ಎಂಬ ಭೇದವನ್ನು ಅವಲಂಬಿಸಿ ನಾನು ಎಂದಿಗೂ ಮಾತನ್ನಾಡುವುದಿಲ್ಲ. ಸಂಗಗಳನ್ನು ತೊರೆದು ಶಾಂತಿಯನ್ನು ಸ್ಥಿರವಾಗಿ ಧರಿಸಿದವನೇ ಮುಕ್ತನಾಗುತ್ತಾನೆ.

ಯಥಾ ಶೂನ್ಯೇ ಪುರಾಗಾರೇ ಭಿಕ್ಷುರೇಕಾಂ ನಿಶಾಂ ವಸೇತ್ ।
ತಥಾ ಹಿ ತ್ವಚ್ಛರೀರೇಸ್ಮಿನ್ನಿಮಾಂ ವತ್ಸ್ಯಾಮಿ ಶರ್ವರೀಮ್ ॥೧೮೯॥

ಯಾವ ರೀತಿಯಾಗಿ ಸಂನ್ಯಾಸಿಯಾದವನು ಪಟ್ಟಣದಲ್ಲಿ ಯಾರೂ ಇಲ್ಲದ

ಗೃಹದಲ್ಲಿ ಒಂದೇ ರಾತ್ರಿಯಲ್ಲಿ ವಾಸಮಾಡಿದ್ದು ಮರುದಿವಸ ಬಿಟ್ಟು ತೆರಳುವಂತೆ ನಾನು ಜ್ಞಾನಶೂನ್ಯವಾದ ನಿನ್ನ ಶರೀರದಲ್ಲಿ ಒಂದು ರಾತ್ರಿ ನೆಲೆಸಿರುತ್ತೇನೆ.

ಸಾಹಮಾಸನದಾನೇನ ವಾಗಾತಿಥ್ಯೇನ ಚಾರ್ಚಿತಾ ।
ಸುಪ್ತಾ ಸುಶರಣಾ ಪ್ರೀತಾ ಶ್ವೋ ಗಮಿಷ್ಯಾಮಿ ಮೈಥಿಲ ॥೧೯೦॥

ಗೌರವದಿಂದಲೂ, ಪ್ರೀತಿಯಾದ ಮಾತುಗಳಿಂದಲೂ, ಆತಿಥ್ಯದಿಂದಲೂ ನಿನ್ನಿಂದ ಸತ್ಕೃತಳಾದ ನಾನು ನಾಳೆಯೇ ಹೊರಟು ಹೋಗುತ್ತೇನೆ. ಹೀಗೆ ಸುಲಭೆಯು ಹೇಳಿದಳು.

ಇತ್ಯೇತಾನಿ ಸ ವಾಕ್ಯಾನಿ ಹೇತುಮಂತ್ಯರ್ಥವಂತಿ ಚ ।
ಶ್ರುತ್ವಾ ನಾಧಿಜಗೌ ರಾಜಾ ಕಿಂಚಿದನ್ಯದತಃ ಪರಮ್ ॥೧೯೧॥

ಧರ್ಮರಾಜನೇ, ಹೀಗೆ ಸುಲಭೆಯು ಅರ್ಥವತ್ತಾಗಿಯೂ ಯುಕ್ತಿಯುಕ್ತವಾಗಿಯೂ ಮಾತುಗಳನ್ನು ಕೇಳಿದ ಜನಕನು ಮುಂದೆ ಮಾತನಾಡಲಾಗದೆ ಮೌನವಹಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಿಪಂಚಾಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ಮೂರನೆಯ ಅಧ್ಯಾಯ

ವೇದವ್ಯಾಸರಿಂದ ಶುಕಮುನಿಗಳಿಗೆ ವೈರಾಗ್ಯದ ಉಪದೇಶ

ಯುಧಿಷ್ಠಿರಃ

ಕಥಂ ನಿರ್ವೇದಮಾಪನ್ನಃ ಶುಕೋ ವೈಯಾಸಕಿಃ ಪುರಾ ।
ಏತದಿಚ್ಛಾಮಿ ಕೌರವ್ಯ ಶ್ರೋತುಂ ಕೌತೂಹಲಂ ಹಿ ಮೇ ॥೧॥

ಯುಧಿಷ್ಠಿರ– ಪಿತಾಮಹನೇ, ಶುಕಮುನಿಯು ಪರಮವಿರಕ್ತನೆಂದು ಕೇಳಿದ್ದೇವೆ. ವ್ಯಾಸಸುತನಾದ ಶುಕಮುನಿಗೆ ಅಂತಹ ವಿರಕ್ತಿಯು ಹೇಗೆ ಬಂದಿತು? ಇದನ್ನು ಕೇಳಬೇಕೆಂಬ ಕುತೂಹಲವು ನನಗೆ ಉಂಟಾಗಿದೆ.

ಭೀಷ್ಮಃ

ಪ್ರಾಕೃತೇನ ಸುವೃತ್ತೇನ ಚರಂತಮಕುತೋಭಯಮ್ ।
ಅಧ್ಯಾಪ್ಯ ಕೃತ್ಸ್ನಂ ಸ್ವಾಧ್ಯಾಯಮನ್ವಶಾದ್ವೈ ಪಿತಾ ಸುತಮ್ ॥೨॥

ಭೀಷ್ಮ- ಯುಧಿಷ್ಠಿರನೇ, ಕೇಳು. ವೇದವ್ಯಾಸದೇವನು ಹಿಂದೆ ಯಾವುದೇ ಭಯವಿಲ್ಲದೆ ತನ್ನ ಮಗನು ಪ್ರಾಕೃತ ಜನರಂತೆ ಉತ್ತಮ ಸತ್ಕರ್ಮಗಳಲ್ಲಿ ವರ್ತಿಸುತ್ತಿದ್ದನ್ನು ಕಂಡು, ಸಮಸ್ತ ವೇದಗಳನ್ನು ಅಧ್ಯಯನ ಮಾಡಿಸಿ, ವೇದಾಧ್ಯಯನವು ಮುಗಿದ ಬಳಿಕ ಹೀಗೆ ಅವನಿಗೆ ವಿಧಿಯನ್ನು ಬೋಧಿಸಿದನು.

ಧರ್ಮಂ ಪುತ್ರ ನಿಷೇವಸ್ವ ಸುತೀಕ್ಷ್ಣೌ ಹಿ ಹಿಮಾತಪೌ ।
ಕ್ಷುತ್ಪಿಪಾಸೇ ಚ ವಾಯುಂ ಚ ಜಯ ನಿತ್ಯಂ ಜಿತೇಂದ್ರಿಯಃ ॥೩॥

ಮಗನೇ, ನೀನು ಜಿತೇಂದ್ರಿಯನಾಗಿದ್ದು ಧರ್ಮವನ್ನೇ ಅವಲಂಬಿಸು. ತೀವ್ರವಾದ ಹಿಮ - ಬಿಸಿಲುಗಳಲ್ಲಿ, ಹಸಿವು - ಬಾಯಾರಿಕೆಗಳಲ್ಲಿ ಕಂಗಾಲಾಗದೆ ಜಿತೇಂದ್ರಿಯನಾಗಿದ್ದು ಪ್ರಾಣಜಯವನ್ನು ಸಾಧಿಸಿಕೊ.

ಸತ್ಯಮಾರ್ಜವಮಕ್ರೋಧಮನಸೂಯಾಂ ದಮಂ ತಪಃ ।
ಅಹಿಂಸಾಂ ಚಾನೃಶಂಸ್ಯಂ ಚ ವಿಧಿವತ್ ಪರಿಪಾಲಯ ॥೪॥

ಸತ್ಯ, ಋಜುಸ್ವಭಾವ, ಕ್ರೋಧವಿಲ್ಲದಿರುವಿಕೆ, ಅಸೂಯೆ ಇಲ್ಲದಿರುವಿಕೆ, ದಮ, ತಪಸ್ಸು, ಅಹಿಂಸಾ, ಆನೃಶಂಸ್ಯ (ದಯೆ)- ಈ ಎಲ್ಲ ಗುಣಗಳನ್ನು ಚೆನ್ನಾಗಿ ವಿಧಿವತ್ತಾಗಿ ಪರಿಪಾಲಿಸು.

ಸತ್ಯೇ ತಿಷ್ಠ ರತೋ ಧರ್ಮೇ ಹಿತ್ವಾ ಸರ್ವಮನಾರ್ಜವಮ್ ।
ದೇವತಾತಿಥಿಶೇಷೇಣ ಯಾತ್ರಾಂ ಪ್ರಾಣಸ್ಯ ಸಂಶ್ರಯ ॥೫॥

ಸತ್ಯದಲ್ಲಿ ನಿಷ್ಠನಾಗಿರು, ಧರ್ಮದಲ್ಲಿ ನಿರತನಾಗು, ಋಜುವಲ್ಲದ ಮಾರ್ಗವನ್ನು ತ್ಯಜಿಸು. ದೇವತೆಗಳಿಗೂ ಅತಿಥಿಗಳಿಗೂ ನೀಡಿ ಉಳಿದ ಪದಾರ್ಥದಲ್ಲಿ ಪ್ರಾಣಧಾರಣೆಯನ್ನು ಮಾಡಿಕೊ.

ಫೇನಪಾತ್ರೋಪಮೇ ದೇಹೇ ಜೀವೇ ಶಕುನಿವತ್ ಸ್ಥಿತೇ ।
ಅನಿತ್ಯೇ ಪ್ರಿಯಸಂವಾಸೇ ಕಥಂ ಸ್ವಪಿಷಿ ಪುತ್ರಕ ॥೬॥

ಮಗನೇ, ಈ ದೇಹವು ನೀರಿನ ಮೇಲಿನ ಗುಳ್ಳೆಗೆ ಸಮಾನವಾದುದು. ಜೀವವು ಗೂಡಿನಲ್ಲಿರುವ ಪಕ್ಷಿಯಂತೆ ಈ ದೇಹದಲ್ಲಿ ಸೇರಿಕೊಂಡಿದೆ. ಈ ದೇಹಕ್ಕೂ, ಜೀವನಿಗೂ ಯಾವ ಸಂಬಂಧವೂ ಇರುವುದಿಲ್ಲ. ಅನಿತ್ಯವಾದ, ಪ್ರಿಯದಂತೆ ತೋರುವ ಈ ದೇಹದಲ್ಲಿ ಹೇಗೆ ತಾನೆ ಸುಖವನ್ನು ಹೊಂದಲು ಸಾಧ್ಯವಾಗುತ್ತದೆ?

ಅಪ್ರಮತ್ತೇಷು ಜಾಗ್ರತ್ಸು ನಿತ್ಯಯುಕ್ತೇಷು ಶತ್ರುಷು ।
ಅಂತರಂ ಲಿಪ್ಸಮಾನೇಷು ಬಾಲಸ್ತ್ವಂ ನಾವಬುಧ್ಯಸೇ ॥೭॥

ಶತ್ರುಗಳೆನಿಸಿದ ಅರಿಷಡ್ವರ್ಗಗಳು ನಿನ್ನ ಮೇಲೆ ಎರಗಲು ಯಾವಾಗಲೂ ಎಚ್ಚರದಿಂದ ಸಮಯವನ್ನು ಪ್ರತೀಕ್ಷಿಸುತ್ತಿರುವಾಗ ಬಾಲಕನಾದ ನೀನು ಅದನ್ನು ಅರಿಯುತ್ತಿಲ್ಲ.

ಗಣ್ಯಮಾನೇಷು ವರ್ಷೇಷು ಕ್ಷೀಯಮಾಣೇ ತಥಾಯುಷಿ ।
ಜೀವಿತೇ ಶಿಷ್ಯಮಾಣೇ ಚ ಕಿಮುತ್ಥಾಯ ನ ಧಾವಸಿ ॥೮॥

ದಿನವೂ ಒಂದಾದ ಮೇಲೆ ಒಂದು ಕಳೆದುಹೋಗುತ್ತಿರುವಂತೆ ವರ್ಷಗಳನ್ನು ಲೆಕ್ಕ ಹಾಕುತ್ತಾ ಕ್ರಮವಾಗಿ ಆಯುಷ್ಯವು ಕ್ಷಯ ಹೊಂದುತ್ತಿರುತ್ತದೆ. ಲೋಕದಲ್ಲಿ ನಿನ್ನ ಜೀವಿತ ಕಾಲವು ಇಷ್ಟೇ ಎಂದು ನಿಯತವಾಗಿ ನಿಶ್ಚಿತವಾಗುತ್ತಿರಲು ಉಳಿದ ಜೀವಿತಾವಧಿಯಲ್ಲಿ ಜಾಗೃತವಾಗಿ ನಿಂತು ಆಯುಷ್ಯವನ್ನು ಸಾರ್ಥಕ ಮಾಡಿಕೊಳ್ಳಲು ಮಾಡಬೇಕಾದ ಕರ್ತವ್ಯಗಳಿಗೆ ಏಕೆ ಸಾಗುತ್ತಿಲ್ಲ? (ಗುರುಗಳ ಹತ್ತಿರ ಹೋಗಿ ಪರಲೋಕದ ವಿಚಾರವನ್ನು ಏಕೆ ಕೇಳುತ್ತಿಲ್ಲ ಎಂದು ಭಾವ).

ಐಹಲೌಕಿಕಮೀಹಂತೇ ಮಾಂಸಶೋಣಿತವರ್ಧನಮ್ ।
ಪಾರಲೌಕಿಕಕಾರ್ಯೇಷು ಪ್ರಸುಪ್ತಾ ಭೃಶನಾಸ್ತಿಕಾಃ ॥೯॥

ಲೋಕದಲ್ಲಿ ಈ ಲೋಕಕ್ಕೆ ಸಂಬಂಧವಾದ ಸುಖಗಳನ್ನೇ ಸಾಮಾನ್ಯ ಜೀವರು ಬಯಸುತ್ತಾರೆ. ರಕ್ತ-ಮಾಂಸಗಳನ್ನು ಬೆಳೆಸಲು ಬೇಕಾದ ವಸ್ತುಗಳನ್ನೇ ಬಯಸುತ್ತಾರೆ. ಪರಲೋಕ ಸಾಧಕವಾದ ಕಾರ್ಯಗಳಲ್ಲಿ ಮನಸ್ಸನ್ನಿಡದೆ ನಿದ್ರೆ ಹೊಂದಿರುತ್ತಾರೆ. ಈ ವ್ಯಕ್ತಿಗಳೆಲ್ಲ ಪರಲೋಕದ ವಿಷಯದಲ್ಲಿ ವಿಶ್ವಾಸ ಇಲ್ಲದ ಪರಮ ನಾಸ್ತಿಕರು.

ಭೀಷ್ಮಃ

ಪ್ರಾಕೃತೇನ ಸುವೃತ್ತೇನ ಚರಂತಮಕುತೋಭಯಮ್ ।
ಅಧ್ಯಾಪ್ಯ ಕೃತ್ಸ್ನಂ ಸ್ವಾಧ್ಯಾಯಮನ್ವಶಾದ್ವೈ ಪಿತಾ ಸುತಮ್ ॥೨॥

ಭೀಷ್ಮ– ಯುಧಿಷ್ಠಿರನೇ, ಕೇಳು. ವೇದವ್ಯಾಸದೇವನು ಹಿಂದೆ ಯಾವುದೇ ಭಯವಿಲ್ಲದೆ ತನ್ನ ಮಗನು ಪ್ರಾಕೃತ ಜನರಂತೆ ಉತ್ತಮ ಸತ್ಕರ್ಮಗಳಲ್ಲಿ ವರ್ತಿಸುತ್ತಿದ್ದನ್ನು ಕಂಡು, ಸಮಸ್ತ ವೇದಗಳನ್ನು ಅಧ್ಯಯನ ಮಾಡಿಸಿ, ವೇದಾಧ್ಯಯನವು ಮುಗಿದ ಬಳಿಕ ಹೀಗೆ ಅವನಿಗೆ ವಿಧಿಯನ್ನು ಬೋಧಿಸಿದನು.

ಧರ್ಮಂ ಪುತ್ರ ನಿಷೇವಸ್ವ ಸುತೀಕ್ಷ್ಣೌ ಹಿ ಹಿಮಾತಪೌ ।
ಕ್ಷುತ್ಪಿಪಾಸೇ ಚ ವಾಯುಂ ಚ ಜಯ ನಿತ್ಯಂ ಜಿತೇಂದ್ರಿಯಃ ॥೩॥

ಮಗನೇ, ನೀನು ಜಿತೇಂದ್ರಿಯನಾಗಿದ್ದು ಧರ್ಮವನ್ನೇ ಅವಲಂಬಿಸು. ತೀವ್ರವಾದ ಹಿಮ-ಬಿಸಿಲುಗಳಲ್ಲಿ, ಹಸಿವು-ಬಾಯಾರಿಕೆಗಳಲ್ಲಿ ಕಂಗಾಲಾಗದೆ ಜಿತೇಂದ್ರಿಯನಾಗಿದ್ದು ಪ್ರಾಣಜಯವನ್ನು ಸಾಧಿಸಿಕೊ.

ಸತ್ಯಮಾರ್ಜವಮಕ್ರೋಧಮನಸೂಯಾಂ ದಮಂ ತಪಃ ।
ಅಹಿಂಸಾಂ ಚಾನೃಶಂಸ್ಯಂ ಚ ವಿಧಿವತ್ ಪರಿಪಾಲಯ ॥೪॥

ಸತ್ಯ, ಋಜುಸ್ವಭಾವ, ಕ್ರೋಧವಿಲ್ಲದಿರುವಿಕೆ, ಅಸೂಯೆ ಇಲ್ಲದಿರುವಿಕೆ, ದಮ, ತಪಸ್ಸು, ಅಹಿಂಸಾ, ಆನೃಶಂಸ್ಯ (ದಯೆ)- ಈ ಎಲ್ಲ ಗುಣಗಳನ್ನು ಚೆನ್ನಾಗಿ ವಿಧಿವತ್ತಾಗಿ ಪರಿಪಾಲಿಸು.

ಸತ್ಯೇ ತಿಷ್ಠ ರತೋ ಧರ್ಮೇ ಹಿತ್ವಾ ಸರ್ವಮನಾರ್ಜವಮ್ ।
ದೇವತಾತಿಥಿಶೇಷೇಣ ಯಾತ್ರಾಂ ಪ್ರಾಣಸ್ಯ ಸಂಶ್ರಯ ॥೫॥

ಸತ್ಯದಲ್ಲಿ ನಿಷ್ಠನಾಗಿರು, ಧರ್ಮದಲ್ಲಿ ನಿರತನಾಗು, ಋಜುವಲ್ಲದ ಮಾರ್ಗವನ್ನು ತ್ಯಜಿಸು. ದೇವತೆಗಳಿಗೂ ಅತಿಥಿಗಳಿಗೂ ನೀಡಿ ಉಳಿದ ಪದಾರ್ಥದಲ್ಲಿ ಪ್ರಾಣಧಾರಣೆಯನ್ನು ಮಾಡಿಕೊ.

ಫೇನಪಾತ್ರೋಪಮೇ ದೇಹೇ ಜೀವೇ ಶಕುನಿವತ್ ಸ್ಥಿತೇ ।
ಅನಿತ್ಯೇ ಪ್ರಿಯಸಂವಾಸೇ ಕಥಂ ಸ್ವಪಿಷಿ ಪುತ್ರಕ ॥೬॥

ಮಗನೇ, ಈ ದೇಹವು ನೀರಿನ ಮೇಲಿನ ಗುಳ್ಳೆಗೆ ಸಮಾನವಾದುದು. ಜೀವವು ಗೂಡಿನಲ್ಲಿರುವ ಪಕ್ಷಿಯಂತೆ ಈ ದೇಹದಲ್ಲಿ ಸೇರಿಕೊಂಡಿದೆ. ಈ ದೇಹಕ್ಕೂ, ಜೀವನಿಗೂ ಯಾವ ಸಂಬಂಧವೂ ಇರುವುದಿಲ್ಲ. ಅನಿತ್ಯವಾದ, ಪ್ರಿಯದಂತೆ ತೋರುವ ಈ ದೇಹದಲ್ಲಿ ಹೇಗೆ ತಾನೆ ಸುಖವನ್ನು ಹೊಂದಲು ಸಾಧ್ಯವಾಗುತ್ತದೆ?

ಅಪ್ರಮತ್ತೇಷು ಜಾಗ್ರತ್ಸು ನಿತ್ಯಯುಕ್ತೇಷು ಶತ್ರುಷು ।
ಅಂತರಂ ಲಿಪ್ಸಮಾನೇಷು ಬಾಲಸ್ತ್ವಂ ನಾವಬುಧ್ಯಸೇ ॥೭॥

ಶತ್ರುಗಳೆನಿಸಿದ ಅರಿಷಡ್ವರ್ಗಗಳು ನಿನ್ನ ಮೇಲೆ ಎರಗಲು ಯಾವಾಗಲೂ ಎಚ್ಚರದಿಂದ ಸಮಯವನ್ನು ಪ್ರತೀಕ್ಷಿಸುತ್ತಿರುವಾಗ ಬಾಲಕನಾದ ನೀನು ಅದನ್ನು ಅರಿಯುತ್ತಿಲ್ಲ.

ಗಣ್ಯಮಾನೇಷು ವರ್ಷೇಷು ಕ್ಷೀಯಮಾಣೇ ತಥಾಯುಷಿ ।
ಜೀವಿತೇ ಶಿಷ್ಯಮಾಣೇ ಚ ಕಿಮುತ್ಥಾಯ ನ ಧಾವಸಿ ॥೮॥

ದಿನವೂ ಒಂದಾದ ಮೇಲೆ ಒಂದು ಕಳೆದುಹೋಗುತ್ತಿರುವಂತೆ ವರ್ಷಗಳನ್ನು ಲೆಕ್ಕ ಹಾಕುತ್ತಾ ಕ್ರಮವಾಗಿ ಆಯುಷ್ಯವು ಕ್ಷಯ ಹೊಂದುತ್ತಿರುತ್ತದೆ. ಲೋಕದಲ್ಲಿ ನಿನ್ನ ಜೀವಿತ ಕಾಲವು ಇಷ್ಟೇ ಎಂದು ನಿಯತವಾಗಿ ನಿಶ್ಚಿತವಾಗುತ್ತಿರಲು ಉಳಿದ ಜೀವಿತಾವಧಿಯಲ್ಲಿ ಜಾಗೃತವಾಗಿ ನಿಂತು ಆಯುಷ್ಯವನ್ನು ಸಾರ್ಥಕ ಮಾಡಿಕೊಳ್ಳಲು ಮಾಡಬೇಕಾದ ಕರ್ತವ್ಯಗಳಿಗೆ ಏಕೆ ಸಾಗುತ್ತಿಲ್ಲ? (ಗುರುಗಳ ಹತ್ತಿರ ಹೋಗಿ ಪರಲೋಕದ ವಿಚಾರವನ್ನು ಏಕೆ ಕೇಳುತ್ತಿಲ್ಲ ಎಂದು ಭಾವ).

ಐಹಲೌಕಿಕಮೀಹಂತೇ ಮಾಂಸಶೋಣಿತವರ್ಧನಮ್ ।
ಪಾರಲೌಕಿಕಕಾರ್ಯೇಷು ಪ್ರಸುಪ್ತಾ ಭೃಶನಾಸ್ತಿಕಾಃ ॥೯॥

ಲೋಕದಲ್ಲಿ ಈ ಲೋಕಕ್ಕೆ ಸಂಬಂಧವಾದ ಸುಖಗಳನ್ನೇ ಸಾಮಾನ್ಯ ಜೀವರು ಬಯಸುತ್ತಾರೆ. ರಕ್ತ-ಮಾಂಸಗಳನ್ನು ಬೆಳೆಸಲು ಬೇಕಾದ ವಸ್ತುಗಳನ್ನೇ ಬಯಸುತ್ತಾರೆ. ಪರಲೋಕ ಸಾಧಕವಾದ ಕಾರ್ಯಗಳಲ್ಲಿ ಮನಸ್ಸನ್ನಿಡದೆ ನಿದ್ರೆ ಹೊಂದಿರುತ್ತಾರೆ. ಈ ವ್ಯಕ್ತಿಗಳೆಲ್ಲ ಪರಲೋಕದ ವಿಷಯದಲ್ಲಿ ವಿಶ್ವಾಸ ಇಲ್ಲದ ಪರಮ ನಾಸ್ತಿಕರು.

ಧರ್ಮಾಯ ಯೇಽಭ್ಯಸೂಯಂತಿ ಬುದ್ಧಿಮೋಹಾನ್ವಿತಾ ನರಾಃ ।
ಅಪಥಾ ಗಚ್ಛತಾಂ ತೇಷಾಮನುಯಾತಾಪಿ ಪೀಡ್ಯತೇ ॥೧೦॥

ಬುದ್ಧಿಮೋಹಕ್ಕೆ ತುತ್ತಾಗಿರುವ ಮಾನವರು ಧರ್ಮದ ವಿಷಯದಲ್ಲಿ ಅಸೂಯೆಯನ್ನು ಹೊಂದಿರುತ್ತಾರೆ. ತಪ್ಪಾದ ಮಾರ್ಗದಲ್ಲಿ ಹೋಗುವಂತಹ ಅಂತಹ ಜನರನ್ನು ಯಾರು ಹಿಂಬಾಲಿಸುತ್ತಾರೋ ಅವರೂ ಅವರಂತೆ ಕಷ್ಟಕ್ಕೆ ತುತ್ತಾಗುತ್ತಾರೆ.

ಯೇ ತು ತುಷ್ಟಾಃ ಸುನಿಯತಾಃ ಸತ್ಯಾಗಮಪರಾಯಣಾಃ ।
ಧರ್ಮ್ಯಂ ಪಂಥಾನಮಾರೂಢಾಸ್ತಾನುಪಾಸ್ಸ್ವ ಚ ಪೃಚ್ಛ ಚ ॥೧೧॥

ಯಾರು ನಿತ್ಯವೂ ತುಷ್ಟರಾಗಿ, ಶಾಸ್ತ್ರಪರಾಯಣರಾಗಿ, ನಿರ್ದುಷ್ಟವಾದ ವೇದಗಳಲ್ಲೇ ಆಸಕ್ತರಾಗಿರುತ್ತಾರೋ, ಧರ್ಮಮಾರ್ಗವನ್ನೇ ಅವಲಂಬಿಸಿರುತ್ತಾರೋ ಅಂತಹ ಸಜ್ಜನರ ಮಾರ್ಗವನ್ನೇ ನೀನು ಅವಲಂಬಿಸಿ ಅವರಿಂದ ಧರ್ಮಗಳನ್ನು ಕೇಳಿ ತಿಳಿ.

ಉಪಧಾರ್ಯ ಮತಂ ತೇಷಾಂ ವೃದ್ಧಾನಾಂ ಧರ್ಮದರ್ಶಿನಾಮ್ ।
ನಿಯಚ್ಛ ಪರಯಾ ಬುದ್ಧ್ಯಾ ಚಿತ್ತಮುತ್ಪಥಗಾಮಿ ವೈ ॥೧೨॥

ಅಂತಹ ವಿದ್ವಾಂಸರ ಮತವನ್ನು ತಿಳಿದು ಜ್ಞಾನವೃದ್ಧರಾದ, ಧರ್ಮದರ್ಶಿಗಳಾದ ಸಜ್ಜನರ ಮಾರ್ಗವನ್ನು ಅನುಸರಿಸಿ, ಉತ್ತಮವಾದ ಬುದ್ಧಿಯನ್ನು ಹೊಂದಿ, ತಪ್ಪಾದ ಮಾರ್ಗದಲ್ಲಿ ಸಾಗುವ ನಿನ್ನ ಮನಸ್ಸನ್ನು ನಿಗ್ರಹಿಸಿಕೊ.

ಅದ್ಯಕಾಲಿಕಯಾ ಬುದ್ಧ್ಯಾ ದೂರೇ ಶ್ವ ಇತಿ ನಿರ್ಭಯಾಃ ।
ಸರ್ವಭಕ್ಷಾ ನ ಪಶ್ಯಂತಿ ಕರ್ಮಭೂಮಿಂ ವಿಚೇತಸಃ ॥೧೩॥

ತಾತ್ಕಾಲಿಕವಾದ ಸುಖಗಳಿಗಾಗಿ ಬಯಸುವ ಬುದ್ಧಿಯಿಂದ ದೂರದೃಷ್ಟಿ ಇಲ್ಲದೆ, ನಾಳೆಯೇ ಬರುವುದನ್ನು ಬಹುದೂರದಲ್ಲಿದೆ ಎಂದು ತಿಳಿದು ನಿರ್ಭೀತಿಯಿಂದ ಸಾಗುತ್ತಾ, ಭಕ್ಷ್ಯಾಭಕ್ಷ್ಯಗಳ ವಿಚಾರವಿಲ್ಲದೆ ಎಲ್ಲವನ್ನೂ ಸ್ವೀಕರಿಸುತ್ತಾ, ಈ ಭೂಮಿಯನ್ನು ಕೇವಲ ಕರ್ಮಭೂಮಿ ಎಂದು ಬುದ್ಧಿಗೆಟ್ಟವರು ತಿಳಿದಿರುತ್ತಾರೆ.

ಧರ್ಮನಿಃಶ್ರೇಣಿಮಾಸ್ಥಾಯ ಕಿಂಚಿತ್ ಕಿಂಚಿತ್ ಸಮಾರುಹ ।
ಕೋಶಕಾರವದಾತ್ಮಾನಂ ವೇಷ್ಟಯನ್ನಾವಬುಧ್ಯಸೇ ॥೧೪॥

ಮಗನೇ, ನೀನು ಧರ್ಮವೆಂಬ ನಿಚ್ಚಣಿಕೆಯನ್ನು ಅವಲಂಬಿಸಿ ಸ್ವಲ್ಪ-ಸ್ವಲ್ಪವಾಗಿ ಅದನ್ನು ಹೊಂದುವ ಪ್ರಯತ್ನವನ್ನು ಮಾಡು. ರೇಷ್ಮೆಹುಳುವು ತನ್ನನ್ನು ತಾನೇ ನೂಲಿನಿಂದ ಬಂಧಿಸಿಕೊಳ್ಳುವಂತೆ ಪ್ರಕೃತಿಬಂಧನದಿಂದ ಬದ್ಧನಾದ ನೀನು ನಿನ್ನ ಸ್ಥಿತಿಯನ್ನು ಅರಿಯದವನಾಗಿರುವಿ.

ನಾಸ್ತಿಕಂ ಭಿನ್ನಮರ್ಯಾದಂ ಕೂಲಪಾತಮಿವಾಸ್ಥಿರಮ್ ।
ವಾಮತಃ ಕುರು ವಿಸ್ರಬ್ಧೋ ನರಂ ವೇಣುಮಿವೋದ್ಧತಮ್ ॥೧೫॥

ಯಾವುದೇ ವಿಧಿ-ನಿಷೇಧಗಳನ್ನು ಅವಲಂಬಿಸದ ಧರ್ಮವು ದಡವಿಲ್ಲದ ನದಿಯ ಪ್ರವಾಹವು ತೀರಗಳಲ್ಲಿರುವ ಮನೆಗಳನ್ನೆಲ್ಲ ಉರುಳಿಸುವಂತೆ ಧರ್ಮ ಮರ್ಯಾದೆಯನ್ನು ಮೀರಿ, ಆಶಾಪಾಶಗಳಿಂದ ಕೂಡಿರುವ ನಾಸ್ತಿಕಮತವು ಅನ್ಯಾಯವನ್ನೇ ಎಸಗುತ್ತದೆ. ಇದರಿಂದ ಜಾಗೃತನಾಗಿ ಬಿದಿರಿನಿಂದ ಹೊಡೆಯಲ್ಪಟ್ಟ ನರನು ಎಚ್ಚರಗೊಳ್ಳುವಂತೆ ಧರ್ಮಬುದ್ಧಿಯಲ್ಲಿ ಜಾಗೃತನಾಗು. ನಾಸ್ತಿಕ್ಯವನ್ನು ದೂರೀಕರಿಸು.

ಕಾಮಂ ಕ್ರೋಧಂ ಚ ಮೃತ್ಯುಂ ಚ ಪಂಚೇಂದ್ರಿಯಜಲಾಂ ನದೀಮ್ ।
ನಾವಂ ಧೃತಿಮಯೀಂ ಕೃತ್ವಾ ಜನ್ಮದುರ್ಗಾಣಿ ಸಂತರ ॥೧೬॥

ಕಾಮ-ಕ್ರೋಧಗಳೆಂಬ ಮೃತ್ಯುವನ್ನು, ಪಂಚೇಂದ್ರಿಯಗಳೆಂಬ ಮಹತ್ತಾದ ನದಿಯ ಜಲವನ್ನು, ಧೈರ್ಯವೆಂಬ ದೋಣಿಯನ್ನು ಅವಲಂಬಿಸಿಕೊಂಡು, ಜನ್ಮವೆಂಬ ಕಠಿಣವಾದ ಮಾರ್ಗವನ್ನು ದಾಟು.

ಮೃತ್ಯುನಾಭ್ಯಾಹತೇ ಲೋಕೇ ಜರಯಾ ಪರಿಪೀಡಿತೇ ।
ಅಮೋಘಾಸು ಪತಂತೀಷು ಧರ್ಮಯಾನೇನ ಸಂತರ ॥೧೭॥

ಲೋಕವೆಲ್ಲವೂ ಮೃತ್ಯುವಿನಿಂದ, ಜರೆಯಿಂದ ಪೀಡಿತವಾಗಿದೆ. ವ್ಯರ್ಥವಾದ ಇಂತಹ ಅಲೆಗಳು ಅಪ್ಪಳಿಸುತ್ತಿರುವಾಗ ಧರ್ಮವೆಂಬ ದೋಣಿಯನ್ನಾಶ್ರಯಿಸಿ ಈ ಸಂಸಾರವನ್ನು ದಾಟು.

ತಿಷ್ಠಂತಂ ಚ ಶಯಾನಂ ಚ ಮೃತ್ಯುರನ್ವೇಷತೇ ಯದಾ ।
ನಿರ್ವೃತ್ತಿಂ ಲಭಸೇ ತಸ್ಮಾದಕಸ್ಮಾನ್ಮೃತ್ಯುನಾಶಿತಃ ॥೧೮॥

ಮಗನೇ, ಮೃತ್ಯುವೆಂಬುದು ನೀನು ಮಲಗಿದ್ದರೂ ಕುಳಿತಿದ್ದರೂ ನಿಂತಿದ್ದರೂ ಯಾವಾಗಲೂ ಹಿಂಬಾಲಿಸುತ್ತಲೇ ಇರುತ್ತದೆ. ಆದ್ದರಿಂದ ಇಂತಹ ಮೃತ್ಯುವಿನ ಪರಿಹಾರವನ್ನು ನೀನು ಯಾಕೆ ಅಪೇಕ್ಷಿಸುತ್ತಿಲ್ಲ?

ಸಂಚಿನ್ವಾನಕಮೇವೈನಂ ಕಾಮಾನಾಮವಿತೃಪ್ತಕಮ್ ।
ವೃಕೀವೋರಣಮಾಸಾದ್ಯ ಮೃತ್ಯುರಾದಾಯ ಗಚ್ಛತಿ ॥೧೯॥

ಮನುಷ್ಯನು ಕಾಮಗಳಲ್ಲಿ ತೃಪ್ತಿಯನ್ನು ಹೊಂದದೆ ಪುನಃ ಪುನಃ ಅದನ್ನೇ ಬಯಸುತ್ತಾನೆ. ಹೀಗೆ ಕಾಮನೆಗಳನ್ನು ಅನ್ವೇಷಣೆ ಮಾಡುತ್ತಾ ಹೋಗುತ್ತಿರುವಾಗ ಆಹಾರಕ್ಕಾಗಿ ಅಲೆಯುವ ಆಡುಗಳನ್ನು ತೋಳಗಳು ಕಬಳಿಸಿಕೊಂಡು ಹೋಗುವಂತೆ ಮೃತ್ಯುವು ಒಮ್ಮಿಂದೊಮ್ಮೆಲೆ ಮಾನವರನ್ನು ಕಬಳಿಸುತ್ತದೆ.

ಕ್ರಮಶಃ ಸಂಚಿತಶಿಖೋ ಧರ್ಮಬುದ್ಧಿಮಯೋ ಮಹಾನ್ ।
ಅಂಧಕಾರೇ ಪ್ರವೇಷ್ಟವ್ಯೇ ದೀಪೋ ಯತ್ನೇನ ಧಾರ್ಯತಾಮ್ ॥೨೦॥

ಸಂಸಾರವೆಂಬ ಅಂಧಕಾರದಲ್ಲಿ ಪ್ರವೇಶಿಸಬೇಕಾದಾಗ ದೀಪವನ್ನು ಪ್ರಯತ್ನ ಪೂರ್ವಕವಾಗಿ ಧರಿಸಲೇಬೇಕು. ಧರ್ಮಬುದ್ಧಿಯೇ ಅಂತಹ ದೀಪವೆನಿಸಿದೆ. ಬೆಳಗುತ್ತಾ ಇರುವ ಜ್ವಾಲೆಯಿಂದ ಕೂಡಿದ ಆ ದಿವ್ಯದೀಪವನ್ನು ಪ್ರಯತ್ನ ಪೂರ್ವಕವಾಗಿ ಬಿಡಿಸಿ ಸಂಸಾರವನ್ನು ದಾಟು.

ಸಂಪತಂದೇಹಜಾಲಾನಿ ಕದಾಚಿದಿಹ ಮಾನುಷೇ ।
ಬ್ರಾಹ್ಮಣ್ಯಂ ಲಭತೇ ಜಂತುಸ್ತತ್ತ್ವತ್ರ ಪರಿಪಾಲಯ ॥೨೧॥

ಜೀವಾತ್ಮನು ಅನೇಕ ಹೀನಜನ್ಮಗಳನ್ನು ಹೊಂದಿದ ಮೇಲೆ ಕಷ್ಟದಿಂದ, ಭಾಗ್ಯವಶದಿಂದ ಒಮ್ಮೆ ಈ ಮನುಷ್ಯಜನ್ಮವನ್ನು ಹೊಂದುತ್ತಾನೆ. ಅದರಲ್ಲಿಯೂ ಅತ್ಯಂತ ಪುಣ್ಯವಿಶೇಷದಿಂದ ಬ್ರಾಹ್ಮಣ ಜನ್ಮವನ್ನು ಹೊಂದುತ್ತಾನೆ. ಅಂತಹ ಬ್ರಾಹ್ಮಣ ಜನ್ಮವನ್ನು ನೀನು ಚೆನ್ನಾಗಿ ಪರಿಪಾಲಿಸಬೇಕು.

ಬ್ರಾಹ್ಮಣಸ್ಯ ಹಿ ದೇಹೋಯಂ ನ ಕಾಮಾರ್ಥಾಯ ಜಾಯತೇ ।
ಇಹ ಕ್ಲೇಶಾಯ ತಪಸೇ ಪ್ರೇತ್ಯ ತ್ವನುಪಮಂ ಸುಖಮ್ ॥೨೨॥

ಬ್ರಾಹ್ಮಣನ ಶರೀರವು ಅರ್ಥ-ಕಾಮಗಳಿಗಾಗಿ ಎಂದಿಗೂ ಹುಟ್ಟಿರುವುದಿಲ್ಲ. ಬ್ರಾಹ್ಮಣ್ಯವೆಂಬುದು ಯಾವಾಗಲೂ ಕ್ಲೇಶಕ್ಕೆ, ತಪಸ್ಸಿಗಾಗಿಯೇ ನಿರ್ಮಿತವಾಗಿದೆ. ಸತ್ತ ಬಳಿಕ ಆ ಜನ್ಮಕ್ಕೆ ಪರಮಶ್ರೇಷ್ಠವಾದ ಸುಖವು ದೊರೆಯುತ್ತದೆ.

ಬ್ರಾಹ್ಮಣ್ಯಂ ಬಹುಭಿರವಾಪ್ಯತೇ ತಪೋಭಿ-
ಸ್ತಲ್ಲಬ್ಧ್ವಾ ನ ರತಿಪರೇಣ ಹೇಡಿತವ್ಯಮ್ ।
ಸ್ವಾಧ್ಯಾಯೇ ತಪಸಿ ದಮೇ ಚ ನಿತ್ಯಯುಕ್ತಃ
ಕ್ಷೇಮಾರ್ಥೀ ಕುಶಲಪರಃ ಸದಾ ಯತಸ್ವ ॥೨೩॥

ಮಗನೇ, ಬ್ರಾಹ್ಮಣ್ಯವು ಅನೇಕ ತಪಸ್ಸುಗಳ ಫಲದಿಂದ ಲಭಿಸುವಂತಹದ್ದು. ಅಂತಹ ಶ್ರೇಷ್ಠವಾದ ಬ್ರಾಹ್ಮಣಶರೀರವನ್ನು ಪಡೆದುಕೊಂಡಿರುವಾಗ ವಿಷಯಾಸಕ್ತಿಗಳಲ್ಲಿ, ಕಾಮಾದಿಗಳಲ್ಲಿ ಆಸಕ್ತನಾಗಿ ವ್ಯರ್ಥ ಮಾಡಿಕೊಳ್ಳಬಾರದು. ತಪಸ್ಸು, ಸ್ವಾಧ್ಯಾಯ, ಇಂದ್ರಿಯನಿಗ್ರಹ ಇವುಗಳಲ್ಲಿಯೇ ನೀನು ಆಸಕ್ತನಾಗಿ, ಜಾಣನಾಗಿ ನಿತ್ಯವೂ ಆತ್ಮನ ಕ್ಷೇಮವನ್ನು ಬಯಸುವವನಾಗಿ ಪ್ರಯತ್ನಿಸುತ್ತಿರು.

ಅವ್ಯಕ್ತಪ್ರಕೃತಿರಯಂ ಕಲಾಶರೀರಃ
ಸೂಕ್ಷ್ಮಾತ್ಮಾ ಕ್ಷಣತ್ರುಟಿಶೋ ನಿಮೇಷರೋಮಾ ।
ಋತಾಸ್ಯಃ ಸಮಬಲಶುಕ್ಲಕೃಷ್ಣನೇತ್ರೋ
ಮಾಸಾಂಗೋ ದ್ರವತಿ ವಯೋಹಯೋ ನರಾಣಾಮ್ ॥೨೪॥

ಮನುಷ್ಯನ ಆಯುಷ್ಯವೆಂಬುದು ವೇಗದಿಂದ ಓಡುತ್ತಿರುವ ಒಂದು ಕುದುರೆಯಂತೆ ತಿಳಿ. ಅದು ಅವ್ಯಕ್ತ ಎಂಬ ಪ್ರಕೃತಿಯನ್ನು ಕಾರಣವಾಗಿಟ್ಟುಕೊಂಡು ಉತ್ಪನ್ನವಾದುದು. ಕಲೆಗಳೆಂಬ ಶರೀರವುಳ್ಳದ್ದು. ಸೂಕ್ಷ್ಮರೂಪವೂ ಉಳ್ಳದ್ದು. ಕ್ಷಣ, ತ್ರುಟಿ, ನಿಮೇಷಗಳೇ ಅದರ ರೋಮಗಳು. ಸಮಾನ ದೃಷ್ಟಿಯುಳ್ಳ ಶುಕ್ಲ-ಕೃಷ್ಣ ಪಕ್ಷಗಳೆರಡು ಕಣ್ಣುಗಳು. ಮಾಸಗಳೇ ಇದರ ಅವಯವಗಳು. ಭಯಂಕರವಾದ ವೇಗವುಳ್ಳ ಇದರ ಆಯುಷ್ಯ ನಿರಂತರವೂ ಓಡುತ್ತಿರುತ್ತದೆ.

ತಂ ದೃಷ್ಟ್ವಾ ಪ್ರಸತಮಜಸ್ರಮುಗ್ರವೇಗಂ
ಗಚ್ಛಂತಂ ಸತತಮಿಹಾವ್ಯಪೇಕ್ಷಮಾಣಮ್ ।

ಚಕ್ಷುಸ್ತೇ ಯದಿ ನ ಪರಪ್ರಣೇತೃನೇಯಂ
ಧರ್ಮೇ ತೇ ಭವತು ಮನಃ ಪರಂ ನಿಶಮ್ಯ ॥೨೫॥

ಈ ರೀತಿಯಾಗಿ ಉಗ್ರವಾದ ವೇಗವುಳ್ಳ ಜೀವನವೆಂಬ ಕುದುರೆಯನ್ನು, ಯಾವುದನ್ನು ಅಪೇಕ್ಷಿಸದೆ ಸಾಗುತ್ತಿರುವ ಕುದುರೆಯನ್ನು ಕಾಣುತ್ತಿರುವಿ. ಒಂದು ವೇಳೆ ಕುರುಡನಂತೆ ಮತ್ತೊಬ್ಬರ ಸಹಾಯವನ್ನು ನಿನ್ನ ಕಣ್ಣುಗಳು ಬಯಸುತ್ತಿಲ್ಲವಾದಲ್ಲಿ ನಿನ್ನ ಮನಸ್ಸನ್ನು ಧರ್ಮಮಾರ್ಗದಲ್ಲಿ ಸಾಗುವಂತೆ ಬಾಹ್ಯ ಪದಾರ್ಥಗಳಿಂದ ನಿಯಂತ್ರಿಸಿಕೊಂಡು ಪ್ರೇರಿಸು.

ಯೇಽಮೀ ತು ಪ್ರಚಲಿತಧರ್ಮಕಾಮವೃತ್ತಾಃ
ಕ್ರೋಶಂತಃ ಸತತಮನಿಷ್ಟಸಂಪ್ರಯೋಗಾಃ ।
ಕ್ಲಿಶ್ಯಂತೇ ಪರಿಗತವೇದನಾಶರೀರಾ
ಬಹ್ವೀಭಿಃ ಸುಭೃಶಮಧರ್ಮವಾಸನಾಭಿಃ ॥೨೬॥

ಯಾರು ಈ ಲೋಕದಲ್ಲಿ ಧರ್ಮದಿಂದ ವಿಚಲಿತರಾಗಿ, ಸ್ವಚ್ಛಂದವಾಗಿ ನಡೆದುಕೊಳ್ಳುತ್ತಾರೋ, ಬೇರೆಯವರನ್ನು ನಿಂದಿಸುತ್ತಾರೋ, ಯಾವಾಗಲೂ ಅನಿಷ್ಟಕರವಾದ ಅಶುಭಕರ್ಮಗಳಲ್ಲಿಯೇ ಆಸಕ್ತರಾಗಿರುತ್ತಾರೋ ಅವರು ಮರಣದ ಬಳಿಕ ಯಾತನಾಮಯವಾದ ಶರೀರವನ್ನು ಪಡೆದು, ಅನೇಕ ಪಾಪಕರ್ಮಗಳ ಕಾರಣದಿಂದ ಯಮಪುರಿಯಲ್ಲಿ ವಿಧವಿಧವಾದ ದುಃಖಗಳನ್ನು ಅನುಭವಿಸುತ್ತಾರೆ.

ರಾಜಾ ಧರ್ಮಪರಃ ಸದಾ ಶುಭಗೋಪ್ತಾ
ಸಮೀಕ್ಷ್ಯ ಸುಕೃತಿನಾಂ ದಧಾತಿ ಲೋಕಾನ್ ।
ಬಹುವಿಧಮಪಿ ಚರತಃ ಪ್ರದಿಶತಿ
ಸುಖಮನುಪಗತಂ ನಿರವದ್ಯಮ್ ॥೨೭॥

ಯಮರಾಜನಾದರೂ ಯಾವಾಗಲೂ ಧರ್ಮಪರನಾಗಿರುವವನು. ಮನುಷ್ಯರು ಆಚರಿಸಿದ ಶುಭಾಶುಭ ಕರ್ಮಗಳನ್ನು ರಕ್ಷಿಸುವವನು. ಪುಣ್ಯವಂತರ ಪುಣ್ಯಗಳನ್ನು ಚೆನ್ನಾಗಿ ವಿಮರ್ಶಿಸಿ ಅದಕ್ಕೆ ಯೋಗ್ಯವಾದ ಲೋಕಗಳನ್ನು ನೀಡುತ್ತಾನೆ. ಅನೇಕ ರೀತಿಯಾದ ಶುಭಕರ್ಮಗಳನ್ನು ಆಚರಿಸುವವರಿಗೆ ಸಾವಿರ ಜನ್ಮಗಳಲ್ಲಿಯೂ ಹೊಂದಲಾಗದಿರುವ ಉತ್ಕೃಷ್ಟ ಸುಖವನ್ನು ನೀಡುತ್ತಾನೆ.

ಶ್ವಾನೋ ಭೀಷಣಕಾಯೋಮುಖಾನಿ ವಯಾಂಸಿ
ಬಲಗೃಧ್ರಕುರರಪಕ್ಷಿಶ್ಚ ಸಂಘಾತಮ್ ।
ನರಕಕದನರುಧಿರವಾಗುರವಚನ
ಮಿದಮುಪರತಂ ನ ವಿಶಂತಿ ॥೨೮॥

ಇಂತಹ ಯೋಗ್ಯನಾದ ವ್ಯಕ್ತಿಯನ್ನು ಕಬ್ಬಿಣದಂತೆ ಮುಖವುಳ್ಳ ಬಲಿಷ್ಠವಾದ ಹದ್ದುಗಳು, ಕುರರಪಕ್ಷಿಗಳು, ನಾಯಿಗಳು ಹೆದರಿಸುವುದಿಲ್ಲ. ಹಿರಿಯರ ಮಾತನ್ನು ಗೌರವಿಸಲಿಲ್ಲ, ಇವನನ್ನು ಕಟ್ಟಿಹಾಕಿ ಎಂದು ಶಿಕ್ಷೆಯ ಬಗ್ಗೆ ಮಾತನಾಡುವ ನರಕ ಲೋಕಕ್ಕೆ ಸಜ್ಜನರಾದವರು ಪ್ರವೇಶಿಸುವುದಿಲ್ಲ.

ಮರ್ಯಾದಾ ನಿಯತಾಃ ಸ್ವಯಂಭುವಾ ಯ
ಇಹೇಮಾಃ ಪ್ರಭಿನತ್ತಿ ದಶಗುಣಾ ಮನೋನುಗತ್ವಾತ್ ।
ನಿವಸತಿ ಭೃಶಮಸುಖಂ ಪಿತೃವಿಷಯ-
ವಿಪಿನಮವಗಾಹ್ಯ ಸ ಪಾಪಃ ॥೨೯॥

ಯಾವ ಮನುಷ್ಯನು ಕಾಮದಿಂದ ತಿರಸ್ಕೃತವಾದ ಮನಸ್ಸಿಗೆ ಅನುಗುಣವಾಗಿ ಸಾಗುತ್ತಾನೋ ಅವನು ಸ್ವಯಂಭುವಿನಿಂದ ವಿಧಿಸಲ್ಪಟ್ಟ ಹತ್ತುಧರ್ಮದ ಮರ್ಯಾದೆಗಳನ್ನು ಉಲ್ಲಂಘಿಸಿದ ಕಾರಣ ಮರಣದ ಬಳಿಕ ಯಮಲೋಕದಲ್ಲಿ ಭಯಂಕರವಾದ ದುಃಖಗಳಿಂದ ಕೂಡಿದ, ಗುರು-ಹಿರಿಯರನ್ನು ಅವಮಾನಿಸಿದ ಕಾರಣದಿಂದ ದೊರೆಯುವ ಕಾಡನ್ನು ಹೊಕ್ಕು ಪಾಪಿಯಾಗಿ ದುಃಖವನ್ನು ಅನುಭವಿಸುತ್ತಾನೆ.

ವ್ಯಾಖ್ಯಾನ ವಿಶೇಷ– ಶುಚಿತ್ವ, ಸಂತುಷ್ಟಿ, ತಪಸ್ಸು, ಸ್ವಾಧ್ಯಾಯ, ಈಶ್ವರ ಧ್ಯಾನ, ಅಹಿಂಸೆ, ಸತ್ಯವಚನ, ಅಸ್ತೇಯ, ಬ್ರಹ್ಮಚರ್ಯ, ಅಪ್ರತಿಗ್ರಹ ಎಂಬ ಹತ್ತು ಈ ಧರ್ಮದ ಮರ್ಯಾದೆಗಳು.

ಯೋ ಲುಬ್ಧಃ ಸುಭೃಶಂ ಪ್ರಿಯಾನೃತಶ್ಚ
ಮನುಷ್ಯಃ ಸತತನಿಕೃತಿವಂಚನಾರತಿಃ ಸ್ಯಾತ್ ।
ಉಪನಿಧಿಭಿರಸುಖಭೃತಸ್ವಪರಮೋನಿರಯಗೋ
ಭೃಶಮಸುಖಮನುಭವತಿ ದುಷ್ಕೃತಕರ್ಮಾ ॥೩೦॥

ಯಾವ ಮನುಷ್ಯನು ಅತ್ಯಂತ ಲೋಭಿಯೋ, ಸುಳ್ಳು ಹೇಳುವುದರಲ್ಲಿ ಆಸಕ್ತನೋ, ಸದಾ ಮೋಸ-ವಂಚನೆಗಳಲ್ಲೇ ನಿರತನೋ, ಏನಾದರೂ ನೆಪಗಳನ್ನು ಹೇಳಿ ಇನ್ನೊಬ್ಬರಿಗೆ ಕಷ್ಟಗಳನ್ನು ನೀಡುತ್ತಾನೋ, ಇಂತಹ ಪಾಪಕರ್ಮಿಗಳೆಲ್ಲರೂ ಕಠಿಣವಾದ ನರಕದಲ್ಲಿ ತಾವು ಮಾಡಿದ ದುಷ್ಕರ್ಮಕ್ಕೆ ಅನುಗುಣವಾಗಿ ಸಂಕಟಗಳನ್ನು ಅನುಭವಿಸುತ್ತಾರೆ.

ವ್ಯಾಖ್ಯಾನ ವಿಶೇಷ– 'ಉಪನಿಧಿಭಿರಸುಖಭೃತಮ್' ಎಂದರೆ ದುಃಖದಿಂದ ಗಳಿಸಿದ ದ್ರವ್ಯದಲ್ಲಿ ಅತ್ಯಂತ ಮೋಹವನ್ನು ಹೊಂದುತ್ತಾನೋ ಎಂದು ಅರ್ಥ.

ಉಷ್ಣಾಂ ವೈತರಣೀಂ ಮಹಾನದೀಮವ-
ಗಾಢೋಸಿಪತ್ರವನಭಿನ್ನಗಾತ್ರಃ ।
ಪರಶುವನಶಯೋ ನಿಪತಿತೋ
ವಸತಿ ಚ ಮಹಾನಿರಯೇ ಭೃಶಾರ್ತಃ ॥೩೧॥

ಇಷ್ಟು ಮಾತ್ರವಲ್ಲದೆ ಅಂತಹ ಪಾಪಿಯು ಕುದಿಯುತ್ತಿರುವ ವೈತರಣಿ ನದಿಯಲ್ಲಿ ಮುಳುಗುತ್ತಾನೆ. ಕತ್ತಿಗಳೇ ಎಲೆಗಳಾಗಿರುವ ವೃಕ್ಷಗಳಿಂದ ತುಂಬಿರುವ ವನದಲ್ಲಿ ವಾಸಿಸುವುದರಿಂದ ಅವನ ಶರೀರವು ಸೀಳಿ ಹೋಗುತ್ತದೆ. ಅವನು ಕಾಲಕ್ರಮದಲ್ಲಿ ಕೊಡಲಿಯಂತೆ ಎಲೆಯುಳ್ಳ ವೃಕ್ಷಗಳಿಂದ ಕೂಡಿರುವ ಕಾಡಿನಲ್ಲಿ ಬಿದ್ದವನಾಗಿ ನಾನಾ ವಿಧವಾದ ನರಕಗಳಲ್ಲಿ ದುಃಖಿತನಾಗಿ ವಾಸ ಮಾಡುತ್ತಾನೆ.

ಮಹಾಪದಾನಿ ಕತ್ಥಸೇ ನ ಚಾಪ್ಯವೇಕ್ಷಸೇ ಪರಮ್ ।
ಚಿರಸ್ಯ ಮೃತ್ಯುಕಾರಿಕಾಮನಾಗತಾಂ ನ ಬುಧ್ಯಸೇ ॥೩೨॥

ಶುಕನೇ, ಬ್ರಹ್ಮಲೋಕವೇ ಮೊದಲಾದ ಮಹತ್ತರವಾದ ಲೋಕಗಳ ವಿಷಯವನ್ನು ಹೇಳುತ್ತೇನೆ. ಆದರೆ ಆ ಎಲ್ಲ ಲೋಕಗಳಿಗಿಂತ ಪರಮಪದ ಎನಿಸಿದ ಲೋಕದ ಬಗ್ಗೆ ನಿನಗೆ ದೃಷ್ಟಿಯಿಲ್ಲದಾಗಿದೆ. ಮುಂದೆ ಬರುವ ಮೃತ್ಯುವಿಗೆ ಕಾರಣವಾದ ವೃದ್ಧಾಪ್ಯವನ್ನು ಈ ಯೌವನದ ಭರದಲ್ಲಿ ನೀನು ತಿಳಿಯುತ್ತಿಲ್ಲ.

ಪ್ರಯಾಸ್ಯತಾಂ ಕಿಮಾಸ್ಯತೇ ಸಮುತ್ಥಿತಂ ಮಹದ್ಭಯಮ್ ।
ಅತಿಪ್ರಮಾಥಿ ದಾರುಣಂ ಸುಖಸ್ಯ ಸಂವಿಧೀಯತಾಮ್ ॥೩೩॥

ಮಗನೇ, ನಾನು ಹೇಳುವ ಧರ್ಮಮಾರ್ಗದಲ್ಲಿ ನೀನು ಸಾಗು. ಏಕೆ ಸುಮ್ಮನೆ ಕುಳಿತಿರುವಿ? ಮಹತ್ತರವಾದ ಭಯವು ಪ್ರಾಪ್ತವಾಗಿದೆ. ಅತ್ಯಂತ ಶಿಥಿಲಗೊಳಿಸುವ ದಾರುಣವಾದ ಭಯವು ಎದುರಾದಾಗ ಸುಖಪ್ರಾಪ್ತಿಗಾಗಿ ಪ್ರಯತ್ನವನ್ನು ಮಾಡು.

ಪುರಾ ಮೃತಃ ಪ್ರಣೀಯಸೇ ಯಮಸ್ಯ ಮೃತ್ಯುಶಾಸನಾತ್ ।
ತದಂತಿಕಾಯ ದಾರುಣೈಃ ಪ್ರಯತ್ನಮಾರ್ಜವೇ ಕುರು ॥೩೪॥

ಕಾಲಾಂತರದಲ್ಲಿ ನೀನು ಮೃತನಾದರೆ ಧರ್ಮವನ್ನಾಚರಿಸದ ಕಾರಣದಿಂದ ಯಮರಾಜನ ಶಾಸನದಂತೆ ಯಮದೂತರು ಪಾಶದಿಂದ ನಿನ್ನನ್ನು ಬಂಧಿಸಿ ಯಮನ ಬಳಿ ಕರೆದೊಯ್ಯುತ್ತಾರೆ. ಇಂತಹ ಸ್ಥಿತಿ ಬರಬಾರದೆಂದಿದ್ದಲ್ಲಿ ಧರ್ಮಜ್ಞಾನವನ್ನು ಹೊಂದಲು ಪ್ರಯತ್ನಿಸು.

ಪುರಾ ಸಮೂಲಬಾಂಧವಂ ಪ್ರಭುರ್ಹರತ್ಯದುಃಖವಿತ್ ।
ತವೇಹ ಜೀವಿತಂ ಯಮೋ ನ ಚಾಸ್ತಿ ತಸ್ಯ ವಾರಕಃ ॥೩೫॥

ಪ್ರಭುವಾದ ಯಮದೇವನು ಇನ್ನೊಬ್ಬರ ದುಃಖಗಳನ್ನು ನೋಡನು. ಸಮೂಲವಾಗಿ ಸಮಸ್ತ ಬಂಧುಗಳ ಜೊತೆ ಎಲ್ಲರ ಪ್ರಾಣವನ್ನು ಅಪಹರಿಸಬಲ್ಲನು. ಹೀಗಿರಲು ನಿನ್ನ ಪ್ರಾಣವು ಅವನಿಗೆ ಯಾವ ಲೆಕ್ಕ? ಆ ಯಮನನ್ನು ತಡೆಯುವವರು ಯಾರೂ ಇಲ್ಲ.

ಪುರಾ ವಿವಾತಿ ಮಾರುತೋ ಯಮಸ್ಯ ಯಃ ಪುರಃಸರಃ ।
ಪುರೈಕ ಏವ ನೀಯಸೇ ಕುರುಷ್ವ ಸಾಂಪರಾಯಿಕಮ್ ॥೩೬॥

ಯಮದೇವನು ಬಳಿ ಬರುವುದಕ್ಕಿಂತ ಮೊದಲು ಅದರ ಸೂಚನೆಯಾಗಿ ಕಾಲರೂಪವಾದ ಗಾಳಿಯು ಮೊದಲು ಬೀಸುತ್ತಾ ಬರುತ್ತದೆ. ಅದು ಯಮಲೋಕಕ್ಕೆ ಕರೆದೊಯ್ಯುತ್ತದೆ. ಅದು ಬರುವ ಮುನ್ನ ಪರಲೋಕಕ್ಕೆ ಬೇಕಾದ ಸಾಧನವನ್ನು ಸಂಗ್ರಹಿಸಿಕೊ.

ಪುರಾ ಸಹಿಕ್ವ ಏವ ತೇ ಪ್ರವಾತಿ ಮಾರುತೋಂತಕಃ ।
ಪುರಾ ಚ ವಿಭ್ರಮಂತಿ ತೇ ದಿಶೋ ಮಹಾಭಯಾಗಮೇ ॥೩೭॥

ಹಿಂದಿನ ಜನ್ಮದಲ್ಲಿ ಮರಣವನ್ನು ನೀಡಿದ ಯಮದೇವನೇ ವಾಯುವಿನ ರೂಪವಾಗಿ ನಿನ್ನ ಮುಂದೆ ಬರುತ್ತಾನೆ. ಆ ಸಮಯದಲ್ಲಿ ದಿಕ್ಕುಗಳೆಲ್ಲವೂ ತಿರುಗಿದಂತೆ

ಮಹಾಭಯವು ಉಂಟಾಗುತ್ತದೆ. ಹಾಗಾಗುವುದಕ್ಕೆ ಮೊದಲು ಪರಮಸುಖ ಸಾಧನವಾದ ಧರ್ಮಾಚರಣೆಗಳನ್ನು ಮಾಡು.

ಸ್ಮೃತಿಶ್ಚ ಸನ್ನಿರುಧ್ಯತೇ ಪುರಾ ತವೇಹ ಪುತ್ರಕ ।
ಸಮಾಕುಲಸ್ಯ ಗಚ್ಛತಃ ಸಮಾಧಿಮುತ್ತಮಂ ಕುರು ॥೩೮॥

ಮಗನೇ, ಶರೀರವನ್ನು ತೊರೆದು ಹೋಗುವಾಗ ಕಳವಳಗೊಂಡಿರುವ ನಿನಗೆ ಸ್ಮರಣೆಯು ನಾಶವಾಗುತ್ತದೆ. ಹಾಗಾಗುವುದಕ್ಕಿಂತ ಮೊದಲೇ ಉತ್ತಮವಾದ ಸಮಾಧಿ ಯೋಗವನ್ನು ಅಭ್ಯಾಸ ಮಾಡು.

ಕೃತಾಕೃತೇ ಶುಭಾಶುಭೇ ಪ್ರಮಾದಕರ್ಮವಿಪ್ಲುತೇ ।
ಸ್ಮರನ್ ಪುರಾ ನ ತಪ್ಯಸೇ ನಿಧತ್ಸ್ವ ಕೇವಲಂ ನಿಧಿಮ್ ॥೩೯॥

ಮಾಡಿದ ಕರ್ಮಗಳಿಗೆ ಅನುಸಾರವಾಗಿ ಸುಖ-ದುಃಖಗಳನ್ನು ಅನುಭವಿಸಬೇಕಾಗುತ್ತದೆ. ಅಜಾಗರೂಕತೆಯಿಂದ ಕರ್ಮಗಳನ್ನು ಆಚರಿಸಿದಾಗ ದುಃಖಗಳನ್ನು ಅನುಭವಿಸಬೇಕಾಗುತ್ತದೆ. ಇದನ್ನು ಸ್ಮರಿಸಿ ಪಶ್ಚಾತ್ತಾಪ ಪಡದಿರುವಂತಾಗಲು ಪರಮ ಸುಖನಿಧಿಯಾದ ಭಗವಂತನನ್ನು ಹೃದಯದಲ್ಲಿ ಭಾವಿಸು.

ಪುರಾ ಜರಾ ಕಲೇವರಂ ವಿಜರ್ಜರೀಕರೋತಿ ತೇ ।
ಬಲಾಂಗರೂಪಹಾರಿಣೇ ನಿಧತ್ಸ್ವ ಕೇವಲಂ ನಿಧಿಮ್ ॥೪೦॥

ನಿನ್ನ ಈ ಶರೀರವನ್ನು ಜರೆಯು ಜೀರ್ಣಗೊಳಿಸುತ್ತದೆ. ಅಂಗೋಪಾಂಗಗಳಲ್ಲಿರುವ ಬಲವನ್ನು ಅಪಹರಿಸುತ್ತದೆ. ಹೀಗಾಗುವುದಕ್ಕಿಂತ ಮೊದಲು ಕೇವಲ ನಿಧಿರೂಪನಾದ ಭಗವಂತನನ್ನು ಹೃದಯದಲ್ಲಿ ಧ್ಯಾನಿಸು.

ಪುರಾ ಶರೀರಮಂತಕೋ ಭಿನತ್ತಿ ರೋಗಸಾಯಕೈಃ ।
ಪ್ರಸಹ್ಯ ಜೀವಿತಕ್ಷಯೇ ತಪೋ ಮಹತ್ ಸಮಾಚರ ॥೪೧॥

ಮುಂದೆ ಮೃತ್ಯುದೇವನು ಈ ಶರೀರವನ್ನು ರೋಗವೆಂಬ ಬಾಣಗಳಿಂದ ತುಂಡರಿಸುತ್ತಾನೆ. ಇಂತಹ ಜೀವಿತಕ್ಷಯವನ್ನು ನಿಶ್ಚಯಿಸಿಕೊಂಡು ಮಹತ್ತರವಾದ ತಪಸ್ಸನ್ನು ಆಚರಿಸು.

ಪುರಾ ವೃಕಾ ಭಯಂಕರಾ ಮನುಷ್ಯದೇಹಗೋಚರಾಃ ।
ಅಭಿದ್ರವಂತಿ ಸರ್ವತೋ ಯತಸ್ವ ಪುಣ್ಯಶೀಲನೇ ॥೪೨॥

ಮನುಷ್ಯದೇಹದಲ್ಲಿ ಆಸೆಯಿಂದ ಕೂಡಿದ ಭಯಂಕರಗಳಾದ, ತೋಳಗಳ ರೂಪದಲ್ಲಿರುವ ಕಾಮ-ಕ್ರೋಧಾದಿಗಳು ಎಲ್ಲ ಕಡೆಯಿಂದಲೂ ನಿನ್ನನ್ನು ಕಬಳಿಸಲು ಓಡಿ ಬರುತ್ತಿವೆ. ಅವುಗಳು ನಿನ್ನ ಬಳಿ ಬರುವ ಮೊದಲೇ ನೀನು ಪುಣ್ಯಶೀಲನಾಗಲು ಪ್ರಯತ್ನಿಸು.

ಪುರಾಂಧಕಾರಮೇಕಕೋಽನುಪಶ್ಯಸಿ ತ್ವರಸ್ವ ವೈ ।
ಪುರಾ ಹಿರಣ್ಮಯಾನ್ನಗಾನ್ನಿರೀಕ್ಷಸೇದ್ರಿಮೂರ್ಧನಿ ॥೪೩॥

ನೀನು ಮುಂದೆ ಒಬ್ಬಂಟಿಗನಾಗಿ ಮಹಾ ಅಂಧಕಾರದಲ್ಲಿ ತಿರುಗಬೇಕಾಗುತ್ತದೆ. ಈಗಲೇ ಜಾಗೃತೆಯಾಗಿ ವರ್ತಿಸು. ಪರ್ವತದ ಶಿಖರದಲ್ಲಿ ಸುವರ್ಣಮಯವಾದ ವೃಕ್ಷಗಳನ್ನು ನೋಡುತ್ತಿ. ಇದು ಮರಣಸೂಚಕವಾಗಿದೆ. ಇದನ್ನು ಕಾಣುವ ಮೊದಲೇ ಆತ್ಮೋದ್ಧಾರಕ್ಕಾಗಿ ತಪಸ್ಸನ್ನಾಚರಿಸು.

ಪುರಾ ಕುಸಂಗತಾನಿ ತೇ ಸುಹೃನ್ಮುಖಾಶ್ಚ ಶತ್ರವಃ ।
ವಿಚಾಲಯಂತಿ ದರ್ಶನಾದ್ಧಟಸ್ವ ಪುತ್ರ ಯತ್ಪರಮ್ ॥೪೪॥

ನಿನ್ನನ್ನು ಕೆಟ್ಟ ಸಂಗಗಳು, ಮಿತ್ರರಂತಿರುವ ಶತ್ರುಗಳು ದಾರಿ ತಪ್ಪಿಸಿ ಕರ್ತವ್ಯ ಭ್ರಷ್ಟನನ್ನಾಗಿ ಮಾಡುತ್ತಾರೆ. ಆದ್ದರಿಂದ ಹೀಗಾಗುವ ಮೊದಲೇ ನೀನು ಪರಮಪದವನ್ನು ಹೊಂದಲು ಪ್ರಯತ್ನಿಸು.

ಧನಸ್ಯ ಯಸ್ಯ ರಾಜತೋ ಭಯಂ ನ ಚಾಸ್ತಿ ಚೌರತಃ ।
ಮೃತಂ ಚ ಯನ್ನ ಮುಂಚತಿ ಸಮರ್ಜಯಸ್ವ ತದ್ಧನಮ್ ॥೪೫॥

ಯಾವ ಧನಕ್ಕೆ ರಾಜನಿಂದ, ಚೋರನಿಂದ ಭಯವಿಲ್ಲವೋ, ಯಾವ ಧನವು ನೀನು ಮೃತನಾದರೂ ನಿನ್ನನ್ನು ಬಿಟ್ಟು ಹೋಗುವುದಿಲ್ಲವೋ ಅಂತಹ ಧರ್ಮವೆಂಬ ಧನವನ್ನು ಸಂಪಾದಿಸು.

ನ ತತ್ರ ಸಂವಿಭಜ್ಯತೇ ಸ್ವಕರ್ಮಭಿಃ ಪರಸ್ಪರಮ್ ।
ಯದೇವ ಯಸ್ಯ ಯೌತಕಂ ತದೇವ ತತ್ರ ಸೋಽಶ್ನುತೇ ॥೪೬॥

ಹೇಗೆ ಸಂಪತ್ತನ್ನು ಅನೇಕರು ಕೂಡಿಕೊಂಡು ಸಂಪಾದಿಸಿ ತಮ್ಮ ಪ್ರಯತ್ನದಿಂದ ಸಂಪಾದಿಸಿದ ಧನವನ್ನು ಪರಸ್ಪರ ವಿಭಾಗ ಮಾಡಿಕೊಳ್ಳುತ್ತಾರೋ ಆ ರೀತಿಯಾಗಿ ನಾವು ಮಾಡಿದ ಕರ್ಮಗಳನ್ನು ಹಂಚಿಕೊಳ್ಳಲು ಆಗುವುದಿಲ್ಲ. ನಾವು ಮಾಡಿದ ಕರ್ಮದ ಫಲವನ್ನು ನಾವು ಮಾತ್ರ ಪರಲೋಕದಲ್ಲಿ ಅನುಭವಿಸಬೇಕಾಗುತ್ತದೆ.

ವ್ಯಾಖ್ಯಾನ ವಿಶೇಷ– ವಿಭಾಗದಲ್ಲಿ ಅಳಿಯನಿಗೆ ಮಾವನಿಂದ ಕೊಡಲ್ಪಟ್ಟ ಸಂಪತ್ತು **ಯೌತಕ** ಎನಿಸಿದೆ. ಅದನ್ನು ಅಳಿಯನು ಮಾತ್ರ ಅನುಭವಿಸುವಂತೆ ನಾವು ಮಾಡಿದ ಕರ್ಮವನ್ನು ಪರಲೋಕದಲ್ಲಿ ನಾವೇ ಅನುಭವಿಸುತ್ತೇವೆ ಎಂದು ತಾತ್ಪರ್ಯ.

ಪರತ್ರ ಯೇನ ಜೀವ್ಯತೇ ತದೇವ ಪುತ್ರ ದೀಯತಾಮ್ ।
ಧನಂ ಯದಕ್ಷಯಂ ಧ್ರುವಂ ಸಮರ್ಜಯಸ್ವ ತತ್ ಸ್ವಯಮ್ ॥೪೭॥

ಯಾವುದನ್ನು ದಾನ ಮಾಡಿದರೆ ಪರಲೋಕದಲ್ಲಿ ಸುಖವಾಗಿ ಜೀವಿಸಲು ಸಾಧ್ಯವಾಗುತ್ತದೋ ಅಂತಹ ಉತ್ತಮ ಪದಾರ್ಥಗಳನ್ನೇ ದಾನ ಮಾಡು. ಧರ್ಮರೂಪವಾದ, ಅವಿನಾಶಿಯಾದ, ಶಾಶ್ವತವಾದ ಯಾವ ಧನವಿದೆಯೋ ಅದನ್ನೇ ಸಂಪಾದಿಸು.

ನ ಯಾವದೇವ ಪಚ್ಯತೇ ಮಹಾಜನಸ್ಯ ಯಾವಕಮ್ ।
ಅಪಕ್ವ ಏವ ಯಾವಕೇ ಪುರಾ ಪ್ರಣೇಯಸೇ ತ್ವರ ॥೪೮॥

ಮಹಾಜನರಿಗೋಸ್ಕರ ಜವೆಗೋಧಿಯನ್ನು ಬೇಯಿಸುತ್ತಿದ್ದರೆ ಅದು ಪಕ್ವವಾಗುವ ಕಾಲದೊಳಗಾಗಿ ಮನುಷ್ಯನು ಮರಣ ಹೊಂದಬಹುದು. ಆದ್ದರಿಂದ ಅತ್ಯಂತ ಶೀಘ್ರವಾಗಿ ಧರ್ಮವನ್ನಾಚರಿಸು.

ನ ಮಾತೃಪುತ್ರಬಾಂಧವಾ ನ ಸಂಸ್ತುತಃ ಪ್ರಿಯೋ ಜನಃ ।
ಅನುವ್ರಜಂತಿ ಸಂಕಟೇ ವ್ರಜಂತಮೇಕಪಾತಿನಮ್ ॥೪೯॥

ಜೀವನು ಯಾವಾಗ ಏಕಾಕಿಯಾಗಿ ಪರಲೋಕದ ಕಡೆ ಪ್ರಯಾಣ ಮಾಡುತ್ತಾನೋ ಅಂತಹ ಸಂಕಟದ ಸಮಯದಲ್ಲಿ ತಾಯಿಯಾಗಲಿ, ಮಕ್ಕಳಾಗಲಿ, ಬಂಧು-ಬಾಂಧವರಾಗಲಿ, ಪ್ರಿಯಜನರಾಗಲಿ, ಆ ಜೀವನನ್ನು ಅನುಸರಿಸಿ ಬರುವುದಿಲ್ಲ.

ಯದೇವ ಕರ್ಮ ಕೇವಲಂ ಸ್ವಯಂ ಕೃತಂ ಶುಭಾಶುಭಮ್ ।
ತದೇವ ತಸ್ಯ ಯೌತಕಂ ಭವತ್ಯಮುತ್ರ ಗಚ್ಛತಃ ॥೫೦॥

ಪರಲೋಕಕ್ಕೆ ಹೋಗುವಾಗ ತಾನು ಹಿಂದೆ ಮಾಡಿದ ಯಾವ ಶುಭಾಶುಭ ಕರ್ಮಗಳಿವೆಯೋ ಅವು ಮಾತ್ರವೇ ಜೊತೆಯಲ್ಲಿ ಬರುತ್ತವೆ.

ಹಿರಣ್ಯರತ್ನಸಂಚಯಾಃ ಶುಭಾಶುಭೇನ ಸಂಚಿತಾಃ ।
ನ ತಸ್ಯ ದೇಹಸಂಕ್ಷಯೇ ಭವಂತಿ ಕಾರ್ಯಸಾಧಕಾಃ ॥೫೧॥

ಮನುಷ್ಯನು ಕೆಟ್ಟ ಅಥವಾ ಒಳ್ಳೆಯ ಮಾರ್ಗದಿಂದ ಸಂಪಾದಿಸಿದ ಧನ, ಕನಕ, ರತ್ನಸಮುದಾಯಗಳು ದೇಹವು ನಾಶವಾದಾಗ ಅವನ ಹಿತಚಿಂತನೆಗಾಗಿ ಬರುವುದಿಲ್ಲ.

ಪರತ್ರಗಾಮಿಕಸ್ಯ ತೇ ಕೃತಾಕೃತಸ್ಯ ಕರ್ಮಣಃ ।
ನ ಸಾಕ್ಷಿರಾತ್ಮನಾ ಸಮೋ ನೃಣಾಮಿಹಾಸ್ತಿ ಕಶ್ಚನ ॥೫೨॥

ಪರಲೋಕಯಾತ್ರೆಯನ್ನು ಮಾಡುವ ಮನುಷ್ಯನಿಗೆ ಇಹಲೋಕದಲ್ಲಿ ಮಾಡಿದ, ಮಾಡದಿರುವ ಕರ್ಮಗಳ ವಿಷಯದಲ್ಲಿ ತನಗೆ ತಾನೇ ಸಾಕ್ಷಿಯಾಗಿದ್ದಾನೆ. ತನ್ನನ್ನು ಬಿಟ್ಟು ಬೇರೆ ಯಾರೂ ಸಾಕ್ಷಿಯಾಗಿರುವುದಿಲ್ಲ.

ಮನುಷ್ಯದೇಹಶೂನ್ಯಕಂ ಭವತ್ಯಮುತ್ರ ಗಚ್ಛತಃ ।
ಪ್ರಪಶ್ಯ ಬುದ್ಧಿಚಕ್ಷುಷಾ ಪ್ರದೃಶ್ಯತೇ ಹಿ ಸರ್ವತಃ ॥೫೩॥

ಪರಲೋಕಕ್ಕೆ ಸಾಗುವವನಿಗೆ ಈ ದೇಹವು ಇರುವುದಿಲ್ಲ. ಜೀವನು ಸೂಕ್ಷ್ಮ ಶರೀರವನ್ನು ಪ್ರವೇಶಿಸಿ ಬುದ್ಧಿರೂಪವಾದ ದೃಷ್ಟಿಯಿಂದ ಎಲ್ಲವನ್ನೂ ನೋಡುತ್ತಾನೆ.

ಇಹಾಗ್ನಿಸೂರ್ಯವಾಯವಃ ಶರೀರಮಾಶ್ರಿತಾಸ್ತ್ರಯಃ ।
ತ ಏವ ತಸ್ಯ ಸಾಕ್ಷಿಣೋ ಭವಂತಿ ಧರ್ಮದರ್ಶಿನಃ ॥೫೪॥

ಈ ಲೋಕದಲ್ಲಿ ಅಗ್ನಿ, ವಾಯು, ಸೂರ್ಯ - ಈ ಮೂರು ದೇವತೆಗಳು ಮನುಷ್ಯನ ಶರೀರವನ್ನು ಆಶ್ರಯಿಸುತ್ತಾರೆ. ಅವರೇ ಈ ಮನುಷ್ಯರಾಶ್ರಯಿಸುವ ಧರ್ಮಗಳನ್ನು ನೋಡುತ್ತಾರೆ. ಇವರೇ ಪರಲೋಕದಲ್ಲಿ ಮನುಷ್ಯರು ಮಾಡಿದ ಧರ್ಮ-ಕರ್ಮಗಳಿಗೆ ಸಾಕ್ಷಿಯಾಗಿರುತ್ತಾರೆ.

ಯಥಾನಿಶೇಷು ಸರ್ವತಃಸ್ಪೃಶತ್ಸು ಸರ್ವಚಾರಿಷು ।
ಪ್ರಕಾಶಗೂಢವೃತ್ತಿಷು ಸ್ವಧರ್ಮಮೇವ ಪಾಲಯ ॥೫೫॥

ಈ ಮೂವರು ದೇವತೆಗಳೇ ಹಗಲು-ರಾತ್ರಿ ಎಲ್ಲಕಡೆಯಲ್ಲಿಯೂ ಸಂಚರಿಸುತ್ತಾ, ಎಲ್ಲವನ್ನೂ ಸ್ಪರ್ಶಿಸುತ್ತಾ ಎಲ್ಲ ರಹಸ್ಯಗಳನ್ನು ನೋಡುತ್ತಿರುತ್ತಾರೆ. ಇವರಿಗೆ ಒಳ-ಹೊರಗಿನ ರಹಸ್ಯಗಳು ಗೋಚರಿಸುತ್ತವೆ. ಆದ್ದರಿಂದ ಬಾಹ್ಯಾಂತರಗಳಲ್ಲಿ ನಿನ್ನ ಸ್ವಧರ್ಮಗಳನ್ನೇ ಅವರು ನೋಡುತ್ತಿದ್ದಾರೆಂದು ರಕ್ಷಿಸು.

ಅನೇಕಪಾರಿಪಂಥಿಕೇ ವಿರೂಪರೌದ್ರರಕ್ಷಿತೇ ।
ಸ್ವಮೇವ ಕರ್ಮ ರಕ್ಷ್ಯತಾಂ ಸ್ವಕರ್ಮ ತತ್ರ ಗಚ್ಛತಿ ॥೫೬॥

ಪರಲೋಕದ ಮಾರ್ಗದಲ್ಲಿ ಅನೇಕ ಶತ್ರುಗಳಿದ್ದಾರೆ. ಭಯಂಕರವಾದ ರೂಪಗಳುಳ್ಳ ಜೀವರಾಶಿಗಳಿಂದ ಆ ಮಾರ್ಗವು ಕೂಡಿದೆ. ಅಂತಹ ಭಯಂಕರ ಮಾರ್ಗದಲ್ಲಿ ನೀನು ಮಾಡಿದ ಕರ್ಮವು ಮಾತ್ರ ನಿನ್ನ ಜೊತೆಯಲ್ಲಿ ಬರುತ್ತದೆ. ಆದ್ದರಿಂದ ನಿನ್ನ ಕರ್ಮಗಳಿಂದ ನಿನ್ನನ್ನು ರಕ್ಷಿಸಿಕೊ.

ನ ತತ್ರ ಸಂವಿಭಜ್ಯತೇ ಸ್ವಕರ್ಮಣಾ ಪರಸ್ಪರಮ್ ।
ಯಥಾಕೃತಂ ಸ್ವಕರ್ಮಜಂ ತದೇವ ಭುಜ್ಯತೇ ಫಲಮ್ ॥೫೭॥

ತನ್ನ ಕರ್ಮಕ್ಕನುಗುಣವಾದ ಯಾವ ಫಲವಿದೆಯೋ ಅದನ್ನು ಪರಲೋಕದಲ್ಲಿ ಪರಸ್ಪರ ಧನದಂತೆ ವಿಭಾಗಿಸಿಕೊಳ್ಳಲು, ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ತಾನು ಮಾಡಿದ ಕರ್ಮದ ಫಲವನ್ನು ತಾನೇ ಅನುಭವಿಸುತ್ತಾನೆ.

ಯಥಾಪ್ಸರೋಗಣಾಃ ಫಲಂ ಸುಖಂ ಮಹರ್ಷಿಭಿಃ ಸಹ ।
ತಥಾಪ್ನುವಂತಿ ಕರ್ಮತೋ ವಿಮಾನಕಾಮಗಾಮಿನಃ ॥೫೮॥

ಯಾವ ರೀತಿ ಅಪ್ಸರೆಯರ ಗುಂಪು ಮಹರ್ಷಿಗಳ ಜೊತೆ ಪುಣ್ಯಫಲ ಸ್ವರೂಪವಾದ ಸುಖವನ್ನು ಅನುಭವಿಸುತ್ತದೋ ಅದೇ ರೀತಿ ಪುಣ್ಯಾತ್ಮರು ವಿಮಾನದಲ್ಲಿ ಕುಳಿತು, ಸ್ವೇಚ್ಛೆಯಿಂದ ಸಂಚರಿಸುತ್ತಾ, ಪುಣ್ಯಕರ್ಮದಿಂದ ಉತ್ಪನ್ನವಾದ ಸುಖವನ್ನು ಹೊಂದುತ್ತಾರೆ.

ಯಥೇಹ ಯತ್ಕೃತಂ ಶುಭಂ ವಿಪಾಪ್ಮಭಿಃ ಕೃತಾತ್ಮಭಿಃ ।
ತದಾಪ್ನುವಂತಿ ಮಾನವಾಸ್ತಥಾ ವಿಶುದ್ಧಯೋನಯಃ ॥೫೯॥

ಪಾಪರಹಿತರಾದ ಪರಿಶುದ್ಧ ಹೃದಯದಿಂದ ಕೂಡಿದ ಮನುಷ್ಯರು ಯಾವ ರೀತಿ ಶುಭಕರ್ಮಗಳನ್ನು ಆಚರಿಸುತ್ತಾರೋ ಅದರಂತೆ ಜನ್ಮಾಂತರದಲ್ಲಿ ಉತ್ತಮ ಕುಲದಲ್ಲಿ ಹುಟ್ಟಿ ಶುಭಕರ್ಮಗಳಿಗೆ ಅನುಗುಣವಾದ ಫಲವನ್ನು ಹೊಂದುತ್ತಾರೆ.

ಪ್ರಜಾಪತೇಃ ಸಲೋಕತಾಂ ಬೃಹಸ್ಪತೇಃ ಶತಕ್ರತೋಃ ।
ವ್ರಜಂತಿ ತೇ ಪರಾಂ ಗತಿಂ ಗೃಹಸ್ಥಧರ್ಮಸೇತುಭಿಃ ॥೬೦॥

ಗೃಹಸ್ಥರಾದವರು ಪ್ರಾಮಾಣಿಕವಾದ ಗೃಹಸ್ಥ ಧರ್ಮವನ್ನು ಅನುಷ್ಠಾನ ಮಾಡಿ ಸದ್ಗತಿಯನ್ನು ಹೊಂದಿದ ಬಳಿಕ ಪ್ರಜಾಪತಿ, ಬೃಹಸ್ಪತಿ, ಇಂದ್ರನ ಲೋಕಗಳಿಗೆ ತೆರಳುತ್ತಾರೆ.

ಸಹಸ್ರಶೋಽಪ್ಯನೇಕಶಃ ಪ್ರವಕ್ತುಮುತ್ಸಹಾಮಹೇ ।
ಅಬುದ್ಧಿಮೋಹನಂ ಪುನಃ ಪ್ರಭುಸ್ತು ತೇ ನ ಪಾವಕಃ ॥೬೧॥

ಮಗನೇ, ಇನ್ನೂ ಅನೇಕ ಬಾರಿ, ಸಾವಿರಾರು ಬಾರಿ ನಿನಗೆ ಈ ವಿಷಯವನ್ನು ಹೇಳುವ ಉತ್ಸಾಹದಲ್ಲಿದ್ದೇನೆ. ನೀನು ನಾನು ಹೇಳಿದ ಧರ್ಮಗಳನ್ನು ಬುದ್ಧಿಯ ಮೋಹಕ್ಕೆ ತುತ್ತಾಗದೆ ಅನುಷ್ಠಾನ ಮಾಡಿದಲ್ಲಿ ನರಕದ ಅಗ್ನಿಯು ನಿನ್ನನ್ನು ದಹಿಸುವುದಿಲ್ಲ.

ಗತಾ ತ್ರಿರಷ್ಟವರ್ಷತಾ ಧ್ರುವೋಽಸಿ ಪಂಚವಿಂಶಕಃ ।
ಕುರುಷ್ವ ಧರ್ಮಸಂಚಯಂ ವಯೋ ಹಿ ತೇಽತಿವರ್ತತೇ ॥೬೨॥

ಈಗಾಗಲೇ ನಿನಗೆ ಇಪ್ಪತ್ನಾಲ್ಕು ವರ್ಷಗಳು ಕಳೆದಿವೆ. ಇಪ್ಪತ್ತೈದನೆಯ ವರ್ಷವು ನಿಶ್ಚಯವಾಗಿದೆ. ನಿನ್ನ ವಯಸ್ಸು ಹೀಗೆಯೇ ಕಳೆದುಹೋಗುತ್ತದೆ. ಆದ್ದರಿಂದ ಧರ್ಮವನ್ನು ಸಂಗ್ರಹಿಸು.

ಪುರಾ ಕರೋತಿ ಸೋಽಂತಕಃ ಪ್ರಮಾದಗೋಮುಖಂ ದಮಮ್ ।
ಯಥಾಗೃಹೀತಮುತ್ಥಿತಂ ತ್ವರಸ್ವ ಧರ್ಮಪಾಲನೇ ॥೬೩॥

ಯಮನು ಪ್ರಮಾದದಿಂದ ಕೂಡಿದ ಇಂದ್ರಿಯಗಳನ್ನು ಮುಂದಿಟ್ಟುಕೊಂಡು ನಿನ್ನ

ಮೇಲೆ ತನ್ನ ಸೇನೆಯ ಆಕ್ರಮಣವನ್ನು ಮಾಡುತ್ತಿದ್ದಾನೆ. ನಿನ್ನನ್ನು ಆಕ್ರಮಿಸುವ ಮೊದಲೇ ಜಾಗೃತನಾಗಿ ಸ್ಥಿರವಾಗಿ ನಿಂತು ಧರ್ಮವನ್ನು ತ್ವರೆಯಿಂದ ಪರಿಪಾಲಿಸು.

ಯದಾ ತ್ವಮೇವ ಪೃಷ್ಠತಸ್ತ್ವಮಗ್ರತೋ ಗಮಿಷ್ಯಸಿ ।
ತಥಾ ಗತಿಂ ಗಮಿಷ್ಯತಃ ಕಿಮಾತ್ಮನಾ ಪರೇಣ ವಾ ॥೬೪॥

ಯದೇಕಪಾತಿನಾಂ ಸತಾಂ ಭವತ್ಯಮುತ್ರ ಗಚ್ಛತಾಮ್ ।
ಭಯೇಷು ಸಾಂಪರಾಯಿಕಂ ನಿಧತ್ಸ್ವ ತಂ ಮಹಾನಿಧಿಮ್ ॥೬೫॥

ಈ ಸಂಸಾರಕ್ಕೆ ಒಬ್ಬನೇ ಬಂದಿರುವಿ, ಮುಂದೆ ಒಬ್ಬನೇ ಸಾಗುತ್ತಿ. ನಿನ್ನ ಹಿಂದೆ-ಮುಂದೆ ಯಾರೂ ಇರುವುದಿಲ್ಲ. ಇಂತಹ ಭಯವು ಸನ್ನಿಹಿತವಾದಾಗ ಮೋಕ್ಷದಾಯಕವಾದ ಭಗವಂತನನ್ನು ಹೃದಯದಲ್ಲಿ ಧ್ಯಾನಿಸು.

ಸಕೂಲಮೂಲಬಾಂಧವಂ ಪ್ರಭುರ್ಹರತ್ಯಸಂಗವಾನ್ ।
ನ ಸಂತಿ ಯಸ್ಯ ವಾರಕಾಃ ಕುರುಷ್ವ ಧರ್ಮಸನ್ನಿಧಿಮ್ ॥೬೬॥

ಸಮರ್ಥವಾದ ಕಾಲವು ಸಂಗದಿಂದ ದೂರವಾಗಿದೆ. ಅದಕ್ಕೆ ಯಾರ ಜೊತೆಯೂ ಸ್ನೇಹವಿಲ್ಲ. ಆದ್ದರಿಂದಲೇ ದಡ ಸಹಿತವಾಗಿ ಸಮಸ್ತ ಬಂಧು-ಬಾಂಧವರನ್ನು ಆ ಕಾಲವು ಸಂಹರಿಸುತ್ತದೆ. ಅದನ್ನು ತಡೆಯುವ ಸಾಮರ್ಥ್ಯವು ಯಾರಿಗೂ ಇಲ್ಲ. ಆ ಕಾಲವನ್ನು ಜಯಿಸುವ ದೃಷ್ಟಿಯಿಂದ ಧರ್ಮವನ್ನು ಸಂಗ್ರಹಿಸು.

ಇದಂ ನಿದರ್ಶನಂ ಮಯಾ ತವೇಹ ಪುತ್ರ ಸಮ್ಮತಮ್ ।
ಸ್ವದರ್ಶನಾನುಮಾನತಃ ಪ್ರವರ್ಣಿತಂ ಕುರುಷ್ವ ತತ್ ॥೬೭॥

ಮಗನೇ, ನಾನು ನನ್ನ ಶಾಸ್ತ್ರಜ್ಞಾನದಿಂದಲೂ, ಯುಕ್ತಿಯಿಂದಲೂ ನಿನಗೆ ಯಾವ ಜ್ಞಾನವನ್ನು ಉಪದೇಶಿಸಿದ್ದೆನೋ ಆ ಉಪದೇಶಕ್ಕೆ ಅನುಗುಣವಾಗಿ ನೀನು ಧರ್ಮವನ್ನಾಚರಿಸು.

ದಧಾತಿ ಯಃ ಸ್ವಕರ್ಮಣಾ ಧನಾನಿ ಯಸ್ಯ ಕಸ್ಯಚಿತ್ ।
ಅಬುದ್ಧಿಮೋಹಜೈರ್ಗುಣೈಃ ಶತೈಕ ಏವ ಯುಜ್ಯತೇ ॥೬೮॥

ಯಾವ ಪುರುಷನು ತನ್ನ ಸತ್ಕರ್ಮದ ಮೂಲಕ ಪುಣ್ಯವನ್ನು ಸಂಪಾದಿಸುತ್ತಾನೋ,

ತಾನು ಸಂಪಾದಿಸಿದ ಕರ್ಮವನ್ನು ನಿಷ್ಕಾಮನೆಯಿಂದ ಸಮರ್ಪಿಸುತ್ತಾನೋ ಅಂತಹ ಪುರುಷನೇ ಮೋಹಕ್ಕೆ ತುತ್ತಾಗದ ಬುದ್ಧಿಯಿಂದ ಉತ್ತಮ ಗುಣಗಳನ್ನು ಹೊಂದುತ್ತಾನೆ.

ಶುಭಂ ಸಮಸ್ತಮಶ್ನುತೇ ಪ್ರಕುರ್ವತಃ ಶುಭಾಃ ಕ್ರಿಯಾಃ ।
ತದೇವ ತತ್ರ ದರ್ಶನಂ ಕೃತಜ್ಞಮರ್ಥಸಂಹಿತಮ್ ॥೬೯॥

ಸತ್ಕರ್ಮವನ್ನೇ ಆಚರಿಸುವವನು ಸಮಸ್ತ ಮಂಗಳಕರವಾದ ಮಾರ್ಗವನ್ನೇ ಹೊಂದುತ್ತಾನೆ. ಶುಭಕರ್ಮಗಳನ್ನು ನಡೆಸುವವನು ಅವನು ಹೊಂದುವ ಫಲಗಳೇ ಅವನ ಕರ್ಮಗಳಿಗೆ ಸಾಕ್ಷಿಯಾಗಿವೆ. ತನಗುಂಟಾಗುವ ಪ್ರಯೋಜನಗಳಿಂದ ತನ್ನ ಕರ್ಮಗಳನ್ನು ತಾನೇ ಅರ್ಥ ಮಾಡಿಕೊಳ್ಳುತ್ತಾನೆ.

ನಿಬಂಧನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ ।
ಛಿತ್ತ್ವೈನಾಂ ಸುಕೃತೋ ಯಾಂತಿ ನೈನಾಂ ಛಿಂದಂತಿ ದುಷ್ಕೃತಃ ॥೭೦॥

ಮನುಷ್ಯನು ಗ್ರಾಮದಲ್ಲಿ ವಾಸ ಮಾಡುತ್ತಾ, ಸುಖಭೋಗಗಳಲ್ಲಿ ಯಾವ ಆಸಕ್ತಿಯನ್ನು ಹೊಂದಿರುತ್ತಾನೋ ಆ ಆಸಕ್ತಿಯೇ ಅವನನ್ನು ಬಂಧಿಸಿರುವ ಹಗ್ಗ ಎನಿಸಿದೆ. ಪುಣ್ಯಪುರುಷರು ಈ ಆಸಕ್ತಿ ಎಂಬ ಹಗ್ಗವನ್ನು ಕತ್ತರಿಸಿ ಪುಣ್ಯವನ್ನು ಸಂಪಾದಿಸುತ್ತಾರೆ. ಪಾಪಚೇತನರು ಭೋಗದ ಮೋಹವೆಂಬ ಪಾಶವನ್ನು ಕತ್ತರಿಸಲು ಪ್ರಯತ್ನಿಸುವುದಿಲ್ಲ.

ಕಿಂ ತೇ ಧನೇನ ಕಿಂ ಬಂಧುಭಿಸ್ತೇ
ಕಿಂ ತೇ ಪುತ್ರೈಃ ಪುತ್ರಕ ಯೋ ಮರಿಷ್ಯಸಿ ।
ಆತ್ಮಾನಮನ್ವಿಚ್ಛ ಗುಹಾಂ ಪ್ರವಿಷ್ಟಂ
ಪಿತಾಮಹಾಸ್ತೇ ಕ್ವ ಗತಾಶ್ಚ ಸರ್ವೇ ॥೭೧॥

ಮಗನೇ, ಮರಣೋನ್ಮುಖನಾದ ನಿನಗೆ ಧನದಿಂದ, ಬಂಧು, ಸುತರಿಂದ ಏನಾಗಬೇಕಾಗಿದೆ? ಆದ್ದರಿಂದ ಹೃದಯಗುಹೆಯಲ್ಲಿ ಪ್ರವಿಷ್ಟನಾಗಿರುವ ಪರಮಾತ್ಮನನ್ನು ಅನುಸಂಧಾನ ಮಾಡು. ನಿನ್ನ ತಾತ-ಮುತ್ತಾತರೆಲ್ಲ ಎಲ್ಲಿಗೆ ಹೋಗಿದ್ದಾರೆಂದು ನೀನೇ ಯೋಚಿಸು.

ಶ್ವಃಕಾರ್ಯಮದ್ಯ ಕುರ್ವೀತ ಪೂರ್ವಾಹ್ಣೇ ಚಾಪರಾಹ್ಣಿಕಮ್ ।
ಕೋ ಹಿ ತದ್ವೇದ ಕಸ್ಯಾದ್ಯ ಮೃತ್ಯುಸೇನಾ ನಿವೇಕ್ಷ್ಯತೇ ॥೭೨॥

ನಾಳೆ ಮಾಡಬೇಕಾದ ಕೆಲಸವನ್ನು ಇಂದೇ ಮಾಡು. ಮಧ್ಯಾಹ್ನ ಮಾಡಬೇಕಾದ ಕೆಲಸವನ್ನು ಬೆಳಿಗ್ಗೆಯೇ ಮಾಡು. ಕಾರಣ ಮೃತ್ಯುವು ಅವನ ಕಾರ್ಯವು ಮುಗಿಯಿತೋ ಇಲ್ಲವೋ ಎಂದು ನೋಡುವುದಿಲ್ಲ.

ಅನುಗಮ್ಯ ಶ್ಮಶಾನಾಂತಂ ನಿವರ್ತಂತೀಹ ಬಾಂಧವಾಃ ।
ಅಗ್ನೌ ಪ್ರಕ್ಷಿಪ್ಯ ಪುರುಷಂ ಜ್ಞಾತಯಃ ಸುಹೃದಸ್ತಥಾ ॥೭೩॥

ಬಂಧು-ಬಾಂಧವರೆಲ್ಲರೂ ಸತ್ತ ಬಳಿಕ ಸ್ಮಶಾನದ ತನಕ ಅಗಮಿಸಿ, ಮನೆಗೆ ತೆರಳುತ್ತಾರೆ. ಮೃತನನ್ನು ಚಿತೆಯ ಮೇಲಿಟ್ಟು ಬೆಂಕಿಯನ್ನು ಹೊತ್ತಿಸಿ ಮಿತ್ರರು, ಬಂಧು-ಬಾಂಧವರೆಲ್ಲರೂ ತಮ್ಮ ಮನೆಗೆ ತೆರಳುತ್ತಾರೆ.

ನಾಸ್ತಿಕಾನ್ನಿರನುಕ್ರೋಶಾನ್ನರಾನ್ ಪಾಪಮತೌ ಸ್ಥಿತಾನ್ ।
ವಾಮತಃ ಕುರು ವಿಶ್ರಬ್ಧಂ ಪರಂ ಪ್ರೇಪ್ಸುರತಂದ್ರಿತಃ ॥೭೪॥

ಪರಮಾತ್ಮನನ್ನು ಹೊಂದಲು ಬಯಸಿರುವ ನೀನು ನಾಸ್ತಿಕರನ್ನೂ, ದಯಾ ಹೀನರನ್ನೂ, ಪಾಪಬುದ್ಧಿಯುಳ್ಳವರನ್ನು ಯಾವ ರೀತಿಯಲ್ಲೂ ಅನುಸರಿಸದೆ, ಉದಾಸೀನ ಮಾಡದೆ ಅವರನ್ನು ಪರಿತ್ಯಜಿಸು.

ಏವಮಭ್ಯಾಹತೇ ಲೋಕೇ ಕಾಲೇನೋಪನಿಪೀಡಿತೇ ।
ಸುಮಹದ್ಧೈರ್ಯಮಾಲಂಬ್ಯ ಧರ್ಮಂ ಸರ್ವಾತ್ಮನಾ ಕುರು ॥೭೫॥

ಹೀಗೆ ಲೋಕವು ಕಾಲನಿಂದ ತಡೆಯಲ್ಪಟ್ಟು ಪೀಡಿತವಾಗುತ್ತಿರುವ ನೀನು ಪ್ರಚಂಡವಾದ ಧೈರ್ಯವನ್ನು ಹೊಂದಿ ಎಲ್ಲ ರೀತಿಯಿಂದಲೂ ಧರ್ಮವನ್ನಾಚರಿಸಲು ಪ್ರಯತ್ನಿಸು.

ಅಥೇಮಂ ದರ್ಶನೋಪಾಯಂ ಸಮ್ಯಗ್ಯೋ ವೇತ್ತಿ ಮಾನವಃ ।
ಸಮ್ಯಕ್ಸ ಧರ್ಮಂ ಕೃತ್ವೇಹ ಪರತ್ರ ಸುಖಮೇಧತೇ ॥೭೬॥

ಯಾವ ಮನುಷ್ಯನು ಈ ರೀತಿಯಾದ ಭಗವತ್ಸಾಕ್ಷಾತ್ಕಾರದ ಉಪಾಯವನ್ನು ತಿಳಿದಿರುತ್ತಾನೋ, ಅವನು ಈ ಲೋಕದಲ್ಲಿ ಸ್ವಧರ್ಮವನ್ನು ಪರಿಪಾಲಿಸುತ್ತಾ, ಪರಲೋಕದಲ್ಲೂ ಸುಖವನ್ನು ಅನುಭವಿಸುತ್ತಾನೆ.

ನ ದೇಹಭೇದೇ ಮರಣಂ ವಿಜಾನತಾಂ
ನ ಚ ಪ್ರಣಾಶಃ ಸ್ವನುಪಾಲಿತೇ ಪಥಿ ।
ಧರ್ಮಂ ಹಿ ಯೋ ವರ್ಧಯತೇ ಸ ಪಂಡಿತೋ
ಯ ಏವ ಧರ್ಮಾಚ್ಚ್ಯವತೇ ಸ ಮುಹ್ಯತಿ ॥೭೭॥

ದೇಹವು ನಾಶವನ್ನು ಹೊಂದಿದರೂ ಆತ್ಮನಿಗೆ ನಾಶವಿಲ್ಲ. ಸಜ್ಜನರ ಮಾರ್ಗದಲ್ಲಿ ಚಲಿಸುವ ವ್ಯಕ್ತಿಗೆ ವಿನಾಶವಿಲ್ಲ ಎಂದು ಯಾವನು ತಿಳಿಯುತ್ತಾನೋ ಅವನೇ ವಿದ್ವಾಂಸನು. ಯಾವನು ಧರ್ಮವನ್ನು ಬೆಳೆಸಲು ಪ್ರಯತ್ನಿಸುತ್ತಾನೋ ಅವನೇ ಪಂಡಿತನು. ಯಾವನು ಧರ್ಮಮಾರ್ಗದಿಂದ ಭ್ರಷ್ಟನಾಗುತ್ತಾನೋ ಅವನು ಮೋಹಕ್ಕೆ ತುತ್ತಾಗುತ್ತಾನೆ.

ಪ್ರಯುಕ್ತಯೋಃ ಕರ್ಮಪಥಿ ಸ್ವಕರ್ಮಣೋಃ
ಫಲಂ ಪ್ರಯೋಕ್ತಾ ಲಭತೇ ಯಥಾವಿಧಿ ।
ನಿಹೀನಕರ್ಮಾ ನಿರಯಂ ಪ್ರಪದ್ಯತೇ
ತ್ರಿವಿಷ್ಟಪಂ ಗಚ್ಛತಿ ಧರ್ಮಪಾರಗಃ ॥೭೮॥

ಕರ್ಮಮಾರ್ಗದಲ್ಲಿ ಸಾಗುವವನು ಶುಭಾಶುಭಕರ್ಮಗಳಿಗನುಗುಣವಾಗಿ ಫಲವನ್ನು ಹೊಂದುತ್ತಾನೆ. ನೀಚಕರ್ಮಿಯು ನರಕಕ್ಕೆ, ಧರ್ಮಾಸಕ್ತನು ಸ್ವರ್ಗಕ್ಕೆ ಹೋಗುತ್ತಾನೆ.

ಸೋಪಾನಭೂತಂ ಸ್ವರ್ಗಸ್ಯ ಮಾನುಷ್ಯಂ ಪ್ರಾಪ್ಯ ದುರ್ಲಭಮ್ ।
ತಥಾತ್ಮಾನಂ ಸಮಾದಧ್ಯಾದ್ ಭ್ರಶ್ಯೇತ ನ ಪುನರ್ಯಥಾ ॥೭೯॥

ಸ್ವರ್ಗಕ್ಕೆ ಮೆಟ್ಟಿಲಿನಂತಿರುವ ದುರ್ಲಭವಾದ ಮನುಷ್ಯ ದೇಹವನ್ನು ಪಡೆದ ಬಳಿಕ ನೀಚಯೋನಿಗಳಲ್ಲಿ ಸಾಗುವಂತಹ ಭ್ರಷ್ಟ ಧರ್ಮಗಳನ್ನು ತೊರೆದು, ಉತ್ತಮ ಧರ್ಮಗಳಿಂದ ತನ್ನನ್ನು ಉನ್ನತ ಸ್ಥಾನಕ್ಕೆ ಪತನ ಹೊಂದದಂತೆ ಏರಿಸಿಕೊಳ್ಳಬೇಕು.

ಯಸ್ಯ ನೋತ್ತಮತಿ ಮತಿಃ ಸ್ವರ್ಗಮಾರ್ಗಾನುಸಾರಿಣೀ ।
ತಮಾಹುಃ ಪುಣ್ಯಕರ್ಮಾಣಮಶೋಚ್ಯಂ ಮಿತ್ರಬಾಂಧವೈಃ ॥೮೦॥

ಯಾವನ ಬುದ್ಧಿಯು ಸ್ವರ್ಗಮಾರ್ಗಕ್ಕೆ ಅನುಸಾರಿಯಾಗಿ ಇದ್ದು, ಅಧರ್ಮ ಮಾರ್ಗದಲ್ಲಿ ಅತಿಕ್ರಮಿಸಿ ಹೋಗುವುದಿಲ್ಲವೋ ಅವನನ್ನು ಪುಣ್ಯಕರ್ಮಿ ಎಂದು ಜನರು ಹೇಳುತ್ತಾರೆ. ಅವನು ಪುತ್ರ-ಮಿತ್ರ ಬಂಧು-ಬಾಂಧವರ ಶೋಕಕ್ಕೆ ತುತ್ತಾಗುವುದಿಲ್ಲ.

ಯಸ್ಯ ನೋಪಹತಾ ಬುದ್ಧಿರ್ನಿಶ್ಚಯೇಷ್ವವಲಂಬತೇ ।
ಸ್ವರ್ಗೇ ಕೃತಾವಕಾಶಸ್ಯ ತಸ್ಯ ನಾಸ್ತಿ ಮಹದ್ಭಯಮ್ ॥೮೧॥

ಯಾರ ಬುದ್ಧಿಯು ದೂಷಿತವಲ್ಲವೋ, ನಿಶ್ಚಿತವಾಗಿದೆಯೋ ಅವರಿಗೆ ಸ್ವರ್ಗದಲ್ಲಿ ಸ್ಥಾನವು ನಿಶ್ಚಯವು. ಭಯಂಕರ ನರಕವು ದೊರೆಯುವುದಿಲ್ಲ.

ತಪೋವನೇಷು ಯೇ ಜಾತಾಸ್ತತ್ರೈವ ನಿಧನಂ ಗತಾಃ ।
ತೇಷಾಮಲ್ಪತರೋ ಧರ್ಮಃ ಕಾಮಭೋಗಮಜಾನತಾಮ್ ॥೮೨॥

ತಪೋವನದಲ್ಲಿಯೇ ಹುಟ್ಟಿ ಅಲ್ಲಿಯೇ ಮರಣವನ್ನು ಹೊಂದುವ ವ್ಯಕ್ತಿಗೆ ಲಭಿಸುವ ಧರ್ಮವು ಅತ್ಯಂತ ಅಲ್ಪವು. ಕಾರಣ ಅಲ್ಲಿಯ ವ್ಯಕ್ತಿಗಳಿಗೆ ಕಾಮಭೋಗದ ವಿಷಯವೇ ತಿಳಿದಿರುವುದಿಲ್ಲ.

ಯಸ್ತು ಭೋಗಾನ್ ಪರಿತ್ಯಜ್ಯ ಶರೀರೇಣ ತಪಶ್ಚರೇತ್ ।
ನ ತೇನ ಕಿಂಚಿನ್ನ ಪ್ರಾಪ್ತಂ ತನ್ಮೇ ಬಹುಮತಂ ಫಲಮ್ ॥೮೩॥

ಯಾವನು ಭೋಗಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಅರಣ್ಯಕ್ಕೆ ಸಾಗಿ ಶಾರೀರಿಕ ತಪಸ್ಸನ್ನು ಆಚರಿಸುತ್ತಾನೋ ಅವನಿಗೆ ಅಧಿಕವಾದ ಫಲವು ದೊರೆಯುತ್ತದೆ ಎಂದು ನನ್ನ ಅಭಿಪ್ರಾಯ. ಅವನು ತಪಸ್ಸಿನಿಂದ ಪಡೆಯದ ಪದಾರ್ಥವೇ ಇರುವುದಿಲ್ಲ. ಯಾವುದನ್ನಾದರೂ ತಪಸ್ಸಿನಿಂದಲೇ ಹೊಂದಬಹುದು.

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಅನಾಗತಾನ್ಯತೀತಾನಿ ಕಸ್ಯ ತೇ ಕಸ್ಯ ವಾ ವಯಮ್ ॥೮೪॥

ಮನುಷ್ಯರಿಗೆ ಸಾವಿರಾರು ತಂದೆ, ಸಾವಿರಾರು ತಾಯಿ, ಸಾವಿರಾರು ಮಕ್ಕಳು, ಸಾವಿರಾರು ಹೆಂಡಂದಿರು ಹಿಂದೆ ಬಂದಿದ್ದಾರೆ, ಮುಂದೆ ಬರುವವರಿದ್ದಾರೆ. ಈ ಜೀವನು ಯಾರಿಗೆ ಸಂಬಂಧಿಸಿದ್ದಾನೆ? ಅವರೆಲ್ಲರೂ ಯಾರಿಗೆ ಸಂಬಂಧಿಸಿದವರು?

ನ ತೇಷಾಂ ಭವತಾ ಕಾರ್ಯಂ ನ ಕಾರ್ಯಂ ತವ ತೈರಪಿ ।
ಸ್ವಕೃತೈಸ್ತಾನಿ ಯಾತಾನಿ ಭವಾಂಶ್ಚೈವ ಗಮಿಷ್ಯತಿ ॥೮೫॥

ಅವರಿಂದ ನನಗೆ ಯಾವ ಕಾರ್ಯವೂ ಆಗಬೇಕಾಗಿಲ್ಲ. ನಿನಗೂ ಆಗಬೇಕಾದದ್ದು ಏನೂ ಇಲ್ಲ. ಪ್ರಾಣಿಗಳು ಅವುಗಳ ಕರ್ಮಕ್ಕನುಸಾರವಾಗಿ ಹೊರಟು ಹೋಗುತ್ತವೆ. ಹಾಗೆ ನೀನೂ ಹೋಗುತ್ತಿ.

ಇಹ ಲೋಕೇ ಹಿ ಧನಿನಾಂ ಪರೋಪಿ ಸ್ವಜನಾಯತೇ ।
ಸ್ವಜನಸ್ತು ದರಿದ್ರಾಣಾಂ ಜೀವತಾಮೇವ ನಶ್ಯತಿ ॥೮೬॥

ಈ ಲೋಕದಲ್ಲಿ ಧನಿಕನಿಗೆ ಪರಜನರು ಬಂಧುಜನರಂತಿರುತ್ತಾರೆ. ದರಿದ್ರರಿಗೆ ಬಂಧುಜನರು ಬದುಕಿದ್ದಾಗಲೂ ಸತ್ತವರಂತಿರುತ್ತಾರೆ.

ಸಂಚಿನೋತ್ಯಶುಭಂ ಕರ್ಮ ಕಲತ್ರಾಪೇಕ್ಷಯಾ ನರಃ ।
ತತಃ ಕ್ಲೇಶಮವಾಪ್ನೋತಿ ಪರತ್ರೇಹ ತಥೈವ ಚ ॥೮೭॥

ಮನುಷ್ಯನು ತನ್ನ ಪತ್ನಿಯೇ ಮೊದಲಾದವರ ರಕ್ಷಣೆಗಾಗಿ ಅಶುಭ ಕರ್ಮವನ್ನು ಆಚರಿಸುತ್ತಾನೆ. ಇದರಿಂದ ಅವನು ಇಹ-ಪರಲೋಕಗಳಲ್ಲಿ ದುಃಖವನ್ನು ಹೊಂದುತ್ತಾನೆ.

ಪಶ್ಯ ತ್ವಂ ಛಿದ್ರಭೂತಂ ಹಿ ಜೀವಲೋಕಂ ಸ್ವಕರ್ಮಣಾ ।
ತತ್ಕುರುಷ್ವ ತಥಾ ಪುತ್ರ ಕೃತ್ಸ್ನಂ ಯತ್ ಸಮುದಾಹೃತಮ್ ॥೮೮॥

ಮಗನೇ, ಸಮಗ್ರ ಮನುಷ್ಯ ಪ್ರಪಂಚವು ತಮ್ಮ ಕರ್ಮದಿಂದ ದೋಷವನ್ನು ಹೊಂದುತ್ತಿರುವುದನ್ನು ನೀನೇ ನೋಡು. ಆದ್ದರಿಂದ ಹಿಂದೆ ತಿಳಿಸಿದಂತೆ ಪೂರ್ಣತೆಗೆ ಕಾರಣವಾದ ಸಮಗ್ರ ಧರ್ಮಗಳನ್ನು ಆಚರಿಸು.

ತದೇತತ್ ಸಂಪ್ರದೃಶ್ಯೈವ ಕರ್ಮಭೂಮಿಂ ಪ್ರವಿಶ್ಯ ತಾಮ್ ।
ಶುಭಾನ್ಯಾಚರಿತವ್ಯಾನಿ ಪರಲೋಕಮಭೀಪ್ಸತಾ ॥೮೯॥

ಈ ಲೋಕವು ಕರ್ಮಭೂಮಿ ಎನ್ನುವುದನ್ನು ಚೆನ್ನಾಗಿ ತಿಳಿದು ಪರಲೋಕವನ್ನು ಬಯಸುವ ಪುರುಷನು ಶುಭಕರ್ಮಗಳನ್ನೇ ಯಾವಾಗಲೂ ಆಚರಿಸುತ್ತಿರಬೇಕು.

ಮಾಸರ್ತುಸಂಜ್ಞಾಪರಿವರ್ತಕೇನ
ಸೂರ್ಯಾಗ್ನಿನಾ ರಾತ್ರಿದಿವೇಂಧನೇನ ।
ಸ್ವಕರ್ಮನಿಷ್ಪಾಫಲಸಾಕ್ಷಿಕೇಣ
ಭೂತಾನಿ ಕಾಲಃ ಪಚತಿ ಪ್ರಸಹ್ಯ ॥೯೦॥

ಕಾಲನೆಂಬ ಪಾಚಕನು ಕರ್ಮಫಲ ಸಾಕ್ಷಿ ಎನಿಸಿದ ಹಗಲು-ರಾತ್ರಿಗಳೆಂಬ ಕಟ್ಟಿಗೆಗಳಿಂದ, ಸೂರ್ಯನೆಂಬ ಅಗ್ನಿಯಿಂದ, ಮಾಸ-ಋತು ಎಂಬ ಹೆಸರಿನ ಹುಟ್ಟಿನಿಂದ ಪ್ರಾಣಿಗಳನ್ನು ಪುನಃ ಪುನಃ ಬಲಾತ್ಕಾರವಾಗಿ ಮೊಗಚುತ್ತಾ ಬೇಯಿಸುತ್ತಾನೆ.

ಧನೇನ ಕಿಂ ಯನ್ನ ದದಾತಿ ನಾಶ್ನುತೇ
ಬಲೇನ ಕಿಂ ಯೇನ ರಿಪೂನ್ನ ಬಾಧತೇ ।
ಶ್ರುತೇನ ಕಿಂ ಯೇನ ನ ಧರ್ಮಮಾಚರೇತ್
ಕಿಮಾತ್ಮನಾ ಯೋ ನ ಜಿತೇಂದ್ರಿಯೋ ವಶೇ ॥೯೧॥

ತಾನು ಉಣ್ಣದ, ಪರರಿಗೆ ಇಕ್ಕದ ಧನದಿಂದ ಏನು ಪ್ರಯೋಜನ? ಶತ್ರುಗಳನ್ನು ಸದೆಬಡಿಯದಿರುವ ಬಲದಿಂದ ಏನು ಪ್ರಯೋಜನ? ಆಚರಣೆಯಿಲ್ಲದ ಶಾಸ್ತ್ರ ಶ್ರವಣದಿಂದ ಏನು ಪ್ರಯೋಜನ? ಮನೋನಿಗ್ರಹವಿಲ್ಲದ ಅಜಿತೇಂದ್ರಿಯನಿಗೆ ಈ ತನ್ನದರಿಂದೇನು ಪ್ರಯೋಜನ?

ಇದಂ ದ್ವೈಪಾಯನವಚೋ ಹಿತಮುಕ್ತಂ ನಿಶಮ್ಯ ತು ।
ಶುಕೋ ಗತಃ ಪರಿತ್ಯಜ್ಯ ಪಿತರಂ ಮೋಕ್ಷದೇಶಿಕಮ್ ॥೯೨॥

ಯುಧಿಷ್ಠಿರನೇ, ವ್ಯಾಸರು ಹೇಳಿದ ಹಿತಕರವಾದ ಪ್ರವಚನವನ್ನು ಕೇಳಿ ಶುಕಮುನಿಯು ತಂದೆಯನ್ನು ಪರಿತ್ಯಜಿಸಿ ಮೋಕ್ಷತತ್ತ್ವೋಪದೇಶಕನಾದ ಗುರುವನ್ನು ಹುಡುಕಿಕೊಂಡು ಹೊರಟು ಹೋದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಪಂಚಾಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ನಾಲ್ಕನೆಯ ಅಧ್ಯಾಯ

ಶುಭಾಶುಭ ಕರ್ಮಗಳ ಫಲವನ್ನು ಅನುಭವಿಸಬೇಕು ಎಂಬುದರ ವಿವರಣೆ

ಯುಧಿಷ್ಠಿರಃ

ಯದ್ಯಸ್ತಿ ದತ್ತಮಿಷ್ಟಂ ವಾ ತಪಸ್ತಪ್ತಂ ತಥೈವ ಚ ।
ಗುರೂಣಾಂ ವಾಪಿ ಶುಶ್ರೂಷಾ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ದಾನ, ಯಜ್ಞ, ತಪಸ್ಸು, ಗುರುಸೇವೆ ಇದರಿಂದ ಯಾವ ಫಲವು ದೊರೆಯುತ್ತದೆಯೋ ಅದನ್ನು ನನಗೆ ತಿಳಿಸು.

ಭೀಷ್ಮಃ

ಆತ್ಮನಾऽನರ್ಥಯುಕ್ತೇನ ಪಾಪೇ ನಿವಿಶತೇ ಮನಃ ।
ಸ ಕರ್ಮ ಕಲುಷಂ ಕೃತ್ವಾ ಕ್ಲೇಶೇ ಮಹತಿ ಧೀಯತೇ ॥೨॥

ಭೀಷ್ಮ– ಯುಧಿಷ್ಠಿರನೇ, ಕಾಮ-ಕ್ರೋಧಗಳೆಂಬ ಅನರ್ಥಗುಣಗಳಿಂದ ಕೂಡಿದ, ಬುದ್ಧಿಯಿಂದ ಪ್ರೇರಿತವಾದ ಮನಸ್ಸು ಪಾಪಕರ್ಮದಲ್ಲಿ ಆಸಕ್ತವಾಗುತ್ತದೆ. ಮನುಷ್ಯನು ಅಂತಹ ದೋಷಪೂರ್ಣವಾದ ಕರ್ಮಗಳನ್ನೇ ಆಚರಿಸಿ ಪರಿಣಾಮವಾಗಿ ಮಹಾಕ್ಲೇಶದಲ್ಲಿ ಸಿಕ್ಕಿಕೊಳ್ಳುತ್ತಾನೆ.

ದುರ್ಭಿಕ್ಷಾದೇವ ದುರ್ಭಿಕ್ಷಂ ಕ್ಲೇಶಾತ್ ಕ್ಲೇಶಂ ಭಯಾದ್ ಭಯಮ್ ।
ಮೃತೇಭ್ಯಃ ಪ್ರಮೃತಾ ಯಾಂತಿ ದರಿದ್ರಾಃ ಪಾಪಕರ್ಮಿಣಃ ॥೩॥

ಪಾಪಕರ್ಮ ಪ್ರಯುಕ್ತವಾಗಿ ದರಿದ್ರರಾದ ಮನುಷ್ಯರು ದುರ್ಭಿಕ್ಷದಿಂದ ಕೂಡಿದ ದೇಶದಿಂದ ಅಂತಹ ದುರ್ಭಿಕ್ಷವುಳ್ಳ ದೇಶಕ್ಕೆ ಹೋಗುತ್ತಾರೆ. ಉತ್ತಮ ಸಮೃದ್ಧಿಯಾದ ದೇಶ ಅವರಿಗೆ ದೊರೆಯುವುದಿಲ್ಲ. ಒಂದು ಭಯವನ್ನು ಹೊಂದಿದ ಬಳಿಕ ಮತ್ತೊಂದು ಭಯ ಅವರನ್ನು ಆಕ್ರಮಿಸುತ್ತದೆ. ಸತ್ತವರಿಗಿಂತಲೂ ಅಧಿಕವಾದ ಸಾವು ಇವರದ್ದು.

ಉತ್ಸವಾದುತ್ಸವಂ ಯಾಂತಿ ಸ್ವರ್ಗಾತ್ ಸ್ವರ್ಗಂ ಸುಖಾತ್ ಸುಖಮ್ ।
ಶ್ರದ್ದಧಾನಾಶ್ಚ ದಾಂತಾಶ್ಚ ಧನಸ್ಥಾಃ ಶುಭಕಾರಿಣಃ ॥೪॥

ಶ್ರದ್ಧಾಳುಗಳಾದ, ಜಿತೇಂದ್ರಿಯರಾದ ಶುಭಕರ್ಮಗಳನ್ನಾಚರಿಸಿದವರು ಧನಿಕರಾಗಿ

ಒಂದು ಸುಖದಿಂದ ಮತ್ತೊಂದು ಸುಖವನ್ನು, ಸ್ವರ್ಗದಿಂದ ಸ್ವರ್ಗವನ್ನು ಹೊಂದುತ್ತಾರೆ. ಉತ್ಸವದಿಂದ ಇನ್ನೊಂದು ಉತ್ಸವವನ್ನು ಆಚರಿಸುತ್ತಾರೆ.

ವ್ಯಾಲಕುಂಜರದುರ್ಗೇಷು ಸರ್ಪಚೋರಭಯೇಷು ಚ ।
ಹಸ್ತಾವಾಪೇನ ಗಚ್ಛಂತಿ ನಾಸ್ತಿಕಾಃ ಕಿಮತಃಪರಮ್ ॥೫॥

ಯಾರು ಅಸತ್ಕರ್ಮಶೀಲರೋ ಅವರು ಧರ್ಮಭ್ರಷ್ಟರಾದ ಕಾರಣದಿಂದ ರಾಜನಿಂದ ಶಿಕ್ಷಿಸಲ್ಪಟ್ಟು ಬೇಲಿಗಳನ್ನು ತೊಡಿಸಿಕೊಂಡು ಹಾವು, ಕಳ್ಳರ ಭಯದಿಂದ ಕೂಡಿದ, ವಿಷಜಂತುಗಳಿಂದ, ಕಾಡಾನೆಗಳಿಂದ ಕೂಡಿದ ಭಯಂಕರವಾದ ಕಾಡಿನಲ್ಲಿ ಅಲೆಯುತ್ತಾರೆ. ಇವರಿಗೆ ಇದಕ್ಕಿಂತ ಅಧಿಕವಾದ ಶಿಕ್ಷೆ ಯಾವುದಿದೆ?

ಪ್ರಿಯದೇವಾತಿಥೇಯಾಶ್ಚ ವದಾನ್ಯಾಃ ಪ್ರಿಯಸಾಧವಃ ।
ಕ್ಷೇಮ್ಯಮಾತ್ಮವತಾ ಮಾರ್ಗಮಾಸ್ಥಿತಾ ಹಸ್ತದಕ್ಷಿಣಾಃ ॥೬॥

ಯಾರು ದೇವತೆಗಳಿಗೆ, ಅತಿಥಿಗಳಿಗೆ ಪ್ರಿಯರಾಗಿರುತ್ತಾರೋ, ಉದಾರಿಗಳಾಗಿರುತ್ತಾರೋ ಅಂತಹ ವ್ಯಕ್ತಿಗಳನ್ನು ದೇವತೆಗಳೇ ಕೈಹಿಡಿದು ಸ್ವರ್ಗಕ್ಕೆ ಕರೆದೊಯ್ಯುತ್ತಾರೆ. ಅವರು ಕ್ಷೇಮಕರವಾದ ಮೋಕ್ಷಕ್ಕೆ ಹೋಗುವ ಜ್ಞಾನಿಗಳ ಮಾರ್ಗವನ್ನು ಆಶ್ರಯಿಸಿರುತ್ತಾರೆ. ಅವರು ಸಜ್ಜನರಿಗೆ ಪ್ರಿಯರಾಗಿರುತ್ತಾರೆ.

ಪುಲಾಕಾ ಇವ ಧಾನ್ಯೇಷು ಪ್ರತ್ಯಂಡಾ ಇವ ಪಕ್ಷಿಷು ।
ತದ್ವಿಧಾಸ್ತೇ ಮನುಷ್ಯೇಷು ಯೇಷಾಂ ಧರ್ಮೋ ನ ಕಾರಣಮ್ ॥೭॥

ಯಾರಿಗೆ ಜೀವನದಲ್ಲಿ ಧರ್ಮವು ಪರಮೋದ್ದೇಶವಾಗಿಲ್ಲವೋ, ಅವರು ಧಾನ್ಯದಲ್ಲಿ ಜೊಳ್ಳಿನಂತೆ, ಪಕ್ಷಿಗಳಲ್ಲಿ ಕೊಳೆತ ಮೊಟ್ಟೆಯಂತೆ ನಿಷ್ಪ್ರಯೋಜಕರಾಗುತ್ತಾರೆ.

ಸುಶೀಘ್ರಮಪಿ ಧಾವಂತಂ ವಿಧಾನಮನುಧಾವತಿ ।
ಶೇತೇ ಸಹ ಶಯಾನೇನ ಯೇನ ಯೇನ ಯಥಾಕೃತಮ್ ॥೮॥

ಮನುಷ್ಯನು ಯಾವ ಕರ್ಮವನ್ನಾಚರಿಸುತ್ತಾನೋ ಆ ಕರ್ಮಕ್ಕನುಗುಣವಾಗಿ ಫಲವು ಅವನನ್ನು ಅನುಸರಿಸುತ್ತದೆ. ಅವನು ಮಲಗಿದ್ದರೆ ಮಲಗಿದಲ್ಲೇ ಅನುಸರಿಸುತ್ತದೆ. ಯಾವ ಕರ್ಮವನ್ನು ಹೇಗೆ ಮಾಡಿದ್ದಾನೋ ಹಾಗೆ ಅದರ ಫಲವನ್ನು ಅನುಭವಿಸುತ್ತಾನೆ.

ಪಾಪಂ ತಿಷ್ಠತಿ ತಿಷ್ಠಂತಂ ಧಾವಂತಮನುಧಾವತಿ ।
ಕರೋತಿ ಕುರ್ವತಃ ಕರ್ಮ ಚ್ಛಾಯೇವಾನುವಿಧೀಯತೇ ॥೯॥

ಕರ್ಮವನ್ನು ಆಚರಿಸಿದವನು ನಿಂತಿದ್ದರೆ ಆ ಕರ್ಮವೂ ಅವನ ಜೊತೆ ನಿಂತಿರುತ್ತದೆ. ಚಲಿಸುತ್ತಿದ್ದರೆ ಜೊತೆಗೆ ಚಲಿಸುತ್ತದೆ. ಮಾಡಿದ ವ್ಯಕ್ತಿಯನ್ನು ಆಯಾ ಕರ್ಮವು ನೆರಳಿನಂತೆ ಜೊತೆಗೆ ಅನುಸರಿಸುತ್ತದೆ.

ಯೇನ ಯೇನ ಯಥಾ ಯದ್ಯತ್ ಪುರಾ ಕರ್ಮ ಸುನಿಶ್ಚಿತಮ್ ।
ತತ್ತದೇವ ನರೋ ಭುಂಕ್ತೇ ನಿತ್ಯಂ ವಿಹಿತಮಾತ್ಮನಾ ॥೧೦॥

ಯಾವ ಯಾವ ಮನುಷ್ಯನಿಂದ ಯಾವ ಯಾವ ಕರ್ಮಗಳು ಆಚರಿಸಲ್ಪಟ್ಟಿರುತ್ತವೆಯೋ ಆಯಾ ಮನುಷ್ಯರು ಆಯಾ ಕರ್ಮಗಳಿಗೆ ಅನುಗುಣವಾದ ಫಲಗಳನ್ನೇ ಏಕಾಕಿಯಾಗಿ ಅನುಭವಿಸುತ್ತಾರೆ.

ಸಮಾನಕರ್ಮನಿಕ್ಷೇಪಂ ವಿಧಾನಪರಿರಕ್ಷಣಮ್ ।
ಭೂತಗ್ರಾಮಮಿಮಂ ಕಾಲಃ ಸಮಂತಾದಪಕರ್ಷತಿ ॥೧೧॥

ಹಿಂದೆ ಅವನು ಯಾವ ಕರ್ಮವನ್ನು ಮಾಡಿದ್ದಾನೋ ಆ ಕರ್ಮದ ಫಲವನ್ನೇ ಅವನು ಅನುಭವಿಸುತ್ತಾನೆ. ಕಾಲವೆಂಬುದು ಭೂತಸಮುದಾಯವನ್ನು ಅನೇಕ ಕಡೆಯಿಂದ ಕಟ್ಟಿ ಸೆಳೆಯುತ್ತಾ, ಅವರವರ ಕರ್ಮಕ್ಕೆ ಯೋಗ್ಯವಾದ ಜನ್ಮವನ್ನು ತಂದೊಡ್ಡುತ್ತದೆ.

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಂ ಕಾಲಂ ನಾತಿವರ್ತಂತೇ ತಥಾ ಕರ್ಮ ಪುರಾಕೃತಮ್ ॥೧೨॥

ಫಲ-ಪುಷ್ಪಗಳು ಯಾರ ಪ್ರೇರಣೆಯೂ ಇಲ್ಲದೆ ಯೋಗ್ಯವಾದ ಕಾಲಕ್ಕೆ ಸರಿಯಾಗಿ ಮರದ ಗಿಡಗಳಿಂದ ಮೂಡಿಬರುವಂತೆ ಹಿಂದೆ ಮಾಡಿದ ಕರ್ಮದ ಫಲಗಳು ಆಯಾ ಕಾಲಕ್ಕೆ ಸರಿಯಾಗಿ ಮನುಷ್ಯರಲ್ಲಿ ಫಲಿಸುತ್ತವೆ.

ಸಮಾನಶ್ಚಾವಮಾನಶ್ಚ ಲಾಭಾಲಾಭೌ ಜಯಾಜಯೌ ।
ಪ್ರವೃತ್ತಾ ನ ನಿವರ್ತಂತೇ ನಿಧನಾಂತಾಃ ಪದೇಪದೇ ॥೧೩॥

ಒಂದು ಸುಖದಿಂದ ಮತ್ತೊಂದು ಸುಖವನ್ನು, ಸ್ವರ್ಗದಿಂದ ಸ್ವರ್ಗವನ್ನು ಹೊಂದುತ್ತಾರೆ. ಉತ್ಸವದಿಂದ ಇನ್ನೊಂದು ಉತ್ಸವವನ್ನು ಆಚರಿಸುತ್ತಾರೆ.

ವ್ಯಾಲಕುಂಜರದುರ್ಗೇಷು ಸರ್ಪಚೋರಭಯೇಷು ಚ ।
ಹಸ್ತಾವಾಪೇನ ಗಚ್ಛಂತಿ ನಾಸ್ತಿಕಾಃ ಕಿಮತಃಪರಮ್ ॥೫॥

ಯಾರು ಅಸತ್ಕರ್ಮಶೀಲರೋ ಅವರು ಧರ್ಮಭ್ರಷ್ಟರಾದ ಕಾರಣದಿಂದ ರಾಜನಿಂದ ಶಿಕ್ಷಿಸಲ್ಪಟ್ಟು ಬೇಲಿಗಳನ್ನು ತೊಡಿಸಿಕೊಂಡು ಹಾವು, ಕಳ್ಳರ ಭಯದಿಂದ ಕೂಡಿದ, ವಿಷಜಂತುಗಳಿಂದ, ಕಾಡಾನೆಗಳಿಂದ ಕೂಡಿದ ಭಯಂಕರವಾದ ಕಾಡಿನಲ್ಲಿ ಅಲೆಯುತ್ತಾರೆ. ಇವರಿಗೆ ಇದಕ್ಕಿಂತ ಅಧಿಕವಾದ ಶಿಕ್ಷೆ ಯಾವುದಿದೆ?

ಪ್ರಿಯದೇವಾತಿಥೇಯಾಶ್ಚ ವದಾನ್ಯಾಃ ಪ್ರಿಯಸಾಧವಃ ।
ಕ್ಷೇಮ್ಯಮಾತ್ಮವತಾ ಮಾರ್ಗಮಾಸ್ಥಿತಾ ಹಸ್ತದಕ್ಷಿಣಾಃ ॥೬॥

ಯಾರು ದೇವತೆಗಳಿಗೆ, ಅತಿಥಿಗಳಿಗೆ ಪ್ರಿಯರಾಗಿರುತ್ತಾರೋ, ಉದಾರಿಗಳಾಗಿರುತ್ತಾರೋ ಅಂತಹ ವ್ಯಕ್ತಿಗಳನ್ನು ದೇವತೆಗಳೇ ಕೈಹಿಡಿದು ಸ್ವರ್ಗಕ್ಕೆ ಕರೆದೊಯ್ಯುತ್ತಾರೆ. ಅವರು ಕ್ಷೇಮಕರವಾದ ಮೋಕ್ಷಕ್ಕೆ ಹೋಗುವ ಜ್ಞಾನಿಗಳ ಮಾರ್ಗವನ್ನು ಆಶ್ರಯಿಸಿರುತ್ತಾರೆ. ಅವರು ಸಜ್ಜನರಿಗೆ ಪ್ರಿಯರಾಗಿರುತ್ತಾರೆ.

ಪುಲಾಕಾ ಇವ ಧಾನ್ಯೇಷು ಪ್ರತ್ಯಂಡಾ ಇವ ಪಕ್ಷಿಷು ।
ತದ್ವಿಧಾಸ್ತೇ ಮನುಷ್ಯೇಷು ಯೇಷಾಂ ಧರ್ಮೋ ನ ಕಾರಣಮ್ ॥೭॥

ಯಾರಿಗೆ ಜೀವನದಲ್ಲಿ ಧರ್ಮವು ಪರಮೋದ್ದೇಶವಾಗಿಲ್ಲವೋ, ಅವರು ಧಾನ್ಯದಲ್ಲಿ ಜೊಳ್ಳಿನಂತೆ, ಪಕ್ಷಿಗಳಲ್ಲಿ ಕೊಳೆತ ಮೊಟ್ಟೆಯಂತೆ ನಿಷ್ಪಯೋಜಕರಾಗುತ್ತಾರೆ.

ಸುಶೀಘ್ರಮಪಿ ಧಾವಂತಂ ವಿಧಾನಮನುಧಾವತಿ ।
ಶೇತೇ ಸಹ ಶಯಾನೇನ ಯೇನ ಯೇನ ಯಥಾಕೃತಮ್ ॥೮॥

ಮನುಷ್ಯನು ಯಾವ ಕರ್ಮವನ್ನಾಚರಿಸುತ್ತಾನೋ ಆ ಕರ್ಮಕ್ಕನುಗುಣವಾಗಿ ಫಲವು ಅವನನ್ನು ಅನುಸರಿಸುತ್ತದೆ. ಅವನು ಮಲಗಿದ್ದರೆ ಮಲಗಿದಲ್ಲೇ ಅನುಸರಿಸುತ್ತದೆ. ಯಾವ ಕರ್ಮವನ್ನು ಹೇಗೆ ಮಾಡಿದ್ದಾನೋ ಹಾಗೆ ಅದರ ಫಲವನ್ನು ಅನುಭವಿಸುತ್ತಾನೆ.

ಪಾಪಂ ತಿಷ್ಠತಿ ತಿಷ್ಠಂತಂ ಧಾವಂತಮನುಧಾವತಿ ।
ಕರೋತಿ ಕುರ್ವತಃ ಕರ್ಮ ಚ್ಛಾಯೇವಾನುವಿಧೀಯತೇ ॥೯॥

ಕರ್ಮವನ್ನು ಆಚರಿಸಿದವನು ನಿಂತಿದ್ದರೆ ಆ ಕರ್ಮವೂ ಅವನ ಜೊತೆ ನಿಂತಿರುತ್ತದೆ. ಚಲಿಸುತ್ತಿದ್ದರೆ ಜೊತೆಗೆ ಚಲಿಸುತ್ತದೆ. ಮಾಡಿದ ವ್ಯಕ್ತಿಯನ್ನು ಆಯಾ ಕರ್ಮವು ನೆರಳಿನಂತೆ ಜೊತೆಗೆ ಅನುಸರಿಸುತ್ತದೆ.

ಯೇನ ಯೇನ ಯಥಾ ಯದ್ಯತ್ ಪುರಾ ಕರ್ಮ ಸುನಿಶ್ಚಿತಮ್ ।
ತತ್ತದೇವ ನರೋ ಭುಂಕ್ತೇ ನಿತ್ಯಂ ವಿಹಿತಮಾತ್ಮನಾ ॥೧೦॥

ಯಾವ ಯಾವ ಮನುಷ್ಯನಿಂದ ಯಾವ ಯಾವ ಕರ್ಮಗಳು ಆಚರಿಸಲ್ಪಟ್ಟಿರುತ್ತವೆಯೋ ಆಯಾ ಮನುಷ್ಯರು ಆಯಾ ಕರ್ಮಗಳಿಗೆ ಅನುಗುಣವಾದ ಫಲಗಳನ್ನೇ ಏಕಾಕಿಯಾಗಿ ಅನುಭವಿಸುತ್ತಾರೆ.

ಸಮಾನಕರ್ಮನಿಕ್ಷೇಪಂ ವಿಧಾನಪರಿರಕ್ಷಣಮ್ ।
ಭೂತಗ್ರಾಮಮಿಮಂ ಕಾಲಃ ಸಮಂತಾದಪಕರ್ಷತಿ ॥೧೧॥

ಹಿಂದೆ ಅವನು ಯಾವ ಕರ್ಮವನ್ನು ಮಾಡಿದ್ದಾನೋ ಆ ಕರ್ಮದ ಫಲವನ್ನೇ ಅವನು ಅನುಭವಿಸುತ್ತಾನೆ. ಕಾಲವೆಂಬುದು ಭೂತಸಮುದಾಯವನ್ನು ಅನೇಕ ಕಡೆಯಿಂದ ಕಟ್ಟಿ ಸೆಳೆಯುತ್ತಾ, ಅವರವರ ಕರ್ಮಕ್ಕೆ ಯೋಗ್ಯವಾದ ಜನ್ಮವನ್ನು ತಂದೊಡ್ಡುತ್ತದೆ.

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಂ ಕಾಲಂ ನಾತಿವರ್ತಂತೇ ತಥಾ ಕರ್ಮ ಪುರಾಕೃತಮ್ ॥೧೨॥

ಫಲ-ಪುಷ್ಪಗಳು ಯಾರ ಪ್ರೇರಣೆಯೂ ಇಲ್ಲದೆ ಯೋಗ್ಯವಾದ ಕಾಲಕ್ಕೆ ಸರಿಯಾಗಿ ಮರದ ಗಿಡಗಳಿಂದ ಮೂಡಿಬರುವಂತೆ ಹಿಂದೆ ಮಾಡಿದ ಕರ್ಮದ ಫಲಗಳು ಆಯಾ ಕಾಲಕ್ಕೆ ಸರಿಯಾಗಿ ಮನುಷ್ಯರಲ್ಲಿ ಫಲಿಸುತ್ತವೆ.

ಸಮಾನಶ್ಚಾವಮಾನಶ್ಚ ಲಾಭಾಲಾಭೌ ಜಯಾಜಯೌ ।
ಪ್ರವೃತ್ತಾ ನ ನಿವರ್ತಂತೇ ನಿಧನಾಂತಾಃ ಪದೇಪದೇ ॥೧೩॥

ಸಮ್ಮಾನ, ಅವಮಾನಗಳು, ಲಾಭ-ನಷ್ಟಗಳು, ಉನ್ನತಿ-ಕ್ಷಯಗಳು ಪೂರ್ವಜನ್ಮದ ಕರ್ಮಾನುಸಾರವಾಗಿ ಹೆಜ್ಜೆ-ಹೆಜ್ಜೆಗಳಿಗೂ ಬರುತ್ತಿರುತ್ತವೆ. ಅವುಗಳನ್ನು ಅನುಭವಿಸಿದ ಬಳಿಕ ಹೊರಟುಹೋಗುತ್ತವೆ.

ಆತ್ಮನಾ ವಿಹಿತಂ ದುಃಖಮಾತ್ಮನಾ ವಿಹಿತಂ ಸುಖಮ್ ।
ಗರ್ಭಶಯ್ಯಾಮುಪಾದಾಯ ಭಜತೇ ಪೂರ್ವದೇಹಿಕಮ್ ॥೧೪॥

ತನ್ನ ಕರ್ಮದಿಂದಲೇ ದುಃಖವು ಒದಗಿಬರುತ್ತದೆ. ಸುಖವೂ ತನ್ನ ಕರ್ಮದಿಂದಲೇ ಲಭಿಸುತ್ತದೆ. ತಾಯಿಯ ಗರ್ಭವನ್ನು ಸೇರಿದ ಶಿಶುವು ಹಿಂದಿನ ಜನ್ಮದಲ್ಲಿ ಮಾಡಿದ ಶುಭಾಶುಭ ಕರ್ಮಗಳ ಫಲಗಳನ್ನು ಹೊಂದಲು ಆರಂಭಿಸುತ್ತದೆ.

ಬಾಲೋ ಯುವಾ ವಾ ವೃದ್ಧಶ್ಚ ಯತ್ಕರೋತಿ ಶುಭಾಶುಭಮ್ ।
ತಸ್ಯಾಂತಸ್ಯಾಮವಸ್ಥಾಯಾಂ ಭುಂಕ್ತೇ ಜನ್ಮನಿ ಜನ್ಮನಿ ॥೧೫॥

ಬಾಲಕನಾಗಲಿ, ಯುವಕನಾಗಲಿ, ವೃದ್ಧನಾಗಲಿ ಯಾವ ಅವಸ್ಥೆಗಳಲ್ಲಿ ಯಾವ ರೀತಿಯಾದ ಶುಭಾಶುಭ ಕರ್ಮಗಳನ್ನು ಆಚರಿಸುತ್ತಾನೋ ಅದರ ಫಲವನ್ನು ಅವನು ಜನ್ಮಾಂತರದಲ್ಲಿ ಆಯಾ ಅವಸ್ಥೆಗಳಲ್ಲಿಯೇ ಅನುಭವಿಸುತ್ತಾನೆ.

ಯಥಾ ಧೇನುಸಹಸ್ರೇಷು ವತ್ಸೋ ವಿಂದತಿ ಮಾತರಮ್ ।
ತಥಾ ಪೂರ್ವಕೃತಂ ಕರ್ಮ ಕರ್ತಾರಮನುಗಚ್ಛತಿ ॥೧೬॥

ಹೇಗೆ ಸಾವಿರಾರು ಹಸುಗಳು ಒಂದೇ ಕೊಟ್ಟಿಗೆಯಲ್ಲಿದ್ದರೂ ಕರುವು ತನ್ನ ತಾಯಿಯನ್ನೇ ಹುಡುಕಿಕೊಂಡು ಹೋಗಿ, ಅದರ ಜೊತೆಗೇ ಸೇರುತ್ತದೋ ಅದೇ ರೀತಿ ಹಿಂದೆ ಮಾಡಿದ ಕರ್ಮಗಳು ಕರ್ತೃವನ್ನೇ ಅನುಸರಿಸಿ ಹೋಗುತ್ತವೆ. (ಒಬ್ಬನು ಮಾಡಿದ ಕರ್ಮದ ಫಲ ಮತ್ತೊಬ್ಬನಿಗೆ ಸೇರುವುದಿಲ್ಲ).

ಮಲಿನಂ ಹಿ ಯಥಾ ವಸ್ತ್ರಂ ಪಶ್ಚಾಚ್ಛುಧ್ಯತಿ ವಾರಿಣಾ ।
ಉಪವಾಸೈಃ ಪ್ರತಪ್ತಾನಾಂ ದೀರ್ಘಂ ಸುಖಮನಂತಕಮ್ ॥೧೭॥

ಮಲಿನ ವಸ್ತ್ರವು ನೀರಿನಲ್ಲಿ ಸ್ವಚ್ಛಗೊಳಿಸಿದ ಬಳಿಕ ಶುಭ್ರವಾಗುವಂತೆ ಮನುಷ್ಯನ ಮನಸ್ಸು ಉಪವಾಸಾದಿ ವ್ರತಗಳಿಂದ ಶುದ್ಧವಾಗುತ್ತದೆ. ಮನಸ್ಸು ಶುದ್ಧವಾದ ಬಳಿಕ ದೀರ್ಘವಾದ ಅನಂತ ಸುಖವು ಸಿಗುತ್ತದೆ.

ದೀರ್ಘಕಾಲೇನ ತಪಸಾ ಸೇವಿತೇನ ತಪೋವನೇ ।
ಧರ್ಮನಿರ್ಧೂತಪಾಪಾನಾಂ ಸಂಸಿದ್ಧ್ಯಂತೇ ಮನೋರಥಾಃ ॥೧೮॥

ಧರ್ಮದಿಂದ ಪಾಪವನ್ನು ತೊಳೆದುಕೊಂಡವರಿಗೆ ಬಹಳ ಕಾಲದ ಬಳಿಕ ತಪಸ್ಸಿನ ಫಲವಾಗಿ ಮನೋರಥಗಳು ಸಿದ್ಧಿಸುತ್ತವೆ.

ಶಕುನಾನಾಮಿವಾಕಾಶೇ ಮತ್ಸ್ಯಾನಾಮಿವ ಚೋದಕೇ ।
ಪದಂ ಯಥಾ ನ ದೃಶ್ಯೇತ ತಥಾ ಪುಣ್ಯಕೃತಾಂ ಗತಿಃ ॥೧೯॥

ಆಕಾಶದಲ್ಲಿ ಸಂಚರಿಸುವ ಪಕ್ಷಿಗಳ, ನೀರಿನಲ್ಲಿ ಸಂಚರಿಸುವ ಮೀನುಗಳ ಹೆಜ್ಜೆಯ ಗುರುತು ಹೇಗೆ ಕಾಣಿಸುವುದಿಲ್ಲವೋ ಅದರಂತೆ ಪುಣ್ಯಾತ್ಮರಾದ ಜ್ಞಾನಿಗಳ ಮಾರ್ಗವು ಯಾವುದೆಂಬುದು ತಿಳಿಯುವುದಿಲ್ಲ.

ಅಲ್ಪಮನ್ಯೈರುಪಾಲಬ್ಧೈಃ ಕೀರ್ತಿತೈಶ್ಚ ವ್ಯತಿಕ್ರಮೈಃ ।
ಪೇಶಲಂ ಚಾನುರೂಪಂ ಚ ಕರ್ತವ್ಯಂ ಹಿತಮಾತ್ಮನಃ ॥೨೦॥

ಅನೇಕ ಕಾರಣಗಳನ್ನು ಹೇಳಿಕೊಂಡು ಪರರನ್ನು ನಿಂದಿಸುವುದನ್ನು ವರ್ಜಿಸಬೇಕು. ಮತ್ತೊಬ್ಬರ ಅಪರಾಧವನ್ನು ಚರ್ಚಿಸಬಾರದು. ಯೋಗ್ಯವು, ಅನುಕೂಲವು, ಹಿತಕರವೂ ಆದ ಕರ್ತವ್ಯಗಳನ್ನು ತನ್ನ ಆತ್ಮೋದ್ಧಾರಕ್ಕಾಗಿ ಆಚರಿಸುತ್ತಿರಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚತುಃಪಂಚಾಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೈದನೆಯ ಅಧ್ಯಾಯ

ವೇದವ್ಯಾಸರ ತಪಶ್ಚರಣೆ

ಯುಧಿಷ್ಠಿರಃ

ಕಥಂ ವ್ಯಾಸಸ್ಯ ಧರ್ಮಾತ್ಮಾ ಶುಕೋ ಜಜ್ಞೇ ಮಹಾತಪಾಃ ।
ಸಿದ್ಧಿಂ ಚ ಪರಮಾಂ ಪ್ರಾಪ್ತಸ್ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ವ್ಯಾಸರಿಗೆ ಮಹಾತಪಸ್ವಿಯಾದ ಧರ್ಮಾತ್ಮನಾದ ಶುಕನು ಹೇಗೆ ಹುಟ್ಟಿದನು? ಪರಮಸಿದ್ಧಿಯನ್ನು ಶುಕಮುನಿಯು ಹೇಗೆ ಹೊಂದಿದನು? ಈ ವಿಷಯವನ್ನು ತಿಳಿಸಿ.

ಕಸ್ಯಾಂ ಚೋತ್ಪಾದಯಾಮಾಸ ಶುಕಂ ವ್ಯಾಸಸ್ತಪೋಧನಃ ।
ನ ಹ್ಯಸ್ಯ ಜನನೀಂ ವಿದ್ಮ ಜನ್ಮ ಚಾಗ್ರ್ಯಂ ಮಹಾತ್ಮನಃ ॥೨॥

ತಪೋಧನರಾದ ವ್ಯಾಸರು ಯಾವ ಸ್ತ್ರೀಯ ಗರ್ಭದಿಂದ ಶುಕನನ್ನು ಪಡೆದರು? ಮಹಾತ್ಮನಾದ ಶುಕನ ತಾಯಿಯು ಯಾರು? ಅವನ ಜನ್ಮವೃತ್ತಾಂತವೇನು ಎಂಬುದು ನಮಗೆ ತಿಳಿದಿರುವುದಿಲ್ಲ.

ಕಥಂ ಚ ಬಾಲಸ್ಯ ಸತಃ ಸೂಕ್ಷ್ಮಜ್ಞಾನೇ ಗತಾ ಮತಿಃ ।
ಯಥಾ ನಾನ್ಯಸ್ಯ ಲೋಕೇಽಸ್ಮಿನ್ ದ್ವಿತೀಯಸ್ಯೇಹ ಕಸ್ಯಚಿತ್ ॥೩॥

ಬಾಲ್ಯದಲ್ಲಿಯೇ ಶುಕಮುನಿಗೆ ಹೇಗೆ ಭಗವದ್ವಿಷಯಕವಾದ ಸೂಕ್ಷ್ಮಜ್ಞಾನವು ದೊರೆಯಿತು? ಈ ಪ್ರಪಂಚದಲ್ಲಿ ಶುಕಮುನಿಗೆ ಹೊರತು ಯಾರಿಗೂ ಇಂತಹ ಭಗವದ್ವಿಷಯಕವಾದ ಸೂಕ್ಷ್ಮಜ್ಞಾನವು ಇರುವುದಿಲ್ಲ.

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ಮಹಾದ್ಯುತೇ ।
ನ ಹಿ ಮೇ ತೃಪ್ತಿರಸ್ತೀಹ ಶೃಣ್ವತೋಽಮೃತಮುತ್ತಮಮ್ ॥೪॥

ಬುದ್ಧಿಸಂಪನ್ನನೇ, ಈ ವಿಷಯದಲ್ಲಿ ವಿಸ್ತಾರವಾಗಿ ಕೇಳಬೇಕೆಂದಿದ್ದೇನೆ. ನಿನ್ನ ಅಮೃತಮಯವಾದ ಮಾತನ್ನು ಕೇಳುತ್ತಿರುವ ನನಗೆ ತೃಪ್ತಿಯುಂಟಾಗುತ್ತಿಲ್ಲ.

ಮಾಹಾತ್ಮ್ಯಮಾತ್ಮಯೋಗಂ ಚ ವಿಜ್ಞಾನಂ ಚ ಶುಕಸ್ಯ ಹ ।
ಯಥಾವದಾನುಪೂರ್ವ್ಯೇಣ ತನ್ಮೇ ಬ್ರೂಹಿ ಪಿತಾಮಹ ॥೫॥

ಪಿತಾಮಹನೇ, ಶುಕದೇವರಲ್ಲಿರುವ ಮಹಿಮೆ, ಪರಮಾತ್ಮನ ಯೋಗ, ವಿಜ್ಞಾನ ಇವುಗಳನ್ನು ಕ್ರಮವಾಗಿ ನನಗೆ ತಿಳಿಸು.

ಭೀಷ್ಮಃ

ನ ಹಾಯನೈರ್ನ ಪಲಿತೈರ್ನ ವಿತ್ತೇನ ನ ಬಂಧುಭಿಃ ।
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸ ನೋ ಮಹಾನ್ ॥೬॥

ಭೀಷ್ಮ– ವಯಸ್ಸಿನಿಂದ, ಕೂದಲು ಬಿಳಿಯಾಗಿರುವುದರಿಂದ, ಧನದ ಸಂಬಂಧದಿಂದ, ಅಧಿಕ ಬಾಂಧವರಿಂದ ಮನುಷ್ಯನು ಧರ್ಮಾತ್ಮನೆನಿಸುವುದಿಲ್ಲ. ಯಾವನು ಪರಂಪರಾಪ್ರಾಪ್ತವಾದ ಷಡಂಗವೇದವನ್ನು ಅಧ್ಯಯನ ಮಾಡಿರುತ್ತಾನೋ ಅವನೇ ಎಲ್ಲರಿಗಿಂತ ಶ್ರೇಷ್ಠನು. ಋಷಿಗಳು ಹೀಗೆ ಧರ್ಮದ ಮಹತ್ವವನ್ನು ಹೇಳಿರುತ್ತಾರೆ.

ತಪೋಮೂಲಮಿದಂ ಸರ್ವಂ ಯನ್ಮಾಂ ಪೃಚ್ಛಸಿ ಪಾಂಡವ ।
ತದಿಂದ್ರಿಯಾಣಿ ಸಂಯಮ್ಯ ತಪೋ ಭವತಿ ನಾನ್ಯಥಾ ॥೭॥

ಶುಕನ ಬಗ್ಗೆ ಏನೆಲ್ಲ ಪ್ರಶ್ನಿಸಿದೆಯೋ ಇದಕ್ಕೆಲ್ಲ ಮೂಲಭೂತವಾದುದು ತಪಸ್ಸು. ಇಂದ್ರಿಯಗಳನ್ನು ನಿಯಂತ್ರಿಸಿಕೊಂಡಿರುವುದೇ ತಪಸ್ಸು. ಇದಕ್ಕಿಂತ ಅಧಿಕವಾದ ತಪಸ್ಸು ಯಾವುದೂ ಇರುವುದಿಲ್ಲ.

ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತ್ಯಸಂಶಯಮ್ ।
ಸನ್ನಿಯಮ್ಯ ತು ತಾನ್ಯೇವ ಸಿದ್ಧಿಂ ಪ್ರಾಪ್ನೋತಿ ಮಾನವಃ ॥೮॥

ಮನುಷ್ಯನ ಇಂದ್ರಿಯಗಳು ಸ್ವಚ್ಛಂದವಾಗಿ ಸಾಗುತ್ತಾ ಪಾಪಕರ್ಮದಲ್ಲೇ ಆಸಕ್ತವಾಗಿರುತ್ತವೆ. ಇದರಲ್ಲಿ ಸಂಶಯವಿಲ್ಲ. ಈ ಇಂದ್ರಿಯಗಳನ್ನು ನಿಗ್ರಹಿಸಿಕೊಂಡಲ್ಲಿ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ.

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ।
ಯೋಗಸ್ಯ ಕಲಯಾ ತಾತ ನ ತುಲ್ಯಂ ವಿದ್ಯತೇ ಫಲಮ್ ॥೯॥

ಸಾವಿರ ಅಶ್ವಮೇಧ, ನೂರು ವಾಜಪೇಯ ಯಾಗಗಳನ್ನು ಆಚರಿಸುವುದರಿಂದ ಯಾವ ಫಲವು ಲಭಿಸುತ್ತದೋ ಆ ಫಲವು ಯೋಗಸಿದ್ಧಿಯಿಂದ ಲಭಿಸುವ ಹದಿನಾರನೆಯ ಒಂದು ಅಂಶಕ್ಕೂ ಸಾಟಿಯಾಗದು.

ಅತ್ರ ತೇ ವರ್ತಯಿಷ್ಯಾಮಿ ಜನ್ಮಯೋಗಫಲಂ ಯಥಾ ।
ಶುಕಸ್ಯಾಗ್ರ್ಯಂ ಗತಿಂ ಚೈವ ದುರ್ವಿದಾಮಕೃತಾತ್ಮಭಿಃ ॥೧೦॥

ಯುಧಿಷ್ಠಿರನೇ, ನಿನಗೆ ಶುಕನ ಜನ್ಮವೃತ್ತಾಂತವನ್ನು, ಅವನು ಹೊಂದಿದ

ಯುಧಿಷ್ಠಿರ– ಪಿತಾಮಹನೇ, ವ್ಯಾಸರಿಗೆ ಮಹಾತಪಸ್ವಿಯಾದ ಧರ್ಮಾತ್ಮನಾದ ಶುಕನು ಹೇಗೆ ಹುಟ್ಟಿದನು? ಪರಮಸಿದ್ಧಿಯನ್ನು ಶುಕಮುನಿಯು ಹೇಗೆ ಹೊಂದಿದನು? ಈ ವಿಷಯವನ್ನು ತಿಳಿಸಿ.

ಕಸ್ಯಾಂ ಚೋತ್ಪಾದಯಾಮಾಸ ಶುಕಂ ವ್ಯಾಸಸ್ತಪೋಧನಃ ।
ನ ಹ್ಯಸ್ಯ ಜನನೀಂ ವಿದ್ಮ ಜನ್ಮ ಚಾಗ್ರ್ಯಂ ಮಹಾತ್ಮನಃ ॥೨॥

ತಪೋಧನರಾದ ವ್ಯಾಸರು ಯಾವ ಸ್ತ್ರೀಯ ಗರ್ಭದಿಂದ ಶುಕನನ್ನು ಪಡೆದರು? ಮಹಾತ್ಮನಾದ ಶುಕನ ತಾಯಿಯು ಯಾರು? ಅವನ ಜನ್ಮವೃತ್ತಾಂತವೇನು ಎಂಬುದು ನಮಗೆ ತಿಳಿದಿರುವುದಿಲ್ಲ.

ಕಥಂ ಚ ಬಾಲಸ್ಯ ಸತಃ ಸೂಕ್ಷ್ಮಜ್ಞಾನೇ ಗತಾ ಮತಿಃ ।
ಯಥಾ ನಾನ್ಯಸ್ಯ ಲೋಕೇಽಸ್ಮಿನ್ ದ್ವಿತೀಯಸ್ಯೇಹ ಕಸ್ಯಚಿತ್ ॥೩॥

ಬಾಲ್ಯದಲ್ಲಿಯೇ ಶುಕಮುನಿಗೆ ಹೇಗೆ ಭಗವದ್ವಿಷಯಕವಾದ ಸೂಕ್ಷ್ಮಜ್ಞಾನವು ದೊರೆಯಿತು? ಈ ಪ್ರಪಂಚದಲ್ಲಿ ಶುಕಮುನಿಗೆ ಹೊರತು ಯಾರಿಗೂ ಇಂತಹ ಭಗವದ್ವಿಷಯಕವಾದ ಸೂಕ್ಷ್ಮಜ್ಞಾನವು ಇರುವುದಿಲ್ಲ.

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ಮಹಾದ್ಯುತೇ ।
ನ ಹಿ ಮೇ ತೃಪ್ತಿರಸ್ತೀಹ ಶೃಣ್ವತೋಽಮೃತಮುತ್ತಮಮ್ ॥೪॥

ಬುದ್ಧಿಸಂಪನ್ನನೇ, ಈ ವಿಷಯದಲ್ಲಿ ವಿಸ್ತಾರವಾಗಿ ಕೇಳಬೇಕೆಂದಿದ್ದೇನೆ. ನಿನ್ನ ಅಮೃತಮಯವಾದ ಮಾತನ್ನು ಕೇಳುತ್ತಿರುವ ನನಗೆ ತೃಪ್ತಿಯುಂಟಾಗುತ್ತಿಲ್ಲ.

ಮಾಹಾತ್ಮ್ಯಮಾತ್ಮಯೋಗಂ ಚ ವಿಜ್ಞಾನಂ ಚ ಶುಕಸ್ಯ ಹ ।
ಯಥಾವದಾನುಪೂರ್ವ್ಯೇಣ ತನ್ಮೇ ಬ್ರೂಹಿ ಪಿತಾಮಹ ॥೫॥

ಪಿತಾಮಹನೇ, ಶುಕದೇವರಲ್ಲಿರುವ ಮಹಿಮೆ, ಪರಮಾತ್ಮನ ಯೋಗ, ವಿಜ್ಞಾನ ಇವುಗಳನ್ನು ಕ್ರಮವಾಗಿ ನನಗೆ ತಿಳಿಸು.

ಭೀಷ್ಮಃ

ನ ಹಾಯನೈರ್ನ ಪಲಿತೈರ್ನ ವಿತ್ತೇನ ನ ಬಂಧುಭಿಃ ।
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸ ನೋ ಮಹಾನ್ ॥೬॥

ಭೀಷ್ಮ– ವಯಸ್ಸಿನಿಂದ, ಕೂದಲು ಬಿಳಿಯಾಗಿರುವುದರಿಂದ, ಧನದ ಸಂಬಂಧದಿಂದ, ಅಧಿಕ ಬಾಂಧವರಿಂದ ಮನುಷ್ಯನು ಧರ್ಮಾತ್ಮನೆನಿಸುವುದಿಲ್ಲ. ಯಾವನು ಪರಂಪರಾಪ್ರಾಪ್ತವಾದ ಷಡಂಗವೇದವನ್ನು ಅಧ್ಯಯನ ಮಾಡಿರುತ್ತಾನೋ ಅವನೇ ಎಲ್ಲರಿಗಿಂತ ಶ್ರೇಷ್ಠನು. ಋಷಿಗಳು ಹೀಗೆ ಧರ್ಮದ ಮಹತ್ವವನ್ನು ಹೇಳಿರುತ್ತಾರೆ.

ತಪೋಮೂಲಮಿದಂ ಸರ್ವಂ ಯನ್ಮಾಂ ಪೃಚ್ಛಸಿ ಪಾಂಡವ ।
ತದಿಂದ್ರಿಯಾಣಿ ಸಂಯಮ್ಯ ತಪೋ ಭವತಿ ನಾನ್ಯಥಾ ॥೭॥

ಶುಕನ ಬಗ್ಗೆ ಏನೆಲ್ಲ ಪ್ರಶ್ನಿಸಿದೆಯೋ ಇದಕ್ಕೆಲ್ಲ ಮೂಲಭೂತವಾದುದು ತಪಸ್ಸು. ಇಂದ್ರಿಯಗಳನ್ನು ನಿಯಂತ್ರಿಸಿಕೊಂಡಿರುವುದೇ ತಪಸ್ಸು. ಇದಕ್ಕಿಂತ ಅಧಿಕವಾದ ತಪಸ್ಸು ಯಾವುದೂ ಇರುವುದಿಲ್ಲ.

ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತ್ಯಸಂಶಯಮ್ ।
ಸನ್ನಿಯಮ್ಯ ತು ತಾನ್ಯೇವ ಸಿದ್ಧಿಂ ಪ್ರಾಪ್ನೋತಿ ಮಾನವಃ ॥೮॥

ಮನುಷ್ಯನ ಇಂದ್ರಿಯಗಳು ಸ್ವಚ್ಛಂದವಾಗಿ ಸಾಗುತ್ತಾ ಪಾಪಕರ್ಮದಲ್ಲೇ ಆಸಕ್ತವಾಗಿರುತ್ತವೆ. ಇದರಲ್ಲಿ ಸಂಶಯವಿಲ್ಲ. ಈ ಇಂದ್ರಿಯಗಳನ್ನು ನಿಗ್ರಹಿಸಿಕೊಂಡಲ್ಲಿ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ.

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ।
ಯೋಗಸ್ಯ ಕಲಯಾ ತಾತ ನ ತುಲ್ಯಂ ವಿದ್ಯತೇ ಫಲಮ್ ॥೯॥

ಸಾವಿರ ಅಶ್ವಮೇಧ, ನೂರು ವಾಜಪೇಯ ಯಾಗಗಳನ್ನು ಆಚರಿಸುವುದರಿಂದ ಯಾವ ಫಲವು ಲಭಿಸುತ್ತದೋ ಆ ಫಲವು ಯೋಗಸಿದ್ಧಿಯಿಂದ ಲಭಿಸುವ ಹದಿನಾರನೆಯ ಒಂದು ಅಂಶಕ್ಕೂ ಸಾಟಿಯಾಗದು.

ಅತ್ರ ತೇ ವರ್ತಯಿಷ್ಯಾಮಿ ಜನ್ಮಯೋಗಫಲಂ ಯಥಾ ।
ಶುಕಸ್ಯಾಗ್ರ್ಯಂ ಗತಿಂ ಚೈವ ದುರ್ವಿದಾಮಕೃತಾತ್ಮಭಿಃ ॥೧೦॥

ಯುಧಿಷ್ಠಿರನೇ, ನಿನಗೆ ಶುಕನ ಜನ್ಮವೃತ್ತಾಂತವನ್ನು, ಅವನು ಹೊಂದಿದ

ಯೋಗಸಿದ್ಧಿಯನ್ನು, ಸಾಮಾನ್ಯರು ಹೊಂದಲು ಸಾಧ್ಯವಿಲ್ಲದ ಉತ್ತಮ ಗತಿಯನ್ನು ತಿಳಿಸುತ್ತೇನೆ.

ಮೇರುಶೃಂಗೀ ಕಿಲ ಪುರಾ ಕರ್ಣಿಕಾರವನಾಯುತೇ ।
ವಿಜಹಾರ ಮಹಾದೇವೋ ಭೀಮೈರ್ಭೂತಗಣೈರ್ವೃತಃ ॥೧೧॥

ಹಿಂದೆ ಕರ್ಣಿಕಾರ ಎಂಬ ವನದಿಂದ ಶೋಭಿತವಾದ ಮೇರುಪರ್ವತದ ಶಿಖರದಲ್ಲಿ ಭಗವಂತನಾದ ಶಂಕರನು ಭೂತಗಳಿಂದ ಆವೃತನಾಗಿ ವಿಹರಿಸುತ್ತಿದ್ದನು.

ಶೈಲರಾಜಸುತಾ ಚೈವ ದೇವೀ ತತ್ರಾಭವತ್ ಪುರಾ ।
ತತ್ರ ದಿವ್ಯಂ ತಪಸ್ತೇಪೇ ಕೃಷ್ಣದ್ವೈಪಾಯನಃ ಪ್ರಭುಃ ॥೧೨॥

ಶೈಲರಾಜ ಸುತೆಯಾದ ಸತೀದೇವಿಯು ಶಿವನ ಜೊತೆಗೆ ಇದ್ದಳು. ಅದೇ ಸಮಯದಲ್ಲಿ ಕೃಷ್ಣದ್ವೈಪಾಯನರೆನಿಸಿದ ವ್ಯಾಸರು ತಪಸ್ಸನ್ನು ಮಾಡುತ್ತಿದ್ದರು.

ಯೋಗೇನಾತ್ಮಾನಮಾವಿಶ್ಯ ಯೋಗಧರ್ಮಪರಾಯಣಃ ।
ಧಾರಯನ್ ಸ ತಪಸ್ತೇಪೇ ಪುತ್ರಾರ್ಥಂ ಕುರುಸತ್ತಮ ॥೧೩॥

ಯೋಗಧರ್ಮಾಸಕ್ತರಾದ ವ್ಯಾಸರು ಯೋಗದ ಮೂಲಕ ತನ್ನ ಮನಸ್ಸಿನಲ್ಲಿ ಧ್ಯಾನಾಸಕ್ತರಾಗಿ ಪುತ್ರನಿಗಾಗಿ ತಪಸ್ಸನ್ನು ಮಾಡಿದರು.

ಅಗ್ನೇರ್ಭೂಮೇರಪಾಂ ವಾಯೋರಂತರಿಕ್ಷಸ್ಯ ಚಾಭಿಭೋ ।
ವೀರ್ಯೇಣ ಸಮ್ಮಿತಃ ಪುತ್ರೋ ಮಮ ಭೂಯಾದಿತಿ ಸ್ಮ ಹ ॥೧೪॥

ವ್ಯಾಸರು ತಮಗೆ ಅಗ್ನಿ, ಭೂಮಿ, ಜಲ, ವಾಯು, ಆಕಾಶ ಇವುಗಳ ವೀರ್ಯಕ್ಕೆ ಸಮಾನವಾದ ಮಗನು ಹುಟ್ಟಲಿ ಎಂದು ತಪಸ್ಸನ್ನಾಚರಿಸುತ್ತಿದ್ದರು.

ಸಂಕಲ್ಪೇನಾಥ ಸೋನೇನ ದುಷ್ಪ್ರಾಪೇಣಾಕೃತಾತ್ಮಭಿಃ ।
ವರಯಾಮಾಸ ದೇವೇಶಮಾಸ್ಥಿತಸ್ತಪ ಉತ್ತಮಮ್ ॥೧೫॥

ಈ ರೀತಿಯಾದ ಸಂಕಲ್ಪದಿಂದ ಯೋಗದಿಂದ ಉತ್ತಮ ತಪೋನಿರತರಾದ ವ್ಯಾಸರು ಅಜಿತೇಂದ್ರಿಯರಿಂದ ಹೊಂದಲು ದುಸ್ಸಾಧ್ಯವಾದ ವರವನ್ನು ದೇವೇಶನಾದ ಮಹಾದೇವನಿಂದ ಪ್ರಾರ್ಥಿಸಿದರು.

ಅತಿಷ್ಠನ್ ಮಾರುತಾಹಾರಃ ಶತಂ ಕಿಲ ಸಮಾಃ ಪ್ರಭುಃ ।
ಆರಾಧಯನ್ಮಹಾದೇವಂ ಬಹುರೂಪಮುಮಾಪತಿಮ್ ॥೧೬॥

ಶಕ್ತಿಶಾಲಿಗಳಾದ ವ್ಯಾಸರು ನೂರುವರ್ಷ ಪರ್ಯಂತ ಗಾಳಿಯನ್ನೇ ಆಹಾರವನ್ನಾಗಿ ಸ್ವೀಕರಿಸಿ, ಅನೇಕ ರೂಪಿಯಾದ, ಉಮಾಪತಿಯಾದ ಮಹಾದೇವನನ್ನು ಆರಾಧಿಸಿದರು.

ತತ್ರ ಬ್ರಹ್ಮರ್ಷಯಶ್ಚೈವ ಸರ್ವೇ ದೇವರ್ಷಯಸ್ತಥಾ ।
ಲೋಕಪಾಲಾಶ್ಚ ಲೋಕೇಶಂ ಸಾಧ್ಯಾಶ್ಚ ವಸುಭಿಃ ಸಹ ॥೧೭॥

ಮೇರುಪರ್ವತದ ಶಿಖರದಲ್ಲಿ ಎಲ್ಲ ಬ್ರಹ್ಮರ್ಷಿಗಳು, ದೇವರ್ಷಿಗಳು, ಲೋಕಪಾಲರು, ಸಾಧ್ಯರು, ವಸುಗಳಿಂದ ಕೂಡಿಕೊಂಡಿದ್ದರು.

ಆದಿತ್ಯಾಶ್ಚೈವ ರುದ್ರಾಶ್ಚ ದಿವಾಕರನಿಶಾಕರೌ ।
ಮರುತೋ ಮಾರುತಶ್ಚೈವ ಸಾಗರಾಃ ಸರಿತಸ್ತಥಾ ॥೧೮॥

ಅಶ್ವಿನೌ ದೇವಗಂಧರ್ವಾಸ್ತಥಾ ನಾರದಪರ್ವತೌ ।
ವಿಶ್ವಾವಸುಶ್ಚ ಗಂಧರ್ವಃ ಸಿದ್ಧಾಶ್ಚಾಪ್ಸರಸಾಂ ಗಣಾಃ ॥೧೯॥

ಆದಿತ್ಯರು, ರುದ್ರರು, ಸೂರ್ಯ-ಚಂದ್ರರು, ಮರುತ್ತುಗಳು, ಮುಖ್ಯಪ್ರಾಣನು, ಸಾಗರಗಳು, ನದಿಗಳು, ಅಶ್ವಿನೀದೇವತೆಗಳು, ದೇವ-ಗಂಧರ್ವರು, ನಾರದರು, ಪರ್ವತರು, ವಿಶ್ವಾವಸು ಎಂಬ ಗಂಧರ್ವರಾಜನು, ಸಿದ್ಧರು, ಅಪ್ಸರಸ್ತ್ರೀ ಗಣವು ಎಲ್ಲವೂ ಸೇರಿತ್ತು.

ತತ್ರ ರುದ್ರೋ ಮಹಾದೇವಃ ಕರ್ಣಿಕಾರಮಯೀಂ ಶುಭಾಮ್ ।
ಧಾರಯಾಣಃ ಸ್ರಜಂ ಭಾತಿ ಜ್ಯೋತ್ಸ್ನಾಮಿವ ನಿಶಾಕರಃ ॥೨೦॥

ಅಲ್ಲಿ ಮಹಾದೇವನಾದ ರುದ್ರನು ಮಂಗಳಕರವಾದ, ಕರ್ಣಿಕಾರಪುಷ್ಪಮಯವಾದ ಮಾಲೆಯನ್ನು ಧರಿಸಿ ಬೆಳದಿಂಗಳಿಂದ ಕೂಡಿದ ಚಂದ್ರನಂತೆ ಬೆಳಗುತ್ತಿದ್ದನು.

ತಸ್ಮಿಂದಿವ್ಯೇ ವನೇ ರಮ್ಯೇ ದೇವದೇವರ್ಷಿಸಂಕುಲೇ ।
ಆಸ್ಥಿತಃ ಪರಮಂ ಯೋಗಮೃಷಿಃ ಪುತ್ರಾರ್ಥಮುದ್ಯತಃ ॥೨೧॥

ದೇವರ್ಷಿಗಳಿಂದ ಕೂಡಿದ ದಿವ್ಯವಾದ, ರಮಣೀಯವಾದ ವನದಲ್ಲಿ ಶ್ರೇಷ್ಠವಾದ ವನವನ್ನು ಆಶ್ರಯಿಸಿ ಧೀರರಾದ ವ್ಯಾಸರು ಪುತ್ರರನ್ನು ಪಡೆಯಲು ತಪಸ್ಸಿನ ಪ್ರಯತ್ನದಲ್ಲಿದ್ದರು.

ನ ಚಾಸ್ಯ ಹೀಯತೇ ವರ್ಣೋ ನ ಗ್ಲಾನಿರುಪಜಾಯತೇ ।
ತ್ರಯಾಣಾಮಪಿ ಲೋಕಾನಾಂ ತದದ್ಭುತಮಿವಾಭವತ್ ॥೨೨॥

ಅಂತಹ ಕಠಿಣ ತಪಸ್ಸನ್ನಾಚರಿಸಿದ ವ್ಯಾಸರ ಪ್ರಾಣಗಳು ಸ್ಥಿರವಾಗಿಯೇ ಇದ್ದವು. ಅವರಿಗೆ ಯಾವುದೇ ಆಯಾಸವೂ ಇರಲಿಲ್ಲ. ಮೂರುಲೋಕಗಳಿಗೂ ಇದು ಆಶ್ಚರ್ಯಕರವಾಗಿ ತೋರುತ್ತಿತ್ತು.

ಜಟಾಶ್ಚ ತೇಜಸಾ ತಸ್ಯ ವೈಶ್ವಾನರಶಿಖೋಪಮಾಃ ।
ಪ್ರಜ್ವಲಂತ್ಯಃ ಸ್ಮ ದೃಶ್ಯಂತೇ ಯುಕ್ತಸ್ಯಾಮಿತತೇಜಸಃ ॥೨೩॥

ತೇಜಸ್ವಿಗಳಾದ ವ್ಯಾಸರ ಜಟೆಗಳು ತಪಸ್ಸಿನಿಂದ ಅಗ್ನಿಯಿಂದ ಪ್ರಜ್ವಲಿಸುವಂತೆ ತೋರುತ್ತಿದ್ದವು.

ಮಾರ್ಕಂಡೇಯೋ ಹಿ ಭಗವಾನೇತದಾಖ್ಯಾತವಾನ್ಮಮ ।
ಸ ದೇವಚರಿತಾನೀಹ ಕಥಯಾಮಾಸ ಮೇ ಸದಾ ॥೨೪॥

ಪೂಜ್ಯರಾದ ಮಾರ್ಕಂಡೇಯರು ಈ ವಿಷಯವನ್ನು ನನಗೆ ಹೇಳಿರುತ್ತಾರೆ. ಭಗವಂತನ ಈ ಮಹಿಮೆಗಳನ್ನು ಯಾವಾಗಲೂ ನನಗೆ ಕೇಳಿಸುತ್ತಿದ್ದರು.

ತಾ ಏತಾದ್ಯಾಪಿ ಕೃಷ್ಣಸ್ಯ ತಪಸಾ ತೇನ ದೀಪಿತಾಃ ।
ಅಗ್ನಿವರ್ಣಾ ಜಟಾಸ್ತಾತ ಪ್ರಕಾಶಂತೇ ಮಹಾತ್ಮನಃ ॥೨೫॥

ಆಗ ತಪಸ್ಸಿನಿಂದ ಬೆಳಗಿದ ವ್ಯಾಸರ ಜಟೆಗಳ ತೇಜಸ್ಸು ಈಗಲೂ ಅಗ್ನಿವರ್ಣದಿಂದಲೇ ಬೆಳಗುತ್ತಿದೆ.

ಏವಂವಿಧೇನ ತಪಸಾ ತಸ್ಯ ಭಕ್ತ್ಯಾ ಚ ಭಾರತ ।
ಮಹೇಶ್ವರಃ ಪ್ರಸನ್ನಾತ್ಮಾ ಚಕಾರ ಮನಸಾ ಮತಿಮ್ ॥೨೬॥

ವ್ಯಾಸರ ಇಂತಹ ತಪಸ್ಸಿನಿಂದಲೂ, ಭಕ್ತಿಯಿಂದಲೂ ಪ್ರಸನ್ನನಾದ ಮಹರುದ್ರನು ವ್ಯಾಸರಿಗೆ ಅಭೀಷ್ಟವಾದ ವರವನ್ನು ಕೊಡಲು ಮನಸ್ಸಿನಲ್ಲಿಯೇ ನಿಶ್ಚಯಿಸಿದನು.

ಉವಾಚ ಚೈನಂ ಭಗವಾಂಸ್ತ್ರ್ಯಂಬಕಃ ಪ್ರಹಸನ್ನಿವ ।
ಏವಂವಿಧಸ್ತೇ ತನಯೋ ದ್ವೈಪಾಯನ ಭವಿಷ್ಯತಿ ॥೨೭॥

ತ್ರಯಂಬಕನಾದ ಭಗವಾನ್ ಮಹರುದ್ರನು ವ್ಯಾಸರ ಬಳಿ ಬಂದು, ನಗುವ ಮುಖಭಾವದಿಂದ ಕೂಡಿದವನಾಗಿ ಹೀಗೆ ಹೇಳಿದನು:ದ್ವೈಪಾಯನರೇ, ನಿಮಗೆ ನನ್ನಂತಹ ಮಗನೇ ಹುಟ್ಟುತ್ತಾನೆ ಎಂದು.

ಯಥಾ ಹ್ಯಗ್ನಿರ್ಯಥಾ ವಾಯುರ್ಯಥಾ ಭೂಮಿರ್ಯಥಾ ಜಲಮ್ ।
ಯಥಾ ಚ ಖಂ ತಥಾ ಶುದ್ಧೋ ಭವಿಷ್ಯತಿ ಸುತೋ ಮಹಾನ್ ॥೨೮॥

ಯಾವ ರೀತಿ ಅಗ್ನಿ, ವಾಯು, ಭೂಮಿ, ಜಲ, ಅಂತರಿಕ್ಷ ಇವುಗಳು ಶುದ್ಧವಾಗಿವೆಯೋ ಅದೇ ರೀತಿ ಪರಿಶುದ್ಧನಾದ ಮಗನು ಹುಟ್ಟುತ್ತಾನೆ ಎಂದನು.

ತದ್ಭಾವಭಾವೀ ತದ್ ಬುದ್ಧಿಸ್ತದಾತ್ಮಾ ತದಪಾಶ್ರಯಃ ।
ತೇಜಸಾವೃತ್ಯ ಲೋಕಾಂಸ್ತ್ರೀನ್ ಯಶಃ ಪ್ರಾಪ್ಸ್ಯತಿ ಕೇವಲಮ್ ॥೨೯॥

ನಿನ್ನ ಮಗನು ಯಾವಾಗಲೂ ಭಗವದ್ ಜ್ಞಾನದಲ್ಲೇ ಆಸಕ್ತವಾಗಿರುತ್ತಾನೆ. ಬುದ್ಧಿಯು, ಮನಸ್ಸು ಪರಮಾತ್ಮನಲ್ಲಿಯೇ ವಿಲೀನವಾಗಿರುತ್ತದೆ. ಭಗವಂತನನ್ನೇ ನಿನ್ನ ಮಗನು ಆಶ್ರಯಿಸಿರುತ್ತಾನೆ. ಅವನ ತೇಜಸ್ಸು ಮೂರುಲೋಕದಲ್ಲಿಯೂ ವ್ಯಾಪಿಸಿರುತ್ತದೆ. ಮಹಾಕೀರ್ತಿ ಸಂಪನ್ನನಾಗಿರುತ್ತಾನೆ ಎಂದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಪಂಚಾಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತಾರನೆಯ ಅಧ್ಯಾಯ

ಶುಕಮುನಿಯ ಜನ್ಮ ಮೊದಲಾದ ವೃತ್ತಾಂತ

ಭೀಷ್ಮಃ

ಸ ಲಬ್ಧ್ವಾ ಪರಮಂ ದೇವಾದ್ವರಂ ಸತ್ಯವತೀಸುತಃ ।
ಅರಣೇಂ ತಥ ಸಂಗೃಹ್ಯ ಮಮಂಥಾಗ್ನಿಚಿಕೀರ್ಷಯಾ ॥೧॥

ಭೀಷ್ಮ– ಯುಧಿಷ್ಠಿರನೇ, ಸತ್ಯವತೀ ಸುತರಾದ ವ್ಯಾಸರು ಮಹದೇವನಿಂದ ಶ್ರೇಷ್ಠವಾದ ವರವನ್ನು ಪಡೆದು, ಆಶ್ರಮಕ್ಕೆ ಆಗಮಿಸಿ, ಅಗ್ನಿಯನ್ನು ಪಡೆಯುವ ದೃಷ್ಟಿಯಿಂದ ಎರಡು ಅಗ್ನಿಮಂಥನ ದಂಡನಗಳನ್ನು ಹಿಡಿದುಕೊಂಡು ಮಥನ ಮಾಡಲು ಆರಂಭಿಸಿದರು.

ಅಥ ರೂಪಂ ಪರಂ ರಾಜನ್ ಬಿಭ್ರತೀಂ ಸ್ವೇನ ತೇಜಸಾ ।
ಘೃತಾಚೀಂ ನಾಮಾಪ್ಸರಸಮಪಶ್ಯದ್ ಭಗವಾನೃಷಿಃ ॥೨॥

ಆ ಸಮಯದಲ್ಲಿ ವ್ಯಾಸರು ಶ್ರೇಷ್ಠವಾದ ತೇಜಸ್ಸಿನಿಂದ ಬೆಳಗುವ, ಪರಮಶ್ರೇಷ್ಠ ರೂಪವನ್ನು ಧರಿಸಿರುವ ಘೃತಾಚಿ ಎಂಬ ಅಪ್ಸರೆಯನ್ನು ನೋಡಿದರು.

ಋಷಿರಪ್ಸರಸಂ ದೃಷ್ಟ್ವಾ ಸಹಸಾ ಕಾಮಮೋಹಿತಃ ।
ಅಭವದ್ ಭಗವಾನ್ ವ್ಯಾಸೋ ವನೇ ತಸ್ಮಿನ್ ಯುಧಿಷ್ಠಿರ ॥೩॥

ಅದೇ ಸಮಯದಲ್ಲಿ ಆ ಅರಣ್ಯದಲ್ಲಿದ್ದ ವ್ಯಾಸರು ಅಪ್ಸರೆಯನ್ನು ನೋಡಿ ಕೂಡಲೇ ಕಾಮಮೋಹಿತರಾದರು.

ಸಾ ಚ ಕೃತ್ವಾ ತದಾ ವ್ಯಾಸಂ ಕಾಮಸಂವಿಗ್ನಮಾನಸಮ್ ।
ಶುಕೀ ಭೂತ್ವಾ ಮಹಾರಾಜ ಘೃತಾಚೀ ಸಮುಪಾಗಮತ್ ॥೪॥

ಕಾಮದಿಂದ ವ್ಯಾಕುಲಿತ ಮನಸ್ಕಳಾದ ಘೃತಾಚಿಯು ಗಿಳಿಯ ರೂಪವನ್ನು ಧರಿಸಿ ಮಹರ್ಷಿಗಳ ಸಮೀಪಕ್ಕೆ ಸಾಗಿದಳು.

ಸ ತಾಮಪ್ಸರಸಂ ದೃಷ್ಟ್ವಾ ರೂಪೇಣಾನ್ಯೇನ ಸಂವೃತಾಮ್ ।
ಶರೀರಜೇನಾನುಗತಃ ಸರ್ವಗಾತ್ರಾತಿಗೇನ ಹ ॥೫॥

ಬೇರೆ ರೂಪವನ್ನು ಧರಿಸಿ ಬಂದ ಅಪ್ಸರೆಯನ್ನು ಕಂಡ ವ್ಯಾಸರ ಅಂಗಾಂಗಗಳಲ್ಲಿ ಪ್ರಚೋದನೆಗಳು ಉಂಟಾದವು.

ಸ ತು ಧೈರ್ಯೇಣ ಮಹತಾ ನಿಗೃಹ್ಣನ್ ಹೃಚ್ಛಯಂ ಮುನಿಃ ।
ನ ಶಶಾಕ ನಿಯಂತುಂ ತದ್ ವ್ಯಾಸಃ ಪ್ರವಿಸೃತಂ ಮನಃ ।
ಭಾವಿತ್ವಾಚ್ಚೈವ ಭಾವಸ್ಯ ಘೃತಾಚ್ಯಾ ವಪುಷಾ ಹೃತಃ ॥೬॥

ವ್ಯಾಸರು ಮಹಾಧೈರ್ಯವನ್ನು ಅವಲಂಬಿಸಿ ಹೃದಯದಲ್ಲಿ ಆಕ್ರಮಿಸಿದ ಕಾಮವನ್ನು ನಿಗ್ರಹಿಸಲು ಯತ್ನಿಸಿದರು. ಆದರೆ ಅಪ್ಸರೆಯ ಕಡೆ ಆಕರ್ಷಿತವಾದ ತಮ್ಮ ಮನಸ್ಸನ್ನು ನಿಯಂತ್ರಿಸಲು ವ್ಯಾಸರಿಗೆ ಸಾಧ್ಯವಾಗಲಿಲ್ಲ.

ಯತ್ನಾನ್ನಿಯಚ್ಛತಸ್ತಸ್ಯ ಮುನೇರಗ್ನಿಚಿಕೀರ್ಷಯಾ ।
ಅರಣ್ಯಾಮೇವ ಸಹಸಾ ತಸ್ಯ ಶುಕ್ರಮವಾಪತತ್ ॥೭॥

ಪ್ರಯತ್ನದಿಂದ ಕಾಮೋದ್ವೇಗವನ್ನು ನಿಗ್ರಹಿಸುವ ಸಂದರ್ಭದಲ್ಲಿಯೇ ಅಗ್ನಿಗಾಗಿ ಅರಣಿಮಥನ ಮಾಡುತ್ತಿದ್ದ ಅವರ ವೀರ್ಯವು ಅರಣಿಯಲ್ಲಿ ಬಿದ್ದಿತು.

ಸೋಽವಿಶಂಕೇನ ಮನಸಾ ತಥೈವ ದ್ವಿಜಸತ್ತಮಃ ।
ಅರಣೀಂ ಮಮಂಥ ಬ್ರಹ್ಮರ್ಷಿಸ್ತಸ್ಯಾಂ ಜಜ್ಞೇ ಶುಕೋ ನೃಪ ॥೮॥

ವ್ಯಾಸರು ಯಾವ ಶಂಕೆಯೂ ಇಲ್ಲದ ಮನಸ್ಸಿನಿಂದ ಅರಣಿಯನ್ನು ಮಥನ ಮಾಡಿದಾಗ ಅದರ ಮಧ್ಯದಲ್ಲಿಯೇ ಅಗ್ನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ ಶುಕಮುನಿಯು ಜನ್ಮತಾಳಿದನು.

ಶುಕ್ರೇ ನಿರ್ಮಥ್ಯಮಾನೇ ತು ಶುಕೋ ಜಜ್ಞೇ ಮಹಾತಪಾಃ ।
ಪರಮರ್ಷಿರ್ಮಹಾಯೋಗೀ ಅರಣೇಗರ್ಭಸಂಭವಃ ॥೯॥

ಅರಣಿಯಲ್ಲಿ ವೀರ್ಯವನ್ನು ಮಥಿಸಿದಾಗ ಮಹಾತಪಸ್ವಿಯಾದ ಶುಕನು ಹುಟ್ಟಿದನು. ಆದ್ದರಿಂದಲೇ ಪರಮ ತಪಸ್ವಿಯೂ, ಮಹರ್ಷಿಯೂ, ಮಹಾಯೋಗಿಯೂ, ಅರಣಿಗರ್ಭಸಂಭೂತನೂ ಎಂದು ಕರೆಸಿಕೊಂಡನು.

ಯಥಾದ್ವರೇ ಸಮಿದ್ಧೋಗ್ನಿರ್ಭಾತಿ ಹವ್ಯಮುಪಾತ್ತವಾನ್ ।
ತಥಾರೂಪಃ ಶುಕೋ ಜಜ್ಞೇ ಪ್ರಜ್ವಲನ್ನಿವ ತೇಜಸಾ ॥೧೦॥

ಯಾವ ರೀತಿ ಯಜ್ಞದಲ್ಲಿ ಚೆನ್ನಾಗಿ ಹುತಮಾಡಿದ ಅಗ್ನಿಯು ಹವಿಸ್ಸನ್ನು ಧರಿಸಿ ಪ್ರಜ್ವಲಿಸುತ್ತದೋ ಹಾಗೆ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ಅಗ್ನಿಗೆ ಸಮಾನರೂಪನಾದ ಶುಕನು ಹುಟ್ಟಿದನು.

ಬಿಭ್ರತ್ಪಿತುಶ್ಚ ಕೌರವ್ಯ ರೂಪವರ್ಣಮನುತ್ತಮಮ್ ।
ಬಭೌ ತದಾ ಭಾವಿತಾತ್ಮಾ ವಿಧೂಮೋಽಗ್ನಿರಿವ ಜ್ವಲನ್ ॥೧೧॥

ತನ್ನ ತಂದೆಯಂತೆ ಶ್ರೇಷ್ಠವಾದ ರೂಪ-ವರ್ಣಗಳನ್ನು ಹೊಂದಿರುವ ಪವಿತ್ರಾತ್ಮನಾದ ಶುಕನು ಧೂಮರಹಿತನಾದ ಯಜ್ಞೇಶ್ವರನಂತೆ ವಿರಾಜಮಾನನಾದನು.

ತಂ ಗಂಗಾ ಸರಿತಾಂ ಶ್ರೇಷ್ಠಾ ಮೇರುಪೃಷ್ಠೇ ಜನೇಶ್ವರ ।
ಸ್ವರೂಪಿಣೀ ತದಾಭ್ಯೇತ್ಯ ಸ್ನಾಪಯಾಮಾಸ ವಾರಿಣಾ ॥೧೨॥

ಆ ಸಮಯದಲ್ಲಿ ಹರಿಯುವ ನದಿಗಳಲ್ಲಿ ಶ್ರೇಷ್ಠಳೆನಿಸಿದ ಗಂಗಾದೇವಿಯು ದಿವ್ಯವಾದ ಸ್ತ್ರೀರೂಪವನ್ನು ಧರಿಸಿ ಮೇರುಪರ್ವತಕ್ಕೆ ಆಗಮಿಸಿ ಶುಕನನ್ನು ನೀರಿನಿಂದ ಶುದ್ಧಿಗೊಳಿಸಿದಳು.

ಅಂತರಿಕ್ಷಾಚ್ಚ ಕೌರವ್ಯ ದಂಡಃ ಕೃಷ್ಣಾಜಿನಂ ಚ ಹ ।
ಪಪಾತ ಭುವಿ ರಾಜೇಂದ್ರ ಶುಕಸ್ಯಾರ್ಥೇ ಮಹಾತ್ಮನಃ ॥೧೩॥

ಶುಕನಿಗಾಗಿ ಅಂತರಿಕ್ಷದಿಂದ ದಂಡ-ಕೃಷ್ಣಾಜಿನಗಳು ಭೂಮಿಯ ಮೇಲೆ ಬಿದ್ದವು.

ಜೇಗೀಯಂತೇ ಸ್ಮ ಗಂಧರ್ವಾ ನನೃತುಶ್ಚಾಪ್ಸರೋಗಣಾಃ ।
ದೇವದುಂದುಭಯಶ್ಚೈವ ಪ್ರಾವಾದ್ಯಂತ ಮಹಾಸ್ವನಾಃ ॥೧೪॥

ಶುಕನ ಜನ್ಮದ ಸಮಯದಲ್ಲಿ ಗಂಧರ್ವರು ಗಾಯನ ಮಾಡುತ್ತಿದ್ದರೆ, ಅಪ್ಸರೆಯರು ನರ್ತನ ಮಾಡುತ್ತಿದ್ದರು. ಉಚ್ಚಸ್ವರದಿಂದ ದೇವದುಂದುಭಿಗಳು ಮೊಳಗಿದವು.

ವಿಶ್ವಾವಸುಶ್ಚ ಗಂಧರ್ವಸ್ತಥಾ ತುಂಬುರುನಾರದೌ ।
ಹಾಹಾಹೂಹೂ ಚ ಗಂಧರ್ವೌ ತುಷ್ಟುವುಃ ಶುಕಸಂಭವಮ್ ॥೧೫॥

ಗಂಧರ್ವರಾಜನಾದ ವಿಶ್ವಾವಸು, ತುಂಬುರು-ನಾರದರು, ಹಾಹಾ-ಹೂಹೂ ಎಂಬ ಗಂಧರ್ವರು ಶುಕನ ಜನ್ಮೋತ್ಸವವನ್ನು ಅನೇಕ ವಿಧವಾಗಿ ಸ್ತುತಿಸಿದರು.

ತತ್ರ ಶಕ್ರಪುರೋಗಾಶ್ಚ ಲೋಕಪಾಲಾಃ ಸಮಾಗತಾಃ ।
ದೇವಾ ದೇವರ್ಷಯಶ್ಚೈವ ತಥಾ ಬ್ರಹ್ಮರ್ಷಯೋಽಪಿ ಚ ॥೧೬॥

ಶುಕನಿರುವ ಮೇರುಶಿಖರಕ್ಕೆ ಇಂದ್ರನೇ ಮೊದಲಾದ ಲೋಕಪಾಲಕರು, ದೇವತೆಗಳು, ದೇವರ್ಷಿಗಳು ಮತ್ತು ಬ್ರಹ್ಮರ್ಷಿಗಳು ಆಗಮಿಸಿದರು.

ದಿವ್ಯಾನಿ ಸರ್ವಪುಷ್ಪಾಣಿ ಪ್ರವವರ್ಷಾತ್ರ ಮಾರುತಃ ।
ಜಂಗಮಂ ಸ್ಥಾವರಂ ಚೈವ ಪ್ರಹೃಷ್ಟಮಭವಜ್ಜಗತ್ ॥೧೭॥

ವಾಯುದೇವನು ದೇವಲೋಕದ ಎಲ್ಲ ರೀತಿಯಾದ ಪುಷ್ಪಗಳನ್ನು ಶುಕನ ಮೇಲೆ ಮಳೆ ಸುರಿಸಿದನು. ಶುಕನ ಉತ್ಪತ್ತಿಯಿಂದ ಚರಾಚರ ಸಹಿತವಾದ ಸಕಲ ಜಗತ್ತು ಸಂತುಷ್ಟವಾಯಿತು.

ತಂ ಮಹಾತ್ಮಾ ಸ್ವಯಂ ಪ್ರೀತ್ಯಾ ದೇವ್ಯಾ ಸಹ ಮಹಾದ್ಯುತಿಃ ।
ಜಾತಮಾತ್ರಂ ಮುನೇಃ ಪುತ್ರಂ ವಿಧಿನೋಪಾನಯತ್ತದಾ ॥೧೮॥

ಮಹಾಕಾಂತಿ ಸಂಪನ್ನನಾದ, ಮಹಾತ್ಮನಾದ ಮಹಾದೇವನು ಪಾರ್ವತಿದೇವಿಯ ಜೊತೆ ಅಲ್ಲಿಗೆ ಆಗಮಿಸಿ, ಹುಟ್ಟಿದ ವ್ಯಾಸಮುನಿಯ ಮಗನಿಗೆ ವಿಧಿಪೂರ್ವಕವಾಗಿ ತಾನೇ ಉಪನಯನ ಸಂಸ್ಕಾರವನ್ನು ಮಾಡಿದನು.

ತಸ್ಯ ದೇವೇಶ್ವರಃ ಶಕ್ರೋ ದಿವ್ಯಮದ್ಭುತದರ್ಶನಮ್ ।
ದದೌ ಕಮಂಡಲುಂ ಪ್ರೀತ್ಯಾ ದೇವವಾಸಾಂಸಿ ಚಾಭಿಭೋ ॥೧೯॥

ದೇವೇಶ್ವರನಾದ ಇಂದ್ರನು ಶುಕನಿಗೆ ದಿವ್ಯವಾದ, ಅದ್ಭುತವಾದ ಕಮಂಡಲವನ್ನು, ದೇವೋಚಿತವಾದ ವಸ್ತ್ರಗಳನ್ನು ಪ್ರೀತಿಪೂರ್ವಕವಾಗಿ ನೀಡಿದನು.

ಹಂಸಾಶ್ಚ ಶತಪತ್ರಾಶ್ಚ ಸಾರಸಾಶ್ಚ ಸಹಸ್ರಶಃ ।
ಪ್ರದಕ್ಷಿಣಮವರ್ತಂತ ಶುಕಾಶ್ಚಾಷಾಶ್ಚ ಭಾರತ ॥೨೦॥

ಸಾವಿರಾರು ಹಂಸಗಳು, ಸಾರಸಪಕ್ಷಿಗಳು, ಗಿಳಿಗಳು, ಹಕ್ಕಿಗಳು ಶುಕದೇವನಿಗೆ ಪ್ರದಕ್ಷಿಣೆ ಮಾಡಿದವು.

ಆರಣೇಯಸ್ತಥಾ ದಿವ್ಯಂ ಪ್ರಾಪ್ಯ ಜನ್ಮ ಮಹಾದ್ಯುತಿಃ ।
ತತ್ರೈವೋವಾಸ ಮೇಧಾವೀ ವ್ರತಚಾರೀ ಸಮಾಹಿತಃ ॥೨೧॥

ಹೀಗೆ ಅರಣಿಸಂಭೂತನಾದ, ಮಹಾಕಾಂತಿಸಂಪನ್ನನಾದ ಶುಕದೇವನು ದಿವ್ಯಜನ್ಮವನ್ನು ಹೊಂದಿ, ಜಿತೇಂದ್ರಿಯನಾಗಿ, ಬ್ರಹ್ಮಚಾರಿಯಾಗಿ, ಮೇಧಾವಿಯಾಗಿಯೂ ವ್ಯಾಸರ ಆ ಆಶ್ರಮದಲ್ಲಿಯೇ ವಾಸ ಮಾಡಿದನು.

ಉತ್ಪನ್ನಮಾತ್ರಂ ತಂ ವೇದಾಃ ಸರಹಸ್ಯಾಃ ಸಸಂಗ್ರಹಾಃ ।
ಉಪತಸ್ಥುರ್ಮಹಾರಾಜ ಯಥಾಸ್ಯ ಪಿತರಂ ತಥಾ ॥೨೨॥

ಹುಟ್ಟಿದ ಕೂಡಲೇ ಶುಕಮುನಿಯನ್ನು ಎಲ್ಲ ವೇದಗಳು, ಉಪನಿಷತ್ತುಗಳು, ಬ್ರಾಹ್ಮಣಗಳು ವ್ಯಾಸರನ್ನು ಸೇವಿಸಿದಂತೆ ಸೇವಿಸಿದವು.

ಬೃಹಸ್ಪತಿಂ ತು ವವ್ರೇ ಸ ವೇದವೇದಾಂಗಭಾಷ್ಯವಿತ್ ।
ಉಪಾಧ್ಯಾಯಂ ಮಹಾರಾಜ ಧರ್ಮಮೇವಾನುಚಿಂತಯನ್ ॥೨೩॥

ವೇದ-ವೇದಾಂಗ ಭಾಷ್ಯಗಳನ್ನು ತಿಳಿದ ಶುಕಮುನಿಯು ಧರ್ಮವನ್ನೇ ಚಿಂತಿಸುತ್ತಾ ಬೃಹಸ್ಪತಿಯನ್ನು ಉಪಾಧ್ಯಾಯನನ್ನಾಗಿ ಸ್ವೀಕರಿಸಿದನು.

ಸೋಽಧೀತ್ಯ ವೇದಾನಖಿಲಾನ್ ಸರಹಸ್ಯಾನ್ ಸಸಂಗ್ರಹಾನ್ ।
ಇತಿಹಾಸಂ ಚ ಕಾರ್ತ್ಸ್ನ್ಯೇನ ರಾಜಶಾಸ್ತ್ರಾಣಿ ಚಾಭಿಭೋ ॥೨೪॥

ಗುರವೇ ದಕ್ಷಿಣಾಂ ದತ್ತ್ವಾ ಸಮಾವೃತ್ತೋ ಮಹಾಮುನಿಃ ।
ಉಗ್ರಂ ತಪಃ ಸಮಾರೇಭೇ ಬ್ರಹ್ಮಚಾರೀ ಸಮಾಹಿತಃ ॥೨೫॥

ಮಹಾಮುನಿಯಾದ ಶುಕನು ಬೃಹಸ್ಪತಿಯಿಂದ ರಹಸ್ಯವಾದ ಉಪನಿಷತ್ತುಗಳನ್ನು, ಸಮಸ್ತ ವೇದಗಳನ್ನು, ಇತಿಹಾಸ-ಪುರಾಣಗಳನ್ನು, ರಾಜನೀತಿಗಳನ್ನು ಅಧ್ಯಯನ ಮಾಡಿ ಗುರುವಿಗೆ ದಕ್ಷಿಣೆಯನ್ನು ನೀಡಿ, ವೇದಾಧ್ಯಯನ ಸಂಪನ್ನನಾಗಿ ಆಗಮಿಸಿ ಜಿತೇಂದ್ರಿಯನಾಗಿ, ಬ್ರಹ್ಮನಿಷ್ಠನಾಗಿ ಉಗ್ರವಾದ ತಪಸ್ಸನ್ನು ಆಚರಿಸಿದನು.

ದೇವತಾನಾಮೃಷೀಣಾಂ ಚ ಬಾಲ್ಯೇಽಪಿ ಸ ಮಹಾತಪಾಃ ।
ಸಮ್ಮಂತ್ರಣೇಯೋ ಮಾನ್ಯಶ್ಚ ಜ್ಞಾನೇನ ತಪಸಾ ತಥಾ ॥೨೬॥

ಮಹಾತಪಸ್ವಿಯಾದ ಶುಕಮುನಿಯು ಬಾಲ್ಯದಲ್ಲಿಯೇ ದೇವತೆಗಳಿಗೂ, ಋಷಿಗಳಿಗೂ ಮಾನ್ಯನಾಗಿದ್ದನು. ಜ್ಞಾನ-ತಪಸ್ಸುಗಳ ಮಹತ್ವದಿಂದ ಎಲ್ಲರಿಂದಲೂ ಸೇವಿಸಲು ಯೋಗ್ಯನಾಗಿದ್ದನು.

ನ ತಸ್ಯ ರಮತೇ ಬುದ್ಧಿರಾಶ್ರಮೇಷು ನರಾಧಿಪ ।
ತ್ರಿಷು ಗಾರ್ಹಸ್ಥ್ಯಮೂಲೇಷು ಮೋಕ್ಷಧರ್ಮಾನುದರ್ಶಿನಃ ॥೨೭॥

ಮೋಕ್ಷಧರ್ಮದಲ್ಲಿಯೇ ಆಸಕ್ತಿಯುಳ್ಳ ಶುಕಮುನಿಯ ಬುದ್ಧಿಯು ಗಾರ್ಹಸ್ಥ್ಯವೇ ಮೂಲವಾದ ಗೃಹಸ್ಥ, ವಾನಪ್ರಸ್ಥ, ಸಂನ್ಯಾಸವೆಂಬ ಆಶ್ರಮಗಳಲ್ಲಿ ಆಸಕ್ತವಾಗಿರಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಡ್‌ಪಂಚಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೇಳನೆಯ ಅಧ್ಯಾಯ

ವ್ಯಾಸರ ಆದೇಶದಂತೆ ಶುಕಮುನಿಯು ಮಿಥಿಲಾಪಟ್ಟಣಕ್ಕೆ ಆಗಮಿಸಿ, ಅಲ್ಲಿ ಸತ್ಕಾರವನ್ನು ಹೊಂದಿದುದು.

ಭೀಷ್ಮಃ

ಸ ಮೋಕ್ಷಮನುಚಿಂತ್ಯೈವ ಶುಕಃ ಪಿತರಮಭ್ಯಗಾತ್ ।
ಪ್ರಾಹಾಭಿವಾದ್ಯ ಚ ಗುರುಂ ಶ್ರೇಯೋರ್ಥೀ ವಿನಯಾನ್ವಿತಃ ॥೧॥

ಭೀಷ್ಮ- ಯುಧಿಷ್ಠಿರನೇ, ಶುಕನು ಮೋಕ್ಷದ ವಿಷಯವನ್ನು ಯೋಚಿಸುತ್ತಾ ವ್ಯಾಸರ ಬಳಿ ಸಾಗಿದನು. ಶ್ರೇಯಸ್ಸನ್ನು ಸಾಧಿಸುವ, ವಿನಯದಿಂದ ಕೂಡಿದ ಶುಕಮುನಿಯು ಗುರುವಾದ ವ್ಯಾಸರಿಗೆ ನಮಸ್ಕರಿಸಿ ಹೀಗೆ ಹೇಳಿದನು.

ಮೋಕ್ಷಧರ್ಮೇಷು ಕುಶಲೋ ಭಗವಾನ್ ಪ್ರಬ್ರವೀತು ಮೇ ।
ಯಥಾ ಮೇ ಮನಸಃ ಶಾಂತಿಃ ಪರಮಾ ಸಂಭವೇತ್ ಪ್ರಭೋ ॥೨॥

ಪೂಜ್ಯನೇ, ನೀನು ಮೋಕ್ಷಧರ್ಮದಲ್ಲಿ ಕುಶಲನಾಗಿರುವಿ. ನನ್ನ ಮನಸ್ಸಿಗೆ ಪರಮ ಶಾಂತಿಯನ್ನುಂಟು ಮಾಡುವ ರೀತಿಯಲ್ಲಿ ಆ ಮೋಕ್ಷಧರ್ಮಗಳನ್ನು ಉಪದೇಶಿಸು.

ಶ್ರುತ್ವಾ ಪುತ್ರಸ್ಯ ವಚನಂ ಪರಮರ್ಷಿರುವಾಚ ತಮ್ ।
ಅಧೀಷ್ವ ಪುತ್ರ ಮೋಕ್ಷಂ ವೈ ಧರ್ಮಾಂಶ್ಚ ವಿವಿಧಾನಪಿ ॥೩॥

ಮಗನ ಮಾತುಗಳನ್ನು ಕೇಳಿಸಿಕೊಂಡ ಪರಮರ್ಷಿಯು ಶುಕಮುನಿಯನ್ನು ಕುರಿತು ಹೇಳಿದನು: ಮಗನೇ, ವಿವಿಧವಾದ ಮೋಕ್ಷಧರ್ಮಗಳನ್ನು ಅಧ್ಯಯನ ಮಾಡು.

ಪಿತುರ್ನಿಯೋಗಾಜ್ಜಗ್ರಾಹ ಶುಕೋ ಬ್ರಹ್ಮವಿದಾಂ ವರಃ ।
ಯೋಗಶಾಸ್ತ್ರಂ ಚ ನಿಖಿಲಂ ಕಾಪಿಲಂ ಚೈವ ಭಾರತ ॥೪॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಶುಕಮುನಿಯು ತಂದೆಯ ಆದೇಶಕ್ಕನುಗುಣವಾಗಿ ಯೋಗಶಾಸ್ತ್ರವನ್ನು, ಸಮಗ್ರವಾದ ಸಾಂಖ್ಯಶಾಸ್ತ್ರವನ್ನು ತಂದೆಯಿಂದ ಸ್ವೀಕರಿಸಿದನು.

ಸ ತಂ ಬ್ರಾಹ್ಮ್ಯಾ ಶ್ರಿಯಾ ಯುಕ್ತಂ ಬ್ರಹ್ಮತುಲ್ಯಪರಾಕ್ರಮಮ್ ।
ಮೇನೇ ಪುತ್ರಂ ಯದಾ ವ್ಯಾಸೋ ಮೋಕ್ಷವಿದ್ಯಾವಿಶಾರದಮ್ ॥೫॥

ಈ ಬ್ರಹ್ಮಜ್ಞಾನವೆಂಬ ಸಂಪತ್ತಿನಿಂದ ಬ್ರಹ್ಮಜ್ಞಾನಿಗಳಿಗೆ ಸಮಾನವಾದ ತೇಜಸ್ಸನ್ನು ತನ್ನ ಮಗನು ಹೊಂದಿದ್ದಾನೆಂದು ವ್ಯಾಸರು ತಿಳಿದರು. ಶುಕಮುನಿಯು ಮೋಕ್ಷವಿದ್ಯಾ ವಿಶಾರದನೆಂದು ಭಾವಿಸಿದರು.

ಉವಾಚ ಗಚ್ಛೇತಿ ತದಾ ಜನಕಂ ಮಿಥಿಲೇಶ್ವರಮ್ ।
ಸ ತೇ ವಕ್ಷ್ಯತಿ ಮೋಕ್ಷಾರ್ಥಂ ನಿಖಿಲೇನ ವಿಶೇಷತಃ ॥೬॥

ಶುಕಮುನಿಯನ್ನು ಕುರಿತು ವ್ಯಾಸರು, ಮಿಥಿಲೇಶ್ವರನಾದ ಜನಕನ ಮನೆಗೆ ನೀನು ಸಾಗು. ಆ ಜನಕಮಹಾರಾಜನು ಮೋಕ್ಷಕ್ಕೆ ಸಂಬಂಧಿಸಿದ ಸಮಗ್ರವಾದ ತತ್ತ್ವಗಳನ್ನು ನಿನಗೆ ಬೋಧಿಸುತ್ತಾನೆ ಎಂದು ಹೇಳಿದರು.

ಪಿತುರ್ನಿಯೋಗಾದಗಮನ್ಮೈಥಿಲಂ ಜನಕಂ ನೃಪಮ್ ।
ಪ್ರಷ್ಟುಂ ಧರ್ಮಸ್ಯ ನಿಷ್ಠಾಂ ವೈ ಮೋಕ್ಷಸ್ಯ ಚ ಪರಾಯಣಮ್ ॥೭॥

ತಂದೆಯ ಆದೇಶದಂತೆ ಮಿಥಿಲಾ ಪಟ್ಟಣದಲ್ಲಿರುವ ಜನಕರಾಜನನ್ನು ನೋಡಲು ಶುಕಮುನಿಯು ಧರ್ಮದ ಸ್ಥಾನವನ್ನು, ಶ್ರೇಷ್ಠ ಸ್ಥಾನವೆನಿಸಿದ ಮೋಕ್ಷದ ಸ್ಥಿತಿಯನ್ನು ಪ್ರಶ್ನಿಸಲು ತೆರಳಿದನು.

ಉಕ್ತಶ್ಚ ಮಾನುಷೇಣ ತ್ವಂ ಪಥಾ ಗಚ್ಛೇತ್ಯವಿಸ್ಮಿತಃ ।
ನ ಪ್ರಭಾವೇಣ ಗಂತವ್ಯಮಂತರಿಕ್ಷಚರೇಣ ವೈ ॥೮॥

ಶುಕಮುನಿಯೇ, ನೀನು ಮಿಥಿಲಾಪಟ್ಟಣಕ್ಕೆ ಸಾಗುವಾಗ ಅಹಂಕಾರ ರಹಿತನಾಗಿ, ಮನುಷ್ಯರು ಸಂಚರಿಸುವ ದಾರಿಯನ್ನೇ ಅವಲಂಬಿಸಿ ಹೋಗು. ಯೋಗಪ್ರಭಾವವನ್ನು ಆಶ್ರಯಿಸಿ, ಅಂತರಿಕ್ಷದ ಮೂಲಕ ಅಲ್ಲಿಗೆ ಚಲಿಸಬೇಡ ಎಂದು ಹೇಳಿದರು.

ಆರ್ಜವೇನೈವ ಗಂತವ್ಯಂ ನ ಸುಖಾನ್ವೇಷಿಣಾ ಪಥಾ ।
ನಾನ್ವೇಷ್ಟವ್ಯಾ ವಿಶೇಷಾಸ್ತು ವಿಶೇಷಾ ಹಿ ಪ್ರಸಂಗಿನಃ ॥೯॥

ಋಜುಸ್ವಭಾವದಿಂದಲೇ ನೀನು ಅಲ್ಲಿಗೆ ಸಾಗಬೇಕು. ಸುಖವನ್ನು ಬಯಸಿ ಹೋಗಬಾರದು. ವಿಶೇಷ ಸ್ಥಾನಮಾನಗಳನ್ನು ಬಯಸಬಾರದು. ಕಾರಣ ಆ ಸ್ಥಾನ-ಮಾನಗಳ ಅಪೇಕ್ಷೆಯಿಂದ ಅವುಗಳಲ್ಲಿಯೇ ಆಸಕ್ತಿ ಹುಟ್ಟುತ್ತದೆ.

ಅಹಂಕಾರೋ ನ ಕರ್ತವ್ಯೋ ಯಾಜ್ಯೇ ತಸ್ಮಿನ್ನರಾಧಿಪೇ ।
ಸ್ಥಾತವ್ಯಂ ಚ ವಶೇ ತಸ್ಯ ಸ ತೇ ಛೇತ್ಸ್ಯತಿ ಸಂಶಯಮ್ ॥೧೦॥

ಯಾಜ್ಯನಾದ ಜನಕರಾಜನ ಮುಂದೆ ಅಹಂಕಾರವನ್ನು ತೋರಿಸಬೇಡ. ಎಲ್ಲ ರೀತಿಯಿಂದಲೂ ಅವನ ಆದೇಶವನ್ನು ಪಾಲಿಸು. ಅವನು ನಿನ್ನ ಎಲ್ಲ ಸಂಶಯವನ್ನೂ ಪರಿಹರಿಸುವನು.

ಸ ಧರ್ಮಕುಶಲೋ ರಾಜಾ ಮೋಕ್ಷಶಾಸ್ತ್ರವಿಶಾರದಃ ।
ಯಾಜ್ಯೋ ಮಮ ಸ ಯದ್ ಬ್ರೂಯಾತ್ತತ್ ಕಾರ್ಯಮವಿಶಂಕಯಾ ॥

ಮೋಕ್ಷಶಾಸ್ತ್ರವಿಶಾರದನಾದ, ಧರ್ಮಕುಶಲನಾದ, ಯಾಜ್ಯನೆನಿಸಿದ ಜನಕರಾಜನು ಯಾವ ಕಾರ್ಯವನ್ನು ನಿನಗೆ ಮಾಡಬೇಕೆಂದು ಹೇಳುತ್ತಾನೋ ಸಂದೇಹವಿಲ್ಲದೆ ಅದನ್ನು ಆಚರಿಸು.

ಏವಮುಕ್ತಃ ಸ ಧರ್ಮಾತ್ಮಾ ಜಗಾಮ ಮಿಥಿಲಾಂ ಮುನಿಃ ।
ಪದ್ಭ್ಯಾಂ ಶಕ್ತೋಽಂತರಿಕ್ಷೇಣ ಕ್ರಾಂತುಂ ಭೂಮಿಂ ಸಸಾಗರಾಮ್ ॥೧೨॥

ಯುಧಿಷ್ಠಿರನೇ, ತಂದೆಯಿಂದ ಹೀಗೆ ಆಜ್ಞಪ್ತನಾದ ಶುಕನು ಸಾಗರದಿಂದ ತುಂಬಿದ ಭೂಮಿಯನ್ನು, ಯೋಗಶಕ್ತಿಯಿಂದ ಅಂತರಿಕ್ಷದ ಮೂಲಕ ಸಾಗುವ ಸಾಮರ್ಥ್ಯವಿದ್ದರೂ

ತಂದೆಯ ಮಾತಿನಂತೆಯೇ ಕಾಲ್ನಡಿಗೆಯಲ್ಲಿಯೇ ಸಾಗುತ್ತಾ, ಮಿಥಿಲಾಪುರಕ್ಕೆ ಆಗಮಿಸಿದನು.

ಸ ಗಿರೀಂಶ್ಚಾಪ್ಯತಿಕ್ರಮ್ಯ ನದೀಸ್ತೀರ್ತ್ವಾ ಸರಾಂಸಿ ಚ ।
ಬಹುವ್ಯಾಲಮೃಗಾಕೀರ್ಣಾ ವಿವಿಧಾಶ್ಚಾಟವೀಸ್ತಥಾ ॥೧೩॥

ಮೇರೋರ್ಹರೇಶ್ಚ ದ್ವೇ ವರ್ಷೇ ವರ್ಷಂ ಹೈಮವತಂ ತಥಾ ।
ಕ್ರಮೇಣೈವ ವ್ಯತಿಕ್ರಮ್ಯ ಭಾರತಂ ವರ್ಷಮಾಸದತ್ ॥೧೪॥

ಮಾರ್ಗದ ಮಧ್ಯದಲ್ಲಿ ಅನೇಕ ಪರ್ವತ, ನದಿ, ತೀರ್ಥ, ಸರೋವರ, ಸರ್ಪ ಮೊದಲಾದ ಅನೇಕ ವಿಷಜಂತುಗಳಿಂದಲೂ, ವನ್ಯಪ್ರಾಣಿಗಳಿಂದಲೂ, ವ್ಯಾಪಿಸಿರುವ ಪ್ರಾಣಿಗಳನ್ನು, ವನಗಳನ್ನು ದಾಟಿ ಮೇರುವಿನ ತಪ್ಪಲೆನಿಸಿದ ಇಲಾವೃತವರ್ಷವನ್ನು, ಹರಿವರ್ಷವನ್ನು, ಹಿಮವದ್ ಪರ್ವತದ ಉತ್ತರಭಾಗದಲ್ಲಿರುವ ಕಿಂಪುರುಷವರ್ಷವನ್ನು ಅತಿಕ್ರಮಿಸುತ್ತಾ ಭಾರತವರ್ಷಕ್ಕೆ ಆಗಮಿಸಿದನು.

ಸ ದೇಶಾನ್ ವಿವಿಧಾನ್ ಪಶ್ಯಂಶ್ಚೀನಹೂಣನಿಷೇವಿತಾನ್ ।
ಆರ್ಯಾವರ್ತಮಿಮಂ ದೇಶಮಾಜಗಾಮ ಮಹಾಮುನಿಃ ॥೧೫॥

ಚೀನ, ಹೂಣ ಇವರಿಂದ ಸೇವಿಸಲ್ಪಟ್ಟ ಅನೇಕ ವಿಧ ದೇಶಗಳನ್ನು ಅವನು ನೋಡುತ್ತಾ ವಿಂಧ್ಯ, ಹಿಮಾಚಲದ ಮಧ್ಯದಲ್ಲಿರುವ ಆರ್ಯಾವರ್ತ ಎಂಬ ದೇಶಕ್ಕೆ ಅವನು ಆಗಮಿಸಿದನು.

ಪಿತುರ್ವಚನಮಾಜ್ಞಾಯ ತಮೇವಾರ್ಥಂ ವಿಚಿಂತಯನ್ ।
ಅಧ್ವಾನಂ ಸೋಽತಿಚಕ್ರಾಮ ಖಚರಃ ಖೇ ಚರನ್ನಿವ ॥೧೬॥

ತಂದೆಯ ಆದೇಶವನ್ನೇ ಸ್ಮರಿಸಿಕೊಳ್ಳುತ್ತಾ, ಪುನಃ ಪುನಃ ಅವನು ಹೇಳಿದ ಅರ್ಥಗಳನ್ನೇ ಚಿಂತಿಸುತ್ತಾ, ಆಕಾಶದಲ್ಲಿ ಸಂಚರಿಸುವ ಸೂರ್ಯನಂತೆ ದಾರಿಯನ್ನು ದಾಟುತ್ತಾ ಬಂದನು.

ಪತ್ತನಾನಿ ಚ ರಮ್ಯಾಣಿ ಸ್ಫೀತಾನಿ ನಗರಾಣಿ ಚ ।
ರತ್ನಾನಿ ಚ ವಿಚಿತ್ರಾಣಿ ಶುಕಃ ಪಶ್ಯನ್ನ ಪಶ್ಯತಿ ॥೧೭॥

ದಾರಿಯ ಮಧ್ಯದಲ್ಲಿ ರಮಣೀಯವಾದ ಪಟ್ಟಣಗಳನ್ನು, ಧನ-ಧಾನ್ಯಗಳಿಂದ ಸಮೃದ್ಧವಾದ ನಗರಗಳನ್ನು, ವಿಚಿತ್ರವಾದ ರತ್ನಗಳನ್ನು ನೋಡುತ್ತಿದ್ದರೂ ಶುಕಮುನಿಗೆ ಅವುಗಳ್ಯಾವವೂ ಆಕರ್ಷಿಸಲಿಲ್ಲ. ನೋಡಿದಂತಾಗಲಿಲ್ಲ.

ಉದ್ಯಾನಾನಿ ಚ ರಮ್ಯಾಣಿ ತಥೈವಾಯತನಾನಿ ಚ ।
ಪುಣ್ಯಾನಿ ಚೈವ ತೀರ್ಥಾನಿ ಸೋಽತಿಕ್ರಮ್ಯ ತಥಾಧ್ವನಃ ॥ ೧೮॥

ಮುಂದೆ ಮುಂದೆ ಅನೇಕ ರಮಣೀಯವಾದ ಉದ್ಯಾನವನಗಳನ್ನು, ಸುಂದರವಾದ ಸೌಧಗಳನ್ನು, ಅನೇಕ ಪುಣ್ಯತೀರ್ಥಗಳನ್ನು ಅತಿಕ್ರಮಿಸುತ್ತಾ ದಾರಿಯನ್ನು ಸಾಗಿಸಿದನು.

ಸೋಽಚಿರೇಣೈವ ಕಾಲೇನ ವಿದೇಹಾನಾಸಸಾದ ಹ ।
ರಕ್ಷಿತಾಂಧರ್ಮರಾಜೇನ ಜನಕೇನ ಮಹಾತ್ಮನಾ ॥೧೯॥

ಹೀಗೆ ಪ್ರಯಾಣ ಮಾಡುತ್ತಾ ಅತ್ಯಲ್ಪಕಾಲದಲ್ಲಿಯೇ ಮಹಾತ್ಮನಾದ ಜನಕನಿಂದ ರಕ್ಷಿಸಲ್ಪಡುತ್ತಿದ್ದ ವಿದೇಹ ಪಟ್ಟಣವನ್ನು ತಲುಪಿದನು.

ತತ್ರ ಗ್ರಾಮಾನ್ ಬಹೂನ್ ಪಶ್ಯನ್ ಬಹ್ವನ್ನರಸಭೋಜನಾನ್ ।
ಪಲ್ಲೀಘೋಷಾನ್ ಸಮೃದ್ಧಾಂಶ್ಚ ಬಹುಗೋಕುಲಸಂಕುಲಾನ್ ॥೨೦॥

ಅನ್ನ-ಪಾನಗಳಿಂದ, ನಾನಾ ವಿಧವಾದ ಖಾದ್ಯವಸ್ತುಗಳಿಂದ ಸಮೃದ್ಧವಾಗಿರುವ ವಿದೇಹನ ರಾಜ್ಯದಲ್ಲಿದ್ದ ಅನೇಕ ಗ್ರಾಮಗಳನ್ನು, ಧನ-ಧಾನ್ಯಗಳಿಂದ ಸಮೃದ್ಧವಾದ ಹಳ್ಳಿಗಳನ್ನು, ಅಸಂಖ್ಯಗೋಸಮೃದ್ಧಿಯಿಂದ ತುಂಬಿದ ಗೊಲ್ಲರ ಹಟ್ಟಿಗಳನ್ನು ನೋಡುತ್ತಾ ಶುಕನು ಮುಂದೆ ಸಾಗಿದನು.

ಸ್ಫೀತಾಂಶ್ಚ ಶಾಲಿಯವಸೈರ್ಹಂಸಸಾರಸಸೇವಿತಾನ್ ।
ಪದ್ಮಿನೀಭಿಶ್ಚ ಶತಶಃ ಶ್ರೀಮತೀಭಿರಲಂಕೃತಾನ್ ॥೨೧॥

ಸಮೃದ್ಧವಾಗಿ ಧಾನ್ಯಗಳಿಂದ ಟಿಸಿಲೊಡೆದ ಭತ್ತಗಳ ಗದ್ದೆಗಳನ್ನು, ಹಂಸ-ಸಾರಸ ಪಕ್ಷಿಗಳಿಂದ ಸೇವಿಸಲ್ಪಡುತ್ತಿದ್ದ, ಕಾಂತಿಯಿಂದ ಕೂಡಿರುವ ಕಮಲಗಳಿಂದ ಅಲಂಕೃತವಾದ ನೂರರು ಸರೋವರಗಳನ್ನು ನೋಡುತ್ತಾ ಮುಂದೆ ಸಾಗಿದನು.

ಸ ವಿದೇಹಾನತಿಕ್ರಮ್ಯ ಸಮೃದ್ಧಜನಸೇವಿತಾನ್ ।
ಮಿಥಿಲೋಪವನಂ ರಮ್ಯಮಾಸಸಾದ ಮಹದ್ಧಿಮತ್ ॥೨೨॥

ಸಮೃದ್ಧರಾದ ಜನರಿಂದ ಸೇವಿತವಾಗಿರುವ ವಿದೇಹನಗರದ ರಮಣೀಯವಾದ, ಮಹತ್ತಾದ ವೃದ್ಧಿಯಿಂದ ಕೂಡಿರುವ ಉಪವನವನ್ನು ಸಮೀಪಿಸಿದನು.

ಹಸ್ತ್ಯಶ್ವರಥಸಂಕೀರ್ಣಂ ನರನಾರೀಸಮಾಕುಲಮ್ ।
ಪಶ್ಯನ್ನಪಶ್ಯನ್ನಿವ ತತ್ ಸಮತಿಕ್ರಾಮದಚ್ಯುತಃ ॥೨೩॥

ಚ್ಯುತಿಯಿಲ್ಲದೆ ಶುಕಮುನಿಯು ಆನೆಗಳಿಂದ, ಕುದುರೆಗಳಿಂದ, ನರ-ನಾರಿಯರಿಂದ ತುಂಬಿಹೋಗಿರುವ ಸುಂದರವಾದ ಉಪವನವನ್ನು ನೋಡಿಯೂ ನೋಡದಂತೆ ಮುಂದೆ ಸಾಗಿದನು.

ಮನಸಾ ತಂ ವಹನ್ ಭಾರಂ ತಮೇವಾರ್ಥಂ ವಿಚಿಂತಯನ್ ।
ಆತ್ಮಾರಾಮಃ ಪ್ರಸನ್ನಾತ್ಮಾ ಮಿಥಿಲಾಮಾಸಸಾದ ಹ ॥೨೪॥

ತಿಳಿಯಬೇಕಾದ ಭಗವತ್ತತ್ತ್ವದ ವಿಚಾರದ ಭಾರವನ್ನೇ ಮನಸ್ಸಿನಲ್ಲಿ ಹೊತ್ತುಕೊಂಡು, ಅದರ ಅಂತರಾರ್ಥವೇನೆಂದು ಮನಸ್ಸಿನಲ್ಲಿಯೇ ವಿಚಾರ ಮಾಡುತ್ತಾ, ಭಗವತತ್ತ್ವದಲ್ಲಿಯೇ ಸಂತೋಷವನ್ನು ಹೊಂದಿರುವ ಪ್ರಸನ್ನಾತ್ಮನಾದ ಶುಕಮುನಿಯು ಮಿಥಿಲಾಪಟ್ಟಣವನ್ನು ಸೇರಿದನು.

ತಸ್ಯಾ ದ್ವಾರಂ ಸಮಾಸಾದ್ಯ ದ್ವಾರಪಾಲೈರ್ನಿವಾರಿತಃ ।
ಸ್ಥಿತೋ ಧ್ಯಾನಪರೋ ಮುಕ್ತೋ ವಿದಿತಃ ಪ್ರವಿವೇಶ ಹ ॥೨೫॥

ಮಿಥಿಲಾಪಟ್ಟಣದ ಹೆಬ್ಬಾಲಿಗೆ ಆಗಮಿಸಿ ಯಾವ ವಿಧವಾದ ಸಂಶಯವೂ ಇಲ್ಲದೆ ಒಳಕ್ಕೆ ಪ್ರವೇಶಿಸಿದನು. ಆದರೆ ಅಲ್ಲಿರುವ ದ್ವಾರಪಾಲಕರು ತಮ್ಮ ಅನುಮತಿ ಇಲ್ಲದೆ ಒಳಕ್ಕೆ ಹೋಗುತ್ತಿದ್ದ ಶುಕನನ್ನು ಕಠಿಣವಾದ ಮಾತುಗಳಿಂದ ತಡೆದು ನಿಲ್ಲಿಸಿದರು.

ಸ ರಾಜಮಾರ್ಗಮಾಸಾದ್ಯ ಸಮೃದ್ಧಜನಸಂಕುಲಮ್ ।
ಪಾರ್ಥಿವಕ್ಷಯಮಾಸಾದ್ಯ ನಿಃಶಂಕಃ ಪ್ರವಿವೇಶ ಹ ॥೨೬॥

ದ್ವಾರಪಾಲಕನ ಮಾತುಗಳಿಂದ ರಾಜಮಾರ್ಗದಲ್ಲಿ ನಿಂತಿರುವ ಶುಕಮುನಿಯು ಸಮೃದ್ಧ ಜನಸಂಕುಲವಾದ ರಾಜಮಾರ್ಗವನ್ನು ನಿಶ್ಶಂಕೆಯಿಂದಲೇ ಪ್ರವೇಶಿಸಿದನು.

ತತ್ರಾಪಿ ದ್ವಾರಪಾಲಾಸ್ತಮುಗ್ರವಾಚೋ ನ್ಯಷೇಧಯನ್ ।
ತಥೈವ ಚ ಶುಕಸ್ತತ್ರ ನಿರ್ಮನ್ಯುಃ ಸಮತಿಷ್ಠತ ॥೨೭॥

ಮುಂದೆ ಸಾಗುತ್ತಾ ಮುಂದಿನ ದ್ವಾರಪಾಲಕರು ಶುಕಮುನಿಯನ್ನು ಉಗ್ರವಾದ ಮಾತುಗಳಿಂದ ತಡೆದರು. ಶುಕಮುನಿಯು ಉಗ್ರ ಮಾತುಗಳನ್ನಾಡಿದ ಅವರ ಮಾತುಗಳಿಂದ ಸಿಟ್ಟುಗೊಳ್ಳದೆ ಅಲ್ಲಿಯೇ ನಿಂತನು.

ನ ಚಾತಪಾಧ್ವಸಂತಪ್ತಃ ಕ್ಷುತ್ಪಿಪಾಸಾಶ್ರಮಾನ್ವಿತಃ ।
ಪ್ರತಾಮ್ಯತಿ ಗ್ಲಾಯತಿ ವಾ ನಾಪೈತಿ ಚ ತಥಾತಪಾತ್ ॥೨೮॥

ಮಾರ್ಗದ ಆಯಾಸವು ಅವನ ಮುಖದಲ್ಲಿ ಕಾಣುತ್ತಿರಲಿಲ್ಲ. ಹಸಿವು-ನೀರಡಿಕೆಗಳ ಆಯಾಸವೂ ಕಾಣುತ್ತಿರಲಿಲ್ಲ. ಪರಿತಾಪ, ಕುಗ್ಗುವಿಕೆ ಯಾವುದನ್ನೂ ಸೂರ್ಯನ ಬಿಸಿಲಿನಿಂದ ಹೊಂದಿರಲಿಲ್ಲ.

ತೇಷಾಂ ತು ದ್ವಾರಪಾಲಾನಾಮೇಕಃ ಶೋಕಸಮನ್ವಿತಃ ।
ಮಧ್ಯಂಗತಮಿವಾದಿತ್ಯಂ ದೃಷ್ಟ್ವಾ ಶುಕಮವಸ್ಥಿತಮ್ ॥೨೯॥

ಪೂಜಯಿತ್ವಾ ಯಥಾನ್ಯಾಯಮಭಿವಾದ್ಯ ಕೃತಾಂಜಲಿಃ ।
ಪ್ರಾವೇಶಯತ್ತತಃ ಕಕ್ಷ್ಯಾಂ ದ್ವಿತೀಯಾಂ ರಾಜವೇಶ್ಮನಃ ॥೩೦॥

ಅಂತಹ ಶುಕಮುನಿಯನ್ನು ಕಂಡು ದ್ವಾರಪಾಲಕರ ಸಮುದಾಯದಲ್ಲಿ ಒಬ್ಬನಿಗೆ ಮಾತ್ರ ದುಃಖವಾಯಿತು. ಬೆಳಗುವ ಮಧ್ಯಾಹ್ನದ ಸೂರ್ಯನಂತೆ ತೇಜಸ್ಸಿನಿಂದ ಕೂಡಿರುವ ಶುಕನನ್ನು ಕಂಡು, ಮೌನಿಯಾಗಿರುವ ಆತನನ್ನು ನೋಡಿದ ದ್ವಾರಪಾಲಕನು ಕೈಮುಗಿದು ನಮಸ್ಕರಿಸಿ, ವಿಧಿಬದ್ಧವಾಗಿ ಕೂರಿಸಿ ರಾಜನ ಅರಮನೆಯ ಎರಡನೆಯ ಆವರಣಕ್ಕೆ ಕಳುಹಿಸಿಕೊಟ್ಟನು.

ತತ್ರಾಸೀನಃ ಶುಕಸ್ತಾತ ಮೋಕ್ಷಮೇವಾನುಚಿಂತಯನ್ ।
ಛಾಯಾಯಾಮಾತಪೇ ಚೈವ ಸಮದರ್ಶೀ ಮಹಾದ್ಯುತಿಃ ॥೩೧॥

ಬಿಸಿಲು, ನೆರಳುಗಳನ್ನು ಸಮಾನವಾಗಿ ಭಾವಿಸಿದ್ದ, ಅರ್ಥಾತ್ ಸುಖ-ದುಃಖ-ನಿಂದಾ-ಸ್ತುತಿಗಳನ್ನು ಸಮಾನವಾಗಿ ಭಾವಿಸಿದ್ದ ಮಹಾಕಾಂತಿಯುಕ್ತನಾದ ಶುಕದೇವನು

ಎರಡನೆಯ ಆವರಣದಲ್ಲಿದ್ದ ಒಂದು ಜಗಲಿಯ ಮೇಲೆ ಕುಳಿತು ಮೋಕ್ಷದ ವಿಷಯವನ್ನೇ ಚಿಂತಿಸಲಾರಂಭಿಸಿದನು.

ತಂ ಮುಹೂರ್ತಾದಿವಾಗಮ್ಯ ರಾಜ್ಞೋ ಮಂತ್ರೀ ಕೃತಾಂಜಲಿಃ ।
ಪ್ರಾವೇಶಯತ್ತತಃ ಕಕ್ಷ್ಯಾಂ ತೃತೀಯಾಂ ರಾಜವೇಶ್ಮನಃ ॥೩೨॥

ಒಂದು ಮುಹೂರ್ತದ ಬಳಿಕ ರಾಜನ ಮಂತ್ರಿಯು ಕೈಮುಗಿದು ಶುಕನ ಬಳಿಗೆ ಬಂದು, ಅವನನ್ನು ರಾಜನ ಅರಮನೆಯ ಮೂರನೆಯ ಆವರಣಕ್ಕೆ ಕರೆದುಕೊಂಡು ಹೋದನು.

ತತ್ರಾಂತಃಪುರಸಂಬದ್ಧಂ ಮಹಚ್ಚೈತ್ರರಥೋಪಮಮ್ ।
ಸುವಿಭಕ್ತಜಲಾಕ್ರೀಡಂ ರಮ್ಯಂ ಪುಷ್ಪಿತಪಾದಪಮ್ ॥೩೩॥

ಆ ಮೂರನೆಯ ಆವರಣದಲ್ಲಿ ಅಂತಃಪುರಕ್ಕೆ ಸಂಬಂಧಿಸಿದಂತಹ ಸುಂದರವಾದ, ವಿಶಾಲವಾದ ಹೆಣ್ಣುಮಕ್ಕಳ ಉದ್ಯಾನವನವಿತ್ತು. ಉದ್ಯಾನವನವು ಕುಬೇರನ ಚೈತ್ರರಥ ಉದ್ಯಾನವನಕ್ಕೆ ಸಮಾನವಾಗಿತ್ತು. ಜಲಕ್ರೀಡೆಯಾಡಲು ಸುಂದರವಾದ ಜಲಾಶಯಗಳಿದ್ದವು. ಅನೇಕ ಪುಷ್ಪಾಲಂಕೃತ ವೃಕ್ಷಗಳಿದ್ದವು.

ತದ್ದರ್ಶಯಿತ್ವಾ ಸ ಶುಕಂ ಮಂತ್ರೀ ಕಾನನಮುತ್ತಮಮ್ ।
ಅರ್ಹಮಾಸನಮಾದಿಶ್ಯ ನಿಶ್ಚಕ್ರಾಮ ತತಃ ಪುನಃ ॥೩೪॥

ಪ್ರಮದೆಯರಿಂದ ಕೂಡಿದ ಅಂತಹ ಉದ್ಯಾನವನದ ಒಳಗಡೆ ಮಂತ್ರಿಯು ಕರೆದುಕೊಂಡು ಹೋಗಿ ಅಲ್ಲಿಯೇ ಕುಳಿತುಕೊಳ್ಳಲು ಆಸನವನ್ನು ಕೊಟ್ಟು, ಮಂತ್ರಿಯು ಹೊರಟು ಹೋದನು.

ತಂ ಚಾರುವೇಷಾಃ ಸುಶ್ರೋಣ್ಯಸ್ತರುಣ್ಯಃ ಪ್ರಿಯದರ್ಶನಾಃ ।
ಸೂಕ್ಷ್ಮರಕ್ತಾಂಬರಧರಾಸ್ತಪ್ತಕಾಂಚನಭೂಷಣಾಃ ॥೩೫॥

ಸಂಲಾಪೋಲ್ಲಾಪಕುಶಲಾ ನೃತ್ತಗೀತವಿಶಾರದಾಃ ।
ಸ್ಮಿತಪೂರ್ವಾಭಿಭಾಷಿಣ್ಯೋ ರೂಪೇಣಾಪ್ಸರಸಾಂ ಸಮಾಃ ॥೩೬॥

ಕಾಮೋಪಚಾರಕುಶಲಾ ಭಾವಜ್ಞಾಃ ಸರ್ವಕೋವಿದಾಃ ।
ಪರಂ ಪಂಚಾಶತೋ ನಾರ್ಯೋ ವಾರಮುಖ್ಯಾಃ ಸಮಾದ್ರವನ್ ॥೩೭॥

ಮಂತ್ರಿಯು ಆಚೆ ಹೊರಟ ಕೂಡಲೇ ಐದುನೂರು ವಾರಾಂಗನೆಯರು ಶುಕನ ಬಳಿಗೆ ಧಾವಿಸಿ ಬಂದರು. ಅವರೆಲ್ಲರೂ ಸುಂದರವಾದ ವೇಷಭೂಷಣಗಳನ್ನು ಧರಿಸಿದ್ದರು. ಸುಂದರವಾದ ನಿತಂಬವುಳ್ಳವರಾಗಿದ್ದರು. ತರುಣಿಯರಾಗಿದ್ದರು. ಪ್ರಿಯವಾದ ದರ್ಶನ ಸುಖವನ್ನು ನೀಡಲು ಸಮರ್ಥರಾಗಿದ್ದರು. ತೆಳುವಾದ ಕೆಂಪು ಸೀರೆಯನ್ನು ಧರಿಸಿದ್ದರು. ಪುಟಕ್ಕೆ ಹಾಕಿ ಫಳಫಳ ಹೊಳೆಯುವ ಚಿನ್ನದ ಆಭರಣಗಳನ್ನು ಧರಿಸಿದ್ದರು. ಮಧುರವಾದ ಮಾತುಗಳಲ್ಲಿ ಅತ್ಯಂತ ನಿಪುಣರಾಗಿದ್ದರು. ನೃತ್ಯ-ಗೀತೆಗಳಲ್ಲಿ ಪ್ರಾವೀಣ್ಯವನ್ನು ಹೊಂದಿದ್ದರು. ಮತ್ತೊಬ್ಬರ ಬಳಿ ಮಂದಹಾಸವನ್ನು ಬೀರುತ್ತಾ ಮಾತನಾಡುವವರಾಗಿದ್ದರು. ರೂಪದಲ್ಲಿ ಅಪ್ಸರೆಯರಿಗೆ ಸಮಾನರಾಗಿದ್ದರು. ಕಾಮಪ್ರಚೋದನೆಯಾಗುವಂತೆ ಉಪಚರಿಸುವುದರಲ್ಲಿಯೂ ಬಹಳ ಕುಶಲೆಯರಾಗಿದ್ದರು. ಇತರರ ಮನಸ್ಸಿನ ಅಭಿಪ್ರಾಯವನ್ನು ತಿಳಿಯಲು ಸಮರ್ಥರಾಗಿದ್ದರು. ಸರ್ವಕಲೆಗಳನ್ನು ತಿಳಿದವರಾಗಿದ್ದರು.

ಪಾದ್ಯಾದೀನಿ ಪ್ರತಿಗ್ರಾಹ್ಯ ಪೂಜಯಾ ಪರಯಾರ್ಚ್ಯ ಚ ।
ದೇಶಕಾಲೋಪಪನ್ನೇನ ಸಾಧ್ವನ್ನೇನಾಪ್ಯತರ್ಪಯನ್ ॥೩೮॥

ಇಂತಹ ಐದುನೂರು ಮಂದಿ ವೇಶ್ಯೆಯರು ಶುಕದೇವನನ್ನು ಸುತ್ತುವರಿದು, ಅರ್ಘ್ಯ-ಪಾದ್ಯಗಳನ್ನು ನೀಡಿ, ಶ್ರೇಷ್ಠವಾದ ಪೂಜೆಯಿಂದ ಅವನನ್ನು ಸಮ್ಮಾನಿಸಿದರು. ಆ ದೇಶ-ಕಾಲಕ್ಕೆ ಯೋಗ್ಯವಾದ, ಶ್ರೇಷ್ಠವಾದ, ರುಚಿಕರ ಭೋಜನದಿಂದ ತೃಪ್ತಿಪಡಿಸಿದರು.

ತಸ್ಯ ಭುಕ್ತವತಸ್ತಾತ ತದಂತಃಪುರಕಾನನಮ್ ।
ಸುರಮ್ಯಂ ದರ್ಶಯಾಮಾಸುರೇಕೈಕಶ್ಯೇನ ಭಾರತ ॥೩೯॥

ಶುಕದೇವನಿಗೆ ಭೋಜನ ಮಾಡಿಸಿದ ಬಳಿಕ ಆ ವೇಶ್ಯೆಯರು ಶುಕಮುನಿಯನ್ನು ಜೊತೆಯಲ್ಲಿ ಕರೆದುಕೊಂಡು ಪ್ರಮದಾವನದ ಸುತ್ತಲು ತಿರುಗಾಡುತ್ತಾ, ಅಲ್ಲಿದ್ದ ಪ್ರತಿಯೊಂದು ವಸ್ತುವನ್ನು ತೋರಿಸಿದರು.

ಕ್ರೀಡಂತ್ಯಶ್ಚ ಹಸಂತ್ಯಶ್ಚ ಗಾಯಂತ್ಯಶ್ಚೈವ ತಾಃ ಶುಕಮ್ ।
ಉದಾರಸತ್ತ್ವಂ ಸತ್ತ್ವಜ್ಞಾಃ ಸರ್ವಾಃ ಪರ್ಯಚರಂಸ್ತದಾ ॥೪೦॥

ಶುಭಚರಿತನಾದ ಶುಕದೇವನ ಅಂತಃಸತ್ತ್ವವನ್ನು ಪರೀಕ್ಷಿಸಲು ವಾರಾಂಗನೆಯರು ಅನೇಕ ವಿಧವಾದ ಮನೋಲ್ಲಾಸಕರವಾದ ಆಟವನ್ನಾಡುತ್ತಾ, ಕಿಲಕಿಲನೆ ನಗುತ್ತಾ, ಗಾಯನ ಮಾಡುತ್ತಾ ಉಪಚರಿಸಿದರು.

ಆರಣೇಯಸ್ತು ಶುದ್ಧಾತ್ಮಾ ತ್ರಿಸಂದೇಹಸ್ತ್ರಿಕರ್ಮಕೃತ್ ।
ವಶ್ಯೇಂದ್ರಿಯೋ ಜಿತಕ್ರೋಧೋ ನ ಹೃಷ್ಯತಿ ನ ಕುಪ್ಯತಿ ॥೪೧॥

ಆರಣಿಸಂಭೂತನಾದ, ಶುದ್ಧಾತ್ಮನಾದ, ಮೋಕ್ಷೇತರ ಪುರುಷಾರ್ಥಗಳಲ್ಲಿ, ಅನಿಷಿದ್ಧವಾದುದರಲ್ಲಿ ಆಸಕ್ತಿಯನ್ನು ಹೊಂದಿ, ನಿಷಿದ್ಧವಾದ ಧರ್ಮ-ಅರ್ಥ-ಕಾಮಗಳಲ್ಲಿ ಅನಾಸಕ್ತಿಯನ್ನು ಹೊಂದಿರುವಂತಹ, ವ್ಯವಸ್ಥಿತವಾದ ಮೂರು ಸಂದೇಹಗಳನ್ನು ಹೊಂದಿರುವ, ಮೂರು ಕರ್ಮಗಳನ್ನು ಆಚರಿಸುತ್ತಿರುವ, ಇಂದ್ರಿಯಗಳನ್ನು ವಶಪಡಿಸಿಕೊಂಡಿರುವ, ಕ್ರೋಧವನ್ನು ಜಯಿಸಿರುವ ಈ ಶುಕಮುನಿಯು ಈ ವೇಶ್ಯೆಯರ ಆಟ-ಪಾಠಗಳಿಂದ, ಮಂದಹಾಸಗಳಿಂದ ಸಂತೋಷವನ್ನೂ ಹೊಂದಲಿಲ್ಲ, ಕ್ರೋಧವನ್ನೂ ಹೊಂದಲಿಲ್ಲ.

ತಸ್ಮೈ ಶಯ್ಯಾಸನಂ ದಿವ್ಯಂ ವರಾರ್ಹಂ ರತ್ನಭೂಷಿತಮ್ ।
ಸ್ಪರ್ಧ್ಯಾಸ್ತರಣಸಂಸ್ತೀರ್ಣಂ ದದುಸ್ತಾಃ ಪರಮಸ್ತ್ರಿಯಃ ॥೪೨॥

ಆ ವಾರಾಂಗನೆಯರು ತಮ್ಮ ಚೇಷ್ಟೆಗಳನ್ನೆಲ್ಲ ಮುಗಿಸಿದ ಬಳಿಕ ಶುಕಮುನಿಗೆ ದಿವ್ಯವಾದ, ದೇವಾರ್ಹವಾದ, ರತ್ನಭೂಷಿತವಾದ, ಬಹುಮೂಲ್ಯವಾದ ರತ್ನಗಂಬಳಿಯಿಂದ ಆಚ್ಛಾದಿತವಾದ ಹಾಸಿಗೆಯನ್ನು ಮಲಗಲು ಸಿದ್ಧಪಡಿಸಿದರು.

ಪಾದಶೌಚಂ ತು ಕೃತ್ವೈವ ಶುಕಃ ಸಂಧ್ಯಾಮುಪಾಸ್ಯ ಚ ।
ನಿಷಸಾದಾಸನೇ ಪುಣ್ಯೇ ತಮೇವಾರ್ಥಂ ವಿಚಿಂತಯನ್ ॥೪೩॥

ಆದರೆ ಶುಕಮುನಿಯು ಕೈ-ಕಾಲುಗಳನ್ನು ತೊಳೆದುಕೊಂಡು, ಸಂಧ್ಯೋಪಾಸನೆಯನ್ನು ಮಾಡಿ, ಶುಭ್ರವಾದ ಆಸನದಲ್ಲಿ ಕುಳಿತು ಮೋಕ್ಷದ ವಿಷಯವನ್ನೇ ಚಿಂತಿಸುತ್ತಿದ್ದನು.

ಪೂರ್ವರಾತ್ರೇ ತು ತತ್ರಾಸೌ ಭೂತ್ವಾ ಧ್ಯಾನಪರಾಯಣಃ ।
ಮಧ್ಯರಾತ್ರೇ ಯಥಾನ್ಯಾಯಂ ನಿದ್ರಾಮಾಹಾರಯತ್ ಪ್ರಭುಃ ॥೪೪॥

ಪ್ರಭುವಾದ, ಬುದ್ಧಿವಂತನಾದ ಶುಕಮುನಿಯು ರಾತ್ರಿಯ ಮೊದಲನೆಯ ಯಾಮದಲ್ಲಿ ಧ್ಯಾನಾಸಕ್ತನಾಗಿದ್ದು, ಮಧ್ಯರಾತ್ರಿಯಲ್ಲಿ ಶಾಸ್ತ್ರದ ವಿಧಿಯಂತೆ ನಿದ್ರಿಸಿದನು.

ತತೋ ಮುಹೂರ್ತಾದುತ್ಥಾಯ ಕೃತ್ವಾ ಶೌಚಮನಂತರಮ್ ।
ಸ್ತ್ರೀಭಿಃ ಪರಿವೃತೋ ಧೀಮಾನ್ ಧ್ಯಾನಮೇವಾನ್ವಪದ್ಯತ ॥೪೫॥

ಬಳಿಕ ಬ್ರಾಹ್ಮಮುಹೂರ್ತದಲ್ಲಿ ಎದ್ದು, ಶೌಚಾದಿಗಳನ್ನು ಪೂರೈಸಿ, ಬಳಿಕ ಸ್ತ್ರೀಯರಿಂದ ಪರಿವೃತನಾಗಿದ್ದರೂ ಭಗವದ್‌ಧ್ಯಾನದಲ್ಲಿಯೇ ಆಸಕ್ತನಾದನು.

ಅನೇನ ವಿಧಿನಾ ಕಾರ್ಷ್ಣಿಸ್ತದಹಃಶೇಷಮಚ್ಯುತಃ ।
ತಾಂ ಚ ರಾತ್ರಿಂ ನೃಪಕುಲೇ ವರ್ತಯಾಮಾಸ ಭಾರತ ॥೪೬॥

ಅಚ್ಯುತನಾದ ವ್ಯಾಸರ ಸುತನಾದ ಶುಕನು ಈ ರೀತಿಯಾಗಿ ವಿಧಿಬದ್ಧವಾಗಿ ಹಗಲು-ರಾತ್ರಿಗಳನ್ನು ರಾಜಭವನದಲ್ಲಿ ಕಳೆದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತಪಂಚಾಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೆಂಟನೆಯ ಅಧ್ಯಾಯ

ಶುಕ-ಜನಕರ ಸಂವಾದ.

ಭೀಷ್ಮಃ

ತತಃ ಸ ರಾಜಾ ಜನಕೋ ಮಂತ್ರಿಭಿಃ ಸಹ ಭಾರತ ।
ಪುರಃ ಪುರೋಹಿತಂ ಕೃತ್ವಾ ಸರ್ವಾಣ್ಯಂತಃಪುರಾಣಿ ಚ ॥೧॥

ಆಸನಂ ಚ ಪುರಸ್ಕೃತ್ಯ ರತ್ನಾನಿ ವಿವಿಧಾನಿ ಚ ।
ಶಿರಸಾ ಚಾರ್ಘ್ಯಮಾದಾಯ ಗುರುಪುತ್ರಂ ಸಮಭ್ಯಗಾತ್ ॥೨॥

ಭೀಷ್ಮ- ಯುಧಿಷ್ಠಿರನೇ, ನಂತರ ಜನಕರಾಜನು ಮಂತ್ರಿಗಳಿಂದ ಕೂಡಿಕೊಂಡು ಪುರೋಹಿತರನ್ನು, ಸಮಸ್ತ ಅಂತಃಪುರದವರನ್ನು ಮುಂದೆ ಮಾಡಿಕೊಂಡು ಆಸನವನ್ನು,

ವಿಧವಿಧವಾದ ರತ್ನಗಳನ್ನು, ಅರ್ಘ್ಯವನ್ನು ತಲೆಯ ಮೇಲೆ ಹೊತ್ತುಕೊಂಡು ಗುರುಪುತ್ರನ ಬಳಿಗೆ ಆಗಮಿಸಿದನು.

ಸ ತದಾಸನಮಾದಾಯ ಬಹುರತ್ನವಿಭೂಷಿತಮ್ ।
ಸ್ಪರ್ಧ್ಯಾಸ್ತರಣಸಂಸ್ತೀರ್ಣಂ ಸರ್ವತೋಭದ್ರಮೃದ್ಧಿಮತ್ ॥೩॥

ಪುರೋಧಸಾ ಸಂಗೃಹೀತಂ ಹಸ್ತೇನಾಲಭ್ಯ ಪಾರ್ಥಿವಃ ।
ಪ್ರದದೌ ಗುರುಪುತ್ರಾಯ ಶುಕಾಯ ಪರಮಾರ್ಚಿತಮ್ ॥೪॥

ಅನೇಕ ರತ್ನಗಳಿಂದ ವಿಭೂಷಿತವಾದ, ಬಹುಮೌಲ್ಯಭರಿತವಾದ, ಪರಿಪೂರ್ಣವಾದ, ಸರ್ವತೋಭದ್ರ ಎನಿಸಿದ, ವೃದ್ಧಿಯಿಂದ ಕೂಡಿದ ಪೂಜಾರ್ಹವಾದ ಆಸನವನ್ನು ತೆಗೆದುಕೊಂಡು ಗುರುಪುತ್ರನಾದ ಶುಕನಿಗೆ ಅರ್ಪಿಸಿದನು.

ತತ್ರೋಪವಿಷ್ಟಂ ತಂ ಕಾರ್ಷ್ಣಿಂ ಶಾಸ್ತ್ರತಃ ಪ್ರತ್ಯಪೂಜಯತ್ ।
ಪಾದ್ಯಂ ನಿವೇದ್ಯ ಪ್ರಥಮಮರ್ಘ್ಯಂ ಗಾಂ ಚ ನ್ಯವೇದಯತ್ ।
ಸ ಚ ತಾಂ ಮಂತ್ರವತ್ ಪೂಜಾಂ ಪ್ರತ್ಯಗೃಹ್ಣಾದ್ ಯಥಾವಿಧಿ ॥೫॥

ಆ ಶ್ರೇಷ್ಠವಾದ, ಮಂಗಳಮಯವಾದ ಆಸನದಲ್ಲಿ ಕುಳಿತಿರುವ ಶುಕದೇವನನ್ನು ಜನಕನು ಶಾಸ್ತ್ರೋಕ್ತವಾದ ವಿಧಿಯಿಂದ ಸತ್ಕರಿಸಿದನು. ಮೊದಲು ಪಾದ್ಯವನ್ನು ಅರ್ಪಿಸಿ, ನಂತರ ಅರ್ಘ್ಯವನ್ನು,ಗೋವನ್ನು ಶುಕಮುನಿಗೆ ಅರ್ಪಿಸಿದನು. ಶುಕದೇವನು ಜನಕರಾಜನಿಂದ ಅರ್ಪಿತವಾದ, ಮಂತ್ರಪೂರ್ವಕವಾದ ಸತ್ಕಾರವನ್ನು ವಿಧಿಗೆ ಅನುಗುಣವಾಗಿಯೇ ಸ್ವೀಕರಿಸಿದನು.

ಪ್ರತಿಗೃಹ್ಯ ಚ ತಾಂ ಪೂಜಾಂ ಜನಕಾದ್ ದ್ವಿಜಸತ್ತಮಃ ।
ಗಾಂ ಚೈವ ಸಮನುಜ್ಞಾಯ ರಾಜಾನಮನುಮಾನ್ಯ ಚ ॥೬॥

ಪರ್ಯಪೃಚ್ಛನ್ಮಹಾತೇಜಾ ರಾಜ್ಞಃ ಕುಶಲಮವ್ಯಯಮ್ ।
ಅನಾಮಯಂ ಚ ರಾಜೇಂದ್ರ ಶುಕಃ ಸಾನುಚರಸ್ಯ ಹ ॥೭॥

ನಂತರ ದ್ವಿಜಶ್ರೇಷ್ಠನಾದ ಶುಕಮುನಿಯು ಜನಕನಿಂದ ನೀಡಲ್ಪಟ್ಟ ಆ ಪೂಜೆಯನ್ನು ಸ್ವೀಕರಿಸಿ, ಹಸುವನ್ನು ನಿಯತಸ್ಥಳಕ್ಕೆ ಒಯ್ಯುವಂತೆ ಹೇಳಿ, ರಾಜನನ್ನು ಸನ್ಮಾನಿಸಿ, ಎಂದೂ

ನಾಶವಾಗದೆ ಇರುವ ರಾಜನ ಕುಶಲವನ್ನು ಮಹಾತೇಜಸ್ವಿಯಾದ ಶುಕಮುನಿಯು ಪ್ರಶ್ನಿಸಿದನು. ಪರಿವಾರದಿಂದ ಸಹಿತನಾದ ರಾಜನ ಸಮಸ್ತ ವಿಧವಾದ ಆರೋಗ್ಯವನ್ನು ಶುಕಮುನಿಯು ವಿಚಾರಿಸಿದನು.

ಅನುಜ್ಞಾತಃ ಸ ತೇನಾಥ ನಿಷಸಾದ ಸಹಾನುಗಃ ।
ಉದಾರಸತ್ತ್ವಾಭಿಜನೋ ಭೂಮೌ ರಾಜಾ ಕೃತಾಂಜಲಿಃ ॥೮॥

ಅವನಿಂದ ಅಪ್ಪಣೆಯನ್ನು ಪಡೆದ ಜನಕನು ಆಸನದಲ್ಲಿ ಕುಳಿತನು. ಉದಾರವಾದ ಹೃದಯವುಳ್ಳ ಜನಕರಾಜನು ಕೈಮುಗಿದುಕೊಂಡು ಶುಕಮುನಿಯು ಕುಳಿತಿರುವ ಆಸನದಿಂದ ಕೆಳಗೆ ಭೂಮಿಯಲ್ಲಿ ಕುಳಿತನು.

ಕುಶಲಂ ಚಾವ್ಯಯಂ ಚೈವ ಪೃಷ್ಟ್ವಾ ವೈಯಾಸಕಿಂ ನೃಪಃ ।
ಕಿಮಾಗಮನಮಿತ್ಯೇವ ಪರ್ಯಪೃಚ್ಛತ ಪಾರ್ಥಿವಃ ॥೯॥

ರಾಜನಾದ ಜನಕನು ಶುಕಮುನಿಯನ್ನು ಕುರಿತು ಅವ್ಯಯವಾದ ಕುಶಲವನ್ನು ಪ್ರಶ್ನಿಸಿ, ಜನಕಪುರಿಗೆ ಆಗಮಿಸಿದ ಕಾರಣವೇನೆಂದು ಪ್ರಶ್ನಿಸಿದನು.

ಶುಕಃ

ಪಿತ್ರಾಹಮುಕ್ತೋ ಭದ್ರಂ ತೇ ಮೋಕ್ಷಧರ್ಮಾರ್ಥಕೋವಿದಃ ।
ವಿದೇಹರಾಜೋ ಯಾಜ್ಯೋ ಮೇ ಜನಕೋ ನಾಮ ವಿಶ್ರುತಃ ॥೧೦॥

ಶುಕ– ನನ್ನ ತಂದೆಯು, ಜನಕಮಹಾರಾಜನು ಮೋಕ್ಷಧರ್ಮಾರ್ಥಗಳನ್ನು ತಿಳಿದಿದ್ದಾನೆ. ನನಗೆ ಯಾಜ್ಯನಾದ ಜನಕನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ವಿದೇಹರಾಜನಿದ್ದಾನೆ ಎಂದು ಹೇಳಿ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ.

ತತ್ರ ಗಚ್ಛಸ್ವ ವೈ ತೂರ್ಣಂ ಯದಿ ತೇ ಹೃದಿ ಸಂಶಯಃ ।
ಪ್ರವೃತ್ತೌ ವಾ ನಿವೃತ್ತೌ ವಾ ಸ ತೇ ಛೇತ್ಸ್ಯತಿ ಸಂಶಯಮ್ ॥೧೧॥

ನಿನ್ನ ಮನಸ್ಸಿನಲ್ಲಿ ಪ್ರವೃತ್ತಿ ಮಾರ್ಗದಲ್ಲಾಗಲಿ, ನಿವೃತ್ತಿ ಮಾರ್ಗದಲ್ಲಾಗಲಿ ಸಂಶಯವಿದ್ದಲ್ಲಿ ಶೀಘ್ರವಾಗಿ ಜನಕರಾಜನ ಮನೆಗೆ ಹೋಗು. ಅವನು ನಿನ್ನ ಎಲ್ಲ ಸಂಶಯವನ್ನು ಪರಿಹರಿಸುತ್ತಾನೆ ಎಂದು ಹೇಳಿದನು.

ಸೋಽಹಂ ಪಿತುರ್ನಿಯೋಗಾತ್ತಾ ವ್ಮುಪಪ್ರಷ್ಟುಮಿಹಾಗತಃ ।
ತನ್ಮೇ ಧರ್ಮಭೃತಾಂ ಶ್ರೇಷ್ಠ ಯಥಾವದ್ ವಕ್ತುಮರ್ಹಸಿ ॥೧೨॥

ಹೀಗೆ ತಂದೆಯಿಂದ ಆಜ್ಞಪ್ತನಾದ ನಾನು ನಿನ್ನನ್ನು ಮೋಕ್ಷದ ವಿಷಯದಲ್ಲಿ ಪ್ರಶ್ನಿಸಲು ಇಲ್ಲಿಗೆ ಆಗಮಿಸಿರುತ್ತೇನೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ, ನಾನು ಕೇಳುವ ಪ್ರಶ್ನೆಗಳಿಗೆ ಯಥಾರ್ಥವಾಗಿ ಉತ್ತರ ಹೇಳಲು ಅರ್ಹನಾಗಿರುತ್ತಿ.

ಕಿಂ ಕಾರ್ಯಂ ಬ್ರಾಹ್ಮಣೇನೇಹ ಮೋಕ್ಷಾರ್ಥಶ್ಚ ಕಿಮಾತ್ಮಕಃ ।
ಕಥಂ ಚ ಮೋಕ್ಷಃ ಕರ್ತವ್ಯೋ ಜ್ಞಾನೇನ ತಪಸಾಪಿ ವಾ ॥೧೩॥

ಬ್ರಾಹ್ಮಣನ ಕರ್ತವ್ಯವೇನು? ಮೋಕ್ಷವೆಂಬ ಪುರುಷಾರ್ಥದ ಸ್ವರೂಪವೇನು? ಮೋಕ್ಷವನ್ನು ಪಡೆದುಕೊಳ್ಳುವ ಬಗ್ಗೆ ಹೇಗೆ? ಮೋಕ್ಷವು ಜ್ಞಾನದಿಂದ ಲಭಿಸುತ್ತದೋ ಅಥವಾ ತಪಸ್ಸಿನಿಂದ ಲಭಿಸುತ್ತದೋ?

ಜನಕಃ

ಯತ್ ಕಾರ್ಯಂ ಬ್ರಾಹ್ಮಣೇನೇಹ ಜನ್ಮಪ್ರಭತಿ ತಚ್ಛೃಣು ।
ಕೃತೋಪನಯನಸ್ತಾತ ಭವೇದ್ ವೇದಪರಾಯಣಃ ॥೧೪॥

ಜನಕ– ಹುಟ್ಟಿನಿಂದ ಬ್ರಾಹ್ಮಣನು ಮಾಡಬೇಕಾದ ಕರ್ತವ್ಯವೇನೆಂದು ಹೇಳುತ್ತೇನೆ, ಕೇಳು. ಉಪನಯನ ಸಂಸ್ಕಾರವಾದ ಬಳಿಕ ಬ್ರಾಹ್ಮಣವಟುವು ವೇದಾಧ್ಯಯನ ತತ್ಪರನಾಗಿರಬೇಕು.

ತಪಸಾ ಗುರುವೃತ್ತ್ಯಾ ಚ ಬ್ರಹ್ಮಚರ್ಯೇಣ ಚಾಭಿಭೋ ।
ದೇವತಾನಾಂ ಪಿತೄಣಾಂ ಚಾಪ್ಯನೃಣಶ್ಚಾನಸೂಯಕಃ ॥೧೫॥

ತಪಸ್ಸಿನಿಂದಲೂ, ಗುರುಸೇವೆಯಿಂದಲೂ, ಬ್ರಹ್ಮಚರ್ಯದಿಂದಲೂ ಸಮಸ್ತ ವೇದಗಳನ್ನು, ವೇದಾಂಗಗಳನ್ನು ಅಧ್ಯಯನ ಮಾಡಬೇಕು. ಹವನಾದಿಗಳಿಂದ ದೇವ ಋಣವನ್ನು, ತರ್ಪಣಾದಿಗಳಿಂದ ಪಿತೃಗಳ ಋಣವನ್ನು ಮಾತ್ಸರ್ಯವಿಲ್ಲದೆ ತೀರಿಸಬೇಕು.

ವೇದಾನಧೀತ್ಯ ನಿಯತೋ ದಕ್ಷಿಣಾಮಪವರ್ಜ್ಯ ಚ ।
ಅಭ್ಯನುಜ್ಞಾಮಥ ಪ್ರಾಪ್ಯ ಸಮಾವರ್ತೇತ ವೈ ದ್ವಿಜಃ ॥೧೬॥

ಜಿತೇಂದ್ರಿಯನಾಗಿದ್ದು, ವೇದಗಳನ್ನು ಅಧ್ಯಯನ ಮಾಡಿ ಗುರುಗಳಿಗೆ ದಕ್ಷಿಣೆಯನ್ನು ನೀಡಿ, ಅವರ ಅನುಮತಿಯನ್ನು ಪಡೆದು ಸಮಾವರ್ತನವೆಂಬ ವಿಧಿಯನ್ನು ಬ್ರಾಹ್ಮಣನು ಹೊಂದಬೇಕು.

ಸಮಾವೃತ್ತಸ್ತು ಗಾರ್ಹಸ್ಥ್ಯೇ ಸದಾರೋ ನಿಯತೋ ವಸೇತ್ ।
ಅನಸೂಯುರ್ಯಥಾನ್ಯಾಯಮಾಹಿತಾಗ್ನಿಸ್ತಥೈವ ಚ ॥೧೭॥

ಸಮಾವರ್ತನ ವಿಧಿಯನ್ನು ಹೊಂದಿದ ಬಳಿಕ ಸ್ನಾತಕನಾದ ಅವನು ವಿವಾಹವನ್ನು ಮಾಡಿಕೊಂಡು, ಗಾರ್ಹಸ್ಥ್ಯಧರ್ಮದಲ್ಲಿ ನಿಯಮವನ್ನು ಪಾಲಿಸುತ್ತಾ, ಪತ್ನಿಯಲ್ಲಿ ಅನುರಾಗ ಉಳ್ಳವನಾಗಿ, ಮತ್ತೊಬ್ಬರ ದೋಷವನ್ನೆಣಿಸದೆ, ಯಥೋಚಿತವಾಗಿ ವ್ಯವಹರಿಸುತ್ತಾ ಆಹಿತಾಗ್ನಿಯಾಗಿ ಕರ್ತವ್ಯಗಳನ್ನು ಮಾಡಬೇಕು.

ಉತ್ಪಾದ್ಯ ಪುತ್ರಪೌತ್ರಂ ತು ವನ್ಯಾಶ್ರಮಪದೇ ವಸೇತ್ ।
ತಾನೇವಾಗ್ನೀನ್ ಯಥಾಶಾಸ್ತ್ರಮರ್ಚಯನ್ನತಿಥಿಪ್ರಿಯಃ ॥೧೮॥

ಮಕ್ಕಳನ್ನು, ಮೊಮ್ಮಕ್ಕಳನ್ನು ಹೊಂದಿದ ಗೃಹಸ್ಥನು ಕಾಲಿಕವಾಗಿ ವಾನಪ್ರಸ್ಥಾಶ್ರಮವನ್ನು ಅವಲಂಬಿಸಬೇಕು. ಆ ಸಮಯದಲ್ಲಿಯೂ ಶಾಸ್ತ್ರವಿಧಿಗೆ ಅನುಗುಣವಾಗಿ ಗಾರ್ಹಪತ್ಯಾದಿ ಅಗ್ನಿಯನ್ನೇ ಆರಾಧಿಸುತ್ತಾ, ಅತಿಥಿಪ್ರಿಯನಾಗಿದ್ದು, ಪ್ರೀತಿಯಿಂದ ಅವರನ್ನು ಸತ್ಕರಿಸಬೇಕು.

ಸ ವನೇಽಗ್ನೀನ್ ಯಥಾನ್ಯಾಯಮಾತ್ಮನ್ಯಾರೋಪ್ಯ ಧರ್ಮವಿತ್ ।
ನಿರ್ದ್ವಂದ್ವೋ ವೀತರಾಗಾತ್ಮಾ ಬ್ರಹ್ಮಾಶ್ರಮಪದೇ ವಸೇತ್ ॥೧೯॥

ವಾನಪ್ರಸ್ಥಾಶ್ರಮದಲ್ಲಿದ್ದ ಅವನು ವಿಧಿಗೆ ಅನುಗುಣವಾಗಿ ಅಗ್ನಿಯನ್ನು ತನ್ನಲ್ಲಿ ಆರೋಪಿಸಿಕೊಂಡು, ಧರ್ಮಜ್ಞನಾಗಿ, ಸುಖ-ದುಃಖಗಳ ದ್ವಂದ್ವವನ್ನು ನೀಗಿಸಿಕೊಂಡು, ರಾಗಾದಿಗಳಿಂದ ಮುಕ್ತನಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು.

ಶುಕಃ

ಉತ್ಪನ್ನೇ ಜ್ಞಾನವಿಜ್ಞಾನೇ ಪ್ರತ್ಯಕ್ಷೇ ಹೃದಿ ಶಾಶ್ವತೇ ।
ಕಿಮವಶ್ಯಂ ನಿವಸ್ತವ್ಯಮಾಶ್ರಮೇಷು ವನೇಷು ಚ ॥೨೦॥

ಸೋಽಹಂ ಪಿತುರ್ನಿಯೋಗಾತ್ತಾ ವ್ಮುಪಪ್ರಷ್ಟುಮಿಹಾಗತಃ ।
ತನ್ಮೇ ಧರ್ಮಭೃತಾಂ ಶ್ರೇಷ್ಠ ಯಥಾವದ್ ವಕ್ತುಮರ್ಹಸಿ ॥೧೨॥

ಹೀಗೆ ತಂದೆಯಿಂದ ಆಜ್ಞಪ್ತನಾದ ನಾನು ನಿನ್ನನ್ನು ಮೋಕ್ಷದ ವಿಷಯದಲ್ಲಿ ಪ್ರಶ್ನಿಸಲು ಇಲ್ಲಿಗೆ ಆಗಮಿಸಿರುತ್ತೇನೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ, ನಾನು ಕೇಳುವ ಪ್ರಶ್ನೆಗಳಿಗೆ ಯಥಾರ್ಥವಾಗಿ ಉತ್ತರ ಹೇಳಲು ಅರ್ಹನಾಗಿರುತ್ತಿ.

ಕಿಂ ಕಾರ್ಯಂ ಬ್ರಾಹ್ಮಣೇನೇಹ ಮೋಕ್ಷಾರ್ಥಶ್ಚ ಕಿಮಾತ್ಮಕಃ ।
ಕಥಂ ಚ ಮೋಕ್ಷಃ ಕರ್ತವ್ಯೋ ಜ್ಞಾನೇನ ತಪಸಾಪಿ ವಾ ॥೧೩॥

ಬ್ರಾಹ್ಮಣನ ಕರ್ತವ್ಯವೇನು? ಮೋಕ್ಷವೆಂಬ ಪುರುಷಾರ್ಥದ ಸ್ವರೂಪವೇನು? ಮೋಕ್ಷವನ್ನು ಪಡೆದುಕೊಳ್ಳುವ ಬಗ್ಗೆ ಹೇಗೆ? ಮೋಕ್ಷವು ಜ್ಞಾನದಿಂದ ಲಭಿಸುತ್ತದೋ ಅಥವಾ ತಪಸ್ಸಿನಿಂದ ಲಭಿಸುತ್ತದೋ?

ಜನಕಃ

ಯತ್ ಕಾರ್ಯಂ ಬ್ರಾಹ್ಮಣೇನೇಹ ಜನ್ಮಪ್ರಭತಿ ತಚ್ಛೃಣು ।
ಕೃತೋಪನಯನಸ್ತಾತ ಭವೇದ್ ವೇದಪರಾಯಣಃ ॥೧೪॥

ಜನಕ– ಹುಟ್ಟಿನಿಂದ ಬ್ರಾಹ್ಮಣನು ಮಾಡಬೇಕಾದ ಕರ್ತವ್ಯವೇನೆಂದು ಹೇಳುತ್ತೇನೆ, ಕೇಳು. ಉಪನಯನ ಸಂಸ್ಕಾರವಾದ ಬಳಿಕ ಬ್ರಾಹ್ಮಣವಟುವು ವೇದಾಧ್ಯಯನ ತತ್ಪರನಾಗಿರಬೇಕು.

ತಪಸಾ ಗುರುವೃತ್ತ್ಯಾ ಚ ಬ್ರಹ್ಮಚರ್ಯೇಣ ಚಾಭಿಭೋ ।
ದೇವತಾನಾಂ ಪಿತೄಣಾಂ ಚಾಪ್ಯನೃಣಶ್ಚಾನಸೂಯಕಃ ॥೧೫॥

ತಪಸ್ಸಿನಿಂದಲೂ, ಗುರುಸೇವೆಯಿಂದಲೂ, ಬ್ರಹ್ಮಚರ್ಯದಿಂದಲೂ ಸಮಸ್ತ ವೇದಗಳನ್ನು, ವೇದಾಂಗಗಳನ್ನು ಅಧ್ಯಯನ ಮಾಡಬೇಕು. ಹವನಾದಿಗಳಿಂದ ದೇವ ಋಣವನ್ನು, ತರ್ಪಣಾದಿಗಳಿಂದ ಪಿತೃಗಳ ಋಣವನ್ನು ಮಾತ್ಸರ್ಯವಿಲ್ಲದೆ ತೀರಿಸಬೇಕು.

ವೇದಾನಧೀತ್ಯ ನಿಯತೋ ದಕ್ಷಿಣಾಮಪವರ್ಜ್ಯ ಚ ।
ಅಭ್ಯನುಜ್ಞಾಮಥ ಪ್ರಾಪ್ಯ ಸಮಾವರ್ತೇತ ವೈ ದ್ವಿಜಃ ॥೧೬॥

ಜಿತೇಂದ್ರಿಯನಾಗಿದ್ದು, ವೇದಗಳನ್ನು ಅಧ್ಯಯನ ಮಾಡಿ ಗುರುಗಳಿಗೆ ದಕ್ಷಿಣೆಯನ್ನು ನೀಡಿ, ಅವರ ಅನುಮತಿಯನ್ನು ಪಡೆದು ಸಮಾವರ್ತನವೆಂಬ ವಿಧಿಯನ್ನು ಬ್ರಾಹ್ಮಣನು ಹೊಂದಬೇಕು.

ಸಮಾವೃತ್ತಸ್ತು ಗಾರ್ಹಸ್ಥ್ಯೇ ಸದಾರೋ ನಿಯತೋ ವಸೇತ್ ।
ಅನಸೂಯುರ್ಯಥಾನ್ಯಾಯಮಾಹಿತಾಗ್ನಿಸ್ತಥೈವ ಚ ॥೧೭॥

ಸಮಾವರ್ತನ ವಿಧಿಯನ್ನು ಹೊಂದಿದ ಬಳಿಕ ಸ್ನಾತಕನಾದ ಅವನು ವಿವಾಹವನ್ನು ಮಾಡಿಕೊಂಡು, ಗಾರ್ಹಸ್ಥ್ಯಧರ್ಮದಲ್ಲಿ ನಿಯಮವನ್ನು ಪಾಲಿಸುತ್ತಾ, ಪತ್ನಿಯಲ್ಲಿ ಅನುರಾಗ ಉಳ್ಳವನಾಗಿ, ಮತ್ತೊಬ್ಬರ ದೋಷವನ್ನೆಣಿಸದೆ, ಯಥೋಚಿತವಾಗಿ ವ್ಯವಹರಿಸುತ್ತಾ ಆಹಿತಾಗ್ನಿಯಾಗಿ ಕರ್ತವ್ಯಗಳನ್ನು ಮಾಡಬೇಕು.

ಉತ್ಪಾದ್ಯ ಪುತ್ರಪೌತ್ರಂ ತು ವನ್ಯಾಶ್ರಮಪದೇ ವಸೇತ್ ।
ತಾನೇವಾಗ್ನೀನ್ ಯಥಾಶಾಸ್ತ್ರಮರ್ಚಯನ್ನತಿಥಿಪ್ರಿಯಃ ॥೧೮॥

ಮಕ್ಕಳನ್ನು, ಮೊಮ್ಮಕ್ಕಳನ್ನು ಹೊಂದಿದ ಗೃಹಸ್ಥನು ಕಾಲಿಕವಾಗಿ ವಾನಪ್ರಸ್ಥಾಶ್ರಮವನ್ನು ಅವಲಂಬಿಸಬೇಕು. ಆ ಸಮಯದಲ್ಲಿಯೂ ಶಾಸ್ತ್ರವಿಧಿಗೆ ಅನುಗುಣವಾಗಿ ಗಾರ್ಹಪತ್ಯಾದಿ ಅಗ್ನಿಯನ್ನೇ ಆರಾಧಿಸುತ್ತಾ, ಅತಿಥಿಪ್ರಿಯನಾಗಿದ್ದು, ಪ್ರೀತಿಯಿಂದ ಅವರನ್ನು ಸತ್ಕರಿಸಬೇಕು.

ಸ ವನೇಽಗ್ನೀನ್ ಯಥಾನ್ಯಾಯಮಾತ್ಮನ್ಯಾರೋಪ್ಯ ಧರ್ಮವಿತ್ ।
ನಿರ್ದ್ವಂದ್ವೋ ವೀತರಾಗಾತ್ಮಾ ಬ್ರಹ್ಮಾಶ್ರಮಪದೇ ವಸೇತ್ ॥೧೯॥

ವಾನಪ್ರಸ್ಥಾಶ್ರಮದಲ್ಲಿದ್ದ ಅವನು ವಿಧಿಗೆ ಅನುಗುಣವಾಗಿ ಅಗ್ನಿಯನ್ನು ತನ್ನಲ್ಲಿ ಆರೋಪಿಸಿಕೊಂಡು, ಧರ್ಮಜ್ಞನಾಗಿ, ಸುಖ-ದುಃಖಗಳ ದ್ವಂದ್ವವನ್ನು ನೀಗಿಸಿಕೊಂಡು, ರಾಗಾದಿಗಳಿಂದ ಮುಕ್ತನಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು.

ಶುಕಃ

ಉತ್ಪನ್ನೇ ಜ್ಞಾನವಿಜ್ಞಾನೇ ಪ್ರತ್ಯಕ್ಷೇ ಹೃದಿ ಶಾಶ್ವತೇ ।
ಕಿಮವಶ್ಯಂ ನಿವಸ್ತವ್ಯಮಾಶ್ರಮೇಷು ವನೇಷು ಚ ॥೨೦॥

ಶುಕ– ಮಹಾರಾಜನೇ, ಬ್ರಹ್ಮಚರ್ಯಾಶ್ರಮದಲ್ಲಿದ್ದಾಗ ಯಾರಿಗಾದರೂ ಜ್ಞಾನ-ವಿಜ್ಞಾನಗಳ ರಹಸ್ಯವು ತಿಳಿದುಬಿಟ್ಟರೆ, ರಾಗ-ದ್ವೇಷ, ಪ್ರಿಯ-ಅಪ್ರಿಯ ಇವೇ ಮೊದಲಾದ ದ್ವಂದ್ವಗಳು ಮನಸ್ಸಿನಿಂದ ದೂರವಾದರೆ, ಗೃಹಸ್ಥಾದಿ ಆಶ್ರಮಗಳು ಆವಶ್ಯಕವೆ?

ಏತದ್ ಭವಂತಂ ಪೃಚ್ಛಾಮಿ ತದ್ ಭವಾನ್ ವಕ್ತುಮರ್ಹತಿ ।
ಯಥಾವೇದಾರ್ಥತತ್ತ್ವೇನ ಬ್ರೂಹಿ ಮೇ ತ್ವಂ ಜನಾಧಿಪ ॥೨೧॥

ಈ ಪ್ರಶ್ನೆಯನ್ನು ನಿನ್ನ ಮುಂದಿಟ್ಟಿದ್ದೇನೆ. ಯಥೋಚಿತವಾಗಿ ಉತ್ತರಿಸು. ವೇದದಲ್ಲಿ ಹೇಳಿದ ಅಭಿಪ್ರಾಯಕ್ಕನುಗುಣವಾಗಿ ನನಗೆ ನೀನು ಉತ್ತರವನ್ನು ಹೇಳು.

ಜನಕಃ

ನ ವಿನಾ ಜ್ಞಾನವಿಜ್ಞಾನಂ ಮೋಕ್ಷಸ್ಯಾಧಿಗಮೋ ಭವೇತ್ ।
ನ ವಿನಾ ಗುರುಸಂಬಂಧಂ ಜ್ಞಾನಸ್ಯಾಧಿಗಮಃ ಸ್ಮೃತಃ ॥೨೨॥

ಜನಕ– ಜ್ಞಾನ-ವಿಜ್ಞಾನಗಳ ರಹಸ್ಯಗಳನ್ನು ತಿಳಿಯದಿದ್ದರೆ ಮೋಕ್ಷ ದೊರೆಯದು. ಸದ್ಗುರುಗಳ ಸಹವಾಸದಿಂದಲೇ ಶಾಸ್ತ್ರಜ್ಞಾನವು ದೊರೆಯುವುದಿಲ್ಲ.

ಆಚಾರ್ಯಃ ಪ್ಲವಿತಾ ತಸ್ಯ ಜ್ಞಾನಂ ಪ್ಲವ ಇಹೋಚ್ಯತೇ ।
ವಿಜ್ಞಾಯ ಕೃತಕೃತ್ಯಸ್ತು ತೀರ್ಣಸ್ತದುಭಯಂ ತ್ಯಜೇತ್ ॥೨೩॥

ಸಂಸಾರವನ್ನು ದಾಟಿಸುವ ನಾವಿಕನೇ ಗುರುವು. ಗುರುವು ಉಪದೇಶಿಸಿದ ಜ್ಞಾನವೇ ನೌಕೆ ಎನಿಸಿದೆ. ಈ ರಹಸ್ಯವನ್ನು ತಿಳಿದ ಸಾಧಕನು ಸಂಸಾರ ಸಾಗರವನ್ನು ದಾಟಿ ಕೃತಕೃತ್ಯನಾಗಬೇಕು. ಸಂಸಾರವನ್ನು ದಾಟಿದ ಬಳಿಕ ಜ್ಞಾನ-ಗುರು ಇವೆಲ್ಲವನ್ನೂ ಬಿಡಬೇಕು.

ಅನುಚ್ಛೇದಾಯ ಲೋಕಾನಾಮನುಚ್ಛೇದಾಯ ಕರ್ಮಣಾಮ್ ।
ಪೂರ್ವೈರಾಚರಿತೋ ಧರ್ಮಶ್ಚಾತುರಾಶ್ರಮ್ಯಸಂಕಥಃ ॥೨೪॥

ಲೋಕವು ನಾಶ ಹೊಂದದೆ ಬೆಳೆಯಬೇಕು. ಕರ್ಮಗಳು ನಾಶ ಹೊಂದದೆ ಮುಂದುವರೆಯಬೇಕು ಎಂಬ ಕಾರಣದಿಂದ ನಾಲ್ಕು ಆಶ್ರಮಧರ್ಮಗಳ ಆಚರಣೆಗಳನ್ನು ಹಿರಿಯರು ರೂಢಿಯಲ್ಲಿತಂದಿರುತ್ತಾರೆ.

ಅನೇನ ಕ್ರಮಯೋಗೇನ ಬಹುಜಾತಿಷು ಕರ್ಮಣಾ ।
ಕೃತ್ವಾ ಶುಭಾಶುಭಂ ಕರ್ಮ ಮೋಕ್ಷೋ ನಾಮೇಹ ಲಭ್ಯತೇ ॥೨೫॥

ಈ ರೀತಿಯಾದ ಕರ್ಮದಿಂದಲೇ ಅನೇಕ ಜಾತಿಗಳಲ್ಲಿ ಸತ್ಕರ್ಮವನ್ನಾಚರಿಸುತ್ತಾ ಇದ್ದರೆ ಶುಭಾಶುಭ ಕರ್ಮಗಳ ಹಿನ್ನೆಲೆಯಲ್ಲಿ ಮೋಕ್ಷವು ಲಭಿಸುತ್ತದೆ.

ಭವಿತೈಃ ಕಾರಣೈಶ್ಚಾಯಂ ಬಹುಸಂಸಾರಯೋನಿಷು ।
ಆಸಾದಯತಿ ಶುದ್ಧಾತ್ಮಾ ಮೋಕ್ಷಂ ವೈ ಪ್ರಥಮಾಶ್ರಮೇ ॥೨೬॥

ಅನೇಕ ಜನ್ಮಗಳನ್ನು ಪಡೆದು, ಶುಭಕರ್ಮಗಳನ್ನೇ ಆಚರಿಸುತ್ತಾ, ಪವಿತ್ರವಾದ ಇಂದ್ರಿಯಗಳನ್ನು ಹೊಂದಿದ ಶುದ್ಧಾತ್ಮನಾದ ಪುರುಷನು ಮೊದಲನೆಯ ಆಶ್ರಮವೆನಿಸಿದ ಬ್ರಹ್ಮಚರ್ಯಾಶ್ರಮದಲ್ಲಿಯೇ ಮೋಕ್ಷವನ್ನು ಹೊಂದಬಹುದು.

ತಮಾಸಾದ್ಯ ತು ಮುಕ್ತಸ್ಯ ದೃಷ್ಟಾರ್ಥಸ್ಯ ವಿಪಶ್ಚಿತಃ ।
ತ್ರಿಷ್ವಾಶ್ರಮೇಷು ಕೋ ನರ್ಥೋ ಭವೇತ್ ಪರಮಭೀಪ್ಸತಃ ॥೨೭॥

ಬ್ರಹ್ಮಚರ್ಯಾಶ್ರಮವನ್ನು ಹೊಂದಿದ ಬಳಿಕ ಆತ್ಮತತ್ತ್ವವನ್ನು ಚೆನ್ನಾಗಿ ತಿಳಿದ ವಿದ್ವಾಂಸನಿಗೆ ಮೂರು ಆಶ್ರಮವನ್ನು ಸ್ವೀಕರಿಸುವುದರಲ್ಲಿ ಯಾವ ಪ್ರಯೋಜನವೂ ಇರುವುದಿಲ್ಲ. (ಜೀವನ್ಮುಕ್ತನಾಗಿ ಭಗವಂತನನ್ನೇ ಬಯಸುವ ಅವನು ಆಶ್ರಮದಿಂದ ಏನು ಮಾಡಬೇಕು ಎಂದು ತಾತ್ಪರ್ಯ).

ರಾಜಸಾಂಸ್ತಾಮಸಾಂಶ್ಚೈವ ನಿತ್ಯಂ ದೋಷಾನ್ ವಿವರ್ಜಯೇತ್ ।
ಸಾತ್ತ್ವಿಕಂ ಮಾರ್ಗಮಾಸ್ಥಾಯ ಪಶ್ಯೇದಾತ್ಮಾನಮಾತ್ಮನಾ ॥೨೮॥

ವಿದ್ವಾಂಸನಾದವನು ರಾಜಸ-ತಾಮಸ ದೋಷಗಳನ್ನು ಸದಾ ಕಾಲ ತ್ಯಜಿಸಬೇಕು. ಸಾತ್ವಿಕವಾದ ಮಾರ್ಗವನ್ನು ಬುದ್ಧಿಯ ಮೂಲಕ ಆಶ್ರಯಿಸಿ ಪರಮಾತ್ಮನನ್ನು ಕಂಡುಕೊಳ್ಳಬೇಕು.

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಂಪಶ್ಯನ್ನೋಪಲಿಪ್ಯೇತ ಜಲೇ ವಾರಿಚರೋ ಯಥಾ ॥೨೯॥

ಯಾವ ವ್ಯಕ್ತಿಯು ಸಮಸ್ತ ಪ್ರಾಣಿಗಳ ಹೃದಯದಲ್ಲಿ ಪರಮಾತ್ಮನನ್ನು, ಪರಮಾತ್ಮನಲ್ಲಿ ಸಮಸ್ತ ಪ್ರಾಣಿಗಳನ್ನು ಕಾಣುತ್ತಾನೋ ಅವನು ನೀರಿನಲ್ಲಿ ಸಂಚರಿಸುವ ಪ್ರಾಣಿಯು ಅಸಂಗವಾಗಿರುವಂತೆ ಸಂಸಾರದಲ್ಲಿದ್ದರೂ ಅಸಂಗನಾಗಿರುತ್ತಾನೆ.

ಪಕ್ಷೀವ ಪ್ಲವನಾದೂರ್ಧ್ವಮಮುತ್ರಾನಂತ್ಯಮಶ್ನುತೇ ।
ವಿಹಾಯ ದೇಹಂ ನಿರ್ಮುಕ್ತೋ ನಿರ್ದ್ವಂದ್ವಃ ಪ್ರಶಮಂ ಗತಃ ॥೩೦॥

ಗೂಡಿನಲ್ಲಿ ಕುಳಿತ ಹಕ್ಕಿಯು ಗೂಡನ್ನು ಬಿಟ್ಟು ಹಾರಿದ ಬಳಿಕ ಗೂಡನ್ನು ಹೇಗೆ ಮರೆಯುತ್ತದೋ, ಹಾಗೆ ಈ ದೇಹವೆಂಬ ಗೂಡಿನಿಂದ ಮುಕ್ತನಾದ ಜೀವನು ಸುಖ-ದುಃಖಗಳ ದ್ವಂದ್ವದಿಂದಲೂ ಬಿಡುಗಡೆಯನ್ನು ಹೊಂದಿ ಮೋಕ್ಷಸುಖವನ್ನು ಅನುಭವಿಸುತ್ತಾನೆ.

ಅತ್ರ ಗಾಥಾಃ ಪುರಾ ಗೀತಾಃ ಶೃಣು ರಾಜ್ಞಾ ಯಯಾತಿನಾ ।
ಧಾರ್ಯಂತೇ ಯಾ ದ್ವಿಜೈಸ್ತಾತ ಮೋಕ್ಷಶಾಸ್ತ್ರವಿಶಾರದೈಃ ॥೩೧॥

ಈ ವಿಷಯದಲ್ಲಿ ಹಿಂದೆ ಯಯಾತಿ ರಾಜನು ಹಾಡಿರುವ ಶ್ಲೋಕಗಳು ಹೀಗಿವೆ. ಈಗಲೂ ಮೋಕ್ಷಶಾಸ್ತ್ರಜ್ಞರು ಆ ಶ್ಲೋಕಗಳನ್ನು ಧಾರಣೆ ಮಾಡಿ ಹೇಳುತ್ತಾರೆ.

ಜ್ಯೋತಿರಾತ್ಮನಿ ನಾನ್ಯತ್ರ ರತಂ ತತ್ಸೈವ ಚೈವ ತತ್ ।
ಸ್ವಯಂ ಚ ಶಕ್ಯಂ ತದ್ದ್ರಷ್ಟುಂ ಸುಸಮಾಹಿತಚೇತಸಾ ॥೩೨॥

ಭಗವಂತನೆಂಬ ಜ್ಯೋತಿಯು ನಮ್ಮ ಹೃದಯದಲ್ಲೇ ಇದೆ. ಯಾವ ಮನುಷ್ಯನು ಆ ಹೃದ್ಗತನಾದ ಭಗವಂತನಲ್ಲಿಯೇ ಆಸಕ್ತನಾಗಿರುತ್ತಾನೋ ಅವನು ಆ ಹೃದಯದಲ್ಲಿರುವ ಜ್ಯೋತಿಸ್ಸನ್ನು ಕಾಣಲು ತಾನು ಸಮರ್ಥನಾಗುತ್ತಾನೆ.

ನ ಬಿಭೇತಿ ಪರೋ ಯಸ್ಮಾನ್ನ ಬಿಭೇತಿ ಪರಾಚ್ಚ ಯಃ ।
ಯಶ್ಚ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಂಪದ್ಯತೇ ತದಾ ॥೩೩॥

ಯಾವಾತನು ಇತರ ಪ್ರಾಣಿಗಳನ್ನು ಭಯಗೊಳಿಸುವುದಿಲ್ಲವೋ ಇತರ ಪ್ರಾಣಿಗಳಿಂದ ಭಯ ಹೊಂದುವುದಿಲ್ಲವೋ, ಯಾವನು ಯಾವ ವಸ್ತುವನ್ನೂ ಬಯಸುವುದಿಲ್ಲವೋ, ಯಾರನ್ನೂ ದ್ವೇಷಿಸುವುದಿಲ್ಲವೋ ಅಂಥವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಯದಾ ಭಾವಂ ನ ಕುರುತೇ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥೩೪॥

ಯಾವನು ಕರ್ಮ, ಮನಸ್ಸು, ಮಾತುಗಳಿಂದ ಯಾವುದೇ ಪ್ರಾಣಿಯ ವಿಷಯದಲ್ಲಿ ಪಾಪವನ್ನು ಹೊಂದುವುದಿಲ್ಲವೋ, ಸಮಸ್ತ ಪ್ರಾಣಿಗಳಲ್ಲಿಯೂ ದಯಾಪೂರ್ಣನಾಗಿ ದ್ವೇಷರಹಿತನಾಗಿರುತ್ತಾನೆಯೋ ಅವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಸಂಯೋಜ್ಯ ತಪಸಾತ್ಮಾನಮೀರ್ಷ್ಯಾಮುತ್ಸೃಜ್ಯ ಮೋಹಿನೀಮ್ ।
ತ್ಯಕ್ತ್ವಾ ಕಾಮಂ ಚ ಲೋಭಂ ಚ ತತೋ ಬ್ರಹ್ಮತ್ವಮಶ್ನುತೇ ॥೩೫॥

ಸಾಧಕನು ಮೋಹಗೊಳಿಸುವ ಹೊಟ್ಟೆಕಿಚ್ಚನ್ನು ತ್ಯಜಿಸಿ, ತನ್ನನ್ನು ತಪಸ್ಸಿನಲ್ಲಿ ತೊಡಗಿಸಿಕೊಂಡು, ಕಾಮ-ಲೋಭಗಳನ್ನು ಬಿಟ್ಟಲ್ಲಿ ಸುಖದಿಂದ ವೃದ್ಧಿಯನ್ನು ಹೊಂದುತ್ತಾನೆ.

ಯದಾ ಶ್ರವ್ಯೇ ಚ ದೃಶ್ಯೇ ಚ ಸರ್ವಭೂತೇಷು ಚಾಪ್ಯಯಮ್ ।
ಸಮೋ ಭವತಿ ನಿರ್ದ್ವಂದ್ವೋ ಬ್ರಹ್ಮ ಸಂಪದ್ಯತೇ ತದಾ ॥೩೬॥

ಯಾವಾಗ ಸಾಧಕನು ಕಿವಿಗೆ ಕೇಳಿಸುವ ಶಬ್ದಗಳಲ್ಲಿ ಕಣ್ಣಿಗೆ ಕಾಣುವ ವಸ್ತುಗಳಲ್ಲಿ, ಸಮಸ್ತ ಪ್ರಾಣಿಗಳಲ್ಲಿ ಸಮಭಾವವನ್ನು ಹೊಂದುತ್ತಾನೋ, ದ್ವಂದ್ವಗಳನ್ನು ದಾಟಿರುತ್ತಾನೋ ಅವನು ಭಗವಂತನನ್ನು ಆಗ ಹೊಂದುತ್ತಾನೆ.

ಯದಾ ಸ್ತುತಿಂ ಚ ನಿಂದಾಂ ಚ ಸಮತ್ವೇನೈವ ಪಶ್ಯತಿ ।
ಕಾಂಚನಂ ಚಾಯಸಂ ಚೈವ ಸುಖದುಃಖೇ ತಥೈವ ಚ ॥೩೭॥

ಶೀತಮುಷ್ಣಂ ತಥೈವಾರ್ಥಮನರ್ಥಂ ಪ್ರಿಯಮಪ್ರಿಯಮ್ ।
ಜೀವಿತಂ ಮರಣಂ ಚೈವ ಬ್ರಹ್ಮ ಸಂಪದ್ಯತೇ ತದಾ ॥೩೮॥

ಯಾವಾಗ ಸಾಧಕನು ನಿಂದಾ-ಸ್ತುತಿಗಳನ್ನು ಸಮಾನವಾಗಿ ಕಾಣುತ್ತಾನೋ, ಸುವರ್ಣವನ್ನು-ಕಬ್ಬಿಣವನ್ನು, ಸುಖವನ್ನು-ದುಃಖವನ್ನು, ಚಳಿಯನ್ನು ಬಿಸಿಯನ್ನು, ಅರ್ಥವನು- ಅನರ್ಥವನ್ನು, ಪ್ರಿಯವನ್ನು-ಅಪ್ರಿಯವನ್ನು, ಜೀವನವನ್ನು -ಮರಣವನ್ನು ಸಮಾನವಾಗಿ ಕಾಣುತ್ತಾನೋ ಆಗ ಬ್ರಹ್ಮನನ್ನು ಹೊಂದುತ್ತಾನೆ.

ಪ್ರಸಾರ್ಯೇಹ ಯಥಾಂಗಾನಿ ಕೂರ್ಮಃ ಸಂಹರತೇ ಪುನಃ ।
ತಥೇಂದ್ರಿಯಾಣಿ ಮನಸಾ ಸಂಯಂತವ್ಯಾನಿ ಭಿಕ್ಷುಣಾ ॥೩೯॥

ಆಮೆಯು ಹೇಗೆ ತನ್ನ ಅಂಗಗಳನ್ನೆಲ್ಲ ಹೊರಗೆ ಬಿಟ್ಟರೂ ಪುನಃ ಒಳಕ್ಕೆ ಸೆಳೆದುಕೊಳ್ಳುತ್ತದೋ ಹಾಗೆ ಸಂನ್ಯಾಸಿಯು ಇಂದ್ರಿಯಗಳನ್ನು ಹೊರಗೆ ಬಿಟ್ಟಿದ್ದರೂ ಮನಸ್ಸಿನ ಮೂಲಕ ನಿಗ್ರಹಿಸಿಕೊಳ್ಳಬೇಕು.

ತಮಃಪರಿಗತಂ ವೇಶ್ಮ ಯಥಾ ದೀಪೇನ ದೃಶ್ಯತೇ ।
ತಥಾ ಬುದ್ಧಿಪ್ರದೀಪೇನ ಶಕ್ಯ ಆತ್ಮಾ ನಿರೀಕ್ಷಿತುಮ್ ॥೪೦॥

ಏತತ್ ಸರ್ವಂ ಪ್ರಪಶ್ಯಾಮಿ ತ್ವಯಿ ಬುದ್ಧಿಮತಾಂ ವರ ।
ಯಚ್ಚಾನ್ಯದಪಿ ವೇತ್ತವ್ಯಂ ತತ್ತ್ವತೋ ವೇದ ತದ್ ಭವಾನ್ ॥೪೧॥

ಕತ್ತಲಿನಿಂದ ಆವೃತವಾದ ಮನೆಯು ದೀಪದ ಬೆಳಕಿನಿಂದ ನೋಡಲು ಸಾಧ್ಯವಾಗುವಂತೆ ಬುದ್ಧಿಯೆಂಬ ದೀಪದಿಂದ ಹೃದಯದಲ್ಲಿರುವ ಪರಮಾತ್ಮನನ್ನು ನೋಡಲು ಸಮರ್ಥನಾಗುತ್ತಾನೆ. ಬುದ್ಧಿವಂತರಲ್ಲಿ ಶ್ರೇಷ್ಠನೇ, ನಾನು ಹೇಳಿದ ಜ್ಞಾನಿಯ ಗುಣಗಳೆಲ್ಲವನ್ನೂ ನಿನ್ನಲ್ಲಿ ಕಾಣುತ್ತೇನೆ. ಈ ವಿಷಯದಲ್ಲಿ ಮತ್ತೇನಾದರೂ ತಿಳಿಯಬೇಕೆಂದಿದ್ದರೆ ಯಥಾವತ್ತಾಗಿ ನೀನು ಅದನ್ನು ತಿಳಿದಿರುತ್ತಿ.

ಬ್ರಹ್ಮರ್ಷೇ ವಿದಿತಶ್ಚಾಸಿ ವಿಷಯಾಂತಮುಪಾಗತಃ ।
ಗುರೋಸ್ತವ ಪ್ರಸಾದೇನ ತವ ಚೈವೋಪಶಿಕ್ಷಯಾ ॥೪೨॥

ಬ್ರಹ್ಮರ್ಷಿಯೇ, ನಿನ್ನ ತಂದೆಯ ಕರುಣೆಯಿಂದ, ಅವರಿಂದ ಹೊಂದಿದ ಜ್ಞಾನದಿಂದ ನೀನು ವಿಷಯಸುಖದಿಂದ ದೂರನಾಗಿರುತ್ತಿ ಎಂದು ತಿಳಿದಿದ್ದೇನೆ.

ತಸ್ಯೈವ ಚ ಪ್ರಸಾದೇನ ಪ್ರಾದುರ್ಭೂತಂ ಮಹಾಮುನೇ ।
ಜ್ಞಾನಂ ದಿವ್ಯಂ ಮಮಾಪೀದಂ ತೇನಾಸಿ ವಿದಿತೋ ಮಮ ॥೪೩॥

ಮಹಾಮುನಿಯೇ, ವ್ಯಾಸರ ಅನುಗ್ರಹದಿಂದ ನನಗೂ ದಿವ್ಯಜ್ಞಾನವು ಲಭಿಸಿದೆ. ಆ ದಿವ್ಯಜ್ಞಾನದ ಸಹಾಯದಿಂದಲೇ ನಿನ್ನ ನಿಜರೂಪವನ್ನು ನಾನು ಬಲ್ಲವನಾಗಿದ್ದೇನೆ.

ಅಧಿಕಂ ತವ ವಿಜ್ಞಾನಮಧಿಕಾ ಚ ಗತಿಸ್ತವ ।
ಅಧಿಕಂ ಚ ತವೈಶ್ವರ್ಯಂ ತಚ್ಚ ತ್ವಂ ನಾವಬುಧ್ಯಸೇ ॥೪೪॥

ನಿನ್ನ ವಿಜ್ಞಾನವು ಶ್ರೇಷ್ಠವಾದುದು. ನಿನ್ನ ಗತಿಯೂ ಶ್ರೇಷ್ಠವಾದುದು. ಯೋಗ-

ಐಶ್ವರ್ಯಗಳು ನಿನ್ನಲ್ಲಿ ಅಧಿಕವಾಗಿವೆ. ಆದರೆ ನಿನ್ನ ಮಹಿಮೆಯನ್ನು ನೀನು ತಿಳಿದಿರುವುದಿಲ್ಲ.

ಬಾಲ್ಯಾದ್ವಾ ಸಂಶಯಾದ್ವಾಪಿ ಭಯಾದ್ವಾಪ್ಯವಿಮೋಕ್ಷಜಾತ್ ।
ಉತ್ಪನ್ನೇ ಚಾಪಿ ವಿಜ್ಞಾನೇ ನಾಧಿಗಚ್ಛತಿ ತಾಂ ಗತಿಮ್ ॥೪೫॥

ಮನುಷ್ಯನಿಗೆ ವಿಜ್ಞಾನವು ಲಭಿಸಿದ್ದರೂ ಬಾಲ್ಯದ ಕಾರಣದಿಂದ, ಸಂಶಯದಿಂದ ಮೋಕ್ಷವು ಲಭಿಸಿಲ್ಲವೆಂದು ಕಾಲ್ಪನಿಕ ಭಯದಿಂದ ಮೋಕ್ಷವನ್ನು ಹೊಂದಿರುವುದಿಲ್ಲ.

ವ್ಯವಸಾಯೇನ ಶುದ್ಧೇನ ಮದ್ವಿಧೈಶ್ಛಿನ್ನಸಂಶಯಃ ।
ವಿಮುಚ್ಯ ಹೃದಯಗ್ರಂಥೀನಾಸಾದಯತಿ ತಾಂ ಗತಿಮ್ ॥೪೬॥

ಯಾವನು ನಮ್ಮಂತಹವರ ಮಾರ್ಗದರ್ಶನದಿಂದ ಸಂಶಯವನ್ನು ಪರಿಹರಿಸಿಕೊಂಡು, ಶುದ್ಧವಾದ ಪ್ರಯತ್ನದಿಂದ ಹೃದಯದ ಅಜ್ಞಾನವನ್ನೆಲ್ಲ ಪರಿಹರಿಸಿಕೊಳ್ಳುತ್ತಾನೋ ಅವನು ಮೋಕ್ಷಮಾರ್ಗವನ್ನು ಹೊಂದುತ್ತಾನೆ.

ಭವಾಂಶ್ಚೋತ್ಪನ್ನವಿಜ್ಞಾನಃ ಸ್ಥಿರಬುದ್ಧಿರಲೋಲುಪಃ ।
ವ್ಯವಸಾಯಾದೃತೇ ಬ್ರಹ್ಮನ್ನಾಸಾದಯತಿ ತತ್ಪರಮ್ ॥೪೭॥

ಬ್ರಾಹ್ಮಣಶ್ರೇಷ್ಠನೇ, ನಿನ್ನಲ್ಲಿ ಬ್ರಹ್ಮಜ್ಞಾನದ ಉದಯವಾಗಿದೆ. ನಿನ್ನ ಬುದ್ಧಿಯು ಸ್ಥಿರವಾಗಿದೆ. ನೀನು ವಿಷಯಲೋಲುಪನಾಗಿರುವುದಿಲ್ಲ. ಆದರೆ ಬ್ರಹ್ಮಜ್ಞಾನಕ್ಕೆ ಪ್ರಯತ್ನವು ಅನಿವಾರ್ಯವು.ಪ್ರಯತ್ನವಿಲ್ಲದೆ ಬ್ರಹ್ಮಜ್ಞಾನವು ದೊರೆಯದು.

ನಾಸ್ತಿ ತೇ ಸುಖದುಃಖೇಷು ವಿಶೇಷೋ ನಾಸ್ತಿ ಲೋಲುಪಾ ।
ನೌತ್ಸುಕ್ಯಂ ನೃತ್ತಗೀತೇಷು ನ ರಾಗ ಉಪಜಾಯತೇ ॥೪೮॥

ನೀನು ಸುಖ-ದುಃಖಗಳಲ್ಲಿ ಯಾವ ವಿಶೇಷವನ್ನೂ ಕಾಣುತ್ತಿಲ್ಲ. ವಿಷಯ ಸುಖಗಳಲ್ಲಿ ಆಸಕ್ತನಾಗಿಲ್ಲ. ನೃತ್ಯ-ಗೀತೆ ಇವುಗಳ ಕುತೂಹಲವು ನಿನ್ನಲ್ಲಿ ಇಲ್ಲದಿರುವುದರಿಂದ ನಿನ್ನಲ್ಲಿ ಅವುಗಳ ಕುರಿತು ಪ್ರೀತಿ ಹುಟ್ಟಿರುವುದಿಲ್ಲ.

ನ ಬಂಧುಷು ನಿಬಂಧಸ್ತೇ ನ ಭಯೇಷ್ವಸ್ತಿ ತೇ ಭಯಮ್ ।
ಪಶ್ಯಾಮಿ ತ್ವಾಂ ಮಹಾಭಾಗ ತುಲ್ಯಲೋಷ್ಟಾಶ್ಮಕಾಂಚನಮ್ ॥೪೯॥

ಬಂಧುಗಳ ವಿಷಯದಲ್ಲಿ ಆಸಕ್ತಿಯಿಲ್ಲ, ಭಯದ ಸನ್ನಿವೇಶದಲ್ಲಿ ಭಯವಾಗುವುದಿಲ್ಲ. ಮಹಾಭಾಗ್ಯವಂತನೇ, ಕಲ್ಲು-ಮಣ್ಣು-ಸುವರ್ಣಗಳನ್ನು ನೀನು ಸಮಾನವಾಗಿ ಕಾಣುತ್ತಿರುವಿ ಎಂದು ಭಾವಿಸಿದ್ದೇನೆ.

ಅಹಂ ಚ ತ್ವಾನುಪಶ್ಯಾಮಿ ಯೇ ಚಾಪ್ಯನ್ಯೇ ಮನೀಷಿಣಃ ।
ಆಸ್ಥಿತಂ ಪರಮಂ ಮಾರ್ಗಮಕ್ಷಯಂ ತಮನಾಮಯಮ್ ॥೫೦॥

ನೀನು ಅಕ್ಷಯವಾದ, ಈತಿಬಾಧೆಗಳಿಂದ ರಹಿತವಾದ, ಶ್ರೇಷ್ಠವಾದ ಮೋಕ್ಷಮಾರ್ಗವನ್ನು ಆಶ್ರಯಿಸಿರುತ್ತಿ ಎಂದು ತಿಳಿದಿದ್ದೇನೆ. ವಿದ್ವಾಂಸರು ನಿನ್ನನ್ನು ಹಾಗೆ ಭಾವಿಸಿರುತ್ತಾರೆ.

ಯತ್ಫಲಂ ಬ್ರಾಹ್ಮಣಸ್ಯೇಹ ಮೋಕ್ಷಾರ್ಥಶ್ಚ ಯದಾತ್ಮಕಃ ।
ತಸ್ಮಿನ್ ವೈ ವರ್ತಸೇ ವಿಪ್ರಾ ಕಿಮನ್ಯತ್ ಪರಿಪೃಚ್ಛಸಿ ॥೫೧॥

ಬ್ರಾಹ್ಮಣೋತ್ತಮನೇ, ಬ್ರಾಹ್ಮಣನಾಗಿ ಹುಟ್ಟಿದ್ದಕ್ಕೆ ಯಾವ ಫಲವನ್ನು ಪಡೆಯಬೇಕೋ ಅಂತಹ ಮೋಕ್ಷವೆಂಬ ಫಲವನ್ನು ನೀನು ಪಡೆದಿರುವಿ. ಮೋಕ್ಷ ಮಾರ್ಗದಲ್ಲಿಯೇ ಇರುವಿ. ಮೋಕ್ಷದ ಸ್ವರೂಪವೇನು ಎಂಬುದನ್ನು ನಿನಗೆ ತಿಳಿಸಿದ್ದೇನೆ. ಬೇರೆ ವಿಷಯವಾಗಿ ಪ್ರಶ್ನೆಗಳಿದ್ದಲ್ಲಿ ಕೇಳು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಶುಕ-ಜನಕಸಂವಾದೇ ಬ್ರಹ್ಮಪ್ರತಿಪಾದನಂ ನಾಮ ಅಷ್ಟಪಂಚಾಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂಬತ್ತನೆಯ ಅಧ್ಯಾಯ

ವ್ಯಾಸರಿಂದ ಶುಕಮುನಿಗೆ ಧರ್ಮೋಪದೇಶ.

ಭೀಷ್ಮಃ

ಏತಚ್ಛ್ರುತ್ವಾ ತು ವಚನಂ ಕೃತಾತ್ಮಾ ಕೃತನಿಶ್ಚಯಃ ।
ಆತ್ಮನಾತ್ಮಾನಮಾಸ್ಥಾಯ ದೃಷ್ಟ್ವಾ ಚಾತ್ಮಾನಮಾತ್ಮನಾ ॥೧॥

ಕೃತಕಾರ್ಯಃ ಸುಖೀ ಶಾಂತಸ್ತೂಷ್ಣೀಂ ಪ್ರಾಯಾದುದಙ್ಮುಖಃ ।
ಶೈಶಿರಂ ಗಿರಿಮುದ್ದಿಶ್ಯ ಸಧರ್ಮಾ ಮಾತರಿಶ್ವನಃ ॥೨॥

ಭೀಷ್ಮ– ಯುಧಿಷ್ಠಿರನೇ, ಜನಕರಾಜನು ಉಪದೇಶಿಸಿದ ಮಾತನ್ನು ಕೇಳಿ ಶುದ್ಧವಾದ ಅಂತಃಕರಣವುಳ್ಳ ಶುಕದೇವನು ನಿಶ್ಚಿತವಾದ ಮನಸ್ಸಿನಿಂದ ಭಗವಂತನಲ್ಲಿ ಮನಸ್ಸನ್ನು ಸ್ಥಿರಗೊಳಿಸಿ ತನ್ನ ಹೃದಯದಲ್ಲಿ ಭಗವಂತನನ್ನೇ ಧ್ಯಾನಿಸುತ್ತಾ, ಸಮಸ್ತ ಸತ್ಕಾರಗಳನ್ನು ಮಾಡಲ್ಪಟ್ಟವನಾಗಿ, ಸುಖಿಯಾಗಿ, ಶಾಂತನಾಗಿ, ಮೌನವಾಗಿ ಉತ್ತರಾಭಿಮುಖವಾಗಿ ಪ್ರಯಾಣ ಬೆಳೆಸಿದನು. ವಾಯುವಿಗೆ ಸಮಾನವಾದ ವೇಗವುಳ್ಳ ಶುಕಮುನಿಯು ಹಿಮವದ್ ಪರ್ವತದ ಪ್ರದೇಶದಲ್ಲಿ ಸಾಗಲಾರಂಭಿಸಿದನು.

ಏತಸ್ಮಿನ್ನೇವ ಕಾಲೇ ತು ದೇವರ್ಷಿರ್ನಾರದಸ್ತದಾ ।
ಹಿಮವಂತಮಿಯಾದ್ ದ್ರಷ್ಟುಂ ಸಿದ್ಧಚಾರಣಸೇವಿತಮ್ ॥೩॥

ತಮಪ್ಸರೋಗಣಾಕೀರ್ಣಂ ಗೀತಸ್ವನನಿನಾದಿತಮ್ ।
ಕಿನ್ನರಾಣಾಂ ಸಮೂಹೈಶ್ಚ ಭೃಂಗರಾಜೈಸ್ತಥೈವ ಚ ॥೪॥

ಮದ್ಗುಭಿಃ ಖಿಂಜರೀಟೈಶ್ಚ ವಿಚಿತ್ರೈರ್ಜೀವಜೀವಕೈಃ ।
ಚಿತ್ರವರ್ಣೈರ್ಮಯೂರೈಶ್ಚ ಕೇಕಾಶತವಿರಾಜಿತೈಃ ।
ರಾಜಹಂಸಸಮೂಹೈಶ್ಚ ಹೃಷ್ಟೈಃ ಪರಭೃತೈಸ್ತಥಾ ॥೫॥

ಇದೇ ಸಮಯಕ್ಕೆ ಸರಿಯಾಗಿ ದೇವಲೋಕದ ಋಷಿಗಳಾದ ನಾರದರು ಸಿದ್ಧ-ಚಾರಣರಿಂದ ಸೇವಿತರಾದ ಹಿಮವದ್ ಪರ್ವತವನ್ನು ನೋಡಲು ಆಗಮಿಸಿದರು. ಈ ಪರ್ವತವಾದರೂ ಅಪ್ಸರೆಯರ ಸಮೂಹಗಳಿಂದ ತುಂಬಿತ್ತು. ನಾಲ್ಕು ಕಡೆಗಳಿಂದಲೂ ಅವರ ಹಾಡಿನ ನಿನಾದವು ಕೇಳಿ ಬರುತ್ತಿತ್ತು. ಕಿನ್ನರರ ಸಮೂಹದಿಂದಲೂ, ದುಂಬಿಗಳಿಂದಲೂ, ಗೀಜುಗ ಹಕ್ಕಿಗಳಿಂದಲೂ, ವಿಚಿತ್ರವಾದ ಚಕೋರ ಪಕ್ಷಿಗಳಿಂದಲೂ, ಚಿತ್ರವರ್ಣಗಳಿಂದ ರಂಜಿಸುವ ನೂರಾರು ಕಲರವ ಶಬ್ದಗಳಿರುವ ನವಿಲುಗಳಿಂದಲೂ, ರಾಜಹಂಸ ಸಮೂಹಗಳಿಂದಲೂ, ಸಂತುಷ್ಟವಾದ ಸಮುದಾಯದಿಂದಲೂ,

ಪಕ್ಷಿರಾಜೋ ಗರುತ್ಮಾಂಶ್ಚ ಯಂ ನಿತ್ಯಮಧಿಗಚ್ಛತಿ ।
ಚತ್ವಾರೋ ಲೋಕಪಾಲಾಶ್ಚ ದೇವಾಃ ಸರ್ಷಿಗಣಾಸ್ತಥಾ ।
ಯತ್ರ ನಿತ್ಯಂ ಸಮಾಯಾಂತಿ ಲೋಕಸ್ಯ ಹಿತಕಾಮ್ಯಯಾ ॥೬॥

ಪಕ್ಷಿರಾಜನಾದ ಗರುಡನು ಯಾವ ಪರ್ವತವನ್ನು ಆಶ್ರಯಿಸಿರುತ್ತಾನೋ, ಲೋಕ ಹಿತಾರ್ಥವಾಗಿ ಪ್ರತಿದಿವಸವೂ ನಾಲ್ವರು ಲೋಕಪಾಲಕರು, ಋಷಿಗಳ ಸಮೂಹದಿಂದ ಕೂಡಿದ ದೇವತೆಗಳು ಯಾವ ಹಿಮವದ್ ಪರ್ವತಕ್ಕೆ ಜಗತ್ತಿಗೆ ಹಿತವನ್ನಾಚರಿಸಲು ಆಗಮಿಸುತ್ತಾರೋ

ವಿಷ್ಣುನಾ ಯತ್ರ ಪುತ್ರಾರ್ಥೇ ತಪಸ್ತಪ್ತಂ ಮಹಾತ್ಮನಾ ।
ಯತ್ರೈವ ಚ ಕುಮಾರೇಣ ಬಾಲ್ಯೇ ಕ್ಷಿಪ್ತಾ ದಿವೌಕಸಃ ॥೭॥

ಮಹಾನುಭಾವನಾದ ವಿಷ್ಣುವು ಸಂತಾನಪ್ರಾಪ್ತಿಗಾಗಿ ಎಲ್ಲಿ ತಪಸ್ಸನ್ನಾಚರಿಸಿದನೋ, ದೇವತೆಗಳೆಲ್ಲರೂ ಯಾವ ತಪ್ಪಲಿನಲ್ಲಿ ಸ್ಕಂಧನಿಂದ ಪರಾಜಯ ಹೊಂದಿದರೋ,

ಶಕ್ತಿರ್ಯಸ್ತಾ ಕ್ಷಿತಿತಲೇ ತ್ರೈಲೋಕ್ಯಮವಮನ್ಯ ವೈ ।
ಯತ್ರೋವಾಚ ಜಗತ್ಸ್ಕಂದಃ ಕ್ಷಿಪನ್ ವಾಕ್ಯಮಿದಂ ತದಾ ॥೮॥

ಮೂರುಲೋಕಗಳನ್ನೂ ಅಲಕ್ಷಿಸಿ ಯಾವ ಸ್ಕಂದನು ತನ್ನ ಶಕ್ತ್ಯಾಯುಧವನ್ನು ಭೂಮಿಯ ಮೇಲೆ ಪ್ರಯೋಗಿಸಿದನೋ, ಯಾವ ಷಣ್ಮುಖನು ಜಗತ್ತನ್ನೇ ಕಡೆಗಣಿಸುತ್ತಾ ಮುಂದೆ ಹೇಳುವ ವಾಕ್ಯಗಳನ್ನು ಯಾವ ತಪ್ಪಲಿನಲ್ಲಿ ಘೋಷಿಸಿದನೋ;

ಯೋಽನ್ಯೋಽಸ್ತಿ ಮತ್ತೋಽಭ್ಯಧಿಕೋ ವಿಪ್ರಾ ಯಸ್ಯಾಧಿಕಂ ಪ್ರಿಯಾಃ ।
ಯೋ ಬ್ರಹ್ಮಣ್ಯೋ ದ್ವಿತೀಯೋಽಸ್ತಿ ತ್ರಿಷು ಲೋಕೇಷು ವೀರ್ಯವಾನ್ ॥

ಯಾರಿಗೆ ಬ್ರಾಹ್ಮಣರು ಅತ್ಯಂತ ಪ್ರೀತಿಪಾತ್ರರೋ ಅಂತಹ ನನಗೆ ನನ್ನ ಬಲಕ್ಕಿಂತಲೂ ಅಧಿಕನಾದವನು ಈ ಜಗತ್ತಿನಲ್ಲಿ ಯಾರಿದ್ದಾರೆ? ಮೂರುಲೋಕದಲ್ಲಿ ಬ್ರಾಹ್ಮಣ ಪ್ರಿಯನಾದವನು, ಪರಾಕ್ರಮಿಯಾದವನು ನನ್ನನ್ನು ಬಿಟ್ಟು ಎರಡನೆಯ ವ್ಯಕ್ತಿ ಯಾರಿದ್ದಾನೆ?

ಸೋಽಭ್ಯುದ್ಧರತ್ವಿಮಾಂ ಶಕ್ತಿಮಥ ವಾ ಕಂಪಯತ್ವಿತಿ ।
ತಚ್ಚ್ರುತ್ವಾ ವ್ಯಥಿತಾ ಲೋಕಾಃ ಕ ಇಮಾಮುದ್ಧರೇದಿತಿ ॥೧೦॥

ಅಂತಹ ಯಾವ ವ್ಯಕ್ತಿಯಾದರೂ ಇರುವುದಾದಲ್ಲಿ ನಾನು ಭೂಮಿಯಲ್ಲಿ ನೆಟ್ಟಿರುವ ಶಕ್ತ್ಯಾಯುಧವನ್ನು ಕಂಪಿಸಲಿ ಎಂದು ಉದ್ಘೋಷಿಸಲು, ಕಳವಳಗೊಂಡ ಎಲ್ಲ ಲೋಕದವರೂ ಈ ಶಕ್ತ್ಯಾಯುಧವನ್ನು ಯಾರು ಕಿತ್ತುತ್ತಾರೆ ಎಂದು ಚಿಂತಿಸತೊಡಗಿದರು.

ವ್ಯಾಖ್ಯಾನ ವಿಶೇಷ– ಇಂತಹ ಹಿಮವದ್ ಪರ್ವತಕ್ಕೆ ನಾರದರು ಆಗಮಿಸಿದರು ಎಂದು ಈ ಶ್ಲೋಕಗಳ ನಡುವೆ ಅನ್ವಯವನ್ನು ಮಾಡಿಕೊಳ್ಳಬೇಕು. ಹಿಮವದ್ ಪರ್ವತದ ಮಹಿಮೆಯನ್ನೇ ಹೇಳುತ್ತಾ ಸ್ಕಂದನ ಮಹಿಮೆಯನ್ನು ಭೀಷ್ಮರು ಮುಂದುವರೆಸುತ್ತಾರೆ. ಆ ಹಿಮವದ್ ಪರ್ವತದಲ್ಲಿ ವ್ಯಾಸರು ನಡೆಸಿದ ಶಿಷ್ಯೋಪದೇಶದ ಕಥೆಯನ್ನು ಮುಂದೆ ನಿರೂಪಿಸುತ್ತಾರೆ.

ಅಥ ದೇವಗಣಂ ಸರ್ವಂ ಸಂಭ್ರಾಂತೇಂದ್ರಿಯಮಾನಸಮ್ ।
ಅಪಶ್ಯದ್ಭಗವಾನ್ ವಿಷ್ಣುಃ ಕ್ಷಿಪ್ತಂ ಸಾಸುರರಾಕ್ಷಸಮ್ ।
ಕಿಂ ನ್ವತ್ರ ಸುಕೃತಂ ಕಾರ್ಯಂ ಭವೇದಿತಿ ವಿಚಿಂತಯನ್ ॥೧೧॥

ಬಳಿಕ ಸಮಸ್ತ ದೇವತಾವೃಂದವು ಮನಸ್ಸು, ಇಂದ್ರಿಯಗಳಿಂದ ಕಳವಳಗೊಂಡಿರುವುದನ್ನು, ಅಸುರ-ರಾಕ್ಷಸರೇ ಮೊದಲಾದ ಎಲ್ಲರೂ ಸ್ಕಂದನಿಂದ ತಿರಸ್ಕೃತರಾಗಿರುವುದನ್ನು ಮಹಾವಿಷ್ಣುವು ನೋಡಿದನು. ಈಗ ಯಾರ ಕಾರ್ಯವನ್ನು ಮಾಡಿದರೆ ಇವರೆಲ್ಲರಿಗೂ ಹಿತವಾಗುತ್ತದೆ ಎಂಬುದನ್ನು ಆಲೋಚಿಸುತ್ತಿದ್ದನು.

ಸ ನಾಮೃಷ್ಯತ ತಂ ಕ್ಷೇಪಮವೈಕ್ಷತ ಚ ಪಾವಕಿಮ್ ।
ಸ ಪ್ರಹಸ್ಯ ವಿಶುದ್ಧಾತ್ಮಾ ಶಕ್ತಿಂ ಪ್ರಜ್ವಲಿತಾಂ ತದಾ ।
ಕಂಪಯಾಮಾಸ ಸವ್ಯೇನ ಪಾಣಿನಾ ಪುರುಷೋತ್ತಮಃ ॥೧೨॥

ಸ್ಕಂದನು ದೇವತೆಗಳ ವಿಷಯದಲ್ಲಿ ಎಸಗಿದ ತಿರಸ್ಕಾರವನ್ನು ಸಹಿಸಲಾರದ ವಿಷ್ಣುವು ಸ್ಕಂದನನ್ನು ಕಂಡು, ಪ್ರಜ್ವಲಿಸುತ್ತಿದ್ದ ಶಕ್ತ್ಯಾಯುಧವನ್ನು ತನ್ನ ಎಡಗೈಯಿಂದ ಅಲ್ಲಾಡಿಸಿದನು.

ಶಕ್ತ್ಯಾಂ ತು ಕಂಪಮಾನಾಯಾಂ ವಿಷ್ಣುನಾ ಬಲಿನಾ ತದಾ ।
ಮೇದಿನೀ ಕಮ್ಪಿತಾ ಸರ್ವಾ ಸಶೈಲವನಕಾನನಾ ॥೧೩॥

ಬಲಿಷ್ಠನಾದ ವಿಷ್ಣುವು ಸ್ಕಂದನು ಪ್ರಯೋಗಿಸಿದ ಶಕ್ತ್ಯಾಯುಧವನ್ನು ತನ್ನ ಎಡಗೈಯಿಂದ ಅಲ್ಲಾಡಿಸುತ್ತಿದ್ದಾಗ ಪರ್ವತ, ವನ, ಅರಣ್ಯಗಳಿಂದ ಕೂಡಿದ ಭೂಮಂಡಲವೇ ನಡುಗಿತು.

ಶಕ್ತೇನಾಪಿ ಸಮುದ್ಧರ್ತುಂ ಕಂಪಿತಾ ಸಾ ನ ತೂದ್ಧತಾ ।
ರಕ್ಷಿತಾ ಸ್ಕಂದರಾಜಸ್ಯ ಧರ್ಷತಾಂ ಪ್ರಭವಿಷ್ಣುನಾ ॥೧೪॥

ತಾಂ ಕಂಪಯಿತ್ವಾ ಭಗವಾನ್ ಪ್ರಹ್ಲಾದಮಿದಮಬ್ರವೀತ್ ।
ಪಶ್ಯ ವೀರ್ಯಂ ಕುಮಾರಸ್ಯ ನೈತದನ್ಯಃ ಕರಿಷ್ಯತಿ ॥೧೫॥

ವಿಷ್ಣುವು ಶಕ್ತ್ಯಾಯುಧವನ್ನು ಕಿತ್ತುಹಾಕಲು ಸಮರ್ಥನಾಗಿದ್ದರೂ ಅದನ್ನು ಕಿತ್ತದೆ ಎಡಗೈಯಿಂದ ಅಲ್ಲಾಡಿಸಿದನು. ಸ್ಕಂದನಿಗೆ ಆಗುವ ಅವಮಾನವನ್ನು ತಪ್ಪಿಸಿ ಶಕ್ತ್ಯಾಯುಧವನ್ನು ಅಲ್ಲಾಡಿಸುತ್ತಾ, ದೈತ್ಯ ಪ್ರಮುಖನೆನಿಸಿದ ಪ್ರಹ್ಲಾದನಿಗೆ ಹೀಗೆ ಹೇಳಿದನು: ಪ್ರಹ್ಲಾದನೇ, ಈ ಸ್ಕಂದನ ಬಲವನ್ನು ನೋಡು. ಬೇರೆ ಯಾರೂ ಇಂತಹ ಕಾರ್ಯವನ್ನು ಮಾಡಲಾರರು ಎಂದು ಹೇಳಿದನು.

ವ್ಯಾಖ್ಯಾನ ವಿಶೇಷ– ಸ್ಕಂದನ ಪ್ರತಿಜ್ಞೆಯನ್ನು ಮಹಾವಿಷ್ಣುವು ರಕ್ಷಿಸಿದನು. ಶಕ್ತ್ಯಾಯುಧವನ್ನು ಅಲ್ಲಾಡಿಸುವ ಮೂಲಕ ಅವನ ಅಹಂಕಾರವನ್ನು ಧಿಕ್ಕರಿಸಿದನು. ಕಿತ್ತದಿರುವ ಮೂಲಕ ಮಾನವನ್ನು ರಕ್ಷಿಸಿದನು ಎಂದು ಭಾವ.

ಸೋಽಮೃಷ್ಯಮಾಣಸ್ತದ್ವಾಕ್ಯಂ ಸಮುದ್ಧರಣನಿಶ್ಚಿತಃ ।
ಜಗ್ರಾಹ ತಾಂ ತಸ್ಯ ಶಕ್ತಿಂ ನ ಚೈನಾಮಪ್ಯಕಂಪಯತ್ ॥೧೬॥

ಮಹಾವಿಷ್ಣುವು ಹೇಳಿದ ಮಾತನ್ನು ಸಹಿಸಲಾಗದ ಪ್ರಹ್ಲಾದನು ಶಕ್ತ್ಯಾಯುಧವನ್ನು ಕಿತ್ತುಹಾಕಬೇಕೆಂದೇ ನಿಶ್ಚಯಿಸಿದನು. ತನ್ನ ಬಲವನ್ನು ಹಾಕಿ ಆಯುಧವನ್ನು ಸೆಳೆದನು.

ನಾದಂ ಮಹಾಂತಂ ಮುಕ್ತ್ವಾ ಸ ಮೂರ್ಛಿತೋ ಗಿರಿಮೂರ್ಧನಿ ।
ವಿಹ್ವಲಃ ಪ್ರಾಪತದ್ ಭೂಮೌ ಹಿರಣ್ಯಕಶಿಪೋಃ ಸುತಃ ॥೧೭॥

ಅದನ್ನು ಅಲ್ಲಾಡಿಸಲು ಸಾಧ್ಯವಾಗದೆ, ಆಯಾಸದಿಂದ ಗಟ್ಟಿಯಾಗಿ ನಾದ ಮಾಡುತ್ತಾ, ಕಂಗಾಲಾದ, ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನು ಮೂರ್ಛಿತನಾಗಿ ಆ ಪರ್ವತದ ಭೂಮಿಯಲ್ಲಿ ಬಿದ್ದನು.

ಯತ್ರೋತ್ತರಾಂ ದಿಶಂ ಗತ್ವಾ ಶೈಲರಾಜಸ್ಯ ಪಾರ್ಶ್ವತಃ ।
ತಪೋಽತಪ್ಯತ ದುರ್ಧರ್ಷಸ್ತಾತ ನಿತ್ಯಂ ವೃಷಧ್ವಜಃ ॥೧೮॥

ಅದೇ ಸಮಯದಲ್ಲಿ ವೃಷಭಧ್ವಜನಾದ ಪರಶಿವನು ಹಿಮವತ್ ಗಿರಿಯ ಪಕ್ಕದಲ್ಲಿ ಉತ್ತರದಿಕ್ಕಿಗೆ ಪ್ರಯಾಣ ಮಾಡಿ, ಯಾರಿಂದಲೂ ಜಯಿಸಲಾಗದ ತಪಸ್ಸನ್ನು ಆರಂಭಿಸಿದನು.

ಪಾವಕೇನ ಪರಿಕ್ಷಿಪ್ತೋ ದೀಪ್ಯತಾ ತಸ್ಯ ಚಾಶ್ರಮಃ ।
ಆದಿತ್ಯಬಂಧನಂ ನಾಮ ದುರ್ಧರ್ಷಮಕೃತಾತ್ಮಭಿಃ ॥೧೯॥

ಶಿವನು ತಪಸ್ಸನ್ನು ಆಚರಿಸುತ್ತಿದ್ದ ಆಶ್ರಮವು ನಾಲ್ಕುದಿಕ್ಕಿನಲ್ಲಿಯೂ ಅಗ್ನಿಯಿಂದ ಆವೃತವಾಗಿತ್ತು. ಆದಿತ್ಯಬಂಧನ ಎಂಬ ಹೆಸರುಳ್ಳ ಆ ತಪ್ಪಲು ಜಿತೇಂದ್ರಿಯರಲ್ಲದವರಿಗೆ ಹೊಂದಲು ಅಸಾಧ್ಯವಾಗಿತ್ತು.

ನ ತತ್ರ ಶಕ್ಯತೇ ಗಂತುಂ ಯಕ್ಷರಾಕ್ಷಸದಾನವೈಃ ।
ದಶಯೋಜನವಿಸ್ತಾರಮಗ್ನಿಜ್ವಾಲಾಸಮಾವೃತಮ್ ॥೨೦॥

ಯಕ್ಷ-ರಾಕ್ಷಸ-ದಾನವರಿಗೆ ಅಲ್ಲಿ ಹೋಗಲು ಸಾಧ್ಯವಿರಲಿಲ್ಲ. ಹತ್ತು ಯೋಜನ ವಿಸ್ತಾರವಾದ ಆ ಆಶ್ರಮ ಪ್ರದೇಶವು ಅಗ್ನಿಯ ಜ್ವಾಲೆಗಳಿಂದ ಆವೃತವಾಗಿತ್ತು.

ಭಗವಾನ್ ಪಾವಕಸ್ತತ್ರ ಸ್ವಯಂ ತಿಷ್ಠತಿ ವೀರ್ಯವಾನ್ ।
ಸರ್ವವಿಘ್ನಾನ್ ಪ್ರಶಮಯನ್ ಮಹಾದೇವಸ್ಯ ಧೀಮತಃ ॥೨೧॥

ದಿವ್ಯಂ ವರ್ಷಸಹಸ್ರಂ ಹಿ ಪಾದೇನೈಕೇನ ತಿಷ್ಠತಃ ।
ದೇವಾನ್ ಸಂತಾಪಯಂಸ್ತತ್ರ ಮಹಾದೇವೋ ಧೃತವ್ರತಃ ॥೨೨॥

ವೀರ್ಯವಂತನಾದ ಅಗ್ನಿದೇವನು ದಿವ್ಯಸಹಸ್ರ ವರ್ಷಪರ್ಯಂತ ಒಂದೇ ಕಾಲಿನಲ್ಲಿ ನಿಂತು ಅಲ್ಲಿ ತಪಸ್ಸನ್ನು ಆಚರಿಸುತ್ತಿದ್ದನು. ಜ್ಞಾನಿಯಾದ ಮಹದೇವನ ತಪಸ್ಸಿನಿಂದಾಗಿ ಅಲ್ಲಿ ಯಾವ ವಿಘ್ನಗಳೂ ಬರುತ್ತಿರಲಿಲ್ಲ. ಆದ್ದರಿಂದ ಅಲ್ಲೇ ನೆಲೆಸಿದ್ದನು. ಮಹದೇವನು ತನ್ನ ಘೋರ ತಪಸ್ಸಿನಿಂದ ದೇವತೆಗಳನ್ನು ಸಂತಾಪಗೊಳಿಸುತ್ತಿದ್ದನು.

ಐಂದ್ರೀಂ ತು ದಿಶಮಾಸ್ಥಾಯ ಶೈಲರಾಜಸ್ಯ ಧೀಮತಃ ।
ಏಏಕ್ತೇ ಪರ್ವತತಟೇ ಪಾರಾಶರ್ಯೋ ಮಹಾತಪಾಃ ।
ವೇದಾನಧ್ಯಾಪಯಾಮಾಸ ವ್ಯಾಸಃ ಶಿಷ್ಯಾನ್ ಮಹಾತಪಾಃ ॥೨೩॥

ಇದೇ ಸಮಯದಲ್ಲಿ ಪೂರ್ವದಿಕ್ಕನ್ನು ಆಶ್ರಯಿಸಿ ಮಹಾತಪಸ್ವಿಗಳಾದ, ಜ್ಞಾನಿಗಳಾದ ವ್ಯಾಸರು ಧೀಮಂತನಾದ ಹಿಮಾಲಯನ ಏಕಾಂತದ ಪ್ರದೇಶದಲ್ಲಿ ತಮ್ಮ ಶಿಷ್ಯರಾದ ಸುಮಂತು, ವೈಶಂಪಾಯನ ಮೊದಲಾದವರಿಗೆ ವೇದಗಳನ್ನು ಅಧ್ಯಯನ ಮಾಡಿಸಿದರು.

ಸುಮಂತುಂ ಚ ಮಹಾಭಾಗಂ ವೈಶಂಪಾಯನಮೇವ ಚ ।
ಜೈಮಿನಿಂ ಚ ಮಹಾಪ್ರಾಜ್ಞಂ ಪೈಲಂ ಚಾಪಿ ತಪಸ್ವಿನಮ್ ॥೨೪॥

ಏಭಿಃ ಶಿಷ್ಯೈಃ ಪರಿವೃತೋ ವ್ಯಾಸ ಆಸ್ತೇ ಮಹಾತಪಾಃ ।
ತತ್ರಾಶ್ರಮಪದಂ ಪುಣ್ಯಂ ದದರ್ಶ ಪಿತುರುತ್ತಮಮ್ ।
ಅರಣೇಯೋ ವಿಶುದ್ಧಾತ್ಮಾ ನಭಸೀವ ದಿವಾಕರಃ ॥೨೫॥

ಅಥ ವ್ಯಾಸಃ ಪರಿಕ್ಷಿಪ್ತಂ ಜ್ವಲಂತಮಿವ ಪಾವಕಮ್ ।
ದದರ್ಶ ಸುತಮಾಯಾಂತಂ ದಿವಾಕರಸಮಪ್ರಭಮ್ ॥೨೬॥

ಮಹಾಭಾಗ್ಯವಂತನಾದ ಸುಮಂತು, ವೈಶಂಪಾಯನ, ಮಹಾಪ್ರಾಜ್ಞನಾದ ಜೈಮಿನಿ, ತಪಸ್ವಿಯಾದ ಪೈಲ- ಈ ಶಿಷ್ಯರಿಂದ ಕೂಡಿಕೊಂಡಿರುವ ವ್ಯಾಸರು ಎಲ್ಲಿದ್ದರೋ ಅಂತಹ ತಂದೆಯ ಪುಣ್ಯಾಶ್ರಮ ಸ್ಥಾನವನ್ನು ಶುಕಮುನಿಯು ನೋಡಿದನು. ಅರಣ್ಯಗರ್ಭಸಂಜಾತನಾದ, ವಿಶುದ್ಧಾತ್ಮನಾದ, ಆಕಾಶದಲ್ಲಿನ ಸೂರ್ಯನಂತೆ ತೇಜಸ್ಸಿನಿಂದ ಕಂಗೊಳಿಸುವ ಶುಕಮುನಿಯು ಪ್ರಜ್ವಲಿಸುತ್ತಿರುವ ಅಗ್ನಿದೇವನಂತೆ ತೇಜಸ್ಸಿನಿಂದ ಸುತ್ತುವರಿದು, ಸೂರ್ಯಸದೃಶಕಾಂತಿಯಿಂದ ಕೂಡಿದವನಾಗಿ ತನ್ನ ಆಶ್ರಮದ ಕಡೆಗೆ ಆಗಮಿಸುತ್ತಿರುವುದನ್ನು ವ್ಯಾಸರು ನೋಡಿದರು.

ಅಸಜ್ಜಮಾನಂ ವೃಕ್ಷೇಷು ಶೈಲೇಷು ವಿಷಮೇಷು ಚ ।
ಯೋಗಯುಕ್ತಂ ಮಹಾತ್ಮಾನಂ ಯಥಾ ಬಾಣಂ ಗುಣಚ್ಯುತಮ್ ॥೨೭॥

ಸುಂದರವಾದ ವೃಕ್ಷ, ಶೈಲ, ಶಿಖರಗಳನ್ನು ನೋಡದೆ, ಧನುಸ್ಸಿನ ಹಗ್ಗದಿಂದ ಬಿಡಲ್ಪಟ್ಟ ಬಾಣವು ಲಕ್ಷ್ಯದ ಕಡೆ ಸಾಗುವಂತೆ ಬರುತ್ತಿರುವ ಯೋಗಯುಕ್ತನಾದ, ಮಹಾತ್ಮನಾದ ಶುಕಮುನಿಯನ್ನು ನೋಡಿದರು.

ಸೋಽಭಿಗಮ್ಯ ಪಿತುಃ ಪಾದಾವಗೃಹ್ಣಾದರಣೇಸುತಃ ।
ಯಥೋಪಜೋಷಂ ತೈಶ್ಚಾಪಿ ಸಮಾಗಚ್ಛನ್ಮಹಾಮುನಿಃ ॥೨೮॥

ಆ ಶುಕಮುನಿಯಾದರೂ ಬಾಣದ ವೇಗದಂತೆ ನೇರವಾಗಿ ತಂದೆಯ ಆಶ್ರಮದ ಕಡೆ ಸಾಗುತ್ತಾ, ಜ್ಞಾನಿಯಾದ ತಂದೆಯನ್ನು ಕಂಡು, ಅವನ ಪಾದಗಳನ್ನು ಹಿಡಿದುಕೊಂಡು, ಮೌನಿಯಾಗಿ ಇತರ ಶಿಷ್ಯರ ಜೊತೆಗೆ ಸೇರಿಕೊಂಡನು.

ತತೋ ನಿವೇದಯಾಮಾಸ ಪಿತ್ರೇ ಸರ್ವಮಶೇಷತಃ ।
ಶುಕೋ ಜನಕರಾಜೇನ ಸಂವಾದಂ ಪ್ರೀತಮಾನಸಃ ॥೨೯॥

ಸ್ವಲ್ಪ ಸಮಯದ ನಂತರ ಪ್ರಸನ್ನಚಿತ್ತರಾಗಿ ಇರುವ ಶುಕಮುನಿಯು ತಂದೆಯ ಜೊತೆಗೆ ತನಗೂ, ಜನಕನಿಗೂ ನಡೆದ ಸಂವಾದವನ್ನು ತಿಳಿಸಿದನು.

ಏವಮಧ್ಯಾಪಯನ್ ಶಿಷ್ಯಾನ್ ವ್ಯಾಸಃ ಪುತ್ರಂ ಚ ವೀರ್ಯವಾನ್ ।
ಉವಾಸ ಹಿಮವತ್ ಪೃಷ್ಠೇ ಪಾರಾಶರ್ಯೋ ಮಹಾಮುನಿಃ ॥೩೦॥

ವೇದವ್ಯಾಸರಾದರೂ ಸುಮಂತು, ಜೈಮಿನಿ ಮೊದಲಾದ ಶಿಷ್ಯರಿಗೆ, ಮಗನಾದ ಶುಕಮುನಿಗೆ ಅನೇಕ ಸಮಯ ಹಿಮವದ್ ಪರ್ವತದಲ್ಲಿಯೇ ಭಗವತ್ತತ್ತ್ವವನ್ನು ಉಪದೇಶಿಸುತ್ತಾ ವಾಸಿಸಿದರು.

ತತಃ ಕದಾಚಿಚ್ಛಿಷ್ಯಾಸ್ತಂ ಪರಿವಾರ್ಯಾವತಸ್ಥಿರೇ ।
ವೇದಾಧ್ಯಯನಸಂಪನ್ನಾಃ ಶಾಂತಾತ್ಮಾನೋ ಜಿತೇಂದ್ರಿಯಾಃ ॥೩೧॥

ಒಂದು ಸಮಯದಲ್ಲಿ ಸುಮಂತು ಮೊದಲಾದ ಶಿಷ್ಯರು ವ್ಯಾಸರನ್ನು ಸುತ್ತುವರಿದು ಕುಳಿತಿದ್ದರು. ಅವರೆಲ್ಲರೂ ವೇದಾಧ್ಯಯನ ಸಂಪನ್ನರಾಗಿದ್ದರು. ಶಾಂತಮನಸ್ಕರೂ, ಜಿತೇಂದ್ರಿಯರೂ ಆಗಿದ್ದರು.

ವೇದೇಷು ನಿಷ್ಠಾಂ ಸಂಪ್ರಾಪ್ಯ ಸಾಂಗೇಷ್ವತಿತಪಸ್ವಿನಃ ।
ಅಥೋಚುಸ್ತೇ ತದಾ ವ್ಯಾಸಂ ಶಿಷ್ಯಾಃ ಪ್ರಾಂಜಲಯೋ ಗುರುಮ್ ॥

ತಪಸ್ವಿಗಳಾದ ಅವರೆಲ್ಲರೂ ವೇದಗಳಲ್ಲಿಯೂ, ವೇದಾಂಗಗಳಲ್ಲಿಯೂ ಅತ್ಯಂತ ಪ್ರಾವೀಣ್ಯವನ್ನು ಪಡೆದು, ವ್ಯಾಸರ ಶಿಷ್ಯರಾಗಿದ್ದು, ಕೈಮುಗಿದುಕೊಂಡು ಗುರುಗಳಾದ ವೇದವ್ಯಾಸರಿಗೆ ಹೀಗೆ ಹೇಳಿದರು.

ಮಹತಾ ಶ್ರೇಯಸಾ ಯುಕ್ತಾ ಯಶಸಾ ಚ ಸ್ಮ ವರ್ಧಿತಾಃ ।
ಏಕಂ ತ್ವಿದಾನೀಮಿಚ್ಛಾಮೋ ಗುರುಣಾನುಗ್ರಹಂ ಕೃತಮ್ ॥೩೩॥

ಗುರುದೇವನೇ, ತಮ್ಮ ಕೃಪಾಬಲದಿಂದ ನಾವಿಂದು ಬ್ರಹ್ಮತೇಜಸ್ಸನ್ನು ಸಂಪಾದಿಸಿರುತ್ತೇವೆ. ನಮ್ಮ ಯಶಸ್ಸು ಎಲ್ಲ ಕಡೆ ಹರಡಿದೆ. ನಿಮ್ಮಿಂದ ಈಗ ಒಂದು ಅನುಗ್ರಹವನ್ನು ನಾವು ಬಯಸುತ್ತಿದ್ದೇವೆ.

ಇತಿ ತೇಷಾಂ ವಚಃ ಶ್ರುತ್ವಾ ಬ್ರಹ್ಮರ್ಷಿಸ್ತಾನುವಾಚ ಹ ।
ಉಚ್ಯತಾಮಿತಿ ತದ್ವತ್ ಸಾ ಯದ್ವಃ ಕಾರ್ಯಂ ಪ್ರಿಯಂ ಮಯಾ ॥೩೪॥

ಯುಧಿಷ್ಠಿರನೇ, ಶಿಷ್ಯರ ಈ ಮಾತನ್ನು ಕೇಳಿಸಿಕೊಂಡು ಬ್ರಹ್ಮಜ್ಞಾನಿಗಳಾದ ವ್ಯಾಸರು ನಿಮ್ಮ ಹೃದಯದಲ್ಲಿರುವ ಅಪೇಕ್ಷೆ ಏನೆಂದು ತಿಳಿಸಿರಿ. ನಿಮಗೆ ನಾನು ಯಾವ ಹಿತವನ್ನು ಉಂಟುಮಾಡಲಿ? ಎಂದು ಕೇಳಿದರು.

ಏತದ್ ವಾಕ್ಯಂ ಗುರೋಃ ಶ್ರುತ್ವಾ ಶಿಷ್ಯಾಸ್ತೇ ಹೃಷ್ಟಮಾನಸಾಃ ।
ಪುನಃ ಪ್ರಾಂಜಲಯೋ ಭೂತ್ವಾ ಪ್ರಣಮ್ಯ ಶಿರಸಾ ಗುರುಮ್ ॥೩೫॥

ಊಚುಸ್ತೇ ಸಹಿತಾ ರಾಜನ್ನಿದಂ ವಚನಮುತ್ತಮಮ್ ।
ಯದಿ ಪ್ರೀತ ಉಪಾಧ್ಯಾಯೋ ಧನ್ಯಾಃ ಸ್ಮೋ ಮುನಿಸತ್ತಮ ॥೩೬॥

ಗುರುಗಳ ಈ ಮಾತನ್ನು ತಿಳಿದು ಶಿಷ್ಯರೆಲ್ಲರೂ ಪರಮಸಂತುಷ್ಟಮನಸ್ಸುಳ್ಳವರಾಗಿ ಪುನಃ ಕೈಜೋಡಿಸಿಕೊಂಡು ಗುರುಗಳಿಗೆ ತಲೆಬಾಗಿ ನಮಸ್ಕರಿಸಿ, ಅತ್ಯಂತ ಶ್ರೇಷ್ಠವಾದ ಈ ಮಾತನ್ನು ವ್ಯಾಸರಿಗೆ ಹೇಳಿದರು: ಮುನಿಶ್ರೇಷ್ಠರೇ, ಉಪಾಧ್ಯಾಯರಾದ ನೀವು ನಮ್ಮ ವಿಷಯದಲ್ಲಿ ಪ್ರೀತರಾಗಿದ್ದೀರಿ ಎಂದಾದರೆ ನಾವು ಧನ್ಯರೇ ಸರಿ ಎಂದು.

ಕಾಂಕ್ಷಿಮಸ್ತು ವಯಂ ಸರ್ವೇ ವರಂ ದತ್ತಂ ಮಹರ್ಷಿಣಾ ।
ಷಷ್ಠಃ ಶಿಷ್ಯೋ ನ ತೇ ಖ್ಯಾತಿಂ ಗಚ್ಛೇದತ್ರ ಪ್ರಸೀದ ನಃ ॥೩೭॥

ನಾವೆಲ್ಲರೂ ತಮ್ಮಿಂದ ಒಂದು ವರವನ್ನು ಬಯಸುತ್ತೇನೆ. ನಿಮ್ಮ ಆರನೆ ಶಿಷ್ಯನು ಖ್ಯಾತಿ ಹೊಂದಬಾರದು ಎಂಬುದೇ ನಮ್ಮ ವರದ ಅಪೇಕ್ಷೆಯು. ಈ ವಿಷಯದಲ್ಲಿ ಪ್ರಸನ್ನರಾಗಿರಿ.

ಚತ್ವಾರಸ್ತೇ ವಯಂ ಶಿಷ್ಯಾ ಗುರುಪುತ್ರಶ್ಚ ಪಂಚಮಃ ।
ಇಹ ವೇದಾಃ ಪ್ರತಿಷ್ಠೇರನ್ನೇಷ ನಃ ಕಾಂಕ್ಷಿತೋ ವರಃ ॥೩೮॥

ನಾವು ನಾಲ್ವರು ತಮ್ಮ ಶಿಷ್ಯರಾಗಿದ್ದೇವೆ. ಗುರುಪುತ್ರನಾದ ಶುಕನು ಐದನೆಯವನಾಗಿದ್ದಾನೆ. ಈ ಐವರಲ್ಲಿ ನೀವು ಉಪದೇಶಿಸಿದ ವೇದಗಳು ಪ್ರತಿಷ್ಠಾಪಿತವಾಗಿರಬೇಕು. ಇದು ನಾವು ಬೇಡುವ ವರವಾಗಿದೆ.

ಶಿಷ್ಯಾಣಾಂ ವಚನಂ ಶ್ರುತ್ವಾ ವ್ಯಾಸೋ ವೇದಾರ್ಥತತ್ತ್ವವಿತ್ ।
ಪರಾಶರಾತ್ಮಜೋ ಧೀಮಾನ್ ಪರಲೋಕಾರ್ಥಚಿಂತಕಃ ।
ಉವಾಚ ಶಿಷ್ಯಾನ್ ಧರ್ಮಾತ್ಮಾ ಧರ್ಮ್ಯಂ ನೈಃಶ್ರೇಯಸಂ ವಚಃ ॥೩೯॥

ಯುಧಿಷ್ಠಿರನೇ, ವೇದಾರ್ಥ ತತ್ತ್ವವನ್ನು ಬಲ್ಲವರಾದ ವ್ಯಾಸರು ಶಿಷ್ಯರು ಹೇಳಿದ ಮಾತನ್ನು ಕೇಳಿಸಿಕೊಂಡು, ಪರಾಶರರ ಸುತರಾದ, ಬುದ್ಧಿವಂತರಾದ, ಪರಲೋಕಾರ್ಥ ಚಿಂತಕರಾದ, ಧರ್ಮಾತ್ಮರಾದ ವ್ಯಾಸರು ಮೋಕ್ಷಕ್ಕೆ ಕಾರಣವಾದ ಈ ಮಾತನ್ನು ಶಿಷ್ಯರಿಗೆ ಹೇಳಿದರು.

ಬ್ರಾಹ್ಮಣಾಯ ಸದಾ ದೇಯಂ ಬ್ರಹ್ಮ ಶುಶ್ರೂಷವೇ ಭವೇತ್ ।
ಬ್ರಹ್ಮಲೋಕೇ ನಿವಾಸಂ ಯೋ ಧ್ರುವಂ ಸಮಭಿಕಾಂಕ್ಷತಿ ॥೪೦॥

ಮಕ್ಕಳೇ, ಬ್ರಹ್ಮಲೋಕದಲ್ಲಿ ಶಾಶ್ವತ ಸ್ಥಾನವನ್ನು ಯಾರು ಬಯಸುತ್ತಾರೋ ಅವರು ವೇದಾಧ್ಯಯನವನ್ನು ಮಾಡುವ ಇಚ್ಛೆಯಿಂದ ಆಗಮಿಸಿದ್ದಲ್ಲಿ ಸೇವಿಸಿ ಜ್ಞಾನಸಂಪಾದನೆಯ ಬಯಕೆಯುಳ್ಳ ಅವರಿಗೆ ನೀವು ನಿಶ್ಚಿತವಾಗಿ ವೇದಾಧ್ಯಯನವನ್ನು ಮಾಡಿಸಬೇಕು.

ಭವಂತೋ ಬಹುಲಾಃ ಸಂತು ವೇದೋ ವಿಸ್ತಾರ್ಯತಾಮಯಮ್ ।
ನಾಶಿಷ್ಯೇ ಸಂಪ್ರದಾತವ್ಯೋ ನಾವ್ರತೇ ನಾಕೃತಾತ್ಮನಿ ॥೪೧॥

ನೀವು ಅನೇಕ ಶಿಷ್ಯರನ್ನು ಪಡೆದು ವಿಸ್ತಾರವಾಗಿ ಬೆಳೆಯಿರಿ. ವೇದವನ್ನು ಎಲ್ಲ ಕಡೆ ಪ್ರಚಾರ ಮಾಡಿರಿ. ಅಜಿತೇಂದ್ರಿಯನಾದವನಿಗೆ, ಬ್ರಹ್ಮಚರ್ಯ ಇಲ್ಲದವನಿಗೆ, ಶಿಷ್ಯಭಾವ ಹೊಂದದವನಿಗೆ ವೇದಗಳನ್ನು ಉಪದೇಶಿಸಬೇಡಿರಿ.

ಏತೇ ಶಿಷ್ಯಗುಣಾಃ ಸರ್ವೇ ವಿಜ್ಞಾತವ್ಯಾ ಯಥಾರ್ಥತಃ ।
ನಾಪರೀಕ್ಷಿತಚಾರಿತ್ರೇ ವಿದ್ಯಾ ದೇಯಾ ಕಥಂಚನ ॥೪೨॥

ಜಿತೇಂದ್ರಿಯತ್ವ, ಬ್ರಹ್ಮಚರ್ಯ,ಗುರುಸೇವಾ ಇವೆಲ್ಲವೂ ಶಿಷ್ಯರಲ್ಲಿರಬೇಕಾದ ಗುಣಗಳೆಂದು ತಿಳಿಯಿರಿ. ಈ ಗುಣಗಳನ್ನು ಪರೀಕ್ಷಿಸಿಕೊಂಡು ವಿದ್ಯಾದಾನವನ್ನು ಮಾಡಬೇಕು. ಪರೀಕ್ಷೆ ಇಲ್ಲದೆ ಈ ವಿದ್ಯೆಯನ್ನು ನೀಡಬಾರದು.

ಯಥಾ ಹಿ ಕನಕಂ ಶುದ್ಧಂ ತಾಪಚ್ಛೇದನಿಘರ್ಷಣೈಃ ।
ಪರೀಕ್ಷೇತ ತಥಾ ಶಿಷ್ಯಾನೀಕ್ಷೇತ್ ಕುಲಗುಣಾದಿಭಿಃ ॥೪೩॥

ಹೇಗೆ ಬೆಂಕಿಯಲ್ಲಿ ಕುದಿಸಿದಾಗ, ಕತ್ತರಿಸಿದಾಗ, ಒರೆಗಲ್ಲಿನಲ್ಲಿ ಹಚ್ಚಿ ತಿಕ್ಕಿ ನೋಡಿದಾಗ ಚಿನ್ನದ ಪರಿಶುದ್ಧತೆಯು ಅರ್ಥವಾಗುತ್ತದೋ ಅದರಂತೆ ಶಿಷ್ಯರನ್ನು ಕುಲ, ಗುಣ, ಆಚಾರಗಳ ಮೂಲಕ ಚೆನ್ನಾಗಿ ಪರೀಕ್ಷಿಸಬೇಕು.

ನ ನಿಯೋಜ್ಯಾಶ್ಚ ವಃ ಶಿಷ್ಯಾ ಅನಿಯೋಗೇ ಮಹಾಭಯೇ ।
ಯಥಾಮತಿ ಯಥಾಪಾಠಂ ತಥಾ ವಿದ್ಯಾ ಫಲಿಷ್ಯತಿ ॥೪೪॥

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ।
ಶ್ರಾವಯೇಚ್ಚತುರೋ ವರ್ಣಾನ್ ಕೃತ್ವಾ ಬ್ರಾಹ್ಮಣಮಗ್ರತಃ ॥೪೫॥

ಅಯೋಗ್ಯವಾದ ಕೆಲಸದಲ್ಲಿ ಶಿಷ್ಯರನ್ನು ನೇಮಿಸಬಾರದು. ಭಯಜನಕವಾದ ಕಾರ್ಯದಲ್ಲಿಯೂ ನೇಮಿಸಬಾರದು. ಶಿಷ್ಯನಲ್ಲಿ ಯಾವ ಜ್ಞಾನವಿದೆಯೋ, ಯಾವ ರೀತಿ ನೀವು ಪಾಠವನ್ನು ಹೇಳುತ್ತೀರೋ ಅದರಂತೆ ಶಿಷ್ಯರಲ್ಲಿ ವಿದ್ಯೆಯು ಫಲಿಸುತ್ತದೆ. ಎಲ್ಲರೂ ಎಲ್ಲ ರೀತಿಯಾದ ಕಷ್ಟಗಳಿಂದ ದೂರರಾಗಲಿ. ಎಲ್ಲರಿಗೂ ಕಲ್ಯಾಣ ಉಂಟಾಗಲಿ. ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ನಾಲ್ಕು ವರ್ಣದವರಿಗೂ ಧರ್ಮೋಪದೇಶವನ್ನು ಮಾಡಿರಿ.

ವೇದಸ್ಯಾಧ್ಯಯನಂ ಹೀದಂ ತಚ್ಚ ಕಾರ್ಯಂ ಮಹತ್ ಸ್ಮೃತಮ್ ।
ಸ್ತುತ್ಯರ್ಥಮಿಹ ದೇವಾನಾಂ ವೇದಾಃ ಸೃಷ್ಟಾಃ ಸ್ವಯಂಭುವಾ ॥೪೬॥

ವೇದಾಧ್ಯಯನವೆಂಬುದು ಮಹತ್ಕಾರ್ಯವಾಗಿದೆ. ಇಂತಹ ಸತ್ಕರ್ಮವನ್ನು ನೀವು ಮಾಡಲೇಬೇಕು. ಭಗವಂತನನ್ನು ಸ್ತೋತ್ರ ಮಾಡುವ ದೃಷ್ಟಿಯಿಂದಲೇ ಚತುರ್ಮುಖ ಬ್ರಹ್ಮನು ವೇದಗಳನ್ನು ತನ್ನ ಬುದ್ಧಿಯಿಂದ ಹೊರಹಾಕಿರುತ್ತಾನೆ.

ಯೋ ನಿರ್ವದೇತ ಸಮ್ಮೋಹಾದ್ ಬ್ರಾಹ್ಮಣಂ ವೇದಪಾರಗಮ್ ।
ಸೋಽಪಧ್ಯಾನಾದ್ ಬ್ರಾಹ್ಮಣಸ್ಯ ಪರಾಭೂಯಾದಸಂಶಯಮ್ ॥೪೭॥

ಯಾವಾತನು ವೇದಜ್ಞನಾದ ಬ್ರಾಹ್ಮಣನನ್ನು ಮೋಹದಿಂದಾಗಿ ನಿಂದಿಸುತ್ತಾನೋ ಅವನು ಬ್ರಾಹ್ಮಣನನ್ನು ನಿಂದಿಸಿದುದರಿಂದ ಎಲ್ಲ ರೀತಿಯಾದ ಪರಾಭವವನ್ನು ಹೊಂದುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಯಶ್ಚಾಧರ್ಮೇಣ ವಿಬ್ರೂಯಾದ್ ಯಶ್ಚಾಧರ್ಮೇಣ ಪೃಚ್ಛತಿ ।
ತಯೋರನ್ಯತರಃ ಪ್ರೈತಿ ವಿದ್ವೇಷಂ ವಾಧಿಗಚ್ಛತಿ ॥೪೮॥

ಯಾವನು ಅಧರ್ಮದಿಂದ ಪ್ರಶ್ನಿಸುತ್ತಾನೋ, ಯಾವನು ಅಧರ್ಮದಿಂದಲೇ ಉತ್ತರಿಸುತ್ತಾನೋ ಇಬ್ಬರೂ ಮರಣ ಹೊಂದುತ್ತಾರೆ. ಇಬ್ಬರಲ್ಲಿಯೂ ದ್ವೇಷವು ಉಂಟಾಗುತ್ತದೆ.

ಏತದ್ವಃ ಸರ್ವಮಾಖ್ಯಾತಂ ಸ್ವಾಧ್ಯಾಯಸ್ಯ ವಿಧಿಂ ಪ್ರತಿ ।
ಉಪಕುರ್ಯಾಚ್ಚ ಶಿಷ್ಯಾಣಾಮೇತಚ್ಚ ಹೃದಿ ವೋ ಭವೇತ್ ॥೪೯॥

ಸ್ವಾಧ್ಯಾಯದ ವಿಧಿಯನ್ನು ಕುರಿತು ನಿಮಗೆ ಎಲ್ಲ ವಿಷಯವನ್ನೂ ಹೇಳಿದ್ದೇನೆ. ನೀವು ಶಿಷ್ಯರಿಗೆ ಉಪಕರಿಸಬೇಕು. ಇದೆಲ್ಲವೂ ನಿಮ್ಮ ಮನಸ್ಸಿನಲ್ಲಿರಲಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಷಷ್ಟ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತನೆಯ ಅಧ್ಯಾಯ

ವ್ಯಾಸ ಕಥಾ

ಭೀಷ್ಮಃ

ಏತಚ್ಛ್ರುತ್ವಾ ಗುರೋರ್ವಾಕ್ಯಂ ವ್ಯಾಸಶಿಷ್ಯಾ ಮಹೌಜಸಃ ।
ಅನ್ಯೋನ್ಯಂ ಹೃಷ್ಟಮನಸಃ ಪರಿಷಸ್ವಜಿರೇ ತದಾ ॥೧॥

ಭೀಷ್ಮ- ಯುಧಿಷ್ಠಿರನೇ, ಗುರುಗಳ ಮಾತಿನಿಂದ ಸಂತುಷ್ಟರಾದ ವ್ಯಾಸರ ಶಿಷ್ಯರು ಪರಸ್ಪರ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು. ಬಳಿಕ ವ್ಯಾಸರನ್ನು ಕುರಿತು ಹೇಳಿದರು.

ಉಕ್ತಾಃ ಸ್ಮೋ ಯದ್ ಭಗವತಾ ತದಾತ್ಯಾಯತಿ ಸಂಹಿತಾಮ್ ।
ತನ್ನೋ ಮನಸಿ ಸಂರೂಢಂ ಕರಿಷ್ಯಾಮಸ್ತಥಾ ಚ ತತ್ ॥೨॥

ಗುರುಗಳೇ, ನೀವು ನಮ್ಮ ಮುಂದಿನ ಹಿತಚಿಂತನೆಯಿಂದ ಯಾವ ವೇದವನ್ನು ಉಪದೇಶಿಸಿದ್ದೀರೋ ಆ ನಿಮ್ಮ ವಚನರೂಪವಾದ ವೇದವನ್ನು ನಾವು ಅಧ್ಯಯನ ಮಾಡುತ್ತಾ, ಶಿಷ್ಯರಿಗೂ ಉಪದೇಶ ಮಾಡುತ್ತಾ ಅದನ್ನು ರಕ್ಷಿಸುತ್ತೇವೆ. ನಿಮ್ಮ ಉಪದೇಶಗಳು ನಮ್ಮ ಮನಸ್ಸಿನಲ್ಲಿ ಬೇರೂರಿ ನಿಂತಿವೆ. ನೀವು ಹೇಳಿದಂತೆ ನಾವು ನಡೆದುಕೊಳ್ಳುತ್ತೇವೆ.

ಅನ್ಯೋನ್ಯಂ ಚ ಸಭಾಜ್ಯೈವಂ ಸುಪ್ರೀತಮನಸಃ ಪುನಃ ।
ವಿಜ್ಞಾಪಯಂತಿ ಸ್ಮ ಗುರುಂ ಪುನರ್ವಾಕ್ಯವಿಶಾರದಾಃ ॥೩॥

ಯುಧಿಷ್ಠಿರನೇ, ಈ ರೀತಿಯಾಗಿ ಪರಸ್ಪರ ಸಂಭಾಷಣೆ ಮಾಡುತ್ತಾ ಗುರು-ಶಿಷ್ಯರು ಪ್ರಸನ್ನ ಮನಸ್ಸಿನಲ್ಲಿದ್ದರು. ಸ್ವಲ್ಪ ಸಮಯದ ಬಳಿಕ ವಾಕ್ಯವಿಶಾರದರಾದ ಸುಮಂತು ಮೊದಲಾದ ಶಿಷ್ಯರು ಗುರುಗಳಲ್ಲಿ ಹೀಗೆ ತಿಳಿಸಿದರು.

ಶೈಲಾದಸ್ಮಾನ್ಮಹೀಂ ಗಂತುಂ ಕಾಂಕ್ಷಿತಂ ನೋ ಮಹಾಮುನೇ ।
ವೇದಾನನೇಕಧಾ ಕರ್ತುಂ ಯದಿ ತೇ ರುಚಿತಂ ವಿಭೋ ॥೪॥

ಗುರುಗಳೇ, ಈ ಪರ್ವತದಿಂದ ನಾವು ಭೂಮಿಗೆ ಹೋಗಲು ಇಚ್ಛಿಸಿದ್ದೇವೆ. ವೇದಗಳನ್ನು ಅನೇಕ ಪ್ರಕಾರ ವಿಂಗಡಿಸಿ, ಅದನ್ನು ಪ್ರಚಾರ ಮಾಡುವುದೇ ನಮ್ಮ

ಯಾತ್ರೆಯ ಉದ್ದೇಶವಾಗಿದೆ. ನಿಮಗೆ ನಮ್ಮ ಅಭಿಪ್ರಾಯವು ಸಮ್ಮತವಾಗಿದ್ದಲ್ಲಿ ಆಜ್ಞಾಪಿಸಿರಿ.

ಶಿಷ್ಯಾಣಾಂ ವಚನಂ ಶ್ರುತ್ವಾ ಪರಾಶರಸುತಃ ಪ್ರಭುಃ ।
ಪ್ರತ್ಯುವಾಚ ತತೋ ವಾಕ್ಯಂ ಧರ್ಮಾರ್ಥಸಹಿತಂ ಹಿತಮ್ ॥೫॥

ಯುಧಿಷ್ಠಿರನೇ, ಶಿಷ್ಯರ ಮಾತನ್ನು ಕೇಳಿಸಿಕೊಂಡ ಪರಾಶರ ಮುನಿಗಳ ಮಗನಾದ, ಪ್ರಭುವಾದ ವ್ಯಾಸರು ಧರ್ಮಾರ್ಥಸಹಿತವಾದ, ಹಿತಕರವಾದ ಮಾತನ್ನು ಹೇಳಿದರು.

ಕ್ಷಿತಿಂ ವಾ ದೇವಲೋಕಂ ವಾ ಗಮ್ಯತಾಂ ಯದಿ ರೋಚತೇ ।
ಅಪ್ರಮಾದಶ್ಚ ವಃ ಕಾರ್ಯೋ ಬ್ರಹ್ಮ ಹಿ ಪ್ರಚುರಚ್ಚಲಮ್ ॥೬॥

ಶಿಷ್ಯರೇ, ನಿಮಗೆ ಇಷ್ಟವಾಗಿದ್ದಲ್ಲಿ ಭೂಮಿಗೆ ಬೇಕಾದರೂ ಹೋಗಿರಿ, ದೇವಲೋಕಕ್ಕಾದರೂ ಹೋಗಿರಿ. ಆದರೆ ವೇದದ ಪ್ರಚಾರವನ್ನು ಎಚ್ಚರದಿಂದ ಮಾಡಿರಿ.

ತೇऽನುಜ್ಞಾತಾಸ್ತತಃ ಸರ್ವೇ ಗುರುಣಾ ಸತ್ಯವಾದಿನಾ ।
ಜಗ್ಮುಃ ಪ್ರದಕ್ಷಿಣಂ ಕೃತ್ವಾ ವ್ಯಾಸಂ ಮೂರ್ಧ್ನಾಭಿವಾದ್ಯ ಚ ॥೭॥

ಸತ್ಯವಾದಿಯಾದ ವ್ಯಾಸರಿಂದ ಆಜ್ಞಪ್ತರಾದ ಆ ಎಲ್ಲ ಶಿಷ್ಯರು ವ್ಯಾಸರನ್ನು ಶಿರಸಾ ನಮಿಸಿ, ಪ್ರದಕ್ಷಿಣೆಯನ್ನು ಮಾಡಿ ಅಲ್ಲಿಂದ ಹೊರಟರು.

ಅವತೀರ್ಯ ಮಹೀಂ ತೇಥ ಚಾತುರ್ಹೋತ್ರಮಕಲ್ಪಯನ್ ।
ಸಂಯಾಜಯಂತೋ ವಿಪ್ರಾಂಶ್ಚ ರಾಜನ್ಯಾಂಶ್ಚ ವಿಶಸ್ತಥಾ ॥೮॥

ವ್ಯಾಸಶಿಷ್ಯರು ಪರ್ವತದಿಂದ ಕೆಳಗಿಳಿದು ಬಂದು ಭೂಮಿಯಲ್ಲಿ ಅಗ್ನಿಹೋತ್ರ ಮೊದಲಾದ ಸೋಮಯಾಗದ ತನಕ ಇರುವ ಎಲ್ಲ ಕರ್ಮಗಳನ್ನು ಪ್ರಚಾರ ಮಾಡಿದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ದ್ವಿಜರಿಂದ ಪ್ರತಿದಿನವೂ ಯಜ್ಞವನ್ನು ಮಾಡಿಸಿದರು.

ಪೂಜ್ಯಮಾನಾ ದ್ವಿಜೈರ್ನಿತ್ಯಂ ಮೋದಮಾನಾ ಗೃಹೇ ರತಾಃ ।
ಯಾಜನಾಧ್ಯಾಪನರತಾಃ ಶ್ರೀಮಂತೋ ಲೋಕವಿಶ್ರುತಾಃ ॥೯॥

ನಾಲ್ಕು ವರ್ಣದವರಿಂದ ನಿತ್ಯವೂ ಪೂಜಿತರಾಗಿ ತಮ್ಮ ತಮ್ಮ ಮನೆಗಳಲ್ಲಿ ಸುಖವಾಗಿ ಇರುತ್ತಿದ್ದರು. ಯಾಜನ-ಅಧ್ಯಾಪನದಲ್ಲಿ ನಿರತರಾದ, ಶ್ರೀಮಂತರಾದ, ಗೃಹಸ್ಥಧರ್ಮದಲ್ಲಿ ಆಸಕ್ತರಾದ ವ್ಯಾಸಶಿಷ್ಯರು ಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದಿದರು.

ಅವತೀರ್ಣೇಷು ಶಿಷ್ಯೇಷು ವ್ಯಾಸಃ ಪುತ್ರಸಹಾಯವಾನ್ ।
ತೂಷ್ಣೀಂ ಧ್ಯಾನಪರೋ ಧೀಮಾನೇಕಾಂತೇ ಸಮುಪಾವಿಶತ್ ॥೧೦॥

ಶಿಷ್ಯರೆಲ್ಲರೂ ಪರ್ವತದಿಂದಿಳಿದು ಭೂಮಿಗೆ ಹೋದ ಬಳಿಕ ಪುತ್ರನೊಬ್ಬನ ಸಹಾಯವನ್ನು ಹೊಂದಿರುವ ಜ್ಞಾನಿಗಳಾದ ವ್ಯಾಸರು ಏಕಾಂತದಲ್ಲಿ ಧ್ಯಾನಾಸಕ್ತರಾಗಿ ಕುಳಿತರು.

ತಂ ದದರ್ಶಾಶ್ರಮಪದೇ ನಾರದಃ ಸುಮಹಾತಪಾಃ ।
ಅಥೈನಮಬ್ರವೀತ್ ಕಾಲೇ ಮಧುರಾಕ್ಷರಯಾ ಗಿರಾ ॥೧೧॥

ಅದೇ ಸಮಯಕ್ಕೆ ಸರಿಯಾಗಿ ಮಹಾತಪಸ್ವಿಗಳಾದ ನಾರದರು ವ್ಯಾಸರ ಆಶ್ರಮಕ್ಕೆ ಏಕಾಂತ ಸ್ಥಳಕ್ಕೆ ಆಗಮಿಸಿ ವ್ಯಾಸರು ಧ್ಯಾನಮಗ್ನರಾಗಿರುವುದನ್ನು ಕಂಡರು. ಮಧುರವಾದ ಅಕ್ಷರಗಳಿಂದ ಕೂಡಿದ ಮಾತಿನಿಂದ ವ್ಯಾಸರನ್ನು ಕುರಿತು ಹೀಗೆ ಹೇಳಿದರು.

ಭೋ ಭೋ ಮಹರ್ಷೇ ವಾಸಿಷ್ಠ ಬ್ರಹ್ಮಘೋಷೋ ನ ವರ್ತತೇ ।
ಏಕೋ ಧ್ಯಾನಪರಸ್ತೂಷ್ಣೀಂ ಕಿಮಾಸ್ಸೇ ಚಿಂತಯನ್ನಿವ ॥೧೨॥

ಎಲೈ ಎಲೈ ವಸಿಷ್ಠಗೋತ್ರನಾದ ಬ್ರಹ್ಮರ್ಷಿಯೇ, ನಿನ್ನ ಆಶ್ರಮದಲ್ಲಿ ಏಕೆ ಬ್ರಹ್ಮಘೋಷ ಕೇಳಿಬರುತ್ತಿಲ್ಲ? ಒಬ್ಬನೇ ಏನನ್ನೋ ಚಿಂತಿಸುತ್ತಾ ಏಕಾಂತದಲ್ಲಿ ಧ್ಯಾನ ಮಗ್ನನಾಗಿ ಏಕೆ ಕುಳಿತಿರುವಿ?

ಬ್ರಹ್ಮಘೋಷೈರ್ವಿರಹಿತಃ ಪರ್ವತೋಽಯಂ ನ ಶೋಭತೇ ।
ರಜಸಾ ತಮಸಾ ಚೈವ ಸೋಮಃ ಸೋಪಪ್ಲವೋ ಯಥಾ ॥೧೩॥

ವೇದಘೋಷಗಳಿಂದ ರಹಿತವಾದ ಈ ಪರ್ವತವು ಹಿಂದಿನಂತೆ ಶೋಭಾಯಮಾನವಾಗಿರುವುದಿಲ್ಲ. ರಜಸ್ಸು, ತಮಸ್ಸುಗಳಿಂದ ಆಚ್ಛಾದಿತವಾದ ರಾಹುಗ್ರಸ್ತನಾದ ಚಂದ್ರನಂತೆ ಈ ಪರ್ವತವು ಕಂಡುಬರುತ್ತಿದೆ.

ನ ಭ್ರಾಜತೇ ಯಥಾಪೂರ್ವಂ ನಿಷಾದಾನಾಮಿವಾಲಯಃ ।
ದೇವರ್ಷಿಗಣಜುಷ್ಟೋಽಪಿ ವೇದಧ್ವನಿನಿರಾಕೃತಃ ॥೧೪॥

ದೇವತೆಗಳ ಸಮುದಾಯದಿಂದ ಕೂಡಿದ್ದರೂ ವೇದಧ್ವನಿಹೀನವಾದ ಈ ಪರ್ವತವು ಬೇಡರ ಮನೆಯಂತಾಗಿದೆ. ಹಿಂದಿನಂತೆ ಶೋಭಿಸುತ್ತಿಲ್ಲ.

ಋಷಯಶ್ಚ ಹಿ ದೇವಾಶ್ಚ ಗಂಧರ್ವಾಶ್ಚ ಮಹೌಜಸಃ ।
ವಿಮುಕ್ತಾ ಬ್ರಹ್ಮಘೋಷೇಣ ನ ಭ್ರಾಜಂತೇ ಯಥಾ ಪುರಾ ॥೧೫॥

ಇಲ್ಲಿರುವ ಋಷಿಗಳು, ದೇವರ್ಷಿಗಳು, ಮಹಾತೇಜಸ್ವಿಗಳು, ಗಂಧರ್ವರು ವೇದಘೋಷವನ್ನು ಕೇಳಿಸಿಕೊಳ್ಳದಿರುವುದರಿಂದ ಪ್ರಕಾಶಮಾನರಾಗಿಲ್ಲ.

ನಾರದಸ್ಯ ವಚಃ ಶ್ರುತ್ವಾ ಕೃಷ್ಣದ್ವೈಪಾಯನೋಽಬ್ರವೀತ್ ।
ಮಹರ್ಷೇ ಯತ್ತ್ವಯಾ ಪ್ರೋಕ್ತಂ ವೇದವಾದವಿಚಕ್ಷಣ ॥೧೬॥

ಏತನ್ಮನೋನುಕೂಲಂ ಮೇ ಭವಾನರ್ಹತಿ ಭಾಷಿತುಮ್ ।
ಸರ್ವಜ್ಞಃ ಸರ್ವದರ್ಶೀ ಚ ಸರ್ವತ್ರ ಚ ಕುತೂಹಲೀ ॥೧೭॥

ಯುಧಿಷ್ಠಿರನೇ, ನಾರದರು ಹೇಳಿದ ಮಾತನ್ನು ಕೇಳಿಸಿಕೊಂಡ ಕೃಷ್ಣದ್ವೈಪಾಯನರು ಹೇಳುತ್ತಾರೆ: ಮಹರ್ಷಿಯೇ, ವೇದವಾದಗಳಲ್ಲಿ ಜಾಣನಾದವನೇ, ನೀನು ಹೇಳಿದ ಮಾತು ನನಗೂ ಒಪ್ಪಿಗೆಯಾಗಿದೆ. ಇಂತಹ ಮಾತನ್ನಾಡಲು ಯೋಗ್ಯನಾಗಿರುವಿ. ಸರ್ವಜ್ಞನೂ, ಸರ್ವದರ್ಶಿಯೂ, ಎಲ್ಲೆಡೆಯೂ ವಿಷಯವನ್ನು ತಿಳಿಯುವುದರಲ್ಲಿ ಆಸಕ್ತನೂ ಆಗಿರುವಿ.

ತ್ರಿಷು ಲೋಕೇಷು ಯದ್ವೃತ್ತಂ ಸರ್ವಂ ತವ ಮತೇ ಸ್ಥಿತಮ್ ।
ತದಾಜ್ಞಾಪಯ ವಿಪ್ರರ್ಷೇ ಬ್ರೂಹಿ ಕಿಂ ಕರವಾಣಿ ತೇ ॥೧೮॥

ಮೂರುಲೋಕದಲ್ಲಿ ನಡೆಯುವ ಎಲ್ಲ ಸಮಾಚಾರಗಳು ನಿನ್ನ ಬುದ್ಧಿಯಲ್ಲಿವೆ. ನಾನು ಏನು ಮಾಡಬೇಕೆಂಬುದನ್ನು ವಿಪ್ರರ್ಷಿಯಾದ ನಾರದನೇ, ನೀನೇ ತಿಳಿಸು.

ಯನ್ಮಯಾ ಸಮನುಷ್ಠೇಯಂ ಬ್ರಹ್ಮರ್ಷೇ ತದುದಾಹರ ।
ನಿಯುಕ್ತಸ್ಯೇಹ ಶಿಷ್ಯೇಮೇ ನಾತಿಹೃಷ್ಟಮಿದಂ ಮನಃ ॥೧೯॥

ನಾನು ಯಾವ ಕರ್ತವ್ಯಗಳನ್ನು ಮಾಡಬೇಕೆಂಬುದನ್ನು ನೀನೇ ಹೇಳು. ಶಿಷ್ಯರಿಂದ ವಿಹೀನನಾಗಿರುವುದರಿಂದ ನನ್ನ ಮನಸ್ಸು ಅಷ್ಟು ಪ್ರಸನ್ನವಾಗಿಲ್ಲ.

ನಾರದಃ

ಅನಾಮ್ನಾಯಮಲಾ ವೇದಾ ಬ್ರಾಹ್ಮಣಸ್ಯಾವ್ರತಂ ಮಲಮ್ ।
ಮಲಂ ಪೃಥಿವ್ಯಾ ವಾಹೀಕಾಃ ಸ್ತ್ರೀಣಾಂ ಕೌತೂಹಲಂ ಮಲಮ್ ॥೨೦॥

ನಾರದ– ಋಷಿಪುಂಗವನೇ, ವೇದವನ್ನು ಅಧ್ಯಯನ ಮಾಡಿ, ಪುನಃ ಪುನಃ ಆವೃತ್ತಿ ಮಾಡದಿದ್ದಲ್ಲಿ ವೇದಾಧ್ಯಯನವು ದೂಷಿತವಾಗುತ್ತದೆ. ವ್ರತಾನುಷ್ಠಾನ ಮಾಡದಿದ್ದಲ್ಲಿ ಬ್ರಾಹ್ಮಣನು ದೂಷ್ಯನಾಗುತ್ತಾನೆ. ವಾಹೀಕದೇಶದ ರಾಜರು ಭೂಮಿಯಲ್ಲಿ ಕಳಂಕವೆನಿಸಿದ್ದಾರೆ. ಸ್ತ್ರೀಯರಿಗೆ ಕುತೂಹಲವೆಂಬುದೇ ದೋಷಕ್ಕೆ ಕಾರಣವಾಗಿದೆ.

ಅಧೀಯತಾಂ ಭವಾನ್ ವೇದಾನ್ ಸಾರ್ಧಂ ಪುತ್ರೇಣ ಧೀಮತಾ ।
ವಿಧುನ್ವನ್ ಬ್ರಹ್ಮಘೋಷೇಣ ರಕ್ಷೋಭಯಕೃತಂ ತಮಃ ॥೨೧॥

ನೀನು ಮಗನ ಜೊತೆಗೆ ಪುನಃ ವೇದವನ್ನು ಅಧ್ಯಯನ ಮಾಡು. ಆ ವೇದಾಧ್ಯಯನ ಘೋಷದಿಂದ ರಾಕ್ಷಸರ ಭಯವೆಂಬ ತಮಸ್ಸನ್ನು ಪರಿಹರಿಸು.

ಭೀಷ್ಮಃ

ನಾರದಸ್ಯ ವಚಃ ಶ್ರುತ್ವಾ ವ್ಯಾಸಃ ಪರಮಧರ್ಮವಿತ್ ।
ತಥೇತ್ಯುವಾಚ ಸಂಹೃಷ್ಟೋ ವೇದಾಭ್ಯಾಸೇ ದೃಢವ್ರತಃ ॥೨೨॥

ಭೀಷ್ಮ– ಯುಧಿಷ್ಠಿರನೇ, ನಾರದರು ಹೇಳಿದ ಮಾತನ್ನು ಕೇಳಿ ವೇದವ್ಯಾಸರು ವೇದಾಭ್ಯಾಸವನ್ನು ಮಾಡುವುದರಲ್ಲಿ ದೀಕ್ಷಿತರಾಗಿ, ಸಂತುಷ್ಟರಾಗಿ, 'ಹಾಗೆ ಆಗಲಿ' ಎಂದು ಹೇಳಿದರು.

ಉವಾಚ ಚ ಮಹಾಪ್ರಾಜ್ಞಂ ನಾರದಂ ಪುನರೇವ ಹಿ ।
ಮಲಂ ಪೃಥಿವ್ಯಾ ಬಾಹ್ಲೀಕಾ ಇತ್ಯುಕ್ತಮಧುನಾ ತ್ವಯಾ ।
ಕೀದೃಶಾಶ್ಚೈವ ಬಾಹ್ಲೀಕಾ ಬ್ರೂಹಿ ಮೇ ವದತಾಂ ವರ ॥೨೩॥

ಆ ಸಮಯದಲ್ಲಿ ವೇದವ್ಯಾಸರು, 'ದೇವರ್ಷಿಯೇ, ಭೂಮಿಯಲ್ಲಿ ಬಾಹ್ಲೀಕರನ್ನು ಮಲವೆಂದು ಹೇಳಿದೆಯಲ್ಲವೆ? ಅವರು ಯಾರು? ಅವರ ಸ್ವಭಾವವೇನು? ಅದನ್ನು ನನಗೆ ತಿಳಿಸಬೇಕು' ಎಂದು ಹೇಳಿದಾಗ, ನಾರದರು ಹೇಳುತ್ತಾರೆ.

ನಾರದಃ

ಅಸ್ಯಾಂ ಪೃಥಿವ್ಯಾಂ ಚತ್ವಾರೋ ದೇಶಾಃ ಪಾಪಜನೈರ್ವೃತಾಃ ।
ಯುಗಂಧರಸ್ತು ಪ್ರಥಮಸ್ತಥಾ ಭೂತಿಲಕಃ ಸ್ಮೃತಃ ॥೨೪॥

ದ್ವೈಪಾಯನನೇ ಕೇಳು. ಈ ಭೂಮಿಯಲ್ಲಿ ನಾಲ್ಕು ದೇಶಗಳು ಪಾಪಹೀನರಾದ ಜನರಿಂದ ತುಂಬಿರುತ್ತವೆ. ಮೊದಲನೆಯದ್ದು ಯುಗಂಧರ, ಎರಡನೆಯದ್ದು ಭೂತಿಲಕ ಎಂದು ಕರೆಯಲ್ಪಟ್ಟಿದೆ.

ಅಚ್ಯುತಶ್ಚಲ ಇತ್ಯುಕ್ತಸ್ತೃತೀಯಃ ಪಾಪಕೃತ್ತಮಃ ।
ಚತುರ್ಥಸ್ತು ಮಹಾಪಾಪೋ ಬಾಹ್ಲೀಕ ಇತಿ ಸಂಜ್ಞಿತಃ ॥೨೫॥

ಮೂರನೆಯದ್ದು ಅಚ್ಯುತಶ್ಚಲ. ಇದು ವಿಶೇಷವಾದ ಪಾಪಗಳಿಂದ ಕೂಡಿದ ದೇಶವು. ಇದಕ್ಕಿಂತಲೂ ಅಧಿಕ ಪಾಪಕ್ಕೆ ಎಡೆಯಾದುದು ಬಾಹ್ಲೀಕ ಎಂಬ ಹೆಸರಿನ ನಾಲ್ಕನೆಯ ದೇಶವು.

ಮೃಗೋಷ್ಟ್ರಗರ್ದಭಕ್ಷೀರಂ ಪಿಬಂತ್ಯಸ್ಯ ಯುಗಂಧರೇ ।
ಏಕಕರ್ಣಾಸ್ತು ದೃಶ್ಯಂತೇ ಜನಾ ವೈ ಹ್ಯಚ್ಯುತಸ್ಥಲೇ ॥೨೬॥

ಯುಗಂಧರದಲ್ಲಿ ಜನರು ಜಿಂಕೆ, ಒಂಟೆ, ಕತ್ತೆ ಇವುಗಳ ಹಾಲನ್ನು ಕುಡಿಯುತ್ತಾರೆ. ಅಚ್ಯುತಸ್ಥಲದ ಜನರೆಲ್ಲ ತಲೆಕೂದಲನ್ನು ಕೆದರಿಕೊಂಡು ವ್ರತಭ್ರಷ್ಟರಾಗಿರುತ್ತಾರೆ. ಅಲ್ಲದೆ ಒಂದೇ ಕಿವಿಯುಳ್ಳವರಾಗಿ ಕಾಣುತ್ತಾರೆ.

ಮೇಹಂತಿ ಚ ಮಲಂ ಪಾಪಾ ವಿಸೃಜಂತಿ ಜಲೇಷು ವೈ ।
ನಿತ್ಯಂ ಭೂತಿಲಕೇತ್ಯನ್ನಂ ತಜ್ಜಲಂ ಚ ಪಿಬಂತಿ ಚ ॥೨೭॥

ಭೂತಿಲಕದ ಜನರು ಜಲಾಶಯಗಳಲ್ಲಿ, ಜಲಗಳಲ್ಲಿಯೇ ಮಲವನ್ನು ವಿಸರ್ಜಿಸುತ್ತಾ, ಆ ನೀರನ್ನೇ ಪಾನಕ್ಕೂ ಉಪಯೋಗಿಸುತ್ತಾರೆ. ಆ ಜಲದಿಂದಲೇ ಅನ್ನವನ್ನೂ ಬೇಯಿಸಿಕೊಂಡು ತಿನ್ನುತ್ತಾರೆ.

ಹರಿಬಾಹ್ಯಾಸ್ತು ಬಾಹ್ಲೀಕಾ ನ ಸ್ಮರಂತಿ ಹರಿಂ ಕ್ವಚಿತ್ ।
ಐಹಲೌಕಿಕಮೋಕ್ಷಂ ತೇ ಮಾಂಸಶೋಣಿತವರ್ಧನಾಃ ।
ವೃಥಾ ಜಾತಾ ಭವಿಷ್ಯಂತಿ ಬಾಹ್ಲೀಕಾ ಇತಿ ವಿಶ್ರುತಾಃ ॥೨೮॥

ಬಾಹ್ಲೀಕ ದೇಶದ ಜನರ ವಿಷ್ಣುವಿರೋಧಿಗಳು. ಅವರಿಗೆ ಹರಿಸ್ಮರಣೆಯಲ್ಲಿ ವಿರೋಧವಿದೆ. ತಮ್ಮ ದೇಹದ ರಕ್ತ-ಮಾಂಸಗಳನ್ನು ಬೆಳೆಸಿಕೊಳ್ಳುವುದೇ ಅವರಿಗೆ ಮುಖ್ಯವೆನಿಸಿದೆ. ಇಹಲೋಕದ ಭೋಗವನ್ನೇ ಮೋಕ್ಷವೆಂದು ತಿಳಿದುಕೊಂಡಿರುತ್ತಾರೆ. ವ್ಯರ್ಥವಾಗಿ ಹುಟ್ಟಿ ಜೀವನವನ್ನು ನಡೆಸುವವರು ಬಾಹ್ಲೀಕರು ಎಂದು ಪ್ರಸಿದ್ಧಿ ಇದೆ.

ಪುಷ್ಕರಾಹಾರನಿರತಾಃ ಪಿಶಾಚಾಃ ಯದಭಾಷತೇ ।
ಮುಸುಂಠೀಂ ಪರಿಗೃಹ್ಯೋಗ್ರಾಂ ತಚ್ಛೃಣುಷ್ವ ಮಹಾಮುನೇ ॥೨೯॥

ಮಹರ್ಷಿಯೇ, ಹಿಂದೆ ಪುಷ್ಕರ ಕ್ಷೇತ್ರದಲ್ಲಿ ಆಹಾರವನ್ನು ಸಂಪಾದಿಸುವುದಕ್ಕಾಗಿ ಅತ್ಯಂತ ಆತುರದಿಂದ ಅಲ್ಲಿ ಕಾದಿದ್ದ ಕೆಲವು ಪಿಶಾಚಿಗಳು ಮುಸುಂಠಿ ಎಂಬ ಆಯುಧವನ್ನು ಕೈಯಲ್ಲಿ ಹಿಡಿದುಕೊಂಡು ಹೇಳಿದ ಮಾತುಗಳಿವೆ, ಅದನ್ನು ಕೇಳು.

ಬ್ರಾಹ್ಮಣೀಂ ಬಹುಪುತ್ರಾಂ ತಾಂ ಪುಷ್ಕರೇ ಸ್ನಾತುಮಾಗತಾಮ್ ।
ಯುಗಂಧರೇ ಪಯಃ ಪೀತ್ವಾ ಹ್ಯುಚಿತಾ ಹ್ಯಚ್ಯುತಸ್ಥಳೇ ॥೩೦॥

ಆ ಪುಷ್ಕರತೀರ್ಥದಲ್ಲಿ ಒಂದು ಹೆಣ್ಣು ಪಿಶಾಚಿಯು ಯಾವಾಗಲೂ ಕಾವಲು ಕಾಯುತ್ತಿತ್ತು. ಒಮ್ಮೆ ಅನೇಕ ಮಕ್ಕಳ ಜೊತೆಗೆ ಒಬ್ಬ ಬ್ರಾಹ್ಮಣಸ್ತ್ರೀ ಆ ಪುಷ್ಕರ ತೀರ್ಥಕ್ಕೆ ಸ್ನಾನಕ್ಕಾಗಿ ಬಂದಳು. ಆ ಹೆಣ್ಣು ಪಿಶಾಚಿಯು ಆಯುಧವನ್ನು ಎತ್ತಿಕೊಂಡು ಹೀಗೆ ಹೇಳಿತು: ಎಲೈ ಹೆಂಗಸೇ, ನೀನು ಯುಗಂಧರದ ನೀರನ್ನು ಪಾನ ಮಾಡಿ ಅಚ್ಯುತ ಸ್ಥಲದಲ್ಲಿ ವಾಸ ಮಾಡಿದೆ.

ತಥಾ ಭೂತಿಲಕೇ ಸ್ನಾತ್ವಾ ಬಾಹ್ಲೀಕಾಂಶ್ಚ ನಿರೀಕ್ಷ್ಯ ವೈ ।
ಆಗತಾಸಿ ತಥಾ ಸ್ನಾತುಂ ಕಥಂ ಸ್ವರ್ಗಂ ನ ಗಚ್ಛಸಿ ॥೩೧॥

ಭೂತಿಲಕದಲ್ಲಿ ಸ್ನಾನ ಮಾಡಿ ಬಾಹ್ಲೀಕವನ್ನೆಲ್ಲ ಸುತ್ತುತ್ತಾ ಬಂದಿರುವಿ. ಈಗ ಇಲ್ಲಿ ಸ್ನಾನಕ್ಕಾಗಿ ಬಂದಿರುವೆಯಾ? ಇಂತಹ ನಿನಗೆ ಹೇಗೆ ತಾನೆ ಸ್ವರ್ಗವು ದೊರೆಯುತ್ತದೆ? ಇಲ್ಲಿ ಸ್ನಾನ ಮಾಡಿದರೂ ನಿನಗೆ ಸ್ವರ್ಗ ದೊರೆಯದು.

ಇತ್ಯುಕ್ತ್ವಾ ಬ್ರಾಹ್ಮಣೇಭಾಂಡಂ ಪೋಥಯಿತ್ವಾ ಮುಸುಂಠಿನಾ ।
ಉವಾಚ ಕ್ರೋಧತಾಮ್ರಾಕ್ಷೀ ಪಿಶಾಚೀ ತೀರ್ಥಪಾಲಿಕಾ ॥೩೨॥

ಈ ರೀತಿಯಾಗಿ ಕೋಪದಿಂದ ಮುಸುಂಠಿಯನ್ನೆತ್ತಿಕೊಂಡು ಬ್ರಾಹ್ಮಣಿಯ ಕೈಯಲ್ಲಿದ್ದ ಗಡಿಗೆಯನ್ನು ಪಿಶಾಚಿಯು ಒಡೆದು ಹಾಕಿತು.

ಏತತ್ ತು ತೇ ದಿವಾವೃತ್ತಂ ಪರಾವೃತ್ಯ ಪರೀಕ್ಷ್ಯ ಚ ।
ಗಚ್ಛ ಬಾಹ್ಲೀಕಸಂಸರ್ಗಾದಶುಚಿತ್ವಂ ನ ಸಂಶಯಃ ॥೩೩॥

ಅವಳನ್ನು ಕುರಿತು- 'ಎಲೈ ಹೆಂಗಸೆ, ಇದು ನಿನ್ನ ಹಗಲಿನ ನಡತೆ. ನಿನ್ನ ರಾತ್ರಿಯ ನಡತೆಯೇ ಬೇರೆ. ಈ ನಿನ್ನ ಹಗಲಿನ ಚರ್ಯೆಯಲ್ಲಿ ಪ್ರಾಮಾಣಿಕತನವು ಇರುವುದಿಲ್ಲ. ಚೆನ್ನಾಗಿ ಪರೀಕ್ಷಿಸಿ ನಿನ್ನ ಬಗ್ಗೆ ಹೀಗೆ ಹೇಳುತ್ತಿರುವೆ. ನೀನು ಬಾಹ್ಲೀಕರ ಸಂಸರ್ಗದಿಂದ ಅಶುಚಿಯಾಗಿರುತ್ತಿ. ನಿನಗೆ ಇಲ್ಲಿ ಸ್ನಾನ ಮಾಡಲು ಯೋಗ್ಯತೆ ಇರುವುದಿಲ್ಲ'.

ಯದ್ ದ್ವಿಷಂತಿ ಮಹಾತ್ಮಾನಂ ನ ಸ್ಮರಂತಿ ಜನಾರ್ದನಮ್ ।
ನ ತೇಷಾಂ ಪುಣ್ಯತೀರ್ಥೇಷು ಗತಿಃ ಸಂಸರ್ಗಿಣಾಮಪಿ ॥೩೪॥

ಯಾರು ಮಹಾತ್ಮನಾದ ವಿಷ್ಣುವನ್ನು ದ್ವೇಷಿಸುತ್ತಾರೋ, ಯಾರು ಅವನನ್ನು ಸ್ಮರಿಸುವುದಿಲ್ಲವೋ ಅಂತಹವರಿಗೆ ಪುಣ್ಯತೀರ್ಥದಿಂದ ಸದ್ಗತಿಯಾಗುವುದಿಲ್ಲ. ಅಷ್ಟೇ ಏನು, ಅಂತಹ ವಿಷ್ಣುದ್ವೇಷಿಗಳ ಸಂಬಂಧ ಮಾಡಿದವರಿಗೂ ಇಲ್ಲಿ ಸ್ನಾನ ಮಾಡುವ ಅವಕಾಶವಿಲ್ಲ.

ಉದ್ಯುಕ್ತಾ ಬ್ರಾಹ್ಮಣೀ ಭೀತಾ ಪ್ರತಿಯಾತಾ ಸುತೈಃ ಸಹ ।
ಸ್ವದೇಹಸ್ಥಾ ಜಜಾಪೈವಂ ಸಪುತ್ರಾ ಧ್ಯಾನತತ್ಪರಾ ॥೩೫॥

ಈ ಮಾತನ್ನು ಕೇಳಿಸಿಕೊಂಡು ಬ್ರಾಹ್ಮಣಿಯು ಭಯದಿಂದ ಅಲ್ಲಿಂದ ಹೊರಟು ತನ್ನ ಮಕ್ಕಳ ಜೊತೆಗೆ ತನ್ನ ದೇಶಕ್ಕೆ ಸೇರಿಕೊಂಡು, ನಿರಂತರ ಹರಿಧ್ಯಾನರತಳಾಗಿ ಅನನ್ಯವಾದ ಮನಸ್ಸಿನಿಂದ ವಿಷ್ಣುವನ್ನೇ ಜಪಿಸತೊಡಗಿದಳು.

ಅನಂತಸ್ಯ ಹರೇಃ ಶುದ್ಧಂ ನಾಮ ವೈ ದ್ವಾದಶಾಕ್ಷರಮ್ ।
ವತ್ಸರತ್ರಿತಯೇ ಪೂರ್ಣೇ ಬ್ರಾಹ್ಮಣೇ ಪುನರಾಗತಾ ॥೩೬॥

ಹೀಗೆ ವಿಷ್ಣುವಿನ ವಾಸುದೇವ ದ್ವಾದಶಾಕ್ಷರ ಮಂತ್ರವನ್ನು ಮೂರು ಸಂವತ್ಸರಗಳ ಕಾಲ ಜಪಿಸಿ, ಪುನಃ ಮರಳಿ ಮಕ್ಕಳ ಜೊತೆಗೆ ಪುಷ್ಕರ ಸ್ನಾನಕ್ಕಾಗಿ ಆಗಮಿಸಿದಳು.

ಸಪುತ್ರಾ ಪುಷ್ಕರದ್ವಾರಂ ಪಿಶಾಚ್ಯಾಹ ತಥಾಗತಮ್ ।
ನಮಸ್ತೇ ಬ್ರಾಹ್ಮಣಿ ಶುಭೇ ಪೂತಾऽಹಂ ತವ ದರ್ಶನಾತ್ ॥೩೭॥

ಆಗ ಆ ತೀರ್ಥವನ್ನು ಕಾಯುತ್ತಿದ್ದ ಹೆಣ್ಣು ಪಿಶಾಚಿಯು ಸಂತೋಷದಿಂದ ಆಗಮಿಸಿ- 'ಅಮ್ಮಾ ನಿನಗೆ ನಮಸ್ಕಾರವು. ನಿನ್ನ ದರ್ಶನದಿಂದ ನಾನು ಪವಿತ್ರನಾದೆನು'.

ಕುರು ತೀರ್ಥಾಭಿಷೇಕಂ ಚ ಸಪುತ್ರಾ ಪಾಪವರ್ಜಿತಾ ।
ಹರೇರ್ನಾಮ್ನಾ ಚ ಮಾಂ ಸಾಧ್ವೀ ಜಲೇನ ಸ್ಪಷ್ಟುಮರ್ಹಸಿ ॥೩೮॥

'ಪಾಪವಿಮುಕ್ತಳಾದ ನೀನು ಈ ತೀರ್ಥದಲ್ಲಿ ಸ್ನಾನ ಮಾಡಬಹುದು. ಅಲ್ಲದೇ, ನೀನು ಸ್ನಾನ ಮಾಡಿದ ಬಳಿಕ ಈ ತೀರ್ಥದ ನೀರನ್ನು ಕೈಯಲ್ಲಿ ಹಿಡಿದು ಹರಿನಾಮವನ್ನು ಹೇಳುತ್ತಾ ನನ್ನ ಮೇಲೆ ಪ್ರೋಕ್ಷಿಸು' ಎಂದಳು.

ಇತ್ಯುಕ್ತಾ ಬ್ರಾಹ್ಮಣೀ ಹೃಷ್ಟಾ ಪುತ್ರೈಃ ಸಹ ಶುಭವ್ರತಾ ।
ಜಲೇನ ಪ್ರೋಕ್ಷಯಾಮಾಸ ದ್ವಾದಶಾಕ್ಷರಸಂಯುತಮ್ ॥೩೯॥

ಅದರಂತೆ ಆ ಬ್ರಾಹ್ಮಣಿಯು ಮಕ್ಕಳ ಜೊತೆಗೆ ತೀರ್ಥಸ್ನಾನವನ್ನು ಮಾಡಿ, ಸಂತೋಷದಿಂದ ಆ ನೀರನ್ನು ತೆಗೆದು ಆ ಪಿಶಾಚಿಯ ಮೇಲೆ ದ್ವಾದಶಾಕ್ಷರ ಮಂತ್ರವನ್ನು ಜಪಿಸಿ ಪ್ರೋಕ್ಷಿಸಿದಳು.

ತತ್ಕ್ಷಣಾದಭವಚ್ಛುದ್ಧಾ ಪಿಶಾಚೀ ದಿವ್ಯರೂಪಿಣೀ ।
ಅಪ್ಸರಾ ಹ್ಯಭವದ್ ದಿವ್ಯಾ ಗತಾ ಸ್ವರ್ಲೋಕಮುತ್ತಮಮ್ ॥೪೦॥

ಆ ಕ್ಷಣದಲ್ಲಿಯೇ ಪಿಶಾಚಿಯು ದಿವ್ಯರೂಪವನ್ನು ತಾಳಿ, ಅಪ್ಸರೆಯ ರೂಪದಿಂದ ದೇವಲೋಕಕ್ಕೆ ಹೋಗಿ ಸೇರಿಕೊಂಡಿತು.

ಬ್ರಾಹ್ಮಣೀ ಚೈವ ಕಾಲೇನ ವಾಸುದೇವಪರಾಯಣಾ ।
ಸಪುತ್ರಾ ಚಾಗತಾ ಸ್ಥಾನಮಚ್ಯುತಸ್ಯ ಶುಭಂ ಪರಮ್ ॥೪೧॥

ಆ ಬ್ರಾಹ್ಮಣಿಯು ವಿಷ್ಣುಧ್ಯಾನಪರಳಾಗಿ ಕೊನೆಗೆ ವಿಷ್ಣುವಿನ ಸ್ಥಾನವನ್ನೇ ಹೊಂದಿದಳು.

ಏತತ್ ತೇ ಕಥಿತಂ ವಿದ್ವನ್ ಮುನೇ ಕಾಲೋಽಯಮಾಗತಃ ॥೪೨॥

ಗಮಿಷ್ಯೇಽಹಂ ಮಹಾಪ್ರಾಜ್ಞ ಆಗಮಿಷ್ಯಾಮಿ ವೈ ಪುನಃ ।
ಇತ್ಯುಕ್ತ್ವಾ ಸ ಜಗಾಮಾಥ ನಾರದೋ ವದತಾಂವರಃ ॥೪೩॥

ವ್ಯಾಸಮಹರ್ಷಿಯೇ, ಇದೇ ಬಾಹ್ಲೀಕ ದೇಶದ ಚರಿತ್ರೆಯು. ಇನ್ನು ನಾನು ಹೊರಡುವ ಸಮಯವು ಆಗಮಿಸಿದೆ. ಮತ್ತೊಮ್ಮೆ ನಿನ್ನನ್ನು ಬಂದು ಕಾಣುತ್ತೇನೆ. ಈ ರೀತಿಯಾಗಿ ಉತ್ತಮ ಮಾತನ್ನು ಹೇಳುವುದರಲ್ಲಿ ಸಮರ್ಥರಾದ ನಾರದರು ಅದೃಶ್ಯರಾದರು.

ದ್ವೈಪಾಯನಸ್ತು ಭಗವಾಂಸ್ತಚ್ಛ್ರುತ್ವಾ ಮುನಿಸತ್ತಮಾತ್ ।
ಶುಕೇನ ಸಹ ಪುತ್ರೇಣ ವೇದಾಭ್ಯಾಸಮಥಾಕರೋತ್ ।
ಸ್ವರೇಣೋಚ್ಚೈಃ ಸ ಶೈಕ್ಷೇಣ ಲೋಕಾನಾಪೂರಯನ್ನಿವ ॥೪೪॥

ನಾರದರ ಮಾತಿಗನುಗುಣವಾಗಿ ವ್ಯಾಸರು ಮೂರುಲೋಕಗಳನ್ನೂ ವೇದಘೋಷದಿಂದ ತುಂಬುವಂತೆ ತಮ್ಮ ಮಗನ ಜೊತೆಗೆ ಸೇರಿಕೊಂಡು ನಿಯಮಬದ್ಧವಾಗಿ ಉಚ್ಚಧ್ವನಿಯಿಂದ ವೇದಾಭ್ಯಾಸವನ್ನು ಮಾಡತೊಡಗಿದರು.

ತಯೋರಭ್ಯಸತೋರೇವಂ ನಾನಾಧರ್ಮಪ್ರವಾದಿನೋಃ ।
ವಾತೋಽತಿಮಾತ್ರಂ ಪ್ರವವೌ ಸಮುದ್ರಾನಿಲವೇಜಿತಃ ॥೪೫॥

ನಾನಾಧರ್ಮಗಳನ್ನು ಬೋಧಿಸುತ್ತಿರುವ, ನಿರಂತರ ವೇದಾಭ್ಯಾಸವನ್ನು ಮಾಡುತ್ತಿರುವ ವ್ಯಾಸ-ಶುಕರ ಪ್ರಭಾವದಿಂದ ಸಮುದ್ರದ ಮೇಲಿನ ಗಾಳಿಯಿಂದ ಪ್ರಚೋದಿತವಾದ ಬಿರುಗಾಳಿಯು ಬಹಳ ಜೋರಾಗಿ ಬೀಸಲು ಆರಂಭಿಸಿತು.

ತತೋಽನಧ್ಯಾಯ ಇತಿ ತಂ ವ್ಯಾಸಃ ಪುತ್ರಮವಾರಯತ್ ।
ಶುಕೋ ವಾರಿತಮಾತ್ರಸ್ತು ಕೌತೂಹಲಸಮನ್ವಿತಃ ॥೪೬॥

ಕೂಡಲೇ ವ್ಯಾಸರು ಅನಧ್ಯಾಯ ಒದಗಿತು ಎಂದು ಹೇಳಿ ವೇದಪಾಠವನ್ನು

ನಿಲ್ಲಿಸುವಂತೆ ಮಗನಿಗೆ ಹೇಳಿದರು. ತಂದೆಯು ಹೀಗೆ ಹೇಳಿದಾಗ ಕುತೂಹಲದಿಂದ ಕೂಡಿದ ಶುಕಮುನಿಯು ಹೀಗೆ ಪ್ರಶ್ನಿಸಿದನು.

ಅಪೃಚ್ಛತ್ ಪಿತರಂ ಬ್ರಹ್ಮನ್ ಕುತೋ ವಾಯುರಭೂದಯಮ್ ।
ಆಖ್ಯಾತುಮರ್ಹತಿ ಭವಾನ್ ವಾಯೋಃ ಸರ್ವಂ ವಿಚೇಷ್ಟಿತಮ್ ॥೪೭॥

ತಂದೆಯೇ, ಗಾಳಿಯು ಎಲ್ಲಿಂದ ಹುಟ್ಟಿಬಂದಿತು? ವಾಯುವಿನ ಸಕಲವಾದ ಚೇಷ್ಟೆಗಳನ್ನು ನನಗೆ ತಿಳಿಸಿರಿ. ತಾವು ಹೇಳಲು ಸಮರ್ಥರಾಗಿದ್ದೀರಿ.

ಶುಕಸ್ಯೈತದ್ ವಚಃ ಶ್ರುತ್ವಾ ವ್ಯಾಸಃ ಪರಮವಿಸ್ಮಿತಃ ।
ಅನಧ್ಯಾಯನಿಮಿತ್ತೇಸ್ಮಿನ್ನಿದಂ ವಚನಮಬ್ರವೀತ್ ॥೪೮॥

ಯುಧಿಷ್ಠಿರನೇ, ಶುಕನ ಮಾತನ್ನು ಕೇಳಿಸಿಕೊಂಡ ವ್ಯಾಸರು ಪರಮವಿಸ್ಮಿತರಾದರು. ಅನಧ್ಯಾಯದ ಕಾರಣವನ್ನು ವಿವರಿಸುತ್ತಾ ಹೀಗೆ ಹೇಳಿದರು.

ದಿವ್ಯಂ ತೇ ಚಕ್ಷುರುತ್ಪನ್ನಂ ಸ್ವಸ್ಥಂ ತೇ ನಿರ್ಮಲಂ ಮನಃ ।
ತಮಸಾ ರಜಸಾ ಚಾಪಿ ತ್ಯಕ್ತಃ ಸತ್ತ್ವೇ ವ್ಯವಸ್ಥಿತಃ ॥೪೯॥

ಮಗನೇ, ನಿನಗೆ ಸ್ವತಃ ದಿವ್ಯಚಕ್ಷುಸ್ಸು ಒದಗಿ ಬಂದಿದೆ. ನಿನ್ನ ಮನಸ್ಸು ಅತ್ಯಂತ ನಿರ್ಮಲವಾಗಿದೆ. ರಜಸ್ಸು, ತಮಸ್ಸುಗಳಿಂದ ರಹಿತನಾಗಿರುವ ನೀನು ಶುದ್ಧಸತ್ತ್ವ ಗುಣದಲ್ಲಿ ಪ್ರತಿಷ್ಠಿತನಾಗಿರುವಿ.

ಆದರ್ಶೇ ಸ್ವಾಮಿವ ಛಾಯಾಂ ಪಶ್ಯಸ್ಯಾತ್ಮಾನಮಾತ್ಮನಾ ।
ನ್ಯಸ್ಯಾತ್ಮನಿ ಸ್ವಯಂ ವೇದಾನ್ ಬುದ್ಧ್ಯಾ ಸಮನುಚಿಂತಯ ॥೫೦॥

ಜನರೆಲ್ಲ ತಮ್ಮ ಪ್ರತಿಬಿಂಬವನ್ನು ಕನ್ನಡಿಯಲ್ಲಿ ಹೇಗೆ ನೋಡಿಕೊಳ್ಳುತ್ತಾರೋ ಹಾಗೆ ಬುದ್ಧಿ ಎಂಬ ಕನ್ನಡಿಯಲ್ಲಿ ಪರಮಾತ್ಮನನ್ನು ನೆಲೆಗೊಳಿಸಿ, ವೇದಗಳನ್ನು ಚೆನ್ನಾಗಿ ಆಲೋಚಿಸು.

ದೇವಯಾನಚರೋ ವಿಷ್ಣೋಃ ಪಿತೃಯಾನಶ್ಚ ತಾಮಸಃ ।
ದ್ವಾವೇತೌ ಪ್ರೇತ್ಯ ಪಂಥಾನೌ ದಿವಂ ಚಾಧಶ್ಚ ಗಚ್ಛತಃ ॥೫೧॥

ಮರಣದ ಬಳಿಕ ದೇವಯಾನದಲ್ಲಿ ಸಂಚರಿಸುವವರು ವಿಷ್ಣುವಿನ ಭಕ್ತರಾಗಿರುತ್ತಾರೆ. ಪಿತೃಯಾನದಲ್ಲಿಸಂಚರಿಸುವವರು ತಾಮಸರೆನಿಸಿದ್ದಾರೆ. ಈ ಎರಡು ಮಾರ್ಗಗಳನ್ನು ಅನುಸರಿಸಿ ಒಬ್ಬರು ಮೇಲ್ಮುಖವಾಗಿಯೂ, ಒಬ್ಬರು ಕೆಳಮುಖವಾಗಿಯೂ ಸಾಗುತ್ತರೆ.

ಪೃಥಿವ್ಯಾಮಂತರಿಕ್ಷೇ ಚ ಯತ್ರ ಸಂವಾಂತಿ ವಾಯವಃ ।
ಸಪ್ತೈತೇ ವಾಯುಮಾರ್ಗಾ ವೈ ತಾನ್ನಿಬೋಧಾನುಪೂರ್ವಶಃ ॥೫೨॥

ಪೃಥಿವಿ, ಅಂತರಿಕ್ಷದಲ್ಲಿ ಎಲ್ಲೆಲ್ಲಿ ವಾಯುವು ಸಂಚರಿಸುತ್ತದೆಯೋ ಅದಕ್ಕೆ ಏಳು ಮಾರ್ಗಗಳಿವೆ. ಕ್ರಮವಾಗಿ ಅವುಗಳನ್ನು ಹೇಳುತ್ತೇನೆ, ಕೇಳು.

ತತ್ರ ದೇವಗಣಾಃ ಸಾಧ್ಯಾಃ ಸಮಭೂವನ್ ಮಹಾಬಲಾಃ ।
ತೇಷಾಮಪ್ಯಭವತ್ ಪುತ್ರಃ ಸಮಾನೋ ನಾಮ ದುರ್ಜಯಃ ॥೫೩॥

ಪೃಥಿವಿ, ಅಂತರಿಕ್ಷದಲ್ಲಿ ಮಹಾಸುರೂಪಿಗಳೂ, ಮಹಾಬಲಿಷ್ಠರೂ ಆದ ಸಾಧ್ಯರೆಂಬ ದೇವತೆಗಳು ವಾಸ ಮಾಡಿದ್ದಾರೆ.. ಸಮಾನನೆಂಬ ದುರ್ಜಯನಾದ ವಾಯುವು ಅವರ ಮಗನೆನಿಸಿದ್ದಾನೆ.

ಉದಾನಸ್ತಸ್ಯ ಪುತ್ರೋಽಭೂದ್ವ್ಯಾನಸ್ತಸ್ಯಾಭವತ್ ಸುತಃ ।
ಅಪಾನಶ್ಚ ತತೋ ಜ್ಞೇಯಃ ಪ್ರಾಣಶ್ಚಾಪಿ ತತಃ ಪರಮ್ ॥೫೪॥

ಸಮಾನನಿಗೆ ಉದಾನನೆಂಬ ಮಗನು, ಉದಾನನಿಗೆ ವ್ಯಾನನೆಂಬ ಮಗನು, ವ್ಯಾನನಿಗೆ ಅಪಾನನೆಂಬ ಮಗನು, ಅಪಾನನಿಗೆ ಪ್ರಾಣನೆಂಬ ಮಗನು ಹುಟ್ಟಿದನು.

ಅನಪತ್ಯೋಽಭವತ್ ಪ್ರಾಣೋ ದುರ್ಧರ್ಷಃ ಶತ್ರುತಾಪನಃ ।
ಪೃಥಕ್ಕರ್ಮಾಣಿ ತೇಷಾಂ ತು ಪ್ರವಕ್ಷ್ಯಾಮಿ ಯಥಾತಥಮ್ ॥೫೫॥

ಎದುರಿಸಲು ಅಸಾಧ್ಯನಾದ, ಶತ್ರುತಾಪನನಾದ ಪ್ರಾಣನಿಗೆ ಸಂತಾನವಾಗಲಿಲ್ಲ. ಸಮಾನಾದಿಗಳ ಪ್ರತ್ಯೇಕವಾದ ವ್ಯಾಪಾರವನ್ನು ಕ್ರಮವಾಗಿ ಹೇಳುತ್ತೇನೆ, ಕೇಳು.

ಪ್ರಾಣೇನಾಂ ಸರ್ವತೋ ವಾಯುಶ್ಚೇಷ್ಟಾ ವರ್ತಯತೇ ಪೃಥಕ್ ।
ಪ್ರಾಣನಾಚ್ಚೈವ ಭೂತಾನಾಂ ಪ್ರಾಣ ಇತ್ಯಭಿಧೀಯತೇ ॥೫೬॥

ವಾಯುವು ಪ್ರಾಣಿಗಳ ದೇಹದಲ್ಲಿ ಪ್ರತ್ಯೇಕ ಪ್ರತ್ಯೇಕ ವ್ಯಾಪಾರವನ್ನು ಮಾಡುತ್ತದೆ. ಪ್ರಾಣಿಗಳ ಚೇಷ್ಟೆಗೆ ವಾಯುವೇ ಮುಖ್ಯಕಾರಣ. ಪ್ರಾಣಿಗಳನ್ನು ಜೀವಿಸುವಂತೆ ಮಾಡುವುದಕ್ಕೆ ಪ್ರಾಣ ಎಂದು ಹೆಸರು ಬಂದಿದೆ.

ಪ್ರೇರಯತ್ಯಭ್ರಸಂಘಾತಾಂಧೂಮಜಾಂಶ್ಚೋಷ್ಮಜಾಂಶ್ಚ ಯಃ ।
ಪ್ರಥಮಃ ಪ್ರಥಮೇ ಮಾರ್ಗೇ ಪ್ರವಹೋ ನಾಮ ಸೋಽನಿಲಃ ॥೫೭॥

ಹೊಗೆಯಿಂದ ತಾಪದಿಂದ ಹುಟ್ಟಿದ ಮೇಘಗಳು ಅತ್ತಿಂದಿತ್ತ ಸಂಚರಿಸುವಂತೆ ಮಾಡುವ ಮೊದಲ ಮಾರ್ಗದಲ್ಲಿ ಸಂಚರಿಸುವ ಪ್ರವಹ ವಾಯುವು ಮೊದಲನೆ ವಾಯು ಎನಿಸಿದೆ.

ಅಂಬರೇ ಸ್ನೇಹಮಭ್ರೇಭ್ಯಸ್ತಡಿದ್ಭ್ಯಶ್ಚೋತ್ತಮದ್ಯುತಿಃ ।
ಆವಹೋ ನಾಮ ಸಂವಾತಿ ದ್ವಿತೀಯಃ ಶ್ವಸನೋ ನದನ್ ॥೫೮॥

ವಿದ್ಯುತ್ತಿನೊಡನೆ ಸಂಬಂಧವನ್ನು ಹೊಂದಿ ಮಹಾಕಾಂತಿಯಿಂದ ಯಾವ ವಾಯುವು ಗಟ್ಟಿಯಾಗಿ ಶಬ್ದ ಮಾಡುತ್ತಾ ಆಕಾಶದಲ್ಲಿ ಬೀಸುತ್ತದೋ ಆ ವಾಯುವಿಗೆ ಆವಹ ಎಂದು ಹೆಸರು.

ಉದಯಂ ಜ್ಯೋತಿಷಾಂ ಶಶ್ವತ್ ಸೋಮಾದೀನಾಂ ಕರೋತಿ ಯಃ ।
ಅಂತರ್ದೇಹೇಷು ಚೋದಾನಂ ಯಂ ವದಂತಿ ಮಹರ್ಷಯಃ ॥೫೯॥

ಯಾವ ವಾಯುವು ನಕ್ಷತ್ರ, ಸೋಮ, ಸೂರ್ಯ ಇವರ ಉದಯವನ್ನು ಮಾಡುತ್ತದೋ, ಪ್ರಾಣಿಗಳ ದೇಹದಲ್ಲಿ ಚೇಷ್ಟೆಮಾಡುತ್ತಿದೆಯೋ ಅದನ್ನು ವಿದ್ವಾಂಸರು ಉದಾನ ಎಂದು ಹೇಳುತ್ತಾರೆ.

ಯಶ್ಚತುರ್ಭ್ಯಃ ಸಮುದ್ರೇಭ್ಯೋ ವಾಯುರ್ಹಾರಯತೇ ಜಲಮ್ ।
ಉದ್ಧತ್ಯಾದದತೇ ಚಾಪೋ ಜೀಮೂತೇಭ್ಯೋಽಂಬರೇಽನಿಲಃ ॥೬೦॥

ಯೋಽದ್ಭಿಃ ಸಂಯೋಜ್ಯ ಜೀಮೂತಾನ್ ಪರ್ಜನ್ಯಾಯ ಪ್ರಯಚ್ಛತಿ ।
ಉದ್ವಹೋ ನಾಮ ವರ್ಷಿಷ್ಠಸ್ತೃತೀಯಃ ಸ ಸದಾಗತಿಃ ॥೬೧॥

ನಾಲ್ಕು ಸಮುದ್ರಗಳಿಂದಲೂ ನೀರನ್ನು ಸ್ವೀಕರಿಸಿ ಅಂತಹ ಜಲರಾಶಿಯನ್ನು ಆಕಾಶ ಮಂಡಲಕ್ಕೆ ಎತ್ತಿಕೊಂಡು ಹೋಗಿ ಮೇಘಗಳಿಗೆ ನೀಡುವಂತಹ, ಮೇಘಗಳನ್ನು ನೀರಿನ

ಜೊತೆಗೆ ಸಂಯೋಜಿಸಿ ಪರ್ಜನ್ಯನಿಗೆ ಒಪ್ಪಿಸುವಂತಹ, ಸದಾ ಚಲನಶೀಲವಾದ ಮಹಾವಾಯುವಿಗೆ ಉದ್ವಹ ಎಂದು ಹೆಸರು.

ಸಮುಹ್ಯಮಾನಾ ಬಹುಧಾ ಯೇನ ನೀಲಾಃ ಪೃಥಗ್ಘನಾಃ ।
ವರ್ಷಮೋಕ್ಷಕೃತಾರಂಭಾಸ್ತೇ ಭವಂತಿ ಘನಾಘನಾಃ ॥೬೨॥

ಸಂಹತಾ ಯೇನ ಚಾವಿದ್ಧಾ ಭವಂತಿ ನದತಾಂ ನದಾಃ ।
ರಕ್ಷಣಾರ್ಥಾಯ ಸಂಭೂತಾ ಮೇಘತ್ವಮುಪಯಾಂತಿ ಚ ॥೬೩॥

ಯೋಽಸೌ ವಹತಿ ದೇವಾನಾಂ ವಿಮಾನಾನಿ ವಿಹಾಯಸಾ ।
ಚತುರ್ಥಃ ಸಂವಹೋ ನಾಮ ವಾಯುಃ ಸ ಗಿರಿಮರ್ದನಃ ॥೬೪॥

ಪ್ರತ್ಯೇಕ ಪ್ರತ್ಯೇಕವಾಗಿರುವ ಅನೇಕ ಮೇಘಗಳನ್ನು ಯಾವ ವಾಯುವು ಒಟ್ಟಿಗೆ ಸೇರಿಸಿ ಪ್ರಚೋದಿಸಿ ನೀರಿನ ಮೇಘಗಳು ಮಳೆಗರೆಯಲು ಆರಂಭಿಸುವವೋ, ಯಾವ ವಾಯುವಿನಿಂದ ಘನೀಭೂತವಾದ ಮೇಘಗಳು ಚದುರಿ ಹೋಗುವವೋ, ಯಾವ ವಾಯುವಿನ ಪ್ರೇರಣೆಯಿಂದ ಮೇಘಗಳೆಲ್ಲ ಪುನಃ ನೀರಿನ ರೂಪದಿಂದ ಒಟ್ಟಾಗಿ ಸೇರಿ, ಶಬ್ದ ಮಾಡುವ ವಸ್ತುಗಳಲ್ಲಿ ಬಹಳ ಗಟ್ಟಿಯಾಗಿ ಶಬ್ದ ಮಾಡುವ ಸಮುದ್ರಗಳಾಗುವವೋ, ಯಾವ ವಾಯುವು ಪ್ರಾಣಿಗಳ ರಕ್ಷಣೆಗಾಗಿ ಸಮುದ್ರದ ನೀರನ್ನು ಧರಿಸಿ ಆಕಾಶದಲ್ಲಿ ಮೇಘವನ್ನು ನಿರ್ಮಾಣ ಮಾಡುತ್ತದೋ, ದೇವತೆಗಳ ವಿಮಾನಗಳನ್ನು ಆಕಾಶದ ಮೂಲಕ ಸಂಚರಿಸುವಂತೆ ಮಾಡುತ್ತದೋ, ಪರ್ವತದ ಶಿಖರವನ್ನೇ ಧ್ವಂಸ ಮಾಡುತ್ತದೋ ಅಂತಹ ವಾಯುವು ಸಂವಹ ಎಂಬ ನಾಲ್ಕನೆಯ ವಾಯುವಾಗಿದೆ.

ಯೇನ ವೇಗವತಾ ರುಗ್ಣಾ ರೂಕ್ಷೇಣಾರುಜತಾ ರಸಾನ್ ।
ವಾಯುನಾ ವಿಹತಾ ಮೇಘಾಸ್ತೇ ಭವಂತಿ ಬಲಾಹಕಾಃ ॥೬೫॥

ಭಯಂಕರವಾದ ವೇಗವಾಗಿ ಬೀಸುವ, ಬೆಟ್ಟಗಳನ್ನು ಪುಡಿಮಾಡುವ ವಾಯುವು ಮೇಘದ ಜೊತೆಗೆ ಸೇರಿದಾಗ ಬೆಟ್ಟಗಳನ್ನೂ ಭೇದಿಸುವ ಸಾಮರ್ಥ್ಯವನ್ನು ಪಡೆಯುತ್ತದೆ. ಇದಕ್ಕೆ ಬಲಾಹಕ ಮೇಘಗಳು ಎಂದು ಕರೆಯುತ್ತಾರೆ.

ದಾರುಣೋತ್ಪಾತಸಂಚಿರೋ ನಭಸಃ ಸ್ತನಯಿತ್ನುಮಾನ್ ।
ಪಂಚಮಃ ಸ ಮಹಾವೇಗೋ ವಿವಹೋ ನಾಮ ಮಾರುತಃ ॥೬೬॥

ಯಾವ ವಾಯುವಿನ ಸಂಚಾರವು ಭಯಂಕರ ಉತ್ಪಾತಗಳನ್ನು ಸೃಷ್ಟಿ ಮಾಡುತ್ತದೋ, ಯಾವ ವಾಯುವು ಆಕಾಶದ ಮೇಘಗಳನ್ನು ಚಲಿಸುವಂತೆ ಮಾಡುತ್ತದೋ, ಮಹಾವೇಗದಿಂದ ಕೂಡಿದ ಆ ವಾಯುವು ವಿವಹ ಎಂಬ ಐದನೆಯ ವಾಯುವಾಗಿದೆ.

ಯಸ್ಮಿನ್ ಪಾರಿಪ್ಲವೇ ದಿವ್ಯಾ ವಹಂತ್ಯಾಪೋ ವಿಹಾಯಸಾ ।
ಪುಣ್ಯಂ ಚಾಕಾಶಗಂಗಾಯಾಸ್ತೋಯಂ ವಿಷ್ಟಭ್ಯ ತಿಷ್ಠತಿ ॥೬೭॥

ಯಾವ ವಾಯುವಿನ ಆಶ್ರಯದಲ್ಲಿ ನೀರಿನ ಪ್ರವಾಹಗಳು ಆಕಾಶದ ಮೂಲಕ ನೀರಿನಲ್ಲಿ ಸಂಚರಿಸುವ ಶ್ರೇಷ್ಠ ಪಕ್ಷಿಗಳನ್ನು ಕರೆದುಕೊಂಡು ಹೋಗುತ್ತವೆಯೋ, ಯಾವ ವಾಯುವು ಪುಣ್ಯತಮವಾದ ಆಕಾಶಗಂಗೆಯನ್ನು ಧರಿಸಿರುವುದೋ,

ದೂರಾತ್ ಪ್ರತಿಹತೋ ಯಸ್ಮಿನ್ನೇಕರಶ್ಮಿರ್ದಿವಾಕರಃ ।
ಯೋನಿರಂಶುಸಹಸ್ರಸ್ಯ ಯೇನ ಭಾತಿ ವಸುಂಧರಾ ॥೬೮॥

ಸಹಸ್ರಕಿರಣನೆನಿಸಿದ ಸೂರ್ಯನು ಭೂಮಿಯನ್ನು ಬೆಳಗುತ್ತಾ ಯಾವ ವಾಯುವಿನಿಂದ ಹೊಡೆಯಲ್ಪಟ್ಟು ಏಕರಶ್ಮಿಯಾಗಿ ಕಾಣುತ್ತಾನೋ, ಯಾವ ವಾಯುವಿನಿಂದ ಭೂಮಿಯು ಪ್ರಕಾಶಮಾನವಾಗಿದೆಯೋ,

ಯಸ್ಮಾದಾಪ್ಯಾಯತೇ ಸೋಮೋ ನಿಧಿರ್ದಿವ್ಯೋಽಮೃತಸ್ಯ ಚ ।
ಷಷ್ಠಃ ಪರಿವಹೋ ನಾಮ ಸ ವಾಯುರ್ಜವತಾಂ ವರಃ ॥೬೯॥

ಅಮೃತಕ್ಕೆ ದಿವ್ಯನಿಧಿ ಎನಿಸಿದ ಚಂದ್ರನು ಯಾವ ವಾಯುವಿನಿಂದ ಪೋಷಿತನಾಗಿದ್ದಾನೋ, ವಿಜಯಿಗಳಲ್ಲೇ ಶ್ರೇಷ್ಠನಾದ ಅಂತಹ ಆರನೆಯ ವಾಯುವು ಪರಿವಹ ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

ಸರ್ವಪ್ರಾಣಭೃತಾಂ ಪ್ರಾಣಾನ್ಯೋಽಂತಕಾಲೇ ನಿರಸ್ಯತಿ ।
ಯಸ್ಯ ವರ್ತ್ಮಾನುವರ್ತೇತೇ ಮೃತ್ಯುವೈವಸ್ವತಾವುಭೌ ॥೭೦॥

ಯಾವ ವಾಯುವು ಅಂತ್ಯಕಾಲದಲ್ಲಿ ಸಮಸ್ತ ಪ್ರಾಣಿಗಳ ಪ್ರಾಣವನ್ನು ಶರೀರದಿಂದ ಹೊರತೆಗೆಯುತ್ತದೋ, ಪ್ರಾಣವನ್ನು ಹೊರತೆಗೆದ ಬಳಿಕ ಮೃತು-ವೈವಸ್ವತರು ಯಾವ ವಾಯುವನ್ನು ಅನುಸರಿಸಿ ಸಾಗುತ್ತಾರೋ,

ಸಮ್ಯಗನ್ವೀಕ್ಷತಾಂ ಬುದ್ಧ್ಯಾ ಶಾಂತಯಾಧ್ಯಾತ್ಮನಿತ್ಯಯಾ ।
ಧ್ಯಾನಾಭ್ಯಾಸಾಭಿರಾಮಾಣಾಂ ಯೋಽಮೃತತ್ವಾಯ ಕಲ್ಪತೇ ॥೭೧॥

ಅಧ್ಯಾತ್ಮ ಚಿಂತನೆಯಲ್ಲಿ ನಿರತರಾದ, ಶಾಂತಬುದ್ಧಿಯಿಂದ ಮತ್ತು ಧ್ಯಾನಾಸಕ್ತಿಯಿಂದ ಆನಂದ ಹೊಂದುವ ಸಜ್ಜನರಿಗೆ ಅಮೃತತ್ವವನ್ನು ತಂದುಕೊಡುತ್ತದೆಯೋ,

ಯಂ ಸಮಾಸಾದ್ಯ ವೇಗೇನ ದಿಶಾಮಂತಂ ಪ್ರಪೇದಿರೇ ।
ದಕ್ಷಸ್ಯ ದಶ ಪುತ್ರಾಣಾಂ ಸಹಸ್ರಾಣಿ ಪ್ರಜಾಪತೇಃ ॥೭೨॥

ಯಾವ ವಾಯುವನ್ನು ಆಶ್ರಯಿಸಿ ದಕ್ಷಪ್ರಜಾಪತಿಯ ಹತ್ತುಸಾವಿರ ಮಕ್ಕಳು ದಿಕ್ಕುಗಳ ಕೊನೆಯನ್ನು ಸೇರಿದರೋ,

ಯೇನ ಸ್ಪೃಷ್ಟಃ ಪರಾಭೂತೋ ಯಾತ್ಯೇವ ನ ನಿವರ್ತತೇ ।
ಪರಾವಹೋ ನಾಮ ಪರೋ ವಾಯುಃ ಸ ದುರತಿಕ್ರಮಃ ॥೭೩॥

ಯಾವ ವಾಯುವಿನಿಂದ ಮುಟ್ಟಲ್ಪಟ್ಟ ಜೀವನು ಪ್ರಾಣವನ್ನು ತೆತ್ತು ಇಲ್ಲಿಂದ ಹೊರಟು ಹೋಗುತ್ತಾನೋ, ಮತ್ತೆ ಹಿಂದೆ ತಿರುಗಿ ಬರುವುದಿಲ್ಲವೋ, ಅಂತಹ ಅತಿಕ್ರಮಿಸಲು ಅಸಾಧ್ಯವಾದ ಏಳನೆಯ ವಾಯುವು ಪರಾವಹ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ಏವಮೇತೇಽದಿತೇಃ ಪುತ್ರಾ ಮಾರುತಾಃ ಪರಮಾದ್ಭುತಾಃ ।
ಅನಾರಮಂತಃ ಸಂವಾಂತಿ ಸರ್ವಗಾಃ ಸರ್ವಧಾರಿಣಃ ॥೭೪॥

ಹೀಗೆ ಏಳು ಜನ ಮರುದ್ದೇವತೆಗಳು ದಿತಿಯ ಶ್ರೇಷ್ಠರಾದ ಮಕ್ಕಳಾಗಿರುತ್ತಾರೆ. ಈ ಎಲ್ಲ ಕಡೆಯೂ ಸಂಚರಿಸುವ, ಎಲ್ಲವನ್ನೂ ಧಾರಣೆ ಮಾಡಿರುವ ಈ ವಾಯುಗಳು ನಿರಂತರವಾಗಿ ಬೀಸುತ್ತಿರುತ್ತವೆ.

ಏತತ್ತು ಮಹದಾಶ್ಚರ್ಯಂ ಯದಯಂ ಪರ್ವತೋತ್ತಮಃ ।
ಕಂಪಿತಃ ಸಹಸಾ ತೇನ ವಾಯುನಾಭಿಪ್ರವಾಯತಾ ॥೭೫॥

ಅತ್ಯಂತ ವೇಗವಾಗಿ ಬೀಸುತ್ತಿರುವ ಈ ವಾಯುವಿನ ಮೂಲಕ ಪರ್ವತಗಳಲ್ಲೇ

ಶ್ರೇಷ್ಠವಾದ ಹಿಮಾಲಯವು ಕಂಪಿಸುತ್ತಿರುವುದು ತುಂಬಾ ದೊಡ್ಡ ಆಶ್ಚರ್ಯಕರ ಸಂಗತಿಯಾಗಿದೆ.

ವಿಷ್ಣೋರ್ನಿಃಶ್ವಾಸವಾತೋಽಯಂ ಯದಾ ವೇಗಸಮೀರಿತಃ ।
ಸಹಸೋದೀರ್ಯತೇ ತಾತ ಜಗತ್ ಪ್ರವ್ಯಥತೇ ತದಾ ॥೭೬॥

ಮಗುವೇ, ಈ ವಾಯುವು ಮಹಾವಿಷ್ಣುವಿನ ನಿಃಶ್ವಾಸವೆನಿಸಿದೆ. ಯಾವಾಗ ನಿಃಶ್ವಾಸವೆನಿಸಿದ ವಾಯುವು ಯೋಗದಿಂದ ಮೂಗಿನ ದ್ವಾರಾ ಹೊರಗೆ ಬರುತ್ತದೋ ಆಗ ದೇಹವೆಂಬ ಜಗತ್ತು ಬಹಳ ದುಃಖಕ್ಕೆ ತುತ್ತಾಗುತ್ತದೆ.

ತಸ್ಮಾದ್ ಬ್ರಹ್ಮವಿದೋ ಬ್ರಹ್ಮ ನಾಧೀಯಂತೇಽತಿವಾಯತಿ ।
ವಾಯೋರ್ವಾಯುಭವೇ ಹ್ಯುಕ್ತಂ ಬ್ರಹ್ಮ ತತ್ ಪೀಡಿತಂ ಭವೇತ್ ॥

ಪುನಃ ಪುನಃ ವಾಯುವಿನ ಮಹಾಘೋಷವು ಯಾವಾಗ ಉಂಟಾಗುತ್ತದೋ ಆ ಘೋಷದಿಂದಾಗಿ ವೇದಗಳು ಪೀಡಿತವಾಗಿ ಸರಿಯಾಗಿ ಕೇಳಿಸುವುದಿಲ್ಲವೋ, ಪ್ರಬಲವಾದ ವಾಯುವಿನ ಘೋಷವು ಕೇಳಿಸುತ್ತಿರುವಾಗ ಗುರುಗಳಿಂದ ಉಚ್ಚರಿಸಲ್ಪಡುವ ವೇದವು ಶಿಷ್ಯರಿಂದ ಕೇಳಲಾಗದ ಕಾರಣ ಬ್ರಹ್ಮಜ್ಞಾನಿಗಳಾದ ಪುರುಷರು ಅನಧ್ಯಾಯವನ್ನು ಮಾಡಬೇಕು ಎಂದು ಹೇಳುತ್ತಾರೆ.

ಏತಾವದುಕ್ತ್ವಾ ವಚನಂ ಪರಾಶರಸುತಃ ಪ್ರಭುಃ ।
ಉಕ್ತ್ವಾ ಪುತ್ರಮಧೀಷ್ವೇತಿ ವ್ಯೋಮಗಂಗಾಮಯಾತ್ತದಾ ॥೭೮॥

ಯುಧಿಷ್ಠಿರನೇ, ಪರಾಶರರ ಮಗನಾದ ವ್ಯಾಸರು ಅನಧ್ಯಯನ ವಿಷಯವಾಗಿ ಮಗನಿಗೆ ಹೀಗೆ ಹೇಳಿ, ವೇದಾಧ್ಯಯನವನ್ನು ಮುಂದುವರೆಸುವಂತೆ ಆದೇಶಿಸಿ ಆಕಾಶಗಂಗೆಯ ಕಡೆ ತೆರಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಷ್ಟ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂದನೆಯ ಅಧ್ಯಾಯ

ನಾರದರಿಂದ ಶುಕಮುನಿಗೆ ವೇದಾಧ್ಯಯನ, ಜ್ಞಾನಗಳ ಉಪದೇಶ.

ಭೀಷ್ಮಃ

ಏತಸ್ಮಿನ್ನಂತರೇ ಶೂನ್ಯೇ ನಾರದಃ ಸಮುಪಾಗಮತ್ ।
ಶುಕಂ ಸ್ವಾಧ್ಯಾಯನಿರತಂ ವೇದಾರ್ಥಾನ್ವಕ್ತುಮೀಪ್ಸಿತಾನ್ ॥೧॥

ದೇವರ್ಷಿಂ ತು ಶುಕೋ ದೃಷ್ಟ್ವಾ ನಾರದಂ ಸಮುಪಸ್ಥಿತಮ್ ।
ಅರ್ಘ್ಯಪೂರ್ವೇಣ ವಿಧಿನಾ ವೇದೋಕ್ತೇನಾಭ್ಯಪೂಜಯತ್ ॥೨॥

ಭೀಷ್ಮ– ಧರ್ಮಜನೇ, ಯಾರೂ ಇಲ್ಲದ ಸಮಯದಲ್ಲಿ ಸ್ವಾಧ್ಯಾಯ ನಿರತನಾದ ಶುಕರಿದ್ದ ಸ್ಥಳಕ್ಕೆ ನಾರದರು ಆಗಮಿಸಿದರು. ವೇದಾರ್ಥಗಳನ್ನು ಹೇಳುವ ಇಚ್ಛೆಯಿಂದ ಆಗಮಿಸಿದ, ದೇವರ್ಷಿಗಳಾದ ನಾರದರು ಬಂದು ಎದುರು ನಿಂತಿರುವುದನ್ನು ನೋಡಿದ ಶುಕಮುನಿಗಳು ವಿಧಿಬದ್ಧವಾಗಿ ಅರ್ಘ್ಯಪೂರ್ವಕವಾಗಿ ವೇದೋಕ್ತ ಕ್ರಮದಿಂದ ಪೂಜಿಸಿದರು.

ನಾರದೋಽಥಾಬ್ರವೀತ್ ಪ್ರೀತೋ ಬ್ರೂಹಿ ಬ್ರಹ್ಮವಿದಾಂ ವರ ।
ಕೇನ ತ್ವಾಂ ಶ್ರೇಯಸಾ ತಾತ ಯೋಜಯಾಮೀತಿ ಹೃಷ್ಟವತ್ ॥೩॥

ಅರ್ಘ್ಯ-ಪಾದ್ಯಾದಿಗಳಿಂದ ನಾರದರು ಸಂತುಷ್ಟರಾದರು. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ, ನಾನು ನಿನ್ನನ್ನು ಯಾವ ಶ್ರೇಯೋಮಾರ್ಗದಲ್ಲಿ ಸಂಯೋಜಿಸಲಿ? ಎಂದು ಪ್ರಶ್ನಿಸಿದರು.

ನಾರದಸ್ಯ ವಚಃ ಶ್ರುತ್ವಾ ಶುಕಃ ಪ್ರೋವಾಚ ಭಾರತ ।
ಅಸ್ಮಿಲ್ಲೋಕೇ ಹಿತಂ ಯತ್ಸ್ಯಾತ್ತೇನ ಮಾಂ ಯೋಕ್ತುಮರ್ಹಸಿ ॥೪॥

ನಾರದರ ಮಾತನ್ನು ಕೇಳಿ ಶುಕಮುನಿಯು ಉತ್ತರಿಸಿದನು: 'ಪೂಜ್ಯರೇ, ಈ ಲೋಕದಲ್ಲಿ ಯಾವುದರಿಂದ ಹಿತವಾಗುತ್ತದೋ ಅದನ್ನೇ ನನಗೆ ಉಪದೇಶಿಸಿರಿ'.

ನಾರದಃ

ತತ್ತ್ವಂ ಜಿಜ್ಞಾಸತಾಂ ಪೂರ್ವಮೃಷೀಣಾಂ ಭಾವಿತಾತ್ಮನಾಮ್ ।
ಸನತ್ಕುಮಾರೋ ಭಗವಾನಿದಂ ವಚನಮಬ್ರವೀತ್ ॥೫॥

ನಾರದ– ಶುಕದೇವನೇ, ಪರತತ್ತ್ವದ ಬಗ್ಗೆ ಜಿಜ್ಞಾಸೆ ಮಾಡುತ್ತಿದ್ದ, ಪವಿತ್ರವಾದ ಅಂತಃಕರಣವುಳ್ಳವರಾಗಿದ್ದ ಋಷಿಗಳಿಗೆ ಹಿಂದೊಮ್ಮೆ ಭಗವಾನ್ ಸನತ್ಕುಮಾರನು ಈ ಮಾತನ್ನು ಹೇಳಿರುತ್ತಾನೆ.

ನಾಸ್ತಿ ವಿದ್ಯಾಸಮಂ ಚಕ್ಷುರ್ನಾಸ್ತಿ ಸತ್ಯಸಮಂ ತಪಃ ।
ನಾಸ್ತಿ ರಾಗಸಮಂ ದುಃಖಂ ನಾಸ್ತಿ ತ್ಯಾಗಸಮಂ ಸುಖಮ್ ॥೬॥

ಋಷಿಗಳೇ, ಭಗವದ್ವಿದ್ಯೆಗೆ ಸಮಾನವಾದ ಕಣ್ಣಿಲ್ಲ. ಸತ್ಯಕ್ಕೆ ಸಮಾನವಾದ ತಪಸ್ಸಿಲ್ಲ. ರಾಗಕ್ಕೆ ಸಮಾನವಾದ ದುಃಖವಿಲ್ಲ. ತ್ಯಾಗಕ್ಕೆ ಸಮಾನವಾದ ಸುಖವಿಲ್ಲ.

ನಿವೃತ್ತಿಃ ಕರ್ಮಣಃ ಪಾಪಾತ್ ಸತತಂ ಪುಣ್ಯಶೀಲತಾ ।
ಸದ್ವೃತ್ತಿಃ ಸಮುದಾಚಾರಃ ಶ್ರೇಯ ಏತದನುತ್ತಮಮ್ ॥೭॥

ಯಾವಾಗಲೂ ಪಾಪಕರ್ಮಗಳಿಂದ ದೂರವಿರುವುದು, ಪುಣ್ಯಕರ್ಮಗಳಲ್ಲಿ ಆಸಕ್ತವಾಗಿರುವುದು, ಸಜ್ಜನರ ವ್ಯವಹಾರ ಮತ್ತು ಸದಾಚಾರಗಳನ್ನು ಅನುಷ್ಠಾನ ಮಾಡುವುದು- ಶ್ರೇಯಸ್ಸಿನ ಅತ್ಯಂತ ಶ್ರೇಷ್ಠವಾದ ಸಾಧನೆಗಳಾಗಿವೆ.

ಮಾನುಷ್ಯಮಸುಖಂ ಪ್ರಾಪ್ಯ ಯಃ ಸಜ್ಜತಿ ಸ ಮುಹ್ಯತಿ ।
ನಾಲಂ ಸ ದುಃಖಮೋಕ್ಷಾಯ ಸಂಗೋ ವೈ ದುಃಖಲಕ್ಷಣಮ್ ॥೮॥

ಸುಖವಿಲ್ಲದ ಮನುಷ್ಯಯೋನಿಯನ್ನು ಹೊಂದಿದ ಪುರುಷನು ವಿಷಯ ಸುಖಗಳಲ್ಲಿಯೇ ಆಸಕ್ತನಾಗುತ್ತಾನೋ ಅವನು ಮೋಹ ಹೊಂದಿದವನಾಗಿ ದುಃಖದಲ್ಲಿಯೇ ಮುಳುಗುತ್ತಾನೆ. ವಿಷಯಗಳ ಸಂಬಂಧದಿಂದ ದುಃಖವನ್ನು ನಿವಾರಿಸಿಕೊಳ್ಳಲಾಗದು. ಕಾರಣ ವಿಷಯಗಳ ಸಂಬಂಧವೇ ದುಃಖದ ಲಕ್ಷಣವಾಗಿದೆ.

ಸಕ್ತಸ್ಯ ಬುದ್ಧಿಶ್ಚಲತಿ ಮೋಹಜಾಲವಿವರ್ಧಿನೀ ।
ಮೋಹಜಾಲಾವೃತೋ ದುಃಖಮಿಹ ಚಾಮುತ್ರ ಚಾಶ್ನುತೇ ॥೯॥

ವಿಷಯಗಳಲ್ಲಿ ಆಸಕ್ತನಾದ ಪುರುಷನ ಬುದ್ಧಿಯು ಚಂಚಲವಾಗಿರುತ್ತದೆ. ಅಂತಹ ಚಂಚಲಬುದ್ಧಿಯು ಮೋಹಜಾಲಗಳನ್ನು ಹುಟ್ಟಿಸುತ್ತಾ, ಅಧಿಕಗೊಳಿಸುತ್ತಾ ಹೋಗುತ್ತದೆ. ಮೋಹಜಾಲದಲ್ಲಿ ಸಿಕ್ಕಿಬಿದ್ದ ಪುರುಷನು ಇಹ-ಪರಗಳಲ್ಲಿ ದುಃಖಕ್ಕೆ ಈಡಾಗುತ್ತಾನೆ.

ಸರ್ವೋಪಾಯೇನ ಕಾಮಸ್ಯ ಕ್ರೋಧಸ್ಯ ಚ ವಿನಿಗ್ರಹಃ ।
ಕಾರ್ಯಃ ಶ್ರೇಯೋರ್ಥಿನಾ ತೌ ಹಿ ಶ್ರೇಯೋಘಾತಾರ್ಥಮುದ್ಯತೌ ॥

ಶ್ರೇಯೋಮಾರ್ಗವನ್ನು ಬಯಸುವವನು ಯಾವಾಗಲೂ ಸಮಸ್ತ ಉಪಾಯಗಳಿಂದ ಕಾಮ-ಕ್ರೋಧಗಳನ್ನು ನಿಗ್ರಹಿಸಿಕೊಳ್ಳಬೇಕು. ಕಾರಣ ಕಾಮ-ಕ್ರೋಧಗಳು ಮನುಷ್ಯರ ಶ್ರೇಯಸ್ಸನ್ನು ಹಾಳುಮಾಡಲೆಂದೇ ಪ್ರಯತ್ನಿಸುತ್ತಿರುತ್ತವೆ.

ನಿತ್ಯಂ ಕ್ರೋಧಾತ್ತಪೋ ರಕ್ಷೇಚ್ಛ್ರಿಯಂ ರಕ್ಷೇತ ಮತ್ಸರಾತ್ ।
ವಿದ್ಯಾಂ ಮಾನಾವಮಾನಾಭ್ಯಾಮಾತ್ಮಾನಂ ತು ಪ್ರಮಾದತಃ ॥೧೧॥

ಯಾವಾಗಲೂ ತಪಸ್ಸನ್ನು ಕ್ರೋಧದಿಂದ ರಕ್ಷಿಸಬೇಕು. ಐಶ್ವರ್ಯವನ್ನು ಮಾತ್ಸರ್ಯದಿಂದ ರಕ್ಷಿಸಬೇಕು. ವಿದ್ಯೆಯನ್ನು ಮಾನಾಪಮಾನಗಳಿಂದ ರಕ್ಷಿಸಬೇಕು. ತನ್ನನ್ನು ಪ್ರಮಾದದಿಂದ ರಕ್ಷಿಸಿಕೊಳ್ಳಬೇಕು.

ವ್ಯಾಖ್ಯಾನ ವಿಶೇಷ– ಕೋಪದಿಂದ ತಪಸ್ಸಿನ ಕ್ಷಯವಾಗುತ್ತದೆ. ಮಾತ್ಸರ್ಯದಿಂದ ಐಶ್ವರ್ಯದ ಹಾನಿಯಾಗುತ್ತದೆ. ಮಾನಾಪಮಾನಗಳಿಗೆ ತುತ್ತಾದಲ್ಲಿ ವಿದ್ಯೆಯು ಹಾಳಾಗುತ್ತದೆ. ಅಜಾಗರೂಕತೆಯಿಂದ ತನಗೆ ಅಧಃಪತನವಾಗುತ್ತದೆ.

ಆನೃಶಂಸ್ಯಂ ಪರೋ ಧರ್ಮಃ ಕ್ಷಮಾ ಚ ಪರಮಂ ಬಲಮ್ ।
ಆತ್ಮಜ್ಞಾನಂ ಪರಂ ಜ್ಞಾನಂ ನ ಸತ್ಯಾದ್ ವಿದ್ಯತೇ ಪರಮ್ ॥೧೨॥

ದಯೆಯೇ ಶ್ರೇಷ್ಠವಾದ ಧರ್ಮವು. ಸಹನೆಯೇ ಶ್ರೇಷ್ಠವಾದ ಬಲವು. ಆತ್ಮಜ್ಞಾನವೇ ಶ್ರೇಷ್ಠವಾದ ಜ್ಞಾನವು. ಸತ್ಯಕ್ಕಿಂತಲೂ ಶ್ರೇಷ್ಠವಾದುದು ಇರುವುದಿಲ್ಲ.

ಸತ್ಯಸ್ಯ ವಚನಂ ಶ್ರೇಯಃ ಸತ್ಯಾದಪಿ ಹಿತಂ ಭವೇತ್ ।
ಯದ್ಭೂತಹಿತಮತ್ಯಂತಮೇತತ್ ಸತ್ಯಂ ಮತಂ ಮಮ ॥೧೩॥

ಸತ್ಯದ ವಚನವೇ ಶ್ರೇಯಸ್ಕರವಾದುದು. ಹಿತವನ್ನಾಚರಿಸುವುದು ಸತ್ಯಕ್ಕಿಂತಲೂ ಶ್ರೇಯಸ್ಕರವು. ಯಾವುದರಿಂದ ಪ್ರಾಣಿಗಳಿಗೆ ಅತ್ಯಂತ ಹಿತವಾಗಿರುತ್ತದೋ ಅದೇ ಸತ್ಯವೆಂದು ನನ್ನ ಮತವಾಗಿದೆ.

ಸರ್ವಾರಂಭಫಲತ್ಯಾಗೀ ನಿರಾಶೀರ್ನಿಷ್ಪರಿಗ್ರಹಃ ।
ಯೇನ ಸರ್ವಂ ಪರಿತ್ಯಕ್ತಂ ಸ ವಿದ್ವಾನ್ ಸ ಚ ಪಂಡಿತಃ ॥೧೪॥

ಯಾವನು ಬಂಧಕವಾದ ಕಾರ್ಯಗಳನ್ನು ಆಚರಿಸಲು ಸಂಕಲ್ಪಗಳನ್ನು ಮಾಡುವುದಿಲ್ಲವೋ, ಯಾವನ ಮನಸ್ಸು ಎಲ್ಲ ವಿಧವಾದ ಬಾಹ್ಯ ಕಾಮನೆಗಳಿಂದ ಮುಕ್ತವಾಗಿರುತ್ತದೋ, ಮತ್ತೊಬ್ಬರ ಪದಾರ್ಥಗಳನ್ನು ಹೊಂದಬೇಕು ಎಂಬ ಬಯಕೆ ಯಾವನಿಗೆ ಇರುವುದಿಲ್ಲವೋ, ಎಲ್ಲವನ್ನೂ ಪೂರ್ಣವಾಗಿ ಪರಿತ್ಯಾಗ ಮಾಡಿರುತ್ತಾನೋ ಅವನೇ ವಿದ್ವಾಂಸನು, ಅವನೇ ಪಂಡಿತನು.

ಇಂದ್ರಿಯೈರಿಂದ್ರಿಯಾರ್ಥೇಭ್ಯಶ್ಚರತ್ಯಾತ್ಮವಶೈರಿಹ ।
ಅಸಜ್ಜಮಾನಃ ಶಾಂತಾತ್ಮಾ ನಿರ್ವಿಕಾರಃ ಸಮಾಹಿತಃ ॥೧೫॥

ತನ್ನ ವಶದಲ್ಲಿರುವ ಇಂದ್ರಿಯಗಳಿಂದ ಇಂದ್ರಿಯವಿಷಯಗಳನ್ನು ಯಾವನು ಅತಿಯಾದ ಮೋಹಕ್ಕೆ ತುತ್ತಾಗದೆ ಸೇವಿಸುತ್ತಾನೋ, ಶಾಂತವಾದ ಮನಸ್ಸುಳ್ಳವನೋ, ನಿರ್ವಿಕಾರನೋ, ಏಕಾಗ್ರತೆಯನ್ನು ಸಂಪಾದಿಸಿಕೊಂಡಿರುವನೋ,

ಆತ್ಮಭೂತೈರತದ್ಭೂತಃ ಸಹ ಚೈವ ವಿನೈವ ಚ ।
ಸ ವಿಮುಕ್ತಃ ಪರಂ ಶ್ರೇಯೋ ನಚಿರೇಣಾಧಿಗಚ್ಛತಿ ॥೧೬॥

ಪರಮಾತ್ಮನಿಂದ ಸೃಷ್ಟರಾಗಿರುವ ಪುತ್ರ-ಮಿತ್ರ-ಕಳತ್ರಾದಿಗಳಲ್ಲಿ ಪರಮಾತ್ಮನ ಅಧೀನತೆಯನ್ನು ಕಾಣುತ್ತಾ, ಅವರಿಗೆ ಅಧೀನನಾಗದೆ ಕರ್ತವ್ಯವನ್ನು ಮಾಡಿದವನು ಮುಕ್ತನಾದಂತೆ ಸರಿ. ಅವನು ಬಹಳ ಶೀಘ್ರವಾಗಿ ಪರಮಶ್ರೇಯಸ್ಸನ್ನು ಹೊಂದುತ್ತಾನೆ.

ಅದರ್ಶನಮಸಂಸ್ಪರ್ಶಸ್ತಥಾಸಂಭಾಷಣಂ ಸದಾ ।
ಯಸ್ಯ ಭೂತೈಃ ಸಹ ಮುನೇ ಸ ಶ್ರೇಯೋ ವಿಂದತೇ ಪರಮ್ ॥೧೭॥

ಶುಕಮುನಿಯೇ, ಯಾರು ಯಾವ ಪ್ರಾಣಿಯನ್ನು ನೋಡುವುದೇ ಇಲ್ಲವೋ, ಮುಟ್ಟುವುದೇ ಇಲ್ಲವೋ, ಯಾವ ಪ್ರಾಣಿಗಳೊಡನೆ ಮಾತನಾಡುವುದಿಲ್ಲವೋ ಅವನು ಶ್ರೇಷ್ಠವಾದ ಶ್ರೇಯಸ್ಸನ್ನು ಹೊಂದುತ್ತಾನೆ.

ನ ಹಿಂಸ್ಯಾತ್ ಸರ್ವಭೂತಾನಿ ಮೈತ್ರಾಯಣಗತಶ್ಚರೇತ್ ।
ನೇದಂ ಜನ್ಮ ಸಮಾಸಾದ್ಯ ವೈರಂ ಕುರ್ವೀತ ಕೇನಚಿತ್ ॥೧೮॥

ಯಾವ ಪ್ರಾಣಿಯನ್ನೂ ಹಿಂಸೆ ಮಾಡಬಾರದು. ಎಲ್ಲರೊಡನೆ ಮಿತ್ರಭಾವದಿಂದ

ವ್ಯವಹರಿಸಬೇಕು. ಮನುಷ್ಯಜನ್ಮವನ್ನು ಪಡೆದು ಯಾರ ಬಳಿಯೂ ದ್ವೇಷವನ್ನು ಕಟ್ಟಿಕೊಳ್ಳಬಾರದು.

ಆಕಿಂಚನ್ಯಂ ಸುಸಂತೋಷೋ ನಿರಾಶೀಷ್ಟ್ವಮಚಾಪಲಮ್ ।
ಏತದಾಹುಃ ಪರಂ ಶ್ರೇಯ ಆತ್ಮಜ್ಞಸ್ಯ ಜಿತಾತ್ಮನಃ ॥೧೯॥

ಧನದ ಸಂಚಯನದಲ್ಲಿ ಆಸಕ್ತಿ ಇಲ್ಲದವನು, ಹೇಗಿದ್ದರೂ ಸಂತುಷ್ಟನಾದವನು, ಯಾವುದರ ಅಪೇಕ್ಷೆಯಿಲ್ಲದೆ ಚಾಪಲ್ಯವಿಲ್ಲದೆ ಇರುವವವನು ಪರಮಶ್ರೇಯಸ್ಸನ್ನು ಹೊಂದುತ್ತಾನೆ. ಜಿತೇಂದ್ರಿಯನಾದ ಆತ್ಮಜ್ಞಾನಿಗೆ ಇವುಗಳೇ ಶ್ರೇಯೋಮಾರ್ಗಗಳು.

ಪರಿಗ್ರಹಂ ಪರಿತ್ಯಜ್ಯ ಭವ ತಾತ ಜಿತೇಂದ್ರಿಯಃ ।
ಅಶೋಕಂ ಸ್ಥಾನಮಾತಿಷ್ಠ ಇಹ ಚಾಮುತ್ರ ಚಾಭಯಮ್ ॥೨೦॥

ದಾನವನ್ನು ಸ್ವೀಕರಿಸುವ ಚಾಪಲ್ಯವನ್ನು ಬಿಟ್ಟು ಜಿತೇಂದ್ರಿಯನಾಗಿರು. ಇಹ-ಪರಗಳಲ್ಲಿ ಭಯವಿಲ್ಲದೆ ಇರುವ, ಶೋಕವಿಲ್ಲದೆ ಇರುವ ಸ್ಥಾನವನ್ನು ಅರ್ಥಾತ್ ಅಧ್ಯಾತ್ಮ ಮಾರ್ಗವನ್ನು ಅವಲಂಬಿಸು.

ನಿರಾಮಿಷಾ ನ ಶೋಚಂತಿ ತ್ಯಜೇಹಾಮಿಷಮಾತ್ಮನಃ ।
ಪರಿತ್ಯಜ್ಯಾಮಿಷಂ ಸೌಮ್ಯ ದುಃಖಿತಾಪಾದ್ ವಿಮೋಕ್ಷ್ಯಸೇ ॥೨೧॥

ಕಾಮಾದಿಗಳಲ್ಲಿ ಆಸಕ್ತಿ ಇಲ್ಲದವರು ಶೋಕಕ್ಕೆ ತುತ್ತಾಗುವುದಿಲ್ಲ. ಆದ್ದರಿಂದ ಮನುಷ್ಯನು ಅತಿಯಾದ ಭೋಗಾಸಕ್ತಿಯನ್ನು ತ್ಯಜಿಸಬೇಕು. ಭೋಗ ಪದಾರ್ಥಗಳಲ್ಲಿ ಆಸೆಯನ್ನು ತ್ಯಜಿಸುವುದರಿಂದ ದುಃಖಗಳಿಂದ ಮುಕ್ತನಾಗುತ್ತಾನೆ.

ತಪೋನಿತ್ಯೇನ ದಾಂತೇನ ಮುನಿನಾ ಸಂಯತಾತ್ಮನಾ ।
ಅಜಿತಂ ಜೇತುಕಾಮೇನ ಭಾವ್ಯಂ ಸಂಗೇಷ್ವಸಂಗಿನಾ ॥೨೨॥

ಜಯಿಸಲು ಅಸಾಧ್ಯವಾದ ಮೋಕ್ಷವನ್ನು ಯಾವನು ಹೊಂದಲು ಇಚ್ಛಿಸುತ್ತಾನೋ ಅವನು ತಪಸ್ಸು, ಜಿತೇಂದ್ರಿಯತ್ವ, ಮನೋನಿಗ್ರಹತ್ವ, ವಿಷಯಸುಖದಲ್ಲಿ ಅನಾಸಕ್ತಿಯನ್ನು ಹೊಂದಬೇಕು.

ಗುಣಸಂಗೇಷ್ವನಾಸಕ್ತ ಏಕಚರ್ಯಾರತಃ ಸದಾ ।
ಬ್ರಾಹ್ಮಣೇ ನಚಿರಾದೇವ ಸುಖಮಾಯಾತ್ಯನುತ್ತಮಮ್ ॥೨೩॥

ದ್ವಂದ್ವಾರಾಮೇಷು ಭೂತೇಷು ಯ ಏಕೋ ರಮತೇ ಮುನಿಃ ।
ವಿದ್ಧಿ ಪ್ರಜ್ಞಾನತೃಪ್ತಂ ತಂ ಜ್ಞಾನತೃಪ್ತೋ ನ ಶೋಚತಿ ॥೨೪॥

ಯಾವನು ಮೂರುಗುಣಗಳಿಂದ ಕೂಡಿದ ವಿಷಯಗಳಲ್ಲಿ ಅನಾಸಕ್ತನಾಗಿರುತ್ತಾನೋ, ಏಕಾಂತದಲ್ಲೇ ಯಾವಾಗಲೂ ಭಗವತ್‌ಚಿಂತನೆಯನ್ನೇ ನಡೆಸುತ್ತಿರುತ್ತಾನೋ ಅಂತಹ ಬ್ರಾಹ್ಮಣನು ಬಹಳ ಬೇಗ ಮೋಕ್ಷರೂಪವಾದ ಮಹಾಸುಖವನ್ನು ಹೊಂದುತ್ತಾನೆ. ಸುಖ-ದುಃಖಗಳ ನಡುವೆಯೇ ಆನಂದವೆಂದು ಭಾವಿಸಿದ ಜೀವರ ನಡುವೆಯೂ ಇದ್ದು, ಯಾವ ಮುನಿಯು ಏಕಾಕಿಯಾಗಿ ಆನಂದವನ್ನು ಹೊಂದುತ್ತಾನೋ ಅಂತಹ ಮುನಿಯನ್ನು ವಿಶೇಷವಾದ ಆತ್ಮಜ್ಞಾನದಿಂದ ತೃಪ್ತನಾದವನು ಎಂದು ತಿಳಿ. ಜ್ಞಾನ ತೃಪ್ತನಾದವನು ಎಂದೂ ಶೋಕವನ್ನು ಹೊಂದನು.

ಶುಭೈರ್ಯಾತಿ ದೇವತ್ವಂ ವ್ಯಾಮಿಶ್ರೈರ್ಜನ್ಮ ಮಾನುಷಮ್ ।
ಅಶುಭೈಶ್ಚಾಪ್ಯಧೋಜನ್ಮ ಕರ್ಮಭಿರ್ಯಾತೇಽವಶಃ ॥೨೫॥

ಅಸ್ವತಂತ್ರನಾದ ಜೀವನು ತಾನು ಮಾಡುವ ಶುಭಕರ್ಮದಿಂದ ದೇವತ್ವವನ್ನು, ಶುಭಾಶುಭ ಕರ್ಮಗಳಿಂದ ಮನುಷ್ಯತ್ವವನ್ನು, ಕೇವಲ ಅಶುಭ ಕರ್ಮಗಳ ಆಚರಣೆಯಿಂದ ನೀಚಯೋನಿ ಎನಿಸಿದ ಪಶು-ಪಕ್ಷಿ ಜನ್ಮಗಳನ್ನು ಹೊಂದುತ್ತಾನೆ.

ತತ್ರ ಮೃತ್ಯುಜರಾದುಃಖೈಃ ಸತತಂ ಸಮಭಿದ್ರುತಃ ।
ಸಂಸಾರೇ ಪಚ್ಯತೇ ಜಂತುಸ್ತತ್ ಕಥಂ ನಾವಬುಧ್ಯಸೇ ॥೨೬॥

ಆ ಯೋನಿಗಳಲ್ಲಾದರೂ ಮುಪ್ಪು, ಸಾವು ಮೊದಲಾದ ದುಃಖಗಳಿಂದ ನಿರಂತರವೂ ಪೀಡಿಸಲ್ಪಟ್ಟವರಾಗಿ, ಸಂಸಾರ ಚಕ್ರದಲ್ಲಿ ಬೇಯಲ್ಪಡುತ್ತಾನೆ. ಈ ವಿಷಯವನ್ನು ನೀನು ಏಕೆ ಇನ್ನೂ ತಿಳಿದುಕೊಂಡಿರುವುದಿಲ್ಲ?

ಅಹಿತೇ ಹಿತಸಂಜ್ಞಸ್ತ್ವಮಧ್ರುವೇ ಧ್ರುವಸಂಜ್ಞಕಃ ।
ಅನರ್ಥೇ ಚಾರ್ಥಸಂಜ್ಞಸ್ತ್ವಂ ಕಿಮರ್ಥಂ ನಾವಬುಧ್ಯಸೇ ॥೨೭॥

ಅಹಿತವಾದ ಕರ್ಮದಲ್ಲಿ ಹಿತ ಎಂದು ತಿಳಿದಿರುವ, ಅಶಾಶ್ವತವಾದ ವಸ್ತುವನ್ನು ಶಾಶ್ವತವೆಂದು ತಿಳಿದಿರುವ, ಅನರ್ಥಕಾರಿಯಾದ ಪ್ರಯೋಜನದಲ್ಲಿ ಸಾರ್ಥಕವೆಂದು ಭಾವಿಸಿರುವ ಯಥಾರ್ಥ ಜ್ಞಾನವನ್ನು ಏಕೆ ಹೊಂದಿರುವುದಿಲ್ಲ?

ಸಂವೇಷ್ಟ್ಯಮಾನಂ ಬಹುಭಿರ್ಮೋಹತಂತುಭಿರಾತ್ಮಜೈಃ ।
ಕೋಶಕಾರವದಾತ್ಮಾನಂ ವೇಷ್ಟಯನ್ನಾವಬುಧ್ಯಸೇ ॥೨೮॥

ರೇಷ್ಮೆ ಹುಳುವು ತನ್ನ ಶರೀರದಿಂದ ಹುಟ್ಟಿದ ನೂಲಿನಿಂದ ಗೂಡನ್ನು ನಿರ್ಮಿಸಿ ತಾನೇ ಅದರ ಬಂಧನದಲ್ಲಿ ಸಿಲುಕುವಂತೆ, ಮೋಹವಶವಾದ ಶರೀರಸಂಬಂಧದಿಂದ ಹುಟ್ಟಿದ ಮಕ್ಕಳು, ಪತ್ನಿ ಮೊದಲಾದ ಬಂಧುವರ್ಗದಲ್ಲಿ ಬಂಧಿತನಾದ ನಿನ್ನನ್ನು ನೀನು ಅರಿಯುತ್ತಿಲ್ಲ.

ವ್ಯಾಖ್ಯಾನ ವಿಶೇಷ– ಶುಕಮುನಿಯು ವಿರಕ್ತನಾಗಿರುತ್ತಾನೆ. ಶುಕಮುನಿಯನ್ನು ನಿಮಿತ್ತ ಮಾಡಿಕೊಂಡು ಸಜ್ಜನರಿಗೆ ಉಪದೇಶಿಸಿದ ವೇದಾಂತವಿದೆಂದು ಭಾವಿಸಬೇಕು.

ಅಲಂ ಪರಿಗ್ರಹೇಣೇಹ ದೋಷವಾನ್ ಹಿ ಪರಿಗ್ರಹಃ ।
ಕೃಮಿರ್ಹಿ ಕೋಶಕಾರಸ್ತು ಬಧ್ಯತೇ ಸ್ವಪರಿಗ್ರಹಾತ್ ॥೨೯॥

ದಾನದ ಸ್ವೀಕಾರವನ್ನು ನಿಲ್ಲಿಸು. ದಾನವನ್ನು ಸ್ವೀಕರಿಸುತ್ತಾ ದೋಷಕ್ಕೆ ಈಡಾಗುತ್ತಾನೆ. ರೇಷ್ಮೆ ಹುಳುವು ಇತರ ಹುಳುಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಗೂಡು ಕಟ್ಟುತ್ತದೆ. ಅದರಿಂದಲೇ ತಾನೇ ಬಂಧನವನ್ನು ಹೊಂದುತ್ತದೆ.

ಪುತ್ರದಾರಕುಟುಮ್ಬೇಷು ಸಕ್ತಾಃ ಸೀದಂತಿ ಜಂತವಃ ।
ಸರಃಪಂಕಾರ್ಣವೇ ಮಗ್ನ ಜೀರ್ಣಾ ವನಗಜಾ ಇವ ॥೩೦॥

ಪುತ್ರ-ಪತ್ನಿ, ಕುಟುಂಬಗಳಲ್ಲಿ ಆಸಕ್ತರಾದ ಜೀವರು ದುಃಖಕ್ಕೆ ತುತ್ತಾಗುತ್ತಾರೆ. ಕೆಸರು ತುಂಬಿದ ಸರೋವರಗಳಲ್ಲಿ ಆನೆಗಳು ಸಿಲುಕಿ ಮರಣ ಹೊಂದುವಂತೆ ಈ ಜೀವರ ಸ್ಥಿತಿಯಾಗಿದೆ.

ಮಹಾಜಾಲಸಮಾಕೃಷ್ಟಾನ್ ಸ್ಥಲೇ ಮತ್ಸ್ಯಾನಿವೋದ್ಧತಾನ್ ।
ಸ್ನೇಹಜಾಲಸಮಾಕೃಷ್ಟಾನ್ ಪಶ್ಯ ಜಂತೂನ್ ಸುದುಃಖಿತಾನ್ ॥೩೧॥

ದೊಡ್ಡ ಬಲೆಯಿಂದ ಸೆಳೆಯಲ್ಪಟ್ಟು ನೀರಿನಿಂದ ಮೇಲಕ್ಕೆತ್ತಿದ ಮೀನುಗಳು ಒದ್ದಾಡುವಂತೆ ಸ್ನೇಹವೆಂಬ ಬಲೆಯಿಂದ ಸೆಳೆಯಲ್ಪಟ್ಟು ಅತ್ಯಂತ ದುಃಖದಲ್ಲಿ ಬಳಲುತ್ತಿರುವ ಈ ಪ್ರಾಣಿಗಳನ್ನು ನೋಡು.

ಕುಟುಂಬಂ ಪುತ್ರದಾರಂ ಚ ಶರೀರಂ ದ್ರವ್ಯಸಂಚಯಾಃ ।
ಪಾರಕ್ಯಮಧ್ರುವಂ ಸರ್ವಂ ಕಿಂ ತತ್ ಸುಕೃತದುಷ್ಕೃತಮ್ ॥೩೨॥

ಕುಟುಂಬ, ಮಕ್ಕಳು, ಪತ್ನಿಯರು, ಶರೀರ, ದ್ರವ್ಯಸಂಚಯ- ಎಲ್ಲವೂ ನಮಗೆ ಸಂಬಂಧಿಸಿದವುಗಳಲ್ಲ. ಅಶಾಶ್ವತವಾದವುಗಳು. ಇವುಗಳು ಪುಣ್ಯ-ಪಾಪಗಳೆಂದು ಕರೆಸಿಕೊಳ್ಳುವುದಿಲ್ಲ.

ಯದಾ ಸರ್ವಂ ಪರಿತ್ಯಜ್ಯ ಗಂತವ್ಯಮವಶೇನ ತೇ ।
ಅನರ್ಥೇ ಕಿಂ ಪ್ರಸಕ್ತಸ್ತ್ವಂ ಸ್ವಮರ್ಥಂ ನಾನುತಿಷ್ಠಸಿ ॥೩೩॥

ಅಸ್ವತಂತ್ರನಾದ ನೀನು ಈ ಸಮಸ್ತವನ್ನೂ ತ್ಯಜಿಸಿ ಒಂದು ದಿನ ಸಾಗಲೇಬೇಕು. ಹೀಗಿರುವಾಗ ಅನರ್ಥಮಯವಾದ ಈ ಸಂಸಾರದಲ್ಲಿ ಆಸಕ್ತಿಯನ್ನು ಏಕೆ ಹೊಂದಿರುವೆ? ಮೋಕ್ಷಸಾಧನೆಗಾಗಿ ಇನ್ನೂ ಏಕೆ ಪ್ರಯತ್ನಿಸುತ್ತಿಲ್ಲ?

ಅವಿಶ್ರಾಂತಮನಾಲಂಬಮಪಾಥೇಯಮದೈಶಿಕಮ್ ।
ತಮಃಕಾಂತಾರಮಧ್ವಾನಂ ಕಥಮೇಕೋ ಗಮಿಷ್ಯಸಿ ॥೩೪॥

ನೀನು ಸಾಗುತ್ತಿರುವ ದಾರಿಯಲ್ಲಿ ವಿಶ್ರಾಂತಿಯಿಲ್ಲ, ಸರಿಯಾದ ಆಶ್ರಯವಿಲ್ಲ, ಸರಿಯಾದ ಬುದ್ಧಿಯೂ ಇಲ್ಲ. ದೇಶವು ಯೋಗ್ಯವಾಗಿರುವುದಿಲ್ಲ, ಕಗ್ಗತ್ತಲೆಯಿಂದ ತುಂಬಿರುವ ಮಾರ್ಗದಲ್ಲಿ ಏಕಾಂತವಾಗಿ ಹೇಗೆ ಸಾಗುತ್ತಿ ?

ನ ಹಿ ತ್ವಾ ಪ್ರಸ್ಥಿತಂ ಕಶ್ಚಿತ್ ಪೃಷ್ಠತೋಽನುಗಮಿಷ್ಯತಿ ।
ಸುಕೃತಂ ದುಷ್ಕೃತಂ ಚ ತ್ವಾ ಯಾಸ್ಯಂತಮನುಯಾಸ್ಯತಿ ॥೩೫॥

ಮರಣ ಹೊಂದಿದ ಬಳಿಕ ಪರಲೋಕಕ್ಕೆ ಹೊರಡುವ ನಿನ್ನ ಹಿಂದೆ ಯಾರೂ ಬರುವುದಿಲ್ಲ. ಸುಕೃತ-ದುಷ್ಕೃತಗಳು ಮಾತ್ರ ಪರಲೋಕಕ್ಕೆ ಹೋಗುತ್ತಿರುವ ನಿನ್ನನ್ನು ಅನುಸರಿಸುತ್ತವೆ.

ವಿದ್ಯಾ ಕರ್ಮ ಚ ಶೌರ್ಯಂ ಚ ಜ್ಞಾನಂ ಚ ಬಹುವಿಸ್ತರಮ್ ।
ಅರ್ಥಾರ್ಥಮನುಸಾರ್ಯಂತೇ ಸಿದ್ಧಾರ್ಥಸ್ತು ವಿಮುಚ್ಯತೇ ॥೩೬॥

ವಿದ್ಯೆ, ಕರ್ಮ, ಶೌಚ, ಬಹುವಿಶಾಲವಾದ ಜ್ಞಾನ ಇವೆಲ್ಲವೂ ಪುರುಷಾರ್ಥವನ್ನು ಅನುಸರಿಸುತ್ತವೆ. ಪುರುಷಾರ್ಥವು ಸಿದ್ಧಿಸಿದ ಬಳಿಕ ಮನುಷ್ಯನು ಮುಕ್ತನಾಗುತ್ತಾನೆ.

ನಿಬಂಧನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ ।
ಛಿತ್ತ್ವೈನಾಂ ಸುಕೃತೋ ಯಾಂತಿ ನೈನಾಂ ಛಿಂದಂತಿ ದುಷ್ಕೃತಃ ॥೩೭॥

ಯಾರಿಗೆ ಇಂದ್ರಿಯಗಳಿಂದಲೇ ಸುಖವನ್ನು ಹೊಂದಬೇಕು ಎಂಬ ಆಸಕ್ತಿ ಇದೆಯೋ ಆ ವಿಷಯಾಸಕ್ತಿಯೇ ಅವನನ್ನು ಬಂಧಿಸುವ ಹಗ್ಗವಾಗಿದೆ. ಪುಣ್ಯಪುರುಷರು ಈ ಬಂಧನವನ್ನು ತುಂಡು ಮಾಡಿಕೊಂಡು ಪರಮಪದವನ್ನು ಹೊಂದುತ್ತಾರೆ. ಪಾಪಿಷ್ಟರು ಈ ಹಗ್ಗವನ್ನು ಕತ್ತರಿಸರು.

ರೂಪಕೂಲಾಂ ಮನಃಸ್ರೋತಾಂ ಸ್ಪರ್ಶದ್ವೀಪಾಂ ರಸಾವಹಾಮ್ ।
ಗಂಧಪಂಕಾಂ ಶಬ್ದಜಲಾಂ ಸ್ವರ್ಗಮಾರ್ಗದುರಾವಹಾಮ್ ॥೩೮॥

ಕ್ಷಮಾರಿತ್ರಾಂ ಸತ್ಯಮಯೀಂ ಧರ್ಮಸ್ಥೈರ್ಯವಟಾಕರಾಮ್ ।
ತ್ಯಾಗವಾತಾಧ್ವಗಾಂ ಶೀಘ್ರಾಂ ಬುದ್ಧಿನಾವಾ ನದೀಂ ತರೇತ್ ॥೩೯॥

ರೂಪವೆಂಬ ತೀರದಿಂದ ಕೂಡಿದ, ಮನಸ್ಸೆಂಬ ಪ್ರವಾಹದಿಂದ, ಸ್ಪರ್ಶವೆಂಬ ದ್ವೀಪದಿಂದ, ಗಂಧವೆಂಬ ಕೆಸರಿನಿಂದ, ಶಬ್ದವೆಂಬ ಜಲದಿಂದ, ಕಷ್ಟದಿಂದ ಹೋಗುವ, ಸ್ವರ್ಗಮಾರ್ಗದಿಂದ ಕೂಡಿರುವ, ಕೇವಲ ನೌಕೆಯಿಂದ ದಾಟಲು ಸಾಧ್ಯವಾದ ಸಂಸಾರ ನದಿಯನ್ನು, ಕ್ಷಮೆಯೆಂಬ ಹುಟ್ಟಿನಿಂದ, ಸತ್ಯಧರ್ಮದಿಂದ ಸ್ಥಿರಗೊಂಡಿರುವ ಹಗ್ಗದಿಂದ ಬಿಗಿಯಲ್ಪಟ್ಟಿರುವ, ತ್ಯಾಗವೆಂಬ ಅನುಕೂಲವಾದ ಗಾಳಿಯಿಂದ ಕೂಡಿರುವ ನೌಕೆಯಿಂದ ದಾಟಬೇಕು.

ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ ।
ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತಂ ತ್ಯಜ ॥೪೦॥

ಧರ್ಮಾಧರ್ಮಗಳನ್ನು ತೊರೆದು, ಸತ್ಯ-ಅನೃತಗಳನ್ನು ಬಿಟ್ಟು ಯಾವ ದುಃಖಕ್ಕೆ ಈಡಾಗುತ್ತಿದ್ದೀಯೋ, ಪರಲೋಕವನ್ನು ತಪ್ಪಿಸುವ ಅಂತಹ ಸಂಸಾರವನ್ನೇ ನೀನು ಬಿಟ್ಟುಬಿಡು.

ತ್ಯಜ ಧರ್ಮಮಸಂಕಲ್ಪಾದಧರ್ಮಂ ಚಾಪ್ಯಹಿಂಸಯಾ ।
ಉಭೇ ಸತ್ಯಾನೃತೇ ಬುದ್ಧ್ಯಾ ಬುದ್ಧಿಂ ಪರಮನಿಶ್ಚಯಾತ್ ॥೪೧॥

ತ್ಯಾಗದಿಂದ ಧರ್ಮವನ್ನು ತ್ಯಜಿಸು. ಅಹಿಂಸೆಯಿಂದ ಅಧರ್ಮವನ್ನು ತ್ಯಜಿಸು. ಸತ್ಯಾನೃತಗಳನ್ನು ಬುದ್ಧಿಯಿಂದ ತ್ಯಜಿಸು. ಭಗವಂತನನ್ನು ಚಿಂತಿಸುತ್ತಾ ಈ ಬಂಧಕವಾದ ಬುದ್ಧಿಯನ್ನು ತ್ಯಜಿಸು.

ಅಸ್ಥಿಸ್ಥೂಣಂ ಸ್ನಾಯುಯುತಂ ಮಾಂಸಶೋಣಿತಲೇಪನಮ್ ।
ಚರ್ಮಾವನದ್ಧಂ ದುರ್ಗಂಧಿ ಪೂರ್ಣಂ ಮೂತ್ರಪುರೀಷಯೋಃ ॥೪೨॥

ಮೂಳೆಗಳೆಂಬ ಸ್ತಂಭದಿಂದ ಕೂಡಿರುವ, ನರ-ನಾಡಿಗಳಿಂದ ಕೂಡಿರುವ, ಮಾಂಸ-ರಕ್ತಗಳಿಂದ ಯುಕ್ತವಾಗಿರುವ, ಚರ್ಮದಿಂದ ವರ್ಜಿಸಲ್ಪಟ್ಟಿರುವ, ದುರ್ಗಂಧಯುಕ್ತವಾದ ಮಲ-ಮೂತ್ರಗಳಿಂದ ತುಂಬಿರುವ,

ಜರಾಶೋಕಸಮಾವಿಷ್ಟಂ ರೋಗಾಯತನಮಾತುರಮ್ ।
ರಜಸ್ವಲಮನಿತ್ಯಂ ಚ ಭೂತಾವಾಸಂ ಸಮುತ್ಸೃಜ ॥೪೩॥

ಮುಪ್ಪು-ದುಃಖಗಳಿಂದ ಕೂಡಿರುವ, ರೋಗಗಳ ಮನೆಯಾಗಿರುವ, ರೋಗ ಪೀಡಿತವಾಗಿರುವ, ರಜೋಗುಣರೂಪವಾದ ಧೂಳಿನಿಂದ ಮುಚ್ಚಿಹೋಗಿರುವಾಗ, ಪಂಚಭೂತಗಳ ಆವಾಸಸ್ಥಾನವಾಗಿರುವ ಈ ಶರೀರವನ್ನು ಬಿಟ್ಟುಬಿಡು.

ಇದಂ ವಿಶ್ವಂ ಜಗತ್ ಸರ್ವಮಜಗಚ್ಚಾಪಿ ಯದ್ ಭವೇತ್ ।
ಮಹಾಭೂತಾತ್ಮಕಂ ಸರ್ವಂ ಮಹದ್ ಯತ್ ಪರಮಾಣು ತತ್ ॥೪೪॥

ಹುಟ್ಟು-ಸಾವುಗಳನ್ನು ಹೊಂದುವುದರಿಂದಲೇ ಈ ಪ್ರಪಂಚವು ಜಗತ್ ಎನಿಸಿದೆ. ಈ ಸ್ಥಾವರ-ಜಂಗಮಾತ್ಮಕವಾದ, ಪಂಚಭೂತಾತ್ಮಕವಾದ ಸಮಸ್ತ ಜಗತ್ತು ಮಹತ್ತಾಗಿ ಕಂಡರೂ ಪರಮಾತ್ಮನ ದೃಷ್ಟಿಯಿಂದ ಪರಮಾಣುವಾಗಿಯೇ ಇದೆ.

ಇಂದ್ರಿಯಾಣಿ ಚ ಪಂಚೈವ ತಮಃ ಸತ್ತ್ವಂ ರಜಸ್ತಥಾ ।
ಇತ್ಯೇಷ ಸಪ್ತದಶಕೋ ರಾಶಿರವ್ಯಕ್ತಸಂಜ್ಞಕಃ ॥೪೫॥

ಪಂಚಜ್ಞಾನೇಂದ್ರಿಯಗಳು, ಸತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳು, ಇವುಗಳಿಂದ ಕೂಡಿದ ಹದಿನೇಳರ ಸಮೂಹವೆನಿಸಿದ ಈ ಶರೀರಕ್ಕೆ ಅವ್ಯಕ್ತವೆಂದು ಹೆಸರು.

ಸರ್ವೈರಿಹೇಂದ್ರಿಯಾರ್ಥೈಶ್ಚ ವ್ಯಕ್ತಾವ್ಯಕ್ತೈರ್ಹಿ ಸಂಹಿತಃ ।
ಪಂಚವಿಂಶಕ ಇತ್ಯೇಷ ವ್ಯಕ್ತಾವ್ಯಕ್ತಮಯೋ ಗುಣಃ ॥೪೬॥

ಅವ್ಯಕ್ತಗುಣಕ್ಕೆ ಸೇರಿದ ಹದಿನೇಳರ ಜೊತೆ ವ್ಯಕ್ತಗುಣಕ್ಕೆ ಸೇರಿದ ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಸಂಕಲ್ಪ-ವಿಕಲ್ಪ ಹೀಗೆ ಏಳು ಸೇರಿದಾಗ ಒಟ್ಟು ಇಪ್ಪತ್ನಾಲ್ಕು ಗುಣಗಳಾಗುತ್ತವೆ.

ಏತೈಃ ಸರ್ವೈಃ ಸಮಾಯುಕ್ತಃ ಪುಮಾನಿತ್ಯಭಿಧೀಯತೇ ।
ತ್ರಿವರ್ಗೋ೯ತ್ರ ಸುಖಂ ದುಃಖಂ ಜೀವಿತಂ ಮರಣಂ ತಥಾ ॥೪೭॥

ಯ ಇದಂ ವೇದ ತತ್ತ್ವೇನ ಸ ವೇದ ಪ್ರಭವಾಪ್ಯಯೌ ।
ಪಾರಾಶರ್ಯೇಹ ಬೋದ್ಧವ್ಯಂ ಜ್ಞಾನಾನಾಂ ಯಚ್ಚ ಕಿಂಚನ ॥೪೮॥

ಈ ಇಪ್ಪತ್ನಾಲ್ಕು ತತ್ತ್ವಗಳ ಗುಣದಿಂದ ಕೂಡಿದ ಜೀವನನ್ನು ಪುರುಷನೆಂದು ಕರೆಯುತ್ತಾರೆ. ಯಾವ ಪುರುಷನು ಧರ್ಮ-ಅರ್ಥ-ಕಾಮ ಎಂಬ ತ್ರಿವರ್ಗವನ್ನು, ಸುಖ-ದುಃಖವನ್ನು, ಹುಟ್ಟು-ಸಾವುಗಳನ್ನು ಯಥಾವತ್ತಾಗಿ ಅರಿತಿರುತ್ತಾನೋ ಅವನು ಉತ್ಪತ್ತಿ-ಪ್ರಳಯಗಳ ತತ್ತ್ವವನ್ನು ಯಥವತ್ತಾಗಿ ತಿಳಿದಿರುತ್ತಾನೆ. ಹೀಗೆ ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಾಶರರ ಮೊಮ್ಮಗನಾದ ನೀನು ತಿಳಿದುಕೊಳ್ಳಬೇಕು.

ಇಂದ್ರಿಯೈರ್ಗೃಹ್ಯತೇ ಯದ್ಯತ್ ತತ್ತದ್ವ್ಯಕ್ತಮಿತಿ ಸ್ಥಿತಿಃ ।
ಅವ್ಯಕ್ತಮಿತಿ ವಿಜ್ಞೇಯಂ ಲಿಂಗಗ್ರಾಹ್ಯಮತೀಂದ್ರಿಯಮ್ ॥೪೯॥

ಯಾವ ಪದಾರ್ಥವನ್ನು ಇಂದ್ರಿಯಗಳಿಂದ ಗ್ರಹಿಸಲು ಸಾಧ್ಯವಾಗುತ್ತದೋ ಅದಕ್ಕೆ ವ್ಯಕ್ತ ಎಂದು ಹೆಸರು. ಅನುಮಾನದಿಂದ ಗ್ರಾಹ್ಯವಾದುದು, ಅತೀಂದ್ರಿಯವಾದುದು ಅವ್ಯಕ್ತ ಎಂದು ತಿಳಿಯಬೇಕು.

ಇಂದ್ರಿಯೈರ್ನಿಯತೈರ್ದೇಹೀ ಧಾರಾಭಿರಿವ ತರ್ಪ್ಯತೇ ।
ಲೋಕೇ ವಿತತಮಾತ್ಮಾನಂ ಲೋಕಂ ಚಾತ್ಮನಿ ಪಶ್ಯತಿ ॥೫೦॥

ಇಂದ್ರಿಯಗಳನ್ನು ನಿಗ್ರಹದಲ್ಲಿಟ್ಟುಕೊಂಡ ಜೀವನು ಜಲಧಾರೆಗಳಿಂದ ತೃಪ್ತಿ ಹೊಂದಿದವನಂತೆ ತೃಪ್ತನಾಗಿರುತ್ತಾನೆ. ಜಗತ್ತಿನಲ್ಲಿ ಭಗವಂತನು ವ್ಯಾಪ್ತನಾದುದನ್ನು, ತನ್ನಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿರುವುದನ್ನು ಆ ಸಾಧಕನು ನೋಡುತ್ತಾನೆ.

ಪರಾವರದೃಶಃ ಶಕ್ತಿರ್ಜ್ಞಾನವೇಲಾಂ ನ ಪಶ್ಯತಿ ।
ಪಶ್ಯತಃ ಸರ್ವಭೂತಾನಿ ಸರ್ವಾವಸ್ಥಾಸು ಸರ್ವದಾ ॥೫೧॥

ಸರ್ವೋತ್ತಮನಾದ ಭಗವಂತನು, ಅವರವಾದ ಪ್ರಪಂಚ ಇವೆರಡರ ಬಗ್ಗೆ ಜ್ಞಾನವುಳ್ಳವನು ಜ್ಞಾನದ ಕೊನೆಯನ್ನೇ ಕಾಣುವುದಿಲ್ಲ. ಎಲ್ಲ ಅವಸ್ಥೆಗಳಲ್ಲಿಯೂ ಯಾವಾಗಲೂ ಸಮಸ್ತ ಭೂತಗಳ ಅಂತರ್ಯಾಮಿಯಾದ ಭಗವಂತನನ್ನೇ ಕಾಣುವವನಾಗುತ್ತಾನೆ.

ಬ್ರಹ್ಮಭೂತಸ್ಯ ಸಂಯೋಗೋ ನಾಶುಭೇನೋಪಪದ್ಯತೇ ।
ಜ್ಞಾನೇನ ವಿವಿಧಾನ್ ಕ್ಲೇಶಾನತಿವೃತ್ತಸ್ಯ ಮೋಹಜಾನ್ ।
ಲೋಕೇ ಬುದ್ಧಿಪ್ರಕಾಶೇನ ಲೋಕಮಾರ್ಗೋ ನ ರಿಷ್ಯತೇ ॥೫೨॥

ಬ್ರಹ್ಮಜ್ಞಾನನಿರತನಾದ ವ್ಯಕ್ತಿಗೆ ಅಶುಭ ಪದಾರ್ಥಗಳ ಸಂಯೋಗವು ಎಂದಿಗೂ ಆಗುವುದಿಲ್ಲ. ಜ್ಞಾನಬಲದಿಂದ ಮೋಹಜನಿತ ಅನೇಕ ಕ್ಲೇಶಗಳನ್ನು ದಾಟಿರುವ ಜ್ಞಾನಿಗೆ ಜಗತ್ತಿನಲ್ಲಿ ಬೌದ್ಧಿಕವಾಗಿ ಮಾಡಬೇಕಾದ ವ್ಯವಹಾರಗಳಿಗೆ ತಡೆಯುಂಟಾಗುವುದಿಲ್ಲ.

ಅನಾದಿನಿಧನಂ ಜಂತುಮಾತ್ಮನಿ ಸ್ಥಿತಮವ್ಯಯಮ್ ।
ಅಕರ್ತಾರಮಮೂರ್ತಂ ಚ ಭಗವಾನಾಹ ತೀರ್ಥವಿತ್ ॥೫೩॥

ಶಾಸ್ತ್ರವನ್ನು ಅರಿತಿರುವ ಭಗವನ್ನಾರಾಯಣನು ಸ್ವತಂತ್ರವಾಗಿ ಕರ್ತೃತ್ವ ಶಕ್ತಿ ರಹಿತನಾದ, ದೇಹಾಭಿಮಾನರಹಿತನಾದ ಜೀವನನ್ನು, ತನ್ನಲ್ಲಿ ನೆಲೆಸಿದ್ದಾನೆಂದು, ತನ್ನ ಅಧೀನದಲ್ಲಿದ್ದಾನೆಂದು ಹೇಳಿರುತ್ತಾನೆ.

ಯೋ ಜಂತುಃ ಸ್ವಕೃತೈಸ್ತೈಸ್ತೈಃ ಕರ್ಮಭಿರ್ನಿತ್ಯದುಃಖಿತಃ ।
ಸ ದುಃಖಪ್ರತಿಘಾತಾರ್ಥಂ ಹಂತಿ ಜಂತೂನನೇಕಧಾ ॥೫೪॥

ಯಾವ ಪ್ರಾಣಿಯು ತಾನೇ ಮಾಡಿದ ಆಯಾ ಪುಣ್ಯ-ಪಾಪಗಳ ಸಂಬಂಧದಿಂದ

ದುಃಖಿತನಾಗುತ್ತಾನೋ ಅದೇ ಜೀವನು ತನ್ನ ದುಃಖ ನಿವಾರಣೆಗೆ ಅನೇಕ ಜಂತುಗಳನ್ನು ಅನೇಕ ರೀತಿಯಲ್ಲಿ ಸಂಹರಿಸುತ್ತಾನೆ.

ತತಃ ಕರ್ಮ ಸಮಾದತ್ತೇ ಪುನರನ್ಯನ್ನವಂ ಬಹು ।
ತಪ್ಯತೇಽಥ ಪುನಸ್ತೇನ ಭುಕ್ತಾ ಪಥ್ಯಮಿವಾತುರಃ ॥೫೫॥

ಬಳಿಕ ಆ ಮನುಷ್ಯನು ಕರ್ಮಗಳನ್ನು ಹೊಂದುತ್ತಾ, ಪುನಃ ಬೇರೆಯದ್ದಾದ ಹೊಸದಾದ ಅನೇಕ ಯೋನಿಗಳಲ್ಲಿ ಹುಟ್ಟಿ, ಅಪಥ್ಯವನ್ನಾಚರಿಸಿದ ರೋಗಿಯು ಪುನಃ ಪುನಃ ದುಃಖಕ್ಕೆ ತುತ್ತಾಗುವಂತೆ ದುಃಖಕ್ಕೀಡಾಗುತ್ತಾನೆ.

ಅಜಸ್ರಮೇವ ಮೋಹಾರ್ತೋ ದುಃಖೇಷು ಸುಖಸಂಜ್ಞಿತಃ ।
ಬಧ್ಯತೇ ಮಥ್ಯತೇ ಚೈವ ಕರ್ಮಭಿರ್ಮಂಥವತ್ ಸದಾ ॥೫೬॥

ಮೋಹದಿಂದ ವಿವೇಕಶೂನ್ಯನಾದ ಜೀವನು ದುಃಖದಾಯಕ ಭೋಗಗಳಲ್ಲಿಯೇ ಸುಖದ ಭ್ರಮೆಯನ್ನು ಹೊಂದಿರುತ್ತಾನೆ. ತಾವೇ ಮಾಡುವ ಕರ್ಮಗಳಿಂದ ಬಂಧಿತನಾಗಿ ಕಡೆಗೋಲಿನಂತೆ ವಧಿಸಲ್ಪಡುತ್ತಾನೆ.

ತತೋ ನಿವೃತ್ತೋ ಬಂಧಾತ್ತ್ವಾತ್ ಕರ್ಮಣಾಮುದಯಾದಿಹ ।
ಪರಿಭ್ರಮತಿ ಸಂಸಾರಂ ಚಕ್ರವದ್ ಬಹುವೇದನಃ ॥೫೭॥

ಪ್ರಾರಬ್ಧಕರ್ಮಗಳ ಉತ್ಪತ್ತಿಯಿಂದ ಬಂಧಿತನಾದ ಮನುಷ್ಯನು ಕರ್ಮಾನುಸಾರ ಜನ್ಮವನ್ನು ತಾಳಿ, ಅನೇಕ ಯಾತನೆಯನ್ನನುಭವಿಸುತ್ತಾ ಚಕ್ರದಂತೆ ಸುತ್ತುತ್ತಿರುತ್ತಾನೆ.

ಸ ತ್ವಂ ನಿವೃತ್ತಬಂಧಸ್ತು ನಿವೃತ್ತಶ್ಚಾಪಿ ಕರ್ಮತಃ ।
ಸರ್ವವಿತ್ ಸರ್ವಜಿತ್ ಸಿದ್ಧೋ ಭವ ಭಾವವಿವರ್ಜಿತಃ ॥೫೮॥

ಆದ್ದರಿಂದ ನೀನು ಕರ್ಮಗಳಿಂದ ಮುಕ್ತನಾಗಿ, ಬಂಧನಗಳಿಂದ ಬಿಡುಗಡೆಯನ್ನು ಹೊಂದಿ, ಸರ್ವಜ್ಞನಾಗಿ, ಸರ್ವವನ್ನೂ ಜಯಿಸಿದವನಾಗಿ, ಸಾಂಸಾರಿಕ ಭಾವನೆಯಿಂದ ರಹಿತನಾಗಿ ಸಿದ್ಧಿಯನ್ನು ಹೊಂದು.

ಸಂಯಮೇನ ನವಂ ಬಂಧಂ ನಿವರ್ತ್ಯ ತಪಸೋ ಬಲಾತ್ ।
ಸಂಪ್ರಾಪ್ತಾ ಬಹವಃ ಸಿದ್ಧಿಮಪ್ಯಬಾಧಾಂ ಸುಖೋದಯಾಮ್ ॥೫೯॥

ಅನೇಕ ಜ್ಞಾನಿಗಳು ಮನೋನಿಗ್ರಹದಿಂದ, ತಪೋಬಲದಿಂದ ನೂತನ ಬಂಧನಗಳನ್ನು ನಿವಾರಿಸಿಕೊಂಡು ಯಾವುದೇ ಬಾಧೆಗಳಿಲ್ಲದ ಸುಖವನ್ನು ಕೊಡುವ ಸಿದ್ಧಿಯನ್ನು ಹೊಂದಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಶುಕಾನುಶಾಸನೇ ಏಕಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೆರಡನೆಯ ಅಧ್ಯಾಯ

ನಾರದರು ಶುಕಮುನಿಗೆ ನೀಡಿದ ಉಪದೇಶಗಳು.

ನಾರದಃ

ಅಶೋಕಂ ಶೋಕನಾಶಾರ್ಥಂ ಶಾಸ್ತ್ರಂ ಶಾಂತಿಕರಂ ಶಿವಮ್ ।
ನಿಶಮ್ಯ ಲಭತೇ ಬುದ್ಧಿಂ ತಾಂ ಲಬ್ಧ್ವಾ ಸುಖಮೇಧತೇ ॥೧॥

ನಾರದ– ಶುಕದೇವನೆ, ದುಃಖಕ್ಕೆ ಅವಕಾಶವಿಲ್ಲದ, ಪರಮಮಂಗಳಕರವಾದ ಶಾಸ್ತ್ರವನ್ನು ಶೋಕದ ನಾಶಕ್ಕೋಸ್ಕರ ಯಾವಾತನು ಏಕಾಗ್ರಚಿತ್ತದಿಂದ ಕೇಳುತ್ತಾನೋ ಅವನು ಉತ್ತಮವಾದ ಬುದ್ಧಿಯನ್ನು ಹೊಂದಿ ಸುಖವನ್ನು ಪಡೆಯುತ್ತಾನೆ.

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥೨॥

ಸಾವಿರಾರು ಶೋಕದ ಪ್ರಸಂಗಗಳು, ಭಯಕ್ಕೆ ಕಾರಣವಾಗುವ ನೂರಾರು ಪ್ರಸಂಗಗಳು ಪ್ರತಿದಿವಸವೂ ಮೂರ್ಖನಾದ ಮನುಷ್ಯನನ್ನು ಆಕ್ರಮಿಸುವಂತೆ ಪಂಡಿತನನ್ನು ಆಕ್ರಮಿಸುವುದಿಲ್ಲ.

ತಸ್ಮಾದನಿಷ್ಟನಾಶಾರ್ಥಮಿತಿಹಾಸಂ ನಿಬೋಧ ಮೇ ।
ತಿಷ್ಠತೇ ಚೇದ್ವಶೇ ಬುದ್ಧಿರ್ಲಭತೇ ಶೋಕನಾಶನಮ್ ॥೩॥

ಆದ್ದರಿಂದ ಅನಿಷ್ಟವನ್ನು ಪರಿಹರಿಸಿಕೊಳ್ಳಲು ವ್ಯಕ್ತಿಯು ನಾನು ಹೇಳಲಿರುವ ಉಪದೇಶವನ್ನು ಬುದ್ಧಿಯು ವಶದಲ್ಲಿದ್ದು ತಿಳಿದುಕೊಂಡಲ್ಲಿ ಶೋಕವು ನಾಶವಾಗುತ್ತದೆ.

ಅನಿಷ್ಟಸಂಪ್ರಯೋಗಾಚ್ಚ ವಿಪ್ರಯೋಗಾತ್ ಪ್ರಿಯಸ್ಯ ಚ ।
ಮನುಷ್ಯಾ ಮಾನಸೈರ್ದುಃಖೈರ್ಯುಜ್ಯಂತೇ ಅಲ್ಪಬುದ್ಧಯಃ ॥೪॥

ಅಪ್ರಿಯವಾದ ವಸ್ತುಗಳನ್ನು ಬಯಸುವುದರಿಂದ, ಪ್ರಿಯವಾದ ವಸ್ತುಗಳನ್ನು ತ್ಯಜಿಸುವುದರಿಂದ ಅಲ್ಪಬುದ್ಧಿಗಳು ಮಾನಸಿಕವಾದ ದುಃಖಗಳಿಗೆ ಈಡಾಗುತ್ತಾರೆ.

ದ್ರವ್ಯೇಷು ಸಮತೀತೇಷು ಯೇ ಗುಣಾಸ್ತಾನ್ನ ಚಿಂತಯೇತ್ ।
ತಾನನಾದ್ರಿಯಮಾಣಸ್ಯ ಸ್ನೇಹಬಂಧಃ ಪ್ರಮುಚ್ಯತೇ ॥೫॥

ಒಂದು ವಸ್ತುವು ಕಳೆದುಹೋದ ಬಳಿಕ ಅದರಲ್ಲಿದ್ದ ಗುಣಗಳನ್ನು ಚಿಂತಿಸುತ್ತಿರಬಾರದು. ಆದರದಿಂದ ಆ ಗುಣಗಳನ್ನೇ ಆಲೋಚಿಸುತ್ತಿದ್ದರೆ ಸ್ನೇಹ ಬಂಧವು ಬಿಟ್ಟುಹೋಗುವುದಿಲ್ಲ.

ದೋಷದರ್ಶೀ ಭವೇತ್ ತತ್ರ ಯತ್ರ ರಾಗಃ ಪ್ರವರ್ತತೇ ।
ಅನಿಷ್ಟಮನ್ವಿತಂ ಪಶ್ಯೇತ್ತಥಾ ಕ್ಷಿಪ್ರಾಂ ವಿರಜ್ಯತೇ ॥೬॥

ಯಾವ ಪದಾರ್ಥವು ಮನಸ್ಸಿಗೆ ಅತ್ಯಂತ ಆಕರ್ಷಕವಾಗಿ ಕಾಣಿಸುತ್ತದೋ ಆ ರಾಗ ಹುಟ್ಟಿದ ಪದಾರ್ಥದಲ್ಲಿ ದೋಷವಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಆ ವಸ್ತುವಿನಲ್ಲಿ ದೋಷವಿದೆ ಎಂಬುದನ್ನು ತಿಳಿದಾಗ ಅದರಿಂದ ವೈರಾಗ್ಯ ಉಂಟಾಗುತ್ತದೆ.

ನಾರ್ಥೋ ನ ಧರ್ಮೋ ನ ಯಶೋ ಯೋಽತೀತಮನುಶೋಚತಿ ।
ಅಪ್ಯಭಾವೇನ ಯುಜ್ಯೇತ ತಚ್ಚಾಸ್ಯ ನ ನಿವರ್ತತೇ ॥೭॥

ಯಾವನು ಕಳೆದುಹೋದ ವಿಷಯದಲ್ಲಿಯೇ ಶೋಕಪಡುತ್ತಿರುತ್ತಾನೋ ಅವನಿಗೆ ಅರ್ಥವು ಲಭಿಸುವುದಿಲ್ಲ, ಧರ್ಮವೂ ಲಭಿಸುವುದಿಲ್ಲ, ಯಶಸ್ಸೂ ಲಭಿಸುವುದಿಲ್ಲ. ಕಳೆದುಹೋದ ವಸ್ತುವನ್ನೇ ನೆನೆದು ಶೋಕ ಹೊಂದುತ್ತಿದ್ದರೆ ಆ ವಸ್ತುವಿನ ಕೊರತೆಯಿಂದ ದುಃಖಪಡುತ್ತಾನೆಯೇ ಹೊರತು ವಸ್ತುವನ್ನು ಎಂದಿಗೂ ಹೊಂದಲಾಗುವುದಿಲ್ಲ.

ಗುಣೈರ್ಭೂತಾನಿ ಯುಜ್ಯಂತೇ ವಿಯುಜ್ಯಂತೇ ತಥೈವ ಚ ।
ಸರ್ವಾಣಿ ನೈತದೇಕಸ್ಯ ಶೋಕಸ್ಥಾನಂ ಹಿ ವಿದ್ಯತೇ ॥೮॥

ಎಲ್ಲ ಪ್ರಾಣಿಗಳಿಗೂ ಉತ್ತಮ ಗುಣವುಳ್ಳ ಪ್ರಿಯವಾದ ವಸ್ತುಗಳ ಸಂಯೋಗವು ಆಗುತ್ತದೆ, ವಿಯೋಗವೂ ಆಗುತ್ತದೆ. ಯಾವಾಗಲೂ ಶೋಕವೆಂದಾಗಲಿ,

ಯಾವಾಗಲೂ ಸುಖವೆಂಬುದಾಗಲಿ ಮನುಷ್ಯನಿಗೆ ಇರುವುದಿಲ್ಲ. ಕ್ರಮವಾಗಿ ಇವು ಮನುಷ್ಯರನ್ನು ಅನುಸರಿಸುತ್ತವೆ.

ಮೃತಂ ವಾ ಯದಿ ವಾ ನಷ್ಟಂ ಯೋಽತೀತಮನುಶೋಚತಿ ।
ದುಃಖೇನ ಲಭತೇ ದುಃಖಂ ದ್ವಾವನರ್ಥೌ ಪ್ರಪದ್ಯತೇ ॥೯॥

ಮೃತನಾದ ವ್ಯಕ್ತಿಯ ಬಗ್ಗೆಯಾಗಲಿ, ನಷ್ಟವಾದ ಪದಾರ್ಥದ ಬಗ್ಗೆಯಾಗಲಿ ಯಾವನು ದುಃಖವನ್ನು ಹೊಂದುತ್ತಾನೋ ಅವನಿಗೆ ದುಃಖದಿಂದ ದುಃಖವೇ ಲಭಿಸುತ್ತದೆ. ಎರಡು ಅನರ್ಥಗಳನ್ನು ಹೊಂದಿದಂತಾಗುತ್ತದೆ.

ನಾಶ್ರು ಕುರ್ವಂತಿ ಯೇ ಬುದ್ಧ್ಯಾ ದೃಷ್ಟ್ವಾ ಲೋಕೇಷು ಸಂತತಿಮ್ ।
ಸಮ್ಯಕ್ಪಶ್ಯತಃ ಸರ್ವಂ ನಾಶ್ರುಕರ್ಮೋಪಪದ್ಯತೇ ॥೧೦॥

ಯಾರು ಜನಸಮೂಹದಲ್ಲಿ ಆಗುವ ಮರಣ ನಷ್ಟಗಳನ್ನು ನೋಡುತ್ತಿರುತ್ತಾರೋ, ಅದೇ ರೀತಿ ತಮಗೂ ಆಗುವ ಸಂತತಿಯ ಮರಣ-ನಾಶಗಳಿಗಾಗಿ ಯಾರು ಬುದ್ಧಿಯಿಂದ ನಿಯಂತ್ರಿಸಿಕೊಂಡು ಕಣ್ಣೀರು ಸುರಿಸುವುದಿಲ್ಲ, ಹಾಗೆ ಚೆನ್ನಾಗಿ ವಿಮರ್ಶಿಸಿದ ವ್ಯಕ್ತಿಯು ಯಾವ ವಿಷಯದಲ್ಲಾಗಲಿ ಕಣ್ಣೀರನ್ನು ಸುರಿಸುವುದಿಲ್ಲ.

ದುಃಖೋಪಘಾತೇ ಶಾರೀರೇ ಮಾನಸೇ ವಾಪ್ಯುಪಸ್ಥಿತೇ ।
ಯಸ್ಮಿನ್ನ ಶಕ್ಯತೇ ಕರ್ತುಂ ಯತ್ನಸ್ತನ್ನಾನುಚಿಂತಯೇತ್ ॥೧೧॥

ಶಾರೀರಿಕವಾದ, ಮಾನಸಿಕವಾದ ದುಃಖವು ಒದಗಿದಾಗ, ದುಃಖವನ್ನು ಯಾವುದೇ ಪ್ರಯತ್ನದಿಂದ ದೂರೀಕರಿಸಲು ಸಾಧ್ಯವಿಲ್ಲದಿದ್ದಾಗ, ಪ್ರಯತ್ನವೆಲ್ಲವೂ ನಿಷ್ಫಲವಾದಾಗ ಆ ವಿಷಯದ ಬಗ್ಗೆ ಚಿಂತಿಸಬಾರದು.

ಭೈಷಜ್ಯಮೇತದ್ ದುಃಖಸ್ಯ ಯದೇತನ್ನಾನುಚಿಂತಯೇತ್ ।
ಚಿಂತ್ಯಮಾನಂ ಹಿ ನ ವ್ಯೇತಿ ಭೂಯಶ್ಚಾಪಿ ಪ್ರವರ್ಧತೇ ॥೧೨॥

ದುಃಖಕ್ಕೆ ಔಷಧಿಯೇ ಇದು. ದುಃಖದ ಬಗ್ಗೆ ಯೋಚಿಸಬಾರದು. ಅದನ್ನು ಯೋಚಿಸುತ್ತಿದ್ದರೆ ಆ ದುಃಖವು ಮತ್ತೂ ಉಲ್ಬಣವಾಗುತ್ತದೆ.

ಪ್ರಜ್ಞಯಾ ಮಾನಸಂ ದುಃಖಂ ಹನ್ಯಾಚ್ಛಾರೀರಮೌಷಧೈಃ ।
ಏತದ್ ವಿಜ್ಞಾನಸಾಮರ್ಥ್ಯಂ ನ ಬಾಲೈಃ ಸಮತಾಮಿಯಾತ್ ॥೧೩॥

ಪ್ರಜ್ಞಾಪೂರ್ವಕವಾಗಿ ಮಾನಸ ದುಃಖಗಳನ್ನು ನಿವಾರಿಸಿಕೊಳ್ಳಬೇಕು. ಶಾರೀರಿಕ ದುಃಖಗಳನ್ನು ಔಷಧಗಳಿಂದ ನಿವಾರಿಸಿಕೊಳ್ಳಬೇಕು. ಜ್ಞಾನದ ಸಾಮರ್ಥ್ಯದಿಂದ ಇದು ಸಾಧ್ಯವಾಗುತ್ತದೆ. ಆದ್ದರಿಂದ ದುಃಖವು ಸಂಭವಿಸಿದಾಗ ಮಕ್ಕಳಂತೆ ಅಳುತ್ತಿರಬಾರದು.

ಅನಿತ್ಯಂ ಯೌವನಂ ರೂಪಂ ಜೀವಿತಂ ದ್ರವ್ಯಸಂಚಯಃ ।
ಆರೋಗ್ಯಂ ಪ್ರಿಯಸಂವಾಸೋ ಗೃಧ್ಯೇತ್ತತ್ರ ನ ಪಂಡಿತಃ ॥೧೪॥

ರೂಪ, ಯೌವನ, ಜೀವನ, ಧನಸಂಗ್ರಹ, ಆರೋಗ್ಯ, ಪ್ರಿಯಜನರ ಸಹವಾಸ ಇವೆಲ್ಲವೂ ಅನಿತ್ಯವಾದವುಗಳು. ಆದ್ದರಿಂದ ಪಂಡಿತನಾದವನು ಇವುಗಳಲ್ಲಿ ಆಸಕ್ತಿ ಹೊಂದಬಾರದು.

ನ ಜಾನಪದಿಕಂ ದುಃಖಮೇಕಃ ಶೋಚಿತುಮರ್ಹತಿ ।
ಅಶೋಚನ್ ಪ್ರತಿಕುರ್ವೀತ ಯದಿ ಪಶ್ಯೇದುಪಕ್ರಮಮ್ ॥೧೫॥

ದೇಶಕ್ಕೆ ಸಂಬಂಧಿಸಿದ ದುಃಖವು ಒದಗಿದಾಗ ಒಬ್ಬನೇ ದುಃಖಪಡುವುದು ಯೋಗ್ಯವಲ್ಲ. ದುಃಖಪರಿಹಾರದ ಆರಂಭವನ್ನು ಕಂಡುಕೊಂಡವನು ದುಃಖ ಪಡದೆ ಇದ್ದರೆ ಅದಕ್ಕೆ ಚಿಕಿತ್ಸೆ ಕೊಡಲು ಸಾಧ್ಯವಾಗುತ್ತದೆ.

ಸುಖಾದ್ ಬಹುತರಂ ದುಃಖಂ ಜೀವಿತೇ ನಾತ್ರ ಸಂಶಯಃ ।
ಸ್ನಿಗ್ಧತ್ವಂ ಚೇಂದ್ರಿಯಾರ್ಥೇಷು ಮೋಹಾನ್ಮರಣಮಪ್ರಿಯಮ್ ॥೧೬॥

ಜೀವನದಲ್ಲಿ ಸುಖಕ್ಕಿಂತ ದುಃಖವೇ ಅಧಿಕವಾಗಿರುತ್ತದೆ. ಇದರಲ್ಲಿ ಸಂಶಯವಿಲ್ಲ. ಆದರೆ ಮೋಹದಿಂದಾಗಿ ಇಂದ್ರಿಯ ವಿಷಯಗಳಲ್ಲಿ ಅನುರಾಗ ಹುಟ್ಟಿರುವುದರಿಂದ ಮರಣವು ಅಪ್ರಿಯವೆನಿಸುತ್ತದೆ.

ಪರಿತ್ಯಜತಿ ಯೋ ದುಃಖಂ ಸುಖಂ ವಾಪ್ಯುಭಯಂ ನರಃ ।
ಅಭ್ಯೇತಿ ಬ್ರಹ್ಮ ಸೋಽತ್ಯಂತಂ ನ ತಂ ಶೋಚಂತಿ ಪಂಡಿತಾಃ ॥೧೭॥

ಯಾವ ಮನುಷ್ಯನು ದುಃಖವನ್ನು, ಸುಖವನ್ನು ತ್ಯಜಿಸಿ ನಿರ್ಲಿಪ್ತನಾಗಿರುತ್ತಾನೋ ಅವನು ಗುಣಪರಿಪೂರ್ಣನಾದ ಬ್ರಹ್ಮನನ್ನು ಹೊಂದುತ್ತಾನೆ. ದುಃಖದ ಕೊನೆಯನ್ನು ಮುಟ್ಟುತ್ತಾನೆ. ಅವನ ವಿಷಯದಲ್ಲಿ ಪಂಡಿತರು ದುಃಖಿಸುವುದಿಲ್ಲ.

ದುಃಖಮರ್ಥಾ ಹಿ ತ್ಯಜ್ಯಂತೇ ಪಾಲನೇ ನ ಚ ತೇ ಸುಖಾಃ ।
ದುಃಖೇನ ಚಾಧಿಗಮ್ಯಂತೇ ನಾಶಮೇಷಾಂ ನ ಚಿಂತಯೇತ್ ॥೧೮॥

ಅನ್ಯಾಮನ್ಯಾಂ ಧನಾವಸ್ಥಾಂ ಪ್ರಾಪ್ಯ ವೈಶೇಷಿಕೀಂ ನರಾಃ ।
ಅತೃಪ್ತಾ ಯಾಂತಿ ವಿಧ್ವಂಸಂ ಸಂತೋಷಂ ಯಾಂತಿ ಪಂಡಿತಾಃ ॥೧೯॥

ಸಂಪಾದಿಸಿದ ಹಣವನ್ನು ದುಃಖದಿಂದಲೇ ತ್ಯಜಿಸುತ್ತಾರೆ. ಆ ಹಣವನ್ನು ಸಂಪಾದಿಸುವಾಗ ಸುಖವನ್ನು ಹೊಂದುವುದಿಲ್ಲ. ಧನ-ಧಾನ್ಯ-ದೇಹಾದಿಗಳೆಲ್ಲವೂ ದುಃಖದಿಂದಲೇ ಹೊಂದಲ್ಪಡುತ್ತವೆ. ಆದ್ದರಿಂದ ಇವುಗಳ ನಾಶಕ್ಕಾಗಿ ದುಃಖಿಸಬಾರದು. ಮನುಷ್ಯನು ಯಾವಾಗಲೂ ದ್ರವ್ಯವನ್ನು ಸಂಗ್ರಹಿಸುತ್ತಾ ಮೊದಲಿಗಿಂತ ಹೆಚ್ಚು ಶ್ರೀಮಂತಿಕೆಯನ್ನು ಹೊಂದುತ್ತಿದ್ದರೂ ತೃಪ್ತಿ ಉಂಟಾಗುವುದಿಲ್ಲ. ಅಸಂತೋಷದಿಂದಲೇ ಮರಣ ಹೊಂದುತ್ತಾರೆ. ವಿಷಯಸುಖದಿಂದ ಅತೃಪ್ತರಾದ ಇವರಿಗೆ ಸಂತೋಷವೆಂಬುದೇ ಇರುವುದಿಲ್ಲ. ಆದರೆ ಪಂಡಿತರಾದವರು ಇವುಗಳ ನಾಶದಿಂದ ದುಃಖಿತರಾಗುವುದಿಲ್ಲ. ಸಂತುಷ್ಟರಾಗಿಯೇ ಇರುತ್ತಾರೆ.

ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಹಿ ಜೀವಿತಮ್ ॥೨೦॥

ಸಂಪಾದಿಸಿದ ಐಶ್ವರ್ಯಗಳೆಲ್ಲವೂ ನಾಶವುಳ್ಳವುಗಳು. ಉಚ್ಛ್ರಾಯದ ಸ್ಥಿತಿಗಳಿಗೆಲ್ಲ ಪತನವೇ ಗತಿಯು. ಎಲ್ಲ ಸಂಬಂಧಗಳು ವಿಯೋಗದಲ್ಲಿ ಪರ್ಯವಸಾನ ಹೊಂದುತ್ತದೆ. ಜೀವನವು ಮರಣದಿಂದ ಕೊನೆಗೊಳ್ಳುತ್ತದೆ.

ನಾಂತೋ ನಾಸ್ತಿ ಪಿಪಾಸಾಯಾಸ್ತುಷ್ಟಿಸ್ತು ಪರಮಂ ಸುಖಮ್ ।
ತಸ್ಮಾತ್ ಸಂತೋಷಮೇವೇಹ ಧನಂ ಪಶ್ಯಂತಿ ಪಂಡಿತಾಃ ॥೨೧॥

ಆಸೆಗೆ ಕೊನೆಯೆಂಬುದೇ ಇಲ್ಲ, ತೃಪ್ತಿಯೇ ಪರಮಸುಖವಾದುದು. ಆದ್ದರಿಂದ ಸಂತೋಷವೆಂಬ ಧನಕ್ಕಾಗಿ ಪಂಡಿತರು ಅಪೇಕ್ಷೆಪಡುತ್ತಾರೆ.

ನಿಮೇಷಮಾತ್ರಮಪಿ ಹಿ ವಯೋ ಗಚ್ಛನ್ನ ತಿಷ್ಠತಿ ।
ಸ್ವಶರೀರೇಷ್ವನಿತ್ಯೇಷು ನಿತ್ಯಂ ಕಿಮನುಚಿಂತಯೇತ್ ॥೨೨॥

ಗತಿಸುವ ಆಯುಷ್ಯವು ರೆಪ್ಪೆ ಮುಚ್ಚಿ ತೆರೆಯುವಷ್ಟು ಕಾಲವೂ ಶಾಶ್ವತವಲ್ಲ. ಶರೀರವೇ ಅನಿತ್ಯವಾದಾಗ ಯಾವುದನ್ನು ಶಾಶ್ವತ ಎಂದು ತಿಳಿಯಬೇಕು?

ಭೂತೇಷ್ವಭಾವಂ ಸಂಚಿಂತ್ಯ ಯೇ ಬುದ್ಧ್ಯಾ ತಮಸಃ ಪರಮ್ ।
ನ ಶೋಚಂತಿ ಗತಾಧ್ವಾನಃ ಪಶ್ಯಂತಃ ಪರಮಾಂ ಗತಿಮ್ ॥೨೩॥

ಪ್ರಾಣಿಗಳಲ್ಲಿರುವ ನಶ್ವರತೆಯನ್ನು ಯೋಚಿಸಿ, ಯಾರು ಅಜ್ಞಾನದಿಂದ ಆಚೆಯಿರುವ ಪರಬ್ರಹ್ಮನನ್ನು ಚಿಂತಿಸುತ್ತಾರೋ, ಸರಿಯಾದ ಮಾರ್ಗವನ್ನು ಅವಲಂಬಿಸಿದ ಅವರು ಉತ್ತಮವಾದ ಗುರಿಯನ್ನು ತಲುಪಿ ದುಃಖಕ್ಕೆ ಭಾಗಿಗಳಾಗುವುದಿಲ್ಲ.

ಸಂಚಿನ್ವಾನಕಮೇವೈನಂ ಕಾಮಾನಾಮವಿತೃಪ್ತಕಮ್ ।
ವ್ಯಾಘ್ರಃ ಪಶುಮಿವಾಸಾದ್ಯ ಮೃತ್ಯುರಾದಾಯ ಗಚ್ಛತಿ ॥೨೪॥

ಯಾವಾಗಲೂ ಧನಾದಿ ಸಂಗ್ರಹಗಳಲ್ಲಿಯೇ ಆಸಕ್ತನಾಗಿರುವ, ಕಾಮನೆಗಳಲ್ಲಿ ತೃಪ್ತಿಯನ್ನು ಹೊಂದದಿರುವ ಪುರುಷನನ್ನು ವ್ಯಾಘ್ರವು ಹಸುವನ್ನು ಕಚ್ಚಿಕೊಂಡು ಹೋಗುವಂತೆ ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ಅಥಾಪ್ಯುಪಾಯಂ ಸಂಪಶ್ಯೇದ್ ದುಃಖಸ್ಯ ಪರಿಮೋಕ್ಷಣೇ ।
ಅಶೋಚನ್ನಾರಭೇತೈವ ಯುಕ್ತಶ್ಚಾವ್ಯಸನೀ ಭವೇತ್ ॥೨೫॥

ಹೀಗಿದ್ದರೂ ಸಂಸಾರ ದುಃಖದಿಂದ ಬಿಡುಗಡೆ ಹೊಂದಲು ಯಾವುದಾದರೂ ಉಪಾಯವನ್ನು ಹುಡುಕಬೇಕು. ಯಾವನು ಶೋಕವನ್ನು ದೂರೀಕರಿಸಿಕೊಂಡು ಅಧ್ಯಾತ್ಮ ಸಾಧನೆಯನ್ನು ಆರಂಭಿಸುತ್ತಾನೋ ಅವನು ಯಾವುದೇ ವಿಧವಾದ ದುಃಖವಿಲ್ಲದೆ ಮುಕ್ತನಾಗುತ್ತಾನೆ.

ಶಬ್ದೇ ಸ್ಪರ್ಶೇ ಚ ರೂಪೇ ಚ ಗಂಧೇಷು ಚ ರಸೇಷು ಚ ।
ನೋಪಭೋಗಾತ್ ಪರಂ ಕಿಂಚಿದ್ಧನಿನೋ ವಾಧನಸ್ಯ ವಾ ॥೨೬॥

ಶಬ್ದ-ಸ್ಪರ್ಶ-ರೂಪ-ರಸ-ಗಂಧಾದಿಗಳು ಧನಿಕನಿಗಾಗಲಿ, ದರಿದ್ರರಿಗಾಗಲಿ ಅನುಭವಿಸುವಾಗ ಸುಖದಂತೆ ತೋರುತ್ತವೆ. ಬಳಿಕ ಅವುಗಳು ಸುಖಕರವೆನಿಸುವುದಿಲ್ಲ.

ವಾಕ್ಸಂಪ್ರಯೋಗಾದ್ ಭೂತಾನಾಂ ನಾಸ್ತಿ ದುಃಖಮನಾಮಯಮ್ ।
ವಿಪ್ರಯೋಗಾತ್ತು ಸರ್ವಸ್ಯ ನ ಶೋಚೇತ್ ಪ್ರಕೃತಿಸ್ಥಿತಃ ॥೨೭॥

ಪ್ರಾಣಿಗಳಲ್ಲಿ ಪ್ರಿಯವಾದ ಮಾತುಗಳನ್ನು ಹೇಳುವುದರಿಂದ ಯಾವುದೇ ದುಃಖವು ಉಂಟಾಗುವುದಿಲ್ಲ. ಆದರಂತೆ ಒಬ್ಬ ಪ್ರಾಣಿಯ ವಿಯೋಗವಾದಾಗಲೂ ಪ್ರಕೃತಿಯ ಸ್ವಭಾವವನ್ನು ಅರಿತು ಇರುವ ಜೀವನು ದುಃಖಕ್ಕೆ ತುತ್ತಾಗಬಾರದು.

ಧೃತ್ಯಾ ಶಿಶ್ನೋದರಂ ರಕ್ಷೇತ್ ಪಾಣಿಪಾದಂ ಚ ಚಕ್ಷುಷಾ ।
ಚಕ್ಷುಃಶ್ರೋತ್ರೇ ಚ ಮನಸಾ ಮನೋ ವಾಚಂ ಚ ವಿದ್ಯಯಾ ॥೨೮॥

ಧೈರ್ಯದಿಂದ ಜಿಹ್ವೋಪಸ್ಥಗಳನ್ನು ಜಯಿಸಬೇಕು. ಕೈ-ಕಾಲುಗಳನ್ನು ಕಣ್ಣಿನಿಂದ, ಕಣ್ಣು-ಶ್ರೋತ್ರೇಂದ್ರಿಯಗಳನ್ನು ಮನಸ್ಸಿನಿಂದ, ಮನಸ್ಸು ಮತ್ತು ಮಾತನ್ನು ವಿದ್ಯೆಯಿಂದ ರಕ್ಷಿಸಿಕೊಳ್ಳಬೇಕು.

ಪ್ರಣಯಂ ಪ್ರತಿಸಂಹೃತ್ಯ ಸಂಸ್ತುತೇಷ್ವಿತರೇಷು ಚ ।
ವಿಚರೇದಸಮುನ್ನದ್ಧಃ ಸ ಸುಖೀ ಸ ಚ ಪಂಡಿತಃ ॥೨೯॥

ಅತಿಯಾದ ಮೋಹವಿಲ್ಲದೆ ಪರಿಚಿತರಲ್ಲಿ, ಅಪರಿಚಿತರಲ್ಲಿ ಯಾವಾತನು ಪ್ರೀತಿಯನ್ನು ಇಟ್ಟು ವ್ಯವಹರಿಸುತ್ತಾನೋ ಅವನೇ ಸುಖಿಯು, ಅವನೇ ಪಂಡಿತನು.

ಅಧ್ಯಾತ್ಮರತಿರಾಸೀನೋ ನಿರಪೇಕ್ಷೋ ನಿರಾಮಿಷಃ ।
ಆತ್ಮನೈವ ಸಹಾಯೇನ ಯಶ್ಚರೇತ್ ಸ ಸುಖೀ ಭವೇತ್ ॥೩೦॥

ಯಾವನು ಅಧ್ಯಾತ್ಮವಿದ್ಯೆಯಲ್ಲಿ ಅನುರಕ್ತನಾಗಿ, ಅಪೇಕ್ಷೆ ಇಲ್ಲದೆ, ಯಾವ ವಿಧದ ಭೋಗದ ಆಸೆಯೂ ಇಲ್ಲದವನಾಗಿ ಸ್ವಾವಲಂಬಿಯಾಗಿ ವರ್ತಿಸುತ್ತಾನೋ ಅವನೇ ಪರಮಸುಖಿಯಾಗಿರುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಶುಕ-ನಾರದಸಂವಾದೇ ಅನಿಷ್ಟನಾಶನಪ್ರತಿಪಾದನಂ ನಾಮ ದ್ವಿಷಷ್ಟ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ಮೂರನೆಯ ಅಧ್ಯಾಯ

ನಾರದರಿಂದ ಶುಕಮುನಿಗೆ ವೈರಾಗ್ಯದ ಉಪದೇಶ.

ನಾರದಃ

ಸುಖದುಃಖವಿಪರ್ಯಾಸೋ ಯದಾ ಸಮುಪಪದ್ಯತೇ ।
ನೈನಂ ಪ್ರಜ್ಞಾ ಸುನೀತಂ ವಾ ತ್ರಾಯತೇ ನಾಪಿ ಪೌರುಷಮ್ ॥೧॥

ನಾರದ– ಶುಕಮುನಿಯೇ, ಯಾವಾಗ ಮನುಷ್ಯನು ಸುಖ-ದುಃಖಗಳಲ್ಲಿ ವಿಭ್ರಮೆ ಹೊಂದುತ್ತಾನೋ ಆಗ ಅವನನ್ನು ಉತ್ತಮವಾದ ಪ್ರಜ್ಞೆಯಾಗಲಿ, ನೀತಿಯಾಗಲಿ, ಪೌರುಷವಾಗಲಿ ರಕ್ಷಿಸಲಾಗದು.

ಸ್ವಭಾವಾದ್ಯತ್ನಮಾತಿಷ್ಠೇದ್ಯತ್ನವಾನ್ನಾವಸೀದತಿ ।
ಜರಾಮರಣರೋಗೇಭ್ಯಃ ಪ್ರಿಯಮಾತ್ಮಾನಮುದ್ಧರೇತ್ ॥೨॥

ಆದ್ದರಿಂದ ಜೀವನು ಸ್ವಾಭಾವಿಕವಾಗಿ ಭಗವದ್ವಿಷಯದಲ್ಲಿ ಪ್ರಯತ್ನವನ್ನು ಮಾಡಬೇಕು. ಭಗವನ್ಮುಖವಾಗಿ ಪ್ರಯತ್ನವನ್ನು ಮಾಡುವವನು ದುಃಖಕ್ಕೀಡಾಗುವುದಿಲ್ಲ. ತನ್ನ ಹಿತಚಿಂತಕನಾದ ವ್ಯಕ್ತಿಯು ಜರಾ-ಮರಣ-ರೋಗಗಳಿಂದ ತನ್ನನ್ನು ಉದ್ಧರಿಸಿಕೊಳ್ಳಬೇಕು.

ರುಜಂತಿ ಹಿ ಶರೀರಾಣಿ ರೋಗಾಃ ಶಾರೀರಮಾನಸಾಃ ।
ಸಾಯಕಾ ಇವ ತೀಕ್ಷ್ಣಾಗ್ರಾಃ ಪ್ರಯುಕ್ತಾ ದೃಢಧನ್ವಿಭಿಃ ॥೩॥

ಶಾರೀರಿಕವಾದ, ಮಾನಸಿಕವಾದ ರೋಗಗಳು ಮನುಷ್ಯರ ಶರೀರಗಳನ್ನು ಬಾಧೆ ಪಡಿಸುತ್ತಿವೆ. ದೃಢವಾದ ಧನುಸ್ಸನ್ನು ಧರಿಸಿದ ವ್ಯಕ್ತಿಗಳು ಚೂಪಾದ ಬಾಣಗಳನ್ನು ಅದರಲ್ಲಿ ಜೋಡಿಸಿ ಪ್ರಯೋಗಿಸುವಂತೆ ಅನೇಕ ವಿಧವಾದ ರೋಗಗಳು ಜೀವನನ್ನು ಬಾಧೆ ಪಡಿಸುತ್ತಿವೆ.

ವ್ಯಾಧಿತಸ್ಯ ವಿವಿತಾಭಿಸ್ಸ್ಯತೋ ಜೀವಿತೈಷಿಣಃ ।
ಅವಶಸ್ಯ ವಿನಾಶಾಯ ಶರೀರಮಪಕೃಷ್ಯತೇ ॥೪॥

ರೋಗಗಳಿಂದ ಪೀಡಿತವಾದ, ಅನೇಕ ಆಸೆಗಳಿಂದ ಬದುಕಲು ಬಯಸುವ, ಇಂದ್ರಿಯಗಳಿಗೆ ಅಧೀನನಾದ ಮನುಷ್ಯರ ಶರೀರವು ವಿನಾಶದ ಕಡೆ ಸೆಳೆಯುತ್ತಿದೆ.

ಸ್ರವಂತಿ ನ ನಿವರ್ತಂತೇ ಸ್ರೋತಾಂಸಿ ಸರಿತಾಮಿವ ।
ಆಯುರಾದಾಯ ಮರ್ತ್ಯಾನಾಂ ರಾತ್ರ್ಯಹಾನಿ ಪುನಃ ಪುನಃ ॥೫॥

ಎಲ್ಲ ನದಿಗಳಿಗೆ ಸಂಬಂಧಿಸಿದ ಪ್ರವಾಹಗಳು ನದಿಗೆ ಅಭಿಮುಖವಾಗಿ ಹರಿಯುತ್ತವೆ ವಿನಾ ತಿರುಗಿ ಬರುವುದಿಲ್ಲ. ಅದರಂತೆ ಪುನಃ ಪುನಃ ಮನುಷ್ಯರಿಗೆ ಸಂಬಂಧಿಸಿದ ಆಯುಷ್ಯವನ್ನು ಹಗಲು-ರಾತ್ರಿಗಳು ತೆಗೆದುಕೊಂಡು ಹೋಗುತ್ತಿವೆ.

ವ್ಯತ್ಯಯೋ ಹ್ಯಯಮತ್ಯಂತಂ ಪಕ್ಷಯೋಃ ಶುಕ್ಲಕೃಷ್ಣಯೋಃ ।
ಜಾತಂ ಮರ್ತ್ಯಂ ಜರಯತಿ ನಿಮೇಷಂ ನಾವತಿಷ್ಠತೇ ॥೬॥

ಶುಕ್ಲಪಕ್ಷ-ಕೃಷ್ಣಪಕ್ಷ ಎಂಬ ವ್ಯತ್ಯಾಸದ ನಡುವೆ ಹುಟ್ಟಿದ ಸಮಸ್ತ ಜೀವರನ್ನು ಈ ಆಯುಸ್ಸು ಶಿಥಿಲವನ್ನಾಗಿ ಮಾಡುತ್ತಿದೆ. ಈ ಕಾಲವು ಕಣ್ಣುರೆಪ್ಪೆ ಮಿಟುಕಿಸುವಷ್ಟು ಕಾಲದವರೆಗೂ ದೃಢವಾಗಿ ನಿಲ್ಲುವುದಿಲ್ಲ.

ಸುಖದುಃಖಾನಿ ಭೂತಾನಾಮಜರೋ ಜರಯನ್ನಸೌ ।
ಆದಿತ್ಯೋ ಹ್ಯಸ್ತಮಭ್ಯೇತಿ ಪುನಃ ಪುನರುದೇತಿ ಚ ॥೭॥

ಸೂರ್ಯನು ಪ್ರತಿದಿನವೂ ಅಸ್ತಮಾನ ಹೊಂದುತ್ತಾನೆ, ಉದಯವನ್ನೂ ಹೊಂದುತ್ತಾನೆ. ಸ್ವಯಂ ಅಜರನಾಗಿರುವ ಸೂರ್ಯದೇವನು ಪ್ರಾಣಿಗಳ ಸುಖ-ದುಃಖಗಳನ್ನು ಜೀರ್ಣಗೊಳಿಸುತ್ತಿರುತ್ತಾನೆ.

ಅದೃಷ್ಟಪೂರ್ವಾನಾದಾಯ ಭಾವಾನಪರಿಶಂಕಿತಾನ್ ।
ಇಷ್ಟಾನಿಷ್ಟಾನ್ಮನುಷ್ಯಾಣಾಮಸ್ತಂ ಗಚ್ಛಂತಿ ರಾತ್ರಯಃ ॥೮॥

ಅನೇಕ ರಾತ್ರಿಗಳು ಮನುಷ್ಯರಿಗೆ ಅಪೂರ್ವವಾದ, ಕಲ್ಪನಾತೀತವಾದ, ಇಷ್ಟಾನಿಷ್ಟ ಘಟನೆಗಳನ್ನು ಒದಗಿಸುತ್ತಾ ಕಳೆದುಹೋಗುತ್ತಿರುತ್ತವೆ.

ಯೋ ಯಮಿಚ್ಛೇದ್ಯಥಾಕಾಮಂ ಕಾಮಾನಾಂ ತತ್ತದಾಪ್ನುಯಾತ್ ।
ಯದಿ ಸ್ಯಾನ್ನ ಪರಾಧೀನಂ ಪುರುಷಸ್ಯ ಕ್ರಿಯಾಫಲಮ್ ॥೯॥

ಮನುಷ್ಯನು ಪರಾಧೀನನಾಗಿ ಕೆಲಸ ಮಾಡುತ್ತಿಲ್ಲ ಎಂದಾದಲ್ಲಿ ಅವನು ಬಯಸಿದ ಕಾಮನೆಗಳನ್ನೆಲ್ಲ ಅವನು ಹೊಂದಬೇಕಾಗಿತ್ತು. ಪುರುಷನು ಮಾಡಿದ ಕ್ರಿಯೆಗಳಿಗೆ ಫಲವು ದೊರೆಯುತ್ತಿಲ್ಲವಾದ್ದರಿಂದ ಅವನು ಸ್ವತಂತ್ರನಲ್ಲ ಎಂದು ಅರ್ಥವಾಗುತ್ತದೆ.

ಸಂಯತಾಶ್ಚ ಹಿ ದಕ್ಷಾಶ್ಚ ಮತಿಮಂತಶ್ಚ ಮಾನವಾಃ ।
ದೃಶ್ಯಂತೇ ನಿಷ್ಫಲಾಃ ಸಂತಃ ಪ್ರಹೀಣಾಶ್ಚ ಸ್ವಕರ್ಮಭಿಃ ॥೧೦॥

ಇಂದ್ರಿಯಗಳನ್ನು ನಿಗ್ರಹಿಸಿಕೊಂಡವರು, ದಕ್ಷರು, ಬುದ್ಧಿವಂತರು ಆದ ಮಾನವರು ಫಲವನ್ನು ಹೊಂದದಿರುವಂತಹ ದೃಶ್ಯಗಳು ಕಾಣಿಸುತ್ತಿರುತ್ತವೆ. ತಾವು ಮಾಡಿದ ಕರ್ಮಗಳಿಂದ ಫಲವನ್ನು ಹೊಂದದೇ ಇರುವ ಸಜ್ಜನರನ್ನು ನೋಡುತ್ತಿದ್ದೇವೆ.

ಅಪರೇ ಬಾಲಿಶಾಃ ಸಂತೋ ನಿರ್ಗುಣಾಃ ಪುರುಷಾಧಮಾಃ ।
ಆಶೀರ್ಭಿರಪ್ಯಸಂಯುಕ್ತಾ ದೃಶ್ಯಂತೇ ಸರ್ವಕಾಮಿನಃ ॥೧೧॥

ಇನ್ನು ಕೆಲವರು ಬಾಲಿಶರು, ನಿರ್ಗುಣರು, ಪುರುಷಾಧಮರು ಆಗಿರುವ ವ್ಯಕ್ತಿಗಳು. ಉತ್ತಮರ ಅನುಗ್ರಹವಿಲ್ಲದಿದ್ದರೂ ಸಮಸ್ತ ಇಷ್ಟಾರ್ಥಗಳನ್ನು ಹೊಂದಿರುವಂತಹ ದೃಶ್ಯಗಳು ಕಾಣಿಸುತ್ತವೆ.

ಭೂತಾನಾಮಪರಃ ಕಶ್ಚಿದ್ಧಿಂಸಾಯಾಂ ಸತತೋತ್ಥಿತಃ ।
ವಂಚನಾಯಾಂ ಚ ಲೋಕಸ್ಯ ಸ ಸುಖೇಷ್ವೇವ ಜೀರ್ಯತೇ ॥೧೨॥

ಇನ್ನು ಕೆಲವರು ಮನುಷ್ಯರಲ್ಲಿ ಯಾವಾಗಲೂ ಮತ್ತೊಬ್ಬರ ಹಿಂಸಕರು, ಮತ್ತೊಬ್ಬರನ್ನು ವಂಚಿಸುವುದರಲ್ಲಿಯೇ ಆಸಕ್ತರಾಗಿರುತ್ತಾರೆ. ಆದರೂ ಅವರು ಯಾವಾಗಲೂ ಸುಖಭೋಗಗಳಲ್ಲಿ ಆಯುಷ್ಯವನ್ನು ಕಳೆದಿರುತ್ತಾರೆ.

ಅಚೇಷ್ಟಮಾನಮಾಸೀನಂ ಶ್ರೀಃ ಕಂಚಿದುಪತಿಷ್ಠತಿ ।
ಕಶ್ಚಿತ್ ಕರ್ಮಾನುಸೃತ್ಯಾನ್ಯೋ ನ ಪ್ರಾಪ್ಯಮಧಿಗಚ್ಛತಿ ॥೧೩॥

ಕೆಲವೊಂದು ಬಾರಿ ಏನೂ ಕೆಲಸ ಮಾಡದಿರುವ ಸೋಮಾರಿಯ ಬಳಿ ಸಂಪತ್ತು ತಾನಾಗಿಯೇ ಹೋಗಿ ಸೇರುತ್ತದೆ. ಮತ್ತೊಬ್ಬನು ಕಷ್ಟಪಟ್ಟು ದುಡಿದರೂ ತಾನು ಹೊಂದಬೇಕಾದ ವಸ್ತುವನ್ನು ಹೊಂದುವುದಿಲ್ಲ.

ಅಪರಾಧಂ ಸಮಾಚಕ್ಷ್ವ ಪುರುಷಸ್ಯ ಸ್ವಭಾವತಃ ।
ಶುಕ್ರಮನ್ಯತ್ರ ಸಂಭೂತಂ ಪುನರನ್ಯತ್ರ ಗಚ್ಛತಿ ॥೧೪॥

ಇದರಲ್ಲಿ ಸ್ವಾಭಾವಿಕವಾಗಿ ಪುರುಷರಲ್ಲಿರುವ ಅಪರಾಧವನ್ನು ಚೆನ್ನಾಗಿ ನೀನೇ ನೋಡು. ಎಲ್ಲಿಯೋ ಹುಟ್ಟಿದ ವೀರ್ಯವು ಎಲ್ಲಿಗೋ ಹೋಗಿ ಸೇರುತ್ತದೆ.

ತಸ್ಯ ಯೋನೌ ಪ್ರಸಕ್ತಸ್ಯ ಗರ್ಭೋ ಭವತಿ ವಾ ನ ವಾ ।
ಆಮ್ರಪುಷ್ಪೋಪಮಾ ಯಸ್ಯ ನಿವೃತ್ತಿರುಪಲಭ್ಯತೇ ॥೧೫॥

ಸ್ತ್ರೀಯೋನಿಯಲ್ಲಿ ಪ್ರವೇಶ ಹೊಂದಿದ ವೀರ್ಯವು ಕೆಲವು ಸಮಯದಲ್ಲಿ ಗರ್ಭವಾಗಬಹುದು, ಆಗದೆಯೂ ಇರಬಹುದು. ಮಾವಿನ ಹೂವಿನಂತೆ ಕೆಲವೊಂದು ಬಾರಿ ಅದು ವ್ಯರ್ಥವಾಗುವುದು ಕಂಡುಬಂದಿದೆ.

ಕೇಷಾಂಚಿತ್ ಪುತ್ರಕಾಮಾನಾಮನುಸಂತಾನಮಿಚ್ಛತಾಮ್ ।
ಸಿದ್ಧೌ ಪ್ರಯತಮಾನಾನಾಂ ನೈವಾಂಡಮುಪಜಾಯತೇ ॥೧೬॥

ಕೆಲವರು ಪುತ್ರಾಪೇಕ್ಷಿಗಳಾಗಿರುತ್ತಾರೆ, ಸಂತಾನದ ಪರಂಪರೆಯು ಮುಂದುವರೆಯಬೇಕು ಎಂದು ಬಯಸಿರುತ್ತಾರೆ. ಅದಕ್ಕಾಗಿ ಅನೇಕ ಪ್ರಯತ್ನಗಳನ್ನು ಮಾಡಿರುತ್ತಾರೆ. ಆದರೆ ಅವರಿಗೆ ಒಂದು ಸಂತಾನವೂ ಆಗಿರುವುದಿಲ್ಲ.

ಗರ್ಭಾಚ್ಚೋದ್ವಿಜಮಾನಾನಾಂ ಕ್ರುದ್ಧಾದಾಶೀವಿಷಾದಿವ ।
ಆಯುಷ್ಮಾಂಜಯತೇ ಪುತ್ರಃ ಕಥಂ ಪ್ರೇತಃ ಪಿತೈವ ಸಃ ॥೧೭॥

ಆದರೆ ಕೆಲವರು ಗರ್ಭವನ್ನು ಧರಿಸಿದ ಕೂಡಲೇ ಉದ್ವಿಗ್ನರಾಗುತ್ತಾರೆ. ಸಿಟ್ಟಾದ ಸರ್ಪದಂತೆ ತೋರುತ್ತಾರೆ. ಹಾಗಿದ್ದರೂ ಅವರಿಗೆ ಆಯುಷ್ಮಂತನಾದ ಮಗನು ಹುಟ್ಟುತ್ತಾನೆ. ಸತ್ತಿರುವ ತಂದೆಯೇ ಮಗನಾಗಿ ಬಂದಂತೆ ಕಾಣುತ್ತಿರುತ್ತಾನೆ.

ದೇವಾನಿಷ್ಟ್ವಾ ತಪಸ್ತಪ್ತ್ವಾ ಕೃಪಣೈಃ ಪುತ್ರಗೃದ್ಧಿಭಿಃ ।
ದಶ ಮಾಸಾನ್ ಪರಿಧೃತಾ ಜಾಯಂತೇ ಕುಲಪಾಂಸನಾಃ ॥೧೮॥

ಪುತ್ರಾಭಿಲಾಷೆಯನ್ನು ಹೊಂದಿದ ಅನೇಕರು ಮಕ್ಕಳನ್ನು ಪಡೆಯುವ ದೃಷ್ಟಿಯಿಂದ ದೇವತಾರಾಧನೆಯನ್ನು ಮಾಡುತ್ತಾರೆ. ನಾನಾ ವಿಧವಾದ ತಪಸ್ಸನ್ನು ಮಾಡಿರುತ್ತಾರೆ. ಸ್ತ್ರೀಯಾದವಳು ಹತ್ತು ತಿಂಗಳ ಕಾಲ ಗರ್ಭದಲ್ಲಿ ಮಗನನ್ನು ಧರಿಸಿರುತ್ತಾಳೆ. ಇಷ್ಟು ಮಾಡಿದರೂ ಕುಲಕ್ಕೆ ಕಳಂಕವನ್ನು ತರುವ ಮಕ್ಕಳೇ ಹುಟ್ಟುತ್ತಾರೆ.

ಅಪರೇ ಧನಧಾನ್ಯಾನಿ ಭೋಗಾಂಶ್ಚ ಪಿತೃಸಂಚಿತಾನ್ ।
ವಿಪುಲಾನಭಿಜಾಯಂತೇ ಲಬ್ಧ್ವಾಸ್ಮೈರೇವ ಮಂಗಲೈಃ ॥೧೯॥

ಬೇರೆ ಕೆಲವರಿಗೆ ಹುಟ್ಟಿದ ಮಕ್ಕಳು ಧನ-ಧಾನ್ಯಗಳನ್ನು, ಭೋಗಗಳನ್ನು, ತಂದೆಯು ಸಂಪಾದಿಸಿದ ಆಸ್ತಿಗಳನ್ನು ಯಥೇಷ್ಟವಾಗಿ ಅನುಭವಿಸುತ್ತಾರೆ.

ಅನ್ಯೋನ್ಯಂ ಸಮಭಿಪ್ರೇತ್ಯ ಮೈಥುನಸ್ಯ ಸಮಾಗಮೇ ।
ಉಪದ್ರವ ಇವಾವಿಷ್ಟೋ ಯೋನಿಂ ಗರ್ಭಃ ಪ್ರಪದ್ಯತೇ ॥೨೦॥

ಸ್ತ್ರೀ-ಪುರುಷರು ಮೈಥುನ ಕರ್ಮಕ್ಕಾಗಿ ಪರಸ್ಪರ ಸಂಬಂಧವನ್ನು ಹೊಂದಿದಾಗ ಸ್ತ್ರೀಯೋನಿಯಲ್ಲಿ ಗರ್ಭವು ಒಂದು ದೊಡ್ಡ ಉಪದ್ರವದಂತೆ ಬಂದು ಸೇರುತ್ತದೆ.

ಶೀರ್ಣಂ ಪರಶರೀರೇಣ ನಿಚ್ಚವೀಕಂ ಶರೀರಿಣಮ್ ।
ಪ್ರಾಣೈನಾಂ ಪ್ರಾಣಸಂರೋಧೇ ಮಾಂಸಶ್ಲೇಷ್ಮವಿಚೇಷ್ಟಿತಮ್ ॥೨೧॥

ಜೀವನಿಗೆ ಪ್ರಾಣಗಳು ಬಿಟ್ಟು ಹೋದ ಕೂಡಲೇ ಅವನಿಗೆ ಆ ಸ್ಥೂಲ ಶರೀರವು ಬಿಟ್ಟು ಹೋದರೂ ಬೇರೆಯಾದ ಮಾಂಸ-ಶ್ಲೇಷ್ಮಮಯವಾದ ಶರೀರವು ಹಿಂದಿನ ಕರ್ಮಕ್ಕನುಗುಣವಾಗಿ ಹುಟ್ಟನ್ನು ಪಡೆದು ಆ ದೇಹವು ನಾಶ ಹೊಂದಿದ ಮೇಲೆ ಅದರಂತೆ ನಾಶಸ್ವಭಾವವುಳ್ಳ ಇನ್ನೊಂದು ಶರೀರವನ್ನು ಪ್ರವೇಶಿಸುತ್ತದೆ.

ನಿರ್ದಗ್ಧಂ ಪರದೇಹೇನ ಪರದೇಹಂ ಚಲಾಚಲಮ್ ।
ವಿನಶ್ಯಂತಂ ವಿನಾಶಾಂತೇ ನಾವಿ ನಾವಮಿವಾಹಿತಮ್ ॥೨೨॥

ಒಂದು ಹಡಗಿನಲ್ಲಿರುವ ವ್ಯಕ್ತಿಗಳನ್ನು ಮತ್ತೊಂದು ಹಡಗಿಗೆ ತಂದು ಇಳಿಸುವಂತೆ ಈ ಜೀವನಿಗೆ ವಾಸ ಮಾಡಲು ಬೇರೆ ಬೇರೆ ಶರೀರಗಳು ಬರುತ್ತಲೇ ಇರುತ್ತವೆ.

ಸಂಗತ್ಯಾ ಜಠರೇ ನ್ಯಸ್ತಂ ರೇತೋಬಿಂದುಮಚೇತನಮ್ ।
ಕೇನ ಯತ್ನೇನ ಜೀವಂತಂ ಗರ್ಭಂ ತ್ವಮಿಹ ಪಶ್ಯಸಿ ॥೨೩॥

ಸ್ತ್ರೀ-ಪುರುಷರ ಪರಸ್ಪರ ಸಮಾಗಮದಿಂದ ಗರ್ಭದಲ್ಲಿ ಇಡಲ್ಪಟ್ಟ ಅಚೇತನವಾದ ರೇತಸ್ಸು ಗರ್ಭರೂಪವನ್ನು ಹೊಂದಿ ಯಾವ ಪ್ರಯತ್ನದಿಂದ ಜೀವಂತವಾಗುತ್ತದೆ ಎಂಬುದನ್ನು ನೀನು ಇಲ್ಲಿ ನೋಡುತ್ತಿ.

ಅನ್ನಪಾನಾನಿ ಜೀರ್ಯಂತೇ ಯತ್ರ ಭಕ್ಷಾಶ್ಚ ಭಕ್ಷಿತಾಃ ।
ತಸ್ಮಿನ್ನೇವೋದರೇ ಗರ್ಭಃ ಕಿಂ ನಾನ್ನಮಿವ ಜೀರ್ಯತೇ ॥೨೪॥

ಯಾವ ಉದರದಲ್ಲಿ ತಿಂದು, ಕುಡಿದು ಮಾಡಿದ ಆಹಾರಗಳು, ಭಕ್ಷ್ಯಗಳು ಜೀರ್ಣವಾಗಿ ಹೋಗುವವೋ ಅದರಂತೆ ಅದೇ ಹೊಟ್ಟೆಯಲ್ಲಿರುವ ಗರ್ಭವು ಅನ್ನದಂತೆ ಏಕೆ ಜೀರ್ಣವನ್ನು ಹೊಂದುವುದಿಲ್ಲ?

ಗರ್ಭಮೂತ್ರಪುರೀಷಾಣಾಂ ಸ್ವಭಾವನಿಯತಾ ಗತಿಃ ।
ಧಾರಣೇ ವಾ ವಿಸರ್ಗೇ ವಾ ನ ಕರ್ತುರ್ವಿದ್ಯತೇ ವಶಃ ॥೨೫॥

ಸ್ರವಂತಿ ಹ್ಯುದರಾದ್ ಗರ್ಭಾ ಜಾಯಮಾನಾಸ್ತಥಾಪರೇ ।
ಆಗಮೇನ ತಾಥಾನ್ಯೇಷಾಂ ವಿನಾಶ ಉಪಪದ್ಯತೇ ॥೨೬॥

ಗರ್ಭದಲ್ಲಿರುವ ಮಲ-ಮೂತ್ರಗಳಿಗೆ ಸ್ವಾಭಾವಿಕವಾದ, ನಿಯತವಾದ ಗಮನವಿದೆ. ಗರ್ಭದ ಧಾರಣೆಯಲ್ಲಾಗಲಿ, ವಿಸರ್ಜನೆಯಲ್ಲಾಗಲಿ ಯಾರಿಗೂ ಸ್ವಾತಂತ್ರ್ಯವಿರುವುದಿಲ್ಲ. ಕೆಲವೊಮ್ಮೆ ಗರ್ಭಗಳು ಇಚ್ಛೆ ಇಲ್ಲದೆಯೂ ಪಾತವಾಗುತ್ತವೆ. ಕೆಲವೊಮ್ಮೆ ಹುಟ್ಟುವಾಗಲೇ ಸತ್ತುಹೋಗಿರುತ್ತವೆ. ಕೆಲವೊಮ್ಮೆ ಪಿಶಾಚಿಗಳ ಸಂಯೋಜನೆಯಿಂದ, ಮತ್ಸರಿಗಳ ದುರ್ಮಂತ್ರಗಳಿಂದಲೂ ಗರ್ಭಗಳು ಪತನ ಹೊಂದುತ್ತವೆ.

ಏತಸ್ಮಾದ್ಯೋನಿಸಂಬಂಧಾದ್ಯೋ ಜೀವನ್ ಪರಿಮುಚ್ಯತೇ ।
ಪ್ರಜಾಂ ಚ ಲಭತೇ ಕಾಂಚಿತ್ ಪುನರ್ದ್ವಂದ್ವೇಷು ಮಜ್ಜತಿ ॥೨೭॥

ಈ ಯೋನಿಯ ಸಂಬಂಧದಿಂದ ಯಾವ ಜೀವವು ಕ್ಷೇಮವಾಗಿ ಹೊರಬರುತ್ತದೆಯೋ ಅದೇ ಸಂತಾನವೆನಿಸುತ್ತದೆ. ಪುನಃ ಆ ಸ್ತ್ರೀ-ಪುರುಷ ಜೀವರು ಪರಸ್ಪರ ಸಮಾಗಮಕ್ಕೆ ಸಿದ್ಧರಾಗುತ್ತಾರೆ. ಮೈಥುನ ಕರ್ಮದಲ್ಲಿ ಆತುರ ಹೊಂದುತ್ತಾರೆ.

ಶತಸ್ಯ ಸಹಜಾತಸ್ಯ ಸಪ್ತಮೀಂ ದಶಮೀಂ ದಶಾಮ್ ।
ಪ್ರಾಪ್ನುವಂತಿ ತತಃ ಪಂಚ ನ ಭವಂತಿ ಶತಾಯುಷಃ ॥೨೮॥

ನೂರು ಆಯುಷ್ಯದಿಂದ ಹುಟ್ಟಿರುವಂತಹ ಜೀವನು ಏಳನೆಯ ಅವಸ್ಥೆ ಎನಿಸಿದ ವಾರ್ಧಕ್ಯವನ್ನು, ಒಂಬತ್ತನೆಯ ದಶಾ ಎನಿಸಿದ ಪ್ರಾಣರೋಧವನ್ನು ಹೊಂದಿ ನೂರು ವರ್ಷ ಆಗುವುದರಲ್ಲಿಯೇ ಪಂಚಭೂತಗಳ ಮೇಲನವನ್ನು ಅರ್ಥಾತ್ ಮರಣವನ್ನು ಹೊಂದುತ್ತಾನೆ.

ನಾಭ್ಯುತ್ಥಾನೇ ಮನುಷ್ಯಾಣಾಂ ಯೋಗಾಃ ಸ್ಯುರ್ನಾತ್ರ ಸಂಶಯಃ ।
ವ್ಯಾಧಿಭಿಶ್ಚ ವಿಮಥ್ಯಂತೇ ವ್ಯಾಲೈಃ ಕ್ಷುದ್ರಮೃಗಾ ಇವ ॥೨೯॥

ಸರ್ಪಗಳು ಸಣ್ಣ ಸಣ್ಣ ಮೃಗಗಳನ್ನು ಹಿಂಸಿಸುವಂತೆ ನಾನಾ ವಿಧವಾದ ರೋಗಗಳು ಮನುಷ್ಯನನ್ನು ಬಳಲುವಂತೆ ಮಾಡುತ್ತವೆ. ಆ ಸಮಯದಲ್ಲಿಯೂ ಮನುಷ್ಯರಿಗೆ ಮೇಲೆ ಏಳಲು, ಕುಳಿತುಕೊಳ್ಳುವುದರಲ್ಲಿಯೂ ಶಕ್ತಿ ಇರುವುದಿಲ್ಲ ಎಂಬುದರಲ್ಲಿ ಸಂಶಯವಿಲ್ಲ.

ವ್ಯಾಧಿಭಿರ್ಭಕ್ಷ್ಯಮಾಣಾನಾಂ ತ್ಯಜತಾಂ ವಿಪುಲಂ ಧನಮ್ ।
ವೇದನಾಂ ನಾಪಕರ್ಷಂತಿ ಯತಮಾನಾಶ್ಚಿಕಿತ್ಸಕಾಃ ॥೩೦॥

ರೋಗಗಳಿಂದ ಪೀಡಿತರಾಗುವ ಮನುಷ್ಯರು ರೋಗಪರಿಹಾರಕ್ಕಾಗಿ ಅಪಾರವಾದ ಧನವನ್ನೇ ವ್ಯಯ ಮಾಡುತ್ತಾರೆ. ವೈದ್ಯರು ರೋಗನಿವಾರಣೆಗಾಗಿ ಬಹಳವಾಗಿ ಪ್ರಯತ್ನಿಸುತ್ತಾರೆ. ಆದರೂ ರೋಗಿಗಳ ವೇದನೆಯನ್ನು ಪರಿಹರಿಸುವುದರಲ್ಲಿ ಚಿಕಿತ್ಸಕರು ಸಮರ್ಥರಾಗುವುದಿಲ್ಲ.

ತೇ ಚಾಪಿ ನಿಪುಣಾ ವೈದ್ಯಾಃ ಕುಶಲಾಃ ಸಂಭೃತೌಷಧಾಃ ।
ವ್ಯಾಧಿಭಿಃ ಪರಿಕೃಷ್ಯಂತೇ ಮೃಗಾ ವ್ಯಾಧೈರಿವಾರ್ದಿತಾಃ ॥೩೧॥

ಚಿಕಿತ್ಸೆಯಲ್ಲಿ ನೈಪುಣ್ಯವನ್ನು ಹೊಂದಿದ, ಅನೇಕ ಔಷಧಿಗಳನ್ನು ಸಂಗ್ರಹಿಸಿರುವ ಕುಶಲರಾದ ವೈದ್ಯರು, ವ್ಯಾಧರಿಂದ ಪ್ರಾಣಿಗಳು ಮರ್ದಿಸಲ್ಪಡುವಂತೆ ಸ್ವಯಂ ತಾವು ರೋಗಗಳಿಂದ ಪೀಡಿತರಾಗಿರುತ್ತಾರೆ.

ತೇ ಪಿಬಂತಃ ಕಷಾಯಾಂಶ್ಚ ಸರ್ಪೀಂಷಿ ವಿವಿಧಾನಿ ಚ ।
ದೃಶ್ಯಂತೇ ಜರಯಾ ಭಗ್ನಾ ನಾಗಾ ನಾಗೈರಿವೋತ್ತಮೈಃ ॥೩೨॥

ಆ ವೈದ್ಯರು ಅನೇಕ ವಿಧ ಕಷಾಯಗಳನ್ನು, ಅನೇಕ ವಿಧವಾದ ಘೃತಗಳನ್ನು ಸೇವಿಸುತ್ತಿದ್ದರೂ ಶ್ರೇಷ್ಠವಾದ ಆನೆಗಳು ಮರಗಳನ್ನು ಕೆಡವುವಂತೆ ಅವರು ಮುಪ್ಪಿನಿಂದ ಭಗ್ನರಾಗುತ್ತಿರುವುದನ್ನು ನಾವು ಕಾಣಬಹುದು.

ಕೇ ವಾ ಭುವಿ ಚಿಕಿತ್ಸಂತೇ ರೋಗಾರ್ತಾನ್ ಮೃಗಪಕ್ಷಿಣಃ ।
ಶ್ವಾಪದಾನಿ ದರಿದ್ರಾಂಶ್ಚ ಪ್ರಾಯೋ ನಾರ್ತಾ ಭವಂತಿ ತೇ ॥೩೩॥

ಈ ಪ್ರಪಂಚದಲ್ಲಿ ರೋಗಗ್ರಸ್ಥವಾದ ಮೃಗ-ಪಕ್ಷಿಗಳಿಗೆ, ಕ್ರೂರಪ್ರಾಣಿಗಳಿಗೆ, ದರಿದ್ರರಿಗೆ ಯಾರು ತಾನೇ ಚಿಕಿತ್ಸೆ ನೀಡುತ್ತಾರೆ? ದರಿದ್ರರಿಗಾಗಲೀ, ಮೃಗ ಪಕ್ಷಿಗಳಿಗಾಗಲಿ ಪ್ರಾಯಶಃ ರೋಗಗಳು ಒದಗುವುದಿಲ್ಲ.

ಘೋರಾನಪಿ ದುರಾಧರ್ಷಾನ್ನೃಪತೀನುಗ್ರತೇಜಸಃ ।
ಆಕ್ರಮ್ಯ ರೋಗ ಆದತ್ತೇ ಪಶೂನ್ ಪಶುಪಚೋ ಯಥಾ ॥೩೪॥

ಪಶುಗಳನ್ನು ಭಕ್ಷಿಸುವ ಕ್ರೂರ ಮೃಗಗಳು, ಪ್ರಾಣಿಗಳನ್ನು ಆಕ್ರಮಿಸಿ ಅಪಹರಿಸಿ ಒಯ್ಯುವಂತೆ ಪ್ರಚಂಡ ತೇಜಸ್ಸಂಪನ್ನರಾದ, ಘೋರ ಪರಾಕ್ರಮಿಗಳಾದ, ಎದುರಿಸಲು ಅಸಾಧ್ಯರಾದ ರಾಜರನ್ನು ರೋಗಗಳು ಆಕ್ರಮಿಸಿ ವಶಪಡಿಸಿಕೊಂಡು ಬಿಡುತ್ತವೆ.

ಇತಿ ಲೋಕಮನಾಕ್ರಂದಂ ಮೋಹಶೋಕಪರಿಪ್ಲುತಮ್ ।
ಸ್ರೋತಸಾ ಸಹಸಾ ಕ್ಷಿಪ್ತಂ ಹ್ರಿಯಮಾಣಂ ಬಲೀಯಸಾ ॥೩೫॥

ಹೀಗೆ ಮೋಹ-ಶೋಕಗಳಲ್ಲಿ ಮುಳುಗಿ, ಸಂಸಾರವೆಂಬ ನದಿಯಲ್ಲಿ ಬಿಡಲ್ಪಟ್ಟು ಬಲಿಷ್ಠ ಪ್ರವಾಹದ ವೇಗದಿಂದ ಸೆಳೆಯಲ್ಪಡುತ್ತಿರುವ ಈ ಜಗತ್ತು ಯಾವ ಶಬ್ದವೂ ಇಲ್ಲದೆ ಚಲಿಸುತ್ತಲೇ ಇದೆ.

ನ ಧನೇನ ನ ರಾಜ್ಯೇನ ನೋಗ್ರೇಣ ತಪಸಾ ತಥಾ ।
ಸ್ವಭಾವಾ ವ್ಯತಿವರ್ತಂತೇ ಯೇ ನಿಯುಕ್ತಾಃ ಶರೀರಿಷು ॥೩೬॥

ಕರ್ಮಫಲವನ್ನು ಅನುಭವಿಸಬೇಕೆಂದು ವಿಧಿಲಿಖಿತವು. ಮನುಷ್ಯರು ಧನ-ರಾಜ್ಯ-ತಪಸ್ಸು ಇವುಗಳಿಂದ ಈ ಸಹಜ ಪ್ರಕೃತಿಯ ಪರಾಕ್ರಮವನ್ನು ದಾಟಿ ನಡೆಯಲು ಸಾಧ್ಯವಾಗುವುದಿಲ್ಲ.

ನ ಮ್ರಿಯೇರನ್ನ ಜೀರ್ಯೇರನ್ ಸರ್ವೇ ಸ್ಯುಃ ಸರ್ವಕಾಮಿಕಾಃ ।
ನಾಪ್ರಿಯಂ ಪ್ರತಿಪಶ್ಯೇಯುರುತ್ಥಾನಸ್ಯ ಫಲಂ ಪ್ರತಿ ॥೩೭॥

ತಮ್ಮ ಪ್ರಯತ್ನದಂತೆ ಫಲವನ್ನು ಹೊಂದಲು ಜೀವರು ಸಮರ್ಥರಾಗಿದ್ದಲ್ಲಿ ಯಾವ ಜೀವರೂ ಸಾಯುತ್ತಿರಲಿಲ್ಲ. ಸಮಸ್ತ ಕಾಮನೆಗಳನ್ನೂ ಹೊಂದುತ್ತಿದ್ದರು. ಅಪ್ರಿಯವಾದುದನ್ನು ನೋಡುತ್ತಿರಲಿಲ್ಲ. ದುಷ್ಕರ್ಮದ ಫಲವನ್ನು ಹೊಂದುತ್ತಿರಲಿಲ್ಲ.

ಉಪರ್ಯುಪರಿ ಲೋಕಸ್ಯ ಸರ್ವೋ ಭವಿತುಮಿಚ್ಛತಿ ।
ಯತತೇ ಚ ಯಥಾಶಕ್ತಿ ನ ಚ ತದ್ವರ್ತತೇ ತಥಾ ॥೩೮॥

ಎಲ್ಲರೂ ಊರ್ಧ್ವಲೋಕಗಳನ್ನು ಹೊಂದಲು ಬಯಸುತ್ತಾರೆ. ತಮ್ಮ ಶಕ್ತಿಗೆ ಅನುಗುಣವಾಗಿ ಪ್ರಯತ್ನವನ್ನೂ ಮಾಡುತ್ತಾರೆ. ಆದರೆ ಅದು ಸಾಧ್ಯವಾಗುವುದಿಲ್ಲ. ಮಾಡಿದ ಪ್ರಯತ್ನಗಳು ಫಲಿಸುವುದಿಲ್ಲ.

ಐಶ್ವರ್ಯಮದಮತ್ತಾಂಶ್ಚ ಮತ್ತಾನ್ ಮದ್ಯಮದೇನ ಚ ।
ಅಪ್ರಮತ್ತಾಃ ಶಠಾಃ ಕ್ರೂರಾ ವಿಕ್ರಾಂತಾಃ ಪರ್ಯುಪಾಸತೇ ॥೩೯॥

ಒಳ್ಳೆಯ ಜಾಗರೂಕರೂ, ಶೂರರೂ, ಪರಾಕ್ರಮಶಾಲಿಗಳೂ ಸಹ ಐಶ್ವರ್ಯ ಮದದಿಂದ, ಮದ್ಯವ್ಯಸನದಿಂದ ಸೊಕ್ಕಿದ ಅಲ್ಪಜನರಲ್ಲಿ ಕೈಕಟ್ಟಿ ಸೇವೆ ಮಾಡುತ್ತಾರೆ.

ಕ್ಲೇಶಾಃ ಪ್ರತಿನಿವರ್ತಂತೇ ಕೇಷಾಂಚಿದಸಮೀಕ್ಷಿತಾಃ ।
ಸ್ವಂ ಸ್ವಂ ಚ ಪುನರನ್ಯೇಷಾಂ ನ ಕಿಂಚಿದಭಿಗಮ್ಯತೇ ॥೪೦॥

ಕೆಲವರಿಗೆ ಜೀವನದಲ್ಲಿ ಒದಗಿ ಬರುವ ದುಃಖಗಳು ಯೋಚಿಸದೆ ಅಥವಾ ಪ್ರಯತ್ನವಿಲ್ಲದೆ ಪರಿಹಾರವಾಗುತ್ತವೆ. ಮತ್ತೆ ಕೆಲವರಿಗೆ ತಮ್ಮಲ್ಲಿ ಐಶ್ವರ್ಯವಿದ್ದರೂ ಸಮಯಕ್ಕೆ ಉಪಯೋಗಕ್ಕೆ ಬರುವುದಿಲ್ಲ.

ಮಹಚ್ಚ ಫಲವೈಷಮ್ಯಂ ದೃಶ್ಯತೇ ಕರ್ಮಸಂಧಿಷು ।
ವಹಂತಿ ಶಿಬಿಕಾಮನ್ಯೇ ಯಾಂತ್ಯನ್ಯೇ ಶಿಬಿಕಾಗತಾಃ ॥೪೧॥

ಕರ್ಮಗಳಿಗೆ ಸಂಬಂಧಿಸಿದ ಫಲಗಳಲ್ಲಿಯೂ, ವಿಶೇಷ ವೈಪರೀತ್ಯವು ಕಾಣಿಸುತ್ತದೆ. ಕರ್ಮಫಲಕ್ಕನುಗುಣವಾಗಿ ಕೆಲವರು ಪಲ್ಲಕ್ಕಿಯನ್ನು ಹೊತ್ತು ತಿರುಗಿದರೆ, ಕೆಲವರು ಅದೇ ಪಲ್ಲಕ್ಕಿಯಲ್ಲಿ ಕುಳಿತು ಸಂಚರಿಸುತ್ತಾರೆ.

ಸರ್ವೇಷಾಮೃದ್ಧಿಕಾಮಾನಾಮನ್ಯೇ ರಥಪುರಃಸರಾಃ ।
ಮನುಜಾಶ್ಚ ಶತಸ್ತ್ರೀಕಾಃ ಶತಶೋ ವಿಧವಾಃ ಸ್ತ್ರಿಯಃ ॥೪೨॥

ಎಲ್ಲ ಮನುಷ್ಯರೂ ಐಶ್ವರ್ಯಸಮೃದ್ಧಿಯನ್ನು ಸ್ವಾಭಾವಿಕವಾಗಿ ಬಯಸುತ್ತಾರೆ. ಆದರೆ ಆ ಬಯಕೆವುಳ್ಳವರಲ್ಲಿ ಕೆಲವರು ಮಾತ್ರ ರಥದಲ್ಲಿ ಕುಳಿತು ಸಂಚರಿಸುತ್ತಾರೆ.

ಅನೇಕರು ಅನೇಕ ಸ್ತ್ರೀಯರನ್ನು ಹೊಂದಿದ್ದರೆ ಯಾವ ಪುರುಷನನ್ನೂ ಹೊಂದದೆ ಇರುವ ಅನೇಕ ವಿಧವೆಯರೂ ಇದ್ದಾರೆ.

ದ್ವಂದ್ವಾರಾಮೇಷು ಭೂತೇಷು ಗಚ್ಛಂತ್ಯೇಕೈಕಶೋ ನರಾಃ ।
ಇದಮನ್ಯತ್ ಪರಂ ಪಶ್ಯ ಮಾತ್ರ ಮೋಹಂ ಕರಿಷ್ಯಸಿ ॥೪೩॥

ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ ।
ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತಂ ತ್ಯಜ ॥೪೪॥

ಸಮಸ್ತ ಜೀವರು ಸುಖ-ದುಃಖಾದಿ ದ್ವಂದ್ವಗಳಲ್ಲೇ ಆಸಕ್ತರಾಗಿರುತ್ತಾರೆ. ಒಬ್ಬನು ದುಃಖವನ್ನು ಅನುಭವಿಸುತ್ತಿದ್ದರೆ ಮತ್ತೊಬ್ಬ ಸುಖವನ್ನು ಅನುಭವಿಸುತ್ತಿರುತ್ತಾನೆ. ಇವೆಲ್ಲದಕ್ಕಿಂತಲೂ ವಿಲಕ್ಷಣವಾದುದು ಬ್ರಹ್ಮಪದವು. ಇದರಲ್ಲಿ ನೀನು ಮೋಹವನ್ನು ಹೊಂದಬೇಡ. ಧರ್ಮಾಧರ್ಮಗಳನ್ನು ತ್ಯಜಿಸಿ, ಸುಳ್ಳು-ಸತ್ಯಗಳನ್ನು ಯಾವ ಮನಸ್ಸಿನಿಂದ ಬಿಟ್ಟಿರುವೆಯೋ ಆ ಮನಸ್ಸನ್ನೂ ನೀನು ತ್ಯಜಿಸು.

ಏತತ್ತೇ ಪರಮಂ ಗುಹ್ಯಮಾಖ್ಯಾತಮೃಷಿಸತ್ತಮ ।
ಯೇನ ದೇವಾಃ ಪರಿತ್ಯಜ್ಯ ಮರ್ತ್ಯಲೋಕಂ ದಿವಂ ಗತಾಃ ॥೪೫॥

ಋಷಿಕುಮಾರನೇ, ಯಾವ ಆಖ್ಯಾನವನ್ನು ಕೇಳಿಸಿಕೊಂಡ ದೇವತೆಗಳು ಮನುಷ್ಯಲೋಕವನ್ನು ಬಿಟ್ಟು ಸ್ವರ್ಗಕ್ಕೆ ತೆರಳಿದರೋ ಅಂತಹ ರಹಸ್ಯವಾದ ಆಖ್ಯಾನವನ್ನು ನಿನಗೆ ತಿಳಿಸಿರುತ್ತೇನೆ.

ಭೀಷ್ಮಃ

ನಾರದಸ್ಯ ವಚಃ ಶ್ರುತ್ವಾ ಶುಕಃ ಪರಮಬುದ್ಧಿಮಾನ್ ।
ಸಂಚಿಂತ್ಯ ಮನಸಾ ಧೀರೋ ನಿಶ್ಚಯಂ ನಾಧ್ಯಗಚ್ಛತ ॥೪೬॥

ಭೀಷ್ಮ- ಯುಧಿಷ್ಠಿರನೇ, ನಾರದರ ಮಾತನ್ನು ಕೇಳಿ ಬುದ್ಧಿವಂತನಾದ, ಜ್ಞಾನಿಯಾದ ಶುಕನು ಮನಸ್ಸಿನಲ್ಲಿಯೇ ಚಿಂತಿಸಿದನು. ಆದರೆ ಯಾವುದೇ ವಿಷಯದಲ್ಲಿ ನಿಶ್ಚಯವನ್ನು ಹೊಂದಲಿಲ್ಲ.

ಪುತ್ರದಾರೈರ್ಮಹಾನ್ ಕ್ಲೇಶೋ ವಿದ್ಯಾಮ್ನಾಯೇ ಮಹಾನ್ ಶ್ರಮಃ ।
ಕಿಂ ನು ಸ್ಯಾಚ್ಛಾಶ್ವತಂ ಸ್ಥಾನಮಲ್ಪಕ್ಲೇಶಂ ಮಹೋದಯಮ್ ॥೪೭॥

ಹೆಂಡತಿ, ಮಕ್ಕಳಿಂದ ಕ್ಲೇಶವು ಪ್ರಾಪ್ತವಾಗುತ್ತದೆ. ವೇದವಿದ್ಯೆಯ ಲಾಭವು ಅತ್ಯಂತ ಶ್ರಮಸಾಧ್ಯವು. ಸ್ವಲ್ಪ ಶ್ರಮದಿಂದ ಶ್ರೇಷ್ಠವಾದ ಶ್ರೇಯಸ್ಸನ್ನು ಹೊಂದುವ ಶಾಶ್ವತವಾದ ಸ್ಥಾನವನ್ನು ಪಡೆಯುವ ಉಪಾಯವು ಯಾವುದು ಎಂದು ಚಿಂತಿಸಿದನು.

ತತೋ ಮುಹೂರ್ತಂ ಸಂಚಿಂತ್ಯ ನಿಶ್ಚಿತಾಂ ಗತಿಮಾತ್ಮನಃ ।
ಪರಾವರಜ್ಞೋ ಧರ್ಮಸ್ಯ ಪರಾಂ ನೈಃಶ್ರೇಯಸೀಂ ಗತಿಮ್ ॥೪೮॥

ಬಳಿಕ ಒಂದು ಮುಹೂರ್ತ ಕಾಲ ತಾನು ಹೊಂದಬೇಕಾದ ಸ್ಥಾನ ಯಾವುದೆಂಬುದನ್ನು ಯೋಚಿಸಿ, ಧರ್ಮದ ಮಹತ್ವವನ್ನು ತಿಳಿದಿರುವ ತಾರತಮ್ಯಜ್ಞಾನವನ್ನು ಹೊಂದಿರುವ ಶುಕಮುನಿಯು ಮುಕ್ತಿಯ ಮಾರ್ಗವು ಯಾವುದೆಂಬುದನ್ನು ತಿಳಿದುಕೊಂಡನು.

ಕಥಂ ತ್ವಹಮಸಂಕ್ಲಿಷ್ಟೋ ಗಚ್ಛೇಯಂ ಪರಮಾಂ ಗತಿಮ್ ।
ನಾವರ್ತೇಯಂ ಯಥಾ ಭೂಯೋ ಯೋನಿಸಂಸಾರಸಾಗರೇ ॥೪೯॥

ಯಾವುದರಲ್ಲಿಯೂ ಆಸಕ್ತನಾಗದೆ, ಸಂಸಾರಕ್ಕೆ ಮರಳಿ ಬರದಿರುವಂತಹ ಪರಮಗತಿಯನ್ನು ನಾನು ಹೇಗೆ ಹೊಂದಲಿ?

ಪರಂ ಭಾವಂ ಹಿ ಕಾಂಕ್ಷಾಮಿ ಯತ್ರ ನಾವರ್ತತೇ ಪುನಃ ।
ಸರ್ವಸಂಗಾನ್ ಪರಿತ್ಯಜ್ಯ ನಿಶ್ಚಿತಾಂ ಮನಸೋ ಗತಿಮ್ ॥೫೦॥

ಯಾವ ಸ್ಥಾನಕ್ಕೆ ಹೋಗುವುದರಿಂದ ಪುನಃ ಈ ಜೀವನು ಸಂಸಾರಕ್ಕೆ ಹಿಂದಿರುಗಬೇಕಾಗಿಲ್ಲವೋ ಅಂತಹ ಸ್ಥಾನವನ್ನು ಹೊಂದಲು ಬಯಸುತ್ತೇನೆ. ಎಲ್ಲ ಆಸಕ್ತಿಗಳನ್ನು ಬಿಟ್ಟು, ಅವನನ್ನೇ ಧ್ಯಾನಿಸಿ ಉತ್ತಮವಾದ ಗತಿಯನ್ನು ಹೊಂದುತ್ತೇನೆ.

ತತ್ರ ಯಾಸ್ಯಾಮಿ ಯತ್ರಾತ್ಮಾ ಶಮಂ ಮೇऽಧಿಗಮಿಷ್ಯತಿ ।
ಅಕ್ಷಯಶ್ಚಾವ್ಯಯಶ್ಚೈವ ಯತ್ರ ಸ್ಥಾಸ್ಯಾಮಿ ಶಾಶ್ವತಃ ॥೫೧॥

ನನ್ನ ಮನಸ್ಸಿಗೆ ಭಗವನ್ನಿಷ್ಠವಾದ ಬುದ್ಧಿಯು ಎಲ್ಲಿ ದೃಢವಾಗುತ್ತದೋ ಅಲ್ಲಿಗೇ ತೆರಳುತ್ತೇನೆ. ನಾನು ಎಲ್ಲಿಗೆ ತೆರಳುವುದರಿಂದ ಅಕ್ಷಯನೂ, ಅವ್ಯಯನೂ, ಶಾಶ್ವತನೂ ಆಗುತ್ತೇನೋ ಅಲ್ಲಿಗೆ ತೆರಳುತ್ತೇನೆ.

ನ ತು ಯೋಗಮೃತೇ ಶಕ್ಯಾ ಪ್ರಾಪ್ತುಂ ಸಾ ಪರಮಾ ಗತಿಃ ।
ಅವಬಂಧೋ ಹಿ ಬದ್ಧಸ್ಯ ಕರ್ಮಭಿರ್ನೋಪಪದ್ಯತೇ ॥೫೨॥

ಯೋಗಮಾರ್ಗದ ಹೊರತಾಗಿ ಪರಮಗತಿಯನ್ನು ಹೊಂದಲು ಬೇರೆ ಮಾರ್ಗವು ಇರುವುದಿಲ್ಲ. ಬಂಧನದಿಂದ ಬಿಡುಗಡೆಯನ್ನು ಹೊಂದಿದವನು ಕರ್ಮಬಂಧನಕ್ಕೆ ಸಿಲುಕುವುದಿಲ್ಲ.

ತಸ್ಮಾದ್ಯೋಗಂ ಸಮಾಸ್ಥಾಯ ತ್ಯಕ್ತ್ವಾ ಗೃಹಕಲೇವರಮ್ ।
ವಾಯುಭೂತಃ ಪ್ರವೇಕ್ಷ್ಯಾಮಿ ತೇಜೋರಾಶಿಂ ದಿವಾಕರಮ್ ॥೫೩॥

ಆದ್ದರಿಂದ ಯೋಗವನ್ನು ಆಶ್ರಯಿಸಿ, ಮನೆಯಂತಿರುವ ಈ ದೇಹವನ್ನು ಬಿಟ್ಟು ವಾಯುರೂಪನಾಗಿ ತೇಜೋರಾಶಿಯಾದ ಸೂರ್ಯಮಂಡಲವನ್ನು ಪ್ರವೇಶಿಸುತ್ತೇನೆ.

ನ ಹ್ಯೇಷ ಕ್ಷಯಮಾಪ್ನೋತಿ ಸೋಮಃ ಸುರಗಣೈರ್ಯಥಾ ।
ಕಂಪಿತಃ ಪತತೇ ಭೂಮಿಂ ಪುನಶ್ಚೈವಾಧಿರೋಹತಿ ।
ಕ್ಷೀಯತೇ ಹಿ ಸದಾ ಸೋಮಃ ಪುನಶ್ಚೈವಾಭಿಪೂರ್ಯತೇ ॥೫೪॥

ದೇವತೆಗಳು ಚಂದ್ರನ ಅಮೃತಕಿರಣಗಳನ್ನು ಹೀರಿಕೊಂಡ ಬಳಿಕ ಚಂದ್ರನು ಕ್ಷಯವನ್ನು ಹೊಂದುವಂತೆ ಈ ಸೂರ್ಯನು ಎಂದಿಗೂ ಕ್ಷಯವನ್ನು ಹೊಂದುವುದಿಲ್ಲ. ಧೂಮಮಾರ್ಗದಲ್ಲಿ ಸಂಚರಿಸಿದ ಜೀವನು ಚಂದ್ರಮಂಡಲಕ್ಕೆ ಹೋಗಿ ಕರ್ಮಫಲ ತೀರಿದ ಬಳಿಕ ಕಂಪಿಸುತ್ತಾ ಭೂಮಿಯ ಮೇಲೆ ಬೀಳುವಂತೆ ಸೂರ್ಯಮಂಡಲಕ್ಕೆ ಹೋಗುವವನಿಗೆ ಪುನರಾಗಮನವು ಇರುವುದಿಲ್ಲ. ಚಂದ್ರನು ಕ್ಷಯವನ್ನೂ ಹೊಂದುತ್ತಾನೆ, ವೃದ್ಧಿಯನ್ನೂ ಹೊಂದುತ್ತಾನೆ. ಅವನ ಸಂಗಮದಿಂದ ಜೀವರಿಗೂ ಕರ್ಮಗಳ ವೃದ್ಧಿ-ಕ್ಷಯವು ನಿಶ್ಚಿತ.

ರವಿಸ್ತು ಸಂತಾಪಯತಿ ಲೋಕಾನ್ರಶ್ಮಿಭಿರುಲ್ಬಣೈಃ ।
ಸರ್ವತಸ್ತೇಜ ಆದತ್ತೇ ನಿತ್ಯಮಕ್ಷಯಮಂಡಲಃ ॥೫೫॥

ಸೂರ್ಯನು ತನ್ನ ಪ್ರಖರವಾದ ಕಿರಣಗಳಿಂದ ಲೋಕಗಳನ್ನು ಸಂತಾಪಗೊಳಿಸುತ್ತಾನೆ. ಎಲ್ಲ ಕಡೆಯಿಂದಲೂ ತೇಜಸ್ಸನ್ನು ಸಂಗ್ರಹಿಸುತ್ತಾನೆ. ಆದ್ದರಿಂದಲೇ ಅವನು ಅಕ್ಷಯಮಂಡಲವನ್ನು ಹೊಂದುತ್ತಾನೆ.

ಅತೋ ಮೇ ರೋಚತೇ ಗಂತುಮಾದಿತ್ಯಂ ದೀಪ್ತತೇಜಸಮ್ ।
ಅತ್ರ ವತ್ಸ್ಯಾಮಿ ದುರ್ಧರ್ಷೋ ನಿಃಸಂಗೇನಾಂತರಾತ್ಮನಾ ॥೫೬॥

ಆದ್ದರಿಂದ ಬೆಳಗುವ ತೇಜಸ್ಸಿನಿಂದ ಕೂಡಿರುವ ಆದಿತ್ಯಮಂಡಲಕ್ಕೆ ಹೋಗುವುದೇ ನನಗೆ ಯೋಗ್ಯವೆನಿಸುತ್ತದೆ. ಶಂಕೆ ಇಲ್ಲದ ಮನಸ್ಸಿನಿಂದ ಕೂಡಿರುವ ನಾನು ಯಾರಿಂದಲೂ ಎದುರಿಸಲು ಅಸಾಧ್ಯನಾಗಿ ಅಲ್ಲಿ ವಾಸ ಮಾಡುತ್ತೇನೆ.

ಸೂರ್ಯಸ್ಯ ಸದನೇ ಚಾಹಂ ನಿಕ್ಷಿಪ್ಯೇದಂ ಕಲೇವರಮ್ ।
ಋಷಿಭಿಃ ಸಹ ಯಾಸ್ಯಾಮಿ ಸೌರಂ ತೇಜೋऽತಿದುಃಸಹಮ್ ॥೫೭॥

ನಾನು ನನ್ನ ಶರೀರವನ್ನು ಸೂರ್ಯಲೋಕದಲ್ಲಿಟ್ಟು, ಅಲ್ಲಿರುವ ಋಷಿಗಳ ಜೊತೆ ದುಸ್ಸಹವಾದ ಸೂರ್ಯನ ತೇಜೋರಾಶಿಯನ್ನೇ ಪ್ರವೇಶಿಸುತ್ತೇನೆ.

ಆಪೃಚ್ಛಾಮಿ ನಗಾನ್ ನಾಗಾನ್ ಗಿರೀನುರ್ವೀಂ ದಿಶೋ ದಿವಮ್ ।
ದೇವದಾನವಗಂಧರ್ವಾನ್ ಪಿಶಾಚೋರಗರಾಕ್ಷಸಾನ್ ॥೫೮॥

ಸೂರ್ಯಲೋಕವನ್ನು ಹೊಂದುವ ದೃಷ್ಟಿಯಿಂದ ನಾನು ವೃಕ್ಷಗಳು, ಪರ್ವತಗಳು, ಬೆಟ್ಟ, ಭೂಮಿ, ದಿಕ್ಕು, ಸ್ವರ್ಗ, ದೇವ, ದಾನವ, ಗಂಧರ್ವ, ಪಿಶಾಚಿ, ಉರಗ, ರಾಕ್ಷಸ ಇವರೆಲ್ಲರ ಅನುಮತಿಯನ್ನು ಕೇಳುತ್ತೇನೆ.

ಲೋಕೇಷು ಸರ್ವಭೂತಾನಿ ಪ್ರವೇಕ್ಷ್ಯಾಮಿ ನಸಂಶಯಃ ।
ಪಶ್ಯಂತು ಯೋಗವೀರ್ಯಂ ಮೇ ಸರ್ವೇ ದೇವಾಃ ಸಹರ್ಷಿಭಿಃ ॥೫೯॥

ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳಲ್ಲಿಯೂ ಪ್ರವೇಶಿಸುತ್ತೇನೆ. ನನ್ನ ಯೋಗಶಕ್ತಿಯನ್ನು ಋಷಿಗಳೆಲ್ಲರೂ ನೋಡಲಿ. ನನಗೆ ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಅಥಾನುಜ್ಞಾಪ್ಯ ತಮೃಷಿಂ ನಾರದಂ ಲೋಕವಿಶ್ರುತಮ್ ।
ತಸ್ಮಾದನುಜ್ಞಾಂ ಸಂಪ್ರಾಪ್ಯ ಜಗಾಮ ಪಿತರಂ ಪ್ರತಿ ॥೬೦॥

ಶುಕನು ಈ ರೀತಿಯಾಗಿ ನಿಶ್ಚಯಿಸಿ ಸೂರ್ಯಲೋಕಕ್ಕೆ ತೆರಳಲು, ಲೋಕದಲ್ಲಿ ಉತ್ತಮ ಪ್ರಸಿದ್ಧಿಯನ್ನು ಹೊಂದಿದ ದೇವರ್ಷಿ ನಾರದರ ಅನುಮತಿಯನ್ನು ಬೇಡಿದನು. ಬಳಿಕ ತಂದೆಯ ಬಳಿ ತೆರಳಿದನು.

ಸೋಽಭಿವಾದ್ಯ ಮಹಾತ್ಮಾನಮೃಷಿಂ ದ್ವೈಪಾಯನಂ ಮುನಿಮ್ ।
ಶುಕಃ ಪ್ರದಕ್ಷಿಣೇಕೃತ್ಯ ಕೃಷ್ಣಮಾಪೃಷ್ಟವಾನ್ಮುನಿಃ ॥೬೧॥

ಶುಕಮುನಿಯು ಮಹಾಮುನಿಯಾದ ಕೃಷ್ಣದ್ವೈಪಾಯನರನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ, ಸೂರ್ಯಲೋಕಕ್ಕೆ ಹೊರಡಲು ಅವರಿಂದ ಅನುಜ್ಞೆಯನ್ನು ಕೇಳಿದನು.

ಶ್ರುತ್ವಾ ಋಷಿಸ್ತದ್ವಚನಂ ಶುಕಸ್ಯ
ಪ್ರೀತೋ ಮಹಾತ್ಮಾ ಪುನರಾಹ ಚೈನಮ್ ।
ಭೋ ಭೋಃ ಪುತ್ರ ಸ್ಥೀಯತಾಂ ತಾವದದ್ಯ
ಯಾವಚ್ಚಕ್ಷುಃ ಪ್ರೀಣಯಾಮಿ ತ್ವದರ್ಥಮ್ ॥೬೨॥

ವ್ಯಾಸಮಹರ್ಷಿಗಳು ಶುಕನು ಹೇಳಿದ ಮಾತನ್ನು ಕೇಳಿ ಪರಮಪ್ರೀತರಾಗಿ ಹೀಗೆ ಹೇಳಿದರು- ಮಗು ಶುಕನೇ, ನಿಲ್ಲು. ನಿನ್ನನ್ನು ನೋಡುತ್ತಾ ನನ್ನ ಕಣ್ಣುಗಳಿಂದ ಸಂತೋಷವನ್ನು ಹೊಂದುತ್ತೇನೆ. ಅಲ್ಲಿಯ ತನಕ ತೆರಳಬೇಡ, ಇಲ್ಲಿಯೇ ನಿಲ್ಲು.

ನಿರಪೇಕ್ಷಃ ಶುಕೋ ಭೂತ್ವಾ ನಿಃಸ್ನೇಹೋ ಮುಕ್ತಬಂಧನಃ ।
ಮೋಕ್ಷಮೇವಾನುಸಂಚಿಂತ್ಯ ಗಮನಾಯ ಮನೋ ದಧೇ ।
ಪಿತರಂ ಸಂಪರಿತ್ಯಜ್ಯ ಜಗಾಮ ದ್ವಿಜಸತ್ತಮಃ ॥೬೩॥

ಆದರೆ ಅಪೇಕ್ಷೆಗಳನ್ನೆಲ್ಲ ತೊರೆದಿರುವ ಶುಕಮುನಿಯು ಸ್ನೇಹಬಂಧನವನ್ನು ತೊರೆದು ನಿರಾಸಕ್ತನಾಗಿದ್ದನು. ಭಗವತತ್ತ್ವದ ವಿಷಯದಲ್ಲಿ ಅವನಿಗೆ ಯಾವ ಸಂಶಯವೂ ಇರಲಿಲ್ಲ. ಮೋಕ್ಷವನ್ನೇ ಚಿಂತಿಸುತ್ತಾ ಅಲ್ಲಿಂದ ಹೊರಟು ಹೋಗಲು ನಿಶ್ಚಯಿಸಿದನು. ತಂದೆಯನ್ನು ತ್ಯಜಿಸಿ, ಸಿದ್ಧರ ಸಮೂಹದಿಂದ ಸೇವಿತವಾಗಿರುವ, ವಿಶಾಲವಾದ ಕೈಲಾಸ ಗಿರಿಯ ಕಡೆ ನಡೆದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಷಷ್ಟ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐರವತ್ತಾಲ್ಕನೆಯ ಅಧ್ಯಾಯ

ಶುಕದೇವನ ಊರ್ಧ್ವಗತಿಯ ವರ್ಣನೆ

ಭೀಷ್ಮಃ

ಗಿರಿಪೃಷ್ಠಂ ಸಮಾರುಹ್ಯ ಸುತೋ ವ್ಯಾಸಸ್ಯ ಭಾರತ ।
ಸಮೇ ದೇಶೇ ವಿವಿಕ್ತೇ ಚ ನಿಃಶಲಾಕ ಉಪಾವಿಶತ್ ॥೧॥

ಭೀಷ್ಮ– ವ್ಯಾಸರ ಮಗನಾದ ಶುಕನು ಕೈಲಾಸಗಿರಿಯ ಶಿಖರವನ್ನು ಏರಿ, ಏಕಾಂತವಾಗಿದ್ದ ಸಮತಟ್ಟಾಗಿದ್ದ ಸ್ಥಳದಲ್ಲಿ ಕುಳಿತುಕೊಂಡನು.

ಧಾರಯಾಮಾಸ ಚಾತ್ಮಾನಂ ಯಥಾಶಾಸ್ತ್ರಂ ಮಹಾಮುನಿಃ ।
ಪಾದಾತ್ ಪ್ರಭೃತಿ ಗಾತ್ರೇಷು ಕ್ರಮೇಣ ಕ್ರಮಯೋಗವಿತ್ ॥೨॥

ಯೋಗದ ಕ್ರಮವನ್ನು ಅರಿತಿರುವ ಶುಕನು ವಿಧಿಗನುಗುಣವಾಗಿ ಪಾದದಿಂದ ಆರಂಭಿಸಿ ಸಮಸ್ತ ಅವಯವಗಳನ್ನು ನಿಗ್ರಹಿಸಿಕೊಂಡು ಪರಮಾತ್ಮನನ್ನು ಹೃದಯದಲ್ಲಿ ಧ್ಯಾನಿಸತೊಡಗಿದನು.

ತತಃ ಸ ಪ್ರಾಙ್ಮುಖೋ ವಿದ್ವಾನಾದಿತ್ಯೇ ನಚಿರೋದಿತೇ ।
ಪಾಣಿಪಾದಂ ಸಮಾಧಾಯ ವಿನೀತವದುಪಾವಿಶತ್ ॥೩॥

ಬಳಿಕ ಸೂರ್ಯೋದಯವು ಆಗುತ್ತಿರಲು ಶುಕದೇವನು ಕೈ-ಕಾಲುಗಳನ್ನು ನಿಗ್ರಹಿಸಿಕೊಂಡು ವಿನೀತನಂತೆ ಪೂರ್ವಾಭಿಮುಖವಾಗಿ ಕುಳಿತುಕೊಂಡನು.

ನ ತತ್ರ ಪಕ್ಷಿಸಂಘಾತೋ ನ ಶಬ್ದೋ ನಾಪಿ ದರ್ಶನಮ್ ।
ಯತ್ರ ವೈಯಾಸಕಿರ್ಧೀಮಾನ್ಯೋಕ್ತುಂ ಸಮುಪಚಕ್ರಮೇ ॥೪॥

ಯೋಗಧಾರಣೆಯನ್ನು ಮಾಡಿ ಕುಳಿತಿರುವ ಶುಕನ ಸ್ಥಳದಲ್ಲಿ ಪಕ್ಷಿಗಳ ಸಮುದಾಯವಾಗಲಿ, ಅವುಗಳ ಶಬ್ದವಾಗಲಿ, ಮನಸ್ಸನ್ನು ವಿಕೃತಗೊಳಿಸುವ ಯಾವುದೇ ದೃಶ್ಯವಾಗಲಿ ಕಾಣಲಿಲ್ಲ.

ಸ ದದರ್ಶ ತದಾತ್ಮಾನಂ ಸರ್ವಸಂಗವಿನಿಃಸೃತಮ್ ।
ಪ್ರಜಹಾಸ ತತೋ ಹಾಸಂ ಶುಕಃ ಸಂಪ್ರೇಕ್ಷ್ಯ ಭಾಸ್ಕರಮ್ ॥೫॥

ಸಮಸ್ತ ಸಂಗಗಳಿಂದ ಮುಕ್ತನಾಗಿರುವ ಪರಮಾತ್ಮನನ್ನು ತನ್ನ ಹೃದಯದಲ್ಲಿ ಶುಕಮುನಿಯು ಕಂಡನು. ಸೂರ್ಯಾಂತರ್ಯಾಮಿಯಾದ ಪರಮಾತ್ಮನನ್ನು ಹೃದಯದಲ್ಲಿ ಕಂಡು ಉತ್ಕೃಷ್ಟವಾದ ಮಂದಹಾಸವನ್ನು ಬೀರಿದನು.

ಸ ಪುನರ್ಯೋಗಮಾಸ್ಥಾಯ ಮೋಕ್ಷಮಾರ್ಗೋಪಲಬ್ಧಯೇ ।
ಮಹಾಯೋಗೀಶ್ವರೋ ಭೂತ್ವಾ ಸೋಽತ್ಯಕ್ರಾಮದ್ ವಿಹಾಯಸಮ್ ॥

ಮೋಕ್ಷಮಾರ್ಗದ ಪ್ರಾಪ್ತಿಗಾಗಿ ಪುನಃ ಕಠಿಣವಾದ ಯೋಗವನ್ನು ಅವಲಂಬಿಸಿದ ಶುಕಮುನಿಯು ಮಹಾಯೋಗೀಶ್ವರನಾಗಿ ಆಕಾಶಮಾರ್ಗವನ್ನು ಅತಿಕ್ರಮಿಸಿದನು.

ತತಃ ಪ್ರದಕ್ಷಿಣಂ ಕೃತ್ವಾ ದೇವರ್ಷಿಂ ನಾರದಂ ತದಾ ।
ನಿವೇದಯಾಮಾಸ ತದಾ ಸ್ವಂ ಯೋಗಂ ಪರಮರ್ಷಯೇ ॥೭॥

ಆ ಸಮಯಕ್ಕೆ ಸರಿಯಾಗಿ ಆಗಮಿಸಿದ ನಾರದರಿಗೆ ಪ್ರದಕ್ಷಿಣೆ, ನಮಸ್ಕಾರಗಳನ್ನು ಮಾಡಿ ತನ್ನ ಯೋಗಸಿದ್ಧಿಯ ವಿಷಯವನ್ನು ತಿಳಿಸಿದನು.

ದೃಷ್ಟೋ ಮಾರ್ಗಃ ಪ್ರವರ್ತೋಽಸ್ಮಿ ಸಿದ್ಧಿ ತೇಽಸ್ತು ತಪೋಧನ ।
ತ್ವತ್‌ಪ್ರಸಾದಾದ್ ಗಮಿಷ್ಯಾಮಿ ಗತಿಮಿಷ್ಟಾಂ ಮಹಾದ್ಯುತೇ ॥೮॥

ತಪೋಧನರೇ, ಮಹಾಕಾಂತಿವಂತರೇ, ನಿಮಗೆ ಮಂಗಳವಾಗಲಿ. ನಿಮ್ಮ ಅನುಗ್ರಹದಿಂದ ಮೋಕ್ಷಮಾರ್ಗವು ಗೋಚರಿಸಿತು. ನಾನು ಅಲ್ಲಿಗೆ ತೆರಳುವವನಿದ್ದೇನೆ. ಮೋಕ್ಷಮಾರ್ಗವನ್ನು ಅನುಸರಿಸಿ ಅಲ್ಲಿಗೆ ಹೋಗುತ್ತೇನೆ.

ನಾರದೇನಾಭ್ಯನುಜ್ಞಾತಸ್ತತೋ ದ್ವೈಪಾಯನಾತ್ಮಜಃ ।
ಅಭಿವಾದ್ಯ ಪುನರ್ಯೋಗಮಾಸ್ಥಾಯಾಕಾಶಮಾವಿಶತ್ ॥೯॥

ಶುಕಮುನಿಯು ನಾರದರ ಬಳಿ ಹೀಗೆ ಹೇಳಿ, ಅನುಮತಿಯನ್ನು ಪಡೆದು, ಪುನಃ ಅವರಿಗೆ ನಮಸ್ಕಾರ ಮಾಡಿ ಯೋಗಮಾರ್ಗದಿಂದ ಅಂತರಿಕ್ಷವನ್ನು ಪ್ರವೇಶಿಸಿದನು.

ಕೈಲಾಸಪೃಷ್ಠಾದುತ್ಪತ್ಯ ಸ ಪಪಾತ ದಿವಂ ತದಾ ।
ಅಂತರಿಕ್ಷಚರಃ ಶ್ರೀಮಾನ್ ವ್ಯಾಸಪುತ್ರಃ ಸುನಿಶ್ಚಿತಃ ॥೧೦॥

ಕೈಲಾಸಶಿಖರದಿಂದ ಮೇಲೆ ಹೋಗಿ ಆಕಾಶವನ್ನು ಸೇರಿದನು. ನಿಶ್ಚಯ ಜ್ಞಾನವನ್ನು ಹೊಂದಿರುವ ಜ್ಞಾನಿಯಾದ ಶುಕನು ವಾಯುರೂಪದಿಂದ ಆಕಾಶದಲ್ಲಿ ಸಂಚರಿಸಿದನು. ಮನೋವೇಗ, ವಾಯುವೇಗಕ್ಕೆ ಸಮಾನವಾದ ವೇಗದಿಂದ ಕೂಡಿದ ದ್ವಿಜಶ್ರೇಷ್ಠನಾದ ಶುಕಮುನಿಯು ಊರ್ಧ್ವಲೋಕಕ್ಕೆ ಹೋಗುತ್ತಿರುವುದನ್ನು ಸಕಲ ಪ್ರಾಣಿಗಳು ನೋಡಿದವು.

ತಮುದ್ಯಂತಂ ದ್ವಿಜಶ್ರೇಷ್ಠಂ ವೈನತೇಯಸಮದ್ಯುತಿಮ್ ।
ದದೃಶುಃ ಸರ್ವಭೂತಾನಿ ಮನೋಮಾರುತರಂಹಸಮ್ ॥೧೧॥

ವ್ಯವಸಾಯೇನ ಲೋಕಾಂಸ್ತ್ರೀನ್ ಸರ್ವಾನ್ ಸೋಽಥ ವಿಚಿಂತಯನ್ ।
ಆಸ್ಥಿತೋ ದಿವ್ಯಮಧ್ವಾನಂ ಪಾವಕಾರ್ಕಸಮಪ್ರಭಃ ॥೧೨॥

ಸೂರ್ಯಾಗ್ನಿಗಳ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ ಶುಕಮುನಿಯು ನಿಶ್ಚಯಜ್ಞಾನದಿಂದ ಮೂರುಲೋಕಗಳನ್ನು, ಅದರ ಅಂತರ್ಯಾಮಿಯಾದ ಪರಮಾತ್ಮನನ್ನು ಕಾಣುತ್ತಾ, ಬಹಳ ದೂರ ಪ್ರಯಾಣ ಮಾಡಿದನು.

ತಮೇಕಮನಸಂ ಯಾಂತಮವ್ಯಗ್ರಮಕುತೋಭಯಮ್ ।
ದದೃಶುಃ ಸರ್ವಭೂತಾನಿ ಜಂಗಮಾನೀತರಾಣಿ ಚ ॥೧೩॥

ಭಗವನ್ನಿಷ್ಠವಾದ ಬುದ್ಧಿಯಿಂದ ಅವ್ಯಗ್ರನಾಗಿ, ಭಯರಹಿತನಾಗಿ ಸಾಗುತ್ತಿರುವ ಶುಕಮುನಿಯನ್ನು ಸ್ಥಾವರ-ಜಂಗಮಾದಿ ಸಮಸ್ತ ಪ್ರಾಣಿಗಳು ನೋಡಿದವು.

ಯಥಾಶಕ್ತಿ ಯಥಾನ್ಯಾಯಂ ಪೂಜಯಾಂ ಚಕ್ರಿರೇ ತದಾ ।
ಪುಷ್ಪವರ್ಷೈಶ್ಚ ದಿವ್ಯೈಸ್ತಮವಚಕ್ರುರ್ದಿವೌಕಸಃ ॥೧೪॥

ಎಲ್ಲ ಪ್ರಾಣಿಗಳು ತಮ್ಮ ಯೋಗ್ಯತೆಗನುಗುಣವಾಗಿ ಅವರನ್ನು ಪೂಜಿಸಿದವು. ದೇವತೆಗಳು ಪುಷ್ಪವೃಷ್ಟಿಯಿಂದ ಶುಕರನ್ನು ಪೂಜಿಸಿದರು.

ತಂ ದೃಷ್ಟ್ವಾ ವಿಸ್ಮಿತಾಃ ಸರ್ವೇ ಗಂಧರ್ವಾಪ್ಸರಸಾಂ ಗಣಾಃ ।
ಋಷಯಶ್ಚೈವ ಸಂಸಿದ್ಧಾಃ ಪರಂ ವಿಸ್ಮಯಮಾಗತಾಃ ॥೧೫॥

ಊರ್ಧ್ವಲೋಕಕ್ಕೆ ತೆರಳುತ್ತಿರುವ ಶುಕಮುನಿಯನ್ನು ಕಂಡು ಗಂಧರ್ವರು, ಅಪ್ಸರೆಯರು, ಋಷಿಗಳು, ಸಿದ್ಧರು - ಇವರೆಲ್ಲರ ಸಮುದಾಯವು ಅತ್ಯಂತ ಆಶ್ಚರ್ಯವನ್ನು ಹೊಂದಿತು.

ಅಂತರಿಕ್ಷಚರಃ ಕೋಽಯಂ ತಪಸಾ ಸಿದ್ಧಿಮಾಗತಃ ।
ಅಧಃಕಾಯೋರ್ಧ್ವವಕ್ತ್ರಶ್ಚ ನೇತ್ರೈಃ ಸಮಭಿವಾಹ್ಯತೇ ॥೧೬॥

ಅಂತರಿಕ್ಷಮಾರ್ಗದಲ್ಲಿ ಸಾಗುತ್ತಿರುವ, ತಪಸ್ಸಿನಿಂದ ಸಿದ್ಧಿಯನ್ನು ಹೊಂದಿರುವ ಇವನು ಯಾರು? ಇವನ ಶರೀರವು ಕೆಳಗಿದೆ, ಮುಖವು ಮೇಲ್ಮುಖವಾಗಿದೆ. ನಮ್ಮ ಕಣ್ಣುಗಳನ್ನು ಬಲಾತ್ಕಾರವಾಗಿ ಸೆಳೆಯುತ್ತಿದ್ದಾನೆ ಎಂದು ಮಾತನಾಡಿಕೊಂಡರು.

ತತಃ ಪರಮಧೀರಾತ್ಮಾ ತ್ರಿಷು ಲೋಕೇಷು ವಿಶ್ರುತಃ ।
ಭಾಸ್ಕರಂ ಸಮುದೀಕ್ಷನ್ ಸ ಪ್ರಾಙ್ಮುಖೋ ವಾಗ್ಯತೋಽಗಮತ್ ।
ಶಬ್ದೇನಾಕಾಶಮಖಿಲಂ ಪೂರಯನ್ನಿವ ಸರ್ವತಃ ॥೧೭॥

ಬಳಿಕ ಅತ್ಯಂತ ಜ್ಞಾನಿಯಾದ ಶುಕಮುನಿಯು ಮೂರುಲೋಕಗಳಲ್ಲಿ ಪ್ರಸಿದ್ಧನಾದನು. ಜಿತೇಂದ್ರಿಯನಾಗಿ, ಮೌನಿಯಾಗಿ, ಪೂರ್ವದಿಕ್ಕಿಗೆ ಅಭಿಮುಖವಾಗಿ ಸಾಗುತ್ತಾ ಸೂರ್ಯದೇವನನ್ನು ನೋಡಿದನು. ತನ್ನ ಗತಿಯಿಂದುಂಟಾದ ಶಬ್ದದಿಂದ ಆಕಾಶವನ್ನೇ ತುಂಬುತ್ತಿದ್ದಾನೋ ಎಂಬಂತೆ ಕಾಣಿಸುತ್ತಿದ್ದನು.

ತಮಾಪತಂತಂ ಸಹಸಾ ದೃಷ್ಟ್ವಾ ಸರ್ವಾಪ್ಸರೋಗಣಾಃ ।
ಸಂಭ್ರಾಂತಮನಸೋ ರಾಜನ್ನಾಸನ್ ಪರಮವಿಸ್ಮಿತಾಃ ।
ಪಂಚಚೂಡಾಪ್ರಭೃತಯೋ ಭೃಶಮುತ್ಫುಲ್ಲಲೋಚನಾಃ ॥೧೮॥

ರಭಸದಿಂದ ಆಗಮಿಸುತ್ತಿರುವ ಶುಕಮುನಿಯನ್ನು ಅಪ್ಸರಾಸ್ತ್ರೀಯರು ಸಂಭ್ರಾಂತವಾದ ಮನಸ್ಸಿನಿಂದ ನೋಡಿ ಆಶ್ಚರ್ಯವನ್ನು ಹೊಂದಿದರು. ಪಂಚಚೂಡರೇ ಮೊದಲಾದ ಅಪ್ಸರೆಯರು ಅರಳಿದ ಕಣ್ಣುಗಳಿಂದ ಶುಕನನ್ನು ನೋಡುತ್ತಾ ಹೀಗೆ ಮಾತನಾಡಿಕೊಂಡರು.

ದೈವತಂ ಕತಮಂ ಹ್ಯೇತದುತ್ತಮಾಂ ಗತಿಮಾಸ್ಥಿತಮ್ ।
ಸುನಿಶ್ಚಿತಮಿಹಾಯಾತಿ ವಿಮುಕ್ತಮಿವ ನಿಃಸ್ಪೃಹಮ್ ॥೧೯॥

ಯಾವ ದೇವತಾ ಶಕ್ತಿಯಿಂದ ಈ ಗತಿಯನ್ನು ಆಶ್ರಯಿಸಿ ಈ ವ್ಯಕ್ತಿಯು ಇಲ್ಲಿ ಬರುತ್ತಿದ್ದಾನೆ? ನಿಶ್ಚಯವಾದ ಜ್ಞಾನದಿಂದ ಕೂಡಿಕೊಂಡು ಎಲ್ಲ ವಿಧವಾದ ಬಂಧನದಿಂದ, ಸಂಶಯದಿಂದ ಮುಕ್ತನಾಗಿರುವಂತೆ ಕಾಣಿಸುತ್ತಿದ್ದಾನೆ. ಆಸೆಯನ್ನು ತೊರೆದವನಾಗಿ ಕಾಣಿಸುತ್ತಿದ್ದಾನೆ.

ತತಃ ಸಮತಿಚಕ್ರಾಮ ಮಲಯಂ ನಾಮ ಪರ್ವತಮ್ ।
ಊರ್ವಶೀ ಪೂರ್ವಚಿತ್ತಿಶ್ಚ ಯಂ ನಿತ್ಯಮುಪಸೇವತೇ ।
ತೇ ಸ್ಮ ಬ್ರಹ್ಮರ್ಷಿಪುತ್ರಸ್ಯ ವಿಸ್ಮಯಂ ಯಯತುಃ ಪರಮ್ ॥೨೦॥

ಬಳಿಕ ಶುಕಮುನಿಯು ಸ್ವಲ್ಪಸಮಯದಲ್ಲಿಯೇ ಆಕಾಶಮಾರ್ಗದಲ್ಲಿ ಸಂಚರಿಸುತ್ತಾ ಊರ್ವಶಿ, ಪೂರ್ವಚಿತ್ತಿ ಎಂಬ ಅಪ್ಸರೆಯರು ಆಶ್ರಯಿಸಿರುವ ಮಲಯ ಎಂಬ ಪರ್ವತದ ಕಡೆಗೆ ತೆರಳಿದನು. ಬ್ರಹ್ಮರ್ಷಿಪುತ್ರನಾದ ಶುಕನ ಆಗಮನವನ್ನು ಕಂಡ ಊರ್ವಶಿ, ಪೂರ್ವಚಿತ್ತಿಯರು ವಿಸ್ಮಿತರಾಗಿ ತಮ್ಮಲ್ಲಿಯೇ ಹೀಗೆ ಮಾತನಾಡಿದರು.

ಅಹೋ ಬುದ್ಧಿಸಮಾಧಾನಂ ವೇದಾಭ್ಯಾಸರತೇ ದ್ವಿಜೇ ।
ಅಚಿರೇಣೈವ ಕಾಲೇನ ನಭಶ್ಚರತಿ ಚಂದ್ರವತ್ ।
ಪಿತೃಶುಶ್ರೂಷಯಾ ಸಿದ್ಧಿಂ ಸಂಪ್ರಾಪ್ತೋಽಯಮನುತ್ತಮಾಮ್ ॥೨೧॥

ಆಶ್ಚರ್ಯವು! ವೇದಾಭ್ಯಾಸ ನಿರತನಾದ ಬ್ರಾಹ್ಮಣನಲ್ಲಿ ಎಂತಹ ಏಕಾಗ್ರಬುದ್ಧಿ ಇದೆ. ಅನುತ್ತಮವಾದ ಸಿದ್ಧಿಯನ್ನು ತಂದೆಯ ಸೇವೆಯಿಂದಲೇ ಪಡೆದುಕೊಂಡ ಈತನು ಸ್ವಲ್ಪಸಮಯದಲ್ಲಿಯೇ ಚಂದ್ರನಂತೆ ಈ ಆಕಾಶದಲ್ಲಿ ಸಂಚರಿಸುತ್ತಿದ್ದಾನೆ.

ಪಿತೃಭಕ್ತೋ ದೃಢತಪಾಃ ಪಿತುಃ ಸುದಯಿತಃ ಸುತಃ ।
ಅನನ್ಯಮನಸಾ ತೇನ ಕಥಂ ಪಿತ್ರಾ ವಿವರ್ಜಿತಃ ॥೨೨॥

ಇವನು ತಂದೆಯಲ್ಲಿ ಭಕ್ತಿಯುಳ್ಳವನು, ದೃಢತಪಸ್ವಿಯು, ತಂದೆಗೆ ಅತ್ಯಂತ ಪ್ರೀತಿಪಾತ್ರನಾದ ಮಗನು. ಅತ್ಯಂತ ಮಮತೆಯುಳ್ಳ ವ್ಯಾಸಮುನಿಯು ಇಂತಹ ಮಗನನ್ನು ಹೇಗೆ ಬಿಟ್ಟುಕೊಟ್ಟನು?

ಊರ್ವಶ್ಯಾ ವಚನಂ ಶ್ರುತ್ವಾ ಶುಕಃ ಪರಮಧರ್ಮವಿತ್ ।
ಉದೈಕ್ಷತ ದಿಶಃ ಸರ್ವಾ ವಚನೇ ಗತಮಾನಸಃ ॥೨೩॥

ಯುಧಿಷ್ಠಿರನೇ, ಪರಮಧಾರ್ಮಿಕನಾದ ಶುಕಮುನಿಯು ಊರ್ವಶಿಯು ಹೇಳಿದ ಮಾತನ್ನು ಕೇಳಿಸಿಕೊಂಡು, ಎಲ್ಲ ದಿಕ್ಕುಗಳನ್ನು ನೋಡಿದನು. ಅವನ ಮನಸ್ಸು ಊರ್ವಶಿಯ ಮಾತಿನಲ್ಲಿ ಆಸಕ್ತವಾಗಿತ್ತು.

ಸೋಽಂತರಿಕ್ಷಂ ಮಹೀಂ ಚೈವ ಸಶೈಲವನಕಾನನಾಮ್ ।
ಆಲೋಕಯಾಮಾಸ ತದಾ ಸರಾಂಸಿ ಸರಿತಸ್ತಥಾ ॥೨೪॥

ಶುಕಮುನಿಯು ಆಕಾಶ, ಪರ್ವತ, ಶೈಲ, ವನ, ಕಾಡುಗಳಿಂದ ಕೂಡಿರುವ ಭೂಮಂಡಲ, ಸರೋವರ, ನದಿಗಳು ಈ ಎಲ್ಲಕಡೆಯೂ ದೃಷ್ಟಿಯನ್ನು ಪಸರಿಸಿದನು.

ತತೋ ದ್ವೈಪಾಯನಸುತಂ ಬಹುಮಾನಪುರಃಸರಮ್ ।
ಕೃತಾಂಜಲಿಪುಟಾಃ ಸರ್ವಾ ನಿರೀಕ್ಷಂತೇ ಸ್ಮ ದೇವತಾಃ ॥೨೫॥

ಕೃಷ್ಣದ್ವೈಪಾಯನರ ಮಗನಾದ ಶುಕಮುನಿಯನ್ನು ಅತ್ಯಂತ ಆದರದಿಂದ ಕೈಮುಗಿದು, ಸಮಸ್ತ ಗಿರಿ-ಕಾನನ ಅಭಿಮಾನಿದೇವತೆಗಳು ನಿರೀಕ್ಷಿಸುತ್ತಿದ್ದರು.

ಅಬ್ರವೀತ್ತಾಸ್ತದಾ ವಾಕ್ಯಂ ಶುಕಃ ಪರಮಧರ್ಮವಿತ್ ।
ಪಿತಾ ಯದ್ಯನುಗಚ್ಛೇನ್ಮಾಂ ಕ್ರೋಶಮಾನಃ ಶುಕೇತಿ ವೈ ॥೨೬॥

ಪರಮಧಾರ್ಮಿಕನಾದ ಶುಕನು ತನ್ನನ್ನು ಪ್ರೀತಿ-ಆದರದಿಂದ, ಬಹುಮಾನದಿಂದ ನೋಡುತ್ತಿರುವ ಗಿರಿ-ಪರ್ವತ-ಸರಿತ್ತುಗಳ ಅಧಿದೇವತೆಗಳನ್ನು ಕುರಿತು ಹೀಗೆ ಹೇಳಿದನು.

ತತಃ ಪ್ರತಿವಚೋ ದೇಯಂ ಸರ್ವೈರೇವ ಸಮಾಹಿತೈಃ ।
ಏತನ್ಮೇ ಸ್ನೇಹತಃ ಸರ್ವೇ ವಚನಂ ಕರ್ತುಮರ್ಹಥ ॥೨೭॥

ದೇವತೆಗಳೇ, ನಮ್ಮ ತಂದೆ ಏನಾದರೂ ಶುಕ-ಶುಕ ಎಂದು ಕೂಗಿದರೆ, ಇಲ್ಲಿಗೆ ಆಗಮಿಸಿದರೆ ನೀವೆಲ್ಲ ಒಟ್ಟಾಗಿ ಸಮಾಧಾನದ ಮಾತನ್ನು ನನ್ನ ತಂದೆಗೆ ಹೇಳಬೇಕು. ನನ್ನಲ್ಲಿರುವ ಸ್ನೇಹದಿಂದ ನೀವೆಲ್ಲ ಈ ನನ್ನ ಮಾತನ್ನು ನಡೆಸಿಕೊಡಬೇಕು.

ಶುಕಸ್ಯ ವಚನಂ ಶ್ರುತ್ವಾ ದಿಶಃ ಸವನಕಾನನಾಃ ।
ಸಮುದ್ರಾಃ ಸರಿತಃ ಶೈಲಾಃ ಪ್ರತ್ಯೂಚುಸ್ತಂ ಸಮಂತತಃ ॥೨೮॥

ಶುಕನ ಮಾತನ್ನು ಕೇಳಿದ ಸಮಸ್ತ ದಿಕ್ಕು, ಕಾನನ, ನದಿ, ಪರ್ವತ, ಸಮುದ್ರ ಮೊದಲಾದ ಅಭಿಮಾನಿದೇವತೆಗಳು ಸುತ್ತಲೂ ನಿಂತು ಹೀಗೆ ಉತ್ತರಿಸಿದರು.

ಯಥಾಜ್ಞಾಪಯಸೇ ವಿಪ್ರ ಬಾಢಮೇವಂ ಭವಿಷ್ಯತಿ ।
ಋಷೇರ್ವ್ಯಾಹರತೋ ವಾಕ್ಯಂ ಪ್ರತಿವಕ್ಷ್ಯಾಮಹೇ ವಯಮ್ ॥೨೯॥

ಬ್ರಾಹ್ಮಣನೇ, ಯಾವ ರೀತಿ ನೀನು ಆದೇಶಿಸುತ್ತೀಯೋ ಅದರಂತೆ ನಡೆಯುತ್ತೇವೆ. ವ್ಯಾಸಮುನಿಯು ಇಲ್ಲಿಗೆ ಆಗಮಿಸಿ ನಿನ್ನ ಬಗ್ಗೆ ಪ್ರಶ್ನಿಸಿದಾಗ ನೀನು ಹೇಳಿದಂತೆ ಹಿತವೂ, ಪ್ರಿಯವೂ ಆದ ಮಾತನ್ನೇ ಅವನ ಬಳಿ ಹೇಳುತ್ತೇವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚತುಃಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೈದನೆಯ ಅಧ್ಯಾಯ

ಶುಕಮುನಿಯ ವೃತ್ತಾಂತ. ವ್ಯಾಸರಿಗೆ ಮಹದೇವನ ಉತ್ತರ.

ಭೀಷ್ಮಃ

ಇತ್ಯೇವಮುಕ್ತ್ವಾ ವಚನಂ ಬ್ರಹ್ಮರ್ಷಿಃ ಸುಮಹಾತಪಾಃ ।
ಪ್ರಾತಿಷ್ಠತ ಶುಕಃ ಸಿದ್ಧಿಂ ಹಿತ್ವಾ ಲೋಕಾಂಶ್ಚತುರ್ವಿಧಾನ್ ॥೧॥

ಭೀಷ್ಮ– ಯುಧಿಷ್ಠಿರನೇ, ಮಹಾತಪಸ್ವಿಯಾದ, ಬ್ರಹ್ಮರ್ಷಿಯಾದ ಶುಕಮುನಿಯು ಸಮಸ್ತ ಪ್ರಕೃತಿ ದೇವತೆಗಳ ಬಳಿ ಹೀಗೆ ಹೇಳಿ, ಸಿದ್ಧಿಯನ್ನು ಹೊಂದಲು ಧರ್ಮಾರ್ಥ ಕಾಮ ಮೋಕ್ಷಗಳೆಂಬ ಜಗತ್ತನ್ನೂ ತೊರೆದು ತೆರಳಿದನು.

ತಮೋ ಹ್ಯಷ್ಟವಿಧಂ ಹಿತ್ವಾ ಜಹೌ ಪಂಚವಿಧಂ ರಜಃ ।
ತತಃ ಸತ್ತ್ವಂ ಜಹೌ ಧೀಮಾಂಸ್ತದದ್ಭುತಮಿವಾಭವತ್ ॥೨॥

ಎಂಟು ವಿಧವಾದ ತಮೋಗುಣಗಳನ್ನು, ಐದು ವಿಧವಾದ ರಜೋಗುಣಗಳನ್ನು ತ್ಯಜಿಸಿ, ಅನಂತರ ಸತ್ತ್ವಗುಣವನ್ನೂ ತ್ಯಜಿಸಿ ಮುಂದೆ ತೆರಳಿದನು. ಅವನ ಈ ವ್ಯಕ್ತಿತ್ವವು ಪರಮಾದ್ಭುತವಾಗಿತ್ತು.

ವ್ಯಾಖ್ಯಾನ ವಿಶೇಷ– ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಎಂಬಲ್ಲಿನ ದೋಷಗಳನ್ನು ಪರಿಹರಿಸಿಕೊಂಡನು ಎಂದು ಕೆಲವರು ನಾಲ್ಕು ವಿಧ ಲೋಕಗಳನ್ನು ಬಿಟ್ಟನು ಎಂಬುದಕ್ಕೆ ವ್ಯಾಖ್ಯಾನ ಮಾಡಿದ್ದಾರೆ. ಭೂತ, ಇಂದ್ರಿಯ, ಮನಸ್ಸು, ಬುದ್ಧಿ ಪ್ರಾಣ, ಕರ್ಮ, ವಾಸನೆ, ಅವಿದ್ಯೆ- ಎಂದು ಎಂಟು ವಿಧವಾದ ತಮಸ್ಸನ್ನು, ವಿಷಯಪ್ರವೃತ್ತಿಗೆ ಸಂಬಂಧಿಸಿದ ಐದು ವಿಧವಾದ ರಜಸ್ಸನ್ನು ತೊರೆದು ತೆರಳಿದನು ಎಂದು ಕೆಲವರು ವ್ಯಾಖ್ಯಾನಿಸಿರುತ್ತಾರೆ.

ತತಸ್ತಸ್ಮಿನ್ ಪದೇ ನಿತ್ಯೇ ನಿರ್ಗುಣೇ ಲಿಂಗವರ್ಜಿತೇ ।
ಬ್ರಹ್ಮಣಿ ಪ್ರತ್ಯತಿಷ್ಠತ್ ಸ ವಿಧೂಮೋಽಗ್ನಿರಿವ ಜ್ವಲನ್ ॥೩॥

ಅನಂತರ ಶುಕನು ಲಿಂಗದೇಹದ ಸಂಬಂಧವಿರದ, ಪ್ರಾಕೃತಗುಣರಹಿತವಾದ, ನಿತ್ಯನೆನಿಸಿದ, ಗುಣಪರಿಪೂರ್ಣನಾದ ಪರಬ್ರಹ್ಮನಲ್ಲಿಯೇ ಹೊಗೆ ಇಲ್ಲದ ಯಜ್ಞೇಶ್ವರನಂತೆ ಆಶ್ರಯವನ್ನು ಹೊಂದಿದನು.

ಉಲ್ಕಾಪಾತಾ ದಿಶಾಂ ದಾಹಾ ಭೂಮಿಕಂಪಾಸ್ತಥೈವ ಚ ।
ಪ್ರಾದುರ್ಭೂತಾಃ ಕ್ಷಣೇ ತಸ್ಮಿಂಸ್ತದದ್ಭುತಮಿವಾಭವತ್ ॥೪॥

ಎಲ್ಲ ಕಡೆಯೂ ಉಲ್ಕೆಗಳು ಬೀಳತೊಡಗಿದವು. ದಿಕ್ಕುಗಳಲ್ಲಿ ಅಗ್ನಿಯು ಪ್ರಜ್ವಲಿಸಿತು. ಭೂಮಿಯು ನಡುಗಲಾರಂಭಿಸಿತು. ಶುಕಮುನಿಯು ಬ್ರಹ್ಮಜ್ಞಾನ ಹೊಂದಿದ ಬಳಿಕ ಈ ಅದ್ಭುತಗಳು ನಡೆದವು.

ದ್ರುಮಾಃ ಶಾಖಾಶ್ಚ ಮುಮುಚುಃ ಶಿಖಿರಾಣಿ ಚ ಪರ್ವತಾಃ ।
ನಿರ್ಘಾತಶಬ್ದೈಶ್ಚ ಗಿರಿರ್ಹಿಮವಾನ್ ದೀರ್ಯತೀವ ಹ ॥೫॥

ನ ಬಭಾಸೇ ಸಹಸ್ರಾಂಶುರ್ನ ಜಜ್ವಾಲ ಚ ಪಾವಕಃ ।
ಹ್ರದಾಶ್ಚ ಸರಿತಶ್ಚೈವ ಚುಕ್ಷುಭುಃ ಸಾಗರಾಸ್ತಥಾ ॥೬॥

ವೃಕ್ಷಗಳು ಕೊಂಬೆಗಳಿಂದ ಕಳಚಿಬಿದ್ದವು. ಪರ್ವತಗಳು ಶಿಖರಗಳನ್ನು ಕಡಿದು ಕೊಂಡವು. ಶಬ್ದದಿಂದ ಹಿಮವತ್ ಪರ್ವತವು ಸೀಳಿಯೆ ಹೋಗುವಂತೆ ಕಾಣಿಸುತ್ತಿತ್ತು. ಸೂರ್ಯನು ಪ್ರಕಾಶಿಸುತ್ತಿರಲಿಲ್ಲ, ಅಗ್ನಿಯು ಜ್ವಲಿಸುತ್ತಿರಲಿಲ್ಲ. ನದಿ-ಸರೋವರ-ಸಮುದ್ರಗಳು ಕದಡಿಹೋದವು.

ವವರ್ಷ ವಾಸವಸ್ತೋಯಂ ರಸವಚ್ಚ ಸುಗಂಧಿ ಚ ।
ವವೌ ಸಮೀರಣಶ್ಚಾಪಿ ದಿವ್ಯಗಂಧವಹಃ ಶುಚಿಃ ॥೭॥

ಇಂದ್ರನು ರಸಮಯವಾದ, ಪರಿಮಳಭರಿತವಾದ ಮಳೆಯನ್ನು ಸುರಿಸಿದನು. ದಿವ್ಯಗಂಧವನ್ನು ಧರಿಸಿರುವ ವಾಯುದೇವನು ಬೀಸತೊಡಗಿದನು.

ಸ ಶೃಂಗೀಪ್ರತಿಮೇ ದಿವ್ಯೇ ಹಿಮವನ್ಮೇರುಸಂಭವೇ ।
ಸಂಶ್ಲಿಷ್ಟೇ ಶ್ವೇತಪೀತೇ ದ್ವೇ ರುಕ್ಮರೂಪ್ಯಮಯೇ ಶುಭೇ ॥೮॥

ಶುಕನು ಬ್ರಹ್ಮಜ್ಞಾನವನ್ನು ಆಶ್ರಯಿಸಿ ತೆರಳುತ್ತಿರುವಾಗ ಪರ್ವತದ ಎರಡು ಸುಂದರವಾದ ಶಿಖರಗಳನ್ನು ಕಂಡನು. ಪರಸ್ಪರ ಒಂದಕ್ಕೊಂದು ಅಂಟಿಕೊಂಡಿದ್ದವು. ಒಂದು ಹಿಮವತ್ ಪರ್ವತದ ಶಿಖರವು, ಮತ್ತೊಂದು ಮೇರುಪರ್ವತದ ಶಿಖರವು. ಹಿಮವತ್ ಪರ್ವತದ ಶಿಖರವು ರಜತರೂಪವಾಗಿಯೂ, ಮೇರುಪರ್ವತದ ಶಿಖರವು ಬಂಗಾರಮಯವಾಗಿಯೂ ಕಾಣಿಸುತ್ತಿತ್ತು.

ಶತಯೋಜನವಿಸ್ತಾರೇ ತಿರ್ಯಗೂರ್ಧ್ವಂ ಚ ಭಾರತ ।
ಉದೀಚೀಂ ದಿಶಮಾಶ್ರಿತ್ಯ ರುಚಿರೇ ಸಂದದರ್ಶ ಹ ॥೯॥

ಎರಡು ಶಿಖರಗಳ ಎತ್ತರ ಮತ್ತು ಅಗಲ-ಉದ್ದಗಳು ನೂರು-ನೂರು ಪ್ರಮಾಣಗಳ ಪರಿಮಿತಿಯಲ್ಲಿದ್ದವು. ಉತ್ತರಕ್ಕೆ ಸಾಗುತ್ತಿದ್ದ ಶುಕದೇವನು ಆ ದಿವ್ಯಶಿಖರಗಳನ್ನು ಕಂಡನು.

ಸೋಽವಿಶಂಕೇನ ಮನಸಾ ತಥೈವಾಭ್ಯಪತಚ್ಛುಕಃ ।
ತತಃ ಪರ್ವತಶೃಂಗೇ ದ್ವೇ ಸಹಸೈವ ದ್ವಿಧಾಕೃತೇ ।
ಅದೃಶ್ಯೇತಾಂ ಮಹಾರಾಜ ತದದ್ಭುತಮಿವಾಭವತ್ ॥೧೦॥

ತತಃ ಪರ್ವತಶೃಂಗಾಭ್ಯಾಂ ಸಹಸೈವ ವಿನಿಃಸೃತಃ ।
ನ ಚ ಪ್ರತಿಜಘಾನಾಸ್ಯ ಸ ಗತಿಂ ಪರ್ವತೋತ್ತಮಃ ॥೧೧॥

ಸಂಶಯವಿಲ್ಲದ ಮನಸ್ಸಿನಿಂದ ಆ ಶಿಖರಗಳನ್ನು ಏರತೊಡಗಿದನು. ಪರಸ್ಪರ ಅಂಟಿಕೊಂಡಿರುವ ಶಿಖರಗಳು ಶುಕನ ಸಮಾಗಮದಿಂದ ಎರಡು ಸೀಳಾಗಿ ಹೋದವು. ಆ ದೃಶ್ಯವು ಅದ್ಭುತವಾಗಿತ್ತು. ಆ ಶಿಖರಗಳ ನಡುವಿನಿಂದ ಶುಕಮುನಿಯು ಉದಿಸಿಬಂದನು. ಅವನನ್ನು ಹಿಮವತ್ ಪರ್ವತವು ಪುನಃ ತಡೆಯಲಿಲ್ಲ.

ತತೋ ಮಹಾನಭೂಚ್ಛಬ್ದೋ ದಿವಿ ಸರ್ವದಿವೌಕಸಾಮ್ ।
ಗಂಧರ್ವಾಣಾಮೃಷೀಣಾಂ ಚ ಯೇ ಚ ಶೈಲನಿವಾಸಿನಃ ॥೧೨॥

ಅದನ್ನು ಕಂಡು ದೇವತೆಗಳು, ಗಂಧರ್ವರು, ಋಷಿಗಳು, ಪರ್ವತದಲ್ಲಿರುವ ಸಮಸ್ತರು ಏಕಕಾಲದಲ್ಲಿ ಸಂತೋಷದ ಶಬ್ದವನ್ನು ಮಾಡಿದರು.

ದೃಷ್ಟ್ವಾ ಶುಕಮತಿಕ್ರಾಂತಂ ಪರ್ವತಂ ಚ ದ್ವಿಧಾಕೃತಮ್ ।
ಸಾಧು ಸಾಧ್ವಿತಿ ತತ್ರಾಸೀನ್ನಾದಃ ಸರ್ವತ್ರ ಭಾರತ ॥೧೩॥

ಆ ಶಿಖರಗಳನ್ನು ದಾಟಿ ಹೋಗುತ್ತಿರುವ ಶುಕಮುನಿಯ ಮಹತ್ವವನ್ನು, ಎರಡಾಗಿ ಸೀಳಿದ ಪರ್ವತದ ಸ್ಥಿತಿಯನ್ನು ಕಾಣುತ್ತಾ ಇರುವ ಅವರೆಲ್ಲರೂ 'ಸಾಧು-ಸಾಧು' ಎಂದು ಹೇಳುತ್ತಿರುವಾಗ ಆ ಶಬ್ದವು ಎಲ್ಲೆಡೆಯೂ ತುಂಬಿಹೋಯಿತು.

ಸ ಪೂಜ್ಯಮಾನೋ ದೇವೈಶ್ಚ ಗಂಧರ್ವೈರ್ಋಷಿಭಿಸ್ತಥಾ ।
ಯಕ್ಷರಾಕ್ಷಸಸಂಘೈಶ್ಚ ವಿದ್ಯಾಧರಗಣೈಸ್ತಥಾ ॥೧೪॥

ಆ ಶುಕಮುನಿಯು ಸಮಸ್ತ ದೇವತೆಗಳಿಂದ, ಗಂಧರ್ವರಿಂದ, ಋಷಿಗಳಿಂದ, ಯಕ್ಷ-ರಾಕ್ಷಸ-ವಿದ್ಯಾಧರ ಗಣಗಳಿಂದ ಪೂಜಿತನಾಗಿ ಸಾಗುತ್ತಿದ್ದನು.

ದಿವ್ಯೈಃ ಪುಷ್ಪೈಃ ಸಮಾಕೀರ್ಣಮಂತರಿಕ್ಷಂ ಸಮಂತತಃ ।
ಆಸೀತ್ ಕಿಲ ಮಹಾರಾಜ ಶುಕಾಭಿಪತನೇ ತದಾ ॥೧೫॥

ದೇವಲೋಕದ ಪುಷ್ಪಗಳಿಂದ ಶುಕಮುನಿಯು ಪೂಜಿತನಾಗುತ್ತಿರಲು ಆಕಾಶವೆಲ್ಲವೂ ಪುಷ್ಪದ ಸಮುದಾಯದಿಂದ ಶೋಭಿಸುತ್ತಿತ್ತು. ಶುಕಮುನಿಯು ಸಾಗುತ್ತಿರುವಾಗ ಇಂತಹ ಸುಂದರವಾದ ದೃಶ್ಯವು ಉಂಟಾಯಿತು.

ತತೋ ಮಂದಾಕಿನೀಂ ರಮ್ಯಾಮುಪರಿಷ್ಟಾದಭಿವ್ರಜನ್ ।
ಶುಕೋ ದದರ್ಶ ಧರ್ಮಾತ್ಮಾ ಪುಷ್ಪಿತದ್ರುಮಕಾನನಾಮ್ ॥೧೬॥

ಧರ್ಮಾತ್ಮನಾದ ಶುಕಮುನಿಯು ಮುಂದೆ ಸಾಗುತ್ತಿರಲು ಪುಷ್ಪವನ್ನು ಹೊಂದಿರುವ ವೃಕ್ಷಗಳಿರುವ ಅರಣ್ಯಗಳಿಂದ ಶೋಭಿತವಾದ ದೇವಗಂಗೆಯನ್ನು ಕಂಡನು.

ತಸ್ಯಾಂ ಕ್ರೀಡಂತ್ಯಭಿರತಾಃ ಸ್ನಾಂತಿ ಚೈವಾಪ್ಸರೋಗಣಾಃ ।
ಶೂನ್ಯಾಕಾರಂ ನಿರಾಕಾರಾಃ ಶುಕಂ ದೃಷ್ಟ್ವಾ ವಿವಾಸಸಃ ॥೧೭॥

ಆ ಮಂದಾಕಿನಿ ನದಿಯ ತೀರದಲ್ಲಿ ಅಪ್ಸರೆಯರ ಗುಂಪುಗಳು ಜಲಕ್ರೀಡೆ ಆಡುವುದರಲ್ಲಿ ನಿರತವಾಗಿದ್ದವು. ವಿಕಾರವಿಲ್ಲದ ಶುಕಮುನಿಯನ್ನು ಕಂಡು ವಸ್ತ್ರ ರಹಿತರಾದ ಅಪ್ಸರೆಯರು ಯಾವ ವಿಧವಾದ ವಿಕಾರವನ್ನೂ ಹೊಂದಲಿಲ್ಲ.

ತಂ ಪ್ರಕ್ರಮಂತಮಾಜ್ಞಾಯ ಪಿತಾ ಸ್ನೇಹಸಮನ್ವಿತಃ ।
ಉತ್ತಮಾಂ ಗತಿಮಾಸ್ಥಾಯ ಪೃಷ್ಠತೋಽನುಸಸಾರ ಹ ॥೧೮॥

ಶುಕಮುನಿಯು ಹೀಗೆ ಸಿದ್ಧಿಯನ್ನು ಪಡೆಯುವ ದೃಷ್ಟಿಯಿಂದ ಸೂರ್ಯಮಂಡಲದ ಕಡೆ ಹೋಗುವುದನ್ನು ತಿಳಿದ ವ್ಯಾಸಮುನಿಯು ಪುತ್ರವಾತ್ಸಲ್ಯದಿಂದ ಅವನ ಮಾರ್ಗವನ್ನೇ ಅನುಸರಿಸಿ ಆಗಮಿಸಿದನು.

ಶುಕಸ್ತು ಮಾರುತಾದೂರ್ಧ್ವಂ ಗತಿಂ ಕೃತ್ವಾಽಂತರಿಕ್ಷಗಾಮ್ ।
ದರ್ಶಯಿತ್ವಾ ಪ್ರಭಾವಂ ಸ್ವಂ ಸರ್ವಭೂತೋಽಭವತ್ತದಾ ॥೧೯॥

ಶುಕಮುನಿಯು ವಾಯುಮಂಡಲದಿಂದ ಮೇಲ್ಮುಖವಾದ ಅಂತರಿಕ್ಷ ಮಾರ್ಗವನ್ನು ಅನುಸರಿಸಿ, ತನ್ನ ಪ್ರಭಾವವನ್ನು ತೋರಿಸುತ್ತಾ ಭಗವನ್ನಿಷ್ಠವಾದ ಬುದ್ಧಿಯಿಂದ ಸಾಗುತ್ತಿದ್ದನು.

ಮಹಾಯೋಗಗತಿಂ ತ್ವಗ್ರ್ಯಾಂ ವ್ಯಾಸೋಽಸ್ಥಾಯ ಮಹಾತಪಾಃ ।
ನಿಮೇಷಾಂತರಮಾತ್ರೇಣ ಶುಕಾಭಿಪತನಂ ಯಯೌ ॥೨೦॥

ಮಹಾತಪಸ್ವಿಗಳಾದ ವ್ಯಾಸರು ಮತ್ತೊಂದು ಯೋಗವನ್ನು ಆಶ್ರಯಿಸಿ ನಿಮಿಷ ಮಾತ್ರದಲ್ಲಿ ಶುಕಮುನಿಯು ಸಾಗುತ್ತಿದ್ದ ಸ್ಥಳಕ್ಕೆ ತೆರಳಿದರು.

ಸ ದದರ್ಶ ದ್ವಿಧಾ ಕೃತ್ವಾ ಪರ್ವತಾಗ್ರಂ ಶುಕಂ ಗತಮ್ ।
ಶಶಂಸುರ್ಋಷಯಸ್ತಸ್ಮೈ ಕರ್ಮ ಪುತ್ರಸ್ಯ ತತ್ತದಾ ॥೨೧॥

ಒಟ್ಟಾಗಿರುವ ಶಿಖರಗಳು ಇಬ್ಭಾಗವಾಗಿರುವ ದೃಶ್ಯವನ್ನು ಕಂಡು, ಶುಕಮುನಿಯು ಹೊರಬಂದ ಸ್ಥಳವು ಇದು ಆದ್ದರಿಂದ ಶುಕಾಭಿಪತನ ಎಂಬ ಹೆಸರಿನಿಂದ ಋಷಿಗಳು

ಆ ಸ್ಥಳವನ್ನು ಪ್ರಸಿದ್ಧಿ ಮಾಡಿದ್ದರು. ಆ ಸ್ಥಳದಲ್ಲಿ ವ್ಯಾಸರು ಆಗಮಿಸಿದಾಗ ಋಷಿಗಳೆಲ್ಲರೂ ಬಂದು ಶುಕಮುನಿಯ ಮಹಿಮೆಯನ್ನು ಅವರ ಮುಂದೆ ಪ್ರಶಂಸಿಸಿದರು.

ತತಃ ಶುಕೇತಿ ದೀರ್ಘೇಣ ಶೈಕ್ಷೇಣಾಕ್ರಂದಿತಸ್ತದಾ ।
ಸ್ವಯಂ ಪಿತ್ರಾ ಸ್ವರೇಣೋಚ್ಚೈಸ್ತ್ರೀಲ್ಲೋಕಾನನುನಾದ್ಯ ವೈ ॥೨೨॥

ಆ ಸಮಯದಲ್ಲಿ ವ್ಯಾಸರು ವೇದಶಿಕ್ಷಾದಲ್ಲಿ ಹೇಳಿದಂತೆ ಉಚ್ಚಸ್ವರದಿಂದ 'ಶುಕಾ' ಎಂದು ಆಕ್ರಂದನ ಮಾಡಿದರು. ವ್ಯಾಸರು ಕರೆದ ಆ ಶಬ್ದವು ಮೂರುಲೋಕವನ್ನೇ ಕಂಪಿಸುವಂತೆ ಮಾಡಿತು.

ಶುಕಃ ಸರ್ವಗತೋ ಭೂತ್ವಾ ಸರ್ವಾತ್ಮಾ ಸರ್ವತೋಮುಖಃ ।
ಪ್ರತ್ಯಭಾಷತ ಧರ್ಮಾತ್ಮಾ ಭೋಃಶಬ್ದೇನಾನುನಾದಯನ್ ॥೨೩॥

ಆ ಎಲ್ಲೆಡೆಯೂ ಅಂತರ್ಯಾಮಿಯಾಗಿರುವ, ಸರ್ವತೋಮುಖನಾದ, ಧರ್ಮಾತ್ಮನಾದ ಶುಕಮುನಿಯು ಜಗತ್ತಿನ ಸಮಸ್ತ ಪದಾರ್ಥದಲ್ಲಿ ಸೇರಿಕೊಂಡು 'ಭೋಃ' ಎಂಬ ಶಬ್ದದಿಂದ ಉತ್ತರಿಸಿದನು. ಅವನ ಶಬ್ದವು ಪ್ರತಿಧ್ವನಿತವಾಯಿತು.

ತತ ಏಕಾಕ್ಷರಂ ನಾದಂ ಭೋ ಇತ್ಯೇವ ಸಮೀರಯನ್ ।
ಪ್ರತ್ಯಾಹರಜ್ಜಗತ್ ಸರ್ವಮುಚ್ಚೈಃ ಸ್ಥಾವರಜಂಗಮಮ್ ॥೨೪॥

ಶುಕನು ಹೇಳಿದ 'ಭೋಃ' ಎಂಬ ಏಕಾಕ್ಷರದ ಶಬ್ದವು ಪ್ರತಿಧ್ವನಿಸುತ್ತಾ ಸ್ಥಾವರ-ಜಂಗಮಾತ್ಮವಾದ ಪ್ರಪಂಚವನ್ನೇ ಜಾಗೃತಗೊಳಿಸಿ ವ್ಯಾಸರಿಗೆ ಪ್ರತ್ಯುತ್ತರಿಸಿತು.

ತತಃ ಪ್ರಭೃತಿ ಚಾದ್ಯಾಪಿ ಶಬ್ದಾನುಚ್ಚಾರಿತಾನ್ ಪೃಥಕ್ ।
ಗಿರಿಗಹ್ವರಪೃಷ್ಠೇಷು ವ್ಯಾಜಹಾರ ಶುಕಂ ಪ್ರತಿ ॥೨೫॥

ಅಂದಿನಿಂದ ಆರಂಭಿಸಿ ಇಂದಿನತನಕ ಪರ್ವತ ಶಿಖರಗಳಲ್ಲಿ, ಗುಹೆಗಳಲ್ಲಿ ಇರುವವರು ವ್ಯಾಸರು ಶುಕನನ್ನು ಕುರಿತು ಹೇಳಿದ ಶಬ್ದಗಳನ್ನು, ಶುಕನು ಪ್ರತ್ಯುತ್ತರವನ್ನು ನೀಡಿದ್ದನ್ನು ಅನುಸರಿಸಿ ಪ್ರತ್ಯೇಕವಾಗಿ ಹೇಳುತ್ತಿರುತ್ತಾರೆ.

ಅಂತರ್ಹಿತಃ ಪ್ರಭಾವಂ ತು ದರ್ಶಯಿತ್ವಾ ಶುಕಸ್ತದಾ ।
ಗುಣಾನ್ ಸಂತ್ಯಜ್ಯ ಶಬ್ದಾದೀನ್ ಪದಮಧ್ಯಗಮತ್ ಪರಮ್ ॥೨೬॥

ಶುಕನು ತನ್ನ ಪ್ರಭಾವದಿಂದ ಮರೆಮಾಚಿಕೊಂಡನು. ಶಬ್ದಾದಿಗಳನ್ನೂ ತ್ಯಜಿಸಿ ಭಗವಂತನ ಪಾದವನ್ನು ಸೇರಿದನು.

ಮಹಿಮಾನಂ ತು ತಂ ದೃಷ್ಟ್ವಾ ಪುತ್ರಸ್ಯಾಮಿತತೇಜಸಃ ।
ನಿಷಸಾದ ಗಿರಿಪ್ರಸ್ಥೇ ಪುತ್ರಮೇವಾನುಚಿಂತಯನ್ ॥೨೭॥

ಮಹಾತೇಜಸ್ವಿಯಾದ ಶುಕಮುನಿಯ ಮಹಿಮೆಯನ್ನು ಕಂಡ ವ್ಯಾಸರು ಮಗನನ್ನೇ ಯೋಚಿಸುತ್ತಾ ಹಿಮವತ್ ಪರ್ವತದ ಶಿಖರದಲ್ಲಿ ಕುಳಿತುಕೊಂಡರು.

ತತೋ ಮಂದಾಕಿನೀತೀರೇ ಕ್ರೀಡಂತೋऽಪ್ಸರಸಾಂ ಗಣಾಃ ।
ಆಸಾದ್ಯ ತಮೃಷಿಂ ಸರ್ವಾಃ ಸಂಭ್ರಾಂತಾ ಗತಚೇತಸಃ ॥೨೮॥

ಬಳಿಕ ಮಂದಾಕಿನಿ ನದಿಯ ತೀರದಲ್ಲಿ ವಸ್ತ್ರರಹಿತರಾಗಿ ಜಲಕ್ರೀಡೆಯನ್ನಾಡುತ್ತಿದ್ದ ಅಪ್ಸರಾಸ್ತ್ರೀಯರು ವ್ಯಾಸರು ಸಮೀಪದಲ್ಲಿರುವ ಪರ್ವತ ಶಿಖರದಲ್ಲಿ ಕುಳಿತಿರುವುದನ್ನು ನೋಡಿ ಭ್ರಾಂತರಾದರು, ಕಳವಳಗೊಂಡರು.

ಜಲೇ ನಿಲಿಲ್ಯಿರೇ ಕಾಶ್ಚಿತ್ ಕಾಶ್ಚಿದ್ ಗುಲ್ಮಾನ್ ಪ್ರಪೇದಿರೇ ।
ವಸನಾನ್ಯಾದದುಃ ಕಾಶ್ಚಿತ್ ದೃಷ್ಟ್ವಾ ತಂ ಮುನಿಸತ್ತಮಮ್ ॥೨೯॥

ಕೆಲವರು ನೀರಿನಲ್ಲಿಯೇ ಅಡಗಿ ಕುಳಿತರು. ಕೆಲವರು ಪೊದೆಗಳಲ್ಲಿ ಅವಿತು ಕುಳಿತರು. ಇನ್ನು ಕೆಲವರು ವ್ಯಾಸರನ್ನು ನೋಡುತ್ತಲೇ ವಸ್ತ್ರಗಳನ್ನು ಧರಿಸಲಾರಂಭಿಸಿದರು.

ತಾಂ ಮುಕ್ತತಾಂ ತು ವಿಜ್ಞಾಯ ಮುನಿಃ ಪುತ್ರಸ್ಯ ವೈ ತದಾ ।
ಸಕ್ತತಾಮಾತ್ಮನಶ್ಚೈವ ಪ್ರೀತೋಭೂದ್ವ್ರೀಡಿತಶ್ಚ ಹ ॥೩೦॥

ಹಿಂದೆ ಅದೇ ಸ್ಥಳದಲ್ಲಿ ಶುಕಮುನಿಯು ಆಗಮಿಸಿದಾಗ ಅಪ್ಸರೆಯರು ಶುಕಮುನಿಯ ವಿಷಯದಲ್ಲಿ ನಿರ್ಲಕ್ಷ್ಯದಿಂದಿರುವುದನ್ನು, ತನ್ನನ್ನು ಕಂಡು

ಕಳವಳಗೊಂಡಿರುವುದನ್ನು ತಿಳಿದಿರುವ ವ್ಯಾಸರು ಶುಕಮುನಿಯು ವಿರಕ್ತನು ಎಂದು ಕಂಡು ಅವನಲ್ಲಿ ಪ್ರೀತರಾದರು. ತಮ್ಮಲ್ಲಿರುವ ಆಸಕ್ತಿಯನ್ನು ಕಂಡು ನಾಚಿದರು.

ವ್ಯಾಖ್ಯಾನ ವಿಶೇಷ– ವೇದವ್ಯಾಸರು ನಿರ್ವಿಕಾರನಾದ ಭಗವಂತನೇ ಆಗಿದ್ದರೂ ಭಗವತ್ತತ್ತ್ವದಿಂದ ಶುಕಮುನಿಯು ಹೊಂದಿದ ವೈರಾಗ್ಯವನ್ನು ಸೂಚಿಸಲು ನಾಚಿಕೆಗೊಂಡವರಂತೆ ತೋರಿಸಿಕೊಂಡರು ಎಂದು ಭಾವ.

ತಂ ದೇವಗಂಧರ್ವವೃತೋ ಮಹರ್ಷಿಗಣಪೂಜಿತಃ ।
ಪಿನಾಕಹಸ್ತೋ ಭಗವಾನಭ್ಯಾಗಚ್ಛತ ಶಂಕರಃ ॥೩೧॥

ಇದೇ ಸಮಯಕ್ಕೆ ಸರಿಯಾಗಿ ದೇವ-ಗಂಧರ್ವರಿಂದ ಆವೃತನಾಗಿದ್ದ, ಮಹರ್ಷಿಗಳಿಂದ ಪೂಜಿಸಲ್ಪಡುವ, ಪಿನಾಕಧಾರಿಯಾದ ಶಂಕರನು ಅಲ್ಲಿಗೆ ಆಗಮಿಸಿದನು.

ತಮುವಾಚ ಮಹಾದೇವಃ ಸಾಂತ್ವಪೂರ್ವಮಿದಂ ವಚಃ ।
ಪುತ್ರಶೋಕಾಭಿಸಂತಪ್ತಂ ಕೃಷ್ಣದ್ವೈಪಾಯನಂ ತದಾ ॥೩೨॥

ಪುತ್ರಶೋಕದಿಂದ ದುಃಖಿತರಾದ ವ್ಯಾಸರನ್ನು ಸಮಾಧಾನಪಡಿಸುತ್ತಾ ಮಹರುದ್ರನು ಹೀಗೆ ಹೇಳಿದನು.

ಅಗ್ನೇರ್ಭೂಮೇರಪಾಂ ವಾಯೋರಂತರಿಕ್ಷಸ್ಯ ಚೈವ ಹ ।
ವೀರ್ಯೇಣ ಸದೃಶಃ ಪುತ್ರಸ್ತ್ವಯಾ ಮತ್ತಃ ಪುರಾ ವೃತಃ ॥೩೩॥

'ಮಹರ್ಷಿಯೇ, ಹಿಂದೆ ನೀನು ನನ್ನನ್ನು ಕುರಿತು ತಪಸ್ಸು ಮಾಡಿ ಅಗ್ನಿ, ಭೂಮಿ, ನೀರು, ವಾಯು, ಅಂತರಿಕ್ಷ - ಈ ಪಂಚಮಹಾಭೂತ ಶಕ್ತಿಗೆ ಸಮಾನನಾಗಿರುವ ಪುತ್ರನನ್ನು ದಯಪಾಲಿಸೆಂದು ವರವನ್ನು ಬೇಡಿರುವಿ.

ಸ ತಥಾಲಕ್ಷಣೋ ಜಾತಸ್ತಪಸಾ ತವ ಸಂಭೃತಃ ।
ಮಮ ಚೈವ ಪ್ರಭಾವೇನ ಬ್ರಹ್ಮತೇಜೋಮಯಃ ಶುಚಿಃ ॥೩೪॥

ನಿನ್ನ ತಪಸ್ಸಿನ ಪ್ರಭಾವದಿಂದ, ನನ್ನ ಅನುಗ್ರಹದಿಂದ ಅಂತಹ ಬ್ರಹ್ಮತೇಜಸ್ಸಿನಿಂದ ಕೂಡಿರುವ ಪರಮಪವಿತ್ರನಾದ ಮಗನೇ ನಿನಗೆ ಹುಟ್ಟಿರುವನು.

ಸ ಗತಿಂ ಪರಮಾಂ ಪ್ರಾಪ್ತೋ ದುಷ್ಪ್ರಾಪಾಮಜಿತೇಂದ್ರಿಯೈಃ ।
ದೈವತೈರಪಿ ವಿಪ್ರರ್ಷೇ ತಂ ತ್ವಂ ಕಿಮನುಶೋಚಸಿ ॥೩೫॥

ವಿಪ್ರರ್ಷಿಯೇ, ಅಜಿತೇಂದ್ರಿಯರಾದ ಮನುಷ್ಯರಿಂದ, ದೇವತೆಗಳಿಂದ ಪಡೆಯಲು ಅಸಾಧ್ಯವಾದ ಪರಮಗತಿಯನ್ನು ಶುಕಮುನಿಯು ಹೊಂದಿರುತ್ತಾನೆ. ಅವನ ವಿಷಯದಲ್ಲಿ ಏಕೆ ದುಃಖಿಸುತ್ತಿರುವಿ?

ಯಾವತ್ಸ್ಥಾಸ್ಯಂತಿ ಗಿರಯೋ ಯಾವತ್ಸ್ಥಾಸ್ಯಂತಿ ಸಾಗರಾಃ ।
ತಾವತ್ತವಾಕ್ಷಯಾ ಕೀರ್ತಿಃ ಸಪುತ್ರಸ್ಯ ಭವಿಷ್ಯತಿ ॥೩೬॥

ಎಲ್ಲಿಯ ತನಕ ಪರ್ವತಗಳಿರುತ್ತವೆಯೋ, ಎಲ್ಲಿಯ ತನಕ ಸಮುದ್ರಗಳು ಇರುತ್ತವೆಯೋ ಅಲ್ಲಿಯ ತನಕ ನಿನ್ನ, ನಿನ್ನ ಪುತ್ರನ ಕೀರ್ತಿಯು ಜಗತ್ತಿನಲ್ಲಿ ವ್ಯಾಪಿಸಿರುತ್ತದೆ.

ಛಾಯಾಂ ಸ್ವಪುತ್ರಸದೃಶೀಂ ಸರ್ವತೋಽನಪಗಾಂ ಸದಾ ।
ದ್ರಕ್ಷ್ಯಸೇ ತ್ವಂ ಚ ಲೋಕೇಽಸ್ಮಿನ್ ಮತ್ಪ್ರಸಾದಾನ್ಮಹಾಮುನೇ ॥೩೭॥

ಮಹಾಮುನಿಯೇ, ನನ್ನ ಅನುಗ್ರಹದಿಂದ ಈ ಲೋಕದಲ್ಲಿ ನಿನ್ನ ಮಗನಂತಿರುವ ಛಾಯೆಯನ್ನು ಯಾವಾಗಲೂ ಕಾಣುತ್ತಿರುವಿ. ಅವನ ಛಾಯೆಯು ಎಂದಿಗೂ ನಿನ್ನಿಂದ ದೂರವಾಗುವುದಿಲ್ಲ'.

ಸೋಽನುನೀತೋ ಭಗವತಾ ಸ್ವಯಂ ರುದ್ರೇಣ ಭಾರತ ।
ಛಾಯಾಂ ಪಶ್ಯನ್ ಸಮಾವೃತ್ತಃ ಸ ಮುನಿಃ ಪರಯಾ ಮುದಾ ॥೩೮॥

ಯುಧಿಷ್ಠಿರನೇ, ಮಹಾರುದ್ರನಿಂದ ಸಂತೈಸಲ್ಪಟ್ಟ ವ್ಯಾಸನು ಈಶ್ವರನ ಅನುಗ್ರಹದಿಂದ ಎಲ್ಲ ಕಡೆ ತನ್ನ ಮಗನ ಪ್ರತಿಬಿಂಬವನ್ನು ನೋಡುತ್ತಾ ಸಂತುಷ್ಟನಾಗಿ ಆಶ್ರಮಕ್ಕೆ ಆಗಮಿಸಿದನು.

ಇತಿ ಜನ್ಮ ಗತಿಶ್ಚೈವ ಶುಕಸ್ಯ ಭರತರ್ಷಭ ।
ವಿಸ್ತರೇಣ ಮಯಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ॥೩೯॥

ಕೌಂತೇಯನೇ, ಹೀಗೆ ನಿನ್ನ ಪ್ರಶ್ನೆಗನುಗುಣವಾಗಿ ಶುಕಮುನಿಯ ಜನ್ಮ, ವಿದ್ಯಾಭ್ಯಾಸ, ಪರಮಪದ ಪ್ರಾಪ್ತಿ ಎಲ್ಲವನ್ನೂ ವಿಸ್ತಾರಗೊಳಿಸಿದ್ದೇನೆ.

ಏತದಾಚಷ್ಟ ಮೇ ರಾಜನ್ ದೇವರ್ಷಿರ್ನಾರದಃ ಪುರಾ ।
ವ್ಯಾಸಶ್ಚೈವ ಮಹಾಯೋಗೀ ಸಂಜಲ್ಪೇಷು ಪದೇ ಪದೇ ॥೪೦॥

ಈ ಆಖ್ಯಾನವನ್ನು ಹಿಂದೆ ನಾರದರು ನನಗೆ ಹೇಳಿದ್ದರು. ವ್ಯಾಸರು ತಮ್ಮ ಮಾತುಗಳ ನಡುವೆ ಈ ಪ್ರಸಂಗ ತಿಳಿಸಿದ್ದರು.

ಇತಿಹಾಸಮಿಮಂ ಪುಣ್ಯಂ ಮೋಕ್ಷಧರ್ಮಾರ್ಥಸಂಹಿತಮ್ ।
ಧಾರಯೇದ್ಯಃ ಶಮಪರಃ ಸ ಗಚ್ಛೇತ್ ಪರಮಾಂ ಗತಿಮ್ ॥೪೧॥

ಶಾಂತಿಯಲ್ಲಿ ಆಸಕ್ತನಾದ ಯಾವ ಪುರುಷನು ಮೋಕ್ಷಧರ್ಮದಿಂದ ಕೂಡಿರುವ, ಪರಮಪವಿತ್ರವಾದ ಈ ಇತಿಹಾಸವನ್ನು ಅಧ್ಯಯನ ಮಾಡಿ, ಮನಸ್ಸಿನಲ್ಲಿ ಧರಿಸುತ್ತಾನೋ ಅವನೂ ಪರಮಗತಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಶುಕಸಿದ್ಧಿರ್ನಾಮ ಪಂಚಷಷ್ಟ್ಯುತ್ತರಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತಾರನೆಯ ಅಧ್ಯಾಯ

ನಾರದ-ನಾರಾಯಣ ಸಂವಾದ

ಯುಧಿಷ್ಠಿರಃ

ಗೃಹಸ್ಥೋ ಬ್ರಹ್ಮಚಾರೀ ವಾ ವಾನಪ್ರಸ್ಥೋऽಥ ಭಿಕ್ಷುಕಃ ।
ಯ ಇಚ್ಛೇತ್ ಸಿದ್ಧಿಮಾಸ್ಥಾತುಂ ದೇವತಾಂ ಕಾಂ ಯಜೇತ ಸಃ ॥೧॥

ಯುಧಿಷ್ಠಿರ- ಪಿತಾಮಹನೇ, ಸಿದ್ಧಿಯನ್ನು ಬಯಸುವ ವ್ಯಕ್ತಿಯು ಬ್ರಹ್ಮಚಾರಿಯಾಗಲಿ ಅಥವಾ ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಿಯೇ ಆಗಲಿ. ಯಾವ ದೇವತೆಯನ್ನು ಆರಾಧಿಸಬೇಕು?

ಕುತೋ ಹ್ಯಸ್ಯ ಧ್ರುವಃ ಸ್ವರ್ಗಃ ಕುತೋ ನಿಃಶ್ರೇಯಸಂ ಪರಮ್ ।
ವಿಧಿನಾ ಕೇನ ಜುಹುಯಾದ್ದೈವಂ ಪಿತ್ರ್ಯಂ ತಥೈವ ಚ ॥೨॥

ಮನುಷ್ಯನಿಗೆ ಯಾವ ಸತ್ಕರ್ಮದಿಂದ ಶಾಶ್ವತ ಸ್ಥಾನವು ದೊರೆಯುತ್ತದೆ? ಮೋಕ್ಷವು ಯಾವ ಕರ್ಮದಿಂದ ಲಭಿಸುತ್ತದೆ? ಯಾವ ವಿಧಿಯಿಂದ ದೇವತೆಗಳನ್ನು ಅಥವಾ ಪಿತೃಗಳನ್ನು ಉದ್ದೇಶಿಸಿ ಯಜನ ಮಾಡಬೇಕು?

ಮುಕ್ತಶ್ಚ ಕಾಂ ಗತಿಂ ಗಚ್ಛೇನ್ಮೋಕ್ಷಶ್ಚೈವ ಕಿಮಾತ್ಮಕಃ ।
ಸ್ವರ್ಗತಶ್ಚೈವ ಕಿಂ ಕುರ್ಯಾದ್ಯೇನ ನ ಚ್ಯವತೇ ದಿವಃ ॥೩॥

ಮುಕ್ತನಾದವನು ಯಾವ ಗತಿಯನ್ನು ಹೊಂದುತ್ತಾನೆ? ಮೋಕ್ಷದ ಸ್ವರೂಪವೇನು? ಸ್ವರ್ಗಕ್ಕೆ ಹೋದವನು ಅಲ್ಲಿ ಯಾವ ಕಾರ್ಯವನ್ನು ಮಾಡಿದಾಗ ಪುನಃ ಅಧಃಪತನವನ್ನು ಹೊಂದುವುದಿಲ್ಲ?

ದೇವತಾನಾಂ ಚ ಕೋ ದೇವಃ ಪಿತೄಣಾಂ ಚ ತಥಾ ಪಿತಾ ।
ತಸ್ಮಾತ್ ಪರತರಂ ಯಚ್ಚ ತನ್ಮೇ ಬ್ರೂಹಿ ಪಿತಾಮಹ ॥೪॥

ದೇವತೆಗಳಿಗೂ ದೇವನು, ಪಿತೃಗಳಿಗೂ ತಂದೆಯೂ, ಅಂತಹ ತಂದೆಯಾದ ವಸ್ತುವಿಗಿಂತಲೂ ಶ್ರೇಷ್ಠವಾದ ತತ್ತ್ವವು ಯಾವುದಿದೆ? ಇದನ್ನು ನನಗೆ ತಿಳಿಸು.

ಭೀಷ್ಮಃ

ಗೂಢಂ ಮಾಂ ಪ್ರಶ್ನವಿತ್ ಪ್ರಶ್ನಂ ಪೃಚ್ಛಸೇ ತ್ವಮಿಹಾನಘ ।
ನ ಹ್ಯೇಷ ತರ್ಕಯಾ ಶಕ್ಯೋ ವಕ್ತುಂ ವರ್ಷಶತೈರಪಿ ॥೫॥

ಭೀಷ್ಮ– ನಿರ್ದುಷ್ಟನಾದ ಯುಧಿಷ್ಠಿರನೇ, ಪ್ರಶ್ನೆಯ ಮರ್ಮವನ್ನು ಚೆನ್ನಾಗಿ ಅರಿತು ರಹಸ್ಯವಾದ ಪ್ರಶ್ನೆಯನ್ನೇ ನನ್ನ ಬಳಿ ಕೇಳುತ್ತಿರುವಿ. ಕೇವಲ ತರ್ಕದಿಂದ ನೂರು ವರ್ಷಗಳ ಕಾಲ ಹೇಳಿದರೂ ನಿನ್ನ ಪ್ರಶ್ನೆಗೆ ಉತ್ತರಿಸಲಾಗದು.

ಋತೇ ದೇವಪ್ರಸಾದಾದ್ವಾ ರಾಜನ್ ಜ್ಞಾನಾಗಮೇನ ವಾ ।
ಗಹನಂ ಹ್ಯೇತದಾಖ್ಯಾನಂ ವ್ಯಾಖ್ಯಾತವ್ಯಂ ತವಾರಿಹನ್ ॥೬॥

ರಾಜನೇ, ಈ ವಿಷಯವು ಗಹನವಾಗಿದ್ದರೂ ದೇವರ ಅನುಗ್ರಹವಿಲ್ಲದೆ, ಸರಿಯಾಗಿ ತಿಳಿಯದೆ ಉತ್ತರಿಸಲು ಆಗುವುದಿಲ್ಲ. ಶತ್ರುಸಂಹಾರಕನೇ, ಹಾಗಿದ್ದರೂ ನಿನಗೆ ಹೇಳಬೇಕಾಗಿದೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಾರದಸ್ಯ ಚ ಸಂವಾದಮೃಷೇರ್ನಾರಾಯಣಸ್ಯ ಚ ॥೭॥

ಇದೇ ವಿಷಯದಲ್ಲಿ ನಾರದರಿಗೂ ನಾರಾಯಣನಿಗೂ ನಡೆದ ಸಂವಾದ ರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ.

ನಾರಾಯಣೋ ಹಿ ವಿಶ್ವಾತ್ಮಾ ಚತುರ್ಮೂರ್ತಿಃ ಸನಾತನಃ ।
ಧರ್ಮಾತ್ಮಜಃ ಸಂಬಭೂವ ಪಿತೈವಂ ಮೇಽಭ್ಯಭಾಷತ ॥೮॥

ಜಗತ್ತಿಗೆ ಅಂತರ್ಯಾಮಿಯಾದ, ಚತುರ್ಮೂರ್ತಿಯೂ ಸನಾತನನೂ ಆದ ನಾರಾಯಣನು ಧರ್ಮಪ್ರಜೇಶ್ವರನ ಮಗನಾಗಿ ಅವತರಿಸಿದ ವಿಷಯವನ್ನು ನನ್ನ ತಂದೆಯು ಹೀಗೆ ಹೇಳಿದನು.

ಕೃತೇ ಯುಗೇ ಮಹಾರಾಜ ಪುರಾ ಸ್ವಾಯಂಭುವೇಽಂತರೇ ।
ನರೋ ನಾರಾಯಣಶ್ಚೈವ ಹರಿಃ ಕೃಷ್ಣಸ್ತಥೈವ ಚ ॥೯॥

ತೇಭ್ಯೋ ನಾರಾಯಣನರೌ ತಪಸ್ತೇಪತುರವ್ಯಯೌ ।
ಬದರ್ಯಾಶ್ರಮಮಾಸಾದ್ಯ ಶಕಟೇ ಕನಕಾಮಯೇ ॥೧೦॥

ಸ್ವಾಯಂಭುವ ಮನ್ವಂತರದಲ್ಲಿ ಧರ್ಮಪ್ರಜೇಶ್ವರನು ನರ-ನಾರಾಯಣ-ಹರಿ-ಕೃಷ್ಣ ಎಂಬ ನಾಲ್ಕು ರೂಪಗಳನ್ನು ಪಡೆದನು. ಅವರಲ್ಲಿ ನರ-ನಾರಾಯಣರು ಬದರಿಕಾಶ್ರಮಕ್ಕೆ ಆಗಮಿಸಿ ಕನಕಮಯವಾದ ರಥದಲ್ಲಿ ಕುಳಿತು ತಪಸ್ಸನ್ನಾಚರಿಸಿದರು.

ಅಷ್ಟಚಕ್ರಂ ಹಿ ತದ್ಯಾನಂ ಭೂತಯುಕ್ತಂ ಮನೋರಮಮ್ ।
ತತ್ರಾದ್ಯೌ ಲೋಕನಾಥೌ ತೌ ಕೃಶೌ ಧಮನಿಸಂತತೌ ॥೧೧॥

ಆ ಸುವರ್ಣಮಯವಾದ ರಥಕ್ಕೆ ಚಕ್ರಗಳು ಎಂಟು. ಪಂಚಭೂತಗಳಿಂದ ಕೂಡಿರುವ ಮನೋಹರವಾದ ರಥವಾಗಿತ್ತು. ಅಂತಹ ರಥದಲ್ಲಿ ಲೋಕನಾಥರಾದ ನರ-ನಾರಾಯಣರು ತಪಸ್ಸು ಮಾಡುತ್ತಿದ್ದಾಗ, ತಪಸ್ಸಿನಿಂದಾಗ ಅವರ ನರ ಬಳ್ಳಿಗಳು ಕಾಣಿಸುತ್ತಿದ್ದವು. ಕೃಶಕಾಯರಾಗಿ ಕಾಣಿಸುತ್ತಿದ್ದರು.

ತಪಸಾ ತೇಜಸಾ ಚೈವ ದುರ್ನಿರೀಕ್ಷೌ ಸುರೈರಪಿ ।
ಯಸ್ಯ ಪ್ರಸಾದಂ ಕುರ್ವಾತೇ ಸ ದೇವೌ ದ್ರಷ್ಟುಮರ್ಹತಿ ॥೧೨॥

ತಪಸ್ಸು ಮತ್ತು ತೇಜಸ್ಸುಗಳಿಂದ ಯುಕ್ತರಾದ ಅವರು ದೇವತೆಗಳಿಂದಲೂ ನೋಡಲು ಅಸಾಧ್ಯರಾಗಿದ್ದರು. ಯಾರಿಗೆ ಅನುಗ್ರಹೋನ್ಮುಖರಾಗುತ್ತಾರೋ ಅವರು ಅವರನ್ನು ನೋಡಬಹುದಿತ್ತು.

ನೂನಂ ತಯೋರನುಮತೇ ಹೃದಿ ಹೃಚ್ಛಯಚೋದಿತಃ ।
ಮಹಾಮೇರೋರ್ಗಿರೇಃ ಶೃಂಗಾತ್ ಪ್ರಚ್ಯುತೋ ಗಂಧಮಾದನಮ್ ॥

ನಿಶ್ಚಿತವಾಗಿಯೂ ನರ-ನಾರಾಯಣರ ಪ್ರೇರಣೆಯಂತೆ ಹೃದಯದಲ್ಲಿರುವ ಭಗವಂತನಿಂದ ಪ್ರೇರಿತರಾಗಿ, ಮಹಾಮೇರುಪರ್ವತದ ಶಿಖರದಿಂದ ಗಂಧಮಾದನ ಗಿರಿಗೆ ನಾರದರು ಆಗಮಿಸಿದರು.

ನಾರದಃ ಸುಮಹದ್ಭೂತಂ ಲೋಕಾನ್ ಸರ್ವಾನಚೀಚರತ್ ।
ತಂ ದೇಶಮಗಮದ್ ರಾಜನ್ ಬದರ್ಯಾಶ್ರಮಮಾಶುಗಃ ॥೧೪॥

ವೇಗವಾದ ನಡುಗೆಯುಳ್ಳ, ಸಮಸ್ತ ಲೋಕಗಳನ್ನೂ ಸಂಚರಿಸುತ್ತಾ, ಮಹಾಭೂತಗಳಿಂದ ಕೂಡಿದ ವಿಶಾಲ ಬದರಿಕಾಶ್ರಮಕ್ಕೆ ನಾರದರು ಆಗಮಿಸಿದರು.

ತಯೋರಾಹ್ನಿಕವೇಲಾಯಾಂ ತಸ್ಯ ಕೌತೂಹಲಂ ತ್ವಭೂತ್ ।
ಇದಂ ತದಾಸ್ಪದಂ ಕೃತ್ಸ್ನಂ ಯಸ್ಮಿಲ್ಲೋಕಾಃ ಪ್ರತಿಷ್ಠಿತಾಃ ॥೧೫॥

ಸಮಗ್ರ ಜಗತ್ತು ಯಾವ ಭಗವಂತನಲ್ಲಿ ಪ್ರತಿಷ್ಠೆಗೊಂಡಿದೆಯೋ ಅಂತಹ ನರ-ನಾರಾಯಣರು ನಿತ್ಯಕರ್ಮಗಳನ್ನು ಮಾಡುವ ಸಂದರ್ಭದಲ್ಲಿ ನಾರದರಿಗೆ ಅವರನ್ನು ನೋಡಬೇಕೆಂಬ ಕುತೂಹಲವು ಉಂಟಾಯಿತು.

ಸದೇವಾಸುರಗಂಧರ್ವಾಃ ಸರ್ಷಿಕಿನ್ನರಲೇಲಿಹಾಃ ।
ಏಕಾ ಮೂರ್ತಿರಿಯಂ ಪೂರ್ವಂ ಜಾತಾ ಭೂಯಶ್ಚತುರ್ವಿಧಾ ॥೧೬॥

ದೇವ-ಅಸುರ-ಗಂಧರ್ವ-ಋಷಿ-ಕಿನ್ನರ-ಸರ್ಪಗಳಿಂದ ಕೂಡಿದ ಸಮಸ್ತ ಲೋಕಗಳೂ ಯಾರಲ್ಲಿ ಪ್ರತಿಷ್ಠೆಗೊಂಡಿವೆಯೋ ಅಂತಹ ಪ್ರಧಾನಮೂರ್ತಿಯಾದ ಭಗವಂತನು ಮೊದಲಿನ ತನ್ನ ರೂಪವನ್ನೇ ನಾಲ್ಕು ರೂಪವನ್ನಾಗಿ ವಿಭಾಗಿಸಿದನು.

ಧರ್ಮಸ್ಯ ಕುಲಸಂತಾನೋ ಮಹಾನೇಭಿರ್ವಿವರ್ಧಿತಃ ।
ಅಹೋ ಹ್ಯನುಗೃಹೀತೋದ್ಯ ಧರ್ಮ ಏಭಿಃ ಸುರೈರಿಹ ।
ನರನಾರಾಯಣಾಭ್ಯಾಂ ಚ ಕೃಷ್ಣೇನ ಹರಿಣಾ ತಥಾ ॥೧೭॥

ಧರ್ಮಪ್ರಜೇಶ್ವರನ ಕುಲದ ಸಂತತಿಯು ಭಗವಂತನ ಈ ನಾಲ್ಕು ರೂಪಗಳಿಂದ ಅಭಿವೃದ್ಧಿಯನ್ನು ಹೊಂದಿತು. ಇಂತಹ ನಾಲ್ಕು ರೂಪಗಳೆನಿಸಿದ ನರ-ನಾರಾಯಣ-ಹರಿ-ಕೃಷ್ಣ ಎಂಬ ರೂಪಗಳಿಂದ ಧರ್ಮಪ್ರಜೇಶ್ವರನು ಅನುಗೃಹೀತನಾದನು.

ತತ್ರ ಕೃಷ್ಣೋ ಹರಿಶ್ಚೈವ ಕಸ್ಮಿಂಶ್ಚಿತ್ ಕಾರಣಾಂತರೇ ।
ಸ್ಥಿತೌ ಧರ್ಮೋತ್ತರೌ ಹ್ಯೇತೌ ತಥಾ ತಪಸಿ ಧಿಷ್ಠಿತೌ ॥೧೮॥

ಇವರಲ್ಲಿ ಹರಿ-ಕೃಷ್ಣ ಈ ಎರಡು ರೂಪಗಳು ಬೇರೊಂದು ಕಾರ್ಯದಲ್ಲಿ ಆಸಕ್ತವಾಗಿದ್ದರೆ, ನರ-ನಾರಾಯಣ ಎಂಬ ರೂಪಗಳು ಧರ್ಮದ ರಕ್ಷಣೆಗಾಗಿಯೇ ತಪಸ್ಸಿನಲ್ಲಿ ನಿರತವಾಗಿರುತ್ತವೆ.

ಏತೌ ಹಿ ಪರಮಂ ಧಾಮ ಕಾಽನಯೋರಾಹ್ನಿಕಕ್ರಿಯಾ ।
ಪಿತರೌ ಸರ್ವಭೂತಾನಾಂ ದೈವತಂ ಚ ಯಶಸ್ವಿನೌ ।
ಕಾಂ ದೇವತಾಂ ನು ಯಜತಃ ಪಿತೄನ್ ವಾ ಕಾನ್ ಮಹಾಮತೀ ॥

ನರ-ನಾರಾಯಣ ಎಂಬ ರೂಪಗಳೇ ಎಲ್ಲರಿಗೂ ಶ್ರೇಷ್ಠವಾದ ಆಶ್ರಯವಾದವುಗಳು. ಇಂತಹ ಈ ರೂಪಗಳಿಂದ ಅವರು ಮಾಡಿದ ನಿತ್ಯಕ್ರಿಯೆಗಳು ಯಾವುವು? ಕೀರ್ತಿಸಂಪನ್ನರಾದ ಈ ಎರಡು ರೂಪಗಳೇ ಜಗತ್ತಿಗೆ ತಂದೆ-ತಾಯಿ ಎನಿಸಿವೆ. ಇಂತಹ ಈ ಎರಡು ರೂಪಗಳಿಂದ ಭಗವಂತನು ಯಾವ ದೇವತೆಯನ್ನು, ಯಾವ ಪಿತೃಗಳನ್ನು ಆರಾಧಿಸಿದನು?

ಇತಿ ಸಂಚಿಂತ್ಯ ಮನಸಾ ಭಕ್ತ್ಯಾ ನಾರಾಯಣಸ್ಯ ಹ ।
ಸಹಸಾ ಪ್ರಾದುರಭವತ್ ಸಮೀಪೇ ದೇವಯೋಸ್ತದಾ ॥೨೦॥

ಈ ರೀತಿಯಾಗಿ ಮನಸ್ಸಿನಿಂದ ಭಕ್ತಿಪೂರ್ವಕವಾಗಿ ಯೋಚಿಸುತ್ತಾ, ನರ-ನಾರಾಯಣರ ಸಮೀಪದಲ್ಲಿ ನಾರದರು ಪ್ರಕಟರಾದರು.

ಕೃತೇ ದೈವೇ ಚ ಪಿತ್ರ್ಯೇ ಚ ತತಸ್ತಾಭ್ಯಾಂ ನಿರೀಕ್ಷಿತಃ ।
ಪೂಜಿತಶ್ಚೈವ ವಿಧಿನಾ ಯಥಾಪ್ರೋಕ್ತೇನ ಶಾಸ್ತ್ರತಃ ॥೨೧॥

ಪಿತೃದೇವತಾ ಸಂಬಂಧವಾದ ಸತ್ಕರ್ಮಗಳನ್ನು ಮಾಡಿದ ಬಳಿಕ ಶಾಸ್ತ್ರೋಕ್ತ ವಿಧಿಯಿಂದ ನಾರದರು ನರ-ನಾರಾಯಣರನ್ನು ಪೂಜಿಸಿದರು.

ತಂ ದೃಷ್ಟ್ವಾ ಮಹದಾಶ್ಚರ್ಯಮಪೂರ್ವಂ ವಿಧಿವಿಸ್ತರಮ್ ।
ಉಪೋಪವಿಷ್ಟಃ ಸುಪ್ರೀತೋ ನಾರದೋ ಭಗವಾನೃಷಿಃ ॥೨೨॥

ಆಶ್ಚರ್ಯಕರ ರೀತಿಯಲ್ಲಿ ನರ-ನಾರಾಯಣರು ಅಪೂರ್ವವಾದ ಶಾಸ್ತ್ರವಿಧಿಗೆ ಅನುಗುಣವಾಗಿ ವ್ಯವಹರಿಸುವುದನ್ನು ಕಂಡು ಪ್ರೀತರಾದ ನಾರದರು ಅವರ ಸಮೀಪದಲ್ಲಿ ಕುಳಿತರು.

ನಾರಾಯಣಂ ಸನ್ನಿರೀಕ್ಷ್ಯ ಪ್ರಸನ್ನೇನಾಂತರಾತ್ಮನಾ ।
ನಮಸ್ಕೃತ್ವಾ ಮಹಾದೇವಮಿದಂ ವಚನಮಬ್ರವೀತ್ ॥೨೩॥

ನಾರದರು ಸಂತೋಷಯುತ ಮನದಿಂದ ಮಹಾದೇವನಾದ, ಪೂಜ್ಯನಾದ ನಾರಾಯಣನನ್ನು ವಂದಿಸಿ ಅವನನ್ನೇ ನೋಡುತ್ತಾ ಹೀಗೆ ಹೇಳಿದರು.

ವೇದೇಷು ಸಪುರಾಣೇಷು ಸಾಂಗೋಪಾಂಗೇಷು ಗೀಯಸೇ ।
ತ್ವಮಜಃ ಶಾಶ್ವತೋ ಧಾತಾ ಮತೋಽಮೃತಮನುತ್ತಮಮ್ ।
ಪ್ರತಿಷ್ಠಿತಂ ಭೂತಭವ್ಯಂ ತ್ವಯಿ ಸರ್ವಮಿದಂ ಜಗತ್ ॥೨೪॥

ಪೂಜ್ಯರೇ, ಷಡಂಗ ಸಹಿತವಾದ ವೇದಗಳು, ಪುರಾಣಗಳು ನಿಮ್ಮ ಮಹಿಮೆಯನ್ನೇ ಸಾರುತ್ತಿವೆ. ನೀನು ಹುಟ್ಟಿಲ್ಲದವನು, ಶಾಶ್ವತನೂ, ಜಗತ್ತಿನ ಧಾರಕನೂ, ಶ್ರೇಷ್ಠವಾದ ಅಮೃತಸ್ವರೂಪನೂ, ಸಮಸ್ತ ಜಗತ್ತೂ ನಿನ್ನಲ್ಲಿ ಪ್ರತಿಷ್ಠಿತವಾಗಿದೆ.

ಚತ್ವಾರೋ ಹ್ಯಾಶ್ರಮಾ ದೇವ ಸರ್ವೇ ಗಾರ್ಹಸ್ಥ್ಯಮೂಲಕಾಃ ।
ಯಜಂತೇ ತ್ವಾಮಹರಹರ್ನಾನಾಮೂರ್ತಿಸಮಾಸ್ಥಿತಮ್ ॥೨೫॥

ಗೃಹಸ್ಥಾಶ್ರಮವೇ ಮೂಲವಾಗಿರುವ ನಾಲ್ಕು ಆಶ್ರಮಗಳು ನಿರಂತರವೂ ನಾನಾ ರೂಪಗಳಿರುವ ನಿನ್ನನ್ನು ಆರಾಧಿಸುತ್ತಿವೆ.

ಧರ್ಮಸ್ಯ ಕುಲಸಂತಾನೋ ಮಹಾನೇಭಿರ್ವಿವರ್ಧಿತಃ ।
ಅಹೋ ಹ್ಯನುಗೃಹೀತೋದ್ಯ ಧರ್ಮ ಏಭಿಃ ಸುರೈರಿಹ ।
ನರನಾರಾಯಣಾಭ್ಯಾಂ ಚ ಕೃಷ್ಣೇನ ಹರಿಣಾ ತಥಾ ॥೧೭॥

ಧರ್ಮಪ್ರಜೇಶ್ವರನ ಕುಲದ ಸಂತತಿಯು ಭಗವಂತನ ಈ ನಾಲ್ಕು ರೂಪಗಳಿಂದ ಅಭಿವೃದ್ಧಿಯನ್ನು ಹೊಂದಿತು. ಇಂತಹ ನಾಲ್ಕು ರೂಪಗಳೆನಿಸಿದ ನರ-ನಾರಾಯಣ-ಹರಿ-ಕೃಷ್ಣ ಎಂಬ ರೂಪಗಳಿಂದ ಧರ್ಮಪ್ರಜೇಶ್ವರನು ಅನುಗೃಹೀತನಾದನು.

ತತ್ರ ಕೃಷ್ಣೋ ಹರಿಶ್ಚೈವ ಕಸ್ಮಿಂಶ್ಚಿತ್ ಕಾರಣಾಂತರೇ ।
ಸ್ಥಿತೌ ಧರ್ಮೋತ್ತರೌ ಹ್ಯೇತೌ ತಥಾ ತಪಸಿ ಧಿಷ್ಠಿತೌ ॥೧೮॥

ಇವರಲ್ಲಿ ಹರಿ-ಕೃಷ್ಣ ಈ ಎರಡು ರೂಪಗಳು ಬೇರೊಂದು ಕಾರ್ಯದಲ್ಲಿ ಆಸಕ್ತವಾಗಿದ್ದರೆ, ನರ-ನಾರಾಯಣ ಎಂಬ ರೂಪಗಳು ಧರ್ಮದ ರಕ್ಷಣೆಗಾಗಿಯೇ ತಪಸ್ಸಿನಲ್ಲಿ ನಿರತವಾಗಿರುತ್ತವೆ.

ಏತೌ ಹಿ ಪರಮಂ ಧಾಮ ಕಾಽನಯೋರಾಹ್ನಿಕಕ್ರಿಯಾ ।
ಪಿತರೌ ಸರ್ವಭೂತಾನಾಂ ದೈವತಂ ಚ ಯಶಸ್ವಿನೌ ।
ಕಾಂ ದೇವತಾಂ ನು ಯಜತಃ ಪಿತೄನ್ ವಾ ಕಾನ್ ಮಹಾಮತೀ ॥

ನರ-ನಾರಾಯಣ ಎಂಬ ರೂಪಗಳೇ ಎಲ್ಲರಿಗೂ ಶ್ರೇಷ್ಠವಾದ ಆಶ್ರಯವಾದವುಗಳು. ಇಂತಹ ಈ ರೂಪಗಳಿಂದ ಅವರು ಮಾಡಿದ ನಿತ್ಯಕ್ರಿಯೆಗಳು ಯಾವುವು? ಕೀರ್ತಿಸಂಪನ್ನರಾದ ಈ ಎರಡು ರೂಪಗಳೇ ಜಗತ್ತಿಗೆ ತಂದೆ-ತಾಯಿ ಎನಿಸಿವೆ. ಇಂತಹ ಈ ಎರಡು ರೂಪಗಳಿಂದ ಭಗವಂತನು ಯಾವ ದೇವತೆಯನ್ನು, ಯಾವ ಪಿತೃಗಳನ್ನು ಆರಾಧಿಸಿದನು?

ಇತಿ ಸಂಚಿಂತ್ಯ ಮನಸಾ ಭಕ್ತ್ಯಾ ನಾರಾಯಣಸ್ಯ ಹ ।
ಸಹಸಾ ಪ್ರಾದುರಭವತ್ ಸಮೀಪೇ ದೇವಯೋಸ್ತದಾ ॥೨೦॥

ಈ ರೀತಿಯಾಗಿ ಮನಸ್ಸಿನಿಂದ ಭಕ್ತಿಪೂರ್ವಕವಾಗಿ ಯೋಚಿಸುತ್ತಾ, ನರ-ನಾರಾಯಣರ ಸಮೀಪದಲ್ಲಿ ನಾರದರು ಪ್ರಕಟರಾದರು.

ಕೃತೇ ದೈವೇ ಚ ಪಿತ್ರ್ಯೇ ಚ ತತಸ್ತಾಭ್ಯಾಂ ನಿರೀಕ್ಷಿತಃ ।
ಪೂಜಿತಶ್ಚೈವ ವಿಧಿನಾ ಯಥಾಪ್ರೋಕ್ತೇನ ಶಾಸ್ತ್ರತಃ ॥೨೧॥

ಪಿತೃದೇವತಾ ಸಂಬಂಧವಾದ ಸತ್ಕರ್ಮಗಳನ್ನು ಮಾಡಿದ ಬಳಿಕ ಶಾಸ್ತ್ರೋಕ್ತ ವಿಧಿಯಿಂದ ನಾರದರು ನರ-ನಾರಾಯಣರನ್ನು ಪೂಜಿಸಿದರು.

ತಂ ದೃಷ್ಟ್ವಾ ಮಹದಾಶ್ಚರ್ಯಮಪೂರ್ವಂ ವಿಧಿವಿಸ್ತರಮ್ ।
ಉಪೋಪವಿಷ್ಟಃ ಸುಪ್ರೀತೋ ನಾರದೋ ಭಗವಾನೃಷಿಃ ॥೨೨॥

ಆಶ್ಚರ್ಯಕರ ರೀತಿಯಲ್ಲಿ ನರ-ನಾರಾಯಣರು ಅಪೂರ್ವವಾದ ಶಾಸ್ತ್ರವಿಧಿಗೆ ಅನುಗುಣವಾಗಿ ವ್ಯವಹರಿಸುವುದನ್ನು ಕಂಡು ಪ್ರೀತರಾದ ನಾರದರು ಅವರ ಸಮೀಪದಲ್ಲಿ ಕುಳಿತರು.

ನಾರಾಯಣಂ ಸನ್ನಿರೀಕ್ಷ್ಯ ಪ್ರಸನ್ನೇನಾಂತರಾತ್ಮನಾ ।
ನಮಸ್ಕೃತ್ವಾ ಮಹಾದೇವಮಿದಂ ವಚನಮಬ್ರವೀತ್ ॥೨೩॥

ನಾರದರು ಸಂತೋಷಯುತ ಮನದಿಂದ ಮಹಾದೇವನಾದ, ಪೂಜ್ಯನಾದ ನಾರಾಯಣನನ್ನು ವಂದಿಸಿ ಅವನನ್ನೇ ನೋಡುತ್ತಾ ಹೀಗೆ ಹೇಳಿದರು.

ವೇದೇಷು ಸಪುರಾಣೇಷು ಸಾಂಗೋಪಾಂಗೇಷು ಗೀಯಸೇ ।
ತ್ವಮಜಃ ಶಾಶ್ವತೋ ಧಾತಾ ಮತೋಽಮೃತಮನುತ್ತಮಮ್ ।
ಪ್ರತಿಷ್ಠಿತಂ ಭೂತಭವ್ಯಂ ತ್ವಯಿ ಸರ್ವಮಿದಂ ಜಗತ್ ॥೨೪॥

ಪೂಜ್ಯರೇ, ಷಡಂಗ ಸಹಿತವಾದ ವೇದಗಳು, ಪುರಾಣಗಳು ನಿಮ್ಮ ಮಹಿಮೆಯನ್ನೇ ಸಾರುತ್ತಿವೆ. ನೀನು ಹುಟ್ಟಿಲ್ಲದವನು, ಶಾಶ್ವತನೂ, ಜಗತ್ತಿನ ಧಾರಕನೂ, ಶ್ರೇಷ್ಠವಾದ ಅಮೃತಸ್ವರೂಪನೂ, ಸಮಸ್ತ ಜಗತ್ತೂ ನಿನ್ನಲ್ಲಿ ಪ್ರತಿಷ್ಠಿತವಾಗಿದೆ.

ಚತ್ವಾರೋ ಹ್ಯಾಶ್ರಮಾ ದೇವ ಸರ್ವೇ ಗಾರ್ಹಸ್ಥ್ಯಮೂಲಕಾಃ ।
ಯಜಂತೇ ತ್ವಾಮಹರಹರ್ನಾನಾಮೂರ್ತಿಸಮಾಸ್ಥಿತಮ್ ॥೨೫॥

ಗೃಹಸ್ಥಾಶ್ರಮವೇ ಮೂಲವಾಗಿರುವ ನಾಲ್ಕು ಆಶ್ರಮಗಳು ನಿರಂತರವೂ ನಾನಾ ರೂಪಗಳಿರುವ ನಿನ್ನನ್ನು ಆರಾಧಿಸುತ್ತಿವೆ.

ಪಿತಾ ಮಾತಾ ಚ ಸರ್ವಸ್ಯ ಜಗತಃ ಶಾಶ್ವತೋ ಗುರುಃ ।
ಕಂ ತ್ವದ್ಯ ಯಜಸೇ ದೇವಂ ಪಿತರಂ ಕಂ ನ ವಿದ್ಮಹೇ ॥೨೬॥

ನೀನು ಜಗತ್ತಿಗೆ ತಂದೆ-ತಾಯಿ, ಶಾಶ್ವತವಾದ ಗುರು ಆಗಿರುತ್ತಿ. ಅಂತಹ ನೀನು ಯಾವ ದೇವತೆಯನ್ನು, ಯಾವ ಪಿತೃದೇವತೆಯನ್ನು ಉದ್ದೇಶಿಸಿ ಪೂಜಿಸುತ್ತಿರುವಿ? ಇದನ್ನು ನಾನು ತಿಳಿದಿರುವುದಿಲ್ಲ.

ಶ್ರೀಭಗವಾನ್

ಅವಾಚ್ಯಮೇತದಕ್ತವ್ಯಮಾತ್ಮಗುಹ್ಯಂ ಸನಾತನಮ್ ।
ತವ ಭಕ್ತಿಮತೋ ಬ್ರಹ್ಮನ್ವಕ್ಷ್ಯಾಮಿ ತು ಯಥಾತಥಮ್ ॥೨೭॥

ಶ್ರೀಭಗವಾನ್– ನಾರದನೇ, ಈ ವಿಷಯವು ಹೇಳಲು ಯೋಗ್ಯವಲ್ಲ. ಅವ್ಯಕ್ತವಾದುದು. ಪರಮಾತ್ಮನ ರಹಸ್ಯವೆನಿಸಿದೆ, ಸನಾತನವಾಗಿದೆ. ಹೀಗಿದ್ದರೂ ಪೂಜ್ಯನೇ, ಭಕ್ತಿಯುಳ್ಳಂತಹ ನಿನ್ನನ್ನು ಕುರಿತು ಯಥಾರ್ಥವಾಗಿ ಹೇಳುತ್ತೇನೆ.

ಯತ್ತತ್ ಸೂಕ್ಷ್ಮಮವಿಜ್ಞೇಯಮವ್ಯಕ್ತಮಚಲಂ ಧ್ರುವಮ್ ।
ಇಂದ್ರಿಯೈರಿಂದ್ರಿಯಾರ್ಥೈಶ್ಚ ಸರ್ವಭೂತೈಶ್ಚ ವರ್ಜಿತಮ್ ॥೨೮॥

ಸ ಹ್ಯಂತರಾತ್ಮಾ ಭೂತಾನಾಂ ಕ್ಷೇತ್ರಜ್ಞಶ್ಚೇತಿ ಕಥ್ಯತೇ ।
ತ್ರಿಗುಣವ್ಯತಿರಿಕ್ತೋಸೌ ಪುರುಷಶ್ಚೇತಿ ಕಲ್ಪಿತಃ ।
ತಸ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮ ॥೨೯॥

ನಾರದನೇ, ಯಾವುದು ಅತ್ಯಂತ ಸೂಕ್ಷ್ಮವೋ, ಸುಲಭವಾಗಿ ತಿಳಿಯಲಾಗದೋ, ಅವ್ಯಕ್ತವೋ, ಶಾಶ್ವತವೋ, ಇಂದ್ರಿಯ-ಇಂದ್ರಿಯಾರ್ಥಗಳಿಂದ ಸರ್ವ ಪ್ರಾಣಿಗಳಿಂದಲೂ ಅತ್ಯಂತ ಭಿನ್ನವಾಗಿದೆಯೋ, ಎಲ್ಲ ಪ್ರಾಣಿಗಳ ಅಂತರಾತ್ಮ ಎನಿಸಿದೆಯೋ, ಅದನ್ನೇ ಕ್ಷೇತ್ರಜ್ಞನೆಂದು, ತ್ರಿಗುಣಾತೀತನೆಂದು, ಪುರುಷನೆಂದು ಹೇಳುತ್ತಾರೆ. ಆ ಪರಮಾತ್ಮನಿಂದಲೇ ತ್ರಿಗುಣಾತ್ಮಕವಾದ ಅವ್ಯಕ್ತತತ್ತ್ವವೆನಿಸಿದ ಜಗತ್ತು ಹುಟ್ಟಿದೆ.

ಅವ್ಯಕ್ತಾ ವ್ಯಕ್ತಭಾವಸ್ಥಾ ಯಾ ಸಾ ಪ್ರಕೃತಿರವ್ಯಯಾ ।
ತಾಂ ಯೋನಿಮಾವಯೋರ್ವಿದ್ಧಿ ಯೋಸೌ ಸದಸದಾತ್ಮಕಃ ।
ಆವಾಭ್ಯಾಂ ಪೂಜ್ಯತೇಽಸೌ ಹಿ ದೈವೇ ಪಿತ್ರ್ಯೇ ಚ ಕಲ್ಪಿತೇ ॥೩೦॥

ಅವ್ಯಕ್ತತತ್ತ್ವವೇ ಪ್ರಕಟವಾದಾಗ ಅದನ್ನೇ ಪ್ರಕೃತಿ ಎಂದು ಕರೆಯುತ್ತಾರೆ. ಕಾರ್ಯ-ಕಾರಣ ಅಥವಾ ಮೂರ್ತಾಮೂರ್ತ ಸ್ವರೂಪವಾದ ಆ ಅವ್ಯಕ್ತತತ್ತ್ವವು ನಮ್ಮಿಬ್ಬರಿಗೂ ಕಾರಣವಾಗಿದೆ. ನಮ್ಮಿಬ್ಬರಿಂದಲೂ ದೈವ-ಪಿತೃ ಸಂಬಂಧಿ ಕಾರ್ಯಗಳಲ್ಲಿ ಅವನೇ ಆರಾಧ್ಯನಾಗಿದ್ದಾನೆ.

ನಾಸ್ತಿ ತಸ್ಮಾತ್ ಪರೋಽನ್ಯೋ ಹಿ ಪಿತಾ ದೇವೋಽಥ ವಾ ದ್ವಿಜಃ ।
ಆತ್ಮಾ ಹಿ ನೌ ಸ ವಿಜ್ಞೇಯಸ್ತತಸ್ತಂ ಪೂಜಯಾವಹೇ ॥೩೧॥

ಅವನಿಗಿಂತ ಶ್ರೇಷ್ಠನಾದ ಪಿತೃದೇವತೆ ಯಾರೂ ಇರುವುದಿಲ್ಲ. ಅವನೇ ನಮಗೂ ಅಂತರ್ಯಾಮಿಯೂ, ವಿಜ್ಞೇಯನೂ ಆಗಿದ್ದಾನೆ. ಆದ್ದರಿಂದ ಅವನನ್ನೇ ಆರಾಧಿಸುತ್ತಿದ್ದೇವೆ.

ತೇನೈಷಾ ಪ್ರಥಿತಾ ಬ್ರಹ್ಮನ್ಮರ್ಯಾದಾ ಲೋಕಭಾವಿನೀ ।
ದೈವಂ ಪಿತ್ರ್ಯಂ ಚ ಕರ್ತವ್ಯಮಿತಿ ತಸ್ಯಾನುಶಾಸನಮ್ ॥೩೨॥

ಲೋಕವನ್ನು ಮುನ್ನಡೆಸುವ ಧರ್ಮಮರ್ಯಾದೆಯು ಅವನಿಂದಲೇ ಈ ಜಗತ್ತಿನಲ್ಲಿ ಪ್ರಸಿದ್ಧವಾಗಿದೆ. ದೇವತಾಸಂಬಂಧಿಯಾದ, ಪಿತೃಸಂಬಂಧಿಯಾದ ಕರ್ತವ್ಯಗಳನ್ನು ಮಾಡಬೇಕು ಎಂಬುದು ಅವನ ಶಾಸನವಾಗಿದೆ.

ಬ್ರಹ್ಮಾ ಸ್ಥಾಣುರ್ಮನುರ್ದಕ್ಷೋ ಭೃಗುರ್ಧರ್ಮಸ್ತಪೋ ದಮಃ ।
ಮರೀಚಿರಂಗಿರಾತ್ರಿಶ್ಚ ಪುಲಸ್ತ್ಯಃ ಪುಲಹಃ ಕ್ರತುಃ ॥೩೩॥

ವಸಿಷ್ಠಃ ಪರಮೇಷ್ಠೀ ಚ ವಿವಸ್ವಾನ್ ಸೋಮ ಏವ ಚ ।
ಕರ್ದಮಶ್ಚಾಪಿ ಯಃ ಪ್ರೋಕ್ತಃ ಕ್ರೋಧೋ ವಿಕ್ರೀತ ಏವ ಚ ॥೩೪॥

ಏಕವಿಂಶತಿರುತ್ಪನ್ನಾಸ್ತೇ ಪ್ರಜಾಪತಯಃ ಸ್ಮೃತಾಃ ।
ತಸ್ಯ ದೇವಸ್ಯ ಮರ್ಯಾದಾಂ ಪೂಜಯಂತಿ ಸನಾತನೀಮ್ ॥೩೫॥

ಚತುರ್ಮುಖ ಬ್ರಹ್ಮನು, ಮಹರುದ್ರನು, ಮನುವು, ದಕ್ಷಪ್ರಜಾಪತಿ, ಭೃಗು, ಧರ್ಮ, ತಪಸ್ಸು, ದಮ, ಮರೀಚಿ, ಅಂಗಿರ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಪರಮೇಷ್ಠೀ, ವಿವಸ್ವಾನ್, ಚಂದ್ರ, ಕರ್ದಮ, ಕ್ರೋಧ, ವಿಕ್ರೀತ - ಈ ಇಪ್ಪತ್ತೊಂದು ಮಂದಿ ಪ್ರಜಾಪತಿಗಳು ಆ ಪರಬ್ರಹ್ಮನಿಂದಲೇ ಉತ್ಪನ್ನರಾದವರು

ಎನ್ನುತ್ತಾರೆ. ಇವರು ಎಂದಿಗೂ ಸನಾತನವಾದ ಧರ್ಮಮರ್ಯಾದೆಯನ್ನು ಗೌರವಿಸುತ್ತಾರೆ, ಪಾಲಿಸುತ್ತಾರೆ.

ದೈವಂ ಪಿತ್ರ್ಯಂ ಚ ಸತತಂ ತಸ್ಯ ವಿಜ್ಞಾಯ ತತ್ತ್ವತಃ ।
ಆತ್ಮಪ್ರಾಪ್ತಾನಿ ಚ ತತೋ ಜಾನಂತಿ ದ್ವಿಜಸತ್ತಮಾಃ ॥೩೬॥

ಬ್ರಾಹ್ಮಣಶ್ರೇಷ್ಠರು ಪರಮಾತ್ಮನಿಗೆ ಪ್ರಿಯವಾಗಲೆಂದು ವಿಹಿತವಾದ ದೇವತಾ ಸಂಬಂಧಿ, ಪಿತೃಸಂಬಂಧಿಯಾದ ಕರ್ಮಗಳನ್ನು ಯಥಾವತ್ತಾಗಿ ತಿಳಿದು ಅದರಂತೆ ಆಚರಿಸುತ್ತಾ ಇಷ್ಟಾರ್ಥವನ್ನು ಹೊಂದುತ್ತಾರೆ.

ಸ್ವರ್ಗಸ್ಥಾ ಅಪಿ ಯೇ ಕೇಚಿತ್ತಂ ನಮಸ್ಯಂತಿ ದೇಹಿನಃ ।
ತೇ ತತ್ಪ್ರಸಾದಾದ್ ಗಚ್ಛಂತಿ ತೇನಾದಿಷ್ಟಫಲಾಂ ಗತಿಮ್ ॥೩೭॥

ಸ್ವರ್ಗದಲ್ಲಿರುವ ದಿವ್ಯಶರೀರಗಳಲ್ಲಿಯೂ ಯಾವ ಪರಮಾತ್ಮನನ್ನು ಜೀವರು ನಮಸ್ಕರಿಸುತ್ತಾರೋ ಅವರು ಅವನ ಅನುಗ್ರಹದಿಂದ ಅವನ ಆದೇಶದಂತೆ ಅವನು ನಿರ್ಮಿಸಿದ ಫಲವನ್ನು, ಉತ್ತಮ ಗತಿಯನ್ನು ಹೊಂದುತ್ತಾರೆ.

ಯೇ ಹೀನಾಃ ಸಪ್ತದಶಭಿರ್ಗುಣೈಃ ಕರ್ಮಭಿರೇವ ಚ ।
ಕಲಾಃ ಪಂಚದಶ ತ್ಯಕ್ತ್ವಾ ತೇ ಮುಕ್ತಾ ಇತಿ ನಿಶ್ಚಯಃ ॥೩೮॥

ಯಾರು ಹದಿನೇಳು ಗುಣಗಳಿಂದ, ಸತ್ವಾದಿ ಕರ್ಮಗಳಿಂದ ಹೀನರಾಗಿ ಹದಿನೈದು ಕಲೆಗಳನ್ನು ತ್ಯಜಿಸುತ್ತಾರೋ ಅವರು ಮುಕ್ತರೆಂಬುದೇ ನಿಶ್ಚಯವು.

ವ್ಯಾಖ್ಯಾನ ವಿಶೇಷ– ಈ ವಿಚಾರಗಳು ಜನಕ ಮತ್ತು ಸುಲಭೆಯರ ಸಂವಾದದಲ್ಲಿ ಪ್ರಸ್ತುತವಾಗಿವೆ.

ಮುಕ್ತಾನಾಂ ತು ಗತಿರ್ಬ್ರಹ್ಮನ್ ಕ್ಷೇತ್ರಜ್ಞ ಇತಿ ಕಲ್ಪಿತಃ ।
ಸ ಹಿ ಸರ್ವಗತಶ್ಚೈವ ನಿರ್ಗುಣಶ್ಚೈವ ಕಥ್ಯತೇ ॥೩೯॥

ಮುಕ್ತರಾದವರಿಗೆ ಕ್ಷೇತ್ರಜ್ಞನೇ ಗತಿಯು. ಕ್ಷೇತ್ರಜ್ಞನು ಪ್ರಕೃತಿ ಗುಣದಿಂದ ದೂರನೂ, ಸರ್ವಗತನು ಎಂದು ಹೇಳಲ್ಪಡುತ್ತಾನೆ.

ದೃಶ್ಯತೇ ಜ್ಞಾನಯೋಗೇನ ಆವಾಂ ಚ ಪ್ರಸೃತೌ ತತಃ ।
ಏವಂ ಜ್ಞಾತ್ವಾ ತಮಾತ್ಮಾನಂ ಪೂಜಯಾವಃ ಸನಾತನಮ್ ॥೪೦॥

ಅವನಿಂದ ಹೊರಹೊಮ್ಮಿದ ನಾವು ಜ್ಞಾನಯೋಗದಿಂದ ಕ್ಷೇತ್ರಜ್ಞನನ್ನು ತಿಳಿಯಬಹುದಾಗಿದೆ. ಅವನ ಬಗ್ಗೆ ಹೀಗೆ ತಿಳಿದು ಸನಾತನನಾದ ಅವನನ್ನೇ ಪೂಜಿಸುತ್ತಿದ್ದೇವೆ.

ತಂ ವೇದಾಶ್ಚಾಶ್ರಮಾಶ್ಚೈವ ನಾನಾತನುಸಮಾಸ್ಥಿತಾಃ ।
ಭಕ್ತ್ಯಾ ಸಂಪೂಜಯಂತ್ಯಾದ್ಯಂ ಗತಿಂ ಚೈಷಾಂ ದದಾತಿ ಸಃ ॥೪೧॥

ಅಂತಹ ಕ್ಷೇತ್ರಜ್ಞನಾದ ಭಗವಂತನನ್ನು ವೇದಗಳು, ಆಶ್ರಮಗಳು ನಾನಾ ರೂಪಗಳನ್ನು ಧರಿಸಿ ಆಶ್ರಯಿಸಿವೆ. ಅವರೆಲ್ಲರೂ ಭಕ್ತಿಯಿಂದ ಅವನನ್ನೇ ಪೂಜಿಸುತ್ತಾರೆ. ಅವರೆಲ್ಲರಿಗೂ ಅವನು ಉತ್ತಮವಾದ ಗತಿಯನ್ನು ನೀಡುತ್ತಾನೆ.

ಯೇ ತು ತದ್ಭಾವಿತಾ ಲೋಕೇ ಏಕಾಂತಿತ್ವಂ ಸಮಾಸ್ಥಿತಾಃ ।
ಏತದಭ್ಯಧಿಕಂ ತೇಷಾಂ ಯತ್ತೇ ತಂ ಪ್ರವಿಶಂತ್ಯುತ ॥೪೨॥

ಯಾರು ಅವನಲ್ಲೇ ಭಕ್ತಿ ಹೊಂದಿದವರಾಗಿ, ಏಕಾಂತವನ್ನು ಹೊಂದಿದವರಾಗಿ ಅವನನ್ನೇ ಸರ್ವೋತ್ತಮ ಎಂದು ಭಜಿಸುತ್ತಾರೋ ಅವರು ಅವನ ಪಾದವನ್ನೇ ಹೊಂದುತ್ತಾರೆ.

ಇತಿ ಗುಹ್ಯಸಮುದ್ದೇಶಸ್ತವ ನಾರದ ಕೀರ್ತಿತಃ ।
ಭಕ್ತ್ಯಾ ಪ್ರೇಮ್ಣಾ ಚ ವಿಪ್ರರ್ಷೇ ಅಸ್ಮದ್ಭಕ್ತ್ಯಾ ಚ ತೇ ಶ್ರುತಃ ॥೪೩॥

ಬ್ರಹ್ಮರ್ಷಿ ನಾರದನೇ, ನಿನಗೆ ಆ ಪರಮಾತ್ಮನಲ್ಲಿ ಭಕ್ತಿ ಇರುವುದರಿಂದ ನಮ್ಮ ಬಳಿ ಭಕ್ತಿಯಿಂದ ಕೇಳಿರುತ್ತಿ. ಭಕ್ತಿ, ಪ್ರೇಮಗಳಿಂದ ತುಂಬಿರುವ ನಿನಗೆ ಈ ರಹಸ್ಯವನ್ನು ಹೇಳಿರುತ್ತೇವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೇಳನೆಯ ಅಧ್ಯಾಯ

ನಾರದರಿಂದ ಉಪರಿಚರ ವಸುವಿನ ಚರಿತೆ.

ಭೀಷ್ಮಃ

ಸ ಏವಮುಕ್ತೋ ದ್ವಿಪದಾಂ ವರಿಷ್ಠೋ
ನಾರಾಯಣೇನೋತ್ತಮಪೂರುಷೇಣ ।
ಜಗಾದ ವಾಕ್ಯಂ ದ್ವಿಪದಾಂ ವರಿಷ್ಠಂ
ನಾರಾಯಣಂ ಲೋಕಹಿತಾಧಿವಾಸಮ್ ॥೧॥

ಭೀಷ್ಮ– ಯುಧಿಷ್ಠಿರನೇ, ಪುರುಷೋತ್ತಮನಾದ ಭಗವಾನ್ ನಾರಾಯಣನು ಪುರುಷಶ್ರೇಷ್ಠರಾದ ನಾರದರ ಬಳಿ ಹೀಗೆ ಹೇಳಿದ ಬಳಿಕ, ನಾರದರು ಲೋಕಕ್ಕೆಲ್ಲ ಆಶ್ರಯನೆನಿಸಿದ ಪುರುಷೋತ್ತಮನಾದ ನಾರಾಯಣನ ಬಳಿ ಹೀಗೆ ನುಡಿದರು.

ಯದರ್ಥಮಾತ್ಮಪ್ರಭವೇಹ ಜನ್ಮ
ತವೋತ್ತಮಂ ಧರ್ಮಗೃಹೇ ಚತುರ್ಧಾ ।
ತತ್ ಸಾಧ್ಯತಾಂ ಲೋಕಹಿತಾರ್ಥಮದ್ಯ
ಗಚ್ಛಾಮಿ ದ್ರಷ್ಟುಂ ಪ್ರಕೃತಿಂ ತವಾದ್ಯಾಮ್ ॥೨॥

ಭಗವಂತನೇ, ನಿನ್ನಿಂದಲೇ ನೀನು ಉತ್ಪತ್ತಿಯುಳ್ಳವನು. ಲೋಕಹಿತಕ್ಕಾಗಿ ಧರ್ಮಪ್ರಜೇಶ್ವರನ ಮನೆಯಲ್ಲಿ ನಾಲ್ಕು ಅವತಾರಗಳನ್ನು ತಾಳಿರುವೆ. ಈ ಉದ್ದೇಶವನ್ನು ಸಾಧಿಸಿಕೊ. ನಾನು ಶ್ವೇತದ್ವೀಪದಲ್ಲಿರುವ ನಿನ್ನ ರೂಪವನ್ನು ನೋಡಲು ತೆರಳುತ್ತೇನೆ.

ವೇದಾಃ ಸ್ವಧೀತಾ ಮಮ ಲೋಕನಾಥ
ತಪ್ತಂ ತಪೋ ನಾನೃತಮುಕ್ತಪೂರ್ವಮ್ ।
ಪೂಜಾಂ ಗುರೂಣಾಂ ಸತತಂ ಕರೋಮಿ
ಪರಸ್ಯ ಗುಹ್ಯಂ ನ ಚ ಭಿನ್ನಪೂರ್ವಮ್ ॥೩॥

ಲೋಕನಾಥನೇ, ಸದಾ ಗುರುಜನರ ಸತ್ಕಾರವನ್ನು ಮಾಡುತ್ತೇನೆ. ಬೇರೆಯವರ ರಹಸ್ಯ ವಿಷಯಗಳನ್ನು ಮತ್ತೊಬ್ಬರ ಬಳಿ ಎಂದಿಗೂ ತಿಳಿಸುವುದಿಲ್ಲ. ನಾನು ವೇದಾಧ್ಯಯನ, ತಪಸ್ಸು ಇವುಗಳಲ್ಲಿ ರತನಾಗಿರುವುದರಿಂದ ಎಂದಿಗೂ ಸುಳ್ಳನ್ನು ಹೇಳುವುದಿಲ್ಲ.

ಗುಪ್ತಾನಿ ಚತ್ವಾರಿ ಯಥಾಗಮಂ ಮೇ
ಶತ್ರೌ ಚ ಮಿತ್ರೇ ಚ ಸಮೋಽಸ್ಮಿ ನಿತ್ಯಮ್ ।
ತಂ ಚಾದಿದೇವಂ ಸತತಂ ಪ್ರಪನ್ನ
ಏಕಾಂತಭಾವೇನ ವೃಣೋಮ್ಯಜಸ್ರಮ್ ।
ಏಭಿರ್ವಿಶೇಷೈಃ ಪರಿಶುದ್ಧಸತ್ತ್ವಃ
ಕಸ್ಮಾನ್ನ ಪಶ್ಯೇಯಮನಂತಮೀಶಮ್ ॥೪॥

ಶಾಸ್ತ್ರದ ವಿಧಿಯಂತೆ ನಾನು ಕೈ, ಕಾಲು, ಉದರ, ಉಪಸ್ಥಗಳನ್ನು ಪರಿಶುದ್ಧವಾಗಿ ರಕ್ಷಿಸಿಕೊಂಡಿದ್ದೇನೆ. ಶತ್ರು-ಮಿತ್ರರಲ್ಲಿ ಸಮಭಾವವನ್ನು ಹೊಂದಿ, ಸರ್ವೋತ್ತಮನಾದ ನಾರಾಯಣನನ್ನೇ ಶ್ರೇಷ್ಠವಾದ ಭಕ್ತಿಯಿಂದ, ಭಜನೆ-ಕೀರ್ತನೆಗಳಿಂದ ಸಂತೋಷ ಪಡಿಸುತ್ತೇನೆ.

ತತ್ ಪಾರಮೇಷ್ಠ್ಯಸ್ಯ ವಚೋ ನಿಶಮ್ಯ
ನಾರಾಯಣಃ ಸಾತ್ವತಧರ್ಮಗೋಪ್ತಾ ।
ಗಚ್ಛೇತಿ ತಂ ನಾರದಮುಕ್ತವಾನ್ ಸ
ಸಂಪೂಜಯಿತ್ವಾಽಽತ್ಮವಿಧಿಕ್ರಿಯಾಭಿಃ ॥೫॥

ಇಂತಹ ಗುಣಗಳ ಕಾರಣದಿಂದ ಪರಿಶುದ್ಧ ಅಂತಃಕರಣವುಳ್ಳ ನಾನು ಆ ಭಗವಂತನನ್ನು ನೋಡುತ್ತೇನೆ. ಯುಧಿಷ್ಠಿರನೇ, ಬ್ರಹ್ಮನ ಸುತನಾದ ನಾರದನ ಮಾತನ್ನು ಕೇಳಿದ, ಸನಾತನ ಧರ್ಮರಕ್ಷಕನಾದ ನಾರಾಯಣನು ನಾರದರನ್ನು ವಿಧಿಪೂರ್ವಕವಾಗಿ ಪೂಜಿಸಿ ಶ್ವೇತದ್ವೀಪಕ್ಕೆ ಸಾಗಲು ಒಪ್ಪಿದನು. ಅಲ್ಲಿಗೆ ಹೋಗು ಎಂದು ಹೇಳಿದನು.

ತತೋ ವಿಸೃಷ್ಟಃ ಪರಮೇಷ್ಠಿಪುತ್ರಃ
ಸೋಽಭ್ಯರ್ಚಯಿತ್ವಾ ತಮೃಷಿಂ ಪುರಾಣಮ್ ।
ಖಮುತ್ಪಪಾತೋತ್ತಮವೇಗಯುಕ್ತ-
ಸ್ತತೋಽಧಿಮೇರೌ ಸಹಸಾ ನಿಲಿಲ್ಯೇ ॥೬॥

ಭಗವಂತನಿಂದ ಕಳುಹಿಸಿಕೊಡಲ್ಪಟ್ಟ ನಾರದರು ಉತ್ತಮ ಯೋಗದಿಂದ ಆಕಾಶದ ಕಡೆ ಸಾಗಿ ಅಲ್ಲಿಂದ ಮುಂದೆ ಮೇರುಪರ್ವತದ ಶಿಖರದಲ್ಲಿ ಅದೃಶ್ಯರಾದರು.

ತತ್ರಾವತಸ್ಥೇ ಚ ಮುನಿರ್ಮುಹೂರ್ತ-
ಮೇಕಾಂತಮಾಸಾದ್ಯ ಗಿರೇಃ ಸ ಶೃಂಗೇ ।
ಆಲೋಕಯನ್ನುತ್ತರಪಶ್ಚಿಮೇನ
ದದರ್ಶ ಚಾತ್ಯದ್ಭುತರೂಪಯುಕ್ತಮ್ ॥೭॥

ಆ ಶಿಖರದಲ್ಲಿ ಏಕಾಂತಸ್ಥಳದಲ್ಲಿ ಮುಹೂರ್ತಕಾಲ ವಿಶ್ರಾಂತಿಯನ್ನು ಪಡೆದು ಬಳಿಕ ವಾಯುವ್ಯ ದಿಕ್ಕಿನ ಕಡೆ ನೋಡುತ್ತಿರುವಾಗ ನಾರಾಯಣ ಮುನಿಯು ಹೇಳಿದ ಅದ್ಭುತವಾದ ದೃಶ್ಯವನ್ನು ಕಂಡರು.

ಕ್ಷೀರೋದಧೇರುತ್ತರತೋ ಹಿ ದ್ವೀಪಃ
ಶ್ವೇತಃ ಸ ನಾಮ್ನಾ ಪ್ರಥಿತೋ ವಿಶಾಲಃ ।
ಮೇರೋಃ ಸಹಸ್ರೈರಪಿ ಯೋಜನಾನಾಂ
ದ್ವಾತ್ರಿಂಶತೋರ್ಧಂ ಕವಿಭಿರ್ನಿರುಕ್ತಃ ॥೮॥

ಕ್ಷೀರಸಾಗರದ ಉತ್ತರಭಾಗದಲ್ಲಿರುವ ಶ್ವೇತದ್ವೀಪವೆಂಬ ಪ್ರಸಿದ್ಧವಾದ ವಿಶಾಲವಾದ ಪ್ರದೇಶವು ನಾರದರಿಗೆ ಕಾಣಿಸಿತು. ವಿದ್ವಾಂಸರು ಆ ದ್ವೀಪವನ್ನು ಮೇರುಪರ್ವತಕ್ಕಿಂತ ನಲವತ್ತೊಂಬತ್ತು ಲಕ್ಷ ಯೋಜನ ಎತ್ತರದಲ್ಲಿದೆ ಎಂದು ಹೇಳುತ್ತಾರೆ.

ವ್ಯಾಖ್ಯಾನ ವಿಶೇಷ– 'ಮೇರೋಃ ಸಹಸ್ರೈಃ' ಎಂಬ ಬಹುವಚನದ ಪ್ರಯೋಗದಿಂದ ಶತಸಹಸ್ರ ಎನಿಸಿದ ಲಕ್ಷಸಂಖ್ಯೆಯಲ್ಲಿ ಗ್ರಹಿಸಬೇಕು. ಮುಂದೆ 'ದ್ವಾತ್ರಿಂಶತೋರ್ಧಂ' ಎಂದು ಹೇಳಿರುವುದರಿಂದ ಮೂವತ್ತೆರಡು ಲಕ್ಷ, ಅದರಲ್ಲಿ ಅರ್ಧ, ಅರ್ಥಾತ್ ಹದಿನಾರು. ಮೂವತ್ತೆರಡು ಮತ್ತು ಹದಿನಾರು ಸೇರಿಸಿದರೆ ನಲವತ್ತೆಂಟು ಲಕ್ಷ ಯೋಜನವಾಗುತ್ತದೆ. ಒಂದು ಲಕ್ಷ ಯೋಜನದ ಮೇರುಪರ್ವತವನ್ನೂ ಸೇರಿಸಿಕೊಂಡಲ್ಲಿ ಶ್ವೇತದ್ವೀಪವು ನಲವತ್ತೊಂಬತ್ತು ಲಕ್ಷ ಯೋಜನ ಎತ್ತರದಲ್ಲಿದೆ ಎಂದಾಗುತ್ತದೆ. ವಾಸ್ತವಿಕವಾಗಿ ಭೂಮಿಯಿಂದ ಶ್ವೇತದ್ವೀಪವು ಐವತ್ತು ಲಕ್ಷ ಎಂದು ಭೂಗೋಳ ನಿರ್ಣಯದಲ್ಲಿ ವಾದಿರಾಜರೇ ತಿಳಿಸಿರುತ್ತಾರೆ. 'ಲಕ್ಷಯೋಜನತೋऽಪ್ಯೂರ್ಧ್ವಂ ತದ್ವಿದ್ವದ್ಭಿಃ ಉದಾಹೃತಂ । ತಥಾ ಶ್ವೇತದ್ವೀಪ ಸಂಜ್ಞಂ ಧಾಮಕ್ಷೀರಾಂಬುಧೌ ಹರೇಃ ತತೋಚ್ಚ್ರಿತಂ ಭೂಪ್ರದೇಶಾತ್ ಪಂಚಾಶಲ್ಲಕ್ಷಯೋಜನೈಃ' (ಭೂಗೋಳವರ್ಣನೆ ಶ್ಲೋ. ೧೩೪, ೧೩೫). ಈ ಪ್ರಮಾಣದ ಅನುಸಾರವಾಗಿ ಭೂಮಿಯಿಂದ ಐವತ್ತು ಲಕ್ಷ ಯೋಜನ ಎತ್ತರದಲ್ಲಿ ಶ್ವೇತದ್ವೀಪ ಎಂದಾಗಬೇಕು. ಇಲ್ಲಿ ನಲವತ್ತೊಂಬತ್ತು ಲಕ್ಷವನ್ನು ಹೇಳಿದ್ದಾರಲ್ಲ ಎಂಬುದಕ್ಕೆ ಗುರುರಾಜರು 'ಅಲ್ಪತ್ವಾತ್ ಏಕಸ್ಯ ಅವಿವಕ್ಷಾ' ಎಂದು ಹೇಳಿದ್ದಾರೆ. ವಾಸ್ತವಿಕವಾಗಿ ಸ್ವರ್ಗಕ್ಕೂ ಶ್ವೇತದ್ವೀಪಕ್ಕೂ ಒಂದು

ಲಕ್ಷ ಯೋಜನದ ಅಂತರವಿದೆ. ಶ್ವೇತದ್ವೀಪವು ಸ್ವರ್ಗಕ್ಕೆ ಸಮಾನವಾದುದರಿಂದ ಸ್ವರ್ಗದ ಸಮಾನವಾದ ಐವತ್ತು ಲಕ್ಷ ಯೋಜನವನ್ನು ಶ್ವೇತದ್ವೀಪಕ್ಕೂ ಗ್ರಹಿಸಿದ್ದಾರೆ. ಒಂದು ಸಂಖ್ಯೆಯು ಅಲ್ಪವಾದುದರಿಂದ ಅದನ್ನು ಕೈಬಿಟ್ಟು ಇಲ್ಲಿ ನಲವತ್ತೊಂಬತ್ತು ಲಕ್ಷ ಎಂದು ಹೇಳಲಾಗಿದೆ. ಭೂಗೋಳವರ್ಣನೆಯಲ್ಲಿ ಹೇಳಿದ್ದು ಸ್ವರ್ಗಸಮಾನ ಎಂಬ ಅಭಿಪ್ರಾಯದಿಂದ. ಇಲ್ಲಿ ಹೇಳಿದ ನಲವತ್ತೊಂಬತ್ತು ಲಕ್ಷವು ಯಥಾರ್ಥವಾಗಿ ಶ್ವೇತದ್ವೀಪದ ಸ್ಥಿತಿಯನ್ನು ತಿಳಿಸಿದ್ದಾರೆ ಎಂದು ತಿಳಿಯಬೇಕು ಎಂಬುದಾಗಿ ಲಕ್ಷಾಲಂಕಾರದಲ್ಲಿ ಗುರುರಾಜರೇ ವಿವರಿಸಿದ್ದಾರೆ.

ಅತೀಂದ್ರಿಯಾಶ್ಚಾನಶನಾಶ್ಚ ತತ್ರ
ನಿಷ್ಪಂದಹೀನಾಃ ಸುಸುಗಂಧಿನಶ್ಚ ।
ಶ್ವೇತಾಃ ಪುಮಾಂಸೋ ಗತಸರ್ವಪಾಪಾಃ
ಚಕ್ಷುರ್ಮುಷಃ ಪಾಪಕೃತಾಂ ನರಾಣಾಮ್ ॥೯॥

ಶ್ವೇತದ್ವೀಪದಲ್ಲಿ ವಾಸ ಮಾಡುವವರು ಇಂದ್ರಿಯಗಳನ್ನು ಗೆದ್ದಿರುತ್ತಾರೆ. ಆಹಾರ ತ್ಯಜಿಸಿರುತ್ತಾರೆ. ಬಾಹ್ಯವಾದ ವ್ಯಾಪಾರಗಳಿಂದ ದೂರವಾಗಿರುತ್ತಾರೆ. ಪ್ರಾಕೃತವಾದ ಗಂಧವಿಲ್ಲದೆ ಅಪ್ರಾಕೃತ ಗಂಧದಿಂದ ಕೂಡಿರುತ್ತಾರೆ. ಸ್ವಚ್ಛವರ್ಣದವರಾಗಿಯೂ, ಸಮಸ್ತ ಪಾಪಗಳಿಂದ ಮುಕ್ತರಾಗಿಯೂ, ಪಾಪ ಮಾಡಿದ ಜನರಿಂದ ಅದೃಶ್ಯರಾಗಿಯೂ ಇರುತ್ತಾರೆ.

ವಜ್ರಾಸ್ಥಿಕಾಯಾಃ ಸಮಮಾನೋನ್ಮಾನಾ
ದಿವ್ಯಾನ್ವಯರೂಪಾಃ ಶುಭಸಾರೋಪೇತಾಃ ।
ಛತ್ರಾಕೃತಿಶೀರ್ಷಾ ಮೇಘೌಘನಿನಾದಾಃ
ಸತ್ಪುಷ್ಕರಚತುಷ್ಕಾ ರಾಜೀವಶತಪಾದಾಃ ॥೧೦॥

ವಜ್ರದಂತಹ ಶರೀರಗಳನ್ನು ಹೊಂದಿರುವ, ಮಾನಾಪಮಾನಗಳನ್ನು ಸಮಾನವಾಗಿ ಭಾವಿಸಿರುವ ದಿವ್ಯವಾದ ಅವಯವರೂಪಗಳಿಂದ ಕೂಡಿರುವ, ಶುಭಸತ್ವದಿಂದ ಸಂಪನ್ನರಾದ, ಛತ್ರಾಕೃತಿಯ ಶಿರಸ್ಸಿನಿಂದ ಕೂಡಿರುವ, ಗಂಭೀರವಾದ ಶಬ್ದಗಳುಳ್ಳ, ಮನೋಹರವಾದ ವೃಷಣಗಳಿಂದ ಕೂಡಿರುವ, ಕಮಲದ ದಳಕ್ಕೆ ಸಮಾನವಾದ ಪಾದಗಳಿಂದ ಕೂಡಿರುವ;

ಷಷ್ಟ್ಯಾ ದಂತೈರ್ಯುಕ್ತಾಃ ಶುಕ್ಲೈರಷ್ಟಾಭಿರ್ದಂಷ್ಟ್ರಾಭಿರ್ಯೇ ।
ಜಿಹ್ವಾಭಿರ್ಯೇ ವಿಷ್ವಗ್ವಕ್ತ್ರಂ ಲೇಲಿಹ್ಯಂತೇ ಸೂರ್ಯಪ್ರಖ್ಯಮ್ ॥೧೧॥

ಹಲ್ಲುಗಳೆಲ್ಲವೂ ಅತ್ಯಂತ ಸೂಕ್ಷ್ಮಕರವಾದ ಅರವತ್ತು ಹಲ್ಲುಗಳಿಂದ ಶೋಭಿಸುತ್ತಿರುವ, ಮೇಲೆ-ಕೆಳಗೆ ನಾಲ್ಕು ನಾಲ್ಕು ಕೋರೆ ಹಲ್ಲುಗಳಿಂದ ಕೂಡಿರುವ, ಜಗತ್ತನ್ನೇ ನೆಕ್ಕುವಂತಹ ಜಿಹ್ವೆಗಳನ್ನು ಹೊಂದಿರುವ, ಸೂರ್ಯಪ್ರಭೆಯಿಂದ ಕೂಡಿದವರು ಶ್ವೇತದ್ವೀಪ ನಿವಾಸಿಗಳು.

ಭಕ್ಯಾ ದೇವಂ ವಿಶ್ವಾ ವಿಶ್ವೋತ್ಪತ್ತ್ಯವ್ಯಯಂ ಯಸ್ಮಾತ್ ಸರ್ವೇ ಸೂತಾಃ ।
ವೇದಾ ಧರ್ಮಾ ಮುನಯಃ ಶಾಂತಾ ದೇವಾಃ ಸರ್ವೇ ತಸ್ಯ ವಿಸರ್ಗಾಃ ॥

ಇಂತಹ ಶ್ವೇತದ್ವೀಪ ನಿವಾಸಿಗಳು ಭಕ್ತಿಯಿಂದ ಮುಕ್ತರ ಉತ್ಪತ್ತಿಗೆ ಕಾರಣನಾದ, ನಾಶರಹಿತನಾದ, ಸಮಸ್ತ ಜಗತ್ತಿಗೆಲ್ಲ ಸೃಷ್ಟಿಕರ್ತನಾದ ಭಗವಂತನನ್ನು ಆರಾಧಿಸುತ್ತಾರೆ. ಸಮಸ್ತ ಜಗತ್ತು, ವೇದ, ಧರ್ಮ, ಶಾಂತರಾದ ಮುನಿಗಳು, ದೇವತೆಗಳು, ಎಲ್ಲರೂ ಅವನಿಂದಲೇ ಸೃಷ್ಟಿಯನ್ನು ಹೊಂದಿರುತ್ತಾರೆ.

ಯುಧಿಷ್ಠಿರಃ

ಅತೀಂದ್ರಿಯಾ ನಿರಾಹಾರಾ ಅನಿಷ್ಪಂದಾಃ ಸುಗಂಧಿನಃ ।
ಕಥಂ ತೇ ಪುರುಷಾ ಜಾತಾಃ ಕಾ ತೇಷಾಂ ಗತಿರುತ್ತಮಾ ॥೧೩॥

ಯುಧಿಷ್ಠಿರ– ಪಿತಾಮಹನೇ, ಶ್ವೇತದ್ವೀಪ ನಿವಾಸಿಗಳು ಅತೀಂದ್ರಿಯರು, ನಿರಾಹಾರಿಗಳು, ಸ್ಪಂದನೆ ಇಲ್ಲದವರು, ಸುಗಂಧಿಗಳು ಎಂದು ಹೇಳಿರುತ್ತೀರಿ, ಅವರು ಹೇಗೆ ಉತ್ಪತ್ತಿಯನ್ನು ಹೊಂದಿದರು? ಅವರ ಉತ್ತಮವಾದ ಗತಿಯಾದರೂ ಯಾವುದು?

ಯೇ ವಿಮುಕ್ತಾ ಭವಂತೀಹ ನರಾ ಭರತಸತ್ತಮ ।
ತೇಷಾಂ ಲಕ್ಷಣಮೇತದ್ಧಿ ಯಚ್ಚ್ವೇತದ್ವೀಪವಾಸಿನಾಮ್ ॥೧೪॥

ಭರತಶ್ರೇಷ್ಠನೇ, ಮುಕ್ತರಾದ ಜನರಿಗೆ ಲೋಕದಲ್ಲಿ ಯಾವ ಲಕ್ಷಣಗಳನ್ನು ಹೇಳಿರುತ್ತಾರೋ ಅದೇ ಲಕ್ಷಣಗಳೇ ಶ್ವೇತದ್ವೀಪ ನಿವಾಸಿಗಳಿಗೂ ಇರುತ್ತದೆ.

ತಸ್ಮಾನ್ಮೇ ಸಂಶಯಂ ಛಿಂಧಿ ಪರಂ ಕೌತೂಹಲಂ ಹಿ ಮೇ ।
ತ್ವಂ ಹಿ ಸರ್ವಕಥಾರಾಮಸ್ತ್ವಾಂ ಚೈವೋಪಾಶ್ರಿತಾ ವಯಮ್ ॥೧೫॥

ಇದು ಹೇಗೆ ಸಾಧ್ಯವೆಂಬ ಸಂಶಯವೂ, ಕುತೂಹಲವೂ ನನಗೆ ಉಂಟಾಗಿದೆ. ನೀನು ಎಲ್ಲ ಕಥೆಗಳಿಗೂ ಉದ್ಯಾನವನದಂತಿರುವಿ. ಅಂತಹ ನಿನ್ನನ್ನೇ ನಾವು ಆಶ್ರಯಿಸಿದ್ದೇವೆ. ಆದ್ದರಿಂದ ನನ್ನ ಸಂಶಯವನ್ನು ಪರಿಹರಿಸುವಂತೆ ಉತ್ತರಿಸು.

ಭೀಷ್ಮಃ

ವಿಸ್ತೀರ್ಣೈಷಾ ಕಥಾ ರಾಜನ್ ಶ್ರುತಾ ಮೇ ಪಿತೃಸನ್ನಿಧೌ ।
ಸೈಷಾ ತವ ಹಿ ವಕ್ತವ್ಯಾ ಕಥಾಸಾರೋ ಹಿ ಸ ಸ್ಮೃತಃ ॥೧೬॥

ಭೀಷ್ಮ– ಯುಧಿಷ್ಠಿರನೇ, ಈ ಕಥೆಯು ಬಹಳ ಉತ್ತೀರ್ಣವಾದುದು. ನಮ್ಮ ತಂದೆಯ ಬಳಿ ಕೇಳಿದ್ದೇನೆ. ಅದರ ಸಾರವನ್ನು ನಿನಗೆ ನಾನು ಹೇಳಬೇಕಾಗಿದೆ.

ರಾಜೋಪರಿಚರೋ ನಾಮ ಬಭೂವಾಧಿಪತಿರ್ಭುವಃ ।
ಆಖಂಡಲಸಖಃ ಖ್ಯಾತೋ ಭಕ್ತೋ ನಾರಾಯಣಂ ಹರಿಮ್ ॥೧೭॥

ಹಿಂದೆ ಉಪರಿಚರನೆಂಬ ರಾಜನು ಸಮಸ್ತ ಭೂಮಂಡಲಕ್ಕೆ ರಾಜನಾಗಿದ್ದನು. ಶ್ರೀಹರಿಯ ಭಕ್ತನೂ ಆಗಿದ್ದನು.

ಧಾರ್ಮಿಕೋ ನಿತ್ಯಭಕ್ತಶ್ಚ ಪಿತೄನ್ನಿತ್ಯಮತಂದ್ರಿತಃ ।
ಸಾಮ್ರಾಜ್ಯಂ ತೇನ ಸಂಪ್ರಾಪ್ತಂ ನಾರಾಯಣವರಾತ್ ಪುರಾ ॥೧೮॥

ಧಾರ್ಮಿಕನು, ನಿತ್ಯಭಕ್ತನು, ಏಕಾಗ್ರತೆಯಿಂದ ಪಿತೃಗಳನ್ನು ಸೇವಿಸುವವನೂ ಆದ ಆ ರಾಜನು ನಾರಾಯಣನ ವರದಿಂದ ಹಿಂದೆ ಸಮಗ್ರ ಸಾಮ್ರಾಜ್ಯವನ್ನೂ ಹೊಂದಿದ್ದನು.

ಸಾತ್ವತಂ ವಿಧಿಮಾಸ್ಥಾಯ ಪ್ರಾಕ್ಸೂರ್ಯಮುಖನಿಃಸೃತಮ್ ।
ಪೂಜಯಾಮಾಸ ದೇವೇಶಂ ತಚ್ಛೇಷೇಣ ಪಿತಾಮಹಾನ್ ॥೧೯॥

ಅವನು ಹಿಂದೆ ಸೂರ್ಯನ ಮುಖದಿಂದ ಪ್ರಕಟವಾದ ಪಂಚರಾತ್ರ ವಿಧಿಯನ್ನು ಆಶ್ರಯಿಸಿ ದೇವೇಶನಾದ ನಾರಾಯಣನ ಅರ್ಚನೆಯನ್ನು ಮಾಡುತ್ತಿದ್ದನು. ಆ ಭಗವಂತನ ಆರಾಧನೆಯನ್ನು ಮಾಡಿ ಉಳಿದ ಸಾಮಗ್ರಿಗಳಿಂದ ಪಿತೃಗಳನ್ನು ಆರಾಧಿಸುತ್ತಿದ್ದನು.

ಪಿತೃಶೇಷೇಣ ವಿಪ್ರಾಂಶ್ಚ ಸಂವಿಭಜ್ಯಾಶ್ರಿತಾಂಶ್ಚ ಸಃ ।
ಶೇಷಾನ್ನಭುಕ್ತ್ಯಪರಃ ಸರ್ವಭೂತೇಷ್ವಹಿಂಸಕಃ ।
ಸರ್ವಭಾವೇನ ಭಕ್ತಃ ಸ ದೇವದೇವಂ ಜನಾರ್ದನಮ್ ॥೨೦॥

ಪಿತೃಗಳ ಆರಾಧನೆಯಾದ ಬಳಿಕ ಉಳಿದ ಪದಾರ್ಥಗಳನ್ನು ಬ್ರಾಹ್ಮಣರಿಗೆ, ಆಶ್ರಿತರಿಗೆ ದಾನ ಮಾಡಿ, ಅದರಲ್ಲೂ ಉಳಿದ ಬಳಿಕ ಶೇಷಾನ್ನವನ್ನು ಸ್ವೀಕರಿಸುತ್ತಿದ್ದನು. ಸಮಸ್ತ ಭೂತಗಳಲ್ಲಿ ಪ್ರೀತಿಯುಳ್ಳವನೂ, ಅಹಿಂಸಾ ಧರ್ಮನಿರತನೂ ಆದ ಉಪರಿಚರ ವಸುವು ದೇವದೇವನಾದ ಜನಾರ್ದನನನ್ನು ಎಲ್ಲ ವಿಧದಲ್ಲೂ ಆರಾಧಿಸಿದನು.

ತಸ್ಯ ನಾರಾಯಣೇ ಭಕ್ತಿಂ ವಹತೋಽಮಿತ್ರಕರ್ಶನ ।
ಏಕಶಯ್ಯಾಸನಂ ಶಕ್ರೋ ದತ್ತವಾನ್ ದೇವರಾಟ್ ಸ್ವಯಮ್ ॥೨೧॥

ಶತ್ರುಗಳನ್ನು ಸಂಹರಿಸುವ ಧರ್ಮರಾಜನೇ, ಉಪರಿಚರ ವಸುವಿನ ನಾರಾಯಣನಲ್ಲಿರುವ ಭಕ್ತಿಯನ್ನು ಕಂಡ ಇಂದ್ರದೇವನು ಪ್ರಸನ್ನನಾಗಿ ತನ್ನ ಹಾಸಿಗೆಯಲ್ಲಿ, ಸಿಂಹಾಸನದಲ್ಲಿ ತನ್ನ ಜೊತೆಯಲ್ಲಿ ಸ್ಥಾನವನ್ನು ಕೊಟ್ಟನು.

ಆತ್ಮಾ ರಾಜ್ಯಂ ಧನಂ ಚೈವ ಕಲತ್ರಂ ವಾಹನಾನಿ ಚ ।
ಏತದ್ಭಗವತೇ ಸರ್ವಮಿತಿ ತತ್ ಪ್ರೇಕ್ಷಿತಂ ಸದಾ ॥೨೨॥

ಉಪರಿಚರ ವಸುವು ತನ್ನ ರಾಜ್ಯ, ಐಶ್ವರ್ಯ, ಭಾರ್ಯೆ, ವಸ್ತು, ವಾಹನ ಇವೆಲ್ಲವೂ ಭಗವಂತನದ್ದೇ ಎಂದು ಭಾವಿಸುತ್ತಾ ಅವನಿಗೇ ಸಮರ್ಪಿಸುತ್ತಿದ್ದನು.

ಕಾಮ್ಯನೈಮಿತ್ತಿಕಾಜಸ್ರಂ ಯಜ್ಞಿಯಾಃ ಪರಮಕ್ರಿಯಾಃ ।
ಸರ್ವಾಃ ಸಾತ್ವತಮಾಸ್ಥಾಯ ವಿಧಿಂ ಚಕ್ರೇ ಸಮಾಹಿತಃ ॥೨೩॥

ಉಪರಿಚರ ವಸುವು ಭಗವಂತನಲ್ಲಿಯೇ ಏಕಾಗ್ರ ಬುದ್ಧಿಯಿಂದ ಇರುತ್ತಾ ಸಕಾಲ ಕರ್ಮಗಳನ್ನು, ನೈಮಿತ್ತಿಕ ಕರ್ಮಗಳನ್ನು, ಯಜ್ಞ ಮೊದಲಾದ ಶ್ರೇಷ್ಠ ಕರ್ಮಗಳನ್ನು ಪಂಚರಾತ್ರ ವಿಧಿಯನ್ನೇ ಆಶ್ರಯಿಸಿ ಮಾಡುತ್ತಿದ್ದನು.

ಪಂಚರಾತ್ರವಿದೋ ಮುಖ್ಯಾಸ್ತಸ್ಯ ಗೇಹೇ ಮಹಾತ್ಮನಃ ।
ಪ್ರಾಯಣಂ ಭಗವತ್ಪ್ರೋಕ್ತಂ ಭುಂಜತೇ ಚಾಗ್ರಭೋಜನಮ್ ॥೨೪॥

ಆ ಉಪರಿಚರ ವಸುವಿನ ಮನೆಯಲ್ಲಿ ಭಗವಂತನಿಗೆ ಅರ್ಪಿತವಾದ ಪ್ರಸಾದವನ್ನು ಪಂಚರಾತ್ರಾಗಮದಲ್ಲಿ ಪ್ರವೀಣರಾದ ಬ್ರಾಹ್ಮಣಶ್ರೇಷ್ಠರು ಮೊದಲು ಸ್ವೀಕರಿಸುತ್ತಿದ್ದರು.

ತಸ್ಯ ಪ್ರಶಾಸತೋ ರಾಜ್ಯಂ ಧರ್ಮೇಣಾಮಿತ್ರಘಾತಿನಃ ।
ನಾನೃತಾ ವಾಕ್ಸಮಭವನ್ಮನೋ ದುಷ್ಟಂ ನ ಚಾಭವತ್ ।
ನ ಚ ಕಾಯೇನ ಕೃತವಾನ್ ಸ ಪಾಪಂ ಪರಮಣ್ವಪಿ ॥೨೫॥

ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಾ ಶತ್ರುಸಂಹಾರಕನಾದ ರಾಜನ ಬಾಯಿಂದ ಎಂದೂ ಸುಳ್ಳಾದ ಮಾತು ಹೊರಡುತ್ತಿರಲಿಲ್ಲ. ಅವನ ಮನಸ್ಸು ವಿಷಯದಿಂದ ದೂಷಿತವಾಗಿರಲಿಲ್ಲ. ತನ್ನ ಶರೀರದಿಂದ ಅಣುಮಾತ್ರದಷ್ಟೂ ಪಾಪವನ್ನು ಆಚರಿಸಿರಲಿಲ್ಲ.

ಯೇ ಹಿ ತೇ ಮುನಯಃ ಖ್ಯಾತಾಃ ಸಪ್ತ ಚಿತ್ರಶಿಖಂಡಿನಃ ।
ತೈರೇಕಮತಿಭಿರ್ಭೂತ್ವಾ ಯತ್ ಪ್ರೋಕ್ತಂ ಶಾಸ್ತ್ರಮುತ್ತಮಮ್ ॥೨೬॥

ಚಿತ್ರಶಿಖಂಡಿಗಳು ಎಂದು ಖ್ಯಾತರಾದ ಮರೀಚ್ಯಾದಿ ಋಷಿಗಳೆಲ್ಲರೂ ಒಂದೇ ಬುದ್ಧಿಯಿಂದ ಹೇಳಿದ ಶ್ರೇಷ್ಠವಾದ ಯಾವ ಶಾಸ್ತ್ರವಿದೆಯೋ ಅದನ್ನು ನಿನಗೆ ಹೇಳುತ್ತೇನೆ, ಕೇಳು.

ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾತೇಜಾ ಏತೇ ಚಿತ್ರಶಿಖಂಡಿನಃ ॥೨೭॥

ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಮಹಾತೇಜಸ್ವಿಯಾದ ವಸಿಷ್ಠ ಇವರು ಚಿತ್ರಶಿಖಂಡಿಗಳು ಎನಿಸಿದ್ದಾರೆ.

ಸಪ್ತ ಪ್ರಕೃತಯೋ ಹ್ಯೇತಾಸ್ತಥಾ ಸ್ವಾಯಂಭುವೋಽಷ್ಟಮಃ ।
ಏತಾಭಿರ್ಧಾರ್ಯತೇ ಲೋಕಸ್ತಾಭ್ಯಃ ಶಾಸ್ತ್ರಂ ವಿನಿಃಸೃತಮ್ ॥೨೮॥

ಈ ಏಳು ಮಂದಿ ಋಷಿಗಳು ಎಂಟನೆಯವನಾದ ಸ್ವಾಯಂಭುವ ಮನುವು ಲೋಕಕ್ಕೆ ಕಾರಣರು. ಲೋಕವನ್ನು ಧರಿಸಿದ್ದಾರೆ. ಪಂಚರಾತ್ರಾಗಮವೂ ಇವರಿಂದಲೇ ಹೊರಹೊಮ್ಮಿದೆ.

ಪಿತೃಶೇಷೇಣ ವಿಪ್ರಾಂಶ್ಚ ಸಂವಿಭಜ್ಯಾಶ್ರಿತಾಂಶ್ಚ ಸಃ ।
ಶೇಷಾನ್ನಭುಕ್ಸತ್ಯಪರಃ ಸರ್ವಭೂತೇಷ್ವಹಿಂಸಕಃ ।
ಸರ್ವಭಾವೇನ ಭಕ್ತಃ ಸ ದೇವದೇವಂ ಜನಾರ್ದನಮ್ ॥೨೦॥

ಪಿತೃಗಳ ಆರಾಧನೆಯಾದ ಬಳಿಕ ಉಳಿದ ಪದಾರ್ಥಗಳನ್ನು ಬ್ರಾಹ್ಮಣರಿಗೆ, ಆಶ್ರಿತರಿಗೆ ದಾನ ಮಾಡಿ, ಅದರಲ್ಲೂ ಉಳಿದ ಬಳಿಕ ಶೇಷಾನ್ನವನ್ನು ಸ್ವೀಕರಿಸುತ್ತಿದ್ದನು. ಸಮಸ್ತ ಭೂತಗಳಲ್ಲಿ ಪ್ರೀತಿಯುಳ್ಳವನೂ, ಅಹಿಂಸಾ ಧರ್ಮನಿರತನೂ ಆದ ಉಪರಿಚರ ವಸುವು ದೇವದೇವನಾದ ಜನಾರ್ದನನನ್ನು ಎಲ್ಲ ವಿಧದಲ್ಲೂ ಆರಾಧಿಸಿದನು.

ತಸ್ಯ ನಾರಾಯಣೇ ಭಕ್ತಿಂ ವಹತೋಽಮಿತ್ರಕರ್ಶನ ।
ಏಕಶಯ್ಯಾಸನಂ ಶಕ್ರೋ ದತ್ತವಾನ್ ದೇವರಾಟ್ ಸ್ವಯಮ್ ॥೨೧॥

ಶತ್ರುಗಳನ್ನು ಸಂಹರಿಸುವ ಧರ್ಮರಾಜನೇ, ಉಪರಿಚರ ವಸುವಿನ ನಾರಾಯಣನಲ್ಲಿರುವ ಭಕ್ತಿಯನ್ನು ಕಂಡ ಇಂದ್ರದೇವನು ಪ್ರಸನ್ನನಾಗಿ ತನ್ನ ಹಾಸಿಗೆಯಲ್ಲಿ, ಸಿಂಹಾಸನದಲ್ಲಿ ತನ್ನ ಜೊತೆಯಲ್ಲಿ ಸ್ಥಾನವನ್ನು ಕೊಟ್ಟನು.

ಆತ್ಮಾ ರಾಜ್ಯಂ ಧನಂ ಚೈವ ಕಲತ್ರಂ ವಾಹನಾನಿ ಚ ।
ಏತದ್ಭಗವತೇ ಸರ್ವಮಿತಿ ತತ್ ಪ್ರೇಕ್ಷಿತಂ ಸದಾ ॥೨೨॥

ಉಪರಿಚರ ವಸುವು ತನ್ನ ರಾಜ್ಯ, ಐಶ್ವರ್ಯ, ಭಾರ್ಯೆ, ವಸ್ತು, ವಾಹನ ಇವೆಲ್ಲವೂ ಭಗವಂತನದ್ದೇ ಎಂದು ಭಾವಿಸುತ್ತಾ ಅವನಿಗೇ ಸಮರ್ಪಿಸುತ್ತಿದ್ದನು.

ಕಾಮ್ಯನೈಮಿತ್ತಿಕಾಜಸ್ರಂ ಯಜ್ಞಿಯಾಃ ಪರಮಕ್ರಿಯಾಃ ।
ಸರ್ವಾಃ ಸಾತ್ವತಮಾಸ್ಥಾಯ ವಿಧಿಂ ಚಕ್ರೇ ಸಮಾಹಿತಃ ॥೨೩॥

ಉಪರಿಚರ ವಸುವು ಭಗವಂತನಲ್ಲಿಯೇ ಏಕಾಗ್ರ ಬುದ್ಧಿಯಿಂದ ಇರುತ್ತಾ ಸಕಾಲ ಕರ್ಮಗಳನ್ನು, ನೈಮಿತ್ತಿಕ ಕರ್ಮಗಳನ್ನು, ಯಜ್ಞ ಮೊದಲಾದ ಶ್ರೇಷ್ಠ ಕರ್ಮಗಳನ್ನು ಪಂಚರಾತ್ರ ವಿಧಿಯನ್ನೇ ಆಶ್ರಯಿಸಿ ಮಾಡುತ್ತಿದ್ದನು.

ಪಂಚರಾತ್ರವಿದೋ ಮುಖ್ಯಾಸ್ತಸ್ಯ ಗೇಹೇ ಮಹಾತ್ಮನಃ ।
ಪ್ರಾಯಣಂ ಭಗವತ್ಪ್ರೋಕ್ತಂ ಭುಂಜತೇ ಚಾಗ್ರಭೋಜನಮ್ ॥೨೪॥

ಆ ಉಪರಿಚರ ವಸುವಿನ ಮನೆಯಲ್ಲಿ ಭಗವಂತನಿಗೆ ಅರ್ಪಿತವಾದ ಪ್ರಸಾದವನ್ನು ಪಂಚರಾತ್ರಾಗಮದಲ್ಲಿ ಪ್ರವೀಣರಾದ ಬ್ರಾಹ್ಮಣಶ್ರೇಷ್ಠರು ಮೊದಲು ಸ್ವೀಕರಿಸುತ್ತಿದ್ದರು.

ತಸ್ಯ ಪ್ರಶಾಸತೋ ರಾಜ್ಯಂ ಧರ್ಮೇಣಾಮಿತ್ರಘಾತಿನಃ ।
ನಾನೃತಾ ವಾಕ್ಸಮಭವನ್ಮನೋ ದುಷ್ಟಂ ನ ಚಾಭವತ್ ।
ನ ಚ ಕಾಯೇನ ಕೃತವಾನ್ ಸ ಪಾಪಂ ಪರಮಣ್ವಪಿ ॥೨೫॥

ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಾ ಶತ್ರುಸಂಹಾರಕನಾದ ರಾಜನ ಬಾಯಿಂದ ಎಂದೂ ಸುಳ್ಳಾದ ಮಾತು ಹೊರಡುತ್ತಿರಲಿಲ್ಲ. ಅವನ ಮನಸ್ಸು ವಿಷಯದಿಂದ ದೂಷಿತವಾಗಿರಲಿಲ್ಲ. ತನ್ನ ಶರೀರದಿಂದ ಅಣುಮಾತ್ರದಷ್ಟೂ ಪಾಪವನ್ನು ಆಚರಿಸಿರಲಿಲ್ಲ.

ಯೇ ಹಿ ತೇ ಮುನಯಃ ಖ್ಯಾತಾಃ ಸಪ್ತ ಚಿತ್ರಶಿಖಂಡಿನಃ ।
ತೈರೇಕಮತಿಭಿರ್ಭೂತ್ವಾ ಯತ್ ಪ್ರೋಕ್ತಂ ಶಾಸ್ತ್ರಮುತ್ತಮಮ್ ॥೨೬॥

ಚಿತ್ರಶಿಖಂಡಿಗಳು ಎಂದು ಖ್ಯಾತರಾದ ಮರೀಚ್ಯಾದಿ ಋಷಿಗಳೆಲ್ಲರೂ ಒಂದೇ ಬುದ್ಧಿಯಿಂದ ಹೇಳಿದ ಶ್ರೇಷ್ಠವಾದ ಯಾವ ಶಾಸ್ತ್ರವಿದೆಯೋ ಅದನ್ನು ನಿನಗೆ ಹೇಳುತ್ತೇನೆ, ಕೇಳು.

ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾತೇಜಾ ಏತೇ ಚಿತ್ರಶಿಖಂಡಿನಃ ॥೨೭॥

ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಮಹಾತೇಜಸ್ವಿಯಾದ ವಸಿಷ್ಠ ಇವರು ಚಿತ್ರಶಿಖಂಡಿಗಳು ಎನಿಸಿದ್ದಾರೆ.

ಸಪ್ತ ಪ್ರಕೃತಯೋ ಹ್ಯೇತಾಸ್ತಥಾ ಸ್ವಾಯಂಭುವೋಽಷ್ಟಮಃ ।
ಏತಾಭಿರ್ಧಾರ್ಯತೇ ಲೋಕಸ್ತಾಭ್ಯಃ ಶಾಸ್ತ್ರಂ ವಿನಿಃಸೃತಮ್ ॥೨೮॥

ಈ ಏಳು ಮಂದಿ ಋಷಿಗಳು ಎಂಟನೆಯವನಾದ ಸ್ವಾಯಂಭುವ ಮನುವು ಲೋಕಕ್ಕೆ ಕಾರಣರು. ಲೋಕವನ್ನು ಧರಿಸಿದ್ದಾರೆ. ಪಂಚರಾತ್ರಾಗಮವೂ ಇವರಿಂದಲೇ ಹೊರಹೊಮ್ಮಿದೆ.

ಪಿತೃಶೇಷೇಣ ವಿಪ್ರಾಂಶ್ಚ ಸಂವಿಭಜ್ಯಾಶ್ರಿತಾಂಶ್ಚ ಸಃ ।
ಶೇಷಾನ್ನಭುಕ್ಸತ್ಯಪರಃ ಸರ್ವಭೂತೇಷ್ವಹಿಂಸಕಃ ।
ಸರ್ವಭಾವೇನ ಭಕ್ತಃ ಸ ದೇವದೇವಂ ಜನಾರ್ದನಮ್ ॥೨೦॥

ಪಿತೃಗಳ ಆರಾಧನೆಯಾದ ಬಳಿಕ ಉಳಿದ ಪದಾರ್ಥಗಳನ್ನು ಬ್ರಾಹ್ಮಣರಿಗೆ, ಆಶ್ರಿತರಿಗೆ ದಾನ ಮಾಡಿ, ಅದರಲ್ಲೂ ಉಳಿದ ಬಳಿಕ ಶೇಷಾನ್ನವನ್ನು ಸ್ವೀಕರಿಸುತ್ತಿದ್ದನು. ಸಮಸ್ತ ಭೂತಗಳಲ್ಲಿ ಪ್ರೀತಿಯುಳ್ಳವನೂ, ಅಹಿಂಸಾ ಧರ್ಮನಿರತನೂ ಆದ ಉಪರಿಚರ ವಸುವು ದೇವದೇವನಾದ ಜನಾರ್ದನನನ್ನು ಎಲ್ಲ ವಿಧದಲ್ಲೂ ಆರಾಧಿಸಿದನು.

ತಸ್ಯ ನಾರಾಯಣೇ ಭಕ್ತಿಂ ವಹತೋಽಮಿತ್ರಕರ್ಶನ ।
ಏಕಶಯ್ಯಾಸನಂ ಶಕ್ರೋ ದತ್ತವಾನ್ ದೇವರಾಟ್ ಸ್ವಯಮ್ ॥೨೧॥

ಶತ್ರುಗಳನ್ನು ಸಂಹರಿಸುವ ಧರ್ಮರಾಜನೇ, ಉಪರಿಚರ ವಸುವಿನ ನಾರಾಯಣನಲ್ಲಿರುವ ಭಕ್ತಿಯನ್ನು ಕಂಡ ಇಂದ್ರದೇವನು ಪ್ರಸನ್ನನಾಗಿ ತನ್ನ ಹಾಸಿಗೆಯಲ್ಲಿ, ಸಿಂಹಾಸನದಲ್ಲಿ ತನ್ನ ಜೊತೆಯಲ್ಲಿ ಸ್ಥಾನವನ್ನು ಕೊಟ್ಟನು.

ಆತ್ಮಾ ರಾಜ್ಯಂ ಧನಂ ಚೈವ ಕಲತ್ರಂ ವಾಹನಾನಿ ಚ ।
ಏತದ್ಭಗವತೇ ಸರ್ವಮಿತಿ ತತ್ ಪ್ರೇಕ್ಷಿತಂ ಸದಾ ॥೨೨॥

ಉಪರಿಚರ ವಸುವು ತನ್ನ ರಾಜ್ಯ, ಐಶ್ವರ್ಯ, ಭಾರ್ಯೆ, ವಸ್ತು, ವಾಹನ ಇವೆಲ್ಲವೂ ಭಗವಂತನದ್ದೇ ಎಂದು ಭಾವಿಸುತ್ತಾ ಅವನಿಗೇ ಸಮರ್ಪಿಸುತ್ತಿದ್ದನು.

ಕಾಮ್ಯನೈಮಿತ್ತಿಕಾಜಸ್ರಂ ಯಜ್ಞಿಯಾಃ ಪರಮಕ್ರಿಯಾಃ ।
ಸರ್ವಾಃ ಸಾತ್ವತಮಾಸ್ಥಾಯ ವಿಧಿಂ ಚಕ್ರೇ ಸಮಾಹಿತಃ ॥೨೩॥

ಉಪರಿಚರ ವಸುವು ಭಗವಂತನಲ್ಲಿಯೇ ಏಕಾಗ್ರ ಬುದ್ಧಿಯಿಂದ ಇರುತ್ತಾ ಸಕಾಲ ಕರ್ಮಗಳನ್ನು, ನೈಮಿತ್ತಿಕ ಕರ್ಮಗಳನ್ನು, ಯಜ್ಞ ಮೊದಲಾದ ಶ್ರೇಷ್ಠ ಕರ್ಮಗಳನ್ನು ಪಂಚರಾತ್ರ ವಿಧಿಯನ್ನೇ ಆಶ್ರಯಿಸಿ ಮಾಡುತ್ತಿದ್ದನು.

ಪಂಚರಾತ್ರವಿದೋ ಮುಖ್ಯಾಸ್ತಸ್ಯ ಗೇಹೇ ಮಹಾತ್ಮನಃ ।
ಪ್ರಾಯಣಂ ಭಗವತ್ಪ್ರೋಕ್ತಂ ಭುಂಜತೇ ಚಾಗ್ರಭೋಜನಮ್ ॥೨೪॥

ಆ ಉಪರಿಚರ ವಸುವಿನ ಮನೆಯಲ್ಲಿ ಭಗವಂತನಿಗೆ ಅರ್ಪಿತವಾದ ಪ್ರಸಾದವನ್ನು ಪಂಚರಾತ್ರಾಗಮದಲ್ಲಿ ಪ್ರವೀಣರಾದ ಬ್ರಾಹ್ಮಣಶ್ರೇಷ್ಠರು ಮೊದಲು ಸ್ವೀಕರಿಸುತ್ತಿದ್ದರು.

ತಸ್ಯ ಪ್ರಶಾಸತೋ ರಾಜ್ಯಂ ಧರ್ಮೇಣಾಮಿತ್ರಘಾತಿನಃ ।
ನಾನೃತಾ ವಾಕ್ಸಮಭವನ್ಮನೋ ದುಷ್ಟಂ ನ ಚಾಭವತ್ ।
ನ ಚ ಕಾಯೇನ ಕೃತವಾನ್ ಸ ಪಾಪಂ ಪರಮಣ್ವಪಿ ॥೨೫॥

ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಾ ಶತ್ರುಸಂಹಾರಕನಾದ ರಾಜನ ಬಾಯಿಂದ ಎಂದೂ ಸುಳ್ಳಾದ ಮಾತು ಹೊರಡುತ್ತಿರಲಿಲ್ಲ. ಅವನ ಮನಸ್ಸು ವಿಷಯದಿಂದ ದೂಷಿತವಾಗಿರಲಿಲ್ಲ. ತನ್ನ ಶರೀರದಿಂದ ಅಣುಮಾತ್ರದಷ್ಟೂ ಪಾಪವನ್ನು ಆಚರಿಸಿರಲಿಲ್ಲ.

ಯೇ ಹಿ ತೇ ಮುನಯಃ ಖ್ಯಾತಾಃ ಸಪ್ತ ಚಿತ್ರಶಿಖಂಡಿನಃ ।
ತೈರೇಕಮತಿಭಿರ್ಭೂತ್ವಾ ಯತ್ ಪ್ರೋಕ್ತಂ ಶಾಸ್ತ್ರಮುತ್ತಮಮ್ ॥೨೬॥

ಚಿತ್ರಶಿಖಂಡಿಗಳು ಎಂದು ಖ್ಯಾತರಾದ ಮರೀಚ್ಯಾದಿ ಋಷಿಗಳೆಲ್ಲರೂ ಒಂದೇ ಬುದ್ಧಿಯಿಂದ ಹೇಳಿದ ಶ್ರೇಷ್ಠವಾದ ಯಾವ ಶಾಸ್ತ್ರವಿದೆಯೋ ಅದನ್ನು ನಿನಗೆ ಹೇಳುತ್ತೇನೆ, ಕೇಳು.

ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾತೇಜಾ ಏತೇ ಚಿತ್ರಶಿಖಂಡಿನಃ ॥೨೭॥

ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಮಹಾತೇಜಸ್ವಿಯಾದ ವಸಿಷ್ಠ ಇವರು ಚಿತ್ರಶಿಖಂಡಿಗಳು ಎನಿಸಿದ್ದಾರೆ.

ಸಪ್ತ ಪ್ರಕೃತಯೋ ಹ್ಯೇತಾಸ್ತಥಾ ಸ್ವಾಯಂಭುವೋಽಷ್ಟಮಃ ।
ಏತಾಭಿರ್ಧಾರ್ಯತೇ ಲೋಕಸ್ತಾಭ್ಯಃ ಶಾಸ್ತ್ರಂ ವಿನಿಃಸೃತಮ್ ॥೨೮॥

ಈ ಏಳು ಮಂದಿ ಋಷಿಗಳು ಎಂಟನೆಯವನಾದ ಸ್ವಾಯಂಭುವ ಮನುವು ಲೋಕಕ್ಕೆ ಕಾರಣರು. ಲೋಕವನ್ನು ಧರಿಸಿದ್ದಾರೆ. ಪಂಚರಾತ್ರಾಗಮವೂ ಇವರಿಂದಲೇ ಹೊರಹೊಮ್ಮಿದೆ.

ಏಕಾಗ್ರಮನಸೋ ದಾಂತಾ ಮುನಯಃ ಸಂಯಮೇ ರತಾಃ ।
ಇದಂ ಶ್ರೇಯ ಇದಂ ಬ್ರಹ್ಮ ಇದಂ ಹಿತಮನುತ್ತಮಮ್ ।
ಲೋಕಾನ್ ಸಂಚಿಂತ್ಯ ಮನಸಾ ತತಃ ಶಾಸ್ತ್ರಂ ಪ್ರಚಕ್ರಿರೇ ॥೨೯॥

ಇವರೆಲ್ಲರೂ ಭಗವಂತನಲ್ಲಿಯೇ ಏಕಾಗ್ರತೆ ಉಳ್ಳವರು, ಜಿತೇಂದ್ರಿಯರು, ಮನೋನಿಗ್ರಹವುಳ್ಳವರು. ಇದು ಶ್ರೇಯೋಮಾರ್ಗವು, ಇದರಿಂದ ಬ್ರಹ್ಮನ ಪ್ರಾಪ್ತಿಯಾಗುತ್ತದೆ. ಈ ಕರ್ಮವನ್ನು ಮಾಡುವುದರಿಂದ ಶ್ರೇಷ್ಠವಾದ ಹಿತ ಉಂಟಾಗುತ್ತದೆ ಎಂದು ನಿರ್ಧರಿಸಿ, ಅಂತಹ ವಿಧಾನವನ್ನೇ ಶಾಸ್ತ್ರದ ಮೂಲಕ ತಿಳಿಸಿಕೊಟ್ಟರು.

ತತ್ರ ಧರ್ಮಾರ್ಥಕಾಮಾ ಹಿ ಮೋಕ್ಷಃ ಪಶ್ಚಾಚ್ಚ ಕೀರ್ತಿತಃ ।
ಮರ್ಯಾದಾ ವಿವಿಧಾಶ್ಚೈವ ದಿವಿ ಭೂಮೌ ಚ ಸಂಸ್ಥಿತಾಃ ॥೩೦॥

ಅವರು ರಚಿಸಿದ ಶಾಸ್ತ್ರದಲ್ಲಿ ಧರ್ಮಾರ್ಥ-ಕಾಮಗಳ ವಿಷಯವು ಮೊದಲು ಹೇಳಲ್ಪಟ್ಟಿದೆ, ಕೇಳಲ್ಪಟ್ಟಿದೆ. ಬಳಿಕ ಮೋಕ್ಷದ ವಿಷಯವನ್ನು ಹೇಳಿದ್ದಾರೆ. ಅವರು ಹೇಳಿದ ಶಾಸ್ತ್ರದ ವಿಧಿಗಳೇ ಸ್ವರ್ಗಲೋಕದಲ್ಲಿಯೂ, ಭೂಮಿಯಲ್ಲಿಯೂ ಪ್ರಸಿದ್ಧವಾಗಿವೆ.

ಆರಾಧ್ಯ ತಪಸಾ ದೇವಂ ಹರಿಂ ನಾರಾಯಣಂ ಪ್ರಭುಮ್ ।
ದಿವ್ಯಂ ವರ್ಷಸಹಸ್ರಂ ವೈ ಸರ್ವೇ ತೇ ಋಷಿಭಿಃ ಸಹ ॥೩೧॥

ಈ ಸಪ್ತರ್ಷಿಗಳು ಇತರ ಋಷಿಗಳ ಜೊತೆ ಸೇರಿ ದೇವತೆಗಳ ಒಂದು ಸಾವಿರ ವರ್ಷಗಳ ಕಾಲ ಹರಿ-ನಾರಾಯಣರನ್ನು ತಪಸ್ಸಿನ ಮೂಲಕ ಆರಾಧಿಸಿದರು.

ನಾರಾಯಣಾನುಶಾಸ್ತಾ ಹಿ ತದಾ ದೇವೀ ಸರಸ್ವತೀ ।
ವಿವೇಶ ತಾನೃಷೀನ್ ಸರ್ವಾಲ್ಲೋಕಾನಾಂ ಹಿತಕಾಮ್ಯಯಾ ॥೩೨॥

ಪ್ರೀತನಾದ ಶ್ರೀಹರಿಯು ಋಷಿಗಳ ಅಭಿಪ್ರಾಯವನ್ನು ತಿಳಿದು ಸರಸ್ವತಿಯನ್ನು ಅವರ ಬಳಿ ಕಳುಹಿಸಿದನು. ನಾರಾಯಣನ ಆಜ್ಞೆಗನುಗುಣವಾಗಿ ಲೋಕಕ್ಕೆಲ್ಲ ಹಿತವನ್ನು ಮಾಡುವ ಇಚ್ಛೆಯಿಂದ ಸರಸ್ವತೀದೇವಿಯು ಎಲ್ಲ ಋಷಿಗಳಲ್ಲಿಯೂ ಪ್ರವೇಶಿಸಿದಳು.

ತತಃ ಪ್ರವರ್ತಿತಾ ಸಮ್ಯಕ್ ತಪೋವಿದ್ಭಿರ್ದ್ವಿಜಾತಿಭಿಃ ।
ಶಬ್ದೇ ಚಾರ್ಥೇ ಚ ಹೇತೌ ಚ ಏಷಾ ಪ್ರಥಮಸರ್ಗಜಾ ॥೩೩॥

ಬಳಿಕ ತಪಸ್ವಿಗಳಾದ ಬ್ರಾಹ್ಮಣರು ಶಬ್ದ, ಅರ್ಥ, ಯುಕ್ತಿಗಳಿಂದ ಕೂಡಿದ ಶಾಸ್ತ್ರವನ್ನು ಲೋಕದಲ್ಲಿ ಪ್ರಚಾರ ಮಾಡಿದರು. ಪ್ರಥಮ ಸೃಷ್ಟಿಯಲ್ಲಿ ಈ ಪಂಚರಾತ್ರಾಗಮವು ರಚಿತವಾಯಿತು.

ಆದಾವೇವ ಹಿ ತಚ್ಛಾಸ್ತ್ರಮೋಂಕಾರಸ್ವರಭೂಷಿತಮ್ ।
ಋಷಿಭಿರ್ಭಾವಿತಂ ತತ್ರ ಯತ್ರ ಕಾರುಣಿಕೋ ಹ್ಯಸೌ ॥೩೪॥

ಈ ಶಾಸ್ತ್ರವು ಆರಂಭದಲ್ಲಿಯೇ ಓಂಕಾರ ಸ್ವರದಿಂದ ಅಲಂಕೃತವಾಗಿದೆ. ಋಷಿಗಳೆಲ್ಲರೂ ಆ ಶಾಸ್ತ್ರವನ್ನು ಎಲ್ಲಿ ಹೇಳಿದರೋ ಅಲ್ಲಿ ಕಾರುಣಿಕನಾದ ಭಗವಂತನೇ ವಿರಾಜಮಾನನಾಗಿದ್ದಾನೆ.

ತತಃ ಪ್ರಸನ್ನೋ ಭಗವಾನನಿರ್ದಿಷ್ಟಶರೀರಗಃ ।
ಋಷೀನುವಾಚ ತಾನ್ ಸರ್ವಾನದೃಶ್ಯಃ ಪುರುಷೋತ್ತಮಃ ॥೩೫॥

ಬಳಿಕ ನಿಯತವಾದ ಶರೀರವಿಲ್ಲದೆ ಸಂಚರಿಸುವ ಪ್ರಸನ್ನನಾದ ಭಗವಂತನು ಅದೃಶ್ಯನಾಗಿಯೇ ಇದ್ದು ಆ ಋಷಿಗಳಿಗೆ ಹೀಗೆ ಹೇಳಿದನು.

ಕೃತಂ ಶತಸಹಸ್ರಂ ಹಿ ಶ್ಲೋಕಾನಾಮಿದಮುತ್ತಮಮ್ ।
ಲೋಕತಂತ್ರಸ್ಯ ಕೃತ್ಸ್ನಸ್ಯ ಯಸ್ಮಾದ್ಧರ್ಮಃ ಪ್ರವರ್ತತೇ ॥೩೬॥

ಮುನಿಶ್ರೇಷ್ಠರೇ, ನೀವು ಒಂದು ಲಕ್ಷ ಶ್ಲೋಕಗಳಲ್ಲಿ ಸಮಗ್ರ ತಂತ್ರವನ್ನು ಪ್ರತಿಪಾದಿಸುವ ಉತ್ತಮ ಗ್ರಂಥವನ್ನು ರಚಿಸಿದ್ದೀರಿ. ಇದರಿಂದ ಎಲ್ಲ ವಿಧವಾದ ಲೋಕತಂತ್ರಗಳು ಪ್ರವೃತ್ತಿಯನ್ನು ಹೊಂದುತ್ತವೆ.

ಪ್ರವೃತ್ತೌ ಚ ನಿವೃತ್ತೌ ಚ ಯೋನಿರೇತದ್ ಭವಿಷ್ಯತಿ ।
ಋಗ್ಯಜುಃಸಾಮಭಿರ್ಜುಷ್ಟಮಥರ್ವಾಂಗಿರಸೈಸ್ತಥಾ ॥೩೭॥

ನೀವು ರಚಿಸಿದ ಶಾಸ್ತ್ರವು ಪ್ರವೃತ್ತಿ ಮತ್ತು ನಿವೃತ್ತಿ ಮಾರ್ಗಗಳಲ್ಲಿ ಸಾಗುವವರಿಗೆ ಅನುಕೂಲವಾಗುತ್ತದೆ. ಋಗ್ವೇದ, ಯಜುರ್ವೇದ, ಸಾಮವೇದಗಳಿಂದ ಕೂಡಿರುವ ಅಥರ್ವ-ಆಂಗಿರಸಾದಗಳಿಂದಲೂ ಸೇವಿತವಾಗಿರುವ ಶಾಸ್ತ್ರಗಳನ್ನು ರಚಿಸಿರುತ್ತೀರಿ.

ತಥಾ ಪ್ರಮಾಣಂ ಹಿ ಮಯಾ ಕೃತೋ ಬ್ರಹ್ಮಾ ಪ್ರಸಾದಜಃ ।
ರುದ್ರಶ್ಚ ಕ್ರೋಧಜೋ ಏಷ್ಯಾ ಯೂಯಂ ಪ್ರಕೃತಯಸ್ತಥಾ ॥೩೮॥

ಸೂರ್ಯಾಚಂದ್ರಮಸೌ ವಾಯುರ್ಭೂಮಿರಾಪೋಗ್ನಿರೇವ ಚ ।
ಸರ್ವೇ ಚ ನಕ್ಷತ್ರಗಣಾ ಯಚ್ಚ ಭೂತಾಭಿಶಬ್ದಿತಮ್ ॥೩೯॥

ನನ್ನ ಅನುಗ್ರಹದಿಂದ ಚತುರ್ಮುಖ ಬ್ರಹ್ಮನು ಹೇಗೆ ಪ್ರಾಮಾಣಿಕವಾಗಿ ಸೃಷ್ಟಿಯನ್ನು ಹೊಂದಿದನೋ, ಕೋಪದಿಂದ ಹುಟ್ಟಿದ ರುದ್ರನು; ಬ್ರಾಹ್ಮಣರಾದ ನೀವು, ಪ್ರಕೃತಿಗಳು, ಸೂರ್ಯ-ಚಂದ್ರರು, ವಾಯು, ಭೂಮಿ, ಜಲ, ಅಗ್ನಿ, ಸಮಸ್ತ ನಕ್ಷತ್ರಗಳು, ಭೂತ ಎಂಬ ಶಬ್ದದಿಂದ ಕರೆಸಿಕೊಂಡ ಪದಾರ್ಥಗಳು.

ಅಧಿಕಾರೇಷು ವರ್ತಂತೇ ಯಥಾಸ್ವಂ ಬ್ರಹ್ಮವಾದಿನಃ ।
ಸರ್ವೇ ಪ್ರಮಾಣಂ ಹಿ ಯಥಾ ತಥೈತಚ್ಛಾಸ್ತ್ರಮುತ್ತಮಮ್ ॥೪೦॥

ಭವಿಷ್ಯತಿ ಪ್ರಮಾಣಂ ವೈ ಏತನ್ಮದನುಶಾಸನಮ್ ।
ಅಸ್ಮಾತ್ ಪ್ರವಕ್ಷ್ಯತೇ ಧರ್ಮಾನ್ಮನುಃ ಸ್ವಾಯಂಭುವಃ ಸ್ವಯಮ್ ॥೪೧॥

ತಮ್ಮ ತಮ್ಮ ಅಧಿಕಾರದಲ್ಲಿ ಬ್ರಹ್ಮವಾದಿಗಳು ಹೇಗೆ ನಡೆದುಕೊಳ್ಳುತ್ತಾರೋ ಅದರಂತೆ ನೀವು ರಚಿಸಿದ ಈ ಶಾಸ್ತ್ರವು ಲೋಕದಲ್ಲಿ ಪ್ರಮಾಣವೆಂದು ಪ್ರಸಿದ್ಧವಾಗಲಿ. ಇದು ನನ್ನ ಆದೇಶವು. ನೀವು ಹೇಳಿದ ಶಾಸ್ತ್ರವು ಅನುತ್ತಮವಾದ ಶಾಸ್ತ್ರವು. ನೀವು ರಚಿಸಿದ ಶಾಸ್ತ್ರವನ್ನು ಅವಲಂಬಿಸಿಯೇ ಸ್ವಾಯಂಭುವ ಮನುವು ಸ್ವತಃ ಉದ್ಧಾರವನ್ನು ಹೊಂದಿ ಧರ್ಮವನ್ನು ಉಪದೇಶಿಸುತ್ತಾನೆ.

ಉಶನಾ ಬೃಹಸ್ಪತಿಶ್ಚೈವ ಯದೋತ್ಪನ್ನೌ ಭವಿಷ್ಯತಃ ।
ತದಾ ಪ್ರವಕ್ಷ್ಯತಃ ಶಾಸ್ತ್ರಂ ಯುಷ್ಮನ್ಮತಿಭಿರುದ್ಧತಮ್ ॥೪೨॥

ಶುಕ್ರ-ಬೃಹಸ್ಪತಿಗಳು ಹುಟ್ಟಿದ ಬಳಿಕ ಅವರು ನಿಮ್ಮ ಬುದ್ಧಿಯಿಂದ ಪ್ರಕಟವಾಗಿರುವ ಈ ಶಾಸ್ತ್ರವನ್ನೇ ಪ್ರವಚನ ಮಾಡುತ್ತಾರೆ.

ಸ್ವಾಯಂಭುವೇಷು ಧರ್ಮೇಷು ಶಾಸ್ತ್ರೇ ಚೋಶನಸಾ ಕೃತೇ ।
ಬೃಹಸ್ಪತಿಮತೇ ಚೈವ ಲೋಕೇಷು ಪ್ರವಿಚಾರಿತೇ ॥೪೩॥

ಯುಷ್ಮತ್ಕೃತಮಿದಂ ಶಾಸ್ತ್ರಂ ಪ್ರಜಾಪಾಲೋ ವಸುಸ್ತತಃ ।
ಬೃಹಸ್ಪತಿಸಕಾಶಾದ್ವೈ ಪ್ರಾಪ್ಸ್ಯತೇ ದ್ವಿಜಸತ್ತಮಾಃ ॥೪೪॥

ಸ್ವಾಯಂಭುವ ಮನುವಿನಿಂದ ರಚಿತವಾದ ಧರ್ಮಶಾಸ್ತ್ರಗಳು, ಶುಕ್ರನಿಂದ ರಚಿತವಾದ ಧರ್ಮಶಾಸ್ತ್ರಗಳು, ಬೃಹಸ್ಪತಿಗೆ ಅನುಗುಣವಾಗಿ ರಚಿತವಾದ ಶಾಸ್ತ್ರಗಳು ಲೋಕದಲ್ಲಿ ಪ್ರಸಿದ್ಧವಾಗಿರುವಾಗ ನಿಮ್ಮಿಂದ ರಚಿಸಲ್ಪಟ್ಟ ಈ ಶಾಸ್ತ್ರವನ್ನೇ ಪ್ರಜಾಪಾಲಕನಾದ ಉಪರಿಚರ ವಸುವು ಬೃಹಸ್ಪತಿಯ ಸನ್ನಿಧಾನದಲ್ಲಿ ಉಪದೇಶ ರೂಪವಾಗಿ ಹೊಂದುತ್ತಾನೆ.

ಸ ಹಿ ಮದ್ಭಾವಿತೋ ರಾಜಾ ಮದ್ಭಕ್ತಶ್ಚ ಭವಿಷ್ಯತಿ ।
ತೇನ ಶಾಸ್ತ್ರೇಣ ಲೋಕೇಷು ಕ್ರಿಯಾಃ ಸರ್ವಾಃ ಕರಿಷ್ಯತಿ ॥೪೫॥

ಸತ್ಪುರುಷರಿಂದ ಸಮ್ಮಾನಿತನಾದ ರಾಜನು ನನ್ನ ಭಕ್ತನಾಗುತ್ತಾನೆ. ಲೋಕದಲ್ಲಿ ಈ ಶಾಸ್ತ್ರಕ್ಕನುಗುಣವಾಗಿಯೇ ಸಮಸ್ತ ಕರ್ಮಗಳನ್ನು ಅನುಸರಿಸುತ್ತಾನೆ.

ಏತದ್ಧಿ ಸರ್ವಶಾಸ್ತ್ರಾಣಾಂ ಶಾಸ್ತ್ರಮುತ್ತಮಸಂಜ್ಞಿತಮ್ ।
ಏತದರ್ಥ್ಯಂ ಚ ಧರ್ಮ್ಯಂ ಚ ಯಶಸ್ಯಂ ಚೈತದುತ್ತಮಮ್ ॥೪೬॥

ನೀವು ರಚಿಸಿದ ಶಾಸ್ತ್ರವೇ ಸಮಸ್ತ ಶಾಸ್ತ್ರಗಳಿಗಿಂತ ಶ್ರೇಷ್ಠವಾದ ಅನುತ್ತಮ ಶಾಸ್ತ್ರ ಎಂದು ಪ್ರಸಿದ್ಧವಾಗುತ್ತದೆ. ಈ ಶಾಸ್ತ್ರವು ಕೀರ್ತಿದಾಯಕವೂ, ಧರ್ಮಬೋಧಕವೂ, ಉತ್ತಮವೂ ಆದುದು. ಅರ್ಥಶಾಸ್ತ್ರವೂ ಆಗಿದೆ.

ಅಸ್ಯ ಪ್ರವರ್ತನಾಚ್ಚೈವ ಪ್ರಜಾವಂತೋ ಭವಿಷ್ಯಥ ।
ಸ ಚ ರಾಜಾ ಶ್ರಿಯಾ ಯುಕ್ತೋ ಭವಿಷ್ಯತಿ ಮಹಾನ್ ವಸುಃ ॥೪೭॥

ಇದನ್ನು ಪ್ರಚಾರ ಮಾಡುವುದರಿಂದ ನೀವು ಉತ್ತಮ ಪ್ರಜೆಗಳನ್ನು ಹೊಂದುತ್ತೀರಿ. ಉಪರಿಚರ ವಸುವು ಈ ಶಾಸ್ತ್ರವನ್ನು ಅನುಸರಿಸಿ ಕರ್ಮಾಸಕ್ತನಾಗುವುದರಿಂದ ರಾಜ್ಯ ಲಕ್ಷ್ಮಿಯಿಂದ ಸಮೃದ್ಧಿಯನ್ನು ಹೊಂದುತ್ತಾನೆ.

ಸಂಸ್ಥಿತೇ ತು ನೃಪೇ ತಸ್ಮಿನ್ ಶಾಸ್ತ್ರಮೇತತ್ ಸನಾತನಮ್ ।
ಅಂತರ್ಧಾಸ್ಯತಿ ತತ್ ಸತ್ಯಮೇತದ್ವಃ ಕಥಿತಂ ಮಯಾ ॥೪೮॥

ಉಪರಿಚರ ವಸುವು ರಚಿಸಿದ ಬಳಿಕ ಈ ಶಾಸ್ತ್ರವು ಮರೆಯಾಗುತ್ತದೆ. ಈ ಶಾಸ್ತ್ರವನ್ನು ರಚಿಸಿರುವ ನಿಮಗೆ ಶಾಸ್ತ್ರಸಂಬಂಧಪಟ್ಟ ವಿಷಯವನ್ನೆಲ್ಲ ಹೇಳಿರುತ್ತೇನೆ.

ಏತಾವದುಕ್ತ್ವಾ ವಚನಮದೃಶ್ಯಃ ಪುರುಷೋತ್ತಮಃ ।
ವಿಸೃಜ್ಯ ತಾನೃಷೀನ್ ಸರ್ವಾನ್ ಕಾಮಪಿ ಪ್ರಸ್ಥಿತೋ ದಿಶಮ್ ॥೪೯॥

ಪುರುಷೋತ್ತಮನಾದ ನಾರಾಯಣನು ಅದೃಶ್ಯನಾಗಿ ಋಷಿಗಳ ಬಳಿ ಇಷ್ಟು ಹೇಳಿ, ಋಷಿಗಳನ್ನು ಬಿಟ್ಟು ಅಜ್ಞಾತವಾದ ದಿಕ್ಕಿನ ಕಡೆ ಹೋದನು.

ತತಸ್ತೇ ಲೋಕಪಿತರಃ ಸರ್ವಲೋಕಾರ್ಥಚಿಂತಕಾಃ ।
ಪ್ರಾವರ್ತಯಂತ ತಚ್ಛಾಸ್ತ್ರಂ ಧರ್ಮಯೋನಿಂ ಸನಾತನಮ್ ॥೫೦॥

ಬಳಿಕ ಸಕಲ ಲೋಕಗಳ ಹಿತವನ್ನು ಚಿಂತಿಸುವ ಸ್ವಭಾವವುಳ್ಳ ಪಿತೃಗಳು ಧರ್ಮಕ್ಕೆ ಮೂಲಭೂತವಾದ ಆ ಸನಾತನವಾದ ಶಾಸ್ತ್ರವನ್ನು ಪ್ರಚಾರ ಮಾಡಿದರು.

ಉತ್ಪನ್ನೇಂಗಾರಸೇ ಚೈವ ಯುಗೇ ಪ್ರಥಮಕಲ್ಪಿತೇ ।
ಸಾಂಗೋಪನಿಷದಂ ಶಾಸ್ತ್ರಂ ಸ್ಥಾಪಯಿತ್ವಾ ಬೃಹಸ್ಪತೌ ॥೫೧॥

ಪ್ರಥಮ ಕಲ್ಪದ ಮೊದಲನೆಯ ಯುಗದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾದ ಅಂಗಿರಸರಿಗೆ ಬೃಹಸ್ಪತಿಯು ಮಗನಾಗಿ ಹುಟ್ಟಿದನು. ಅವನಲ್ಲಿ ಷಡಂಗಗಳಿಂದ ಉಪನಿಷತ್ತಿನಿಂದ ತುಂಬಿರುವ ಪಂಚರಾತ್ರ ಶಾಸ್ತ್ರವನ್ನು ಋಷಿಗಳು ಸ್ಥಾಪಿಸಿದರು.

ಜಗ್ಮುರ್ಯಥೇಪ್ಸಿತಂ ದೇಶಂ ತಪಸೇ ಕೃತನಿಶ್ಚಯಾಃ ।
ಧಾರಣಾತ್ ಸರ್ವಲೋಕಾನಾಂ ಸರ್ವಧರ್ಮಪ್ರವರ್ತಕಾಃ ॥೫೨॥

ಬಳಿಕ, ಪ್ರವರ್ತಕರಾದ ಋಷಿಗಳು ಸಮಸ್ತ ಜಗತ್ತಿನ ಧಾರಣೆಗೆ ಈ ಶಾಸ್ತ್ರವೇ ಯೋಗ್ಯವೆಂದು ನಿರ್ಣಯಿಸಿ, ಬೃಹಸ್ಪತಿಯಲ್ಲಿ ಈ ಶಾಸ್ತ್ರವನ್ನು ಇರಿಸಿ ತಮಗೆ ಇಷ್ಟವಾದ ಸ್ಥಳಕ್ಕೆ ಹೊರಟು ಹೋದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಶ್ವೇತದ್ವೀಪವರ್ಣನಂ ನಾಮ
ಸಪ್ತಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೆಂಟೆಯ ಅಧ್ಯಾಯ

ಬೃಹಸ್ಪತಿಯು ಉಪರಿಚರ ವಸುವಿನಿಂದ ಯಜ್ಞವನ್ನು ಮಾಡಿಸಿದಾಗ ಭಗವಂತನೇ ಆ ಯಜ್ಞಕ್ಕೆ ಆಗಮಿಸಿ ಭಾಗವಹಿಸಿದುದು. ಬೃಹಸ್ಪತಿಯು ಕೋಪಗೊಂಡಾಗ ಏಕತನೇ ಮೊದಲಾದ ಋಷಿಗಳು ಸಮಾಧಾನಪಡಿಸಿದುದು.

ಭೀಷ್ಮಃ

ತತೋಽತೀತೇ ಮಹಾಕಲ್ಪೇ ಉತ್ಪನ್ನೇಽಂಗಿರಸಃ ಸುತೇ ।
ಬಭೂವುರ್ನಿರ್ವೃತಾ ದೇವಾ ಜಾತೇ ದೇವಪುರೋಹಿತೇ ॥೧॥

ಧರ್ಮರಾಜನೇ, ಮಹಾಕಲ್ಪವು ಕಳೆದ ಬಳಿಕ ಅಂಗಿರಸ ಕುಲದಲ್ಲಿ ಬೃಹಸ್ಪತಿಯು ಹುಟ್ಟಿದನು. ದೇವತೆಗಳೆಲ್ಲರೂ ತಮಗೆ ಪುರೋಹಿತನ ಲಾಭವಾಯಿತೆಂದು ಸಂತುಷ್ಟರಾದರು.

ಬೃಹದ್ ಬ್ರಹ್ಮ ಮಹಚ್ಚೇತಿ ಶಬ್ದಾಃ ಪರ್ಯಾಯವಾಚಕಾಃ ।
ಏಭಿಃ ಸಮನ್ವಿತೋ ರಾಜನ್ ಗುಣೈರ್ವಿದ್ವಾನ್ ಬೃಹಸ್ಪತಿಃ ॥೨॥

ಬೃಹದ್, ಬ್ರಹ್ಮ, ಮಹತ್ತು ಶಬ್ದಗಳು ಪರ್ಯಾಯ ಪದಗಳು. ಈ ಶಬ್ದದಿಂದಲೇ ಬೃಹಸ್ಪತಿಯು ವಿದ್ವಾಂಸನಾಗಿ ಕರೆಯಲ್ಪಟ್ಟಿದ್ದನು. ಎಲ್ಲ ಗುಣಗಳನ್ನೂ ಹೊಂದಿದ್ದನು.

ತಸ್ಯ ಶಿಷ್ಯೋ ಬಭೂವಾಗ್ರ್ಯೋ ರಾಜೋಪರಿಚರೋ ವಸುಃ ।
ಅಧೀತವಾಂಸ್ತದಾ ಶಾಸ್ತ್ರಂ ಸಮ್ಯಕ್ಚಿತ್ರಶಿಖಂಡಿಜಮ್ ॥೩॥

ಅವನಿಗೆ ಉಪರಿಚರ ವಸುವು ಅತ್ಯಂತ ಪ್ರಿಯಶಿಷ್ಯನು. ಅತ್ಯಂತ ಪ್ರಿಯ ಶಿಷ್ಯರಲ್ಲೇ ಶ್ರೇಷ್ಠನೆನಿಸಿದ್ದನು. ಸಪ್ತರ್ಷಿಗಳಿಂದ ಪ್ರಣೀತವಾದ ಪಂಚರಾತ್ರಾಗಮವನ್ನು ಅಧ್ಯಯನ ಮಾಡಿದ್ದನು.

ಸ ರಾಜಾ ಭಾವಿತಃ ಪೂರ್ವಂ ದೈವೇನ ವಿಧಿನಾ ವಸುಃ ।
ಪಾಲಯಾಮಾಸ ಪೃಥಿವೀಂ ದಿವಮಾಖಂಡಲೋ ಯಥಾ ॥೪॥

ಅಂತಹ ರಾಜನು ಅನೇಕ ಯಜ್ಞಗಳನ್ನು ನಡೆಸಿ ಶುದ್ಧನಾಗಿ ದೇವಲೋಕವನ್ನು ಹೇಗೆ ಇಂದ್ರನು ರಕ್ಷಿಸುತ್ತಾನೋ ಹಾಗೆ ಭೂಮಿಯನ್ನು ರಕ್ಷಿಸುತ್ತಿದ್ದನು.

ತಸ್ಯ ಯಜ್ಞೋ ಮಹಾನಾಸೀದಶ್ವಮೇಧೋ ಮಹಾತ್ಮನಃ ।
ಬೃಹಸ್ಪತಿರುಪಾಧ್ಯಾಯಸ್ತತ್ರ ಹೋತಾ ಬಭೂವ ಹ ॥೫॥

ಒಮ್ಮೆ ಉಪರಿಚರ ವಸುವು ಅಶ್ವಮೇಧ ಯಜ್ಞವನ್ನಾರಂಭಿಸಿದನು. ಆ ಯಜ್ಞಕ್ಕೆ ಬೃಹಸ್ಪತಿಯೇ ಹೋತೃವಾಗಿದ್ದನು.

ಪ್ರಜಾಪತಿಸುತಾಶ್ಚಾತ್ರ ಸದಸ್ಯಾಸ್ತ ಭವಂಸ್ತ್ರಯಃ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹರ್ಷಯಃ ॥೬॥

ಏಕತ, ದ್ವಿತ, ತ್ರಿತ ಎಂಬ ಮೂರು ಮಂದಿ ಮಹರ್ಷಿಗಳು ಆ ಯಜ್ಞದಲ್ಲಿ ಮುಖ್ಯ ಸದಸ್ಯರಾಗಿದ್ದರು.

ಧನುಷಾಕ್ಷೋಽಥ ರೈಭ್ಯಶ್ಚ ಅರ್ವಾವಸುಪರಾವಸೂ ।
ಋಷಿರ್ಮೇಧಾತಿಥಿಶ್ಚೈವ ತಾಂಡ್ಯಶ್ಚೈವ ಮಹಾನೃಷಿಃ ॥೭॥

ಋಷಿಃ ಶಕ್ತಿರ್ಮಹಾಭಾಗಸ್ತಥಾ ವೇದಶಿರಾಶ್ಚ ಯಃ ।
ಕಪಿಲಶ್ಚ ಋಷಿಶ್ರೇಷ್ಠಃ ಶಾಲಿಹೋತ್ರಪಿತಾಮಹಃ ॥೮॥

ಆದ್ಯಃ ಕಠಸ್ತೈತ್ತಿರಿಶ್ಚ ವೈಶಂಪಾಯನಪೂರ್ವಜಃ ।
ಕಣ್ವೋಽಥ ದೇವಹೋತ್ರಶ್ಚ ಏತೇ ಷೋಡಶ ಕೀರ್ತಿತಾಃ ।
ಸಂಭೃತಾಃ ಸರ್ವಸಂಭಾರಾಸ್ತಸ್ಮಿನ್ ರಾಜನ್ ಮಹಾಕ್ರತೌ ॥೯॥

ಇವರ ಜೊತೆಗೆ ಧನುಷ, ರೈಭ್ಯ, ಅರ್ವಾವಸು, ಪರಾವಸು, ಮೇಧಾತಿಥಿ, ತಾಂಡ್ಯನೆಂಬ ಮಹರ್ಷಿ, ಪೂಜ್ಯನಾದ ಶಕ್ತಿ, ವೇದಶಿರಸ್ಸು, ಶಾಲಿಹೋತ್ರನ ತಂದೆಯಾದ, ಋಷಿಶ್ರೇಷ್ಠನಾದ ಕಪಿಲನು, ಮೊದಲನೆಯ ಕಠನು, ವೈಶಂಪಾಯನನ ಅಣ್ಣನಾದ ತೈತ್ತಿರಿಯು, ಕಣ್ವನು, ದೇವಹೋತ್ರನೆಂಬ ಋಷಿಯು ಹೀಗೆ ಹದಿನಾರು ಮಂದಿ ಸದಸ್ಯರು ಆ ಯಜ್ಞದಲ್ಲಿದ್ದರು. ಯಜ್ಞ ಸಂಭಾರಗಳೆಲ್ಲ ಸಿದ್ಧವಾದವು.

ನ ತತ್ರ ಪಶುಘಾತೋಽಭೂತ್ಸ ರಾಜೈವಂ ಸ್ಥಿತೋಽಭವತ್ ।
ಅಹಿಂಸ್ರಃ ಶುಚಿರಕ್ಷುದ್ರೋ ನಿರಾಶೀಃ ಕರ್ಮಸಂಸ್ತುತಃ ।
ಆರಣ್ಯಕಪದೋದ್ ಗೀತಾ ಭಾಗಾಸ್ತತ್ರೋಪಕಲ್ಪಿತಾಃ ॥೧೦॥

ಅಲ್ಲಿ ಪಶುವಧೆಯನ್ನು ಮಾಡಬಾರದೆಂದು ರಾಜನು ಆದೇಶಿಸಿದನು. ಕಾರಣ ರಾಜನು ಪರಮ ದಯಾಳುವೂ, ಶುದ್ಧನೂ, ಉದಾರಬುದ್ಧಿಯುಳ್ಳವನೂ ಆಗಿದ್ದನು. ಯಾವ ಫಲದ ಅಭಿಪ್ರಾಯವೂ ಅವನಿಗಿರಲಿಲ್ಲ. ಅವನು ಸಂಗ್ರಹಿಸಿದ ಪದಾರ್ಥಗಳೆಲ್ಲ ಕಾಡಿನಿಂದಲೇ ಸಂಗ್ರಹಿಸಲ್ಪಟ್ಟಿದ್ದವು. ಶುದ್ಧ ವಸ್ತುಗಳು ಯಜ್ಞಕ್ಕಾಗಿ ಕಲ್ಪಿಸಲ್ಪಟ್ಟಿದ್ದವು.

ಪ್ರೀತಸ್ತತೋಽಸ್ಯ ಭಗವಾನ್ ದೇವದೇವಃ ಪುರಾತನಃ ।
ಸಾಕ್ಷಾತ್ತಂ ದರ್ಶಯಾಮಾಸ ಸೋಽದೃಶ್ಯೋಽನ್ಯೇನ ಕೇನಚಿತ್ ॥೧೧॥

ಸ್ವಯಂ ಭಾಗಮುಪಾಘ್ರಾಯ ಪುರೋಡಾಶಂ ಗೃಹೀತವಾನ್ ।
ಅದೃಶ್ಯೇನ ಹೃತೋ ಭಾಗೋ ದೇವೇನ ಹರಿಮೇಧಸಾ ॥೧೨॥

ಆ ಯಜ್ಞಕ್ಕೆ ದೇವದೇವನಾದ ಭಗವಾನ್ ಶ್ರೀಹರಿಯು ಸಂತುಷ್ಟನಾಗಿ, ಯಾರಿಗೂ ತಿಳಿಯದಂತೆ ರಾಜನಿಗೆ ಮಾತ್ರ ಪ್ರತ್ಯಕ್ಷನಾಗಿ, ಆಗಮಿಸಿ ತನ್ನ ಹವಿರ್ಭಾವವನ್ನು ಸ್ವೀಕರಿಸುತ್ತಾ ಅಲ್ಲಿರುವ ಪುರೋಡಾಶವನ್ನು ಸ್ವೀಕರಿಸಿದನು. ಹರಿಮೇಧಸ್ಸೆಂದು ಕರೆಯಲ್ಪಡುವ ಆ ಹರಿಯು ಬೃಹಸ್ಪತಿಗೆ ಕಾಣಿಸದೆ ತನ್ನ ಭಾಗವನ್ನು ಸ್ವೀಕರಿಸಿದನು.

ಬೃಹಸ್ಪತಿಸ್ತತಃ ಕ್ರುದ್ಧಃ ಸ್ರುವಮುದ್ಯಮ್ಯ ವೇಗಿತಃ ।
ಆಕಾಶಂ ಘ್ನಂಸ್ರವಃ ಪಾತ್ಯೈ ರೋಷಾದಶ್ರ್ಯುವರ್ತಯತ್ ॥೧೩॥

ತನಗೆ ಕಾಣಿಸದಂತೆ ಹವಿರ್ಭಾಗವನ್ನು ಸ್ವೀಕರಿಸಿದ ಕಾರಣದಿಂದ ಬೃಹಸ್ಪತಿಯು ಸಿಟ್ಟಾದನು. ಆಗ ಅವನು ಕೋಪದಿಂದ ಕೈಯಲ್ಲಿರುವ ಯಜ್ಞದ ಸ್ರವವನ್ನು ಎಸೆದನು. ದುಃಖದಿಂದ ಕಣ್ಣಿನಲ್ಲಿ ನೀರನ್ನು ಸುರಿಸಿದನು.

ಉವಾಚ ಚೋಪರಿಚರಂ ಮಯಾ ಭಾಗೋಽಯಮುದ್ಯತಃ ।
ಗ್ರಾಹ್ಯಃ ಸ್ವಯಂ ಹಿ ದೇವೇನ ಮತ್ಪ್ರತ್ಯಕ್ಷಂ ನ ಸಂಶಯಃ ॥೧೪॥

ಯಜ್ಞದೀಕ್ಷಿತನಾದ ರಾಜನನ್ನು ಕಂಡು ರಾಜನೇ, ಇದೋ ನಾನು ಹವಿರ್ಭಾಗವನ್ನು ನಾರಾಯಣನಿಗಾಗಿ ಕೊಡುತ್ತೇನೆ. ಅವನು ನನ್ನ ಕಣ್ಣಿಗೆ ಎದುರಾಗಿ ಬಂದು ಅದನ್ನು ಸ್ವೀಕರಿಸಬೇಕು. ಇದರಲ್ಲಿ ಯಾವ ಸಂಶಯವೂ ಇಲ್ಲ.

ತಸ್ಯ ಯಜ್ಞೋ ಮಹಾನಾಸೀದಶ್ವಮೇಧೋ ಮಹಾತ್ಮನಃ ।
ಬೃಹಸ್ಪತಿರುಪಾಧ್ಯಾಯಸ್ತತ್ರ ಹೋತಾ ಬಭೂವ ಹ ॥೫॥

ಒಮ್ಮೆ ಉಪರಿಚರ ವಸುವು ಅಶ್ವಮೇಧ ಯಜ್ಞವನ್ನಾರಂಭಿಸಿದನು. ಆ ಯಜ್ಞಕ್ಕೆ ಬೃಹಸ್ಪತಿಯೇ ಹೋತೃವಾಗಿದ್ದನು.

ಪ್ರಜಾಪತಿಸುತಾಶ್ಚಾತ್ರ ಸದಸ್ಯಾಸ್ತ ಭವಂಸ್ತ್ರಯಃ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹರ್ಷಯಃ ॥೬॥

ಏಕತ, ದ್ವಿತ, ತ್ರಿತ ಎಂಬ ಮೂರು ಮಂದಿ ಮಹರ್ಷಿಗಳು ಆ ಯಜ್ಞದಲ್ಲಿ ಮುಖ್ಯ ಸದಸ್ಯರಾಗಿದ್ದರು.

ಧನುಷಾಕ್ಷೋಽಥ ರೈಭ್ಯಶ್ಚ ಅರ್ವಾವಸುಪರಾವಸೂ ।
ಋಷಿರ್ಮೇಧಾತಿಥಿಶ್ಚೈವ ತಾಂಡ್ಯಶ್ಚೈವ ಮಹಾನೃಷಿಃ ॥೭॥

ಋಷಿಃ ಶಕ್ತಿರ್ಮಹಾಭಾಗಸ್ತಥಾ ವೇದಶಿರಾಶ್ಚ ಯಃ ।
ಕಪಿಲಶ್ಚ ಋಷಿಶ್ರೇಷ್ಠಃ ಶಾಲಿಹೋತ್ರಪಿತಾಮಹಃ ॥೮॥

ಆದ್ಯಃ ಕಠಸ್ತೈತ್ತಿರಿಶ್ಚ ವೈಶಂಪಾಯನಪೂರ್ವಜಃ ।
ಕಣ್ವೋಽಥ ದೇವಹೋತ್ರಶ್ಚ ಏತೇ ಷೋಡಶ ಕೀರ್ತಿತಾಃ ।
ಸಂಭೃತಾಃ ಸರ್ವಸಂಭಾರಾಸ್ತಸ್ಮಿನ್ ರಾಜನ್ ಮಹಾಕ್ರತೌ ॥೯॥

ಇವರ ಜೊತೆಗೆ ಧನುಷ, ರೈಭ್ಯ, ಅರ್ವಾವಸು, ಪರಾವಸು, ಮೇಧಾತಿಥಿ, ತಾಂಡ್ಯನೆಂಬ ಮಹರ್ಷಿ, ಪೂಜ್ಯನಾದ ಶಕ್ತಿ, ವೇದಶಿರಸ್ಸು, ಶಾಲಿಹೋತ್ರನ ತಂದೆಯಾದ, ಋಷಿಶ್ರೇಷ್ಠನಾದ ಕಪಿಲನು, ಮೊದಲನೆಯ ಕಠನು, ವೈಶಂಪಾಯನನ ಅಣ್ಣನಾದ ತೈತ್ತಿರಿಯು, ಕಣ್ವನು, ದೇವಹೋತ್ರನೆಂಬ ಋಷಿಯು ಹೀಗೆ ಹದಿನಾರು ಮಂದಿ ಸದಸ್ಯರು ಆ ಯಜ್ಞದಲ್ಲಿದ್ದರು. ಯಜ್ಞ ಸಂಭಾರಗಳೆಲ್ಲಸಿದ್ಧವಾದವು.

ನ ತತ್ರ ಪಶುಘಾತೋಽಭೂತ್ಸ ರಾಜೈವಂ ಸ್ಥಿತೋಽಭವತ್ ।
ಅಹಿಂಸ್ರಃ ಶುಚಿರಕ್ಷುದ್ರೋ ನಿರಾಶೀಃ ಕರ್ಮಸಂಸ್ತುತಃ ।
ಆರಣ್ಯಕಪದೋದ್ ಗೀತಾ ಭಾಗಾಸ್ತತ್ರೋಪಕಲ್ಪಿತಾಃ ॥೧೦॥

ಅಲ್ಲಿ ಪಶುವಧೆಯನ್ನು ಮಾಡಬಾರದೆಂದು ರಾಜನು ಆದೇಶಿಸಿದನು. ಕಾರಣ ರಾಜನು ಪರಮ ದಯಾಳುವೂ, ಶುದ್ಧನೂ, ಉದಾರಬುದ್ಧಿಯುಳ್ಳವನೂ ಆಗಿದ್ದನು. ಯಾವ ಫಲದ ಅಭಿಪ್ರಾಯವೂ ಅವನಿಗಿರಲಿಲ್ಲ. ಅವನು ಸಂಗ್ರಹಿಸಿದ ಪದಾರ್ಥಗಳೆಲ್ಲ ಕಾಡಿನಿಂದಲೇ ಸಂಗ್ರಹಿಸಲ್ಪಟ್ಟಿದ್ದವು. ಶುದ್ಧ ವಸ್ತುಗಳು ಯಜ್ಞಕ್ಕಾಗಿ ಕಲ್ಪಿಸಲ್ಪಟ್ಟಿದ್ದವು.

ಪ್ರೀತಸ್ತತೋಽಸ್ಯ ಭಗವಾನ್ ದೇವದೇವಃ ಪುರಾತನಃ ।
ಸಾಕ್ಷಾತ್ತಂ ದರ್ಶಯಾಮಾಸ ಸೋಽದೃಶ್ಯೋಽನ್ಯೇನ ಕೇನಚಿತ್ ॥೧೧॥

ಸ್ವಯಂ ಭಾಗಮುಪಾಘ್ರಾಯ ಪುರೋಡಾಶಂ ಗೃಹೀತವಾನ್ ।
ಅದೃಶ್ಯೇನ ಹೃತೋ ಭಾಗೋ ದೇವೇನ ಹರಿಮೇಧಸಾ ॥೧೨॥

ಆ ಯಜ್ಞಕ್ಕೆ ದೇವದೇವನಾದ ಭಗವಾನ್ ಶ್ರೀಹರಿಯು ಸಂತುಷ್ಟನಾಗಿ, ಯಾರಿಗೂ ತಿಳಿಯದಂತೆ ರಾಜನಿಗೆ ಮಾತ್ರ ಪ್ರತ್ಯಕ್ಷನಾಗಿ, ಆಗಮಿಸಿ ತನ್ನ ಹವಿರ್ಭಾವವನ್ನು ಸ್ವೀಕರಿಸುತ್ತಾ ಅಲ್ಲಿರುವ ಪುರೋಡಾಶವನ್ನು ಸ್ವೀಕರಿಸಿದನು. ಹರಿಮೇಧಸ್ಸೆಂದು ಕರೆಯಲ್ಪಡುವ ಆ ಹರಿಯು ಬೃಹಸ್ಪತಿಗೆ ಕಾಣಿಸದೆ ತನ್ನ ಭಾಗವನ್ನು ಸ್ವೀಕರಿಸಿದನು.

ಬೃಹಸ್ಪತಿಸ್ತತಃ ಕ್ರುದ್ಧಃ ಸ್ರುವಮುದ್ಯಮ್ಯ ವೇಗಿತಃ ।
ಆಕಾಶಂ ಘ್ನಂಸ್ರುವಃ ಪಾತ್ಯೈ ರೋಷಾದಶ್ರೂಣ್ಯವರ್ತಯತ್ ॥೧೩॥

ತನಗೆ ಕಾಣಿಸದಂತೆ ಹವಿರ್ಭಾಗವನ್ನು ಸ್ವೀಕರಿಸಿದ ಕಾರಣದಿಂದ ಬೃಹಸ್ಪತಿಯು ಸಿಟ್ಟಾದನು. ಆಗ ಅವನು ಕೋಪದಿಂದ ಕೈಯಲ್ಲಿರುವ ಯಜ್ಞದ ಸ್ರವವನ್ನು ಎಸೆದನು. ದುಃಖದಿಂದ ಕಣ್ಣಿನಲ್ಲಿ ನೀರನ್ನು ಸುರಿಸಿದನು.

ಉವಾಚ ಚೋಪರಿಚರಂ ಮಯಾ ಭಾಗೋಽಯಮುದ್ಯತಃ ।
ಗ್ರಾಹ್ಯಃ ಸ್ವಯಂ ಹಿ ದೇವೇನ ಮತ್ಪ್ರತ್ಯಕ್ಷಂ ನ ಸಂಶಯಃ ॥೧೪॥

ಯಜ್ಞದೀಕ್ಷಿತನಾದ ರಾಜನನ್ನು ಕಂಡು ರಾಜನೇ, ಇದೋ ನಾನು ಹವಿರ್ಭಾಗವನ್ನು ನಾರಾಯಣನಿಗಾಗಿ ಕೊಡುತ್ತೇನೆ. ಅವನು ನನ್ನ ಕಣ್ಣಿಗೆ ಎದುರಾಗಿ ಬಂದು ಅದನ್ನು ಸ್ವೀಕರಿಸಬೇಕು. ಇದರಲ್ಲಿ ಯಾವ ಸಂಶಯವೂ ಇಲ್ಲ.

ಉದ್ಯತಾ ಯಜ್ಞಭಾಗಾ ಹಿ ಸಾಕ್ಷಾತ್ ಪ್ರಾಪ್ತಾಃ ಸುರೈರಿಹ ।
ಕಿಮರ್ಥಮಿಹ ನ ಪ್ರಾಪ್ತೋ ದರ್ಶನಂ ಸ ಹರಿರ್ವಿಭುಃ ॥೧೫॥

ಬೇರೆ ಬೇರೆ ದೇವತೆಗಳು ತಮ್ಮ ತಮ್ಮ ರೂಪಗಳ ಜೊತೆಗೆ ಬರುತ್ತಿರುವಾಗ ನಾರಾಯಣನು ಅದೃಶ್ಯನಾಗಲು ಕಾರಣವೇನು?

ತತಃ ಸ ತಂ ಸಮುದ್ಧೂತಂ ಭೂಮಿಪಾಲೋ ಮಹಾನ್ ವಸುಃ ।
ಪ್ರಸಾದಯಾಮಾಸ ಮುನಿಂ ಸದಸ್ಯಾಸ್ತೇ ಚ ಸರ್ವಶಃ ॥೧೬॥

ಹೀಗೆ ಬೃಹಸ್ಪತಿಯು ಸಿಟ್ಟಿನಿಂದ ಹೇಳುವಾಗ ಅವನನ್ನು ರಾಜನನ್ನು, ಇತರ ಸದಸ್ಯರು ಸಮಾಧಾನ ಪಡಿಸಿದರು.

ಊಚುಶ್ಚೈನಮಸಂಭ್ರಾಂತಾ ನ ರೋಷಂ ಕರ್ತುಮರ್ಹಸಿ ।
ನೈಷ ಧರ್ಮಃ ಕೃತಯುಗೇ ಯಸ್ತ್ವಂ ರೋಷಮಚೀಕೃಥಾಃ ॥೧೭॥

ಆಚಾರ್ಯನೇ, ನೀನು ಎಷ್ಟು ಬಾರಿ ಪುರೋಡಾಶಗಳ ಹೋಮವನ್ನು ಮಾಡಿದೆಯೋ ಅದೆಲ್ಲವನ್ನೂ ಭಗವಂತನು ಪ್ರತ್ಯಕ್ಷವಾಗಿಯೇ ಸ್ವೀಕರಿಸಿದ್ದಾನೆ. ಆದ್ದರಿಂದ ನೀನು ಈಗ ರೋಷವನ್ನು ತಾಳಬೇಡ. ಕೃತಯುಗದ ಧರ್ಮದಲ್ಲಿ ರೋಷವನ್ನು ತಾಳುವುದು ಯುಕ್ತವಲ್ಲ.

ಅರೋಷಣೋ ಹ್ಯಸೌ ದೇವೋ ಯಸ್ಯ ಭಾಗೋಽಯಮುದ್ಯತಃ ।
ನ ಸ ಶಕ್ಯಸ್ತ್ವಯಾ ದ್ರಷ್ಟುಮಸ್ಮಾಭಿರ್ವಾ ಬೃಹಸ್ಪತೇ ।
ಯಸ್ಯ ಪ್ರಸಾದಂ ಕುರುತೇ ಸ ವೈ ತಂ ದ್ರಷ್ಟುಮರ್ಹತಿ ॥೧೮॥

ಭಗವಂತನು ರೋಷಗೊಳ್ಳದೆ ತನ್ನ ಭಾಗವನ್ನು ಸ್ವೀಕರಿಸಿದ್ದಾನೆ. ನಾನಾಗಲಿ, ನೀನಾಗಲಿ ಅವನನ್ನು ನೋಡಲು ಸಾಧ್ಯವಿಲ್ಲ. ಅವನು ಯಾರ ವಿಷಯದಲ್ಲಿ ಪ್ರಸನ್ನನಾಗುತ್ತಾನೋ ಅವನೇ ಅವನನ್ನು ಕಾಣಬಹುದು.

ಏಕತದ್ವಿತತ್ರಿತಾಃ

ವಯಂ ಹಿ ಬ್ರಹ್ಮಣಃ ಪುತ್ರಾ ಮಾನಸಾಃ ಪರಿಕೀರ್ತಿತಾಃ ।
ಗತಾ ನಿಃಶ್ರೇಯಸಾರ್ಥಂ ಹಿ ಕದಾಚಿದ್ದಿಶಮುತ್ತರಾಮ್ ॥೧೯॥

ಏಕತ ದ್ವಿತ ತ್ರಿತ– ನಾವೆಲ್ಲರೂ ಚತುರ್ಮುಖ ಬ್ರಹ್ಮನ ಮಾನಸ ಪುತ್ರರೆಂದು ಕರೆಸಿಕೊಂಡಿದ್ದೇವೆ. ಒಂದು ಬಾರಿ ಮೋಕ್ಷಕ್ಕಾಗಿ ಚಿಂತಿಸುತ್ತಾ ಉತ್ತರ ದಿಕ್ಕಿನ ಕಡೆ ಪ್ರಯಾಣ ಮಾಡಿದೆವು.

ತಪ್ತ್ವಾ ವರ್ಷಸಹಸ್ರಾಣಿ ಚತ್ವಾರಿ ತಪ ಉತ್ತಮಮ್ ।
ಏಕಪಾದಸ್ಥಿತಾಃ ಸಮ್ಯಕ್ಕಾಷ್ಠಭೂತಾಃ ಸಮಾಹಿತಾಃ ॥೨೦॥

ಅಲ್ಲಿ ನಾವು ಒಂದೇ ಕಾಲಿನಲ್ಲಿ ನಿಂತು ಸಮಾಧಿಯನ್ನು ಅವಲಂಬಿಸಿ ನಾಲ್ಕು ಸಾವಿರ ವರ್ಷಗಳ ತನಕ ತಪಸ್ಸನ್ನು ಆಚರಿಸುತ್ತಾ ಕಟ್ಟಿಗೆಯಂತೆ ನಿಶ್ಚೇಷ್ಟರಾಗಿದ್ದೆವು.

ಮೇರೋರುತ್ತರಭಾಗೇ ತು ಕ್ಷೀರೋದಸ್ಯಾನುಕೂಲತಃ ।
ಸ ದೇಶೋ ಯತ್ರ ನಸ್ತಪ್ತಂ ತಪಃ ಪರಮದಾರುಣಮ್ ।
ಕಥಂ ಪಶ್ಯೇಮಹಿ ವಯಂ ದೇವಂ ನಾರಾಯಣಂ ತ್ವಿತಿ ॥೨೧॥

ನಾವು ತಪಸ್ಸನ್ನು ಮಾಡುತ್ತಿದ್ದ ಸ್ಥಳವು ಮಹಾಮೇರುವಿನ ಉತ್ತರದಲ್ಲಿದೆ. ಕ್ಷೀರ ಸಮುದ್ರದ ಹತ್ತಿರದಲ್ಲಿದೆ. ಯಾವ ಸ್ಥಳದಲ್ಲಿ ಅತ್ಯಂತ ಭಯಂಕರವಾದ ತಪಸ್ಸನ್ನು ನಾವು ಆಚರಿಸಿದೆವೋ ಆ ತಪಸ್ಸಿನ ಉದ್ದೇಶವು ನಾವು ನಾರಾಯಣದೇವನನ್ನು ಹೇಗೆ ನೋಡುವುದು ಎಂಬುದೇ ಆಗಿತ್ತು.

ತತೋ ವ್ರತಸ್ಯಾವಭೃಥೇ ವಾಗುವಾಚಾಶರೀರಿಣೀ ।
ಸುತಪ್ತಂ ವಸ್ತಪೋ ವಿಪ್ರಾಃ ಪ್ರಸನ್ನೇನಾಂತರಾತ್ಮನಾ ॥೨೨॥

ಆ ತಪಸ್ಸು ಮುಗಿಸಿದ ಬಳಿಕ ಅವಭೃಥ ಕಾಲದಲ್ಲಿ ಗಂಭೀರವಾದ ವಾಣಿಯು ನಮ್ಮ ಕಿವಿಗೆ ಕೇಳಿಸಿತು. ಪ್ರಸನ್ನನಾದ ಭಗವಂತನೇ ಆಡಿದ ಮಾತಾಗಿತ್ತು.

ಯೂಯಂ ಜಿಜ್ಞಾಸವೋ ಭಕ್ತಾಃ ಕಥಂ ದ್ರಕ್ಷ್ಯಥ ತಂ ಪ್ರಭುಮ್ ।
ಕ್ಷೀರೋದಧೇರುತ್ತರತಃ ಶ್ವೇತದ್ವೀಪೋ ಮಹಾಪ್ರಭಃ ॥೨೩॥

ಬ್ರಾಹ್ಮಣರೇ, ನೀವು ಉತ್ತಮವಾದ ತಪಸ್ಸನ್ನೇ ಆಚರಿಸಿದ್ದೀರಿ. ಆದರೆ ನೀವು ನೋಡಬೇಕೆಂದು ಬಯಸುವ ಭಗವಂತನನ್ನು ನೀವು ಹೇಗೆ ತಾನೆ ನೋಡಲು ಸಾಧ್ಯ ? ಕ್ಷೀರ ಸಮುದ್ರದ ಉತ್ತರಕ್ಕೆ ಕಾಂತಿಯಿಂದ ಬೆಳಗುವ ಶ್ವೇತದ್ವೀಪವೆಂಬ ದ್ವೀಪವಿದೆ.

ತತ್ರ ನಾರಾಯಣಪರಾ ಮಾನವಾಶ್ಚಂದ್ರವರ್ಚಸಃ ।
ಏಕಾಂತಭಾವೋಪಗತಾಸ್ತೇ ಭಕ್ತಾಃ ಪುರುಷೋತ್ತಮಮ್ ॥೨೪॥

ಅಲ್ಲಿ ಚಂದ್ರನಂತೆ ಕಾಂತಿಯುಳ್ಳ, ನಾರಾಯಣನಲ್ಲಿಯೇ ಭಕ್ತನಾಗಿರುವ ಪುರುಷೋತ್ತಮನನ್ನು ಏಕಾಂತದಿಂದ ಭಜಿಸುವ ಅನೇಕ ಭಕ್ತರಿದ್ದಾರೆ.

ತೇ ಸಹಸ್ರಾರ್ಚಿಷಂ ದೇವಂ ಪ್ರವಿಶಂತಿ ಸನಾತನಮ್ ।
ಅತೀಂದ್ರಿಯಾ ನಿರಾಹಾರಾ ಅನಿಷ್ಪಂದಾಃ ಸುಗಂಧಿನಃ ॥೨೫॥

ಅಂತಹ ಉತ್ತಮ ಭಕ್ತರು ಸಹಸ್ರ ತೇಜಸ್ಸುಳ್ಳ ಸನಾತನನಾದ ಪುರುಷೋತ್ತಮನನ್ನು ಕಾಣಬಲ್ಲರು. ಅವರು ಇಂದ್ರಿಯಗಳನ್ನು ಜಯಿಸಿದವರು, ಆಹಾರವನ್ನು ತ್ಯಜಿಸಿದವರು, ದೇಹದ ಬಾಹ್ಯಚೇಷ್ಟೆಗಳನ್ನು ಸ್ಥಗಿತಗೊಳಿಸಿದವರು. ದಿವ್ಯವಾದ ಗಂಧವನ್ನು ಹೊಂದಿದವರು.

ಏಕಾಂತಿನಸ್ತೇ ಪುರುಷಾಃ ಶ್ವೇತದ್ವೀಪನಿವಾಸಿನಃ ।
ಗಚ್ಛಧ್ವಂ ತತ್ರ ಮುನಯಸ್ತತ್ರಾತ್ಮಾ ಮೇ ಪ್ರಕಾಶಿತಃ ॥೨೬॥

ಶ್ವೇತದ್ವೀಪ ನಿವಾಸಿಗಳಾದ ಅವರು ಭಗವಂತನನ್ನೇ ವಿಶೇಷವಾಗಿ ಚಿಂತಿಸುವ ಪುರುಷರು. ನೀವು ಅಂತಹ ಪುಣ್ಯಭೂಮಿಯನ್ನು ಕುರಿತು ತೆರಳಿರಿ. ಅಲ್ಲಿಯೇ ನಿಮಗೆ ಪರಮಾತ್ಮನ ಸ್ವರೂಪವು ಪ್ರತ್ಯಕ್ಷವಾಗುತ್ತದೆ.

ಅಥ ಶ್ರುತ್ವಾ ವಯಂ ಸರ್ವೇ ವಾಚಂ ತಾಮಶರೀರಿಣೀಮ್ ।
ಯಥಾಖ್ಯಾತೇನ ಮಾರ್ಗೇಣ ತಂ ದೇಶಂ ಪ್ರತಿಪೇದಿರೇ ॥೨೭॥

ಈ ಅಶರೀರವಾಣಿಯ ಮಾತನ್ನು ಕೇಳಿದ ಕೂಡಲೇ ನಾವೆಲ್ಲರೂ ಆ ಭಗವಂತನ ಸ್ವರೂಪವನ್ನು ನೋಡಬೇಕೆಂಬ ಆತುರದಿಂದ ಭಗವಂತನು ನಿರ್ದೇಶಿಸಿದ ಮಾರ್ಗದಿಂದಲೇ ಆ ದೇಶವನ್ನು ಹೊಂದಿದೆವು.

ಪ್ರಾಪ್ಯ ಶ್ವೇತಂ ಮಹಾದ್ವೀಪಂ ತಚ್ಚಿತ್ತಾಸ್ತದ್ ದಿದೃಕ್ಷವಃ ।
ತತೋ ನೋ ದೃಷ್ಟಿವಿಷಯಸ್ತದಾ ಪ್ರತಿಹತೋऽಭವತ್ ॥೨೮॥

ಮಹಾದ್ವೀಪವೆನಿಸಿದ ಆ ಶ್ವೇತದ್ವೀಪದಲ್ಲಿಯೇ ನೋಡುವ ಬಯಕೆಯನ್ನು ಹೊಂದಿರುವ ನಾವು ಆ ದ್ವೀಪವನ್ನು ಸಮೀಪಿಸಿದೆವು. ಆದರೆ ಅತ್ಯಂತ ಪ್ರಭೆಯ ದ್ವೀಪವಾದುದರಿಂದ ನಮ್ಮ ದೃಷ್ಟಿಗೆ ದ್ವೀಪವು ಕಾಣಿಸಲೇ ಇಲ್ಲ.

ನ ಚ ಪಶ್ಯಾಮ ಪುರುಷಂ ತತ್ತೇಜೋಹೃತದರ್ಶನಾಃ ।
ತತೋ ನಃ ಪ್ರಾದುರಭವದ್ ವಿಜ್ಞಾನಂ ದೇವಯೋಗಜಮ್ ॥೨೯॥

ಪರಮ ಪುರುಷನಾದ ಭಗವಂತನಿಂದ ಅಪಹರಿಸಲ್ಪಟ್ಟ ದೃಷ್ಟಿಯುಳ್ಳ ನಾವು ಅವನನ್ನು ನೋಡಲಾಗಲಿಲ್ಲ. ಆ ಸಮಯದಲ್ಲಿ ನಮಗೆ ದೇವಯೋಗದಿಂದ ಹುಟ್ಟಿದ ವಿಜ್ಞಾನವು ಹೃದಯದಲ್ಲಿ ಪ್ರಕಟವಾಯಿತು.

ನ ಕಿಲಾತಪ್ತತಪಸಾ ಶಕ್ಯತೇ ದ್ರಷ್ಟುಮಂಜಸಾ ।
ತತಃ ಪುನರ್ವರ್ಷಶತಂ ತಪ್ತ್ವಾ ತಾತ್ಕಾಲಿಕಂ ಮಹತ್ ॥೩೦॥

ಈ ಭಗವಂತನ ಸ್ವರೂಪವನ್ನು ತಪಸ್ಸಿಲ್ಲದೆ ನಾವು ನೋಡಲು ಸಾಧ್ಯವಿಲ್ಲ ಎಂಬ ಜ್ಞಾನವು ನಮಗೆ ಬಂದಿತು. ನಾವು ದೇಶ-ಕಾಲಕ್ಕೆ ತಕ್ಕಂತೆ ಮೂರು ಸಂವತ್ಸರಗಳ ಕಾಲ ಮಹಾತಪಸ್ಸನ್ನು ಆರಂಭಿಸಿದೆವು.

ವ್ರತಾವಸಾನೇ ಸುಶುಭಾನ್ ನರಾನ್ ದದೃಶಿರೇ ವಯಮ್ ।
ಶ್ವೇತಾಂಶ್ಚಂದ್ರಪ್ರತೀಕಾಶಾನ್ ಸರ್ವಲಕ್ಷಣಲಕ್ಷಿತಾನ್ ॥೩೧॥

ವ್ರತವು ಮುಗಿದ ಬಳಿಕ ಶುಭಲಕ್ಷಣವುಳ್ಳ ಕೆಲವು ವ್ಯಕ್ತಿಗಳು ಅಲ್ಲಿ ನಮಗೆ ಕಾಣಿಸಿಕೊಂಡರು. ಅವರೆಲ್ಲರೂ ಚಂದ್ರನಂತೆ ಬಿಳಿಯಾದ ಛಾಯೆಯುಳ್ಳವರು, ಯಾವಾಗಲೂ ಕೈಜೋಡಿಸಿಕೊಂಡು ಜಪ ಮಾಡುತ್ತಲೇ ಇದ್ದರು.

ನಿತ್ಯಾಂಜಲಿಕೃತಾನ್ ಬ್ರಹ್ಮ ಜಪತಃ ಪ್ರಾಗುದಙ್ಮುಖಾನ್ ।
ಮಾನಸೋ ನಾಮ ಸ ಜಪೋ ಜಪ್ಯತೇ ತೈರ್ಮಹಾತ್ಮಭಿಃ ।
ತೇನೈಕಾಗ್ರಮನಸ್ತ್ವೇನ ಪ್ರೀತೋ ಭವತಿ ವೈ ಹರಿಃ ॥೩೨॥

ಅವರು ಯಾವಾಗಲೂ ಕೈಜೋಡಿಸಿಕೊಂಡು ಜಪವನ್ನು ಮಾಡುತ್ತಲೇ ಇರುತ್ತಾರೆ. ಕೆಲವರು ಉತ್ತರದಿಕ್ಕಿಗೂ, ಕೆಲವರು ಪೂರ್ವದಿಕ್ಕಿಗೂ ಅಭಿಮುಖವಾಗಿ ಮಾನಸ

ಜಪವನ್ನು ಮಹಾತ್ಮರು ಮಾಡುತ್ತಿರುತ್ತಾರೆ. ಅವರ ಏಕಾಗ್ರ ಮನಸ್ಸಿನ ಜಪದಿಂದ ಶ್ರೀಹರಿಯು ಪ್ರೀತನಾಗುತ್ತಾನೆ.

ಯಾ ಭವೇನ್ಮುನಿಶಾರ್ದೂಲ ಭಾಃ ಸೂರ್ಯಸ್ಯ ಯುಗಕ್ಷಯೇ ।
ಏಕೈಕಸ್ಯ ಪ್ರಭಾ ತಾದೃಕ್ಸಾಭವನ್ಮಾನವಸ್ಯ ಹ ॥೩೩॥

ಅಲ್ಲಿ ಜಪಿಸುವ ಪ್ರತಿಯೊಬ್ಬರೂ ಪ್ರಳಯಸೂರ್ಯನಂತೆ ಜ್ವಲಿಸುವ ಸೂರ್ಯನಂತೆ ಕೂಡಿರುತ್ತಾರೆ.

ತೇಜೋನಿವಾಸಃ ಸ ದ್ವೀಪ ಇತಿ ವೈ ಮೇನಿರೇ ವಯಮ್ ।
ನ ತತ್ರಾಭ್ಯಧಿಕಃ ಕಶ್ಚಿತ್ ಸರ್ವೇ ತೇ ಸಮತೇಜಸಃ ॥೩೪॥

ಆ ದ್ವೀಪವು ತೇಜಸ್ಸಿಗೆಲ್ಲ ನಿವಾಸ ಎನಿಸಿದೆ. ಅಲ್ಲಿ ಒಬ್ಬನು ಹೆಚ್ಚು ಮತ್ತೊಬ್ಬನು ಕಡಿಮೆ ಎಂಬ ತಾರತಮ್ಯವು ಇರುವುದಿಲ್ಲ. ಎಲ್ಲರೂ ಸಮಾನ ತೇಜಸ್ವಿಗಳು.

ಅಥ ಸೂರ್ಯಸಹಸ್ರಸ್ಯ ಪ್ರಾಚ್ಯಾಂ ಯುಗಪದುತ್ಥಿತಾಮ್ ।
ಸಹಸಾ ದೃಷ್ಟವಂತಃ ಸ್ಮ ಪುನರೇವ ಬೃಹಸ್ಪತೇ ॥೩೫॥

ಬೃಹಸ್ಪತಿಯೇ, ಬಳಿಕ ಅಲ್ಲಿ ನಮಗೆ ಕೋಟಿ ಸೂರ್ಯರು ಒಂದೇ ಕಾಲದಲ್ಲಿ ಉದಿಸಿದಷ್ಟು ಅದ್ಭುತವಾದ ಕಾಂತಿಯು ಕಂಡಿತು.

ಸಹಿತಾಶ್ಚಾಭ್ಯಧಾವಂತ ತತಸ್ತೇ ಮಾನವಾ ದ್ರುತಮ್ ।
ಕೃತಾಂಜಲಿಪುಟಾ ಹೃಷ್ಟಾ ನಮ ಇತ್ಯೇವ ವಾದಿನಃ ॥೩೬॥

ಅದನ್ನು ನೋಡಿದ ಕೂಡಲೇ ಅಲ್ಲಿದ್ದ ನಾವೆಲ್ಲ ಪರಮಸಂತೋಷದಿಂದ ಎದ್ದು ನಿಂತು ಕೈಮುಗಿದು ಕೊಂಡು ನಮಃ ಎಂದು ಇಷ್ಟು ಮಾತ್ರ ಹೇಳುತ್ತಿದ್ದೆವು.

ತತೋಽಭಿವದತಾಂ ತೇಷಾಮಶ್ರೌಷ್ಮ ವಿಪುಲಂ ಧ್ವನಿಮ್ ।
ಬಲಿಃ ಕಿಲೋಪಹ್ರಿಯತೇ ತಸ್ಯ ದೇವಸ್ಯ ತೈರ್ನರೈಃ ॥೩೭॥

ನಂತರ ಅವರು ಮಾತನಾಡುತ್ತಿದ್ದ ಶಬ್ದವು ನಮ್ಮ ಕಿವಿಗೆ ಕೇಳಿಸಿತು. ಅವರು ಪೂಜೆಗಳನ್ನು ಸಮರ್ಪಿಸುವಂತೆ ತೋರಿತು. ಸರ್ವೋತ್ತಮನಾದ ಭಗವಂತನಿಗೆ ಪೂಜೆ ಮಾಡುವ ದೃಶ್ಯಗಳನ್ನು ನೋಡಿದೆವು.

ವಯಂ ತು ತೇಜಸಾ ತಸ್ಯ ಸಹಸಾ ಹೃತಚೇತಸಃ ।
ನ ಕಿಂಚಿದಪಿ ಪಶ್ಯಾಮೋ ಹೃತದೃಷ್ಟಿಬಲೇಂದ್ರಿಯಾಃ ॥೩೮॥

ಆ ಬೆಳಕಿನಿಂದ ಕೂಡಲೇ ಅಪಹರಿಸಲ್ಪಟ್ಟ ಮನಸ್ಸುಳ್ಳ ನಾವು ನಮ್ಮ ಇಂದ್ರಿಯಗಳ ಬಲವೆಲ್ಲವೂ ಅದರಿಂದ ಅಪಹೃತವಾದುದರಿಂದ ಏನನ್ನೂ ನಮ್ಮಿಂದ ನೋಡಲಾಗಲಿಲ್ಲ.

ಏಕಸ್ತು ಶಬ್ದೋಽವಿರತಃ ಶ್ರುತೋಽಸ್ಮಾಭಿರುದೀರಿತಃ ।
ಜಿತಂ ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ॥೩೯॥

ನಮಸ್ತೇಽಸ್ತು ಹೃಷೀಕೇಶ ಮಹಾಪುರುಷಪೂರ್ವಜ ।
ಇತಿ ಶಬ್ದಃ ಶ್ರುತೋಽಸ್ಮಾಭಿಃ ಶಿಕ್ಷಾಕ್ಷರಸಮೀರಿತಃ ॥೪೦॥

ಪುನಃ ಪುನಃ ನಿರಂತರ ನಾವು ಒಂದು ಶಬ್ದವನ್ನು ಕೇಳಿಸಿಕೊಂಡವು. 'ಜಿತಂ ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ. ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ' ಎಂಬ ಶ್ಲೋಕದ ಉಚ್ಚಾರಣೆಯು ಸ್ಪಷ್ಟವಾದ ಅಕ್ಷರವುಳ್ಳದ್ದಾಗಿ ಆಕಾಶವನ್ನೆಲ್ಲ ತುಂಬುವಂತೆ ನಮಗೆ ಕೇಳಿಸಿತು.

ಏತಸ್ಮಿನ್ನಂತರೇ ವಾಯುಃ ಸರ್ವಗಂಧವಹಃ ಶುಚಿಃ ।
ದಿವ್ಯಾನ್ಯುವಾಹ ಪುಷ್ಪಾಣಿ ಕರ್ಮಣ್ಯಾಶೌಷಧೀಸ್ತಥಾ ॥೪೧॥

ಇಷ್ಟರಲ್ಲಿ ದಿವ್ಯಗಂಧವನ್ನು ಬೀರುವ ಗಾಳಿಯು ಬೀಸಲಾರಂಭಿಸಿತು. ಆ ಗಾಳಿಯು ದಿವ್ಯಪುಷ್ಪಗಳನ್ನು, ಕರ್ಮಗಳಿಗೆ ಉಪಯುಕ್ತವಾದ ಓಷಧಿಗಳನ್ನು ತನ್ನಲ್ಲಿ ತುಂಬಿಕೊಂಡು ಬರುತ್ತಿತ್ತು.

ತೈರಿಷ್ಟಃ ಪಂಚಕಾಲಜ್ಞೈರ್ಹರಿರೇಕಾಂತಿಭಿರ್ನರೈಃ ।
ನೂನಂ ತತ್ರಾಗತೋ ದೇವೋ ಯಥಾ ತೈರ್ವಾಗುದೀರಿತಾ ।
ವಯಂ ತ್ವೇನಂ ನ ಪಶ್ಯಾಮೋ ಮೋಹಿತಾಸ್ತಸ್ಯ ಮಾಯಯಾ ॥೪೨॥

ಅಲ್ಲಿ ಪಂಚರಾತ್ರ ವಿಧಿಗಳನ್ನು ತಿಳಿದ ಭಕ್ತರು ತ್ರಿಕರಣಗಳಿಂದ ಶ್ರೀಹರಿಯನ್ನು ಭಜಿಸತೊಡಗಿದರು. ಆ ಶಬ್ದವು ಬಂದ ಸ್ಥಳದಲ್ಲಿ ಶ್ರೀಹರಿಯೇ ಇರಬೇಕೆಂದು ನಮಗೆ

ಅನಿಸಿತು. ಆದರೆ ಅವನ ಮಾಯೆಯಿಂದ ಮೋಹಿತರಾದ ನಮಗೆ ಅದನ್ನು ನೋಡಲು ಸಾಧ್ಯವಾಗಲಿಲ್ಲ.

ಮಾರುತೇ ಸನ್ನಿವೃತ್ತೇ ಚ ಬಲೌ ಚ ಪ್ರತಿಪಾದಿತೇ ।
ಚಿಂತಾವ್ಯಾಕುಲಿತಾತ್ಮಾನೋ ಜಾತಾಃ ಸ್ಮೋಽಂಗಿರಸಾಂ ವರ ॥೪೩॥

ಆ ಗಾಳಿಯು ನಿಂತು ಪೂಜಾಕಾರ್ಯವು ಮುಗಿದ ಬಳಿಕ ಬೃಹಸ್ಪತಿಯೇ, ನಮ್ಮ ಮನಸ್ಸು ಚಿಂತಾಗ್ರಸ್ಥವಾಯಿತು.

ಮಾನವಾನಾಂ ಸಹಸ್ರೇಷು ತೇಷು ವೈ ಶುದ್ಧಯೋನಿಷು ।
ಅಸ್ಮಾನ್ನ ಕಶ್ಚಿನ್ಮನಸಾ ಚಕ್ಷುಷಾ ವಾಪ್ಯಪೂಜಯತ್ ॥೪೪॥

ಸಾವಿರಾರು ಮಂದಿ ಅಲ್ಲಿ ನೆರೆದಿದ್ದರೂ ಶುದ್ಧಾತ್ಮರಾದ ಅವರಲ್ಲಿ ಒಬ್ಬರೂ ನಮ್ಮನ್ನು ಕಣ್ಣಿನಿಂದಲೂ ಸ್ವಾಗತಿಸಲಿಲ್ಲ. ಮನಸ್ಸಿನಿಂದಲೂ ನೆನೆಯಲಿಲ್ಲ.

ತೇಽಪಿ ಸ್ವಸ್ಥಾ ಮುನಿಗಣಾ ಏಕಭಾವಮನುವ್ರತಾಃ ।
ನಾಸ್ಮಾಸು ದಧಿರೇ ಭಾವಂ ಬ್ರಹ್ಮಭಾವಮನುಷ್ಠಿತಾಃ ॥೪೫॥

ಆ ಎಲ್ಲ ಮುನಿಗಳು ಏಕಾಗ್ರಚಿತ್ತರಾಗಿ ದೃಢವಾದ ವ್ರತವನ್ನು ಅವಲಂಬಿಸಿ, ಅನನ್ಯವಾದ ಭಕ್ತಿಯಿಂದ ಭಗವಂತನ ಸ್ವರೂಪವನ್ನು ಹೃದಯದಲ್ಲಿ ಚಿಂತಿಸುತ್ತಿದ್ದರು.

ತತೋಽಸ್ಮಾನ್ ಸುಪರಿಶ್ರಾಂತಾಂಸ್ತಪಸಾ ಚಾಪಿ ಕರ್ಶಿತಾನ್ ।
ಉವಾಚ ಖಸ್ಥಂ ಕಿಮಪಿ ಭೂತಂ ತತ್ರಾಶರೀರಕಮ್ ॥೪೬॥

ನಮ್ಮ ವಿಷಯದಲ್ಲಿ ಯಾವುದೇ ಭಾವನೆಯನ್ನು ಅವರು ತಿಳಿಸಲಿಲ್ಲ. ನಾವು ಮೊದಲೇ ತಪಸ್ಸಿನಿಂದ ಬಳಲಿದ್ದೆವು. ಇಷ್ಟರಲ್ಲಿ ನಮಗೆ ಅಶರೀರವಾಣಿಯು ಆಕಾಶದಿಂದ ಹೀಗೆ ನುಡಿಯಿತು.

ದೃಷ್ಟಾ ವಃ ಪುರುಷಾಃ ಶ್ವೇತಾಃ ಸರ್ವೇಂದ್ರಿಯವಿವರ್ಜಿತಾಃ ।
ದೃಷ್ಟೋ ಭವತಿ ದೇವೇಶ ಏಭಿರ್ಯಷ್ಟೈರ್ದ್ವಿಜೋತ್ತಮಾಃ ॥೪೭॥

ಎಲೈ ಪುರುಷರೇ, ಸಮಸ್ತ ಇಂದ್ರಿಯಗಳನ್ನು ಜಯಿಸಿರುವ ಈ ಶ್ವೇತಪುರುಷರೇ ನಾರಾಯಣನನ್ನು ನೋಡಲು ಅರ್ಹರಾಗಿದ್ದಾರೆ. ಇವರ ದರ್ಶನದಿಂದಲೇ ನೀವು ಆ ದೇವದೇವನನ್ನು ನೋಡಿದಂತಾಗಿರುತ್ತೀರಿ.

ಗಚ್ಛಧ್ವಂ ಮುನಯಃ ಸರ್ವೇ ಯಥಾಗತಮಿತೋಽಚಿರಾತ್ ।
ನ ಸ ಶಕ್ಯೋ ಅಭಕ್ತೇನ ದ್ರಷ್ಟುಂ ದೇವಃ ಕಥಂಚನ ॥೪೮॥

ನೀವು ಅನುಸರಿಸಿ ಬಂದ ದಾರಿಯನ್ನು ಪುನಃ ಅವಲಂಬಿಸಿ ಹಿಂದಿರುಗಿ ಹೋಗಿರಿ. ಭಕ್ತನಲ್ಲದವನಿಗೆ ಆ ಭಗವಂತನನ್ನು ಯಾವ ರೀತಿಯಿಂದಲೂ ನೋಡಲು ಸಾಧ್ಯವಿಲ್ಲ.

ಕಾಮಂ ಕಾಲೇನ ಮಹತಾ ಏಕಾಂತಿತ್ವಂ ಸಮಾಗತೈಃ ।
ಶಕ್ಯೋ ದ್ರಷ್ಟುಂ ಸ ಭಗವಾನ್ ಪ್ರಭಾಮಂಡಲದುರ್ದೃಶಃ ॥೪೯॥

ಏಕಾಂತ ಭಕ್ತಿಯುಳ್ಳವರಿಗೆ ಮಾತ್ರ ಬಹುಕಾಲದ ಬಳಿಕ ಪುಣ್ಯದಿಂದ ಒಂದು ಬಾರಿ ದೃಶ್ಯನಾಗುತ್ತಾನೆ. ಪ್ರಭಾಮಂಡಲದಿಂದ ನೋಡದೆ ಇರುವ ಭಗವಂತನನ್ನು ಕೆಲವೊಮ್ಮೆ ಮಾತ್ರ ಅವರಿಂದಲೂ ನೋಡಲು ಅರ್ಹನಾಗುತ್ತಾನೆ.

ಮಹತ್ ಕಾರ್ಯಂ ತು ಕರ್ತವ್ಯಂ ಯುಷ್ಮಾಭಿರ್ದ್ವಿಜಸತ್ತಮಾಃ ।
ಇತಃ ಕೃತಯುಗೇತೀತೇ ವಿಪರ್ಯಾಸಂ ಗತೇಽಪಿ ಚ ॥೫೦॥

ವೈವಸ್ವತೇಽಂತರೇ ವಿಪ್ರಾಃ ಪ್ರಾಪ್ತೇ ತ್ರೇತಾಯುಗೇ ತತಃ ।
ಸುರಾಣಾಂ ಕಾರ್ಯಸಿದ್ಧ್ಯರ್ಥಂ ಸಹಾಯಾ ವೈ ಭವಿಷ್ಯಥ ॥೫೧॥

ಮುಂದೆ ನೀವು ಮಾಡಬೇಕಾದ ಮಹತ್ತಾದ ಕಾರ್ಯವಿದೆ. ಕೃತಯುಗ ಕಳೆದ ಬಳಿಕ ತ್ರೇತಾಯುಗದಲ್ಲಿ ವೈವಸ್ವತ ಮನ್ವಂತರದಲ್ಲಿ ಲೋಕಕ್ಕೆಲ್ಲ ದೊಡ್ಡದೊಂದು ಒದಗಿ ಬರುವ ಆಪತ್ತನ್ನು ಪರಿಹರಿಸಲು ನೀವು ದೇವತೆಗಳಿಗೆ ಸಹಾಯಕರಾಗಿರಿ.

ತತಸ್ತದದ್ಭುತಂ ವಾಕ್ಯಂ ನಿಶಮ್ಯೈವಂ ಸ್ಮ ಸೋಮಪ ।
ತಸ್ಯ ಪ್ರಸಾದಾತ್ ಪ್ರಾಪ್ತಾಃ ಸ್ಮೋ ದೇಶಮೀಪ್ಸಿತಮಂಜಸಾ ॥೫೨॥

ಈ ವಾಕ್ಯಗಳನ್ನು ಕೇಳಿಸಿಕೊಂಡ ಬಳಿಕ ಅಮೃತಸಮಾನವೂ, ಅದ್ಭುತವೂ ಆದ ವಾಕ್ಯವನ್ನು ಕೇಳಿ, ಭಗವಂತನ ಅನುಗ್ರಹಕ್ಕೆ ಪಾತ್ರರಾದ ನಾವು ಅಲ್ಲಿಂದ ಹಿಂದಿರುಗಿ ನಮ್ಮ ಇಷ್ಟಸ್ಥಳಕ್ಕೆ ಆಗಮಿಸಿದೆವು.

ಏವಂ ಸುತಪಸಾ ಚೈವ ಹವ್ಯಕವ್ಯೈಸ್ತಥೈವ ಚ ।
ದೇವೋಽಸ್ಮಾಭಿರ್ನ ದೃಷ್ಟಃ ಸ ಕಥಂ ತ್ವಂ ದ್ರಷ್ಟುಮರ್ಹಸಿ ।
ನಾರಾಯಣೋ ಮಹದ್ಭೂತಂ ವಿಶ್ವಸೃಗ್ಹವ್ಯಕವ್ಯಭುಕ್ ॥೫೩॥

ಬೃಹಸ್ಪತಿಯೇ, ನಾವು ಹೀಗೆ ಮಹಾತಪಸ್ಸನ್ನು ಆಚರಿಸಿ ಹವ್ಯ-ಕವ್ಯಗಳನ್ನೆಲ್ಲ ನಿರ್ದುಷ್ಟವಾಗಿ ಆಚರಿಸುತ್ತಿದ್ದರೂ ಪರಮಪುರುಷನಾದ ಭಗವಂತನನ್ನು ಸಾಕ್ಷಾತ್ತಾಗಿ ನೋಡಲು ಶಕ್ತರಾಗಲಿಲ್ಲ. ಅಂತಹ ಭಗವಂತನನ್ನು ನೀನು ಹೇಗೆ ನೋಡಬಲ್ಲೆ? ನಾರಾಯಣನು ಸಮಸ್ತ ಭೂತಗಳಿಗೂ ಅಧಿಕನಾದ ಮಹಾಭೂತನೆನಿಸಿದ್ದಾನೆ. ಅವನೇ ಲೋಕವನ್ನು ಸೃಷ್ಟಿಸುವವನು. ಹವ್ಯ-ಕವ್ಯಗಳನ್ನು ಭುಂಜಿಸುವವನು ಅವನೇ ಆಗಿದ್ದಾನೆ.

ಭೀಷ್ಮಃ

ಏವಮೇಕತವಾಕ್ಯೇನ ದ್ವಿತತ್ರಿತಮತೇನ ಚ ।
ಅನುನೀತಃ ಸದಸ್ಯೈಶ್ಚ ಬೃಹಸ್ಪತಿರುದಾರಧೀಃ ।
ಸಮಾನೀಯ ತತೋ ಯಜ್ಞಂ ದೈವತಂ ಸಮಪೂಜಯತ್ ॥೫೪॥

ಈ ರೀತಿಯಾಗಿ ಏಕತ, ದ್ವಿತ, ತ್ರಿತ ಮೊದಲಾದ ಎಲ್ಲ ಸದಸ್ಯರು ಇದೇ ಅಭಿಪ್ರಾಯವನ್ನು ಅನುವೋದಿಸಿದರು. ಆಗ ಬೃಹಸ್ಪತಿಯ ಕೋಪವು ಶಾಂತವಾಯಿತು. ಅವನು ಕ್ರಮವಾಗಿ ದೇವತೆಗಳನ್ನೆಲ್ಲ ಆರಾಧಿಸಿ ಯಜ್ಞವನ್ನು ಸಮಾಪ್ತಿಗೊಳಿಸಿದನು.

ಸಮಾಪ್ತಯಜ್ಞೋ ರಾಜಾಪಿ ಪ್ರಜಾಃ ಪಾಲಿತವಾನ್ ವಸುಃ ।
ಬ್ರಹ್ಮಶಾಪಾದ್ದಿವೋ ಭ್ರಷ್ಟಃ ಪ್ರವಿವೇಶ ಮಹೀಂ ತತಃ ॥೫೫॥

ಯಜ್ಞವನ್ನು ಸಮಾಪ್ತಿಗೊಳಿಸಿದ ಉಪರಿಚರ ವಸು ರಾಜನಾದರೂ ಪ್ರಜೆಗಳನ್ನು ಯೋಗ್ಯರೀತಿಯಲ್ಲಿ ಪಾಲಿಸಿದನು. ಬ್ರಹ್ಮಶಾಪದಿಂದ ಸ್ವರ್ಗಭ್ರಷ್ಟನಾಗಿ ಭೂಮಿಗೆ ಇಳಿದನು.

ಅಂತರ್ಭೂಮಿಗತಶ್ಚೈವ ಸತತಂ ಧರ್ಮವತ್ಸಲಃ ।
ನಾರಾಯಣಪರೋ ಭೂತ್ವಾ ನಾರಾಯಣಪದಂ ಜಗೌ ॥೫೬॥

ಭೂಮಿಯ ನಡುಭಾಗದಲ್ಲಿ ಆಗಮಿಸಿದ ಉಪರಿಚರ ವಸುವು ಧರ್ಮವತ್ಸಲನಾಗಿ ನಾರಾಯಣನನ್ನೇ ನಿರಂತರ ಧ್ಯಾನಿಸುತ್ತಾ ನಾರಾಯಣಪದವನ್ನು ಹೊಂದಿದನು.

ತಸ್ಯೈವ ಚ ಪ್ರಸಾದೇನ ಪುನರೇವೋತ್ಥಿತಸ್ತು ಸಃ ।
ಮಹೀತಲಾದ್ ಗತಃ ಸ್ಥಾನಂ ಬ್ರಹ್ಮಣಃ ಸಮನಂತರಮ್ ।
ಪರಾಂ ಗತಿಮನುಪ್ರಾಪ್ತ ಇತಿ ನೈಷ್ಠಿಕಮಂಜಸಾ ॥೫೭॥

ಮುಂದೆ ಉಪರಿಚರ ವಸುವು ನಾರಾಯಣನ ಅನುಗ್ರಹದಿಂದ ಭೂಮಿಯ ಕೆಳಭಾಗದಿಂದ ಮೇಲಕ್ಕೆ ಬಂದು ಬ್ರಹ್ಮಲೋಕಕ್ಕೆ ಹೋಗಿ ಪರಮಗತಿಯನ್ನು ಹೊಂದಿದನು. ನಾರಾಯಣನ ಪರಮ ಭಕ್ತನಾದ್ದರಿಂದ ಉಪರಿಚರ ವಸುವು ನಿಷ್ಠಾವಂತರು ಹೊಂದುವ ಉತ್ತಮ ಗತಿಯನ್ನೇ ಹೊಂದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಷಷ್ಟ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂಬತ್ತನೆಯ ಅಧ್ಯಾಯ

ಉಪರಿಚರ ವಸುವು ಸ್ವರ್ಗಭ್ರಷ್ಟನಾಗಲು ಕಾರಣವೇನೆಂಬುದನ್ನು ನಿರೂಪಿಸಿದುದು.

ಯುಧಿಷ್ಠಿರಃ

ಯದಾ ಭಕ್ತೋ ಭಗವತ ಆಸೀದ್ರಾಜಾ ಮಹಾವಸುಃ ।
ಕಿಮರ್ಥಂ ಸ ಪರಿಭ್ರಷ್ಟೋ ವಿವೇಶ ವಿವರಂ ಭುವಃ ॥೧॥

ಯುಧಿಷ್ಠಿರ– ಪಿತಾಮಹನೇ, ಉಪರಿಚರ ವಸುವು ಭಗವಂತನ ಪರಮ ಭಕ್ತನೂ, ಮಹಾಪುರುಷನೂ ಆಗಿದ್ದನು. ಅವನು ಯಾವ ಕಾರಣದಿಂದ ಸ್ವರ್ಗದಿಂದ ಚ್ಯುತನಾಗಿ ಪಾತಾಳಕ್ಕೆ ಪ್ರವೇಶಿಸಿದನು?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಋಷೀಣಾಂ ಚೈವ ಸಂವಾದಂ ತ್ರಿದಶಾನಾಂ ಚ ಭಾರತ ॥೨॥

ಭೀಷ್ಮ– ಯುಧಿಷ್ಠಿರನೇ, ಈ ವಿಷಯದಲ್ಲಿ ಹಿಂದೆ ಋಷಿಗಳಿಗೂ ಮತ್ತು ದೇವತೆಗಳಿಗೂ ನಡೆದ ಪುರಾತನವಾದ, ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಅಜೇನ ಯಷ್ಟವ್ಯಮಿತಿ ದೇವಾಃ ಪ್ರಾಹುರ್ದ್ವಿಜೋತ್ತಮಾನ್ ।
ಸ ಚ ಛಾಗೋ ಹ್ಯಜೋ ಜ್ಞೇಯೋ ನಾನ್ಯಃ ಪಶುರಿತಿ ಸ್ಥಿತಿಃ ॥ ೩॥

ಹಿಂದೆ ಯಜ್ಞದ ಪ್ರಸಂಗದಲ್ಲಿ ದೇವತೆಗಳೆಲ್ಲ ಅಜದಿಂದಲೇ ಯಜ್ಞವನ್ನು ಮಾಡಬೇಕೆಂದು ಬ್ರಾಹ್ಮಣರಿಗೆ ಹೇಳಿದರು. ಅಜ ಎಂದರೆ ಹೋತ, ಛಾಗ ಹೊರತು ಬೇರೆ ಯಾವ ಪಶುವೂ ಅಲ್ಲವೆಂದು ಸ್ಪಷ್ಟಪಡಿಸಿದರು.

ಋಷಯಃ

ಬೀಜೈರ್ಯಜ್ಞೇಷು ಯಷ್ಟವ್ಯಮಿತಿ ವೈ ವೈದಿಕೀ ಶ್ರುತಿಃ ।
ಅಜಸಂಜ್ಞಾನಿ ಬೀಜಾನಿ ಛಾಗಂ ನ ಘ್ನಂತುಮರ್ಹಥ ॥೪॥

ಋಷಿಗಳು– ಯಜ್ಞಗಳಲ್ಲಿ ಬೀಜಗಳ ಮೂಲಕ ಪುರೋಡಾಶವನ್ನು ಸಿದ್ಧಗೊಳಿಸಿ ಯಾಗವನ್ನು ಮಾಡಬೇಕೆಂದು ವೇದಗಳು ಹೇಳುತ್ತವೆ. ಬೀಜಗಳಿಗೆ ಅಜ ಎಂದು ಸಂಜ್ಞೆ ಇದೆ. ಅಜ ಎಂದರೆ ಹೋತವೆಂದು ಅರ್ಥಮಾಡಿ ಅದನ್ನು ವಧಿಸುವುದು ಉಚಿತವಲ್ಲ.

ನೈಷ ಧರ್ಮಃ ಸತಾಂ ದೇವಾ ಯತ್ರ ವಧ್ಯೇತ ವೈ ಪಶುಃ ।
ಇದಂ ಕೃತಯುಗಂ ಶ್ರೇಷ್ಠಂ ಕಥಂ ವಧ್ಯೇತ ವೈ ಪಶುಃ ॥೫॥

ದೇವತೆಗಳೇ, ಯಜ್ಞದಲ್ಲಿ ಪಶುವನ್ನು ಹವಿಸ್ಸಿಗಾಗಿ ವಧಿಸುವುದು ಯೋಗ್ಯರು ಮಾಡುವ ಧರ್ಮವಲ್ಲ. ಕೃತಯುಗವು ಶ್ರೇಷ್ಠವೆನಿಸಿದ ಸತ್ಯವಾದ ಯುಗವು. ಈ ಕೃತಯುಗದಲ್ಲಿ ಪಶುವನ್ನು ವಧಿಸುವುದು ಹೇಗೆ? ಪ್ರಾಣಿಯ ಹಿಂಸೆ ಉಚಿತವೇ?

ಭೀಷ್ಮಃ

ತೇಷಾಂ ಸಂವದತಾಮೇವಮೃಷೀಣಾಂ ವಿಬುಧೈಃ ಸಹ ।
ಮಾರ್ಗಾಗತೋ ನೃಪಶ್ರೇಷ್ಠಸ್ತಂ ದೇಶಂ ಪ್ರಾಪ್ತವಾನ್ ವಸುಃ ।
ಅಂತರಿಕ್ಷಚರಃ ಶ್ರೀಮಾನ್ ಸಮಗ್ರಬಲವಾಹನಃ ॥೬॥

ಭೀಷ್ಮ– ಯುಧಿಷ್ಠಿರನೇ, ದೇವತೆಗಳು, ಋಷಿಗಳು ಅಜ ಎಂಬ ಶಬ್ದದ ವಿಷಯದಲ್ಲಿ ಚರ್ಚೆ ಮಾಡುತ್ತಿರುವಾಗ ಅದೇ ಮಾರ್ಗದಲ್ಲಿ ಉಪರಿಚರ ವಸುವು

ಆ ಸ್ಥಳಕ್ಕೆ ಆಗಮಿಸಿದನು. ಶ್ರೀಮಂತನಾದ ಆ ರಾಜನು ಸೈನ್ಯ, ವಾಹನಗಳ ಜೊತೆ ಆಕಾಶ ಮಾರ್ಗದಲ್ಲಿ ಸಂಚರಿಸುತ್ತಿದ್ದನು.

ತಂ ದೃಷ್ಟ್ವಾ ಸಹಸಾಯಾಂತಂ ವಸುಂ ತೇ ತ್ವಂತರಿಕ್ಷಗಮ್ ।
ಊಚುರ್ದ್ವಿಜಾತಯೋ ದೇವಾನೇಷ ಛೇತ್ಸ್ಯತಿ ಸಂಶಯಮ್ ॥೭॥

ಆಕಸ್ಮಿಕವಾಗಿ ಅಲ್ಲಿಗೆ ಆಗಮಿಸುತ್ತಿರುವ ರಾಜನನ್ನು ಕಂಡು ಬ್ರಹ್ಮರ್ಷಿಗಳು ದೇವತೆಗಳ ಬಳಿ ಹೇಳಿದರು: 'ದೇವತೆಗಳೇ, ಈ ರಾಜನು ನಿಮ್ಮ ಸಂಶಯವನ್ನು ಪರಿಹರಿಸುತ್ತಾನೆ' ಎಂದು.

ಯಜ್ವಾ ದಾನಪತಿಃ ಶ್ರೇಷ್ಠಃ ಸರ್ವಭೂತಹಿತಪ್ರಿಯಃ ।
ಕಥಂ ಸ್ವಿದನ್ಯಥಾ ಬ್ರೂಯಾದಾತ್ಮ್ಯಮೇಷ ಮಹಾನ್ವಸುಃ ॥೮॥

ಈ ಉಪರಿಚರ ವಸು ರಾಜನು ಯಾಜ್ಞಿಕನು. ದಾನಿಗಳಲ್ಲಿಯೇ ಶ್ರೇಷ್ಠನು. ಸಮಸ್ತ ಪ್ರಾಣಿಗಳ ಹಿತೈಷಿಯು. ಆದ್ದರಿಂದ ಪಕ್ಷಪಾತವಿಲ್ಲದೆ ನಮ್ಮ ಸಂಶಯವನ್ನು ಪರಿಹರಿಸುತ್ತಾನೆ. ಈ ವಸುರಾಜನು ಶಾಸ್ತ್ರಅಸಮ್ಮತವಾದ ಮಾತನ್ನು ಹೇಳುವುದಿಲ್ಲ.

ಏವಂ ತೇ ಸಂವಿದಂ ಕೃತ್ವಾ ವಿಬುಧಾ ಋಷಯಸ್ತಥಾ ।
ಅಪೃಚ್ಛನ್ ಸಹಸಾಭ್ಯೇತ್ಯ ವಸುಂ ರಾಜಾನಮಂತಿಕಾತ್ ॥೯॥

ಹೀಗೆ ದೇವತೆಗಳು, ಋಷಿಗಳು ಪರಸ್ಪರ ಒಪ್ಪಂದ ಮಾಡಿಕೊಂಡು ಎಲ್ಲರೂ ಸೇರಿ ವಸುವಿನ ಬಳಿ ಹೋಗಿ ಪ್ರಶ್ನಿಸಿದರು.

ಭೋ ರಾಜನ್ಕೇನ ಯಷ್ಟವ್ಯಮಜೇನಾಹೋ ಸ್ವಿದೌಷಧೈಃ ।
ಏತನ್ನಃ ಸಂಶಯಂ ಛಿಂಧಿ ಪ್ರಮಾಣಂ ನೋ ಭವಾನ್ ಮತಃ ॥೧೦॥

ಎಲೈ ರಾಜನೇ, ಹೋತವನ್ನು ಹವಿಸ್ಸನ್ನಾಗಿ ಮಾಡಿ ಯಜ್ಞ ಮಾಡಬೇಕೋ ಅಥವಾ ಧಾನ್ಯವನ್ನೇ ಅಜ ಎಂಬ ಶಬ್ದದಿಂದ ತಿಳಿದು ಯಜ್ಞವನ್ನು ಮಾಡಬೇಕೋ? ಅಜ ಎನ್ನುವ ಶಬ್ದದಿಂದ ಭೋಜ್ಯವಾದ ವಸ್ತುವು ಯಾವುದು? ನಮ್ಮ ಈ ಸಂಶಯವನ್ನು ಪರಿಹರಿಸು. ನೀನೇ ನಮಗೆ ಪ್ರಮಾಣಭೂತನು.

ಸ ತಾನ್ಕೃತಾಂಜಲಿರ್ಭೂತ್ವಾ ಪರಿಪಪ್ರಚ್ಛ ವೈ ವಸುಃ ।
ಕಸ್ಯ ವಃ ಕೋ ಮತಃ ಪಕ್ಷೋ ಬ್ರೂತ ಸತ್ಯಂ ಸಮಾಗತಾಃ ॥೧೧॥

ಈ ಮಾತನ್ನು ಕೇಳಿಸಿಕೊಂಡ ಉಪರಿಚರ ವಸು ರಾಜನು ಕೈಮುಗಿದು ದೇವತೆಗಳನ್ನೆಲ್ಲ ಪ್ರಶ್ನಿಸಿದನು: 'ಬ್ರಾಹ್ಮಣರೇ, ನಿಮಗೆ ಈ ಶಬ್ದಾರ್ಥವು ಏನೆಂದು ಅಭಿಪ್ರೇತವಾಗಿದೆ? ಸತ್ಯ ಹೇಳಿರಿ. ಅಡು ಎಂಬ ಅರ್ಥವನ್ನು ಯಾರು ಹೇಳುತ್ತಿದ್ದಾರೆ?

ಋಷಯಃ

ಧಾನ್ಯೈರ್ಯಷ್ಟವ್ಯಮಿತ್ಯೇಷ ಪಕ್ಷೋಽಸ್ಮಾಕಂ ನರಾಧಿಪ ।
ದೇವಾನಾಂ ತು ಪಶುಃ ಪಕ್ಷೋ ಮತೋ ರಾಜನ್ ವದಸ್ವ ನಃ ॥೧೨॥

ಋಷಿಗಳು– ನರಶ್ರೇಷ್ಠನೇ, ಅಜ ಎಂದರೆ ಧಾನ್ಯ ಎಂಬ ಅರ್ಥವು ವೇದಾರ್ಥವು. ಆದ್ದರಿಂದ ಧಾನ್ಯದಿಂದ ಯಾಗ ಮಾಡಬೇಕೆಂಬುದು ನಮ್ಮ ಪಕ್ಷ. ಅಜ ಎಂದರೆ ಮೇಕೆ ಎಂದು ಅರ್ಥ ಎಂಬುದು ದೇವತೆಗಳ ಪಕ್ಷ. ಈ ವಿಷಯದಲ್ಲಿ ನಿನ್ನ ಅಭಿಪ್ರಾಯವನ್ನು ತಿಳಿಸು.

ಭೀಷ್ಮಃ

ದೇವಾನಾಂ ತು ಮತಂ ಜ್ಞಾತ್ವಾ ವಸುನಾ ಪಕ್ಷಸಂಶ್ರಯಾತ್ ।
ಛಾಗೇನಾಜೇನ ಯಷ್ಟವ್ಯಮೇವಮುಕ್ತಂ ವಚಸ್ತದಾ ॥೧೩॥

ಭೀಷ್ಮ– ಉಪರಿಚರ ವಸುವು ಧಾನ್ಯಗಳಿಂದ ಯಜ್ಞ ಮಾಡುತ್ತಿದ್ದರೂ ದೇವತೆಗಳ ಅಭಿಪ್ರಾಯವನ್ನು ತಿಳಿದುಕೊಂಡು ಪಕ್ಷಪಾತದಿಂದ ಅಜ ಎಂಬ ಶಬ್ದಕ್ಕೆ ಹೋತ, ಮೇಕೆ ಎಂಬ ಅರ್ಥವನ್ನೇ ಇಟ್ಟುಕೊಂಡು ಯಜ್ಞ ಮಾಡಬೇಕು ಎಂದು ಹೇಳಿದನು.

ಕುಪಿತಾಸ್ತೇ ತತಃ ಸರ್ವೇ ಮುನಯಃ ಸೂರ್ಯವರ್ಚಸಃ ।
ಊಚುರ್ವಸುಂ ವಿಮಾನಸ್ಥಂ ದೇವಪಕ್ಷಾರ್ಥವಾದಿನಮ್ ॥೧೪॥

ಸೂರ್ಯ ಸಮಾನ ತೇಜಸ್ಕರಾದ ಋಷಿಗಳು ವಸುವಿನ ಈ ನಿರ್ಣಯವನ್ನು ಕೇಳಿದ ಕೂಡಲೇ ಕ್ರುದ್ಧರಾಗಿ ವಿಮಾನಾರೂಢನಾದ, ದೇವತಾ ಪಕ್ಷಪಾತಿಯಾಗಿ ಮಾತನಾಡಿದ ವಸುವನ್ನು ಕುರಿತು ಹೀಗೆ ಹೇಳಿದರು.

ಸುರಪಕ್ಷೋ ಗೃಹೀತಸ್ತೇ ಯಸ್ಮಾತ್ತಸ್ಮಾದ್ದಿವಃ ಪತ ।
ಅದ್ಯ ಪ್ರಭತಿ ತೇ ರಾಜನ್ನಾಕಾಶೇ ವಿಹತಾ ಗತಿಃ ।
ಅಸ್ಮಚ್ಛಾಪಾಭಿಘಾತೇನ ಮಹೀಂ ಭಿತ್ತ್ವಾ ಪ್ರವೇಕ್ಷ್ಯಸಿ ॥೧೫॥

ಅಜ ಎಂಬುದಕ್ಕೆ ಬೀಜ ಎಂಬ ಅರ್ಥವು ನಿನಗೆ ತಿಳಿದಿದ್ದರೂ ದೇವತೆಗಳ ಪಕ್ಷವನ್ನು ವಹಿಸಿ ನಿರ್ಣಯವನ್ನು ನೀಡಿದ್ದರಿಂದ ನೀನು ಈಗಲೇ ಸ್ವರ್ಗದಿಂದ ಚ್ಯುತನಾಗು. ಆಕಾಶದಲ್ಲಿ ಸಂಚರಿಸುವ ಶಕ್ತಿಯು ನಾಶವಾಗಲಿ. ನಮ್ಮ ಶಾಪದಿಂದ ಭೂಮಿಯನ್ನು ಸೀಳಿಕೊಂಡು ಪಾತಾಳಕ್ಕೆ ಪ್ರವೇಶಿಸುತ್ತಿ.

ತತಸ್ತಸ್ಮಿನ್ ಮುಹೂರ್ತೇऽಥ ರಾಜೋಪರಿಚರಸ್ತದಾ ।
ಅಧೋ ವೈ ಸಂಬಭೂವಾಶು ಭೂಮೇರ್ವಿವರಗೋ ನೃಪಃ ।
ಸ್ಮೃತಿಸ್ತ್ವೇನಂ ನ ಪ್ರಜಹೌ ತದಾ ನಾರಾಯಣಾಜ್ಞಯಾ ॥೧೬॥

ಬಳಿಕ ಋಷಿಗಳು ಹೀಗೆ ಹೇಳಿದ ಕ್ಷಣದಲ್ಲಿಯೇ ವಸುರಾಜನು ಕೆಳಕ್ಕೆ ಬಿದ್ದು ಭೂಮಿಯಲ್ಲಿರುವ ಬಿಲವನ್ನು ಪ್ರವೇಶಿಸಿ, ಪಾತಾಳಕ್ಕೆ ಹೊರಟು ಹೋದನು. ನಾರಾಯಣನ ಆಜ್ಞೆಯಿಂದ ಸಮುದ್ರವನ್ನು ಪ್ರವೇಶಿಸಿದರೂ ಅವನಿಗೆ ಸ್ಮರಣಶಕ್ತಿಯು ಕುಂಠಿತವಾಗಿರಲಿಲ್ಲ.

ದೇವಾಸ್ತು ಸಹಿತಾಃ ಸರ್ವೇ ವಸೋಃ ಶಾಪವಿಮೋಕ್ಷಣಮ್ ।
ಚಿಂತಯಾಮಾಸುರವ್ಯಗ್ರಾಃ ಸುಕೃತಂ ಹಿ ನೃಪಸ್ಯ ತತ್ ॥೧೭॥

ದೇವತೆಗಳೆಲ್ಲರೂ ಒಟ್ಟಾಗಿ ಸೇರಿ, ಉಪರಿಚರ ವಸುವಿನ ಋಷಿಗಳ ಶಾಪದಿಂದ ಬಿಡುಗಡೆಯನ್ನು ಶಾಂತಾತ್ಮರಾಗಿ ಯೋಚಿಸಿದರು. ಪರಸ್ಪರ ಹೀಗೆ ಮಾತನಾಡಿದರು.

ಅನೇನಾಸ್ಮತ್ಕೃತೇ ರಾಜ್ಞಾ ಶಾಪಃ ಪ್ರಾಪ್ತೋ ಮಹಾತ್ಮನಾ ।
ಅಸ್ಯ ಪ್ರತಿಪ್ರಿಯಂ ಕಾರ್ಯಂ ಸಹಿತೈರ್ನೋ ದಿವೌಕಸಃ ॥೧೮॥

ಮಹಾತ್ಮನಾದ ವಸುರಾಜನು ನಮ್ಮಿಂದ ಶಾಪವನ್ನು ಪಡೆದನು. ನಾವೆಲ್ಲರೂ ಒಟ್ಟಾಗಿ ಇವನಿಗೆ ಪ್ರಿಯವಾಗಿ ಕಾರ್ಯವನ್ನು ಮಾಡಬೇಕು. ಋಷಿಗಳ ಶಾಪದಿಂದ ಬಿಡುಗಡೆ ಮಾಡಬೇಕು.

ಇತಿ ಬುದ್ಧ್ಯಾ ವ್ಯವಸ್ಯಾಶು ಗತ್ವಾ ನಿಶ್ಚಯಮೀಶ್ವರಾಃ ।
ಊಚುಸ್ತಂ ಹೃಷ್ಟಮನಸೋ ರಾಜೋಪರಿಚರಂ ತದಾ ॥೧೯॥

ಈ ರೀತಿ ಬುದ್ಧಿಯಲ್ಲಿ ನಿಶ್ಚಯಿಸಿಕೊಂಡು ದೇವತೆಗಳು ಉಪರಿಚರ ವಸುವಿನ ಬಳಿ ಸಾಗಿ ಪ್ರಸನ್ನಚಿತ್ತರಾಗಿ ಹೀಗೆ ಹೇಳಿದರು.

ಬ್ರಹ್ಮಣ್ಯದೇವಂ ತ್ವಂ ಭಕ್ತಃ ಸುರಾಸುರಗುರುಂ ಹರಿಮ್ ।
ಕಾಮಂ ಸ ತವ ತುಷ್ಟಾತ್ಮಾ ಕುರ್ಯಾಚ್ಛಾಪವಿಮೋಕ್ಷಣಮ್ ॥೨೦॥

ಮಹಾರಾಜನೇ, ಬ್ರಹ್ಮಣ್ಯದೇವನಾದ ನಾರಾಯಣನ ಭಕ್ತನು ನೀನು. ಭಗವಂತನು ದೇವಾಸುರರಿಗೆ ಗುರುವು. ಅವನು ನಿನ್ನ ವಿಷಯದಲ್ಲಿ ಸಂತುಷ್ಟನು. ಆದ್ದರಿಂದ ನಿನ್ನ ಶಾಪ ವಿಮೋಕ್ಷವನ್ನು ಅವನು ಮಾಡಬಹುದು.

ಮಾನನಾ ತು ದ್ವಿಜಾತೀನಾಂ ಕರ್ತವ್ಯಾ ವೈ ಮಹಾತ್ಮನಾಮ್ ।
ಅವಶ್ಯಂ ತಪಸಾ ತೇಷಾಂ ಫಲಿತವ್ಯಂ ನೃಪೋತ್ತಮ ॥೨೧॥

ಯತಸ್ತ್ವಂ ಸಹಸಾ ಭ್ರಷ್ಟ ಆಕಾಶಾನ್ಮೇದಿನೀತಲಮ್ ।
ಏಕಂ ತ್ವನುಗ್ರಹಂ ತುಭ್ಯಂ ದದ್ಮೋ ವೈ ನೃಪಸತ್ತಮ ॥೨೨॥

ಮಹಾತ್ಮರಾದ ಬ್ರಾಹ್ಮಣರನ್ನು ಎಂದಿಗೂ ಗೌರವಿಸಬೇಕು. ಅವರ ತಪಸ್ಸಿನ ಫಲವಾಗಿ ಅವರು ನುಡಿದಂತೆಯೇ ಫಲ ದೊರೆಯುತ್ತದೆ. ಆದ್ದರಿಂದ ಅವರ ಶಾಪ ವಚನ ಹೊರಹೊಮ್ಮಿದ ಕೂಡಲೇ ಆಕಾಶದಿಂದ ಭ್ರಷ್ಟನಾಗಿ ಪಾತಾಳವನ್ನು ಸೇರಿರುತ್ತಿ. ನಾವು ನಿನಗೆ ಒಂದು ಅನುಗ್ರಹವನ್ನು ಮಾಡುತ್ತೇವೆ.

ಯಾವತ್ತ್ವಂ ಶಾಪದೋಷೇಣ ಕಾಲಮಾಸಿಷ್ಯಸೇಽನಘ ।
ಭೂಮೇರ್ವಿವರಗೋ ಭೂತ್ವಾ ತಾವಂತಂ ಕಾಲಮಾಪ್ಸ್ಯಸಿ ।
ಯಜ್ಞೇಷು ಸುಹುತಾಂ ವಿಪ್ರೈರ್ವಸೋರ್ಧಾರಾಂ ಮಹಾತ್ಮಭಿಃ ॥೨೩॥

ನೀನು ಶಾಪದೋಷದಿಂದ ಎಷ್ಟು ಕಾಲ ಭೂಮಿಯ ಬಿಲದಲ್ಲಿರುತ್ತೀಯೋ ಅಷ್ಟು ಕಾಲದ ತನಕ ಏಕಾಗ್ರಚಿತ್ತರಾದ ಬ್ರಾಹ್ಮಣರು ಯಜ್ಞದಲ್ಲಿ ಅಗ್ನಿಗೆ ಅರ್ಪಿಸುವ ವಸೋರ್ಧಾರಾ ಎಂಬ ಆಜ್ಯಧಾರೆಯನ್ನು ನಿನಗೆ ದೊರಕುವಂತೆ ಮಾಡಲಿ.

ಪ್ರಾಪ್ಸ್ಯಸೇಽಸ್ಮದನುಧ್ಯಾನಾನ್ಮಾ ಚ ತ್ವಾಂ ಗ್ಲಾನಿರಾಸ್ಪ್ರಶೇತ್ ।
ನ ಕ್ಷುತ್ಪಿಪಾಸೇ ರಾಜೇಂದ್ರ ಭೂಮೇಶ್ಚಿದ್ರೇ ಭವಿಷ್ಯತಃ ॥೨೪॥

ನಮ್ಮನ್ನು ಧ್ಯಾನಿಸುವುದರಿಂದ ನೀನು ವಸೋರ್ಧಾರೆಯನ್ನು ಪಡೆದುಕೊಳ್ಳುವಿ. ವಸೋರ್ಧಾರೆಯ ಫಲದಿಂದ ಭೂಮಿಯ ಬಿಲದಲ್ಲಿ ಬಿದ್ದಿರುವ ನಿನಗೆ ಹಸಿವು-ನೀರಡಿಕೆಗಳು ಉಂಟಾಗುವುದಿಲ್ಲ.

ವಸೋರ್ಧಾರಾನುಪೀತತ್ವಾತ್ತೇಜಸಾಪ್ಯಾಯಿತೇನ ಚ ।
ಸ ದೇವೋಽಸ್ಮದ್ವರಾತ್ ಪ್ರೀತೋ ಬ್ರಹ್ಮಲೋಕಂ ಹಿ ನೇಷ್ಯತಿ ॥೨೫॥

ವಸೋರ್ಧಾರೆಯನ್ನು ಪಾನ ಮಾಡುವುದರಿಂದ ನಿನ್ನ ತೇಜಸ್ಸು ಅಭಿವೃದ್ಧಿಯನ್ನು ಹೊಂದುತ್ತದೆ. ನಮ್ಮ ವರದಿಂದ ಪ್ರೀತನಾದ ಭಗವಂತನು ನಿನ್ನನ್ನು ಶಾಪದಿಂದ ಬಿಡುಗಡೆ ಮಾಡಿ ಬ್ರಹ್ಮಲೋಕಕ್ಕೆ ಕೊಂಡೊಯ್ಯುತ್ತಾನೆ.

ಏವಂ ದತ್ತ್ವಾ ವರಂ ರಾಜ್ಞೇ ಸರ್ವೇ ತತ್ರ ದಿವೌಕಸಃ ।
ಗತಾಃ ಸ್ವಭವನಂ ದೇವಾ ಋಷಯಶ್ಚ ತಪೋಧನಾಃ ॥೨೬॥

ಯುಧಿಷ್ಠಿರನೇ, ದೇವತೆಗಳು ಉಪರಿಚರ ವಸುವಿಗೆ ಹೀಗೆ ವರವನ್ನು ನೀಡಿ, ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರು. ತಪೋಧನರಾದ ಋಷಿಗಳು ತಮ್ಮ ತಮ್ಮ ಆಶ್ರಮಗಳಿಗೆ ತೆರಳಿದರು.

ಚಕ್ರೇ ಚ ಸತತಂ ಪೂಜಾಂ ವಿಷ್ವಕ್ಸೇನಾಯ ಭಾರತ ।
ಜಪ್ಯಂ ಜಗೌ ಚ ಸತತಂ ನಾರಾಯಣಮುಖೋದ್ಗತಮ್ ॥೨೭॥

ದೇವತೆಗಳು ಹೊರಟ ಬಳಿಕ ಉಪರಿಚರ ವಸುವು ವಿಷ್ಣುವನ್ನು ಪರಿಹರಿಸುವ ವಿಷ್ವಕ್ಸೇನನಿಗೆ ಪೂಜೆಯನ್ನು ಮಾಡಿದನು. ನಾರಾಯಣನ ಮುಖದಿಂದ ಪ್ರಕಟವಾದ, ಜಪಿಸಲು ಯೋಗ್ಯವಾದ ಮಂತ್ರವನ್ನು ನಿರಂತರ ಜಪಿಸುತ್ತಿದ್ದನು.

ತತ್ರಾಪಿ ಪಂಚಭಿರ್ಯಜ್ಞೈಃ ಪಂಚಕಾಲಾನರಿಂದಮ ।
ಅಯಜದ್ಧರಿಂ ಸುರಪತಿಂ ಭೂಮೇರ್ವಿವರಗೋಽಪಿ ಸನ್ ॥೨೮॥

ವಸುವು ಭೂಮಿಯ ಬಿಲದಲ್ಲಿದ್ದರೂ ಐದು ಕಾಲದಲ್ಲಿ ಪಂಚಮಹಾಯಜ್ಞದ ಮೂಲಕ ಸುರಪತಿಯಾದ ಹರಿಯನ್ನು ಆರಾಧಿಸುತ್ತಿದ್ದನು.

ತತೋಽಸ್ಯ ತುಷ್ಟೋ ಭಗವಾನ್ ಭಕ್ತ್ಯಾ ನಾರಾಯಣೋ ಹರಿಃ ।
ಅನನ್ಯಭಕ್ತಸ್ಯ ಸತಸ್ತತ್ಪರಸ್ಯ ಜಿತಾತ್ಮನಃ ॥೨೯॥

ವರದೋ ಭಗವಾನ್ ವಿಷ್ಣುಃ ಸಮೀಪಸ್ಥಂ ದ್ವಿಜೋತ್ತಮಮ್ ।
ಗರುತ್ಮಂತಂ ಮಹಾವೇಗಮಾಬಭಾಷೇ ಸ್ಮಯನ್ನಿವ ॥೩೦॥

ಬಳಿಕ ಅವನ ಭಕ್ತಿಯ ಜಪದಿಂದ ಸಂತುಷ್ಟನಾದ ಭಗವಾನ್ ಹರಿ ನಾರಾಯಣನು ಅನನ್ಯ ಭಕ್ತನಾದ, ತನ್ನ ಸರ್ವೋತ್ತಮತ್ವದಲ್ಲಿಯೇ ತಾತ್ಪರ್ಯವುಳ್ಳ ವಸುವಿನ ವಿಷಯದಲ್ಲಿ ಸಂತುಷ್ಟನಾಗಿ, ವರದನಾದ ವಿಷ್ಣುವು ತನ್ನ ಸಮೀಪದಲ್ಲಿಯೇ ಇರುವ ಮಹಾವೇಗಶಾಲಿಯಾದ, ಪಕ್ಷಿಶ್ರೇಷ್ಠನಾದ ಗರುಡನಿಗೆ ಮಂದಹಾಸವನ್ನು ಬೀರುತ್ತಾ ಹೀಗೆ ಹೇಳಿದನು.

ದ್ವಿಜೋತ್ತಮ ಮಹಾಭಾಗ ಗಮ್ಯತಾಂ ವಚನಾನ್ಮಮ ।
ಸಮ್ರಾಟ್ ರಾಜಾ ವಸುರ್ನಾಮ ಧರ್ಮಾತ್ಮಾ ಮಾಂ ಸಮಾಶ್ರಿತಃ ॥

ಪಕ್ಷಿಶ್ರೇಷ್ಠನೇ, ಮಹಾಭಾಗನೇ, ವಸು ಎಂಬ ಹೆಸರಿನ ಚಕ್ರವರ್ತಿಯು, ಧರ್ಮಾತ್ಮನು ನನ್ನನ್ನೇ ಧ್ಯಾನಿಸುತ್ತಿದ್ದಾನೆ. ಅವನ ಬಳಿ ನೀನು ಸಾಗು.

ಬ್ರಾಹ್ಮಣಾನಾಂ ಪ್ರಕೋಪೇನ ಪ್ರವಿಷ್ಟೋ ವಸುಧಾತಲಮ್ ।
ಮಾನಿತಾಸ್ತೇ ತು ವಿಪ್ರೇಂದ್ರಾಸ್ತ್ವಂ ತು ಗಚ್ಛ ದ್ವಿಜೋತ್ತಮ ॥೩೨॥

ಬ್ರಾಹ್ಮಣರ ಸಿಟ್ಟಿನಿಂದ ಭೂಮಿಯ ಕೆಳಭಾಗದಲ್ಲಿ ಪ್ರವೇಶ ಹೊಂದಿದ್ದಾನೆ. ಅವರ ಶಾಪವನ್ನು ಸ್ವೀಕರಿಸಿದ್ದರಿಂದ ರಾಜನಾದರೂ ಬ್ರಾಹ್ಮಣರನ್ನು ಗೌರವಿಸಿದ್ದಾನೆ. ಅವನ ಸ್ಥಳಕ್ಕೆ ನೀನು ಹೋಗು.

ಭೂಮೇರ್ವಿವರಸಂಗುಪ್ತಂ ಗರುಡೇಹ ಮಮಾಜ್ಞಯಾ ।
ಅಧಶ್ಚರಂ ನೃಪಶ್ರೇಷ್ಠಂ ಖೇಚರಂ ಕುರು ಮಾಚಿರಮ್ ॥೩೩॥

ಗರುಡನೇ, ಭೂಮಿಯ ಬಿಲದಲ್ಲಿ ಅಡಗಿರುವ, ಪಾತಾಳದಲ್ಲಿ ಸಂಚರಿಸುತ್ತಿರುವ ರಾಜಶ್ರೇಷ್ಠನಾದ ವಸುವನ್ನು ನನ್ನ ಆಜ್ಞೆಯಂತೆ ಶೀಘ್ರವಾಗಿ ಆಕಾಶದಲ್ಲಿ ಸಂಚರಿಸುವಂತೆ ಮಾಡು.

ಗರುತ್ಮಾನಥ ವಿಕ್ಷಿಪ್ಯ ಪಕ್ಷೌ ಮಾರುತವೇಗವಾನ್ ।
ವಿವೇಶ ವಿವರಂ ಭೂಮೇರ್ಯತ್ರಾಸ್ತೇ ವಾಗ್ಯತೋ ವಸುಃ ॥೩೪॥

ನಾರಾಯಣನು ಗರುಡನಿಗೆ ಹೀಗೆ ಆದೇಶ ಮಾಡಿದ ಕೂಡಲೇ ವಾಯುವೇಗನಾದ ಗರುಡನು ತನ್ನ ರೆಕ್ಕೆಗಳನ್ನು ಅಗಲಿಸಿಕೊಂಡು ವಸುವಿದ್ದ ಭೂ ಬಿಲವನ್ನು ಜಿತೇಂದ್ರಿಯನಾಗಿ ಪ್ರವೇಶಿಸಿದನು.

ತತ ಏನಂ ಸಮುತ್ಕ್ಷಿಪ್ಯ ಸಹಸಾ ವಿನತಾಸುತಃ ।
ಉತ್ಪಪಾತ ನಭಸ್ಪೂರ್ಣಂ ತತ್ರ ಚೈನಮಮುಂಚತ ॥೩೫॥

ವಿನತೆಯ ಸುತನಾದ ಗರುಡನು ರಾಜನನ್ನು ಬಿಲದಿಂದ ಮೇಲಕ್ಕೆತ್ತಿಕೊಂಡು ಆಕಾಶದ ಕಡೆ ಹಾರಿ ರಾಜನನ್ನು ಆಕಾಶದಲ್ಲಿ ಬಿಟ್ಟನು.

ತಸ್ಮಿನ್ಮುಹೂರ್ತೇ ಸಂಜಜ್ಞೇ ರಾಜೋಪರಿಚರಃ ಪುನಃ ।
ಸಶರೀರೋ ಗತಶ್ಚೈವ ಬ್ರಹ್ಮಲೋಕಂ ನೃಪೋತ್ತಮಃ ॥೩೬॥

ಆ ಮುಹೂರ್ತದಲ್ಲಿಯೇ ವಸುರಾಜನು ಪುನಃ ಉಪರಿಚರನಾದನು. ಸಶರೀರನಾಗಿಯೇ ಆ ರಾಜಶ್ರೇಷ್ಠನು ಬ್ರಹ್ಮಲೋಕಕ್ಕೆ ಹೋದನು.

ಏವಂ ತೇನಾಪಿ ಕೌಂತೇಯ ವಾಗ್ದೋಷಾದ್ದೇವತಾಜ್ಞಯಾ ।
ಪ್ರಾಪ್ತಾ ಗತಿರಯಜ್ಞಾರ್ಹಾ ದ್ವಿಜಶಾಪಾನ್ಮಹಾತ್ಮನಾ ॥೩೭॥

ಯುಧಿಷ್ಠಿರನೆ, ಮಹಾತ್ಮನಾದ ಉಪರಿಚರ ವಸು ದೇವತೆಗಳ ಮತವನ್ನು ಬೆಂಬಲಿಸಲು ಹೋಗಿ ಅದರಿಂದಾದ ವಾಗ್ದೋಷದ ಪ್ರಭಾವದಿಂದ ಬ್ರಾಹ್ಮಣರ ಶಾಪಕ್ಕೆ ತುತ್ತಾಗಿ ಅಧೋಗತಿಯನ್ನು ಹೊಂದಿದನು.

ಕೇವಲಂ ಪುರುಷಸ್ತೇನ ಸೇವಿತೋ ಹರಿರೀಶ್ವರಃ ।
ತತಃ ಶೀಘ್ರಂ ಜಹೌ ಶಾಪಂ ಬ್ರಹ್ಮಲೋಕಮವಾಪ ಚ ॥೩೮॥

ಆ ಸಮಯದಲ್ಲಿ ಪುರುಷೋತ್ತಮನಾದ ಭಗವಂತನನ್ನು ನಿರಂತರ ಆರಾಧಿಸುತ್ತಿದ್ದನು. ಅದರ ಫಲದಿಂದ ಶಾಪದಿಂದ ಮುಕ್ತನಾಗಿ ಬ್ರಹ್ಮಲೋಕವನ್ನು ಹೊಂದಿದನು.

ಏತತ್ತೇ ಸರ್ವಮಾಖ್ಯಾತಂ ತೇ ಭೂತಾ ಮಾನವಾ ಯಥಾ ।
ನಾರದೋಽಪಿ ಯಥಾ ಶ್ವೇತಂ ದ್ವೀಪಂ ಸ ಗತವಾನೃಷಿಃ ।
ತತ್ತೇ ಸರ್ವಂ ಪ್ರವಕ್ಷ್ಯಾಮಿ ಶೃಣುಷ್ವೈಕಮನಾ ನೃಪ ॥೩೯॥

ಯುಧಿಷ್ಠಿರನೇ, ನಿನಗೆ ಮನುಷ್ಯರು ಶ್ವೇತದ್ವೀಪ ನಿವಾಸಿಗಳಾಗಿ ಹೇಗೆ ಹುಟ್ಟಿದರು, ಹೇಗೆ ಇದ್ದಾರೆ ಈ ಎಲ್ಲ ವಿಷಯಗಳನ್ನು ಹೇಳಿದೆನು. ನಾರದರು ಶ್ವೇತದ್ವೀಪಕ್ಕೆ ಹೇಗೆ ಹೋದರು ಎಂಬ ವಿಷಯವನ್ನು ಹೇಳುತ್ತೇನೆ, ಏಕಾಗ್ರಚಿತ್ತನಾಗಿ ಕೇಳಿಸಿಕೊ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಸಪ್ತತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತನೆಯ ಅಧ್ಯಾಯ

ನಾರದರಿಂದ ಶ್ವೇತದ್ವೀಪಪತಿ ಶ್ರೀಪತಿ ಸ್ತುತಿ

ಭೀಷ್ಮಃ

ಪ್ರಾಪ್ಯ ಶ್ವೇತಂ ಮಹಾದ್ವೀಪಂ ನಾರದೋ ಭಗವಾನೃಷಿಃ ।
ದದರ್ಶ ತಾನೇವ ನರಾನ್ ಶ್ವೇತಾಂಶ್ಚಂದ್ರಪ್ರಭಾನ್ ಶುಭಾನ್ ॥೧॥

ಭೀಷ್ಮ– ಯುಧಿಷ್ಠಿರನೇ, ಪೂಜ್ಯರಾದ ನಾರದರು ಶ್ವೇತದ್ವೀಪಕ್ಕೆ ತೆರಳಿ, ಹಿಂದೆ ಯಾವ ಋಷಿಗಳು ಕಂಡಿದ್ದರೋ ಅಂತಹ ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ ಶ್ವೇತವರ್ಣದ ಪುರುಷರನ್ನೇ ಇವರು ನೋಡಿದರು.

ಪೂಜಯಾಮಾಸ ಶಿರಸಾ ಮನಸಾ ತೈಶ್ಚ ಪೂಜಿತಃ ।
ದಿದೃಕ್ಷುರ್ಜಪ್ಯಪರಮಃ ಸರ್ವಕೃಚ್ಛ್ರಧರಃ ಸ್ಥಿತಃ ॥೨॥

ಬಳಿಕ ಶ್ವೇತದ್ವೀಪ ನಿವಾಸಿಗಳನ್ನು ಮನಸ್ಸಿನಿಂದಲೇ ಪೂಜಿಸಿ ಗೌರವಿಸಿದರು. ನಾರದರು ಕಠೋರವಾದ ನಿಯಮಗಳನ್ನು ಅವಲಂಬಿಸಿ ಶ್ರೀಹರಿಯ ದರ್ಶನದ ಅಪೇಕ್ಷೆಯಿಂದ ಅವನ ಜಪದಲ್ಲಿಯೇ ನಿರತರಾದರು.

ಭೂತ್ವೈಕಾಗ್ರಮನಾ ವಿಪ್ರಾ ಊರ್ಧ್ವಬಾಹುರ್ಮಹಾಮುನಿಃ ।
ಸ್ತೋತ್ರಂ ಜಗೌ ಸ ವಿಶ್ವಾಯ ನಿರ್ಗುಣಾಯ ಮಹಾತ್ಮನೇ ॥೩॥

ನಾರದರು ತಮ್ಮ ಎರಡು ತೋಳುಗಳನ್ನು ಮೇಲಕ್ಕೆತ್ತುಕೊಂಡು, ಏಕಾಗ್ರಚಿತ್ತರಾಗಿ ಪ್ರಾಕೃತಗುಣರಹಿತನಾದ, ಅನಂತಗುಣಪರಿಪೂರ್ಣನಾದ, ವಿಶ್ವಾತ್ಮನಾದ ನಾರಾಯಣನ ಪ್ರೀತಿಗಾಗಿ ಹೀಗೆ ಸ್ತೋತ್ರವನ್ನು ಮಾಡಿದರು.

ನಾರದಃ

ನಮಸ್ತೇ ದೇವದೇವ ನಿಷ್ಠಿಯ ನಿರ್ಗುಣ ಲೋಕಸಾಕ್ಷಿನ್ ಕ್ಷೇತ್ರಜ್ಞ ಅನಂತಪುರುಷ ಮಹಾಪುರುಷ ತ್ರಿಗುಣ ಪ್ರಧಾನ ಅಮೃತ ವ್ಯೋಮ ಸನಾತನ ಸದಸದ್ವ್ಯಕ್ತಾವ್ಯಕ್ತ ಋತಧಾಮನ್ ಪೂರ್ವಾದಿದೇವ ವಸುಪ್ರದ ಪ್ರಜಾಪತೇ ಸುಪ್ರಜಾಪತೇ ವನಸ್ಪತೇ ಮಹಾಪ್ರಜಾಪತೇ ಊರ್ಜಸ್ಪತೇ ವಾಚಸ್ಪತೇ ಮನಸ್ಪತೇ ಜಗತ್ಪತೇ ದಿವಸ್ಪತೇ ಮರುತ್ಪತೇ ಸಲಿಲಪತೇ ಪೃಥಿವೀಪತೇ ದಿಕ್ಪತೇ ಪೂರ್ವನಿವಾಸ ಬ್ರಹ್ಮಪುರೋಹಿತ ಬ್ರಹ್ಮಕಾಯಿಕ ಮಹಾಕಾಯಿಕ ಮಹಾರಾಜಿಕ ಚತುರ್ಮಹಾರಾಜಿಕ ಆಭಾಸುರ ಮಹಾಭಾಸುರ ಸಪ್ತಮಹಾಭಾಸುರ ಯಾಮ್ಯ ಮಹಾಯಾಮ್ಯ ಸಂಜ್ಞಾಸಂಜ್ಞ ತುಷಿತ ಮಹಾತುಷಿತ ಪ್ರತರ್ದನ ಪರಿನಿರ್ಮಿತ ವಶವರ್ತಿನ್ ಅಪರಿನಿರ್ಮಿತ ಯಜ್ಞ ಮಹಾಯಜ್ಞ ಯಜ್ಞಸಂಭವ ಯಜ್ಞಯೋನೇ ಯಜ್ಞಗರ್ಭ ಯಜ್ಞಹೃದಯ ಯಜ್ಞಸ್ತುತ ಯಜ್ಞಭಾಗಹರ ಪಂಚಯಜ್ಞಧರ ಪಂಚಕಾಲಕರ್ತೃಗತೇ ಪಂಚರಾತ್ರಿಕ ವೈಕುಂಠ ಅಪರಾಜಿತ ಮಾನಸಿಕ ಪರಮಸ್ವಾಮಿನ್ ಸುಸ್ನಾತ ಹಂಸ ಪರಮಹಂಸ ಪರಮಯಾಜ್ಞಿಕ ಸಾಂಖ್ಯಯೋಗ ಅಮೃತೇಶಯ ಹಿರಣ್ಯೇಶಯ ವೇದೇಶಯ ಕುಶೇಶಯ ಬ್ರಹ್ಮೇಶಯ ಪದ್ಮೇಶಯ ವಿಶ್ವೇಶ್ವರ ತ್ವಂ ಜಗದನ್ವಯಃ ತ್ವಂ ಜಗತ್‌ಕೃತಿಃ ತವಾಗ್ನಿರಾಸ್ಯಮ್ ವಡವಾಮುಖೋಗ್ನಿಃ ತ್ವಮಾಹುತಿಃ ತ್ವಂ ಸಾರಥಿಃ ತ್ವಂ ವಷಟ್ಕಾರಃ ತ್ವಮೋಂಕಾರಃ ತ್ವಂ ಮನಃ ತ್ವಂ ಚಂದ್ರಮಾಃ ತ್ವಂ ಚಕ್ಷುರಾದ್ಯಮ್ ತ್ವಂ ಸೂರ್ಯಃ ತ್ವಂ ದಿಶಾಂ ಗಜಃ ದಿಗ್ಭಾನೋ ಹಯಶಿರಃ ಪ್ರಥಮತ್ರಿಸೌಪರ್ಣ ಪಂಚಾಗ್ನೇ ತ್ರಿಣಾಚಿಕೇತ ಷಡಂಗವಿಧಾನ ಪ್ರಾಗ್ಜ್ಯೋತಿಷ ಜ್ಯೇಷ್ಠಸಾಮಗ ಸಾಮಿಕವ್ರತಧರ ಅಥರ್ವಶಿರಃ ಪಂಚಮಹಾಕಲ್ಪ ಫೇನಪಾಚಾರ್ಯ ವಾಲಖಿಲ್ಯ ವೈಖಾನಸ ಅಭಗ್ನೋಯೋಗ ಅಭಗ್ನಪರಿಸಂಖ್ಯಾನ ಯುಗಾದೇ ಯುಗಮಧ್ಯ ಯುಗನಿಧನ ಆಖಂಡಲ ಪ್ರಾಚೀನಗರ್ಭ ಕೌಶಿಕ ಪುರುಷ್ಟುತ ಪುರುಹೂತ ವಿಶ್ವರೂಪ ಅನಂತಗತೇ ಅನಂತಭೋಗ ಅನಂತ ಅನಾದೇ ಅಮಧ್ಯ

ಅವ್ಯಕ್ತಮಧ್ಯ ಅವ್ಯಕ್ತನಿಧನ ವ್ರತಾವಾಸ ಸಮುದ್ರಾಧಿವಾಸ ಯಶೋವಾಸ ತಪೋವಾಸ ಲಕ್ಷ್ಮ್ಯಾವಾಸ ವಿದ್ಯಾವಾಸ ಕೀರ್ತ್ಯಾವಾಸ ಶ್ರೀವಾಸ ಸರ್ವಾವಾಸ ವಾಸುದೇವ ಸರ್ವಚ್ಛಂದಕ ಹರಿಹಯ ಹರಿಮೇಧ ಮಹಾಯಜ್ಞಭಾಗಹರ ವರಪ್ರದ ಯಮನಿಯಮಮಹಾನಿಯಮಕೃಚ್ಛ್ರಾತಿಕೃಚ್ಛ್ರ ಮಹಾಕೃಚ್ಛ್ರಸರ್ವಕೃಚ್ಛ್ರ ನಿಯಮಧರ ನಿವೃತ್ತಧರ್ಮಪ್ರವಚನಗತೇ ಪ್ರವೃತ್ತವೇದಕ್ರಿಯ ಅಜ ಸರ್ವಗತೇ ಸರ್ವದರ್ಶಿನ್ ಅಗ್ರಾಹ್ಯ ಅಚಲ ಮಹಾವಿಭೂತೇ ಮಾಹಾತ್ಮ್ಯಶರೀರ ಪವಿತ್ರ ಮಹಾಪವಿತ್ರ ಹಿರಣ್ಮಯ ಬೃಹತ್ ಅಪ್ರತರ್ಕ್ಯ ಅವಿಜ್ಞೇಯ ಬ್ರಹ್ಮಾಗ್ರ್ಯ ಪ್ರಜಾಸರ್ಗಕರ ಪ್ರಜಾನಿಧನಕರ ಮಹಾಮಾಯಾಧರ ಚಿತ್ರಶಿಖಂಡಿನ್ ವರಪ್ರದ ಪುರೋಡಾಶಭಾಗಹರ ಗತಾಧ್ವನ್ ಛಿನ್ನತೃಷ್ಣ ಛಿನ್ನಸಂಶಯ ಸರ್ವತೋನಿವೃತ್ತ ಬ್ರಾಹ್ಮಣರೂಪ ಬ್ರಾಹ್ಮಣಪ್ರಿಯ ವಿಶ್ವಮೂರ್ತೇ ಮಹಾಮೂರ್ತೇ ಬಾಂಧವ ಭಕ್ತವತ್ಸಲ ಬ್ರಹ್ಮಣ್ಯದೇವ ಭಕ್ತೋಽಹಂ ತ್ವಾಂ ದಿದೃಕ್ಷುಃ ಏಕಾಂತದರ್ಶನಾಯ ನಮೋ ನಮಃ ॥೪॥

ನಾರದರು– ದೇವದೇವೇಶನೇ ನಿನಗೆ ನಮಸ್ಕಾರ. ನೀನು ಯಾವುದೇ ಬಂಧಕ ಅಥವಾ ಮೋಚಕವಾದ ಕ್ರಿಯೆಗಳನ್ನು ಮಾಡುವವನಲ್ಲ. ಪ್ರಾಕೃತ ಗುಣರಹಿತನು, ಲೋಕಸಾಕ್ಷಿಯು. ಸಮಸ್ತ ಜೀವರ ಅಂತರ್ಯಾಮಿಯಾಗಿ ಕ್ಷೇತ್ರಜ್ಞ ಶಬ್ದವಾಚ್ಯನು. ಶರಣವಿಲ್ಲದ ಅನಂತಪುರುಷನು. ನೀನೇ ಮಹಾಪುರುಷನು. ಸತ್ತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳಿಗೆ ನಿಯಾಮಕನಾದುದರಿಂದ ತ್ರಿಗುಣ ಎಂಬ ಶಬ್ದದಿಂದ ವಾಚ್ಯನು. ಪ್ರಕೃತಿಗೆ ನಿಯಾಮಕನಾದುದರಿಂದ ಪ್ರಧಾನ ಶಬ್ದವಾಚ್ಯನು. ಮೋಕ್ಷವನ್ನು ನೀಡುವುದರಿಂದ ಅಮೃತಶಬ್ದವಾಚ್ಯನು. ಮಹಾ ಆಕಾಶರೂಪನು, ಆದುದರಿಂದ ಯೋಗಶಬ್ದವಾಚ್ಯನು. ಸನಾತನನು. ಮೂರ್ತಾಮೂರ್ತ ವ್ಯಕ್ತಾವ್ಯಕ್ತ ಪ್ರಪಂಚಕ್ಕೆ ನಿಯಾಮಕನು. ಸತ್ಯವೇ ಮನೆಯಾಗಿ ಉಳ್ಳವನು. ಎಲ್ಲರಿಗಿಂತಲೂ ಮೊದಲಿನ ಪರದೈವನು. ಎಲ್ಲರಿಗೂ ವಸುಪ್ರದನು. ಪ್ರಜಾಪತಿಯೇ, ಸುಪ್ರಜಾಪತಿಯೇ, ವನಸ್ಪತಿಗಳಿಗೆಲ್ಲ ರಾಜನಾದ ವನಸ್ಪತಿಯೇ, ಮಹಾಪ್ರಜಾಪತಿಯೇ, ಊರ್ಜಸ್ಪತಿ, ವಾಚಸ್ಪತಿ, ಮನಸ್ಪತಿ, ಜಗತ್ಪತಿ, ದಿವಸ್ಪತೇ, ಮರುತ್ಪತೇ, ಸಲಿಲಪತೇ, ಪೃಥಿವೀಪತೇ ದಿಕ್ಪತೇ, ಎಲ್ಲಕ್ಕೂ ನೀನೇ ಆದಿನಿವಾಸಭೂತನು.ರಹಸ್ಯಸ್ವರೂಪನೂ, ಬ್ರಹ್ಮನಿಗೂ ವೇದವನ್ನುಪದೇಶಿಸಿದವನೂ, ಬ್ರಾಹ್ಮಣಶರೀರದಿಂದ ನಡೆಸಲ್ಪಡುವ ಯಾಗಾದಿ

ಕರ್ಮಸ್ವರೂಪನೂ, ರಾಜಕಾರ್ಯನಿರ್ವಾಹಕನೂ, ಮಹಾರಾಜಿಕೆ, ಚಾತುರ್ಮಹಾರಾಜಿಕ, ಆಭಾಸುರ, ಮಹಾಭಾಸುರರೆಂಬ ದೇವತೆಗಳ ಸ್ವರೂಪಿಯೂ ಆದ ನಿನಗೆ ನಮಸ್ಕಾರವು. ಗಾಯತ್ರಿ ಮೊದಲಾದ ಸಪ್ತಮಹಾಮಂತ್ರಗಳಿಂದ ಅರ್ಪಿಸಲ್ಪಡುವ ಯಜ್ಞಭಾಗಗಳೂ, ಸಪ್ತಸಾಮಸ್ವರಗಳೂ, ಯಮಗಣಗಳೂ, ಚಿತ್ರಗುಪ್ತನೇ ಮೊದಲಾದ ಮಹಾಯಮಗಣಗಳೂ ನಿನ್ನ ಸ್ವರೂಪಗಳೇ! ನೀನೇ ಸಂಜ್ಞೆಯೆಂದು ಕರೆಯಲ್ಪಡತಕ್ಕವನು. ತುಷಿತ, ಮಹಾತುಷಿತರೆಂಬ ದೇವಗಣಗಳೂ ನೀನೇ. ಲೋಕಸಂಚಾರಕನೂ ಮತ್ತು ದೇವತೆಗಳಿಗೆ ಸಹಕಾರಿಗಳೆನಿಸಿದ ಕಾಮ ರೋಗಾದಿ ಸ್ವರೂಪನೂ, ಅವುಗಳಿಗೆ ನಿರೋಧಕಗಳಾದ ಶಾಂತಿ ಸುಖಾರೋಗ್ಯಾದಿ ರೂಪವುಳ್ಳವನೂ, ಶಾಂತಿವಶ್ಯನೂ, ಅನಿಂದಿತನೂ, ಅಪ್ರಮೇಯನೂ, ಲೋಕಶಿಕ್ಷಕನೂ, ವಶನೂ, ಅವಶನೂ, ಯಜ್ಞನೂ, ಮಹಾಯಜ್ಞನೂ, ಯಜ್ಞವಿರುದ್ಧ ಕರ್ಮಸ್ವರೂಪನೂ, ಯಜ್ಞಭವನೂ, ಯಜ್ಞಕ್ಕೆ ಉತ್ಪತ್ತಿಸ್ಥಾನವೂ, ಯಜ್ಞಗರ್ಭನೂ, ಯಜ್ಞಹೃದಯನೂ, ಯಜ್ಞಸ್ತುತ್ಯನೂ, ಯಜ್ಞಭಾಗಿಯೂ, ಪಂಚಯಜ್ಞರೂಪನೂ ಆದ ನಿನಗೆ ನಮಸ್ಕಾರವು. ಪಂಚಕಾಲಸ್ವರೂಪನೂ, ಪಾಂಚರಾತ್ರಪ್ರತಿಪಾದ್ಯನೂ, ವೈಕುಂಠನಾಮಕನೂ, ಅಪರಾಜಿತನೂ, ಮನೋವಾಸಿಯೂ ಆದ ನಿನಗೆ ನಮಸ್ಕಾರವು. ಈಗ ನೀನೇನೂ ಹೊಸದಾಗಿ ತಿಳಿಯಬೇಕಾದವನಲ್ಲ. ಎಲ್ಲಾ ನಾಮಗಳೂ ನಿನ್ನ ನಾಮವೇ! ಪರನೆನಿಸಿದ ಪರನಿಗೂ ನೀನು ಸ್ವಾಮಿ. ಸ್ನಾತಕವೆಂಬ ವೇದವ್ರತವನ್ನು ಮುಗಿಸಿದವನು. ತ್ರಿದಂಡಿಗಳು, ಏಕದಂಡಿಗಳು, ದಂಡಾದಿಗಳೇನೂ ಇಲ್ಲದ ಮಹಾಹಂಸರು, ಈ ಎಲ್ಲಾ ಯತಿಭೇದಗಳೂ ನಿನ್ನ ಸ್ವರೂಪವೇ. ಎಲ್ಲಕ್ಕಿಂತಲೂ ದೀಕ್ಷಿತನೂ ನೀನೇ. ಸಾಂಖ್ಯಯೋಗಸ್ವರೂಪನೂ ನೀನೇ. ಸಾಂಖ್ಯಮೂರ್ತಿಯೂ, ಅಮೃತಕ್ಕೆ ಜನ್ಮ ಸ್ಥಾನವೂ, ಹಿರಣ್ಯವೆಂದು ಕರೆಯಲ್ಪಡುವ ಹೃದಯದಲ್ಲಿ ಶಯನಿಸತಕ್ಕವನೂ, ಎಲ್ಲಾವೇದಗಳಲ್ಲಿಯೂ, ದೇವತೆಗಳಲ್ಲಿಯೂ ಶಯನಿಸತಕ್ಕವನೂ ಆದ ನಿನಗೆ ನಮಸ್ಕಾರವು. ವಿಶ್ವೇಶ್ವರಾ! ವಿಷ್ವಕ್ಸೇನಾ! ನಿನಗೆ ನಮಸ್ಕಾರವು. ಜಗತ್ತಿನಲ್ಲಿ ನೀನೇ ಸದ್ರೂಪನು. ಜಗತ್ಪ್ರತಿಯೂ ನೀನೇ. ಅಗ್ನಿಯು ನಿನ್ನ ಮುಖವು. ನೀನೇ ಬಡಬಾಗ್ನಿ. ನೀನೇ ಆಹುತಿ. ಸಾರಥಿಯೆಂಬ ಅಗ್ನಿಯೂ ನೀನೇ. ಓಂಕಾರವಷಟ್ಕಾರವೂ ನೀನೇ. ತಪಸ್ಸೂ, ಮನಸ್ಸೂ, ಪೂರ್ಣಾಂಗವುಳ್ಳ ಚಂದ್ರನೂ, ಯಾಗಗಳಲ್ಲಿ ಪತ್ನಿಯ ನೋಟದಿಂದ ಪವಿತ್ರವೆನಿಸುವ ಆಜ್ಯವೂ ನೀನೇ! ನೀನೇ ಸೂರ್ಯನು! ನೀನೇ

ದಿಗ್ಗಜಗಳನ್ನೂ, ವಿದಿಕ್ಕುಗಳನ್ನೂ, ಪ್ರಕಾಶಗೊಳಿಸುವ ಜ್ಯೋತಿಯೂ ನೀನೇ! ಓ ಹಯಗ್ರೀವಾ! ಮೊದಲನೆಯ ತ್ರಿಸುಪರ್ಣಮಂತ್ರದಿಂದ ಕೀರ್ತಿಸಲ್ಪಡುವ ಆದಿತ್ಯಸ್ವರೂಪವೂ ನಿನ್ನದೇ! ಬ್ರಾಹ್ಮಣಾದಿ ವರ್ಣಗಳನ್ನು ಧರಿಸತಕ್ಕವನೂ, ಗಾರ್ಹಪತ್ಯ, ಆಹವನೀಯ, ದಕ್ಷಿಣ, ಸಭ್ಯ, ಅವಸಥ್ಯವೆಂಬ ಪಂಚಾಗ್ನಿಗಳೂ ನೀನೇ. ನಾಚಿಕೇತವೆಂಬ ಅಗ್ನಿಯನ್ನು ಮೂರಾವರ್ತಿ ಚಯನಮಾಡುವದರಿಂದ ಉಂಟಾಗುವ ತ್ರಿಣಾಚಿಕೇತನೂ ನೀನೇ! ಷಡಂಗಗಳಿಗೆ ಆಧಾರನೂ, ಪ್ರಾಗ್ಜ್ಯೋತಿಷವೆಂಬ ಸಾಮಸ್ವರೂಪನೂ ನೀನೇ! ಜ್ಯೇಷ್ಠವೆಂಬ ಸಾಮವನ್ನು ಗಾನ ಮಾಡತಕ್ಕವನೂ, ಸಾಮವೇದಿಗಳ ವ್ರತಗಳನ್ನು ಧರಿಸತಕ್ಕವನೂ, ಅಥರ್ವಶಿರಸ್ಸೆಂಬ ಉಪನಿಷತ್ ಸ್ವರೂಪನೂ ಆದ ನಿನಗೆ ನಮಸ್ಕಾರವು. ಸೌರ, ಶಾಕ್ತ, ಗಾಣಾಪತ್ಯ, ಶೈವ, ವೈಷ್ಣವವೆಂಬ ಐದು ಆಗಮಗಳಿಂದ ನಿರೂಪಿಸಲ್ಪಡತಕ್ಕವನೂ, ಫೇನಪ, ವಾಲಖಿಲ್ಯ, ವೈಖಾನಸ ಋಷಿಗಳಿಗೆಲ್ಲ ಆಚಾರ್ಯನೂ ಆದ ನಿನಗೆ ನಮಸ್ಕಾರವು. ನಿನ್ನ ವ್ರತಕ್ಕೂ, ನಿನ್ನ ಜ್ಞಾನಕ್ಕೂ ಎಂದಿಗೂ ಭಂಗವಿಲ್ಲ. ಯುಗದ ಆದಿಮಧ್ಯಾಂತಗಳೂ ನೀನೇ. ಇಂದ್ರನೂ, ಪ್ರಾಚೀನ ಗರ್ಭನೆಂಬ ಮುನಿಯೂ, ಕೌಶಿಕಋಷಿಯೂ, ಇವರೆಲ್ಲರ ಸ್ವರೂಪನೂ ನೀನೇ. ನಾನಾ ವಿಧದಿಂದ ಸ್ತುತಿಸಲ್ಪಡತಕ್ಕವನೂ, ಯಾಗಗಳಲ್ಲಿ ವಿಧವಿಧದಿಂದ ಕರೆಯಲ್ಪಡತಕ್ಕವನೂ, ವಿಶ್ವಕರ್ತನೂ, ವಿಶ್ವಚೇತನನೂ, ವಿಶ್ವಸ್ವರೂಪನೂ ಆದ ನಿನಗೆ ನಮಸ್ಕಾರವು. ಅನಂತಗತಿಯೂ, ಅನಂತಭೋಗನೂ, ಅನಂತನೂ, ಅನಾದಿಯೂ, ಆದಿಮಧ್ಯಾಂತ ಗಳಿಲ್ಲದವನೂ ಆದ ನಿನಗೆ ನಮಸ್ಕಾರವು. ನಿನ್ನ ಮಧ್ಯವಾಗಲಿ, ಅಂತ್ಯವಾಗಲಿ ಅವ್ಯಕ್ತವಾದುದು. ಸರ್ವವ್ರತಾವಾಸನೂ, ಸಮುದ್ರಶಾಯಿಯೂ, ಯಶಸ್ಸು, ತಪಸ್ಸು, ದಮ, ಲಕ್ಷ್ಮಿ, ವಿದ್ಯೆ, ಕೀರ್ತಿ, ಸಂಪತ್ತು, ಇವುಗಳಿಗೆಲ್ಲ ವಾಸಭೂತನೂ, ಸರ್ವಾಧಾರನೂ ಆದ ಓ ವಾಸುದೇವಾ! ನಿನಗೆ ನಮಸ್ಕಾರವು. ಎಲ್ಲರ ಇಷ್ಟವನ್ನೂ ಕೊಡತಕ್ಕವನೂ, ಹರಿಹಯನೆಂದು ಕರೆಯಲ್ಪಡತಕ್ಕವನೂ, ಅಶ್ವಮೇಧ ಸ್ವರೂಪನೂ, ಮಹಾಯಜ್ಞದಲ್ಲಿ ಭಾಗವನ್ನು ಕೈಗೊಳ್ಳತಕ್ಕವನೂ, ವರಪ್ರದನೂ, ಸುಖಪ್ರದನೂ, ಧನಪ್ರದನೂ ಆದ ನಿನಗೆ ನಮಸ್ಕಾರವು. ಹರಿಭಕ್ತಿಸ್ವರೂಪನೂ, ಯಮ, ನಿಯಮ, ಮಹಾನಿಯಮ, ಕೃಛ್ರ, ಅತಿಕೃಛ್ರ, ಸರ್ವಕೃಛ್ರಗಳೆಂಬ ಎಲ್ಲಾ ವ್ರತಸ್ವರೂಪನೂ, ವ್ರತಗಳಿಗೆ ಆಧಾರನೂ, ಭ್ರಮರಹಿತನೂ, ನಿವೃತ್ತಿ ಧರ್ಮವನ್ನು ಹಿಡಿದವರಲ್ಲಿ ನೆಲೆಗೊಂಡವನೂ, ವೇದಾಧ್ಯಯನವನ್ನು ಪೂರ್ಣಮಾಡಿದ ಬ್ರಹ್ಮಚಾರಿಸ್ವರೂಪನೂ,

ಪೃಶ್ನಿಗರ್ಭನೂ, ವೈದಿಕಕರ್ಮಪ್ರವರ್ತಕನೂ, ಭ್ರಮರಹಿತನೂ, ಸರ್ವಾಂತರ್ಯಾಮಿಯೂ, ಸರ್ವದರ್ಶಿಯೂ ಆದ ನಿನಗೆ ನಮಸ್ಕಾರವು. ಅಗ್ರಾಹ್ಯನೂ, ಅಕ್ಷಯನೂ, ಅಚಲನೂ, ಮಹಾವಿಭೂತಿಯುಳ್ಳವನೂ, ಮಹಿಮೆಯೇ ಶರೀರವಾಗಿ ಉಳ್ಳವನೂ, ಪವಿತ್ರನೂ, ಮಹಾಪವಿತ್ರನೂ, ಹಿರಣ್ಮಯನೂ ಆದ ನಿನಗೆ ನಮಸ್ಕಾರವು. ಮಹತ್ತಿಗಿಂತಲೂ ಮಹಾಂತನೂ, ಅಪ್ರಕರ್ತ್ಯನೂ, ಅವಿಜ್ಞೇಯನೂ, ಕಾರ್ಯ, ಕಾರಣ, ಮಹಾಕಾರಣಗಳಲ್ಲಿ ಮೇಲಾದವನೂ, ಸೃಷ್ಟಿ ಸಂಹಾರಗಳನ್ನು ನಡೆಸತಕ್ಕವನೂ, ಮಹಾಮಾಯೆಯುಳ್ಳವನೂ, ವಿದ್ಯೆಯನ್ನೂ, ಯೋಗವನ್ನೂ ಧರಿಸಿದವನೂ, ವಿಚಿತ್ರಶಿಖಂಡವುಳ್ಳವನೂ, ವರಪ್ರದನೂ, ಪುರೋಡಾಶವೆಂಬ ಯಜ್ಞಭಾಗವನ್ನು ಗ್ರಹಿಸತಕ್ಕವನೂ, ಸಮಸ್ತ ಯಾಗಗಳಲ್ಲಿಯೂ ನೆಲೆಗೊಂಡವನೂ ಆದ ನಿನಗೆ ನಮಸ್ಕಾರವು. ಓ ಪ್ರಭೂ! ನೀನು ತೃಷ್ಣೆಯಿಲ್ಲದವನು! ಸಂಶಯವಿಲ್ಲದವನು! ಸರ್ವವ್ಯಾಪಿ! ರೂಪರಹಿತನು! ಬ್ರಾಹ್ಮಣಸ್ವರೂಪನು! ಬ್ರಾಹ್ಮಣ ಪ್ರಿಯನು! ವಿಶ್ವಮೂರ್ತಿಯೂ, ಮಹಾಮೂರ್ತಿಯೂ, ಸರ್ವಬಂಧುವೂ, ಭಕ್ತವತ್ಸಲನೂ ಬ್ರಹ್ಮಣ್ಯದೇವನೂ ಆದ ನಿನಗೆ ನಮಸ್ಕಾರವು. ನಿರ್ವಿಕಲ್ಪಜ್ಞಾನಕ್ಕಾಗಿ ನಿನ್ನನ್ನು ಮೊರೆಹೋಗುವೆನು. ನಿನ್ನನ್ನು ಏಕಾಂತದಲ್ಲಿ ದರ್ಶನ ಮಾಡಬೇಕೆಂಬ ಆಕಾಂಕ್ಷೆಯಿಂದ ಇಲ್ಲಿ ಉಪಸ್ಥಿತನಾಗಿದ್ದೇನೆ. ನಿನಗೆ ನಮಸ್ಕಾರ, ನಮಸ್ಕಾರ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೊಂದನೆಯ ಅಧ್ಯಾಯ

ಶ್ವೇತದ್ವೀಪದಲ್ಲಿ ನಾರದರಿಗಾದ ಭಗವಂತನ ದರ್ಶನ.

ಭೀಷ್ಮಃ

ಏವಂ ಸ್ತುತಃ ಸ ಭಗವಾನ್ ಗುಹ್ಯೈಸ್ತಥ್ಯೈಶ್ಚ ನಾಮಭಿಃ ।
ತಂ ಮುನಿಂ ದರ್ಶಯಾಮಾಸ ನಾರದಂ ವಿಶ್ವರೂಪಧೃಕ್ ॥೧॥

ಭೀಷ್ಮ– ಯುಧಿಷ್ಠಿರನೇ, ನಾರದರು ಯಥಾರ್ಥವಾದ, ಗುಹ್ಯವಾದ, ಭಗವಂತನ

ನಾಮಗಳಿಂದ ಹೀಗೆ ಸ್ತುತಿಸಿದ ಬಳಿಕ ವಿಶ್ವರೂಪವನ್ನು ಧರಿಸಿದ ಭಗವಂತನು ನಾರದ ಮುನಿಗೆ ತನ್ನ ರೂಪವನ್ನು ತೋರಿಸಿದನು.

ಕಿಂಚಿಚ್ಚಂದ್ರವಿಶುದ್ಧಾತ್ಮಾ ಕಿಂಚಿಚ್ಚಂದ್ರಾದ್ ವಿಶೇಷವಾನ್ ।
ಕೃಶಾನುವರ್ಣಃ ಕಿಂಚಿಚ್ಚ ಕಿಂಚಿದ್ದಿಷ್ಣ್ಯಾಕೃತಿಃ ಪ್ರಭುಃ ॥೨॥

ಭಗವಂತನ ದಿವ್ಯವಾದ ವಿಶ್ವರೂಪವಾದರೂ ಚಂದ್ರನಿಗಿಂತಲೂ ನಿರ್ಮಲವಾಗಿ ಅವನಿಗಿಂತ ವಿಶೇಷವಾಗಿ ಕಾಣಿಸುತ್ತಿತ್ತು. ವಿಶ್ವರೂಪವನ್ನು ಧರಿಸಿದ ಪರಮಾತ್ಮನ ಶರೀರಗಳಲ್ಲಿ ಅಗ್ನಿಯ ಬಣ್ಣವು, ನಕ್ಷತ್ರದ ಛಾಯೆಯು ಕಾಣಿಸುತ್ತಿತ್ತು.

ಶುಕಪತ್ರವರ್ಣಃ ಕಿಂಚಿತ್ ಕಿಂಚಿತ್ ಸ್ಫಟಿಕಸಪ್ರಭಃ ।
ನೀಲಾಂಜನಚಯಪ್ರಖ್ಯೋ ಜಾತರೂಪಪ್ರಭಃ ಕ್ವಚಿತ್ ॥೩॥

ವಿಶ್ವರೂಪದಲ್ಲಿ ಬಿಳಿಯ ರೆಕ್ಕೆಯಂತೆ, ಸ್ಫಟಿಕ ಮಣಿಯಂತೆ, ಕಾಡಿಗೆಯ ರಾಶಿಯಂತೆ ಸಮಾನವಾದ ಕಾಂತಿಯು ಸ್ವಲ್ಪ ಸ್ವಲ್ಪ ಮೇಲನವಾಗಿತ್ತು. ಕೆಲವು ಕಡೆ ಬಂಗಾರದ ಬಣ್ಣವು ಕಾಣಿಸುತ್ತಿತ್ತು.

ಪ್ರವಾಲಾಂಕುರವರ್ಣಶ್ಚ ಶ್ವೇತವರ್ಣಃ ಕ್ವಚಿದ್ ಬಭೌ ।
ಕ್ವಚಿತ್ ಸುವರ್ಣವರ್ಣಾಭೋ ವೈಡೂರ್ಯಸದೃಶಃ ಕ್ವಚಿತ್ ॥೪॥

ಕೆಲವೊಂದು ರೂಪದಿಂದ ಪರಮಾತ್ಮನು ನೂತನವಾಗಿ ಚಿಗುರಿದ ಚಿಗುರಿನ ಬಣ್ಣವನ್ನು, ಕೆಲವು ಕಡೆ ಶ್ವೇತವರ್ಣವನ್ನು, ಕೆಲವು ಕಡೆ ಸುವರ್ಣವರ್ಣವನ್ನು, ವೈಡೂರ್ಯಸದೃಶವಾದ ಕಾಂತಿಯನ್ನು ಸೂಸುತ್ತಾ ಪ್ರಕಾಶಮಾನನಾಗಿದ್ದನು.

ನೀಲವೈಡೂರ್ಯಸದೃಶ ಇಂದ್ರನೀಲನಿಭಃ ಕ್ವಚಿತ್ ।
ಮಯೂರಗ್ರೀವವರ್ಣಾಭೋ ಮುಕ್ತಾಹಾರನಿಭಃ ಕ್ವಚಿತ್ ॥೫॥

ಕೆಲವೊಂದು ರೂಪಗಳಿಂದ ಭಗವಂತನು ನೀಲವೈಡೂರ್ಯ ಸಮಾನವಾದ ಕಾಂತಿಯಿಂದಲೂ, ಇಂದ್ರನೀಲ ಸದೃಶವಾದ ಕಾಂತಿಯಿಂದಲೂ, ನವಿಲಿನ ಕುತ್ತಿಗೆ ಬಣ್ಣವುಳ್ಳವನಾಗಿಯೂ, ಮುತ್ತಿನ ಮಾಲೆಯಂತೆ ಕಾಂತಿಯುಕ್ತನಾಗಿಯೂ ಶೋಭಿಸುತ್ತಿದ್ದನು.

ಏತಾನ್ವರ್ಣಾನ್ ಬಹುವಿಧಾನ್ರೂಪೇ ಬಿಭ್ರತ್ಸನಾತನಃ ।
ಸಹಸ್ರನಯನಃ ಶ್ರೀಮಾನ್ ಶತಶೀರ್ಷಃ ಸಹಸ್ರಪಾತ್ ॥೬॥

ಸಹಸ್ರೋದರಬಾಹುಶ್ಚ ಅವ್ಯಕ್ತ ಇತಿ ಚ ಕ್ವಚಿತ್ ।
ಓಂಕಾರಮುದ್ಗಿರನ್ ವಕ್ತ್ರಾತ್ ಸಾವಿತ್ರೀಂ ಚ ತದನ್ವಯಾಮ್ ॥೭॥

ಈ ರೀತಿ ನಾನಾ ಬಣ್ಣಗಳನ್ನು ಹೊಂದಿರುವ ಅನೇಕ ರೂಪಗಳನ್ನೇ ಭಗವಂತನು ಧರಿಸಿದ್ದನು. ಆ ರೂಪಗಳಿಗಾದರೂ ಸಾವಿರಾರು ಕಣ್ಣುಗಳು, ಸಾವಿರಾರು ತಲೆಗಳು, ಸಾವಿರಾರು ಪಾದಗಳು, ಸಾವಿರಾರು ಉದರಗಳು, ಸಾವಿರಾರು ತೋಳುಗಳು ಇದ್ದವು. ಶ್ರೀಹರಿಯ ಆಕೃತಿಯು ಅವ್ಯಕ್ತವಾಗಿ ಕಾಣಿಸುತ್ತಿತ್ತು. ಸಮಸ್ತವನ್ನು ತನ್ನ ವಶದಲ್ಲಿಟ್ಟು-ಕೊಂಡಿರುವ ಹರಿನಾರಾಯಣನು ಒಂದು ಮುಖದಿಂದ ಓಂಕಾರವನ್ನು, ಪ್ರಣವವನ್ನು ಅನುಸರಿಸಿದ ಗಾಯತ್ರಿ ಮಂತ್ರವನ್ನು ಹೇಳುತ್ತಿದ್ದನು.

ಶೇಷೇಭ್ಯಶ್ಚೈವ ವಕ್ತ್ರೇಭ್ಯಶ್ಚತುರ್ವೇದೋದ್ಗತಂ ವಸು ।
ಆರಣ್ಯಕಂ ಜಗೌ ದೇವೋ ಹರಿರ್ನಾರಾಯಣೋ ವಶೀ ॥೮॥

ಹರಿನಾರಾಯಣನು ಉಳಿದ ಮುಖಗಳಿಂದ ನಾಲ್ಕು ವೇದಗಳಿಗೆ ಸಂಬಂಧಿಸಿದ ಆರಣ್ಯಕ ಭಾಗಗಳನ್ನು ಹೇಳುತ್ತಿದ್ದನು.

ವೇದೀಂ ಕಮಂಡಲುಂ ದರ್ಭಾನ್ಮಣಿರೂಪಾನಥೋಪಲಾನ್ ।
ಅಜಿನಂ ದಂಡಕಾಷ್ಠಂ ಚ ಜ್ವಲಿತಂ ಚ ಹುತಾಶನಮ್ ।
ಧಾರಯಾಮಾಸ ದೇವೇಶೋ ಹಸ್ತೈರ್ಯಜ್ಞಪತಿಸ್ತದಾ ॥೯॥

ಯಜ್ಞಪತಿಯಾದ, ದೇವೇಶ್ವರನಾದ ಮಹಾವಿಷ್ಣುವು ತನ್ನ ಕೈಗಳಲ್ಲಿ ಯಜ್ಞವೇದಿಯನ್ನು, ಕಮಂಡಲುವನ್ನು, ಶುಭ್ರವಾದ ಮಣಿರತ್ನಗಳನ್ನು, ದರ್ಭೆಯನ್ನು, ಮೃಗಚರ್ಮವನ್ನು, ಕಾಷ್ಠದಂಡವನ್ನು ಪ್ರಜ್ವಲಿಸುತ್ತಿರುವ ಯಜ್ಞೇಶ್ವರನನ್ನು ಧರಿಸಿದ್ದನು.

ತಂ ಪ್ರಸನ್ನಂ ಪ್ರಸನ್ನಾತ್ಮಾ ನಾರದೋ ದ್ವಿಜಸತ್ತಮಃ ।
ವಾಗ್ಯತಃ ಪ್ರಯತೋ ಭೂತ್ವಾ ವವಂದೇ ಪರಮೇಶ್ವರಮ್ ।
ತಮುವಾಚ ನತಂ ಮೂರ್ಧ್ನಾ ದೇವಾನಾಮಾದಿರವ್ಯಯಃ ॥೧೦॥

ಪ್ರಸನ್ನಮುಖಭಾವದಿಂದ ಕೂಡಿರುವ ಪರಮಾತ್ಮನನ್ನು ಪ್ರಸನ್ನಾತ್ಮರಾದ, ಬ್ರಾಹ್ಮಣ ಶ್ರೇಷ್ಠರಾದ ನಾರದರು ಮೌನಿಯಾಗಿ, ಜಿತೇಂದ್ರಿಯರಾಗಿ ತಲೆಬಾಗಿ ನಮಸ್ಕರಿಸಿದರು. ಆದಿದೇವನಾದ, ನಾಶರಹಿತನಾದ ಶ್ರೀಹರಿಯು ತಲೆಬಾಗಿ ನಮಸ್ಕರಿಸಿದ ನಾರದರಿಗೆ ಹೀಗೆ ಹೇಳಿದನು.

ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹರ್ಷಯಃ ।
ಇಮಂ ದೇಶಮನುಪ್ರಾಪ್ತಾ ಮಮ ದರ್ಶನಲಾಲಸಾಃ ॥೧೧॥

ನ ಚ ಮಾಂ ತೇ ದದೃಶಿರೇ ನ ಚ ದ್ರಕ್ಷ್ಯತಿ ಕಶ್ಚನ ।
ಋತೇ ಹ್ಯೇಕಾಂತಿಕಶ್ರೇಷ್ಠಾತ್ತ್ವಂ ಚೈವೈಕಾಂತಿಕೋ ಮತಃ ॥೧೨॥

ನಾರದರೇ, ಏಕತ, ದ್ವಿತ, ತ್ರಿತ ಇನ್ನೂ ಅನೇಕ ಮಹರ್ಷಿಗಳು ನನ್ನ ದರ್ಶನವನ್ನು ಬಯಸುತ್ತಾ ಶ್ವೇತದ್ವೀಪಕ್ಕೆ ಆಗಮಿಸಿದರು. ಆದರೆ ಅವರಿಗೆ ನನ್ನ ದರ್ಶನವಾಗಲಿಲ್ಲ. ವಸ್ತುತಃ ನನ್ನ ಅನನ್ಯ ಭಕ್ತರಿಗೆ ಹೊರತು ಬೇರೆ ಯಾರಿಗೂ ನನ್ನ ದರ್ಶನವಾಗುವುದಿಲ್ಲ. ನೀನು ನನ್ನ ಭಕ್ತರಲ್ಲಿ ಶ್ರೇಷ್ಠನಾಗಿರುವಿ. ಆದ್ದರಿಂದ ದರ್ಶನವನ್ನು ಹೊಂದಲು ಸಾಧ್ಯವಾಯಿತು.

ಮಮೈತಾಸ್ತನವಃ ಶ್ರೇಷ್ಠಾ ಜಾತಾ ಧರ್ಮಗೃಹೇ ದ್ವಿಜ ।
ತಾಸ್ತ್ವಂ ಭಜಸ್ವ ಸತತಂ ಸಾಧಯಸ್ವ ಯಥಾಗತಮ್ ॥೧೩॥

ಬ್ರಾಹ್ಮಣಶ್ರೇಷ್ಠನೇ, ಧರ್ಮಪ್ರಜೇಶ್ವರನ ಮನೆಯಲ್ಲಿ ಅವತರಿಸಿರುವ ನರ-ನಾರಾಯಣ-ಹರಿ-ಕೃಷ್ಣ ನಾಲ್ಕು ರೂಪಗಳು ನನ್ನದ್ದೇ. ನೀನು ನಿರಂತರ ಅವರ ಸೇವೆಯನ್ನೇ ಮಾಡುತ್ತಿರು. ಬಂದಂತೆ ಹಿಂದಿರುಗಿ ಭಗವಂತನ ಧ್ಯಾನವನ್ನೇ ಬದುಕಿನಲ್ಲಿ ಸಾಧಿಸು.

ವೃಣೀಷ್ವ ಚ ವರಂ ವಿಪ್ರ ಮತ್ತಸ್ತ್ವಂ ಯಮಿಹೇಚ್ಛಸಿ ।
ಪ್ರಸನ್ನೋಽಹಂ ತವಾದ್ಯೇಹ ವಿಶ್ವಮೂರ್ತಿರಿಹಾವ್ಯಯಃ ॥೧೪॥

ವಿಶ್ವಮೂರ್ತಿಯಾದ, ಅವಿನಾಶಿಯಾದ ನಾನು ನಿನ್ನ ವಿಷಯದಲ್ಲಿ ಪ್ರಸನ್ನನಾಗಿದ್ದೇನೆ. ವಿಪ್ರನೇ, ಯಾವ ವರವನ್ನು ಬಯಸುತ್ತೀಯೋ ಅದನ್ನು ಕೇಳಿಕೊ.

ನಾರದಃ

ಅದ್ಯ ಮೇ ತಪಸೋ ದೇವ ಯಮಸ್ಯ ನಿಯಮಸ್ಯ ಚ ।
ಸದ್ಯಃ ಫಲಮವಾಪ್ತಂ ವೈ ದೃಷ್ಟೋ ಯದ್ಭಗವನ್ಮಯಾ ॥೧೫॥

ನಾರದ– ದೇವದೇವೇಶನೇ, ನಿನ್ನ ದರ್ಶನದಿಂದಲೇ ನಾನು ಮಾಡಿದ ತಪಸ್ಸು, ಯಮ, ನಿಯಮ, ಅನುಷ್ಠಾನ - ಈ ಎಲ್ಲದಕ್ಕೂ ಈಗಲೇ ಫಲ ದೊರೆತಂತಾಗಿದೆ.

ವರ ಏಷ ಮಮಾತ್ಯಂತಂ ದೃಷ್ಟಸ್ತ್ವಂ ಯತ್ ಸನಾತನಃ ।
ಭಗವಾನ್ ವಿಶ್ವದೃಕ್ ಸಿಂಹಃ ಸರ್ವಮೂರ್ತಿರ್ಮಹಾಪ್ರಭುಃ ॥೧೬॥

ಪೂಜ್ಯನೇ, ಸಂಪೂರ್ಣ ಜಗತ್ತಿಗೆ ಕಣ್ಣಿನಂತಿರುವಿ. ಸಕಲ ಜಗತ್ತನ್ನು ಕಾಣುತ್ತಿರುವಿ. ನರಸಿಂಹಸ್ವರೂಪನಾಗಿರುವಿ. ಸರ್ವಮೂರ್ತಿಯೂ ಆಗಿರುವಿ. ಮಹಾಪ್ರಭುವೇ, ಸನಾತನನಾದ ನೀನು ದರ್ಶನವನ್ನು ನೀಡಿದ್ದೇ ನನ್ನ ಪಾಲಿನ ವರವಾಗಿದೆ.

ಭೀಷ್ಮಃ

ಏವಂ ಸಂದರ್ಶಯಿತ್ವಾ ತು ನಾರದಂ ಪರಮೇಷ್ಠಿಜಮ್ ।
ಉವಾಚ ವಚನಂ ಭೂಯೋ ಗಚ್ಛ ನಾರದ ಮಾಚಿರಮ್ ॥೧೭॥

ಭೀಷ್ಮ– ಯುಧಿಷ್ಠಿರನೇ, ಭಗವಂತನು ಬ್ರಹ್ಮನ ಮಗನಾದ ನಾರದನಿಗೆ ದರ್ಶನವನ್ನು ನೀಡಿ ಪುನಃ ಹೀಗೆ ಹೇಳಿದನು: ನಾರದನೇ, ಬೇಗ ಹೊರಡು, ತಡ ಮಾಡಬೇಡ.

ಇಮೇ ಹ್ಯನಿಂದ್ರಿಯಾಹಾರಾ ಮದ್ಭಕ್ತಾಶ್ಚಂದ್ರವರ್ಚಸಃ ।
ಏಕಾಗ್ರಾಶ್ಚಿಂತಯೇಯುರ್ಮಾಂ ನೈಷಾಂ ವಿಘ್ನೋ ಭವೇದಿತಿ ॥೧೮॥

ಮಗುವೇ, ಶ್ವೇತದ್ವೀಪ ವಾಸಿಗಳೆಲ್ಲರೂ ಬಾಹ್ಯೇಂದ್ರಿಯರಹಿತರಾಗಿ, ಸ್ವರೂಪೇಂದ್ರಿಯದಿಂದಲೇ ವಿಹರಿಸುತ್ತಿರುವವರು. ಚಂದ್ರನ ತೇಜಸ್ಸಿಗೆ ಸಮಾನವಾದ ಪ್ರಭೆಯನ್ನು ಹೊಂದಿರುವ ಇವರು ನನ್ನ ಪರಮಭಕ್ತರು. ನಿರಂತರವೂ ಏಕಾಗ್ರ ಬುದ್ಧಿಯಿಂದ ನನ್ನನ್ನೇ ಧ್ಯಾನಿಸುತ್ತಾರೆ. ಆದ್ದರಿಂದ ಇವರ ಧ್ಯಾನಕ್ಕೆ ಅಡ್ಡಿಯಾಗಬಾರದು. ನೀನು ಇಲ್ಲಿಂದ ತೆರಳು.

ಸಿದ್ಧಾ ಶ್ವೇತೇ ಮಹಾಭಾಗಾಃ ಪುರಾ ಹ್ಯೇಕಾಂತಿನೋಭವನ್ ।
ತಮೋರಜೋವಿನಿರ್ಮುಕ್ತಾ ಮಾಂ ಪ್ರವೇಕ್ಷ್ಯಂತ್ಯಸಂಶಯಮ್ ॥೧೯॥

ಹಿಂದೆ ಇವರೆಲ್ಲರೂ ನನ್ನ ಏಕಾಂತಭಕ್ತರು. ತಮಸ್ಸು, ರಜಸ್ಸುಗಳಿಂದ ರಹಿತರಾದ ಈ ಮಹಾಭಾಗರು ಸಿದ್ಧಿಯನ್ನು ಹೊಂದಿರುತ್ತಾರೆ. ನಿಸ್ಸಂದೇಹವಾಗಿ ನನ್ನ ಪಾದವನ್ನೇ ಹೊಂದುತ್ತಾರೆ.

ನ ದೃಶ್ಯಶ್ಚಕ್ಷುಷಾ ಯೋಸೌ ನ ಸ್ಪೃಶ್ಯಃ ಸ್ಪರ್ಶನೇನ ಚ ।
ನ ಘ್ರೇಯಶ್ಚೈವ ಗಂಧೇನ ರಸೇನ ಚ ವಿವರ್ಜಿತಃ ॥೨೦॥

ನಾರದನೇ, ಯಾರನ್ನು ಕಣ್ಣಿನಿಂದ ನೋಡಲು ಸಾಧ್ಯವಾಗುವುದಿಲ್ಲವೋ, ತ್ವಚೆಯಿಂದ ಮುಟ್ಟಲು ಸಾಧ್ಯವಿಲ್ಲವೋ, ಘ್ರಾಣೇಂದ್ರಿಯದಿಂದ ಆಘ್ರಾಣಿಸಲು, ಸಾಧ್ಯವಿಲ್ಲವೋ, ರಸನೇಂದ್ರಿಯದಿಂದ ಆಸ್ವಾದಿಸಲು ಸಾಧ್ಯವಿಲ್ಲವೋ;

ಸತ್ತ್ವಂ ರಜಸ್ತಮಶ್ಚೈವ ನ ಗುಣಾಸ್ತಂ ಭಜಂತಿ ವೈ ।
ಯಶ್ಚ ಸರ್ವಗತಃ ಸಾಕ್ಷೀ ಲೋಕಸ್ಯಾತ್ಮೇತಿ ಕಥ್ಯತೇ ॥೨೧॥

ಸತ್ತ್ವ, ರಜಸ್, ತಮೋಗುಣಗಳು ಯಾರನ್ನು ಮುಟ್ಟಲಾಗದೋ ಅಂತಹ ಗುಣಾತೀತನಾದ, ಸರ್ವವ್ಯಾಪ್ತಿಯಾದ, ಸರ್ವಸಾಕ್ಷಿಯಾದ ಭಗವಂತನಿಗೆ ಲೋಕದ ಆತ್ಮ ಎನ್ನುತ್ತಾರೆ.

ಭೂತಗ್ರಾಮಶರೀರೇಷು ನಶ್ಯತ್ಸು ನ ವಿನಶ್ಯತಿ ।
ಅಜೋ ನಿತ್ಯಃ ಶಾಶ್ವತಶ್ಚ ನಿರ್ಗುಣೋ ನಿಷ್ಕಲಸ್ತಥಾ ॥೨೨॥

ಪ್ರಾಣಿಗಳ ಶರೀರಗಳಲ್ಲಿಯೂ ಅಂತರ್ಯಾಮಿಯಾಗಿ, ಶರೀರಗಳು ನಾಶ ಹೊಂದಿದರೂ ನಾಶ ಹೊಂದದೆ, ಹುಟ್ಟಿಲ್ಲದೆ, ನಿತ್ಯವೂ ಶಾಶ್ವತನೂ, ಪ್ರಾಕೃತ ಗುಣರಹಿತನೂ, ನಿಷ್ಕಲನೂ ಆಗಿದ್ದಾನೆ.

ದ್ವಿರ್ದ್ವಾದಶೇಭ್ಯಸ್ತತ್ತ್ವೇಭ್ಯಃ ಖ್ಯಾತೋ ಯಃ ಪಂಚವಿಂಶಕಃ ।
ಪುರುಷೋ ನಿಷ್ಕ್ರಿಯಶ್ಚೈವ ಜ್ಞಾನದೃಶ್ಯಶ್ಚ ಕಥ್ಯತೇ ॥೨೩॥

ಚತುರ್ವಿಂಶತಿ ತತ್ತ್ವಗಳಿಂದ ಅತೀತನಾದ ಇಪ್ಪತ್ತೈದನೆಯ ತತ್ತ್ವವೆಂದು ವಿಖ್ಯಾತನಾದವನು ಇವನೇ. ಪುರುಷ, ಪ್ರಾಕೃತಕ್ರಿಯಾರಹಿತ, ಜ್ಞಾನದೃಶ್ಯ ಎಂದೆಲ್ಲ ಈ ವಾಸುದೇವನನ್ನು ಕರೆಯುತ್ತಾರೆ.

ಯಂ ಪ್ರವಿಶ್ಯ ಭವಂತೀಹ ಮುಕ್ತಾ ವೈ ದ್ವಿಜಸತ್ತಮ ।
ಸ ವಾಸುದೇವೋ ವಿಜ್ಞೇಯಃ ಪರಮಾತ್ಮಾ ಸನಾತನಃ ॥೨೪॥

ಯಾವ ಸನಾತನನಾದ ಈ ಪರಮಾತ್ಮನನ್ನು ಹೊಂದಿ ದ್ವಿಜಶ್ರೇಷ್ಠರು ಮುಕ್ತರಾಗುತ್ತಾರೋ ಅವನನ್ನೇ ವಾಸುದೇವನೆಂದು ತಿಳಿಯಬೇಕು.

ಪಶ್ಯ ದೇವಸ್ಯ ಮಾಹಾತ್ಮ್ಯಂ ಮಹಿಮಾನಂ ಚ ನಾರದ ।
ಶುಭಾಶುಭೈಃ ಕರ್ಮಭಿರ್ಯೋ ನ ಲಿಪ್ಯತಿ ಕದಾಚನ ॥೨೫॥

ನಾರದನೇ, ಶುಭಾಶುಭ ಕರ್ಮಗಳಿಂದ ಎಂದಿಗೂ ಲಿಪ್ತನಾಗದಿರುವ, ದೇವದೇವನಾದ ಈ ಪರಮಾತ್ಮನ ಮಹಿಮೆಯನ್ನು ನೀನೇ ನೋಡು.

ಸತ್ತ್ವಂ ರಜಸ್ತಮಶ್ಚೈವ ಗುಣಾನೇತಾನ್ ಪ್ರಚಕ್ಷತೇ ।
ಏತೇ ಸರ್ವಶರೀರೇಷು ತಿಷ್ಠಂತಿ ವಿಚರಂತಿ ಚ ॥೨೬॥

ಸತ್ತ್ವ, ರಜಸ್ಸು, ತಮಸ್ಸು ಎಂಬ ಈ ಮೂರು ಗುಣಗಳನ್ನು ಗುಣ ಎಂದು ಹೇಳುತ್ತಾರೆ. ಈ ಮೂರು ಗುಣಗಳು ಎಲ್ಲ ಶರೀರಗಳಲ್ಲಿದ್ದು ಸಂಚರಿಸುತ್ತವೆ.

ಏತಾಂಗುಣಾಂಸ್ತು ಕ್ಷೇತ್ರಜ್ಞೋ ಭುಂಕ್ತೇ ನೈಭಿಃ ಸ ಭುಜ್ಯತೇ ।
ನಿರ್ಗುಣೋ ಗುಣಭುಕ್ಚೈವ ಗುಣಸ್ರಷ್ಟಾ ಗುಣಾಧಿಕಃ ॥೨೭॥

ಈ ಗುಣಗಳನ್ನು ಕ್ಷೇತ್ರಜ್ಞನಾದ ಪರಮಾತ್ಮನು ಅನುಭವಿಸುತ್ತಿದ್ದರೂ ಆ ಗುಣಗಳಿಂದ ಬದ್ಧನಾಗಿರುವುದಿಲ್ಲ. ಆದ್ದರಿಂದ ಪ್ರಾಕೃತಗುಣರಹಿತನೂ, ಅಪ್ರಾಕೃತ ಗುಣಭೋಕ್ತೃವೂ, ಗುಣಸ್ರಷ್ಟಾರನೂ, ಗುಣಾಧಿಕನೂ ಎನಿಸಿದ್ದಾನೆ.

ಜಗತ್ಪ್ರತಿಷ್ಠಾ ದೇವರ್ಷೇ ಪೃಥಿವ್ಯಪ್ಸು ಪ್ರಲೀಯತೇ ।
ಜ್ಯೋತಿಷ್ಯಾಪಃ ಪ್ರಲೀಯಂತೇ ಜ್ಯೋತಿರ್ವಾಯೌ ಪ್ರಲೀಯತೇ ॥೨೮॥

ಜಗತ್ತೆಲ್ಲವನ್ನೂ ನೆಲೆಗೊಳಿಸಿದವನು. ಪೃಥಿವಿ ತತ್ತ್ವವು ಜಲತತ್ತ್ವದಲ್ಲಿ ಲಯವಾಗುತ್ತದೆ. ಜಲವು ತೇಜಸ್ಸಿನಲ್ಲಿ, ಜ್ಯೋತಿಯು ವಾಯುವಿನಲ್ಲಿ ಲಯ ಹೊಂದುತ್ತದೆ.

ಖೇ ವಾಯುಃ ಪ್ರಲಯಂ ಯಾತಿ ಮನಸ್ಯಾಕಾಶಮೇವ ಚ ।
ಮನೋ ಹಿ ಪರಮಂ ಭೂತಂ ತದವ್ಯಕ್ತೇ ಪ್ರಲೀಯತೇ ॥೨೯॥

ವಾಯುವು ಆಕಾಶದಲ್ಲಿ, ಆಕಾಶವು ಮನಸ್ಸಿನಲ್ಲಿ ಲಯ ಹೊಂದುತ್ತದೆ. ಮನಸ್ಸೇ ಮಹಾಭೂತ ಎನಿಸಿದೆ. ಅಂತಹ ಮನಸ್ಸು ಅವ್ಯಕ್ತ ತತ್ತ್ವದಲ್ಲಿ ಲಯ ಹೊಂದುತ್ತದೆ.

ಅವ್ಯಕ್ತಂ ಪುರುಷೇ ಬ್ರಹ್ಮನ್ನಿಷ್ಕ್ರಿಯೇ ಸಂಪ್ರಲೀಯತೇ ।
ನಾಸ್ತಿ ತಸ್ಮಾತ್ ಪರತರಂ ಪುರುಷಾದ್ವೈ ಸನಾತನಾತ್ ॥೩೦॥

ಅವ್ಯಕ್ತ ಪ್ರಕೃತಿಯು ಪ್ರಾಕೃತ ಕ್ರಿಯಾ ರಹಿತನಾದ ಪುರುಷನಲ್ಲಿ ಲಯ ಹೊಂದುತ್ತದೆ. ಸನಾತನನಾದ ಆ ಪುರುಷನಿಗಿಂತಲೂ ಪರತರವಾದ ವಸ್ತುವು ಜಗತ್ತಿನಲ್ಲಿ ಯಾವುದೂ ಇರುವುದಿಲ್ಲ.

ನಿತ್ಯಂ ಹಿ ನಾಸ್ತಿ ಜಗತಿ ಭೂತಂ ಸ್ಥಾವರಜಂಗಮಮ್ ।
ಋತೇ ತಮೇಕಂ ಪುರುಷಂ ವಾಸುದೇವಂ ಸನಾತನಮ್ ।
ಸರ್ವಭೂತಾತ್ಮಭೂತೋ ಹಿ ವಾಸುದೇವೋ ಮಹಾಬಲಃ ॥೩೧॥

ಈ ಜಗತ್ತಿನಲ್ಲಿ ಶಾಶ್ವತನಾದ, ಪುರುಷೋತ್ತಮನಾದ ವಾಸುದೇವನನ್ನು ಬಿಟ್ಟು ಚರಾಚರಾತ್ಮಕವಾದ ಯಾವುದೇ ವಸ್ತುವು ಇವನಂತೆ ನಿತ್ಯವಾಗಿರುವುದಿಲ್ಲ. ಮಹಾಪ್ರಬಲನಾದ ವಾಸುದೇವನು ಸರ್ವಪ್ರಾಣಿಗಳಿಗೂ ಅಂತರ್ಯಾಮಿ ಆಗಿದ್ದಾನೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ತೇ ಸಮೇತಾ ಮಹಾತ್ಮಾನಃ ಶರೀರಮಿತಿ ಸಂಜ್ಞಿತಮ್ ॥೩೨॥

ಪೃಥಿವಿ, ವಾಯು, ಆಕಾಶ, ಜಲ, ತೇಜಸ್ಸು - ಇವು ಪಂಚಭೂತಗಳು. ಇವುಗಳು ಒಂದು ಕಡೆ ಸೇರಿದಾಗ ಶರೀರವೆಂಬ ಚಿಹ್ನೆಯು ಮೂಡುತ್ತದೆ.

ತದಾವಿಶತಿ ಯೋ ಬ್ರಹ್ಮನ್ನದೃಶ್ಯೋ ಲಘುವಿಕ್ರಮಃ ।
ಉತ್ಪನ್ನ ಏವ ಭವತಿ ಶರೀರಂ ಚೇಷ್ಟಯನ್ ಪ್ರಭುಃ ॥೩೩॥

ಪಂಚಭೂತಾತ್ಮಕವಾದ ಶರೀರವು ಉತ್ಪನ್ನವಾಗುತ್ತಿರಲು ಅದೃಶ್ಯನಾದ ವಾಮನ ರೂಪಿಯಾದ ಭಗವಂತನು ಪ್ರವೇಶಿಸುತ್ತಾನೆ. ಪ್ರಭುವಾದ ಭಗವಂತನು ಶರೀರದಲ್ಲಿ ಪ್ರವೇಶಿಸುತ್ತಿರಲು ದುರ್ಬಲವಾದ ಮಗುವಿನ ಶರೀರವು ಕ್ರಿಯಾಶೀಲವಾಗುತ್ತದೆ.

ವ್ಯಾಖ್ಯಾನ ವಿಶೇಷ– 'ಯೋಂತಃ ಪ್ರವಿಶ್ಯ ಮಮು ವಾಚಮಿಮಾಂ ಪ್ರಸುಪ್ತಾಂ ಸಂಜೀವಯತ್ಯಖಿಲಶಕ್ತಿಧರಃ' ಎಂಬ ಭಾಗವತದ ಅಭಿಪ್ರಾಯವನ್ನು ಇಲ್ಲಿ ತಿಳಿಸಲಾಗಿದೆ. ಸಮಸ್ತ ಜೀವರ ಇಂದ್ರಿಯಗಳಲ್ಲಿ ನೆಲೆ ನಿಂತು ಭಗವಂತನೇ ಆಯಾ ಶಕ್ತಿಯನ್ನು ಹೊರಹೊಮ್ಮುವಂತೆ ಮಾಡುತ್ತಾನೆ. ಕೇನೋಪನಿಷತ್ತಿನ ಸಾರವೂ ಇದೇ ಆಗಿದೆ.

ನ ವಿನಾ ಧಾತುಸಂಘಾತಂ ಶರೀರಂ ಭವತಿ ಕ್ವಚಿತ್ ।
ನ ಚ ಜೀವಂ ವಿನಾ ಬ್ರಹ್ಮನ್ ಧಾತವಶ್ಚೇಷ್ಟಯಂತ್ಯುತ ॥೩೪॥

ಪಂಚಭೂತಗಳ ಸಮಾವೇಶವಿಲ್ಲದೆ ಎಲ್ಲಿಯೂ ಶರೀರದ ರಚನೆಯು ಆಗುವುದಿಲ್ಲ. ಜೀವವು ಶರೀರದಲ್ಲಿ ಪ್ರವೇಶಿಸಿದ್ದರೆ ವಾಯುವಿನ ಚೇಷ್ಟೆಗಳು ನಡೆಯುವುದಿಲ್ಲ.

ಸ ಜೀವಃ ಪರಿಸಂಖ್ಯಾತಃ ಶೇಷಃ ಸಂಕರ್ಷಣಃ ಪ್ರಭುಃ ।
ತಸ್ಮಾತ್ ಸನತ್ಕುಮಾರತ್ವಂ ಯೋ ಲಭೇತ ಸ್ವಕರ್ಮಣಾ ॥೩೫॥

ಹೀಗೆ ಶರೀರವನ್ನು ನಿಯಮಿಸುವ ಜೀವನಿಗೆ ಸಂಕರ್ಷಣ ಎಂದು ಹೆಸರು. ಜೀವನವನ್ನು ನೀಡುವ ಜೀವಶಬ್ದವಾಚ್ಯನು ನಾರಾಯಣನೇ ಆಗಿದ್ದಾನೆ. ಪ್ರಳಯ ಕಾಲದಲ್ಲೂ ಇವನು ಉಳಿಯುವುದರಿಂದ ಶೇಷ ಎಂಬ ಹೆಸರನ್ನು ಹೊಂದಿರುತ್ತಾನೆ. ಈ ಕಾರಣದಿಂದಲೇ ಸನತ್ಕುಮಾರ ಎಂಬ ಹೆಸರನ್ನು ತಾನು ಮಾಡುವ ವ್ಯಾಪಾರದ ಹಿನ್ನೆಲೆಯಲ್ಲಿ ಹೊಂದಿರುತ್ತಾನೆ.

ಯಸ್ಮಿಂಶ್ಚ ಸರ್ವಭೂತಾನಿ ಪ್ರಲಯಂ ಯಾಂತಿ ಸಂಕ್ಷಯೇ ।
ಸ ಮನಃ ಸರ್ವಭೂತಾನಾಂ ಪ್ರದ್ಯುಮ್ನಃ ಪರಿಪದ್ಯತೇ ॥೩೬॥

ಯಾವ ಭಗವಂತನಲ್ಲಿಯೇ ಪ್ರಳಯ ಕಾಲದಲ್ಲಿ ಎಲ್ಲ ಭೂತಗಳು ಲಯವನ್ನು ಹೊಂದುತ್ತವೆಯೋ ಅಂತಹ ಭಗವಂತನು ಸಮಸ್ತ ಜೀವರ ಮನಸ್ಸಿನಲ್ಲಿ ಪ್ರದ್ಯುಮ್ನ ನಾಮಕನಾಗಿ ಖ್ಯಾತನಾಗಿದ್ದಾನೆ.

ತಸ್ಮಾತ್ ಪ್ರಸೂತೋ ಯಃ ಕರ್ತಾ ಕಾರ್ಯಂ ಕಾರಣಮೇವ ಚ ।
ಯಸ್ಮಾತ್ ಸರ್ವಂ ಪ್ರಭವತಿ ಜಗತ್ಸ್ಥಾವರಜಂಗಮಮ್ ।
ಸೋಽನಿರುದ್ಧಃ ಸ ಈಶಾನೋ ವ್ಯಕ್ತಿಃ ಸಾ ಸರ್ವಕರ್ಮಸು ॥೩೭॥

ಆ ಪ್ರದ್ಯುಮ್ನನಿಂದ ಯಾವುದು ಹುಟ್ಟುತ್ತದೋ ಅಂತಹ ಅಹಂಕಾರವೇ ಕರ್ತೃವು, ಕಾರಣವು ಆಗಿದೆ. ಅವನಿಂದಲೇ ಸ್ಥಾವರ-ಜಂಗಮಾತ್ಮಕವಾದ ಸಮಸ್ತ ಜಗತ್ತು ಹುಟ್ಟುತ್ತದೆ. ಅವನೇ ಈಶಾನನೂ, ಸಮಸ್ತ ಕರ್ಮಗಳಲ್ಲಿಯೂ ಅಭಿವ್ಯಕ್ತಿಯನ್ನು ಹೊಂದುವವನಾಗಿದ್ದಾನೆ.

ಯೋ ವಾಸುದೇವೋ ಭಗವಾನ್ ಕ್ಷೇತ್ರಜ್ಞೋ ನಿರ್ಗುಣಾತ್ಮಕಃ ।
ಜ್ಞೇಯಃ ಸ ಏವ ಭಗವಾನ್ ಜೀವಃ ಸಂಕರ್ಷಣಃ ಪ್ರಭುಃ ॥೩೮॥

ಪ್ರಾಕೃತಗುಣರಹಿತನಾದ, ಕ್ಷೇತ್ರಜ್ಞನೆನಿಸಿದ ಯಾವ ವಾಸುದೇವರೂಪಿಯಾದ ಭಗವಂತನು ಇದ್ದಾನೋ ಆ ಭಗವಂತನನ್ನೇ ಜೀವ ಎಂದು ತಿಳಿಯಬೇಕು. ಲೋಕ ಪ್ರಸಿದ್ಧನಾದ ಜೀವನು ಜೀವನೆನಿಸುವುದಿಲ್ಲ. ಸಮಸ್ತ ಸ್ಥಾವರ-ಜಂಗಮಗಳಿಂದ ಕೂಡಿದ ಜಗತ್ತನ್ನು ಹುಟ್ಟಿಸುತ್ತಾನೆ ಎಂಬ ಮಹಿಮೆಯು ಲೋಕಪ್ರಸಿದ್ಧನಾದ ಜೀವನಿಗೆ ಹೊಂದಿಕೆಯಾಗದ ಕಾರಣ ಸಂಕರ್ಷಣನಾದವನು ಭಗವಂತನೇ ಎಂದು ಹೇಳಬೇಕೇ ವಿನಾ ಹಲಾಯುಧ (ನೇಗಿಲು) ಧರಿಸಿದ ಆದಿಶೇಷ ಎಂದು ಅರ್ಥವಲ್ಲ.

ಸಂಕರ್ಷಣಾಚ್ಚ ಪ್ರದ್ಯುಮ್ನೋ ಮನೋಭೂತಃ ಸ ಉಚ್ಯತೇ ।
ಪ್ರದ್ಯುಮ್ನಾದ್ಯೋಽನಿರುದ್ಧಸ್ತು ಸೋಽಹಂಕಾರೋ ಮಹೇಶ್ವರಃ ॥೩೯॥

ಸಂಕರ್ಷಣನಾಮಕನಾದ ಭಗವಂತನಿಂದ ಮನಸ್ಸಿಗೆ ನಿಯಾಮಕನಾದ ಪ್ರದ್ಯುಮ್ನನು ಅವತರಿಸುತ್ತಾನೆ. ಪ್ರದ್ಯುಮ್ನನಿಂದ ಪ್ರಕಟಗೊಂಡ ಅನಿರುದ್ಧನು ಅಹಂಕಾರಕ್ಕೆ ನಿಯಾಮಕನಾದ ಮಹೇಶ್ವರನು.

ಮತ್ತಃ ಸರ್ವಂ ಸಂಭವತಿ ಜಗತ್ ಸ್ಥಾವರಜಂಗಮಮ್ ।
ಅಕ್ಷರಂ ಚ ಕ್ಷರಂ ಚೈವ ಸಚ್ಚಾಸಚ್ಚೈವ ನಾರದ ॥೪೦॥

ನಾರದನೇ, ಕ್ಷರ-ಅಕ್ಷರವೆನಿಸಿದ, ಕಾರ್ಯ-ಕಾರಣವೆನಿಸಿದ, ಸ್ಥಾವರ-ಜಂಗಮಾತ್ಮಕವಾದ ಪ್ರಪಂಚವೆಲ್ಲವೂ ನನ್ನಿಂದಲೇ ಹುಟ್ಟನ್ನು ಪಡೆಯುತ್ತದೆ.

ಮಾಂ ಪ್ರವಿಶ್ಯ ಭವಂತೀಹ ಮುಕ್ತಾ ಭಕ್ತಾಸ್ತು ಯೇ ಮಮ ।
ಅಹಂ ಹಿ ಪುರುಷೋ ಜ್ಞೇಯೋ ನಿಷ್ಕಿಯಃ ಪಂಚವಿಂಶಕಃ ॥೪೧॥

ನನ್ನ ಭಕ್ತರೆಲ್ಲರೂ ನನ್ನನ್ನೇ ಹೊಂದಿ ಮುಕ್ತರಾಗುತ್ತಾರೆ. ನಾನೇ ಪುರುಷನು, ಜ್ಞೇಯ, ನಿಷ್ಕ್ರಿಯನು, ಇಪ್ಪತ್ತೈದನೆಯ ತತ್ತ್ವವು ಆಗಿದ್ದೇನೆ.

ನಿರ್ಗುಣೋ ನಿಷ್ಕಲಶ್ಚೈವ ನಿರ್ದ್ವಂದ್ವೋ ನಿಷ್ಪರಿಗ್ರಹಃ ।
ಏತತ್ತ್ವಯಾ ನ ವಿಜ್ಞೇಯಂ ರೂಪವಾನಿತಿ ದೃಶ್ಯತೇ ।
ಇಚ್ಛನ್ಮುಹೂರ್ತಾನ್ನಶ್ಯೇಯಮೀಶೋಽಹಂ ಜಗತೋ ಗುರುಃ ॥೪೨॥

ನಾನು ಪ್ರಾಕೃತಗುಣರಹಿತನೂ, ಪ್ರಾಕೃತ ಕಲಾರಹಿತನೂ, ಸುಖ-ದುಃಖ ದ್ವಂದ್ವ ರಹಿತನೂ, ಪ್ರಾಕೃತಪರಿಗ್ರಹಗಳಿಂದ ರಹಿತನೂ ಆಗಿದ್ದೇನೆ. ನಾನು ನಿನಗೆ ವಿಶ್ವರೂಪವನ್ನು ಧರಿಸಿ ಕಾಣಿಸಿಕೊಳ್ಳುತ್ತಿರುವುದರಿಂದ ಪ್ರಾಕೃತ ರೂಪಿ ಎಂದು ನೀನು ಭಾವಿಸಬಾರದು. ನಾನು ಇಚ್ಛಿಸಿದರೆ ಒಂದು ಮುಹೂರ್ತದಲ್ಲಿ ಜಗತ್ತೆಲ್ಲವನ್ನೂ ನಾಶಗೊಳಿಸಿಯೇನು. ನಾನು ಜಗತ್ತಿಗೆ ಗುರುವೂ ಆಗಿದ್ದೇನೆ.

ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ ।
ಸರ್ವಭೂತಗುಣೈರ್ಯುಕ್ತಂ ನೈವಂ ತ್ವಂ ಜ್ಞಾತುಮರ್ಹಸಿ ।
ಮಯ್ಯೇತತ್ ಕಥಿತಂ ಸಮ್ಯಕ್ತವ ಮೂರ್ತಿಚತುಷ್ಟಯಮ್ ॥೪೩॥

ನಾರದನೇ, ನಾನು ಸೃಷ್ಟಿಸಿರುವ ಇಚ್ಛಾಶಕ್ತಿಯಿಂದಲೇ ನೀನು ನನ್ನ ದರ್ಶನವನ್ನು ಪಡೆದಿರುತ್ತಿ. ಪ್ರಾಕೃತರೂಪ-ರಸಾದಿ ಗುಣದಿಂದಾಗಲಿ, ದುಃಖಾದಿ ಪ್ರಾಣಿಗಳ ಗುಣದಿಂದಾಗಲಿ ನಾನು ಕೂಡಿದವೆನೆಂದು ನೀನು ತಿಳಿಯಬೇಡ. ನಾರದನೇ, ನಿನಗೆ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಎಂಬ ನಾಲ್ಕು ರೂಪಗಳ ವಿಷಯವನ್ನು ಚೆನ್ನಾಗಿ ಹೇಳಿರುತ್ತೇನೆ.

ಸಿದ್ಧಾ ಹ್ಯೇತೇ ಮಹಾಭಾಗಾ ನರಾ ಹ್ಯೇಕಾಂತಿನೋಽಭವನ್ ।
ತಮೋರಜೋಭ್ಯಾಂ ನಿರ್ಮುಕ್ತಾಃ ಪ್ರವೇಕ್ಷ್ಯಂತಿ ಚ ಮಾಂ ಮುನೇ ॥

ಮಹಾಪುಣ್ಯವಂತರಾದ ಶ್ವೇತದ್ವೀಪ ನಿವಾಸಿಗಳೆಲ್ಲರೂ ಸಿದ್ಧಪುರುಷರಾಗಿರುತ್ತಾರೆ. ನನ್ನ ಅನನ್ಯಭಕ್ತರಾಗಿದ್ದಾರೆ. ತಮಸ್ಸು, ರಜಸ್ಸುಗಳಿಂದ ಮುಕ್ತರಾಗಿದ್ದಾರೆ. ನನ್ನನ್ನೇ ಇವರೆಲ್ಲರೂ ಹೊಂದುತ್ತಾರೆ.

ಅಹಂ ಕರ್ತಾ ಚ ಕಾರ್ಯಂ ಚ ಕಾರಣಂ ಚಾಪಿ ನಾರದ ।
ಅಹಂ ಹಿ ಜೀವಸಂಜ್ಞೋ ವೈ ಮಯಿ ಜೀವಃ ಸಮಾಹಿತಃ ।
ಮೈವಂ ತೇ ಬುದ್ಧಿರತ್ರಾಭೂದ್ದ್ರಷ್ಟೋ ಜೀವೋ ಮಯೇತಿ ಚ ॥೪೫॥

ನಾನೇ ಜಗತ್ತಿನ ಕರ್ತ. ಕಾರ್ಯ-ಕಾರಣಗಳಲ್ಲಿಯೂ ನಾನೇ ಅಂತರ್ಯಾಮಿಯು. ನಾನೇ ಜೀವ ಎಂಬ ಹೆಸರನ್ನು ಜೀವರಲ್ಲಿದ್ದು ಪಡೆದಿರುತ್ತೇನೆ. ಆದ್ದರಿಂದ ನೀನು ನಾನು ಜೀವನನ್ನು ನೋಡಿದೆ ಎಂದು ಭಾವಿಸಬೇಡ. ಪರಮಾತ್ಮನನ್ನೇ ನೋಡಿರುತ್ತಿ ಎಂದು ಭಾವ.

ಅಹಂ ಸರ್ವತ್ರಗೋ ಬ್ರಹ್ಮನ್ ಭೂತಗ್ರಾಮಾಂತರಾತ್ಮಕಃ ।
ಭೂತಗ್ರಾಮಶರೀರೇಷು ನಶ್ಯತ್ಸು ನ ನಶಾಮ್ಯಹಮ್ ॥೪೬॥

ನಾನು ಎಲ್ಲೆಡೆಯೂ ನೆಲೆಗೊಂಡಿರುವೆ. ಸಮಸ್ತ ಇಂದ್ರಿಯಗಳಲ್ಲಿಯೂ ಅಂತರ್ಯಾಮಿಯಾಗಿರುವೆ. ಇಂದ್ರಿಯಗಳನ್ನು ಧರಿಸಿದ ಜೀವರ ಶರೀರಗಳು ನಾಶ ಹೊಂದಿದರೂ ನಾನು ನಾಶವನ್ನು ಹೊಂದುವುದಿಲ್ಲ.

ಹಿರಣ್ಯಗರ್ಭೋ ಲೋಕಾದಿಶ್ಚತುರ್ವಕ್ತ್ರೋSನಿರುಕ್ತಗಃ ।
ಬ್ರಹ್ಮಾ ಸನಾತನೋ ದೇವೋ ಮಮ ಬಹ್ವರ್ಥಚಿಂತಕಃ ॥೪೭॥

ಯಾರು ಸಮಸ್ತ ಜಗತ್ತಿಗೆ ಆದಿಯಾಗಿ ನಾಲ್ಕು ಮುಖಗಳನ್ನು ಧರಿಸಿ ಇದ್ದಾನೋ ಅಂತಹ ಸನಾತನನಾದ ಚತುರ್ಮುಖ ಬ್ರಹ್ಮದೇವನು ನನ್ನ ಅನೇಕ ವ್ಯಾಪಾರಗಳನ್ನು ಚೆನ್ನಾಗಿ ಚಿಂತಿಸುತ್ತಾನೆ.

ಪಶ್ಯೈಕಾದಶ ಮೇ ರುದ್ರಾನ್ ದಕ್ಷಿಣಂ ಪಾರ್ಶ್ವಮಾಸ್ಥಿತಾನ್ ।
ದ್ವಾದಶೈವ ತಥಾದಿತ್ಯಾನ್ವಾಮಂ ಪಾರ್ಶ್ವಂ ಸಮಾಸ್ಥಿತಾನ್ ॥೪೮॥

ನನ್ನ ಬಲಭಾಗದಲ್ಲಿ ಉಪಸ್ಥಿತರಾದ ಹನ್ನೊಂದು ಮಂದಿ ರುದ್ರರನ್ನು, ಎಡಭಾಗದಲ್ಲಿರುವ ಹನ್ನೆರಡು ಮಂದಿ ಆದಿತ್ಯರನ್ನು ನೀನೇ ನೋಡು.

ಅಗ್ರತಶ್ಚೈವ ಮೇ ಪಶ್ಯ ವಸೂನಷ್ಟೌ ಸುರೋತ್ತಮಾನ್ ।
ನಾಸತ್ಯಂ ಚೈವ ದಸ್ರಂ ಚ ಭಿಷಜೌ ಪಶ್ಯ ಪೃಷ್ಠತಃ ॥೪೯॥

ನನ್ನ ಮುಂಭಾಗದಲ್ಲಿರುವ ಸುರೋತ್ತಮರಾದ ಎಂಟು ಮಂದಿ ವಸುದೇವತೆಗಳನ್ನು, ನನ್ನ ಹಿಂಭಾಗದಲ್ಲಿರುವ ನಾಸತ್ಯ, ದಸ್ರ ಎಂಬ ವೈದ್ಯರಾದ ಅಶ್ವಿನೀದೇವತೆಗಳನ್ನು ನೀನೇ ನೋಡು.

ಸರ್ವಾನ್ ಪ್ರಜಾಪತೀನ್ ಪಶ್ಯ ಪಶ್ಯ ಸಪ್ತ ಋಷೀನಪಿ ।
ವೇದಾನ್ಯಜ್ಞಾಂಶ್ಚ ಶತಶಃ ಪಶ್ಯಾಮೃತಮಥೌಷಧೀಃ ॥೫೦॥

ಇದರಂತೆ ನನ್ನ ಅವಯವಗಳಲ್ಲಿರುವ ಪ್ರಜಾಪತಿಗಳನ್ನು, ಸಪ್ತರ್ಷಿಗಳನ್ನು, ವೇದಗಳನ್ನು, ಯಜ್ಞಗಳನ್ನು, ಅಮೃತವನ್ನು, ಔಷಧಿಗಳನ್ನು ನೂರಾರು ವಿಧವಾಗಿ ಇರುವುದನ್ನು ನೀನೇ ನೋಡು.

ತಪಾಂಸಿ ನಿಯಮಾಂಶ್ಚೈವ ಯಮಾನಪಿ ಪೃಥಗ್ವಿಧಾನ್ ।
ತಥಾಷ್ಟಗುಣಮೈಶ್ವರ್ಯಮೇಕಸ್ಥಂ ಪಶ್ಯ ಮೂರ್ತಿಮತ್ ॥೫೧॥

ತಪಸ್ಸು, ಅನೇಕ ರೀತಿಗಳಾದ ಯಮ-ನಿಯಮಗಳು, ಅಣಿಮಾದಿ ಅಷ್ಟೈಶ್ವರ್ಯಗಳು ಇವೆಲ್ಲವೂ ನನ್ನಲ್ಲಿ ನೆಲೆಗೊಂಡಿರುವುದನ್ನು ನೀನೇ ನೋಡು.

ಶ್ರಿಯಂ ಲಕ್ಷ್ಮೀಂ ಚ ಕೀರ್ತಿಂ ಚ ಪೃಥಿವೀಂ ಚ ಕಕುದ್ಮತೀಮ್ ।
ವೇದಾನಾಂ ಮಾತರಂ ಪಶ್ಯ ಮತ್ಸ್ಥಾಂ ದೇವೀಂ ಸರಸ್ವತೀಮ್ ॥೫೨॥

ಶ್ರೀ, ಲಕ್ಷ್ಮೀ, ಕೀರ್ತಿ, ದಿಗಭಿಮಾನಿನಿಯಾದ ಪೃಥಿವಿ, ವೇದಗಳಿಗೆ ಮಾತೆಯಾದ ಸರಸ್ವತಿ - ಇವರೆಲ್ಲರೂ ನನ್ನನ್ನೇ ಆಶ್ರಯಿಸಿರುವುದನ್ನು ನೋಡು.

ಧ್ರುವಂ ಚ ಜ್ಯೋತಿಷಾಂ ಶ್ರೇಷ್ಠಂ ಪಶ್ಯ ನಾರದ ಖೇಚರಮ್ ।
ಅಂಭೋಧರಾನ್ ಸಮುದ್ರಾಂಶ್ಚ ಸರಾಂಸಿ ಸರಿತಸ್ತಥಾ ॥೫೩॥

ನಾರದನೇ, ನಕ್ಷತ್ರಗಳಲ್ಲಿ ಶ್ರೇಷ್ಠನಾದ, ಆಕಾಶಚಾರಿಯಾದ ಧ್ರುವನಕ್ಷತ್ರವು ನನ್ನ ಶರೀರದಲ್ಲಿರುವುದನ್ನು ನೋಡು. ಮೇಘಗಳು, ಸಮುದ್ರಗಳು, ಸರೋವರಗಳು, ನದಿಗಳು ನನ್ನಲ್ಲೇ ನೆಲೆಸಿವೆ.

ಮೂರ್ತಿಮಂತಃ ಪಿತೃಗಣಾಂಶ್ಚತುರಃ ಪಶ್ಯ ಸತ್ತಮ ।
ತ್ರೀಂಶ್ಚೈವೇಮಾನ್ ಗುಣಾನ್ ಪಶ್ಯ ಮತ್ಸ್ಥಾನ್ ಮೂರ್ತಿವಿವರ್ಜಿತಾನ್

ಮೂರ್ತಿಮಂತರಾಗಿ ನಾಲ್ಕು ವಿಧರಾದ ಪಿತೃಗಣಗಳು ನನ್ನಲ್ಲಿರುವುದನ್ನು ನೋಡು. ಶರೀರಗಳಿಲ್ಲದಿರುವ ತ್ರಿಗುಣಗಳು ಶರೀರವನ್ನು ಧರಿಸಿ ನನ್ನಲ್ಲಿರುವುದನ್ನು ನೋಡು.

ದೇವಕಾರ್ಯಾದಪಿ ಮುನೇ ಪಿತೃಕಾರ್ಯಂ ವಿಶಿಷ್ಯತೇ ।
ದೇವಾನಾಂ ಚ ಪಿತೃಣಾಂ ಚ ಪಿತಾ ಹ್ಯೇಕೋऽಹಮಾದಿತಃ ॥೫೫॥

ಪಿತೃಕಾರ್ಯವು ದೇವಕಾರ್ಯಕ್ಕಿಂತ ಅತಿಶಯವೆನಿಸಿದೆ. ದೇವತೆಗಳಿಗೂ ಪಿತೃಗಳಿಗೂ ನಾನೇ ತಂದೆಯ ಸ್ಥಾನದಲ್ಲಿದ್ದೇನೆ.

ಅಹಂ ಹಯಶಿರೋ ಭೂತ್ವಾ ಸಮುದ್ರೇ ಪಶ್ಚಿಮೋತ್ತರೇ ।
ಪಿಬಾಮಿ ಸುಹುತಂ ಹವ್ಯಂ ಕವ್ಯಂ ಚ ಶ್ರದ್ಧಯಾನ್ವಿತಮ್ ॥೫೬॥

ನಾನು ಹಯಗ್ರೀವ ರೂಪವನ್ನು ಧರಿಸಿ, ಸಮುದ್ರದ ವಾಯುವ್ಯ ದಿಕ್ಕಿನಲ್ಲಿ ವಾಸಿಸುತ್ತಾ ಶ್ರದ್ಧಾಪೂರ್ವಕವಾಗಿ, ವಿಧಿಪೂರ್ವಕವಾಗಿ ಅರ್ಪಿಸಿದ ಹವ್ಯ-ಕವ್ಯಗಳನ್ನು ಸ್ವೀಕರಿಸುತ್ತೇನೆ.

ಮಯಾ ಸೃಷ್ಟಃ ಪುರಾ ಬ್ರಹ್ಮಾ ಮದ್ಯಜ್ಞಮಯಜತ್ಸ್ವಯಮ್ ।
ತತಸ್ತಸ್ಮೈ ವರಾನ್ ಪ್ರೀತೋ ದದಾವಹಮನುತ್ತಮಾನ್ ॥೫೭॥

ನನ್ನಿಂದ ಸೃಷ್ಟಿಸಲ್ಪಟ್ಟ ಚತುರ್ಮುಖ ಬ್ರಹ್ಮನು ಯಜ್ಞಪುರುಷನಾದ ನನ್ನ ಪ್ರೀತಿಗಾಗಿಯೇ ಯಜ್ಞ ಮಾಡಿದನು. ಅದರಿಂದ ಪ್ರೀತನಾದ ನಾನು ಅವನಿಗೆ ಉತ್ತಮವಾದ ವರಗಳನ್ನು ನೀಡಿದೆನು.

ಮತ್ಪುತ್ರತ್ವಂ ಚ ಕಲ್ಪಾದೌ ಲೋಕಾಧ್ಯಕ್ಷತ್ವಮೇವ ಚ ।
ಅಹಂಕಾರಕೃತಂ ಚೈವ ನಾಮ ಪರ್ಯಾಯವಾಚಕಮ್ ॥೫೮॥

ಬ್ರಹ್ಮದೇವನೇ, ಪ್ರತಿಯೊಂದು ಕಲ್ಪದ ಆದಿಯಲ್ಲೂ ನೀನು ನನ್ನ ಪುತ್ರನಾಗಿ ಜನ್ಮವನ್ನು ತಾಳು. ಲೋಕಾಧ್ಯಕ್ಷನು ನೀನೇ ಆಗು. ಅಹಂಕಾರ ಎಂಬ ಪರ್ಯಾಯ ನಾಮವು ನಿನಗೇ ಉಂಟಾಗಲಿ.

ತ್ವಯಾ ಕೃತಾಂ ಚ ಮರ್ಯಾದಾಂ ನಾತಿಕ್ರಾಮ್ಯತಿ ಕಶ್ಚನ ।
ತ್ವಂ ಚೈವ ವರದೋ ಬ್ರಹ್ಮನ್ ವರೇಪ್ಸೂನಾಂ ಭವಿಷ್ಯಸಿ ॥೫೯॥

ನೀನು ಹಾಕುವ ವಿಧಿ-ನಿಯಮಗಳನ್ನು ಲೋಕದಲ್ಲಿ ಯಾರೂ ಅತಿಕ್ರಮಿಸುವುದಿಲ್ಲ. ಮಹಾಭಾಗನೇ, ತಪೋಧನನೇ, ವರವನ್ನು ಬಯಸುವವರಿಗೆಲ್ಲ ನೀನೇ ವರಪ್ರದನಾಗುತ್ತಿ.

ಸುರಾಸುರಗಣಾನಾಂ ಚ ಋಷೀಣಾಂ ಚ ತಪೋಧನ ।
ಪಿತೃಣಾಂ ಚ ಮಹಾಭಾಗ ಸತತಂ ಸಂಶಿತವ್ರತ ।
ವಿವಿಧಾನಾಂ ಚ ಭೂತಾನಾಂ ತ್ವಮುಪಾಸ್ಯೋ ಭವಿಷ್ಯಸಿ ॥೬೦॥

ಪ್ರಾದುರ್ಭಾವಗತಶ್ಚಾಹಂ ಸುರಕಾರ್ಯೇಷು ನಿತ್ಯದಾ ।
ಅನುಶಾಸ್ಯಸ್ತ್ವಯಾ ಬ್ರಹ್ಮನ್ನಿಯೋಜ್ಯಶ್ಚ ಸುತೋ ಯಥಾ ॥೬೧॥

ದೇವತೆಗಳಿಗೂ, ಅಸುರರಿಗೂ, ಋಷಿಗಳಿಗೂ, ಪಿತೃಗಳಿಗೂ, ನಾನಾ ವಿಧವಾದ ಪ್ರಾಣಿಗಳಿಗೂ ಉಪಾಸ್ಯದೇವನಾಗಿರುತ್ತಿ. ದೇವತೆಗಳ ಕಾರ್ಯಸಿದ್ಧಿಗಾಗಿ ನಾನು ಅನೇಕ ಅವತಾರಗಳನ್ನು ತಾಳುತ್ತಿರುತ್ತೇನೆ. ಅಂತಹ ಸಮಯದಲ್ಲಿ ನೀನು ಹೇಳಿದಂತೆ ನಾನೂ ನಡೆಯುತ್ತೇನೆ. ತಂದೆಯು ಮಗನನ್ನು ಕಾರ್ಯದಲ್ಲಿ ನಿಯೋಜಿಸುವಂತೆ ನೀನು ನಿನ್ನ ಸೃಷ್ಟಿಯಲ್ಲಿ ನನ್ನನ್ನೂ ನಿಯೋಜಿಸಬಹುದು.

ಏತಾಂಶ್ಚಾನ್ಯಾಂಶ್ಚ ರುಚಿರಾನ್ ಬ್ರಹ್ಮಣೇಮಿತತೇಜಸೇ ।
ಅಹಂ ದತ್ತ್ವಾ ವರಾನ್ ಪ್ರೀತೋ ನಿವೃತ್ತಿಪರಮೋಭವಮ್ ॥೬೨॥

ನಾರದನೇ, ನಾನು ಮಹಾತೇಜಸ್ವಿಯಾದ ಬ್ರಹ್ಮನಿಗೆ ಇಂತಹ ಅನೇಕ ವಿಧವಾದ ಮನೋಜ್ಞ ವರಗಳನ್ನು ನೀಡಿ ಪರಮ ಆನಂದವನ್ನು ಹೊಂದಿದೆನು.

ನಿರ್ವಾಣಂ ಸರ್ವಧರ್ಮಾಣಾಂ ನಿವೃತ್ತಿಃ ಪರಮಾ ಸ್ಮೃತಾ ।
ತಸ್ಮಾನ್ನಿವೃತ್ತಿಮಾಪನ್ನಶ್ಚರೇತ್ ಸರ್ವಾಂಗನಿರ್ವೃತಃ ॥೬೩॥

ಸಮಸ್ತ ಧರ್ಮಗಳಿಂದ ವಿಶ್ರಾಂತನಾಗಿರುವುದೇ ಪರಮಸುಖವೆಂದು ಹೇಳಲ್ಪಟ್ಟಿದೆ. ಆದ್ದರಿಂದ ಸಾಧಕನು ಸಮಸ್ತ ಧರ್ಮಗಳಿಂದ ನಿವೃತ್ತಿಯನ್ನು ಹೊಂದಿ ಸಕಲ ಬಂಧನಗಳಿಂದಲೂ ಮುಕ್ತನಾಗಿ ಸಂಚರಿಸಬೇಕು.

ವಿದ್ಯಾಸಹಾಯವಂತಂ ಮಾಮಾದಿತ್ಯಸ್ಥಂ ಸನಾತನಮ್ ।
ಕಪಿಲಂ ಪ್ರಾಹುರಾಚಾರ್ಯಾಃ ಸಾಂಖ್ಯನಿಶ್ಚಿತನಿಶ್ಚಯಾಃ ॥೬೪॥

ಸಾಂಖ್ಯತತ್ತ್ವದಲ್ಲಿ ನಿಶ್ಚಯವನ್ನು ಹೊಂದಿರುವ ಜ್ಞಾನಿಗಳು, ವಿದ್ಯಾ, ಸಹಾಯದಿಂದ ಕೂಡಿರುವ ಸೂರ್ಯಮಂಡಲದಲ್ಲಿರುವ ನನ್ನನ್ನು ಸನಾತನನೂ, ಕಪಿಲನೂ ಎಂದು ಹೇಳುತ್ತಾರೆ.

ಹಿರಣ್ಯಗರ್ಭೋ ಭಗವಾನೇಷ ಛಂದಸಿ ಸುಷ್ಟುತಃ ।
ಸೋಽಹಂ ಯೋಗಗತಿರ್ಬ್ರಹ್ಮನ್ ಯೋಗಶಾಸ್ತ್ರೇಷು ಶಬ್ದಿತಃ ॥೬೫॥

ವೇದಗಳಿಂದ ಚೆನ್ನಾಗಿ ಸಂಸ್ಕೃತನಾದ ಭಗವಾನ್ ಹಿರಣ್ಯಗರ್ಭನೂ ನಾನೇ. ಯೋಗಶಾಸ್ತ್ರದಲ್ಲಿ ಹೇಳಿರುವ ಯೋಗಗತಿ ಎನಿಸಿದ ಈಶ್ವರನೂ ನಾನೇ.

ಏಷೋಽಹಂ ವ್ಯಕ್ತಿಮಾಗಮ್ಯ ತಿಷ್ಠಾಮಿ ದಿವಿ ಶಾಶ್ವತಃ ।
ತತೋ ಯುಗಸಹಸ್ರಾಂತೇ ಸಂಹರಿಷ್ಯೇ ಜಗತ್ ಪುನಃ ।
ಕೃತ್ವಾತ್ಮಸ್ಥಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ॥೬೬॥

ಶಾಶ್ವತನಾದ ನಾನು ಈ ಸಮಯದಲ್ಲಿ ವ್ಯಕ್ತರೂಪವನ್ನು ಧರಿಸಿ ಆಕಾಶದಲ್ಲಿ ನಿಂತಿದ್ದೇನೆ. ಸಾವಿರ ಚತುರ್ಯುಗದ ಕೊನೆಯಲ್ಲಿ ಈ ಜಗತ್ತನ್ನು ಪುನಃ ಸಂಹಾರ ಮಾಡುತ್ತೇನೆ. ಸ್ಥಾವರ-ಜಂಗಮಾತ್ಮಕವಾದ ಪ್ರಪಂಚವನ್ನೆಲ್ಲ ನನ್ನಲ್ಲೇ ಸೆಳೆದುಕೊಳ್ಳುತ್ತೇನೆ.

ಏಕಾಕೀ ವಿದ್ಯಯಾ ಸಾರ್ಧಂ ವಿಹರಿಷ್ಯೇ ದ್ವಿಜೋತ್ತಮ ।
ತತೋ ಭೂಯೋ ಜಗತ್ ಸರ್ವಂ ಕರಿಷ್ಯಾಮೀಹ ವಿದ್ಯಯಾ ॥೬೭॥

ವೇದವಿದ್ಯೆಗಳಿಗೆ ಅಭಿಮಾನಿಯಾದ ಲಕ್ಷ್ಮೀದೇವಿಯಿಂದ ಸಹಿತನಾಗಿ ಒಬ್ಬನೇ ಪ್ರಳಯಕಾಲದಲ್ಲಿ ವಿಹರಿಸುತ್ತೇನೆ. ಪುನಃ ಲಕ್ಷ್ಮೀ ಮೂಲಕವಾಗಿ ಚರಾಚರಾತ್ಮಕವಾದ ಜಗತ್ತನ್ನು ಸೃಷ್ಟಿಸುತ್ತೇನೆ.

ಅಸ್ಮಿನ್ಮೂರ್ತಿಶ್ಚತುರ್ಥೀ ಯಾ ಸಾಸೃಜಚ್ಛೇಷಮವ್ಯಯಮ್ ।
ಸ ಹಿ ಸಂಕರ್ಷಣಃ ಪ್ರೋಕ್ತಃ ಪ್ರದ್ಯುಮ್ನಂ ಸೋಽಪ್ಯಜೀಜನತ್ ॥೬೮॥

ಈ ವ್ಯೂಹರೂಪವೆನಿಸಿದ ನಾಲ್ಕು ರೂಪಗಳಲ್ಲಿ ನಾಲ್ಕನೆಯ ರೂಪವೆನಿಸಿದ ವಾಸುದೇವ ನಾಮಕನಾದ ನಾನು ಶೇಷಾಂತರ್ಯಾಮಿಯಾದ ಸಂಕರ್ಷಣ ರೂಪವನ್ನು ಅಭಿವ್ಯಕ್ತಿಗೊಳಿಸುತ್ತೇನೆ. ಪ್ರದ್ಯುಮ್ನರೂಪಿಯಾದ ನಾನು ಅನಿರುದ್ಧ ರೂಪವನ್ನು

ಹೊಂದುತ್ತೇನೆ. ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಎಂಬ ನನ್ನ ಮೂರ್ತಿಗಳ ಅಭಿವ್ಯಕ್ತಿಯೇ ಸೃಷ್ಟಿ ಎನಿಸಿದೆ ಹೊರತು ಈ ಜಗತ್ತು ಸ್ವಯಂ ಸೃಷ್ಟಿಯನ್ನು ಹೊಂದಲರ್ಹವಾಗಿರುವುದಿಲ್ಲ. ಚತುರ್ಮುಖ ಬ್ರಹ್ಮನು ಸೃಷ್ಟಿಸಲು ಸಮರ್ಥನಲ್ಲ.

ಪ್ರದ್ಯುಮ್ನಾದನಿರುದ್ಧೋಹಂ ಸರ್ಗೋ ಮಮ ಪುನಃ ಪುನಃ ।
ಅನಿರುದ್ಧಾತ್ತಥಾ ಬ್ರಹ್ಮಾ ತತ್ರಾದಿಕಮಲೋದ್ಭವಃ ॥೬೯॥

ಪ್ರದ್ಯುಮ್ನನಿಂದ ಪುನಃ ಅನಿರುದ್ಧನೆಂಬ ಹೆಸರನ್ನು ಪಡೆದು ಅವತಾರ ಮಾಡುತ್ತೇನೆ. ಅನಿರುದ್ಧನ ನಾಭಿಕಮಲದಿಂದ ಕಮಲೋದ್ಭವನೆನಿಸಿದ ಬ್ರಹ್ಮನ ಸೃಷ್ಟಿಯಾಗುತ್ತದೆ.

ಬ್ರಹ್ಮಣಃ ಸರ್ವಭೂತಾನಿ ಚರಾಣಿ ಸ್ಥಾವರಾಣಿ ಚ ।
ಏತಾಂ ಸೃಷ್ಟಿಂ ವಿಜಾನೀಹಿ ಕಲ್ಪಾದಿಷು ಪುನಃ ಪುನಃ ॥೭೦॥

ಬ್ರಹ್ಮನಿಂದ ಸಮಸ್ತ ಚರಾಚರ ಪ್ರಾಣಿಗಳು ಸೃಷ್ಟಿಗೊಳ್ಳುತ್ತವೆ. ಕಲ್ಪದ ಆರಂಭದಲ್ಲಿ ಪುನಃ ಪುನಃ ಇಂತಹ ಸೃಷ್ಟಿಗಳು ಆಗುತ್ತಲೇ ಇರುತ್ತವೆ ಎಂದು ತಿಳಿ.

ಯಥಾ ಸೂರ್ಯಸ್ಯ ಗಗನಾದುದಯಾಸ್ತಮಯಾವಿಹ ।
ನಷ್ಟೌ ಪುನರ್ಬಲಾತ್ ಕಾಲ ಆನಯತ್ಯಮಿತದ್ಯುತಿಃ ।
ತಥಾ ಬಲಾದಹಂ ಪೃಥ್ವೀಂ ಸರ್ವಭೂತಹಿತಾಯ ವೈ ॥೭೧॥

ಹೇಗೆ ಆಕಾಶಮಂಡಲದಲ್ಲಿ ಸೂರ್ಯನ ಉದಯ-ಅಸ್ತಮಾನಗಳು ನಡೆಯುತ್ತಲೇ ಇರುತ್ತವೋ, ಸಾಯಂಕಾಲವಾದಾಗ ಸೂರ್ಯನು ಅಸ್ತಂಗತನಾಗಿದ್ದರೂ ಪುನಃ ಅವನನ್ನು ಪ್ರಾತಃಕಾಲದಲ್ಲಿ ಸೆಳೆದು ತರುತ್ತಾನೋ ಅದರಂತೆ ಸಮಸ್ತ ಪ್ರಾಣಿಗಳ ಹಿತಕ್ಕಾಗಿ ಸಮುದ್ರದಲ್ಲಿ ಹುದುಗಿರುವ ಭೂಮಿಯನ್ನು ಪುನಃ ಉದ್ಧರಿಸುತ್ತೇನೆ.

ಸತ್ತ್ವೈಲರಾಕ್ರಾಂತಸರ್ವಾಂಗಾಂ ನಷ್ಟಾಂ ಸಾಗರಮೇಖಲಾಮ್ ।
ಆನಯಿಷ್ಯಾಮಿ ಸ್ವಂ ಸ್ಥಾನಂ ವಾರಾಹಂ ರೂಪಮಾಸ್ಥಿತಃ ॥೭೨॥

ಸ್ಥಾವರ-ಜಂಗಮಗಳಿಂದ ನಿಬಿಡವಾಗಿರುವ ಸಮುದ್ರವನ್ನೇ ಒಡ್ಯಾಣದಂತೆ ಧರಿಸಿರುವ ಭೂಮಿಯು ಪ್ರಳಯೋದಕದಲ್ಲಿ ಮುಳುಗಿರುವಾಗ ವರಾಹ ರೂಪವನ್ನು ಧರಿಸಿ ನಾನು ಅದನ್ನು ಸ್ವಸ್ಥಾನಕ್ಕೆ ತಂದು ಸೇರಿಸುತ್ತೇನೆ.

ಹಿರಣ್ಯಾಕ್ಷಂ ಹನಿಷ್ಯಾಮಿ ದೈತೇಯಂ ಬಲಗರ್ವಿತಮ್ ।
ನಾರಸಿಂಹಂ ವಪುಃ ಕೃತ್ವಾ ಹಿರಣ್ಯಕಶಿಪುಂ ಪುನಃ ।
ಸುರಕಾರ್ಯೇ ಹನಿಷ್ಯಾಮಿ ಯಜ್ಞಘ್ನಂ ದಿತಿನಂದನಮ್ ॥೭೩॥

ಅದರಂತೆ ಬಲದಿಂದ ಗರ್ವಗೊಂಡಿರುವ ದೈತ್ಯನಾದ ಹಿರಣ್ಯಾಕ್ಷನನ್ನು ಸಂಹರಿಸುತ್ತೇನೆ. ನರಸಿಂಹ ರೂಪವನ್ನು ಧರಿಸಿ ದೇವತೆಗಳ ಕಾರ್ಯಸಿದ್ಧಿಗಾಗಿ ಯಜ್ಞನಾಶಕನಾದ ದೈತ್ಯನಾದ ಹಿರಣ್ಯಕಶಿಪುವನ್ನು ಸಂಹರಿಸುತ್ತೇನೆ.

ವಿರೋಚನಸ್ಯ ಬಲವಾನ್ ಬಲಿಃ ಪುತ್ರೋ ಮಹಾಸುರಃ ।
ಭವಿಷ್ಯತಿ ಸ ಶಕ್ರಂ ಚ ಸ್ವರಾಜ್ಯಾಚ್ಚ್ಯಾವಯಿಷ್ಯತಿ ॥೭೪॥

ವಿರೋಚನನಿಗೆ ಮಹಾಬಲಿಷ್ಠನಾದ ಮಗನೊಬ್ಬನು ಹುಟ್ಟುತ್ತಾನೆ. ಮಹಾಸುರನಾದ ಅವನು ಬಲಿ ಎಂಬ ಹೆಸರಿನಿಂದ ಪ್ರಸಿದ್ಧನಾಗುತ್ತಾನೆ. ಅವನು ಇಂದ್ರನನ್ನು ಸ್ವರ್ಗ ರಾಜ್ಯದಿಂದ ಭ್ರಷ್ಟನನ್ನಾಗಿ ಮಾಡುತ್ತಾನೆ.

ತ್ರೈಲೋಕ್ಯೇಽಪಹೃತೇ ತೇನ ವಿಮುಖೇ ಚ ಶಚೀಪತೌ ।
ಅದಿತ್ಯಾಂ ದ್ವಾದಶಃ ಪುತ್ರಃ ಸಂಭವಿಷ್ಯಾಮಿ ಕಶ್ಯಪಾತ್ ॥೭೫॥

ಆ ಬಲಿಯಿಂದ ಮೂರುಲೋಕಗಳು ಅಪಹೃತವಾಗಲು ಶಚೀಪತಿಯು ಯುದ್ಧದಿಂದ ವಿಮುಖನಾಗಲು ನಾನು ಅದಿತಿಯಲ್ಲಿ ಕಶ್ಯಪರಿಂದ, ದ್ವಾದಶಾದಿತ್ಯರಲ್ಲಿ ಹನ್ನೆರಡನೆಯ ವಿಶ್ವವಾಗಿ ಅವತರಿಸುತ್ತೇನೆ.

ವಟುರ್ಗತ್ವಾ ಯಜ್ಞಸದಃ ಸ್ತೂಯಮಾನೋ ದ್ವಿಜೋತ್ತಮೈಃ ।
ಯಜ್ಞಸ್ತುತಿಂ ಕರಿಷ್ಯಾಮಿ ಶ್ರುತ್ವಾ ಪ್ರೀತೋ ಭವೇದ್ ಬಲಿಃ ॥೭೬॥

ಬ್ರಾಹ್ಮಣಶ್ರೇಷ್ಠರಿಂದ ಸ್ತೋತ್ರ ಮಾಡಲ್ಪಟ್ಟವನಾಗಿ ವಟುವಾಗಿ ಬಲಿಚಕ್ರವರ್ತಿಯ ಯಜ್ಞಮಂಟಪಕ್ಕೆ ಹೋಗಿ ಆ ಬಲಿಚಕ್ರವರ್ತಿಯ ಯಜ್ಞದ ಸ್ತುತಿಯನ್ನು ನಾನೇ ಮಾಡುತ್ತೇನೆ. ನನ್ನ ಸ್ತೋತ್ರದಿಂದ ಬಲಿಚಕ್ರವರ್ತಿಯು ಪ್ರೀತನಾಗುತ್ತಾನೆ.

ಕಿಮಿಚ್ಛಸಿ ವಟೋ ಬ್ರೂಹೀತ್ಯುಕ್ತೋ ಯಾಚೇ ಮಹದ್ ವರಮ್ ।
ದೀಯತಾಂ ತ್ರಿಪದೀಮಾತ್ರಮಿತಿ ಯಾಚೇ ಮಹಾಽಸುರಮ್ ॥೭೭॥

ವಟುವೇ, ನೀನು ಏನನ್ನು ಬಯಸುತ್ತಿ ? ಎಂದು ಬಲಿಚಕ್ರವರ್ತಿಯು ಕೇಳಿದಾಗ ಶ್ರೇಷ್ಠವಾದ ವರವನ್ನೇ ಕೇಳುತ್ತೇನೆ. ಮಹಾಸುರನಾದ ಬಲಿಯ ಬಳಿ ಮೂರು ಹೆಜ್ಜೆಯಷ್ಟು ಪರಿಮಿತಿಯ ಭೂಮಿಯನ್ನು ದಾನ ಮಾಡು ಎಂದು ಕೇಳುತ್ತೇನೆ.

ಸ ದದ್ಯಾನ್ಮಯಿ ಸಂಪ್ರೀತಃ ಪ್ರತಿಷಿದ್ಧಶ್ಚ ಮಂತ್ರಿಭಿಃ ।
ಯಾವಜ್ಜಲಂ ಹಸ್ತಗತಂ ತ್ರಿಭಿರ್ವಿಕ್ರಮಣೈರ್ಯುತಮ್ ॥೭೮॥

ಆ ಬಲಿಚಕ್ರವರ್ತಿಯು ಮಂತ್ರಿಗಳಿಂದ ತಡೆಯಲ್ಪಡುತ್ತಿದ್ದರೂ ಪ್ರೀತನಾಗಿ ನನ್ನ ಕೈಯಲ್ಲಿ ಮೂರು ಪಾದಗಳ ದಾನಕ್ಕೆ ಸಂಬಂಧಿಸಿದ ನೀರನ್ನು ಹಾಕುತ್ತಾನೆ. ಮೂರು ಪಾದಗಳನ್ನು ಆಕ್ರಮಿಸುವಂತಹ ದಾನವನ್ನೇ ನಾನು ಸ್ವೀಕರಿಸುತ್ತೇನೆ.

ತತೋ ರಾಜ್ಯಂ ಪ್ರದಾಸ್ಯಾಮಿ ಶಕ್ರಾಯಾಮಿತತೇಜಸೇ ।
ದೇವತಾಃ ಸ್ಥಾಪಯಿಷ್ಯಾಮಿ ಸ್ವೇಷು ಸ್ಥಾನೇಷು ನಾರದ ।
ಬಲಿಂ ಚೈವ ಕರಿಷ್ಯಾಮಿ ಪಾತಾಳತಳವಾಸಿನಮ್ ॥೭೯॥

ನಾರದನೇ, ಬಳಿಕ ಬಲಿಯಿಂದ ರಾಜ್ಯವನ್ನು ಪಡೆದು ಅಮಿತ ತೇಜಸ್ವಿಯಾದ ಇಂದ್ರನಿಗೆ ಆ ರಾಜ್ಯವನ್ನು ನೀಡುತ್ತೇನೆ. ಆಯಾ ಸ್ಥಾನಗಳಲ್ಲಿ ದೇವತೆಗಳನ್ನೇ ಸ್ಥಾಪಿಸುತ್ತೇನೆ. ಬಲಿಚಕ್ರವರ್ತಿಯನ್ನು ಪಾತಾಳ ತಳವಾಸಿಯನ್ನಾಗಿ ಮಾಡುತ್ತೇನೆ.

ತ್ರೇತಾಯುಗೇ ಭವಿಷ್ಯಾಮಿ ರಾಮೋ ಭೃಗುಕುಲೋದ್ವಹಃ ।
ಕ್ಷತ್ರಂ ಚೋತ್ಸಾದಯಿಷ್ಯಾಮಿ ಸಮೃದ್ಧಬಲವಾಹನಮ್ ॥೮೦॥

ಭೃಗುಕುಲದಲ್ಲಿ ಅವತರಿಸಿದ ಪರಶುರಾಮನಾದ ನಾನು, ತ್ರೇತಾಯುಗದಲ್ಲಿ ಸಮೃದ್ಧವಾದ ಬಲ-ವಾಹನಗಳಿಂದ ಕೂಡಿರುವ ದುಷ್ಟ ಕ್ಷತ್ರಕುಲವನ್ನು ನಾಶ ಮಾಡುತ್ತೇನೆ.

ಸಂಧೌ ತು ಸಮನುಪ್ರಾಪ್ತೇ ತ್ರೇತಾಯಾಂ ದ್ವಾಪರಸ್ಯ ಚ ।
ರಾಮೋ ರಾಮಶ್ಚರಾಮಶ್ಚ ಭವಿಷ್ಯಾಮಿ ಜಗತ್ಪತಿಃ ॥೮೧॥

ತ್ರೇತಾ-ದ್ವಾಪರಗಳ ಸಂಧಿಯು ಒದಗಿದಾಗ ಜಗತ್ಪತಿಯಾದ ಭಾರ್ಗವರಾಮ ದಾಶರಥಿ ರಾಮಶ್ರೀಕೃಷ್ಣನಾಗಿ ಅವತರಿಸುತ್ತೇನೆ.

ವ್ಯಾಖ್ಯಾನ ವಿಶೇಷ– 'ರಾಮೋ ರಾಮಶ್ಚ ರಾಮಶ್ಚ' ಎಂಬಲ್ಲಿ ಕೆಲವರು ಪರಶುರಾಮ, ರಾಮ, ಬಲರಾಮ ಎಂದು ಮೂರು ರೂಪಗಳನ್ನು ಸ್ವೀಕರಿಸುತ್ತಾರೆ. ಆದರೆ ರಾಮ ಎಂದರೆ ಪರಶುರಾಮ, ಮತ್ತೊಮ್ಮೆ ರಾಮ ಎಂದರೆ ದಾಶರಥಿ ರಾಮ, ಮೂರನೆಯ ರಾಮ ಶಬ್ದಕ್ಕೆ ಗೋಪಾಂಗನೆಯರನ್ನು ಸಂತೋಷಪಡಿಸುವ ರಾಮ ಅರ್ಥಾತ್ ಕೃಷ್ಣನೆಂದು ಗ್ರಹಿಸಬೇಕೇ ಹೊರತು ಬಲರಾಮನೆಂದಲ್ಲ. ಕಾರಣ ಇದೇ ಅಧ್ಯಾಯದ ಮುಂದಿನ ಭಾಗದಲ್ಲಿ 'ಪ್ರಾದುರ್ಭಾವಃ ಕಂಸಹೇತೋಃ ಮಥುರಾಯಾಂ ಭವಿಷ್ಯತಿ' ಎಂದು ಕಂಸನ ಸಂಹಾರಕ್ಕಾಗಿ ಮಥುರಾ ಪಟ್ಟಣದಲ್ಲಿ ಅವತಾರ ಮಾಡುತ್ತೇನೆ. ಶಿಶುಪಾಲ ವಧೆಯನ್ನು ಧರ್ಮರಾಜನ ಯಜ್ಞದಲ್ಲಿ ಮಾಡುತ್ತೇನೆ. ಇವೇ ಮೊದಲಾದ ವಚನಗಳು ಕೃಷ್ಣನ ಚರಿತ್ರೆಯನ್ನೇ ಕೊಂಡಾಡುವುದರಿಂದ ಬಲರಾಮನ ಪ್ರಸ್ತಾಪವೇ ಮಹಾಭಾರತದಲ್ಲಿ ಇಲ್ಲ. ಹಾಗಾಗಿ ಈ ಮಹಾಭಾರತದ ಆಧಾರದಿಂದ ಮೂರನೆಯ ರಾಮ ಶಬ್ದಕ್ಕೆ ಕೃಷ್ಣನೆಂದೇ ವ್ಯಾಖ್ಯಾನಿಸಬೇಕಾಗಿ ಗುರುವಾದಿರಾಜರು ಮಹಾಭಾರತದ ಈ ಆಧಾರದಿಂದ ದಶಾವತಾರದಲ್ಲಿ ಬಲರಾಮನನ್ನು ಸೇರಿಸಬಾರದು ಎಂದು ಲಕ್ಷ್ಮಲಂಕಾರದಲ್ಲಿ ತಿಳಿಸಿದ್ದಾರೆ.

ತತಃ ಕೃತಯುಗೇ ಪ್ರಾಪ್ತೇ ದ್ವಾತ್ರಿಂಶದ್ಯುಗಪರ್ಯಯೇ ।
ಭವಿಷ್ಯಾಮಿ ಋಷಿಸ್ತತ್ರ ಜಮದಗ್ನಿಸುತೋ ಬಲೀ ॥೮೨॥

ಆಮೇಲೆ ಮೂವತ್ತೆರಡನೆಯ ಕೃತಯುಗವು ಪ್ರಾಪ್ತವಾದಾಗ, ಜಮದಗ್ನಿ ಋಷಿಗಳ ಬಲಶಾಲಿ ಮಗನಾಗಿ (ಪರಶುರಾಮ) ಅವತರಿಸುತ್ತೇನೆ.

ತ್ರಿತೋಪಘಾತಾದ್ವೈರೂಪ್ಯಮೇಕತೋಥ ದ್ವಿತಸ್ತಥಾ ।
ಪ್ರಾಪ್ಸ್ಯತೋ ವಾನರತ್ವಂ ಹಿ ಪ್ರಜಾಪತಿಸುತಾವೃಷೀ ॥೮೩॥

ಪ್ರಜಾಪತಿಯ ಮಕ್ಕಳಾದ ದ್ವಿತ, ಏಕತ, ತ್ರಿತ ಎಂಬ ಋಷಿಗಳಲ್ಲಿ ತ್ರಿತ ಎಂಬ ಹೆಸರಿನ ಋಷಿಗೆ ದ್ರೋಹವನ್ನೆಸಗುವುದರಿಂದ ವೈರೂಪ್ಯವನ್ನು ಪಡೆದು ವಾನರತ್ವವನ್ನು ಹೊಂದುತ್ತಾರೆ.

ವ್ಯಾಖ್ಯಾನ ವಿಶೇಷ– ಮಹರ್ಷಿ ಗೌತಮರಿಗೆ ಸೂರ್ಯಸಮಾನತೇಜಸ್ವಿಗಳಾದ, ಬ್ರಹ್ಮವಾದಿಗಳಾದ, ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿಕೊಂಡ ಮೂವರು ಪುತ್ರರಿದ್ದರು. ಏಕತ, ದ್ವಿತ, ತ್ರಿತ ಎಂಬುದಾಗಿ ಅವರ ಹೆಸರು. ಸದಾಕಾಲ ಧರ್ಮನಿರತನಾಗಿದ್ದ ಮಹರ್ಷಿ ಗೌತಮರು ತಮ್ಮ ಮಕ್ಕಳ ನಿಯಮ, ದಮ, ಜಿತೇಂದ್ರಿಯತೆ ಮತ್ತು ತಪಸ್ಸು ಇತ್ಯಾದಿಗಳಿಂದ ಬಹುಸಂತುಷ್ಟರಾಗಿದ್ದರು. ಕಾಲಾಂತರದಲ್ಲಿ ಪೂಜನೀಯರಾದ ಮಹರ್ಷಿ ಗೌತಮರು ಇಹವನ್ನು ತ್ಯಜಿಸಲು, ಅವರ ಪೌರೋಹಿತ್ಯದಲ್ಲಿ ಯಜ್ಞಗಳನ್ನು ಮಾಡುತ್ತಿದ್ದ ರಾಜರು ಗೌತಮರ ಮಕ್ಕಳನ್ನೇ ಆದರಿಸಿ ಸತ್ಕರಿಸತೊಡಗಿದರು. ಆ ಮೂವರು ಋಷಿಗಳಲ್ಲಿಯೂ ತ್ರಿತನು ಕರ್ಮಾನುಷ್ಠಾನಗಳಿಂದಲೂ

ಮತ್ತು ಅಧ್ಯಯನದಿಂದಲೂ ಶ್ರೇಷ್ಠನೆನಿಸಿಕೊಂಡನು. ಗೌತಮರು ಸರ್ವರಿಗೂ ಮಾನ್ಯರಾಗಿದ್ದಂತೆ ತ್ರಿತನೂ ಸರ್ವರಿಗೂ ಮಾನ್ಯನಾಗಿದ್ದನು. ಒಂದು ಬಾರಿ ಮೂವರು ಸಹೋದರರೂ ಜೊತೆಯಾಗಿ ಯಜ್ಞವೊಂದನ್ನು ಮಾಡಿಸಲು ಹೋದರು. ಯಜಮಾನನಿಂದ ವಿಧಿವತ್ತಾಗಿ ಯಜ್ಞವನ್ನು ಮಾಡಿಸಿ, ಆ ಯಜ್ಞಕರ್ಮದ ಮೂಲಕವಾಗಿ ಅವರು ಅನೇಕ ಗೋವುಗಳನ್ನು ಪಡೆದುಕೊಂಡರು. ಬಳಿಕ ಮೂವರೂ ಪೂರ್ವಾಭಿಮುಖವಾಗಿ ಹೊರಟರು. ಅವರಲ್ಲಿ ಮಹರ್ಷಿ ತ್ರಿತನು ಮುಂದುಗಡೆ ಇದ್ದನು. ಹೀಗೆಯೇ ಪ್ರಯಾಣ ಮಾಡುತ್ತಿದ್ದಾಗ ಹಿಂದಿದ್ದ ಏಕತ ಮತ್ತು ದ್ವಿತರು ತಾವು ಸಂಪಾದಿಸಿದ ಗೋವುಗಳಲ್ಲಿ ತ್ರಿತನಿಗೆ ಪಾಲನ್ನು ನೀಡದೇ ಎಲ್ಲವನ್ನೂ ತಾವೇ ಹೊಡೆದುಕೊಂಡು ಹೋಗಬೇಕೆಂದು ಪರಸ್ಪರ ಮಾತನಾಡಿಕೊಂಡರು.

ರಾತ್ರಿಯ ಸಮಯ ಅವರು ಹೋಗುತ್ತಿದ್ದ ಮಾರ್ಗದಲ್ಲಿಯೇ ಒಂದು ತೋಳವಿದ್ದಿತು. ಅಲ್ಲಿಗೆ ಸ್ವಲ್ಪ ದೂರದಲ್ಲಿಯೇ ಸರಸ್ವತೀ ನದಿಯ ತೀರದಲ್ಲಿ ಒಂದು ದೊಡ್ಡ ಬಾವಿಯೂ ಇತ್ತು. ಮುಂದೆ ಹೋಗುತ್ತಿದ್ದ ತ್ರಿತನು ತನಗೆದುರಾಗಿ ನಿಂತಿರುವ ತೋಳವನ್ನು ನೋಡಿ ಭಯಪಟ್ಟುಕೊಂಡು ಓಡತೊಡಗಿದನು. ಹಾಗೆಯೇ ಓಡಿಹೋಗುತ್ತಿದ್ದಾಗ ಆ ಮಹಾಕೂಪದಲ್ಲಿ ಬಿದ್ದು ಬಿಟ್ಟನು. ಬಾವಿಯಲ್ಲಿ ಬಿದ್ದ ಮುನಿಶ್ರೇಷ್ಠನಾದ ತ್ರಿತನು ಆರ್ತನಾದ ಮಾಡಿದನು. ಆತನ ಆರ್ತನಾದವನ್ನು ಕೇಳಿ, ತ್ರಿತನು ಬಾವಿಯಲ್ಲಿ ಬಿದ್ದಿರುವನೆಂಬುದನ್ನು ತಿಳಿದೂ ಸಹ ಸಹೋದರರಾದ ಏಕತ ದ್ವಿತರು, ತೋಳವು ತಮ್ಮನ್ನೂ ಬೆನ್ನಟ್ಟಿಕೊಂಡು ಬರಬಹುದೆಂಬ ಭಯದಿಂದಲೂ, ಅವನೇನಾದರೂ ತಮ್ಮ ಸಹಾಯದಿಂದ ಮೇಲೆದ್ದು ಬಂದರೆ ತಾವು ಹೊಡೆದುಕೊಂಡು ಬರುತ್ತಿರುವ ಗೋಸಮೂಹದಲ್ಲಿ ಅವನಿಗೂ ಪಾಲುಕೊಡಬೇಕಾಗುತ್ತದೆಂಬ ಲೋಭದಿಂದಲೂ ತ್ರಿತನನ್ನು ಮಾತನಾಡಿಸಲೂ ಹೋಗದೇ ಗೋವುಗಳನ್ನು ಹೊಡೆದುಕೊಂಡು ಮುನ್ನಡೆದರು. ಪಶುಲುಬ್ಧರಾದ ಅಣ್ಣಂದಿರಿಂದ ಪರಿತ್ಯಕ್ತನಾದ, ಮಹಾತಪಸ್ವಿಯಾದ ತ್ರಿತನು ನೀರಿನಿಂದ ರಹಿತವಾಗಿದ್ದ, ಧೂಳಿನಿಂದ ಮುಚ್ಚಿಹೋಗಿದ್ದ ಆ ಕೂಪದಲ್ಲಿಯೇ ಒದ್ದಾಡುತ್ತಿದ್ದನು. ಆ ಸಮಯದಲ್ಲಿ ತ್ರಿತನು ದೈವಯೋಗದಿಂದ ಜೋತು ಬಿದ್ದಿದ್ದ ಬಳ್ಳಿಯೊಂದನ್ನು ನೋಡಿದನು. ಒಡನೆಯೇ ಆತನು ಧೂಳಿನಿಂದ ಆವೃತವಾಗಿದ್ದ ಆ ಕೂಪದಲ್ಲಿಯೇ ಕುಳಿತು ನೀರನ್ನು ಸ್ಮರಿಸಿಕೊಂಡನು. ಅನಂತರ ಅಗ್ನಿತ್ರಯಗಳನ್ನು ಸ್ಮರಿಸಿಕೊಂಡನು. ಜೋಲಾಡುತ್ತಿದ್ದ ಆ ಬಳ್ಳಿಯನ್ನೇ ಸೋಮಲತೆಯನ್ನಾಗಿ ಕಲ್ಪಿಸಿಕೊಂಡನು. ತ್ರಿತಮುನಿಯು ಋಗ್ಯಜುಸ್ಸಾಮ ಮಂತ್ರಗಳನ್ನು ಮನಸ್ಸಿನಲ್ಲಿಯೇ ಜಪಿಸಿದನು. ಕೂಪದಲ್ಲಿದ್ದ ಕಲ್ಲುಗಳನ್ನೇ ಅಭಿಷವಕ್ಕೆ ಉಪಯೋಗಿಸುವ ಗ್ರಾವಾಣಗಳನ್ನಾಗಿ ಮಾಡಿಕೊಂಡು ಸೋಮರಸವನ್ನು ಸಿದ್ಧಪಡಿಸಿದನು. ನೀರನ್ನೇ ಆಜ್ಯವನ್ನಾಗಿ ಕಲ್ಪಿಸಿಕೊಂಡು, ದೇವತೆಗಳಿಗೆ ಸೋಮಭಾಗಗಳನ್ನು ಕಲ್ಪಿಸಿದನು. ಅನಂತರ ದೇವತೆಗಳನ್ನು ಆಹ್ವಾನಿಸಿ, ಅವರನ್ನು ಉದ್ದೇಶಿಸಿ ಮನಸ್ಸಂಕಲ್ಪಿತವಾಗಿದ್ದ ಅಗ್ನಿಯಲ್ಲಿ ಹೋಮ ಮಾಡಿದನು. ವೇದಮಂತ್ರಗಳನ್ನು ಗಟ್ಟಿಯಾಗಿ ಉಚ್ಚರಿಸಿದನು. ಬ್ರಹ್ಮವಾದಿಗಳು ಹೇಳುತ್ತಿದ್ದಂತೆ ವೇದಮಂತ್ರಗಳನ್ನು ಹೇಳಿ, ಯಜ್ಞವನ್ನು ವಿಧಿ

ವಿಹಿತವಾದ ರೀತಿಯಲ್ಲಿ ಮಾಡಿ, ಸೋಮರಸವನ್ನು ಸಿದ್ಧಗೊಳಿಸಿದನು. ತ್ರಿತನು ಮಾಡಿದ ವೇದಘೋಷವು ಸ್ವರ್ಗವನ್ನೂ ಆವರಿಸಿತು.

ಸುಪ್ರೀತರಾದ ದೇವತೆಗಳು ತ್ರಿತನ ಯಜ್ಞವು ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿದರು. ಜಾಜ್ವಲ್ಯಮಾನವಾದ ಕಾಂತಿಯಿಂದ ಕೂಡಿದ್ದ ಮಹಾತ್ಮನಾದ ತ್ರಿತನನ್ನು ಕಂಡು 'ಯಜ್ಞದ ಹವಿರ್ಭಾಗವನ್ನು ಪಡೆದುಕೊಳ್ಳಲು ಬಂದಿದ್ದೇವೆ' ಎಂದು ಹೇಳಿದರು. ತ್ರಿತನು ತನ್ನ ದುರವಸ್ಥೆಯನ್ನು ಹೇಳಿ, ದೇವತೆಗಳಿಗೆ ಯಥಾವಿಧಿಯಾಗಿ ಮಂತ್ರಯುಕ್ತವಾದ ಭಾಗಗಳನ್ನು ಸಮರ್ಪಿಸಿದನು. ದೇವತೆಗಳೂ ಪರಮಪ್ರಿಯರಾಗಿ, ತ್ರಿತನ ಮನೋವಾಂಛಿತವಾದ ಎಲ್ಲ ವರಗಳನ್ನೂ ದಯಪಾಲಿಸಿದರು. ದೇವತೆಗಳನ್ನು ಕುರಿತು ಈ ವರಗಳನ್ನು ಕೇಳಿಕೊಂಡನು – ''ದೇವತೆಗಳೇ, ನನ್ನನ್ನು ಈ ಕೂಪದಿಂದ ಉದ್ಧರಿಸಿರಿ. ಈ ಕೂಪದಲ್ಲಿ ಯಾರು ಆಚಮನ ಮಾಡುವರೋ ಅವರಿಗೆ ಮಹಾಯಜ್ಞದಲ್ಲಿ ಸೋಮಪಾನವನ್ನು ಮಾಡಿದವರಿಗೆ ಪ್ರಾಪ್ತವಾಗುವ ಸದ್ಗತಿಯು ಲಭಿಸಲಿ''.

ತ್ರಿತಮುನಿಯು ಹೀಗೆಂದು ಹೇಳುತ್ತಿದ್ದಂತೆಯೇ ಅಲೆಗಳಿಂದ ಕೂಡಿದ ಸರಸ್ವತೀ ನದಿಯು ಆ ಕೂಪದಲ್ಲಿ ಆವಿರ್ಭವಿಸಿ ಮೇಲಕ್ಕೆ ಉಕ್ಕಿತು. ಸರಸ್ವತೀ ನದಿಯ ಪ್ರವಾಹದಿಂದ ಮೇಲಕ್ಕೆತ್ತಲ್ಪಟ್ಟ ತ್ರಿತಮಹರ್ಷಿಯು ದೇವತೆಗಳಿಗೆ ಅಭಿಮುಖವಾಗಿ ನಿಂತು ಅವರನ್ನು ಯಥೋಚಿತವಾದ ಪೂಜೆಗಳಿಂದ ಸತ್ಕರಿಸಿದನು. ಸುಪ್ರೀತರಾದ ದೇವತೆಗಳು ಹಾಗೂ ತ್ರಿತನು ತಮ್ಮ ತಮ್ಮ ಸ್ಥಾನಗಳನ್ನು ಸೇರಿಕೊಂಡರು. ಆದರೆ ತನ್ನ ಅಣ್ಣಂದಿರು ಮಾಡಿದ್ದ ದ್ರೋಹವನ್ನು ತ್ರಿತನು ಮರೆತಿರಲಿಲ್ಲ. ಪರಮಕ್ರುದ್ಧನಾಗಿದ್ದ ತ್ರಿತಮಹರ್ಷಿಯು ಏಕತ-ದ್ವಿತರಿದ್ದಲ್ಲಿಗೆ ಹೋಗಿ ಅವರಿಗೆ ಶಾಪವನ್ನು ಕೊಟ್ಟನು: ''ಮೂರು ಜನರೂ ಸಂಪಾದಿಸಿದ ಪಶುಗಳನ್ನು ನೀವಿಬ್ಬರೇ ಹಂಚಿಕೊಳ್ಳಬೇಕೆಂಬ ದುರಾಸೆಯಿಂದ ನನ್ನನ್ನು ಕೂಪದಲ್ಲಿಯೇ ಬಿಟ್ಟು ಪಶುಗಳೊಡನೆ ಪಲಾಯನ ಮಾಡಿರುವಿರಿ. ಈ ಪಾಪಕರ್ಮಕ್ಕಾಗಿ ನೀವು ಕೋರೆದಾಡೆಗಳನ್ನು ಹೊಂದಿರುವ ಭಯಂಕರವಾದ ತೋಳಗಳಾಗಿ ಎಲ್ಲೆಡೆಯೂ ಸಂಚರಿಸುತ್ತಿರಿ. ನಿಮ್ಮ ಸಂತತಿಯಲ್ಲಿ ಗೋಲಾಂಗೂಲಗಳು, ಕರಡಿಗಳೂ ಮತ್ತು ಕಪಿಗಳು ಹುಟ್ಟುತ್ತವೆ''. ತ್ರಿತಮಹರ್ಷಿಯು ಈ ರೀತಿ ಶಪಿಸುತ್ತಿದ್ದಂತೆಯೇ ಏಕತ ಮತ್ತು ದ್ವಿತರು ತೋಳಗಳಾಗಿ ಪರಿವರ್ತನೆ ಹೊಂದಿದರು. ತ್ರಿತನು ಬಿದ್ದಿದ್ದ ಆ ಕೂಪವು ಮುಂದೆ ತ್ರಿತಕೂಪವೆಂದೇ ಪ್ರಸಿದ್ಧವಾಯಿತು. ಆ ಸ್ಥಳವು ಉದಪಾನತೀರ್ಥವೆಂದೂ, ಆದಿತೀರ್ಥವೆಂದೂ ಹೆಸರನ್ನು ಪಡೆದುಕೊಂಡು ಮಂಗಳಕರವಾದ ತೀರ್ಥಕ್ಷೇತ್ರವಾಯಿತು.

ತಯೋರ್ಯೇ ತ್ವನ್ವಯೇ ಜಾತಾ ಭವಿಷ್ಯಂತಿ ವನೌಕಸಃ ।
ತೇ ಸಹಾಯಾ ಭವಿಷ್ಯಂತಿ ಸುರಕಾರ್ಯೇ ಮಮ ದ್ವಿಜ ॥೮೪॥

ದ್ವಿತ ಮತ್ತು ಏಕತ ವಂಶದಲ್ಲಿ ಹುಟ್ಟಿದ ವಾನರರೆಲ್ಲರೂ ದೇವತೆಗಳಿಗೆ ಹಿತ ಮಾಡುವ ರಾವಣ ವಧೆಕಾರ್ಯದಲ್ಲಿ ನನಗೆ ಸಹಾಯಕರಾಗುತ್ತಾರೆ.

ತತೋ ರಕ್ಷಃಪತಿಂ ಘೋರಂ ಪುಲಸ್ತ್ಯಕುಲಪಾಂಸನಮ್ ।
ಹನಿಷ್ಯೇ ರಾವಣಂ ಸಂಖ್ಯೇ ಸಗಣಂ ಲೋಕಕಂಟಕಮ್ ॥೮೫॥

ಅವರ ಸಹಾಯವನ್ನು ಪಡೆದ ನಾನು ಪುಲಸ್ತ್ಯಕುಲಕ್ಕೆ ಕಂಟಕನಾದ, ಘೋರನಾದ, ರಾಕ್ಷಸರಾಜನಾದ, ಲೋಕಕಂಟಕನಾದ ಭಯಂಕರನಾದ ರಾವಣನನ್ನು ಪರಿವಾರ ಸಹಿತವಾಗಿ ನಾಶ ಮಾಡುತ್ತೇನೆ.

ದ್ವಾಪರಸ್ಯ ಕಲೇಶ್ಚೈವ ಸಂಧೌ ಪರ್ಯವಸಾನಿಕೇ ।
ಪ್ರಾದುರ್ಭಾವಃ ಕಂಸಹೇತೋರ್ಮಥುರಾಯಾಂ ಭವಿಷ್ಯತಿ ॥೮೬॥

ದ್ವಾಪರ-ಕಲಿಗಳ ಸಂಧಿಕಾಲದಲ್ಲಿ ಕಂಸನ ವಧೆಗಾಗಿ ನಾನು ಮಥುರಾ ಪಟ್ಟಣದಲ್ಲಿ ಅವತಾರ ಮಾಡುತ್ತೇನೆ.

ತತ್ರಾಹಂ ದಾನವಾನ್ ಹತ್ವಾ ಸುಬಹೂನ್ ದೇವಕಂಟಕಾನ್ ।
ಕುಶಸ್ಥಲೀಂ ಕರಿಷ್ಯಾಮಿ ನಿವಾಸಂ ದ್ವಾರಕಾಂ ಪುರೀಮ್ ॥೮೭॥

ನಾನು ಅಲ್ಲಿ ದೇವತೆಗಳಿಗೆ ಉಪದ್ರವವನ್ನು ಕೊಡುವ ಅನೇಕ ಸಂಖ್ಯೆಯಲ್ಲಿರುವ ದಾನವರನ್ನು ಸಂಹರಿಸಿ ಕುಶಸ್ಥಲಿ ಎಂಬ ಹೆಸರಿನ ಪಟ್ಟಣವನ್ನು ದ್ವಾರಕಾ ಪುರವನ್ನಾಗಿ ಪರಿವರ್ತಿಸಿ ಅಲ್ಲಿ ವಾಸ ಮಾಡುತ್ತೇನೆ.

ವಸಾನಸ್ತತ್ರ ವೈ ಪುರ್ಯಾಮದಿತೇರ್ವಿಪ್ರಿಯಂಕರಮ್ ।
ಹನಿಷ್ಯೇ ನರಕಂ ಭೌಮಂ ಮುರಂ ಪೀಠಂ ಚ ದಾನವಮ್ ॥೮೮॥

ದ್ವಾರಕೆಯಲ್ಲಿಯೇ ವಾಸ ಮಾಡುತ್ತಾ ಅದಿತಿಯ ಕರ್ಣ-ಕುಂಡಲಗಳನ್ನು ಅಪಹರಿಸುವ ಭೂದೇವಿಯ ಸುತನಾದ ನರಕನನ್ನು, ಮುರ, ಪೀಠ ಎಂಬ ದಾನವರನ್ನು ಸಂಹರಿಸುತ್ತೇನೆ.

ಪ್ರಾಗ್ಜ್ಯೋತಿಷಪುರಂ ರಮ್ಯಂ ನಾನಾಧನಸಮನ್ವಿತಮ್ ।
ಕುಶಸ್ಥಲೀಂ ನಯಿಷ್ಯಾಮಿ ಹತ್ವಾ ವೈ ದಾನವೋತ್ತಮಾನ್ ॥೮೯॥

ನರಕನನ್ನು ಸಂಹರಿಸಿ ಅವನ ಪಟ್ಟಣದಲ್ಲಿರುವ ಧನ-ಕನಕ-ವೈಡೂರ್ಯಗಳಿಂದ ಸಂವೃತವಾದ ಪ್ರಾಗ್‌ಜ್ಯೋತಿಷ ಪುರವನ್ನೇ ದ್ವಾರಕೆಗೆ ತಂದುಬಿಡುತ್ತೇನೆ.

ಶಂಕರಂ ಚ ಮಹಾಸೇನಂ ಬಾಣಪ್ರಿಯಹಿತೈಷಿಣಮ್ ।
ಪರಾಜೇಷ್ಯಾಮ್ಯಥೋದ್ಯುಕ್ತೌ ದೇವಲೋಕನಮಸ್ಕೃತೌ ॥೯೦॥

ಬಾಣನಿಗೆ ಹಿತವನ್ನು ಮಾಡುವ, ಮಹಾಸೇನೆಯಿಂದ ಕೂಡಿದ ಶಂಕರನನ್ನು, ಬಾಣನಿಗಾಗಿ ಯುದ್ಧಕ್ಕೆ ಬಂದಿರುವ ಶಂಕರ ಮತ್ತು ದೇವನಮಸ್ಕೃತರಾದ ಮಹಾಸೇನರನ್ನು ನಾನು ಪರಾಜಯಗೊಳಿಸುತ್ತೇನೆ.

ತತಃ ಸುತಂ ಬಲೇರ್ಜಿತ್ವಾ ಬಾಣಂ ಬಾಹುಸಹಸ್ರಿಣಮ್ ।
ವಿನಾಶಯಿಷ್ಯಾಮಿ ತತಃ ಸರ್ವಾನ್ ಸೌಭನಿವಾಸಿನಃ ॥೯೧॥

ಬಳಿಕ ನಾನು ಬಲಿಯ ಮಗನಾದ ಸಾವಿರ ತೋಳಿನ ಬಾಣನನ್ನು ಸೋಲಿಸಿ ಸಾಲ್ವನ ಸೌಭನಿವಾಸದಲ್ಲಿರುವ ಎಲ್ಲರನ್ನೂ ಧ್ವಂಸಮಾಡುತ್ತೇನೆ.

ಯಃ ಕಾಲಯವನಃ ಖ್ಯಾತೋ ಗರ್ಗತೇಜೋಭಿಸಂವೃತಃ ।
ಭವಿಷ್ಯತಿ ವಧಸ್ತಸ್ಯ ಮತ್ತ ಏವ ದ್ವಿಜೋತ್ತಮ ॥೯೨॥

ದ್ವಿಜೋತ್ತಮನೇ, ಗರ್ಗಾಚಾರ್ಯರ ತೇಜಸ್ಸಿನಿಂದ ಹುಟ್ಟಿರುವ, ಕಾಲಯವನ ಎಂದೇ ಖ್ಯಾತನಾದ ಅಸುರನು ನನ್ನಿಂದಲೇ ಮದಭರಿತನಾಗಿ ಸಂಹಾರ ಹೊಂದುತ್ತಾನೆ.

ಜರಾಸಂಧಶ್ಚ ಬಲವಾನ್ ಸರ್ವರಾಜವಿರೋಧಕಃ ।
ಭವಿಷ್ಯತ್ಯಸುರಃ ಸ್ಫೀತೋ ಭೂಮಿಪಾಲೋ ಗಿರಿವ್ರಜೇ ।
ಮಮ ಬುದ್ಧಿಪರಿಸ್ಪಂದಾದ್ ವಧಸ್ತಸ್ಯ ಭವಿಷ್ಯತಿ ॥೯೩॥

ಗಿರಿವ್ರಜದಲ್ಲಿ ಸಂಪತ್ತಿನಿಂದ ಸಮೃದ್ಧನಾದ, ಮಹಾಬಲಶಾಲಿಯಾದ, ಸಮಸ್ತ ರಾಜರನ್ನು ವಿರೋಧಿಸುವ ಜರಾಸಂಧ ಎಂಬ ಹೆಸರಿನ ಭೂಪಾಲನನ್ನು ಬುದ್ಧಿ-ಕೌಶಲದಿಂದ ವಧಿಸುತ್ತೇನೆ.

ಶಿಶುಪಾಲಂ ವಧಿಷ್ಯಾಮಿ ಯಜ್ಞೇ ಧರ್ಮಸುತಸ್ಯ ವೈ ।
ಸಮಾಗತೇಷು ಬಲಿಷು ಪೃಥಿವ್ಯಾಂ ಸರ್ವರಾಜಸು ।
ವಾಸವಿಃ ಸುಸಹಾಯೋ ವೈ ಮಮ ಹ್ಯೇಕೋ ಭವಿಷ್ಯತಿ ।
ಯುಧಿಷ್ಠಿರಂ ಸ್ಥಾಪಯಿಷ್ಯೇ ಸ್ವರಾಜ್ಯೇ ಭ್ರಾತೃಭಿಃ ಸಹ ॥೯೪॥

ಭೂಮಂಡಲದ ವರಿಷ್ಠನಾದ ಸಮಸ್ತರಾಜರು ಧರ್ಮರಾಜನ ಯಜ್ಞಕ್ಕೆ ಆಗಮಿಸಿದಾಗ ಶಿಶುಪಾಲನನ್ನು ವಧಿಸುತ್ತೇನೆ. ಇಂದ್ರನ ಮಗನಾದ ಅರ್ಜುನನು ನನಗೆ ಒಳ್ಳೆಯ ಸಹಾಯಕನಾಗುತ್ತಾನೆ. ಧರ್ಮರಾಜನ ರಾಜ್ಯದಲ್ಲಿ ಸಹೋದರರಿಂದ ಕೂಡಿರುವ ಯುಧಿಷ್ಠಿರನನ್ನು ರಾಜನನ್ನಾಗಿ ಮಾಡುತ್ತೇನೆ.

ಏವಂ ಲೋಕಾ ವದಿಷ್ಯಂತಿ ನರನಾರಾಯಣಾವೃಷೀ ।
ಉದ್ಯುಕ್ತೌ ದಹತಃ ಕ್ಷತ್ರಂ ಲೋಕಕಾರ್ಯಾರ್ಥಮೀಶ್ವರೌ ॥೯೫॥

ಆ ಸಮಯದಲ್ಲಿ ಜನರೆಲ್ಲರೂ ಲೋಕಕಲ್ಯಾಣಕ್ಕಾಗಿ ನರ-ನಾರಾಯಣನೇ ಒಂದು ಕಡೆ ಸೇರಿ ಕ್ಷತ್ರಿಯರನ್ನು ಸಂಹಾರ ಮಾಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾನೆ ಎಂದು ಹೇಳುತ್ತಾನೆ.

ಕೃತ್ವಾ ಭಾರಾವತರಣಂ ವಸುಧಾಯಾ ಯಥೇಪ್ಸಿತಮ್ ।
ಸರ್ವಸಾತ್ವತಮುಖ್ಯಾನಾಂ ದ್ವಾರಕಾಯಾಶ್ಚ ಸತ್ತಮ ।
ಕರಿಷ್ಯೇ ಪ್ರಲಯಂ ಘೋರಮಾತ್ಮಜ್ಞಾತಿವಿನಾಶನಮ್ ॥೯೬॥

ಭೂದೇವಿಯ ಸಂಕಲ್ಪಕ್ಕನುಸಾರವಾಗಿ ಕ್ಷತ್ರಿಯರೆಲ್ಲರನ್ನೂ ಸಂಹಾರ ಮಾಡಿ ಭೂಭಾರವನ್ನು ಪರಿಹರಿಸುತ್ತೇನೆ. ಯಾದವರ ಸಹಿತವಾಗಿ ದ್ವಾರಕೆಯನ್ನು ನಾಶ ಮಾಡಿ ಸ್ವಬಂಧು ವಿನಾಶರೂಪವಾದ ಪ್ರಳಯವನ್ನೇ ಉಂಟು ಮಾಡುತ್ತೇನೆ.

ತತಃ ಕಲಿಯುಗಸ್ಯಾದೌ ದ್ವಿಜರಾಜತರುಂ ಶ್ರಿತಃ ।
ಭೀಷಯಾ ಮಾಗಧೇನೈವ ಧರ್ಮರಾಜಗೃಹೇ ವಸನ್ ॥೯೭॥

ಕಾಷಾಯವಸ್ತ್ರಸಂವೀತೋ ಮುಂಡಿತಃ ಶುಕ್ಲದಂತವಾನ್ ।
ಶುದ್ಧೋದನಸುತೋ ಬುದ್ಧೋ ಮೋಹಯಿಷ್ಯಾಮಿ ಮಾನವಾನ್ ॥೯೮॥

ನಂತರ ಕಲಿಯುಗದ ಆರಂಭದಲ್ಲಿ ಬ್ರಾಹ್ಮಣಶ್ರೇಷ್ಠನ ಮನೆಯನ್ನು ಆಶ್ರಯಿಸಿ ನನ್ನ ಭಯವುಳ್ಳ ಮಗಧರಾಜನಾದ ಜಿನನ ಗೃಹದಲ್ಲಿ ವಾಸ ಮಾಡುತ್ತಾ, ಕಾಷಾಯ ವಸ್ತ್ರವನ್ನು ಧರಿಸಿ, ಮುಂಡಿತನಾಗಿ, ಶುದ್ಧದಂತವುಳ್ಳವನಾಗಿ, ಶುದ್ಧೋದನನ ಮಗನಾಗಿ ಬುದ್ಧಾವತಾರದಿಂದ ಎಲ್ಲ ಮಾನವರನ್ನು ಮೋಹಗೊಳಿಸುತ್ತೇನೆ.

ಶೂದ್ರಾಃ ಶುದ್ಧೇಷು ಭುಜ್ಯಂತೇ ಮಯಿ ಬುದ್ಧತ್ವಮಾಗತೇ ।
ಭವಿಷ್ಯಂತಿ ನರಾಃ ಸರ್ವೇ ಬುದ್ಧಾಃ ಕಾಷಾಯಸಂವೃತಾಃ ॥೯೯॥

ಆಗ ಶೂದ್ರರು ಮಾಂಸಾದಿ ಆಹಾರಗಳನ್ನು ಸ್ವೀಕರಿಸದಿರುವವರ ಮನೆಯಲ್ಲಿಯೇ ಊಟ ಮಾಡುತ್ತಾರೆ. ನಾನು ಬುದ್ಧಾವತಾರವನ್ನು ತಾಳಿದ ಮೇಲೆ ಎಲ್ಲ ಮಾನವರು ಕಾಷಾಯವಸ್ತ್ರವನ್ನು ಧರಿಸಿ ಸಂನ್ಯಾಸಿಗಳಂತೆ ಕಾಣುತ್ತಾರೆ.

ಅನಧ್ಯಾಯಾ ಭವಿಷ್ಯಂತಿ ವಿಪ್ರಾ ಯಾಗವಿವರ್ಜಿತಾಃ ।
ಅಗ್ನಿಹೋತ್ರಾಣಿ ಸೀದಂತಿ ಗುರುಪೂಜಾ ಚ ನಶ್ಯತಿ ॥೧೦೦॥

ಬ್ರಾಹ್ಮಣರು ಅಗ್ನಿಹೋತ್ರ, ಯಾಗ, ಅಧ್ಯಯನ, ಗುರುಸೇವೆ ಎಲ್ಲವನ್ನೂ ಬಿಟ್ಟು ಬಿಡುತ್ತಾರೆ.

ನ ಶೃಣ್ವಂತಿ ಪಿತುಃ ಪುತ್ರಾ ನ ಸ್ನುಷಾ ನೈವ ಭ್ರಾತರಃ ।
ನ ಪೌತ್ರಾ ನ ಕಲತ್ರಾ ವಾ ವರ್ತಂತೇಪ್ಯಧಮೋತ್ತಮಾಃ ॥೧೦೧॥

ತಂದೆಯ ಮಾತನ್ನು ಮಕ್ಕಳು, ಆ ಮಕ್ಕಳ ಹೆಂಡತಿಯರು ಯಾರೂ ಕೇಳುವುದಿಲ್ಲ. ಅಣ್ಣಂದಿರ ಮಾತನ್ನು ತಮ್ಮಂದಿರು ಲಕ್ಷಿಸುವುದಿಲ್ಲ. ಅಜ್ಜಂದಿರ ಮಾತುಗಳನ್ನು ಮೊಮ್ಮಕ್ಕಳು, ಪತಿಯ ಮಾತನ್ನು ಪತ್ನಿಯರು ಆದರಿಸುವುದಿಲ್ಲ. ಕೆಳಗಿನವರೇ ಮೇಲಾಗುತ್ತಾರೆ. ಮೇಲಿನವರು ಕೀಳಾಗುತ್ತಾರೆ. ಲೋಕಸ್ಥಿತಿಯೇ ಅವ್ಯವಸ್ಥಿತವಾಗುತ್ತದೆ.

ಏವಂಭೂತಂ ಜಗತ್ಸರ್ವಂ ಶ್ರುತಿಸ್ಮೃತಿವಿವರ್ಜಿತಮ್ ।
ಭವಿಷ್ಯತಿ ಕಲೌ ಪೂರ್ಣೇ ಹ್ಯಶುದ್ಧೋ ಧರ್ಮಸಂಕರಃ ॥೧೦೨॥

ಕಲಿಯುಗವು ಬೆಳೆಯುತ್ತಾ ಲೋಕದಲ್ಲಿ ಶ್ರುತಿ-ಸ್ಮೃತಿಗಳೆಲ್ಲವೂ ನಶಿಸಿ ಹೋಗುತ್ತವೆ. ಧರ್ಮಸಾಂಕರ್ಯವು ಉಂಟಾಗುತ್ತದೆ.

ತೇಷಾಂ ಸಕಾಶಾದ್ ಧರ್ಮಜ್ಞಾ ದೇವಬ್ರಹ್ಮವಿದೋ ನರಾಃ ।
ಭವಿಷ್ಯಂತಿ ಹ್ಯಶುದ್ಧಾಶ್ಚ ನ್ಯಾಯಚ್ಛಲವಿಭಾಷಿಣಃ ॥೧೦೩॥

ಆಗಿನ ಪ್ರಜಾವರ್ಗದಲ್ಲಿ ಧರ್ಮಜ್ಞರು, ಬ್ರಹ್ಮಜ್ಞರು, ದೇವರ್ಷಿಗಳು ಅಶುದ್ಧರೆಂದು, ಅಸತ್ಯವಾದಿಗಳೆಂದು ಕರೆಸಿಕೊಳ್ಳುತ್ತಾರೆ.

ಯೇ ನಷ್ಟಧರ್ಮಶ್ರೋತಾರಸ್ತೇ ಸಮಾಃ ಪಾಪನಿಶ್ಚಯೇ ।
ತಸ್ಮಾದೇತಾ ನ ಸಂಭಾಷ್ಯಾ ನ ಸ್ಪೃಶ್ಯಾ ಚ ಹಿತಾರ್ಥಿಭಿಃ ।
ಉಪವಾಸತ್ರಯಂ ಕುರ್ಯಾತ್ ತತ್ಸಂಸರ್ಗವಿಶುದ್ಧಯೇ ॥೧೦೪॥

ಅಧಾರ್ಮಿಕರೇ ಉಪದೇಶಕರು. ಅವುಗಳನ್ನು ಕೇಳತಕ್ಕವರು ಪಾಪಕರ್ಮಿಗಳೇ ಆಗಿರುತ್ತಾರೆ. ಅವರಂತೆಯೇ ಆಗುತ್ತಾರೆ. ಆದ್ದರಿಂದ ಶ್ರೇಯಸ್ಸನ್ನು ಬಯಸುವವರು ಅಂತಹವರ ಜೊತೆ ಮಾತನಾಡಬಾರದು. ಅವರನ್ನು ಮುಟ್ಟಬಾರದು. ಅಂತಹವರ ಸಹವಾಸದಿಂದ ಉಂಟಾದ ದೋಷಪರಿಹಾರಕ್ಕೆ ಮೂರು ದಿವಸ ಉಪವಾಸ ಇರಬೇಕು.

ತತಃ ಕಲಿಯುಗಸ್ಯಾಂತೇ ಬ್ರಾಹ್ಮಣೋ ಹರಿಪಿಂಗಲಃ ।
ಕಲ್ಕಿರ್ವಿಷ್ಣುಯಶಃ ಪುತ್ರೋ ಯಾಜ್ಞವಲ್ಕ್ಯಃ ಪುರೋಹಿತಃ ॥೧೦೫॥

ಬಳಿಕ ಕಲಿಯುಗದ ಕೊನೆಯಲ್ಲಿ ನಾನು ಬ್ರಾಹ್ಮಣ ಜಾತಿಯಲ್ಲಿ ಕಲ್ಕಿಯಾಗಿ ಅವತರಿಸುತ್ತೇನೆ. ನನ್ನ ದೇಹದ ಬಣ್ಣವು ಹಸಿರು ಮತ್ತು ಹಳದಿ ಇವೆರಡರ ಮಿಶ್ರಣವಾಗಿರುತ್ತದೆ. ವಿಷ್ಣುಯಶಸ್ ಎಂಬ ಬ್ರಾಹ್ಮಣನಿಗೆ ಮಗನಾದ ನಾನು ಯಾಜ್ಞವಲ್ಕ್ಯನೆನಿಸಿ ಪುರೋಹಿತನಾಗುತ್ತೇನೆ.

ತಸ್ಮಿನ್ನಾಶ್ರಮೇ ವನಗ್ರಾಮೇ ತಿಷ್ಠೇತ್ ಸೋನ್ನಾಸಿಮೋ ಹಯಃ ।
ಸಹಯಾ ಬ್ರಾಹ್ಮಣಾಃ ಸರ್ವೇ ತೈರಹಂ ಸಹಿತಃ ಪುನಃ ।
ಮ್ಲೇಚ್ಛಾನುತ್ಸಾದಯಿಷ್ಯಾಮಿ ಪಾಷಂಡಾಶ್ಚೈವ ಸರ್ವಶಃ ॥೧೦೬॥

ಆ ಬ್ರಾಹ್ಮಣನು ವಾಸಿಸುವ ಗ್ರಾಮದಲ್ಲಿ ಉದ್ದವಾದ ಮುಖವುಳ್ಳ ಕುದುರೆ ಇರುತ್ತದೆ. ಬ್ರಾಹ್ಮಣರೆಲ್ಲರೂ ಕುದುರೆಯನ್ನು ಸಾಕುತ್ತಾರೆ. ನಾನು ಆ ಬ್ರಾಹ್ಮಣರೊಟ್ಟಿಗೆ ಸೇರಿ ಮ್ಲೇಚ್ಛರನ್ನು, ಪಾಖಂಡಿಗಳನ್ನು ನಿರ್ಮೂಲ ಮಾಡುತ್ತೇನೆ.

ಪಾಷಂಡಶ್ಚ ಕಲೌ ತತ್ರ ಮಾಯಯೈವ ವಿನಶ್ಯತೇ ।
ಪಾಷಂಡಕಾಂಶ್ಚೈವ ಹತ್ವಾ ತತ್ರಾಂತಂ ಪ್ರಲಯೇ ಹ್ಯಹಮ್ ॥೧೦೭॥

ತತಃ ಪಶ್ಚಾದ್ ಭವಿಷ್ಯಾಮಿ ಯಜ್ಞೇಷು ನಿರತಃ ಸದಾ ।
ರಾಜ್ಯಂ ಪ್ರಶಾಸತಿ ಪುನಃ ಕುಂತೀಪುತ್ರೇ ಯುಧಿಷ್ಠಿರೇ ॥೧೦೮॥

ಕರ್ಮಾಣ್ಯಪರಿಮೇಯಾನಿ ಚತುರ್ಮೂರ್ತಿರಹಂ ಹರೇ ।
ಕೃತ್ವಾ ಲೋಕಾನ್ ಗಮಿಷ್ಯಾಮಿ ಸ್ವಾನಹಂ ಬ್ರಹ್ಮಸತ್ಕೃತಾನ್ ॥೧೦೯॥

ಕಲಿಯುಗದಲ್ಲಿ ನನ್ನ ಮಾಯೆಯಿಂದ ಪಾಖಂಡ ಮತವು ನಾಶ ಹೊಂದುತ್ತದೆ. ನಾನು ಸಂಪೂರ್ಣವಾಗಿ ಪಾಖಂಡರನ್ನು ಕೊಂದ ಬಳಿಕ ನಿರಂತರವೂ ಯಜ್ಞದಲ್ಲಿ ನಿರತನಾಗಿರುತ್ತೇನೆ. ಚತುರ್ಮೂರ್ತಿರಹನಾದ ನಾನು ಕುಂತೀಪುತ್ರನಾದ ಧರ್ಮರಾಜನು ರಾಜ್ಯವನ್ನಾಳುವಾಗ ಅನಂತ ಕರ್ಮಗಳನ್ನು ನಡೆಸುತ್ತಾ ಬ್ರಹ್ಮನಿಂದಲೂ ಪೂಜಿತವಾದ ನನ್ನ ಲೋಕಕ್ಕೆ ತೆರಳುತ್ತೇನೆ.

ಹಂಸೋ ಹಯಶಿರಾಶ್ಚೈವ ಪ್ರಾದುರ್ಭಾವಾ ದ್ವಿಜೋತ್ತಮ ।
ಯದಾ ವೇದಶ್ರುತಿರ್ನಷ್ಟಾ ಮಯಾ ಪ್ರತ್ಯಾಹೃತಾ ತದಾ ।
ಸವೇದಾಃ ಸಶ್ರುತೀಕಾಶ್ಚ ಕೃತಾಃ ಪೂರ್ವಂ ಕೃತೇ ಯುಗೇ ॥೧೧೦॥

ಹಂಸ, ಹಯಗ್ರೀವ ಈ ರೂಪಗಳು ನನ್ನ ಅವತಾರಗಳೇ. ಯಾವಾಗ ವೇದಶ್ರುತಿಯು ನಾಶವಾಗಿ ಹೋಗುತ್ತದೋ ಆಗ ನಾನು ಅವತರಿಸಿ ವೇದಶ್ರುತಿ ಮಾರ್ಗವನ್ನು ಉದ್ಧರಿಸುತ್ತೇನೆ. ಹಿಂದೆ ಕೃತಯುಗದಲ್ಲಿ ವೇದ ಸಹಿತವಾದ ಶ್ರುತಿಯನ್ನು ನಾನೇ ಪ್ರಕಟ ಪಡಿಸಿದ್ದೆನು.

ಅತಿಕ್ರಾಂತಾಃ ಪುರಾಣೇಷು ಶ್ರುತಾಸ್ತೇ ಯದಿ ವಾ ಕ್ವಚಿತ್ ।
ಅತಿಕ್ರಾಂತಾಶ್ಚ ಬಹವಃ ಪ್ರಾದುರ್ಭಾವಾ ಮಮೋತ್ತಮಾಃ ।
ಲೋಕಕಾರ್ಯಾಣಿ ಕೃತ್ವಾ ಚ ಪುನಃ ಸ್ವಾಂ ಪ್ರಕೃತಿಂ ಗತಾಃ ॥೧೧೧॥

ಪುರಾಣಗಳಲ್ಲಿ ವರ್ಣಿತವಾಗಿರುವ ನನ್ನ ಅವತಾರ ವಿಷಯಗಳನ್ನು ನೀನು ಕೇಳಿರಬಹುದು. ಆದರೆ ನನ್ನ ಅಸಂಖ್ಯವಾದ ಅನೇಕ ಅವತಾರಗಳು ಈಗಾಗಲೇ ಮುಗಿದು ಹೋಗಿವೆ. ಲೋಕಕಾರ್ಯಗಳನ್ನು ಮಾಡಿ ಪುನಃ ಮೂಲರೂಪದಲ್ಲಿ ಐಕ್ಯ ಹೊಂದಿವೆ.

ನ ಹ್ಯೇತದ್ ಬ್ರಹ್ಮಣಾ ಪ್ರಾಪ್ತಮೀದೃಶಂ ಮಮ ದರ್ಶನಮ್ ।
ಯತ್ತ್ವಯಾ ಪ್ರಾಪ್ತಮದ್ಯೇಹ ಏಕಾಂತಗತಬುದ್ಧಿನಾ ॥೧೧೨॥

ಅನನ್ಯ ಭಕ್ತಿಯಿಂದ ಕೂಡಿರುವ ನಿನಗೆ ನನ್ನ ಯಾವ ವಿಶ್ವರೂಪ ದರ್ಶನವಾಗಿದೆಯೋ ಆ ದರ್ಶನವು ಬ್ರಹ್ಮನಿಗೂ ದೊರೆತಿಲ್ಲ.

ವ್ಯಾಖ್ಯಾನ ವಿಶೇಷ– ಈ ಭಗವಂತನ ವಚನವು ಸಪ್ತಮ ಸ್ಕಂದದಲ್ಲಿ ನರಸಿಂಹನು ಪ್ರಹ್ಲಾದನನ್ನು ಪ್ರಶಂಸಿಸುವಂತೆ ತಾತ್ಕಾಲಿಕ ಎಂದು ತಿಳಿಯಬೇಕು.

ಏತತ್ತೇ ಸರ್ವಮಾಖ್ಯಾತಂ ಬ್ರಹ್ಮನ್ ಭಕ್ತಿಮತೋ ಮಯಾ ।
ಪುರಾಣಂ ಚ ಭವಿಷ್ಯಂ ಚ ಸರಹಸ್ಯಂ ಚ ಸತ್ತಮ ॥೧೧೩॥

ಬ್ರಾಹ್ಮಣೋತ್ತಮನೇ, ಅನನ್ಯವಾದ ಭಕ್ತಿಯನ್ನು ಹೊಂದಿರುವ ನಿನಗೆ ನಾನು ಹಿಂದೆ ಕಳೆದುಹೋದ, ಮುಂದೆ ನಡೆಯುವ ಅವತಾರಗಳ ವಿಷಯವನ್ನು ರಹಸ್ಯಪೂರ್ಣವಾಗಿ ಹೇಳಿರುತ್ತೇನೆ.

ಏವಂ ಸ ಭಗವಾನ್ ದೇವೋ ವಿಶ್ವಮೂರ್ತಿಧರೋಽವ್ಯಯಃ ।
ಏತಾವದುಕ್ತ್ವಾ ವಚನಂ ತತ್ರೈವಾಂತರಧೀಯತ ॥೧೧೪॥

ಯುಧಿಷ್ಠಿರನೇ, ವಿಶ್ವರೂಪವನ್ನು ಧರಿಸಿದ, ಅವ್ಯಯನಾದ, ದೇವದೇವನಾದ ಭಗವಂತನು ನಾರದರ ಬಳಿ ಹೀಗೆ ಹೇಳಿ ಅಲ್ಲಿಯೇ ಅಂತರ್ಧಾನ ಹೊಂದಿದನು.

ನಾರದೋಽಪಿ ಮಹಾತೇಜಾಃ ಪ್ರಾಪ್ಯಾನುಗ್ರಹಮೀಪ್ಸಿತಮ್ ।
ನರನಾರಾಯಣೌ ದ್ರಷ್ಟುಂ ಪ್ರಾದ್ರವದ್ ಬದರಾಶ್ರಮಮ್ ॥೧೧೫॥

ನಾರದ ಮುನಿಯಾದರೂ ಮನಸ್ಸಿನಲ್ಲಿ ಬಯಸಿದ ಅನುಗ್ರಹವನ್ನು ಹರಿಯಿಂದ ಪಡೆದು ನರ-ನಾರಾಯಣರನ್ನು ಕಾಣುವ ತವಕದಿಂದ ಬದರಿಕಾಶ್ರಮಕ್ಕೆ ತೆರಳಿದರು.

ಇದಂ ಮಹೋಪನಿಷದಂ ಚತುರ್ವೇದಸಮನ್ವಿತಮ್ ।
ಸಾಂಖ್ಯಯೋಗಕೃತಂ ತೇನ ಪಂಚರಾತ್ರಾನುಶಬ್ದಿತಮ್ ॥೧೧೬॥

ನಾರಾಯಣಮುಖೋದ್ಗೀತಂ ನಾರದೋಽಶ್ರಾವಯತ್ ಪುನಃ ।
ಬ್ರಹ್ಮಣಃ ಸದನೇ ತಾತ ಯಥಾ ದೃಷ್ಟಂ ಯಥಾ ಶ್ರುತಮ್ ॥೧೧೭॥

ಈ ನಾಲ್ಕು ವೇದಗಳಿಂದ ಯುಕ್ತವಾದ, ಸಾಂಖ್ಯಯೋಗ ಸಿದ್ಧಾಂತದಿಂದ ಕೂಡಿರುವ, ಪಂಚರಾತ್ರಾಗಮ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ, ನಾರಾಯಣನ ಮುಖದಿಂದ ಹೇಳಲ್ಪಟ್ಟಿರುವ ಮಹೋಪನಿಷತ್ತನ್ನು ನಾರದರು ಬ್ರಹ್ಮನ ಮನೆ ಎನಿಸಿದ ಶ್ವೇತದ್ವೀಪದಲ್ಲಿ ಭಗವಂತನಿಂದ ಹೇಗೆ ನೋಡಿದ್ದಾರೋ, ಭಗವಂತನ ವಾಣಿಯನ್ನು ಹೇಗೆ ಕೇಳಿದ್ದಾರೋ ಹಾಗೆ ಪ್ರವಚನವನ್ನು ಮಾಡಿದರು.

ಯುಧಿಷ್ಠಿರಃ

ಏತದಾಶ್ಚರ್ಯಭೂತಂ ಹಿ ಮಾಹಾತ್ಮ್ಯಂ ತಸ್ಯ ಧೀಮತಃ ।
ಕಿಂ ಬ್ರಹ್ಮಾ ನ ವಿಜಾನೀತೇ ಯತಃ ಶುಶ್ರಾವ ನಾರದಾತ್ ॥೧೧೮॥

ಯುಧಿಷ್ಠಿರ– ತಾತನೇ, ಜ್ಞಾನಿಯಾದ ನಾರಾಯಣನ ಮಾಹಾತ್ಮ್ಯವು ಅತ್ಯಾಶ್ಚರ್ಯಕರವು. ಬ್ರಹ್ಮದೇವನು ನಾರಾಯಣನ ಮಹಿಮೆಯನ್ನು ನಾರದರಿಂದ ಕೇಳಬೇಕಾದರೆ ಅದಕ್ಕಿಂತ ಮೊದಲು ಈ ವಿಷಯವು ಅವರಿಗೆ ತಿಳಿದಿರಲಿಲ್ಲವೆ?

ಪಿತಾಮಹೋ ಹಿ ಭಗವಾಂಸ್ತಸ್ಮಾದ್ ದೇವಾದನಂತರಃ ।
ಕಥಂ ಸ ನ ವಿಜಾನೀಯಾತ್ ಪ್ರಭಾವಮಮಿತೌಜಸಃ ॥೧೧೯॥

ಬ್ರಹ್ಮನು ನಾರಾಯಣನಿಂದಲೇ ಹುಟ್ಟಿದವನು. ಎರಡನೆಯ ಸ್ಥಾನ ಇವನದ್ದು. ಅಂತಹ ಬ್ರಹ್ಮನಿಗೆ ಇವನ ಮಹಿಮೆಯು ಏಕೆ ತಿಳಿಯಲಿಲ್ಲ?

ಭೀಷ್ಮಃ

ಮಹಾಕಲ್ಪಸಹಸ್ರಾಣಿ ಮಹಾಕಲ್ಪಶತಾನಿ ಚ ।
ಸಮತೀತಾನಿ ರಾಜೇಂದ್ರ ಸರ್ಗಾಶ್ಚ ಪ್ರಲಯಾಶ್ಚ ಹ ॥೧೨೦॥

ಭೀಷ್ಮ– ಯುಧಿಷ್ಠಿರನೇ, ಇಲ್ಲಿಯ ತನಕ ನೂರಾರು-ಸಾವಿರಾರು ಮಹಾಕಲ್ಪಗಳು ಸಂದುಹೋಗಿವೆ. ಅನಂತ ಸೃಷ್ಟಿ, ಪ್ರಳಯಗಳು ನಡೆದುಹೋಗಿವೆ.

ಸರ್ಗಸ್ಯಾದೌ ಸ್ಮೃತೋ ಬ್ರಹ್ಮಾ ಪ್ರಜಾಸರ್ಗಕರಃ ಪ್ರಭುಃ ।
ಜಾನಾತಿ ದೇವಪ್ರವರಂ ಭೂಯಶ್ಚಾತ್ತೋಧಿಕಂ ನೃಪ ।
ಪರಮಾತ್ಮಾನಮೀಶಾನಮಾತ್ಮನಃ ಪ್ರಭವಂ ತಥಾ ॥೧೨೧॥

ಸೃಷ್ಟಿಯ ಆರಂಭದಲ್ಲಿ ಪ್ರಭುವಾದ ಬ್ರಹ್ಮನೇ ಚರಾಚರ ಪ್ರಾಣಿಗಳಿಗೆ ಸೃಷ್ಟಿಕರ್ತನು. ಬ್ರಹ್ಮನು ತನ್ನ ಉತ್ಪತ್ತಿಗೆ ಕಾರಣನಾದ ನಾರಾಯಣನ ಮಹಾತ್ಮೆಯನ್ನು ಇದಕ್ಕಿಂತಲೂ ಅಧಿಕವಾಗಿಯೇ ತಿಳಿದಿರುತ್ತಾನೆ.

ಯೇ ತ್ವನ್ಯೇ ಬ್ರಹ್ಮಸದನೇ ಸಿದ್ಧಸಂಘಾಃ ಸಮಾಗತಾಃ ।
ತೇಭ್ಯಸ್ತಚ್ಚಾಪ್ಯವಯಾಮಾಸ ಪುರಾಣಂ ವೇದಸಮ್ಮಿತಮ್ ॥೧೨೨॥

ನಾರದರು ನಾರಾಯಣನ ಮಹಿಮೆಯನ್ನು ಚತುರ್ಮುಖ ಬ್ರಹ್ಮನಿಗೆ ಹೇಳಿದ್ದಲ್ಲ. ಆ ಬ್ರಹ್ಮನ ಸಭೆಯಲ್ಲಿದ್ದ ಸಿದ್ಧರ ಸಮುದಾಯಕ್ಕೆ ವೇದಸದೃಶವಾದ, ಪುರಾತನವಾದ ಪಂಚರಾತ್ರಾಗಮವನ್ನು ಚತುರ್ಮುಖ ಬ್ರಹ್ಮನು ನಾರದರಿಂದ ಹೇಳಿಸಿದನು.

ತೇಷಾಂ ಸಕಾಶಾತ್ ಸೂರ್ಯಶ್ಚ ಶ್ರುತ್ವಾ ವೈ ಭಾವಿತಾತ್ಮನಾಮ್ ।
ಆತ್ಮಾನುಗಾಮಿನಾಂ ಬ್ರಹ್ಮ ಶ್ರಾವಯಾಮಾಸ ಭಾರತ ॥೧೨೩॥

ಅವರ ದೆಸೆಯಿಂದ ಸೂರ್ಯದೇವನು ನಾರಾಯಣನ ಮಹಿಮೆಯನ್ನು ಸಿದ್ಧರ ಮೂಲಕ ಶ್ರವಣ ಮಾಡಿದನು. ಬಳಿಕ ಸೂರ್ಯನು ತನ್ನನ್ನೇ ಅನುಸರಿಸಿ ಬರುತ್ತಿರುವ ಜ್ಞಾನಿಗಳಿಗೂ ಇದನ್ನು ಕೇಳಿಸಿದನು.

ಚಷಷ್ಟಿರ್ಹಿ ಸಹಸ್ರಾಣಿ ಋಷೀಣಾಂ ಭಾವಿತಾತ್ಮನಾಮ್ ।
ಸೂರ್ಯಸ್ಯ ತಪತೋ ಲೋಕಾನ್ನಿರ್ಮಿತಾ ಯೇ ಪುರಃಸರಾಃ ।
ತೇಷಾಮಕಥಯತ್ ಸೂರ್ಯಃ ಸರ್ವೇಷಾಂ ಭಾವಿತಾತ್ಮನಾಮ್ ॥

ಶುದ್ಧಾಂತಃಕರಣವುಳ್ಳ ಅರವತ್ತು ಸಾವಿರ ಋಷಿಗಳು ಸೂರ್ಯದೇವನು ಲೋಕವನ್ನು ಬೆಳಗುತ್ತಾ ಸಾಗುವಾಗ ಮುಂದೆ ಮುಂದೆ ಸಾಗುತ್ತಿದ್ದಾರೆ. ಅವರೆಲ್ಲ ವಾಲಖಿಲ್ಯರಿಗೂ ಸೂರ್ಯದೇವನು ಈ ದಿವ್ಯವಾದ ಮಹಾತ್ಮೆಯನ್ನು ತಿಳಿಸಿದನು.

ಸೂರ್ಯಾನುಗಾಮಿಭಿಸ್ತಾತ ಋಷಿಭಿಸ್ತೈರ್ಮಹಾತ್ಮಭಿಃ ।
ಮೇರೌ ಸಮಾಗತಾ ದೇವಾಃ ಶ್ರಾವಿತಾಶ್ಚೇದಮುತ್ತಮಮ್ ॥೧೨೫॥

ಸೂರ್ಯನನ್ನೇ ಅನುಸರಿಸಿ ಹೋಗಿ ನಾರಾಯಣನ ಮಹಿಮೆಯನ್ನು ಕೇಳಿದ ಮಹಾತ್ಮರಾದ ಋಷಿಗಳು ಮೇರುಪರ್ವತಕ್ಕೆ ಆಗಮಿಸಿದ್ದ ದೇವತೆಗಳಿಗೆ ಉತ್ತಮೋತ್ತಮವಾದ ಈ ಚರಿತ್ರೆಯನ್ನು ಹೇಳಿದರು.

ದೇವಾನಾಂ ತು ಸಕಾಶಾದ್ವೈ ತತಃ ಶ್ರುತ್ವಾಸಿತೋ ದ್ವಿಜಃ ।
ಶ್ರಾವಯಾಮಾಸ ರಾಜೇಂದ್ರ ಪಿತೄಣಾಂ ಮುನಿಸತ್ತಮಃ ॥೧೨೬॥

ಯುಧಿಷ್ಠಿರನೇ, ಮುನಿಶ್ರೇಷ್ಠನಾದ, ದ್ವಿಜವರ್ಯನಾದ ಅಸಿತನು ದೇವತೆಗಳಿಂದ ನಾರಾಯಣನ ಮಹಿಮೆಯನ್ನು ಕೇಳಿ ಬಳಿಕ ಪಿತೃಗಳಿಗೆ ಹೇಳಿದನು.

ಮಮ ಚಾಪಿ ಪಿತಾ ತಾತ ಕಥಯಾಮಾಸ ಶಂತನುಃ ।
ತತೋ ಮಯೈತಚ್ಛ್ರುತ್ವಾ ಚ ಕೀರ್ತಿತಂ ತವ ಭಾರತ ॥೧೨೬॥

ಇದೇ ಪರಂಪರೆಯಿಂದ ಹರಿಯ ಮಹಿಮೆಯು ನನ್ನ ತಂದೆಯಾದ ಶಂತನುವಿಗೂ ತಿಳಿಯಿತು. ಅವನು ನನಗೆ ಈ ನಾರಾಯಣನ ದಿವ್ಯವಾದ ಮಹಿಮೆಯನ್ನು ಹೇಳಿದನು. ನಾನು ನಿನಗೆ ಹೇಳಿದ್ದೇನೆ.

ಸುರೈರ್ವಾ ಮುನಿಭಿರ್ವಾಪಿ ಪುರಾಣಂ ಯೈರಿದಂ ಶ್ರುತಮ್ ।
ಸರ್ವೇ ತೇ ಪರಮಾತ್ಮಾನಂ ಪೂಜಯಂತಿ ಪುನಃ ಪುನಃ ॥೧೨೯॥

ದೇವತೆಗಳಲ್ಲಾಗಲಿ, ಮುನಿಗಳಲ್ಲಾಗಲಿ ಯಾರು ಈ ಪುರಾಣವನ್ನು ಕೇಳುತ್ತಾರೋ ಅವರೆಲ್ಲ ಭಕ್ತಿ ಪುರಸ್ಸರವಾಗಿ ಶ್ರೀಹರಿಯನ್ನು ಎಲ್ಲ ರೀತಿಯಿಂದ ಆರಾಧಿಸುತ್ತಾರೆ.

ಇದಮಾಖ್ಯಾನಮಾರ್ಷೇಯಂ ಪಾರಂಪರ್ಯಾಗತಂ ನೃಪ ।
ನಾವಾಸುದೇವಭಕ್ತಾಯ ತ್ವಯಾ ದೇಯಂ ಕಥಂಚನ ॥೧೩೯॥

ನರೇಶ್ವರನೇ, ಋಷಿ ಸಂಬಂಧವಾದ ಈ ಆಖ್ಯಾನವು ಪರಂಪರೆಯಿಂದ ಬಂದಿದೆ. ವಾಸುದೇವನ ಭಕ್ತನಲ್ಲದವನಿಗೆ ಯಾವುದೇ ಕಾರಣದಿಂದ ಇದನ್ನು ಉಪದೇಶಿಸಬಾರದು.

ಮತ್ತೋಽನ್ಯಾನಿ ಚ ತೇ ರಾಜನ್ನುಪಾಖ್ಯಾನಶತಾನಿ ವೈ ।
ಯಾನಿ ಶ್ರುತಾನಿ ಧರ್ಮ್ಯಾಣಿ ತೇಷಾಂ ಸಾರೋಽಯಮುದ್ಧೃತಃ ॥೧೩೦॥

ಯುಧಿಷ್ಠಿರನೇ, ಇಲ್ಲಿಯ ತನಕ ಯಾವ ನೂರಾರು ಉಪಾಖ್ಯಾನಗಳನ್ನು ನನ್ನಿಂದ ಕೇಳಿರುತ್ತೀಯೋ ಆ ಎಲ್ಲದರ ಸಾರವೇ ಪಂಚರಾತ್ರ ಉಪಾಖ್ಯಾನವೆನಿಸಿದೆ.

ಸುರಾಸುರೈರ್ಯಥಾ ರಾಜನ್ನಿರ್ಮಥ್ಯಾಮೃತಮುದ್ಧೃತಮ್ ।
ಏವಮೇತತ್ ಪುರಾ ವಿಪ್ರೈಃ ಕಥಾಮೃತಮಿಹೋದ್ಧೃತಮ್ ॥೧೩೧॥

ದೇವತೆಗಳು, ಅಸುರರು, ಸಮುದ್ರವನ್ನು ಮಥನ ಮಾಡಿ ಅಮೃತವನ್ನು ತೆಗೆದಂತೆ ಬ್ರಾಹ್ಮಣರೆಲ್ಲರೂ ಸಮಸ್ತ ಶಾಸ್ತ್ರಗಳನ್ನು ಮಥಿಸಿ ಅಮೃತಸದೃಶವಾದ ಈ ಮಹಾತ್ಮೆಯನ್ನು ಪ್ರಕಟಪಡಿಸಿದ್ದಾರೆ.

ಯಶ್ಚೇದಂ ಪಠತೇ ನಿತ್ಯಂ ಯಶ್ಚೇದಂ ಶೃಣುಯಾನ್ನರಃ ।
ಏಕಾಂತಭಾವೋಪಗತ ಏಕಾಂತೇ ಸುಸಮಾಹಿತಃ ॥೧೩೨॥

ಪ್ರಾಪ್ಯ ಶ್ವೇತಂ ಮಹಾದ್ವೀಪಂ ಭೂತ್ವಾ ಚಂದ್ರಪ್ರಭೋ ನರಃ ।
ಸ ಸಹಸ್ರಾರ್ಚಿಷಂ ದೇವಂ ಪ್ರವಿಶೇನ್ನಾತ್ರ ಸಂಶಯಃ ॥೧೩೩॥

ಯಾವನು ಈ ನಾರಾಯಣನ ಮಹಿಮೆಯನ್ನು ನಿತ್ಯವೂ ಪಠಿಸುತ್ತಾನೋ, ಕೇಳುತ್ತಾನೋ ಅವನು ನಾರಾಯಣನ ವಿಷಯದಲ್ಲಿ ಏಕಾಂತಭಕ್ತಿಯನ್ನು ಚೆನ್ನಾಗಿ ಹೊಂದಿದವನಾಗಿ, ಮಹಾದ್ವೀಪವೆನಿಸಿದ ಶ್ವೇತದ್ವೀಪಕ್ಕೆ ಹೋಗಿ, ಚಂದ್ರಪ್ರಭೆಯಿಂದ ಕೂಡಿದವನಾಗಿ ಸಹಸ್ರಕಿರಣನಾದ ನಾರಾಯಣನನ್ನೇ ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಮುಚ್ಯೇದಾರ್ತಸ್ತಥಾ ರೋಗಾಚ್ಛುತ್ವೇಮಾಮಾದಿತಃ ಕಥಾಮ್ ।
ಜಿಜ್ಞಾಸುರ್ಲಭತೇ ಕಾಮಾನ್ ಭಕ್ತೋ ಭಕ್ತಗತಿಂ ವ್ರಜೇತ್ ॥೧೩೪॥

ಸಂಕಷ್ಟಕ್ಕೆ ತುತ್ತಾದ ಮನುಷ್ಯನು ಮೊದಲಿನಿಂದಲೂ ಈ ಕಥೆಯನ್ನು ಕೇಳಿದರೆ ಕಷ್ಟದಿಂದ ಮುಕ್ತನಾಗುತ್ತಾನೆ. ರೋಗಿಯು ರೋಗದಿಂದಲೂ ಮುಕ್ತನಾಗುತ್ತಾನೆ. ಜಿಜ್ಞಾಸುವು ಜ್ಞಾನವನ್ನು ಹೊಂದುತ್ತಾನೆ. ಭಕ್ತನು ಭಕ್ತರ ಗತಿಯನ್ನು ಹೊಂದುತ್ತಾನೆ.

ತ್ವಯಾಪಿ ಸತತಂ ರಾಜನ್ನಭ್ಯರ್ಚ್ಯಃ ಪುರುಷೋತ್ತಮಃ ।
ಸ ಹಿ ಮಾತಾ ಪಿತಾ ಚೈವ ಕೃತ್ಸ್ನಸ್ಯ ಜಗತೋ ಗುರುಃ ॥೧೩೫॥

ಯುಧಿಷ್ಠಿರನೇ, ನೀನೂ ಪುರುಷೋತ್ತಮನಾದ ಕೃಷ್ಣನನ್ನು ನಿರಂತರ ಆರಾಧಿಸು. ಸಮಗ್ರ ಜಗತ್ತಿಗೆ ಅವನೇ ತಂದೆ, ಅವನೇ ತಾಯಿ, ಅವನೇ ಗುರುವಾಗಿದ್ದಾನೆ.

ಬ್ರಹ್ಮಣ್ಯದೇವೋ ಭಗವಾನ್ ಪ್ರೀಯತಾಂ ತೇ ಸನಾತನಃ ।
ಯುಧಿಷ್ಠಿರ ಮಹಾಬಾಹೋ ಮಹಾಬಾಹುರ್ಜನಾರ್ದನಃ ॥೧೩೬॥

ಮಹಾಬಾಹುವೇ, ಯುಧಿಷ್ಠಿರನೇ, ಬ್ರಾಹ್ಮಣಪ್ರಿಯನಾದ, ಬುದ್ಧಿಶಾಲಿಯಾದ, ಸನಾತನನಾದ, ಭಗವಾನ್ ಶ್ರೀಹರಿಯು ನಿನ್ನ ವಿಷಯದಲ್ಲಿ ಯಾವಾಗಲೂ ಪ್ರಸನ್ನನಾಗಲಿ.

ವೈಶಂಪಾಯನಃ

ಶ್ರುತ್ವೈತದಾಖ್ಯಾನವರಂ ಧರ್ಮರಾಟ್ ಜನಮೇಜಯ ।
ಭ್ರಾತರಶ್ಚಾಸ್ಯ ತೇ ಸರ್ವೇ ನಾರಾಯಣಪರಾಭವನ್ ॥೧೩೭॥

ವೈಶಂಪಾಯನ– ಜನಮೇಜಯನೇ, ಶ್ರೇಷ್ಠವಾದ ಉಪಾಖ್ಯಾನವನ್ನು ಕೇಳಿ ಧರ್ಮರಾಜನು, ಅವನ ಸಹೋದರರು ನಾರಾಯಣನ ಪರಮಭಕ್ತರಾದರು.

ಜಿತಂ ಭಗವತಾ ತೇನ ಪುರುಷೇಣೇತಿ ಭಾರತ ।
ನಿತ್ಯಂ ಜಪ್ಯಪರಾ ಭೂತ್ವಾ ಸರಸ್ವತೀಮುದೀರಯನ್ ॥೧೩೮॥

ಮುಂದೆ ಪಾಂಡವರು ಯಾವಾಗಲೂ ಹರಿನಾಮದಲ್ಲೇ ಆಸಕ್ತರಾಗಿ 'ಭಗವಂತನಾದ ಪುರುಷೋತ್ತಮನಿಂದ ಎಲ್ಲವೂ ಜಯಿಸಲ್ಪಟ್ಟಿದೆ, ನಾವೆಲ್ಲರೂ ಅವನ ಅಧೀನರು' ಎಂಬ ಜಯವಾಣಿಯನ್ನು ಹೇಳುತ್ತಿದ್ದರು.

ಯೋ ಹ್ಯಸ್ಮಾಕಂ ಗುರುಃ ಶ್ರೇಷ್ಠಃ ಕೃಷ್ಣದ್ವೈಪಾಯನೋ ಮುನಿಃ ।
ಸ ಜಗೌ ಪರಮಂ ಜಪ್ಯಂ ನಾರಾಯಣಮುದೀರಯನ್ ॥೧೩೯॥

ನಮಗೆಲ್ಲ ಗುರುಗಳಾದ ಭಗವಾನ್ ವ್ಯಾಸರು ಉತ್ಕೃಷ್ಟಮಂತ್ರವನ್ನು ಜಪಿಸುತ್ತಾ ನಾರಾಯಣನ ಮಹಿಮೆಯನ್ನೇ ಹೇಳುತ್ತಿದ್ದರು.

ಗತ್ವಾಂತರಿಕ್ಷಾತ್ ಸತತಂ ಕ್ಷೀರೋದಮಮೃತಾಶಯಮ್ ।
ಪೂಜಯಿತ್ವಾ ಚ ದೇವೇಶಂ ಪುನರಾಯಾತ್ಸ್ವಮಾಶ್ರಮಮ್ ॥೧೪೦॥

ವ್ಯಾಸರು ಪ್ರತಿದಿನವೂ ಆಕಾಶ ಮಾರ್ಗದ ಮೂಲಕ ಅಮೃತನಿಧಿಯಾದ ಕ್ಷೀರ ಸಮುದ್ರಕ್ಕೆ ತೆರಳಿ ಅಲ್ಲಿ ಶ್ರೀಹರಿಯನ್ನು ಯಥಾವತ್ತಾಗಿ ಪೂಜಿಸಿ ಬಳಿಕ ತಮ್ಮ ಆಶ್ರಮಕ್ಕೆ ಹಿಂದಿರುಗುತ್ತಿದ್ದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕಸಪ್ತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆರಡನೆಯ ಅಧ್ಯಾಯ

ಶ್ರೀಹರಿಯು ಬ್ರಹ್ಮಾದಿಗಳಿಗೆ ಉಪದೇಶಿಸಿದ ಧರ್ಮರಹಸ್ಯವನ್ನು ವ್ಯಾಸರು ತಮ್ಮ ಶಿಷ್ಯರಿಗೆ ಬೋಧಿಸಿದುದು.

ಜನಮೇಜಯಃ

ಕಥಂ ಸ ಭಗವಾನ್ ದೇವೋ ಯಜ್ಞೇಷ್ವಗ್ರಹರಃ ಪ್ರಭುಃ ।
ಯಜ್ಞಧಾರೀ ಚ ಸತತಂ ವೇದವೇದಾಂಗವಿತ್ತಥಾ ॥೧॥

ಜನಮೇಜಯ– ಪ್ರಭುವಾದ, ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನು ಯಜ್ಞದಲ್ಲಿ ಮೊದಲನೆಯ ಹವಿಸ್ಸನ್ನು ಸ್ವೀಕರಿಸುತ್ತಾನೆ ಎನ್ನುತ್ತಾರೆ. ಅದರಂತೆ ಯಜ್ಞಧಾರಿಯು ಯಾವಾಗಲೂ ವೇದ-ವೇದಾಂಗಗಳನ್ನು ಬಲ್ಲವನು ಭಗವಂತನೆಂದು ಹೇಳುತ್ತಾರೆ.

ನಿವೃತ್ತಂ ಚಾಸ್ಥಿತೋ ಧರ್ಮಂ ಕ್ಷೇಮೀ ಭಾಗವತಪ್ರಿಯಃ ।
ಪ್ರವೃತ್ತಿಧರ್ಮಾನ್ ವಿದಧೇ ಸ ಏವ ಭಗವಾನ್ ಪ್ರಭುಃ ॥೨॥

ಭಾಗವತರಿಗೆ ಪ್ರಿಯನಾದ ಭಗವಂತನು ಕ್ಷೇಮವುಳ್ಳವನು, ನಿವೃತ್ತಧರ್ಮವನ್ನು ಆಶ್ರಯಿಸಿದವನು. ಅದೇ ಭಗವಂತನೇ ಪ್ರವೃತ್ತಿಧರ್ಮಗಳನ್ನು ವಿಧಾನ ಮಾಡಿದ್ದಾನೆ. ಇದು ಹೇಗೆ?

ಕಥಂ ಪ್ರವೃತ್ತಿಧರ್ಮೇಷು ಭಾಗಾರ್ಹಾ ದೇವತಾಃ ಕೃತಾಃ ।
ಕಥಂ ನಿವೃತ್ತಿಧರ್ಮಾಶ್ಚ ಕೃತಾ ವ್ಯಾವೃತ್ತಬುದ್ಧಯಃ ॥೩॥

ನಿವೃತ್ತಿಧರ್ಮದ ಅವಲಂಬಿಯಾದ ಭಗವಂತನು ಪ್ರವೃತ್ತಿ ಧರ್ಮದಲ್ಲಿ ದೇವತೆಗಳೆಲ್ಲ ನಿರತರಾಗಿ ಯಜ್ಞಭಾಗವನ್ನು ಸ್ವೀಕರಿಸುವಂತೆ ಏಕೆ ಪ್ರಚೋದಿಸಿದನು? ವಿಷಯಗಳಿಂದ ಆಕೃಷ್ಟರಾದ ಸಾಧಕರನ್ನು ಯಾವ ಕಾರಣದಿಂದ ನಿವೃತ್ತಿಧರ್ಮ ನಿರತರನ್ನಾಗಿಸಿದನು?

ಏತಂ ನಃ ಸಂಶಯಂ ವಿಪ್ರ ಛಿಂಧಿ ಗುಹ್ಯಂ ಸನಾತನಮ್ ।
ತ್ವಯಾ ನಾರಾಯಣಕಥಾ ಶ್ರುತಾ ವೈ ಧರ್ಮಸಂಹಿತಾ ॥೪॥

ಇದು ನನಗೆ ಬಂದ ಸಂಶಯವಾಗಿದೆ. ಬಹಳ ಕಾಲದಿಂದ ಇರುವ ನನ್ನ ಸಂಶಯವನ್ನು ಪರಿಹರಿಸು. ಧರ್ಮೋಪದೇಶದಿಂದ ಕೂಡಿರುವ ನಾರಾಯಣನ ಅನೇಕ ಕಥೆಗಳನ್ನು ನೀನು ಕೇಳಿರುತ್ತಿಯಷ್ಟೆ!

ಇಮೇ ಸಬ್ರಹ್ಮಕಾ ಲೋಕಾಃ ಸಸುರಾಸುರಮಾನವಾಃ ।
ಕ್ರಿಯಾಸ್ವಭ್ಯುದಯೋಕ್ತಾಸು ಸಕ್ತಾ ದೃಶ್ಯಂತಿ ಸರ್ವಶಃ ।
ಮೋಕ್ಷಶ್ಚೋಕ್ತಸ್ತ್ವಯಾ ಬ್ರಹ್ಮನ್ನಿರ್ವಾಣಂ ಪರಮಂ ಸುಖಮ್ ॥೫॥

ಬ್ರಹ್ಮಲೋಕಪರ್ಯಂತವಾದ ಸಮಸ್ತ ಲೋಕಗಳು, ದೇವ-ಅಸುರ-ಮಾನವರು ಅಭ್ಯುದಯಕ್ಕಾಗಿ ಹೇಳಲ್ಪಟ್ಟ ಕ್ರಿಯೆಗಳಲ್ಲಿಯೇ ಆಸಕ್ತರಾಗಿ, ಎಲ್ಲ ಕಡೆಯಲ್ಲಿಯೂ ಕಂಡುಬರುತ್ತಿದ್ದಾರೆ. ಆದರೆ ಮೋಕ್ಷವೊಂದೇ ಪರಮಶಾಂತಿರೂಪವಾದ ತಾಣವೆಂದು ನೀವು ಹೇಳುತ್ತಿದ್ದೀರಿ.

ಯೇ ಚ ಮುಕ್ತಾ ಭವಂತೀಹ ಪುಣ್ಯಪಾಪವಿವರ್ಜಿತಾಃ ।
ತೇ ಸಹಸ್ರಾರ್ಚಿಷಂ ದೇವಂ ಪ್ರವಿಶಂತೀತಿ ಶುಶ್ರುಮಃ ॥೬॥

ಯಾರು ಪುಣ್ಯ-ಪಾಪಗಳ ಸಂಬಂಧದಿಂದ ಮುಕ್ತರಾಗಿದ್ದಾರೋ ಅವರು ಸಹಸ್ರ ರಶ್ಮಿಯಾದ ಪರಮಾತ್ಮನನ್ನು ಪ್ರವೇಶಿಸುತ್ತಾರೆ ಎಂಬುದನ್ನು ತಮ್ಮಿಂದಲೇ ಕೇಳಿ ತಿಳಿದಿದ್ದೇನೆ.

ಅಹೋ ಹಿ ದುರನುಷ್ಠೇಯೋ ಮೋಕ್ಷಧರ್ಮಃ ಸನಾತನಃ ।
ಯಂ ಹಿತ್ವಾ ದೇವತಾಃ ಸರ್ವಾ ಹವ್ಯಕವ್ಯಭುಜೋಽಭವನ್ ॥೭॥

ಸನಾತನವಾದ ಮೋಕ್ಷಧರ್ಮದ ಅನುಷ್ಠಾನವನ್ನು ಅತ್ಯಂತ ಕಷ್ಟದಿಂದ ಆಚರಿಸಬೇಕಾಗುತ್ತದೆ. ಆದ್ದರಿಂದಲೇ ದೇವತೆಗಳು ಮೋಕ್ಷಧರ್ಮವನ್ನು ಬಿಟ್ಟು ಹವ್ಯ-ಕವ್ಯಗಳನ್ನು ಸ್ವೀಕರಿಸುತ್ತಿದ್ದಾರೆ.

ಕಿಂ ನು ಬ್ರಹ್ಮಾ ಚ ರುದ್ರಶ್ಚ ಶಕ್ರಶ್ಚ ಬಲಭಿತ್ ಪ್ರಭುಃ ।
ಸೂರ್ಯಸ್ತಾರಾಧಿಪೋ ವಾಯುರಗ್ನಿರ್ವರುಣ ಏವ ಚ ।
ಆಕಾಶಂ ಜಗತೀ ಚೈವ ಯೇ ಚ ಶೇಷಾ ದಿವೌಕಸಃ ॥೮॥

ಬ್ರಹ್ಮ-ರುದ್ರರಾಗಲಿ, ಬಲಾಸುರನನ್ನು ಸಂಹರಿಸಿದ ಇಂದ್ರನಾಗಲಿ, ತಾರಾಧಿಪನಾದ ಚಂದ್ರನಾಗಲಿ, ಸೂರ್ಯನಾಗಲಿ, ವಾಯು-ಅಗ್ನಿ-ವರುಣರಾಗಲಿ, ಭೂಮಿ-ಆಕಾಶಗಳಾಗಲಿ, ಉಳಿದ ದೇವತೆಗಳೇ ಆಗಲಿ,

ಪ್ರಲಯಂ ನ ವಿಜಾನಂತಿ ಆತ್ಮನಃ ಪರಿನಿರ್ಮಿತಮ್ ।
ತತಸ್ತೇ ನಾಸ್ಥಿತಾ ಮಾರ್ಗಂ ಧ್ರುವಮಕ್ಷಯಮವ್ಯಯಮ್ ॥೯॥

ಪರಮಾತ್ಮನಿಂದ ಆಗುವ ತಮ್ಮ ನಾಶವನ್ನು ತಿಳಿದಿಲ್ಲವೇ? ಶಾಶ್ವತವೂ, ಅಕ್ಷಯವೂ, ನಾಶರಹಿತವೂ ಆದ ಅವರು ತಮ್ಮ ಮರಣವನ್ನು ತಿಳಿಯದಿರುವ ಕಾರಣದಿಂದಲೇ ಆಶ್ರಯಿಸಿಲ್ಲವೆ?

ಸ್ಮೃತ್ವಾ ಕಾಲಪರೀಮಾಣಂ ಪ್ರವೃತ್ತಿಂ ಯೇ ಸಮಾಸ್ಥಿತಾಃ ।
ದೋಷಃ ಕಾಲಪರೀಮಾಣೇ ಮಹಾನೇಷ ಕ್ರಿಯಾವತಾಮ್ ॥೧೦॥

ಯಾರು ಕಾಲದ ವ್ಯಾಪ್ತಿಯನ್ನು ಸ್ಮರಿಸಿಕೊಂಡು ಪ್ರವೃತ್ತಿಮಾರ್ಗವನ್ನು ಆಶ್ರಯಿಸಿದ್ದಾರೋ ಅಂತಹ ವ್ಯಕ್ತಿಗಳಿಗೆ ಕಾಲಪರಿಮಾಣವನ್ನು ತಿಳಿದಾಗಲೂ ಪ್ರವೃತ್ತಿ ಕರ್ಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ದೋಷ ಎಂದು ಪರಿಗಣಿಸಲ್ಪಟ್ಟಿದೆ.

ಏತನ್ಮೇ ಸಂಶಯಂ ವಿಪ್ರ ಹೃದಿ ಶಲ್ಯಮಿವಾರ್ಪಿತಮ್ ।
ಛಿಂಧೀತಿಹಾಸಕಥನಾತ್ ಪರಂ ಕೌತೂಹಲಂ ಹಿ ಮೇ ॥೧೧॥

ವಿಪ್ರರೇ, ನನ್ನ ಹೃದಯದಲ್ಲಿ ಮುಳ್ಳಿನಂತೆ ಈ ಸಂಶಯವು ಚುಚ್ಚುತ್ತಿದೆ. ಇತಿಹಾಸವನ್ನು ಹೇಳುವ ಮೂಲಕ ನನಗುಂಟಾದ ಸಂಶಯವನ್ನು ಪರಿಹರಿಸಿ. ಈ ತತ್ತ್ವರಹಸ್ಯವನ್ನು ತಿಳಿಯಲು ಕುತೂಹಲನಾಗಿದ್ದೇನೆ.

ಕಥಂ ಭಾಗಹರಾಃ ಪ್ರೋಕ್ತಾ ದೇವತಾಃ ಕ್ರತುಷು ದ್ವಿಜ ।
ಕಿಮರ್ಥಂ ಚಾಧ್ವರೇ ಬ್ರಹ್ಮನ್ನಿಜ್ಯಂತೇ ತ್ರಿದಿವೌಕಸಃ ॥೧೨॥

ಯಜ್ಞಗಳಲ್ಲಿ ದೇವತೆಗಳು ಹವಿರ್ಭಾಗವನ್ನು ಹೊಂದಲು ಅಧಿಕಾರಿಗಳೆಂದು ಏಕೆ ಹೇಳಿದೆ? ಯಾವ ಕಾರಣದಿಂದ ದೇವತೆಗಳನ್ನುದ್ದೇಶಿಸಿ ಹೋಮ ಮಾಡುತ್ತಾರೆ?

ಯೇ ಚ ಭಾಗಂ ಪ್ರಗೃಹ್ಣಂತಿ ಯಜ್ಞೇಷು ದ್ವಿಜಸತ್ತಮ ।
ತೇ ಯಜಂತೋ ಮಹಾಯಜ್ಞೈಃ ಕಸ್ಯ ಭಾಗಂ ದದಂತಿ ವೈ ॥೧೩॥

ಬೇರೆಯವರು ಮಾಡುವ ಯಜ್ಞಗಳಲ್ಲಿ ಆ ಯಜ್ಞದ ಭಾಗವನ್ನು ಸ್ವೀಕರಿಸುವ ದೇವತೆಗಳು, ತಾವೇ ಮಾಡುವ ಯಜ್ಞದಲ್ಲಿ ಯಾರಿಗೆ ಹವಿರ್ಭಾಗವನ್ನು ದಾನ ಮಾಡುತ್ತಾರೆ?

ವೈಶಂಪಾಯನಃ

ಅಹೋ ಗೂಢತಮಃ ಪ್ರಶ್ನಸ್ತ್ವಯಾ ಪೃಷ್ಟೋ ಜನೇಶ್ವರ ।
ನಾತಪ್ತತಪಸಾ ಹ್ಯೇಷ ನಾವೇದವಿದುಷಾ ತಥಾ ।
ನಾಪುರಾಣವಿದಾ ಚಾಪಿ ಶಕ್ಯೋ ವ್ಯಾಹರ್ತುಮಂಜಸಾ ॥೧೪॥

ವೈಶಂಪಾಯನ– ಮಹಾರಾಜನೇ, ಅತ್ಯಂತ ಗೂಢವಾದ ಪ್ರಶ್ನೆಯನ್ನೇ ಕೇಳಿದ್ದಿ. ತಪಸ್ಸನ್ನಾಚರಿಸದವನು, ವೇದವನ್ನು ಅರಿಯದವನು, ಪುರಾಣವನ್ನು ತಿಳಿಯದವನು ಈ ರೀತಿಯ ಪ್ರಶ್ನೆಗಳನ್ನು ಕೇಳಲು ಸಾಧ್ಯವಿಲ್ಲ.

ಹಂತ ತೇ ಕಥಯಿಷ್ಯಾಮಿ ಯನ್ಮೇ ಪೃಷ್ಟಃ ಪುರಾ ಗುರುಃ ।
ಕೃಷ್ಣದ್ವೈಪಾಯನೋ ವ್ಯಾಸೋ ವೇದವ್ಯಾಸೋ ಮಹಾನೃಷಿಃ ॥೧೫॥

ಸುಮಂತುರ್ಜೈಮಿನಿಶ್ಚೈವ ಪೈಲಶ್ಚ ಸುದೃಢವ್ರತಃ ।
ಅಹಂ ಚತುರ್ಥಃ ಶಿಷ್ಯೋ ವೈ ಪಂಚಮಶ್ಚ ಶುಕಃ ಸ್ಮೃತಃ ॥೧೬॥

ನಾನು ಈ ರೀತಿಯಾದ ಪ್ರಶ್ನೆಯನ್ನೇ ಕೇಳಿದಾಗ ಗುರುಗಳಾದ ವೇದವ್ಯಾಸರು ಏನು ಉತ್ತರಿಸಿದ್ದಾರೋ ಅದನ್ನೇ ನಿನಗೆ ಹೇಳುತ್ತೇನೆ. ಸುಮಂತು, ಜೈಮಿನಿ, ದೃಢವ್ರತನಾದ ಪೈಲ, ನಾಲ್ಕನೆಯವನಾದ ನಾನು, ಐದನೆಯವನಾದ ಶುಕ.

ಏತಾನ್ ಸಮಾಗತಾನ್ ಸರ್ವಾನ್ ಪಂಚ ಶಿಷ್ಯಾನ್‌ದಮಾನ್ವಿತಾನ್ ।
ಶೌಚಾಚಾರಸಮಾಯುಕ್ತಾನ್ ಜಿತಕ್ರೋಧಾನ್ ಜಿತೇಂದ್ರಿಯಾನ್ ॥೧೭॥

ವೇದಾನಧ್ಯಾಪಯಾಮಾಸ ಮಹಾಭಾರತಪಂಚಮಾನ್ ।
ಮೇರೌ ಗಿರಿವರೇ ರಮ್ಯೇ ಸಿದ್ಧಚಾರಣಸೇವಿತೇ ॥೧೮॥

ಇಪ್ಪು ಜನರು ವ್ಯಾಸರ ಬಳಿ ಶಿಷ್ಯರಾಗಿದ್ದೆವು. ಗುರುಗಳ ಬಳಿ ಹೋದ, ಕ್ಷಮಾದಿ ಗುಣಗಳಿಂದ ಕೂಡಿರುವ, ಶೌಚಾಚಾರ ಸಂಪನ್ನರಾದ, ಕ್ರೋಧವನ್ನು ಜಯಿಸಿರುವ,

ಜಿತೇಂದ್ರಿಯರಾದ ನಮ್ಮೆಲ್ಲರಿಗೂ ವ್ಯಾಸರು ವೇದಾಧ್ಯಯನವನ್ನು ಮಾಡಿಸಿದರು. ಐದನೆಯದ್ದಾದ ಮಹಾಭಾರತವನ್ನೂ ಹೇಳುತ್ತಿದ್ದರು. ಸಿದ್ಧ-ಚಾರಣರಿಂದ ಸೇವಿಸಲ್ಪಡುತ್ತಿದ್ದ ಮೇರುಪರ್ವತದಲ್ಲಿ ಹೀಗೆ ಪಾಠವು ನಡೆಯುತ್ತಿರುವಾಗ;

ತೇಷಾಮಭ್ಯಸ್ಯತಾಂ ವೇದಾನ್ ಕದಾಚಿತ್ ಸಂಶಯೋಽಭವತ್ ।
ಏಷ ವೈ ಯಸ್ತ್ವಯಾ ಪೃಷ್ಟಸ್ತೇನ ತೇಷಾಂ ಪ್ರಕೀರ್ತಿತಃ ।
ತತಃ ಶ್ರುತೋ ಮಯಾ ಚಾಪಿ ತವಾಖ್ಯೇಯೋದ್ಯ ಭಾರತ ॥೧೯॥

ವೇದಾಭ್ಯಾಸವನ್ನು ಮಾಡುತ್ತಿರುವಾಗ ಒಂದು ಬಾರಿ ಸಂಶಯ ಉಂಟಾಯಿತು. ನೀನು ಕೇಳಿದ ಪ್ರಶ್ನೆಯನ್ನೇ ನಾವು ಕೇಳಿದೆವು. ನಮ್ಮ ಪ್ರಶ್ನೆಗೆ ವ್ಯಾಸರು ಕೊಟ್ಟ ಉತ್ತರವನ್ನು ನಿನಗೆ ಹೇಳುತ್ತೇನೆ.

ಶಿಷ್ಯಾಣಾಂ ವಚನಂ ಶ್ರುತ್ವಾ ಸರ್ವಾಜ್ಞಾನತಮೋನುದಃ ।
ಪರಾಶರಸುತಃ ಶ್ರೀಮಾನ್ವ್ಯಾಸೋ ವಾಕ್ಯಮುವಾಚ ಹ ॥೨೦॥

ಶಿಷ್ಯರು ಹೇಳಿದ ಮಾತನ್ನು ಕೇಳಿ, ಸಮಸ್ತ ಅಜ್ಞಾನವೆಂಬ ಕತ್ತಲನ್ನು ಪರಿಹರಿಸಲು ಸಮರ್ಥರಾದ, ಪರಾಶರರ ಮಗನೆಂದೇ ಪ್ರಸಿದ್ಧರಾದ ಶ್ರೀಮಾನ್ ವ್ಯಾಸರು ಇಂತಹ ವಚನವನ್ನು ಹೇಳಿದರು.

ಮಯಾ ಹಿ ಸುಮಹತ್ತಪ್ತಂ ತಪಃ ಪರಮದಾರುಣಮ್ ।
ಭೂತಂ ಭವ್ಯಂ ಭವಿಷ್ಯಚ್ಚ ಜಾನೀಯಾಮಿತಿ ಸತ್ತಮಾಃ ॥೨೧॥

ಶಿಷ್ಯರೇ, ಹಿಂದೆ ನಾನು ಘೋರ ತಪಸ್ಸನ್ನು ಮಾಡಿದ್ದೇನೆ. ಭೂತ-ಭವ್ಯ-ಭವಿಷ್ಯತ್ತಿನ ಜ್ಞಾನಕ್ಕಾಗಿ ಪರಮ ದಾರುಣವಾದ ತಪಸ್ಸನ್ನು ಮಾಡಿದ್ದೇನೆಂದು ನೀವೆಲ್ಲ ತಿಳಿಯಿರಿ.

ತಸ್ಯ ಮೇ ತಪ್ತತಪಸೋ ನಿಗೃಹೀತೇಂದ್ರಿಯಸ್ಯ ಚ ।
ನಾರಾಯಣಪ್ರಸಾದೇನ ಕ್ಷೀರೋದಸ್ಯಾನುಕೂಲತಃ ॥೨೨॥

ತ್ರೈಕಾಲಿಕಮಿದಂ ಜ್ಞಾನಂ ಪ್ರಾದುರ್ಭೂತಂ ಯಥೇಪ್ಸಿತಮ್ ।
ತಚ್ಛೃಣುಧ್ವಂ ಯಥಾಜ್ಞಾನಂ ವಕ್ಷ್ಯೇ ಸಂಶಯಮುತ್ತಮಮ್ ।
ಯಥಾ ವೃತ್ತಂ ಹಿ ಕಲ್ಪಾದೌ ದೃಷ್ಟಂ ಮೇ ಜ್ಞಾನಚಕ್ಷುಷಾ ॥೨೩॥

ಹೀಗೆ ತಪಸ್ಸನ್ನಾಚರಿಸಿದ, ಇಂದ್ರಿಯಗಳನ್ನು ಜಯಿಸಿರುವ ನನಗೆ ನಾರಾಯಣನ ಪ್ರಸಾದದಿಂದ ಕ್ಷೀರಸಮುದ್ರದ ತೀರದಲ್ಲಿ ಯಥೇಷ್ಟವಾದ ತ್ರಿಕಾಲಜ್ಞಾನವು ಲಭಿಸಿತು. ಅದರ ಪ್ರಭಾವದಿಂದ ನಿಮ್ಮ ಸಂಶಯವನ್ನು ಪರಿಹರಿಸಲು ನ್ಯಾಯೋಚಿತವಾದ ಮಾತನ್ನು ಹೇಳುತ್ತೇನೆ, ಅದನ್ನು ಕೇಳಿರಿ. ಕಲ್ಪದ ಆದಿಯಲ್ಲಿ ಹೇಗೆ ನಡೆಯಿತೆಂದು ಜ್ಞಾನದೃಷ್ಟಿಯಿಂದಲೇ ನಾನು ಕಂಡುಕೊಂಡಿದ್ದೇನೆ.

ಪರಮಾತ್ಮೇತಿ ಯಂ ಪ್ರಾಹುಃ ಸಾಂಖ್ಯಯೋಗವಿದೋ ಜನಾಃ ।
ಮಹಾಪುರುಷಸಂಜ್ಞಾಂ ಸ ಲಭತೇ ಸ್ವೇನ ಕರ್ಮಣಾ ॥೨೪॥

ಸಾಂಖ್ಯಯೋಗಗಳನ್ನು ತಿಳಿದ ಜನರು ಯಾರನ್ನು ಪರಮಾತ್ಮನೆಂದು ಹೇಳುತ್ತಾರೋ ಅವನೇ ತನ್ನ ಕರ್ಮದ ಪ್ರಭಾವದಿಂದ ಮಹಾಪುರುಷನೆಂದು ಹೆಸರನ್ನು ಹೊಂದುತ್ತಾನೆ.

ವ್ಯಾಖ್ಯಾನ ವಿಶೇಷ– ತನ್ನ ಕರ್ಮದ ಪ್ರಭಾವದಿಂದ ಎಂಬುದಕ್ಕೆ ತನ್ನ ಸ್ವಾತಂತ್ರ್ಯ ಗುಣದಿಂದ ಎಂದು ಅರ್ಥೈಸಿಕೊಳ್ಳಬೇಕು.

ತಸ್ಮಾತ್ ಪ್ರಸೂತಮವ್ಯಕ್ತಂ ಪ್ರಧಾನಂ ತದ್ ವಿದುರ್ಬುಧಾಃ ।
ಅವ್ಯಕ್ತಾದ್ ವ್ಯಕ್ತಮುತ್ಪನ್ನಂ ಲೋಕಸೃಷ್ಟ್ಯರ್ಥಮೀಶ್ವರಾತ್ ॥೨೫॥

ಆ ಮಹಾಪುರುಷನಿಂದ ಅವ್ಯಕ್ತತತ್ತ್ವವು ಹುಟ್ಟಿತು. ಅವ್ಯಕ್ತ ಎಂಬ ಪ್ರಕೃತಿಯ ಸೃಷ್ಟಿಯ ಬಳಿಕ ವ್ಯಕ್ತವಾದ ಪ್ರಪಂಚವು ಜಗತ್ತಿನ ಸೃಷ್ಟಿಗಾಗಿ ಈಶ್ವರನಿಂದ ಪ್ರಾದುರ್ಭವಿಸಿತು.

ಅನಿರುದ್ಧೋ ಹಿ ಲೋಕೇಷು ಮಹಾನಾತ್ಮೇತಿ ಕಥ್ಯತೇ ।
ಯೋಽಸೌ ವ್ಯಕ್ತತ್ವಮಾಪನ್ನೋ ನಿರ್ಮಮೇ ಚ ಪಿತಾಮಹಮ್ ।
ಯೋಽಹಂಕಾರ ಇತಿ ಪ್ರೋಕ್ತಃ ಸರ್ವತೇಜೋಮಯೋ ಹಿ ಸಃ ॥೨೬॥

ಲೋಕಗಳಲ್ಲಿ ಅನಿರುದ್ಧನೇ ಮಹಾಪುರುಷ ಎಂದು ಕರೆಸಿಕೊಳ್ಳುತ್ತಾನೆ. ಈ ಭಗವಂತನೇ ವ್ಯಕ್ತರೂಪವನ್ನು ತಾಳಿ ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸಿದನು. ಈ ಭಗವಂತನೇ ಅಹಂಕಾರತತ್ತ್ವವನ್ನು ಸೃಷ್ಟಿಸಿದನು. ಸಮಸ್ತ ವಿಧವಾದ ತೇಜಸ್ಸಿನಿಂದ ತುಂಬಿದವನು ಅನಿರುದ್ಧರೂಪಿಯಾದ ಪರಮಾತ್ಮನು.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಅಹಂಕಾರಪ್ರಸೂತಾನಿ ಮಹಾಭೂತಾನಿ ಭಾರತ ॥೨೭॥

ಜನಮೇಜಯನೇ, ಪೃಥಿವಿ, ವಾಯು, ಆಕಾಶ, ಜಲ, ಅಗ್ನಿ ಎಂಬ ಐದು ಮಹಾಭೂತಗಳು ಅಹಂಕಾರತತ್ತ್ವದಿಂದ ಹುಟ್ಟಿದವು.

ಮಹಾಭೂತಾನಿ ಸೃಷ್ಟ್ವಾಥ ತದ್ಗುಣಾನ್ನಿರ್ಮಮೇ ಪುನಃ ।
ಭೂತೇಭ್ಯಶ್ಚೈವ ನಿಷ್ಪನ್ನಾ ಮೂರ್ತಿಮಂತೋಽಷ್ಟ ತಾನ್ ಶೃಣು ॥೨೮॥

ಅನಿರುದ್ಧರೂಪಿಯಾದ ಹರಿಯು ಮಹಾಭೂತಗಳನ್ನು ಸೃಷ್ಟಿಸಿದ ಬಳಿಕ ಅವುಗಳ ಗುಣಗಳನ್ನು ಪುನಃ ನಿರ್ಮಿಸಿದನು. ಆ ಪಂಚಭೂತಗಳಿಂದ ಎಂತಹ ಮೂರ್ತಿಗಳು ಉತ್ಪನ್ನವಾದವು ಎಂಬುದನ್ನು ಹೇಳುತ್ತೇನೆ, ಕೇಳು.

ಮರೀಚಿರಂಗಿರಾಶ್ಚಾತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾತ್ಮಾ ವೈ ಮನುಃ ಸ್ವಾಯಂಭುವಸ್ತಥಾ ।
ಜ್ಞೇಯಾಃ ಪ್ರಕೃತಯೋಷ್ಟೌ ತಾ ಯಾಸು ಲೋಕಾಃ ಪ್ರತಿಷ್ಠಿತಾಃ ॥೨೯॥

ಮರೀಚಿ, ಅಂಗಿರಸ, ಅತ್ರಿ , ಪುಲಸ್ತ್ಯ, ಪುಲಹ, ಕ್ರತು, ಮಹಾತ್ಮನಾದ ವಸಿಷ್ಠ, ಸ್ವಾಯಂಭುವ ಮನು - ಇವರೇ ಪಂಚಭೂತಗಳ ಮೂರ್ತಸ್ವರೂಪರು. ಪಂಚಭೂತಗಳಿಂದ ಪ್ರಾದುರ್ಭೂತರಾದ ಈ ಅಷ್ಟಪ್ರಕೃತಿಗಳಿಂದಲೇ ಲೋಕಗಳು ಪ್ರತಿಷ್ಠಿತವಾಗಿವೆ.

ವೇದಾನ್ ವೇದಾಂಗಸಂಯುಕ್ತಾನ್ ಯಜ್ಞಾನ್ ಯಜ್ಞಾಂಗಸಂಯುತಾನ್ ।
ನಿರ್ಮಮೇ ಲೋಕಸಿದ್ಧ್ಯರ್ಥಂ ಬ್ರಹ್ಮಾ ಲೋಕಪಿತಾಮಹಃ ।
ಅಷ್ಟಾಭ್ಯಃ ಪ್ರಕೃತಿಭ್ಯಶ್ಚ ಜಾತಂ ವಿಶ್ವಮಿದಂ ಜಗತ್ ॥೩೦॥

ಲೋಕಪಿತಾಮಹನಾದ ಚತುರ್ಮುಖಬ್ರಹ್ಮನು ವೇದಾಂಗಯುಕ್ತವಾದ ವೇದಗಳನ್ನು, ಯಜ್ಞಾಂಗ ಯುಕ್ತವಾದ ಯಜ್ಞಗಳನ್ನು ಲೋಕದ ಕಾರ್ಯಸಿದ್ಧಿಗಾಗಿ ನಿರ್ಮಿಸಿದನು. ಅದರಂತೆ ಹಿಂದೆ ಹೇಳಿದ ಎಂಟು ಋಷಿಗಳಿಂದಲೇ ಈ ಜಗತ್ತೆಲ್ಲವೂ ಅಭಿವ್ಯಕ್ತಿಯನ್ನು ಹೊಂದಿತು.

ರುದ್ರೋ ರೋಷಾತ್ಮಕೋ ಜಾತೋ ದಶಾನ್ಯಾನ್ ಸೋಽಸೃಜತ್ ಸ್ವಯಮ್ ।
ಏಕಾದಶೈತೇ ರುದ್ರಾಸ್ತು ವಿಕಾರಾಃ ಪುರುಷಾಃ ಸ್ಮೃತಾಃ ॥೩೧॥

ಚತುರ್ಮುಖ ಬ್ರಹ್ಮನ ಕೋಪದಿಂದ ರುದ್ರನು ಹುಟ್ಟಿದನು. ಆ ರುದ್ರನೇ ಉಳಿದ ಹತ್ತು ರುದ್ರರನ್ನು ಸೃಷ್ಟಿಸಿದನು. ಈ ಏಕಾದಶರುದ್ರರು ವಿಕಾರ ಪುರುಷರು ಎಂದು ಪ್ರಸಿದ್ಧರು.

ತೇ ರುದ್ರಾಃ ಪ್ರಕೃತಿಶ್ಚೈವ ಸರ್ವೇ ಚೈವ ಸುರರ್ಷಯಃ ।
ಉತ್ಪನ್ನಾ ಲೋಕಸಿದ್ಧ್ಯರ್ಥಂ ಬ್ರಹ್ಮಾಣಂ ಸಮುಪಸ್ಥಿತಾಃ ॥೩೨॥

ಏಕಾದಶ ರುದ್ರರು, ಅಷ್ಟಮೂರ್ತಿಗಳು, ಸಮಸ್ತ ದೇವತೆಗಳು ಲೋಕ ರಕ್ಷಣೆಗಾಗಿಯೇ ಹುಟ್ಟಿದರು. ಅವರೆಲ್ಲರೂ ಬ್ರಹ್ಮನ ಬಳಿ ಹೋಗಿ ಹೇಳಿದರು.

ವಯಂ ಹಿ ಸೃಷ್ಟಾ ಭಗವಂಸ್ತ್ವಯಾ ವೈ ಪ್ರಭವಿಷ್ಣುನಾ ।
ಯೇನ ಯಸ್ಮಿನ್ನಧೀಕಾರೇ ವರ್ತಿತವ್ಯಂ ಪಿತಾಮಹ ॥೩೩॥

ಪಿತಾಮಹನೇ, ಸರ್ವಸಮರ್ಥನಾದ ನಿನ್ನಿಂದ ನಾವೆಲ್ಲರೂ ಹುಟ್ಟಿದ್ದೇವೆ. ನಮ್ಮಲ್ಲಿ ಯಾರು ಯಾವ ಅಧಿಕಾರವನ್ನು ಹೊಂದಬೇಕು?

ಯೋಽಸೌ ತ್ವಯಾ ವಿನಿರ್ದಿಷ್ಟೋ ಅಧಿಕಾರೋಽರ್ಥಚಿಂತಕಃ ।
ಪರಿಪಾಲ್ಯಃ ಕಥಂ ತೇನ ಸೋಽಧಿಕಾರೋಧಿಕರ್ತೃಣಾ ॥೩೪॥

ಅರ್ಥಚಿಂತಕನಾದ ನೀನು ನಿರ್ದೇಶಿಸುವ ಯಾವ ಅಧಿಕಾರವಿದೆಯೋ ಅದನ್ನು ಅಧಿಕಾರ ಹೊಂದಿದ ವ್ಯಕ್ತಿಯು ಹೇಗೆ ಪರಿಪಾಲಿಸಬೇಕು.

ಪ್ರದಿಶಸ್ವ ಬಲಂ ತಸ್ಯ ಯೋಽಧಿಕಾರಾರ್ಥಚಿಂತಕಃ ।
ಏವಮುಕ್ತೋ ಮಹಾದೇವೋ ದೇವಾಂಸ್ತಾನಿದಮಬ್ರವೀತ್ ॥೩೫॥

ಯಾರು ಯಾವ ಅಧಿಕಾರವನ್ನು ಮಾಡಬೇಕು ಎಂದು ಬಯಸುತ್ತಾನೋ ಅವನಿಗೆ ಯೋಗ್ಯವಾದ ಬಲವನ್ನು ನೀನೇ ನೀಡು. ಈ ರೀತಿಯಾಗಿ ದೇವತೆಗಳು ಹೇಳಲು ಬ್ರಹ್ಮನು ದೇವತೆಗಳನ್ನು ಕುರಿತು ಹೀಗೆ ಹೇಳಿದನು.

ಸಾಧ್ವಹಂ ಜ್ಞಾಪಿತೋ ದೇವಾ ಯುಷ್ಮಾಭಿರ್ಭದ್ರಮಸ್ತು ವಃ ।
ಮಮಾಪ್ಯೇಷಾ ಸಮುತ್ಪನ್ನಾ ಚಿಂತಾ ಯಾ ಭವತಾಂ ಮತಾ ॥೩೬॥

ದೇವತೆಗಳೇ, ನೀವು ಉತ್ತಮ ವಿಷಯವನ್ನೇ ನನಗೆ ತಿಳಿಸಿರುತ್ತೀರಿ. ನಿಮಗೆಲ್ಲ ಮಂಗಳವಾಗಲಿ. ನಿಮಗೆ ಉಂಟಾದ ಚಿಂತೆಯು ನನ್ನ ಮನಸ್ಸಿನಲ್ಲಿಯೂ ಉಂಟಾಗಿದೆ.

ಲೋಕತಂತ್ರಸ್ಯ ಕೃತ್ಸ್ನಸ್ಯ ಕಥಂ ಕಾರ್ಯಃ ಪರಿಗ್ರಹಃ ।
ಕಥಂ ಬಲಕ್ಷಯೋ ನ ಸ್ಯಾದ್ಯುಷ್ಮಾಕಂ ಹ್ಯಾತ್ಮನಶ್ಚ ಮೇ ॥೩೭॥

ಮೂರುಲೋಕದ ಕಾರ್ಯಗಳನ್ನು ಹೇಗೆ ನಿರ್ವಹಿಸಬೇಕು? ಕಾರ್ಯ ನಿರ್ವಹಿಸುವಾಗ ಬಲವು ನಾಶ ಹೊಂದದಂತೆ ಆ ಮಹಾಕಾರ್ಯವನ್ನು ಹೇಗೆ ನಿರ್ವಹಿಸಬೇಕು ಎಂಬ ಚಿಂತೆಯು ನನ್ನ ಮನಸ್ಸಿನಲ್ಲಿ ಉಂಟಾಗಿದೆ.

ಇತಃ ಸರ್ವೇಽಪಿ ಗಚ್ಛಾಮಃ ಶರಣಂ ಲೋಕಸಾಕ್ಷಿಣಮ್ ।
ಮಹಾಪುರುಷಮವ್ಯಕ್ತಂ ಸ ನೋ ವಕ್ಷ್ಯತಿ ಯದ್ಧಿತಮ್ ॥೩೮॥

ನಮ್ಮೆಲ್ಲರಿಗೂ ರಕ್ಷಕನಾದ, ಲೋಕಸಾಕ್ಷಿ ಎನಿಸಿದ, ಮಹಾಪುರುಷನಾದ, ಅವ್ಯಕ್ತನಾದ ನಾರಾಯಣನ ಬಳಿ ನಾವು ಸಾಗೋಣ. ಅವನು ನಮಗೆ ಹಿತವಾದುದನ್ನು ಬೋಧಿಸುತ್ತಾನೆ.

ತತಸ್ತೇ ಬ್ರಹ್ಮಣಾ ಸಾರ್ಧಮೃಷಯೋ ವಿಬುಧಾಸ್ತಥಾ ।
ಕ್ಷೀರೋದಸ್ಯೋತ್ತರಂ ಕೂಲಂ ಜಗ್ಮುರ್ಲೋಕಹಿತಾರ್ಥಿನಃ ॥೩೯॥

ಬಳಿಕ ಸಮಸ್ತ ದೇವತೆಗಳು ಬ್ರಹ್ಮನ ಜೊತೆಗೆ ಕ್ಷೀರಸಮುದ್ರದ ಉತ್ತರದ ತೀರಕ್ಕೆ ತೆರಳಿದರು. ಲೋಕದ ಹಿತಚಿಂತನೆಯ ದೃಷ್ಟಿಯು ಅವರೆಲ್ಲರಿಗೂ ಇತ್ತು.

ತೇ ತಪಃ ಸಮುಪಾತಿಷ್ಠನ್ ಬ್ರಹ್ಮಣೋಕ್ತಂ ವೇದಕಲ್ಪಿತಮ್ ।
ಸ ಮಹಾನಿಯಮೋ ನಾಮ ತಪಶ್ಚರ್ಯಾ ಸುದಾರುಣಾ ॥೪೦॥

ಬ್ರಹ್ಮನು ಹೇಳಿದಂತೆ ವೇದೋಕ್ತವಾದ ತಪಸ್ಸನ್ನು ಅವರೆಲ್ಲರೂ ಆರಂಭಿಸಿದರು. ಮಹಾನಿಯಮ ಎಂಬ ಹೆಸರಿನ ಆ ತಪಶ್ಚರ್ಯವು ತುಂಬಾ ಕಠಿಣವಾಗಿತ್ತು.

ಊರ್ಧ್ವಂ ದೃಷ್ಟಿರ್ಬಾಹವಶ್ಚ ಏಕಾಗ್ರಂ ಚ ಮನೋಽಭವತ್ ।
ಏಕಪಾದಸ್ಥಿತಾಃ ಸಮ್ಯಕ್ಕಾಷ್ಠಭೂತಾಃ ಸಮಾಹಿತಾಃ ॥೪೧॥

ತಪಸ್ಸು ಮಾಡುತ್ತಿರುವ ದೇವತೆಗಳ ದೃಷ್ಟಿಯೆಲ್ಲವೂ ಊರ್ಧ್ವಮುಖವಾಗಿದ್ದಿತು. ತೋಳುಗಳನ್ನು ಮೇಲೆತ್ತಿದ್ದರು. ಮನಸ್ಸನ್ನು ನಿಗ್ರಹಿಸಿದ್ದರು. ಒಂದೇ ಕಾಲಿನಲ್ಲಿ ನಿಂತಿದ್ದರು. ದೇಹಗಳನ್ನು ಕಟ್ಟಿಗೆಗಳಂತೆ ನಿಶ್ಚೇಷ್ಟಗೊಳಿಸಿದ್ದರು.

ದಿವ್ಯಂ ವರ್ಷಸಹಸ್ರಂ ತೇ ತಪಸ್ತಪ್ತ್ವಾ ತದುತ್ತಮಮ್ ।
ಶುಶ್ರುವುರ್ಮಧುರಾಂ ವಾಣೀಂ ವೇದವೇದಾಂಗಭೂಷಿತಾಮ್ ॥೪೨॥

ಸಮಸ್ತ ದೇವತೆಗಳು ದೇವಮಾನದಲ್ಲಿ ಸಹಸ್ರ ವರ್ಷಗಳ ತನಕ ಉಗ್ರವಾದ ತಪಸ್ಸನ್ನು ಆಚರಿಸಿ ಬಳಿಕ, ವೇದ-ವೇದಾಂಗಗಳಿಂದ ಅಲಂಕೃತವಾದ, ಸುಮಧುರವಾದ ಮಾತನ್ನು ಕೇಳಿಸಿಕೊಂಡರು.

ಭೋ ಭೋಃ ಸಬ್ರಹ್ಮಕಾ ದೇವಾ ಋಷಯಶ್ಚ ತಪೋಧನಾಃ ।
ಸ್ವಾಗತೇನಾರ್ಚ್ಯ ವಃ ಸರ್ವಾನ್ ಶ್ರಾವಯೇ ವಾಕ್ಯಮುತ್ತಮಮ್ ॥೪೩॥

ಎಲೈ ಬ್ರಹ್ಮನಿಂದ ಕೂಡಿದ ಸಮಸ್ತ ದೇವತೆಗಳೇ, ತಪೋಧನರಾದ ಋಷಿಗಳೇ, ನಿಮ್ಮೆಲ್ಲರನ್ನೂ ಸ್ವಾಗತದ ಮೂಲಕ ಸತ್ಕರಿಸಿ, ನಿಮ್ಮೆಲ್ಲರಿಗೂ ಉತ್ತಮವಾದ ವಾಕ್ಯವನ್ನು ಕೇಳುವಂತೆ ಮಾಡುತ್ತೇನೆ.

ವಿಜ್ಞಾತಂ ವೋ ಮಯಾ ಕಾರ್ಯಂ ತಚ್ಚ ಲೋಕಹಿತಂ ಮಹತ್ ।
ಪ್ರವೃತ್ತಿಯುಕ್ತಂ ಕರ್ತವ್ಯಂ ಯುಷ್ಮತ್ಪ್ರಾಣೋಪಬೃಂಹಣಮ್ ॥೪೪॥

ನೀವು ಲೋಕಹಿತಕ್ಕೆ ಸಂಬಂಧಿಸಿದ ಕಾರ್ಯವನ್ನು ಮಾಡಲು ಆಗಮಿಸಿರುತ್ತೀರಿ ಎಂಬುದನ್ನು ನಾನು ತಿಳಿದಿರುತ್ತೇನೆ. ನಿಮ್ಮ ಪ್ರಾಣಶಕ್ತಿಯ ಅಭಿವೃದ್ಧಿಗಾಗಿ ಪ್ರವೃತ್ತಿ ಕರ್ಮಗಳನ್ನು ನೀವು ಆಚರಿಸಬೇಕು.

ಸುತಪ್ತಂ ವಸ್ತಪೋ ದೇವಾ ಮಮಾರಾಧನಕಾಮ್ಯಯಾ ।
ಭೋಕ್ಷ್ಯಥಾಸ್ಯ ಮಹಾಸತ್ತ್ವಾ ಸ್ತಪಸಃ ಫಲಮುತ್ತಮಮ್ ॥೪೫॥

ದೇವತೆಗಳೇ, ನನ್ನ ಆರಾಧನೆಯ ನಿಮಿತ್ತದಿಂದ ಉಗ್ರತಪಸ್ಸನ್ನಾಚರಿಸಿದ್ದೀರಿ. ಈ ತಪಸ್ಸಿನ ಫಲವಾಗಿ ಉತ್ತಮವಾದ ಫಲವನ್ನೇ ಅನುಭವಿಸುತ್ತೀರಿ.

ಏಷ ಬ್ರಹ್ಮಾ ಲೋಕಗುರುಃ ಸರ್ವಲೋಕಪಿತಾಮಹಃ ।
ಯೂಯಂ ಚ ವಿಬುಧಶ್ರೇಷ್ಠಾ ಮಾಂ ಯಜಧ್ವಂ ಸಮಾಹಿತಾಃ ॥೪೬॥

ಸಕಲ ಜಗತ್ತಿಗೆ ಮಹಾಗುರುವಾದ ಪಿತಾಮಹನಾದ ಬ್ರಹ್ಮನು, ದೇವಶ್ರೇಷ್ಠರಾದ ನೀವು ಏಕಾಗ್ರತೆಯಿಂದ ನನ್ನನ್ನೇ ಉದ್ದೇಶಿಸಿಕೊಂಡು ಯಜ್ಞವನ್ನು ಮಾಡಿರಿ.

ಸರ್ವೇ ಭಾಗಾನ್ ಕಲ್ಪಯಧ್ವಂ ಯಜ್ಞೇಷು ಮಮ ನಿತ್ಯಶಃ ।
ತಥಾ ಶ್ರೇಯೋ ವಿಧಾಸ್ಯಾಮಿ ಯಥಾಧೀಕಾರಮೀಶ್ವರಾಃ ॥೪೭॥

ಪ್ರತಿದಿನವೂ ನೀವೆಲ್ಲರೂ ಯಜ್ಞಗಳಲ್ಲಿ ನನಗೆ ಹವಿರ್ಭಾಗವನ್ನು ಕಲ್ಪಿಸಿ ಸಮರ್ಪಿಸಿರಿ. ನಿಮ್ಮ ಅಧಿಕಾರಕ್ಕೆ ಅನುಗುಣವಾದ ಶ್ರೇಯಸ್ಸಿನ ಮಾರ್ಗವನ್ನು ನಾನೇ ಉಂಟುಮಾಡುತ್ತೇನೆ.

ವ್ಯಾಖ್ಯಾನ ವಿಶೇಷ– ಮಹಾವಿಧಿಗಳಿಂದ ಆರಾಧಿಸುತ್ತಾ ದೇವತೆಗಳು ಯಾವ ಭಾಗವನ್ನು ಶ್ರೀಹರಿಗೆ ಕೊಡುತ್ತಾರೆ ಎಂದು ಹಿಂದೆ ಪ್ರಶ್ನೆ ಕೇಳಿದ್ದಕ್ಕೆ ಇಲ್ಲಿ ಶ್ರೀಹರಿಯು ಉತ್ತರಿಸಿದ್ದಾನೆ ಎಂದು ತಿಳಿಯಬೇಕು.

ಶ್ರುತ್ವೈತದ್ ದೇವದೇವಸ್ಯ ವಾಕ್ಯಂ ಹೃಷ್ಟತನೂರುಹಾಃ ।
ತತಸ್ತೇ ವಿಬುಧಾಃ ಸರ್ವೇ ಬ್ರಹ್ಮಾ ತೇ ಚ ಮಹರ್ಷಯಃ ॥೪೮॥

ವೇದದೃಷ್ಟೇನ ವಿಧಿನಾ ವೈಷ್ಣವಂ ಕ್ರತುಮಾಹರನ್ ।
ತಸ್ಮಿನ್ ಸತ್ರೇ ತದಾ ಬ್ರಹ್ಮಾ ಸ್ವಯಂ ಭಾಗಮಕಲ್ಪಯತ್ ।
ದೇವಾ ದೇವರ್ಷಯಶ್ಚೈವ ಸರ್ವೇ ಭಾಗಾನಕಲ್ಪಯನ್ ॥೪೯॥

ದೇವದೇವನಾದ ಭಗವಂತನ ಮಾತನ್ನು ಕೇಳಿಸಿಕೊಂಡ ದೇವತೆಗಳೆಲ್ಲರ ರೋಮಗಳು ನಿಮಿರಿ ನಿಂತವು. ಬಳಿಕ ಬ್ರಹ್ಮಾದಿ ಸಮಸ್ತ ದೇವತೆಗಳು, ಮಹರ್ಷಿಗಳು ವೇದೋಕ್ತವಾದ ವಿಧಿಯಿಂದ ವೈಷ್ಣವ ವಿಧಿಗಳನ್ನು ಮಾಡುತ್ತಾ ಆ ಯಜ್ಞಗಳಲ್ಲಿ ತಮ್ಮ ತಮ್ಮ ಭಾಗಗಳನ್ನು ವಿಷ್ಣುವಿಗೆ ಸಮರ್ಪಿಸಿದರು.

ತೇ ಕಾರ್ತಯುಗಧರ್ಮಾಣೋ ಭಾಗಾಃ ಪರಮಸತ್ಕೃತಾಃ ।
ಪ್ರಾಪುರಾದಿತ್ಯವರ್ಣಂ ತಂ ಪುರುಷಂ ತಮಸಃ ಪರಮ್ ।
ಬೃಹಂತಂ ಸರ್ವಗಂ ದೇವಮೀಶಾನಂ ವರದಂ ಪ್ರಭುಮ್ ॥೫೦॥

ಕೃತಯುಗದ ಧರ್ಮಕ್ಕನುಗುಣವಾಗಿ ಯಜ್ಞಭಾಗಗಳು ಎಲ್ಲರಿಂದಲೂ ಪುರಸ್ಕೃತವಾದವು. ಬ್ರಹ್ಮಾದಿ ದೇವತೆಗಳೆಲ್ಲ ವಿಷ್ಣುವನ್ನು ಆದಿತ್ಯರೂಪನೆಂದು, ಅಂತರ್ಯಾಮಿಯಾದ ಪುರುಷನೆಂದು, ತಮಸ್ಸಿನಿಂದ ಆಚೆ ಇರುವವನೆಂದು, ಗುಣಪರಿಪೂರ್ಣನೆಂದು, ಸರ್ವಾಂತರ್ಯಾಮಿ ಎಂದು, ಕ್ರೀಡಾದಿ ಗುಣವಿಶಿಷ್ಟನೆಂದು, ಈಶ್ವರನೆಂದು, ವರದನೆಂದು, ಪ್ರಭುವೆಂದು ಕೊಂಡಾಡಿದರು.

ತತೋಽಥ ವರದೋ ದೇವಸ್ತಾನ್ ಸರ್ವಾನಮರಾನ್ ಸ್ಥಿತಾನ್ ।
ಅಶರೀರೋ ಬಭಾಷೇದಂ ವಾಕ್ಯಂ ಖಸ್ಥೋ ಮಹೇಶ್ವರಃ ॥೫೧॥

ಬಳಿಕ ವರದನಾದ, ಮಹೇಶ್ವರನಾದ, ದೇವದೇವನಾದ ಭಗವಂತನು ಸಮಸ್ತ ದೇವತೆಗಳನ್ನುದ್ದೇಶಿಸಿ ಅಶರೀರನಾಗಿಯೇ ಹೀಗೆ ಹೇಳಿದನು.

ಯೇನ ಯಃ ಕಲ್ಪಿತೋ ಭಾಗಃ ಸ ತಥಾ ಸಮುಪಾಗತಃ ।
ಪ್ರೀತೋಽಹಂ ಪ್ರದಿಶಾಮ್ಯದ್ಯ ಫಲಮಾವೃತ್ತಿಲಕ್ಷಣಮ್ ॥೫೨॥

ಯಾರು ಯಾವ ಭಾಗವನ್ನು ಸಮರ್ಪಿಸಿದ್ದಾರೋ ಆ ಭಾಗವು ನನಗೆ ತಲುಪಿದೆ. ಪ್ರೀತನಾದ ನಾನು ಆವೃತ್ತಿ ಎಂಬ ಹೆಸರಿನ ಫಲವನ್ನು ನಿಮಗೆ ನೀಡುತ್ತೇನೆ.

ವ್ಯಾಖ್ಯಾನ ವಿಶೇಷ– ಇಂದ್ರ ಮೊದಲಾದ ನಾಮಗಳಿಂದ ಭಗವಂತನಿಗೆ ನೀಡುವ ಆಹುತಿಯು ನಿವೃತ್ತಿ ಧರ್ಮ ಎನಿಸುತ್ತದೆ. ಇಂದ್ರಾದಿ ನಾಮಗಳಿಂದ ದೇವತೆಗಳಿಗೆ ನೀಡುವ ಆಹುತಿಯು ಪ್ರವೃತ್ತಿ ಧರ್ಮ ಎನಿಸುತ್ತದೆ.

ಏತದ್ವೋ ಲಕ್ಷಣಂ ದೇವಾ ಮತ್ಪ್ರಸಾದಸಮುದ್ಭವಮ್ ।
ಯೂಯಂ ಯಜ್ಞೈರಿಜ್ಯಮಾನಾಃ ಸಮಾಪ್ತವರದಕ್ಷಿಣೈಃ ।
ಯುಗೇ ಯುಗೇ ಭವಿಷ್ಯಧ್ವಂ ಪ್ರವೃತ್ತಿಫಲಭೋಗಿನಃ ॥೫೩॥

ದೇವತೆಗಳೇ, ನನ್ನ ಅನುಮತಿಯಿಂದ ಪ್ರವೃತ್ತಿ ಲಕ್ಷಣವುಳ್ಳ ಫಲವನ್ನು ನೀವೆಲ್ಲರೂ ಹೊಂದುತ್ತೀರಿ. ಪ್ರತಿಯೊಂದು ಯಜ್ಞದಲ್ಲಿಯೂ, ಪ್ರತಿಯುಗದಲ್ಲಿಯೂ ನೀವೇ ಯಜಮಾನರಾಗಿ ಉತ್ತಮ ದಕ್ಷಿಣೆಗಳಿಂದ ಕೂಡಿದ ಯಾಗಗಳನ್ನು ಆಚರಿಸಿ, ಪ್ರವೃತ್ತಿ ಫಲ ರೂಪವಾದ ಭೋಗಗಳಿಗೆ ಭಾಗಿಗಳಾಗಿರಿ.

ಯಜ್ಞೈರ್ಯೇ ಚಾಪಿ ಯಕ್ಷ್ಯಂತಿ ಸರ್ವಲೋಕೇಷು ವೈ ಸುರಾಃ ।
ಕಲ್ಪಯಿಷ್ಯಂತಿ ವೋ ಭಾಗಾಂಸ್ತೇ ನರಾ ವೇದಕಲ್ಪಿತಾನ್ ॥೫೪॥

ಸಮಸ್ತ ಲೋಕಗಳಲ್ಲಿಯೂ ಯಜ್ಞಗಳ ಮೂಲಕ ಯಾರು ಆರಾಧಿಸಲು ಬಯಸುತ್ತಾರೋ ಅಂತಹ ಮನುಷ್ಯರು ವೇದದಲ್ಲಿ ತಿಳಿಸಿದಂತೆ ನಿಮಗೆ ಯಜ್ಞ ಭಾಗಗಳನ್ನು ನೀಡುತ್ತಾರೆ.

ಯೋ ಮೇ ಯಥಾ ಕಲ್ಪಿತವಾನ್ ಭಾಗಮಸ್ಮಿನ್ಮಹಾಕ್ರತೌ ।
ಸ ತಥಾ ಯಜ್ಞಭಾಗಾಹೋ ವೇದಸೂತ್ರೇ ಮಯಾ ಕೃತಃ ॥೫೫॥

ಚತುರ್ಮುಖ ಬ್ರಹ್ಮನು 'ಬ್ರಹ್ಮಣೇ ಸ್ವಾಹಾ' ಎಂಬ ಮಂತ್ರದಿಂದ ಯಾವ ಭಾಗವನ್ನು ಕಲ್ಪಿಸಿದ್ದಾನೋ ಆ ಮಂತ್ರದ ಮೂಲಕ ಆ ಭಾಗವನ್ನು ಅವನೇ ಸ್ವೀಕರಿಸಲಿ. ಅದರಂತೆ ವೇದಸೂತ್ರದಲ್ಲಿ ಯಜ್ಞಭಾಗಾರ್ಹರಾದ ಅಧಿಕಾರಿಗಳು ಯಾರು ಎಂಬುದನ್ನು ನಾನೇ ವ್ಯವಸ್ಥೆ ಮಾಡಿರುತ್ತೇನೆ.

ಯೂಯಂ ಲೋಕಾನ್ ಧಾರಯಧ್ವಂ ಯಜ್ಞಭಾಗಫಲೋದಿತಾಃ ।
ಸರ್ವಾರ್ಥಚಿಂತಕಾ ಲೋಕೇ ಯಥಾಧೀಕಾರನಿರ್ಮಿತಾಃ ॥೫೬॥

ನೀವೆಲ್ಲರೂ ಲೋಕಗಳನ್ನು ಧರಿಸಿರಿ. ಯಜ್ಞಭಾಗದ ಫಲಗಳನ್ನು ಸ್ವೀಕರಿಸಿರಿ. ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಎಲ್ಲರಿಗೂ ಅವರವರ ಪ್ರಯೋಜನವನ್ನು ನೀಡುವವರಾಗಿರಿ.

ಯಾಃ ಕ್ರಿಯಾಃ ಪ್ರಚರಿಷ್ಯಂತಿ ಪ್ರವೃತ್ತಿಫಲಸತ್ಕೃತಾಃ ।
ತಾಭಿರಾಪ್ಯಾಯಿತಬಲಾ ಲೋಕಾನ್ ವೈ ಧಾರಯಿಷ್ಯಥ ॥೫೭॥

ಪ್ರವೃತ್ತಿ ಫಲದಿಂದ ಕೂಡಿರುವ ಯಾವ ಯಜ್ಞ ಕರ್ಮಗಳನ್ನು ಲೋಕದಲ್ಲಿ ಹೆಚ್ಚಾಗಿ ಮಾಡುತ್ತಾರೋ ಆ ಕರ್ಮಗಳಿಂದ ಲಭಿಸುವ ಯಜ್ಞಭಾಗಗಳಿಂದ ನೀವು ಬಲವನ್ನು ಪಡೆದು ಲೋಕಗಳನ್ನು ಧರಿಸಿರಿ.

ಯೂಯಂ ಹಿ ಭಾವಿತಾ ಲೋಕೇ ಸರ್ವಯಜ್ಞೇಷು ಮಾನವೈಃ ।
ಮಾಂ ತತೋ ಭಾವಯಿಷ್ಯಧ್ವಮೇಷಾ ವೋ ಭಾವನಾ ಮಮ ॥೫೮॥

ಮಾನವರು ಮಾಡುವ ಸರ್ವಯಜ್ಞಗಳಲ್ಲಿಯೂ ನೀವು ಸಂಧಿಸಿದವರಾಗಿ ಆ ಭಾಗಗಳನ್ನು ಪಡೆದು ಸಂತುಷ್ಟರಾಗಿರಿ. ಅನಂತರ ವೈಷ್ಣವ ಯಜ್ಞದ ಮೂಲಕ ನನ್ನನ್ನು ನೀವು ಆರಾಧಿಸಿರಿ. ಇದೇ ನಾನು ನಿಮಗೆ ಉಪದೇಶಿಸುವ ಸ್ವಾಭಿಪ್ರಾಯ.

ಇತ್ಯರ್ಥಂ ನಿರ್ಮಿತಾ ವೇದಾ ಯಜ್ಞಾಶ್ಚೌಷಧಿಭಿಃ ಸಹ ।
ಏಭಿಃ ಸಮ್ಯಕ್‌ಪ್ರಯುಕ್ತೈರ್ಹಿ ಪ್ರೀಯಂತೇ ದೇವತಾಃ ಕ್ಷಿತೌ ॥೫೯॥

ಈ ಕಾರಣದಿಂದಲೇ ವೇದಗಳನ್ನು, ಓಷಧಿಗಳಿಂದ ಯುಕ್ತವಾದ ಯಜ್ಞಗಳನ್ನು ನಾನು ಸೃಷ್ಟಿಸಿದ್ದೇನೆ. ಯಜ್ಞಗಳನ್ನು ಶ್ರದ್ಧೆಯಿಂದ ಭೂಮಿಯಲ್ಲಿ ಅನುಷ್ಠಾನ ಮಾಡುವುದರಿಂದ ದೇವತೆಗಳು ಪ್ರೀತರಾಗುತ್ತಾರೆ.

ನಿರ್ಮಾಣಮೇತದ್ಯುಷ್ಮಾಕಂ ಪ್ರವೃತ್ತಿಗುಣಕಲ್ಪಿತಮ್ ।
ಮಯಾ ಕೃತಂ ಸುರಶ್ರೇಷ್ಠಾ ಯಾವತ್ಕಲ್ಪಕ್ಷಯಾದಿತಿ ।
ಚಿಂತಯಧ್ವಂ ಲೋಕಹಿತಂ ಯಥಾಧಿಕಾರಮೀಶ್ವರಾಃ ॥೬೦॥

ಪ್ರವೃತ್ತಿ ಗುಣಗಳಿಂದ ಕೂಡಿದ ಯಜ್ಞಗಳು ನಿಮಗಾಗಿಯೇ ನನ್ನಿಂದ ನಿರ್ಮಿತವಾಗಿವೆ. ಕಲ್ಪದ ವಿನಾಶದ ತನಕ ನಿಮ್ಮ ನಿಮ್ಮ ಅಧಿಕಾರಗಳಿಗೆ ಅನುಗುಣವಾಗಿ ಲೋಕಹಿತವನ್ನು ಚಿಂತಿಸಿರಿ.

ಮರೀಚಿರಂಗಿರಾಶ್ಚಾತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠ ಇತಿ ಸಪ್ತೈತೇ ಮಾನಸಾ ನಿರ್ಮಿತಾ ಹಿ ವೈ ॥೬೧॥

ಮರೀಚಿ, ಅಂಗಿರ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ - ಈ ಏಳು ಋಷಿಗಳು ಬ್ರಹ್ಮನ ಮನಸ್ಸಿನಿಂದ ನಿರ್ಮಿತರಾದವರು.

ಏತೇ ವೇದವಿದೋ ಮುಖ್ಯಾ ವೇದಾಚಾರ್ಯಾಶ್ಚ ಕಲ್ಪಿತಾಃ ।
ಪ್ರವೃತ್ತಿಧರ್ಮಿಣಶ್ಚೈವ ಪ್ರಾಜಾಪತ್ಯೇನ ಕಲ್ಪಿತಾಃ ॥೬೨॥

ಇವರೆಲ್ಲರೂ ವೇದಜ್ಞಾನಿಗಳಲ್ಲಿ ಮುಖ್ಯರು. ವೇದಾಚಾರ್ಯರೆಂದೇ ನಿಯೋಜಿತರು. ಪ್ರವೃತ್ತಿ ಧರ್ಮಾವಲಂಬರು. ಪ್ರಜಾಪತಿ ಸ್ಥಾನದಲ್ಲಿ ಪ್ರತಿಷ್ಠಿತರು.

ಅಯಂ ಕ್ರಿಯಾವತಾಂ ಪಂಥಾ ವ್ಯಕ್ತೀಭೂತಃ ಸನಾತನಃ ।
ಅನಿರುದ್ಧ ಇತಿ ಪ್ರೋಕ್ತೋ ಲೋಕಸರ್ಗಕರಃ ಪ್ರಭುಃ ॥೬೩॥

ಈ ಸನಾತನವಾದ ಕರ್ಮಮಾರ್ಗವು ಕ್ರಿಯಾವಂತರಿಗಾಗಿಯೇ ನಿರ್ಮಿತವಾಗಿದೆ. ಲೋಕವನ್ನು ಸೃಷ್ಟಿಮಾಡಿದ ಪ್ರಭುವಾದ ಅನಿರುದ್ಧನು ಹೀಗೆಯೇ ತಿಳಿಸಿದ್ದಾನೆ.

ಸನಃ ಸನತ್ಸುಜಾತಶ್ಚ ಸನಕಃ ಸಸನಂದನಃ ।
ಸನತ್ಕುಮಾರಃ ಕಪಿಲಃ ಸಪ್ತಮಶ್ಚ ಸನಾತನಃ ॥೬೪॥

ಸಪ್ತೈತೇ ಮಾನಸಾಃ ಪ್ರೋಕ್ತಾ ಋಷಯೋ ಬ್ರಹ್ಮಣಃ ಸುತಾಃ ।
ಸ್ವಯಮಾಗತವಿಜ್ಞಾನಾ ನಿವೃತ್ತಂ ಧರ್ಮಮಾಸ್ಥಿತಾಃ ॥೬೫॥

ಸನ, ಸನತ್ಸುಜಾತ, ಸನಕ, ಸನಂದನ, ಸನತ್ಕುಮಾರ, ಕಪಿಲ, ಏಳನೆಯವನಾದ ಸನಾತನ. ಈ ಏಳು ಋಷಿಗಳು ಬ್ರಹ್ಮನ ಮಾನಸ ಪುತ್ರರು. ಇವರು ಹುಟ್ಟಿನಿಂದಲೇ ಬ್ರಹ್ಮಜ್ಞಾನಿಗಳು. ಆದ್ದರಿಂದಲೇ ನಿವೃತ್ತ ಧರ್ಮವನ್ನು ಆಶ್ರಯಿಸಿರುತ್ತಾರೆ.

ಏತೇ ಯೋಗವಿದೋ ಮುಖ್ಯಾಃ ಸಾಂಖ್ಯಧರ್ಮವಿದಸ್ತಥಾ ।
ಆಚಾರ್ಯಾ ಮೋಕ್ಷಶಾಸ್ತ್ರೇ ಚ ಮೋಕ್ಷಧರ್ಮಪ್ರವರ್ತಕಾಃ ॥೬೬॥

ಇವರೆಲ್ಲರೂ ಪ್ರಮುಖವಾದ ಯೋಗವನ್ನು ಅರಿತವರು. ಸಾಂಖ್ಯಜ್ಞಾನವನ್ನು ಬಲ್ಲವರು. ಮೋಕ್ಷಶಾಸ್ತ್ರದಲ್ಲಿ ಆಚಾರ್ಯರು. ಮೋಕ್ಷಧರ್ಮವನ್ನು ತಿಳಿಸುವವರು.

ಯತೋಽಹಂ ಪ್ರಸೃತಃ ಪೂರ್ವಮವ್ಯಕ್ತಾತ್ ತ್ರಿಗುಣೋ ಮಹಾನ್ ।
ತಸ್ಮಾತ್ ಪರತರೋ ಯೋಽಸೌ ಕ್ಷೇತ್ರಜ್ಞ ಇತಿ ಕಲ್ಪಿತಃ ।
ಸೋಽಹಂ ಕ್ರಿಯಾವತಾಂ ಪಂಥಾಃ ಪುನರಾವೃತ್ತಿದುರ್ಲಭಃ ॥೬೭॥

ಯಾವ ಕಾರಣದಿಂದ ಅವ್ಯಕ್ತತತ್ತ್ವದಿಂದ ಮೂರು ಗುಣಗಳು, ಮಹತ್ತತ್ತ್ವವು ಉಂಟಾಯಿತೋ, ಮಹತ್ತತ್ತ್ವದಿಂದ ಅಹಂಕಾರತತ್ತ್ವವು ಉಂಟಾಯಿತೋ ಆ ಕಾರಣದಿಂದ ಅವ್ಯಕ್ತತತ್ತ್ವವು, ಅದಕ್ಕೆ ಅಭಿಮಾನಿಯಾದ ಲಕ್ಷ್ಮೀತತ್ತ್ವಕ್ಕಿಂತಲೂ ನಾನು ಪರತರನೆನಿಸಿದ್ದೇನೆ. ನನ್ನನ್ನೇ ಕ್ಷೇತ್ರಜ್ಞನೆನ್ನುತ್ತಾರೆ. ಕ್ಷೇತ್ರಜ್ಞನಾಗಿರುವ ನಾನು ಕ್ರಿಯಾವಂತರಿಗೆ ಮಾರ್ಗನೆನಿಸಿದ್ದೇನೆ. ಸಂಸಾರಕ್ಕೆ ತಿರುಗಿ ಬರುವ ಕರ್ಮಮಾರ್ಗಿಗಳಿಗೆ ನಾನು ದುರ್ಲಭನು.

ಯೋ ಯಥಾ ನಿರ್ಮಿತೋ ಜಂತುರ್ಯಸ್ಮಿನ್ಯಸ್ಮಿಂಶ್ಚ ಕರ್ಮಣಿ ।
ಪ್ರವೃತ್ತೌ ವಾ ನಿವೃತ್ತೌ ವಾ ತತ್ಫಲಂ ಸೋಽಶ್ನುತೇ ವಶಃ ॥೬೮॥

ಯಾವ ಮನುಷ್ಯನು ಯಾವ ರೀತಿಯಲ್ಲಿ ಪ್ರವೃತ್ತಿ ಕರ್ಮ, ನಿವೃತ್ತಿಕರ್ಮದಲ್ಲಿ ತೊಡಗುತ್ತಾನೋ ಆ ಮನುಷ್ಯನು ಆ ಕರ್ಮಕ್ಕನುಗುಣವಾಗಿ ಫಲವನ್ನು ಹೊಂದುತ್ತಾನೆ. ಅವನು ಭಗವಂತನ ವಶನು.

ಏಷ ಲೋಕಗುರುರ್ಬ್ರಹ್ಮಾ ಜಗದಾದಿಕರಃ ಪ್ರಭುಃ ।
ಏಷ ಮಾತಾ ಪಿತಾ ಚೈವ ಯುಷ್ಮಾಕಂ ಚ ಪಿತಾಮಹಃ ।
ಮಯಾನುಶಿಷ್ಟೋ ಭವಿತಾ ಸರ್ವಭೂತವರಪ್ರದಃ ॥೬೯॥

ಲೋಕಗುರುವಾದ, ಸೃಷ್ಟಿಕಾರಣನಾದ, ಪ್ರಭುವಾದ ಬ್ರಹ್ಮನು ನಿಮ್ಮೆಲ್ಲರಿಗೂ ತಂದೆ-ತಾಯಿ, ಅಜ್ಜ ಎಲ್ಲವೂ ಆಗಿದ್ದಾನೆ. ನನ್ನ ಆಜ್ಞೆಯಿಂದ ಇವನು ಸಮಸ್ತ ಪ್ರಾಣಿಗಳಿಗೆ ವರಪ್ರದನು.

ಅಸ್ಯ ಚೈವಾನುಜೋ ರುದ್ರೋ ಲಲಾಟಾದ್ಯಃ ಸಮುತ್ಥಿತಃ ।
ಬ್ರಹ್ಮಾನುಶಿಷ್ಟೋ ಭವಿತಾ ಸರ್ವತ್ರಸವರಪ್ರದಃ ॥೭೦॥

ಈ ಬ್ರಹ್ಮನ ಹಣೆಯಿಂದ ಪ್ರಾದುರ್ಭೂತನಾದ ಮಹರುದ್ರನೇ ಬ್ರಹ್ಮನ ಮಗನು. ಬ್ರಹ್ಮನ ಆದೇಶದಂತೆ ಈ ರುದ್ರನು ಸರ್ವಪ್ರಾಣಿಗಳನ್ನು ರಕ್ಷಿಸುತ್ತಾನೆ.

ಗಚ್ಛಧ್ವಂ ಸ್ವಾನಧೀಕಾರಾಂಶ್ಚಿಂತಯಧ್ವಂ ಯಥಾವಿಧಿ ।
ಪ್ರವರ್ತಂತಾಂ ಕ್ರಿಯಾಃ ಸರ್ವಾಃ ಸರ್ವಲೋಕೇಷು ಮಾಚಿರಮ್ ॥೭೧॥

ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ತೆರಳಿರಿ. ನಿಮ್ಮ ಅಧಿಕಾರವನ್ನು ಕುರಿತು ಯೋಚಿಸಿರಿ. ಲೋಕದಲ್ಲಿ ವೇಗವಾಗಿ ವೈದಿಕ ಕ್ರಿಯೆಗಳು ಆರಂಭವಾಗಲಿ.

ಪ್ರದೃಶ್ಯಂತಾಂ ಚ ಕರ್ಮಾಣಿ ಪ್ರಾಣಿನಾಂ ಗತಯಸ್ತಥಾ ।
ಪರಿನಿರ್ಮಿತಕಾಲಾನಿ ಆಯೂಂಷಿ ಚ ಸುರೋತ್ತಮಾಃ ॥೭೨॥

ಸಮಸ್ತ ಪ್ರಾಣಿಗಳಿಗೆ ನೀವೇ ಕರ್ಮಗಳನ್ನು ವಿಧಿಸಿರಿ. ಅವರವರ ಕರ್ಮಗಳಿಗೆ ಯೋಗ್ಯವಾಗಿ ಗತಿಗಳನ್ನು ನೀಡಿರಿ. ಪೂರ್ಣಾಯುಷ್ಯವನ್ನು ದಯಪಾಲಿಸಿರಿ.

ಇದಂ ಕೃತಯುಗಂ ನಾಮ ಕಾಲಃ ಶ್ರೇಷ್ಠಃ ಪ್ರವರ್ತತೇ ।
ಅಹಿಂಸ್ಯಾ ಯತ್ರ ಪಶವೋ ಯುಗೇಸ್ಮಿನ್ನೈತದನ್ಯಥಾ ।
ಚತುಷ್ಪಾತ್ ಸಕಲೋ ಧರ್ಮೋ ಭವಿಷ್ಯತ್ಯತ್ರ ವೈ ಸುರಾಃ ॥೭೩॥

ಈಗ ಕೃತಯುಗವೆಂಬ ಶ್ರೇಷ್ಠಕಾಲವು ನಡೆಯುತ್ತಿದೆ. ಎಲ್ಲರೂ ತಪೋನಿರತರಾದುದರಿಂದ ಹಿಂಸೆಯಿಂದ ದೂರರಾಗಿದ್ದಾರೆ. ಬೇರೆ ಯುಗದಲ್ಲಿ ಈ ರೀತಿಯಾದ ತಪಃಪ್ರವೃತ್ತಿಯು ಇರುವುದಿಲ್ಲ. ಕೃತಯುಗದಲ್ಲಿ ನಾಲ್ಕು ಪಾದಗಳಿಂದ ಕೂಡಿದ ಸಮಸ್ತ ಧರ್ಮವು ಇರುತ್ತದೆ.

ತತಸ್ತ್ರೇತಾಯುಗಂ ನಾಮ ತ್ರಯೀ ಯತ್ರ ಭವಿಷ್ಯತಿ ।
ಪ್ರೋಕ್ಷಿತಾ ಯತ್ರ ಪಶವೋ ವಧಂ ಪ್ರಾಪ್ಸ್ಯಂತಿ ವೈ ಮಖೇ ।
ತತ್ರ ಪಾದಚತುರ್ಥೋ ವೈ ಧರ್ಮಸ್ಯ ನ ಭವಿಷ್ಯತಿ ॥೭೪॥

ಮೂರು ವೇದಗಳು ಯಾವ ಯುಗದಲ್ಲಿರುತ್ತವೋ ಅದನ್ನು ತ್ರೇತಾಯುಗ ಎನ್ನುತ್ತಾರೆ. ತ್ರೇತಾಯುಗದಲ್ಲಿ ಮಂತ್ರದಿಂದ ಪ್ರೋಕ್ಷಿತವಾದ ಪಶುಗಳು ಯಜ್ಞಗಳಲ್ಲಿ ವಧಿಸಲ್ಪಡುತ್ತವೆ. ಧರ್ಮದ ನಾಲ್ಕನೆಯ ಒಂದು ಪಾದವು ಮುಕ್ತವಾಗುತ್ತದೆ.

ತತೋ ವೈ ದ್ವಾಪರಂ ನಾಮ ಮಿಶ್ರಃ ಕಾಲೋ ಭವಿಷ್ಯತಿ ।
ದ್ವಿಪಾದಹೀನೋ ಧರ್ಮಶ್ಚ ಯುಗೇ ತಸ್ಮಿನ್ ಭವಿಷ್ಯತಿ ॥೭೫॥

ತ್ರೇತಾಯುಗದ ಬಳಿಕ ದ್ವಾಪರಯುಗವು. ಧರ್ಮಾಧರ್ಮದ ಮೇಲನದಿಂದ ಕೂಡಿರುತ್ತದೆ. ಧರ್ಮದ ಎರಡು ಪಾದಗಳು ದ್ವಾಪರದಲ್ಲಿ ಕಡಿಮೆಯಾಗುತ್ತವೆ.

ತತಸ್ತಿಷ್ಯೇಽಥ ಸಂಪ್ರಾಪ್ತೇ ಯುಗೇ ಕಲಿಪುರಸ್ಕೃತೇ ।
ಏಕಪಾದಸ್ಥಿತೋ ಧರ್ಮೋ ಯತ್ರ ತತ್ರ ಭವಿಷ್ಯತಿ ॥೭೬॥

ದ್ವಾಪರವು ಕಳೆದ ಬಳಿಕ ಪುಷ್ಯನಕ್ಷತ್ರದಲ್ಲಿ ಕಲಿಯುಗವು ಆರಂಭವಾಗುತ್ತದೆ. ಕಲಿಯುಗದಲ್ಲಿ ಧರ್ಮದ ಒಂದು ಪಾದವು ಮಾತ್ರ ಉಳಿದಿರುತ್ತದೆ.

ದೇವಾಃ

ಏಕಪಾದಸ್ಥಿತೇ ಧರ್ಮೇ ಯತ್ರ ಕ್ವಚನ ಗಾಮಿನಿ ।
ಕಥಂ ಕರ್ತವ್ಯಮಸ್ಮಾಭಿರ್ಭಗವಂಸ್ತದ್ ವದಸ್ವ ನಃ ॥೭೭॥

ದೇವತೆಗಳು– ಕಲಿಯುಗದಲ್ಲಿ ಧರ್ಮವು ಒಂದೇ ಪಾದದಿಂದ ನಿಂತಿರಲು ನಾವು ಯಾವ ರೀತಿಯಾದ ಕರ್ತವ್ಯವನ್ನು ಮಾಡಬೇಕು? ಭಗವಂತನೇ ನಮಗೆ ತಿಳಿಸು.

ಶ್ರೀಭಗವಾನ್

ಯತ್ರ ವೇದಾಶ್ಚ ಯಜ್ಞಾಶ್ಚ ತಪಃ ಸತ್ಯಂ ದಮಸ್ತಥಾ ।
ಅಹಿಂಸಾಧರ್ಮಸಂಯುಕ್ತಾಃ ಪ್ರಚರೇಯುಃ ಸುರೋತ್ತಮಾಃ ।
ಸ ವೈ ದೇಶಃ ಸೇವಿತವ್ಯೋ ಮಾ ವೋಽಧರ್ಮಃ ಪದಾ ಸ್ಪೃಶೇತ್ ॥

ಶ್ರೀಭಗವಾನ್– ದೇವತೆಗಳೇ, ಯಾವ ದೇಶದಲ್ಲಿ ವೇದ, ಯಜ್ಞ, ತಪಸ್ಸು, ಸತ್ಯ, ಇಂದ್ರಿಯನಿಗ್ರಹ, ಅಹಿಂಸಾಧರ್ಮಗಳು ಪ್ರಚಲಿತವಾಗಿರುತ್ತವೋ ಆ ದೇಶವನ್ನೇ ನೀವು ಆಶ್ರಯಿಸಿರಿ. ನಿಮ್ಮನ್ನು ಅಧರ್ಮವು ಕಾಲಿನಿಂದಲೂ ಮುಟ್ಟಲಾಗದು.

ವ್ಯಾಸಃ

ತೇಽನುಶಿಷ್ಟಾ ಭಗವತಾ ದೇವಾಃ ಸರ್ಷಿಗಣಾಸ್ತಥಾ ।
ನಮಸ್ಕೃತ್ವಾ ಭಗವತೇ ಜಗ್ಮುರ್ದೇಶಾನ್ ಯಥೇಪ್ಸಿತಾನ್ ॥೭೯॥

ವ್ಯಾಸರು– ಭಗವಂತನಿಂದ ಆಜ್ಞಪ್ತರಾದ ದೇವತೆಗಳು ಋಷಿಗಳ ಜೊತೆಗೆ ಪರಮಾತ್ಮನಿಗೆ ನಮಸ್ಕರಿಸಿ, ತಮಗೆ ಇಷ್ಟವಾದ ಸ್ಥಳಗಳಿಗೆ ಹೊರಟು ಹೋದರು.

ಗತೇಷು ತ್ರಿದಿವೌಕಃಸು ಬ್ರಹ್ಮೈಕಃ ಪರ್ಯವಸ್ಥಿತಃ ।
ದಿದೃಕ್ಷುರ್ಭಗವಂತಂ ತಮನಿರುದ್ಧತನೌ ಸ್ಥಿತಮ್ ॥೮೦॥

ಸ್ವರ್ಗದ ದೇವತೆಗಳೆಲ್ಲರೂ ತಮ್ಮ ತಮ್ಮ ನಿರ್ದಿಷ್ಟ ಸ್ಥಳಗಳಿಗೆ ತೆರಳಿದ ಬಳಿಕ ಬ್ರಹ್ಮನೊಬ್ಬನೇ ಅನಿರುದ್ಧರೂಪಿಯಾದ ಭಗವಂತನನ್ನು ನೋಡಬೇಕೆಂದು ಅಲ್ಲಿನಿಂತನು.

ತಂ ದೇವೋ ದರ್ಶಯಾಮಾಸ ಕೃತ್ವಾ ಹಯಶಿರೋ ಮಹತ್ ।
ಸಾಂಗಾನಾವರ್ತಯನ್ ವೇದಾನ್ ಕಮಂಡಲುಗಣಿತ್ರಧೃಕ್ ॥೮೧॥

ಆ ಸಮಯದಲ್ಲಿ ಭಗವಂತನು ಬೃಹತ್ತಾದ ಹಯಗ್ರೀವರೂಪವನ್ನು ಧರಿಸಿ, ಬ್ರಹ್ಮನಿಗೆ ದರ್ಶನವನ್ನು ನೀಡಿದನು. ಕಮಂಡಲು, ತ್ರಿದಂಡಗಳನ್ನು ಧರಿಸಿದ ದೇವದೇವನು ಷಡಂಗಗಳಿಂದ ಕೂಡಿದ ವೇದಗಳನ್ನು ಅವನಿಗೆ ಉಪದೇಶಿಸಿದನು.

ತತೋಶ್ವಶಿರಸಂ ದೃಷ್ಟ್ವಾ ತಂ ದೇವಮಮಿತೌಜಸಮ್ ।
ಲೋಕಕರ್ತಾ ಪ್ರಭುರ್ಬ್ರಹ್ಮಾ ಲೋಕಾನಾಂ ಹಿತಕಾಮ್ಯಯಾ ॥೮೨॥

ಮೂರ್ಧ್ನಾ ಪ್ರಣಮ್ಯ ವರದಂ ತಸ್ಥೌ ಪ್ರಾಂಜಲಿರಗ್ರತಃ ।
ಸ ಪರಿಷ್ವಜ್ಯ ದೇವೇನ ವಚನಂ ಶ್ರಾವಿತಸ್ತದಾ ॥೮೩॥

ಲೋಕನಿರ್ಮಾತೃವಾದ, ಪ್ರಭುವಾದ ಬ್ರಹ್ಮನು ಮಹಾತೇಜಸ್ವಿಯಾದ ಹಯಗ್ರೀವನನ್ನು ಕಂಡು, ಲೋಕಗಳ ಹಿತವನ್ನು ಬಯಸಿ, ತಲೆಬಾಗಿ ಹಯಗ್ರೀವನಿಗೆ ನಮಸ್ಕರಿಸಿ, ಅವನ ಮುಂದೆ ನಿಂತನು. ಹಯಗ್ರೀವನು ಬ್ರಹ್ಮನನ್ನು ಆದರದಿಂದ ಆಲಿಂಗಿಸಿ ಹೀಗೆ ಹೇಳಿದನು.

ಲೋಕಕಾರ್ಯಗತೀಃ ಸರ್ವಾಸ್ತ್ವಂ ಚಿಂತಯ ಯಥಾವಿಧಿ ।
ಧಾತಾ ತ್ವಂ ಸರ್ವಭೂತಾನಾಂ ತ್ವಂ ಪ್ರಭುರ್ಜಗತೋ ಗುರುಃ ।
ತ್ವಯ್ಯಾವೇಶಿತಭಾರೋಹಂ ಧೃತಿಂ ಪ್ರಾಪ್ಸ್ಯಾಮ್ಯಥಾಂಜಸಾ ॥೮೪॥

ಬ್ರಹ್ಮದೇವನೇ, ಲೋಕಗಳ ಸಮಸ್ತ ಕರ್ಮಗಳು, ಕರ್ಮಾನುಷ್ಠಾನದಿಂದ ಲಭಿಸುವ ಗತಿ, ಇವುಗಳನ್ನು ವಿಧಿಬದ್ಧವಾಗಿ ಯೋಚಿಸು. ನೀನು ಸಮಸ್ತ ಪ್ರಾಣಿಗಳಿಗೂ ಪಾಲಕನೂ, ಪ್ರಭುವೂ, ಗುರುವೂ ಆಗಿರುವಿ. ನಿನ್ನ ಮೇಲೆ ಜಗತ್ತಿನ ರಕ್ಷಣೆಯ ಭಾರವನ್ನು ವಹಿಸಿ ನಾನು ನಿಶ್ಚಿಂತನಾಗಿರುತ್ತೇನೆ.

ಯದಾ ಚ ಸುರಕಾರ್ಯಂ ತೇ ಅವಿಷಹ್ಯಂ ಭವಿಷ್ಯತಿ ।
ಪ್ರಾದುರ್ಭಾವಂ ಗಮಿಷ್ಯಾಮಿ ತದಾತ್ಮಜ್ಞಾನದೇಶಿಕಃ ॥೮೫॥

ಯಾವಾಗ ನೀನು ದೇವತೆಗಳ ಕಾರ್ಯವು ಅಸಾಧ್ಯವೆಂದು ನೋಡುತ್ತೀಯೋ ನಾನು ನನ್ನ ಸ್ವರೂಪವನ್ನು ಉಪದೇಶ ಮಾಡುವ ದೃಷ್ಟಿಯಿಂದ ನಿನ್ನ ಮುಂದೆ ಆವಿರ್ಭವಿಸುತ್ತೇನೆ.

ಏವಮುಕ್ತ್ವಾ ಹಯಶಿರಾಸ್ತತ್ರೈವಾಂತರಧೀಯತ ।
ತೇನಾನುಶಿಷ್ಟೋ ಬ್ರಹ್ಮಾಪಿ ಸ್ವಂ ಲೋಕಮಚಿರಾದ್ ಗತಃ ॥೮೬॥

ಹಯಗ್ರೀವನು ಬ್ರಹ್ಮನಿಗೆ ಹೀಗೆ ಹೇಳಿ ಅದೃಶ್ಯನಾದನು. ಪರಮಾತ್ಮನಿಂದ ಆಜ್ಞಪ್ತನಾದ ಬ್ರಹ್ಮನೂ ತನ್ನ ಲೋಕಕ್ಕೆ ತೆರಳಿದನು.

ಏವಮೇಷ ಮಹಾಭಾಗಃ ಪದ್ಮನಾಭಃ ಸನಾತನಃ ।
ಯಜ್ಞೇಷ್ವಗ್ರಹರಃ ಪ್ರೋಕ್ತೋ ಯಜ್ಞಧಾರೀ ಚ ನಿತ್ಯದಾ ॥೮೭॥

ಹೀಗೆ ಮಹಾಭಾಗನಾದ, ಸನಾತನನಾದ ಪದ್ಮನಾಭನು ನಿತ್ಯವೂ ಯಜ್ಞಧಾರಿಯು. ಯಜ್ಞದ ಮೊದಲನೆಯ ಹವಿಸ್ಸನ್ನು ಸ್ವೀಕರಿಸಲು ಅರ್ಹನು ಎಂದು ಹೇಳಲ್ಪಟ್ಟಿದೆ.

ನಿವೃತ್ತಿಂ ಚಾಸ್ಥಿತೋ ಧರ್ಮಂ ಗತಿಮಕ್ಷಯಧರ್ಮಿಣಾಮ್ ।
ಪ್ರವೃತ್ತಿಧರ್ಮಾನ್ ವಿದಧೇ ಕೃತ್ವಾ ಲೋಕಸ್ಯ ಚಿತ್ರತಾಮ್ ॥೮೮॥

ನಿವೃತ್ತಿಧರ್ಮವನ್ನು ಆಶ್ರಯಿಸಿರುವವನು. ಮೋಕ್ಷಧರ್ಮಿಗಳಾದ ಮಹಾತ್ಮರಿಗೆ ಸದ್ಗತಿಯನ್ನು ನೀಡುವವನು. ಲೋಕಕ್ಕೆ ವಿಚಿತ್ರವಾದ ಮನಸ್ಸಿನ ಪ್ರವೃತ್ತಿಯನ್ನುಂಟು ಮಾಡಿ ಅದಕ್ಕನುಸಾರವಾಗಿ ಪ್ರವೃತ್ತಿ ಧರ್ಮವನ್ನು ನಿರ್ಮಿಸುವವನು.

ಸ ಆದಿಃ ಸ ಮಧ್ಯಃ ಸ ಚಾಂತಃ ಪ್ರಜಾನಾಂ
ಸ ಧಾತಾ ಸ ಧೇಯಃ ಸ ಕರ್ತಾ ಸ ಕಾರ್ಯಮ್ ।
ಯುಗಾಂತೇ ಸ ಸುಪ್ತಃ ಸುಸಂಕ್ಷಿಪ್ಯ ಲೋಕಾನ್
ಯುಗಾದೌ ಪ್ರಬುದ್ಧೋ ಜಗದ್ ಹ್ಯುತ್ಸಸರ್ಜ ॥೮೯॥

ಭಗವಂತನೇ ಆದಿಯೂ, ಮಧ್ಯನೂ, ಅಂತನೂ, ಪ್ರಜೆಗಳನ್ನು ಧರಿಸುವವನೂ, ಪೋಷಿಸುವವನೂ ಅವನೇ ಕರ್ತೃವೂ, ಅವನೇ ಅವತರಿಸಲು ಯೋಗ್ಯನು. ಯುಗದ ಕೊನೆಯಲ್ಲಿ ಮಲಗಿಕೊಂಡೇ ಸಮಗ್ರ ಲೋಕಗಳನ್ನು ಸೂಕ್ಷ್ಮರೂಪಕ್ಕೆ ಕೊಂಡೊಯ್ದು ಯುಗದ ಆರಂಭದಲ್ಲಿ ಎದ್ದವನಾಗಿ ಸಮಸ್ತ ಜಗತ್ತನ್ನು ಸೃಷ್ಟಿಸಿದನು.

ತಸ್ಮೈ ನಮಧ್ವಂ ದೇವಾಯ ನಿರ್ಗುಣಾಯ ಗುಣಾತ್ಮನೇ ।
ಅಜಾಯ ವಿಶ್ವರೂಪಾಯ ಧಾಮ್ನೇ ಸರ್ವದಿವೌಕಸಾಮ್ ॥೯೦॥

ಅಂತಹ ಪ್ರಾಕೃತಗುಣರಹಿತನಾದ, ಗುಣಸ್ವರೂಪಿಯಾದ ಭಗವಂತನಿಗೆ ದೇವತೆಗಳೇ, ನಮಸ್ಕರಿಸಿ. ಸಮಸ್ತ ದೇವತೆಗಳಿಗೂ ಆಶ್ರಯನಾದ, ಹುಟ್ಟಿಲ್ಲದ, ವಿಶ್ವರೂಪಿಯಾದ ಭಗವಂತನನ್ನು ನಮಿಸಿ.

ಮಹಾಭೂತಾಧಿಪತಯೇ ರುದ್ರಾಣಾಂ ಪತಯೇ ತಥಾ ।
ಆದಿತ್ಯಪತಯೇ ಚೈವ ವಸೂನಾಂ ಪತಯೇ ತಥಾ ॥೯೧॥

ಅಶ್ವಿಭ್ಯಾಂ ಪತಯೇ ಚೈವ ಮರುತಾಂ ಪತಯೇ ತಥಾ ।
ವೇದಯಜ್ಞಾಧಿಪತಯೇ ವೇದಾಂಗಪತಯೇಽಪಿ ಚ ॥೯೨॥

ಸಮುದ್ರವಾಸಿನೇ ನಿತ್ಯಂ ಹರಯೇ ಮುಂಜಕೇಶಿನೇ ।
ಶಾಂತಯೇ ಸರ್ವಭೂತಾನಾಂ ಮೋಕ್ಷಧರ್ಮಾನುಭಾಷಿಣೇ ॥೯೩॥

ಮಹಾಭೂತಗಳಿಗೆ ಅಧಿಪತಿಯಾದ, ರುದ್ರನಿಗೂ ಪತಿಯಾದ, ಆದಿತ್ಯನಿಗೆ ಅಧಿಪತಿಯಾದ, ವಸುಪತಿಯಾದ, ಅಶ್ವಿನೀದೇವತೆಗಳಿಗೆ ಸ್ವಾಮಿಯಾದ, ಮರುತ್ತುಗಳಿಗೆ ಸ್ವಾಮಿಯಾದ, ವೇದಯಜ್ಞಗಳಿಗೆ ಅಧಿಪತಿಯಾದ, ವೇದಾಂಗಪತಿಯಾದ, ಸಮುದ್ರ ವಾಸಿಯಾದ, ನಜವಲ್ಲಿಗೆ ಸಮಾನವಾದ ತಲೆಕೂದಲಿನಿಂದ ಕೂಡಿದ ಹರಿಗೆ ನಿತ್ಯವೂ ನಮಸ್ಕರಿಸಿ. ಸಮಸ್ತ ಭೂತಗಳ ಶಾಂತಿಗಾಗಿ ಮೋಕ್ಷಧರ್ಮವನ್ನು ಪ್ರವಚನ ಮಾಡುವ ಭಗವಂತನನ್ನು ನಮಸ್ಕರಿಸಿ.

ತಪಸಾಂ ತೇಜಸಾಂ ಚೈವ ಪತಯೇ ಯಶಸೋಽಪಿ ಚ ।
ವಾಚಶ್ಚ ಪತಯೇ ನಿತ್ಯಂ ಸರಿತಾಂ ಪತಯೇ ತಥಾ ॥೯೪॥

ತಪಸ್ಸುಗಳಿಗೆ ಒಡೆಯನಾದ, ಸೂರ್ಯ-ಚಂದ್ರ-ಅಗ್ನಿ ಮೊದಲಾದವರಿಗೆ ಸ್ವಾಮಿಯಾದ, ಸಮಸ್ತ ಯಶಸ್ಸಿಗೆ ಪತಿಯಾದ, ವಾಕ್ಪತಿಯಾದ, ಸರಿತ್ಪತಿಯಾದ ನಾರಾಯಣನಿಗೆ ನಿತ್ಯವೂ ನಮಸ್ಕರಿಸಿರಿ.

ಕಪರ್ದಿನೇ ವರಾಹಾಯ ಏಕಶೃಂಗಾಯ ಧೀಮತೇ ।
ವಿವಸ್ವತೇಽಶ್ವಶಿರಸೇ ಚತುರ್ಮೂರ್ತಿಧೃತೇ ಸದಾ ॥೯೫॥

ಜಟೆಯನ್ನು ಧರಿಸಿರುವ, ಏಕಶೃಂಗನಾದ, ವಿವಸ್ವಾನ್ ಹಯಗ್ರೀವನಿಗೆ, ಚತುರ್ಮೂರ್ತಿಯನ್ನು ಧರಿಸಿರುವ ಭಗವಂತನಿಗೆ, ವರಾಹನಿಗೆ ನಮಸ್ಕರಿಸಿರಿ.

ಗುಹ್ಯಾಯ ಜ್ಞಾನದೃಶ್ಯಾಯ ಅಕ್ಷರಾಯ ಕ್ಷರಾಯ ಚ ।
ಏಷ ದೇವಃ ಸಂಚರತಿ ಸರ್ವತ್ರಗತಿರವ್ಯಯಃ ॥೯೬॥

ಗುಹ್ಯನೂ, ಜ್ಞಾನದೃಶ್ಯನೂ, ಅಕ್ಷರನೂ, ಕ್ಷರನೂ ಆದ ಭಗವಂತನು ನಾಶರಹಿತನಾಗಿ ಎಲ್ಲೆಡೆಯೂ ಸಂಚರಿಸುತ್ತಾನೆ.

ಏವಮೇತತ್ ಪುರಾ ದೃಷ್ಟಂ ಮಯಾ ವೈ ಜ್ಞಾನಚಕ್ಷುಷಾ ।
ಕಥಿತಂ ತಚ್ಚ ವಃ ಸರ್ವಂ ಮಯಾ ಪೃಷ್ಟೇನ ತತ್ತ್ವತಃ ॥೯೭॥

ಹೀಗೆ ಮಹಾಭಾಗನಾದ, ಸನಾತನನಾದ ಪದ್ಮನಾಭನು ನಿತ್ಯವೂ ಯಜ್ಞಧಾರಿಯು. ಯಜ್ಞದ ಮೊದಲನೆಯ ಹವಿಸ್ಸನ್ನು ಸ್ವೀಕರಿಸಲು ಅರ್ಹನು ಎಂದು ಹೇಳಲ್ಪಟ್ಟಿದೆ.

ನಿವೃತ್ತಿಂ ಚಾಸ್ಥಿತೋ ಧರ್ಮಂ ಗತಿಮಕ್ಷಯಧರ್ಮಿಣಾಮ್ ।
ಪ್ರವೃತ್ತಿಧರ್ಮಾನ್ ವಿದಧೇ ಕೃತ್ವಾ ಲೋಕಸ್ಯ ಚಿತ್ರತಾಮ್ ॥೮೮॥

ನಿವೃತ್ತಿಧರ್ಮವನ್ನು ಆಶ್ರಯಿಸಿರುವವನು. ಮೋಕ್ಷಧರ್ಮಿಗಳಾದ ಮಹಾತ್ಮರಿಗೆ ಸದ್ಗತಿಯನ್ನು ನೀಡುವವನು. ಲೋಕಕ್ಕೆ ವಿಚಿತ್ರವಾದ ಮನಸ್ಸಿನ ಪ್ರವೃತ್ತಿಯನ್ನುಂಟು ಮಾಡಿ ಅದಕ್ಕನುಸಾರವಾಗಿ ಪ್ರವೃತ್ತಿ ಧರ್ಮವನ್ನು ನಿರ್ಮಿಸುವವನು.

ಸ ಆದಿಃ ಸ ಮಧ್ಯಃ ಸ ಚಾಂತಃ ಪ್ರಜಾನಾಂ
ಸ ಧಾತಾ ಸ ಧೇಯಃ ಸ ಕರ್ತಾ ಸ ಕಾರ್ಯಮ್ ।
ಯುಗಾಂತೇ ಸ ಸುಪ್ತಃ ಸುಸಂಕ್ಷಿಪ್ಯ ಲೋಕಾನ್
ಯುಗಾದೌ ಪ್ರಬುದ್ಧೋ ಜಗದ್ ಹ್ಯುತ್ಸಸರ್ಜ ॥೮೯॥

ಭಗವಂತನೇ ಆದಿಯೂ, ಮಧ್ಯನೂ, ಅಂತನೂ, ಪ್ರಜೆಗಳನ್ನು ಧರಿಸುವವನೂ, ಪೋಷಿಸುವವನೂ ಅವನೇ ಕರ್ತೃವೂ, ಅವನೇ ಅವತರಿಸಲು ಯೋಗ್ಯನು. ಯುಗದ ಕೊನೆಯಲ್ಲಿ ಮಲಗಿಕೊಂಡೇ ಸಮಗ್ರ ಲೋಕಗಳನ್ನು ಸೂಕ್ಷ್ಮರೂಪಕ್ಕೆ ಕೊಂಡೊಯ್ದು ಯುಗದ ಆರಂಭದಲ್ಲಿ ಎದ್ದವನಾಗಿ ಸಮಸ್ತ ಜಗತ್ತನ್ನು ಸೃಷ್ಟಿಸಿದನು.

ತಸ್ಮೈ ನಮಧ್ವಂ ದೇವಾಯ ನಿರ್ಗುಣಾಯ ಗುಣಾತ್ಮನೇ ।
ಅಜಾಯ ವಿಶ್ವರೂಪಾಯ ಧಾಮ್ನೇ ಸರ್ವದಿವೌಕಸಾಮ್ ॥೯೦॥

ಅಂತಹ ಪ್ರಾಕೃತಗುಣರಹಿತನಾದ, ಗುಣಸ್ವರೂಪಿಯಾದ ಭಗವಂತನಿಗೆ ದೇವತೆಗಳೇ, ನಮಸ್ಕರಿಸಿ. ಸಮಸ್ತ ದೇವತೆಗಳಿಗೂ ಆಶ್ರಯನಾದ, ಹುಟ್ಟಿಲ್ಲದ, ವಿಶ್ವರೂಪಿಯಾದ ಭಗವಂತನನ್ನು ನಮಿಸಿ.

ಮಹಾಭೂತಾಧಿಪತಯೇ ರುದ್ರಾಣಾಂ ಪತಯೇ ತಥಾ ।
ಆದಿತ್ಯಪತಯೇ ಚೈವ ವಸೂನಾಂ ಪತಯೇ ತಥಾ ॥೯೧॥

ಅಶ್ವಿಭ್ಯಾಂ ಪತಯೇ ಚೈವ ಮರುತಾಂ ಪತಯೇ ತಥಾ ।
ವೇದಯಜ್ಞಾಧಿಪತಯೇ ವೇದಾಂಗಪತಯೇಽಪಿ ಚ ॥೯೨॥

ಸಮುದ್ರವಾಸಿನೇ ನಿತ್ಯಂ ಹರಯೇ ಮುಂಜಕೇಶಿನೇ ।
ಶಾಂತಯೇ ಸರ್ವಭೂತಾನಾಂ ಮೋಕ್ಷಧರ್ಮಾನುಭಾಷಿಣೇ ॥೯೩॥

ಮಹಾಭೂತಗಳಿಗೆ ಅಧಿಪತಿಯಾದ, ರುದ್ರನಿಗೂ ಪತಿಯಾದ, ಆದಿತ್ಯನಿಗೆ ಅಧಿಪತಿಯಾದ, ವಸುಪತಿಯಾದ, ಅಶ್ವಿನೀದೇವತೆಗಳಿಗೆ ಸ್ವಾಮಿಯಾದ, ಮರುತ್ತುಗಳಿಗೆ ಸ್ವಾಮಿಯಾದ, ವೇದಯಜ್ಞಗಳಿಗೆ ಅಧಿಪತಿಯಾದ, ವೇದಾಂಗಪತಿಯಾದ, ಸಮುದ್ರ ವಾಸಿಯಾದ, ನಜವಲ್ಲಿಗೆ ಸಮಾನವಾದ ತಲೆಕೂದಲಿನಿಂದ ಕೂಡಿದ ಹರಿಗೆ ನಿತ್ಯವೂ ನಮಸ್ಕರಿಸಿ. ಸಮಸ್ತ ಭೂತಗಳ ಶಾಂತಿಗಾಗಿ ಮೋಕ್ಷಧರ್ಮವನ್ನು ಪ್ರವಚನ ಮಾಡುವ ಭಗವಂತನನ್ನು ನಮಸ್ಕರಿಸಿ.

ತಪಸಾಂ ತೇಜಸಾಂ ಚೈವ ಪತಯೇ ಯಶಸೋಽಪಿ ಚ ।
ವಾಚಶ್ಚ ಪತಯೇ ನಿತ್ಯಂ ಸರಿತಾಂ ಪತಯೇ ತಥಾ ॥೯೪॥

ತಪಸ್ಸುಗಳಿಗೆ ಒಡೆಯನಾದ, ಸೂರ್ಯ-ಚಂದ್ರ-ಅಗ್ನಿ ಮೊದಲಾದವರಿಗೆ ಸ್ವಾಮಿಯಾದ, ಸಮಸ್ತ ಯಶಸ್ಸಿಗೆ ಪತಿಯಾದ, ವಾಕ್ಪತಿಯಾದ, ಸರಿತ್ಪತಿಯಾದ ನಾರಾಯಣನಿಗೆ ನಿತ್ಯವೂ ನಮಸ್ಕರಿಸಿರಿ.

ಕಪರ್ದಿನೇ ವರಾಹಾಯ ಏಕಶೃಂಗಾಯ ಧೀಮತೇ ।
ವಿವಸ್ವತೇಽಶ್ವಶಿರಸೇ ಚತುರ್ಮೂರ್ತಿಧೃತೇ ಸದಾ ॥೯೫॥

ಜಟೆಯನ್ನು ಧರಿಸಿರುವ, ಏಕಶೃಂಗನಾದ, ವಿವಸ್ವಾನ್ ಹಯಗ್ರೀವನಿಗೆ, ಚತುರ್ಮೂರ್ತಿಯನ್ನು ಧರಿಸಿರುವ ಭಗವಂತನಿಗೆ, ವರಾಹನಿಗೆ ನಮಸ್ಕರಿಸಿರಿ.

ಗುಹ್ಯಾಯ ಜ್ಞಾನದೃಶ್ಯಾಯ ಅಕ್ಷರಾಯ ಕ್ಷರಾಯ ಚ ।
ಏಷ ದೇವಃ ಸಂಚರತಿ ಸರ್ವತ್ರಗತಿರವ್ಯಯಃ ॥೯೬॥

ಗುಹ್ಯನೂ, ಜ್ಞಾನದೃಶ್ಯನೂ, ಅಕ್ಷರನೂ, ಕ್ಷರನೂ ಆದ ಭಗವಂತನು ನಾಶರಹಿತನಾಗಿ ಎಲ್ಲೆಡೆಯೂ ಸಂಚರಿಸುತ್ತಾನೆ.

ಏವಮೇತತ್ ಪುರಾ ದೃಷ್ಟಂ ಮಯಾ ವೈ ಜ್ಞಾನಚಕ್ಷುಷಾ ।
ಕಥಿತಂ ತಚ್ಚ ವಃ ಸರ್ವಂ ಮಯಾ ಪೃಷ್ಟೇನ ತತ್ತ್ವತಃ ॥೯೭॥

ಹಿಂದೆ ಜ್ಞಾನಚಕ್ಷುಸ್ಸಿನಿಂದ ನಾನು ಹೀಗೆ ಅವನನ್ನು ಕಂಡಿರುತ್ತೇನೆ. ನನ್ನ ಬಳಿ ಪ್ರಶ್ನಿಸಿದಾಗ ನಾನು ನಿಮಗೆ ಯಥಾವತ್ತಾಗಿ ಅವನ ಮಹಿಮೆಯನ್ನು ಹೇಳಿರುತ್ತೇನೆ.

ಕ್ರಿಯತಾಂ ಮದ್ವಚಃ ಶಿಷ್ಯಾಃ ಸೇವ್ಯತಾಂ ಹರಿರೀಶ್ವರಃ ।
ಗೀಯತಾಂ ವೇದಶಬ್ದೈಶ್ಚ ಪೂಜ್ಯತಾಂ ಚ ಯಥಾವಿಧಿ ॥೯೮॥

ನನ್ನ ಮಾತನ್ನು ಶಿಷ್ಯರಾದ ನೀವೆಲ್ಲರೂ ನಡೆಸಿರಿ. ಭಗವಂತನನ್ನು ಸೇವಿಸಿರಿ. ವೇದಶಬ್ದಗಳಿಂದ ಅವನನ್ನೇ ಸ್ತುತಿಸಿರಿ. ತಂತ್ರಸಾರ ವಿಧಿಗೆ ಅನುಗುಣವಾಗಿ ಪೂಜಿಸಿರಿ.

ವೈಶಂಪಾಯನಃ

ಇತ್ಯುಕ್ತಾಸ್ತು ವಯಂ ತೇನ ವೇದವ್ಯಾಸೇನ ಧೀಮತಾ ।
ಸರ್ವೇ ಶಿಷ್ಯಾಃ ಸುತಶ್ಚಾಸ್ಯ ಶುಕಃ ಪರಮಧರ್ಮವಿತ್ ॥೯೯॥

ವೈಶಂಪಾಯನ– ಹೀಗೆ ಜ್ಞಾನಿಯಾದ ವೇದವ್ಯಾಸರಿಂದ ಶಿಷ್ಯರಾದ ನಾವೆಲ್ಲರೂ, ಪರಮಧರ್ಮಜ್ಞರಾದ ಶುಕಮುನಿಯೂ ಬೋಧಿಸಲ್ಪಟ್ಟೆವು.

ಸ ಚಾಸ್ಮಾಕಮುಪಾಧ್ಯಾಯಃ ಸಹಾಸ್ಮಾಭಿರ್ವಿಶಾಂಪತೇ ।
ಚತುರ್ವೇದೋದ್ಗತಾಭಿಶ್ಚ ಋಗ್ಭಿಸ್ತಮಭಿತುಷ್ಟುವೇ ॥೧೦೦॥

ಅನಂತರ ನಮ್ಮ ಗುರುಗಳಾದ ವ್ಯಾಸರು ನಮ್ಮ ಜೊತೆಗೆ ಸೇರಿಕೊಂಡು ನಾಲ್ಕು ವೇದಗಳಲ್ಲಿರುವ ಋಕ್‌ಗಳ ಮೂಲಕ ನಾರಾಯಣನನ್ನು ಸ್ತುತಿಸಿದರು.

ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಏವಂ ಮೇಽಕಥಯದ್ ರಾಜನ್ ಪುರಾ ದ್ವೈಪಾಯನೋ ಗುರುಃ ॥

ಜನಮೇಜಯನೇ, ನೀನು ಕೇಳಿದ ಪ್ರಶ್ನೆಗನುಸಾರವಾಗಿ ಎಲ್ಲ ವಿಷಯಗಳನ್ನು ವಿಷದೀಕರಿಸಿದ್ದೇನೆ. ಇದನ್ನೇ ಗುರುಗಳಾದ ವ್ಯಾಸರು ನನಗೆ ಹೇಳಿದ್ದರು.

ಯಶ್ಚೇದಂ ಶೃಣುಯಾನ್ನಿತ್ಯಂ ಯಶ್ಚೇದಂ ಪರಿಕೀರ್ತಯೇತ್ ।
ನಮೋ ಭಗವತೇ ಕೃತ್ವಾ ಸಮಾಹಿತಮನಾ ನರಃ ॥೧೦೨॥

ಭವತ್ಯರೋಗೋ ದ್ಯುತಿಮಾನ್ ಬಲರೂಪಸಮನ್ವಿತಃ ।
ಆತುರೋ ಮುಚ್ಯತೇ ರೋಗಾದ್ ಬದ್ಧೋ ಮುಚ್ಯೇತ ಬಂಧನಾತ್ ॥

ಯಾವನು ಈ ಉಪಾಖ್ಯಾನವನ್ನು ಪ್ರತಿದಿನವೂ ಕೇಳುತ್ತಾನೋ, ಏಕಾಗ್ರಚಿತ್ತನಾಗಿ ಭಗವಂತನನ್ನು ನಮಸ್ಕರಿಸಿ ಉಪಾಖ್ಯಾನವನ್ನು ಪಠಿಸುತ್ತಾನೋ, ಅವನು ರೋಗ ರಹಿತನೂ, ಕಾಂತಿಯುಕ್ತನೂ, ಬಲ-ರೂಪವನ್ನು ಹೊಂದಿದವನೂ ಆಗುತ್ತಾನೆ. ರೋಗಿಯು ರೋಗದಿಂದ ಬಿಡುಗಡೆ ಹೊಂದುತ್ತಾನೆ. ಬಂಧಿಯಾದವನು ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಕಾಮಕಾಮೀ ಲಭೇತ್ ಕಾಮಂ ದೀರ್ಘಮಾಯುರವಾಪ್ನುಯಾತ್ ।
ಬ್ರಾಹ್ಮಣಃ ಸರ್ವವೇದೀ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ವಿಪುಲಲಾಭಃ ಸ್ಯಾಚ್ಛೂದ್ರಃ ಸುಖಮವಾಪ್ನುಯಾತ್ ॥ ೧೦೪॥

ಕಾಮನೆಗಳನ್ನು ಬಯಸುವವನು ಆ ಇಷ್ಟಾರ್ಥಗಳನ್ನು ಹೊಂದುತ್ತಾನೆ. ದೀರ್ಘಾಯುಷ್ಯವನ್ನು ಹೊಂದುತ್ತಾನೆ. ಬ್ರಾಹ್ಮಣನು ಸಮಸ್ತ ವೇದಗಳ ಜ್ಞಾನವನ್ನು ಪಡೆಯುತ್ತಾನೆ. ಕ್ಷತ್ರಿಯನು ವಿಜಯ ಹೊಂದುತ್ತಾನೆ. ವೈಶ್ಯನು ಹೇರಳವಾದ ಲಾಭವನ್ನು, ಶೂದ್ರನು ಸುಖವನ್ನು ಹೊಂದುತ್ತಾನೆ.

ಅಪುತ್ರೋ ಲಭತೇ ಪುತ್ರಂ ಕನ್ಯಾ ಚೈವೇಪ್ಸಿತಂ ಪತಿಮ್ ।
ಲಗ್ನಗರ್ಭಾ ವಿಮುಚ್ಯೇತ ಗರ್ಭಿಣೀ ಜನಯೇತ್ ಸುತಮ್ ।
ವಂಧ್ಯಾ ಪ್ರಸವಮಾಪ್ನೋತಿ ಪುತ್ರಪೌತ್ರಸಮೃದ್ಧಿಮತ್ ॥೧೦೫॥

ಸಂತಾನಹೀನನು ಸಂತತಿಯನ್ನೂ, ಕನ್ಯೆಯು ಬಯಸಿದ ಪತಿಯನ್ನೂ, ಪ್ರಸವವನ್ನು ಹೊಂದುವ ಹೆಂಗಸಿನ ಗರ್ಭವು ಅಡ್ಡಸಿಕ್ಕಿಬಿದ್ದರೆ ಆ ಗರ್ಭಿಣಿಯು ವೇದನೆ ಇಲ್ಲದೆ ಮಗನನ್ನು ಹಡೆಯುತ್ತಾಳೆ. ಬಂಜೆಯು ಗರ್ಭಿಣಿಯಾಗುತ್ತಾಳೆ. ಈ ಉಪಾಖ್ಯಾನದ ಶ್ರವಣದಿಂದ ಪುತ್ರ-ಪೌತ್ರರ ಸಮೃದ್ಧಿಯು ಉಂಟಾಗುತ್ತದೆ.

ಕ್ಷೇಮೇಣ ಗಚ್ಛೇದಧ್ವಾನಮಿದಂ ಯಃ ಪಠತೇ ಪಥಿ ।
ಯೋ ಯಂ ಕಾಮಂ ಕಾಮಯತೇ ಸ ತಮಾಪ್ನೋತಿ ಚ ಧ್ರುವಮ್ ॥

ಪ್ರವಾಸದ ಸಮಯದಲ್ಲಿ, ಮಾರ್ಗಮಧ್ಯದಲ್ಲಿ ಈ ಉಪಾಖ್ಯಾನವನ್ನು ಪಾರಾಯಣ ಮಾಡುವವನು ಕ್ಷೇಮದಿಂದ ಯಾತ್ರೆಯನ್ನು ಮುಗಿಸುತ್ತಾನೆ. ಯಾವ ಯಾವ ಕಾಮನೆಗಳನ್ನು ಹೊಂದಲು ಬಯಸುತ್ತಾನೋ ಆ ಕಾಮನೆಗಳನ್ನು ನಿಶ್ಚಿತವಾಗಿ ಹೊಂದುತ್ತಾನೆ.

ಇದಂ ಮಹರ್ಷೇರ್ವಚನಂ ವಿನಿಶ್ಚಿತಂ
ಮಹಾತ್ಮನಃ ಪುರುಷವರಸ್ಯ ಕೀರ್ತನಮ್ ।
ಸಮಾಗಮಂ ಚರ್ಷಿದಿವೌಕಸಾಮಿಮಂ
ನಿಶಮ್ಯ ಭಕ್ತಾಃ ಸುಸುಖಂ ಲಭಂತೇ ॥೧೦೭॥

ಈ ವಿಷಯವು ಪುರುಷಶ್ರೇಷ್ಠರಾದ, ಮಹಾತ್ಮರಾದ ವ್ಯಾಸಮಹರ್ಷಿಗಳಿಂದ ಹೇಳಲ್ಪಟ್ಟಿದೆ. ಇದೇ ಸಿದ್ಧಾಂತವು. ಈ ವ್ಯಾಸರ ಪ್ರವಚನವನ್ನು, ಋಷಿ-ದೇವತೆಗಳ ಸಮಾಗಮ ವೃತ್ತಾಂತವನ್ನು ಕೇಳುವ ಭಕ್ತರು ಉತ್ತಮ ಸುಖವನ್ನು ಹೊಂದುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಪರ್ವೇ ನಾರಾಯಣೀಯೇ ದ್ವಾಸಪ್ತತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ಮೂರನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ತನ್ನ ನಾಮನಿರ್ವಚನಗಳನ್ನು ಹೇಳುವ ಮೂಲಕ ಮಹಿಮೆಯನ್ನು ತಿಳಿಸಿದುದು.

ಜನಮೇಜಯಃ

ಅಸ್ತೌಷೀದ್ ಯೈರಿಮಂ ವ್ಯಾಸಃ ಸಶಿಷ್ಯೋ ಮಧುಸೂದನಮ್ ।
ನಾಮಭಿರ್ವಿವಿಧೈರೇಷಾಂ ನಿರುಕ್ತಂ ಭಗವನ್ಮಮ ॥೧॥

ಜನಮೇಜಯ– ವೈಶಂಪಾಯನರೇ, ತಮ್ಮ ಶಿಷ್ಯರಿಂದ ಕೂಡಿದ ವ್ಯಾಸರು ಮಧುಸೂದನನನ್ನು ಅನೇಕ ವಿಧವಾದ ದಿವ್ಯನಾಮದಿಂದ ಸ್ತುತಿಸಿದರು. ಆ ದಿವ್ಯನಾಮಗಳ ನಿರ್ವಚನಗಳನ್ನು ಕೇಳಲು ಅಪೇಕ್ಷಿಸುತ್ತೇನೆ.

ವಕ್ತುಮರ್ಹಸಿ ಶುಶ್ರೂಷೋಃ ಪ್ರಜಾಪತಿಪತೇರ್ಹರೇಃ ।
ಶ್ರುತ್ವಾ ಭವೇಯಂ ಯತ್ಪೂತಃ ಶರಚ್ಚಂದ್ರ ಇವಾಮಲಃ ॥೨॥

ನನಗೆ ಆ ನಾಮಗಳ ಮಹಿಮೆಯನ್ನು ತಿಳಿಸಿರಿ. ಚತುರ್ಮುಖ ಬ್ರಹ್ಮನ ಸ್ವಾಮಿಯಾದ

ಶ್ರೀಹರಿಯ ನಾಮಗಳ ವ್ಯುತ್ಪತ್ತಿಯನ್ನು ಕೇಳಿ ಶರತ್ಕಾಲದ ಚಂದ್ರನಂತೆ ನಿರ್ಮಲನಾಗುತ್ತೇನೆ.

ವೈಶಂಪಾಯನಃ

ಶೃಣು ರಾಜನ್ ಯಥಾಚಷ್ಟ ಫಲ್ಗುನಸ್ಯ ಹರಿರ್ವಿಭುಃ ।
ಪ್ರಸನ್ನಾತ್ಮಾತ್ಮನೋ ನಾಮ್ನಾಂ ನಿರುಕ್ತಂ ಗುಣಕರ್ಮಜಮ್ ॥೩॥

ವೈಶಂಪಾಯನ– ಜನಮೇಜಯನೇ, ಸರ್ವಸಮರ್ಥನಾದ ಶ್ರೀಹರಿಯು ಯಾವ ರೀತಿಯಾಗಿ ಅರ್ಜುನನಿಗೆ ಪ್ರಸನ್ನನಾಗಿ, ಅರ್ಜುನನಿಗೆ ತನ್ನ ಗುಣ-ಕರ್ಮಗಳಿಂದ ಪಡೆದಿರುವ ನಾಮಗಳನ್ನು ಬಿಡಿಸಿ ಹೇಳುತ್ತಾನೋ ಅದನ್ನೇ ಹೇಳುತ್ತೇನೆ.

ನಾಮಭಿಃ ಕೀರ್ತಿತೈಸ್ತಸ್ಯ ಕೇಶವಸ್ಯ ಮಹಾತ್ಮನಃ ।
ಪೃಷ್ಟವಾನ್ ಕೇಶವಂ ರಾಜನ್ ಫಲ್ಗುನಃ ಪರವೀರಹಾ ॥೪॥

ಮಹಾತ್ಮನಾದ ಕೇಶವನ ದಿವ್ಯನಾಮಗಳಿಂದ ಸ್ತೋತ್ರ ಮಾಡುತ್ತಿರುವ ಅರ್ಜುನನು ಆ ನಾಮಗಳ ವಿಷಯದಲ್ಲಿ ಶತ್ರುಸಂಹಾರಕನಾದ ಅರ್ಜುನನೇ ಕೇಶವನನ್ನು ಪ್ರಶ್ನಿಸಿದನು.

ಅರ್ಜುನಃ

ಭಗವನ್ ಭೂತಭವ್ಯೇಶ ಸರ್ವಭೂತಸೃಗವ್ಯಯ ।
ಲೋಕಧಾಮ ಜಗನ್ನಾಥ ಲೋಕಾನಾಮಭಯಪ್ರದ ॥೫॥

ಅರ್ಜುನ– ಕಳೆದ ಕಾಲ, ಮುಂದಿನ ಕಾಲಗಳಿಗೂ ನಿಯಾಮಕನಾದವನೇ, ಸಮಸ್ತ ಪ್ರಾಣಿಗಳನ್ನು ಸೃಷ್ಟಿಸುವವನೇ, ನಿರ್ವಿಕಾರನೇ, ಲೋಕಧಾಮನೇ, ಜಗನ್ನಾಥನೇ, ಲೋಕಗಳಿಗೆಲ್ಲ ಅಭಯಪ್ರದನಾದ, ಪೂಜ್ಯನಾದ ಶ್ರೀಕೃಷ್ಣನೇ.

ಯಾನಿ ನಾಮಾನಿ ತೇ ದೇವ ಕೀರ್ತಿತಾನಿ ಮಹರ್ಷಿಭಿಃ ।
ವೇದೇಷು ಸಪುರಾಣೇಷು ಯಾನಿ ಗುಹ್ಯಾನಿ ಕರ್ಮಭಿಃ ॥೬॥

ಮಹರ್ಷಿಗಳಿಂದ ಕೊಂಡಾಡಲ್ಪಟ್ಟ ಯಾವ ನಿನ್ನ ನಾಮಗಳಿವೆಯೋ, ನಿನ್ನ ಚೇಷ್ಟೆಗನುಗುಣವಾಗಿ ವೇದ-ಪುರಾಣಗಳಲ್ಲಿ ಯಾವ ಗುಹ್ಯನಾಮಗಳನ್ನು ಕೀರ್ತನೆ ಮಾಡಲಾಗಿದೆಯೋ,

ತೇಷಾಂ ನಿರುಕ್ತಂ ತತ್ತೋಽಹಂ ಶ್ರೋತುಮಿಚ್ಛಾಮಿ ಕೇಶವ ।
ನ ಹ್ಯನ್ಯೋ ವರ್ತಯೇನ್ನಾಮ್ನಾಂ ನಿರುಕ್ತಂ ತ್ವಾಮೃತೇ ಪ್ರಭೋ ॥೭॥

ಅವುಗಳ ನಿರ್ವಚನವನ್ನು ಕೇಶವನೇ, ನಿನ್ನಿಂದಲೇ ಕೇಳಲು ಬಯಸುತ್ತೇನೆ. ಆ ನಾಮಗಳ ನಿರ್ವಚನವನ್ನು ನಿನ್ನನ್ನು ಬಿಟ್ಟು ಉಳಿದವರು ವ್ಯಾಖ್ಯಾನಿಸಲಾರರು.

ಶ್ರೀಭಗವಾನ್

ಋಗ್ವೇದೇ ಸಯಜುರ್ವೇದೇ ತಥೈವಾಥರ್ವಸಾಮಸು ।
ಪುರಾಣೇ ಸೋಪನಿಷದೇ ತಥೈವ ಜ್ಯೋತಿಷೇಽರ್ಜುನ ॥೮॥

ಸಾಂಖ್ಯೇ ಚ ಯೋಗಶಾಸ್ತ್ರೇ ಚ ಆಯುರ್ವೇದೇ ತಥೈವ ಚ ।
ಬಹೂನಿ ಮಮ ನಾಮಾನಿ ಕೀರ್ತಿತಾನಿ ಮಹರ್ಷಿಭಿಃ ॥೯॥

ಶ್ರೀಭಗವಾನ್– ಅರ್ಜುನನೇ, ಯಜುಸ್, ಸಾಮ, ಅಥರ್ವ, ಪುರಾಣ, ಉಪನಿಷತ್, ಜ್ಯೋತಿಷ್ಯ ಇವುಗಳಲ್ಲಿ, ಸಾಂಖ್ಯ, ಯೋಗಶಾಸ್ತ್ರ, ಆಯುರ್ವೇದ, ಇವುಗಳಲ್ಲಿಯೂ ಮಹರ್ಷಿಗಳಿಂದ ನನ್ನ ಅನೇಕ ನಾಮಗಳು ಹೇಳಲ್ಪಟ್ಟಿವೆ.

ಗೌಣಾನಿ ತತ್ರ ನಾಮಾನಿ ಕರ್ಮಜಾನಿ ಚ ಕಾನಿಚಿತ್ ।
ನಿರುಕ್ತಂ ಕರ್ಮಜಾನಾಂ ಚ ಶೃಣುಷ್ವ ಪ್ರಯತೋಽನಘ ।
ಕಥ್ಯಮಾನಂ ಮಯಾ ತಾತ ತ್ವಂ ಹಿ ಮೇಽರ್ಧಂ ಸ್ಮೃತಃ ಪುರಾ ॥೧೦॥

ಹೇಳಿರುವ ಆ ನಾಮಗಳಲ್ಲಿ ಕೆಲವು ನಾಮಗಳು ನಾನು ಮಾಡಿದ ವ್ಯಾಪಾರಗಳಿಗೆ ಅನುಗುಣವಾಗಿ ಹೇಳಲ್ಪಟ್ಟಿವೆ. ನನ್ನ ಕ್ರಿಯೆಗಳಿಂದ ಪ್ರಾಪ್ತವಾದ ನಾಮನಿರ್ವಚನವ ಹೇಳುತ್ತೇನೆ, ಏಕಾಗ್ರತೆಯಿಂದ ಕೇಳು. ನೀನು ನನ್ನ ಅರ್ಧಶರೀರನೆಂದೇ ಪ್ರಸಿದ್ಧನಾಗಿರುವಿ. ಅರ್ಥಾತ್ ನರ-ನಾರಾಯಣರಲ್ಲಿ ನರನೆಂದೇ ಖ್ಯಾತನಾಗಿರುವಿ.

ನಮೋಽತಿಯಶಸೇ ತಸ್ಮೈ ದೇಹಿನಾಂ ಪರಮಾತ್ಮನೇ ।
ನಾರಾಯಣಾಯ ವಿಶ್ವಾಯ ನಿರ್ಗುಣಾಯ ಗುಣಾತ್ಮನೇ ॥೧೧॥

ಸಮಸ್ತ ಜೀವರಿಗೆಲ್ಲ ಯಾವ ಭಗವಂತನು ಪರಮ ನಿಯಾಮಕನಾಗಿದ್ದಾನೋ ಅಂತಹ ಮಹಾಯಶೋವಂತನಾದ, ಪ್ರಾಕೃತಗುಣರಹಿತನಾದ, ಗುಣಸ್ವರೂಪಿಯಾದ, ವಿಶ್ವನೆನಿಸಿದ ನಾರಾಯಣನಿಗೆ ನಮಸ್ಕಾರವು.

ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಶ್ಚ ಕ್ರೋಧಸಂಭವಃ ।
ಯೋಽಸೌ ಯೋನಿರ್ಹಿ ಸರ್ವಸ್ಯ ಸ್ಥಾವರಸ್ಯ ಚರಸ್ಯ ಚ ॥೧೨॥

ಯಾವ ಭಗವಂತನ ಪ್ರಸನ್ನತೆಯಿಂದ ಬ್ರಹ್ಮನು ಹುಟ್ಟಿದನೋ, ಯಾವನ ಕ್ರೋಧದಿಂದ ರುದ್ರನ ಉತ್ಪತ್ತಿಯಾಯಿತೋ, ಯಾವ ಭಗವಂತನು ಸಮಗ್ರ ಚರಾಚರ ಪ್ರಪಂಚಕ್ಕೆ ಕಾರಣನಾಗಿದ್ದಾನೋ ಅಂತಹ ನಾರಾಯಣನಿಗೆ ನಮಸ್ಕಾರವು.

ಅಷ್ಟಾದಶಗುಣಂ ಯತ್ತತ್ ಸತ್ತ್ವಂ ಸತ್ತ್ವವತಾಂ ವರ ।
ಪ್ರಕೃತಿಃ ಸಾ ಪರಾ ಮಹ್ಯಂ ರೋದಸೀ ಯೋಗಧಾರಿಣೀ ।
ಋತಾ ಸತ್ಯಾಮರಾಜಯ್ಯಾ ಲೋಕಾನಾಮಾತ್ಮಸಂಜ್ಞಿತಾ ॥೧೩॥

ಅಂತಃಸತ್ತ್ವವುಳ್ಳವರಲ್ಲಿ ಶ್ರೇಷ್ಠನಾದ ಅರ್ಜುನನೇ, ಯಾವನು ಹದಿನೆಂಟು ಗುಣಗಳಿಂದ ಪೂರ್ಣನಾಗಿದ್ದಾನೋ, ಸತ್ತ್ವಸ್ವರೂಪನೋ ಅಂತಹ ಭಗವಂತನು ನನ್ನ ಪರಾಪ್ರಕೃತಿ ಎನಿಸಿದ್ದಾನೆ. ಪೃಥಿವಿ, ಅಂತರಿಕ್ಷಗಳನ್ನು ಯೋಗಶಕ್ತಿಯಿಂದ ಧರಿಸಿದ್ದಾನೆ. ಋತ, ಸತ್ಯ, ಅಮರ, ಜಯಿಸಲು ಅಶಕ್ಯ, ಲೋಕಗಳಿಗೆಲ್ಲ ಅಂತರ್ಯಾಮಿ ಹೀಗೆ ಕರೆಸಿಕೊಂಡಿದ್ದಾನೆ.

ತಸ್ಮಾತ್ ಸರ್ವಾಃ ಪ್ರವರ್ತಂತೇ ಸರ್ಗಪ್ರಲಯವಿಕ್ರಿಯಾಃ ।
ತತೋ ಯಜ್ಞಶ್ಚ ಯಷ್ಟಾ ಚ ಪುರಾಣಃ ಪುರುಷೋ ವಿರಾಟ್ ।
ಅನಿರುದ್ಧ ಇತಿ ಪ್ರೋಕ್ತೋ ಲೋಕಾನಾಂ ಪ್ರಭವಾಪ್ಯಯಃ ॥೧೪॥

ಆ ಭಗವಂತನಿಂದಲೇ ಸೃಷ್ಟಿ-ಪ್ರಳಯ ಮೊದಲಾದ ಎಲ್ಲ ವಿಕಾರಗಳು ಉಂಟಾಗುತ್ತವೆ. ಅವನೇ ತಪಸ್ಸು, ಯಜ್ಞ, ಯಜ್ಞ ಮಾಡುವವನು, ಪುರಾಣ ಪುರುಷನು. ಅವನೇ ವಿರಾಟ್. ಅವನೇ ಹುಟ್ಟು-ಸಾವುಗಳನ್ನು ನೀಡುವ ಅನಿರುದ್ಧನು ಅವನೇ.

ಬ್ರಾಹ್ಮೇ ರಾತ್ರಿಕ್ಷಯೇ ಪ್ರಾಪ್ತೇ ತಸ್ಯ ಹ್ಯಮಿತತೇಜಸಃ ।
ಪ್ರಸಾದಾತ್ ಪ್ರಾದುರಭವತ್ ಪದ್ಮಂ ಪದ್ಮನಿಭೇಕ್ಷಣ ।
ತತ್ರ ಬ್ರಹ್ಮಾ ಸಮಭವತ್ಸ ತಸ್ಯೈವ ಪ್ರಸಾದಜಃ ॥೧೫॥

ಪದ್ಮನೇತ್ರನೇ, ಚತುರ್ಮುಖ ಬ್ರಹ್ಮನ ರಾತ್ರಿಯು ಕಳೆದ ಬಳಿಕ ಅಮಿತ ತೇಜಸ್ವಿಯಾದ ಪದ್ಮನಾಭನ ಪ್ರಸಾದದಿಂದ ಕಮಲವು ಆವಿರ್ಭಾವ ಹೊಂದಿತು. ಆ ಭಗವಂತನ ಪ್ರಸನ್ನತೆಯಿಂದಲೇ ಕಮಲದಿಂದ ಚತುರ್ಮುಖ ಬ್ರಹ್ಮನ ಸೃಷ್ಟಿಯಾಯಿತು.

ಅಹ್ನಃ ಕ್ಷಯೇ ಲಲಾಟಾಚ್ಚ ಸುತೋ ದೇವಸ್ಯ ವೈ ತಥಾ ।
ಕ್ರೋಧಾವಿಷ್ಟಸ್ಯ ಸಂಜಜ್ಞೇ ರುದ್ರಃ ಸಂಹಾರಕಾರಕಃ ॥೧೬॥

ಹಗಲು ಕಳೆದ ಕೂಡಲೇ ಕ್ರೋಧಾವಿಷ್ಟನಾದ ಬ್ರಹ್ಮನ ಹಣೆಯಿಂದ ಲೋಕ ಸಂಹಾರಕನಾದ ರುದ್ರನು ಮಗನಾಗಿ ಹುಟ್ಟಿದನು.

ಏತೌ ದ್ವೌ ವಿಬುಧಶ್ರೇಷ್ಠೌ ಪ್ರಸಾದಕ್ರೋಧಜೌ ಸ್ಮೃತೌ ।
ತದಾದೇಶಿತಪಂಥಾನೌ ಸೃಷ್ಟಿಸಂಹಾರಕಾರಕೌ ।
ನಿಮಿತ್ತಮಾತ್ರಂ ತಾವತ್ರ ಸರ್ವಪ್ರಾಣಿವರಪ್ರದೌ ॥೧೭॥

ಈ ಬ್ರಹ್ಮ-ರುದ್ರರಿಬ್ಬರೂ ದೇವತೆಗಳಲ್ಲೇ ಶ್ರೇಷ್ಠರು. ಬ್ರಹ್ಮನು ಹರಿಯ ಅನುಗ್ರಹದಿಂದ ಹುಟ್ಟಿದರೆ, ರುದ್ರನು ಕ್ರೋಧದಿಂದಲೇ ಹುಟ್ಟನ್ನು ಪಡೆದವನು. ಭಗವಂತನ ಆದೇಶದಂತೆ ಅವರಿಬ್ಬರು ಸೃಷ್ಟಿ-ಸಂಹಾರ ಕ್ರಿಯೆಗಳಲ್ಲಿ ನಿರತರಾಗಿದ್ದಾರೆ. ಸಮಸ್ತ ಪ್ರಾಣಿಗಳಿಗೂ ವರವನ್ನು ನೀಡುವ ಅವರಿಬ್ಬರು ಸೃಷ್ಟಿ-ಲಯಗಳಿಗೆ ಕೇವಲ ನಿಮಿತ್ತ ಕಾರಣರಾಗಿದ್ದಾರೆ.

ಕಪರ್ದೀ ಜಟಿಲೋ ಮುಂಡಃ ಶ್ಮಶಾನಗೃಹಸೇವಕಃ ।
ಉಗ್ರವ್ರತಧರೋ ರುದ್ರೋ ಯೋಗೀ ತ್ರಿಪುರದಾರುಣಃ ॥೧೮॥

ದಕ್ಷಕ್ರತುಹರಶ್ಚೈವ ಭಗನೇತ್ರಹರಸ್ತಥಾ ।
ನಾರಾಯಣಾತ್ಮಕೋ ಜ್ಞೇಯಃ ಪಾಂಡವೇಯ ಯುಗೇ ಯುಗೇ ॥೧೯॥

ಅರ್ಜುನನೇ, ಸಂಹಾರಕಾರಕನಾದ ರುದ್ರನಿಗೆ ಕಪರ್ದೀ, ಜಟಿಲ, ಮುಂಡ, ಶ್ಮಶಾನಗೃಹಸೇವಕ, ಉಗ್ರವ್ರತಧರ, ರುದ್ರ, ಯೋಗಿ, ತ್ರಿಪುರದಾರುಣ, ದಕ್ಷಕ್ರತುಹರ, ಭಗನೇತ್ರಹರ ಮುಂತಾದ ನಾಮಗಳೆಲ್ಲವೂ ನಾರಾಯಣನ ಅನುಗ್ರಹದಿಂದಲೇ ಪ್ರತಿಯುಗದಲ್ಲಿಯೂ ಲಭಿಸುತ್ತವೆ ಎಂದು ತಿಳಿಯಬೇಕು.

ತಸ್ಮಿನ್ ಹಿ ಪೂಜ್ಯಮಾನೇ ವೈ ದೇವದೇವೇ ಮಹೇಶ್ವರೇ ।
ಸಂಪೂಜಿತೋ ಭವೇತ್ ಪಾರ್ಥ ದೇವೋ ನಾರಾಯಣಃ ಪ್ರಭುಃ ॥೨೦॥

ಅರ್ಜುನನೇ, ರುದ್ರದೇವನನ್ನು ಆರಾಧನೆ ಮಾಡಿದರೆ ದೇವದೇವನಾದ ನಾರಾಯಣನನ್ನು ಆರಾಧಿಸಿದಂತೆ ಆಗುತ್ತದೆ.

ಅಹಮಾತ್ಮಾ ಹಿ ಲೋಕಾನಾಂ ವಿಶ್ವಾನಾಂ ಪಾಂಡುನಂದನ ।
ತಸ್ಮಾದಾತ್ಮಾನಮೇವಾಗ್ರೇ ರುದ್ರಂ ಸಂಪೂಜಯಾಮ್ಯಹಮ್ ॥೨೧॥

ಪಾಂಡುನಂದನನೇ, ಸಮಸ್ತ ಲೋಕಗಳಿಗೂ ನಾನೇ ಅಂತರ್ಯಾಮಿಯು. ಆದ್ದರಿಂದ ಸೃಷ್ಟಿಯ ಆರಂಭದಲ್ಲಿ ರುದ್ರನಲ್ಲಿರುವ ರುದ್ರ ಎಂಬ ರೂಪವನ್ನೇ ನಾನೂ ಆರಾಧಿಸುತ್ತೇನೆ.

ಯದ್ಯಹಂ ನಾರ್ಚಯೇಯಂ ವೈ ಈಶಾನಂ ವರದಂ ಶಿವಮ್ ।
ಆತ್ಮಾನಂ ಚಾರ್ಚಯೇತ್ ಕಶ್ಚಿದಿತಿ ಮೇ ಭಾವಿತಂ ಮನಃ ।
ಮಯಾ ಪ್ರಮಾಣಂ ಹಿ ಕೃತಂ ಲೋಕಃ ಸಮನುವರ್ತತೇ ॥೨೨॥

ಒಂದು ವೇಳೆ ನಾನು ವರದನಾದ ರುದ್ರನನ್ನು, ಶಿವನನ್ನು ಪೂಜಿಸದಿದ್ದಲ್ಲಿ ಹೆಸರೇ ಇಲ್ಲದ ರುದ್ರನನ್ನು ತೊರೆದು ದೈತ್ಯ-ಪಿಶಾಚಾದಿಗಳೆಲ್ಲ ನನ್ನನ್ನೇ ಆರಾಧಿಸುತ್ತಿದ್ದವು. ಆದ್ದರಿಂದ ಆ ದೈತ್ಯ-ರಾಕ್ಷಸ-ಪಿಶಾಚಾದಿಗಳನ್ನು ಮೋಹಿಸಲು ನಾನು ರುದ್ರನನ್ನು ಆರಾಧಿಸಿದೆನು. ನಾನು ಏನನ್ನು ಪ್ರಮಾಣ ಎಂದು ಮಾಡುತ್ತೇನೋ, ಲೋಕವು ಅದನ್ನೇ ಅನುಸರಿಸುತ್ತದೆ.

ವ್ಯಾಖ್ಯಾನ ವಿಶೇಷ– 'ಆತ್ಮಾನಂ ನಾರ್ಚಯೇತ್' ಎಂಬುದು ಒಂದು ಪಾಠ. 'ಆತ್ಮಾನಂ ಚಾರ್ಚಯೇತ್' ಎಂಬುದು ಇನ್ನೊಂದು ಪಾಠ. 'ಆತ್ಮಾನಂ ನಾರ್ಚಯೇತ್' ಎಂಬ ಪಾಠವನ್ನು ಗ್ರಹಿಸಿದಲ್ಲಿ, ಮನುಷ್ಯಲೋಕದಲ್ಲಿ ಅವತಾರ ಮಾಡಿದ ಭಗವಂತನಾದ ನಾನು ದೇವತೆಗಳ ಆರಾಧನೆಯನ್ನು ಮಾಡದಿದ್ದಲ್ಲಿ ದೇವತ್ವವೆಂಬ ವಿಶೇಷದಲ್ಲಿ ಯಾವ ವ್ಯತ್ಯಾಸವೂ ಇಲ್ಲದ ನನ್ನನ್ನು ಮನುಷ್ಯರು ಪೂಜಿಸುತ್ತಿರಲಿಲ್ಲ. ಆದ್ದರಿಂದ ದೇವತೆಗಳ ಪೂಜೆಯಲ್ಲಿ ಆಸಕ್ತಿಯನ್ನು ಹುಟ್ಟಿಸಲು ನಾನು ರುದ್ರನ ಆರಾಧನೆಯನ್ನು ಮಾಡಿದೆನು. ನಾನು ರುದ್ರನ ಆರಾಧನೆಯನ್ನು ರುದ್ರಾಂತರ್ಯಾಮಿಯಾದ ಭಗವಂತನಿಗೆ ಸಂಬಂಧಿಸಿದ್ದೆಂದು ಅಂತರ್ಯಾಮಿಯಾದ ರುದ್ರ ಎಂಬ ಪರಮಾತ್ಮನ ರೂಪವನ್ನೇ ಪೂಜಿಸುತ್ತೇನೆ, ಹೊರತು ಮಹರುದ್ರನನ್ನು ಪೂಜಿಸಲಾರೆ. ಆದ್ದರಿಂದಲೇ ಆ ರುದ್ರದೇವನು ಉತ್ತಮವಾದ ಆಯುಷ್ಯವನ್ನು ಹೊಂದಿರುತ್ತಾನೆ ಎಂದು ಭಾವ (ಲಕ್ಷಾಲಂಕಾರ).

ಪ್ರಮಾಣಾನಿ ಹಿ ಪೂಜ್ಯಾನಿ ತತಸ್ತಂ ಪೂಜಯಾಮ್ಯಹಮ್ ।
ಯಸ್ತಂ ವೇತ್ತಿ ಸ ಮಾಂ ವೇತ್ತಿ ಯೋನು ತಂ ಸ ಹಿ ಮಾಮನು ॥೨೩॥

ನಾನು ದೇವತಾ, ಅತಿಥಿಪೂಜೆಗಾಗಿ ಯಾವ ವೇದ-ಶಾಸ್ತ್ರಗಳನ್ನು ಪ್ರಮಾಣವನ್ನಾಗಿ ಮಾಡಿದ್ದೇನೋ ಆ ಪ್ರಮಾಣಗಳು ಮಾನ್ಯವಾದವುಗಳು. ಆದ್ದರಿಂದ ಮನುಷ್ಯ ಯೋನಿಯಲ್ಲಿ ಹುಟ್ಟಿದವರು ದೇವತಾ, ಅತಿಥಿಪೂಜೆಗಳನ್ನು ಮಾಡಬೇಕು ಎಂದು ಪ್ರತಿಪಾದನೆ ಮಾಡುವ ಪ್ರಮಾಣಗಳನ್ನು ರಕ್ಷಿಸಲು ನಾನು ರುದ್ರನನ್ನು ಪೂಜಿಸುತ್ತೇನೆ. ಯಾವನು ರುದ್ರನನ್ನು ತಿಳಿಯುತ್ತಾನೋ ಅವನು ನನ್ನನ್ನು ತಿಳಿಯುತ್ತಾನೆ. ಯಾವನು ರುದ್ರನನ್ನು ಅನುಸರಿಸುತ್ತಾನೋ ಅವನು ನನ್ನನ್ನು ಅನುಸರಿಸುತ್ತಾನೆ.

ರುದ್ರೋ ನಾರಾಯಣಶ್ಚೈವ ಸತ್ತ್ವಮೇಕಂ ದ್ವಿಧಾಕೃತಮ್ ।
ಲೋಕೇ ಚರತಿ ಕೌಂತೇಯ ವ್ಯಕ್ತಿಸ್ಥಂ ಸರ್ವಕರ್ಮಸು ॥೨೪॥

ಎರಡು ರೀತಿಯಾದ ಸತ್ತ್ವವಿದೆ. ಒಂದು ನನ್ನ ಸ್ವರೂಪಭೂತವಾದ ಮುಖ್ಯ ಸಾಮರ್ಥ್ಯವು ಸತ್ತ್ವವೆನಿಸಿದೆ. ಮತ್ತೊಂದು ನನಗಿಂತ ಭಿನ್ನವಾದ ಸತ್ತ್ವಗುಣವೆಂಬ ಸಾಮರ್ಥ್ಯವು. ಎರಡೂ ನನಗೆ ಪ್ರಿಯವಾದುದು, ನನ್ನ ಸ್ವರೂಪಭೂತವಾದುದು. ಆದ್ದರಿಂದ ನನ್ನ ಸತ್ತ್ವ ಎಂದು ಹೇಳುತ್ತೇನೆ. ನನ್ನ ಸ್ವರೂಪಭೂತವಾದ ಸತ್ತ್ವ ನಾರಾಯಣ ಎಂದು ಪ್ರಸಿದ್ಧವಾದರೆ, ಸತ್ತ್ವಗುಣವೆಂಬ ಸತ್ತ್ವ ರುದ್ರ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಸಮಸ್ತ ಕರ್ಮಗಳಲ್ಲಿ ಇದು ಪ್ರಕಟವಾಗುತ್ತದೆ. ಇವುಗಳಿಂದಲೇ ಜಗತ್ತು ನಡೆಯುತ್ತದೆ.

ವ್ಯಾಖ್ಯಾನ ವಿಶೇಷ– ಈ ವಿಚಾರ ಉಪಲಕ್ಷಣವನ್ನು ಎಲ್ಲರಲ್ಲೂ ಗ್ರಹಿಸಬೇಕು. ಭಗವಂತನು ಬ್ರಹ್ಮ, ಇಂದ್ರ ಮೊದಲಾದ ದೇವತಾರೂಪದಿಂದ ಎಲ್ಲ ಕಡೆಯೂ ಅಂತರ್ಯಾಮಿಯಾಗಿದ್ದಾನೆ. ಆದ್ದರಿಂದ ಭಗವಂತನಿಗೆ ಪ್ರಿಯವೆನಿಸಿದ ಸತ್ತ್ವವೆಂಬ ಗುಣವು ಬ್ರಹ್ಮ-ಇಂದ್ರಾದಿ ದೇವತೆಗಳಲ್ಲಿಯೂ ಇದೆ. ಆ ದೇವತೆಗಳನ್ನು ಆರಾಧಿಸುವುದರಿಂದ ಭಗವಂತನ ಅಂತರ್ಯಾಮಿ ಗುಣವನ್ನೇ ಆರಾಧಿಸಿದಂತಾಗುತ್ತದೆ. ಆ ದೇವತೆಗಳನ್ನು ಸೇವಿಸಿದವರು ಭಗವಂತನನ್ನೂ ಸೇವಿಸಿದಂತೆ ಎಂದು ಸಮಸ್ತ ದೇವತೆಗಳಲ್ಲಿಯೂ ರುದ್ರದೇವರಿಗೆ ಹೇಳಿದ ನಿಯಮವನ್ನು ಚಿಂತಿಸಬೇಕು.

ಅಥವಾ ನನ್ನ ಸತ್ತ್ವ ಎಂಬ ಸಾಮರ್ಥ್ಯವು ನಾರಾಯಣ ಎಂಬ ಹೆಸರಿನಿಂದ ಎಲ್ಲ ಕಡೆ ವ್ಯಾಪ್ತವಾಗಿದೆ. 'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂಬ ಶ್ರುತಿಯೇ ಇದಕ್ಕೆ

ಆಧಾರ. ಮತ್ತೊಂದು ಅಂಶದಿಂದ ರುದ್ರ ಎಂಬ ಹೆಸರಿನಿಂದ ರುದ್ರನ ಅಂತರ್ಯಾಮಿಯಾಗಿಯೂ ಇದ್ದೇನೆ. ಆದ್ದರಿಂದ ನನ್ನ ಸತ್ತ್ವವೇ ಎರಡು ವಿಧವಾಗಿ ವಿಭಜಿಸಲ್ಪಟ್ಟಿದೆ. ಆದ್ದರಿಂದ ರುದ್ರದೇವರಿಗೆ ಮಾಡುವ ಪೂಜೆಯು ರುದ್ರಾಂತರ್ಗತನಾದ ನನ್ನ ಪೂಜೆಯೇ ಎನಿಸಿದೆ. ಹಾಗಾದರೆ ಮಗನನ್ನು ಪಡೆಯುವ ಬಯಕೆಯಿಂದ ಕೈಲಾಸವಾಸಿಯಾದ ಗೌರೀಪತಿಯನ್ನೇ ಕೃಷ್ಣಾವತಾರದಲ್ಲಿ ನೀನು ಏಕೆ ಆರಾಧಿಸಿದೆ ಎಂದರೆ ಅದಕ್ಕೆ ಉತ್ತರವನ್ನು ಕೃಷ್ಣನು ಮುಂದಿನ ಪದ್ಯದಲ್ಲಿ ತಿಳಿಸುತ್ತಾನೆ.

ನ ಹಿ ಮೇ ಕೇನಚಿದ್ ದೇಯೋ ವರಃ ಪಾಂಡವನಂದನ ।
ಇತಿ ಸಂಚಿಂತ್ಯ ಮನಸಾ ಪುರಾಣಂ ವಿಶ್ವಮೀಶ್ವರಮ್ ।
ಪುತ್ರಾರ್ಥಮಾರಾಧಿತವಾನಾತ್ಮಾನಮಹಮಾತ್ಮನಾ ॥೨೫॥

ಪಾಂಡವನಂದನನೇ, ನನಗೆ ಯಾರೂ ವರವನ್ನು ನೀಡಬೇಕಾಗಿಲ್ಲ. ಈ ರೀತಿಯಾಗಿ ಮನಸ್ಸಿನಲ್ಲಿ ಯೋಚಿಸಿ ಪುರಾಣನೂ ಜಗದೀಶ್ವರನೂ ಆದ ನಾನು ರುದ್ರಾಂತರ್ಯಾಮಿಯಾದ ನನ್ನ ರೂಪವನ್ನೇ ಮಗನಿಗಾಗಿ ಆರಾಧಿಸಿದೆನು.

ನ ಹಿ ವಿಷ್ಣುಃ ಪ್ರಣಮತಿ ಕಸ್ಮೈಚಿದ್ ವಿಬುಧಾಯ ತು ।
ಋತ ಆತ್ಮಾನಮೇವೇತಿ ತತೋಽರುದ್ರಂ ಭಜಾಮ್ಯಹಮ್ ॥೨೬॥

ವಿಷ್ಣುವು ಯಾವ ಜ್ಞಾನಿಗೂ ತನ್ನನ್ನು ಹೊರತಾಗಿ ನಮಸ್ಕರಿಸುವುದಿಲ್ಲ. ತನ್ನನ್ನೇ ತಾನು ನಮಸ್ಕರಿಸುತ್ತಾನೆ. ಆದ್ದರಿಂದ ನಾನು 'ಅರುದ್ರಂ ಭಜಾಮಿ' ರುದ್ರನಿಗಿಂತ ಭಿನ್ನನಾದ, ರೋಗವನ್ನು ಪರಿಹರಿಸುವ ರುದ್ರನಾಮಕನಾದ ನನ್ನನ್ನೇ ಭಜಿಸುತ್ತೇನೆ. ಇಲ್ಲದಿದ್ದಲ್ಲಿ ಇದೇ ಅಧ್ಯಾಯದಲ್ಲಿ ಹೇಳಿದ ಹಿಂದಿನ ಮಾತಿಗೂ ಮುಂದಿನ ಮಾತಿಗೂ ವಿರೋಧವು ಉಂಟಾದೀತು! ಆದ್ದರಿಂದ ಹೀಗೆ ವ್ಯಾಖ್ಯಾನಿಸಬೇಕು ಎಂದು ಭಾವ.

ಸಬ್ರಹ್ಮಕಾಃ ಸರುದ್ರಾಶ್ಚ ಸೇಂದ್ರಾ ದೇವಾಃ ಸಹರ್ಷಿಭಿಃ ।
ಅರ್ಚಯಂತಿ ಸುರಶ್ರೇಷ್ಠಂ ದೇವಂ ನಾರಾಯಣಂ ಹರಿಮ್ ॥೨೭॥

ಬ್ರಹ್ಮ, ರುದ್ರ, ದೇವತೆಗಳು, ಮಹರ್ಷಿಗಳು ಎಲ್ಲರೂ ಪರಿವಾರಸಹಿತವಾಗಿ ಸುರಶ್ರೇಷ್ಠನಾದ, ದೇವದೇವನಾದ ಹರಿನಾರಾಯಣನನ್ನೇ ಪೂಜಿಸುತ್ತಾರೆ.

ಭವಿಷ್ಯತಾಂ ವರ್ತತಾಂ ಚ ಭೂತಾನಾಂ ಚೈವ ಭಾರತ ।
ಸರ್ವೇಷಾಮಗ್ರಣೀರ್ವಿಷ್ಣುಃ ಸೇವ್ಯಃ ಪೂಜ್ಯಶ್ಚ ನಿತ್ಯಶಃ ॥೨೮॥

ಮುಂದೆ ಹುಟ್ಟಲಿರುವ, ಈಗಿರುವ, ಕಳೆದಿರುವ ಸಮಸ್ತ ದೇವತಾ ಸಮುದಾಯದಲ್ಲೇ ವಿಷ್ಣುವು ಎಲ್ಲರಿಗಿಂತಲೂ ಸರ್ವೋತ್ತಮನಾಗಿದ್ದಾನೆ. ನಿತ್ಯವೂ ಎಲ್ಲರಿಂದ ಪೂಜ್ಯನೂ, ಸೇವ್ಯನೂ ಆಗಿರುತ್ತಾನೆ.

ನಮಸ್ವ ಹವ್ಯದಂ ವಿಷ್ಣುಂ ತಥಾ ಶರಣದಂ ನಮ ।
ವರದಂ ನಮಸ್ವ ಕೌಂತೇಯ ಹವ್ಯಕವ್ಯಭುಜಂ ನಮ ॥೨೯॥

ಅರ್ಜುನನೇ, ಹವ್ಯವನ್ನು ನೀಡುವ ವಿಷ್ಣುವಿಗೆ ನಮಸ್ಕರಿಸು. ಶರಣ್ಯನಾದ ಕೃಷ್ಣನಿಗೆ ನಮಸ್ಕರಿಸು. ವರದನಾದ ಕೃಷ್ಣನನ್ನು ನಮಸ್ಕರಿಸು. ಹವ್ಯ-ಕವ್ಯಭೋಕ್ತೃವಾದ ಭಗವಂತನನ್ನು ನಮಸ್ಕರಿಸು.

ಚತುರ್ವಿಧಾ ಮಮ ಜನಾ ಭಕ್ತಾ ಏವಂ ಹಿ ತೇ ಶ್ರುತಮ್ ।
ತೇಷಾಮೇಕಾಂತಿನಃ ಶ್ರೇಷ್ಠಾಸ್ತೇ ಚೈವಾನನ್ಯದೇವತಾಃ ।
ಅಹಮೇವ ಗತಿಸ್ತೇಷಾಂ ನಿರಾಶೀಃ ಕರ್ಮಕಾರಿಣಾಮ್ ॥೩೦॥

ಆರ್ತ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ ಎಂದು ನಾಲ್ಕು ಜನ ಭಕ್ತರಿದ್ದಾರೆ ಎಂದು ನಿನಗೆ ಈಗಾಗಲೇ ಗೀತೆಯಲ್ಲಿ ತಿಳಿಸಿದ್ದೇನೆ. ಅವರಲ್ಲಿ ಯಾರು ಇತರ ದೇವತೆಗಳನ್ನು ಆರಾಧಿಸದೆ ನನ್ನಲ್ಲೇ ಅನನ್ಯಭಕ್ತಿಯುಳ್ಳವರಾಗಿ ನನ್ನನ್ನೇ ಆರಾಧಿಸುತ್ತಾರೋ ಅವರೇ ಜ್ಞಾನಿಗಳಾದ ಭಕ್ತಶ್ರೇಷ್ಠರು. ನಿಷ್ಕಾಮನೆಯಿಂದ ಸಮಸ್ತ ಕರ್ಮಗಳನ್ನು ಆಚರಿಸುವ ಅವರಿಗೆ ನಾನೇ ಗತಿದಾಯಕನು.

ಯೇ ಚ ಶಿಷ್ಟಾಸ್ತ್ರಯೋ ಭಕ್ತಾಃ ಫಲಕಾಮಾ ಹಿ ತೇ ಮತಾಃ ।
ಸರ್ವೇ ಚ್ಯವನಧರ್ಮಾಣಃ ಪ್ರತಿಬುದ್ಧಸ್ತು ಶ್ರೇಷ್ಠಭಾಕ್ ॥೩೧॥

ಉಳಿದ ಮೂರು ಮಂದಿ ಭಕ್ತರೇನಿದ್ದಾರೊ ಅವರು ಫಲಕಾಮನೆ ಹೊಂದಿದವರು. ಅವರೆಲ್ಲರೂ ಪುಣ್ಯವನ್ನು ಅನುಭವಿಸಿದ ಬಳಿಕ ಸ್ವರ್ಗದಿಂದ ಬೀಳುವ ಧರ್ಮ ಉಳ್ಳವರು. ಆದರೆ ಚೆನ್ನಾಗಿ ಭಗವತತ್ತ್ವವನ್ನು ಅರಿತ ಜ್ಞಾನಿಭಕ್ತನು ಶ್ರೇಷ್ಠವಾದ ಭಗವತ್ಪ್ರಾಪ್ತಿ ಎಂಬ ಫಲವನ್ನೇ ಹೊಂದುತ್ತಾನೆ.

ಬ್ರಹ್ಮಾಣಂ ಶಿತಿಕಂಠಂ ಚ ಯಾಶ್ಚಾನ್ಯಾ ದೇವತಾಃ ಸ್ಮೃತಾಃ ।
ಪ್ರಬುದ್ಧವರ್ಯಾಃ ಸೇವಂತೇ ಮಾಮೇವೈಷ್ಯಂತಿ ಯತ್ ಪರಮ್ ।
ಭಕ್ತಂ ಪ್ರತಿ ವಿಶೇಷಸ್ತೇ ಏಷ ಫಾರ್ಥಾನುಕೀರ್ತಿತಃ ॥೩೨॥

ಜ್ಞಾನಿಗಳಾದ ಭಕ್ತರು ಬ್ರಹ್ಮನನ್ನಾಗಲಿ, ಶಿವನನ್ನಾಗಲಿ, ಉಳಿದ ದೇವತೆಗಳನ್ನಾಗಲಿ ಸೇವಿಸುತ್ತಿದ್ದರೂ ಕೊನೆಯಲ್ಲಿ ನನ್ನನ್ನೇ ಶ್ರೇಷ್ಠನೆಂದು ಸೇವಿಸುತ್ತಾರೆ. ನಾನು ನನ್ನ ಭಕ್ತರಲ್ಲಿರುವ ವಿಶೇಷವನ್ನು ನಿನಗೆ ತಿಳಿಸಿದ್ದೇನೆ.

ತ್ವಂ ಚೈವಾಹಂ ಚ ಕೌಂತೇಯ ನರನಾರಾಯಣೌ ಸ್ಮೃತೌ ।
ಭಾರಾವತರಣಾರ್ಥಂ ಹಿ ಪ್ರವಿಷ್ಟೌ ಮಾನುಷೀಂ ತನುಮ್ ॥೩೩॥

ನಾನು ಮತ್ತು ನೀನು ನರ-ನಾರಾಯಣ ಎಂಬ ಹೆಸರಿನಿಂದ ಖ್ಯಾತರಾದ ಋಷಿಗಳು. ಭೂಭಾರಹರಣಕ್ಕಾಗಿ ಮನುಷ್ಯಲೋಕವನ್ನು, ಮನುಷ್ಯ ಶರೀರವನ್ನು ಪಡೆದಿರುತ್ತೇವೆ.

ಜಾನಾಮ್ಯಧ್ಯಾತ್ಮಯೋಗಾಂಶ್ಚ ಯೋಽಹಂ ಯಸ್ಮಾಚ್ಚ ಭಾರತ ।
ನಿವೃತ್ತಿಲಕ್ಷಣೋ ಧರ್ಮಸ್ತಥಾಭ್ಯುದಯಿಕೋಽಪಿ ಚ ॥೩೪॥

ನಾನು ಅಧ್ಯಾತ್ಮಯೋಗವನ್ನು ಬಲ್ಲವನು. ನಾನು ಯಾರು, ಎಲ್ಲಿಂದ ಬಂದೆ ಎಂಬುದನ್ನು ತಿಳಿದಿದ್ದೇನೆ. ಲೋಕಸುಖಕ್ಕೆ ಕಾರಣವಾದ ಪ್ರವೃತ್ತಿ ಧರ್ಮ, ಮೋಕ್ಷ ಸಾಧನವಾದ ನಿವೃತ್ತಿಧರ್ಮವು ನಾನೇ ಆಗಿದ್ದೇನೆ.

ನಾರಾಣಾಮಯನಂ ಖ್ಯಾತಮಹಮೇಕಃ ಸನಾತನಃ ।
ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ಅಯನಂ ಮಮ ತತ್ ಪೂರ್ವಮತೋ ನಾರಾಯಣೋ ಹ್ಯಹಮ್ ॥

ದೋಷಗಳಿಗೆ ವಿರುದ್ಧವಾದ, ಗುಣಗಳಿಗೆ ಆಧಾರನಾದುದರಿಂದ ಸನಾತನನಾದ ನಾರಾಯಣನು ನಾನಾಗಿದ್ದೇನೆ ಅಥವಾ ನರನಿಂದ ಹುಟ್ಟಿದ ಕಾರಣದಿಂದ ನೀರಿಗೆ ನಾರ ಎಂದು ಹೆಸರು. ಆ ನೀರೇ ನಿನಗೆ ವಾಸಿಸಲು ಸ್ಥಾನವಾಗಿತ್ತು. ಆದ್ದರಿಂದ ನಾನು ನಾರಾಯಣನಾಗಿದ್ದೇನೆ.

ಛಾದಯಾಮಿ ಜಗದ್ ವಿಶ್ವಂ ಭೂತ್ವಾ ಸೂರ್ಯ ಇವಾಂಶುಭಿಃ ।
ಸರ್ವಭೂತಾಧಿವಾಸಶ್ಚ ವಾಸುದೇವಸ್ತತೋ ಹ್ಯಹಮ್ ॥೩೬॥

ನಾನು ಸೂರ್ಯದೇವನು ತನ್ನ ಕಿರಣಗಳಿಂದ ಜಗತ್ತನ್ನು ಮುಚ್ಚುವಂತೆ ಸಮಸ್ತ ಜಗತ್ತನ್ನು ಮುಚ್ಚುತ್ತೇನೆ. ಆದ್ದರಿಂದ ವಾಸುದೇವನೆನಿಸಿದ್ದೇನೆ. (‘ವಸ ಆಚ್ಛಾದನೇ’

ಎಂಬ ಧಾತುವನ್ನು ಅವಲಂಬಿಸಿ ಹೇಳಿದ ಅರ್ಥ) ಅಥವಾ ಸಮಸ್ತ ಭೂತಗಳಿಗೂ ನಾನು ವಾಸಸ್ಥಾನನಾಗಿರುವುದರಿಂದ ವಾಸುದೇವನಾಗಿದ್ದೇನೆ ('ವಸ ನಿವಾಸೇ' ಎಂಬ ಧಾತುವಿನ ಆಧಾರದಿಂದ ಹೇಳಿದ ಅರ್ಥ).

ಗತಿಶ್ಚ ಸರ್ವಭೂತಾನಾಂ ಪ್ರಜಾನಾಂ ಚಾಪಿ ಭಾರತ ।
ವ್ಯಾಪ್ತಾ ಮೇ ರೋದಸೀ ಪಾರ್ಥ ಕಾಂತಿಶ್ಚಾಭ್ಯಧಿಕಾ ಮಮ ॥೩೭॥

ವಿಶೇಷವಾಗಿ ಸಮಸ್ತ ಭೂತಗಳಿಗೂ ನಾಳೆ ನಾನೇ ಗತಿಯಾದುದರಿಂದ 'ವಿಶ್ವ' ಎನಿಸಿದ್ದೇನೆ. ಅಥವಾ ಪೃಥಿವಿ, ಅಂತರಿಕ್ಷಗಳು ವಿಶೇಷವಾಗಿ ನನ್ನಿಂದಲೇ ಅಭಿವೃದ್ಧಿಯನ್ನು ಹೊಂದಿರುವುದರಿಂದಲೂ ನಾನೇ ವಿಶ್ವನೆನಿಸಿದ್ದೇನೆ. ನನ್ನ ಕಾಂತಿಯು ಎಲ್ಲ ತೇಜಸ್ಸಿಗಿಂತಲೂ ಉತ್ಕೃಷ್ಟವಾದುದರಿಂದಲೂ ವಿಶ್ವನೆನಿಸಿದ್ದೇನೆ.

ವ್ಯಾಖ್ಯಾನ ವಿಶೇಷ–'ಗತಿಶ್ಚ ಸರ್ವಭೂತಾನಾಂ' ಎಂಬ ಈ ಮಾತು ವಿಶ್ವ ಶಬ್ದದ ನಿರ್ವಚನವಾಗಿದೆ. 'ಶುಭ ದೀಪ್ತೌ' ಎಂಬ ಧಾತುವಿಗೆ ನಿರುಕ್ತದಂತೆ ಭಕಾರಕ್ಕೆ ಅಲ್ಪಪ್ರಾಣ ಬಕಾರದ ವಿಕಾರವು ಉಂಟಾಗಲು 'ವಿಶೇಷೇಣ ಶ್ವಂ ಕಾಂತಿರ್ಯಸ್ಯ' ಎಂಬ ವ್ಯುತ್ಪತ್ತಿಯಿಂದ 'ವಿಶ್ವ' ಎಂಬ ಶಬ್ದವು ರಚಿತವಾಗುತ್ತದೆ. 'ಅಧಿಭೂತಾನಿವಿಶ್ವಶ್ಚ' ಎಂಬ ಮಾತಿನಿಂದ 'ವಿಶ ಪ್ರವೇಶನೇ' ಎಂಬ ಧಾತುವಿನ ಆಧಾರದಿಂದ ಸಮಸ್ತ ಪ್ರಾಣಿಗಳಲ್ಲೂ ಅಧಿಕನಾಗಿ ಪ್ರವೇಶ ಹೊಂದಿರುವುದರಿಂದ 'ವಿಶ್ವ' ಎನಿಸಿದ್ದಾನೆ. ಹೀಗೆ 'ಭೂತಾನಾಂ ಶ್ವಂ ಗತಿಃ ಯಸ್ಮಾತ್ ಸಃ ವಿಶ್ವಃ' ಎಂಬುದು ಒಂದು ಅರ್ಥ. (೨) 'ಟುಓಶ್ವಿ ಗತಿವೃದ್ಧ್ಯೋಃ' ಎಂಬ ಧಾತುವಿನಲ್ಲಿ 'ವಿಶೇಷೇಣ ಶ್ವಂ ಅಭಿವೃದ್ಧಿಃ ಯಸ್ಯ ಜಗತಃ ಇತಿ ವಿಶ್ವಃ' ಎಂಬುದು ಎರಡನೆಯ ಅರ್ಥ. 'ವಿಶೇಷೇಣ ಶ್ವಂ ಕಾಂತಿಃ ಯಸ್ಯ' ಎಂಬುದು ವಿಶ್ವ ಎಂಬ ಶಬ್ದದ ಮೂರನೆಯ ನಿರ್ವಚನ. 'ವಿಶ ಪ್ರವೇಶನೇ' ಎಂಬ ಧಾತುವಿನ ಆಧಾರದಿಂದ 'ಪ್ರಾಣಿಷು ಅಧಿಕತಯಾ ಪ್ರವಿಷ್ಟಃ' ಎಂಬ ಅರ್ಥದಲ್ಲಿ ವಿಶ್ವಃ ಎಂಬ ಶಬ್ದದ ನಾಲ್ಕನೆಯ ನಿರ್ವಚನವನ್ನು ತಿಳಿಯಬೇಕು. ಹೊರತು ಭಗವಂತನು ಪ್ರಪಂಚ ಸ್ವರೂಪಿ ಎಂದು ಅಭೇದ ಚಿಂತನೆಯಿಂದ ವಿಶ್ವಶಬ್ದಾರ್ಥವನ್ನು ಹೇಳಬಾರದು (ಲಕ್ಷಾಲಂಕಾರ).

ಅಧಿಭೂತಾನಿ ಚಾಂತೇಽಹಂ ತದಿಚ್ಛಂಶ್ಚಾಸ್ಮಿ ಭಾರತ ।
ಕ್ರಮಣಾಚ್ಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ ॥೩೮॥

ನಾನು ಸಮಸ್ತ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿದ್ದು ಸಮಸ್ತ ಪ್ರಾಣಿಗಳು ಅಂತ್ಯಕಾಲದಲ್ಲಿ ಪರಬ್ರಹ್ಮನನ್ನು ಕಾಣಬೇಕೆಂದು ಬಯಸುತ್ತವೆ. ಆ ಬ್ರಹ್ಮವಸ್ತುವು ನಾನೇ ಆಗಿದ್ದೇನೆ. ನಾನು ವಿಶೇಷವಾಗಿ ಪಾದಗಳನ್ನು ಎಲ್ಲ ಕಡೆಯೂ ವ್ಯಾಪಿಸಿರುವುದರಿಂದ ವಿಷ್ಣು ಎಂಬ ಹೆಸರನ್ನು ಪಡೆದಿರುತ್ತೇನೆ.

ವ್ಯಾಖ್ಯಾನ ವಿಶೇಷ– 'ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ' ಎಂಬ ಶ್ರುತ್ಯರ್ಥವು ನಿರೂಪಿತವಾಗಿದೆ.

ದಮಾತ್ ಸಿದ್ಧಿಂ ಪರೀಪ್ಸಂತೋ ಮಾಂ ಜನಾಃ ಕಾಮಯಂತಿ ಹಿ ।
ದಿವಂ ಚೋರ್ವೀಂ ಚ ಮಧ್ಯಂ ಚ ತಸ್ಮಾದ್ ದಾಮೋದರೋ ಹ್ಯಹಮ್ ॥

ದಮದಿಂದ ಅರ್ಥಾತ್ ಇಂದ್ರಿಯನಿಗ್ರಹದಿಂದ ಸಿದ್ಧಿಯನ್ನು ಪಡೆಯಲು ಬಯಸುವ ಜನರು ನನ್ನನ್ನೇ ಅಪೇಕ್ಷಿಸುತ್ತಾರೆ. ದಮ ಉಳ್ಳವರ ಉದರದಲ್ಲಿ ನಾನು ಇರುವುದರಿಂದ ದಾಮೋದರ ಎನಿಸಿದ್ದೇನೆ. ಅಥವಾ ದಿವಿ ಎಂಬ ಧಾತುವಿಗೆ ದಾ ಎಂಬ ಪ್ರತ್ಯಯವನ್ನು ಸೇರಿಸಿದರೆ ದಾಃ ಎಂದರೆ ದ್ಯುಲೋಕ ಎಂದು ಅರ್ಥವಾಗುತ್ತದೆ. ಮಾ ಎಂದರೆ ಭೂಲೋಕ ಎಂದು ಅರ್ಥವಾಗುತ್ತದೆ. ಹೀಗೆ ದಾಮ ಎನಿಸಿದ ಭೂಮಿ ಅಂತರಿಕ್ಷಗಳ ನಡುವೆ ಉದರವುಳ್ಳವನಾದ್ದರಿಂದ ದಾಮೋದರ ಎನಿಸಿದ್ದೇನೆ. ಅಂತರಿಕ್ಷ-ಭೂಮಿಗಳ ನಡುವೆ ಭಗವಂತನ ಉದರವಿದೆ ಎಂದು ಚಿಂತಿಸಬೇಕೇ ಹೊರತು ಯಶೋದೆಯಿಂದ ಕಟ್ಟಲ್ಪಟ್ಟ ಉದರ ಎಂಬ ಅರ್ಥವು ಮುಖ್ಯವಾದ ಅರ್ಥವಲ್ಲ.

ವ್ಯಾಖ್ಯಾನ ವಿಶೇಷ– (೧) 'ದಾಃ ದ್ಯೌಃ ಮಾ ಕ್ಷ್ಮಾತ್ರಯೋರ್ಮಧ್ಯೇ ಉದರಂ ಯಸ್ಯ ಸಃ ದಾಮೋದರಃ (೨) 'ದಮಾಃ ದಮವಂತೋ ತೇಷಾಂ ಉದರೇ ವಿದ್ಯಮಾನಃ ದಾಮೋದರಃ'.

ಪೃಶ್ನಿರಿತ್ಯುಚ್ಯತೇ ಚಾನ್ನಂ ವೇದಾ ಆಪೋಽಮೃತಂ ತಥಾ ।
ಮಮೈತಾನಿ ಸದಾ ಗರ್ಭೇ ಪೃಶ್ನಿಗರ್ಭಸ್ತತೋ ಹ್ಯಹಮ್ ॥೪೦॥

ಅನ್ನ, ವೇದ, ಜಲ, ಅಮೃತಗಳನ್ನು ಪೃಶ್ನಿ ಎಂದು ಹೇಳುತ್ತಾರೆ. ಇದೆಲ್ಲವೂ ನನ್ನ ಗರ್ಭದಲ್ಲಿರುವುದರಿಂದ ಪೃಶ್ನಿಗರ್ಭನಾಗಿದ್ದೇನೆ ಹೊರತು ಪೃಶ್ನಿ ಎಂಬ ದೇವಿಯ ಗರ್ಭದಲ್ಲಿ ಹುಟ್ಟಿರುವುದರಿಂದ ನಾನು ಪೃಶ್ನಿಗರ್ಭನೆನಿಸುವುದಿಲ್ಲ.

ಋಷಯಃ ಪ್ರಾಹುರೇವಂ ಮಾಂ ತ್ರಿತಕೂಪಾಭಿಪಾತಿತಮ್ ।
ಪೃಶ್ನಿಗರ್ಭ ತ್ರಿತಂ ಪಾಹೀತ್ಯೇಕತದ್ವಿತಪಾತಿತಮ್ ॥೪೧॥

ಏಕತ, ದ್ವಿತ ಎಂಬ ಋಷಿಗಳು ತ್ರಿತನನ್ನು ಬಾವಿಗೆ ತಳ್ಳಿದರು. ಆ ಸಮಯದಲ್ಲಿ ಋಷಿಗಳು ನನ್ನನ್ನು ಕುರಿತು ಪೃಶ್ನಿಗರ್ಭನೇ, ಏಕತ, ದ್ವಿತರಿಂದ ಬಾವಿಗೆ ತಳ್ಳಿರುವ ತ್ರಿತನನ್ನು ರಕ್ಷಿಸು ಎಂದು ಪ್ರಾರ್ಥಿಸಿದರು.

ತತಃ ಸ ಬ್ರಹ್ಮಣಃ ಪುತ್ರ ಆದ್ಯೋ ಋಷಿವರಸ್ತ್ರಿತಃ ।
ಉತ್ತತಾರೋದಪಾನಾದ್ವೈ ಪೃಶ್ನಿಗರ್ಭಾನುಕೀರ್ತನಾತ್ ॥೪೨॥

ಆ ಸಮಯದಲ್ಲಿ ತ್ರಿತನು ನನ್ನನ್ನು ಪೃಶ್ನಿಗರ್ಭ ಎಂಬ ಹೆಸರಿನಿಂದ ಸ್ತೋತ್ರ ಮಾಡಿದ್ದರಿಂದ ಬ್ರಹ್ಮನ ಮೊದಲನೆಯ ಸುತನಾದ, ವೃಷ್ಣಿಗರ್ಭನಾದ ತ್ರಿತನು ಬಾವಿಯಿಂದ ಮೇಲಕ್ಕೆದ್ದು ಬಂದನು.

ಸೂರ್ಯಸ್ಯ ತಪತೋ ಲೋಕಾನಗ್ನೇಃ ಸೋಮಸ್ಯ ಚಾಪ್ಯುತ ।
ಅಂಶವೋ ಯೇ ಪ್ರಕಾಶಂತೇ ಮಮೈತೇ ಕೇಶಸಂಜ್ಞಿತಾಃ ।
ಸರ್ವಜ್ಞಾಃ ಕೇಶವಂ ತಸ್ಮಾನ್ಮಾಮಾಹುರ್ದ್ವಿಜಸತ್ತಮಾಃ ॥೪೩॥

ಲೋಕಗಳನ್ನು ಪ್ರಕಾಶಿಸುವ ಸೂರ್ಯನ, ಅಗ್ನಿಯ, ಚಂದ್ರನ ಕಿರಣಗಳೆಲ್ಲವೂ ಕೇಶ ಎಂಬ ಸಂಜ್ಞೆಯನ್ನು ಪಡೆದಿವೆ. ಅಂತಹ ಕೇಶಯುಕ್ತನಾದ್ದರಿಂದ ಸರ್ವಜ್ಞರಾದ ದ್ವಿಜರು ನನ್ನನ್ನು ಕೇಶವ ಎನ್ನುತ್ತಾರೆ. ಕೇಶವುಳ್ಳವನೇ ಕೇಶವನು. ಕೇಶ ಎಂದರೆ ಸೂರ್ಯಾದಿಗಳ ಪ್ರಕಾಶ ಎಂದು ಭಾವ.

ವ್ಯಾಖ್ಯಾನ ವಿಶೇಷ– 'ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಂ' ಎಂಬುದರ ವ್ಯಾಖ್ಯಾನವಿದು.

ಸ್ವಪತ್ನ್ಯಾಮಾಹಿತೋ ಗರ್ಭ ಉಚಥ್ಯೇನ ಮಹಾತ್ಮನಾ ।
ಉತಥ್ಯೇऽಂತರ್ಹಿತೇ ಚೈವ ಕದಾಚಿದ್ದೇವಮಾಯಯಾ ।
ಬೃಹಸ್ಪತಿರಥಾವಿಂದತ್ತಾಂ ಪತ್ನೀಂ ತಸ್ಯ ಭಾರತ ॥೪೪॥

ಒಮ್ಮೆ ಮಹಾತ್ಮನಾದ ಉಚಥ್ಯನು ತನ್ನ ಪತ್ನಿಯಾದ ಮಮತೆಯಲ್ಲಿ ಗರ್ಭಾಧಾನವನ್ನು ಮಾಡಿದ ಬಳಿಕ ದೇವತೆಗಳ ಮಾಯೆಯಿಂದ ಅಡಗಿ ಹೋದನು. ಆ ಸಮಯದಲ್ಲಿ ಉಚಥ್ಯನ ತಮ್ಮನಾದ ಬೃಹಸ್ಪತಿಯು ಉಚಥ್ಯನ ಹೆಂಡತಿಯಾದ ಮಮತೆಯಲ್ಲಿ ಕಾಮದಿಂದ ಪ್ರವೇಶಿಸಲು ಯತ್ನಿಸಿದನು.

ತತೋ ವೈ ತಮೃಷಿಶ್ರೇಷ್ಠಂ ಮೈಥುನೋಪಗತಂ ತಥಾ ।
ಉವಾಚ ಗರ್ಭಃ ಕೌಂತೇಯ ಪಂಚಭೂತಸಮನ್ವಿತಃ ॥೪೫॥

ಪೂರ್ವಾಗತೋಽಹಂ ವರದ ನಾರ್ಹಸ್ಯಂಬಾಂ ಪ್ರಬಾಧಿತುಮ್ ।
ಏತದ್ ಬೃಹಸ್ಪತಿಃ ಶ್ರುತ್ವಾ ಚುಕ್ರೋಧ ಚ ಶಶಾಪ ಚ ॥೪೬॥

ಹೀಗೆ ಆತುರದಿಂದ ಬಂದ ಋಷಿಯನ್ನು ಕಂಡು ಪಂಚಭೂತಗುಣಗಳುಳ್ಳ ಗರ್ಭವು ನಾನು ಮೊದಲೇ ಈ ಗರ್ಭದಲ್ಲಿದ್ದೇನೆ. ನನ್ನ ತಾಯಿಯನ್ನು ನೀನು ನಿರ್ಬಂಧಿಸಬಾರದು ಎಂದು ಕೂಗಿಕೊಂಡಿತು. ಅದನ್ನು ಕೇಳಿಸಿಕೊಂಡ ಬೃಹಸ್ಪತಿಯು ಸಿಟ್ಟಾಗಿ ಶಪಿಸಿದನು.

ಮೈಥುನೋಪಗತೋ ಯಸ್ಮಾತ್ತ್ವಯಾಹಂ ವಿನಿವಾರಿತಃ ।
ತಸ್ಮಾದಂಧೋ ಜಾಸ್ಯಸಿ ತ್ವಂ ಮಚ್ಛಾಪಾನ್ನಾತ್ರ ಸಂಶಯಃ ॥೪೭॥

ಮೈಥುನ ಕರ್ಮಕ್ಕಾಗಿ ಆಗಮಿಸಿದ ನನ್ನನ್ನು ತಡೆದ ಕಾರಣದಿಂದ ನೀನು ಅಂಧನಾಗುತ್ತಿ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಸ ಶಾಪಾದೃಷಿಮುಖ್ಯಸ್ಯ ದೀರ್ಘಂ ತಮ ಉಪೇಯಿವಾನ್ ।
ಸ ಹಿ ದೀರ್ಘತಮಾ ನಾಮ ನಾಮ್ನಾ ಹ್ಯಾಸೀದೃಷಿಃ ಪುರಾ ॥೪೮॥

ಆ ಬೃಹಸ್ಪತಿಯ ಶಾಪದಿಂದಾಗಿ ಮಮತೆಯ ಗರ್ಭದಿಂದ ಹುಟ್ಟಿದ ಋಷಿಮುಖ್ಯನು ದೀರ್ಘವಾದ ತಮಸ್ಸನ್ನು ಹೊಂದಿದನು. ಆದ್ದರಿಂದ ದೀರ್ಘತಮ ಎಂಬ ಋಷಿಯಾಗಿ ಹಿಂದೆ ಹುಟ್ಟಿದನು.

ವೇದಾನವಾಪ್ಯ ಚತುರಃ ಸಾಂಗೋಪಾಂಗಾನ್ ಸನಾತನಾನ್ ।
ಪ್ರಯೋಜಯಾಮಾಸ ತದಾ ನಾಮ ಗುಹ್ಯಮಿದಂ ಮಮ ॥೪೯॥

ಅವನು ಅಂಧನಾಗಿದ್ದರೂ ಸಾಂಗೋಪಾಂಗವಾಗಿ ನಾಲ್ಕು ವೇದಗಳನ್ನು ಅಭ್ಯಾಸ ಮಾಡಿದನು. ವೇದಗಳನ್ನು ಅಧ್ಯಯನ ಮಾಡಿದ ಬಳಿಕ ಕೇಶವ ಎಂಬ ಈ ನಾಮವನ್ನು ಪುನಃ ಪುನಃ ಸ್ತುತಿ ಮಾಡಿದನು.

ಆನುಪೂರ್ವ್ಯೇಣ ವಿಧಿನಾ ಕೇಶವೇತಿ ಪುನಃ ಪುನಃ ।
ಸ ಚಕ್ಷುಷ್ಮಾನ್ ಸಮಭವದ್ ಗೌತಮಶ್ಚಾಭವತ್ ಪುನಃ ॥೫೦॥

ಕ್ರಮವಾಗಿ ಕೇಶವ ಎಂಬ ನಾಮವನ್ನು ಪುನಃ ಪುನಃ ನಿರ್ವಚನ ಮಾಡಿದ ವಿಧಿಯಿಂದಾಗಿ ಆ ಋಷಿಯು ಕಳೆದುಕೊಂಡ ಕಣ್ಣುಗಳನ್ನು ಮತ್ತೆ ಪಡೆದುಕೊಂಡನು. ಗೌತಮ ಎಂಬ ಹೆಸರಿನಿಂದ ಪುನಃ ಪ್ರಸಿದ್ಧನಾದನು.

ಏವಂ ಹಿ ವರದಂ ನಾಮ ಕೇಶವೇತಿ ಮಮಾರ್ಜುನ ।
ದೇವಾನಾಮಥ ಸರ್ವೇಷಾಮೃಷೀಣಾಂ ಚ ಮಹಾತ್ಮನಾಮ್ ॥೫೧॥

ಆದ್ದರಿಂದ ದೇವರ್ಷಿಗಳಲ್ಲಿ ಯಾರಾದರೂ ಕೇಶವ ಎಂದು ನನ್ನ ನಾಮವನ್ನು ಉಚ್ಚರಿಸಿದರೆ ನಾನು ಅವರಿಗೆ ವರಪ್ರದನಾಗುತ್ತೇನೆ.

ಅಗ್ನಿಃ ಸೋಮೇನ ಸಂಯುಕ್ತ ಏಕಯೋನಿ ಮುಖಂ ಕೃತಮ್ ।
ಅಗ್ನೀಷೋಮಾತ್ಮಕಂ ತಸ್ಮಾಜ್ಜಗತ್ಕೃತ್ಸ್ನಂ ಚರಾಚರಮ್ ॥೫೨॥

ಸೋಮನೊಡನೆ ಸೇರಿ ಅಗ್ನಿಯು ಏಕವಸ್ತುವಾಗಿ ದೇವತೆಗಳಿಗೆ ಮುಖನೆನಿಸುತ್ತಾನೆ. ಆದ್ದರಿಂದ ಚರಾಚರ ಜಗತ್ತೆಲ್ಲವೂ ಅಗ್ನೀಷೋಮೀಯ ಎನಿಸುತ್ತದೆ. ಅರ್ಥಾತ್ ಅಗ್ನಿ-ಸೋಮರ ಸ್ವರೂಪರು ಎಂದು.

ಅಪಿ ಹಿ ಪುರಾಣೇ ಭವತಿ
ಏಕಯೋನ್ಯಾತ್ಮಕಾವಗ್ನೀಷೋಮೌ ।
ದೇವಾಶ್ಚಾಗ್ನಿಮುಖಾ ಇತಿ ಏಕಯೋನಿತ್ವಾಚ್ಚ
ಪರಸ್ಪರಂ ಮಹಯಂತೋ ಲೋಕಾನ್ ಧಾರಯತ ಇತಿ ॥೫೩॥

ಪುರಾಣದಲ್ಲಿ ಅಗ್ನಿಯು ಸೋಮನು ಒಂದೇ ಕಾರಣವುಳ್ಳವರೆಂದು, ದೇವತೆಗಳು ಅಗ್ನಿಮುಖರೆಂದು ಹೇಳಲ್ಪಡುತ್ತಾರೆ. ಇವರಿಬ್ಬರು ಏಕಗರ್ಭರಾದುದರಿಂದ ಪರಸ್ಪರ ಒಬ್ಬರನ್ನೊಬ್ಬರು ಸಂತೋಷಪಡಿಸುತ್ತಾ ಲೋಕವನ್ನು ಧರಿಸುವವರು ಎಂದು ಪುರಾಣಗಳು ನಿರೂಪಿಸಿವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತಾಲ್ಕನೆಯ ಅಧ್ಯಾಯ

ಮಧುಸೂದನನು ಗಾಂಡೀವಿಗೆ ಬೋಧಿಸಿದ ಭಗನ್ಮಹಿಮೆ

ಅರ್ಜುನಃ

ಅಗ್ನೀಷೋಮೌ ಕಥಂ ಪೂರ್ವಮೇಕಯೋನೀ ಪ್ರವರ್ತಿತೌ ।
ಏಷ ಮೇ ಸಂಶಯೋ ಜಾತಸ್ತಂ ಛಿಂಧಿ ಮಧುಸೂದನ ॥೧॥

ಅರ್ಜುನ– ಮಧುಸೂದನನೇ, ಅಗ್ನಿ ಮತ್ತು ಸೋಮರು ಏಕಯೋನಿಗಳು ಎಂದು ಹೇಳಿರುವಿ. ಅಗ್ನಿ ಮತ್ತು ಚಂದ್ರ ಇವರಿಬ್ಬರು ಯಜ್ಞಕರ್ಮಕ್ಕೆ ಮುಖ ಎನಿಸಿದ್ದಾರೆ. ಹೀಗೆ ಇಬ್ಬರು ಸೇರಿಕೊಂಡು ಒಂದೇ ಕರ್ಮದ ಪ್ರವೃತ್ತಿಯನ್ನು ಮಾಡಲು ಏನು ಕಾರಣ? ಈ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ. ಮಧುಸೂದನನೇ, ಪರಿಹರಿಸು.

ಶ್ರೀಭಗವಾನ್

ಹಂತ ತೇ ವರ್ತಯಿಷ್ಯಾಮಿ ಪುರಾಣಂ ಪಾಂಡುನಂದನ ।
ಆತ್ಮತೇಜೋದ್ಭವಂ ಪಾರ್ಥ ಶೃಣುಷ್ವೈಕಮನಾ ಮಮ ॥೨॥

ಶ್ರೀಭಗವಾನ್– ಪಾಂಡುನಂದನನೇ, ನನ್ನ ತೇಜಸ್ಸಿನಿಂದ ಉತ್ಪನ್ನರಾದ ಅಗ್ನಿ-ಸೋಮರ ಹಿಂದಿನ ಇತಿಹಾಸವನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳಿಸಿಕೊ.

ಸಂಪ್ರಕ್ಷಿಲನಕಾಲೇಽತಿಕ್ರಾಂತೇ ಚತುರ್ಥೇ ಯುಗಸಹಸ್ರಾಂತೇ ಅವ್ಯಕ್ತೇ ಸರ್ವಭೂತಪ್ರಲಯೇ ಸ್ಥಾವರಜಂಗಮೇ ಜ್ಯೋತಿರ್ಧರಣೀವಾಯು-ರಹಿತೇಽಂಧೇ ತಮಸಿ ಜಲೈಕಾರ್ಣವೇ ಲೋಕೇ ತಮ ಇತ್ಯೇವಾಭಿ-ಭೂತೇಽಸಂಜ್ಞಕೇದ್ವಿತೀಯೇ ಪ್ರತಿಷ್ಠಿತೇ ನೈವ ರಾತ್ರ್ಯಾಂ ನ ದಿವಸೇ ನ ಸತಿ ನಾಸತಿ ನ ವ್ಯಕ್ತೇ ನಾವ್ಯಕ್ತೇ ವ್ಯವಸ್ಥಿತೇ ಏತಸ್ಯಾಮವಸ್ಥಾಯಾಂ ನಾರಾಯಣ-ಗುಣಾಶ್ರಯಾದಕ್ಷಯಾದಜರಾದನಿಂದ್ರಿಯಾದಗ್ರಾಹ್ಯಾದಸಂಭವಾತ್ ಸತ್ಯಾದಹಿಂಸ್ಯಾಲ್ಲವಾದಿಭಿಃ ವಿವಿಧಪ್ರವೃತ್ತಿವಿಶೇಷಾತ್ ಅಕ್ಷಯಾದ-ಜರಾಮರಾದಮೂರ್ತಿತಃ ಸರ್ವವ್ಯಾಪಿನಃ ಸರ್ವಕರ್ತುಃ ಶಾಶ್ವತಾತ್ತಮಸಃ ಪುರುಷಃ ಪ್ರಾದುರ್ಭೂತೋ ಹರಿರವ್ಯಯಃ ॥೩॥

ಯಜನ-ಯಾಜನ-ಅಧ್ಯಯನಾದಿಗಳಿಂದ ಪಾಪಗಳನ್ನು ಚೆನ್ನಾಗಿ ತೊಳೆದುಕೊಳ್ಳುವ ಕಾಲವು ಸ್ಥಿತಿಕಾಲವೆನಿಸಿದೆ. ಇಂತಹ ಸ್ಥಿತಿಕಾಲವು ಕಳೆಯುತ್ತಿರಲು ಚತುರ್ಯುಗಗಳ ಆವೃತ್ತಿಯು ಒಂದು ಸಾವಿರ ಬಾರಿ ನಡೆದಾಗ ಆ ಕೊನೆಯ ಆವೃತ್ತಿಯಲ್ಲಿ ನಾಲ್ಕನೆಯ ಯುಗವೆನಿಸಿದ ಕಲಿಯುಗದ ಕೊನೆಯಲ್ಲಿ ಸರ್ವಸ್ಥಾವರ ಜಂಗಮ ಪ್ರಪಂಚವೆಲ್ಲವೂ ಅವ್ಯಕ್ತತತ್ತ್ವದಲ್ಲಿ ಲಯ ಹೊಂದುತ್ತಿರಲು ಅಗ್ನಿ-ಭೂಮಿ-ವಾಯು ಇವುಗಳಿಂದ ರಹಿತವಾದ ಅಂಧಕಾರವೇ ಎಲ್ಲ ಕಡೆಯೂ ತುಂಬಿರಲು ಜಗತ್ತೆಲ್ಲವೂ ನೀರಿನಿಂದಲೇ ತುಂಬಿಕೊಳ್ಳುತ್ತದೆ. ಎಲ್ಲೆಡೆಯೂ ಕತ್ತಲೆಯಿಂದಲೇ ಜಗತ್ತು ತುಂಬಿಕೊಂಡು ನಾಮಾತ್ಮಕವಾದ, ರೂಪಾತ್ಮಕವಾದ ಪ್ರಪಂಚವೆಲ್ಲವೂ ಭಗವಂತನಲ್ಲಿ ಲಯ ಹೊಂದುತ್ತಿರಲು, ಹಗಲು-ರಾತ್ರಿಗಳು, ಕಾರ್ಯ-ಕಾರಣಗಳು, ವ್ಯಕ್ತಾವ್ಯಕ್ತಗಳೆಲ್ಲವೂ ನಾಶ ಹೊಂದಿರುವಾಗ ಈ ಅವಸ್ಥೆಯಲ್ಲಿ ನಾರಾಯಣನ ಸರ್ವಜ್ಞತ್ವಾದಿ ಗುಣಗಳಿಗೆಲ್ಲ ಆಶ್ರಯವಾದ ಅಜರಾಮರವು, ಅತೀಂದ್ರಿಯವೂ, ಅಗ್ರಾಹ್ಯವೂ, ಅಬಾಧಿತವೂ ಆದ, ಹುಟ್ಟಿನಿಂದ ದೂರವಾದ, ಸತ್ಯರೂಪನಾದ, ಲವ-ನಿಮೇಶ ಮೊದಲಾದ ಕಾಲದ ಅವಯವಗಳಿಂದ ಹಿಂಸಿಸಲು ಸಾಧ್ಯವಿಲ್ಲದ, ಅನೇಕ ವಿಧವಾದ ಚೇಷ್ಟೆಗಳಿಗೆ ಕಾರಣೀಭೂತವಾದ, ಅಕ್ಷಯವೆನಿಸಿದ, ಅಜರಾಮರ ಮೂರ್ತಿ ಎನಿಸಿದ, ಸರ್ವವ್ಯಾಪಿಯಾದ, ಸರ್ವಕರ್ತೃವಾದ, ಶಾಶ್ವತನಾದ, ನಾಶರಹಿತನಾದ, ಪುರುಷನಾಮಕನಾದ ಶ್ರೀಹರಿಯು ಅನೇಕ ಗುಣಗಳಿಂದ ತುಂಬಿದ ಮೂಲರೂಪಿಯಾದ ನಾರಾಯಣನಿಂದ ಪ್ರಾದುರ್ಭೂತನಾದನು.

ನಿದರ್ಶನಮಪಿ ಹ್ಯತ್ರ ಭವತಿ । ನಾಸೀದಹೋ । ನ ರಾತ್ರಿರಾಸೀತ್ ।
ನ ಸದಾಸೀನ್ನಾಸದಾಸೀತ್। ತಮ ಏವ ಪುರಸ್ತಾದಭವದ್ ವಿಶ್ವರೂಪಮ್
ಸಾ ವಿಶ್ವರೂಪಸ್ಯ ರಜನೀತ್ಯೇವಮಸ್ಯಾರ್ಥೋನುಭಾಷ್ಯತೇ ॥೪॥

ಪುರುಷನಾಮಕನಾದ ಭಗವಂತನು ಪ್ರಾದುರ್ಭೂತನಾಗುವ ಸಮಯದಲ್ಲಿ ಏನಿದ್ದಿತು ಎಂಬುದಕ್ಕೆ ನಿದರ್ಶನವು ಇದೆ. ಸೃಷ್ಟಿಗೆ ಮೊದಲು ರಾತ್ರಿ ಇರಲಿಲ್ಲ. ಸತ್, ಅಸತ್‌ಗಳು ಇರಲಿಲ್ಲ. ತಮಸ್ಸು ಮಾತ್ರವೇ ಇತ್ತು. ಎಲ್ಲೆಡೆಯೂ ವಿಶ್ವರೂಪಿಯಾದ ನಾರಾಯಣನಿಂದ ಸೃಷ್ಟವಾದ ತಮೋರಾಶಿಯೇ ಕಾಣಿಸುತ್ತಿತ್ತು ಎಂಬುದಾಗಿ ಸೃಷ್ಟಿಯ ಆರಂಭದ ಪ್ರಕರಣವನ್ನು ವ್ಯಾಖ್ಯಾನಿಸುವ ವೇದಮಂತ್ರಗಳು ಕಾಣಿಸುತ್ತವೆ.

ತಸ್ಯೇದಾನೀಂ ತಮಃಸಂಭವಸ್ಯ ಪುರುಷಸ್ಯ ಪದ್ಮಯೋನೇರ್ಬ್ರಹ್ಮಣಃ ಪ್ರಾದುರ್ಭಾವೇ ಸ ಪುರುಷಃ ಪ್ರಜಾಃ ಸಿಸೃಕ್ಷಮಾಣೋ ನೇತ್ರಾಭ್ಯಾಮಗ್ನೀಷೋಮೌ ಸಸರ್ಜ । ತತೋ ಭೂತಸರ್ಗೇ ಪ್ರವತ್ತೇ ಪ್ರಜಾಕ್ರಮವಶಾದ್ ಬ್ರಹ್ಮಕ್ಷತ್ರಮುಪಾತಿಷ್ಠತ್ । ಯಃ ಸೋಮಸ್ತದ್ ಬ್ರಹ್ಮ ಯದ್ ಬ್ರಹ್ಮತೇ ಬ್ರಾಹ್ಮಣಾಃ ಯೋಗ್ನಿಸ್ತತ್ ಕ್ಷತ್ರಂ ಕ್ಷತ್ರಾದ್ ಬ್ರಹ್ಮ ಬಲವತ್ತರಮ್ ಕಸ್ಮಾದಿತಿ ಲೋಕಪ್ರತ್ಯಕ್ಷಗುಣಮೇತತ್ । ತದ್ಯಥಾ ಬ್ರಾಹ್ಮಣೇಭ್ಯಃ ಪರಂ ಭೂತಂ ನೋತ್ಪನ್ನಪೂರ್ವಮ್ ದೀಪ್ಯಮಾನೇಽಗ್ನೌ ಜುಹೋತೀತಿ ಕೃತ್ವಾ ಬ್ರವೀಮಿ ಭೂತಸರ್ಗಃ ಕೃತೋ ಬ್ರಹ್ಮಣಾ ಭೂತಾನಿ ಚ ಪ್ರತಿಷ್ಠಾಪ್ಯ ತ್ರೈಲೋಕ್ಯಂ ಧಾರ್ಯತ ಇತಿ ॥೫೫॥

ಆ ಸಮಯದಲ್ಲಿ ನಾರಾಯಣನಿಂದ ಸೃಷ್ಟವಾದ ತಮೋರಾಶಿಯು, ಆ ತಮೋರಾಶಿಯ ನಡುವೆ ಅಭಿವ್ಯಕ್ತನಾದ ಪುರುಷನಾಮಕನು, ಪುರುಷನಾಮಕನಿಂದ ಚತುರ್ಮುಖ ಬ್ರಹ್ಮನು ಪ್ರಾದುರ್ಭೂತನಾದನು. ಆ ಪುರುಷನು ಪ್ರಜೆಗಳನ್ನು ಸೃಷ್ಟಿ ಮಾಡುವ ಇಚ್ಛೆಯಿಂದ ತನ್ನ ದಿವ್ಯವಾದ ನೇತ್ರಗಳಿಂದ ಅಗ್ನಿ ಮತ್ತು ಸೋಮರನ್ನು ಸೃಷ್ಟಿಸಿದನು. ಹೀಗೆ ಭೂತಸೃಷ್ಟಿಯು ಕ್ರಮವಾಗಿ ಆರಂಭವಾದ ಬಳಿಕ ಪ್ರಜೆಗಳ ಸೃಷ್ಟಿಯಲ್ಲಿ ಕ್ರಮವಾಗಿ ಬ್ರಹ್ಮ-ಕ್ಷತ್ರರ ಸೃಷ್ಟಿಯಾಯಿತು. ಯಾವನು ಸೋಮನೋ ಅವನೇ ಬ್ರಹ್ಮನು. ಯಾರು ಬ್ರಹ್ಮರೋ ಅವರೇ ಬ್ರಾಹ್ಮಣರು. ಯಾವನು ಅಗ್ನಿಯೋ ಅವನೇ ಕ್ಷತ್ರಿಯನು. ಆದರೆ ಬ್ರಹ್ಮವು ಕ್ಷತ್ರಕ್ಕಿಂತಲೂ ಬಲಿಷ್ಠವಾದುದು. ಹೀಗಾಗಲು ಕಾರಣವೇನೆಂದರೆ ಇದು ಲೋಕಾನುಭವದ ಗುಣವೇ ಆಗಿದೆ. ಬ್ರಾಹ್ಮಣರಿಗಿಂತಲೂ ಶ್ರೇಷ್ಠವಾದ ಬೇರೆ ಯಾವ ಪ್ರಾಣಿಯೂ ಹಿಂದೆ ಹುಟ್ಟಿರಲಿಲ್ಲ. ಯಾವನು ಬ್ರಾಹ್ಮಣರಿಗೆ ಭೋಜನ ಮಾಡಿಸುತ್ತಾನೋ ಅವನು ಪ್ರಜ್ವಲಿತವಾದ ಅಗ್ನಿಯಲ್ಲಿ ಹೋಮ ಮಾಡಿದವನಾಗುತ್ತಾನೆ. ಇದನ್ನು ತಿಳಿದೇ ನಾನು ಬ್ರಾಹ್ಮಣರ ವಿಷಯದಲ್ಲಿ ಹೀಗೆ ಹೇಳುತ್ತೇನೆ. ಬ್ರಹ್ಮಶಕ್ತಿಯಿಂದಲೇ ಪ್ರಾಣಿಗಳೆಲ್ಲ ಸೃಷ್ಟಿಸಲ್ಪಟ್ಟಿದ್ದಾರೆ. ಆಯಾ ಪ್ರಾಣಿಗಳಿಗೆ ಯೋಗ್ಯವಾದ ಸ್ಥಾನಗಳನ್ನು ನೀಡಿ, ಅವುಗಳನ್ನು ಸ್ಥಾಪಿಸಿ ಮೂರುಲೋಕಗಳನ್ನೂ ಬ್ರಹ್ಮಶಕ್ತಿಯು ಧರಿಸಿ ನಿಂತಿದೆ.

ಮಂತ್ರವಾದೋಽಪಿ ಹಿ ಭವತಿ ತ್ವಮಗ್ನೇ ಯಜ್ಞಾನಾಂ ಹೋತಾ ವಿಶ್ವೇಷಾಮ್ ಹಿತೋ ದೇವೇಭಿರ್ಮಾನುಷೇ ಜನೇ ಇತಿ । ನಿದರ್ಶನಂ ಚಾತ್ರ ಭವತಿ।

ವಿಶ್ವೇಷಾಮಗ್ನೇ ಯಜ್ಞಾನಾಂ ಹೋತೇತಿ ಹಿತೋ ದೇವೈರ್ಮಾನುಷೈರ್ಜಗತ
ಇತಿ ತ್ವಮಗ್ನೇ ಯಜ್ಞಾನಾಂ ಹೋತಾ ಕರ್ತಾ ಸ ಚಾಗ್ನಿರ್ಬ್ರಹ್ಮ ॥೬॥

ಈ ವಿಷಯದಲ್ಲಿ ವೇದವಾಕ್ಯಗಳೂ ಇವೆ. ಅಗ್ನಿಯೇ, ನೀನು ಯಜ್ಞಗಳಲ್ಲಿ ಹೋತೃವು. ಸಮಸ್ತ ದೇವತೆಗಳಿಗೂ, ಮನುಷ್ಯರಿಗೂ, ಜಗತ್ತಿಗೂ ಹಿತವನ್ನು ಮಾಡುವವನು. ಈ ವಿಷಯದಲ್ಲಿ ನಿದರ್ಶನವೂ ಇದೆ. ಅಗ್ನಿದೇವನೇ, ನೀನು ಎಲ್ಲ ಯಜ್ಞಗಳಿಗೂ ಹೋತೃವಾಗಿರುವೆ. ಸಮಸ್ತ ದೇವತೆಗಳಿಗೂ ಮನುಷ್ಯರಿಂದ ಕೂಡಿದ ಸಮಸ್ತ ಪ್ರಪಂಚಕ್ಕೂ ನೀನೇ ಹಿತಚಿಂತಕನಾಗಿರುವಿ. ಅಗ್ನಿದೇವನೇ ಸಮಸ್ತ ಯಜ್ಞಗಳಲ್ಲಿ ಯಜ್ಞಾಂಗಗಳನ್ನೆಲ್ಲ ಕೊಂಡೊಯ್ಯುವುದರಿಂದ ಅಗ್ನಿನಾಮಕನಾದ ಭಗವಂತನೇ ಬ್ರಹ್ಮ ಎನಿಸಿದ್ದಾನೆ. ಅವನೇ ಜಗತ್ತಿನ ಕರ್ತೃವೂ ಆಗಿದ್ದಾನೆ. ಅವನೇ ಗುಣಪರಿಪೂರ್ಣನಾದ, ಅಗ್ನಿನಾಮಕನಾದ ಬ್ರಹ್ಮನೂ ಅವನೇ ಆಗಿದ್ದಾನೆ.

ನ ಹ್ಯತೇ ಮಂತ್ರಾದ್ಧವನಮಸ್ತಿ । ನ ವಿನಾ ಪುರುಷಂ ತಪಃ ಸಂಭವತಿ।
ಹವಿರ್ಮಂತ್ರಾಣಾಂ ಸಂಪೂಜಾ ವಿದ್ಯತೇ । ದೇವಮನುಷ್ಯಾಣಾಮನೇನ
ತ್ವಂ ಹೋತೇತಿ ನಿಯುಕ್ತಃ ಯೇ ಚ ಮಾನುಷಾ ಹೋತ್ರಾಧಿಕಾರಾಸ್ತೇ ಚ
ಬ್ರಾಹ್ಮಣಸ್ಯ ಹಿ ಯಾಜನಂ ವಿಧೀಯತೇ । ನ ಕ್ಷತ್ರವೈಶ್ಯಯೋರ್ದ್ವಿಜಾತ್ಯೋಃ
ತಸ್ಮಾದ್ ಬ್ರಾಹ್ಮಣಾ ಹ್ಯಗ್ನಿಭೂತಾ ಯಜ್ಞಾನುದ್ವಹಂತಿ । ಯಜ್ಞಾ
ದೇವಾಂಸ್ತರ್ಪಯಂತಿ । ದೇವಾಃ ಪೃಥಿವೀಂ ಭಾವಯಂತಿ ॥೭॥

ಮಂತ್ರವಿಲ್ಲದೆ ಹವನವು ನಡೆಯುವುದಿಲ್ಲ. ಪುರುಷನಿಲ್ಲದೆ ತಪಸ್ಸು ನಡೆಯುವುದಿಲ್ಲ. ಮಂತ್ರೋಕ್ತವಾದ ಹವಿಸ್ಸುಗಳನ್ನು ನೀಡುವುದರಿಂದ ದೇವತೆಗಳು, ಮನುಷ್ಯರು, ಋಷಿಗಳು ಪೂಜಿತರಾಗುತ್ತಾರೆ. ಆದ್ದರಿಂದ ಅಗ್ನಿದೇವನೇ ನಿನ್ನನ್ನು ಯಜ್ಞದಲ್ಲಿ ಹೋತೃವನ್ನಾಗಿ ಮಾಡಿದ್ದಾರೆ. ಮನುಷ್ಯರಲ್ಲಿ ಹೋತೃವಿನ ಅಧಿಕಾರವನ್ನು ವಧಿಸುವವನು ಬ್ರಾಹ್ಮಣನೇ ಆಗಿದ್ದಾನೆ. ಕಾರಣ ಅವನಲ್ಲಿ ಯಜ್ಞ ಮಾಡುವ ವಿಧಾನವಿದೆ. ಅವನೇ ಯಾಜಕನೆಂದು ಶಾಸ್ತ್ರವಿಧಿಯಿದೆ. ಕ್ಷತ್ರಿಯ-ವೈಶ್ಯ ಜಾತಿಗಳು ದ್ವಿಜ ಎನಿಸಿದರೂ ಯಾಜಕರಾಗುವ ಅಧಿಕಾರ ಆ ವರ್ಣದವರಿಗಿಲ್ಲ. ಆದ್ದರಿಂದ ಅಗ್ನಿನಾಮಕನಾದ ಭಗವಂತನನ್ನು ಹೃದಯದಲ್ಲಿ ಧರಿಸಿದ ಬ್ರಾಹ್ಮಣರೇ ಯಜ್ಞದ ಭಾಗವನ್ನು ನಿರ್ವಹಿಸುತ್ತಾರೆ. ಬ್ರಾಹ್ಮಣರು ಮಾಡುವ ಯಜ್ಞಗಳು ದೇವತೆಗಳನ್ನು

ತೃಪ್ತಿಪಡಿಸುತ್ತವೆ. ತೃಪ್ತರಾದ ದೇವತೆಗಳು ಮಳೆ ಸುರಿಸುವ ಮೂಲಕ ಭೂಮಿಯನ್ನು ಧಾನ್ಯಗಳಿಂದ ಸಮೃದ್ಧವನ್ನಾಗಿಸುತ್ತಾರೆ.

ಶತಪಥೇ ಹಿ ಬ್ರಾಹ್ಮಣಂ ಭವತಿ । ಅಗ್ನೌ ಸಮಿದ್ಧೇ ಸ ಜುಹೋತಿ ಯೋ ವಿದ್ವಾನ್ ಬ್ರಾಹ್ಮಣಮುಖೇ ದಾನಾಹುತಿಂ ಜುಹೋತಿ । ಏವಮಪ್ಯಗ್ನಿಭೂತಾ ಬ್ರಾಹ್ಮಣಾ ವಿದ್ವಾಂಸೋಽಗ್ನಿಂ ಭಾವಯಂತಿ । ಅಗ್ನಿರ್ವಿಷ್ಣುಃ ಸರ್ವಭೂತಾನ್ಯನುಪ್ರವಿಶ್ಯ ಪ್ರಾಣಾನ್ ಧಾರಯತಿ । ಅಪಿ ಚಾತ್ರ ಸನತ್ಕುಮಾರಗೀತಾಃ ಶ್ಲೋಕಾ ಭವಂತಿ ॥೮॥

ಕಾಣ್ವಶಾಖೆಯಲ್ಲಿ ಒಂದು ಬ್ರಾಹ್ಮಣವಾಕ್ಯವಿದೆ. ಯಾವ ವಿದ್ವಾಂಸನು ಬ್ರಾಹ್ಮಣನ ಮುಖದಲ್ಲಿರುವ ಅಗ್ನಿಯಲ್ಲಿ ಅನ್ನವೆಂಬ ಆಹುತಿಯನ್ನು ನೀಡುತ್ತಾನೋ ಅವನು ಪ್ರಜ್ವಲಿಸುವ ಅಗ್ನಿಯಲ್ಲಿ ಹೋಮ ಮಾಡಿದವನಾಗುತ್ತಾನೆ. ಹೀಗೆ ಬ್ರಾಹ್ಮಣರು ಅಗ್ನಿಯನ್ನು ಧರಿಸಿದವರು. ವಿದ್ವಾಂಸರಾದ ಬ್ರಾಹ್ಮಣರು ಅಗ್ನಿಯನ್ನು ಆರಾಧಿಸುತ್ತಾರೆ. ಅಗ್ನಿ ಎಂದರೆ ವಿಷ್ಣುವೇ. ವಿಷ್ಣುರೂಪದ ಅಗ್ನಿಯೇ ಸಮಸ್ತ ಪ್ರಾಣಿಗಳನ್ನು ಪ್ರವೇಶಿಸಿ ಅವುಗಳ ಪ್ರಾಣವನ್ನು ಧರಿಸಿರುತ್ತಾನೆ. ಈ ವಿಷಯದಲ್ಲಿ ಸನತ್ಕುಮಾರರು ಹೇಳಿರುವ ಶ್ಲೋಕಗಳೇ ನಿದರ್ಶನವು.

ವಿಶ್ವಂ ಬ್ರಹ್ಮಾಸೃಜತ್ ಪೂರ್ವಂ ಸರ್ವಾದಿರ್ನಿರವಸ್ಕರಮ್ ।
ಬ್ರಹ್ಮಘೋಷೈರ್ದಿವಂ ತಿಷ್ಠಂತ್ಯಮರಾ ಬ್ರಹ್ಮಯೋನಯಃ ॥೯॥

ಸಮಸ್ತ ಜಗತ್ತಿಗೆ ಆದಿಕಾರಣನಾದ ಭಗವಂತನು ಎಲ್ಲದಕ್ಕಿಂತಲೂ ಮೊದಲು ನಿರ್ಮಲವಾದ ಜಗತ್ತನ್ನು ಸೃಷ್ಟಿಸಿದನು. ಬ್ರಹ್ಮಯೋನಿಗಳಾದ ದೇವತೆಗಳು ಬ್ರಾಹ್ಮಣರ ವೇದಧ್ವನಿಗಳಿಂದಲೇ ಸ್ವರ್ಗಲೋಕಕ್ಕೆ ಹೋಗುತ್ತಾರೆ.

ಬ್ರಾಹ್ಮಣಾನಾಂ ಮತಿರ್ವಾಕ್ಯಂ ಕರ್ಮ ಶ್ರದ್ಧಾ ತಪಾಂಸಿ ಚ ।
ಧಾರಯಂತಿ ಮಹೀಂ ದ್ಯಾಂ ಚ ಶೈತ್ಯಾದ್ ವಾಗಮೃತಂ ಯಥಾ ॥೧೦॥

ಯಾವ ರೀತಿ ಮತ್ತೊಬ್ಬರಿಗೆ ಸುಖವನ್ನು ನೀಡುತ್ತದೆ ಎಂಬುದಾಗಿ ಸಜ್ಜನರು ಅಮೃತದಂತಹ ಮಾತನ್ನು ಧರಿಸಿರುತ್ತಾರೋ ಅದರಂತೆ ಬ್ರಾಹ್ಮಣರ ಬುದ್ಧಿಯು ವೇದವಾಕ್ಯಗಳನ್ನು, ಸತ್ಕರ್ಮಗಳನ್ನು, ಶ್ರದ್ಧೆ-ತಪಸ್ಸುಗಳನ್ನು, ಭೂಮಿಯನ್ನು, ಆಕಾಶವನ್ನು ಧರಿಸಿದೆ.

ನಾಸ್ತಿ ಸತ್ಯಾತ್ ಪರೋ ಧರ್ಮೋ ನಾಸ್ತಿ ಮಾತೃಸಮೋ ಗುರುಃ ।
ಬ್ರಾಹ್ಮಣೇಭ್ಯಃ ಪರಂ ನಾಸ್ತಿ ಪ್ರೇತ್ಯ ಚೇಹ ಚ ಭೂತಯೇ ॥೧೧॥

ಸತ್ಯಕ್ಕಿಂತಲೂ ಶ್ರೇಷ್ಠವಾದ ಧರ್ಮವಿಲ್ಲ. ತಾಯಿಗಿಂತ ಸಮಾನರಾದ ಗುರುವಿಲ್ಲ. ಇಹಲೋಕದಲ್ಲಾಗಲಿ, ಪರಲೋಕದಲ್ಲೇ ಆಗಲಿ ಕಲ್ಯಾಣ, ಅಭಿವೃದ್ಧಿಗಾಗಿ ಬ್ರಾಹ್ಮಣರಿಗಿಂತಲೂ ಶ್ರೇಷ್ಠನಾದವನು ಬೇರೆ ಯಾರೂ ಇರುವುದಿಲ್ಲ.

ನೈಷಾಮುಕ್ಷಾ ವರ್ಧತೇ ನೋತ ವಾಹಾ ನ ಗರ್ಗರೀ ಮಥ್ಯತೇ ಸಂಪ್ರದಾನೇ ।
ಅಪಧ್ವಸ್ತಾ ದಸ್ಯುಭೂತಾ ಭವಂತಿ ಯೇಷಾಂ ರಾಷ್ಟ್ರೇ ಬ್ರಾಹ್ಮಣಾ ವೃತ್ತಿಹೀನಾಃ ॥

ಯಾವ ರಾಜನ ರಾಜ್ಯದಲ್ಲಿ ಬ್ರಾಹ್ಮಣರು ಬದುಕು ಇಲ್ಲದೆ ಇರುತ್ತಾರೋ ಅಂತಹ ರಾಜ್ಯದಲ್ಲಿ ರಾಜನ ಎತ್ತುಗಳಾಗಲಿ, ಕುದುರೆಗಳಾಗಲಿ ಅಭಿವೃದ್ಧಿಯನ್ನು ಹೊಂದವು. ಆ ರಾಜ್ಯದಲ್ಲಿ ಮೊಸರನ್ನು ಕಡೆಯುವ ಪಾತ್ರೆಗಳು ಇರುವುದಿಲ್ಲ. (ವಾಣಿಜ್ಯ, ಗೋಧನಗಳು ಇರುವುದಿಲ್ಲ ಎಂದು ಭಾವ). ಅಂತಹ ರಾಜನು ಎಲ್ಲರಿಂದ ಧಿಕ್ಕರಿಸಲ್ಪಟ್ಟು ಕಳ್ಳನಂತಾಗುತ್ತಾನೆ.

ವೇದಪುರಾಣೇತಿಹಾಸಪ್ರಾಮಾಣ್ಯಾನ್ನಾರಾಯಣಮುಖೋದ್ಗತಾಃ ಸರ್ವಾತ್ಮಾನಃ ಸರ್ವಕರ್ತಾರಃ ಸರ್ವಭಾವನಾಶ್ಚ ಬ್ರಾಹ್ಮಣಾಃ ವಾಕ್ಸಮಕಾಲಂ ಹಿ ತಸ್ಯ ದೇವಸ್ಯ ವರಪ್ರದಸ್ಯ ಬ್ರಾಹ್ಮಣಾಃ ಪ್ರಥಮಂ ಪ್ರಾದುರ್ಭೂತಾ । ಬ್ರಾಹ್ಮಣೇऽಭ್ಯಶ್ಚ ಶೇಷಾ ವರ್ಣಾಃ ಪ್ರಾದುರ್ಭೂತಾಃ । ಇತ್ಥಂ ಚ ಸುರಾಸುರವಿಶಿಷ್ಟಾ ಬ್ರಾಹ್ಮಣಾ ಯತ್ರ ಮಯಾ ಬ್ರಹ್ಮಭೂತೇನ ಪುರಾ ಸ್ವಯಮೇವೋತ್ಪಾದಿತಾಃ ಸುರಾಸುರ ಮಹರ್ಷಯೋ ಭೂತವಿಶೇಷಾಃ ಸ್ಥಾಪಿತಾ ನಿಗೃಹೀತಾಶ್ಚ ॥ ೧೩ ॥

ಬ್ರಾಹ್ಮಣರು ನಾರಾಯಣನ ಮುಖದಿಂದ ಹುಟ್ಟಿದವರೆಂಬುದು ವೇದ-ಪುರಾಣ-ಇತಿಹಾಸಗಳ ಪ್ರಮಾಣದಿಂದ ತಿಳಿದಿದೆ. ಆದ್ದರಿಂದ ಬ್ರಾಹ್ಮಣರು ಎಲ್ಲರ ಆತ್ಮವಿದ್ದಂತೆ. ಎಲ್ಲವನ್ನೂ ಮಾಡಲು ಸಮರ್ಥರು. ಎಲ್ಲರಲ್ಲಿಯೂ ಪ್ರೀತಿಯುಳ್ಳವರು. ಪುರುಷ ನಾಮಕನಾದ ಭಗವಂತನಿಂದ ಸೃಷ್ಟಿಯ ಆರಂಭದಲ್ಲಿ, ಭಗವಂತನ ಉಪದೇಶದ ಕಾಲದಲ್ಲಿ ವರಪ್ರದನಾದ ದೇವನಾದ ಭಗವಂತನಿಂದ ಬ್ರಾಹ್ಮಣರು ಮೊದಲು

ಹುಟ್ಟಿದರು. ಬಳಿಕ ಬ್ರಾಹ್ಮಣ ವರ್ಣದಿಂದ ಬೇರೆಯಾದ ಉಳಿದ ವರ್ಣಗಳು ಹುಟ್ಟಿದವು. ಈ ರೀತಿಯಾಗಿ ಬ್ರಾಹ್ಮಣರು ಸುರಾಸುರರಿಗಿಂತಲೂ ವಿಶಿಷ್ಟರಾದವರು. ಹಿಂದೆ ಗುಣಪರಿಪೂರ್ಣನಾದ ನಾನೇ ಈ ಬ್ರಹ್ಮಾಂಡ ಕುಲದಲ್ಲಿ ಬ್ರಾಹ್ಮಣರನ್ನು ಸೃಷ್ಟಿಸಿದ್ದೇನೆ. ಇಂತಹ ಬ್ರಾಹ್ಮಣರು ದೇವ-ಅಸುರ-ಮಹರ್ಷಿಗಳನ್ನು, ಅನೇಕ ಪ್ರಾಣಿಗಳನ್ನು ಆಯಾ ಸ್ಥಾನಗಳಲ್ಲಿ ಸ್ಥಾಪಿಸಿದರು. ಅಪರಾಧಿಗಳನ್ನು ದಂಡಿಸಿದರು.

ಅಹಲ್ಯಾಧರ್ಷಣನಿಮಿತ್ತಂ ಹಿ ಗೌತಮಾದ್ದರಿಶ್ಮಶ್ರುತಾಮಿಂದ್ರಃ ಪ್ರಾಪ್ತಃ । ಕೌಶಿಕನಿಮಿತ್ತಂ ಚೇಂದ್ರೋ ಮುಷ್ಕವಿಯೋಗಂ ಮೇಷವೃಷಣತ್ವಂ ಚಾವಾಪ ಅಶ್ವಿನೋರ್ಗ್ರಹಪ್ರತಿಷೇಧೋದ್ಯತವ್ರಜಸ್ಯ ಪುರಂದರಸ್ಯ ಚ್ಯವನೇನ ಸ್ತಂಭಿತೋ ಬಾಹುಃ ಕ್ರತುವಧಪ್ರಾಪ್ತಮನ್ಯುನಾ ಚ ದಕ್ಷೇಣ ಭೂಯಸ್ತಪಸಾ ಚಾತ್ಮಾನಂ ಸಂಯೋಜ್ಯ ನೇತ್ರಾಕೃತಿರನ್ಯಾ ಲಲಾಟೇ ರುದ್ರಸ್ಯೋತ್ಪಾದಿತಾ ॥೧೪॥

ಅಹಲ್ಯೆಯ ಮಾನಭಂಗವನ್ನು ಮಾಡಿದ ದೇವೇಂದ್ರನು ಬ್ರಾಹ್ಮಣರಾದ ಗೌತಮರ ಶಾಪದಿಂದಲೇ ಹಸಿರಾದ ಮೀಸೆ-ಗಡ್ಡಗಳನ್ನು ಪಡೆದನು. ಗೌತಮರ ಶಾಪದ ಪ್ರಭಾವದಿಂದಲೇ ಇಂದ್ರನು ತನ್ನ ವೃಷಣಗಳನ್ನು ಕಳೆದುಕೊಂಡು ಮೇಷವೃಷಣನಾದನು. ನಾಸತ್ಯ, ದಸ್ರರಿಗೆ ನಿಯತವಾದ ಯಜ್ಞಭಾಗವನ್ನು ತಡೆಯಲು ಇಂದ್ರನು ವಜ್ರಾಯುಧವನ್ನು ಮೇಲೆತ್ತಲು ಇಂದ್ರನ ತೋಳುಗಳನ್ನೇ ಬ್ರಾಹ್ಮಣರಾದ ಚ್ಯವನರು ಸ್ತಬ್ಧಗೊಳಿಸಿದರು. ರುದ್ರನ ಮೂಲಕ ತನ್ನ ಯಜ್ಞವು ಹಾಳಾಗಿದ್ದಕ್ಕೆ ಕುಪಿತನಾದ ದಕ್ಷನು ಘೋರವಾದ ತಪಸ್ಸನ್ನು ಮಾಡಿ, ರುದ್ರನ ಹಣೆಯಲ್ಲಿ ಮತ್ತೊಂದು ಕಣ್ಣು ಹುಟ್ಟುವಂತೆ ಮಾಡಿದನು.

ತ್ರಿಪುರವಧಾರ್ಥಂ ದೀಕ್ಷಾಮಭ್ಯುಪಗತಸ್ಯ ರುದ್ರಸ್ಯೋಶನಸಾ ಶಿರಸೋ ಜಟಾ ಉತ್ಕೃತ್ಯ ಪ್ರಯುಕ್ತಾಃ । ತತಃ ಪ್ರಾದುರ್ಭೂತಾ ಭುಜಗಾಃ ತೈರಸ್ಯ ಭುಜಗೈಃ ಪೀಡ್ಯಮಾನಃ ಕಂಠೋ ನೀಲತಾಮುಪನೀತಃ । ಪೂರ್ವೇ ಚ ಮನ್ವಂತರೇ ಸ್ವಾಯಂಭುವೇ ನಾರಾಯಣಹಸ್ತಬಂಧಗ್ರಹಣಾನ್ನೀಲಕಂಠತ್ವಮೇವ ವಾ ॥

ರುದ್ರನು ತ್ರಿಪುರಾಸುರರನ್ನು ಸಂಹರಿಸಲು ದೀಕ್ಷಿತನಾದನು. ಆ ಸಮಯದಲ್ಲಿ ದೈತ್ಯಗುರುವಾದ ಬ್ರಾಹ್ಮಣರೆನಿಸಿದ ಶುಕ್ರಾಚಾರ್ಯರು ತನ್ನ ಜಟೆಗಳನ್ನು ಕಿತ್ತು ಅಭಿಮಂತ್ರಿಸಿ ಈಶ್ವರನಲ್ಲಿ ಪ್ರಯೋಗಿಸಿದರು. ಕೂಡಲೇ ಜಟೆಗಳೆಲ್ಲವೂ ಹಾವುಗಳಾಗಿ

ಪರಿವರ್ತನೆಯನ್ನು ಹೊಂದಿ ರುದ್ರನ ಕಂಠವನ್ನು ಬಿಗಿದು ಹಿಂಸಿಸಲು ಆರಂಭಿಸಿದವು. ಭುಜಂಗಗಳಿಂದ ಪೀಡಿತವಾದ ರುದ್ರನ ಕಂಠವು ನೀಲಿಯಾಯಿತು. ಆದ್ದರಿಂದಲೇ ರುದ್ರನು ನೀಲಕಂಠನಾದನು. ಸ್ವಾಯಂಭುವ ಮನ್ವಂತರದಲ್ಲಿ ಅಮೃತಮಥನದ ಕಾಲದಲ್ಲಿ ರುದ್ರನು ವಿಷವನ್ನುಂಡಾಗ ವಿಷಬಾಧೆಯು ಹೃದಯವನ್ನು ತಲುಪದಿರಲು ನಾರಾಯಣನು ತನ್ನ ಕೈಯಿಂದ ರುದ್ರನ ಕಂಠವನ್ನು ಹಿಡಿದನು. ಆದ್ದರಿಂದ ಕುತ್ತಿಗೆಯು ಕಪ್ಪಾಯಿತು. ಈ ಕಾರಣದಿಂದಲೂ ರುದ್ರನು ನೀಲಕಂಠನೆನಿಸಿದ್ದಾನೆ.

ಅಮೃತೋತ್ಪಾದನೇ ಪುರಶ್ಚರಣತಾಮುಪಗತಸ್ಯಾಂಗಿರಸೋ ಬೃಹಸ್ಪತೇರುಪ-ಸ್ಪೃಶತೋ ನ ಪ್ರಸಾದಂ ಗತವತ್ಯಃ ಕಿಲಾಪಃ। ಅಥ ಬೃಹಸ್ಪತಿರಪಾಂ ಚುಕ್ರೋಧ ಯಸ್ಮಾನ್ಮಮೋಪಸ್ಪೃಶತಃ ಕಲುಷೀಭೂತಾ ನ ಪ್ರಸಾದಮುಪಗತಾಸ್ತಸ್ಮಾದದ್ಯ-ಪ್ರಭೃತಿ ಝಷಮಕರಮತ್ಸ್ಯಕಚ್ಛಪಜಂತುಸಂಕೀರ್ಣಾಃ ಕಲುಷೀಭವತೇತಿ। ತದಾಪ್ರಭೃತ್ಯಾಪೋ ಯಾದೋಭಿಃ ಸಂಕೀರ್ಣಾಃ ಸಂವೃತ್ತಾಃ ॥೧೬॥

ಅಮೃತಮಥನದ ಕಾಲದಲ್ಲಿ ಅಂಗಿರಸನ ಮಗನಾದ ಬೃಹಸ್ಪತಿಯು ಮಂತ್ರ ಪುರಶ್ಚರಣೆಯನ್ನು ಆರಂಭಿಸಿದನು. ಆರಂಭದಲ್ಲಿ ಅವನು ಜಲದಿಂದ ಉಪಸ್ಪರ್ಶವನ್ನು ಅರ್ಥಾತ್ ಆಚಮನವನ್ನು ಮಾಡಲು ಹೋದಾಗ ಜಲಾಶಯಗಳು ಪ್ರಸನ್ನವಾಗಲಿಲ್ಲ, ಸ್ವಚ್ಛವಾಗಲಿಲ್ಲ. ಆದ್ದರಿಂದ ಕುಪಿತನಾದ ಬೃಹಸ್ಪತಿಯು ನಾನು ಆಚಮನ ಮಾಡಲು ಬಂದ ಸಮಯದಲ್ಲಿ ನೀವು ಕಲುಷಿತರಾಗಿದ್ದೀರಿ, ಪ್ರಶಾಂತರಾಗಿಲ್ಲ, ನಿಮ್ಮನ್ನು ಶಪಿಸುತ್ತೇನೆ. ಇಂದಿನಿಂದ ಮೀನು, ಮೊಸಳೆ, ಆಮೆ ಮೊದಲಾದ ಜಲಚರ ಪ್ರಾಣಿಗಳಿಂದ ಕಲುಷಿತರಾಗಿರಿ ಎಂದು ಶಾಪವನ್ನು ನೀಡಿದನು. ಬೃಹಸ್ಪತಿಯ ಶಾಪದಂತೆ ಜಲಾಶಯವು ಅಂದಿನಿಂದ ಜಲಜಂತುಗಳಿಂದ ತುಂಬಿಹೋಗಿವೆ.

ವಿಶ್ವರೂಪೋ ವೈ ತ್ವಾಷ್ಟ್ರಃ ಪುರೋಹಿತೋ ದೇವಾನಾಮಾಸೀತ್ ಸ್ವಸ್ರೀಯೋಽಸುರಾಣಾಮ್ ಸ ಪ್ರತ್ಯಕ್ಷಂ ದೇವೇಭ್ಯೋ ಭಾಗಮದದತ್ ಪರೋಕ್ಷಮಸುರೇಭ್ಯಃ ॥೧೭॥

ಇದರಂತೆ ತ್ವಷ್ಟೃಸುತನಾದ ವಿಶ್ವರೂಪನು ದೇವತೆಗಳಿಗೆ ಪುರೋಹಿತನು. ಅಸುರರಿಗೆಲ್ಲ ತಂಗಿಯ ಮಗನು. ಇಂತಹ ವಿಶ್ವರೂಪನು ದೇವತೆಗಳಿಗೆ ಪ್ರತ್ಯಕ್ಷವಾಗಿ, ಅಸುರರಿಗೆ ಪರೋಕ್ಷವಾಗಿ ಯಜ್ಞಭಾಗಗಳನ್ನು ನೀಡುತ್ತಿದ್ದನು.

ಅಥ ಹಿರಣ್ಯಕಶಿಪುಂ ಪುರಸ್ಕೃತ್ಯ ವಿಶ್ವರೂಪಮಾತರಂ ಸ್ವಸಾರಮಸುರಾ ವರಮಯಾಚಂತ । ಹೇ ಸ್ವಸರಯಂ ತೇ ಪುತ್ರಸ್ತ್ವಷ್ಟ್ರೋ ವಿಶ್ವರೂಪಸ್ತ್ರಿಶಿರಾ ದೇವಾನಾಂ ಪುರೋಹಿತಃ ಪ್ರತ್ಯಕ್ಷಂ ದೇವೇಭ್ಯೋ ಭಾಗಮದದತ್ । ಪರೋಕ್ಷಮಸ್ಮಾಕಮ್ । ತತೋ ದೇವಾ ವರ್ಧಂತೇ । ವಯಂ ಕ್ಷೀಯಾಮಃ ತದೇನಂ ತ್ವಂ ವಾರಯಿತುಮರ್ಹಸಿ ತಥಾ ಯಥಾಸ್ಮಾನ್ ಭಜೇದಿತಿ ॥

ಸ್ವಲ್ಪಸಮಯದ ಬಳಿಕ ಹಿರಣ್ಯಕಶಿಪುವನ್ನು ಮುಂದೆ ಮಾಡಿಕೊಂಡು ವಿಶ್ವರೂಪನ ತಾಯಿಯ ಬಳಿಗೆ ಹೋಗಿ ಅಸುರರೆಲ್ಲರೂ ವರವನ್ನು ಬೇಡಿದರು. ಸಹೋದರಿಯೇ, ತ್ವಷ್ಟ್ರನ ಸುತನಾದ, ತ್ರಿಶಿರನಾದ ವಿಶ್ವರೂಪನು ದೇವತೆಗಳಿಗೆ ಹೋತೃವಾಗಿ ಅವರಿಗೆ ಪ್ರತ್ಯಕ್ಷವಾಗಿ ಹವಿರ್ಭಾವವನ್ನು ನೀಡುತ್ತಾನೆ, ನಮಗೆ ಪರೋಕ್ಷವಾಗಿ ನೀಡುತ್ತಾನೆ. ಇದರಿಂದ ದೇವತೆಗಳು ಶಕ್ತಿಯಿಂದ ಅಭಿವೃದ್ಧಿ ಹೊಂದುತ್ತಿದ್ದಾರೆ. ನಾವು ಕ್ಷೀಣಿಸುತ್ತಿದ್ದೇವೆ. ಆದ್ದರಿಂದ ಅವನು ದೇವತೆಗಳ ಬಳಿ ಸಾಗದಂತೆ ತಡೆದು ನಮ್ಮ ಪಕ್ಷಕ್ಕೆ ಸೇರುವಂತೆ ನೀನು ಮನ ಒಲಿಸು.

ಅಥ ವಿಶ್ವರೂಪಂ ನಂದನವನಮುಪಗತಂ ಮಾತೋವಾಚ ಪುತ್ರ ಕಿಂ ಪರಪಕ್ಷವರ್ಧನಸ್ತ್ವಂ ಮಾತುಲಪಕ್ಷಂ ನಾಶಯಸಿ ನಾರ್ಹಸ್ಯೇವಂ ಕರ್ತುಮಿತಿ। ಸ ವಿಶ್ವರೂಪೋ ಮಾತುರ್ವಾಕ್ಯಮನತಿಕ್ರಮಣೀಯಮಿತಿ ಮತ್ವಾ ಸಂಪೂಜ್ಯ ಹಿರಣ್ಯಕಶಿಪುಮಗಾತ್ ॥೧೯॥

ವಿಶ್ವರೂಪನ ತಾಯಿಯು ಅಸುರರ ಮಾತಿಗೆ ಸಮ್ಮತಿಯನ್ನಿತ್ತು, ಹಿರಣ್ಯಕಶಿಪುವೇ ಮೊದಲಾದ ಅಸುರರಿಗೆ ಅಭಯವನ್ನಿತ್ತು, ಇಂದ್ರನ ನಂದನವನದಲ್ಲಿರುವ ಮಗನ ಬಳಿ ಸಾಗಿ ಹೀಗೆ ಹೇಳಿದಳು: ಮಗುವೇ, ನೀನು ಶತ್ರುಗಳ ಪಕ್ಷವನ್ನು ಬೆಳೆಸುತ್ತಾ ತಾಯಿಯ ಪಕ್ಷವನ್ನು ಏಕೆ ಕ್ಷಯಗೊಳಿಸುತ್ತಿರುವೆ? ಇದು ನಿನಗೆ ಯೋಗ್ಯವಲ್ಲ. ತಾಯಿಯ ಮಾತನ್ನು ಕೇಳಿದ ಕೂಡಲೇ ತಾಯಿಯ ಮಾತು ಅನಾದರಯೋಗ್ಯವಲ್ಲ ಎಂದು ಭಾವಿಸಿ, ತಾಯಿಯನ್ನು ಚೆನ್ನಾಗಿ ಸತ್ಕರಿಸಿ ದೇವತಾಪಕ್ಷವನ್ನು ತೊರೆದು ಹಿರಣ್ಯಕಶಿಪುವಿನ ಬಳಿ ಹೊರಟನು.

ಹೈರಣ್ಯಗರ್ಭಾಚ್ಚ ವಸಿಷ್ಠಾದ್ಧಿರಣ್ಯಕಶಿಪುಃ ಶಾಪಂ ಪ್ರಾಪ್ತವಾನ್ ಯಸ್ಮಾತ್ತ್ವಯಾನ್ಯೋ ವೃತೋ ಹೋತಾ । ತಸ್ಮಾದಸಮಾಪ್ತಯಜ್ಞಸ್ತ್ವಮ್

ಅಪೂರ್ವಾತ್ ಸತ್ತ್ವಜಾತಾದ್ವಧಂ ಪ್ರಾಪ್ಸ್ಯಸೀತಿ ತಚ್ಚಾಪದಾನಾದ್ಧಿರಣ್ಯಕಶಿಪುಃ ಪ್ರಾಪ್ತವಾನ್ವಧಮ್ ॥೨೦॥

ದೇವಪಕ್ಷವನ್ನು ತೊರೆದು ತಮ್ಮ ಬಳಿ ಬಂದ ವಿಶ್ವರೂಪನನ್ನು ಅಸುರೇಶ್ವರನನ್ನು ಸತ್ಕರಿಸಿ, ತಾನು ಆಚರಿಸುತ್ತಿರುವ ಯಾಗಕ್ಕೆ ಹೋತೃವನ್ನಾಗಿಸಿದನು. ಇದಕ್ಕಿಂತ ಮೊದಲು ಬ್ರಹ್ಮನ ಮಾನಸ ಪುತ್ರರಾದ ವಸಿಷ್ಠರು ಹಿರಣ್ಯಕಶಿಪುವಿಗೆ ಪುರೋಹಿತರಾಗಿದ್ದರು. ವಸಿಷ್ಠರನ್ನು ತೊರೆದು ವಿಶ್ವರೂಪನನ್ನು ವರಿಸಿದುದಕ್ಕಾಗಿ ಕುಪಿತರಾದ ವಸಿಷ್ಠರು ಹಿರಣ್ಯಕಶಿಪುವಿಗೆ ಶಾಪವನ್ನು ನೀಡಿದರು. ಹಿರಣ್ಯಕಶಿಪುವೇ, ಯಾವ ಕಾರಣದಿಂದ ನೀನು ಮತ್ತೊಬ್ಬ ಹೋತೃವನ್ನು ಅಂಗೀಕರಿಸಿದೆಯೋ ಅದರಿಂದ ನೀನು ಆರಂಭಿಸುವ ಯಜ್ಞವು ಪರಿಸಮಾಪ್ತಿ ಹೊಂದುವುದರ ಮೊದಲೇ ಅಪೂರ್ವವಾದ ಪ್ರಾಣಿಯಿಂದ ಸಾವನ್ನಪ್ಪುವಿ. ಈ ವಸಿಷ್ಠರ ಶಾಪಕ್ಕೆ ಅನುಸಾರವಾಗಿ ನರಸಿಂಹನಿಂದ ಹಿರಣ್ಯಕಶಿಪುವಿನ ವಧೆಯಾಯಿತು.

ವಿಶ್ವರೂಪೋ ಮಾತೃಪಕ್ಷವರ್ಧನೋಽತ್ಯರ್ಥಂ ತಪಸ್ಯಭವತ್ । ತಸ್ಯ ವ್ರತಭಂಗಾರ್ಥಮಿಂದ್ರೋ ಬಹ್ವೀಃ ಶ್ರೀಮತ್ಯೋಽಪ್ಸರಸೋ ನಿಯುಯೋಜ । ತಾಶ್ಚ ದೃಷ್ಟ್ವಾ ಮನಃ ಕ್ಷುಭಿತಂ ತಸ್ಯಾಭವತ್ತಾಸು ಚಾಪ್ಸರಃಸು ನಚಿರಾದೇವ ಸಕ್ತೋಽಭವತ್ । ಸಕ್ತಂ ಚೈನಂ ಜ್ಞಾತ್ವಾಪ್ಸರಸ ಊಚುರ್ಗಚ್ಛಾಮಹೇ ವಯಂ ಯಥಾಗತಮಿತಿ ॥೨೧॥

ಇದರಿಂದ ದುಃಖಿತನಾದ ವಿಶ್ವರೂಪನು ಮಾತೃಪಕ್ಷದ ವೃದ್ಧಿಗಾಗಿ ಕಠೋರವಾದ ತಪಸ್ಸನ್ನಾಚರಿಸಿದನು. ಇಂದ್ರದೇವನು ಇವನ ತಪಸ್ಸನ್ನು ನಾಶಗೊಳಿಸಲು ಕಾಂತಿ ಸಂಪನ್ನರಾದ ಅಪ್ಸರೆಯರನ್ನು ವಿಶ್ವರೂಪನ ಬಳಿ ಕಳುಹಿಸಿದನು. ಅವರನ್ನು ಕಂಡು ವಿಶ್ವರೂಪನ ಮನಸ್ಸು ಕ್ಷೋಭೆಗೊಂಡಿತು. ಅವರಲ್ಲಿಯೇ ಆಸಕ್ತನಾದನು. ಇದನ್ನು ತಿಳಿದ ಅಪ್ಸರೆಯರು 'ನಾವು ಬಂದ ದಾರಿಯನ್ನು ಹಿಡಿದು ಹೋಗುತ್ತೇವೆ' ಎಂದು ವಿಶ್ವರೂಪನಿಗೆ ಹೇಳಿದರು.

ತಾಸ್ತ್ವಷ್ಟ್ರ ಉವಾಚ ಕ್ವ ಗಮಿಷ್ಯಥ । ಆಸ್ಯತಾಂ ತಾವನ್ಮಯಾ ಸಹ ಶ್ರೇಯೋ ಭವಿಷ್ಯತೀತಿ । ತಾಸ್ತಮಬ್ರುವನ್ ವಯಂ ದೇವಸ್ತ್ರಿಯೋಽಪ್ಸರಸ ಇಂದ್ರಂ ವರದಂ ಪುರಾ ಪ್ರಭವಿಷ್ಣುಂ ವೃಣೇಮಹ ಇತಿ ॥ ೨೨ ॥

ಅಪ್ಸರೆಯರ ಮಾತನ್ನು ಕೇಳಿಸಿಕೊಂಡ ವಿಶ್ವರೂಪನು ದೇವಕನ್ಯೆಯರಿಗೆ ಹೇಳಿದನು: 'ಸುಂದರಿಯರೇ, ನೀವು ಎಲ್ಲಿಗೆ ಹೋಗುತ್ತೀರಿ? ನನ್ನ ಜೊತೆಯಲ್ಲೇ ನೆಲೆಸಿರಿ. ಇದರಿಂದ ನಿಮಗೆ ಶ್ರೇಯಸ್ಸಾಗುತ್ತದೆ'. ಅದಕ್ಕೆ ಅಪ್ಸರೆಯರು ಹೇಳುತ್ತಾರೆ- 'ವಿಶ್ವರೂಪನೇ, ನಾವು ದೇವಾಂಗನೆಯರು. ವರದನಾದ, ಪ್ರಭಾವಶಾಲಿಯಾದ ದೇವೇಂದ್ರನನ್ನು ಈಗಾಗಲೇ ನಾವು ವರಿಸಿದ್ದೇವೆ'.

ಅಥ ತಾ ವಿಶ್ವರೂಪೋಽಬ್ರವೀದದ್ಯೈವತೇ ದೇವಾ ಸೇಂದ್ರಾ ನ ಭವಿಷ್ಯಂತೀತಿ। ತತೋ ಮಂತ್ರಾನ್ ಜಜಾಪ । ತೈರ್ಮಂತ್ರೈಃ ಪ್ರಾವರ್ಧತ ತ್ರಿಶಿರಾಃ ಏಕೇನಾಸ್ಯೇನ ಸರ್ವಲೋಕೇಷು ದ್ವಿಜೈಃ ಕ್ರಿಯಾವದ್ಭಿರ್ಯಜ್ಞೇಷು ಸುಹುತಂ ಸೋಮಂ ಪಪಾವೇಕೇನಾಪ ಏಕೇನ ಸೇಂದ್ರಾನ್ ದೇವಾನ್ । ಅಥೇಂದ್ರಸ್ತಂ ವಿವರ್ಧಮಾನಂ ಸೋಮಪಾನಾಪ್ಯಾಯಿತಸರ್ವಗಾತ್ರಂ ದೃಷ್ಟ್ವಾ ಚಿಂತಾಮಾಪೇದೇ ॥೨೩॥

ಅಪ್ಸರೆಯರ ಮಾತುಗಳನ್ನು ಕೇಳಿ ವಿಶ್ವರೂಪನು ಹೇಳಿದನು: ಈ ಕ್ಷಣದಲ್ಲಿಯೇ ಇಂದ್ರ ಸಹಿತರಾದ ದೇವತೆಗಳಲ್ಲಿ ಯಾರೂ ಉಳಿಯುವುದಿಲ್ಲ. ಹೀಗೆ ಹೇಳಿದ ತಕ್ಷಣ ದೇವತೆಗಳೆಲ್ಲರೂ ವಿಶ್ವರೂಪನ ಶ್ರೋತ್ರಾದಿ ದ್ವಾರಗಳಿಂದ ಹೊರಬಂದರು. ವಿಶ್ವರೂಪನು ಮಂತ್ರಗಳನ್ನು ಜಪಿಸಲು ಆರಂಭಿಸಿದನು. ಜಪದ ಪ್ರಭಾವದಿಂದ ಅವನ ಶಕ್ತಿಯು ಅಭಿವೃದ್ಧಿಸಿತು. ಮೂರು ತಲೆಗಳನನ್ನು ಹೊಂದಿದ ವಿಶ್ವರೂಪನು, ಒಂದು ಮುಖದಿಂದ ಸತ್ಕರ್ಮಗಳನ್ನಾಚರಿಸುವ ಬ್ರಾಹ್ಮಣರು ವಿಧಿಪೂರ್ವಕವಾಗಿ ನೀಡುವ ಯಜ್ಞದಲ್ಲಿ ಅರ್ಪಿತವಾಗುತ್ತಿದ್ದ ಸೋಮರಸವನ್ನು ಪಾನ ಮಾಡುತ್ತಿದ್ದನು. ಮತ್ತೊಂದು ಮುಖದಿಂದ ಹವಿಷ್ಯಾನ್ನವನ್ನು, ಮತ್ತೊಂದು ಮುಖದಿಂದ ಇಂದ್ರಾದಿ ದೇವತೆಗಳ ತೇಜಸ್ಸನ್ನು ಹೀರುತ್ತಿದ್ದನು. ವಿಶ್ವರೂಪನ ಸಮಗ್ರ ಶರೀರವು ಸೋಮಪಾನದಿಂದ ಬಲಿಷ್ಠವಾಗಿರುವುದನ್ನು ಇಂದ್ರನು ಕಂಡನು. ಇದರಿಂದ ದೇವತಾ ಸಹಿತನಾದ ಇಂದ್ರನು ಚಿಂತೆಗೀಡಾದನು.

ದೇವಾಶ್ಚ ತೇ ಸಹೇಂದ್ರೇಣ ಬ್ರಹ್ಮಾಣಮಭಿಜಗ್ಮುರೂಚುಶ್ಚ । ವಿಶ್ವರೂಪೇಣ ಸರ್ವಯಜ್ಞೇಷು ಸುಹುತಃ ಸೋಮಃ ಪೀಯತೇ । ವಯಮಭಾಗಾಃ ಸಂವೃತ್ತಾಃ ಅಸುರಪಕ್ಷೋ ವರ್ಧತೇ ವಯಂ ಕ್ಷೀಯಾಮಃ । ತದರ್ಹಸಿ ನೋ ವಿಧಾತುಂ ಶ್ರೇಯೋ ಯದನಂತರಮಿತಿ ॥೨೪॥

ಬಳಿಕ ಇಂದ್ರ ಪ್ರಮುಖರಾದ ಸಮಸ್ತ ದೇವತೆಗಳು ಬ್ರಹ್ಮನ ಬಳಿ ಹೋಗಿ ಹೀಗೆ ಹೇಳಿದರು. 'ಪೂಜ್ಯನೆ, ವಿಶ್ವರೂಪನು ಸಮಸ್ತ ಯಜ್ಞಗಳಲ್ಲಿ ಹುತವಾದ ಸೋಮರಸವನ್ನು ಪಾನ ಮಾಡುತ್ತಿದ್ದಾನೆ. ನಮಗೆ ಯಜ್ಞಗಳಲ್ಲಿ ಭಾಗಗಳೇ ಸಿಗುತ್ತಿಲ್ಲ. ಯಜ್ಞಭಾಗವಿಲ್ಲದೆ ಕ್ಷೀಣಿಸುತ್ತಿದ್ದೇವೆ. ಅಸುರರ ಪಕ್ಷವು ವರ್ಧಿಸುತ್ತಿದೆ. ಈ ಸಮಯದಲ್ಲಿ ನೀನು ನಮಗೆ ಶ್ರೇಯಸ್ಸನ್ನು ಉಂಟುಮಾಡಬೇಕು'.

ತಾನ್ ಬ್ರಹ್ಮೋವಾಚ। ಋಷಿರ್ಭಾರ್ಗವಸ್ತಪಸ್ತಪ್ಯತೇ ದಧೀಚಃ ಸ ಯಾಚ್ಯತಾಂ ವರಂ ಯಥಾ ಕಲೇವರಂ ಜಹ್ಯಾತ್। ತಸ್ಯಾಸ್ಥಿಭಿರ್ವಜ್ರಂ ಕ್ರಿಯತಾಮಿತಿ॥೨೫॥

ದೇವತೆಗಳ ಮಾತನ್ನಾಲಿಸಿದ ಬ್ರಹ್ಮನು ಹೀಗೆ ಹೇಳಿದನು: ದೇವತೆಗಳೇ, ಭೃಗು ವಂಶದಲ್ಲಿ ಜನಿಸಿದ ದಧೀಚ ಎಂಬ ಋಷಿ ತಪಸ್ಸನ್ನು ಮಾಡುತ್ತಿದ್ದಾನೆ. ಅವನ ಸನಿಹಕ್ಕೆ ಹೋಗಿ ಅವನ ಶರೀರವನ್ನು ತ್ಯಜಿಸುವಂತೆ ವರವನ್ನು ಕೇಳಿರಿ. ಬಳಿಕ ಅವನ ಶರೀರದಲ್ಲಿನ ಮೂಳೆಗಳಿಂದ ವಜ್ರಾಯುಧವನ್ನು ನಿರ್ಮಿಸಿರಿ.

ಇಂದ್ರೋ ದಧೀಚೋಭವತ್। ದೇವಾಸ್ತತ್ರಾಗಚ್ಛನ್ ಯತ್ರ ದಧೀಚೋ ಭಗವಾನೃಷಿಸ್ತಪಸ್ತೇಪೇ। ಸೇಂದ್ರಾ ದೇವಾಸ್ತಮಭಿಗಮ್ಯೋಚುರ್ಭಗವಂಸ್ತಪಸಃ ಕುಶಲಮವಿಘ್ನಂ ಚೇತಿ। ತಾನ್ ದಧೀಚ ಉವಾಚ। ಸ್ವಾಗತಂ ಭವದ್ಭ್ಯಃ ಕಿಂ ಕ್ರಿಯತಾಮ್ ಯದ್ ವಕ್ಷ್ಯಥ ತತ್ ಕರಿಷ್ಯಾಮೀತಿ ತೇ ತಮಬ್ರುವನ್ ಶರೀರಪರಿತ್ಯಾಗಂ ಲೋಕಹಿತಾರ್ಥಂ ಭಗವಾನ್ ಕರ್ತುಮರ್ಹತೀತಿ। ಅಥ ದಧೀಚಸ್ತಥೈವಾವಿಮನಾಃ ಸುಖದುಃಖಿಸಮೋ ಮಹಾಯೋಗೀ ಆತ್ಮಾನಂ ಸಮಾಧಾಯ ಶರೀರಪರಿತ್ಯಾಗಂ ಚಕಾರ ॥೨೬॥

ಬಳಿಕ ಇಂದ್ರನು ದಧೀಚರ ಆಶ್ರಮಕ್ಕೆ ಹೋದನು. ಅವನನ್ನನುಸರಿಸಿ ದೇವತೆಗಳು ಹೋದರು. ದಧೀಚಋಷಿಯನ್ನು ಸಮೀಪಿಸಿ, 'ವಿನೀತರಾಗಿ, ತಮ್ಮ ತಪಸ್ಸು ನಿರ್ವಿಘ್ನವಾಗಿ ನಡೆಯುತ್ತಿರುವುದೇ' ಎಂದು ಪ್ರಶ್ನಿಸಿದರು. ದಧೀಚನು ಉತ್ತರಿಸುತ್ತಾ ಇಂದ್ರಪ್ರಮುಖರಾದ ದೇವತೆಗಳೇ 'ನಿಮಗೆಲ್ಲರಿಗೂ ಸ್ವಾಗತ. ನಿಮಗಾಗಿ ಯಾವ ಕಾರ್ಯವನ್ನು ಮಾಡಲಿ? ನೀವು ಹೇಳಿದಂತೆ ನಡೆದುಕೊಳ್ಳುತ್ತೇನೆ' ಎಂದು ಹೇಳಿದನು. ದೇವತೆಗಳು ಸ್ವಾಭಿಪ್ರಾಯವನ್ನು ತಿಳಿಸಿದರು. 'ಋಷಿಸತ್ತಮನೇ, ಲೋಕಕಲ್ಯಾಣಕ್ಕಾಗಿ ನೀನು ನಿನ್ನ ಶರೀರವನ್ನು ತ್ಯಜಿಸುವ ಕೃಪೆತೋರು'. ದೇವತೆಗಳ ಮಾತನ್ನು ಕೇಳಿ

ದಧೀಚನು ಸುಖ-ದುಃಖಗಳನ್ನು ಸಮಾನವಾಗಿ ಭಾವಿಸಿ, ಸ್ವಲ್ಪವೂ ಮನಸ್ಸಿನಲ್ಲಿ ದುಃಖಗೊಳ್ಳದೆ ಮಹಾಯೋಗಿಯಾದ ಅವನು ಉತ್ಸಾಹದಿಂದಲೇ ತನ್ನ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ ಶರೀರವನ್ನು ತ್ಯಜಿಸಿದನು.

ತಾವತ್ ಪೂರ್ವೇಣ ಸೇಂದ್ರಾ ದೇವಾ ಆಗಮನ್ । ಕಾಲೋಯಂ ದೇಹನ್ಯಾಸಾಯ ಇತ್ಯತ್ರ ಪೂರ್ವೇಣ ಪೂರ್ವೋಕ್ತಪ್ರಕಾರೇಣ । ತಸ್ಯ ಪರಮಾತ್ಮನ್ಯಪಸೃತೇ ತಾನ್ಯಸ್ಥೀನಿ ಧಾತಾ ಸಂಗೃಹ್ಯ ವಜ್ರಮಕರೋತ್ । ತೇನ ವಜ್ರೇಣಾಭೇದ್ಯೇನಾಪ್ರಧೃಷ್ಯೇಣ ಬ್ರಹ್ಮಾಸ್ಥಿಸಂಭೂತೇನ ವಿಷ್ಣುಪ್ರವಿಷ್ಟೇನೇಂದ್ರೋ ವಿಶ್ವರೂಪಂ ಜಘಾನ ಶಿರಸಾಂ ಚಾಸ್ಯ ಛೇದನಮಕರೋತ್। ತಸ್ಮಾದನಂತರಂ ವಿಶ್ವರೂಪಗಾತ್ರಮಥನಸಂಭವಂ ತ್ವಷ್ಟ್ರೋತ್ಪಾದಿತಮೇವಾರಿಂ ವೃತ್ರಮಿಂದ್ರೋ ಜಘಾನ ॥೨೭॥

ದೇಹಾಭಿಮಾನವನ್ನು ಬಿಟ್ಟು ಅವನ ಮನಸ್ಸು ಪರಮಾತ್ಮನಲ್ಲಿ ನೆಲೆಗೊಂಡಾಗ ಬ್ರಹ್ಮನು ಅವನ ಅಸ್ಥಿಗಳನ್ನು ಸಂಗ್ರಹಿಸಿ, ಅದರಿಂದಲೇ ವಜ್ರಾಯುಧವನ್ನು ಸಿದ್ಧಗೊಳಿಸಿದನು. ಅಭೇದ್ಯವಾದ, ಎದುರಿಸಲು ಅಸಾಧ್ಯವಾದ, ಬ್ರಾಹ್ಮಣನ ಅಸ್ಥಿಗಳಿಂದ ನಿರ್ಮಿತವಾದ, ವಿಷ್ಣುವಿನ ಸನ್ನಿಧಾನವಿರುವ ವಜ್ರಾಯುಧದಿಂದ ಇಂದ್ರನು ವಿಶ್ವರೂಪನನ್ನು ಕೊಂದನು. ಅವನ ಮೂರು ತಲೆಗಳನ್ನು ಕತ್ತರಿಸಿದನು. ಅನಂತರ ವಿಶ್ವರೂಪನ ತಂದೆಯಾದ ತ್ವಷ್ಟೃವು ವಿಶ್ವರೂಪನ ಶರೀರವನ್ನೇ ಮಥನ ಮಾಡಿದನು. ಅವನ ಶರೀರದಿಂದ ವೃತ್ರಾಸುರನು ಹುಟ್ಟಿದನು. ವೃತ್ರಾಸುರನನ್ನೂ ಅದೇ ವಜ್ರಾಯುಧದಿಂದಲೇ ಇಂದ್ರನು ಸಂಹರಿಸಿದನು.

ತಸ್ಯಾಂ ದ್ವೈಧೀಭೂತಾಯಾಂ ಬ್ರಹ್ಮವಧ್ಯಾಯಾಂ ಭಯಾದಿಂದ್ರೋ ದೇವರಾಜ್ಯಂ ಪರಿತ್ಯಜ್ಯ ಅಪ್ಸು ಸಂಭವಾಂ ಶೀತಲಾಂ ಮಾನಸಸರೋಗತಾಂ ನಲಿನೀಂ ಪ್ರಪೇದೇ । ತತ್ರ ಚೈಶ್ವರ್ಯಯೋಗಾದಣುಮಾತ್ರೋ ಭೂತ್ವಾ ಬಿಸಗ್ರಂಥಿಂ ಪ್ರವಿವೇಶ ॥೨೮॥

ಹೀಗೆ ಇಂದ್ರನು ವಿಶ್ವರೂಪನನ್ನು, ವೃತ್ರಾಸುರನನ್ನು ಸಂಹರಿಸಿದ ಕಾರಣ ಎರಡು ವಿಧವಾದ ಬ್ರಹ್ಮಹತ್ಯೆಯು ಅವನನ್ನು ಆವರಿಸಿತು. ಇದರಿಂದ ಭಯಗೊಂಡ ಇಂದ್ರನು ದೇವಲೋಕವನ್ನು ಬಿಟ್ಟು ಶೀತಲವಾದ ಮಾನಸ ಸರೋವರದಲ್ಲಿ ಇರುವ ಕಮಲವನ್ನು

ಸೇರಿದನು. ಅಣಿಮಾದಿ ಐಶ್ವರ್ಯ ಸಿದ್ಧಿಯಿಂದ ಕಮಲದ ದಂಟಿನ ಗೇಣನ್ನು ಪ್ರವೇಶಿಸಿದನು.

ಅಥ ಬ್ರಹ್ಮವಧ್ಯಾಭಯಪ್ರಣಷ್ಟೇ ತ್ರೈಲೋಕ್ಯನಾಥೇ ಶಚೀಪತೌ ಜಗದನೀಶ್ವರಂ ಬಭೂವ । ದೇವಾನ್ರಜಸ್ತಮಶ್ಚಾವಿವೇಶ ಮಂತ್ರಾ ನ ಪ್ರಾವರ್ತಂತ ಮಹರ್ಷೀಣಾಮ್ । ರಕ್ಷಾಂಸಿ ಪ್ರಾದುರಭವನ್ । ಬ್ರಹ್ಮ ಚೋತ್ಸಾದನಂ ಜಗಾಮ । ಅನಿಂದ್ರಾಶ್ಚಾಬಲಾ ಲೋಕಾಃ ಸುಪ್ರಧೃಷ್ಯಾ ಬಭೂವುಃ ॥೨೯॥

ಬ್ರಹ್ಮಹತ್ಯೆಯ ಭಯದಿಂದ ತ್ರೈಲೋಕ್ಯನಾಥನಾದ, ಶಚೀಪತಿಯಾದ ಇಂದ್ರನು ಕಣ್ಮರೆಯಾದಾಗ ಜಗತ್ತು ರಾಜನಿಲ್ಲದೆ ಬಡವಾಯಿತು. ರಜಸ್-ತಮೋಗುಣಗಳು ದೇವತೆಗಳನ್ನು ಆಕ್ರಮಿಸಿದವು. ಮಹರ್ಷಿಗಳು ಹೇಳುತ್ತಿರುವ ಮಂತ್ರಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. ರಾಕ್ಷಸರು ಕೊಬ್ಬಿದರು. ವೇದಗಳ ಅಧ್ಯಯನದ ಪರಂಪರೆಯು ಸ್ಥಗಿತವಾಯಿತು. ಇಂದ್ರನಿಲ್ಲದೆ ಲೋಕಗಳೆಲ್ಲವೂ ಬಲಹೀನವಾದವು. ಲೋಕವನ್ನು ಯಾರೂ ಜಯಿಸುವಂತಾಯಿತು.

ಅಥ ದೇವಾ ಋಷಯಶ್ಚಾಯುಷಃ ಪುತ್ರಂ ನಹುಷಂ ನಾಮ ದೇವರಾಜತ್ವೇಭಿಷಿಷಿಚುಃ । ನಹುಷಃ ಪಂಚಭಿಃ ಶತೈರ್ಜ್ಯೋತಿಷಾಂ ಲಲಾಟೇ ಜ್ವಲದ್ಭಿಃ ಸರ್ವತೇಜೋಹರೈಸ್ತ್ರಿವಿಷ್ಟಪಂ ಪಾಲಯಾಂಬಭೂವ । ಅಥ ಲೋಕಾಃ ಪ್ರಕೃತಿಮಾಪೇದಿರೇ, ಸ್ವಸ್ಥಾಶ್ಚ ಬಭೂವುಃ ॥೩೦॥

ಬಳಿಕ ದೇವತೆಗಳು, ಋಷಿಗಳು, ಆಯುವಿನ ಮಗನಾದ ನಹುಷನನ್ನು ದೇವ ಸಿಂಹಾಸನದಲ್ಲಿ ಕೂಡಿಸಿ ಪಟ್ಟಾಭಿಷೇಕಗೈದರು. ನಹುಷನು ಸಮಸ್ತ ಪ್ರಾಣಿಗಳ ಶಕ್ತಿಯನ್ನು ಅಪಹರಿಸುವ ಸಾಮರ್ಥ್ಯವನ್ನು ತನ್ನ ಹಣೆಯಲ್ಲಿ ಹೊಂದಿದ್ದನು. ಪ್ರಜ್ವಲಿಸುತ್ತಿದ್ದ ಐದು ನೂರು ಜ್ಯೋತಿಗಳನ್ನು ಹೊಂದಿದ್ದನು. ಆ ಶಕ್ತಿಯ ಮೂಲಕ ಸ್ವರ್ಗರಾಜ್ಯವನ್ನು ಪರಿಪಾಲಿಸುತ್ತಿದ್ದನು. ನಹುಷನು ಮೂರುಲೋಕಗಳ ಚಕ್ರವರ್ತಿಯಾದ ಬಳಿಕ ಎಲ್ಲ ಲೋಕಗಳು ಸಹಜ ಸ್ಥಿತಿಗೆ ಮರಳಿದವು. ಸಕಲ ಪ್ರಜೆಗಳು ಶಾಂತರೂ ಸುಖಿಗಳೂ ಸಂತೋಷಭರಿತರೂ ಆದರು.

ಅಥೋವಾಚ ನಹುಷಃ ಸರ್ವಂ ಮಾಂ ಶಕ್ರೋಪಭುಕ್ತಮುಪಸ್ಥಿತಮೃತೇ ಶಚೀಮಿತಿ । ಸ ಏವಮುಕ್ತ್ವಾ ಶಚೀಸಮೀಪಮಗಮದುವಾಚ । ಚೈನಾಮ್ ಸುಭಗೇಹಮಿಂದ್ರೋ ದೇವಾನಾಂ ಭಜಸ್ವಮಾಮಿತಿ । ತಂ ಶಚೀ ಪ್ರತ್ಯುವಾಚ ಪ್ರಕೃತ್ಯಾ ತ್ವಂ ಧರ್ಮವತ್ಸಲಃ ಸೋಮವಂಶೋದ್ಭವಶ್ಚ । ನಾರ್ಹಸಿ ಪರಪತ್ನೀಧರ್ಷಣಂ ಕರ್ತುಮಿತಿ ॥೩೧॥

ಸ್ವಲ್ಪ ಕಾಲ ಕಳೆದ ಬಳಿಕ ನಹುಷನು ದೇವತೆಗಳಿಗೆ ಹೇಳಿದನು: ಇಂದ್ರನು ಉಪಭೋಗಿಸುತ್ತಿದ್ದ ಸಕಲ ಪದಾರ್ಥಗಳು ನನ್ನ ಉಪಭೋಗಕ್ಕೆ ಬಂದಿವೆ. ಆದರೆ ಶಚಿಯೊಬ್ಬಳು ನನ್ನ ಬಳಿ ಬರಲಿಲ್ಲ. ಈ ರೀತಿಯಾಗಿ ಹೇಳಿ ಶಚೀದೇವಿಯ ಬಳಿ ಹೋಗಿ ಅವಳಲ್ಲಿ ಹೀಗೆ ನಹುಷನು ಹೇಳಿದನು: ಸೌಭಾಗ್ಯವತಿಯೇ, ನಾನು ದೇವತೆಗಳಿಗೂ ರಾಜನಾದ ಇಂದ್ರನು. ನನ್ನನ್ನು ನೀನು ಸೇವಿಸು. ಶಚಿಯು ಉತ್ತರಿಸುತ್ತಾಳೆ: ನಹುಷನೇ, ಸ್ವಾಭಾವಿಕವಾಗಿ ನೀನು ಧರ್ಮದಲ್ಲಿ ವಾತ್ಸಲ್ಯವುಳ್ಳವನು. ಪ್ರಸಿದ್ಧವಾದ ಚಂದ್ರವಂಶದಲ್ಲಿ ಜನ್ಮ ತಾಳಿರುವೆ. ನಿನ್ನಂತಹ ಶ್ರೇಷ್ಠ ಪುರುಷನು ಮತ್ತೊಬ್ಬರ ಪತ್ನಿಯನ್ನು ಬಲಾತ್ಕರಿಸುವುದು ಯೋಗ್ಯವಲ್ಲ.

ತಾಮುಥೋವಾಚ ನಹುಷಃ ಐಂದ್ರಂ ಪದಮಧ್ಯಾಸ್ಯತೇ ಮಯಾ । ಅಹಮಿಂದ್ರಸ್ಯ ರಾಜ್ಯರತ್ನಹರೋ ನಾತ್ರಾಧರ್ಮಃ । ಕಶ್ಚಿತ್ತ್ವಮಿಂದ್ರಭುಕ್ತೇತಿ ಸಾ ತಮುವಾಚ ಅಸ್ತಿ ಮಮ ಕಿಂಚಿದವ್ರತಮಪರ್ಯವಸಿತಮ್ ತಸ್ಯಾವಭೃಥೇ ತ್ವಾಮುಪಗಮಿಷ್ಯಾಮಿ ಕೈಶ್ಚಿದೇವಾಹೋಭಿರಿತಿ । ಸ ಶಚ್ಯೈವಮಭಿಹಿತೋ ನಹುಷೋ ಜಗಾಮ ॥೩೨॥

ನಹುಷನು ಪುನಃ ಶಚಿಗೆ ಹೇಳಿದನು: ನಾನು ಈಗ ಇಂದ್ರನ ಪದವಿಯಲ್ಲಿ ಪ್ರತಿಷ್ಠಿತನಾಗಿದ್ದೇನೆ. ಇಂದ್ರನ ರಾಜ್ಯವನ್ನು, ರತ್ನವೇ ಮೊದಲಾದ ಐಶ್ವರ್ಯಗಳನ್ನು ಹೊಂದಿರುತ್ತೇನೆ. ಅದರಂತೆ ನಿನ್ನನ್ನೂ ಹೊಂದುವುದರಲ್ಲಿ ಯಾವ ಅಧರ್ಮವಿದೆ? ನೀನು ಇಂದ್ರನಿಂದ ಉಪಭೋಗಿಸುವ ವಸ್ತುಗಳಲ್ಲೇ ಸೇರಿಕೊಳ್ಳುತ್ತಿ. ಈ ರೀತಿಯಾಗಿ ನಹುಷನು ಹೇಳಿದಾಗ ನಹುಷನನ್ನು ನಿರಾಕರಿಸಲು ಸಾಧ್ಯವಿಲ್ಲವೆಂದು ಮನಗಂಡ ಶಚೀದೇವಿಯು ಬೇರೆ ಉಪಾಯವನ್ನು ಆಶ್ರಯಿಸಿ ನಹುಷನಿಗೆ ಹೇಳಿದಳು: ಮಹಾರಾಜನೇ, ನಾನೊಂದು ವ್ರತವನ್ನು ಆಚರಿಸುತ್ತಿದ್ದೇನೆ. ಇನ್ನೂ ಆ ವ್ರತವು

ಮುಗಿದಿರುವುದಿಲ್ಲ. ಆ ವ್ರತದ ಅವಭೃಥವಾದ ಬಳಿಕ ಕೆಲವೇ ದಿನಗಳಲ್ಲಿ ನಿನ್ನನ್ನು ಸೇವಿಸಲು ಸಮೀಪಿಸುತ್ತೇನೆ. ಶಚಿಯು ಹೀಗೆ ಹೇಳುತ್ತಲೇ ನಹುಷನು ತನ್ನ ಅರಮನೆಗೆ ಹೊರಟು ಹೋದನು.

ಅಥ ಶಚೀ ದುಃಖಶೋಕಾರ್ತಾ ಭರ್ತೃದರ್ಶನಲಾಲಸಾ ನಹುಷಭಯಗೃಹೀತಾ ಬೃಹಸ್ಪತಿಮುಪಾಗಚ್ಛತ್ । ಸ ಚ ತಾಮಭಿಗತಾಂ ದೃಷ್ಟ್ವೈವ ಧ್ಯಾನಂ ಪ್ರವಿಶ್ಯ ಭರ್ತೃಕಾರ್ಯತತ್ಪರಾಂ ಜ್ಞಾತ್ವಾ ಬೃಹಸ್ಪತಿರುವಾಚ। ಅನೇನೈವ ವ್ರತೇನ ತಪಸಾ ಚಾನ್ವಿತಾ ದೇವೀಂ ವರದಾಮುಪಶ್ರುತಿಮಾಹ್ವಯ ಸಾ ತವೇಂದ್ರಂ ದರ್ಶಯಿಷ್ಯತೀತಿ ॥೩೩॥

ಅನಂತರ ಶಚೀದೇವಿಯು ದುಃಖ-ಶೋಕದಿಂದ ಪೀಡಿತಳಾಗಿ, ತನ್ನ ಗಂಡನನ್ನು ಕಾಣುವ ಬಯಕೆಯುಳ್ಳವಳಾಗಿ, ನಹುಷನ ಭಯದಿಂದ ಗೃಹೀತಳಾಗಿ ದೇವಗುರುವಾದ ಬೃಹಸ್ಪತಿಯನ್ನು ಸಮೀಪಿಸಿ ಉಪಾಯವನ್ನು ಕೇಳಿದಳು. ಆ ಬೃಹಸ್ಪತಿಯಾದರೂ ಭಯದಿಂದ ಆಗಮಿಸಿರುವ ಶಚಿಯನ್ನು ಕಂಡು, ಧ್ಯಾನದಿಂದ ಗಂಡನ ಕಾರ್ಯದಲ್ಲಿ ತತ್ಪರಳಾಗಿದ್ದಾಳೆ ಎಂದು ತಿಳಿದು ಶಚಿಗೆ ಹೇಳಿದನು: 'ಶಚಿಯೇ, ನೀನು ಉಪಶ್ರುತಿಯನ್ನು ಆಹ್ವಾನಿಸು. ಅವಳು ನಿನಗೆ ಇಂದ್ರನನ್ನು ತೋರಿಸುತ್ತಾಳೆ' ಎಂದು.

ವ್ಯಾಖ್ಯಾನ ವಿಶೇಷ– ಉಪಶ್ರುತಿ ಎಂದರೆ ಒಂದು ಕಾರ್ಯವನ್ನು ಸಂಕಲ್ಪಿಸಿದಾಗ ಜನರಿಗೆ ಸಹಜವಾಗಿ ನಿನ್ನ ಕೆಲಸವು ಆಗುತ್ತದೆ 'ತವ ಕಾರ್ಯಂ ಭವಿಷ್ಯತಿ' ಎಂಬ ವಚನವೇ ಉಪಶ್ರುತಿ ಎನಿಸಿದೆ. ಆರಂಭಿಸಿದ ಕಾರ್ಯಕ್ಕೆ ಅನುಕೂಲವಾದ ವಾಕ್ಯಸಂಯೋಜನೆಯು ಉಪಶ್ರುತಿ ಎನಿಸಿದೆ. ಅದರಂತೆ ಆ ವಾಕ್ಯಕ್ಕೆ ಅಭಿಮಾನಿನಿಯಾದ ದೇವಿಯು ಉಪಶ್ರುತಿ ಎನಿಸಿದ್ದಾಳೆ. ಗಂಡನನ್ನೇ ಚಿಂತಿಸುತ್ತಿರುವ ಶಚೀದೇವಿಗೆ ಬೃಹಸ್ಪತಿಗಳು ನಿನ್ನ ಕಾರ್ಯವು ಆಗುತ್ತದೆ ಎಂದು ಹೇಳಿದಾಗ ಅದಕ್ಕೆ ಅಭಿಮಾನಿಯಾದ ಉಪಶ್ರುತಿಯು ಎದುರು ಬಂದಳು. ಬೇರೆ ಯಾರ ಕಣ್ಣಿಗೂ ಕಾಣಿಸದಂತೆ ಉಪಕರಿಸುತ್ತಾಳೆ ಈ ಉಪಶ್ರುತಿಯು ಎಂಬುದು ವಿಶೇಷ.

ಸಾऽಥ ಮಹಾನಿಯಮಮಾಸ್ಥಿತಾ ದೇವೀಂ ವರದಾಮುಪಶ್ರುತಿಂ ಮಂತ್ರೈರಾಹ್ವಯತ್ ಸೋಪಶ್ರುತಿಃ ಶಚೀಸಮೀಪಮಗಾತ್ । ಉವಾಚ ಚೈನಾಮಿಯಮಸ್ಮಿ ತ್ವಯೋಪಹೂತೋಪಸ್ಥಿತಾ ಕಿಂ ತೇ ಪ್ರಿಯಂ ಕರವಾಣೇತಿ। ತಾಂ ಮೂರ್ಧ್ನಾ ಪ್ರಣಮ್ಯೋವಾಚ ಶಚೀ ಭಗವತ್ಯರ್ಹಸಿ ಮೇ ಭರ್ತಾರಂ ದರ್ಶಯಿತುಂ। ತ್ವಂ ಸತ್ಯಾ ಋತಾ ಚೇತಿ। ಸೈನಾಂ ಮಾನಸಂ ಸರೋऽನಯತ್ ತತ್ರೇಂದ್ರಂ ಬಿಸಗ್ರಂಥಿಗತಮದರ್ಶಯತ್ ॥೩೪॥

ಬಳಿಕ ಬೃಹಸ್ಪತಿಗಳು ಹೇಳಿದಂತೆ ಮಹಾನಿಯಮ, ಅನುಷ್ಠಾನಸಂಪನ್ನಳಾದ ಶಚೀದೇವಿಯು ವರದಳಾದ ಉಪಶ್ರುತಿ ದೇವಿಯನ್ನು ಮಂತ್ರಪೂರ್ವಕವಾಗಿ ಕರೆದಳು. ಕೂಡಲೇ ಉಪಶ್ರುತಿಯು ಶಚೀದೇವಿಯ ಸಮೀಪಕ್ಕೆ ಬಂದು ಹೇಳಿದಳು: ಶಚೀದೇವಿಯೇ, ನೀನೀಗ ಮಂತ್ರಪೂರ್ವಕವಾಗಿ ಆಹ್ವಾನಿಸಿದ ಉಪಶ್ರುತಿಯು ನಾನೇ. ನಿನ್ನ ಆಹ್ವಾನದಂತೆ ನಾನು ಇಲ್ಲಿ ಆಗಮಿಸಿದ್ದೇನೆ. ನಿನಗೆ ಇಷ್ಟವಾದ ಯಾವ ಕಾರ್ಯವನ್ನು ಮಾಡಲಿ? ಶಚಿಯು ಅವಳಿಗೆ ತಲೆಬಾಗಿ ನಮಸ್ಕರಿಸಿ ಹೀಗೆ ಹೇಳಿದಳು: 'ಪೂಜ್ಯಳೇ, ನೀನು ಸತ್ಯವೂ, ಋತವೂ ಆಗಿರುವಿ. ಕೃಪೆಯಿಂದ ನನ್ನ ಗಂಡನನ್ನು ತೋರಿಸು'. ಹಾಗೆಯೇ ಆಗಲೆಂದು ಹೇಳಿದ ಉಪಶ್ರುತಿಯು, ಶಚಿಯನ್ನು ಮಾನಸ ಸರೋವರದ ಸಮೀಪಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಕಮಲದ ದಂಟಿನಲ್ಲಿ ಅಡಗಿ ಕುಳಿತು ಅಣುರೂಪದಲ್ಲಿ ಧ್ಯಾನಿಸುತ್ತಿರುವ ಇಂದ್ರನನ್ನು ತೋರಿಸಿದಳು.

ತಾಮಿಂದ್ರಃ ಪತ್ನೀಂ ಕೃಶಾಂ ಗ್ಲಾನಾಂ ಚ ದೃಷ್ಟ್ವಾ ಚಿಂತಯಾಂಬಭೂವ । ಅಹೋ ಮಮ ಮಹದ್ದುಃಖಮಿದಮದ್ಯೋಪಗತಮ್ । ನಷ್ಟಂ ಹಿ ಮಾಮಿಯಮನಿಷ್ಟ್ವೋಪಾಗಮದ್ದುಃಖಾರ್ತೇತಿ । ತಾಮಿಂದ್ರ ಉವಾಚ ಕಥಂ ವರ್ತಯಸೀತಿ ಸಾ ತಮುವಾಚ ನಹುಷೋ ಮಾಮಾಹ್ವಯತಿ । ಕಾಲಶ್ಚಾಸ್ಯ ಮಯಾ ಕೃತ ಇತಿ ॥೩೫॥

ಇಂದ್ರದೇವನಾದರೂ ದುರ್ಬಲಳಾಗಿ, ಕೃಶಳಾಗಿರುವ ತನ್ನ ಪತ್ನಿಯನ್ನು ನೋಡಿ ಚಿಂತಾಗ್ರಸ್ಥನಾಗಿ ದುಃಖಿಸುತ್ತಾ ತನ್ನಲ್ಲಿಯೇ ಹೀಗೆ ಹೇಳಿಕೊಂಡನು: ಅಹೋ, ನಿಶ್ಚಯವಾಗಿಯೂ ಅತ್ಯಂತ ದುಃಖದ ವಿಷಯವು. ನಾನಿಲ್ಲಿ ಅಡಗಿಕೊಂಡಿದ್ದೇನೆ. ನನ್ನ ಪತ್ನಿಯು ಅತ್ಯಂತ ದುಃಖಿತಳಾಗಿ ನನ್ನನ್ನು ಹುಡುಕಿಕೊಂಡು ಇಲ್ಲಿಗೆ ಆಗಮಿಸಿದ್ದಾಳೆ ಎಂದು ಯೋಚಿಸುತ್ತಾ ಇಂದ್ರನು ಶಚಿಯನ್ನು ಪ್ರಶ್ನಿಸಿದನು: ದೇವಿಯೇ, ದಿನಗಳನ್ನು ಹೇಗೆ ಕಳೆಯುತ್ತಿರುವಿ? ಶಚಿಯು ಹೇಳುತ್ತಾಳೆ. 'ಪ್ರಾಣೇಶ್ವರನೇ, ನಹುಷನು ನನ್ನನ್ನು ಪತ್ನಿಯನ್ನಾಗಿ ಮಾಡಬೇಕೆಂದು ಕರೆಯುತ್ತಿದ್ದಾನೆ. ನಾನು ಬೇರೆ ನೆಪವನ್ನು ಹೇಳಿ ಕಾಲಾವಕಾಶವನ್ನು ಕೇಳಿದ್ದೇನೆ'.

ತಾಮಿಂದ್ರ ಉವಾಚ ಗಚ್ಛ ನಹುಷಸ್ತ್ವಯಾ ವಾಚ್ಯೋಽಪೂರ್ವೇಣ ಮಾಮೃಷಿಯುಕ್ತೇನ ಯಾನೇನ ತ್ವಮಧಿರೂಢ ಉದ್ವಹಸ್ವ । ಇಂದ್ರಸ್ಯ ಹಿ

ಮಹಾಂತಿ ವಾಹನಾನಿ । ಮನಸಃ ಪ್ರಿಯಾಣ್ಯಧಿರೂಢಾನಿ ಮಯಾ ತ್ವಮನ್ಯೇನೋಪಯಾತುಮರ್ಹಸೀತಿ । ಸೈವಮುಕ್ತಾ ಹೃಷ್ಟಾ ಜಗಾಮ । ಇಂದ್ರೋಽಪಿ ಬಿಸಗ್ರಂಥಿಮೇವಾವಿವೇಶ ಭೂಯಃ ॥೩೬॥

ಇಂದ್ರನು ಹೇಳಿದನು- 'ಶಚಿಯೇ, ನೀನೀಗಲೇ ಸ್ವರ್ಗಕ್ಕೆ ಹೋಗು. ನಹುಷನ ಬಳಿ ಹೀಗೆ ಹೇಳು- ನಹುಷನೇ, ನೀನು ಋಷಿಗಳಿಂದ ಹೊರಲ್ಪಟ್ಟ ಪಲ್ಲಕ್ಕಿಯಲ್ಲಿ ಕುಳಿತು ನನ್ನಲ್ಲಿ ಆಗಮಿಸಿ ನನ್ನನ್ನು ಸ್ವೀಕರಿಸು ಎಂದು ಹೇಳು. ಮನಸ್ಸಿಗೆ ಸಂತೋಷವನ್ನುಂಟು ಮಾಡುವ ವೈಭವದ ಅನೇಕ ವಾಹನಗಳು ಅವನ ಬಳಿ ಇವೆ. ಶಚಿಯಾದ ನಾನು ಆ ಎಲ್ಲ ವಾಹನಗಳಲ್ಲಿಯೂ ಸನ್ನಿಹಿತವಾಗಿದ್ದೇನೆ. ಆ ಎಲ್ಲ ವಾಹನಗಳಿಂದಲೂ ಭಿನ್ನವಾದ, ವಿಲಕ್ಷಣವಾದ ವಾಹನದಲ್ಲಿ ನೀನು ನನ್ನ ಸನಿಹಕ್ಕೆ ಆಗಮಿಸಬೇಕು ಎಂದು ನನ್ನ ಅಭಿಪ್ರಾಯವು. ಶಚಿಯೇ, ನೀನು ನಹುಷನ ಬಳಿ ಹೀಗೆ ಹೇಳಿದರೆ ನಮ್ಮ ಕಾರ್ಯಸಾಧನೆಯಾಗುತ್ತದೆ'. ಇಂದ್ರನ ಮಾತನ್ನು ಕೇಳಿಸಿಕೊಂಡ ಶಚಿಯು ಸಂತೋಷದಿಂದ ಸ್ವರ್ಗಕ್ಕೆ ಹೋದಳು. ಇಂದ್ರನು ಕಮಲದ ದಂಟಿನಲ್ಲಿ ಧ್ಯಾನಾಸಕ್ತನಾದನು.

ಅಥೇಂದ್ರಾಣೀಮಭ್ಯಾಗತಾಂ ದೃಷ್ಟ್ವೋವಾಚ ನಹುಷಃ । ಪೂರ್ಣಃ ಸ ಕಾಲ ಇತಿ । ತಂ ಶಚ್ಯಬ್ರವೀಚ್ಛಕ್ರೇಣ ಯಥೋಕ್ತಮ್ ಸ ಮಹರ್ಷಿಯುಕ್ತಂ ವಾಹನಮಧಿರೂಢಃ ಶಚೀಸಮೀಪಮುಪಾಗಚ್ಛತ್ ॥೩೭॥

ಬಳಿಕ ಶಚಿಯು ತನ್ನ ಸಮೀಪಕ್ಕೆ ತಾನಾಗಿಯೇ ಆಗಮಿಸಿದ್ದನ್ನು ಕಂಡು ಸಂತೋಷದಿಂದ ನಹುಷನು: ದೇವಿಯೇ, ನೀನು ಹೇಳಿದ ಆ ಕಾಲದ ಅವಧಿಯು ಪೂರ್ಣವಾಗಿದೆ ಎಂದು ಹೇಳಿದಾಗ, ಶಚೀದೇವಿಯು ಹೇಳಿದಳು: ಇಂದ್ರನು ಹೇಳಿದ ಸಲಹೆಯಂತೆ ಋಷಿಗಳು ಹೊತ್ತ ವಾಹನದಲ್ಲಿ ನನ್ನ ಅರಮನೆಗೆ ಆಗಮಿಸಬೇಕೆಂದು ನಹುಷನಿಗೆ ಹೇಳಿ ಹೊರಟು ಹೋದಳು. ಬಳಿಕ ಯುಕ್ತಾಯುಕ್ತ ವಿವೇಚನೆಯಿಲ್ಲದೆ ನಹುಷನು ಋಷಿಗಳು ಹೊತ್ತಿರುವ ಪಲ್ಲಕ್ಕಿಯಲ್ಲಿ ಕುಳಿತು ಶಚಿಯ ಅರಮನೆಗೆ ಹೊರಟನು.

ಅಥ ವೈತ್ರಾವರುಣಿಃ ಕುಂಭಯೋನಿರಗಸ್ತ್ಯೋ ಮಹರ್ಷಿರ್ನ್ ಕ್ರಿಯಮಾಣಾಂಸ್ತಾನ್ನಹುಷೇಣಾಪಶ್ಯತ್ । ಪದ್ಭ್ಯಾಂ ಚ ತೇನಾಸ್ಪೃಶ್ಯತ । ತತಃ

ಸ ನಹುಷಮಬ್ರವೀದಕಾರ್ಯಪ್ರವತ್ತ ಪಾಪ ಪತಸ್ವ ಮಹೀಮ್ ಸರ್ಪೋ ಭವ ಯಾವದ್ಭೂಮಿರ್ಗಿರಯಶ್ಚ ತಿಷ್ಠೇಯುಸ್ತಾವದಿತಿ । ಸ ಮಹರ್ಷಿವಾಕ್ಯ-ಸಮಕಾಲಮೇವ ತಸ್ಮಾದ್ಯಾನಾದವಾಪತತ್ ॥೩೮॥

ಬಳಿಕ ಪಲ್ಲಕ್ಕಿಯನ್ನು ಹೊತ್ತಿರುವ ಋಷಿಗಳಲ್ಲಿ ಕುಂಭಯೋನಿಯಾದ, ಮಿತ್ರಾವರ್ಣರ ಮಗನಾದ, ಋಷಿಶ್ರೇಷ್ಠನಾದ ಅಗಸ್ತ್ಯನು ಒಬ್ಬನಾಗಿದ್ದನು. ನಹುಷನು ಮಹರ್ಷಿಗಳನ್ನು ಬೇಗ ಬೇಗ ಮುಂದೆ ಸಾಗುವಂತೆ ಗದರಿಸುತ್ತಿರುವಂತೆ, ಬೇಗ ನಡೆಯಲಾಗದೆ ಇರುವವರನ್ನು ತಿರಸ್ಕರಿಸುತ್ತಿರುವುದನ್ನು ಅಗಸ್ತ್ಯನು ನೋಡಿದನು. ಶೀಘ್ರವಾಗಿ ನಡೆಯಲಾಗದ ಅಗಸ್ತ್ಯನಿಗೆ ನಹುಷನು ತನ್ನ ಪಾದಗಳಿಂದ ಸ್ಪರ್ಶಿಸಿದನು. ಸಿಟ್ಟಾದ ಅಗಸ್ತ್ಯನು ನಹುಷನನ್ನು ಕುರಿತು- 'ಎಲೈ ಅಸತ್ಕರ್ಮದಲ್ಲಿ ತೊಡಗಿಸಿಕೊಂಡವನೇ, ಪಾಪಿಷ್ಠನಾದ ನಹುಷನೇ, ನೀನು ಈಗಲೇ ಭೂಮಿಯಲ್ಲಿ ಬೀಳು, ಸರ್ಪವಾಗು. ಎಲ್ಲಿಯ ತನಕ ಭೂಮಿ, ಪರ್ವತಗಳು ಇರುತ್ತವೆಯೋ ನೀನು ಅಲ್ಲಿಯ ತನಕ ಸರ್ಪವಾಗಿಯೇ ಇರು' ಎಂದು ಶಪಿಸಿದನು. ಅಗಸ್ತ್ಯನು ಹೀಗೆ ಹೇಳುತ್ತಿರುವಾಗ ನಹುಷನು ಪಲ್ಲಕ್ಕಿಯಿಂದ ಕೆಳಗೆ ಬಿದ್ದನು.

ಅಥಾನಿಂದ್ರಂ ಪುನಸ್ತ್ರೈಲೋಕ್ಯಮಭವತ್ । ತತೋ ದೇವಾ ಋಷಯಶ್ಚ ಭಗವಂತಂ ವಿಷ್ಣುಂ ಶರಣಮಿಂದ್ರಾರ್ಥೇऽಭಿಜಗ್ಮುಃ । ಊಚುಶ್ಚೈನಂ ಭಗವನ್ನಿಂದ್ರಂ ಬ್ರಹ್ಮವಧ್ಯಾಭಿಭೂತಂ ತ್ರಾತುಮರ್ಹಸೀತಿ । ತತಃ ಸ ವರದಸ್ತಾನಬ್ರವೀದಶ್ವಮೇಧಂ ಯಜ್ಞಂ ವೈಷ್ಣವಂ ಶಕ್ರೋऽಭಿಯಜತು । ತತಃ ಸ್ವಂ ಸ್ಥಾನಂ ಪ್ರಾಪ್ಸ್ಯತೀತಿ ॥೩೯॥

ನಹುಷನು ಶಾಪಗ್ರಸ್ಥನಾಗಿ ಭೂಮಿಯಲ್ಲಿ ಬಿದ್ದಕೂಡಲೇ ಪುನಃ ಮೂರುಲೋಕಗಳಲ್ಲಿಯೂ ಅರಾಜಕತೆ ಉಂಟಾಯಿತು. ದೇವತೆಗಳು, ಋಷಿಗಳು ಇಂದ್ರನಿಗಾಗಿ ಭಗವಂತನಾದ ವಿಷ್ಣುವನ್ನೇ ಮೊರೆಹೊಕ್ಕರು. ಅವನ ಬಳಿ ಹೇಳಿದರು: ಪೂಜ್ಯನೇ, ವಿಷ್ಣುವೇ, ಬ್ರಹ್ಮಹತ್ಯಾ ಪಾಪದಿಂದ ಪೀಡಿತನಾಗಿರುವ ಇಂದ್ರನನ್ನು ಆ ಮಹಾಪಾಪದಿಂದ ದಾಟಿಸುವ ಕರುಣೆ ತೋರು. ದೇವತೆಗಳ, ಋಷಿಗಳ ಮಾತನ್ನು ಕೇಳಿದ ವರದನಾದ ವಿಷ್ಣುವು ಹೇಳಿದನು: 'ದೇವತೆಗಳೇ, ಇಂದ್ರನು ನನ್ನನ್ನುದ್ದೇಶಿಸಿ ಅಶ್ವಮೇಧಯಾಗವನ್ನಾಚರಿಸಲಿ. ಬಳಿಕ ಅವನು ತನ್ನ ಪದವಿಯನ್ನು ಹೊಂದುತ್ತಾನೆ' ಎಂದು.

ತತೋ ದೇವಾ ಋಷಯಶ್ಚೇಂದ್ರಂ ನಾಪಶ್ಯನ್ಯದಾ ತದಾ ಶಚೀಮೂಚುರ್ಗಚ್ಛ ಸುಭಗೇ ಇಂದ್ರಮಾನಯಸ್ವೇತಿ। ಸಾ ಪುನಸ್ತತ್ ಸರಃ ಸಮಭ್ಯಗಚ್ಛತ್। ಇಂದ್ರಶ್ಚ ತಸ್ಮಾತ್ ಸರಸಃ ಸಮುತ್ಥಾಯ ಬೃಹಸ್ಪತಿಮಭಿಜಗಾಮ। ಬೃಹಸ್ಪತಿಶ್ಚಾಶ್ವಮೇಧಂ ಮಹಾಕ್ರತುಂ ಶಕ್ರಾಯಾಹರತ್। ತತಶ್ಚ ಕೃಷ್ಣಸಾರಂಗಂ ಮೇಧ್ಯಮಶ್ವಮುತ್ಸೃಜ್ಯ ವಾಹನಂ ತಮೇವ ಕೃತ್ವಾ ಇಂದ್ರಂ ಮರುತ್ವತಿಂ ಬೃಹಸ್ಪತಿಃ ಸ್ವಸ್ಥಾನಂ ಪ್ರಾಪಯಾಮಾಸ। ತತಃ ಸ ದೇವರಾಟ್ ದೇವೈರ್ಋಷಿಭಿಃ ಸ್ತೂಯಮಾನ-ಸ್ತ್ರಿವಿಷ್ಟಪಸ್ಥೋ ನಿಷ್ಕಲ್ಮಷೋ ಬಭೂವ। ಬ್ರಹ್ಮವಧ್ಯಾಂ ಚತುರ್ಧಾ ಸ್ಥಾನೇಷು ವ್ಯಭಜತ್ ವನಿತಾವೃಕ್ಷಗಿರ್ಯವನಿಷು। ವನಿತಾಸು ರಜಃ। ವೃಕ್ಷೇಷು ಚ ಸುನಃ। ಗಿರಿಷು ಶಿಂಬಃ। ಪೃಥಿವ್ಯಾಮೂಷರಃ। ತೇಽಸ್ಪೃಶ್ಯಾಃ। ತಸ್ಮಾದ್ಧವಿರಲವಣಂ ಪಚ್ಯತೇ। ಏವಮಿಂದ್ರೋ ಬ್ರಹ್ಮತೇಜಃಪ್ರಭಾವೋಪಬೃಂಹಿತಃ ಶತ್ರುವಧಂ ಕೃತ್ವಾ ಸ್ವಸ್ಥಾನಂ ಪ್ರಾಪಿತಃ ॥೪೧॥

ಬಳಿಕ ವಿಷ್ಣುವಿನ ಮಾತನ್ನು ಕೇಳಿಸಿಕೊಂಡ ಋಷಿಗಳು, ದೇವತೆಗಳು ಇಂದ್ರನನ್ನು ಎಲ್ಲ ಪ್ರದೇಶದಲ್ಲೂ ಹುಡುಕಿದರು. ಅವನನ್ನು ಎಲ್ಲಿಯೂ ಕಾಣಲಿಲ್ಲ. ಕೂಡಲೇ ಶಚಿಯ ಬಳಿ ಹೋಗಿ ಅವಳನ್ನು ಕುರಿತು ಹೇಳಿದರು: 'ಸೌಭಾಗ್ಯವತಿಯೇ, ಇಂದ್ರಾಣಿ, ದೇವೇಂದ್ರನ ಬಳಿ ಹೋಗು. ಇಂದ್ರನನ್ನು ಕರೆದು ತಾ'. ದೇವತೆಗಳ ಮಾತಿನಂತೆ ಶಚಿಯು ಮಾನಸ ಸರೋವರದ ಬಳಿ ಸಾಗಿದಳು. ಸರೋವರದಿಂದ ಆಗಮಿಸಿದ ಇಂದ್ರನು ಬೃಹಸ್ಪತಿಯ ಬಳಿ ಸಾಗಿದನು. ಬೃಹಸ್ಪತಿಯು ಇಂದ್ರನ ಮೂಲಕ ಮಹಾ ಅಶ್ವಮೇಧಯಾಗವನ್ನು ಮಾಡಿಸಿದನು. ಬಳಿಕ ಆ ಯಜ್ಞದಲ್ಲಿ ಬೃಹಸ್ಪತಿಯು ಕೃಷ್ಣ ಸಾರಂಗಬಣ್ಣದ ಮೇಧ್ಯಾಶ್ವವನ್ನು ದೇಶಪರ್ಯಟನೆಗಾಗಿ ಬಿಟ್ಟನು. ಅದನ್ನೇ ವಾಹನವನ್ನಾಗಿ ಮಾಡಿ ಬೃಹಸ್ಪತಿಯು ಮರುತ್ವತಿಯಾದ ಇಂದ್ರನನ್ನು ಅವನ ಸ್ಥಾನದಲ್ಲಿ ಪ್ರತಿಷ್ಠಾಪಿಸಿದನು. ಅನಂತರ ಇಂದ್ರನು ದೇವತೆಗಳಿಂದ, ಋಷಿಗಳಿಂದ ಸ್ತುತಿಸಲ್ಪಡುತ್ತಾ ಬ್ರಹ್ಮಹತ್ಯಾ ಪಾಪದಿಂದ ಮುಕ್ತನಾಗಿ ಸ್ವರ್ಗಲೋಕದಲ್ಲಿ ರಾಜ್ಯವನ್ನಾಳತೊಡಗಿದನು. ತನಗೆ ಪ್ರಾಪ್ತವಾದ ಬ್ರಹ್ಮಹತ್ಯಾ ಪಾಪವನ್ನು ಸ್ತ್ರೀ, ಅಗ್ನಿ, ವೃಕ್ಷ, ಗೋವು - ಹೀಗೆ ನಾಲ್ಕು ಸ್ಥಾನಗಳಲ್ಲಿ ವಿಭಾಗಿಸಿ ವಿಸರ್ಜಿಸಿದನು. ವನಿತೆಯರಲ್ಲಿ ರಜೋರೂಪದಲ್ಲಿ ಬ್ರಹ್ಮಹತ್ಯೆಯು ಹರಿಯುತ್ತದೆ. ವೃಕ್ಷಗಳಲ್ಲಿ ಅಂಟಿನಂತೆ ಬ್ರಹ್ಮಹತ್ಯೆಯು ಹರಿಯುತ್ತದೆ. ಪರ್ವತಗಳಲ್ಲಿ ಶಿಂಬ ಎಂಬ ಹೆಸರಿನ ನೀಚ ಜಾತಿಯ ಭೂಮಿಯಾಗಿ ಬ್ರಹ್ಮಹತ್ಯಾ

ರೂಪವಾದ ಚೋಳು, ಉಪ್ಪನ್ನು ನಿರ್ಮಿಸುತ್ತದೆ. ಪೃಥಿವಿಯಲ್ಲಿ ಬಂಜರು ಭೂಮಿಯು ಬ್ರಹ್ಮಹತ್ಯೆಯಿಂದ ಕೂಡಿದೆ. ಆದ್ದರಿಂದ ಈ ನಾಲ್ಕು ವಸ್ತುಗಳು ಅಸ್ಪರ್ಶ್ಯವಾಗಿವೆ. ಆದ್ದರಿಂದಲೇ ಯಜ್ಞದ ಆಹುತಿಗೆ ಸಿದ್ಧಗೊಳಿಸುವ ಅನ್ನವನ್ನು ಉಪ್ಪನ್ನು ಹಾಕದೆ ಪಕ್ವಗೊಳಿಸಬೇಕು. ಈ ರೀತಿಯಾಗಿ ಇಂದ್ರನು ಬ್ರಹ್ಮತೇಜಸ್ಸಿನ ಪ್ರಭಾವದಿಂದ ಕೂಡಿದವನಾಗಿ ಶತ್ರುವಧೆಯನ್ನು ಮಾಡಿ ತನ್ನ ಸ್ಥಾನವನ್ನು ಹೊಂದಿದನು.

ವ್ಯಾಖ್ಯಾನ ವಿಶೇಷ– ಯಜ್ಞಕ್ಕೆ ಯೋಗ್ಯವಾದ ಕುದುರೆಯು ಕೃಷ್ಣಸಾರಂಗ ಮೃಗದಂತೆ ಬಣ್ಣವುಳ್ಳದ್ದಾಗಿರಬೇಕು. ಉದರ, ಕಂಠಗಳ ಭಾಗವು ಶುಭ್ರವಾಗಿರಬೇಕು. ಉಳಿದ ಭಾಗಗಳು ನೀಲವಾಗಿರಬೇಕು. ಇಂತಹ ಕುದುರೆಯನ್ನು ಅಶ್ವಮೇಧ ಯಾಗಕ್ಕಾಗಿ ಬಿಟ್ಟಲ್ಲಿ ಮಹಾಸುಖವನ್ನು ಆ ಯಜ್ಞ ಮಾಡಿದವನು ಅನುಭವಿಸುತ್ತಾನೆ. ಯಜ್ಞದಲ್ಲಿ ಹತವಾದ ಪಶುವೂ ಕೂಡ ಮಹಾ ಸುಖವನ್ನು ಅನುಭವಿಸುತ್ತಾ ಶ್ರೇಷ್ಠಪಶು ಎನಿಸಿಕೊಳ್ಳುತ್ತದೆ ಎಂಬುದು ಶಾಸ್ತ್ರದ ಅಭಿಪ್ರಾಯವಾಗಿದೆ **(ಲಕ್ಷಾಲಂಕಾರ)**.

ನಹುಷಸ್ಯ ಶಾಪಮೋಕ್ಷಾರ್ಥಂ ದೇವೈರ್ಋಷಿಭಿಶ್ಚ ಯಾಚ್ಯಮಾನೋಗಸ್ತ್ಯಃ ಪ್ರಾಹ । ಯಾವತ್ಸ್ವಕುಲಜಃ ಶ್ರೀಮಾನ್ ಧರ್ಮರಾಟ್ ಭ್ರಾತೃಭಿರ್ಯುತಃ । ಭೀಮಸ್ತಸ್ಯಾನುಜಸ್ತಂ ತ್ವಂ ಗೃಹೀತಾ ತು ಯುಧಿಷ್ಠಿರಃ ಕಥಯಿತ್ವಾ ಸ್ವಕಾನ್ ಪ್ರಶ್ನಾನ್ ಸ್ವಾಂ ತನುಂ ಚ ವಿಮೋಕ್ಷ್ಯತೇ । ಆಕಾಶಗಂಗಾಗತಶ್ಚ ಪುರಾ ಭರದ್ವಾಜೋ ಮಹರ್ಷಿರುಪಾಸ್ಪೃಶಂಸ್ತ್ರೀನ್ ಕ್ರಮಾನ್ ಕ್ರಮತಾ ವಿಷ್ಣುನಾಭ್ಯಾಸಾದಿತಃ ಸ ಭರದ್ವಾಜೇನ ಸಸಲಿಲೇನ ಪಾಣಿನೋರಸಿ ತಾಡಿತಃ ಸಲಕ್ಷಣೋರಸ್ಕಃ ಸಂವೃತ್ತಃ ॥೪೨॥

ನಂತರ ದೇವತೆಗಳು, ಋಷಿಗಳು ನಹುಷನ ಶಾಪವನ್ನು ಬಿಡುಗಡೆ ಮಾಡಬೇಕೆಂದು ಅಗಸ್ತ್ಯರಲ್ಲಿ ಪ್ರಾರ್ಥಿಸಿದರು. ಆಗ ಅಗಸ್ತ್ಯರು : 'ನಹುಷನೇ, ಮುಂದೆ ನಿನ್ನ ವಂಶದಲ್ಲಿ ಪಾಂಡವರು ಹುಟ್ಟುತ್ತಾರೆ. ಅವರಲ್ಲಿ ನೀನು ಭೀಮಸೇನನನ್ನು ಹಿಡಿಯುತ್ತಿ. ಆಗ ಧರ್ಮರಾಜನು ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿ ಭೀಮನನ್ನು ನಿನ್ನ ಕೈಯಿಂದ ಬಿಡಿಸುತ್ತಾನೆ. ಆಗ ನಿನಗೂ ಶಾಪದ ನಿವೃತ್ತಿಯಾಗುತ್ತದೆ' ಎಂದು ಹೇಳಿದರು. ಇಷ್ಟೇ ಅಲ್ಲದೆ, ಹಿಂದೆ ಭಾರದ್ವಾಜ ಮುನಿಯು ಆಕಾಶಗಂಗೆಗೆ ಹೋಗಿ ಸ್ನಾನ ಮಾಡುತ್ತಿರುವಾಗ ತ್ರಿವಿಕ್ರಮ ಮೂರ್ತಿಯಾದ ಭಗವಂತನ ಕಾಲಿನಿಂದ ಹತನಾಗಿ ಅದಕ್ಕಾಗಿಯೇ ಭಗವಂತನನ್ನು ಎದೆಯಲ್ಲಿ ಒದ್ದನು. ಅದರ ಚಿಹ್ನೆಯೇ ವಿಷ್ಣುವಿನ

ಎದೆಯಲ್ಲಿ ಮೂಡಿತು. ಈಗಲೂ ಅದನ್ನು ವಿಷ್ಣುವು ಎದೆಯಲ್ಲಿ ಧರಿಸಿದ್ದಾನೆ. ಅದನ್ನೇ ಶ್ರೀವತ್ಸ ಎನ್ನುತ್ತಾರೆ.

ಭೃಗುಣಾ ಮಹರ್ಷಿಣಾ ಶಪ್ತೋಽಗ್ನಿಃ ಸರ್ವಭಕ್ಷತ್ವಮುಪನೀತಃ ॥ ೪೩ ॥

ಬ್ರಾಹ್ಮಣನಾದ ಭೃಗು ಋಷಿಯ ಶಾಪದಿಂದ ಶಪ್ತನಾದ ಅಗ್ನಿಯು ಸರ್ವಭಕ್ಷತ್ವವನ್ನು ಹೊಂದಿದನು.

ಅದಿತಿರ್ವೈ ದೇವಾನಾಮನ್ನಮಪಚದೇತದುಚ್ಛಾ ತ್ವಸುರಾನ್ ಹನಿಷ್ಯಂತೀತಿ । ತತ್ರ ಬುಧೋ ವ್ರತಚರ್ಯಾಸಮಾಪ್ತಾವಾಗಚ್ಛತ್ । ಅದಿತಿಂ ಚಾವೋಚದ್ಭಿಕ್ಷಾಂ ದೇಹೀತಿ । ತತ್ರ ದೇವೈಃ ಪೂರ್ವಮೇತತ್ ಪ್ರಾಶ್ಯಂ ನಾನ್ಯೇನೇತ್ಯದಿತಿರ್ಭಿಕ್ಷಾಂ ನಾದಾತ್ । ಅಥ ಭಿಕ್ಷಾಪ್ರತ್ಯಾಖ್ಯಾನರುಷಿತೇನ ಬುಧೇನ ಬ್ರಹ್ಮಭೂತೇನ ವಿವಸ್ವತೋ ದ್ವಿತೀಯೇ ಜನ್ಮನ್ಯಂಡಸಂಜ್ಞಿತಸ್ಯಾಂಡಂ ಮಾರಿತಮದಿತ್ಯಾಃ । ಸ ಮಾರ್ತಂಡೋ ವಿವಸ್ವಾನಭವಚ್ಛ್ರದ್ಧದೇವಃ ॥೪೪॥

ಇನ್ನೊಮ್ಮೆ ಅದಿತಿದೇವಿಯು ದೇವತೆಗಳಿಗೆ ಅನ್ನವನ್ನು ಪಕ್ವಗೊಳಿಸುತ್ತಾ, ಈ ಅನ್ನವನ್ನು ಸ್ವೀಕರಿಸಿದ ದೇವತೆಗಳು ಅಸುರರನ್ನು ಕೊಲ್ಲಲಿ ಎಂದು ಸಂಕಲ್ಪಿಸಿದಳು. ಅವಳ ವ್ರತಾನುಷ್ಠಾನವು ಮುಗಿಯುವುದರಲ್ಲಿ ಬುಧನು ಆಗಮಿಸಿ ಭಿಕ್ಷಾಂದೇಹಿ ಎಂದು ಕೇಳಿದನು. ಇನ್ನೂ ದೇವತೆಗಳಿಗೆ ಅದಿತಿಯು ಆಹಾರವನ್ನು ಕೊಡುವ ಮೊದಲೇ ಬೇರೆ ಯಾರೂ ತಿನ್ನಬಾರದೆಂದು ಅವನಿಗೆ ಭಿಕ್ಷೆಯನ್ನು ನೀಡಲಿಲ್ಲ (ಅಸುರರನ್ನು ಕೊಲ್ಲಲಿ ಎಂದು ಅಭಿಮಂತ್ರಿಸಿದ ಅನ್ನವನ್ನು ನೀಡಲಿಲ್ಲ). ಬುಧನು ಕ್ರುದ್ಧನಾಗಿ ಅದಿತಿಯ ಗರ್ಭಕ್ಕೆ ಪೀಡೆಯುಂಟಾಗಲಿ ಎಂದು ಶಪಿಸಿದನು. ಆದ್ದರಿಂದ ಅಂಡವೆಂದು ಕರೆಯಲ್ಪಡುವ ಗರ್ಭವು ಭೇದಿಸಲ್ಪಟ್ಟಿತು. ಬುಧನ ಶಾಪದಿಂದಾಗಿ ಅಂಡವು ಭೇದಿಸಲ್ಪಟ್ಟಿದ್ದರಿಂದ ಸೂರ್ಯನು ಮೃತಾಂಡನಾಗಿಯೇ ಉತ್ಪತ್ತಿಯಾದನು. ಆದ್ದರಿಂದಲೇ ಮಾರ್ತಾಂಡನೆಂಬ ಹೆಸರು ಅವನಿಗೆ ಪ್ರಸಿದ್ಧವಾಯಿತು. ವಸು-ರುದ್ರ-ಆದಿತ್ಯರಲ್ಲಿ ಶ್ರಾದ್ಧಭೋಜನ ಮಾಡುವವರಲ್ಲಿ ಇವನೊಬ್ಬನಾದುದರಿಂದ ಶ್ರಾದ್ಧದೇವನೆಂದು ಪ್ರಸಿದ್ಧನಾದನು.

ದಕ್ಷಸ್ಯ ವೈ ದುಹಿತರಃ ಷಷ್ಟಿರಾಸನ್ । ತಾಭ್ಯಃ ಕಶ್ಯಪಾಯ ತ್ರಯೋದಶ ಪ್ರಾದಾದ್ದಶ ಧರ್ಮಾಯ, ದಶ ಮನವೇ, ಸಪ್ತವಿಂಶತಿಮಿಂದವೇ । ತಾಸು

ತುಲ್ಯಾಸು ನಕ್ಷತ್ರಾಖ್ಯಾಂ ಗತಾಸು ಸೋಮೋ ರೋಹಿಣ್ಯಾಮಭ್ಯಧಿಕಾಂ ಪ್ರೀತಿಮಕರೋತ್ । ತತಸ್ತಾಃ ಶೇಷಾಃ ಪತ್ನ್ಯ ಈರ್ಷ್ಯಾವತ್ಯಃ ಪಿತುಃ ಸಮೀಪಂ ಗತ್ವೇಮಮರ್ಥಂ ಶಶಂಸುಃ । ಭಗವನ್ನಸ್ಮಾಸು ತುಲ್ಯಪ್ರಭಾವಾಸು ಸೋಮೋ ರೋಹಿಣೀಮಧಿಕಂ ಭಜತೀತಿ । ಸೋಽಬ್ರವೀದ್ ಯಕ್ಷ್ಯೆನಮಾವೇಕ್ಷ್ಯತೀತಿ ॥೪೫॥

ದಕ್ಷನಿಗೆ ಅರವತ್ತು ಮಂದಿ ಕನ್ಯೆಯರು. ಅವರಲ್ಲಿ ಹದಿಮೂರು ಜನರನ್ನು ಕಶ್ಯಪರಿಗೆ, ಹತ್ತು ಕನ್ಯೆಯರನ್ನು ಧರ್ಮನಿಗೆ, ಹತ್ತು ಕನ್ಯೆಯರನ್ನು ಮನುವಿಗೆ ಕೊಟ್ಟು, ಉಳಿದ ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೆ ನೀಡಿದನು. ನಕ್ಷತ್ರಾಭಿಮಾನಿಗಳಾದ ಈ ಇಪ್ಪತ್ತೇಳು ಕನ್ಯೆಯರನ್ನು ಒಂದೇ ಭಾವದಿಂದ ನೋಡುವಂತೆ ಚಂದ್ರನಿಗೆ ದಕ್ಷನು ಹೇಳಿದ್ದನು. ಆದರೆ ರೋಹಿಣಿಯಲ್ಲಿ ಚಂದ್ರನಿಗೆ ಅಧಿಕ ಪ್ರೀತಿ ಇರುವುದನ್ನು ಕಂಡು ಉಳಿದ ಕನ್ಯೆಯರು ತಂದೆಯಾದ ದಕ್ಷನ ಬಳಿ ಹೋಗಿ, 'ಜನಕನೇ, ನಾವೆಲ್ಲ ಸಮಾನ ಗುಣಶೀಲರಾಗಿರುವಾಗ ನಮ್ಮ ಪತಿಯು ರೋಹಿಣಿಯನ್ನು ಮಾತ್ರ ಅಧಿಕವಾಗಿ ಪ್ರೀತಿಸುತ್ತಿದ್ದಾನೆ' ಎಂದು ಆಕ್ಷೇಪಿಸಿದನು. ಕೂಡಲೇ ಆ ದಕ್ಷನು ಹಾಗಿದ್ದರೆ ಆ ಚಂದ್ರನಿಗೆ ಕ್ಷಯರೋಗವು ಬರಲಿ ಎಂದು ಶಪಿಸಿದನು. ಚಂದ್ರನನ್ನು ಕ್ಷಯರೋಗವು ಆಕ್ರಮಿಸಿತು.

ಗತ್ವಾತ್ಮಾನಮಭಿಷೇಚಯಸ್ವೇತಿ । ಅಥಾಗಚ್ಛತ್ ಸೋಮಸ್ತತ್ರ ಹಿರಣ್ಯಸರಸ್ತೀರ್ಥಮ್ ಗತ್ವಾಚಾತ್ಮನಃ ಸ್ನಪನಮಕರೋತ್ । ಸ್ನಾತ್ವಾಚಾತ್ಮಾನಂ ಪಾಪ್ಮನೋ ಮೋಕ್ಷಯಾಮಾಸ । ತತ್ರ ಚಾವಭಾಸಿತಸ್ತೀರ್ಥೇ ಯದಾ ಸೋಮಸ್ತದಾಪ್ರಭತಿ ತೀರ್ಥಂ ತತ್ ಪ್ರಭಾಸಮಿತಿ ನಾಮ್ನಾಖ್ಯಾತಂ ಬಭೂವ। ತಚ್ಚಾಪಾದದ್ಯಾಪಿ ಕ್ಷೀಯತೇ । ಸೋಮೋಮಾವಾಸ್ಯಾಂತರಸ್ಥಃ ಪೌರ್ಣಮಾಸೀಮಾತ್ರೇಧಿಷ್ಠಿತೋ ಮೇಘಲೇಖಾಪ್ರತಿಚ್ಛನ್ನಂ ವಪುರ್ದರ್ಶಯತಿ ಮೇಘಸದೃಶಂ ವರ್ಣಮಗಮತ್ತದಸ್ಯ ಶಶಲಕ್ಷ್ಮ ವಿಮಲಮಭವತ್ ॥೪೬॥

ಚಂದ್ರನು ದಕ್ಷನ ಬಳಿ ಬಂದಾಗ ದಕ್ಷನು ಅವನು ಮಾಡಿದ ತಪ್ಪನ್ನು ತಿಳಿಸಿದನು. ಆಗ ಚಂದ್ರನಲ್ಲಿ ಕರುಣೆಯಿಂದ ಋಷಿಗಳು ಚಂದ್ರನೇ, ಪಶ್ಚಿಮ ದಿಕ್ಕಿನಲ್ಲಿ ಹಿರಣ್ಯಸರಸ್ ಎಂಬ ತೀರ್ಥವಿದೆ, ಅಲ್ಲಿ ಸ್ನಾನ ಮಾಡಿ ಬಾ ಎಂದರು. ಅದರಂತೆ ಆ ತೀರ್ಥಸ್ನಾನದಿಂದ ಚಂದ್ರನು ವಿಶೇಷವಾದ ಕಾಂತಿಯನ್ನು ಹೊಂದಿದನು. ಬಳಿಕ ಆ

ಎದೆಯಲ್ಲಿ ಮೂಡಿತು. ಈಗಲೂ ಅದನ್ನು ವಿಷ್ಣುವು ಎದೆಯಲ್ಲಿ ಧರಿಸಿದ್ದಾನೆ. ಅದನ್ನೇ ಶ್ರೀವತ್ಸ ಎನ್ನುತ್ತಾರೆ.

ಭೃಗುಣಾ ಮಹರ್ಷಿಣಾ ಶಪ್ತೋಽಗ್ನಿಃ ಸರ್ವಭಕ್ಷತ್ವಮುಪನೀತಃ ॥ ೪೩ ॥

ಬ್ರಾಹ್ಮಣನಾದ ಭೃಗು ಋಷಿಯ ಶಾಪದಿಂದ ಶಪ್ತನಾದ ಅಗ್ನಿಯು ಸರ್ವಭಕ್ಷತ್ವವನ್ನು ಹೊಂದಿದನು.

ಅದಿತಿರ್ವೈ ದೇವಾನಾಮನ್ನಮಪಚದೇತದುಕ್ತ್ವಾ ಸುರಾನ್ ಹನಿಷ್ಯಂತೀತಿ । ತತ್ರ ಬುಧೋ ವ್ರತಚರ್ಯಾಸಮಾಪ್ತಾವಾಗಚ್ಛತ್ । ಅದಿತಿಂ ಚಾವೋಚದ್ಭಿಕ್ಷಾಂ ದೇಹೀತಿ । ತತ್ರ ದೇವೈಃ ಪೂರ್ವಮೇತತ್ ಪ್ರಾಶ್ಯಂ ನಾನ್ಯೇನೇತ್ಯದಿತಿರ್ಭಿಕ್ಷಾಂ ನಾದಾತ್ । ಅಥ ಭಿಕ್ಷಾಪ್ರತ್ಯಾಖ್ಯಾನರುಷಿತೇನ ಬುಧೇನ ಬ್ರಹ್ಮಭೂತೇನ ವಿವಸ್ವತೋ ದ್ವಿತೀಯೇ ಜನ್ಮನ್ಯಂಡಸಂಜ್ಞಿತಸ್ಯಾಂಡಂ ಮಾರಿತಮದಿತ್ಯಾಃ । ಸ ಮಾರ್ತಂಡೋ ವಿವಸ್ವಾನಭವಚ್ಛ್ರದ್ಧದೇವಃ ॥೪೪॥

ಇನ್ನೊಮ್ಮೆ ಅದಿತಿದೇವಿಯು ದೇವತೆಗಳಿಗೆ ಅನ್ನವನ್ನು ಪಕ್ವಗೊಳಿಸುತ್ತಾ, ಈ ಅನ್ನವನ್ನು ಸ್ವೀಕರಿಸಿದ ದೇವತೆಗಳು ಅಸುರರನ್ನು ಕೊಲ್ಲಲಿ ಎಂದು ಸಂಕಲ್ಪಿಸಿದಳು. ಅವಳ ವ್ರತಾನುಷ್ಠಾನವು ಮುಗಿಯುವುದರಲ್ಲಿ ಬುಧನು ಆಗಮಿಸಿ ಭಿಕ್ಷಾಂದೇಹಿ ಎಂದು ಕೇಳಿದನು. ಇನ್ನೂ ದೇವತೆಗಳಿಗೆ ಅದಿತಿಯು ಆಹಾರವನ್ನು ಕೊಡುವ ಮೊದಲೇ ಬೇರೆ ಯಾರೂ ತಿನ್ನಬಾರದೆಂದು ಅವನಿಗೆ ಭಿಕ್ಷೆಯನ್ನು ನೀಡಲಿಲ್ಲ (ಅಸುರರನ್ನು ಕೊಲ್ಲಲಿ ಎಂದು ಅಭಿಮಂತ್ರಿಸಿದ ಅನ್ನವನ್ನು ನೀಡಲಿಲ್ಲ). ಬುಧನು ಕ್ರುದ್ಧನಾಗಿ ಅದಿತಿಯ ಗರ್ಭಕ್ಕೆ ಪೀಡೆಯುಂಟಾಗಲಿ ಎಂದು ಶಪಿಸಿದನು. ಆದ್ದರಿಂದ ಅಂಡವೆಂದು ಕರೆಯಲ್ಪಡುವ ಗರ್ಭವು ಭೇದಿಸಲ್ಪಟ್ಟಿತು. ಬುಧನ ಶಾಪದಿಂದಾಗಿ ಅಂಡವು ಭೇದಿಸಲ್ಪಟ್ಟಿದ್ದರಿಂದ ಸೂರ್ಯನು ಮೃತಾಂಡನಾಗಿಯೇ ಉತ್ಪತ್ತಿಯಾದನು. ಆದ್ದರಿಂದಲೇ ಮಾರ್ತಾಂಡನೆಂಬ ಹೆಸರು ಅವನಿಗೆ ಪ್ರಸಿದ್ಧವಾಯಿತು. ವಸು-ರುದ್ರ-ಆದಿತ್ಯರಲ್ಲಿ ಶ್ರಾದ್ಧಭೋಜನ ಮಾಡುವವರಲ್ಲಿ ಇವನೊಬ್ಬನಾದುದರಿಂದ ಶ್ರಾದ್ಧದೇವನೆಂದು ಪ್ರಸಿದ್ಧನಾದನು.

ದಕ್ಷಸ್ಯ ವೈ ದುಹಿತರಃ ಷಷ್ಟಿರಾಸನ್ । ತಾಭ್ಯಃ ಕಶ್ಯಪಾಯ ತ್ರಯೋದಶ ಪ್ರಾದಾದ್ದಶ ಧರ್ಮಾಯ, ದಶ ಮನವೇ, ಸಪ್ತವಿಂಶತಿಮಿಂದವೇ । ತಾಸು

ತುಲ್ಯಾಸು ನಕ್ಷತ್ರಾಖ್ಯಾಂ ಗತಾಸು ಸೋಮೋ ರೋಹಿಣ್ಯಾಮಭ್ಯಧಿಕಾಂ ಪ್ರೀತಿಮಕರೋತ್ । ತತಸ್ತಾಃ ಶೇಷಾಃ ಪತ್ನ್ಯ ಈರ್ಷ್ಯಾವತ್ಯಃ ಪಿತುಃ ಸಮೀಪಂ ಗತ್ವೇಮಮರ್ಥಂ ಶಶಂಸುಃ । ಭಗವನ್ನಸ್ಮಾಸು ತುಲ್ಯಪ್ರಭಾವಾಸು ಸೋಮೋ ರೋಹಿಣೇಮಧಿಕಂ ಭಜತೀತಿ । ಸೋಽಬ್ರವೀದ್ ಯಕ್ಷ್ಯೆನಮಾವೇಕ್ಷ್ಯತೀತಿ ॥೪೫॥

ದಕ್ಷನಿಗೆ ಅರವತ್ತು ಮಂದಿ ಕನ್ಯೆಯರು. ಅವರಲ್ಲಿ ಹದಿಮೂರು ಜನರನ್ನು ಕಶ್ಯಪರಿಗೆ, ಹತ್ತು ಕನ್ಯೆಯರನ್ನು ಧರ್ಮನಿಗೆ, ಹತ್ತು ಕನ್ಯೆಯರನ್ನು ಮನುವಿಗೆ ಕೊಟ್ಟು, ಉಳಿದ ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೆ ನೀಡಿದನು. ನಕ್ಷತ್ರಾಭಿಮಾನಿಗಳಾದ ಈ ಇಪ್ಪತ್ತೇಳು ಕನ್ಯೆಯರನ್ನು ಒಂದೇ ಭಾವದಿಂದ ನೋಡುವಂತೆ ಚಂದ್ರನಿಗೆ ದಕ್ಷನು ಹೇಳಿದ್ದನು. ಆದರೆ ರೋಹಿಣಿಯಲ್ಲಿ ಚಂದ್ರನಿಗೆ ಅಧಿಕ ಪ್ರೀತಿ ಇರುವುದನ್ನು ಕಂಡು ಉಳಿದ ಕನ್ಯೆಯರು ತಂದೆಯಾದ ದಕ್ಷನ ಬಳಿ ಹೋಗಿ, 'ಜನಕನೇ, ನಾವೆಲ್ಲ ಸಮಾನ ಗುಣಶೀಲರಾಗಿರುವಾಗ ನಮ್ಮ ಪತಿಯು ರೋಹಿಣಿಯನ್ನು ಮಾತ್ರ ಅಧಿಕವಾಗಿ ಪ್ರೀತಿಸುತ್ತಿದ್ದಾನೆ' ಎಂದು ಆಕ್ಷೇಪಿಸಿದನು. ಕೂಡಲೇ ಆ ದಕ್ಷನು ಹಾಗಿದ್ದರೆ ಆ ಚಂದ್ರನಿಗೆ ಕ್ಷಯರೋಗವು ಬರಲಿ ಎಂದು ಶಪಿಸಿದನು. ಚಂದ್ರನನ್ನು ಕ್ಷಯರೋಗವು ಆಕ್ರಮಿಸಿತು.

ಗತ್ವಾತ್ಮಾನಮಭಿಷೇಚಯಸ್ವೇತಿ । ಅಥಾಗಚ್ಛತ್ ಸೋಮಸ್ತತ್ರ ಹಿರಣ್ಯಸರಸ್ತೀರ್ಥಮ್ ಗತ್ವಾಚಾತ್ಮನಃ ಸ್ನಪನಮಕರೋತ್ । ಸ್ನಾತ್ವಾಚಾತ್ಮಾನಂ ಪಾಪ್ಮನೋ ಮೋಕ್ಷಯಾಮಾಸ । ತತ್ರ ಚಾವಭಾಸಿತಸ್ತೀರ್ಥೇ ಯದಾ ಸೋಮಸ್ತದಾಪ್ರಭತಿ ತೀರ್ಥಂ ತತ್ ಪ್ರಭಾಸಮಿತಿ ನಾಮ್ನಾ ಖ್ಯಾತಂ ಬಭೂವ। ತಚ್ಚಾಪಾದದ್ಯಾಪಿ ಕ್ಷೀಯತೇ । ಸೋಮೋಮಾವಾಸ್ಯಾಂತರಸ್ಥಃ ಪೌರ್ಣಮಾಸೀಮಾತ್ರೇಧಿಷ್ಠಿತೋ ಮೇಘಲೇಖಾಪ್ರತಿಚ್ಛನ್ನಂ ವಪುರ್ದರ್ಶಯತಿ ಮೇಘಸದೃಶಂ ವರ್ಣಮಗಮತ್ತದಸ್ಯ ಶಶಲಕ್ಷ್ಮ ವಿಮಲಮಭವತ್ ॥೪೬॥

ಚಂದ್ರನು ದಕ್ಷನ ಬಳಿ ಬಂದಾಗ ದಕ್ಷನು ಅವನು ಮಾಡಿದ ತಪ್ಪನ್ನು ತಿಳಿಸಿದನು. ಆಗ ಚಂದ್ರನಲ್ಲಿ ಕರುಣೆಯಿಂದ ಋಷಿಗಳು ಚಂದ್ರನೇ, ಪಶ್ಚಿಮ ದಿಕ್ಕಿನಲ್ಲಿ ಹಿರಣ್ಯಸರಸ್ ಎಂಬ ತೀರ್ಥವಿದೆ, ಅಲ್ಲಿ ಸ್ನಾನ ಮಾಡಿ ಬಾ ಎಂದರು. ಅದರಂತೆ ಆ ತೀರ್ಥಸ್ನಾನದಿಂದ ಚಂದ್ರನು ವಿಶೇಷವಾದ ಕಾಂತಿಯನ್ನು ಹೊಂದಿದನು. ಬಳಿಕ ಆ

ತೀರ್ಥವೇ ಪ್ರಭಾಸವೆಂದು ಪ್ರಸಿದ್ಧವಾಯಿತು. ಆದರೂ ಚಂದ್ರನಿಗೆ ಆ ಶಾಪದ ಸಂಬಂಧವು ಅಂಟಿಕೊಂಡಿರುವುದರಿಂದ ಈಗಲೂ ಅಮಾವಾಸ್ಯೆಯ ತನಕ ಕ್ಷಯವನ್ನು ಹೊಂದುತ್ತಾ, ಪೂರ್ಣಮೆಯ ದಿನದಲ್ಲಿ ಪೂರ್ಣಬಿಂಬವನ್ನು ಹೊಂದುತ್ತಾನೆ. ಮೇಘದ ರೇಖೆಯಂತೆ ಕಪ್ಪು ಬಣ್ಣದ ಶರೀರದಿಂದ ಕಾಣಿಸುತ್ತಾನೆ. ಅವನಲ್ಲಿ ಮೇಘದ ಬಣ್ಣವು ಉಂಟಾಗಿದೆ. ಮೊಲದಂತೆ ಕಾಣಿಸುವ ಆಕಾರವು ಶುಭ್ರವಾಯಿತು.

ಸ್ಥೂಲಶಿರಾ ಮಹರ್ಷಿರ್ಮೇರೋಃ ಪ್ರಾಗುತ್ತರೇ ದಿಗ್ಭಾಗೇ ತಪಸ್ತೇಪೇ । ತಸ್ಯ ತಪಸ್ತಪ್ಯಮಾನಸ್ಯ ಸರ್ವಗಂಧವಹಃ ಶುಚಿರ್ವಾಯುರ್ವಿವಾಯಮಾನಃ ಶರೀರಮುಸ್ಪೃಶತ್ । ಸ ತಪಸಾ ತಾಪಿತಶರೀರಃ ಕೃಶೋ ವಾಯುನೋಪವೀಜ್ಯಮಾನೋ ಹೃದಯಪರಿತೋಷಮಗಮತ್ । ತತ್ರ ತಸ್ಯಾನಿಲವ್ಯಜನಕೃತಪರಿತೋಷಸ್ಯ ಸದ್ಯೋ ವನಸ್ಪತಯಃ ಪುಷ್ಪಶೋಭಾಂ ನ ದರ್ಶಿತವಂತ ಇತಿ ಸ ಏತಾನ್ ಶಶಾಪ ನ ಸರ್ವಕಾಲಂ ಪುಷ್ಪವಂತೋ ಭವಿಷ್ಯಥೇತಿ ॥೪೭॥

ಸ್ಥೂಲಶಿರಸ್ ಎಂಬ ಋಷಿಯು ಮೇರುವಿನ ಶಿರಸ್ಸಿನಲ್ಲಿ ತಪಸ್ಸನ್ನು ಆಚರಿಸುವಾಗ ಗಂಧವನ್ನು ಹೊತ್ತ ಶುಭ್ರವಾದ ಗಾಳಿಯು ಅವನ ಮೈಮೇಲೆ ಬೀಸಿತು. ತಪಸ್ಸಿನಿಂದ ಸುಟ್ಟುಹೋದ ಶರೀರವುಳ್ಳ ಅವನಿಗೆ ಸುಗಂಧ ಗಾಳಿಯ ಸ್ಪರ್ಶವು ಸುಖವನ್ನು ನೀಡಿತು. ಅದರಿಂದ ಸಂತೋಷವನ್ನು ಹೊಂದಿರುವಾಗ ವೃಕ್ಷಗಳು ಅವನಿಗೆ ಮತ್ತಷ್ಟು ಮನಸ್ಸು ಪ್ರಕೃತಿಯಿಂದ ಸಂತುಷ್ಟವಾಗುವಂತೆ ತಮ್ಮ ಫಲ-ಪುಷ್ಪಗಳ ಶೋಭೆಯಿಂದ ಕಾಣಿಸಿಕೊಂಡವು. ಆಗ ಸಿಟ್ಟಾದ ಆ ಋಷಿಬ್ರಾಹ್ಮಣನು ನಿಮಗೆ ಇನ್ನು ಮುಂದೆ ನಿಶ್ಚಿತವಾದ ಕಾಲವನ್ನು ಬಿಟ್ಟು ಎಲ್ಲ ಕಾಲಗಳಲ್ಲಿಯೂ ಪುಷ್ಪ-ಫಲಗಳನ್ನು ನೀಡುವ ಸಾಮರ್ಥ್ಯವು ಹೊರಟು ಹೋಗಲಿ ಎಂದು ಶಪಿಸಿದನು.

ನಾರಾಯಣೋ ಲೋಕಹಿತಾರ್ಥಂ ವಡವಾಮುಖೋ ನಾಮ ಮಹರ್ಷಿಃ ಪುರಾಭವತ್ । ತಸ್ಯ ಮೇರೌ ತಪಸ್ತಪ್ಯತಃ ಸಮುದ್ರ ಆಹೂತೋ ನಾಗತಃ। ತೇನಾಮರ್ಷಿತೇನಾತ್ಮಗಾತ್ರೋಷ್ಮಣಾ ಸಮುದ್ರಃ ಸ್ತಿಮಿತಜಲಃ ಕೃತಃ । ಸ್ವೇದಪ್ರಸ್ಯಂದನಸದೃಶಶ್ಚಾಸ್ಯ ಲವಣಭಾವೋ ಜನಿತಃ ಉಕ್ತಶ್ಚಾಪೇಯೋ ಭವಿಷ್ಯಸಿ। ಏತಚ್ಚತೇ ತೋಯಂ ವಡವಾಮುಖಸಂಜ್ಞಿತೇನ ಪೀಯಮಾನಂ

ಮಧುರಂ ಭವಿಷ್ಯತಿ । ತದೇತದದ್ಯಾಪಿ ವಡವಾಮುಖಸಂಜ್ಞಿತೇನಾನುವರ್ತಿನಾ ತೋಯಂ ಸಾಮುದ್ರಂ ಪೀಯತೇ ॥೪೮॥

ಹಿಂದೆ ನಾರಾಯಣನು ಲೋಕಹಿತಕ್ಕಾಗಿ ಒಡವಾಮುಖ ಎಂಬ ಋಷಿಯಾಗಿ ಮೇರುಶಿಖರದಲ್ಲಿ ತಪಸ್ಸನ್ನಾಚರಿಸುವಾಗ ಯಾವುದೋ ಉದ್ದೇಶದಿಂದ ಸಮುದ್ರನನ್ನು ಕರೆದನು. ಆದರೆ ಸಮುದ್ರರಾಜನು ಬರಲಿಲ್ಲ. ಕ್ರುದ್ಧನಾದ ನಾರಾಯಣನು ತನ್ನ ಶರೀರದ ಬಿಸಿಯಿಂದ ಸಮುದ್ರದ ನೀರನ್ನು ಸ್ತಂಭಿಸುವಂತೆ ಮಾಡಿದನು. ಜೊತೆಗೆ ತನ್ನ ಮೈ ಬೆವರಿನಿಂದ ಸಮುದ್ರಜಲವು ಉಪ್ಪಾಗುವಂತೆ ಮಾಡಿದನು. ಇಷ್ಟು ಮಾತ್ರವಲ್ಲದೆ ನಿನ್ನ ನೀರು ಪ್ರಾಣಿಗಳಿಗೆ ಪ್ರಿಯವಾಗದೆ ಒಡವಾಮುಖ ಎಂಬ ಅಗ್ನಿಗೆ ಮಾತ್ರ ಪ್ರಿಯವಾಗಲಿ ಎಂದು ಶಪಿಸಿದನು. ಇದರಿಂದ ಸಮುದ್ರದಲ್ಲಿ ಒಡವ ಎಂಬ ಅಗ್ನಿಯು ಸೇರಿಕೊಂಡು ಸಮುದ್ರದ ನೀರನ್ನು ನಿರಂತರವೂ ಕುಡಿಯುತ್ತಿದೆ.

ಹಿಮವತೋ ಗಿರೇರ್ದುಹಿತರಮುಮಾಂ ರುದ್ರಶ್ಚಕಮೇ । ಭೃಗುರಪಿ ಚ ಮಹರ್ಷಿರ್ಹಿಮವಂತಮಾಗಮ್ಯಾಬ್ರವೀತ್ ಕನ್ಯಾಮುಮಾಂ ಮೇ ದೇಹೀತಿ। ತಮಬ್ರವೀದ್ಧಿಮವಾನಭಿಲಷಿತೋ ವರೋ ರುದ್ರ ಇತಿ । ತಮಬ್ರವೀದ್ ಭೃಗುರ್ಯಸ್ಮಾತ್ತ್ವಯಾಹಂ ಕನ್ಯಾವರಣಕೃತಭಾವಃ ಪ್ರತ್ಯಾಖ್ಯಾತಸ್ತಸ್ಮಾನ್ನ ರತ್ನಾನಾಂ ಭವಾನ್ ಭಾಜನಂ ಭವಿಷ್ಯತೀತಿ । ಅದ್ಯ ಪ್ರಭೃತ್ಯೇತದವಸ್ಥಿತಮೃಷಿವಚನಮ್ ॥೪೯॥

ಉಮಾದೇವಿಯು ದಕ್ಷನ ಮೇಲಿನ ಕೋಪದಿಂದ ದೇಹವನ್ನು ಬಿಟ್ಟು ಪುನಃ ಹಿಮವಂತನ ಪುತ್ರಿಯಾಗಿ ಹುಟ್ಟಿದಳು. ಅವಳು ರುದ್ರನಲ್ಲಿ ಆಸಕ್ತಳಾಗಿದ್ದಳು. ಇದರ ನಡುವೆ ಭೃಗು ಋಷಿಯು ಹಿಮವಂತನ ಬಳಿ ಹೋಗಿ ತನಗೆ ಆ ಮಗಳನ್ನು ನೀಡೆಂದು ಕೇಳಿದನು. ಅದಕ್ಕೆ ಹಿಮವಂತನು, ಈಗಾಗಲೇ ತನ್ನ ಮಗಳು ರುದ್ರನನ್ನು ವರಿಸಿರುವುದಾಗಿ ಹೇಳಿ ನಿರಾಕರಿಸಿದನು. ಇದರಿಂದ ಕ್ರುದ್ಧನಾದ ಭೃಗುವು ನಿನ್ನಲ್ಲಿ ರತ್ನಗಳಿಲ್ಲದೆ ಹೋಗಲಿ ಎಂದು ಶಪಿಸಿದನು. ಆ ಮುನಿಯ ಶಾಪವು ಇಂದಿಗೂ ಸ್ಥಿರವಾಗಿದೆ.

ತದೇವಂವಿಧಂ ಮಾಹಾತ್ಮ್ಯಂ ಬ್ರಾಹ್ಮಣಾನಾಮ್ ಕ್ಷತ್ರಮಪಿ ಶಾಶ್ವತೀಮವ್ಯಯಾಂ ಪೃಥಿವೀಂ ಪತ್ನೀಮಭಿಗಮ್ಯ ಬುಭುಜೇ ।

ತೀರ್ಥವೇ ಪ್ರಭಾಸವೆಂದು ಪ್ರಸಿದ್ಧವಾಯಿತು. ಆದರೂ ಚಂದ್ರನಿಗೆ ಆ ಶಾಪದ ಸಂಬಂಧವು ಅಂಟಿಕೊಂಡಿರುವುದರಿಂದ ಈಗಲೂ ಅಮಾವಾಸ್ಯೆಯ ತನಕ ಕ್ಷಯವನ್ನು ಹೊಂದುತ್ತಾ, ಪೂರ್ಣಿಮೆಯ ದಿನದಲ್ಲಿ ಪೂರ್ಣಬಿಂಬವನ್ನು ಹೊಂದುತ್ತಾನೆ. ಮೇಘದ ರೇಖೆಯಂತೆ ಕಪ್ಪು ಬಣ್ಣದ ಶರೀರದಿಂದ ಕಾಣಿಸುತ್ತಾನೆ. ಅವನಲ್ಲಿ ಮೇಘದ ಬಣ್ಣವು ಉಂಟಾಗಿದೆ. ಮೊಲದಂತೆ ಕಾಣಿಸುವ ಆಕಾರವು ಶುಭ್ರವಾಯಿತು.

ಸ್ಥೂಲಶಿರಾ ಮಹರ್ಷಿರ್ಮೇರೋಃ ಪ್ರಾಗುತ್ತರೇ ದಿಗ್ಭಾಗೇ ತಪಸ್ತೇಪೇ । ತಸ್ಯ ತಪಸ್ತಪ್ಯಮಾನಸ್ಯ ಸರ್ವಗಂಧವಹಃ ಶುಚಿರ್ವಾಯುರ್ವಿವಾಯಮಾನಃ ಶರೀರಮುಸ್ಪೃಶತ್ । ಸ ತಪಸಾ ತಾಪಿತಶರೀರಃ ಕೃಶೋ ವಾಯುನೋಪವೀಜ್ಯಮಾನೋ ಹೃದಯಪರಿತೋಷಮಗಮತ್ । ತತ್ರ ತಸ್ಯಾನಿಲವ್ಯಜನಕೃತಪರಿತೋಷಸ್ಯ ಸದ್ಯೋ ವನಸ್ಪತಯಃ ಪುಷ್ಪಶೋಭಾಂ ನ ದರ್ಶಿತವಂತ ಇತಿ ಸ ಏತಾನ್ ಶಶಾಪ ನ ಸರ್ವಕಾಲಂ ಪುಷ್ಪವಂತೋ ಭವಿಷ್ಯಥೇತಿ ॥೪೭॥

ಸ್ಥೂಲಶಿರಸ್ ಎಂಬ ಋಷಿಯು ಮೇರುವಿನ ಶಿರಸ್ಸಿನಲ್ಲಿ ತಪಸ್ಸನ್ನು ಆಚರಿಸುವಾಗ ಗಂಧವನ್ನು ಹೊತ್ತ ಶುಭ್ರವಾದ ಗಾಳಿಯು ಅವನ ಮೈಮೇಲೆ ಬೀಸಿತು. ತಪಸ್ಸಿನಿಂದ ಸುಟ್ಟುಹೋದ ಶರೀರವುಳ್ಳ ಅವನಿಗೆ ಸುಗಂಧ ಗಾಳಿಯ ಸ್ಪರ್ಶವು ಸುಖವನ್ನು ನೀಡಿತು. ಅದರಿಂದ ಸಂತೋಷವನ್ನು ಹೊಂದಿರುವಾಗ ವೃಕ್ಷಗಳು ಅವನಿಗೆ ಮತ್ತಷ್ಟು ಮನಸ್ಸು ಪ್ರಕೃತಿಯಿಂದ ಸಂತುಷ್ಟವಾಗುವಂತೆ ತಮ್ಮ ಫಲ-ಪುಷ್ಪಗಳ ಶೋಭೆಯಿಂದ ಕಾಣಿಸಿಕೊಂಡವು. ಆಗ ಸಿಟ್ಟಾದ ಆ ಋಷಿಬ್ರಾಹ್ಮಣನು ನಿಮಗೆ ಇನ್ನು ಮುಂದೆ ನಿಶ್ಚಿತವಾದ ಕಾಲವನ್ನು ಬಿಟ್ಟು ಎಲ್ಲ ಕಾಲಗಳಲ್ಲಿಯೂ ಪುಷ್ಪ-ಫಲಗಳನ್ನು ನೀಡುವ ಸಾಮರ್ಥ್ಯವು ಹೊರಟು ಹೋಗಲಿ ಎಂದು ಶಪಿಸಿದನು.

ನಾರಾಯಣೋ ಲೋಕಹಿತಾರ್ಥಂ ವಡವಾಮುಖೋ ನಾಮ ಮಹರ್ಷಿಃ ಪುರಾಭವತ್ । ತಸ್ಯ ಮೇರೌ ತಪಸ್ತಪ್ಯತಃ ಸಮುದ್ರ ಆಹೂತೋ ನಾಗತಃ। ತೇನಾಮರ್ಷಿತೇನಾತ್ಮಗಾತ್ರೋಷ್ಮಣಾ ಸಮುದ್ರಃ ಸ್ತಿಮಿತಜಲಃ ಕೃತಃ । ಸ್ವೇದಪ್ರಸ್ಯಂದನಸದೃಶಶ್ಚಾಸ್ಯ ಲವಣಭಾವೋ ಜನಿತಃ ಉಕ್ತಶ್ಚಾಪೇಯೋ ಭವಿಷ್ಯಸಿ । ಏತಚ್ಚತೇ ತೋಯಂ ವಡವಾಮುಖಸಂಜ್ಞಿತೇನ ಪೀಯಮಾನಂ

ಮಧುರಂ ಭವಿಷ್ಯತಿ। ತದೇತದದ್ಯಾಪಿ ವಡವಾಮುಖಸಂಜ್ಞಿತೇನಾನುವರ್ತಿನಾ ತೋಯಂ ಸಾಮುದ್ರಂ ಪೀಯತೇ ॥೪೮॥

ಹಿಂದೆ ನಾರಾಯಣನು ಲೋಕಹಿತಕ್ಕಾಗಿ ಒಡವಾಮುಖ ಎಂಬ ಋಷಿಯಾಗಿ ಮೇರುಶಿಖರದಲ್ಲಿ ತಪಸ್ಸನ್ನಾಚರಿಸುವಾಗ ಯಾವುದೋ ಉದ್ದೇಶದಿಂದ ಸಮುದ್ರನನ್ನು ಕರೆದನು. ಆದರೆ ಸಮುದ್ರರಾಜನು ಬರಲಿಲ್ಲ. ಕ್ರುದ್ಧನಾದ ನಾರಾಯಣನು ತನ್ನ ಶರೀರದ ಬಿಸಿಯಿಂದ ಸಮುದ್ರದ ನೀರನ್ನು ಸ್ತಂಭಿಸುವಂತೆ ಮಾಡಿದನು. ಜೊತೆಗೆ ತನ್ನ ಮೈ ಬೆವರಿನಿಂದ ಸಮುದ್ರಜಲವು ಉಪ್ಪಾಗುವಂತೆ ಮಾಡಿದನು. ಇಷ್ಟು ಮಾತ್ರವಲ್ಲದೆ ನಿನ್ನ ನೀರು ಪ್ರಾಣಿಗಳಿಗೆ ಪ್ರಿಯವಾಗದೆ ಒಡವಾಮುಖ ಎಂಬ ಅಗ್ನಿಗೆ ಮಾತ್ರ ಪ್ರಿಯವಾಗಲಿ ಎಂದು ಶಪಿಸಿದನು. ಇದರಿಂದ ಸಮುದ್ರದಲ್ಲಿ ಒಡವ ಎಂಬ ಅಗ್ನಿಯು ಸೇರಿಕೊಂಡು ಸಮುದ್ರದ ನೀರನ್ನು ನಿರಂತರವೂ ಕುಡಿಯುತ್ತಿದೆ.

ಹಿಮವತೋ ಗಿರೇರ್ದುಹಿತರಮುಮಾಂ ರುದ್ರಶ್ಚಕಮೇ। ಭೃಗುರಪಿ ಚ ಮಹರ್ಷಿರ್ಹಿಮವಂತಮಾಗಮ್ಯಾಬ್ರವೀತ್ ಕನ್ಯಾಮುಮಾಂ ಮೇ ದೇಹೀತಿ। ತಮಬ್ರವೀದ್ಧಿಮವಾನಭಿಲಷಿತೋ ವರೋ ರುದ್ರ ಇತಿ। ತಮಬ್ರವೀದ್ ಭೃಗುರ್ಯಸ್ಮಾತ್ತ್ವಯಾಹಂ ಕನ್ಯಾವರಣಕೃತಭಾವಃ ಪ್ರತ್ಯಾಖ್ಯಾತಸ್ತಸ್ಮಾನ್ನ ರತ್ನಾನಾಂ ಭವಾನ್ ಭಾಜನಂ ಭವಿಷ್ಯತೀತಿ। ಅದ್ಯ ಪ್ರಭೃತ್ಯೇತದವಸ್ಥಿತಮೃಷಿವಚನಮ್ ॥೪೯॥

ಉಮಾದೇವಿಯು ದಕ್ಷನ ಮೇಲಿನ ಕೋಪದಿಂದ ದೇಹವನ್ನು ಬಿಟ್ಟು ಪುನಃ ಹಿಮವಂತನ ಪುತ್ರಿಯಾಗಿ ಹುಟ್ಟಿದಳು. ಅವಳು ರುದ್ರನಲ್ಲಿ ಆಸಕ್ತಳಾಗಿದ್ದಳು. ಇದರ ನಡುವೆ ಭೃಗು ಋಷಿಯು ಹಿಮವಂತನ ಬಳಿ ಹೋಗಿ ತನಗೆ ಆ ಮಗಳನ್ನು ನೀಡೆಂದು ಕೇಳಿದನು. ಅದಕ್ಕೆ ಹಿಮವಂತನು, ಈಗಾಗಲೇ ತನ್ನ ಮಗಳು ರುದ್ರನನ್ನು ವರಿಸಿರುವುದಾಗಿ ಹೇಳಿ ನಿರಾಕರಿಸಿದನು. ಇದರಿಂದ ಕ್ರುದ್ಧನಾದ ಭೃಗುವು ನಿನ್ನಲ್ಲಿ ರತ್ನಗಳಿಲ್ಲದೆ ಹೋಗಲಿ ಎಂದು ಶಪಿಸಿದನು. ಆ ಮುನಿಯ ಶಾಪವು ಇಂದಿಗೂ ಸ್ಥಿರವಾಗಿದೆ.

ತದೇವಂವಿಧಂ ಮಾಹಾತ್ಮ್ಯಂ ಬ್ರಾಹ್ಮಣಾನಾಮ್ ಕ್ಷತ್ರಮಪಿ ಶಾಶ್ವತೀಮವ್ಯಯಾಂ ಪೃಥಿವೀಂ ಪತ್ನೀಮಭಿಗಮ್ಯ ಬುಭುಜೇ।

ತದೇತದ್ಬ್ರಹ್ಮಾಗ್ನೀಷೋಮೀಯಮ್ ತೇನ ಜಗದ್ಧಾರ್ಯತೇ ॥೫೦॥

ರಾಜೇಂದ್ರನೇ, ಬ್ರಾಹ್ಮಣರ ಮಹಿಮೆಯು ಈ ವಿಧವಾಗಿದೆ. ಪ್ರಾಯಃ ಕ್ಷತ್ರಿಯ ಜಾತಿಯು ಬ್ರಾಹ್ಮಣರ ಆಶ್ರಯದಿಂದಲೇ ಭೂಮಿಯನ್ನು ಸ್ಥಿರವಾಗಿ ಅನುಭವಿಸುತ್ತಿದೆ. ಅಂತಹ ಬ್ರಹ್ಮ-ಕ್ಷತ್ರಿಯ ಎರಡು ಅಗ್ನಿಗಳು ಸೋಮಸ್ವರೂಪಗಳು. ಅವೆರಡರಿಂದ ಜಗತ್ತು ಧರಿಸಲ್ಪಟ್ಟಿದೆ. ಅಗ್ನಿ-ಸೋಮರ ಮಹಿಮೆಗಳನ್ನು ಹೀಗೆ ತಿಳಿದುಕೊ ಎಂದು ಭಾವ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚತುಃಸಪ್ತತ್ಯುತ್ತರಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೈದನೆಯ ಅಧ್ಯಾಯ

ಕೃಷ್ಣನು ತನ್ನ ನಾಮಗಳ ನಿರ್ವಚನವನ್ನು ತಿಳಿಸಿ, ಶಿವನಿಗೂ ನಾರಾಯಣನಿಗೂ ನಡೆದ ಯುದ್ಧವನ್ನು ಅರ್ಜುನನಿಗೆ ತಿಳಿಸಿದುದು.

ಶ್ರೀಭಗವಾನ್

ಸೂರ್ಯಾಚಂದ್ರಮಸೌ ಶಶ್ವತ್ ಕೇಶೈರ್ಮೇ ಅಂಶುಸಂಜ್ಞಿತೈಃ ।
ಬೋಧಯಂಸ್ತಾಪಯಂಶ್ಚೈವ ಜಗದುತ್ತಿಷ್ಠತೇ ಪೃಥಕ್ ॥೧॥

ಶ್ರೀಭಗವಾನ್– ಅರ್ಜುನನೇ, ಸೂರ್ಯ-ಚಂದ್ರರಿಬ್ಬರೂ ತಮ್ಮ ಕಿರಣಗಳು ಎನಿಸಿಕೊಂಡ ನನ್ನ ಕೇಶಗಳಿಂದಲೇ ಲೋಕಗಳನ್ನು ಎಚ್ಚರಿಸುತ್ತಾ, ಉಷ್ಣವನ್ನು ನೀಡುತ್ತಾ ಪ್ರತ್ಯೇಕವಾಗಿ ಉದಯಮಾನರಾಗುತ್ತಾರೆ.

ವ್ಯಾಖ್ಯಾನ ವಿಶೇಷ– ನನ್ನ ಎರಡು ಕಣ್ಣುಗಳಿಂದ ಕೇಶ ಎಂಬ ಕಿರಣರಾಶಿಯು ಹೊರಹೊಮ್ಮುತ್ತದೆ. ಪ್ರಾತಃಕಾಲದಲ್ಲಿ ಹೊರಹೊಮ್ಮುವ ಕಿರಣರಾಶಿಯು ಸೂರ್ಯನ ಮೂಲಕ ಜಗತ್ತನ್ನು ಎಬ್ಬಿಸಿದರೆ ರಾತ್ರಿಯಲ್ಲಿ ಹೊರಹೊಮ್ಮುವ ಕಿರಣರಾಶಿಯು ಚಂದ್ರನ ಮೂಲಕ ಆಹ್ಲಾದವನ್ನು ನೀಡುತ್ತದೆ ಎಂದು ಭಾವ.

ಬೋಧನಾತ್ ತಾಪನಾಚ್ಚೈವ ಜಗತೋ ಹರ್ಷಣಂ ಭವೇತ್ ।
ಅಗ್ನೀಷೋಮಕೃತೈರೇಭಿಃ ಕರ್ಮಭಿಃ ಪಾಂಡುನಂದನ ।
ಹೃಷೀಕೇಶೋಽಹಮೀಶಾನೋ ವರದೋ ಲೋಕಭಾವನಃ ॥೨॥

ಜಗತ್ತಿಗೆ ಸರಿಯಾದ ಜ್ಞಾನವನ್ನು ನೀಡುವ ಕಿರಣಗಳು ಸೂರ್ಯನ ಕಿರಣಗಳು. ಪದಾರ್ಥಗಳನ್ನು ಪಕ್ವಗೊಳಿಸುವ ತಾಪಕ ಶಕ್ತಿಯು ಸೂರ್ಯನ ಕಿರಣಗಳಲ್ಲಿದೆ. ಇದರಿಂದಲೇ ಜಗತ್ತಿಗೆ ಸಂತೋಷವಾಗಿದೆ. ಅಗ್ನಿ-ಸೋಮರು ಮಾಡುವ ಅರ್ಥಾತ್ ಸೂರ್ಯ-ಚಂದ್ರರು ಮಾಡುವ ಈ ಕರ್ಮಗಳಿಂದ ಜಗತ್ತೆಲ್ಲವೂ ಸಂತೋಷ ಹೊಂದುತ್ತದೆ. ಆದುದರಿಂದ ಪಾಂಡುಸುತನೇ, ನಾನು ಈಶಾನ, ಹೃಷೀಕೇಶ, ವರದ, ಲೋಕಭಾವನ ಎನಿಸಿದ್ದೇನೆ.

ವ್ಯಾಖ್ಯಾನ ವಿಶೇಷ– 'ಹರ್ಷಣಕರೌ ಕೇಶೌ ಯಸ್ಯೇತಿ ಹೃಷೀಕೇಶಃ' ಹೃಷೀ ಎನ್ನುವುದು ನಿರುಕ್ತ ಶಬ್ದವಾದುದರಿಂದ ಹೃಷೀ ಎಂಬಲ್ಲಿನ ದೀರ್ಘವು ಛಂದಸ್ಸಿನ ಪ್ರಯೋಗವೆಂದು ಭಾವಿಸಬೇಕು ಅಥವಾ ಹೃಷೀ ಎನ್ನುವುದು ಇಕಾರಾಂತ ಪದ ಎಂದು ಭಾವಿಸಬಹುದು. ಆಗ 'ಹೃಷ್ಯೈ ಕೇಶೌ ಯಸ್ಯ ಸಃ ಹೃಷೀಕೇಶಃ' ಎಂದು ವ್ಯುತ್ಪತ್ತಿಯನ್ನು ಮಾಡಬೇಕು.

ಇಳೋಪಹೂತಂ ಗೇಹೇಷು ಹರೇ ಭಾಗಂ ಕ್ರತುಷ್ವಹಮ್ ।
ವರ್ಣಶ್ಚ ಮೇ ಹರಿಶ್ರೇಷ್ಠಸ್ತಸ್ಮಾದ್ಧರಿರಹಂ ಸ್ಮೃತಃ ॥೩॥

ಯಜ್ಞದಲ್ಲಿ ಇಡಾಂಗೃಹಾಣ ಎಂಬುದಾಗಿ ಯಾಜ್ಞಿಕರು ನನ್ನನ್ನು ಕರೆದು ಹವಿರ್ಭಾಗವನ್ನು ನೀಡುತ್ತಾರಾದ್ದರಿಂದ ನಾನು ಅಂತಹ ಹವಿರ್ಭಾಗವನ್ನು ಸ್ವೀಕರಿಸುವ ಹರಿ ಎನಿಸಿದ್ದೇನೆ. ನನ್ನ ಮೈಬಣ್ಣವು ಹರಿಮಣಿಯಂತೆ ಇರುವುದರಿಂದಲೇ ನಾನು ಹರಿ ಎಂದು ಕರೆಸಿಕೊಳ್ಳುತ್ತೇನೆ.

ಧಾಮಸಾರೋ ಹಿ ಲೋಕಾನಾಮೃತಂ ಚೈವ ವಿಚಾರಿತಮ್ ।
ಋತಧಾಮಾ ತತೋ ವಿಪ್ರೈಃ ಸತ್ಯಶ್ಚಾಹಂ ಪ್ರಕೀರ್ತಿತಃ ॥೪॥

ನಾನು ಲೋಕಕ್ಕೆಲ್ಲ ಶ್ರೇಷ್ಠವಾದ ಆಧಾರನಾಗಿದ್ದೇನೆ. ಜ್ಞಾನರೂಪವಾದ ನನ್ನ ಶರೀರವು ಜಗತ್ತನ್ನು ಧರಿಸಿದೆ. ಜ್ಞಾನರೂಪವಾದ ಶರೀರವನ್ನು ಹೊಂದಿರುವುದರಿಂದಲೇ ಋತಧಾಮ ಎಂದು ಕರೆಸಿಕೊಂಡಿದ್ದೇನೆ. ನಿರ್ದುಷ್ಟವಾದ ಜ್ಞಾನವನ್ನು ಹೊಂದಿರುವುದರಿಂದ ಸತ್ಯನೆನಿಸಿದ್ದೇನೆ.

ವ್ಯಾಖ್ಯಾನ ವಿಶೇಷ– 'ಋತಶ್ಚ ಅಸೌ ಧಾಮಾ ಚ ಋತಧಾಮಾ' 'ಸತ್ ಯಂ ಜ್ಞಾನಂ ಯಸ್ಯ ಸಃ ಸತ್ಯಃ'

ನಷ್ಟಾಂ ಚ ಧರಣೀಂ ಪೂರ್ವಮವಿಂದಂ ವೈ ಗುಹಾಗತಾಮ್ ।
ಗೋವಿಂದ ಇತಿ ಮಾಂ ದೇವಾ ವಾಗ್ಭಿಃ ಸಮಭಿತುಷ್ಟುವುಃ ॥೫॥

ಹಿಂದೆ ಭೂಮಿಯು ನೀರಿನಲ್ಲಿ ಮುಳುಗಿ ಅದೃಶ್ಯವಾಗಿದ್ದಾಗ ಅದನ್ನು ನಾನು ಕಂಡು ಹಿಡಿದೆನು. ಸಮುದ್ರದೊಳಗಿನಿಂದ ಭೂಮಿಯನ್ನು ಉದ್ಧರಿಸಿದ ಕಾರಣ ದೇವತೆಗಳು ನನ್ನನ್ನು ಗೋವಿಂದನೆಂದು ಸ್ತುತಿಸಿದರು.

ಶಿಪಿವಿಷ್ಟೇತಿ ಚಾಖ್ಯಾಯಾಂ ಹೀನರೋಮಾ ಚ ಯೋ ಭವೇತ್ ।
ತೇನಾವಿಷ್ಟಂ ಹಿ ಯತ್ಕಿಂಚಿಚ್ಛಿಪಿವಿಷ್ಟಂ ಹಿ ತತ್ ಸ್ಮೃತಮ್ ॥೬॥

ನಾನು ರೋಮಪರದಿಂದ ಉಪಲಕ್ಷಿತವಾದ ತ್ವಗಿಂದ್ರಿಯ - ಇವುಗಳಿಂದ ಹೀನನಾದುದರಿಂದ ಯಜ್ಞದಲ್ಲಿ ನೀಡುವ ಮಾಂಸರೂಪವಾದ ಹವಿಸ್ಸನ್ನು ಶಿಪಿ ಎಂದು ಹೇಳುತ್ತಾರೆ. ಅಂತಹ ಶಿಪಿ ಎಂಬ ಯಜ್ಞದ ವಸ್ತುವಿನಿಂದ ಆವಿಷ್ಟವಾದ ವಸ್ತುವನ್ನು ಶಿಪಿವಿಷ್ಟ ಎನ್ನುತ್ತಾರೆ. ಅಂತಹ ವಸ್ತುವನ್ನು ಸ್ವೀಕರಿಸುವ ನಾನು ಶಿಪಿವಿಷ್ಟನಾಮಕನಾಗಿದ್ದೇನೆ.

ವ್ಯಾಖ್ಯಾನ ವಿಶೇಷ– ಶಿಪಿ ಎಂದರೆ ರೋಮ, ಚರ್ಮಗಳಿಲ್ಲದ ಅವಯವಿ. ಅಂತಹ ಜ್ಞಾನಾನಂದಮಯನಾದ ಭಗವಂತನು ಶಿಪಿವಿಷ್ಟನೆನಿಸಿದ್ದಾನೆ. ಯಜ್ಞದಲ್ಲಿ ನೀಡುವ ಶಿಪಿವಿಷ್ಟವನ್ನು ಸ್ವೀಕರಿಸುವುದರಿಂದಲೂ ಶಿಪಿವಿಷ್ಟನೆನಿಸಿದ್ದಾನೆ.

ಯಾಸ್ಕೋ ಮಾಮೃಷಿರವ್ಯಗ್ರೋ ನೈಕಯಜ್ಞೇಷು ಗೀತವಾನ್ ।
ಶಿಪಿವಿಷ್ಟ ಇತಿ ಹ್ಯಸ್ಮಾದ್ ಗುಹ್ಯನಾಮಧರೋ ಹ್ಯಹಮ್ ॥೭॥

ಯಾಸ್ಕನೆಂಬ ಮುನಿಯು ಯಾಗಗಳಲ್ಲಿ ನನ್ನನ್ನು ಶಿಪಿವಿಷ್ಟ ಎಂಬ ಹೆಸರಿನಿಂದ ಶಾಂತನಾಗಿ ಗಾನ ಮಾಡಿದ ಕಾರಣದಿಂದಲೂ ನನಗೆ ಶಿಪಿವಿಷ್ಟ ಎಂಬ ರಹಸ್ಯವಾದ ಹೆಸರುಂಟಾಯಿತು.

ಸ್ತುತ್ವಾ ಮಾಂ ಶಿಪಿವಿಷ್ಟೇತಿ ಯಾಸ್ಕೋ ಋಷಿರುದಾರಧೀಃ ।
ಮತ್ ಪ್ರಸಾದಾದಧೋ ನಷ್ಟಂ ನಿರುಕ್ತಮಭಿಜಗ್ಮಿವಾನ್ ॥೮॥

ಆ ಯಾಸ್ಕನು ನನ್ನ ಅನುಗ್ರಹದಿಂದ ಪಾತಾಳದಲ್ಲಿ ಅಡಗಿದ್ದ ನಿರುಕ್ತ ಎಂಬ ಗ್ರಂಥವನ್ನು ಪಡೆದುಕೊಂಡನು.

ನ ಹಿ ಜಾತೋ ನ ಜಾಯೇಽಹಂ ನ ಜನಿಷ್ಯೇ ಕದಾಚನ ।
ಕ್ಷೇತ್ರಜ್ಞಃ ಸರ್ವಭೂತಾನಾಂ ತಸ್ಮಾದಹಮಜಃ ಸ್ಮೃತಃ ॥೯॥

ಎಲ್ಲ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿ ಕ್ಷೇತ್ರಜ್ಞನೆನಿಸಿದ ನಾನು ಹಿಂದೆ ಹುಟ್ಟಿರಲಿಲ್ಲ, ಮುಂದೆಯೂ ಇಲ್ಲ, ಈಗಲೂ ಇಲ್ಲ. ಇದರಿಂದ ನಾನು ಅಜ ಎಂದು ಕರೆಸಿಕೊಳ್ಳುತ್ತೇನೆ.

ನೋಕ್ತಪೂರ್ವಂ ಮಯಾ ಕ್ಷುದ್ರಮಶ್ಲೀಲಂ ವಾ ಕದಾಚನ ।
ಋತಾ ಬ್ರಹ್ಮಸುತಾ ಸಾ ಮೇ ಸತ್ಯಾ ದೇವೀ ಸರಸ್ವತೀ ॥೧೦॥

ನಾನು ಸ್ವಲ್ಪವಾದರೂ ಯಾವ ಸಮಯದಲ್ಲಿಯೂ ಅಮಂಗಳವಾದ, ಕ್ಷುದ್ರವಾದ ಮಾತುಗಳನ್ನು ನುಡಿದವನಲ್ಲ. ಸತ್ಯರೂಪಿಣಿಯಾದ ಋತಾ ಎಂದು ಕರೆಯಲ್ಪಡುವ ಬ್ರಹ್ಮಸುತೆಯಾದ ಸರಸ್ವತಿಯೇ ನನ್ನ ವಾಕ್ ಎನಿಸಿದ್ದಾಳೆ. ಅವಳು ನನ್ನ ಜಿಹ್ವೆಯಲ್ಲಿ ವಾಸಿಸುತ್ತಾಳೆ.

ಸಚ್ಚಾಸಚ್ಚೈವ ಕೌಂತೇಯ ಮಯಾವೇಶಿತಮಾತ್ಮನಿ ।
ಪೌಷ್ಕರೇ ಬ್ರಹ್ಮಸದನೇ ಸತ್ಯಂ ಮಾಮೃಷಯೋ ವಿದುಃ ॥೧೧॥

ಪೃಥಿವಿ, ಅಪ್, ತೇಜಸ್ಸು ಎಂಬ ಮೂರ್ತಪದಾರ್ಥಗಳು ಸತ್ ಎನಿಸಿವೆ. ಆಕಾಶ, ವಾಯುಗಳೆಂಬ ಅಮೂರ್ತಪದಾರ್ಥಗಳು ಅಸತ್ ಎನಿಸಿವೆ. ಗಗನದಂತೆ ವ್ಯಾಪ್ತವಾದ, ವಾಯುವಿನಂತೆ ಗಮನಶೀಲವಾದ ಪಂಚಭೂತಗಳು ನನ್ನಲ್ಲೇ ನೆಲೆಗೊಂಡಿರುವುದರಿಂದ ಸತ್ಯ ಎಂದು ಕರೆಯುತ್ತಾರೆ. ಕಮಲಪುಷ್ಪದ ಕರ್ಣಿಕಾ ಸ್ಥಾನದಲ್ಲಿರುವ ಸತ್ಯಲೋಕದಲ್ಲಿಯೂ ನನ್ನನ್ನು ಋಷಿಗಳು ಸತ್ಯನೆಂದೇ ಕರೆಯುತ್ತಾರೆ.

ಸತ್ತ್ವಾನ್ನ ಚ್ಯುತಪೂರ್ವೋಽಹಂ ಸತ್ತ್ವಂ ವೈ ವಿದ್ಧಿ ಮತ್ಕೃತಮ್ ।
ಜನ್ಮನೀಹಾಭವತ್ ಸತ್ತ್ವಂ ಪೌರ್ವಿಕಂ ಮೇ ಧನಂಜಯ ॥೧೨॥

ಎಂದಿಗೂ ನನ್ನ ಸಾಮರ್ಥ್ಯವು ಚ್ಯುತಿ ಹೊಂದಿರುವುದಿಲ್ಲ. ಅಂತಹ ಸತ್ತ್ವಗುಣ ಪೂರ್ಣನಾದುದರಿಂದ ನನ್ನನ್ನು ಸತ್ತ್ವ ಎಂದು ಕರೆಯುತ್ತಾರೆ. ಅನಾದಿಕಾಲದಿಂದಿರುವ

ಮೂಲರೂಪಕ್ಕೆ ಸಂಬಂಧಿಸಿದ ಕೃಷ್ಣಾವತಾರದಲ್ಲಿಯೂ ನಾನು ಸತ್ತ್ವ ಎಂದೇ ಕರೆಸಿಕೊಳ್ಳುತ್ತೇನೆ.

ನಿರಾಶೀಃಕರ್ಮಸಂಯುಕ್ತಂ ಸಾತ್ವತಂ ಮಾಂ ಪ್ರಕಲ್ಪಯ ।
ಸಾತ್ವತಜ್ಞಾನದೃಷ್ಟೋಽಹಂ ಸಾತ್ವತಃ ಸಾತ್ವತೀಪತೇ ॥೧೩॥

ರಜೋಗುಣ ಸಂಬಂಧ ರಹಿತವಾದ, ಕೇವಲ ಸತ್ತ್ವಗುಣ ನಿಮಿತ್ತವಾದ ನಿವೃತ್ತಿ ಕರ್ಮಕ್ಕೆ ಸಂಬಂಧಿಸಿದವನಾದ್ದರಿಂದ ಸಾತ್ವತನೆನಿಸಿದ್ದೇನೆ. ಸ್ವಾತಂತ್ರ್ಯ ಎಂಬ ಸಾಮರ್ಥ್ಯದಿಂದ ಕೇವಲ ಸತ್ತ್ವಗುಣಪ್ರಿಯನಾದುದರಿಂದಲೂ ರಜಸ್ಸು, ತಮಸ್ಸು ಗುಣಗಳ ನಿಮಿತ್ತವಾದ ಕಲ್ಮಷರಹಿತನಾದುದರಿಂದಲೂ ಸಾತ್ವತ ಎನ್ನುತ್ತಾರೆ. ಅಥವಾ ಸಾತ್ವತ ಎಂದರೆ ಸತ್ತ್ವಗುಣ ಸಂಬಂಧಿ ಎನಿಸಿದ ಪಂಚರಾತ್ರಾದಿ ವೈಷ್ಣವ ಗ್ರಂಥ ಸಮೂಹವು. ಆ ಗ್ರಂಥಗಳನ್ನು ನಾನೇ ಕಂಡ ಕಾರಣ ನನ್ನನ್ನು ಸಾತ್ವತ ಎನ್ನುತ್ತಾರೆ. ಅಥವಾ ಯಾದವ ಕುಲದಲ್ಲಿ ಉತ್ಪನ್ನಳಾದ, ನಿನ್ನ ಹೆಂಡತಿಯಾದ ಸುಭದ್ರೆಯು ಸಾತ್ವತಿ. ಯಾದವ ಕುಲದ ಸಂಬಂಧವು ನನಗೆ ಇರುವುದಿಲ್ಲ. ನಿನ್ನ ಹೆಂಡತಿಗೆ ಇರುತ್ತದೆ. ಯಾದವ ಕುಲವನ್ನು ಸಾತ್ವತ ಕುಲ ಎನ್ನುತ್ತಾರೆ. ಅಂತಹ ಸಾತ್ವತ ಕುಲದ ಕನ್ಯೆಯ ಪತಿ ನೀನಾಗಿರುವಿ ಹೊರತು ನಾನಲ್ಲ ಎಂಬುದಾಗಿ ಸಾತ್ವತೀಪತೇ ಎಂಬುದಾಗಿ ಅರ್ಜುನನನ್ನು ಕೃಷ್ಣನು ಸಂಬೋಧಿಸಿದ್ದಾನೆ.

ಕೃಷಾಮಿ ಮೇದಿನೀಂ ಪಾರ್ಥ ಭೂತ್ವಾ ಕಾರ್ಷ್ಣಾಯಸೋತ್ತರಃ ।
ಕೃಷ್ಣೋ ವರ್ಣಶ್ಚ ಮೇ ಯಸ್ಮಾತ್ ತಸ್ಮಾತ್ ಕೃಷ್ಣೋಽಹಮರ್ಜುನ ॥

ಕೃಷ್ಣವರ್ಣದ ಕಬ್ಬಿಣವು ಉತ್ತರ ಭಾಗದಲ್ಲಿ ಉಳ್ಳ ಪದಾರ್ಥಕ್ಕೆ ಲಾಂಗಲ (ನೇಗಿಲು) ಎನ್ನುತ್ತಾರೆ. ಅಂತಹ ನೇಗಿಲನ್ನು ಭೂಪ್ರದೇಶದ ಒಳಗಡೆ ಪ್ರವೇಶಿಸುವಂತೆ ಮಾಡಿ ನಾನೇ ಕಬ್ಬಿಣದ ನೇಗಿಲಿನ ರೂಪವನ್ನು ತಾಳಿ ಭೂಮಿಯನ್ನುಳುವುದರಿಂದಲೂ ಕೃಷ್ಣವರ್ಣದವನಾದುದರಿಂದಲೂ ಅರ್ಜುನನೇ, ನನ್ನನ್ನು ಕೃಷ್ಣ ಎನ್ನುತ್ತಾರೆ.

ಮಯಾ ಸಂಶ್ಲೇಷಿತಾ ಭೂಮಿರದ್ಭಿರ್ವ್ಯೋಮ ಚ ವಾಯುನಾ ।
ವಾಯುಶ್ಚ ತೇಜಸಾ ಸಾರ್ಧಂ ವೈಕುಂಠತ್ವಂ ತತೋ ಮಮ ॥೧೫॥

ಅರ್ಜುನನೇ, ನಾನು ಮೂರುವಿಧ ಜೀವರಾಶಿಗಳನ್ನು ಮಳೆಯ ನೀರಿನ ಮೂಲಕ ಭೂಮಿಯಲ್ಲಿ ಸೇರಿಸುತ್ತೇನೆ. ವಾಯುವಿನ ಜೊತೆಗೂ ಸಂಬಂಧವನ್ನು ಹೊಂದುವಂತೆ

ಮಾಡುತ್ತೇನೆ. ವಾಯುವನ್ನು ತೇಜಸ್ಸಿನ ಜೊತೆಗೆ ಸಂಬಂಧ ಹೊಂದುವಂತೆ ಮಾಡುತ್ತೇನೆ. ಆದ್ದರಿಂದ ಮೂರು ವಿಧ ಜೀವರಾಶಿಗಳು ತಮ್ಮ ಯೋಗ್ಯತೆಗೆ ಅನುಗುಣವಾದ ಜ್ಞಾನವನ್ನು ಸಂಪಾದಿಸಿ ಅಂಧಂತಮಸ್ಸಿನಲ್ಲಿ ನಾಶವಿಲ್ಲದೆ ಇರುವ ದುಃಖವನ್ನು ಅಧಮ ಜೀವರು ಹೊಂದುತ್ತಾರೆ. ಮಧ್ಯಮಜೀವರು ಮಧ್ಯಮ ಗತಿಯಲ್ಲಿ ನಾಶಹೊಂದದೇ ಇರುವ ಸ್ಥಿತಿಯನ್ನು ಹೊಂದುತ್ತಾರೆ. ಮುಕ್ತಜೀವರು ಮುಕ್ತಿಯಲ್ಲಿ ನಾಶಹೊಂದದೇ ಇರುವ ಸ್ಥಿತಿಯನ್ನು ಹೊಂದುತ್ತಾರೆ. ಈ ರೀತಿಯಾಗಿ ವಿಕುಂಠಗಳಿಗೂ ನಾನು ಅಧಿಪತಿಯಾಗಿರುವುದರಿಂದ ವೈಕುಂಠ ಎಂದು ಕರೆಸಿಕೊಂಡಿದ್ದೇನೆ. 'ಉಭಯಸ್ಯ ರಾಜ' ಎಂಬ ಶ್ರುತಿಯು ಇದಕ್ಕೆ ಸಂವಾದಿಯಾಗಿದೆ. ಉಭಯಸ್ವಭಾವದವರಿಗೂ ನಾನೇ ರಾಜ ಎಂದು ಸ್ತುತ್ಯರ್ಥವು.

ನಿರ್ವಾಣಂ ಪರಮಂ ಸೌಖ್ಯಂ ಧರ್ಮೋಽಸೌ ಪರ ಉಚ್ಯತೇ ।
ತಸ್ಮಾನ್ನ ಚ್ಯುತಪೂರ್ವೋಽಹಮಚ್ಯುತಸ್ತೇನ ಕರ್ಮಣಾ ॥೧೬॥

ಪೃಥಿವೀನಭಸೀ ಚೋಭೇ ವಿಶ್ರುತೇ ವಿಶ್ವತೋಮುಖೇ ।
ತಯೋಃ ಸಂಧಾರಣಾರ್ಥಂ ಹಿ ಮಾಮಧೋಕ್ಷಜಮಂಜಸಾ ॥೧೭॥

ನಿರುಕ್ತಂ ವೇದವಿದುಷೋ ಯೇ ಚ ಶಬ್ದಾರ್ಥಚಿಂತಕಾಃ ।
ತೇ ಮಾಂ ಗಾಯಂತಿ ಪ್ರಾಗ್ವಂಶೇ ಅಧೋಕ್ಷಜ ಇತಿ ಸ್ಥಿತಿಃ ॥೧೮॥

ಮೋಕ್ಷವು ಪರಮಸುಖವೆನಿಸಿದೆ. ಧರ್ಮವು ಅತ್ಯಂತ ಶ್ರೇಷ್ಠವೆನಿಸಿದೆ. ಇಂತಹ ಮೋಕ್ಷಸುಖದಿಂದಾಗಲಿ, ಧರ್ಮದಿಂದಾಗಲಿ ನಾನೆಂದಿಗೂ ಚ್ಯುತವಾಗುವ ಕರ್ಮಗಳನ್ನು ಆಚರಿಸುವವನಲ್ಲವಾದ್ದರಿಂದ ನನ್ನನ್ನು ಅಚ್ಯುತನೆಂದು ಕರೆಯುತ್ತಾರೆ. ಎಲ್ಲೆಡೆಯೂ ವ್ಯಾಪಿಸಿರುವ ಪೃಥಿವಿ, ಆಕಾಶಗಳನ್ನು ನಾನು ಧರಿಸಿದ್ದೇನೆ. ಈ ಕಾರಣದಿಂದಲೇ ನನ್ನನ್ನು ಅಧೋಕ್ಷಜ ಎಂದು ಕರೆಯುತ್ತಾರೆ. ವೇದಜ್ಞಾನಿಗಳಾದ ಶಬ್ದಾರ್ಥ ಚಿಂತಕರು ನಿರುಕ್ತದಿಂದ ನನ್ನನ್ನು ಪ್ರಾಗ್ವಂಶ ಎಂಬ ಯಜ್ಞಸ್ಥಳದಲ್ಲಿ ಅಧೋಕ್ಷಜ ಎಂದು ಕರೆಯುತ್ತಾರೆ.

ವ್ಯಾಖ್ಯಾನ ವಿಶೇಷ– ಅಥವಾ ಕೃಷ್ಣಾವತಾರ ರೂಪಿಯಾದ ನಾನು ಅವತಾರದಲ್ಲಿ ಪೃಥಿವಿಯಂತೆ ಸ್ವಲ್ಪ ಸ್ವಲ್ಪ ಮಾತ್ರ ಕಾಣಿಸಿಕೊಳ್ಳುತ್ತೇನೆ. ಮೂಲರೂಪದಲ್ಲಿ ಆಕಾಶದಂತೆ ಸರ್ವಥಾ ಅಗೋಚರನಾಗಿದ್ದೇನೆ. ಇಂತಹ ನನ್ನನ್ನು ಕಾಣಲು ಇಂದ್ರಿಯಗಳಿಂದ ಉತ್ಪನ್ನವಾದ ಜ್ಞಾನವು

ಜಘನ್ಯವೆನಿಸುತ್ತದೆ. ಆದ್ದರಿಂದ 'ಅಕ್ಷಜನಿತಂ ಜ್ಞಾನಂ ಅಧಃ ಯಸ್ಮಾತ್ ಇತಿ ಅಧೋಕ್ಷಜಃ' ಎಂದು ನಿರುಕ್ತದಿಂದ ಸಿದ್ಧವಾದ ನನ್ನ ನಾಮವು. ಅಥವಾ ಭೂಮಿಯಲ್ಲಿರುವ ಭೂಮಿ ಎಂಬ ಲಕ್ಷ್ಮೀ ರೂಪದಂತೆ, ಆಕಾಶದಲ್ಲಿರುವ ಶ್ರೀದೇವಿಯೆಂಬ ಲಕ್ಷ್ಮೀರೂಪದಂತೆ ನನ್ನ ಅನುಗ್ರಹವಿಲ್ಲದೆ ಸರ್ವಥಾ ನೋಡಲಾಗದು. ಆದ್ದರಿಂದಲೂ ಅಧೋಕ್ಷಜ ಎನಿಸಿದ್ದೇನೆ. ' 'ತದವ್ಯಕ್ತಮಾಹ ಹಿ' ಎಂಬ ಬ್ರಹ್ಮಸೂತ್ರದಲ್ಲಿ ಮತ್ತು ಸ್ಮೃತಿವಾಕ್ಯದಲ್ಲಿ ಹೇಳಿದಂತೆ 'ಪಶ್ಯಂತೋಪಿ ನ ಪಶ್ಯಂತಿ ಮೇರೋ ರೂಪಂ ವಿಪಶ್ಚಿತಃ' ಎಂದು ನನ್ನ ರೂಪವು ಅದೃಶ್ಯವಾದುದು ಎಂದು ತಾತ್ಪರ್ಯ. ಅಥವಾ ನಾಶ ಹೊಂದದೆ ಇರುವ ಕಾರಣದಿಂದ ಅಕ್ಷ ಎನಿಸಿದೆ. ಕ್ಷ ಎಂದರೆ 'ಕ್ಷಯ' 'ಕ್ಷಿಕ್ಷಯೇ' ಎಂಬ ಧಾತುವಿನ ಬಲದಿಂದ ಕ್ಷಯ ಎಂದು ಅರ್ಥ. 'ಆದೇ ಚ ಉಪದೇಶೇऽಶಿತಿ ಚ' ಎಂಬ ಸೂತ್ರದಿಂದ ಏಕಾರಕ್ಕೆ ಆಕಾರ ಬರಲು 'ಆತೋऽನುಪಸರ್ಗೇ ಕಃ' ಎಂಬ ಸೂತ್ರದಿಂದ ಕರ್ಮಾರ್ಥದಲ್ಲಿ ಕಪ್ರತ್ಯಯವು ಬರಲು 'ಆತೋ ಲೋಪ ಇಟಿ ಚ' ಎಂಬ ಸೂತ್ರದಿಂದ ಆಕಾರ ಲೋಪವಾಗುತ್ತಿರಲು 'ಕ್ಷಂ' ಎಂಬ ರೂಪವು ನಿಷ್ಪನ್ನವಾಗುತ್ತದೆ. 'ಅಧಃ' ಎಂದರೆ ಭೂಲೋಕದಲ್ಲಿ 'ಜಃ' ಹುಟ್ಟಿದರೂ ಕೂಡ, 'ಯಃ' ಯಾವ ಭಗವಂತನು, 'ನ ಕ್ಷೀಯತೆ' ಕ್ಷಯವನ್ನು ಹೊಂದುವುದಿಲ್ಲವೋ, ಅವನು ಅಧೋಕ್ಷಜ ಎಂದು ಹೇಳಿದಂತಾಯಿತು.

ಶಬ್ದ ಏಕಮತೈರೇಷ ವ್ಯಾಹೃತಃ ಪರಮರ್ಷಿಭಿಃ ।
ನಾನ್ಯೋ ಹ್ಯಧೋಕ್ಷಜೋ ಲೋಕೇ ಋತೇ ನಾರಾಯಣಂ ಪ್ರಭುಮ್ ॥

ಒಂದೇ ಶಬ್ದವನ್ನು ಒಂದೊಂದು ಮತಪ್ರವರ್ತಕರು ಹೇಳಿದ್ದರೂ ಪ್ರಭುವಾದ, ನಾರಾಯಣನಾದ ನನ್ನನ್ನು ಬಿಟ್ಟು ಉಳಿದ ಯಾರೂ ಅಧೋಕ್ಷಜ ಎಂದು ಪ್ರಸಿದ್ಧರಾಗಿರುವುದಿಲ್ಲ.

ಘೃತಂ ಮಮಾರ್ಚಿಷೋ ಲೋಕೇ ಜಂತೂನಾಂ ಪ್ರಾಣಧಾರಣಮ್ ।
ಘೃತಾರ್ಚಿರಹಮವ್ಯಗ್ರೈರ್ವೇದಜ್ಞೈಃ ಪರಿಕೀರ್ತಿತಃ ॥೨೦॥

ಅಗ್ನ್ಯಂತರ್ಯಾಮಿಯಾದ ನನಗೆ ಅರ್ಚನೆಗೆ ಸಾಧನವಾದ ಘೃತವು ಅರ್ಚಿಸ್ ಎನಿಸಿದೆ. ಅಥವಾ ಗೋವಿನ ಘೃತವು ಸುವರ್ಣವರ್ಣದಿಂದ ಕೂಡಿರುವುದರಿಂದ ಘೃತವು ನನ್ನ ಕಾಂತಿಗೆ ಸದೃಶವಾಗಿದೆ. ಹೀಗಾಗಿ ಘೃತದಿಂದ ಪೂಜಿತನಾದ ಅಥವಾ ಘೃತದಂತೆ ಬೆಳಗುವ ನಾನು ಘೃತಾರ್ಚಿ ಎನಿಸಿದ್ದೇನೆ. ಈ ಅಭಿಪ್ರಾಯದಲ್ಲೇ ಘೃತಪ್ರತೀಕ ಎಂದು ಶ್ರುತಿಯು ಹೇಳುತ್ತದೆ. ಸಮಸ್ತ ಜೀವರಿಗೂ ಪ್ರಾಣಧಾರಕನಾಗಿ ಸಮಾಧಾನಿಗಳಾದ ವೇದಜ್ಞರಿಂದ ಘೃತಾರ್ಚಿ ಎಂದು ಸ್ವೀಕೃತನಾಗಿದ್ದೇನೆ.

ತ್ರಯೋ ಹಿ ಧಾತವಃ ಖ್ಯಾತಾಃ ಕರ್ಮಜಾ ಇತಿ ಚ ಸ್ಮೃತಾಃ ।
ಪಿತ್ತಂ ಶ್ಲೇಷ್ಮಾ ಚ ವಾಯುಶ್ಚ ಏಷ ಸಂಘಾತ ಉಚ್ಯತೇ ॥೨೧॥

ಏತೈಶ್ಚ ಧಾರ್ಯತೇ ಜಂತುರೇತೈಃ ಕ್ಷೀಣೈಶ್ಚ ಕ್ಷೀಯತೇ ।
ಆಯುರ್ವೇದವಿದಸ್ತಸ್ಮಾತ್ ತ್ರಿಧಾತುಂ ಮಾಂ ಪ್ರಚಕ್ಷತೇ ॥೨೨॥

ದೇಹದಲ್ಲಿ ವಾತ, ಪಿತ್ತ, ಶ್ಲೇಷ್ಮ ಎಂಬ ಮೂರು ಧಾತುಗಳ ಸಂಘಾತವಿದೆ. ಅವುಗಳು ಕ್ಷಯಿಸಿದಾಗ ಪ್ರಾಣಿಗಳು ನಾಶ ಹೊಂದುತ್ತವೆ. ಆದ್ದರಿಂದ ಆಯುರ್ವೇದವನ್ನು ಬಲ್ಲವರು ನನ್ನನ್ನೇ ಮೂರು ಧಾತುಗಳ ಧಾರಕನಾದುದರಿಂದ ತ್ರಿಧಾತು ಎನ್ನುತ್ತಾರೆ.

ವೃಷೋ ಹಿ ಭಗವಾನ್ ಧರ್ಮಃ ಖ್ಯಾತೋ ಲೋಕೇಷು ಭಾರತ ।
ನೈಘಂಟುಕಪದಾಖ್ಯಾತಂ ವಿದ್ಧಿ ಮಾಂ ವೃಷಮುತ್ತಮಮ್ ॥೨೩॥

ಕಪಿರ್ವರಾಹಃ ಶ್ರೇಷ್ಠಶ್ಚ ಧರ್ಮಶ್ಚ ವೃಷ ಉಚ್ಯತೇ ।
ತಸ್ಮಾದ್‌ವೃಷಾಕಪಿಂ ಪ್ರಾಹ ಕಶ್ಯಪೋ ಮಾಂ ಪ್ರಜಾಪತಿಃ ॥೨೪॥

ವೃಷ ಎಂದರೆ ಧರ್ಮವು. ನಾನು ಧರ್ಮರೂಪನು. ಕಪಿ ಎಂದರೆ ವರಾಹವು. ಈ ದೃಷ್ಟಿಯಿಂದಲೇ ಕಶ್ಯಪ ಋಷಿಯು ನನ್ನನ್ನು ವೃಷಾಕಪಿ ಎಂದರು. ನಿಘಂಟುವಿನಿಂದ ನಿಷ್ಪನ್ನವಾದ ವೃಷ ಶಬ್ದವು ಧರ್ಮ ಎಂದು ಹೇಳಿದರೆ, ಕಪಿಶಬ್ದವು ವರಾಹ ಎಂಬ ಅರ್ಥವನ್ನು ಹೇಳುತ್ತದೆ. ಸಮಗ್ರವಾಗಿ ಎಲ್ಲೆಡೆಯೂ ನೀರನ್ನು ಕುಡಿಸುವುದರಿಂದ ಕಪಿ ಎಂದು, ಶ್ರೇಷ್ಠಧರ್ಮಶೀಲರಿಗೆ ದುಃಖವನ್ನು ನಾಶಗೊಳಿಸುತ್ತಾನಾದ್ದರಿಂದ ವೃಷಾಕಪಿ ಎಂದು ಭಗವಂತನು ಪ್ರಸಿದ್ಧನಾಗಿದ್ದಾನೆ.

ನ ಚಾದಿಂ ನ ಮಧ್ಯಂ ತಥಾ ನೈವ ಚಾಂತಂ
ಕದಾಚಿದ್ ವಿದಂತೇ ಸುರಾಶ್ಚಾಸುರಾಶ್ಚ ।
ಅನಾದ್ಯೋ ಹ್ಯಮಧ್ಯಸ್ತಥಾ ಚಾಪ್ಯನಂತಃ
ಪ್ರಗೀತೋಽಹಮೀಶೋ ವಿಭುರ್ಲೋಕಸಾಕ್ಷೀ ॥೨೫॥

ಬ್ರಾಹ್ಮಣರಾಗಲಿ, ದೇವತೆಗಳಾಗಲಿ ಆದಿ-ಮಧ್ಯಾಂತವನ್ನು ಕಂಡಿರುವುದಿಲ್ಲ. ಅದರಿಂದ ನಾನು ಆದಿ-ಮಧ್ಯಾಂತಗಳು ಇಲ್ಲದವನೆಂದು ಕೀರ್ತಿಸಲ್ಪಡುತ್ತೇನೆ. ನಾನೇ ಒಡೆಯನೂ, ಸಮರ್ಥನೂ, ಲೋಕಸಾಕ್ಷಿಯೂ ಆಗಿದ್ದೇನೆ.

ಜಘನ್ಯವೆನಿಸುತ್ತದೆ. ಆದ್ದರಿಂದ 'ಅಕ್ಷಜನಿತಂ ಜ್ಞಾನಂ ಅಧಃ ಯಸ್ಮಾತ್ ಇತಿ ಅಧೋಕ್ಷಜಃ' ಎಂದು ನಿರುಕ್ತದಿಂದ ಸಿದ್ಧವಾದ ನನ್ನ ನಾಮವು. ಅಥವಾ ಭೂಮಿಯಲ್ಲಿರುವ ಭೂಮಿ ಎಂಬ ಲಕ್ಷ್ಮೀ ರೂಪದಂತೆ, ಆಕಾಶದಲ್ಲಿರುವ ಶ್ರೀದೇವಿಯೆಂಬ ಲಕ್ಷ್ಮೀರೂಪದಂತೆ ನನ್ನ ಅನುಗ್ರಹವಿಲ್ಲದೆ ಸರ್ವಥಾ ನೋಡಲಾಗದು. ಆದ್ದರಿಂದಲೂ ಅಧೋಕ್ಷಜ ಎನಿಸಿದ್ದೇನೆ. ' 'ತದವ್ಯಕ್ತಮಾಹ ಹಿ' ಎಂಬ ಬ್ರಹ್ಮಸೂತ್ರದಲ್ಲಿಮತ್ತು ಸ್ಮೃತಿವಾಕ್ಯದಲ್ಲಿಹೇಳಿದಂತೆ 'ಪಶ್ಯಂತೋಪಿ ನ ಪಶ್ಯಂತಿ ಮೇರೋ ರೂಪಂ ವಿಪಶ್ಚಿತಃ' ಎಂದು ನನ್ನ ರೂಪವು ಅದೃಶ್ಯವಾದುದು ಎಂದು ತಾತ್ಪರ್ಯ. ಅಥವಾ ನಾಶ ಹೊಂದದೆ ಇರುವ ಕಾರಣದಿಂದ ಅಕ್ಷ ಎನಿಸಿದೆ. ಕ್ಷಎಂದರೆ 'ಕ್ಷಯ' 'ಕ್ಷಿಕ್ಷಯೇ' ಎಂಬ ಧಾತುವಿನ ಬಲದಿಂದ ಕ್ಷಯ ಎಂದು ಅರ್ಥ. 'ಆದೇ ಚ ಉಪದೇಶೇऽಶಿತಿ ಚ' ಎಂಬ ಸೂತ್ರದಿಂದ ಏಕಾರಕ್ಕೆ ಆಕಾರ ಬರಲು 'ಆತೋऽನುಪಸರ್ಗೇ ಕಃ' ಎಂಬ ಸೂತ್ರದಿಂದ ಕರ್ಮಾರ್ಥದಲ್ಲಿಕಪ್ರತ್ಯಯವು ಬರಲು 'ಆತೋ ಲೋಪ ಇಟಿ ಚ' ಎಂಬ ಸೂತ್ರದಿಂದ ಆಕಾರ ಲೋಪವಾಗುತ್ತಿರಲು 'ಕ್ಷಂ' ಎಂಬ ರೂಪವು ನಿಷ್ಪನ್ನವಾಗುತ್ತದೆ. 'ಅಧಃ' ಎಂದರೆ ಭೂಲೋಕದಲ್ಲಿ 'ಜಃ' ಹುಟ್ಟಿದರೂ ಕೂಡ, 'ಯಃ' ಯಾವ ಭಗವಂತನು, 'ನ ಕ್ಷೀಯತೆ' ಕ್ಷಯವನ್ನು ಹೊಂದುವುದಿಲ್ಲವೋ, ಅವನು ಅಧೋಕ್ಷಜ ಎಂದು ಹೇಳಿದಂತಾಯಿತು.

ಶಬ್ದ ಏಕಮತೈರೇಷ ವ್ಯಾಹೃತಃ ಪರಮರ್ಷಿಭಿಃ ।
ನಾನ್ಯೋ ಹ್ಯಧೋಕ್ಷಜೋ ಲೋಕೇ ಋತೇ ನಾರಾಯಣಂ ಪ್ರಭುಮ್ ॥

ಒಂದೇ ಶಬ್ದವನ್ನು ಒಂದೊಂದು ಮತಪ್ರವರ್ತಕರು ಹೇಳಿದ್ದರೂ ಪ್ರಭುವಾದ, ನಾರಾಯಣನಾದ ನನ್ನನ್ನು ಬಿಟ್ಟು ಉಳಿದ ಯಾರೂ ಅಧೋಕ್ಷಜ ಎಂದು ಪ್ರಸಿದ್ಧರಾಗಿರುವುದಿಲ್ಲ.

ಘೃತಂ ಮಮಾರ್ಚಿಷೋ ಲೋಕೇ ಜಂತೂನಾಂ ಪ್ರಾಣಧಾರಣಮ್ ।
ಘೃತಾರ್ಚಿರಹಮವ್ಯಗ್ರೈರ್ವೇದಜ್ಞೈಃ ಪರಿಕೀರ್ತಿತಃ ॥೨೦॥

ಅಗ್ನ್ಯಂತರ್ಯಾಮಿಯಾದ ನನಗೆ ಅರ್ಚನೆಗೆ ಸಾಧನವಾದ ಘೃತವು ಅರ್ಚಿಸ್ ಎನಿಸಿದೆ. ಅಥವಾ ಗೋವಿನ ಘೃತವು ಸುವರ್ಣವರ್ಣದಿಂದ ಕೂಡಿರುವುದರಿಂದ ಘೃತವು ನನ್ನ ಕಾಂತಿಗೆ ಸದೃಶವಾಗಿದೆ. ಹೀಗಾಗಿ ಘೃತದಿಂದ ಪೂಜಿತನಾದ ಅಥವಾ ಘೃತದಂತೆ ಬೆಳಗುವ ನಾನು ಘೃತಾರ್ಚಿ ಎನಿಸಿದ್ದೇನೆ. ಈ ಅಭಿಪ್ರಾಯದಲ್ಲೇ ಘೃತಪ್ರತೀಕ ಎಂದು ಶ್ರುತಿಯು ಹೇಳುತ್ತದೆ. ಸಮಸ್ತ ಜೀವರಿಗೂ ಪ್ರಾಣಧಾರಕನಾಗಿ ಸಮಾಧಾನಿಗಳಾದ ವೇದಜ್ಞರಿಂದ ಘೃತಾರ್ಚಿ ಎಂದು ಸ್ವೀಕೃತನಾಗಿದ್ದೇನೆ.

ತ್ರಯೋ ಹಿ ಧಾತವಃ ಖ್ಯಾತಾಃ ಕರ್ಮಜಾ ಇತಿ ಚ ಸ್ಮೃತಾಃ ।
ಪಿತ್ತಂ ಶ್ಲೇಷ್ಮಾ ಚ ವಾಯುಶ್ಚ ಏಷ ಸಂಘಾತ ಉಚ್ಯತೇ ॥೨೧॥

ಏತೈಶ್ಚ ಧಾರ್ಯತೇ ಜಂತುರೇತೈಃ ಕ್ಷೀಣೈಶ್ಚ ಕ್ಷೀಯತೇ ।
ಆಯುರ್ವೇದವಿದಸ್ತಸ್ಮಾತ್ ತ್ರಿಧಾತುಂ ಮಾಂ ಪ್ರಚಕ್ಷತೇ ॥೨೨॥

ದೇಹದಲ್ಲಿ ವಾತ, ಪಿತ್ತ, ಶ್ಲೇಷ್ಮ ಎಂಬ ಮೂರು ಧಾತುಗಳ ಸಂಘಾತವಿದೆ. ಅವುಗಳು ಕ್ಷಯಿಸಿದಾಗ ಪ್ರಾಣಿಗಳು ನಾಶ ಹೊಂದುತ್ತವೆ. ಆದ್ದರಿಂದ ಆಯುರ್ವೇದವನ್ನು ಬಲ್ಲವರು ನನ್ನನ್ನೇ ಮೂರು ಧಾತುಗಳ ಧಾರಕನಾದುದರಿಂದ ತ್ರಿಧಾತು ಎನ್ನುತ್ತಾರೆ.

ವೃಷೋ ಹಿ ಭಗವಾನ್ ಧರ್ಮಃ ಖ್ಯಾತೋ ಲೋಕೇಷು ಭಾರತ ।
ನೈಘಂಟುಕಪದಾಖ್ಯಾತಂ ವಿದ್ಧಿ ಮಾಂ ವೃಷಮುತ್ತಮಮ್ ॥೨೩॥

ಕಪಿರ್ವರಾಹಃ ಶ್ರೇಷ್ಠಶ್ಚ ಧರ್ಮಶ್ಚ ವೃಷ ಉಚ್ಯತೇ ।
ತಸ್ಮಾದ್‌ವೃಷಾಕಪಿಂ ಪ್ರಾಹ ಕಶ್ಯಪೋ ಮಾಂ ಪ್ರಜಾಪತಿಃ ॥೨೪॥

ವೃಷ ಎಂದರೆ ಧರ್ಮವು. ನಾನು ಧರ್ಮರೂಪನು. ಕಪಿ ಎಂದರೆ ವರಾಹವು. ಈ ದೃಷ್ಟಿಯಿಂದಲೇ ಕಶ್ಯಪ ಋಷಿಯು ನನ್ನನ್ನು ವೃಷಾಕಪಿ ಎಂದರು. ನಿಘಂಟುವಿನಿಂದ ನಿಷ್ಪನ್ನವಾದ ವೃಷ ಶಬ್ದವು ಧರ್ಮ ಎಂದು ಹೇಳಿದರೆ, ಕಪಿಶಬ್ದವು ವರಾಹ ಎಂಬ ಅರ್ಥವನ್ನು ಹೇಳುತ್ತದೆ. ಸಮಗ್ರವಾಗಿ ಎಲ್ಲೆಡೆಯೂ ನೀರನ್ನು ಕುಡಿಸುವುದರಿಂದ ಕಪಿ ಎಂದು, ಶ್ರೇಷ್ಠಧರ್ಮಶೀಲರಿಗೆ ದುಃಖವನ್ನು ನಾಶಗೊಳಿಸುತ್ತಾನಾದ್ದರಿಂದ ವೃಷಾಕಪಿ ಎಂದು ಭಗವಂತನು ಪ್ರಸಿದ್ಧನಾಗಿದ್ದಾನೆ.

ನ ಚಾದಿಂ ನ ಮಧ್ಯಂ ತಥಾ ನೈವ ಚಾಂತಂ
ಕದಾಚಿದ್ ವಿದಂತೇ ಸುರಾಶ್ಚಾಸುರಾಶ್ಚ ।
ಅನಾದ್ಯೋ ಹ್ಯಮಧ್ಯಸ್ತಥಾ ಚಾಪ್ಯನಂತಃ
ಪ್ರಗೀತೋಽಹಮೀಶೋ ವಿಭುರ್ಲೋಕಸಾಕ್ಷೀ ॥೨೫॥

ಬ್ರಾಹ್ಮಣರಾಗಲಿ, ದೇವತೆಗಳಾಗಲಿ ಆದಿ-ಮಧ್ಯಾಂತವನ್ನು ಕಂಡಿರುವುದಿಲ್ಲ. ಅದರಿಂದ ನಾನು ಆದಿ-ಮಧ್ಯಾಂತಗಳು ಇಲ್ಲದವನೆಂದು ಕೀರ್ತಿಸಲ್ಪಡುತ್ತೇನೆ. ನಾನೇ ಒಡೆಯನೂ, ಸಮರ್ಥನೂ, ಲೋಕಸಾಕ್ಷಿಯೂ ಆಗಿದ್ದೇನೆ.

ಶುಚೀನಿ ಶ್ರವಣೀಯಾನಿ ಶೃಣೋಮೀಹ ಧನಂಜಯ ।
ನ ಚ ಪಾಪಾನಿ ಗೃಹ್ಣಾಮಿ ತತೋಽಹಂ ವೈ ಶುಚಿಶ್ರವಾಃ ॥೨೬॥

ಪವಿತ್ರವಾದ ಮತ್ತು ಶ್ರವಣಯೋಗ್ಯವಾದ ಮಾತುಗಳಿಗೆ ನಾನು ಆಸಕ್ತಿ ವಹಿಸುತ್ತೇನೆ ಹೊರತು ಪಾಪವಚನಗಳನ್ನು ಎಂದಿಗೂ ಸ್ವೀಕರಿಸುವುದಿಲ್ಲ. ಆದ್ದರಿಂದಲೇ ನಾನು ಶುಚಿಶ್ರವ ಎನಿಸಿದ್ದೇನೆ.

ಏಕಶೃಂಗಃ ಪುರಾ ಭೂತ್ವಾ ವರಾಹೋ ದಿವ್ಯದರ್ಶನಃ ।
ಇಮಾಮುದ್ಧೃತವಾನ್ ಭೂಮಿಮೇಕಶೃಂಗಸ್ತತೋ ಹ್ಯಹಮ್ ॥೨೭॥

ಹಿಂದೆ ಒಂದೇ ಕೊಂಬುಳ್ಳ ವರಾಹರೂಪವನ್ನು ತಾಳಿ ದಿವ್ಯದರ್ಶನನಾದ ನಾನು ಈ ಭೂಮಿಯನ್ನು ಧರಿಸಿದ್ದರಿಂದ ಏಕಶೃಂಗನೆಂದು ಪ್ರಸಿದ್ಧನಾದೆನು.

ತಥೈವಾಸಂ ತ್ರಿಕಕುದಾ ವಾರಾಹಂ ರೂಪಮಾಸ್ಥಿತಃ ।
ತ್ರಿಕಕುತ್ತೇನ ವಿಖ್ಯಾತಃ ಶರೀರಸ್ಯ ತು ಮಾಪನಾತ್ ॥೨೮॥

ವರಾಹರೂಪದಲ್ಲಿ ಎರಡು ಭುಜಗಳಲ್ಲಿ, ಶಿರೋಮೂಲದಲ್ಲಿ ಮೂರು ಡುಬ್ಬಗಳು ಇದ್ದ ಕಾರಣ ನನ್ನನ್ನು ತ್ರಿಕಕುತ್ ಎಂದು ಎಲ್ಲರೂ ಕರೆದರು. ಹೀಗೆ ನಾನು ಪ್ರಸಿದ್ಧನಾದೆನು.

ವಿರಿಂಚ ಇತಿ ಯಃ ಪ್ರೋಕ್ತಃ ಕಪಿಲಜ್ಞಾನಚಿಂತಕೈಃ ।
ಸ ಪ್ರಜಾಪತಿರೇವಾಹಂ ಚೇತನಾತ್ ಸರ್ವಲೋಕಕೃತ್ ॥೨೯॥

ವಿರಿಂಚ ಎಂದು ಯಾರನ್ನು ಕರೆಯುತ್ತಾರೋ, ತತ್ತ್ವಜ್ಞಾನ ಚಿಂತಕರು ಸರ್ವಲೋಕವನ್ನು ನಿರ್ಮಿಸುವ ಚೇತನನಾದ ಪ್ರಜಾಪತಿಯಾದ ನನ್ನನ್ನೇ ವಿರಿಂಚ ಎಂದು ಕರೆಯುತ್ತಾರೆ.

ವಿದ್ಯಾಸಹಾಯವಂತಂ ಮಾಮಾದಿತ್ಯಸ್ಥಂ ಸನಾತನಮ್ ।
ಕಪಿಲಂ ಪ್ರಾಹುರಾಚಾರ್ಯಾಃ ಸಾಂಖ್ಯಾ ನಿಶ್ಚಿತನಿಶ್ಚಯಾಃ ॥೩೦॥

ವಿದ್ಯಾಸಹಾಯನೂ, ಸೂರ್ಯಮಂಡಲದಲ್ಲಿರುವವನೂ ಆದ ನನ್ನನ್ನು ಸಾಂಖ್ಯರು ಕಪಿಲನೆಂದು ಹೇಳುತ್ತಾರೆ.

ವ್ಯಾಖ್ಯಾನ ವಿಶೇಷ– 'ಕಂ ಮೋಕ್ಷಸುಖಂ ಪಿಬಂತಿ ಅನೇನ ಇತಿ ಕಪಿಃ ತತ್ತ ಜ್ಞಾನಮ್ । ತೇನ ಲಸಮಾನಃ ಕಪಿಲಃ'

ಹಿರಣ್ಯಗರ್ಭೋ ದ್ಯುತಿಮಾನೇಷ ಯಶ್ಛಂದಸಿ ಸ್ತುತಃ ।
ಯೋಗೈಃ ಸಂಪೂಜ್ಯತೇ ನಿತ್ಯಂ ಸ ಏವಾಹಂ ವಿಭುಃ ಸ್ಮೃತಃ ॥೩೧॥

ಹಿರಣ್ಯಗರ್ಭ ಎಂದು ಯೋಗಿಜನರು ಪೂಜಿಸುವುದು ವೇದಸ್ತುತ್ಯನಾದ ನನ್ನನ್ನೇ. ಆದ್ದರಿಂದ ನಾನೇ ವಿಭು ಎಂದು ಕರೆಸಿಕೊಳ್ಳುತ್ತೇನೆ.

ಏಕವಿಂಶತಿಶಾಖಂ ಚ ಋಗ್ವೇದಂ ಮಾಂ ಪ್ರಚಕ್ಷತೇ ।
ಸಹಸ್ರಶಾಖಂ ಯತ್ ಸಾಮ ಯೇ ವೈ ವೇದವಿದೋ ಜನಾಃ ।
ಗಾಯಂತ್ಯಾರಣ್ಯಕೇ ವಿಪ್ರಾ ಮದ್ಭಕ್ತಾಸ್ತೇಽಪಿ ದುರ್ಲಭಾಃ ॥೩೨॥

ಇಪ್ಪತ್ತೊಂದು ಶಾಖೆಗಳಿಂದ ಕೂಡಿದ ಋಗ್ವೇದವು, ಸಹಸ್ರ ಶಾಖೆಯುಳ್ಳ ಸಾಮವೇದವು ನನ್ನನ್ನೇ ಕೊಂಡಾಡುತ್ತದೆ ಎಂದು ವೇದಜ್ಞರು ಹೇಳುತ್ತಾರೆ. ಬ್ರಾಹ್ಮಣರು ಆರಣ್ಯಕದಲ್ಲಿ ನನ್ನನ್ನು ಧ್ಯಾನ ಮಾಡುತ್ತಾರೆ.

ಷಟ್‌ಪಂಚಾಶತಮಷ್ಟೌ ಚ ಸಪ್ತತ್ರಿಂಶತಮಿತ್ಯುತ ।
ಯಸ್ಮಿನ್ ಶಾಖಾ ಯಜುರ್ವೇದೇ ಸೋಽಹಮಾಧ್ವರ್ಯವೇ ಸ್ಮೃತಃ ॥

ನೂರ ಒಂದು ಶಾಖೆಯುಳ್ಳ ಯಜುರ್ವೇದದ ಮೂಲಕವೂ ಅಧ್ವರ್ಯುಗಳು ನನ್ನನ್ನು ವರ್ಣಿಸುತ್ತಾರೆ.

ಪಂಚಕಲ್ಪಮಥರ್ವಾಣಂ ಕೃತ್ಯಾಭಿಃ ಪರಿಬೃಂಹಿತಮ್ ।
ಕಲ್ಪಯಂತಿ ಹಿ ಮಾಂ ವಿಪ್ರಾ ಅಥರ್ವಾಣವಿದಸ್ತಥಾ ॥೩೪॥

ಐದು ಕಲ್ಪಗಳಿಂದ, ಸಮಸ್ತ ಕೃತ್ಯಗಳಿಂದ ಕೂಡಿದ ಅಥರ್ವಣ ವೇದದಲ್ಲಿಯೂ ನನ್ನನ್ನೇ ವೇದಜ್ಞರು ಕೀರ್ತಿಸುತ್ತಾರೆ.

ಶಾಖಾಭೇದಾಶ್ಚ ಯೇ ಕೇಚಿದ್ ಯಾಶ್ಚ ಶಾಖಾಸು ಗೀತಯಃ ।
ಸ್ವರವರ್ಣಸಮುಚ್ಚಾರಾಃ ಸರ್ವಾಂಸ್ತಾನ್ ವಿದ್ಧಿ ಮತ್ಕೃತಾನ್ ॥೩೫॥

ಸಮಸ್ತ ವೇದಗಳು, ಅದರ ಭಿನ್ನ ಭಿನ್ನ ಶಾಖೆಗಳು, ಶಾಖೆಯಲ್ಲಡಗಿದ ಗೀತೆಗಳು, ಆ ಗೀತೆಯಲ್ಲಿರುವ ಸ್ವರೂಪಭೇದಗಳು, ವರ್ಣಉಚ್ಚಾರಣ ವಿದ್ಯೆಗಳು ಎಲ್ಲವೂ ನನ್ನಿಂದಲೇ ಉಂಟಾದವು ಎಂದು ತಿಳಿ.

ಯತ್ ತದ್ಧಯಶಿರಃ ಪಾರ್ಥ ಸಮುದೇತಿ ವರಪ್ರದಮ್ ।
ಸೋಽಹಮೇವೋತ್ತರೇ ಭಾಗೇ ಕ್ರಮಾಕ್ಷರವಿಭಾಗವಿತ್ ॥೩೬॥

ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಯಂತೆ ವರಪ್ರದನಾದ, ವೇದಗಳ ಕ್ರಮದಲ್ಲಿ ಅಕ್ಷರಗಳ ಕ್ರಮವನ್ನು ತಿಳಿದವನಾದ, ಉತ್ತರದಿಕ್ಕಿನ ಪಾರ್ಶ್ವದಲ್ಲಿರುವ ಹಯಗ್ರೀವನೆಂಬುವನು ನಾನೇ.

ರಾಮಾದೇಶಿತಮಾರ್ಗೇಣ ಮತ್ಪ್ರಸಾದಾನ್ಮಹಾತ್ಮನಾ ।
ಪಾಂಚಾಲೇನ ಕ್ರಮಃ ಪ್ರಾಪ್ತಸ್ತಸ್ಮಾದ್ಭೂತಾತ್ ಸನಾತನಾತ್ ।
ಬಾಭ್ರವ್ಯಗೋತ್ರಃ ಸ ಬಭೌ ಪ್ರಥಮಃ ಕ್ರಮಪಾರಗಃ ॥೩೭॥

ರಾಮದೇವರಿಂದ ಉಪದೇಶಿಸಲ್ಪಟ್ಟ ಮಾರ್ಗದಲ್ಲಿ ಪಾಂಚಾಲಮುನಿಯು ನನ್ನ ಅನುಗ್ರಹದಿಂದ ಆ ಹಯಗ್ರೀವರೂಪದಿಂದಲೇ ವೇದಕ್ರಮದ ಪಾಠವನ್ನು ತಿಳಿದುಕೊಂಡನು. ಬಾಭ್ರವ್ಯಗೋತ್ರದ ಆ ಮುನಿಯೇ ಮೊಟ್ಟ ಮೊದಲು ಕ್ರಮ ಪಾಠವನ್ನು ತಿಳಿದವನು.

ನಾರಾಯಣಾದ್ ವರಂ ಲಬ್ಧ್ವಾ ಪ್ರಾಪ್ಯ ಯೋಗಮನುತ್ತಮಮ್ ।
ಕ್ರಮಂ ಪ್ರಣೀಯ ಶಿಕ್ಷಾಂ ಚ ಪ್ರಣಯಿತ್ವಾ ಸ ಗಾಲವಃ ॥೩೮॥

ಬಳಿಕ ಗಾಲವ ಋಷಿಯು ನಾರಾಯಣನ ವರದಿಂದ ಉತ್ತಮ ಯೋಗಸಿದ್ಧಿಯನ್ನು ಪಡೆದು ಕ್ರಮಪಾಠವನ್ನು, ವೇದಶಿಕ್ಷೆಯನ್ನು ಅಭ್ಯಸಿಸಿ ಅದರಲ್ಲಿ ಪಾರಂಗತನೆನಿಸಿದನು.

ಪುಂಡರೀಕೋಽಥ ರಾಜಾ ಚ ಬ್ರಹ್ಮದತ್ತಃ ಪ್ರತಾಪವಾನ್ ।
ಜಾತೀಮರಣಜಂ ದುಃಖಂ ಸ್ಮೃತ್ವಾ ಸ್ಮೃತ್ವಾ ಪುನಃ ಪುನಃ ।
ಸಪ್ತಜಾತಿಷು ಮುಖ್ಯತ್ವಾದ್ಯೋಗಾನಾಂ ಸಂಪದಂ ಗತಃ ॥೩೯॥

ಬಳಿಕ ಪುಂಡರೀಕ ಎಂಬ ರಾಜನು ಪ್ರತಾಪಶಾಲಿಯಾದ ಬ್ರಹ್ಮದತ್ತನೆಂದು ಖ್ಯಾತನಾಗಿದ್ದನು. ಅವನು ಜನನ-ಮರಣದಿಂದ ಉಂಟಾದ ದುಃಖವನ್ನು ಕ್ಷಣಕ್ಷಣಕ್ಕೂ

ಚಿಂತಿಸಿ, ಯೋಗಿಗಳು ಏಳು ಜನ್ಮಗಳಿಂದ ಪಡೆಯುವಂತಹ ಸಂಪತ್ತನ್ನು ನನ್ನ ಪ್ರಸಾದದಿಂದ ಹೊಂದಿದನು.

ಪುರಾಹಮಾತ್ಮಜಃ ಪಾರ್ಥ ಪ್ರಥಿತಃ ಕಾರಣಾಂತರೇ ।
ಧರ್ಮಸ್ಯ ಕುರುಶಾರ್ದೂಲ ತತೋಽಹಂ ಧರ್ಮಜಃ ಸ್ಮೃತಃ ॥೪೦॥

ಅರ್ಜುನನೇ, ಹಿಂದೆ ನಾನು ಯಾವುದೋ ಒಂದು ಕಾರಣದಿಂದ ಧರ್ಮನ ಪುತ್ರನಾಗಿ ಅವತರಿಸಿದೆ. ಇದರಿಂದ ನಾನು ಧರ್ಮಜನೆನಿಸಿದ್ದೇನೆ.

ನರನಾರಾಯಣೌ ಪೂರ್ವಂ ತಪಸ್ತೇಪತುರವ್ಯಯಮ್ ।
ಧರ್ಮಯಾನಂ ಸಮಾರೂಢೌ ಪರ್ವತೇ ಗಂಧಮಾದನೇ ॥೪೧॥

ನಾನು ನರ-ನಾರಾಯಣ ಎಂದು ಎರಡು ರೂಪದಿಂದ ವೈದಿಕ ಸತ್ಕರ್ಮಾನುಷ್ಠಾನಕ್ಕೆ ಉಪಯುಕ್ತವಾದ ಧರ್ಮದ ವಾಹನವನ್ನು ಏರಿ ಅದೇ ರೂಪದಿಂದ ಗಂಧಮಾದನದಲ್ಲಿ ತಪಸ್ಸನ್ನು ಮಾಡಿದೆನು.

ತತ್ಕಾಲಸಮಯಂ ಚೈವ ದಕ್ಷಯಜ್ಞೋ ಬಭೂವ ಹ ।
ನ ಚೈವಾಕಲ್ಪಯದ್ಭಾಗಂ ದಕ್ಷೋ ರುದ್ರಸ್ಯ ಭಾರತ ॥೪೨॥

ಆ ಪ್ರಸಂಗದಲ್ಲಿ ದಕ್ಷಪ್ರಜಾಪತಿಯ ಮಹಾಯಜ್ಞವು ನಡೆಯುತ್ತಿತ್ತು. ದಕ್ಷ ಪ್ರಜಾಪತಿಯು ಆ ಯಜ್ಞದಲ್ಲಿ ರುದ್ರದೇವನಿಗೆ ಹವಿರ್ಭಾಗವನ್ನು ನೀಡಲಿಲ್ಲ.

ತತೋ ದಧೀಚಿವಚನಾದ್ ದಕ್ಷಯಜ್ಞಮಪಾಹರತ್ ।
ಸಸರ್ಜ ಶೂಲಂ ಕ್ರೋಧೇನ ಪ್ರಜ್ವಲಂತಂ ಮುಹುರ್ಮುಹುಃ ॥೪೩॥

ಆ ಪ್ರಸಂಗದಲ್ಲಿ ದಧೀಚಿಯ ಪ್ರೇರಣೆಯಂತೆ ರುದ್ರದೇವನು ಯಜ್ಞವನ್ನು ನಾಶಗೊಳಿಸಿದನು. ಆ ಯಜ್ಞನಾಶಕ್ಕಾಗಿ ರುದ್ರನು ಪ್ರಯೋಗಿಸಿದ ಶೂಲವು ರುದ್ರದೇವನ ಕ್ರೋಧದಿಂದ ಹೆಜ್ಜೆ ಹೆಜ್ಜೆಗೂ ಪ್ರಜ್ವಲಿಸುತ್ತಿತ್ತು.

ತಚ್ಛೂಲಂ ಭಸ್ಮಸಾತ್ಕೃತ್ವಾ ದಕ್ಷಯಜ್ಞಂ ಸವಿಸ್ತರಮ್ ।
ಆವಯೋಃ ಸಹಸಾಗಚ್ಛದ್ ಬದರ್ಯಾಶ್ರಮಮಂತಿಕಾತ್ ।
ವೇಗೇನ ಮಹತಾ ಪಾರ್ಥ ಪತನ್ನಾರಾಯಣೋರಸಿ ॥೪೪॥

ಆ ಪ್ರಜ್ವಲಿಸುವ ಶೂಲವು ದಕ್ಷಯಜ್ಞವನ್ನು ಸಮಗ್ರವಾಗಿ ಭಸ್ಮ ಮಾಡಿ, ಬದರಿಕಾಶ್ರಮದಲ್ಲಿ ನರ-ನಾರಾಯಣರಾಗಿ ನಾವು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಆಗಮಿಸಿತು. ಆ ಶೂಲದ ಮಹಾವೇಗವು ನಾರಾಯಣ ವಕ್ಷಸ್ಥಲದಲ್ಲಿಯೇ ಪತನ ಹೊಂದಿತು.

ತತಃ ಸ್ವತೇಜಸಾವಿಷ್ಟಾಃ ಕೇಶಾ ನಾರಾಯಣಸ್ಯ ಹ ।
ಬಭೂವುರ್ಮುಂಜವರ್ಣಾಸ್ತು ತತೋಽಹಂ ಮುಂಜಕೇಶವಾನ್ ॥೪೫॥

ಆ ಶೂಲದ ತೇಜಸ್ಸಿನಿಂದ ನಾರಾಯಣನ ಕೇಶಗಳು ಆವೃತವಾಗಿ ಮುಂಜ ಎಂಬ ಬಣ್ಣಕ್ಕೆ ತಿರುಗಿದವು. ಇದರಿಂದ ನನಗೆ ಮುಂಜಕೇಶ ಎಂಬ ಹೆಸರುಂಟಾಯಿತು.

ತಚ್ಚ ಶೂಲಂ ವಿನಿರ್ಧೂತಂ ಹುಂಕಾರೇಣ ಮಹಾತ್ಮನಾ ।
ಜಗಾಮ ಶಂಕರಕರಂ ನಾರಾಯಣಸಮಾಹತಮ್ ॥೪೬॥

ಬಳಿಕ ಆ ಶೂಲವನ್ನು ಕಂಡು ನಾರಾಯಣನಾದ ನಾನು ಹೂಂಕಾರ ಮಾಡಿದೆನು. ಕೂಡಲೇ ಅದು ಹಾರಿ ಪುನಃ ಶಂಕರನ ಕೈಯಲ್ಲಿ ಸೇರಿಕೊಂಡಿತು.

ಅಥ ರುದ್ರ ಉಪಾಧಾವತ್ತಾವೃಷೀ ತಪಸಾನ್ವಿತೌ ।
ತತ ಏನಂ ಸಮುದ್ಧೂತಂ ಕಂಠೇ ಜಗ್ರಾಹ ಪಾಣಿನಾ ।
ನಾರಾಯಣಃ ಸ ವಿಶ್ವಾತ್ಮಾ ತೇನಾಸ್ಯ ಶಿತಿಕಂಠತಾ ॥೪೭॥

ಆ ಸಮಯದಲ್ಲಿ ರುದ್ರನು ಅದರ ವೇಗಕ್ಕೆ ಭಯಪಟ್ಟು ನರ-ನಾರಾಯಣರ ಬಳಿ ಆಗಮಿಸಿ ಶೂಲವು ಅವರ ಮೇಲೆ ಬೀಳುವುದರಲ್ಲಿ ನಾರಾಯಣನು ರುದ್ರನ ಕಂಠಕ್ಕೆ ಕೈಕೊಟ್ಟು ಬಲವಾಗಿ ಹಿಡಿದನು. ಆ ಹಿಡಿತದಿಂದ ರುದ್ರನ ಕಂಠವು ನೀಲಿಯಾಗಿ ಶಿತಿಕಂಠನೆನಿಸಿದನು.

ಅಥ ರುದ್ರವಿಘಾತಾರ್ಥಮಿಷೀಕಾಂ ಜಗೃಹೇ ನರಃ ।
ಮಂತ್ರೈಶ್ಚ ಸಂಯುಯೋಜಾಶು ಸೋಽಭವತ್ ಪರಶುರ್ಮಹಾನ್ ॥

ಬಳಿಕ ನರನು ರುದ್ರನನ್ನು ತಡೆಯಲು ಒಂದು ಇಷೀಕಾ ಎಂಬ ಹುಲ್ಲನ್ನು ಎತ್ತಿಕೊಂಡು ಅಭಿಮಂತ್ರಿಸಲು ಆ ಹುಲ್ಲೇ ಒಂದು ದೊಡ್ಡ ಪರಶುವಿನಂತಾಯಿತು.

ಕ್ಷಿಪ್ತಶ್ಚ ಸಹಸಾ ರುದ್ರೇ ಖಂಡನಂ ಪ್ರಾಪ್ತವಾಂಸ್ತದಾ ।
ತತೋಽಹಂ ಖಂಡಪರಶುಃ ಸ್ಮೃತಃ ಪರಶುಖಂಡನಾತ್ ॥೪೯॥

ರುದ್ರನ ಮೇಲೆ ಆ ಪರಶುವನ್ನು ಎಸೆದ ಬಳಿಕ, ರುದ್ರನ ಕೈಯಲ್ಲಿರುವಂತಹ ಪರಶುವೇ ನರನು ಪ್ರಯೋಗಿಸಿದ ಇಷೀಕಾ ಎಂಬ ಪರಶುವಿನಿಂದ ತುಂಡಾಯಿತು. ಯಾವ ರುದ್ರನ ಪರಶುವನ್ನು ನರರೂಪದಿಂದ ಖಂಡಿಸಿದೆನೋ ಆದ್ದರಿಂದ ನಾನೂ ಖಂಡಪರಶು ಎಂದು ಪ್ರಸಿದ್ಧನಾದೆನು.

ವ್ಯಾಖ್ಯಾನ ವಿಶೇಷ– 'ಖಂಡಿತಃ ಪರಶುಃ ಯೇನ ಸಃ ಖಂಡಪರಶುಃ'.

ಅರ್ಜುನಃ

ಅಸ್ಮಿನ್ ಯುದ್ಧೇ ತು ವಾರ್ಷ್ಣೇಯ ತ್ರೈಲೋಕ್ಯಮಥನೇ ತದಾ ।
ಜಯಂ ಕಃ ಪ್ರಾಪ್ತವಾಂಸ್ತತ್ರ ಶಂಸೈತನ್ಮೇ ಜನಾರ್ದನ ॥೫೦॥

ಅರ್ಜುನ– ಕೃಷ್ಣನೇ, ತ್ರೈಲೋಕ್ಯವಿನಾಶಕವಾದ ರುದ್ರ-ನಾರಾಯಣರ ಯುದ್ಧದಲ್ಲಿ ಯಾರು ಜಯವನ್ನು ಹೊಂದಿದರು? ಇದನ್ನು ನನಗೆ ಹೇಳು.

ಶ್ರೀಭಗವಾನ್

ತಯೋಃ ಸಂಲಗ್ನಯೋರ್ಯುದ್ಧೇ ರುದ್ರನಾರಾಯಣಾತ್ಮನೋಃ ।
ಉದ್ವಿಗ್ನಾಃ ಸಹಸಾ ಕೃತ್ಸ್ನಾ ಲೋಕಾಃ ಸರ್ವೇಽಭವಂಸ್ತದಾ ॥೫೧॥

ನಾಗೃಹ್ಣಾತ್ ಪಾವಕಃ ಶುಭ್ರಂ ಮಖೇಷು ಸುಹುತಂ ಹವಿಃ ।
ವೇದಾ ನ ಪ್ರತಿಭಾಂತಿ ಸ್ಮ ಋಷೀಣಾಂ ಭಾವಿತಾತ್ಮನಾಮ್ ॥೫೨॥

ಶ್ರೀಭಗವಾನ್– ಅರ್ಜುನನೇ ಕೇಳು. ಆ ಯುದ್ಧದಲ್ಲಿ ಲೋಕವೆಲ್ಲವೂ ಉದ್ವಿಗ್ನವಾಯಿತು. ಯಜ್ಞದಲ್ಲಿ ಹೋಮ ಮಾಡಿದ ಶುದ್ಧವಾದ ಹವಿಸ್ಸನ್ನು ಅಗ್ನಿಯು ಸ್ವೀಕರಿಸಲಿಲ್ಲ. ಋಷಿಗಳಿಗೆ ವೇದಮಂತ್ರಗಳು ತೋರಲಿಲ್ಲ.

ದೇವಾನ್ರಜಸ್ತಮಶ್ಚೈವ ಸಮಾವಿವಿಶತುಸ್ತದಾ ।
ವಸುಧಾ ಸಂಚಕಂಪೇಽಥ ನಭಶ್ಚ ವಿಪಫಾಲ ಹ ॥೫೩॥

ದೇವತೆಗಳಲ್ಲಿ ರಜಸ್ಸು, ತಮಸ್ಸು ಗುಣಗಳು ಆವರಿಸಿದವು. ಭೂಮಿಯು ಕಂಪಿಸಿತು. ಆಕಾಶವೇ ಭೇದಿಸಿತು.

ನಿಷ್ಪ್ರಭಾಣಿ ಚ ತೇಜಾಂಸಿ ಬ್ರಹ್ಮಾ ಚೈವಾಸನಾಚ್ಚ್ಯುತಃ ।
ಅಗಾಚ್ಛೋಷಂ ಸಮುದ್ರಶ್ಚ ಹಿಮವಾಂಶ್ಚ ವ್ಯಶೀರ್ಯತ ॥೫೪॥

ಸೂರ್ಯಾದಿ ಜ್ಯೋತಿಗಳು ಕಾಂತಿ ಕಳೆದುಕೊಂಡವು. ಬ್ರಹ್ಮನು ಪೀಠದಿಂದ ಜಾರಿ ಬಿದ್ದನು. ಸಮುದ್ರಗಳು ಒಣಗಿ ಹೋದವು. ಹಿಮಾಲಯವೂ ಭೇದಿಸಿತು.

ತಸ್ಮಿನ್ನೇವಂ ಸಮುತ್ಪನ್ನೇ ನಿಮಿತ್ತೇ ಪಾಂಡುನಂದನ ।
ಬ್ರಹ್ಮಾ ವೃತೋ ದೇವಗಣೈರ್ಋಷಿಭಿಶ್ಚ ಮಹಾತ್ಮಭಿಃ ।
ಆಜಗಾಮಾಶು ತಂ ದೇಶಂ ಯತ್ರ ಯುದ್ಧಮವರ್ತತ ॥೫೫॥

ಇಂತಹ ಅನರ್ಥವನ್ನು ಕಂಡು ಬ್ರಹ್ಮನು ದೇವತೆಗಳ ಜೊತೆ, ಋಷಿಗಳ ಜೊತೆ ಸೇರಿಕೊಂಡು ಆ ಯುದ್ಧಸ್ಥಳಕ್ಕೆ ವೇಗವಾಗಿ ಬಂದು ರುದ್ರನ ಮುಂದೆ ನಿಂತನು.

ಸಾಂಜಲಿಂಪ್ರಗ್ರಹೋ ಭೂತ್ವಾ ಚತುರ್ವಕ್ತ್ರೋ ನಿರುಕ್ತಗಃ ।
ಉವಾಚ ವಚನಂ ರುದ್ರಂ ಲೋಕಾನಾಮಸ್ತು ವೈ ಶಿವಮ್ ।
ನ್ಯಸ್ಯಾಯುಧಾನಿ ವಿಶ್ವೇಶ ಜಗತೋ ಹಿತಕಾಮ್ಯಯಾ ॥೫೬॥

ಆ ಯುದ್ಧದ ನಡುವೆ ಕೈಮುಗಿದು ನಿಂತ ಚತುರ್ಮುಖ ಬ್ರಹ್ಮನು- 'ಲೋಕೇಶ್ವರನೇ, ಜಗತ್ತಿಗೆ ಮಂಗಳವಾಗಲಿ. ನಿನ್ನ ಆಯುಧವನ್ನು ಕೆಳಕ್ಕಿಳಿಸು. ಜಗತ್ತಿಗೆ ಹಿತವನ್ನುಂಟು ಮಾಡು'.

ಯದಕ್ಷರಮಥಾವ್ಯಕ್ತಮೀಶಂ ಲೋಕಸ್ಯ ಭಾವನಮ್ ।
ಕೂಟಸ್ಥಂ ಕರ್ತೃನಿರ್ದ್ವಂದ್ವಮಕರ್ತೇತಿ ಚ ಯಂ ವಿದುಃ ॥೫೭॥

ವ್ಯಕ್ತಿಭಾವಗತಸ್ಯಾಸ್ಯ ಏಕಾ ಮೂರ್ತಿರಿಯಂ ಶಿವಾ ।
ನರೋ ನಾರಾಯಣಶ್ಚೈವ ಜಾತೌ ಧರ್ಮಕುಲೋದ್ವಹೌ ॥೫೮॥

ಯಾವುದು ಅಕ್ಷರವೋ, ಅವ್ಯಕ್ತವೋ, ಲೋಕನಿಯಾಮಕವೋ, ಲೋಕಜನಕವೋ, ಕೂಟಸ್ಥವೋ, ಕರ್ತೃವೋ, ಅಕರ್ತೃವೋ, ದ್ವಂದ್ವರಹಿತವೋ ಅಂತಹ ಪರಮವಸ್ತುವೇ ಎರಡು ರೂಪದಿಂದ ನರ-ನಾರಾಯಣ ಎಂಬುದಾಗಿ ಧರ್ಮಕುಲವನ್ನು ಉದ್ಧರಿಸಲು ಅವತರಿಸಿದೆ.

ತಪಸಾ ಮಹತಾ ಯುಕ್ತೌ ದೇವಶ್ರೇಷ್ಠೌ ಮಹಾವ್ರತೌ ।
ಅಹಂ ಪ್ರಸಾದಜಸ್ತಸ್ಯ ಕಸ್ಮಿಂಶ್ಚಿತ್ ಕಾರಣಾಂತರೇ ।
ತ್ವಂ ಚೈವ ಕ್ರೋಧಜಸ್ತಾತ ಪೂರ್ವಸರ್ಗೇ ಸನಾತನಃ ॥೫೯॥

ಇಬ್ಬರೂ ಮಹತ್ತಾದ ತಪಸ್ಸಿನಿಂದ ಕೂಡಿದ್ದಾರೆ. ಮಹಾಮತಿಗಳು, ದೇವಶ್ರೇಷ್ಠರು, ಅವನ ಅನುಗ್ರಹದಿಂದಲೇ ನಾನು ಹುಟ್ಟಿದ್ದೇನೆ. ಯಾವುದೋ ಕಾರಣಾಂತರದಿಂದ ನೀನು ಕ್ರೋಧದಿಂದಲೇ ಉತ್ಪನ್ನನಾಗಿರುವಿ. ಹಿಂದಿನ ಸೃಷ್ಟಿಯಲ್ಲಿ ಸನಾತನನಾದ ನಿನ್ನ ಸೃಷ್ಟಿಯೂ ಅವನಿಂದಲೇ ಆಗಿದೆ.

ಮಯಾ ಚ ಸಾರ್ಧಂ ವರದಂ ವಿಬುಧೈಶ್ಚ ಮಹರ್ಷಿಭಿಃ ।
ಪ್ರಸಾದಯಾಶು ಲೋಕಾನಾಂ ಶಾಂತಿರ್ಭವತು ಮಾಚಿರಮ್ ॥೬೦॥

ಆದ್ದರಿಂದ ನೀನು ಈಗ ನಮ್ಮೆಲ್ಲರ ಜೊತೆ ಸೇರಿ, ವ್ಯಕ್ತಸ್ವರೂಪದಿಂದಿರುವ ಪರಿಪೂರ್ಣನಾದ ಭಗವಂತನನ್ನು ಶಾಂತಗೊಳಿಸು. ಜಗತ್ತಿಗೆಲ್ಲ ಶಾಂತಿಯುಂಟಾಗಲಿ. ವಿಳಂಬ ಮಾಡಬೇಡ ಎಂದು ಹೇಳಿದನು.

ಬ್ರಹ್ಮಣಾ ತ್ವೇವಮುಕ್ತಸ್ತು ರುದ್ರಃ ಕ್ರೋಧಾಗ್ನಿಮುತ್ಸೃಜನ್ ।
ಪ್ರಸಾದಯಾಮಾಸ ತತೋ ದೇವಂ ನಾರಾಯಣಂ ಪ್ರಭುಮ್ ।
ಶರಣಂ ಚ ಜಗಾಮಾದ್ಯಂ ವರೇಣ್ಯಂ ವರದಂ ಹರಿಮ್ ॥೬೧॥

ಬ್ರಹ್ಮನ ಮಾತಿನಂತೆ ರುದ್ರನು ಶಾಂತನಾಗಿ ನರ-ನಾರಾಯಣರನ್ನು ಪ್ರಸನ್ನೀಕರಿಸಲು ಹರಿಯಲ್ಲಿ ಕ್ಷಮೆ ಕೇಳಿದನು. ವರದನಾದ, ವರೇಂದ್ರನಾದ ಹರಿಯನ್ನೇ ಶರಣು ಹೊಕ್ಕನು.

ತತೋಽಥ ವರದೋ ದೇವೋ ಜಿತಕ್ರೋಧೋ ಜಿತೇಂದ್ರಿಯಃ ।
ಪ್ರೀತಿಮಾನಭವತ್ತತ್ರ ರುದ್ರೇಣ ಸಹ ಸಂಗತಃ ॥೬೨॥

ಬಳಿಕ ನಾರಾಯಣನು ಪ್ರಸನ್ನನಾಗಿ ರುದ್ರನ ಜೊತೆ ಸಮಾಧಾನದಿಂದ ವರ್ತಿಸುತ್ತಾ ಕ್ರೋಧವನ್ನು ಜಯಿಸಿ ಜಿತೇಂದ್ರಿಯನಾಗಿದ್ದ ಭಗವಂತನು ಪ್ರೀತಿಯನ್ನು ಹೊಂದಿದನು.

ಋಷಿಭಿರ್ಬ್ರಹ್ಮಣಾ ಚೈವ ವಿಬುಧೈಶ್ಚ ಸುಪೂಜಿತಃ ।
ಉವಾಚ ದೇವಮೀಶಾನಮೀಶಃ ಸ ಜಗತೋ ಹರಿಃ ॥೬೩॥

ಋಷಿಗಳಿಂದ, ಬ್ರಹ್ಮನಿಂದ, ಜ್ಞಾನಿಗಳಿಂದ ಪೂಜಿತನಾದ ಭಗವಂತನು ಜಗತ್ತಿಗೆ ಸ್ವಾಮಿಯಾಗಿದ್ದು ರುದ್ರನನ್ನು ಕುರಿತು ಹೀಗೆ ಹೇಳಿದನು.

ಯಸ್ತಾ ತ್ವಂ ವೇತ್ತಿ ಸ ಮಾಂ ವೇತ್ತಿ ಯಸ್ತಾ ತ್ವಮನು ಸ ಮಾಮನು ।
ನಾವಯೋರಂತರಂ ಕಿಂಚಿನ್ಮಾ ತೇ ಭೂದ್ ಬುದ್ಧಿರನ್ಯಥಾ ॥೬೪॥

'ರುದ್ರದೇವನೇ, ಯಾರು ನಿನ್ನನ್ನು ತಿಳಿದಿರುತ್ತಾರೋ ಅವರು ನನ್ನನ್ನು ತಿಳಿದಿರುತ್ತಾರೆ. ಯಾರು ನಿನ್ನನ್ನು ಅನುಸರಿಸುತ್ತಾರೋ ಅವರು ನನ್ನನ್ನೂ ಅನುಸರಿಸುತ್ತಾರೆ. ನಮ್ಮಿಬ್ಬರಲ್ಲಿ ಸ್ವಲ್ಪ ಅಂತರವೂ ಇರುವುದಿಲ್ಲ, ಬಹಳವಾದ ಅಂತರವೇ ಇದೆ. ನೀನು ತಪ್ಪಾದ ಭಾವನೆಯಿಂದ ನನ್ನ ಬಳಿ ಯುದ್ಧಕ್ಕೆ ಆಗಮಿಸಿರುವಿ.

ಅದ್ಯ ಪ್ರಭೃತಿ ಶ್ರೀವತ್ಸಃ ಶೂಲಾಂಕೋಽಯಂ ಭವತ್ವಯಮ್ ।
ಮಮ ಪಾಣ್ಯಂಕಿತಶ್ಚಾಪಿ ಶ್ರೀಕಂಠಸ್ತ್ವಂ ಭವಿಷ್ಯಸಿ ॥೬೫॥

ಇಂದಿನಿಂದ ನನ್ನ ಎದೆಯಲ್ಲಿ ನೀನು ಎಸೆದ ಶೂಲದ ಚಿಹ್ನೆಯು ಶ್ರೀವತ್ಸವೆಂಬ ಲಾಂಛನವಾಗಲಿ. ನನ್ನ ಕೈಯಿಂದ ಒತ್ತಲ್ಪಟ್ಟ ನಿನ್ನ ಕಂಠದಿಂದ ನಿನ್ನ ಕಂಠವು ಮುಂದೆ ಶ್ರೀಕಂಠವೆನಿಸಲಿ.

ಏವಂ ಲಕ್ಷಣಮುತ್ಪಾದ್ಯ ಪರಸ್ಪರಕೃತಂ ತದಾ ।
ಸಖ್ಯಂ ಚೈವಾತುಲಂ ಕೃತ್ವಾ ರುದ್ರೇಣ ಸಹಿತಾವೃಷೀ ।
ತಪಸ್ತೇಪತುರವ್ಯಗ್ರೌ ವಿಸೃಜ್ಯ ತ್ರಿದಿವೌಕಸಃ ॥೬೬॥

ಹೀಗೆ ನರ-ನಾರಾಯಣರು ತಮ್ಮಲ್ಲುಂಟಾದ ಚಿಹ್ನೆಗಳನ್ನು ಸಖ್ಯದಿಂದಲೇ ಲಕ್ಷ್ಯಗಳನ್ನಾಗಿ ಮಾಡಿಕೊಂಡು ಅತುಲವಾದ ಸ್ನೇಹವನ್ನು ಬೆಳೆಸಿ ನರ-ನಾರಾಯಣರು ರುದ್ರನ ಜೊತೆಗೆ ಸೇರಿದರು. ದೇವತೆಗಳನ್ನು ತೊರೆದು ಪುನಃ ಅವ್ಯಗ್ರವಾದ ಮನಸ್ಸಿನಿಂದ ತಪಸ್ಸನ್ನಾಚರಿಸಿದರು.

ಏಷ ತೇ ಕಥಿತಃ ಪಾರ್ಥ ನಾರಾಯಣಜಯೋ ಮೃಧೇ ।
ನಾಮಾನಿ ಚೈವ ಗುಹ್ಯಾನಿ ನಿರುಕ್ತಾನಿ ಚ ಭಾರತ ।
ಋಷಿಭಿಃ ಕಥಿತಾನೀಹ ಯಾನಿ ಸಂಕೀರ್ತಿತಾನಿ ತೇ ॥೬೭॥

ಅರ್ಜುನನೇ, ನಿನಗೆ ಯುದ್ಧದಲ್ಲಿ ನಾರಾಯಣನ ಜಯವನ್ನು ಹೇಳಿದ್ದೇನೆ. ಗುಹ್ಯವಾದ ನಾಮಗಳನ್ನೂ, ಅದರ ನಿರ್ವಚನಗಳನ್ನೂ, ಋಷಿಗಳಿಂದ ಕೀರ್ತಿಸಲ್ಪಡುವ ಮಹಿಮೆಗಳನ್ನೂ ನಿನಗೆ ಹೇಳಿದ್ದೇನೆ.

ಏವಂ ಬಹುವಿಧೈ ರೂಪೈಶ್ಚರಾಮೀಹ ವಸುಂಧರಾಮ್ ।
ಬ್ರಹ್ಮಲೋಕಂ ಚ ಕೌಂತೇಯ ಗೋಲೋಕಂ ಚ ಸನಾತನಮ್ ।
ಮಯಾ ತ್ವಂ ರಕ್ಷಿತೋ ಯುದ್ಧೇ ಮಹಾಂತಂ ಪ್ರಾಪ್ತವಾನ್ಜಯಮ್ ॥

ಹೀಗೆ ನಾನು ಅನೇಕ ರೂಪಗಳಿಂದ ಈ ಭೂಮಿಯಲ್ಲಿ ಸಂಚರಿಸುತ್ತೇನೆ. ಭೂಲೋಕ, ಬ್ರಹ್ಮಲೋಕ, ಗೋಲೋಕಗಳನ್ನೆಲ್ಲ ಸಂಚರಿಸುತ್ತಿದ್ದೇನೆ. ನಾನು ನಿನ್ನನ್ನು ರಕ್ಷಿಸಿದ್ದರಿಂದಲೇ ಮಹತ್ತರವಾದ ಜಯವನ್ನು ನೀನು ಹೊಂದಿರುತ್ತಿ.

ಯಸ್ತು ತೇ ಸೋಗ್ರತೋ ಯಾತಿ ಯುದ್ಧೇ ಸಂಪ್ರತ್ಯುಪಸ್ಥಿತೇ ।
ತಂ ವಿದ್ಧಿ ರುದ್ರಂ ಕೌಂತೇಯ ದೇವದೇವಂ ಕಪರ್ದಿನಮ್ ॥೬೯॥

ಈಗ ಯುದ್ಧವು ಪ್ರಾಪ್ತವಾಗಲು ನಿನ್ನ ಮುಂದೆ ಹೋಗುತ್ತಿರುವವನು ಆ ರುದ್ರನೇ. ಅವನನ್ನು ಕಪರ್ದಿ ಎಂದು, ದೇವದೇವನೆಂದು, ರುದ್ರನೆಂದು ತಿಳಿದುಕೊ.

ಕಾಲಃ ಸ ಏವ ಕಥಿತಃ ಕ್ರೋಧಜೇತಿ ಮಯಾ ತವ ।
ನಿಹತಾಂಸ್ತೇನ ವೈ ಪೂರ್ವಂ ಹತವಾನಸಿ ವೈ ರಿಪೂನ್ ॥೭೦॥

ಆ ರುದ್ರನೇ ಕಾಲನೆನಿಸಿದ್ದಾನೆ. ನನ್ನ ಕ್ರೋಧದಿಂದ ಉತ್ಪನ್ನನಾಗಿದ್ದಾನೆ. ಮೊದಲು ಅವನು ನಿನ್ನ ಶತ್ರುಗಳನ್ನು ಕೊಂದಬಳಿಕ ಅವರನ್ನು ನೀನು ಕೊಲ್ಲುತ್ತಿ ಎಂದು ತಿಳಿ.

ಅಪ್ರಮೇಯಪ್ರಭಾವಂ ತಂ ದೇವದೇವಮುಮಾಪತಿಮ್ ।
ನಮಸ್ವ ದೇವಂ ಪ್ರಯತೋ ವಿಶ್ವೇಶಂ ಹರಮವ್ಯಯಮ್ ॥೭೧॥

ಅಪ್ರಮೇಯವಾದ ಪ್ರಭಾವವುಳ್ಳ, ದೇವದೇವನಾದ ಉಮಾಪತಿಯನ್ನು, ವಿಶ್ವೇಶನನ್ನು, ಅವ್ಯಯನಾದ ಹರನನ್ನು ಜಿತೇಂದ್ರಿಯನಾಗಿ ನೀನು ನಮಸ್ಕರಿಸು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತಾರನೆಯ ಅಧ್ಯಾಯ

ನಾರದರು ಶ್ವೇತದ್ವೀಪಕ್ಕೆ ತೆರಳಿ ನರ-ನಾರಾಯಣರನ್ನು ದರ್ಶನ ಮಾಡಿದುದು. ಶ್ವೇತದ್ವೀಪದ ಮಹಿಮೆ.

ಜನಮೇಜಯಃ

ಬ್ರಹ್ಮನ್ ಸುಮಹದಾಖ್ಯಾನಂ ಭವತಾ ಪರಿಕೀರ್ತಿತಮ್ ।
ಯಚ್ಛ್ರುತ್ವಾ ಮುನಯಃ ಸರ್ವೇ ವಿಸ್ಮಯಂ ಪರಮಂ ಗತಾಃ ॥೧॥

ಜನಮೇಜಯ– ಪೂಜ್ಯರೇ, ನರ-ನಾರಾಯಣರ ಮಹಿಮೆಯನ್ನು ತಿಳಿಸುವ ಶ್ರೇಷ್ಠವಾದ ಆಖ್ಯಾನವನ್ನು ನೀವು ನಮಗೆ ತಿಳಿಸಿದ್ದೀರಿ. ಇದನ್ನು ಕೇಳಿ ಎಲ್ಲ ಮುನಿಗಳು ಆಶ್ಚರ್ಯ ಹೊಂದಿದ್ದಾರೆ.

ಇದಂ ಶತಸಹಸ್ರಾದ್ಧಿ ಭಾರತಾಖ್ಯಾನವಿಸ್ತರಾತ್ ।
ಆಮಥ್ಯ ಮತಿಮನ್ಥೇನ ಜ್ಞಾನೋದಧಿಮನುತ್ತಮಮ್ ॥೨॥

ಒಂದು ಲಕ್ಷ ಶ್ಲೋಕಗಳಿಂದ ಅಧಿಕವಾಗಿ ವಿಸ್ತಾರವಾಗಿರುವ ಭಾರತಾಖ್ಯಾನವನ್ನು ಚೆನ್ನಾಗಿ ಮಥನ ಮಾಡಿ ಹೊರತೆಗೆದು ಹೇಳುತ್ತಿರುವ ನಿಮ್ಮ ಕಥಾ ಸಮುದಾಯವು ಬುದ್ಧಿ ಎಂಬ ಕಡೆಗೋಲಿನಿಂದ ಹೊರತೆಗೆದ ಜ್ಞಾನವೆಂಬ ಸಮುದ್ರದ ಅಮೃತದಂತಿದೆ.

ನವನೀತಂ ಯಥಾ ದಧ್ನೋ ಮಲಯಾಚ್ಚಂದನಂ ಯಥಾ ।
ಆರಣ್ಯಕಂ ಚ ವೇದೇಭ್ಯ ಓಷಧಿಭ್ಯೋऽಮೃತಂ ಯಥಾ ॥೩॥

ಸಮುದ್ಧೃತಮಿದಂ ಬ್ರಹ್ಮನ್ ಕಥಾಮೃತಮನುತ್ತಮಮ್ ।
ತಪೋನಿಧೇ ತ್ವಯೋಕ್ತಂ ಹಿ ನಾರಾಯಣಕಥಾಶ್ರಯಮ್ ॥೪॥

ಹೇಗೆ ಮೊಸರಿನಿಂದ ಬೆಣ್ಣೆಯನ್ನು ತೆಗೆಯುತ್ತಾರೋ, ಮಲಯ ಪರ್ವತದಿಂದ ಗಂಧವನ್ನು ಹೇಗೆ ತೆಗೆಯುತ್ತಾರೋ ಹಾಗೆ ವೇದಗಳಿಂದ ಉದ್ಧೃತವಾದ ಆರಣ್ಯಕದಂತೆ, ಓಷಧಿಗಳಿಂದ ಅಮೃತವನ್ನು ತೆಗೆಯುವಂತೆ ಅನುತ್ತಮವಾದ ಕಥಾಮೃತವನ್ನು ನೀವು ತೆಗೆದಿದ್ದೀರಿ. ತಪೋನಿಧಿಗಳೇ, ನಾರಾಯಣನ ಕಥೆಗಳಿಗೆ ಸಂಬಂಧಿಸಿದಂತೆ ನೀವು ವಿಚಾರಗಳನ್ನು ತಿಳಿಸಿರುತ್ತೀರಿ.

ಸ ಹೀಶೋ ಭಗವಾನ್ ದೇವಃ ಸರ್ವಭೂತಾತ್ಮಭಾವನಃ ।
ಅಹೋ ನಾರಾಯಣಂ ತೇಜೋ ದುರ್ದರ್ಶಂ ದ್ವಿಜಸತ್ತಮ ॥೫॥

ಸಮಸ್ತ ಜೀವರ ಅಂತರ್ಯಾಮಿಯಾದ ಭಗವಾನ್ ನಾರಾಯಣನೇ ಜಗತ್ತಿಗೆಲ್ಲ ಸ್ವಾಮಿಯು. ಬ್ರಾಹ್ಮಣಶ್ರೇಷ್ಠನೇ, ನಿಶ್ಚಿತವಾಗಿಯೂ ನಾರಾಯಣನ ತೇಜಸ್ಸನ್ನು ನೋಡಲು ಅಸಾಧ್ಯವಾದುದು.

ಯತ್ರಾವಿಶಂತಿ ಕಲ್ಪಾಂತೇ ಸರ್ವೇ ಬ್ರಹ್ಮಾದಯಃ ಸುರಾಃ ।
ಋಷಯಶ್ಚ ಸಗಂಧರ್ವಾ ಯಚ್ಚ ಕಿಂಚಿಚ್ಚರಾಚರಮ್ ।
ನ ತತೋಽಸ್ತಿ ಪರಂ ಮನ್ಯೇ ಪಾವನಂ ದಿವಿ ಚೇಹ ಚ ॥೬॥

ಕಲ್ಪದ ಕೊನೆಯಲ್ಲಿ ಬ್ರಹ್ಮಾದಿ ದೇವತೆಗಳು, ಗಂಧರ್ವ ಸಹಿತರಾದ ಋಷಿಗಳು, ಸ್ಥಾವರ-ಜಂಗಮಗಳು ನಾರಾಯಣನೆಂಬ ತೇಜಸ್ಸಿನಲ್ಲೇ ಲಯ ಹೊಂದುತ್ತಾರೆ. ಸ್ವರ್ಗ-ಭೂಮಿಗಳಲ್ಲಿ ಇವನಿಗಿಂತ ತೇಜಸ್ವಿಯಾದ, ಪವಿತ್ರವಾದ ತೇಜಸ್ಸು ಇಲ್ಲ ಎಂದು ನಾನು ತಿಳಿದಿದ್ದೇನೆ.

ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್ ।
ನ ತಥಾ ಫಲದಂ ಚಾಪಿ ನಾರಾಯಣಕಥಾ ಯಥಾ ॥೭॥

ಸಮಸ್ತ ಆಶ್ರಮಗಳನ್ನು ಹೊಂದಿ, ಸಮಸ್ತ ತೀರ್ಥಗಳಲ್ಲಿ ಅವಗಾಹನ ಸ್ನಾನ ಮಾಡಿದರೂ ನಾರಾಯಣ ಕಥೆಯಷ್ಟು ಫಲಪ್ರದವಾದ ಸತ್ಕರ್ಮಗಳು ಇರುವುದಿಲ್ಲ.

ಸರ್ವಥಾ ಪಾವಿತಾಃ ಸ್ಮೇಹ ಶ್ರುತ್ವೇಮಾಮಾದಿತಃ ಕಥಾಮ್ ।
ಹರೇರ್ವಿಶ್ವೇಶ್ವರಸ್ಯೇಹ ಸರ್ವಪಾಪಪ್ರಣಾಶನೀಮ್ ॥೮॥

ನಾರಾಯಣನ ಕಥೆಯು ಎಲ್ಲ ರೀತಿಯಾದ ಪಾಪವನ್ನು ಪರಿಹರಿಸಲು ಸಮರ್ಥವಾದುದು. ಮೊದಲಿನಿಂದಲೂ ಅವನ ಕಥೆಯನ್ನು ಕೇಳುತ್ತಿರುವ ನಾವು ಎಲ್ಲ ರೀತಿಯಲ್ಲೂ ಶುದ್ಧಿಯನ್ನು ಹೊಂದಿರುತ್ತೇವೆ.

ನ ಚಿತ್ರಂ ಕೃತವಾಂಸ್ತತ್ರ ಯದಾರ್ಯೋ ಮೇ ಧನಂಜಯಃ ।
ವಾಸುದೇವಸಹಾಯೋ ಯಃ ಪ್ರಾಪ್ತವಾನ್ ಜಯಮುತ್ತಮಮ್ ॥೯॥

ನನ್ನ ಪ್ರಪಿತಾಮಹನೆನಿಸಿದ ಧನಂಜಯನು ವಾಸುದೇವನ ಸಹಾಯವನ್ನು ಪಡೆದು ಉತ್ತಮವಾದ ಜಯವನ್ನು ಹೊಂದಿದನು. ಇದೇನೂ ಆಶ್ಚರ್ಯವಲ್ಲ. (ಅರ್ಜುನನು ಆಶ್ಚರ್ಯಕರವಾದ ಸಾಹಸವನ್ನೇನೂ ಮಾಡಿಲ್ಲ. ಭಗವಂತನ ಅನುಗ್ರಹದಿಂದಲೇ ಜಯ ಲಭಿಸಿತು ಎಂದು ಭಾವ).

ನ ಚಾಸ್ಯ ಕಿಂಚಿದಪ್ರಾಪ್ಯಂ ಮನ್ಯೇ ಲೋಕೇಷ್ವಪಿ ತ್ರಿಷು ।
ತ್ರೈಲೋಕ್ಯನಾಥೋ ವಿಷ್ಣುಃ ಸ ಯಸ್ಯಾಸೀತ್ ಸಾಹ್ಯಕೃತ್ ಸಖಾ ॥೧೦॥

ನನ್ನ ಪ್ರಪಿತಾಮಹನಾದ ಧನಂಜಯನಿಗೆ ತ್ರೈಲೋಕ್ಯಸ್ವಾಮಿಯಾದ ಕೃಷ್ಣನು ಸಹಾಯಕನಾದ್ದರಿಂದ ಮೂರುಲೋಕಗಳಲ್ಲಿಯೂ ಸಿಗದೇ ಇರುವ ಪದಾರ್ಥವು ಯಾವುದೂ ಇರಲಿಲ್ಲ ಎಂಬುದೇ ನನ್ನ ಭಾವವಾಗಿದೆ.

ಧನ್ಯಾಶ್ಚ ಸರ್ವ ಏವಾಸನ್ ಬ್ರಹ್ಮಂಸ್ತೇ ಮಮ ಪೂರ್ವಕಾಃ ।
ಹಿತಾಯ ಶ್ರೇಯಸೇ ಚೈವ ಯೇಷಾಮಾಸೀಜ್ಜನಾರ್ದನಃ ॥೧೧॥

ಬ್ರಾಹ್ಮಣೋತ್ತಮರೇ, ನನ್ನ ಪೂರ್ವಜರ ಶ್ರೇಯಸ್ಸು, ಹಿತಕ್ಕೆ ಜನಾರ್ದನನೇ ಕಾರಣನು. ಅವನ ಅನುಗ್ರಹಕ್ಕೆ ಭಾಗಿಯಾದ ನಮ್ಮ ಹಿರಿಯರೆಲ್ಲರೂ ಧನ್ಯರೇ ಸರಿ.

ತಪಸಾಪಿ ನ ದೃಶ್ಯೋ ಹಿ ಭಗವಾಲ್ಲೋಕಪೂಜಿತಃ ।
ಯಂ ದೃಷ್ಟವಂತಸ್ತೇ ಸಾಕ್ಷಾಚ್ಛ್ರೀವತ್ಸಾಂಕವಿಭೂಷಣಮ್ ॥೧೨॥

ಲೋಕಪೂಜಿತನಾದ ನಾರಾಯಣನು ತಪಸ್ಸಿನಿಂದ ನೋಡಲು ಅರ್ಹನು. ಶ್ರೀವತ್ಸಚಿಹ್ನೆಯಿಂದ ಅಲಂಕೃತನಾದ ನಾರಾಯಣನನ್ನು ನನ್ನ ಪೂರ್ವಜರು ಸಾಕ್ಷಾತ್ತಾಗಿ ಲಕ್ಷ್ಮೀದೇವಿಯು ಭಗವಂತನನ್ನು ನೋಡುವಂತೆ ನೋಡಿದ್ದರು.

ತೇಭ್ಯೋ ಧನ್ಯತರಶ್ಚೈವ ನಾರದಃ ಪರಮೇಷ್ಠಿಜಃ ।
ನ ಚಾಲ್ಪತೇಜಸಮೃಷಿಂ ವೇದ್ಮಿ ನಾರದಮವ್ಯಯಮ್ ।
ಶ್ವೇತದ್ವೀಪಂ ಸಮಾಸಾದ್ಯ ಯೇನ ದೃಷ್ಟಃ ಸ್ವಯಂ ಹರಿಃ ॥೧೩॥

ದೇವಪ್ರಸಾದಾನುಗತಂ ವ್ಯಕ್ತಂ ತತ್ತಸ್ಯ ದರ್ಶನಮ್ ।
ಯದ್ ದೃಷ್ಟವಾಂಸ್ತದಾ ದೇವಮನಿರುದ್ಧತನೌ ಸ್ಥಿತಮ್ ॥೧೪॥

ಅವರೆಲ್ಲರಿಗಿಂತಲೂ ಧನ್ಯನಾದವನು ಬ್ರಹ್ಮನ ಮಾನಸ ಪುತ್ರನಾದ ನಾರದನು. ನಾಶವಿಲ್ಲದ ನಾರದನು ಸಾಧಾರಣ ತೇಜಸ್ವಿ ಎಂದು ನಾನು ತಿಳಿದಿಲ್ಲ. ಕಾರಣ ಶ್ವೇತದ್ವೀಪ ನಿವಾಸಿಯಾದ ಪರಮಾತ್ಮನನ್ನು ಅಲ್ಲಿಗೆ ಹೋಗಿ ನೋಡಿದ ಭಾಗ್ಯವಂತನು. ಭಗವಂತನ ದರ್ಶನವು ದೊರೆಯಬೇಕಾದರೆ ಅವನ ಕರುಣಾಬಲದಿಂದಲೇ ಸಾಧ್ಯ. ಭಗವಂತನ ಕರುಣಾಪಾತ್ರನು ನಾರದನು ಎಂಬುದು ಇದರಿಂದ ಸ್ಪಷ್ಟವಾಯಿತು. ಶ್ವೇತದ್ವೀಪದಲ್ಲಿ ನಾರದನು ಅನಿರುದ್ಧ ರೂಪಿಯಾದ ನಾರಾಯಣನನ್ನು ಅವನ ಅನುಗ್ರಹದಿಂದ ನೋಡಿದನು.

ಬದರೀಮಾಶ್ರಮಂ ಯತ್ತು ನಾರದಃ ಪ್ರಾದ್ರವತ್ ಪುನಃ ।
ನರನಾರಾಯಣೌ ದ್ರಷ್ಟುಂ ಕಿಂ ನು ತತ್ ಕಾರಣಂ ಮುನೇ ॥೧೫॥

ಪುನಃ ನಾರದರು ನರ-ನಾರಾಯಣರನ್ನು ನೋಡಲು ಬದರಿಕಾಶ್ರಮಕ್ಕೆ ಧಾವಿಸಿದರು. ಶ್ವೇತದ್ವೀಪದಲ್ಲಿ ದರ್ಶನ ಮಾಡಿದ ನಾರದರು ಬದರಿಗೆ ಹೋಗಲು ಏನು ಕಾರಣ?

ಶ್ವೇತದ್ವೀಪಾನ್ನಿವೃತ್ತಶ್ಚ ನಾರದಃ ಪರಮೇಷ್ಠಿಜಃ ।
ಬದರೀಮಾಶ್ರಮಂ ಪ್ರಾಪ್ಯ ಸಮಾಗಮ್ಯ ಚ ತಾವೃಷೀ ॥೧೬॥

ಕಿಯಂತಂ ಕಾಲಮವಸತ್ಕಃ ಕಥಾಃ ಪೃಷ್ಟವಾಂಶ್ಚ ಸಃ ।
ಶ್ವೇತದ್ವೀಪಾದುಪಾವೃತ್ತೇ ತಸ್ಮಿನ್ ವಾ ಸುಮಹಾತ್ಮನಿ ॥೧೭॥

ಕಿಮಬ್ರೂತಾಂ ಮಹಾತ್ಮಾನೌ ನರನಾರಾಯಣಾವೃಷೀ ।
ತದೇತನ್ಮೇ ಯಥಾತತ್ತ್ವಂ ಸರ್ವಮಾಖ್ಯಾತುಮರ್ಹಸಿ ॥೧೮॥

ಬ್ರಹ್ಮನ ಮಗನಾದ ನಾರದನು ಶ್ವೇತದ್ವೀಪದಿಂದ ಮರಳಿ ಬಂದು ಬದರಿಕಾಶ್ರಮಕ್ಕೆ ಹೋಗಿ ನರ-ನಾರಾಯಣರನ್ನು ಕಂಡ ಮೇಲೆ ಎಷ್ಟು ಕಾಲ ಅವರ ಬಳಿಯೇ ಇದ್ದನು? ಯಾವ ಪ್ರಶ್ನೆಗಳನ್ನು ಕೇಳಿದನು. ಶ್ವೇತದ್ವೀಪದಿಂದ ತಿರುಗಿ ಬಂದ ನಾರದರಿಗೆ ನರ-ನಾರಾಯಣರು ಏನು ಹೇಳಿದರು? ಈ ಎಲ್ಲ ವಿಷಯಗಳನ್ನು ಯಥಾವತ್ತಾಗಿ ತಿಳಿಸಿರಿ.

ವೈಶಂಪಾಯನಃ

ನಮೋ ಭಗವತೇ ತಸ್ಮೈ ವ್ಯಾಸಾಯಾಮಿತತೇಜಸೇ ।
ಯಸ್ಯ ಪ್ರಸಾದಾದ್ ವಕ್ಷ್ಯಾಮಿ ನಾರಾಯಣಕಥಾಮಿಮಾಮ್ ॥೧೯॥

ವೈಶಂಪಾಯನ– ಪೂಜ್ಯರಾದ, ಅಮಿತತೇಜಸ್ಸುಳ್ಳ ವ್ಯಾಸರಿಗೆ ನಮಸ್ಕಾರ. ಅವರ ದಿವ್ಯಾನುಗ್ರಹದಿಂದ ನಾನು ನಾರಾಯಣನ ಈ ಕಥೆಯನ್ನು ಹೇಳುತ್ತಿದ್ದೇನೆ.

ಪ್ರಾಪ್ಯ ಶ್ವೇತಂ ಮಹಾದ್ವೀಪಂ ದೃಷ್ಟ್ವಾ ಚ ಹರಿಮವ್ಯಯಮ್ ।
ನಿವೃತ್ತೋ ನಾರದೋ ರಾಜಂಸ್ತರಸಾ ಮೇರುಮಾಗಮತ್ ।
ಹೃದಯೇನೋದ್ವಹನ್ ಭಾರಂ ಯದುಕ್ತಂ ಪರಮಾತ್ಮನಾ ॥೨೦॥

ಜನಮೇಜಯನೇ, ನಾರದರು ಶ್ವೇತದ್ವೀಪಕ್ಕೆ ಹೋಗಿ, ನಾಶರಹಿತನಾದ ಹರಿಯನ್ನು ಆ ಶ್ವೇತದ್ವೀಪದಲ್ಲಿ ಕಂಡು ಅಲ್ಲಿಂದ ತಿರುಗಿ ಬಂದು ವೇಗವಾಗಿ ಮೇರುಪರ್ವತಕ್ಕೆ ತೆರಳಿದರು. ಶ್ವೇತದ್ವೀಪದಿಂದ ಮೇರುಪರ್ವತಕ್ಕೆ ಆಗಮಿಸುವ ನಾರದರ ಹೃದಯದಲ್ಲಿ ಪರಮಾತ್ಮನು ತಿಳಿಸಿದ ಉಪದೇಶಗಳ ಭಾರವೇ ತುಂಬಿತ್ತು.

ಪಶ್ಚಾದಸ್ಯಾಭವದ್ ರಾಜನ್ನಾತ್ಮನಃ ಸಾಧ್ವಸಂ ಮಹತ್ ।
ಯದ್ ಗತ್ವಾ ದೂರಮಧ್ವಾನಂ ಕ್ಷೇಮೀ ಪುನರಿಹಾಗತಃ ॥೨೧॥

ತತೋ ಮೇರೋಃ ಪ್ರಚಕ್ರಾಮ ಪರ್ವತಂ ಗಂಧಮಾದನಮ್ ।
ನಿಪಪಾತ ಚ ಖಾತ್ತೂರ್ಣಂ ವಿಶಾಲಾಂ ಬದರೀಮನು ॥೨೨॥

ಆಗ ನಾರದರ ಮನಸ್ಸಿನಲ್ಲಿ ನಾನು ಕುಶಲವಾಗಿ ಶ್ವೇತದ್ವೀಪದ ತನಕ ಹೋಗಿ ಕ್ಷೇಮದಿಂದ ಬಂದಿದ್ದೇನಲ್ಲ. ಇದು ಹೇಗೆ ಸಾಧ್ಯವಾಯಿತು ಎಂದು ಯೋಚಿಸುತ್ತಲೇ ಮೇರುಪರ್ವತದಿಂದ ಗಂಧಮಾದನಕ್ಕೆ ತೆರಳಿದರು. ಅಲ್ಲಿಂದ ಬಹಳ ಶೀಘ್ರವಾಗಿ ಪ್ರಯಾಣ ಮಾಡುತ್ತಾ ಆಕಾಶಮಾರ್ಗದಿಂದಲೇ ಸಂಚರಿಸಿ ವಿಶಾಲವಾದ ಬದರೀ ಕ್ಷೇತ್ರ ತಲುಪಿದರು.

ತತಃ ಸ ದದೃಶೇ ದೇವೌ ಪುರಾಣಾವೃಷಿಸತ್ತಮೌ ।
ತಪಶ್ಚರಂತೌ ಸುಮಹದಾತ್ಮನಿಷ್ಠೌ ಮಹಾವ್ರತೌ ॥೨೩॥

ಆ ಕ್ಷೇತ್ರದಲ್ಲಿ ಪುರಾತನ ಮಹರ್ಷಿಗಳಾದ ನರ-ನಾರಾಯಣರನ್ನು ನೋಡಿದರು. ಅವರಾದರೂ ಆತ್ಮನಿಷ್ಠರಾಗಿ ಮಹಾತಪಸ್ಸನ್ನು ಮಾಡುತ್ತಾ ಇದ್ದರು.

ತೇಜಸಾಭ್ಯಧಿಕೌ ಸೂರ್ಯಾತ್ ಸರ್ವಲೋಕವಿರೋಚನಾತ್ ।
ಶ್ರೀವತ್ಸಲಕ್ಷಣೌ ಪೂಜ್ಯೌ ಜಟಾಮಂಡಲಧಾರಿಣೌ ॥೨೪॥

ನರ-ನಾರಾಯಣರು ಸೂರ್ಯನಿಗಿಂತಲೂ ಅಧಿಕವಾದ ತೇಜಸ್ಸಿನಿಂದ ಬೆಳಗುತ್ತಿದ್ದರು. ಶ್ರೀವತ್ಸಚಿಹ್ನೆಗಳುಳ್ಳವರಾಗಿದ್ದರು, ಜಟಾಮಂಡಲವನ್ನು ಧರಿಸಿದವರಾಗಿದ್ದರು. ಸಮಸ್ತ ಜಗತ್ತನ್ನೇ ಬೆಳಗುತ್ತಿದ್ದರು.

ಜಾಲಪಾದಭುಜೌ ತೌ ತು ಪಾದಯೋಶ್ಚಕ್ರಲಕ್ಷಣೌ ।
ವ್ಯೂಢೋರಸ್ಕೌ ದೀರ್ಘಭುಜೌ ತಥಾ ಮುಷ್ಕಚತುಷ್ಕಿಣೌ ॥೨೫॥

ಭುಜಗಳಲ್ಲಿ ಹಂಸಪಕ್ಷಿಯ ಗುರುತುಗಳನ್ನು, ಪಾದಗಳಲ್ಲಿ ಚಕ್ರದ ಗುರುತುಗಳನ್ನು ಹೊಂದಿದ್ದರು. ವಿಶಾಲವಾದ ವಕ್ಷಸ್ಸ್ಥಲದಿಂದ ಕೂಡಿದ ಅವರು ಆಜಾನುಬಾಹುಗಳಾಗಿದ್ದರು. ಅಂಡಕೋಶದಲ್ಲಿ ನಾಲ್ಕು ವೃಷಣಗಳನ್ನು ಹೊಂದಿದ್ದರು.

ಷಷ್ಟಿದಂತಾವಷ್ಟದಂಷ್ಟ್ರೌ ಮೇಘೌಘಸದೃಶಸ್ವನೌ ।
ಸ್ವಾಸ್ಯೌ ಪೃಥುಲಲಾಟೌ ಚ ಸುಹನೂ ಸುಭ್ರನಾಸಿಕೌ ॥೨೬॥

ಅರವತ್ತು ಹಲ್ಲುಗಳನ್ನು, ಎಂಟು ಕೋರೆಹಲ್ಲುಗಳನ್ನು ಹೊಂದಿದ್ದರು. ಮೇಘಗಳ ಸಮೂಹದಿಂದ ಹೊರಬರುವ ಶಬ್ದಕ್ಕೆ ಸಮಾನವಾದ ಕಂಠದ ನಾದದಿಂದ ಕೂಡಿದ್ದರು. ಸುಂದರವಾದ ಮುಖವುಳ್ಳ, ವಿಶಾಲವಾದ ಹಣೆಗಳುಳ್ಳ, ಉತ್ತಮವಾದ ದವಡೆಗಳು, ಮೂಗುಗಳಿಂದಲೂ ಕೂಡಿದ ನರ-ನಾರಾಯಣರನ್ನು ನಾರದರು ನೋಡಿದರು.

ಆತಪತ್ರೇಣ ಸದೃಶೇ ಶಿರಸೀ ದೇವಯೋಸ್ತಯೋಃ ।
ಏವಂ ಲಕ್ಷಣಸಂಪನ್ನೌ ಮಹಾಪುರುಷಸಂಜ್ಞಿತೌ ॥೨೭॥

ಅವರೀರ್ವರ ತಲೆಗಳು ಛತ್ರಕ್ಕೆ ಸಮಾನವಾಗಿದ್ದವು. ಸರ್ವಲಕ್ಷಣ ಸಂಪನ್ನರಾಗಿದ್ದರು. ಮಹಾಪುರುಷರೆಂದು ಪ್ರಸಿದ್ಧರಾಗಿದ್ದರು.

ತೌ ದೃಷ್ಟ್ವಾ ನಾರದೋ ಹೃಷ್ಟಸ್ತಾಭ್ಯಾಂ ಚ ಪ್ರತಿಪೂಜಿತಃ ।
ಸ್ವಾಗತೇನಾಭಿಭಾಷ್ಯಾಥ ಪೃಷ್ಟಶ್ಚಾನಾಮಯಂ ತದಾ ॥೨೮॥

ಅಂತಹ ನರ-ನಾರಾಯಣರನ್ನು ಕಂಡ ನಾರದರು ಅವರೀರ್ವರಿಂದ ಪ್ರತಿಯಾಗಿ ಸ್ವಾಗತಿಸಲ್ಪಟ್ಟರು. ಬಳಿಕ ನರ-ನಾರಾಯಣರು ನಾರದರ ಕ್ಷೇಮವನ್ನು ವಿಚಾರಿಸಿದರು.

ಬಭೂವಾಂತರ್ಗತಮತಿರ್ನಿರೀಕ್ಷ್ಯ ಪುರುಷೋತ್ತಮೌ ।
ಸದ್ಯೋಗತಾಸ್ತತ್ರ ಯೇ ವೈ ಸರ್ವಭೂತನಮಸ್ಕೃತಾಃ ॥೨೯॥

ಶ್ವೇತದ್ವೀಪೇ ಮಯಾ ದೃಷ್ಟಾಸ್ತಾದೃಶಾವೃಷಿಸತ್ತಮೌ ।
ಇತಿ ಸಂಚಿಂತ್ಯ ಮನಸಾ ಕೃತ್ವಾ ಚಾಭಿಪ್ರದಕ್ಷಿಣಮ್ ।
ಉಪೋಪವಿವಿಶೇ ತತ್ರ ಪೀಠೇ ಕುಶಮಯೇ ಶುಭೇ ॥೩೦॥

ನಾರದರು ನರ-ನಾರಾಯಣರನ್ನು ಕಂಡು ಮನದಲ್ಲಿಯೇ ನಾನು ಶ್ವೇತದ್ವೀಪದಲ್ಲಿದ್ದಾಗ ಯಾವ ರೀತಿಯಾದ ಭಗವಂತನ ವೈಭವಗಳನ್ನು ನೋಡಿದ್ದೆನೋ ಅದೇ ರೀತಿಯಾದ ವೈಭವದಿಂದ ಈಗಲೂ ನರ-ನಾರಾಯಣರು ಕಾಣಿಸುತ್ತಿದ್ದಾರೆ ಎಂದು ಚಿಂತಿಸಿದರು. ಹೀಗೆ ಮನಸ್ಸಿನಲ್ಲಿಯೋಚಿಸುತ್ತಾ ಅವರೀರ್ವರಿಗೂ ನಮಸ್ಕರಿಸಿ ಮಂಗಳಮಯವಾದ, ಕುಶಮಯವಾದ ಆಸನದಲ್ಲಿ ಕುಳಿತರು.

ತತಸ್ತೌ ತಪಸಾಂ ವಾಸೌ ಯಶಸಾಂ ತೇಜಸಾಮಪಿ ।
ಋಷೀ ಶಮದಮೋಪೇತೌ ಕೃತ್ವಾ ಪೂರ್ವಾಹ್ಣಿಕಂ ವಿಧಿಮ್ ॥೩೧॥

ಬಳಿಕ ತಪೋನಿಧಿಗಳೂ, ಯಶೋನಿಧಿಗಳೂ, ತೇಜೋನಿಧಿಗಳೂ ಆದ ಆ ಋಷಿಗಳು ಪ್ರಾತಃಕಾಲದ ಕರ್ಮಗಳನ್ನೆಲ್ಲ ವಿಧಿಬದ್ಧವಾಗಿ ಪೂರೈಸಿದರು.

ಪಶ್ಚಾನ್ನಾರದಮವ್ಯಗ್ರೌ ಪಾದ್ಯಾರ್ಘ್ಯಾಭ್ಯಾಂ ಪ್ರಪೂಜ್ಯ ಚ ।
ಪೀಠಯೋಶ್ಚೋಪವಿಷ್ಟೌ ತೌ ಕೃತಾತಿಥ್ಯಾಹ್ನಿಕೌ ನೃಪ ॥೩೨॥

ಬಳಿಕ ನರ-ನಾರಾಯಣರು ಶಾಂತಸ್ವಭಾವದವರಾದ ನಾರದರನ್ನು ಅರ್ಘ್ಯ-ಪಾದ್ಯಾದಿಗಳ ಮೂಲಕ ಸತ್ಕರಿಸಿ, ತಾವೂ ಪೀಠದ ಮೇಲೆ ಕುಳಿತುಕೊಂಡರು.

ತೇಷು ತತ್ರೋಪವಿಷ್ಟೇಷು ಸ ದೇಶೋಭಿವ್ಯರಾಜತ ।
ಆಜ್ಯಾಹುತಿಮಹಾಜ್ವಾಲೈರ್ಯಜ್ಞವಾಟೋಽಗ್ನಿಭಿರ್ಯಥಾ ॥೩೩॥

ಅಥ ನಾರಾಯಣಸ್ತತ್ರ ನಾರದಂ ವಾಕ್ಯಮಬ್ರವೀತ್ ।
ಸುಖೋಪವಿಷ್ಟಂ ವಿಶ್ರಾಂತಂ ಕೃತಾತಿಥ್ಯಂ ಸುಖಸ್ಥಿತಮ್ ॥೩೪॥

ಅಪೀದಾನೀಂ ಸ ಭಗವಾನ್ ಪರಮಾತ್ಮಾ ಸನಾತನಃ ।
ಶ್ವೇತದ್ವೀಪೇ ತ್ವಯಾ ದೃಷ್ಟ ಆವಯೋಃ ಪ್ರಕೃತಿಃ ಪರಾ ॥೩೫॥

ಆ ಮೂವರು ಕುಳಿತುಕೊಂಡಿರುವ ಪ್ರದೇಶವು ಆಜ್ಯದ ಆಹುತಿಯಿಂದ ಪ್ರಕಾಶಮಾನವಾದ ತ್ರೇತಾಗ್ನಿಗಳುಳ್ಳ ಯಜ್ಞ ಮಂಟಪದಂತೆ ಶೋಭಿಸುತ್ತಿತ್ತು. ಬಳಿಕ ನಾರಾಯಣನು ನಾರದರನ್ನು ಕಂಡು ಹೀಗೆ ಹೇಳಿದನು: ಮಹರ್ಷಿಯೇ, ನೀನು ಶ್ವೇತದ್ವೀಪದಲ್ಲಿ ನಮಗೆ ಮೂಲರೂಪವೆನಿಸಿದ ನಾರಾಯಣರೂಪವನ್ನು ನೋಡಿ ಬಂದಿರುವಿಯಷ್ಟೆ! ಪೂಜ್ಯನಾದ, ಸನಾತನನಾದ ಪರಮಾತ್ಮನನ್ನು ಈಗ ನೋಡಿ ಬಂದಿರುವಿ ಎಂದು ಭಾವಿಸಿದ್ದೇವೆ.

ನಾರದಃ

ದೃಷ್ಟೋ ಮೇ ಪುರುಷಃ ಶ್ರೀಮಾನ್ ವಿಶ್ವರೂಪಧರೋಽವ್ಯಯಃ ।
ಸರ್ವೇ ಹಿ ಲೋಕಾಸ್ತತ್ರಸ್ಥಾಸ್ತಥಾ ದೇವಾಃ ಸಹರ್ಷಿಭಿಃ ।
ಅದ್ಯಾಪಿ ಚೈನಂ ಪಶ್ಯಾಮಿ ಯುವಾಂ ಪಶ್ಯನ್ ಸನಾತನೌ ॥೩೬॥

ನಾರದರು– ಪೂಜ್ಯರೇ, ನಾನು ವಿಶ್ವರೂಪಧಾರಿಯಾದ, ನಾಶರಹಿತನಾದ, ಕಾಂತಿಯುಕ್ತನಾದ ಪರಮಪುರುಷನನ್ನು ನೋಡಿದ್ದೇನೆ. ಎಲ್ಲ ಲೋಕಗಳು ಅವನಲ್ಲಿಯೇ ಸ್ಥಾಪಿತವಾಗಿವೆ. ಅದರಂತೆ ಋಷಿಗಳಿಂದ ಕೂಡಿದ ದೇವತೆಗಳು ಅವನಲ್ಲಿಯೇ ಆಶ್ರಯವನ್ನು ಹೊಂದಿದ್ದಾರೆ. ಈಗ ನಿಮ್ಮನ್ನು ನೋಡುತ್ತಿರುವ ನಮಗೆ ಅವನನ್ನೇ ಕಂಡಂತೆ ಭಾಸವಾಗುತ್ತಿದೆ.

ಯೈರ್ಲಕ್ಷಣೈರುಪೇತಃ ಸ ಹರಿರವ್ಯಕ್ತರೂಪಧೃಕ್ ।
ತೈರ್ಲಕ್ಷಣೈರುಪೇತೌ ಹಿ ವ್ಯಕ್ತರೂಪಧರೌ ಯುವಾಮ್ ॥೩೭॥

ಅವ್ಯಕ್ತರೂಪಿಯಾದ ಶ್ರೀಹರಿಯು ಯಾವ ಲಕ್ಷಣಗಳಿಂದ ಕೂಡಿದ್ದಾನೋ, ವ್ಯಕ್ತರೂಪದಿಂದ ಕೂಡಿರುವ ನೀವೂ ಅವೇ ಲಕ್ಷಣಗಳನ್ನು ಹೊಂದಿರುವಿರಿ.

ದೃಷ್ಟೌ ಮಯಾ ಯುವಾಂ ತತ್ರ ತಸ್ಯ ದೇವಸ್ಯ ಪಾರ್ಶ್ವತಃ ।
ಇಹ ಚೈವಾಗತೋಸ್ಮ್ಯದ್ಯ ವಿಸೃಷ್ಟಃ ಪರಮಾತ್ಮನಾ ॥೩೮॥

ಶ್ವೇತದ್ವೀಪದಲ್ಲಿ ನಿಮ್ಮಿಬ್ಬರನ್ನು ಹರಿಯ ಪಕ್ಕದಲ್ಲಿಯೇ ನಾನು ನೋಡಿದ್ದೇನೆ. ಅವನಿಂದ ಕಳುಹಿಸಲ್ಪಟ್ಟ ನಾನು ನೇರವಾಗಿ ಇಲ್ಲಿಗೆ ಆಗಮಿಸಿದ್ದೇನೆ.

ಕೋ ಹಿ ನಾಮ ಭವೇತ್ತಸ್ಯ ತೇಜಸಾ ಯಶಸಾ ಶ್ರಿಯಾ ।
ಸದೃಶಸ್ತ್ರಿಷು ಲೋಕೇಷು ಋತೇ ಧರ್ಮಾತ್ಮಜೌ ಯುವಾಮ್ ॥೩೯॥

ಮೂರುಲೋಕಗಳಲ್ಲಿ ಧರ್ಮನ ಸುತನಾದ ನರ-ನಾರಾಯಣರಾದ ನಿಮ್ಮನ್ನು ಬಿಟ್ಟು ಶ್ವೇತದ್ವೀಪ ನಿವಾಸಿಯಾದ ಭಗವಂತನ ತೇಜಸ್ಸಿಗೂ, ಯಶಸ್ಸಿಗೂ ಕಾಂತಿಗೂ ಸಾಟಿಯಾಗುವವರು ಬೇರೆ ಯಾರಿದ್ದಾರೆ?

ತೇನ ಮೇ ಕಥಿತಂ ಪೂರ್ವಂ ನಾಮ ಕ್ಷೇತ್ರಜ್ಞಸಂಜ್ಞಿತಮ್ ।
ಪ್ರಾದುರ್ಭಾವಾಶ್ಚ ಕಥಿತಾ ಭವಿಷ್ಯಂತಿ ಹಿ ಯೇ ಯಥಾ ॥೪೦॥

ಆ ಶ್ವೇತದ್ವೀಪ ನಿವಾಸಿಯಾದ ಭಗವಂತನು ತನ್ನ ಜ್ಞಾನಕ್ಕೆ ಸಂಬಂಧಿಸಿದ ಸಮಗ್ರ ಧರ್ಮವನ್ನು ನನಗೆ ಹಿಂದೆ ಹೇಳಿದನು. ಮುಂದಾಗುವ ಅವತಾರಗಳ ಬಗ್ಗೆಯೂ ನಿರೂಪಿಸಿದನು.

ತತ್ರ ಯೇ ಪುರುಷಾಃ ಶ್ವೇತಾಃ ಪಂಚೇಂದ್ರಿಯವಿವರ್ಜಿತಾಃ ।
ಪ್ರತಿಬುದ್ಧಾಶ್ಚ ತೇ ಸರ್ವೇ ಭಕ್ತಾಶ್ಚ ಪುರುಷೋತ್ತಮಮ್ ॥೪೧॥

ಶ್ವೇತದ್ವೀಪದಲ್ಲಿರುವ ಸಮಸ್ತ ಪುರುಷರು ಶ್ವೇತವರ್ಣದವರೇ. ಪ್ರಾಕೃತವಾದ ಪಂಚೇಂದ್ರಿಯಗಳಿಂದ ರಹಿತರಾಗಿದ್ದಾರೆ. ಜ್ಞಾನಿಗಳಾಗಿದ್ದಾರೆ. ಅವರೆಲ್ಲರೂ ಪುರುಷೋತ್ತಮನನ್ನೇ ಭಜಿಸುವ ಭಕ್ತರಾಗಿದ್ದಾರೆ.

ತೇऽರ್ಚಯಂತಿ ಸದಾ ದೇವಂ ತೈಃ ಸಾರ್ಧಂ ರಮತೇ ಚ ಸಃ ।
ಪ್ರಿಯಭಕ್ತೋ ಹಿ ಭಗವಾನ್ ಪರಮಾತ್ಮಾ ದ್ವಿಜಪ್ರಿಯಃ ॥೪೨॥

ಯಾವಾಗಲೂ ದೇವದೇವನಾದ ಪರಮಪುರುಷನನ್ನು ಶ್ವೇತದ್ವೀಪದಲ್ಲಿ ಆರಾಧಿಸುತ್ತಿರುತ್ತಾರೆ. ಶ್ರೀಹರಿಯೂ ಅವರ ವಿಷಯದಲ್ಲಿ ಎಂದಿಗೂ ಪ್ರಸನ್ನನಾಗಿರುತ್ತಾನೆ. ಪರಮಾತ್ಮನು ಎಂದಿಗೂ ದ್ವಿಜಪ್ರಿಯನಷ್ಟೆ!

ರಮತೇ ಸೋಽರ್ಚ್ಯಮಾನೋ ಹಿ ಸದಾ ಭಾಗವತಪ್ರಿಯಃ ।
ವಿಶ್ವಭುಕ್ಸರ್ವಗೋ ದೇವೋ ಬಾಂಧವೋ ಭಕ್ತವತ್ಸಲಃ ।
ಸ ಕರ್ತಾ ಕಾರಣಂ ಚೈವ ಕಾರ್ಯಂ ಚಾತಿಬಲದ್ಯುತಿಃ ॥೪೩॥

ಭಾಗವತಪ್ರಿಯನಾದ ಭಗವಂತನು ಭಕ್ತರಿಂದ ಅರ್ಚಿತನಾಗಿ ಸಂತೋಷ ಹೊಂದುತ್ತಾನೆ. ಭಗವಂತನು ವಿಶ್ವಭುಕ್, ಸರ್ವಾಂತರ್ಯಾಮಿ, ಕ್ರೀಡಾದಿಗುಣ ವಿಶಿಷ್ಟ, ಲಕ್ಷ್ಮೀಪತಿ, ಭಕ್ತವತ್ಸಲನಾಗಿ ಭಕ್ತರಿಂದ ಆರಾಧಿತನಾಗಿದ್ದಾನೆ. ಅವನೇ ಜಗತ್ತಿನ ಕರ್ತೃ , ಕಾರಣ, ಕಾರ್ಯ ಎಲ್ಲವೂ ಆಗಿದ್ದಾನೆ. ಅನಂತವಾದ ಬಲ, ಕಾಂತಿಗಳಿಂದ ಕೂಡಿದ್ದಾನೆ.

ತಪಸಾ ಯೋಜ್ಯ ಸೋಽऽತ್ಮಾನಂ ಶ್ವೇತದ್ವೀಪಾತ್ ಪರಂ ಹಿ ಯತ್ ।
ತೇಜ ಇತ್ಯಭಿವಿಖ್ಯಾತಂ ಸ್ವಯಂಭಾಸಾವಭಾಸಿತಮ್ ॥೪೪॥

ಶ್ವೇತದ್ವೀಪದ ಆಚೆಯ ಭಾಗದಲ್ಲಿ ಶ್ರೀಹರಿಯ ದೇಹದ ಕಾಂತಿಯಿಂದ ಬೆಳಗುವ ತೇಜಃಪುಂಜವಾದ ತೇಜೋರಾಶಿ ಎಂದೇ ಪ್ರಖ್ಯಾತವಾದ ಒಂದು ಸ್ಥಳವಿದೆ. ಅಲ್ಲಿ ನಾರಾಯಣನು ತಪಸ್ಸನ್ನು ಆಚರಿಸುತ್ತಿದ್ದಾನೆ.

ಶಾಂತಿಃ ಸಾ ತ್ರಿಷು ಲೋಕೇಷು ಸಿದ್ಧಾನಾಂ ಭಾವಿತಾತ್ಮನಾಮ್ ।
ಏತಯಾ ಶುಭಯಾ ಬುದ್ಧ್ಯಾ ನೈಷ್ಠಿಕಂ ವ್ರತಮಾಸ್ಥಿತಃ ॥೪೫॥

ಪರಮಾತ್ಮನು ಮೂರುಲೋಕಗಳಲ್ಲಿಯೂ ಶಾಂತಿಯು ನೆಲೆಸುವಂತೆ ಮಾಡಿದ್ದಾನೆ. ಪರಮಮಂಗಳಕರವಾದ ಬುದ್ಧಿಯಿಂದ ಭಗವಂತನು ಜಗತ್ತಿಗೆ ಕಲ್ಯಾಣವಾಗುವ ನೈಷ್ಠಿಕ ವ್ರತವನ್ನು ಹೊಂದಿರುತ್ತಾನೆ.

ನ ತತ್ರ ಸೂರ್ಯಸ್ತಪತಿ ನ ಸೋಮೋऽಭಿವಿರಾಜತೇ ।
ನ ವಾಯುರ್ವಾತಿ ದೇವೇಶೇ ತಪಶ್ಚರತಿ ದುಶ್ಚರಮ್ ॥೪೬॥

ಶ್ರೀಹರಿಯು ವಾಸ ಮಾಡುವ ವೈಕುಂಠದಲ್ಲಿ ಸೂರ್ಯನು ತಾಪವನ್ನು ನೀಡುವುದಿಲ್ಲ. ಚಂದ್ರನ ಬೆಳಕಿಗೆ ಅವಕಾಶವಿಲ್ಲ. ದುಶ್ಚರವಾದ ತಪಸ್ಸನ್ನು ಆಚರಿಸುವ ದೇವೇಶನಾದ ಭಗವಂತನು ಇರುವ ಸ್ಥಳದಲ್ಲಿ ಗಾಳಿಯೂ ಬೀಸುವುದಿಲ್ಲ.

ವೇದೀಮಷ್ಟತಲೋತ್ಸೇಧಾಂ ಭೂಮಾವಾಸ್ಥಾಯ ವಿಶ್ವಭುಕ್ ।
ಏಕಪಾದಸ್ಥಿತೋ ದೇವ ಊರ್ಧ್ವಬಾಹುರುದಙ್ಮುಖಃ ।
ಸಾಂಗಾನಾವರ್ತಯನ್ ವೇದಾಂಸ್ತಪಸ್ತೇಪೇ ಸುದುಶ್ಚರಮ್ ॥೪೭॥

ಸೃಷ್ಟಿಕರ್ತನಾದ, ದೇವದೇವನಾದ ಭಗವಂತನು ಭೂಮಿಯಿಂದ ಎಂಟು ಅಂಗುಲದಷ್ಟು ಎತ್ತರವಾದ ವೇದಿಕೆಯನ್ನು ಹೊಂದಿ, ಊರ್ಧ್ವಬಾಹುವಾಗಿ, ಉತ್ತರಾಭಿಮುಖವಾಗಿ ಏಕಪಾದದಲ್ಲಿ ನಿಂತು ತಪಸ್ಸನ್ನಾಚರಿಸುತ್ತಿದ್ದಾನೆ. ಷಡಂಗಯುಕ್ತವಾದ ವೇದಗಳನ್ನು ಆವೃತ್ತಿ ಮಾಡುತ್ತಾ ತಪಸ್ಸನ್ನಾಚರಿಸುತ್ತಿದ್ದಾನೆ.

ಯದ್ ಬ್ರಹ್ಮಾ ಋಷಯಶ್ಚೈವ ಸ್ವಯಂ ಪಶುಪತಿಶ್ಚ ಯತ್ ।
ಶೇಷಾಶ್ಚ ವಿಬುಧಶ್ರೇಷ್ಠಾ ದೈತ್ಯದಾನವರಾಕ್ಷಸಾಃ ॥೪೮॥

ನಾಗಾಃ ಸುಪರ್ಣಾ ಗಂಧರ್ವಾಃ ಸಿದ್ಧಾ ರಾಜರ್ಷಯಶ್ಚ ಯೇ ।
ಹವ್ಯಂ ಕವ್ಯಂ ಚ ಸತತಂ ವಿಧಿಪೂರ್ವಂ ಪ್ರಯುಂಜತೇ ।
ಕೃತ್ಸ್ನಂ ತತ್ತಸ್ಯ ದೇವಸ್ಯ ಚರಣಾವುಪತಿಷ್ಠತಿ ॥೪೯॥

ಬ್ರಹ್ಮ, ಸ್ವಯಂ ಪಶುಪತಿ, ಋಷಿಗಳು, ಉಳಿದ ವಿಬುಧಶ್ರೇಷ್ಠರು, ದೈತ್ಯ, ದಾನವ, ರಾಕ್ಷಸರು, ನಾಗಗಳು, ಗರುಡರು, ಗಂಧರ್ವ-ಸಿದ್ಧ-ರಾಜರ್ಷಿಗಳು ವಿಧಿಬದ್ಧವಾಗಿ ನಾರಾಯಣನಿಗೆ ನಿರಂತರವಾಗಿ ಹವ್ಯ-ಕವ್ಯಗಳನ್ನು ಅರ್ಪಿಸುತ್ತಲೇ ಇದ್ದಾರೆ. ಅವರು ಸಮರ್ಪಿಸಿದ ಸಮಸ್ತವೂ ದೇವದೇವನಾದ ಭಗವಂತನ ಪಾದವನ್ನೇ ಹೊಂದುತ್ತವೆ.

ಯಾಃ ಕ್ರಿಯಾಃ ಸಂಪ್ರಯುಕ್ತಾಸ್ತು ಏಕಾಂತಗತಬುದ್ಧಿಭಿಃ ।
ತಾಃ ಸರ್ವಾಃ ಶಿರಸಾ ದೇವಃ ಪ್ರತಿಗೃಹ್ಣಾತಿ ವೈ ಸ್ವಯಮ್ ॥೫೦॥

ಅಲ್ಲಿರುವ ಹರಿಭಕ್ತರು ಯಾವ ಸತ್ಕರ್ಮಗಳನ್ನು ಚೆನ್ನಾಗಿ, ಅನುಸಂಧಾನ ಪೂರ್ವಕವಾಗಿ ಭಗವಂತನನ್ನೇ ಧ್ಯಾನಿಸುತ್ತಾ ಸಮರ್ಪಿಸುತ್ತಾರೋ ಆ ಎಲ್ಲ ಕರ್ಮಗಳನ್ನು ಶ್ರೀಹರಿಯು ತಾನಾಗಿಯೇ ಮಾನ್ಯ ಮಾಡುತ್ತಾ ಸ್ವೀಕರಿಸುತ್ತಾನೆ.

ನ ತಸ್ಯಾನ್ಯಃ ಪ್ರಿಯತರಃ ಪ್ರತಿಬುದ್ಧೈರ್ಮಹಾತ್ಮಭಿಃ ।
ವಿದ್ಯತೇ ತ್ರಿಷು ಲೋಕೇಷು ತತೋಽಸೌ ಏಕಾಂತಿಕಂ ಗತಃ ।
ಇಹ ಚೈವಾಗತಸ್ತೇನ ವಿಸೃಷ್ಟಃ ಪರಮಾತ್ಮನಾ ॥೫೧॥

ಮಹಾತ್ಮರು, ಜ್ಞಾನಿಗಳು, ಭಕ್ತರೂ ಆದ ಸಾಧಕರಿಗೆ ಶ್ರೀಹರಿಗೆ ಪ್ರೀತಿಪಾತ್ರರಾದವರು ಮೂರುಲೋಕದಲ್ಲಿ ಬೇರೆ ಯಾರೂ ಇರುವುದಿಲ್ಲ. ಆದ್ದರಿಂದಲೇ ನಾನೂ ಶ್ರೀಹರಿಯನ್ನು ಅನನ್ಯಭಾವದಿಂದ ಶರಣು ಹೊಕ್ಕಿದ್ದೇನೆ. ಅಂತಹ ಭಗವಂತನಿಂದ ಕಳುಹಿಸಲ್ಪಟ್ಟ ನಾನು ನೇರವಾಗಿ ಇಲ್ಲಿಗೆ ಆಗಮಿಸಿದ್ದೇನೆ.

ಏವಂ ಮೇ ಭಗವಾನ್ ದೇವಃ ಸ್ವಯಮಾಖ್ಯಾತವಾನ್ ಹರಿಃ ।
ಆಸಿಷ್ಯೇ ತತ್ಪರೋ ಭೂತ್ವಾ ಯುವಾಭ್ಯಾಂ ಸಹ ನಿತ್ಯಶಃ ॥೫೨॥

ಭಗವಾನ್ ದೇವದೇವನಾದ ಶ್ರೀಹರಿಯೇ ತನ್ನ ಮಹಿಮೆಯನ್ನು ನನಗೆ ತಿಳಿಸಿದ್ದಾನೆ. ನಾನು ಯಾವಾಗಲೂ ಅವನ ಆರಾಧನೆಯಲ್ಲಿಯೇ ಆಸಕ್ತನಾಗಿ ನಿಮ್ಮನ್ನೇ ಧ್ಯಾನಿಸುತ್ತಾ ನಿಮ್ಮ ಬಳಿಯೇ ಇದ್ದು ಬಿಡುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಷಟ್‌ಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೇಳನೆಯ ಅಧ್ಯಾಯ

ನರ-ನಾರಾಯಣರಿಂದ ನಾರದರ ಪ್ರಶಂಸೆ. ವಾಸುದೇವ ಮಹಿಮಾ ಕಥನ.

ಧನ್ಯೋऽಸ್ಯನುಗೃಹೀತೋऽಸಿ ಯತ್ತೇ ದೃಷ್ಟಃ ಸ್ವಯಂ ಪ್ರಭುಃ ।
ನ ಹಿ ತಂ ದೃಷ್ಟವಾನ್ ಕಶ್ಚಿತ್ ಪದ್ಮಯೋನಿರಪಿ ಸ್ವಯಮ್ ॥೧॥

ನಾರದನೇ, ಶ್ವೇತದ್ವೀಪದಲ್ಲಿರುವ ನಾರಾಯಣನನ್ನು ಸಾಕ್ಷಾತ್ ದರ್ಶನ ಮಾಡಿದವನು ನೀನು. ಅವನ ದರ್ಶನವು ಸುಲಭವಲ್ಲ. ನೀನೇ ಧನ್ಯನು. ಅವನಿಂದ ಅನುಗೃಹೀತನಾಗಿರುವಿ. ನಿನ್ನನ್ನು ಹೊರತಾಗಿ ಪದ್ಮಯೋನಿಯಾದ ಬ್ರಹ್ಮನೂ ಅವನನ್ನು ನೋಡಿರುವುದಿಲ್ಲ.

ಅವ್ಯಕ್ತಯೋನಿರ್ಭಗವಾನ್ ದುರ್ದರ್ಶಃ ಪುರುಷೋತ್ತಮಃ ।
ನಾರದೈತದ್ಧಿ ತೇ ಸತ್ಯಂ ವಚನಂ ಸಮುದಾಹೃತಮ್ ॥೨॥

ನಾರದನೇ, ಭಗವಂತನಾದ ಪುರುಷೋತ್ತಮನು ಅವ್ಯಕ್ತ ಪ್ರಕೃತಿಗೆ ಮೂಲಕಾರಣನು. ಅವನು ಸುಲಭವಾಗಿ ನೋಡಲು ಯೋಗ್ಯನಲ್ಲ. ನಾವು ನಿನಗೆ ಸತ್ಯವಾದ ಮಾತನ್ನೇ ಹೇಳುತ್ತಿದ್ದೇವೆ.

ನಾಸ್ಯ ಭಕ್ತೈಃ ಪ್ರಿಯತರೋ ಲೋಕೇ ಕಶ್ಚನ ವಿದ್ಯತೇ ।
ತತಃ ಸ್ವಯಂ ದರ್ಶಿತವಾನ್ ಸ್ವಮಾತ್ಮಾನಂ ದ್ವಿಜೋತ್ತಮ ॥೩॥

ಲೋಕದಲ್ಲಿ ಭಕ್ತರಿಗಿಂತಲೂ ಪ್ರಿಯರಾದವರು ಭಗವಂತನಿಗೆ ಯಾರೂ ಇರುವುದಿಲ್ಲ. ಆದ್ದರಿಂದಲೇ ತಾನಾಗಿಯೇ ನಿನಗೆ ದರ್ಶನ ನೀಡಿದ್ದಾನೆ.

ತಪೋ ಹಿ ತಪ್ಯತಸ್ತಸ್ಯ ಯತ್ಸ್ಥಾನಂ ಪರಮಾತ್ಮನಃ ।
ನ ತತ್ ಸಂಪ್ರಾಪ್ನುತೇ ಕಶ್ಚಿದೃತೇ ಹ್ಯಾವಾಂ ದ್ವಿಜೋತ್ತಮ ॥೪॥

ಬ್ರಾಹ್ಮಣನೇ, ನಿರಂತರ ತಪಸ್ಸನ್ನು ಅನುಷ್ಠಾನ ಮಾಡುತ್ತಿರುವ ಪರಮಾತ್ಮನ ಯಾವ ಸ್ಥಾನವಿದೆಯೋ ಆ ಸ್ಥಳಕ್ಕೆ ನರ-ನಾರಾಯಣರನ್ನು ಬಿಟ್ಟು ಬೇರೆ ಯಾರಿಗೂ ಹೋಗಲಾರದು.

ಯಾ ಹಿ ಸೂರ್ಯಸಹಸ್ರಸ್ಯ ಸಮಸ್ತಸ್ಯ ಭವೇದ್ ದ್ಯುತಿಃ ।
ಸ್ಥಾನಸ್ಯ ಸಾ ಭವೇತ್ತಸ್ಯ ಸ್ವಯಂ ತೇನ ವಿರಾಜತಾ ॥೫॥

ಆಕಾಶಮಂಡಲದಲ್ಲಿ ಏಕಕಾಲದಲ್ಲಿ ಸಾವಿರ ಸೂರ್ಯರು ಒಟ್ಟಾಗಿ ಸೇರಿದರೆ ಯಾವ ಕಾಂತಿಯುಂಟಾಗುತ್ತದೋ ಅಷ್ಟು ಕಾಂತಿಯು ಪರಮಾತ್ಮನಿಂದ ಶ್ವೇತದ್ವೀಪದಲ್ಲಿ ಉಂಟಾಗಿದೆ.

ತಸ್ಮಾದುತ್ತಿಷ್ಠತೇ ವಿಪ್ರಾ ದೇವಾದ್ ವಿಶ್ವಭುವಃ ಪತೇಃ ।
ಕ್ಷಮಾ ಕ್ಷಮಾವತಾಂ ಶ್ರೇಷ್ಠ ಯಯಾ ಭೂಮಿಸ್ತು ಯುಜ್ಯತೇ ॥೬॥

ಸಹನಶಕ್ತಿಯಿಂದ ಶ್ರೇಷ್ಠನಾದವನೇ, ಬ್ರಾಹ್ಮಣನೇ, ಸಹನಶಕ್ತಿಯು ಬ್ರಹ್ಮಜನಕನಾದ ಭಗವಂತನಿಂದಲೇ ಹುಟ್ಟಿದ ಗುಣವಾಗಿದೆ. ಅಂತಹ ಸಹನಶಕ್ತಿಯಿಂದಲೇ ಭೂಮಿಯು ಇಂದು ಸ್ಥಿರವಾಗಿ ನಿಂತಿದೆ.

ತಸ್ಮಾಚ್ಚೋತ್ತಿಷ್ಠತೇ ದೇವಾತ್ ಸರ್ವಭೂತಹಿತೋ ರಸಃ ।
ಆಪೋ ಯೇನ ಹಿ ಯುಜ್ಯಂತೇ ದ್ರವತ್ವಂ ಪ್ರಾಪ್ನುವಂತಿ ಚ ॥೭॥

ಸಮಸ್ತಪ್ರಾಣಿಗಳಿಗೂ ಹಿತವನ್ನು ಮಾಡುವ ನಾರಾಯಣನಿಂದಲೇ ಪ್ರಾಣಿಗಳಿಗೆ ಆಧಾರವಾದ ರಸವು ಪ್ರಾದುರ್ಭವಿಸಿದೆ. ಆ ರಸವು ನೀರಿನ ಜೊತೆಗೆ ದ್ರವತ್ವವನ್ನು ಹೊಂದಿದೆ.

ತಸ್ಮಾದೇವ ಸಮುದ್ಭೂತಂ ತೇಜೋ ರೂಪಗುಣಾತ್ಮಕಮ್ ।
ಯೇನ ಸ್ಮ ಯುಜ್ಯತೇ ಸೂರ್ಯಸ್ತತೋ ಲೋಕಾನ್ ವಿರಾಜತೇ ॥೮॥

ಭಗವಂತನಿಂದಲೇ ರೂಪಗುಣದಿಂದ ಕೂಡಿದ ತೇಜಸ್ಸು ಪ್ರಾದುರ್ಭವಿಸಿದೆ. ಆ ತೇಜಸ್ಸಿನ ಜೊತೆಗೆ ಸೂರ್ಯನು ಸಂಯೋಗವನ್ನು ಹೊಂದಿದ ಕಾರಣದಿಂದ ಲೋಕಗಳನ್ನು ತೇಜೋಮಯನಾಗಿ ಬೆಳಗುತ್ತಿದ್ದಾನೆ.

ತಸ್ಮಾದ್ದೇವಾತ್ ಸಮುದ್ಭೂತಃ ಸ್ಪರ್ಶಸ್ತು ಪುರುಷೋತ್ತಮಾತ್ ।
ಯೇನ ಸ್ಮ ಯುಜ್ಯತೇ ವಾಯುಸ್ತತೋ ಲೋಕಾನ್ ವಿವಾತ್ಯಸೌ ॥೯॥

ಶ್ವೇತದ್ವೀಪ ನಿವಾಸಿಯಾದ ಪುರುಷೋತ್ತಮನಿಂದಲೇ ಸ್ಪರ್ಶವೆಂಬ ಗುಣವು ಹುಟ್ಟಿದೆ. ಸ್ಪರ್ಶದ ಜೊತೆ ಸಂಯೋಗವನ್ನು ಹೊಂದಿದ್ದರಿಂದ ವಾಯುವು ಎಲ್ಲ ಲೋಕಗಳಲ್ಲಿಯೂ ಚಲನಶೀಲವಾಗಿದೆ.

ತಸ್ಮಾಚ್ಚೋತ್ತಿಷ್ಠತೇ ಶಬ್ದಃ ಸರ್ವಲೋಕೇಶ್ವರಾತ್ ಪ್ರಭೋಃ ।
ಆಕಾಶಂ ಯುಜ್ಯತೇ ಯೇನ ತತಸ್ತಿಷ್ಠತ್ಯಸಂವೃತಮ್ ॥೧೦॥

ಶ್ವೇತದ್ವೀಪ ನಿವಾಸಿಯಾದ, ಪ್ರಭುವಾದ ಲೋಕೇಶ್ವರನಿಂದಲೇ ಶಬ್ದವು ಹುಟ್ಟಿದೆ. ಶಬ್ದವು ಆಕಾಶದ ಜೊತೆಗೆ ಸಂಬಂಧವನ್ನು ಹೊಂದಿದ ಕಾರಣ ಎಲ್ಲ ಕಡೆಯೂ ಆಕಾಶವು ಶಬ್ದದಿಂದ ವ್ಯಾಪ್ತವಾಗಿದೆ.

ತಸ್ಮಾಚ್ಚೋತ್ತಿಷ್ಠತೇ ದೇವಾತ್ ಸರ್ವಭೂತಗತಂ ಮನಃ ।
ಚಂದ್ರಮಾ ಯೇನ ಸಂಯುಕ್ತಃ ಪ್ರಕಾಶಗುಣಧಾರಣಃ ॥೧೧॥

ಆ ಶ್ವೇತದ್ವೀಪ ನಿವಾಸಿಯಿಂದಲೇ ಸಮಸ್ತ ಪ್ರಾಣಿಗಳ ಅಂತರ್ಯಾಮಿಯಾದ ಮನಸ್ಸು ಹುಟ್ಟಿದೆ. ಮನಸ್ಸಿನ ಜೊತೆ ಚಂದ್ರನು ಸಂಯೋಗವನ್ನು ಹೊಂದಿ ಪ್ರಕಾಶ ಗುಣವನ್ನು ಹೊಂದಿರುತ್ತಾನೆ.

ಷಟ್‌ಭೂತೋತ್ಪಾದಕಂ ನಾಮ ತತ್ಸ್ಥಾನಂ ವೇದಸಂಜ್ಞಿತಮ್ ।
ವಿದ್ಯಾಸಹಾಯೋ ಯತ್ರಾಸ್ತೇ ಭಗವಾನ್ಹವ್ಯಕವ್ಯಭುಕ್ ॥೧೨॥

ಹೀಗೆ ಆರು ಭೂತಗಳ ಉತ್ಪತ್ತಿ ಎಂಬ ಸ್ಥಾನನು ಆದ ಭಗವಂತನು ವೇದ ಎಂಬ ವಿದ್ಯೆಯ ಸಹಾಯದ ಜೊತೆಗೆ ಹವ್ಯ-ಕವ್ಯಗಳನ್ನು ಉಪಭುಂಜಿಸುತ್ತಾ ಇದ್ದಾನೆ.

ಯೇ ಹಿ ನಿಷ್ಕಲ್ಮಷಾ ಲೋಕೇ ಪುಣ್ಯಪಾಪವಿವರ್ಜಿತಾಃ ।
ತೇಷಾಂ ವೈ ಕ್ಷೇಮಮಧ್ವಾನಂ ಗಚ್ಛತಾಂ ದ್ವಿಜಸತ್ತಮ ।
ಸರ್ವಲೋಕತಮೋಹಂತಾ ಆದಿತ್ಯೋ ದ್ವಾರಮುಚ್ಯತೇ ॥೧೩॥

ನಾರದನೇ, ಯಾರು ಜಗತ್ತಿನಲ್ಲಿ ಪುಣ್ಯ-ಪಾಪಗಳಿಂದ ಮುಕ್ತರಾಗಿ ನಿರ್ಮಲರಾಗಿದ್ದಾರೋ, ಶುಭಮಾರ್ಗದಲ್ಲಿ ಇದ್ದು ಭಗವತ್‌ಸನ್ನಿಧಾನಕ್ಕೆ ತೆರಳುತ್ತಾರೋ ಅವರಿಗೆಲ್ಲ ಅಜ್ಞಾನವೆಂಬ ಕತ್ತಲೆಯನ್ನು ಪರಿಹರಿಸುವ ಸೂರ್ಯನೇ ದ್ವಾರನಾಗಿದ್ದಾನೆಂದು ವಿದ್ವಾಂಸರ ಅಭಿಪ್ರಾಯವು.

ಆದಿತ್ಯದಗ್ಧಸರ್ವಾಂಗಾ ಅದೃಶ್ಯಾಃ ಕೇನಚಿತ್ ಕ್ವಚಿತ್ ।
ಪರಮಾಣುಭೂತಾ ಭೂತ್ವಾ ತು ತಂ ದೇವಂ ಪ್ರವಿಶಂತ್ಯುತ ॥೧೪॥

ಸೂರ್ಯನಿಂದ ದಗ್ಧಾಂಗರಾದ ಜ್ಞಾನಿಗಳು ಅದೃಶ್ಯರಾಗಿ, ಪರಮಾಣು ಸ್ವರೂಪವನ್ನು ಹೊಂದಿದವರಾಗಿ ಸೂರ್ಯನನ್ನೇ ಪ್ರವೇಶಿಸುತ್ತಾರೆ.

ತಸ್ಮಾದಪಿ ವಿನಿರ್ಮುಕ್ತಾ ಅನಿರುದ್ಧತನೌ ಸ್ಥಿತಾಃ ।
ಮನೋಭೂತಾಸ್ತತೋ ಭೂಯಃ ಪ್ರದ್ಯುಮ್ನಂ ಪ್ರವಿಶಂತ್ಯುತ ॥೧೫॥

ಬಳಿಕ ಸೂರ್ಯನಿಂದಲೂ ಹೊರಬಂದು ಅನಿರುದ್ಧನ ಶರೀರಕ್ಕೆ ಸೇರುತ್ತಾರೆ. ಪುನಃ ಮನೋಮಯನಾಗಿ ಪ್ರದ್ಯುಮ್ನನಲ್ಲಿ ಪ್ರವೇಶಿಸುತ್ತಾರೆ.

ಪ್ರದ್ಯುಮ್ನಾಚ್ಚಾಪಿ ನಿರ್ಮುಕ್ತಾ ಜೀವಂ ಸಂಕರ್ಷಣಂ ತಥಾ ।
ವಿಶಂತಿ ವಿಪ್ರಪ್ರವಿರಾಃ ಸಾಂಖ್ಯಾ ಭಾಗವತೈಃ ಸಹ ॥೧೬॥

ಸಾಂಖ್ಯಜ್ಞಾನನಿರತರಾದ ಜ್ಞಾನಿಗಳು ಪ್ರದ್ಯುಮ್ನರೂಪದಿಂದಲೂ ಮುಕ್ತರಾಗಿ ಭಗವದ್ಭಕ್ತರ ಜೊತೆಯಲ್ಲಿ ಜೀವನಿಯಾಮಕನಾದ ಸಂಕರ್ಷಣನನ್ನು ಪ್ರವೇಶಿಸುತ್ತಾರೆ.

ತತಸ್ತ್ರೈಗುಣ್ಯಹೀನಾಸ್ತೇ ಪರಮಾತ್ಮಾನಮಂಜಸಾ ।
ಪ್ರವಿಶಂತಿ ದ್ವಿಜಶ್ರೇಷ್ಠ ಕ್ಷೇತ್ರಜ್ಞಂ ನಿರ್ಗುಣಾತ್ಮಕಮ್ ।
ಸರ್ವಾವಾಸಂ ವಾಸುದೇವಂ ಕ್ಷೇತ್ರಜ್ಞಂ ವಿದ್ಧಿ ತತ್ತ್ವತಃ ॥೧೭॥

ನಂತರ ದ್ವಿಜಶ್ರೇಷ್ಠರಾದ ಸಾಂಖ್ಯಯೋಗಿಗಳು ತ್ರಿಗುಣಗಳಿಂದ ಮುಕ್ತರಾಗಿ ಪ್ರಾಕೃತಗುಣರಹಿತನಾದ, ಕ್ಷೇತ್ರಜ್ಞನಾದ ಪರಮಾತ್ಮನನ್ನು ಹೊಂದುತ್ತಾರೆ. ಸರ್ವರಿಗೂ ಆವಾಸಸ್ಥಾನನಾದ ವಾಸುದೇವನೇ ಯಥಾರ್ಥವಾಗಿ ಕ್ಷೇತ್ರಜ್ಞನೆನಿಸಿದ್ದಾನೆ ಎಂದು ತಿಳಿ.

ಸಮಾಹಿತಮನಸ್ಕಾಶ್ಚ ನಿಯತಾಃ ಸಂಯತೇಂದ್ರಿಯಾಃ ।
ಏಕಾಂತಭಾವೋಪಗತಾ ವಾಸುದೇವಂ ವಿಶಂತಿ ತೇ ॥೧೮॥

ಪರಮಾತ್ಮನಲ್ಲಿಯೇ ಮನಸ್ಸನ್ನಿಟ್ಟಿರುವ, ಜಿತೇಂದ್ರಿಯರಾದ, ವಿಧಿಬದ್ಧವಾಗಿ ವರ್ತಿಸುವ, ಏಕಾಂತ ಭಕ್ತಿಯಿಂದ ದೇವರನ್ನೇ ಮೊರೆಹೊಕ್ಕಿರುವ ಭಕ್ತರು ವಾಸುದೇವನನ್ನು ಹೊಂದುತ್ತಾರೆ.

ಆವಾಮಪಿ ಚ ಧರ್ಮಸ್ಯ ಗೃಹೇ ಜಾತೌ ದ್ವಿಜೋತ್ತಮ ।
ರಮ್ಯಾಂ ವಿಶಾಲಾಮಾಶ್ರಿತ್ಯ ತಪ ಉಗ್ರಂ ಸಮಾಸ್ಥಿತೌ ॥೧೯॥

ದ್ವಿಜಶ್ರೇಷ್ಠನೇ, ಧರ್ಮನ ಮನೆಯಲ್ಲಿ ಉತ್ಪತ್ತಿಯನ್ನು ಹೊಂದಿದ ನಾವು ರಮಣೀಯವಾದ, ವಿಶಾಲವಾದ ಬದರಿಯನ್ನು ಆಶ್ರಯಿಸಿ ಉಗ್ರತಪಸ್ಸಿನಲ್ಲಿ ರತರಾಗಿದ್ದೇವೆ.

ಯೇ ತು ತಸ್ಯೈವ ದೇವಸ್ಯ ಪ್ರಾದುರ್ಭಾವಾಃ ಸುರಪ್ರಿಯಾಃ ।
ಭವಿಷ್ಯಂತಿ ತ್ರಿಲೋಕಸ್ಥಾಸ್ತೇಷಾಂ ಸ್ವಸ್ತೀತ್ಯತೋ ದ್ವಿಜ ॥೨೦॥

ಮೂಲರೂಪಿಯಾದ ನಾರಾಯಣನ ದೇವತೆಗಳಿಗೆ ಪ್ರಿಯವಾದ ಯಾವ ಯಾವ ಅವತಾರಗಳು ಈ ಲೋಕದಲ್ಲಿ ಪ್ರಕಟವಾಗುತ್ತವೋ ಆ ಅವತಾರಗಳಿಗೆಲ್ಲ ಮಂಗಳವಾಗಲಿ ಎಂಬುದೇ ನಮ್ಮ ತಪಸ್ಸಿನ ಉದ್ದೇಶವು.

ವಿಧಿನಾ ಸ್ವೇನ ಯುಕ್ತಾಭ್ಯಾಂ ಯಥಾಪೂರ್ವಂ ದ್ವಿಜೋತ್ತಮ ।
ಆಸ್ಥಿತಾಭ್ಯಾಂ ಸರ್ವಕೃಚ್ಛ್ರಂ ವ್ರತಂ ಸಮ್ಯಕ್ತದುತ್ತಮಮ್ ॥೨೧॥

ದ್ವಿಜಶ್ರೇಷ್ಠನೇ, ನಾವು ಮೊದಲಿನಿಂದಲೂ ವಿಧ್ಯುಕ್ತ ಕರ್ಮಾನುಷ್ಠಾನದಲ್ಲಿ ತೊಡಗಿಸಿಕೊಂಡವರು. ಎಲ್ಲ ರೀತಿಯಾದ ಸರ್ವಕೃಚ್ಛ್ರವೆಂಬ ವ್ರತವನ್ನು ಚೆನ್ನಾಗಿ ಅನುಷ್ಠಾನ ಮಾಡಿದ್ದೇವೆ.

ಆವಾಭ್ಯಾಮಪಿ ದೃಷ್ಟಸ್ತ್ವಂ ಶ್ವೇತದ್ವೀಪೇ ತಪೋಧನ ।
ಸಮಾಗತೋ ಭಗವತಾ ಸಂಜಲ್ಪಂ ಕೃತವಾನ್ಯಥಾ ॥೨೨॥

ತಪೋಧನನೇ, ಶ್ವೇತದ್ವೀಪದಲ್ಲಿಯೂ ನಾವು ಇದ್ದು ಅಲ್ಲಿ ನಿನ್ನನ್ನು ನೋಡಿದ್ದೇವೆ. ನಿನ್ನ ಸ್ತೋತ್ರದಿಂದ ಸಂತುಷ್ಟನಾದ ಹರಿಯು ನಿನ್ನ ಬಳಿ ಮಾತನಾಡಿದ್ದನ್ನು ನಾವು ತಿಳಿದಿದ್ದೇವೆ.

ಸರ್ವಂ ಹಿ ನೌ ಸಂವಿದಿತಂ ತ್ರೈಲೋಕ್ಯೇ ಸಚರಾಚರೇ ।
ಯದ್ಭವಿಷ್ಯತಿ ವೃತ್ತಂ ವಾ ವರ್ತತೇ ವಾ ಶುಭಾಶುಭಮ್ ॥೨೩॥

ಚರಾಚರ ಪ್ರಪಂಚದಲ್ಲಿ ಹಿಂದೆ, ಮುಂದೆ, ಈಗ ನಡೆಯುವ, ಸಮಸ್ತ ಕಾಲದಲ್ಲಿ ನಡೆಯುವ ಶುಭಾಶುಭ ಕರ್ಮಗಳು- ಎಲ್ಲವನ್ನೂ ಶ್ರೀಹರಿಯು ನಿನಗೆ ಉಪದೇಶಿಸಿದನು.

ವೈಶಂಪಾಯನಃ

ಏತಚ್ಛ್ರುತ್ವಾ ತಯೋರ್ವಾಕ್ಯಂ ತಪಸ್ಯುಗ್ರೇऽಭ್ಯವರ್ತತ ।
ನಾರದಃ ಪ್ರಾಂಜಲಿರ್ಭೂತ್ವಾ ನಾರಾಯಣಪರಾಯಣಃ ॥೨೪॥

ಜಜಾಪ ವಿಧಿವನ್ ಮಂತ್ರಾನ್ನಾರಾಯಣಗತಾನ್ ಬಹೂನ್ ।
ದಿವ್ಯಂ ವರ್ಷಸಹಸ್ರಂ ಹಿ ನರನಾರಾಯಣಾಶ್ರಮೇ ॥೨೫॥

ವೈಶಂಪಾಯನ– ಕಠೋರವಾದ ತಪಸ್ಸಿನಲ್ಲಿ ತೊಡಗಿದ್ದ ನರ-ನಾರಾಯಣರ ಮಾತನ್ನು ಕೇಳಿ, ಅವರ ಆಶ್ರಮದಲ್ಲಿಯೇ ಇದ್ದು, ದಿವ್ಯವರ್ಷಗಳ ಸಂಖ್ಯೆಯಲ್ಲಿ ಸಾವಿರ ವರ್ಷಗಳ ಕಾಲ ನಾರಾಯಣನಿಗೆ ಸಂಬಂಧಿಸಿದ ಅನೇಕ ಮಂತ್ರಗಳನ್ನು ವಿಧಿಬದ್ಧವಾಗಿ ಪ್ರಾಂಜಲಮನಸ್ಕರಾಗಿ ಜಪಿಸಿದರು.

ಅವಸತ್ಸ ಮಹಾತೇಜಾ ನಾರದೋ ಭಗವಾನೃಷಿಃ ।
ತಮೇವಾಭ್ಯರ್ಚಯನ್ ದೇವಂ ನರನಾರಾಯಣೌ ಚ ತೌ ॥೨೬॥

ಮಹಾತೇಜಸ್ವಿಗಳಾದ, ಪೂಜ್ಯರಾದ ನಾರದರು ಶ್ವೇತದ್ವೀಪ ನಿವಾಸಿಯಾದ ನರ-ನಾರಾಯಣರನ್ನು ಸೇವಿಸುತ್ತಾ ಅಲ್ಲಿಯೇ ಬಹಳ ಕಾಲ ವಾಸಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಸಪ್ತತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆಂಟನೆಯ ಅಧ್ಯಾಯ

ವರಾಹರೂಪಿಯಾದ ಹರಿಯು ನಿರೂಪಿಸಿದ ಪಿತೃಪೂಜೆ.

ವೈಶಂಪಾಯನಃ

ಕಸ್ಯಚಿತ್ತ್ವಥ ಕಾಲಸ್ಯ ನಾರದಃ ಪರಮೇಷ್ಠಿಜಃ ।
ದೈವಂ ಕೃತ್ವಾ ಯಥಾನ್ಯಾಯಂ ಪಿತ್ರ್ಯಂ ಚಕ್ರೇ ತತಃ ಪರಮ್ ॥೧॥

ವೈಶಂಪಾಯನ– ಜನಮೇಜಯನೇ, ಒಂದು ಸಮಯದಲ್ಲಿ ಪರಮೇಷ್ಠಿಯ ಸುತನಾದ ನಾರದರು ವಿಧಿಗೆ ಅನುಗುಣವಾಗಿ ದೇವಕಾರ್ಯಗಳನ್ನು ಮಾಡಿ ಬಳಿಕ ಪಿತೃಕಾರ್ಯಗಳನ್ನು ನಡೆಸಿದರು.

ತತಸ್ತಂ ವಚನಂ ಪ್ರಾಹ ಜ್ಯೇಷ್ಠೋ ಧರ್ಮಾತ್ಮಜಃ ಪ್ರಭುಃ ।
ಕ ಇಜ್ಯತೇ ದ್ವಿಜಶ್ರೇಷ್ಠ ದೈವೇ ಪಿತ್ರ್ಯೇ ಚ ಕಲ್ಪಿತೇ ॥೨॥

ಆ ಸಮಯದಲ್ಲಿ ಧರ್ಮನ ಜ್ಯೇಷ್ಠಪುತ್ರನು ನಾರದರನ್ನು ಪ್ರಶ್ನಿಸಿದನು: ದ್ವಿಜಶ್ರೇಷ್ಠನೇ, ದೇವಕಾರ್ಯ-ಪಿತೃಕಾರ್ಯಗಳಿಂದ ನೀನು ಯಾರನ್ನು ಪೂಜಿಸಿರುವಿ?

ತ್ವಯಾ ಮತಿಮತಾಂ ಶ್ರೇಷ್ಠ ತನ್ಮೇ ಶಂಸ ಯಥಾಗಮಮ್ ।
ಕಿಮೇತತ್ಕ್ರಿಯತೇ ಕರ್ಮ ಫಲಂ ಚಾಸ್ಯ ಕಿಮಿಷ್ಯತೇ ॥೩॥

ಬುದ್ಧಿವಂತರಲ್ಲಿ ಅಗ್ರಗಣ್ಯನೇ, ಕರ್ಮಗಳನ್ನು ಏಕೆ ಆಚರಿಸಬೇಕು? ಇದರಿಂದಾಗುವ ಲಾಭವೇನು? ಶಾಸ್ತ್ರವಿಧಿಗನುಗುಣವಾಗಿ ಉತ್ತರಿಸು.

ನಾರದಃ

ತ್ವಯ್ಯೈತತ್ ಕಥಿತಂ ಪೂರ್ವಂ ದೈವಂ ಕರ್ತವ್ಯಮಿತ್ಯಪಿ ।
ದೈವತಂ ಚ ಪರೋ ಯಜ್ಞಃ ಪರಮಾತ್ಮಾ ಸನಾತನಃ ॥೪॥

ನಾರದ– ಭಗವನ್ ಹಿಂದೆ ನೀನೇ ದೇವಕಾರ್ಯವು ಪ್ರತಿಯೊಬ್ಬರ ಕರ್ತವ್ಯವು ಎಂದು ಹೇಳಿರುವಿ. ಪರಮಶ್ರೇಷ್ಠವಾದ ಯಜ್ಞ ದೇವಕಾರ್ಯವು. ಅದು ಸನಾತನನಾದ ಪರಮಾತ್ಮನ ಸ್ವರೂಪವೇ ಆಗಿದೆ.

ತತಸ್ತದ್ಭಾವಿತೋ ನಿತ್ಯಂ ಯಜೇ ವೈಕುಂಠಮವ್ಯಯಮ್ ।
ತಸ್ಮಾಚ್ಚ ಪ್ರಧೃತಃ ಪೂರ್ವಂ ಬ್ರಹ್ಮಾ ಲೋಕಪಿತಾಮಹಃ ॥೫॥

ನಿನ್ನ ಉಪದೇಶದಿಂದ ಪ್ರಭಾವಿತನಾದ ನಾನು ನಿತ್ಯವೂ ಶಾಶ್ವತನಾದ ಅವ್ಯಯನಾದ ವೈಕುಂಠನನ್ನು ಆರಾಧಿಸುತ್ತೇನೆ. ಆ ವೈಕುಂಠದಿಂದಲೇ ಪ್ರಳಯ ಕಾಲದಲ್ಲಿ ಚತುರ್ಮುಖ ಬ್ರಹ್ಮನು ಉದರದಲ್ಲಿ ಧರಿಸಲ್ಪಟ್ಟಿದ್ದಾನೆ.

ಮಮ ವೈ ಪಿತರಂ ಪ್ರೀತಃ ಪರಮೇಷ್ಠ್ಯಪ್ಯಜೀಜನತ್ ।
ಅಹಂ ಸಂಕಲ್ಪಜಸ್ತಸ್ಯ ಪುತ್ರಃ ಪ್ರಥಮಕಲ್ಪಿತಃ ॥೬॥

ಪ್ರೀತನಾದ ನಾರಾಯಣನು ನನ್ನ ತಂದೆಯಾದ ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸಿದನು. ನಾರಾಯಣನ ಮೊದಲನೆಯ ಮಗನಾದ ಬ್ರಹ್ಮನ ಮನಸ್ಸಂಕಲ್ಪದಿಂದ ಹುಟ್ಟಿದವನು ನಾನು.

ಯಜಾಮ್ಯಹಂ ಪಿತೄನ್ ಸಾಧೋ ನಾರಾಯಣವಿಧೌ ಕೃತೇ ।
ಏವಂ ಸ ಏವ ಭಗವಾನ್ ಪಿತಾ ಮಾತಾ ಪಿತಾಮಹಃ ।
ಇಜ್ಯತೇ ಪಿತೃಯಜ್ಞೇಷು ಮಯಾ ನಿತ್ಯಂ ಜಗತ್ಪತಿಃ ॥೭॥

ನಾನು ಮೊದಲಿಗೆ ನಾರಾಯಣನನ್ನು ಆರಾಧಿಸಿದ ಬಳಿಕ ಪಿತೃಗಳನ್ನು ಪೂಜಿಸುತ್ತೇನೆ. ನನಗೆ ಭಗವಂತನೇ ತಂದೆ-ತಾಯಿ, ಪಿತಾಮಹ ಎಲ್ಲವೂ ಆಗಿದ್ದಾನೆ. ಪಿತೃಯಜ್ಞದಲ್ಲಿಯೂ ಭಗವಂತನೇ ನನ್ನಿಂದ ಆರಾಧಿಸಲ್ಪಡುತ್ತಾನೆ.

ಶ್ರುತಿಶ್ಚಾಪ್ಯಪರಾ ದೇವಾಃ ಪುತ್ರಾ ಹಿ ಪಿತರೌ ಯಜನ್ ।
ವೇದಶ್ರುತಿಃ ಪ್ರಣಷ್ಟಾ ಚ ಪುನರಧ್ಯಾಪಿತಾ ಸುತೈಃ ।
ತತಸ್ತೇ ಮಂತ್ರದಾಃ ಪುತ್ರಾಃ ಪಿತೃತ್ವಮುಪಪೇದಿರೇ ॥೮॥

ಮಾತಾ-ಪಿತೃರೂಪರಾದ ನಾರಾಯಣಮೂರ್ತಿಗಳೇ ಪಿತೃಗಳ ಮೂಲಕ ಆರಾಧಿಸಿದರು ಎಂದು ಮತ್ತೊಂದು ಶ್ರುತಿಯಿದೆ. ವೇದಶ್ರುತಿಗಳು ನಾಶವಾದಾಗ ಮಕ್ಕಳಾದ ಅಗ್ನಿಶ್ವಾತ್ತಾದಿಗಳಿಂದ ದೇವತೆಗಳು ಪುನಃ ಅವುಗಳನ್ನು ಕಲಿತರು. ಆದ್ದರಿಂದ ಅಗ್ನಿಶ್ವಾತ್ತಾದಿ ದೇವತೆಗಳು ತಮ್ಮ ತಂದೆಗಳಿಗೆ ಉಪದೇಶದ ಮೂಲಕ ಪಿತೃತ್ವವನ್ನು ಹೊಂದಿದರು.

ವ್ಯಾಖ್ಯಾನ ವಿಶೇಷ– ಯಾರು ಯಾರಿಂದ ಜ್ಞಾನವನ್ನು ಹೊಂದುತ್ತಾರೋ, ಜ್ಞಾನವನ್ನು ನೀಡಿದವರು ತಂದೆಗೆ ಸಮಾನರು ಎಂದು ಶ್ರುತಿ ಇದೆ. 'ಯಸ್ತಾವಿಜಾನಾತ್ಸಪಿತುಷ್ಪಿತಾಸತ್' ಎಂದು.

ನೂನಂ ಪುರೈತದ್ ವಿದಿತಂ ಯುವಯೋರ್ಭಾವಿತಾತ್ಮನೋಃ ।
ಪುತ್ರಾಶ್ಚ ಪಿತರಶ್ಚೈವ ಪರಸ್ಪರಮಪೂಜಯನ್ ॥೯॥

ತಂದೆ ಮಕ್ಕಳು ಪರಸ್ಪರವಾಗಿ ಪೂಜಿಸಿದರೆಂಬ ವಿಷಯವು ನಿಮಗೆ ಮೊದಲಿನಿಂದಲೂ ತಿಳಿದಿರುತ್ತದೆ. ಇದು ಸರಿಯಾಗಿದೆ ಎಂದು ದೇವರು ಈ ಕ್ರಿಯೆಯನ್ನು ಅನುಮೋದಿಸಿರುತ್ತಾನೆ.

ತ್ರೀನ್ ಪಿಂಡಾನ್ನ್ಯಸ್ಯ ವೈ ಪೃಥ್ವ್ಯಾಂ ಪೂರ್ವಂ ದತ್ತ್ವಾ ಕುಶಾನಿತಿ ।
ಕಥಂ ತು ಪಿಂಡಸಂಜ್ಞಾಂ ತೇ ಪಿತರೋ ಲೇಭಿರೇ ಪುರಾ ॥೧೦॥

ದೇವತೆಗಳು ಆರಂಭದಲ್ಲಿ ನೆಲದ ಮೇಲೆ ದರ್ಭೆಗಳನ್ನು ಹಾಸಿ ಬಳಿಕ ಅದರ ಮೇಲೆ ಮೂರು ಪಿಂಡಗಳನ್ನು ಸ್ಥಾಪಿಸಿ ಪೂಜಿಸಿದ ಕಾರಣವೇನು? ಪಿತೃಗಳಿಗೆ ಪಿಂಡ ಎಂಬ ಹೆಸರು ಏಕೆ ಬಂದಿತು?

ನರನಾರಾಯಣೌ

ಇಮಾಂ ಹಿ ಧರಣೀಂ ಪೂರ್ವಂ ನಷ್ಟಾಂ ಸಾಗರಮೇಖಲಾಮ್ ।
ಗೋವಿಂದ ಉಜ್ಜಹಾರಾಶು ವಾರಾಹಂ ರೂಪಮಾಶ್ರಿತಃ ॥೧೧॥

ನರ-ನಾರಾಯಣ– ನಾರದನೇ, ಗೋವಿಂದನು ಹಿಂದೆ ನಾಶ ಹೊಂದಿದ್ದ ಸಾಗರದಿಂದ ಕೂಡಿರುವ ಭೂಮಿಯನ್ನು ವರಾಹರೂಪದಿಂದ ಉದ್ಧರಿಸಿದನು.

ಸ್ಥಾಪಯಿತ್ವಾ ತು ಧರಣೀಂ ಸ್ವೇ ಸ್ಥಾನೇ ಪುರುಷೋತ್ತಮಃ ।
ಜಲಕರ್ದಮಲಿಪ್ತಾಂಗೋ ಲೋಕಕಾರ್ಯಾರ್ಥಮುದ್ಯತಃ ॥೧೨॥

ಲೋಕದ ಹಿತಕಾರ್ಯಕ್ಕಾಗಿ ಉದ್ಯಮಶೀಲನಾದ ಶ್ರೀಹರಿಯು ಭೂಮಿಯನ್ನು ಅದರ ಕಕ್ಷೆಯಲ್ಲಿ ಸ್ಥಾಪಿಸಿ, ನೀರಿನಲ್ಲಿರುವ ಕೆಸರಿನಿಂದ ಲಿಪ್ತವಾದ ಅವಯವಗಳಿಂದ ಕೂಡಿದನು.

ಪ್ರಾಪ್ತೇ ಚಾಹ್ನಿಕಕಾಲೇ ಸ ಮಧ್ಯಂದಿನಗತೇ ರವೌ ।
ದಂಷ್ಟ್ರಾವಿಲಗ್ನಾನ್ ಮೃತ್ಪಿಂಡಾನ್ ವಿಧೂಯ ಸಹಸಾ ಪ್ರಭುಃ ।
ಸ್ಥಾಪಯಾಮಾಸ ವೈ ಪೃಥ್ವ್ಯಾಂ ಕುಶಾನಾಸ್ತೀರ್ಯ ನಾರದ ॥೧೩॥

ಸ ತೇಷ್ವಾತ್ಮಾನಮುದ್ದಿಶ್ಯ ಪಿತ್ರ್ಯಂ ಚಕ್ರೇ ಯಥಾವಿಧಿ ।
ಸಂಕಲ್ಪಯಿತ್ವಾ ತ್ರೀನ್ ಪಿಂಡಾನ್ಸ್ವೇನೈವ ವಿಧಿನಾ ಪ್ರಭುಃ ॥೧೪॥

ಆತ್ಮಗಾತ್ರೋಷ್ಮಸಂಭೂತೈಃ ಸ್ನೇಹಗರ್ಭೈಸ್ತಿಲೈರಪಿ ।
ಪ್ರೋಕ್ಷ್ಯಾಪವರ್ಗಂ ದೇವೇಶಃ ಪ್ರಾಙ್ಮುಖಃ ಕೃತವಾನ್ಸ್ವಯಮ್ ॥೧೫॥

ಮರ್ಯಾದಾಸ್ಥಾಪನಾರ್ಥಂ ಚ ತತೋ ವಚನಮುಕ್ತವಾನ್ ।
ಅಹಂ ಹಿ ಪಿತರಃ ಸ್ರಷ್ಟುಮುದ್ಯತೋ ಲೋಕಕೃತ್ ಸ್ವಯಮ್ ॥೧೬॥

ನಡುನೆತ್ತಿಗೆ ಸೂರ್ಯನು ಬರಲು ಮಧ್ಯಾಹ್ನಕಾಲದ ಆಹ್ನಿಕ ಸಮಯವು ಬಂದಿತು. ವರಾಹಮೂರ್ತಿಯು ತನ್ನ ಕೋರೆಗಳಿಗೆ ಮೆತ್ತಿರುವ ಮಣ್ಣಿನಿಂದ ಮೂರು ಪಿಂಡಗಳನ್ನು ಮಾಡಿದನು. ಬಳಿಕ ದರ್ಭೆಗಳ ಮೇಲೆ ಆ ಮೂರು ಮಣ್ಣಿನ ಪಿಂಡಗಳನ್ನು ಸ್ಥಾಪಿಸಿ ತನ್ನನ್ನೇ ಉದ್ದೇಶಿಸಿ ಪಿತೃಗಳನ್ನು ಆಹ್ವಾನಿಸಿ ಪೂಜಿಸಿದನು. ದೇವೇಶನಾದ ವರಾಹ ಮೂರ್ತಿಯು ತನ್ನದ್ದೇ ಆದ ವಿಧಿಯಿಂದ ಸಂಕಲ್ಪಿಸಿ ತನ್ನ ಶರೀರದ ಶಾಖದಿಂದ ಹುಟ್ಟಿದ ಎಣ್ಣೆಯಿಂದ ಸಿದ್ಧವಾದ ಎಳ್ಳುಗಳಿಂದ ಮೂರು ಪಿಂಡಗಳನ್ನು ಅಪ್ರದಕ್ಷಿಣವಾಗಿ ಪೂಜಿಸಿದನು. ಈ ಪಿಂಡಪೂಜೆಯಲ್ಲಿ ನಿಯಮವನ್ನು ಹೇಳುವ ದೃಷ್ಟಿಯಿಂದ ಪೂರ್ವಕ್ಕೆ ಕುಳಿತು ಹೀಗೆ ಹೇಳಿದನು: ನಾನೇ ಸಮಸ್ತ ಲೋಕದ ಸೃಷ್ಟಿಕರ್ತನಾಗಿದ್ದೇನೆ.

ತಸ್ಯ ಚಿಂತಯತಃ ಸದ್ಯಃ ಪಿತೃಕಾರ್ಯವಿಧಿಂ ಪರಮ್ ।
ದಂಷ್ಟ್ರಾಭ್ಯಾಂ ಪ್ರವಿನಿರ್ಧೂತಾ ಮಮೈತೇ ದಕ್ಷಿಣಾಂ ದಿಶಮ್ ।
ಆಶ್ರಿತಾ ಧರಣೀಂ ಪಿಂಡಾಸ್ತಸ್ಮಾತ್ ಪಿತರ ಏವ ತೇ ॥೧೭॥

ನಾನು ಯಾವಾಗ ಪಿತೃಗಳನ್ನು ಸೃಷ್ಟಿಸಲು ಆರಂಭಿಸಿದೆನೋ ಪಿತೃಕಾರ್ಯ ವಿಧಿಗಳನ್ನು ಯೋಜಿಸುತ್ತಿದ್ದೆನೋ ಆ ಸಮಯದಲ್ಲಿಯೇ ನನ್ನ ಕೋರೆದಾಡೆಗಳಿಂದ ಮೂರು ಪಿಂಡಗಳು ದಕ್ಷಿಣ ದಿಕ್ಕಿನ ಕಡೆ ಭೂಮಿಯ ಮೇಲೆ ಬಿದ್ದವು. ಆದ್ದರಿಂದ ಪಿತೃದೇವತೆಗಳಿಂದ ಅಭಿಮನ್ಯಮಾನವಾದ ಆ ಪಿಂಡಗಳಿಗೆ ಪಿತೃ ಎಂಬ ಹೆಸರು ಬಂದಿತು.

ತ್ರಯೋ ಮೂರ್ತಿವಿಹೀನಾ ವೈ ಪಿಂಡಮೂರ್ತಿಧರಾಸ್ತ್ವಿ ಮೇ ।
ಭವಂತು ಪಿತರೋ ಲೋಕೇ ಮಯಾ ಸೃಷ್ಟಾಃ ಸನಾತನಾಃ ॥೧೮॥

ಮನುಷ್ಯರಿಂದ ಪೂಜಿಸಲ್ಪಡುವ ಪಿತೃಗಳು ಅಮೂರ್ತರೆನಿಸಿದ್ದಾರೆ. ಮನುಷ್ಯರ ಕಣ್ಣಿಗೆ ಗೋಚರಿಸುವ ಮೂರ್ತಿ ಇಲ್ಲದೆ ಇರುವ ಕಾರಣ ಅಮೂರ್ತರೆಂದು ಹೆಸರು. ದೇವತೆಗಳಿಂದ ಪೂಜ್ಯಮಾನರಾದ ಪಿತೃಗಳು ದುರ್ಗೋಚರರಾದುದರಿಂದ ಸುಮೂರ್ತರೆನಿಸಿದ್ದಾರೆ. ಭೂಮಿಯಲ್ಲಿ ಆಚರಿಸುವ ಮನುಷ್ಯರಿಗೆ ಸಂಬಂಧಿಸಿದ ಕ್ರಿಯೆಯು ಅಮೂರ್ತ ಎನಿಸಿದೆ. 'ಅಮೂರ್ತಾನಾಂ ಸುಮೂರ್ತಾನಾಂ' ಎಂದು ಪಿತೃಗಳಿಗೆ ಸಂಬಂಧಿಸಿದ ವಚನಕ್ಕೆ ಈ ರೀತಿ ಅರ್ಥವೆಂದು ಭಾವ.

ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ಅಹಮೇವಾತ್ರ ವಿಜ್ಞೇಯಸ್ತ್ರಿಷು ಪಿಂಡೇಷು ಸಂಸ್ಥಿತಃ ॥೧೯॥

ಮೂರು ಪಿಂಡಗಳು ಪಿತೃ-ಪಿತಾಮಹ-ಪ್ರಪಿತಾಮಹ ರೂಪವಾಗಿವೆ. ಆ ಮೂರೂ ಪಿಂಡಗಳಲ್ಲಿ ಪಿತೃ-ಪಿತಾಮಹ-ಪ್ರಪಿತಾಮಹ ರೂಪದಲ್ಲಿ ನಾನೇ ಇದ್ದೇನೆ.

ನಾಸ್ತಿಮತ್ತೋಧಿಕಃಕಶ್ಚಿತ್ತ್ವೋವಾಭ್ಯರ್ಚ್ಯೋ ಮಯಾ ಸ್ವಯಮ್ ।
ಕೋ ವಾ ಮಮ ಪಿತಾ ಲೋಕೇ ಅಹಮೇವ ಪಿತಾಮಹಃ ॥೨೦॥

ಜಗತ್ತಿನಲ್ಲಿ ನನಗಿಂತ ಅಧಿಕನಾದವನು ಯಾರೂ ಇಲ್ಲ. ನನ್ನಿಂದ ಪೂಜೆ ಹೊಂದುವ ಅರ್ಹತೆಯು ಯಾರಿಗೂ ಇಲ್ಲ. ನನಗೆ ತಂದೆ ಯಾರು? ಆದ್ದರಿಂದ ನಾನೇ ಪಿತಾಮಹನಾಗಿದ್ದೇನೆ.

ಪಿತಾಮಹಪಿತಾ ಚೈವ ಅಹಮೇವಾತ್ರ ಕಾರಣಮ್ ।
ಇತ್ಯೇವಮುಕ್ತ್ವಾ ವಚನಂ ದೇವದೇವೋ ವೃಷಾಕಪಿಃ ॥೨೧॥

ಪಿತಾಮಹನಿಗೂ ನಾನೇ ತಂದೆಯಾಗಿದ್ದೇನೆ. ಜಗತ್ತಿಗೆಲ್ಲ ನಾನೇ ಕಾರಣನಾದವನು. ವೃಷಾಕಪಿಯಾದ ವರಾಹರೂಪಿಯಾದ ಪರಮಾತ್ಮನು ಈ ರೀತಿಯಾದ ವಚನವನ್ನು ಹೇಳಿ ಹೊರಟನು.

ವರಾಹಪರ್ವತೇ ವಿಪ್ರಾ ದತ್ತ್ವಾ ಪಿಂಡಾನ್ ಸವಿಸ್ತರಾನ್ ।
ಆತ್ಮಾನಂ ಪೂಜಯಿತ್ವೈವ ತತ್ರೈವಾದರ್ಶನಂ ಗತಃ ॥೨೨॥

ವರಾಹನು ವರಾಹಪರ್ವತದಲ್ಲಿ ವಿಧಿಪೂರ್ವಕವಾಗಿ, ವಿಸ್ತಾರವಾಗಿ ಪಿಂಡ ಪ್ರದಾನವನ್ನು ಮಾಡಿ, ತನ್ನನ್ನೇ ಪಿಂಡಪೂಜೆಯ ಮೂಲಕ ಪೂಜಿಸಿಕೊಂಡು ಅದೃಶ್ಯನಾದನು.

ಏತದರ್ಥಂ ಶುಭಮತೇ ಪಿತರಃ ಪಿಂಡಸಂಜ್ಞಿತಾಃ ।
ಲಭಂತೇ ಸತತಂ ಪೂಜಾಂ ವೃಷಾಕಪಿವಚೋ ಯಥಾ ॥೨೩॥

ಈ ರೀತಿ ವರಾಹನು ಪಿಂಡಗಳ ಮೂಲಕ ಪಿತೃಗಳ ಪೂಜೆಯನ್ನು ವಿಧಿಸಿದ್ದಾನೆ. ಆದ್ದರಿಂದಲೇ ಪಿತೃಗಳು ಪಿಂಡ ಎಂಬ ಸಂಜ್ಞೆಯನ್ನು ಹೊಂದಿದ್ದಾರೆ. ವೃಷಾಕಪಿ ಎನಿಸಿದ ವರಾಹನ ಮಾತಿನಂತೆ ಪಿತೃದೇವತೆಗಳು ಪಿಂಡಗಳ ಮೂಲಕ ಪೂಜಿತರಾಗುತ್ತಿದ್ದಾರೆ.

ಯೇ ಯಜಂತಿ ಪಿತೄನ್ ದೇವಾನ್ ಗುರೂಂಶ್ಚೈವಾತಿಥೀಂಸ್ತಥಾ ।
ಗಾಶ್ಚೈವ ದ್ವಿಜಮುಖ್ಯಾಂಶ್ಚ ಪೃಥಿವೀಂ ಮಾತರಂ ತಥಾ ।
ಕರ್ಮಣಾ ಮನಸಾ ವಾಚಾ ವಿಷ್ಣುಮೇವ ಯಜಂತಿ ತೇ ॥೨೪॥

ಯಾರು ಮಾತು, ಮನಸ್ಸು, ಕೃತಿಗಳಿಂದ ಪಿತೃಗಳನ್ನು, ದೇವತೆಗಳನ್ನು, ಗುರುಜನರನ್ನು, ಅತಿಥಿ, ಗೋವು, ಬ್ರಾಹ್ಮಣ, ಪೃಥಿವಿ, ತಾಯಿ ಇವರನ್ನು ಆರಾಧಿಸುತ್ತಾರೋ ಅವರು ಅಂತರ್ಯಾಮಿಯಾದ ವಿಷ್ಣುವನ್ನೆ ಪೂಜಿಸಿದಂತೆ.

ಅಂತರ್ಗತಃ ಸ ಭಗವಾನ್ ಸರ್ವಸತ್ತ್ವಶರೀರಗಃ ।
ಸಮಃ ಸರ್ವೇಷು ಭೂತೇಷು ಈಶ್ವರಃ ಸುಖದುಃಖಯೋಃ ।
ಮಹಾನ್ಮಹಾತ್ಮಾ ಸರ್ವಾತ್ಮಾ ನಾರಾಯಣ ಇತಿ ಶ್ರುತಃ ॥೨೫॥

ಸಮಸ್ತ ಜೀವರ ಅಂತರ್ಯಾಮಿಯಾಗಿ ಭಗವಂತನು ಇದ್ದಾನೆ. ಎಲ್ಲ ಜೀವರಲ್ಲಿಯೂ ಅಂತರ್ಯಾಮಿಯಾಗಿರುವ ಸುಖ-ದುಃಖಗಳಿಗೆ ಸ್ವಾಮಿಯಾದ ಭಗವಂತನೇ ಮಹಾತ್ಮನೂ, ಸರ್ವಾತ್ಮನೂ, ನಾರಾಯಣನು ಎಂದು ಪ್ರಸಿದ್ಧನಾಗಿದ್ದಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಾಶೀತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ

ನಾರಾಯಣನ ಮಹಿಮೆಯ ಉಪಸಂಹಾರ

ವೈಶಂಪಾಯನಃ

ಶ್ರುತ್ವೈತನ್ನಾರದೋ ವಾಕ್ಯಂ ನರನಾರಾಯಣೇರಿತಮ್ ।
ಅತ್ಯಂತಭಕ್ತಿಮಾನ್ ದೇವೇ ಏಕಾಂತಿತ್ವಮುಪೇಯಿವಾನ್ ॥೧॥

ವೈಶಂಪಾಯನ– ಜನಮೇಜಯನೇ, ನಾರದರು ನರ-ನಾರಾಯಣರು ಹೇಳಿದ ಮಾತನ್ನು ಕೇಳಿಸಿಕೊಂಡು ಕ್ರೀಡಾದಿ ಗುಣವಿಶಿಷ್ಟನಾದ ಭಗವಂತನಲ್ಲಿ ಅತ್ಯಂತ ಭಕ್ತಿಯುಳ್ಳವರಾದರು. ನಾರಾಯಣನ ಅನನ್ಯಭಕ್ತರಾದರು.

ಪ್ರೋಷ್ಯ ವರ್ಷಸಹಸ್ರಂ ತು ನರನಾರಾಯಣಾಶ್ರಮೇ ।
ಶ್ರುತ್ವಾ ಭಗವದಾಖ್ಯಾನಂ ದೃಷ್ಟ್ವಾ ಚ ಹರಿಮವ್ಯಯಮ್ ।
ಹಿಮವಂತಂ ಜಗಾಮಾಶು ಯತ್ರಾಸ್ಯ ಸ್ವಕ ಆಶ್ರಮಃ ॥೨॥

ನಾರದರು ನರ-ನಾರಾಯಣರ ಆಶ್ರಮದಲ್ಲಿಯೇ ಒಂದು ಸಾವಿರ ವರ್ಷಗಳ ತನಕ ವಾಸವಾಗಿದ್ದು, ಪ್ರತಿದಿನವೂ ಭಗವದ್‌ಕಥೆಯನ್ನು ಶ್ರವಣ ಮಾಡುತ್ತಾ, ನಾಶರಹಿತನಾದ ಹರಿಯನ್ನೇ ನೋಡುತ್ತಾ, ಬಳಿಕ ತಮ್ಮದೇ ಆದ ಆಶ್ರಮವಿರುವ ಹಿಮವತ್ ಪರ್ವತಕ್ಕೆ ಹೊರಟು ಹೋದರು.

ತಾವಪಿ ಖ್ಯಾತತಪಸೌ ನರನಾರಾಯಣಾವೃಷೀ ।
ತಸ್ಮಿನ್ನೇವಾಶ್ರಮೇ ರಮ್ಯೇ ತೇಪತುಸ್ತಪ ಉತ್ತಮಮ್ ॥೩॥

ಪ್ರಸಿದ್ಧತಪಸ್ವಿಗಳಾದ ನರ-ನಾರಾಯಣ ಋಷಿಗಳಾದರೂ ಆ ಬದರಿಕಾಶ್ರಮದಲ್ಲಿ ಶ್ರೇಷ್ಠವಾದ ತಪಸ್ಸಿನಲ್ಲಿ ತೊಡಗಿಸಿಕೊಂಡಿದ್ದಾರೆ.

ತ್ವಮಪ್ಯಮಿತವಿಕ್ರಾಂತಃ ಪಾಂಡವಾನಾಂ ಕುಲೋದ್ವಹಃ ।
ಪಾವಿತಾತ್ಮಾದ್ಯ ಸಂವೃತ್ತಃ ಶ್ರುತ್ವೇಮಾಮಾದಿತಃ ಕಥಾಮ್ ॥೪॥

ಜನಮೇಜಯನೇ, ಪಾಂಡವಕುಲೋತ್ಪನ್ನನಾದ, ಪರಾಕ್ರಮಿಯಾದ ನೀನು ನಾರಾಯಣನ ಮಹಿಮೆಯನ್ನು ಕೇಳಿ ಪವಿತ್ರನಾಗಿರುವಿ.

ನೈವ ತಸ್ಯ ಪರೋ ಲೋಕೋ ನಾಯಂ ಪಾರ್ಥಿವಸತ್ತಮ ।
ಕರ್ಮಣಾ ಮನಸಾ ವಾಚಾ ಯೋ ದ್ವಿಷ್ಯಾದ್ ವಿಷ್ಣುಮವ್ಯಯಮ್ ॥

ಯಾವನು ಅವ್ಯಯನಾದ ವಿಷ್ಣುವನ್ನು ಮಾತು, ಮನಸ್ಸು, ಕೃತಿಗಳಿಂದ ದ್ವೇಷಿಸುತ್ತಾನೊ ಅವನಿಗೆ ಪರಲೋಕವೂ ದೊರೆಯುವುದಿಲ್ಲ, ಇಹಲೋಕದಲ್ಲಿ ಸುಖವಿಲ್ಲ. ಉಭಯಲೋಕಗಳಿಂದಲೂ ಭ್ರಷ್ಟನಾಗುತ್ತಾನೆ.

ಮಜ್ಜಂತಿ ಪಿತರಸ್ತಸ್ಯ ನರಕೇ ಶಾಶ್ವತೀಃ ಸಮಾಃ ।
ಯೋ ದ್ವಿಷ್ಯಾದ್ ವಿಬುಧಶ್ರೇಷ್ಠಂ ದೇವಂ ನಾರಾಯಣಂ ಹರಿಮ್ ॥೬॥

ಯಾವನು ದೇವಶ್ರೇಷ್ಠನಾದ ಹರಿಯನ್ನು, ನಾರಾಯಣನನ್ನು ದ್ವೇಷಿಸುತ್ತಾನೋ ಅವನ ಪಿತೃಗಳೂ ಕೂಡ ಶಾಶ್ವತವಾದ ನರಕದಲ್ಲಿ ಬೀಳುತ್ತಾರೆ.

ಕಥಂ ನಾಮ ಭವೇದ್ ದ್ವೇಷ್ಯ ಆತ್ಮಾ ಲೋಕಸ್ಯ ಕಸ್ಯಚಿತ್ ।
ಆತ್ಮಾ ಹಿ ಪುರುಷವ್ಯಾಘ್ರ ಜ್ಞೇಯೋ ವಿಷ್ಣುರಿತಿ ಸ್ಥಿತಿಃ ॥೭॥

ಪುರುಷವ್ಯಾಘ್ರನೇ, ಲೋಕದಲ್ಲಿ ತಮ್ಮ ಆತ್ಮವೇ ಯಾರಿಗೂ ಶತ್ರುವಾಗದು. ನಾರಾಯಣನು ಜಗತ್ತಿಗೆ ಆತ್ಮ ಎನಿಸಿದ್ದಾನೆ. ಆದ್ದರಿಂದ ಅವನು ದ್ವೇಷ್ಯನು ಎಂದಿಗೂ ಆಗನು.

ಯ ಏಷ ಗುರುರಸ್ಮಾಕಮೃಷಿರ್ಗಂಧವತೀಸುತಃ ।
ತೇನೈತತ್ ಕಥಿತಂ ತಾತ ಮಾಹಾತ್ಮ್ಯಂ ಪರಮಾತ್ಮನಃ ।
ತಸ್ಮಾಚ್ಚ್ರುತಂ ಮಯಾ ಚೇದಂ ಕಥಿತಂ ಚ ತವಾನಘ ॥೮॥

ಗಂಧವತಿಯಾದ ಸತ್ಯವತಿಯ ಮಗನೆನಿಸಿದ ವ್ಯಾಸರು ನಮಗೆ ಗುರುಗಳಾಗಿದ್ದಾರೆ. ಅವರಿಂದ ಹೇಳಲ್ಪಟ್ಟ ಶ್ರೇಷ್ಠವೂ, ಅವ್ಯಯವೂ ಆದ ವಿಷ್ಣುವಿನ ಮಹಿಮೆಯನ್ನು ನಿನಗೆ ಹೇಳಿದ್ದೇನೆ. ಈ ರಹಸ್ಯವಾದ ಜಗನ್ನಾಥನ ಮಹಿಮೆಯನ್ನು ನಾರದರಿಂದ ಕೇಳಿ ನಾನು ನಿನಗೆ ಹೇಳಿದ್ದೇನೆ.

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ।
ಧರ್ಮಾನ್ನಾನಾವಿಧಾಂಶ್ಚೈವ ಕೋ ಬ್ರೂಯಾತ್ತಮೃತೇ ಪ್ರಭುಮ್ ॥೯॥

ಜನಮೇಜಯನೇ, ಕೃಷ್ಣದ್ವೈಪಾಯನರಾದ ವ್ಯಾಸರನ್ನು ಪ್ರಭುವಾದ ನಾರಾಯಣನೆಂದೇ ತಿಳಿ. ನಾರಾಯಣನ ಸ್ವರೂಪನಲ್ಲದ, ಪುಂಡರೀಕಾಕ್ಷನಿಂದ ಹೊರತಾಗಿ ಬೇರೆ ಯಾರು ತಾನೇ ಮಹಾಭಾರತದ ಕರ್ತೃವಾಗಲು ಸಾಧ್ಯ? ಪ್ರಭುಗಳಾದ ಅವರಲ್ಲದೇ ನಾನಾ ವಿಧವಾದ ಧರ್ಮಗಳನ್ನು ಬೇರೆ ಯಾರಿಂದ ಹೇಳಲು ಸಾಧ್ಯ?

ವರ್ತತಾಂ ತೇ ಮಹಾಯಜ್ಞೋ ಯಥಾ ಸಂಕಲ್ಪಿತಸ್ತ್ವಯಾ ।
ಸಂಕಲ್ಪಿತಾಶ್ವಮೇಧಸ್ತ್ವಂ ಶ್ರುತಧರ್ಮಶ್ಚ ತತ್ತ್ವತಃ ॥೧೦॥

ನೀನು ಯಾವ ರೀತಿಯಾಗಿ ಯಜ್ಞವನ್ನು ಮಾಡಬೇಕೆಂದು ಸಂಕಲ್ಪಿಸಿದ್ದೀಯೋ ಅದರಂತೆ ನಡೆಯಲಿ. ನೀನು ಅಶ್ವಮೇಧ ಯಜ್ಞದ ಸಂಕಲ್ಪಮಾಡಿರುತ್ತಿ. ಧರ್ಮವನ್ನು ಯಥಾರ್ಥವಾಗಿ ಕೇಳಿ ತಿಳಿದಿರುವಿ.

ಏತತ್ತು ಮಹದಾಖ್ಯಾನಂ ಶ್ರುತ್ವಾ ಪಾರಿಕ್ಷಿತೋ ನೃಪಃ ।
ತತೋ ಯಜ್ಞಸಮಾಪ್ತ್ಯರ್ಥಂ ಕ್ರಿಯಾಃ ಸರ್ವಾಃ ಸಮಾರಭತ್ ॥೧೧॥

ಈ ರೀತಿಯಾದ ಶ್ರೇಷ್ಠವಾದ ಆಖ್ಯಾನವನ್ನು ಪರೀಕ್ಷಿತನ ಸುತನಾದ ಜನಮೇಜಯನು ಕೇಳಿಸಿಕೊಂಡು ಯಜ್ಞವನ್ನು ಪೂರ್ಣ ಮಾಡುವ ದೃಷ್ಟಿಯಿಂದ ಸಮಸ್ತ ಕಾರ್ಯವನ್ನು ಆರಂಭಿಸಿದನು.

ನಾರಾಯಣೀಯಮಾಖ್ಯಾನಮೇತತ್ ತೇ ಕಥಿತಂ ಮಯಾ ।
ನಾರದೇನ ಪುರಾ ರಾಜನ್ ಗುರವೇ ಮೇ ನಿವೇದಿತಮ್ ।
ಋಷೀಣಾಂ ಪಾಂಡವಾನಾಂ ಚ ಶೃಣ್ವತೋಃ ಕೃಷ್ಣಭೀಷ್ಮಯೋಃ ॥೧೨॥

ನಾರಾಯಣನಿಗೆ ಸಂಬಂಧಿಸಿದ ಈ ಆಖ್ಯಾನವನ್ನು ಹಿಂದೆ ನಾರದರು ನನ್ನ ಗುರುಗಳಿಗೆ ತಿಳಿಸಿದ್ದರು. ಪಾಂಡವರು, ಕೃಷ್ಣನು, ಭೀಷ್ಮನು ಕೇಳುತ್ತಿರುವಾಗ ವ್ಯಾಸರಿಗೆ ಹೇಳಿದ ನಾರದರ ಆಖ್ಯಾನವನ್ನೇ ನಾನು ನಿನಗೆ ಹೇಳಿದ್ದೇನೆ.

ಸ ಹಿ ಪರಮಗುರುರ್ಭುವನಪತಿ-
ರ್ಧರಣೀಧರಃ ಶಮನಿಯಮನಿಧಿಃ ।
ಶ್ರುತಿವಿನಯನಿಧಿರ್ದ್ವಿಜಪರಮಹಿತ-
ಸ್ತವ ಭವತು ಗತಿರ್ಹರಿರಮರಹಿತಃ ॥೧೩॥

ನಾರಾಯಣ ಮಹರ್ಷಿಯೇ ತ್ರೈಲೋಕ್ಯಪತಿಯು, ಲೋಕಧಾರಕನು, ಶಾಸ್ತ್ರಗಳಿಗೂ ನೀತಿಗಳಿಗೂ ಆಧಾರನು. ಶಮ-ನಿಯಮಗಳಿಗೆ ನಿಧಿಯು. ಆ ದೇವನು ನಿಮಗೆಲ್ಲ ರಕ್ಷಕನಾಗಲಿ. ದೇವತೆಗಳ ಹಿತಚಿಂತಕನಾದ ಬ್ರಾಹ್ಮಣರಿಗೆ ಹಿತೈಷಿಯಾದ ಶ್ರೀಹರಿಯು ನಿನಗೆ ಆಶ್ರಯನಾಗಲಿ.

ತಪಸಾಂ ನಿಧಿಃ ಸುಮಹತಾಂ ಮಹತೋ
ಯಶಸಶ್ಚ ಭಾಜನಮರಿಷ್ಟಕಹಾ ।
ಏಕಾಂತಿನಾಂ ಶರಣದೋಽಭಯದೋ
ಗತಿದೋಽಸ್ತು ವಃ ಸ ಮಖಿಭಾಗಹರಃ ॥೧೪॥

ಅತ್ಯಂತ ಜ್ಞಾನಿಗಳ ಮಹತ್ತರವಾದ ತಪಸ್ಸಿಗೂ ಇವನೇ ನಿಧಿ ಎನಿಸಿದ್ದಾನೆ. ಅರಿಷ್ಟಕನನ್ನು ಸಂಹರಿಸಿದ ಭಗವಂತನು ಯಶಸ್ಸಿಗೆ ಭಾಜನನಾಗಿದ್ದಾನೆ. ಏಕಾಂತ ಭಕ್ತರಿಗೆ ಗತಿದಾಯಕನು, ಅಭೇದನು, ಶರಣದನು. ಅಂತಹ ಯಜ್ಞಗಳ ಭೋಕ್ತವಾದ ಹರಿಯು ನಿನಗೆ ಮಂಗಳಪ್ರದನಾಗಲಿ.

ತ್ರಿಗುಣಾತಿಗಶ್ಚತುಷ್ಪಂಚಧರಃ
ಪೂರ್ತೇಷ್ಟಯೋಶ್ಚ ಫಲಭಾಗಹರಃ ।
ವಿದಧಾತಿ ನಿತ್ಯಮಜಿತೋಽತಿಬಲೋ
ಗತಿಮಾತ್ಮಗಾಂ ಸುಕೃತಿನಾಮೃಷಿಣಾಮ್ ॥೧೫॥

ಮೂರುಗುಣಗಳನ್ನು ಮೀರಿ ನಿಂತಿರುವ, ಇಪ್ಪತ್ನಾಲ್ಕು ತತ್ತ್ವಗಳನ್ನು ಧರಿಸಿರುವ, ಯಜ್ಞ-ಯಾಗಾದಿಗಳ ಫಲದ ಭಾಗವನ್ನು ಸ್ವೀಕರಿಸುವ ಅಜಿತನೂ, ಅತಿ ಬಲವಂತನೂ ಆದ ಭಗವಂತನು ತನ್ನಲ್ಲೇ ಮನಸ್ಸುಳ್ಳ ಸುಕೃತಿಗಳಾದ ಋಷಿಗಳಿಗೆ ಉತ್ತಮವಾದ ಗತಿಯನ್ನು ದಯಪಾಲಿಸುತ್ತಾನೆ.

ತಂ ಲೋಕಸಾಕ್ಷಿಣಮಜಂ ಪುರುಷಂ
ರವಿವರ್ಣಮೀಶ್ವರಗತಿಂ ಬಹುಶಃ ।
ಪ್ರಣಮಧ್ವಮೇಕಮತಯೋ ಯತಯಃ
ಸಲಿಲೋದ್ಭವೋಽಪಿ ತಮೃಷಿಂ ಪ್ರಣತಃ ॥೧೬॥

ಲೋಕಸಾಕ್ಷಿಯೂ, ಪುರಾಣಪುರುಷನೂ, ಜನ್ಮರಹಿತನೂ, ಸೂರ್ಯವರ್ಣನೂ ಆದ ನಾರಾಯಣನನ್ನು, ಎಲ್ಲಪ್ರಕಾರಗಳಲ್ಲಿಯೂ ಸದ್ಗತಿಪ್ರದನಾದ ಶ್ರೀಹರಿಯನ್ನು ಬಾರಿ ಬಾರಿಗೂ ನಮಸ್ಕರಿಸಿರಿ. ಸಲಿಲೋದ್ಭವನಾದ ಚತುರ್ಮುಖ ಬ್ರಹ್ಮನೂ ನಾರಾಯಣನನ್ನು ನಮಸ್ಕರಿಸುತ್ತಾನೆ.

ಸ ಹಿ ಲೋಕಯೋನಿರಮೃತಸ್ಯ ಪದಂ
ಸೂಕ್ಷ್ಮಂ ಪುರಾಣಮಚಲಂ ಪರಮಮ್ ।
ತತ್ ಸಾಂಖ್ಯಯೋಗಿಭಿರುದಾರಧೃತಂ
ಬುದ್ಧ್ಯಾ ಯತಾತ್ಮಭಿರ್ವಿದಿತಂ ಸತತಮ್ ॥೧೭॥

ನಾರಾಯಣನು ಜಗತ್ತಿಗೆ ಆದಿಕಾರಣನು, ಮೋಕ್ಷಾಶ್ರಯನು, ಸೂಕ್ಷ್ಮನು, ಪುರಾಣನು, ಅಚಲನು, ಸರ್ವೋತ್ತಮನು. ಸಾಂಖ್ಯಯೋಗಿಯ ಬುದ್ಧಿಯ ಮೂಲಕ ಚೆನ್ನಾಗಿ ಧರಿಸಲ್ಪಟ್ಟವನು. ಜಿತೇಂದ್ರಿಯರಾದ ಜ್ಞಾನಿಗಳಿಂದ ನಿರಂತರವೂ ಬುದ್ಧಿಯಿಂದ ಚೆನ್ನಾಗಿ ತಿಳಿಯಲ್ಪಟ್ಟವನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಅಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತನೆಯ ಅಧ್ಯಾಯ

ವೇದ ಉದ್ಧರಿಸಿದ ಹಯಗ್ರೀವನ ಕಥೆ.

ಜನಮೇಜಯಃ

ಶ್ರುತಂ ಭಗವತಸ್ತಸ್ಯ ಮಾಹಾತ್ಮ್ಯಂ ಪರಮಾತ್ಮನಃ ।
ಜನ್ಮ ಧರ್ಮಗೃಹೇ ಚೈವ ನರನಾರಾಯಣಾತ್ಮಕಮ್ ।
ಮಹಾವರಾಹಸೃಷ್ಟಾ ಚ ಪಿಂಡೋತ್ಪತ್ತಿಃ ಪುರಾತನೀ ॥೧॥

ಜನಮೇಜಯ– ಪೂಜ್ಯನೇ, ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಹರಿಯ ಮಾಹಾತ್ಮ್ಯವನ್ನು ಕೇಳಿದೆವು. ಧರ್ಮನ ಮನೆಯಲ್ಲಿ ಶ್ರೀಹರಿಯೇ ನರ-ನಾರಾಯಣ ರೂಪದಿಂದ ಅವತರಿಸಿದ ಕಥೆಯನ್ನು ಹೇಳಿರುತ್ತೀರಿ. ಅದರಂತೆ ವರಾಹನಿಂದ ಸೃಷ್ಟವಾದ ಪುರಾತನವಾದ ಪಿಂಡೋತ್ಪತ್ತಿಯ ಕಥೆಯನ್ನು ಕೇಳಿದ್ದೇವೆ.

ಪ್ರವೃತ್ತೌ ಚ ನಿವೃತ್ತೌ ಚ ಯೋ ಯಥಾ ಪರಿಕಲ್ಪಿತಃ ।
ಸ ತಥಾ ನಃ ಶ್ರುತೋ ಬ್ರಹ್ಮನ್ ಕಥ್ಯಮಾನಸ್ತ್ವಯಾನಘ ॥೨॥

ಪ್ರವೃತ್ತಿ ಮತ್ತು ನಿವೃತ್ತಿ ಕರ್ಮದ ವಿಷಯದಲ್ಲಿ ಶ್ರವಣ ಮಾಡಿದೆವು. ಪ್ರವೃತ್ತಿ-ನಿವೃತ್ತಿ ಧರ್ಮಗಳಲ್ಲಿ ಇರುವ ವ್ಯವಸ್ಥೆಯನ್ನು ತಿಳಿದುಕೊಂಡಿದ್ದೇವೆ.

ಯಚ್ಚ ತತ್ ಕಥಿತಂ ಪೂರ್ವಂ ತ್ವಯಾ ಹಯಶಿರೋ ಮಹತ್ ।
ಹವ್ಯಕವ್ಯಭುಜೋ ವಿಷ್ಣೋರುದಕೂರ್ವೇ ಮಹೋದಧೌ ।
ತಚ್ಚ ದೃಷ್ಟಂ ಭಗವತಾ ಬ್ರಹ್ಮಣಾ ಪರಮೇಷ್ಠಿನಾ ॥೩॥

ಸಮುದ್ರದ ಈಶಾನ್ಯ ಭಾಗದಲ್ಲಿ ಹವ್ಯ-ಕವ್ಯಗಳನ್ನು ಸ್ವೀಕರಿಸುವ ಶ್ರೀಹರಿಯು ಹಯಗ್ರೀವನಾಗಿ ಅವತರಿಸಿದನು ಎಂಬ ವಿಷಯವನ್ನು ನೀವು ಹಿಂದೆ ಹೇಳಿದ್ದೀರಿ. ಪರಮೇಷ್ಠಿ ಎನಿಸಿದ ಚತುರ್ಮುಖ ಬ್ರಹ್ಮನು ಆ ಹಯಗ್ರೀವನನ್ನು ಕಂಡಿದ್ದಾನೆ ಎಂದು ತಿಳಿಸಿದ್ದೀರಿ.

ಕಿಂ ತದುತ್ಪಾದಿತಂ ಪೂರ್ವಂ ಹರಿಣಾ ಲೋಕಧಾರಿಣಾ ।
ರೂಪಂ ಪ್ರಭಾವಮಹತಾಮಪೂರ್ವಂ ಧೀಮತಾಂ ವರ ॥೪॥

ಬುದ್ಧಿವಂತರಲ್ಲಿ ಶ್ರೇಷ್ಠರೇ, ಜಗದ್ರಕ್ಷಕನಾದ ಶ್ರೀಹರಿಯು ಅಂತಹ ಶ್ರೇಷ್ಠವಾದ, ಪ್ರಭಾವಶಾಲಿಯಾದ ರೂಪವನ್ನು ಏಕೆ ಸೃಷ್ಟಿಸಿದನು. ಆ ರೂಪವು ಅಪೂರ್ವವಾದುದು ಎಂದು ಕೇಳಿದ್ದೇನೆ.

ದೃಷ್ಟ್ವಾ ಹಿ ವಿಬುಧಶ್ರೇಷ್ಠಮಪೂರ್ವಮಮಿತೌಜಸಮ್ ।
ತದಶ್ವಶಿರಸಂ ಪುಣ್ಯಂ ಬ್ರಹ್ಮಾ ಕಿಮಕರೋನ್ಮುನೇ ॥೫॥

ದೇವಶ್ರೇಷ್ಠನಾದ, ಅಪೂರ್ವನಾದ, ಅಮಿತವಾದ ತೇಜಸ್ಸುಳ್ಳ, ಶುಭ್ರನಾದ ಹಯಗ್ರೀವನನ್ನು ಕಂಡ ಚತುರ್ಮುಖ ಬ್ರಹ್ಮನು ಏನು ಮಾಡಿದನು?

ಏತನ್ನಃ ಸಂಶಯಂ ಬ್ರಹ್ಮನ್ ಪುರಾಣಜ್ಞಾನಸಂಭವಮ್ ।
ಕಥಯಸ್ವೋತ್ತಮಮತೇ ಮಹಾಪುರುಷನಿರ್ಮಿತಮ್ ।
ಪಾವಿತಾಃ ಸ್ಮ ತ್ವಯಾ ಬ್ರಹ್ಮನ್ ಪುಣ್ಯಾಂ ಕಥಯತಾ ಕಥಾಮ್ ॥೬॥

ಪೂಜ್ಯರೇ, ನನ್ನ ಸಂದೇಹವನ್ನು ಪರಿಹರಿಸಿ. ಪುರಾಣಜ್ಞಾನದಿಂದ ಹುಟ್ಟಿರುವ ಈ ಕಥೆಯನ್ನು ಹೇಳಿರಿ. ಪುಣ್ಯಪ್ರದವಾದ ಈ ಕಥೆಯನ್ನು ಹೇಳಿ ನಮ್ಮನ್ನೂ ಪಾವನರನ್ನಾಗಿ ಮಾಡಿರಿ. ನಿಮ್ಮಿಂದ ನಾವೂ ಪವಿತ್ರರಾಗುತ್ತೇವೆ.

ವೈಶಂಪಾಯನಃ

ಕಥಯಿಷ್ಯಾಮಿ ತೇ ಸರ್ವಂ ಪುರಾಣಂ ವೇದಸಮ್ಮಿತಮ್ ।
ಜಗೌ ಯದ್ಭಗವಾನ್ ವ್ಯಾಸೋ ರಾಜ್ಞೋ ಧರ್ಮಸುತಸ್ಯ ವೈ ॥೭॥

ವೈಶಂಪಾಯನ– ನಿಮಗೆ ವೇದಸಮ್ಮತವಾದ ಸಮಸ್ತ ಪುರಾಣದ ಕಥೆಯನ್ನು ಹೇಳುತ್ತೇನೆ. ಧರ್ಮರಾಜನಿಗೆ ವ್ಯಾಸರು ಹೇಳಿದ ಯಾವ ಕಥೆ ಇದೆಯೋ ಅದನ್ನೇ ಹೇಳುತ್ತೇನೆ.

ಶ್ರುತ್ವಾಶ್ವಶಿರಸೋ ಮೂರ್ತಿಂ ದೇವಸ್ಯ ಹರಿಮೇಧಸಃ ।
ಉತ್ಪನ್ನಸಂಶಯೋ ರಾಜಾ ತಮೇವ ಸಮಚೋದಯತ್ ॥೮॥

ಹಯಗ್ರೀವನ ವಿಷಯವನ್ನು ನಿಮ್ಮಂತೆ ಧರ್ಮರಾಜನು ಸಂಶಯದಿಂದ ವ್ಯಾಸರ ಬಳಿ ಕೇಳಿದನು.

ಯುಧಿಷ್ಠಿರಃ

ಯತ್ತದ್ದರ್ಶಿತವಾನ್ ಬ್ರಹ್ಮಾ ದೇವಂ ಹಯಶಿರೋಧರಮ್ ।
ಕಿಮರ್ಥಂ ತತ್ ಸಮಭವದ್ವಪುರ್ದೇವೋಪಕಲ್ಪಿತಮ್ ॥೯॥

ಯುಧಿಷ್ಠಿರ– ವ್ಯಾಸರೇ, ಚತುರ್ಮುಖ ಬ್ರಹ್ಮನು ಯಾವ ಹಯಗ್ರೀವ ರೂಪವನ್ನು ನೋಡಿದನೋ ಆ ರೂಪವು ಯಾವ ಕಾರಣದಿಂದ ಅವತರಿಸಿತು ಎಂದು ಹೇಳಿರಿ.

ವ್ಯಾಸಃ

ಯತ್ಕಿಂಚಿದಿಹ ಲೋಕೇಽಸ್ಮಿನ್ ದೇಹಬದ್ಧಂ ವಿಶಾಂಪತೇ ।
ಸರ್ವಂ ಪಂಚಭಿರಾವಿಷ್ಟಂ ಭೂತೈರೀಶ್ವರಬುದ್ಧಿಜೈಃ ॥೧೦॥

ವ್ಯಾಸರು– ಯುಧಿಷ್ಠಿರನೇ, ಈ ಲೋಕದಲ್ಲಿ ಯಾವೆಲ್ಲ ಪ್ರಾಣಿಗಳಿವೆಯೋ ಎಲ್ಲವೂ ಭಗವಂತನ ಸಂಕಲ್ಪದಿಂದ ಹುಟ್ಟಿದ ಪಂಚಭೂತಗಳಿಂದಲೇ ವ್ಯಾಪ್ತವಾಗಿವೆ.

ಈಶ್ವರೋ ಹಿ ಜಗತ್ಸ್ರಷ್ಟಾ ಪ್ರಭುರ್ನಾರಾಯಣೋ ವಿರಾಟ್ ।
ಭೂತಾಂತರಾತ್ಮಾ ವರದಃ ಸಗುಣೋ ನಿರ್ಗುಣೋಪಿ ಚ ।
ಭೂತಪ್ರಲಯಮವ್ಯಕ್ತಂ ಶುಶ್ರೂಷುರ್ನೃಪಸತ್ತಮ ॥೧೧॥

ರಾಜನೇ, ವಿರಾಟ್‌ರೂಪಿಯಾದ, ಪ್ರಭುವಾದ ನಾರಾಯಣನು ಸರ್ವ ಸಮರ್ಥನಾಗಿ ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಸಮಸ್ತ ಭೂತಗಳ ಅಂತರ್ಯಾಮಿಯಾಗಿದ್ದಾನೆ, ವರದನಾಗಿದ್ದಾನೆ. ಗುಣಪರಿಪೂರ್ಣನೂ, ಪ್ರಾಕೃತಗುಣರಹಿತನೂ ಆಗಿದ್ದಾನೆ. ನಾರಾಯಣನ ಸೇವೆಯನ್ನು ಮಾಡುತ್ತಿರುವ ಅವ್ಯಕ್ತನಾಮಕ ಲಕ್ಷ್ಮೀತತ್ತ್ವದ ಬಗ್ಗೆ ನೀನು ತಿಳಿದುಕೊ.

ಧರಣ್ಯಾಮಥ ಲೀನಾಯಾಮಪ್ಸು ಚೈಕಾರ್ಣವೇ ಪುರಾ ।
ಜ್ಯೋತಿರ್ಭೂತೇ ಜಲೇ ಚಾಪಿ ಲೀನೇ ಜ್ಯೋತಿಷಿ ಚಾನಿಲೇ ॥೧೨॥

ಹಿಂದೆ ಮಹಾಪ್ರಲಯದಲ್ಲಿ ಪೃಥಿವಿಯು ನೀರಿನಿಂದ ತುಂಬಿಕೊಂಡು ಅದರಲ್ಲೇ ಮುಳುಗಿ ಹೋಯಿತು. ಆ ಜಲವು ತೇಜಸ್ಸಿನಲ್ಲಿಯೂ, ತೇಜಸ್ಸು ವಾಯುವಿನಲ್ಲಿಯೂ ಲಯವನ್ನು ಹೊಂದಿತು.

ವಾಯೌ ಚಾಕಾಶಸಂಲೀನೇ ಆಕಾಶೇ ಚ ಮನೋನುಗೇ ।
ವ್ಯಕ್ತೇ ಮನಸಿ ಸಂಲೀನೇ ವ್ಯಕ್ತೇ ಚಾವ್ಯಕ್ತತಾಂ ಗತೇ ॥೧೩॥

ವಾಯುವು ಆಕಾಶದಲ್ಲಿ, ಆಕಾಶವು ಮನಸ್ಸಿನಲ್ಲಿ, ಮನಸ್ಸು ಮಹತತ್ತ್ವದಲ್ಲಿ, ಮಹತತ್ತ್ವವು ಪ್ರಕೃತಿ ಎನಿಸಿದ ಅವ್ಯಕ್ತ ತತ್ತ್ವದಲ್ಲಿ ಲಯವಾಯಿತು.

ಅವ್ಯಕ್ತೇ ಪುರುಷಂ ಯಾತೇ ಪುಂಸಿ ಸರ್ವಗತೇಪಿ ಚ ।
ತಮ ಏವಾಭವತ್ ಸರ್ವಂ ನ ಪ್ರಾಜ್ಞಾಯತ ಕಿಂಚನ ॥೧೪॥

ಅವ್ಯಕ್ತತತ್ತ್ವವು ಪುರುಷನಲ್ಲಿ ಲಯವಾಯಿತು. ಪುರುಷನು ಎಲ್ಲದಕ್ಕೂ ಆಧಾರನು. ಆ ಸಮಯದಲ್ಲಿ ಎಲ್ಲೆಡೆಯೂ ತಮಸ್ಸು ತುಂಬಿ ಯಾವುದೂ ತಿಳಿಯುತ್ತಿರಲಿಲ್ಲ.

ತಮಸೋ ಬ್ರಹ್ಮ ಸಂಭೂತಂ ತಮೋಮೂಲಮೃತಾತ್ಮಕಮ್ ।
ತದ್ ವಿಶ್ವಭಾವಸಂಜ್ಞಾಂತಂ ಪೌರುಷೀಂ ತನುಮಾಸ್ಥಿತಮ್ ॥೧೫॥

ಆ ತಮಸ್ಸೇ ತ್ರಿಗುಣಮೂಲವೆನಿಸಿದ ಯಥಾರ್ಥಜ್ಞಾನಾತ್ಮಕವಾದ, ಗುಣಪರಿಪೂರ್ಣವಾದ ಬ್ರಹ್ಮವೆನಿಸಿತು. ಆ ಗುಣಪರಿಪೂರ್ಣವಾದ ಬ್ರಹ್ಮನೆಂಬ ವಸ್ತುವು ತನ್ನ ಶಕ್ತಿಯಿಂದ ಅಭಿವೃದ್ಧಿಯನ್ನು ಹೊಂದಿ ವಿಶ್ವರೂಪವಾದ ಪುರುಷಾಕಾರವನ್ನು ತಾಳಿತು.

ಸೋಽನಿರುದ್ಧ ಇತಿ ಪ್ರೋಕ್ತಸ್ತತ್ ಪ್ರಧಾನಂ ಪ್ರಚಕ್ಷತೇ ।
ತದವ್ಯಕ್ತಮಿತಿ ಜ್ಞೇಯಂ ತ್ರಿಗುಣಂ ನೃಪಸತ್ತಮ ॥೧೬॥

ಆ ಪುರುಷಾಕಾರವೇ ಅನಿರುದ್ಧ ಎಂದು ಕರೆಸಿಕೊಂಡಿದ್ದಾನೆ. ಅನಿರುದ್ಧನನ್ನೇ ಪ್ರಕೃತಿ ನಿಯಾಮಕನು ಎನ್ನುತ್ತಾರೆ. ಅವನನ್ನೇ ಅವ್ಯಕ್ತನೆಂದೂ, ತ್ರಿಗುಣನೆಂದೂ ರಾಜನೇ, ತಿಳಿದುಕೊ.

ವಿದ್ಯಾಸಹಾಯವಾನ್ ದೇವೋ ವಿಷ್ವಕ್ಸೇನೋ ಹರಿಃ ಪ್ರಭುಃ ।
ಅಪ್ಸ್ವೇವ ಶಯನಂ ಚಕ್ರೇ ನಿದ್ರಾಯೋಗಮುಪಾಗತಃ ।
ಜಗತಶ್ಚಿಂತಯನ್ ಸೃಷ್ಟಿಂ ಚಿತ್ರಾಂ ಬಹುಗುಣೋದ್ಭವಾಮ್ ॥೧೭॥

ಯಾವ ಭಗವಂತನ ಸಹಾಯದಿಂದ ವೇದವಿದ್ಯೆಗಳಿವೆಯೋ ಅಂತಹ ಪ್ರಭುವಾದ ಹರಿಯನ್ನು ವಿಷ್ವಕ್ಸೇನ ಎನ್ನುತ್ತಾರೆ. ಆ ಭಗವಂತನು ಯೋಗನಿದ್ರೆಯಿಂದ

ಪ್ರಲಯ ಜಲದಲ್ಲಿ ಮಲಗಿದನು. ಅನೇಕ ಗುಣಗಳಿಂದ ಕೂಡಿದ ಬಗೆಬಗೆಯಾದ ಸೃಷ್ಟಿಗಾಗಿ ಮಲಗಿದಲ್ಲೇ ಚಿಂತಿಸಿದನು.

ತಸ್ಯ ಚಿಂತಯತಃ ಸೃಷ್ಟಿಂ ಮಹಾನಾತ್ಮಗುಣಃ ಸ್ಮೃತಃ ।
ಅಹಂಕಾರಸ್ತತೋ ಜಾತೋ ಬ್ರಹ್ಮಾ ಶುಭಚತುರ್ಮುಖಃ ।
ಹಿರಣ್ಯಗರ್ಭೋ ಭಗವಾನ್ ಸರ್ವಲೋಕಪಿತಾಮಹಃ ॥೧೮॥

ಹೀಗೆ ಜ್ಞಾನಾದಿ ಗುಣಭರಿತನಾದ ಭಗವಂತನು ಚಿಂತಿಸುತ್ತಿರುವಾಗಲೇ ಮಹತ್ತತ್ತ್ವಾಭಿಮಾನಿಯಾದ ಚತುರ್ಮುಖಬ್ರಹ್ಮನು ಅವನಿಗೆ ಮಗನಾಗಿ ಹುಟ್ಟಿದನು. ಆ ಚತುರ್ಮುಖನಾದ ಬ್ರಹ್ಮನಿಂದ ಅಹಂಕಾರತತ್ತ್ವಾಭಿಮಾನಿಯಾದ ರುದ್ರನು ಹುಟ್ಟಿದನು. ಭಗವಾನ್ ಹಿರಣ್ಯಗರ್ಭನು ಸಮಸ್ತ ಜಗತ್ತಿಗೆ ಪಿತಾಮಹನೆನಿಸಿದ್ದಾನೆ.

ಪದ್ಮೇऽನಿರುದ್ಧಾತ್ ಸಂಭೂತಸ್ತದಾ ಪದ್ಮನಿಭೇಕ್ಷಣಃ ।
ಸಹಸ್ರಪತ್ರೇ ದ್ಯುತಿಮಾನುಪವಿಷ್ಟಃ ಸನಾತನಃ ॥೧೯॥

ಅನಿರುದ್ಧರೂಪಿಯಾದ ಪರಮಾತ್ಮನಿಂದ ಪದ್ಮದಲ್ಲಿ ಹುಟ್ಟಿದ, ಪದ್ಮನಂತೆ ಕಣ್ಣುಳ್ಳ ಚತುರ್ಮುಖ ಬ್ರಹ್ಮನು ಕಾಂತಿಯುಕ್ತನಾಗಿ, ಸನಾತನನಾಗಿ ಸಹಸ್ರಪತ್ರಗಳುಳ್ಳ ಕಮಲದಲ್ಲಿ ಕುಳಿತುಕೊಂಡನು.

ದದೃಶೇऽದ್ಭುತಸಂಕಾಶೇ ಲೋಕಾನಾಪೋಮಯಾನ್ ಪ್ರಭುಃ ।
ಸತ್ತ್ವಸ್ಥಃ ಪರಮೇಷ್ಠೀ ಸ ತತೋ ಭೂತಗಣಾನ್ ಸೃಜತ್ ॥೨೦॥

ಅಲ್ಲಿ ಕುಳಿತ ಬ್ರಹ್ಮನು ಜಲಮಯವಾದ, ಅದ್ಭುತವಾದ ಲೋಕವನ್ನು ಕಂಡನು. ಸತ್ತ್ವಗುಣದಿಂದ ಆವಿರ್ಭೂತನಾದ ಬ್ರಹ್ಮನು ಪ್ರಾಣಿ ಸಮುದಾಯವನ್ನು ಸೃಷ್ಟಿಸಲು ಪ್ರಾರಂಭಿಸಿದನು.

ಪೂರ್ವಮೇವ ಚ ಪದ್ಮಸ್ಯ ಪತ್ರೇ ಸೂರ್ಯಾಂಶುಸಪ್ರಭೇ ।
ನಾರಾಯಣಕೃತೌ ಬಿಂದೂ ಅಪಾಮಾಸ್ತಾಂ ಗುಣೋತ್ತರೌ ॥೨೧॥

ಬ್ರಹ್ಮನು ಕುಳಿತಿರುವ ಕಮಲದಲ್ಲಿ ಸೂರ್ಯಪ್ರಭೆಗೆ ಸಮಾನವಾದ, ನಾರಾಯಣನಿಂದ ಸೃಷ್ಟವಾದ ಎರಡು ಗುಣಗಳು ನೀರಿನ ಬಿಂದುಗಳಂತಿದ್ದವು.

ತಾವಪಶ್ಯತ್ ಸ ಭಗವಾನನಾದಿನಿಧನೋಽಚ್ಯುತಃ ।
ಏಕಸ್ತತ್ರಾಭವದ್ ಬಿಂದುರ್ಮಧ್ವಾಭೋ ರುಚಿರಪ್ರಭಃ ॥೨೨॥

ಅನಾದಿನಿಧನನೆನಿಸಿದ ಅಚ್ಯುತನು ಆ ಎರಡು ನೀರಿನ ಬಿಂದುಗಳನ್ನು ಕಂಡನು. ಅದರಲ್ಲಿ ಒಂದು ಬಿಂದುವು ಜೇನುತುಪ್ಪದ ಕಾಂತಿಯಂತೆ ಮನೋಹರವಾದ ಕಾಂತಿಯಿಂದ ಕೂಡಿತ್ತು.

ಸ ತಾಮಸೋ ಮಧುರ್ಜಾತಸ್ತದಾ ನಾರಾಯಣಾಜ್ಞಯಾ ।
ಕಠಿನಸ್ತ್ವಪರೋ ಬಿಂದುಃ ಕೈಟಭೋ ರಾಜಸಸ್ತು ಸಃ ॥೨೩॥

ಆ ಸುಂದರವಾದ ಪ್ರಭೆಯಿಂದ ಕೂಡಿದ ತಮೋಬಿಂದುವಿನಿಂದ ಮಧು ಎಂಬ ದೈತ್ಯನು ಹುಟ್ಟಿದನು. ಅದೇ ಸಮಯದಲ್ಲಿ ನಾರಾಯಣನ ಆದೇಶದಂತೆ ಅತ್ಯಂತ ಕಠಿಣವಾದ ಮತ್ತೊಂದು ರಜೋಬಿಂದುವಿನಿಂದ ಕೈಟಭ ಎಂಬ ರಾಕ್ಷಸ ಹುಟ್ಟಿದನು.

ತಾವಭ್ಯಧಾವತಾಂ ಶ್ರೇಷ್ಠೌ ತಮೋರಜಗುಣಾನ್ವಿತೌ ।
ಬಲವಂತೌ ಗದಾಹಸ್ತೌ ಪದ್ಮನಾಲಾನುಸಾರಿಣೌ ॥೨೪॥

ತಮೋಗುಣ, ರಜೋಗುಣಗಳಿಂದ ಕೂಡಿದ, ಬಲಿಷ್ಠರಾದ, ಗದಾಪಾಣಿಗಳಾದ ಮಧು-ಕೈಟಭರೆಂಬ ರಾಕ್ಷಸರು ಪದ್ಮದ ನಾಲವನ್ನೇ ಅನುಸರಿಸಿ ಓಡಿಬಂದರು.

ದದೃಶಾತೇರವಿಂದಸ್ಥಂ ಬ್ರಹ್ಮಾಣಮಮಿತಪ್ರಭಮ್ ।
ಸೃಜಂತಂ ಪ್ರಥಮಂ ವೇದಾಂಶ್ಚತುರಶ್ಚಾರುವಿಗ್ರಹಾನ್ ॥೨೫॥

ಕಮಲದ ಮಧ್ಯಭಾಗದಲ್ಲಿ ಕುಳಿತಿದ್ದ, ಮಹಾಪ್ರಭೆಯಿಂದ ಕೂಡಿರುವ, ಸುಂದರವಾದ ದೇಹವುಳ್ಳ, ನಾಲ್ಕು ವೇದಗಳನ್ನು ಸೃಷ್ಟಿಸುತ್ತಿದ್ದ ಬ್ರಹ್ಮನನ್ನು ಅವರು ನೋಡಿದರು.

ತತೋ ವಿಗ್ರಹವಂತಸ್ತಾನ್ ವೇದಾನ್ ದೃಷ್ಟ್ವಾ ಸುರೋತ್ತಮೌ ।
ಸಹಸಾ ಜಗೃಹತುರ್ವೇದಾನ್ ಬ್ರಹ್ಮಣಃ ಪಶ್ಯತಸ್ತದಾ ॥೨೬॥

ಆ ಇಬ್ಬರು ಅಸುರರು ಶರೀರದಿಂದ ಕೂಡಿರುವ ವೇದಗಳನ್ನು ಕಂಡು ಚತುರ್ಮುಖ ಬ್ರಹ್ಮನು ನೋಡುತ್ತಿರುವಾಗಲೇ ಆ ವೇದಗಳನ್ನು ಕೂಡಲೇ ಹಿಡಿದು ಕೊಂಡರು.

ಅಥ ತೌ ದಾನವಶ್ರೇಷ್ಠೌ ವೇದಾನ್ ಗೃಹ್ಯ ಸನಾತನಾನ್ ।
ರಸಾಂ ವಿವಿಶತುಸ್ತೂರ್ಣಮುದಕೂರ್ವೇ ಮಹೋದಧೌ ॥೨೭॥

ದಾನವಶ್ರೇಷ್ಠರಾದ ಅವರಿಬ್ಬರೂ ಸನಾತನವಾದ ವೇದಗಳನ್ನು ಅಪಹರಿಸಿಕೊಂಡು ಸಮುದ್ರದ ಈಶಾನ್ಯಭಾಗದಲ್ಲಿರುವ ಭೂಮಿಯ ಒಳಹೊಕ್ಕರು.

ತತೋ ಹೃತೇಷು ವೇದೇಷು ಬ್ರಹ್ಮಾ ಕಶ್ಮಲಮಾವಿಶತ್ ।
ತತೋ ವಚನಮೀಶಾನಂ ಪ್ರಾಹ ವೇದೈರ್ವಿನಾಕೃತಃ ॥೨೮॥

ಹೀಗೆ ಮಧು-ಕೈಟಭರಿಂದ ವೇದಗಳು ಅಪಹೃತವಾಗಲು ಬ್ರಹ್ಮನು ದುಃಖಿತನಾದನು. ವೇದಗಳನ್ನು ಕಳೆದುಕೊಂಡು ಭಗವಂತನ ಬಳಿ ಹೀಗೆ ಹೇಳಿದನು.

ವೇದಾ ಮೇ ಪರಮಂ ಚಕ್ಷುರ್ವೇದಾ ಮೇ ಪರಮಂ ಬಲಮ್ ।
ವೇದಾ ಮೇ ಪರಮಂ ಧಾಮ ವೇದಾ ಮೇ ಬ್ರಹ್ಮ ಚೋತ್ತಮಮ್ ॥

ಭಗವಂತನೇ, ವೇದಗಳೇ ನನಗೆ ಶ್ರೇಷ್ಠವಾದ ಕಣ್ಣುಗಳು. ವೇದಗಳೇ ನನಗೆ ಪರಮಬಲವು. ವೇದಗಳೇ ನನಗೆ ನಿವಾಸಸ್ಥಾನವು. ವೇದಗಳೇ ನನಗೆ ಸರ್ವೋತ್ಕೃಷ್ಟವಾದ ತತ್ತ್ವವು.

ಮಮ ವೇದಾ ಹೃತಾಃ ಸರ್ವೇ ದಾನವಾಭ್ಯಾಂ ಬಲಾರ್ದಿತಾಃ ।
ಅಂಧಕಾರಾ ಹಿ ಮೇ ಲೋಕಾ ಜಾತಾ ವೇದೈರ್ವಿನಾಕೃತಾಃ ।
ವೇದಾನೃತೇ ಹಿ ಕಿಂ ಕುರ್ಯಾಂ ಲೋಕಾನ್ವೈ ಸ್ರಷ್ಟುಮುದ್ಯತಃ ॥೩೦॥

ನಾನು ಸೃಷ್ಟಿಸಿದ ಸಮಸ್ತ ವೇದಗಳು ಬಲಾತ್ಕಾರದಿಂದ ದೈತ್ಯರಿಂದ ಅಪಹೃತವಾಗಿವೆ. ಎಲ್ಲೆಡೆಯೂ ವೇದಹೀನನಾದ ನನಗೆ ಲೋಕಗಳೆಲ್ಲ ಕತ್ತಲೆಯಾಗಿ ಕಾಣಿಸುತ್ತಿವೆ. ವೇದಗಳೇ ಇಲ್ಲದೆ ಸೃಷ್ಟಿಯಲ್ಲಿ ನಿರತನಾದ ನಾನು ಹೇಗೆ ಸೃಷ್ಟಿಯನ್ನು ಮಾಡಲಿ?

ಅಹೋ ಬತ ಮಹದ್ದುಃಖಂ ವೇದನಾಶನಜಂ ಮಮ ।
ಪ್ರಾಪ್ತಂ ದುನೋತಿ ಹೃದಯಂ ತೀವ್ರಶೋಕಾಯ ರಂಧಯನ್ ॥೩೧॥

ವೇದಗಳ ವಿನಾಶದಿಂದ ಉಂಟಾದ ದೊಡ್ಡ ದುಃಖವು ನನ್ನನ್ನು ಆಕ್ರಮಿಸಿದೆ. ತೀವ್ರವಾದ ಶೋಕದಲ್ಲಿ ಮುಳುಗಿರುವ ನನ್ನನ್ನು ಯಾರು ಉದ್ಧರಿಸುತ್ತಾರೆ?

ಕೋ ಹಿ ಶೋಕಾರ್ಣವೇ ಮಗ್ನಂ ಮಾಮಿತೋಽದ್ಯ ಸಮುದ್ಧರೇತ್ ।
ವೇದಾಂಸ್ತಾನಾನಯೇನ್ನಷ್ಟಾನ್ಕಸ್ಯ ಚಾಹಂ ಪ್ರಿಯೋ ಭವೇ ॥೩೨॥

ಶೋಕಸಾಗರದಲ್ಲಿ ಮುಳುಗಿರುವ ನನ್ನನ್ನು ಯಾರು ಉದ್ಧರಿಸುತ್ತಾರೆ? ನಷ್ಟವಾಗಿರುವ ನನ್ನ ವೇದಗಳನ್ನು ನನ್ನ ಮೇಲಿನ ಪ್ರೀತಿಯಿಂದ ಯಾರು ತಂದು ಕೊಡುತ್ತಾರೆ? ನಾನು ಯಾರಿಗೆ ಅಷ್ಟು ಪ್ರೀತಿಪಾತ್ರನಾಗಿದ್ದೇನೆ?

ಇತ್ಯೇವಂ ಭಾಷಮಾಣಸ್ಯ ಬ್ರಹ್ಮಣೋ ನೃಪಸತ್ತಮ ।
ಹರೇಃ ಸ್ತೋತ್ರಾರ್ಥಮುದ್ಭೂತಾ ಬುದ್ಧಿರ್ಬುದ್ಧಿಮತಾಂ ವರ ।
ತತೋ ಜಗೌ ಪರಂ ಜಪ್ಯಂ ಸಾಂಜಲಿಪ್ರಗ್ರಹಃ ಪ್ರಭುಃ ॥೩೩॥

ಈ ರೀತಿಯಾಗಿ ಬ್ರಹ್ಮನು ಮಾತನಾಡುತ್ತಿರುವಾಗ ಜ್ಞಾನಿಯೇ, ಚತುರ್ಮುಖ ಬ್ರಹ್ಮನಿಗೆ ಭಗವಂತನನ್ನು ಸ್ತುತಿಸುವ ಬುದ್ಧಿಯುಂಟಾಯಿತು. ಉತ್ತಮವಾದ ಪ್ರತಿದಿನವೂ ಜಪಿಸಲು ಯೋಗ್ಯವಾದ ಸ್ತೋತ್ರದಿಂದ ಭಕ್ತಿಸಂಪನ್ನನಾಗಿ ಬ್ರಹ್ಮನು ಸ್ತುತಿಸಲು ಆರಂಭಿಸಿದನು.

ನಮಸ್ತೇ ಬ್ರಹ್ಮಹೃದಯ ನಮಸ್ತೇ ಮಮ ಪೂರ್ವಜ ।
ಲೋಕಾದ್ಯ ಭುವನಶ್ರೇಷ್ಠ ಸಾಂಖ್ಯಯೋಗನಿಧೇ ವಿಭೋ ॥೩೪॥

ವ್ಯಕ್ತಾವ್ಯಕ್ತಕರಾಚಿಂತ್ಯ ಕ್ಷೇಮಂ ಪಂಥಾನಮಾಸ್ಥಿತ ।
ವಿಶ್ವಭುಕ್ಸರ್ವಭೂತಾನಾಮಂತರಾತ್ಮನ್ನಯೋನಿಜ ॥೩೫॥

ವೇದಗಳೇ ಹೃದಯವಾಗಿ ಉಳ್ಳ ಭಗವಂತನೇ, ನಿನಗೆ ನಮಸ್ಕಾರ. ನನಗೂ ಪೂರ್ವಜನೇ, ನಿನಗೆ ನಮಸ್ಕಾರ. ಲೋಕಗಳಿಗೆಲ್ಲ ಆದ್ಯನೇ, ಭುವನಶ್ರೇಷ್ಠನೇ, ಸಾಂಖ್ಯಯೋಗಗಳಲ್ಲಿ ನಿಧಿ ಎನಿಸಿದವನೇ, ವಿಭುವೇ, ವ್ಯಕ್ತಾವ್ಯಕ್ತ ಪ್ರಪಂಚವನ್ನು ಸೃಷ್ಟಿಸುವ ಅಚಿಂತ್ಯನೇ, ನಿರ್ದುಷ್ಟವಾದ ಮಾರ್ಗವನ್ನು ಹೊಂದಿದವನೇ, ವಿಶ್ವಭೋಕ್ತೃವೇ, ಸಮಸ್ತ ಭೂತಾಂತರ್ಯಾಮಿಯೇ, ಅಯೋನಿಜನೇ,

ಅಹಂ ಪ್ರಸಾದಜಸ್ತುಭ್ಯಂ ಲೋಕಧಾಮ್ನೇ ಸ್ವಯಂಭುವೇ ।
ತತ್ತ್ವತೋ ಮೇ ಮಾನಸಂ ಜನ್ಮ ಪ್ರಥಮಂ ದ್ವಿಜಪೂಜಿತಮ್ ॥೩೬॥

ನಾನು ನಿನ್ನ ಅನುಗ್ರಹದಿಂದ ಹುಟ್ಟಿದವನು. ಸಮಸ್ತ ಲೋಕಾಧಾರನಾದ ಸ್ವಯಂಭುವು ನೀನು. ನಿನ್ನಿಂದಲೇ ನನ್ನ ಮೊದಲನೆಯ ಜನ್ಮವು. ದ್ವಿಜಪೂಜಿತವಾದ ನನ್ನ ಜನ್ಮವು ನಿನ್ನಿಂದ ಉಂಟಾಯಿತು. ಮೊದಲನೆಯ ಜನ್ಮವು ನಿನ್ನ ಮನಸ್ಸಿನಿಂದ ಉಂಟಾಯಿತು.

ಚಾಕ್ಷುಷಂ ವೈ ದ್ವಿತೀಯಂ ಮೇ ಜನ್ಮ ಚಾಸೀತ್ ಪುರಾತನಮ್ ।
ತತ್ತಸ್ಸಾದಾಚ್ಚ ಮೇ ಜನ್ಮ ತೃತೀಯಂ ವಾಚಿಕಂ ಮಹತ್ ॥೩೭॥

ತತ್ತಃ ಶ್ರವಣಜಂ ಚಾಪಿ ಚತುರ್ಥಂ ಜನ್ಮ ಮೇ ವಿಭೋ ।
ನಾಸಿಕ್ಯಂ ಚಾಪಿ ಮೇ ಜನ್ಮ ತತ್ತಃ ಪಂಚಮಮುಚ್ಯತೇ ॥೩೮॥

ನಿನ್ನ ಕಣ್ಣುಗಳಿಂದ ಎರಡನೆಯ ಜನ್ಮವಾಯಿತು. ನಿನ್ನ ವಾಗಿಂದ್ರಿಯದಿಂದ ಮೂರನೆಯ ಜನ್ಮವು, ನಿನ್ನ ಕಿವಿಗಳಿಂದ ನಾಲ್ಕನೆಯ ಜನ್ಮವು ಉಂಟಾಯಿತು. ನಾಭಿಯಿಂದ ಹೇಗೆ ಜನ್ಮ ಪಡೆದೆನೋ ಹಾಗೆ ನಿನ್ನ ಮನಸ್ಸೇ ಮೊದಲಾದ ಇಂದ್ರಿಯಗಳಿಂದಲೂ ಕಾಲಕಾಲಕ್ಕೆ ಅನೇಕ ಜನ್ಮಗಳನ್ನು ನಾನು ಹೊಂದಿದ್ದೇನೆ ಎಂದು ಬ್ರಹ್ಮದೇವರು ಭಗವಂತನನ್ನು ಸ್ತುತಿಸಿದರು ಎಂದು ಭಾವ. ನಿನ್ನ ಮೂಗಿನಿಂದ ನನಗೆ ಐದನೆಯದ್ದಾದ ಜನ್ಮವು ಲಭಿಸಿತು.

ಅಂಡಜಂ ಚಾಪಿ ಮೇ ಜನ್ಮ ತತ್ತಃ ಷಷ್ಠಂ ವಿನಿರ್ಮಿತಮ್ ।
ಇದಂ ಚ ಸಪ್ತಮಂ ಜನ್ಮ ಪದ್ಮಜಂ ಮೇऽಮಿತಪ್ರಭ ॥೩೯॥

ನನ್ನ ಮತ್ತೊಂದು ಜನ್ಮವು ಬ್ರಹ್ಮಾಂಡದಿಂದಲೇ ಉಂಟಾದುದು. ಅದು ನನ್ನ ಆರನೆಯ ಜನ್ಮವೆನಿಸಿದೆ. ನಾಭಿಯಿಂದ ಹುಟ್ಟಿದ ಈಗಿನ ಜನ್ಮವು ಅಮಿತಪ್ರಭನೇ, ನಿನ್ನಿಂದ ಉಂಟಾದ ಏಳನೆಯ ಜನ್ಮವು.

ಸರ್ಗೇ ಸರ್ಗೇ ಹ್ಯಹಂ ಪುತ್ರಸ್ತವ ತ್ರಿಗುಣವರ್ಜಿತಃ ।
ಪ್ರಥಿತಃ ಪುಂಡರೀಕಾಕ್ಷ ಪ್ರಧಾನಗುಣಕಲ್ಪಿತಃ ॥೪೦॥

ಪ್ರತಿಯೊಂದು ಸೃಷ್ಟಿಕಾಲದಲ್ಲಿಯೂ ನಾನು ನಿನಗೆ ಮಗನಾಗಿ ಹುಟ್ಟುತ್ತೇನೆ. ತ್ರಿಗುಣವರ್ಜಿತನೇ, ಪುಂಡರೀಕಾಕ್ಷನೇ, ನಿನ್ನ ಮಗನಾದ ನಾನು ಶುದ್ಧಸತ್ತ್ವ ಶರೀರಮಯನೆಂದು ಪ್ರಸಿದ್ಧನಾಗಿದ್ದೇನೆ.

ತ್ವಮೀಶ್ವರಸ್ವಭಾವಶ್ಚ ಸ್ವಯಂಭೂಃ ಪುರುಷೋತ್ತಮಃ ।
ತ್ವಯಾ ವಿನಿರ್ಮಿತೋಹಂ ವೈ ವೇದಚಕ್ಷುರ್ವಯೋತಿಗಃ ॥೪೧॥

ನೀನೇ ಈಶ್ವರಸ್ವಭಾವನು. ನೀನೇ ಸ್ವಯಂಭುವು, ನೀನೇ ಪುರುಷೋತ್ತಮನು. ನಿನ್ನಿಂದಲೇ ನಾನು ವೇದಚಕ್ಷು ಎಂದು ನಿರ್ಮಿತನಾದವನು. ಕಾಲವನ್ನು ಮೀರಿದವನು.

ತೇ ಮೇ ವೇದಾ ಹೃತಾಶ್ಚಕ್ಷುರಂಧೋ ಜಾತೋಽಸ್ಮಿ ಜಾಗೃಹಿ ।
ದದಸ್ವ ಚಕ್ಷುಷೀ ಮಹ್ಯಂ ಪ್ರಿಯೋಽಹಂ ತೇ ಪ್ರಿಯೋಽಸಿ ಮೇ ॥೪೨॥

ಅಂತಹ ನನ್ನ ಕಣ್ಣಿನಂತೆ ಇರುವ ವೇದಗಳು ದೈತ್ಯರಿಂದ ಅಪಹೃತವಾಗಿ ಅಂಧನಾಗಿದ್ದೇನೆ. ನೀನು ಯೋಗನಿದ್ರೆಯಿಂದ ಎಚ್ಚರಗೊಂಡು ನನ್ನ ಕಣ್ಣುಗಳನ್ನು ತಂದುಕೊಡು. ನಾನು ನಿನಗೆ ಪ್ರಿಯನು. ನೀನೂ ನನಗೆ ಪ್ರಿಯನು.

ಏವಂ ಸ್ತುತಃ ಸ ಭಗವಾನ್ ಪುರುಷಃ ಸರ್ವತೋಮುಖಃ ।
ಜಹೌ ನಿದ್ರಾಮಥ ತದಾ ವೇದಕಾರ್ಯಾರ್ಥಮುದ್ಯತಃ ।
ಐಶ್ವರೇಣ ಪ್ರಯೋಗೇಣ ದ್ವಿತೀಯಾಂ ತನುಮಾಸ್ಥಿತಃ ॥೪೩॥

ಬ್ರಹ್ಮನು ಹೀಗೆ ಸ್ತುತಿಸಿದ ಬಳಿಕ ಸರ್ವತೋಮುಖನಾದ, ಸರ್ವಾಂತರ್ಯಾಮಿಯಾದ ಭಗವಾನ್ ಪುರುಷೋತ್ತಮನು ಕೂಡಲೇ ನಿದ್ರೆಯನ್ನು ಬಿಟ್ಟು, ವೇದಗಳನ್ನು ರಕ್ಷಿಸುವ ಕಾರ್ಯಕ್ಕೆ ಮುಂದಾದನು. ತನ್ನ ಯೋಗೈಶ್ವರ್ಯ ಶಕ್ತಿಯಿಂದ ನಾರಾಯಣನು ಎರಡನೇ ಶರೀರವನ್ನು ಧರಿಸಿದನು.

ಸುನಾಸಿಕೇನ ಕಾಯೇನ ಭೂತ್ವಾ ಚಂದ್ರಪ್ರಭಸ್ತದಾ ।
ಕೃತ್ವಾ ಹಯಶಿರಃ ಶುಭ್ರಂ ವೇದಾನಾಮಾಲಯಂ ಪ್ರಭುಃ ॥೪೪॥

ಚಂದ್ರಪ್ರಭೆಯಿಂದ ಬೆಳಗುವ ಶ್ರೀಹರಿಯು ಸುಂದರ ಮೂಗಿನಿಂದ ಕೂಡಿದ ಶುಭ್ರವಾದ ಹಯಶಿರಸ್ಸನ್ನು ಧರಿಸಿದ್ದನು. ಅವನ ಮುಖವು ವೇದಗಳ ಮನೆಯಂತಿತ್ತು.

ತಸ್ಯ ಮೂರ್ಧಾ ಸಮಭವದ್ ದ್ಯೌಃ ಸನಕ್ಷತ್ರತಾರಕಾ ।
ಕೇಶಾಶ್ಚಾಸ್ಯಾಭವನ್ ದೀರ್ಘಾ ರವೇರಂಶುಸಮಪ್ರಭಾಃ ॥೪೫॥

ತಲೆಯು ನಕ್ಷತ್ರಗಳಿಂದಲೂ, ತಾರೆಗಳಿಂದಲೂ ಕೂಡಿತ್ತು. ಅವನ ಕೂದಲುಗಳು ನೀಳವಾಗಿಯೂ ಸೂರ್ಯನ ಪ್ರಭೆಯಂತೆ ಪ್ರಭಾಯುಕ್ತವೂ ಆಗಿದ್ದವು.

ವ್ಯಾಖ್ಯಾನ ವಿಶೇಷ– ವಾದಿರಾಜರು ಸರಸಭಾರತೀವಿಲಾಸದಲ್ಲಿ ಇದೇ ಅಭಿಪ್ರಾಯದಿಂದ ಹಯಗ್ರೀವನನ್ನು ಸ್ತುತಿಸುತ್ತಾರೆ. 'ತಾರಾವಿಧೇಯಃ ತಾರಾಭ ಹಾರಾಲಂಕಾರ ಭಾಸುರಾಃ ಸಾರಾತ್ಸಾರೋ ಹಯಶಿರಾಃ ತಾರಯೇತ್ ದುಸ್ತರಾತ್ ತರಾತ್' ಎಂದು.

ಕರ್ಣಾವಾಕಾಶಪಾತಾಲೇ ಲಲಾಟಂ ಭೂತಧಾರಿಣೇ ।
ಗಂಗಾ ಸರಸ್ವತೀ ಪುಣ್ಯಾ ಭ್ರುವಾವಾಸ್ತಾಂ ಮಹಾನದೀ ॥೪೬॥

ಆಕಾಶ-ಪಾತಾಳಗಳೇ ಹಯಗ್ರೀವನ ಕಿವಿಗಳು. ಪಿಶಾಚಾದಿಗಳಿಗೆ ಆಧಾರಭೂತವಾದ ಅಂತರಿಕ್ಷವೇ ಹಣೆಯು. ಗಂಗಾ-ಸರಸ್ವತಿಗಳೇ ನಿತಂಬಗಳು. ಎರಡು ಸಮುದ್ರಗಳೇ ಹುಬ್ಬುಗಳು.

ಚಕ್ಷುಷೀ ಸೋಮಸೂರ್ಯೌ ತೇ ನಾಸಾ ಸಂಧ್ಯಾ ಪುನಃ ಸ್ಮೃತಾ ।
ಓಂಕಾರಸ್ತ್ವಥ ಸಂಸ್ಕಾರೋ ವಿದ್ಯುಜ್ಜಿಹ್ವಾ ಚ ನಿರ್ಮಿತಾ ॥೪೭॥

ಸೂರ್ಯ-ಚಂದ್ರರೇ ಅವನ ಕಣ್ಣುಗಳು. ಸಂಧ್ಯಾಕಾಲವೇ ನಾಸಿಕ. ಓಂಕಾರವೇ ಆಭರಣ. ವಿದ್ಯುತ್ತೇ ನಾಲಿಗೆಯಾಗಿತ್ತು.

ದಂತಾಶ್ಚ ಪಿತರೋ ರಾಜನ್ ಸೋಮಪಾ ಇತಿ ವಿಶ್ರುತಾಃ ।
ಗೋಲೋಕೋ ಬ್ರಹ್ಮಲೋಕಶ್ಚ ಕಟೀ ಆಸ್ತಾಮ್ ಮಹಾತ್ಮನಃ ।
ಗ್ರೀವಾ ಚಾಸ್ಯಾಭವದ್ ರಾಜನ್ ಕಾಲರಾತ್ರಿರ್ಗುಣೋತ್ತರಾ ॥೪೮॥

ಪ್ರಸಿದ್ಧರಾದ ಸೋಮಪ ಪಿತೃಗಳೇ ಹಯಗ್ರೀವನ ಹಲ್ಲುಗಳು. ಗೋಲೋಕ, ಸ್ವರ್ಗಲೋಕಗಳು ಕಟಿಗಳು. ತಮೋಮಯವಾದ ಕರಾಲರಾತ್ರಿಯು ಹಯಗ್ರೀವನ ಕುತ್ತಿಗೆಯಾಗಿತ್ತು.

ಏತದ್ಧಯಶಿರಃ ಕೃತ್ವಾ ನಾನಾಮೂರ್ತಿಭಿರಾವೃತಮ್ ।
ಅಂತರ್ದಧೇ ಸ ವಿಶ್ವೇಶೋ ವಿವೇಶ ಚ ರಸಾಂ ಪ್ರಭುಃ ॥೪೯॥

ಹೀಗೆ ನಾನಾ ಪ್ರಕಾರಗಳಾದ ವಿಶ್ವಮೂರ್ತಿಯಾದ ಕುದುರೆಯ ಮುಖದ ಆಕಾರವನ್ನು ಹೊಂದಿದ ವಿಶ್ವೇಶ್ವರನಾದ ಭಗವಂತನು ಅದೃಶ್ಯನಾಗಿ ರಸಾತಳವನ್ನು ಪ್ರವೇಶಿಸಿದನು.

ರಸಾಂ ಪುನಃ ಪ್ರವಿಷ್ಟಶ್ಚ ಯೋಗಂ ಪರಮಮಾಸ್ಥಿತಃ ।
ಶೈಕ್ಷಂ ಸ್ವರಂ ಸಮಾಸ್ಥಾಯ ಓಮಿತಿ ಪ್ರಾಸೃಜತ್ ಸ್ವರಮ್ ॥೫೦॥

ರಸಾತಳವನ್ನು ಪ್ರವೇಶಿಸಿ, ಯೋಗವನ್ನು ಆಶ್ರಯಿಸಿದ ಭಗವಂತನು ವೇದಮಂತ್ರಗಳ ಉಚ್ಚಾರಣೆಯನ್ನು ತಿಳಿಸುವ ಶಿಕ್ಷಾ ಎಂಬ ವೇದಾಂಗದ ನಿಯಮಕ್ಕನುಗುಣವಾಗಿ ಓಂ ಎಂಬುದಾಗಿ ಸ್ವರವನ್ನು ಸೃಷ್ಟಿಸಿದನು.

ಸ ಸ್ವರಃ ಸಾನುನಾದೀ ಚ ಸರ್ವಗಃ ಸ್ನಿಗ್ಧ ಏವ ಚ ।
ಬಭೂವಾಂತರ್ಮಹೀಭೂತಃ ಸರ್ವಭೂತಗುಣೋದಿತಃ ॥೫೧॥

ಆ ಹಯಮುಖದಿಂದ ಹೊರಹೊಮ್ಮಿದ ಸ್ವರವು ರಣರಣಿಸುತ್ತಾ ಎಲ್ಲೆಡೆಯೂ ಮನೋಹರವಾಗಿ ಕೇಳಿಬರುತ್ತಿತ್ತು. ಸಮಸ್ತ ಪ್ರಾಣಿಗಳಿಗೂ ಗುಣಗಳನ್ನು ಪ್ರೇರಿಸುತ್ತಾ ಭೂಮಿಯ ಕೆಳಭಾಗದ ರಸಾತಳದಲ್ಲಿ ವ್ಯಾಪ್ತವಾಗಿತ್ತು.

ತತಸ್ತಾವಸುರೌ ಕೃತ್ವಾ ವೇದಾನ್ ಸಮಯಬಂಧನಾನ್ ।
ರಸಾತಲೇ ವಿನಿಕ್ಷಿಪ್ಯ ಯತಃ ಶಬ್ದಸ್ತತೋ ದ್ರುತೌ ॥೫೨॥

ಹೀಗೆ ಭಗವಂತನು ಶಬ್ದವನ್ನು ಮಾಡುತ್ತಿರುವಾಗ ಮಧು-ಕೈಟಭರು ವೇದಗಳನ್ನು ಬಂಧಿಸಿ, ಪಾತಾಳದಲ್ಲಿ ಬಚ್ಚಿಟ್ಟು, ಓಂಕಾರದ ಶಬ್ದವು ಎಲ್ಲಿಂದ ಬರುತ್ತಿತ್ತೋ ಅಲ್ಲಿಗೆ ಧಾವಿಸಿ ಬಂದರು.

ಏತಸ್ಮಿನ್ನಂತರೇ ರಾಜನ್ ದೇವೋ ಹಯಶಿರೋಧರಃ ।
ಜಗ್ರಾಹ ವೇದಾನಖಿಲಾನ್ ರಸಾತಲಗತಾನ್ ಹರಿಃ ।
ಪ್ರಾದಾಚ್ಚ ಬ್ರಹ್ಮಣೇ ಭೂಯಸ್ತತಃ ಸ್ವಾಂ ಪ್ರಕೃತಿಂ ಗತಃ ॥೫೩॥

ಈ ಮಧ್ಯೆ ದೇವದೇವನಾದ, ಹಯಶಿರಸ್ಸನ್ನು ಧರಿಸಿದ ಶ್ರೀಹರಿಯು ಪಾತಾಳದಲ್ಲಿ ಇಟ್ಟಿದ್ದ ಸಮಸ್ತ ವೇದಗಳನ್ನು ತೆಗೆದುಕೊಂಡು, ಬ್ರಹ್ಮನ ಬಳಿ ಹೋಗಿ ಸಮಸ್ತ ವೇದಗಳನ್ನು ಅವನಿಗೆ ಕೊಟ್ಟನು. ಪುನಃ ತನ್ನ ಮೂಲರೂಪವನ್ನು ಹೊಂದಿದನು.

ಸ್ಥಾಪಯಿತ್ವಾ ಹಯಶಿರ ಉದಕೂರ್ವೇ ಮಹೋದಧೌ ।
ವೇದಾನಾಮಾಲಯಶ್ಚಾಪಿ ಬಭೂವಾಶ್ವಶಿರಾಸ್ತತಃ ॥೫೪॥

ಬಳಿಕ ಮಹೋದಧಿಯ ಈಶಾನ್ಯಭಾಗದಲ್ಲಿ ವೇದಗಳಿಗೆ ಆಶ್ರಯವಾದ ಹಯಗ್ರೀವ ರೂಪವನ್ನು ಅಲ್ಲಿಯೇ ಸ್ಥಾಪಿಸಿ, ಹಯಗ್ರೀವ ಎಂಬ ಹೆಸರಿನಿಂದಲೇ ಖ್ಯಾತನಾದನು.

ಅಥ ಕಿಂಚಿದಪಶ್ಯಂತೌ ದಾನವೌ ಮಧುಕೈಟಭೌ ।
ಪುನರಾಜಗ್ಮತುಸ್ತತ್ರ ವೇಗಿತೌ ಪಶ್ಯತಾಂ ಚ ತೌ ।
ಯತ್ರ ವೇದಾ ವಿನಿಕ್ಷಿಪ್ತಾಸ್ತತ್ಸ್ಥಾನಂ ಶೂನ್ಯಮೇವ ಚ ॥೫೫॥

ಈಚೆ ಶಬ್ದದ ಕಡೆ ಧಾವಿಸಿದ ಮಧು-ಕೈಟಭರು ಅಲ್ಲಿ ಏನನ್ನೂ ಕಾಣದೆ ತಾವು ಬಚ್ಚಿಟ್ಟಿದ್ದ ವೇದಗಳ ಬಳಿ ವೇಗವಾಗಿ ಧಾವಿಸಿ ಹೋದರು. ಆದರೆ ಅಲ್ಲಿ ಅವರು ವೇದಗಳನ್ನು ಕಾಣಲಿಲ್ಲ. ವೇದಗಳನ್ನು ಬಚ್ಚಿಟ್ಟ ಜಾಗವು ಬರಿದಾಗಿತ್ತು.

ತತ ಉತ್ತಮಮಾಸ್ಥಾಯ ವೇಗಂ ಬಲವತಾಂ ವರೌ ।
ಪುನರುತ್ತಸ್ಥತುಃ ಶೀಘ್ರಂ ರಸಾನಾಮಾಲಯಾತ್ತದಾ ।
ದದೃಶಾತೇ ಚ ಪುರುಷಂ ತಮೇವಾದಿಕರಂ ಪ್ರಭುಮ್ ॥೫೬॥

ಬಳಿಕ ಬಲಿಷ್ಠರಾದ ಆ ದೈತ್ಯರು ಉತ್ತಮವಾದ ವೇಗದಿಂದ ರಸಾತಳದಿಂದ ಶೀಘ್ರವಾಗಿ ಮೇಲಕ್ಕೆ ಬಂದರು. ಅವರಿಬ್ಬರೂ ಸೃಷ್ಟಿಕರ್ತನಾದ ಪುರುಷನಾಮಕನಾದ ಭಗವಂತನನ್ನು ಕಂಡರು.

ಶ್ವೇತಂ ಚಂದ್ರವಿಶುದ್ಧಾಭಮನಿರುದ್ಧತನೌ ಸ್ಥಿತಮ್ ।
ಭೂಯೋಪ್ಯಮಿತವಿಕ್ರಾಂತಂ ನಿದ್ರಾಯೋಗಮುಪಾಗತಮ್ ॥೫೭॥

ಆತ್ಮಪ್ರಮಾಣರಚಿತೇ ಅಪಾಮುಪರಿ ಕಲ್ಪಿತೇ ।
ಶಯನೇ ನಾಗಭೋಗಾಢ್ಯೇ ಜ್ವಾಲಾಮಾಲಾಸಮಾವೃತೇ ॥೫೮॥

ನಿಷ್ಕಲ್ಮಷೇಣ ಸತ್ತ್ವೇನ ಸಂಪನ್ನಂ ರುಚಿರಪ್ರಭಮ್ ।
ತಂ ದೃಷ್ಟ್ವಾ ದಾನವೇಂದ್ರೌ ತೌ ಮಹಾಹಾಸಮಮುಂಚತಾಮ್ ॥೫೯॥

ಭಗವಂತನಾದರೂ ಶ್ವೇತವರ್ಣದವನಾಗಿ, ಚಂದ್ರನಂತೆ ವಿಶುದ್ಧವಾದ ಕಿರಣಗಳುಳ್ಳವನಾಗಿ, ಅನಿರುದ್ಧದೇಹದಲ್ಲಿರುವ, ಅಮಿತಪರಾಕ್ರಮಿಯಾದ, ಯೋಗನಿದ್ರೆಯನ್ನಾಶ್ರಯಿಸಿರುವ, ನೀರಿನ ಮೇಲೆ ತನಗೆ ಯೋಗ್ಯವಾದ ಶರೀರವನ್ನು ರಚಿಸಿಕೊಂಡು ಮಲಗಿರುವ, ಶೇಷನ ಮೇಲೆ ಶೇಷನನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡಿರುವ, ಸುಂದರವಾದ ಪ್ರಭೆಗಳಿಂದ ಕೂಡಿರುವ, ಕಶ್ಮಲವಿಲ್ಲದ, ಸತ್ತ್ವಗುಣ ಸಂಪನ್ನನಾದ, ಸುಂದರಕಾಂತಿಯ ಭಗವಂತನನ್ನು ನೋಡಿದರು. ಅವನನ್ನು ಕಂಡ ಕೂಡಲೇ ಅಟ್ಟಹಾಸದಿಂದ ದಾನವೇಂದ್ರರು ನಗತೊಡಗಿದರು.

ಊಚತುಶ್ಚ ಸಮಾವಿಷ್ಟೌ ರಜಸಾ ತಮಸಾ ಚ ತೌ ।
ಅಯಂ ಸ ಪುರುಷಃ ಶ್ವೇತಃ ಶೇತೇ ನಿದ್ರಾಮುಪಾಗತಃ ॥೬೦॥

ರಜೋಗುಣ, ತಮೋಗುಣಗಳಿಂದ ಕೂಡಿರುವ ಅವರು ಹೀಗೆ ಹೇಳಿದರು: ಈ ಬಿಳಿ ಬಣ್ಣದ ಪುರುಷನೇ ವೇದವನ್ನು ಅಪಹರಿಸಿ ಬಂದು ನಿದ್ರೆಗೆ ಜಾರಿದ್ದಾನೆ.

ಅನೇನ ನೂನಂ ವೇದಾನಾಂ ಕೃತಮಾಹರಣಂ ರಸಾತ್ ।
ಕಸ್ಯೈಷ ಕೋ ನು ಖಲ್ವೇಷ ಕಿಂ ಚ ಸ್ವಪಿತಿ ಭೋಗವಾನ್ ॥೬೧॥

ನಿಶ್ಚಯವಾಗಿಯೂ ವೇದಗಳನ್ನು ಇವನೇ ರಸಾತಳದಿಂದ ಅಪಹರಿಸಿದವನು. ಇವನು ಯಾರ ಮಗನು? ಯಾರಿರಬಹುದು? ಸರ್ಪವನ್ನು ಹಾಸಿಗೆ ಮಾಡಿಕೊಂಡು ಏಕೆ ಮಲಗಿದ್ದಾನೆ?

ಇತ್ಯುಚ್ಚಾರಿತವಾಕ್ಯೌ ತೌ ಬೋಧಯಾಮಾಸತುರ್ಹರಿಮ್ ।
ಯುದ್ಧಾರ್ಥಿನೌ ತು ವಿಜ್ಞಾಯ ವಿಬುದ್ಧಃ ಪುರುಷೋತ್ತಮಃ ॥೬೨॥

ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಾ ದೈತ್ಯರು ಹರಿಯನ್ನು ಎಬ್ಬಿಸಿದರು. ಎಚ್ಚರಗೊಂಡ ಪುರುಷೋತ್ತಮನು ಯುದ್ಧಾರ್ಥಿಗಳಾಗಿದ್ದಾರೆ ಎಂದು ತಿಳಿದನು.

ನಿರೀಕ್ಷ್ಯ ಚಾಸುರೇಂದ್ರೌ ತೌ ತತೋ ಯುದ್ಧೇ ಮನೋ ದಧೇ ।
ಅಥ ಯುದ್ಧಂ ಸಮಭವತ್ತಯೋರ್ನಾರಾಯಣಸ್ಯ ಚ ॥೬೩॥

ಅವರೊಡನೆ ಯುದ್ಧಾರ್ಥಿಗಳೆಂದು ಕಂಡು ಯುದ್ಧ ಮಾಡಲು ನಿಶ್ಚಯಿಸಿದನು. ಮಧು-ಕೈಟಭರಿಗೂ ನಾರಾಯಣನಿಗೂ ಯುದ್ಧವು ಆರಂಭವಾಯಿತು.

ರಜಸ್ತಮೋವಿಷ್ಟತನೂ ತಾವುಭೌ ಮಧುಕೈಟಭೌ ।
ಬ್ರಹ್ಮಣೋಪಚಿತಿಂ ಕುರ್ವನ್ ಜಘಾನ ಮಧುಸೂದನಃ ॥೬೪॥

ರಜಸ್ಸು-ತಮಸ್ಸು ಗುಣಗಳಿಂದ ಆವಿಷ್ಟರಾದ ಮಧು-ಕೈಟಭರನ್ನು ಮಧುಸೂದನನು ಸಂಹರಿಸಿದನು.

ತತಸ್ತಯೋರ್ವಧೇನಾಶು ವೇದಾಪಹರಣೇನ ಚ ।
ಶೋಕಾಪನಯನಂ ಚಕ್ರೇ ಬ್ರಹ್ಮಣಃ ಪುರುಷೋತ್ತಮಃ ॥೬೫॥

ಪುರುಷೋತ್ತಮನು ಅವರ ಸಂಹಾರ ಮಾಡಿ ವೇದಗಳನ್ನು ತಂದು ಬ್ರಹ್ಮನಿಗೆ ನೀಡಿ, ಅವನ ಶೋಕವನ್ನು ಪರಿಹರಿಸಿದನು.

ತತಃ ಪರಿವೃತೋ ಬ್ರಹ್ಮಾ ಹತಾರಿರ್ವೇದಸತ್ಕೃತಃ ।
ನಿರ್ಮಮೇ ಸ ತದಾ ಲೋಕಾನ್ ಕೃತ್ಸ್ನಾನ್ ಸ್ಥಾವರಜಂಗಮಾನ್ ॥

ವೇದಗಳಿಂದ ಸತ್ಕೃತನಾದ ಬ್ರಹ್ಮನು ಶ್ರೀಹರಿಯಿಂದ ಸಂರಕ್ಷಿತನಾದನು. ಶತ್ರುವಿನಿಂದ ಮುಕ್ತನಾದನು. ಸಮಗ್ರ ಚರಾಚರ ಪ್ರಾಣಿ ಪ್ರಪಂಚವನ್ನು ಸೃಷ್ಟಿಸಿದನು.

ದತ್ತ್ವಾ ಪಿತಾಮಹಾಯಾಗ್ರ್ಯಂ ಬುದ್ಧಿಂ ಲೋಕವಿಸರ್ಗಿಕೀಮ್ ।
ತತ್ರೈವಾಂತರ್ದಧೇ ದೇವೋ ಯತ ಏವಾಗತೋ ಹರಿಃ ॥೬೭॥

ಭಗವಾನ್ ನಾರಾಯಣನು ಬ್ರಹ್ಮನಿಗೆ ಲೋಕವನ್ನು ಸೃಷ್ಟಿಸುವ ಉತ್ಕೃಷ್ಟ ಬುದ್ಧಿಯನ್ನು ನೀಡಿ, ಅಲ್ಲಿಯೇ ಅದೃಶ್ಯನಾಗಿ, ಎಲ್ಲಿಂದ ಆಗಮಿಸಿದ್ದನೋ ಅಲ್ಲಿಗೆ ಹೊರಟು ಹೋದನು.

ತೌ ದಾನವೌ ಹರಿರ್ಹತ್ವಾ ಕೃತ್ವಾ ಹಯಶಿರಸ್ತನುಮ್ ।
ಪುನಃ ಪ್ರವೃತ್ತಿಧರ್ಮಾರ್ಥಂ ತಾಮೇವ ವಿದಧೇ ತನುಮ್ ॥೬೮॥

ಹಯಗ್ರೀವ ಶರೀರವನ್ನು ಧರಿಸಿ ದಾನವರನ್ನು ಸಂಹರಿಸಿ, ಪ್ರವೃತ್ತಿಧರ್ಮಕ್ಕಾಗಿ ಪುನಃ ಹಿಂದಿನ ಶರೀರವನ್ನೇ ಧರಿಸಿದನು.

ಏವಮೇಷ ಮಹಾಭಾಗೋ ಬಭೂವಾಶ್ವಶಿರಾ ಹರಿಃ ।
ಪೌರಾಣಮೇತದಾಖ್ಯಾತಂ ರೂಪಂ ವರದಮೈಶ್ವರಮ್ ॥೬೯॥

ಹೀಗೆ ಮಹಾಭಾಗನಾದ ಶ್ರೀಹರಿಯು ಅಶ್ವಶಿರನಾದನು. ಪುರಾತನನಾದ, ವರದಾಯಕನಾದ ಈ ಹಯಗ್ರೀವ ರೂಪವು ಪ್ರಸಿದ್ಧವಾದುದು.

ಯೋ ಹ್ಯೇತದ್ಬ್ರಾಹ್ಮಣೋ ನಿತ್ಯಂ ಶೃಣುಯಾದ್ಧಾರಯೇತ ವಾ ।
ನ ತಸ್ಯಾಧ್ಯಯನಂ ನಾಶಮುಪಗಚ್ಛೇತ್ ಕದಾಚನ ॥೭೦॥

ಯಾವ ದ್ವಿಜನು ಅನುದಿನವೂ ಹಯಗ್ರೀವ ಅವತಾರದ ಕಥೆಯನ್ನು ಕೇಳುತ್ತಾನೋ, ಸ್ಮರಿಸುತ್ತಾನೋ ಅವನ ಅಧ್ಯಯನವು ಎಂದೂ ನಿಷ್ಫಲವಾಗುವುದಿಲ್ಲ.

ಆರಾಧ್ಯ ತಪಸೋಗ್ರೇಣ ದೇವಂ ಹಯಶಿರೋಧರಮ್ ।
ಪಾಂಚಾಲೇನ ಕ್ರಮಃ ಪ್ರಾಪ್ತೋ ರಾಮೇಣ ಪಥಿ ದೇಶಿತೇ ॥೭೧॥

ಪಾಂಚಾಲದೇಶದ ಗಾಲವ ಮುನಿಯು ಮಹದೇವನು ಉಪದೇಶಿಸಿದ ರೀತಿಯಲ್ಲಿ ಸರ್ವೋತ್ತಮನಾದ ಹಯಗ್ರೀವನನ್ನು ಶ್ರೇಷ್ಠತಪಸ್ಸಿನಿಂದ ಆರಾಧಿಸಿ ವೇದದ ಕ್ರಮಪಾಠವನ್ನು ತಿಳಿದನು.

ಏತದ್ಧಯಶಿರೋ ರಾಜನ್ನಾಖ್ಯಾನಂ ತವ ಕೀರ್ತಿತಮ್ ।
ಪುರಾಣಂ ವೇದಸಮಿತಂ ಯನ್ಮಾಂ ತ್ವಂ ಪರಿಪೃಚ್ಛಸಿ ॥೭೨॥

ರಾಜನೇ, ಹಯಗ್ರೀವನ ವಿಷಯದಲ್ಲಿ ನೀನು ಪ್ರಶ್ನಿಸಿದಂತೆ ಪುರಾತನವಾದ, ವೇದಸಮ್ಮತವಾದ ಆಖ್ಯಾನವನ್ನು ಹೇಳಿದ್ದೇನೆ.

ಯಾಂ ಯಾಮಿಚ್ಛೇತ್ತನುಂ ದೇವಃ ಕರ್ತುಂ ಕಾರ್ಯವಿಧೌ ಕ್ವಚಿತ್ ।
ತಾಂ ತಾಂ ಕುರ್ಯಾದ್ ವಿಕುರ್ವಾಣಃ ಸ್ವಯಮಾತ್ಮಾನಮಾತ್ಮನಾ॥೭೩॥

ಶ್ರೀಹರಿಯು ಯಾವ ಯಾವ ಕಾರ್ಯಸಿದ್ಧಿಗಾಗಿ ದೇಹವನ್ನು ಧರಿಸಲು ಬಯಸುತ್ತಾನೋ ಅಂತಹ ಕಾರ್ಯಗಳನ್ನು ಮಾಡುವ ಸಮಯದಲ್ಲಿ ಆಯಾ ಶರೀರವನ್ನೇ ತನ್ನಿಂದಲೇ ತಾನು ಪ್ರಕಟಪಡಿಸುತ್ತಾನೆ.

ಏಷ ವೇದನಿಧಿಃ ಶ್ರೀಮಾನೇಷ ವೈ ತಪಸೋ ನಿಧಿಃ ।
ಏಷ ಯೋಗಶ್ಚ ಸಾಂಖ್ಯಂ ಚ ಬ್ರಹ್ಮ ಚಾಗ್ರ್ಯಂ ಹರಿರ್ವಿಭುಃ ॥೭೪॥

ಕಾಂತಿಯುಕ್ತನಾದ ಶ್ರೀಹರಿಯೇ ವೇದ-ತಪಸ್ಸುಗಳ ನಿಧಿಯು. ಯೋಗ-ಸಾಂಖ್ಯ-ಬ್ರಹ್ಮ-ಹವಿಸ್ಸು ಎಲ್ಲವೂ ವಿಭುವಾದ ಶ್ರೀಹರಿಯೇ ಆಗಿದ್ದಾನೆ.

ನಾರಾಯಣಪರಾ ವೇದಾ ಯಜ್ಞಾ ನಾರಾಯಣಾತ್ಮಕಾಃ ।
ತಪೋ ನಾರಾಯಣಪರಂ ನಾರಾಯಣಪರಾ ಗತಿಃ ॥೭೫॥

ವೇದಗಳೆಲ್ಲವೂ ನಾರಾಯಣನ ಸರ್ವೋತ್ತಮತ್ವವನ್ನೇ ಕೊಂಡಾಡುತ್ತಿವೆ. ಇದರಂತೆ ಯಾಗಗಳೆಲ್ಲವೂ ನಾರಾಯಣನ ಸ್ವರೂಪವಾಗಿವೆ. ತಪಸ್ಸಿನ ಫಲವು ನಾರಾಯಣನು. ನಾರಾಯಣನೇ ಪರಮಗತಿಯು.

ನಾರಾಯಣಪರಂ ಸತ್ಯಮೃತಂ ನಾರಾಯಣಾತ್ಮಕಮ್ ।
ನಾರಾಯಣಪರೋ ಧರ್ಮಃ ಪುನರಾವೃತ್ತಿದುರ್ಲಭಃ ॥೭೬॥

ನಾರಾಯಣನೇ ಪರಮಸತ್ಯವು. ಮೋಕ್ಷವು ನಾರಾಯಣನ ರೂಪವಾಗಿದೆ. ಪುನಃ ಧರ್ಮಗಳು ಸಂಸಾರವನ್ನು ತಪ್ಪಿಸುವ ನಾರಾಯಣ ಪರವಾಗಿಯೇ ಇವೆ.

ಪ್ರವೃತ್ತಿಲಕ್ಷಣಶ್ಚೈವ ಧರ್ಮೋ ನಾರಾಯಣಾತ್ಮಕಃ ।
ನಾರಾಯಣಾತ್ಮಕೋ ಗಂಧೋ ಭೂಮೌ ಶ್ರೇಷ್ಠತಮಃ ಸ್ಮೃತಃ ॥೭೭॥

ಪ್ರವೃತ್ತಿ ಲಕ್ಷಣಗಳಿಂದ ಕೂಡಿದ ಧರ್ಮಗಳು ನಾರಾಯಣನ ಸ್ವರೂಪವಾಗಿಯೇ ಇವೆ. ಪೃಥ್ವಿಯ ಶ್ರೇಷ್ಠಗುಣವೆನಿಸಿದ ಗಂಧವು ನಾರಾಯಣನಿಂದಲೇ ಅಭಿವ್ಯಕ್ತವಾಗಿವೆ.

ಅಪಾಂ ಚೈವ ಗುಣೋ ರಾಜನ್ ರಸೋ ನಾರಾಯಣಾತ್ಮಕಃ ।
ಜ್ಯೋತಿಷಾಂ ಚ ಗುಣೋ ರೂಪಂ ಸ್ಮೃತಂ ನಾರಾಯಣಾತ್ಮಕಮ್ ॥

ಜಲದ ಗುಣವಾದ ರಸಗಳು, ತೇಜಸ್ಸಿನ ಉತ್ತಮಗುಣವಾದ ರೂಪವು ನಾರಾಯಣಾತ್ಮಕವೇ ಎನಿಸಿದೆ.

ನಾರಾಯಣಾತ್ಮಕಶ್ಚಾಪಿ ಸ್ಪರ್ಶೋ ವಾಯುಗುಣಃ ಸ್ಮೃತಃ ।
ನಾರಾಯಣಾತ್ಮಕಶ್ಚಾಪಿ ಶಬ್ದ ಆಕಾಶಸಂಭವಃ ॥೭೯॥

ವಾಯುವಿನ ಗುಣವಾದ ಸ್ಪರ್ಶವೂ ನಾರಾಯಣನಿಂದಲೇ. ಆಕಾಶದಿಂದ ಹುಟ್ಟುವ ಶಬ್ದವು ನಾರಾಯಣನ ಸ್ವರೂಪದಿಂದಲೇ.

ಮನಶ್ಚಾಪಿ ತತೋ ಭೂತಮವ್ಯಕ್ತಗುಣಲಕ್ಷಣಮ್ ।
ನಾರಾಯಣಪರಃ ಕಾಲೋ ಜ್ಯೋತಿಷಾಮಯನಂ ಚ ಯತ್ ॥೮೦॥

ಅವ್ಯಕ್ತಗುಣ ಲಕ್ಷಣದಿಂದ ಕೂಡಿದ ಮನಸ್ಸು, ಕಾಲ, ನಕ್ಷತ್ರಮಂಡಲ ಎಲ್ಲವೂ ನಾರಾಯಣನನ್ನೇ ಆಶ್ರಯಿಸಿವೆ.

ನಾರಾಯಣಪರಾ ಕೀರ್ತಿಃ ಶ್ರೀಶ್ಚ ಲಕ್ಷ್ಮೀಶ್ಚ ದೇವತಾಃ ।
ನಾರಾಯಣಪರಂ ಸಾಂಖ್ಯಂ ಯೋಗೋ ನಾರಾಯಣಾತ್ಮಕಃ ॥೮೧॥

ಕೀರ್ತಿ, ಸಂಪತ್ತು, ಲಕ್ಷ್ಮಿ ಮುಂತಾದ ದೇವತೆಗಳು ನಾರಾಯಣನನ್ನೇ ಆಶ್ರಯಿಸಿದ್ದಾರೆ. ಸಾಂಖ್ಯಯೋಗಗಳು ನಾರಾಯಣನನ್ನೇ ಆಶ್ರಯಿಸಿವೆ.

ಕಾರಣಂ ಪುರುಷೋ ಯೇಷಾಂ ಪ್ರಧಾನಂ ಚಾಪಿ ಕಾರಣಮ್ ।
ಸ್ವಭಾವಶ್ಚೈವ ಕರ್ಮಾಣಿ ದೈವಂ ಯೇಷಾಂ ಚ ಕಾರಣಮ್ ॥೮೨॥

ಎಲ್ಲದಕ್ಕೂ ಕಾರಣವಾದ ಪ್ರಕೃತಿತತ್ತ್ವಕ್ಕೂ ಕಾರಣನಾದವನು ಶ್ರೀಹರಿಯು. ಸ್ವಭಾವ, ಕರ್ಮ, ದೈವ ಇವುಗಳಿಗೆಲ್ಲ ಭಗವಂತನೇ ಕಾರಣನು.

ಪಂಚಕಾರಣಸಂಖ್ಯಾತೋ ನಿಷ್ಠಾ ಸರ್ವತ್ರ ವೈ ಹರಿಃ ।
ತತ್ತ್ವಂ ಜಿಜ್ಞಾಸಮಾನಾನಾಂ ಹೇತುಭಿಃ ಸರ್ವತೋಮುಖೈಃ ॥೮೩॥

ಐದು ಕಾರಣರೂಪದಲ್ಲಿ ಭಗವಂತ ಎಲ್ಲೆಡೆಯೂ ವ್ಯಾಪಿಸಿದ್ದಾನೆ. ತತ್ತ್ವವನ್ನು ಯಾರು ತಿಳಿಯಲು ಬಯಸುತ್ತಾರೋ ಅವರಿಗೆ ಬೇಕಾದ ಕಾರಣಗಳಿಂದ ತಿಳಿಯಲ್ಪಡುವವನೂ ಇವನೇ.

ವ್ಯಾಖ್ಯಾನ ವಿಶೇಷ– ಅಧಿಷ್ಠಾನ, ಕರ್ತಾ, ಕರಣ, ಅನೇಕ ಚೇಷ್ಟೆಗಳು, ದೈವ ಇದೆಲ್ಲದರಲ್ಲಿಯೂ ಪರಮಾತ್ಮನೇ ಸನ್ನಿಹಿತನಾಗಿದ್ದಾನೆ.

ತತ್ತ್ವಮೇಕೋ ಮಹಾಯೋಗೀ ಹರಿರ್ನಾರಾಯಣಃ ಪ್ರಭುಃ ।
ಸಬ್ರಹ್ಮಕಾನಾಂ ಲೋಕಾನಾಮೃಷೀಣಾಂ ಚ ಮಹಾತ್ಮನಾಮ್ ॥೮೪॥

ಸಾಂಖ್ಯಾನಾಂ ಯೋಗಿನಾಂ ಚಾಪಿ ಯತೀನಾಮಾತ್ಮವೇದಿನಾಮ್ ।
ಮನೀಷಿತಂ ವಿಜಾನಾತಿ ಕೇಶವೋ ನ ತು ತಸ್ಯ ತೇ ॥೮೫॥

ಮಹಾಯೋಗಿಯಾದ, ಪ್ರಭುವಾದ ನಾರಾಯಣನೇ ಜ್ಞೇಯನೆನಿಸಿದ ಮಹಾತತ್ತ್ವವು. ಬ್ರಹ್ಮಾದಿ ದೇವತೆಗಳಿಗೆ, ಮಹಾತ್ಮರಾದ ಋಷಿಗಳಿಗೆ, ಸಾಂಖ್ಯ ಯೋಗಿಗಳಿಗೆ, ಭಗವತ್ತತ್ತ್ವವನ್ನೇ ಚಿಂತಿಸುವ ಯತಿಗಳಿಗೆ ಇವನೇ ಮುಖ್ಯನು. ಇವರೆಲ್ಲರ ಮನಸ್ಸನ್ನು ಕೇಶವನೊಬ್ಬನೇ ಬಲ್ಲವನು. ಕೇಶವನ ಅಂತರಂಗವನ್ನು ಯಾರೂ ತಿಳಿದಿರುವುದಿಲ್ಲ.

ಯೇ ಕೇಚಿತ್ ಸರ್ವಲೋಕೇಷು ದೈವಂ ಪಿತ್ರ್ಯಂ ಚ ಕುರ್ವತೇ ।
ದಾನಾನಿ ಚ ಪ್ರಯಚ್ಛಂತಿ ತಪ್ಯಂತಿ ಚ ತಪೋ ಮಹತ್ ॥೮೬॥

ಸರ್ವೇಷಾಮಾಶ್ರಯೋ ವಿಷ್ಣುರೈಶ್ವರಂ ವಿಧಿಮಾಸ್ಥಿತಃ ।
ಸರ್ವಭೂತಕೃತಾವಾಸೋ ವಾಸುದೇವೇತಿ ಚೋಚ್ಯತೇ ॥೮೭॥

ಯಾರು ಸಮಸ್ತ ಲೋಕಗಳಲ್ಲಿಯೂ ದೇವತೆಗಳಿಗೆ ಸಂಬಂಧಿಸಿದ, ಪಿತೃಗಳಿಗೆ ಸಂಬಂಧಿಸಿದ ಕರ್ಮಗಳನ್ನು ಮಾಡುತ್ತಾರೋ, ಮಹತ್ತಾದ ತಪಸ್ಸನ್ನು ಅನುಷ್ಠಾನ ಮಾಡುತ್ತಾರೋ, ದಾನಗಳನ್ನು ಮಾಡುತ್ತಾರೋ ಅವರೆಲ್ಲರಿಗೂ ಐಶ್ವರ್ಯಯೋಗವನ್ನು ಹೊಂದಿರುವ ವಿಷ್ಣುವೇ ಆಧಾರನು. ಸಮಸ್ತ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವುದರಿಂದಲೇ ಅವನನ್ನು ವಾಸುದೇವ ಎನ್ನುತ್ತಾರೆ.

ಅಯಂ ಹಿ ನಿತ್ಯಃ ಪರಮೋ ಮಹರ್ಷಿ-
ರ್ಮಹಾವಿಭೂತಿರ್ಗುಣವಾನ್ನಿರ್ಗುಣಾಖ್ಯಃ ।
ಗುಣೈಶ್ಚ ಸಂಯೋಗಮುಪೈತಿ ಶೀಘ್ರಂ
ಕಾಲೋ ಯಥರ್ತಾವೃತುಸಂಪ್ರಯುಕ್ತಃ ॥೮೮॥

ಮಹರ್ಷಿಯಾದ ನಾರಾಯಣನು ನಿತ್ಯನು, ಪರಮನು, ಮಹಾವಿಭೂತಿ ಗುಣವಂತನು, ಪ್ರಾಕೃತಗುಣರಹಿತನು. ಹೇಗೆ ಕಾಲವು ಗುಣರಹಿತವಾಗಿದ್ದರೂ ಋತುಗಳಿಗೆ ಸಂಬಂಧಿಸಿದ ಶೀತೋಷ್ಣಾದಿ ಗುಣಗಳನ್ನು ಹೊಂದುತ್ತದೋ ಹಾಗೆ ಭಗವಂತನು ಪ್ರಾಕೃತ ಗುಣರಹಿತನಾಗಿದ್ದರೂ ಗುಣಗಳ ಸಂಬಂಧವನ್ನು ಹೊಂದಿರುತ್ತಾನೆ.

ನೈವಾಸ್ಯ ವಿಂದಂತಿ ಗತಿಂ ಮಹಾತ್ಮನೋ
ನ ಚಾಗತಿಂ ಕಶ್ಚಿದಿಹಾನುಪಶ್ಯತಿ ।
ಜ್ಞಾನಾತ್ಮಕಾಃ ಸಂಯಮಿನೋ ಮಹರ್ಷಯಃ
ಪಶ್ಯಂತಿ ನಿತ್ಯಂ ಪುರುಷಂ ಗುಣಾಧಿಕಮ್ ॥೮೯॥

ನಾರಾಯಣನ ಮಾರ್ಗವನ್ನು ಅರಿತವರು ಯಾರೂ ಇಲ್ಲ. ಅವನ ಅವತಾರದ ವಿಷಯವನ್ನೂ ಅರಿಯರು. ಜ್ಞಾನಸ್ವರೂಪಿಗಳಾದ ಮಹರ್ಷಿಗಳು ಅನಂತ ಗುಣಸಂಪನ್ನನಾದ, ನಿತ್ಯನಾದ ಪುರುಷೋತ್ತಮನನ್ನು ಕಾಣುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ನಾರಾಯಣೀಯೇ ಅಶೀತ್ಯುತ್ತರಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂದನೆಯ ಅಧ್ಯಾಯ

ಧರ್ಮಬೋಧೆ

ಜನಮೇಜಯಃ

ಅಹೋ ಹ್ಯೇಕಾಂತಿನಃ ಸರ್ವಾನ್ ಪ್ರೀಣಾತಿ ಭಗವಾನ್ ಹರಿಃ ।
ವಿಧಿಪ್ರಯುಕ್ತಾಂ ಪೂಜಾಂ ಚ ಗೃಹ್ಣಾತಿ ಭಗವಾನ್ಸ್ವಯಮ್ ॥೧॥

ಜನಮೇಜಯ– ಪೂಜ್ಯರೇ, ಆಶ್ಚರ್ಯವು! ಶ್ರೀಹರಿಯು ಏಕಾಂತಭಕ್ತಿಯನ್ನು ಮಾಡುವ ಎಲ್ಲ ಭಕ್ತರ ವಿಷಯದಲ್ಲಿಯೂ ಪ್ರಸನ್ನನಾಗಿರುತ್ತಾನೆ. ಏಕಾಂತಭಕ್ತರು ಮಾಡುವ ಪೂಜೆಯನ್ನು ಶ್ರೀಹರಿಯೇ ಸ್ವತಃ ಸ್ವೀಕರಿಸುತ್ತಾನೆ.

ಯೇ ತು ದಗ್ಧೇಂಧನಾ ಲೋಕೇ ಪುಣ್ಯಪಾಪವಿವರ್ಜಿತಾಃ ।
ತೇಷಾಂ ತ್ವಯಾಭಿನಿರ್ದಿಷ್ಟಾ ಪಾರಂಪರ್ಯಾಗತಾ ಗತಿಃ ॥೨॥

ಪ್ರಪಂಚದಲ್ಲಿ ಯಾರು ಪಾಪದಿಂದ ಕಟ್ಟಿಗೆಯನ್ನು ಸುಟ್ಟುಕೊಂಡಿರುತ್ತಾರೋ, ಪುಣ್ಯ-ಪಾಪಗಳಿಂದ ದೂರವಾಗಿರುತ್ತಾರೋ ಅವರಿಗೆ ಪರಂಪರೆಯಿಂದ ಲಭಿಸುವ ಗತಿ ಯಾವುದೆಂದು ತಿಳಿಸಿರಿ.

ಚತುರ್ಥ್ಯಾಂ ಚೈವ ತೇ ಗತ್ಯಾಂ ಗಚ್ಛಂತಿ ಪುರುಷೋತ್ತಮಮ್ ।
ಏಕಾಂತಿನಸ್ತು ಪುರುಷಾ ಗಚ್ಛಂತಿ ಪರಮಂ ಪದಮ್ ॥೩॥

ಧರ್ಮ-ಅರ್ಥ-ಕಾಮ-ಮೋಕ್ಷ ಎಂಬಲ್ಲಿ ನಾಲ್ಕನೆಯ ಗತಿಯಿಂದ ಪುರುಷೋತ್ತಮನನ್ನು ಹೊಂದುತ್ತಾರೆ. ಏಕಾಂತಭಕ್ತರು ಮೋಕ್ಷವನ್ನೇ ಹೊಂದುತ್ತಾರೆ.

ನೂನಮೇಕಾಂತಧರ್ಮೋಽಯಂ ಶ್ರೇಷ್ಠೋ ನಾರಾಯಣಪ್ರಿಯಃ ।
ಅಗತ್ವಾ ಗತಯಸ್ತಿಸ್ರೋ ಯದ್ ಗಚ್ಛಂತ್ಯವ್ಯಯಂ ಹರಿಮ್ ॥೪॥

ಏಕಾಂತಭಕ್ತಿ ಎಂಬುದು ನಾರಾಯಣನಿಗೆ ಅತ್ಯಂತ ಪ್ರಿಯವಾದುದು, ಶ್ರೇಷ್ಠವಾದುದು. ಅಂತಹ ಭಕ್ತಿಯನ್ನು ಮಾಡಿದವರು ಧರ್ಮ-ಅರ್ಥ-ಕಾಮಗಳೆಂಬ ಮೂರು ಗತಿಗಳಿಗೆ ಸಾಗದೆ ಮೋಕ್ಷಕ್ಕೇ ಹೋಗುತ್ತಾರೆ.

ಸಹೋಪನಿಷದಾನ್ವೇದಾನ್ಯೇ ವಿಪ್ರಾಃ ಸಮ್ಯಗಾಸ್ಥಿತಾಃ ।
ಪಠಂತಿ ವಿಧಿಮಾಸ್ಥಾಯ ಯೇ ಚಾಪಿ ಯತಿಧರ್ಮಿಣಃ ॥೫॥

ತೇಭ್ಯೋ ವಿಶಿಷ್ಟಾಂ ಜಾನಾಮಿ ಗತಿಮೇಕಾಂತಿನಾಂ ನೃಣಾಮ್ ।
ಕೇನೈಷ ಧರ್ಮಃ ಕಥಿತೋ ದೇವೇನ ಋಷಿಣಾಪಿ ವಾ ॥೬॥

ಯಾರು ಉಪನಿಷತ್ತುಗಳಿಂದ ಕೂಡಿದ ವೇದಗಳನ್ನೇ ಪರಮ ಆಶ್ರಯವೆಂದು ಭಾವಿಸಿ ವಿಧಿಬದ್ಧವಾಗಿ ಅಧ್ಯಯನ ಮಾಡುತ್ತಾರೋ, ಯತಿಧರ್ಮದಲ್ಲಿ ರತರಾಗಿರುತ್ತಾರೋ ಅವರಿಗೆ ಲಭಿಸುವ ಸದ್ಗತಿಗಳಿಗಿಂತಲೂ ಏಕಾಂತಭಕ್ತರಿಗೆ ಲಭಿಸುವ ಗತಿಯು ಶ್ರೇಷ್ಠವಾದುದು ಎಂದು ನಾನು ಭಾವಿಸುತ್ತೇನೆ. ಈ ಭಕ್ತಿ ಸಿದ್ಧಾಂತವನ್ನು ಮೊದಲು ಯಾವ ದೇವತೆ ಅಥವಾ ಯಾವ ಋಷಿಯು ಉಪದೇಶಿಸಿದನು?

ಏಕಾಂತಿನಾಂ ಚ ಕಾ ಚರ್ಯಾ ಕದಾ ಚೋತ್ಪಾದಿತಾ ವಿಭೋ ।
ಏತನ್ಮೇ ಸಂಶಯಂ ಛಿಂಧಿ ಪರಂ ಕೌತೂಹಲಂ ಹಿ ಮೇ ॥೭॥

ಏಕಾಂತಭಕ್ತರ ಚರ್ಯೆಯು ಹೇಗಿರುತ್ತದೆ? ಯಾವಾಗ ಈ ಭಕ್ತಿಯು ಹುಟ್ಟಿತು? ಇದರಲ್ಲಿ ಸಂಶಯಗಳಿವೆ, ಕುತೂಹಲವಿದೆ. ಇದನ್ನು ಪರಿಹರಿಸಿರಿ.

ವೈಶಂಪಾಯನಃ

ಸಮುಪೋಢೇಷ್ವನೀಕೇಷು ಕುರುಪಾಂಡವಯೋರ್ಮೃಧೇ ।
ಅರ್ಜುನೇ ವಿಮನಸ್ಕೇ ಚ ಗೀತಾ ಭಗವತಾ ಸ್ವಯಮ್ ॥೮॥

ವೈಶಂಪಾಯನ– ಜನಮೇಜಯನೇ, ಕುರು-ಪಾಂಡವರು ಯುದ್ಧಕ್ಕೆ ಸಜ್ಜಾಗಿ ನಿಂತಾಗ ಅರ್ಜುನನು ಖಿನ್ನಮನಸ್ಕನಾಗಿ ಕುಳಿತನು. ಆ ಸಮಯದಲ್ಲಿ ಭಗವಂತನಾದ ಕೃಷ್ಣನೇ ಗೀತೆಯನ್ನು ಉಪದೇಶಿಸಿದನು.

ಆಗತಿಶ್ಚ ಗತಿಶ್ಚೈವ ಪೂರ್ವಂ ತೇ ಕಥಿತಾ ಮಯಾ ।
ಗಹನೋ ಹ್ಯೇಷ ಧರ್ಮೋ ವೈ ದುರ್ವಿಜ್ಞೇಯೋಽಕೃತಾತ್ಮಭಿಃ ॥೯॥

ಹಿಂದೆ ನಾನು ನಿವೃತ್ತಿಧರ್ಮವನ್ನು, ಪ್ರವೃತ್ತಿಧರ್ಮವನ್ನು ಹೇಳಿದ್ದೇನೆ. ಏಕಾಂತ ಧರ್ಮವು ಉಪಾಸಿಸಲು ತುಂಬಾ ಗಹನವಾದುದು. ಅಜಿತೇಂದ್ರಿಯರಿಂದ ತಿಳಿಯಲಾಗದು.

ಸಮ್ಮಿತಃ ಸಾಮವೇದೇನ ಪುರೈವಾದಿಯುಗೇ ಕೃತಃ ।
ಧಾರ್ಯತೇ ಸ್ವಯಮೀಶೇನ ರಾಜನ್ನಾರಾಯಣೇನ ಹ ॥೧೦॥

ಮಹಾರಾಜನೇ, ಕೃತಯುಗದಲ್ಲಿಯೇ ಸಾಮವೇದದ ಮೂಲಕ ಈ ಭಕ್ತಿಮಾರ್ಗವು ಹೇಳಲ್ಪಟ್ಟಿದೆ. ಈ ಧರ್ಮವನ್ನು ಸ್ವಯಂ ನಾರಾಯಣನೇ ಧರಿಸಿದ್ದಾನೆ.

ಏತಮರ್ಥಂ ಮಹಾರಾಜ ಪೃಷ್ಟಃ ಪಾರ್ಥೇನ ನಾರದಃ ।
ಋಷಿಮಧ್ಯೇ ಮಹಾಭಾಗಃ ಶೃಣ್ವತೋಃ ಕೃಷ್ಣಭೀಷ್ಮಯೋಃ ॥೧೧॥

ಕುಂತೀಸುತನಾದ ಯುಧಿಷ್ಠಿರನು ಕೃಷ್ಣ-ಭೀಷ್ಮರ ನಡುವೆ ಕೇಳುತ್ತಿದ್ದಂತೆ ಋಷಿಗಳ ಮಧ್ಯದಲ್ಲಿ ಇದೇ ವಿಷಯದಲ್ಲಿ ಪಾರ್ಥನು ನಾರದರನ್ನು ಪ್ರಶ್ನಿಸಿದನು.

ಗುರುಣಾ ಚ ಮಮಾಪ್ಯೇಷ ಕಥಿತೋ ನೃಪಸತ್ತಮ ।
ಯಥಾ ತು ಕಥಿತಸ್ತತ್ರ ನಾರದೇನ ತಥಾ ಶೃಣು ॥೧೨॥

ನಾರದರು ಋಷಿಗಳ ನಡುವೆ ಪಾರ್ಥಾದಿಗಳಿಗೆ ಹೇಳಿದ ವಿಷಯವನ್ನೇ ನನ್ನ ಗುರುಗಳಾದ ವ್ಯಾಸರು ನನಗೆ ತಿಳಿಸಿದರು. ಅದನ್ನೇ ನಾನು ನಿನಗೆ ಹೇಳುತ್ತೇನೆ, ಕೇಳು.

ಯದಾಸೀನ್ಮಾನಸಂ ಜನ್ಮ ನಾರಾಯಣಮುಖೋದ್ಗತಮ್ ।
ಬ್ರಹ್ಮಣಃ ಪೃಥಿವೀಪಾಲ ತದಾ ನಾರಾಯಣಃ ಸ್ವಯಮ್ ।
ತೇನ ಧರ್ಮೇಣ ಕೃತವಾನ್ ದೈವಂ ಪಿತ್ರ್ಯಂ ಚ ಭಾರತ ॥೧೩॥

ರಾಜನೇ, ಸೃಷ್ಟಿಯ ಆರಂಭದಲ್ಲಿ ನಾರಾಯಣನ ಮುಖದಿಂದ ಬ್ರಹ್ಮನ ಮಾನಸಿಕ ಸೃಷ್ಟಿಯು ಯಾವಾಗ ಆಯಿತೋ ಆಗಲೇ ನಾರಾಯಣನು ಧರ್ಮವನ್ನು ಬ್ರಹ್ಮನಿಗೆ ಸ್ವಯಂ ಉಪದೇಶಿಸಿದನು. ಆ ಉಪದೇಶದ ಧರ್ಮದಿಂದಲೇ ದೈವ-ಪಿತೃ ಸಂಬಂಧವಾದ ಕ್ರಿಯೆಗಳನ್ನು ನಿರೂಪಿಸಿದನು.

ಫೇನಪಾ ಋಷಯಶ್ಚೈವ ತಂ ಧರ್ಮಂ ಪ್ರತಿಪೇದಿರೇ ।
ವೈಖಾನಸಾಃ ಫೇನಪೇಭ್ಯೋ ಧರ್ಮಮೇತಂ ಪ್ರಪೇದಿರೇ ।
ವೈಖಾನಸೇಭ್ಯಃ ಸೋಮಸ್ತು ತತಃ ಸೋಽಂತರ್ದಧೇ ಪುನಃ ॥೧೪॥

ಬಳಿಕ ಫೇನಪ ಎಂಬ ಋಷಿಗಳು ಈ ಧರ್ಮವನ್ನು ವಿಷ್ಣುವಿನಿಂದ ಪಡೆದುಕೊಂಡರು. ಫೇನಪರಿಂದ ವೈಖಾನಸರು ಈ ಧರ್ಮವನ್ನು ಹೊಂದಿದರು. ವೈಖಾನಸರಿಂದ ಸೋಮನು ಈ ಧರ್ಮವನ್ನು ಪಡೆದನು. ನಂತರ ಈ ಧರ್ಮವು ಲುಪ್ತವಾಯಿತು.

ಯದಾಸೀಚ್ಚಾಕ್ಷುಷಂ ಜನ್ಮ ದ್ವಿತೀಯಂ ಬ್ರಹ್ಮಣೋ ನೃಪ ।
ತದಾ ಪಿತಾಮಹಾತ್ ಸೋಮಾದೇತಂ ಧರ್ಮಮಜಾನತ ।
ನಾರಾಯಣಾತ್ಮಕಂ ರಾಜನ್ರುದ್ರಾಯ ಪ್ರದದೌ ಚ ಸಃ ॥೧೫॥

ಮತ್ತೊಂದು ಕಲ್ಪದಲ್ಲಿ ಯಾವಾಗ ಚತುರ್ಮುಖ ಬ್ರಹ್ಮನಿಗೆ ನಾರಾಯಣನ ಕಣ್ಣುಗಳ ದೆಸೆಯಿಂದ ಎರಡನೆಯ ಜನ್ಮವಾಯಿತೋ ಆಗ ಬ್ರಹ್ಮನು ಸೋಮನಿಂದ ಆ ಧರ್ಮವನ್ನು ತಿಳಿದುಕೊಂಡು ಅದೇ ಧರ್ಮವನ್ನು ರುದ್ರನಿಗೆ ಉಪದೇಶಿಸಿದನು.

ತತೋ ಯೋಗಸ್ಥಿತೋ ರುದ್ರಃ ಪುರಾ ಕೃತಯುಗೇ ನೃಪ ।
ವಾಲಖಿಲ್ಯಾನೃಷೀನ್ ಸರ್ವಾನ್ ಧರ್ಮಮೇತಮಪಾಠಯತ್ ।
ಅಂತರ್ದಧೇ ತತೋ ಭೂಯಸ್ತಸ್ಯ ದೇವಸ್ಯ ಮಾಯಯಾ ॥೧೬॥

ಬಳಿಕ ಯೋಗದಲ್ಲಿ ನಿಷ್ಠನಾದ ರುದ್ರನು ಕೃತಯುಗದಲ್ಲಿರುವ ಈ ಧರ್ಮವನ್ನು ವಾಲಖಿಲ್ಯ ಋಷಿಗಳಿಗೆ ಹೇಳಿದನು. ಬಳಿಕ ವಿಷ್ಣುವಿನ ಸಂಕಲ್ಪದಿಂದ ಆ ಧರ್ಮವು ಪುನಃ ಮುಕ್ತವಾಯಿತು.

ತೃತೀಯಂ ಬ್ರಹ್ಮಣೋ ಜನ್ಮ ಯದಾಸೀದ್ವಾಚಿಕಂ ಮಹತ್ ।
ತತ್ರೈಷ ಧರ್ಮಃ ಸಂಭೂತಃ ಸ್ವಯಂ ನಾರಾಯಣಾನ್ನೃಪ ॥೧೭॥

ಮತ್ತೊಂದು ಕಲ್ಪದಲ್ಲಿ ಚತುರ್ಮುಖ ಬ್ರಹ್ಮನಿಗೆ ನಾರಾಯಣನ ವಾಣಿಯಿಂದ ಮೂರನೆಯ ಜನ್ಮವುಂಟಾಯಿತೋ ಆಗ ಅಲ್ಲಿ ಪುನಃ ನಾರಾಯಣನಿಂದಲೇ ಈ ಧರ್ಮವು ಪ್ರಕಟವಾಯಿತು.

ಸುಪರ್ಣೋ ನಾಮ ತಮೃಷಿಃ ಪ್ರಾಪ್ತವಾನ್ ಪುರುಷೋತ್ತಮಾತ್ ।
ತಪಸಾ ವೈ ಸುತಪ್ತೇನ ದಮೇನ ನಿಯಮೇನ ಚ ॥೧೮॥

ಪುರುಷೋತ್ತಮನಿಂದಲೇ ಸುಪರ್ಣನೆಂಬ ಋಷಿಯು, ಇಂದ್ರಿಯಸಂಯಮ, ಮನೋನಿಗ್ರಹ ಇವುಗಳಿಂದ ಕೂಡಿದ ದುಷ್ಕರವಾದ ತಪಸ್ಸಿನಿಂದ ಈ ಧರ್ಮವನ್ನು ಪಡೆದುಕೊಂಡನು.

ತ್ರಿಃ ಪರಿಕ್ರಾಂತವಾನೇತತ್ ಸುಪರ್ಣೋ ಧರ್ಮಮುತ್ತಮಮ್ ।
ಯಸ್ಮಾತ್ತಸ್ಮಾದ್ವ್ರತಂ ಹ್ಯೇತತ್ತ್ರಿಸೌಪರ್ಣಮಿಹೋಚ್ಯತೇ ॥೧೯॥

ಸುಪರ್ಣನು ಈ ಧರ್ಮಸಂಹಿತೆಯನ್ನು ಮೂರು ಬಾರಿ ಆವೃತ್ತಿ ಮಾಡಿದನು. ಆದ್ದರಿಂದ ಸೌಪರ್ಣ ಎಂದು ಈ ಧರ್ಮವನ್ನು ಕರೆಯುತ್ತಾರೆ.

ಋಗ್ವೇದಪಾಠಪಠಿತಂ ವ್ರತಮೇತದ್ಧಿ ದುಶ್ಚರಮ್ ।
ಸುಪರ್ಣಾಚ್ಚಾಪ್ಯಧಿಗತೋ ಧರ್ಮ ಏಷ ಸನಾತನಃ ॥೨೦॥

ಅತ್ಯಂತ ಕಠಿಣವಾದ ಈ ಧರ್ಮವು ಋಗ್ವೇದ ಪಾಠದಲ್ಲಿ ಹೇಳಲ್ಪಟ್ಟಿದೆ. ಜಗತ್ತಿಗೆ ಪ್ರಾಣಸ್ವರೂಪನಾದ ವಾಯುವು ಸುಪರ್ಣನಿಂದ ಈ ಧರ್ಮವನ್ನು ಪಡೆದುಕೊಂಡನು.

ವಾಯುನಾ ದ್ವಿಪದಾಂ ಶ್ರೇಷ್ಠ ಪ್ರಥಿತೋ ಜಗದಾಯುಷಾ ।
ವಾಯೋಃ ಸಕಾಶಾತ್ ಪ್ರಾಪ್ತಶ್ಚ ಋಷಿಭಿರ್ವಿಫಸಾಶಿಭಿಃ ॥೨೧॥

ಯಜ್ಞಶೇಷ ಭಕ್ಷಕರಾದ ಋಷಿಗಳು ವಾಯುವಿನಿಂದ ಈ ಧರ್ಮವನ್ನು ಮುಂದೆ ಪಡೆದುಕೊಂಡರು.

ತೇಭ್ಯೋ ಮಹೋದಧಿಶ್ಚೈನಂ ಪ್ರಾಪ್ತವಾನ್ ಧರ್ಮಮುತ್ತಮಮ್ ।
ತತಃ ಸೋಽಂತರ್ದಧೇ ಭೂಯೋ ನಾರಾಯಣಸಮಾಹಿತಃ ॥೨೨॥

ಬಳಿಕ ಆ ಮಹರ್ಷಿಗಳಿಂದ ಮಹೋದಧಿಯು ಈ ಧರ್ಮವ ಪಡೆದುಕೊಂಡನು. ಪುನಃ ಈ ಧರ್ಮವು ಲುಪ್ತವಾಗಿ ನಾರಾಯಣನಲ್ಲಿ ಆಶ್ರಯ ಹೊಂದಿತು.

ಯದಾ ಭೂಯಃ ಶ್ರವಣಜಾ ಸೃಷ್ಟಿರಾಸೀನ್ಮಹಾತ್ಮನಃ ।
ಬ್ರಹ್ಮಣಃ ಪುರುಷವ್ಯಾಘ್ರ ತತ್ರ ಕೀರ್ತಯತಃ ಶೃಣು ॥೨೩॥

ಮತ್ತೊಂದು ಕಲ್ಪದಲ್ಲಿ ಬ್ರಹ್ಮನ ನಾಲ್ಕನೆಯ ಜನ್ಮವು ನಾರಾಯಣನ ಶ್ರೋತ್ರೇಂದ್ರಿಯದಿಂದ ಆದಾಗ ಪುನಃ ಧರ್ಮವು ಹುಟ್ಟಿತು. ಹೇಗೆ ಎಂಬುದನ್ನು ಹೇಳುತ್ತೇನೆ, ಕೇಳು.

ಜಗತ್ಸ್ರಷ್ಟುಮನಾ ದೇವೋ ಹರಿರ್ನಾರಾಯಣಃ ಸ್ವಯಮ್ ।
ಚಿಂತಯಾಮಾಸ ಪುರುಷಂ ಜಗತ್ ಸರ್ಗಕರಂ ಪ್ರಭುಃ ॥೨೪॥

ದೇವನಾದ ಸ್ವಯಂ ಹರಿನಾರಾಯಣನೇ ಜಗತ್ತನ್ನು ಸೃಷ್ಟಿಸಲು ಚಿಂತಿಸಿದನು. ಸ್ಥಾವರ-ಜಂಗಮಾತ್ಮಕವಾದ ಜಗತ್ತನ್ನು ಸೃಷ್ಟಿಸಲು ಸಮರ್ಥನಾದ ಒಬ್ಬ ಪುರುಷನನ್ನು ಸ್ಮರಿಸಿದನು.

ಅಥ ಚಿಂತಯತಸ್ತಸ್ಯ ಕರ್ಣಾಭ್ಯಾಂ ಪುರುಷಃ ಸೃತಃ ।
ಪ್ರಜಾಸರ್ಗಕರೋ ಬ್ರಹ್ಮಾ ತಮುವಾಚ ಜಗತ್ಪತಿಃ ॥೨೫॥

ಹೀಗೆ ಚಿಂತಿಸುತ್ತಿರುವಾಗಲೇ ಭಗವಂತನ ಕಿವಿಗಳಿಂದ ಪುರುಷನೊಬ್ಬನು ಸೃಷ್ಟನಾದನು. ಅವನೇ ಪ್ರಜೆಗಳನ್ನು ಸೃಷ್ಟಿಸಿದನು. ಅವನೇ ಬ್ರಹ್ಮನು. ಅವನಿಗೆ ನಾರಾಯಣನು ಹೀಗೆ ಹೇಳಿದನು.

ಸೃಜ ಪ್ರಜಾಃ ಪುತ್ರ ಸರ್ವಾ ಮುಖತಃ ಪಾದತಸ್ತಥಾ ।
ಶ್ರೇಯಸ್ತವ ವಿಧಾಸ್ಯಾಮಿ ಬಲಂ ತೇಜಶ್ಚ ಸುವ್ರತ ॥೨೬॥

ಮಗನೇ, ನಿನ್ನ ಮುಖ-ಪಾದಗಳಿಂದ ಪ್ರಜೆಗಳನ್ನು ಸೃಷ್ಟಿಸು. ನಿನಗೆ ಶ್ರೇಯಸ್ಸನ್ನುಂಟು ಮಾಡುತ್ತೇನೆ. ನಿನ್ನ ಬಲ-ತೇಜಸ್ಸುಗಳು ನನ್ನಿಂದ ವೃದ್ಧಿ ಹೊಂದುತ್ತವೆ.

ಧರ್ಮಂ ಚ ಮತ್ತೋ ಗೃಹ್ಣೀಷ್ವ ಸಾತ್ವತಂ ನಾಮ ನಾಮತಃ ।
ತೇನ ಸರ್ವಂ ಕೃತಯುಗಂ ಸ್ಥಾಪಯಸ್ವ ಯಥಾವಿಧಿ ॥೨೭॥

ಸಾತ್ವತ ಎಂಬ ಹೆಸರಿನ ಧರ್ಮವನ್ನು ನೀನು ನನ್ನಿಂದ ಸ್ವೀಕರಿಸು. ಇದರಿಂದ ಶ್ರೇಷ್ಠವಾದ ಸತ್ಯಯುಗವನ್ನು ವಿಧಿಬದ್ಧವಾಗಿ ನೀನು ಸ್ಥಾಪಿಸು.

ತತೋ ಬ್ರಹ್ಮಾ ನಮಶ್ಚಕ್ರೇ ದೇವಾಯ ಹರಿಮೇಧಸೇ ।
ಧರ್ಮಂ ಚಾಗ್ರ್ಯಂ ಸ ಜಗ್ರಾಹ ಸರಹಸ್ಯಂ ಸಸಂಗ್ರಹಮ್ ।
ಆರಣ್ಯಕೇನ ಸಹಿತಂ ನಾರಾಯಣಮುಖೋದ್ಗತಮ್ ॥೨೮॥

ಬಳಿಕ ಬ್ರಹ್ಮನು ದೇವನಾದ ಹರಿಮೇಧನಿಗೆ ನಮಸ್ಕರಿಸಿ ಶ್ರೇಷ್ಠವಾದ ಧರ್ಮವನ್ನು

ಸ್ವೀಕರಿಸಿದನು. ರಹಸ್ಯದಿಂದ ಕೂಡಿದ, ಆರಣ್ಯಕದಿಂದ ಸಹಿತವಾದ, ನಾರಾಯಣನ ಮುಖೋದ್ಗತವಾದ ಧರ್ಮವನ್ನು ಸ್ವೀಕರಿಸಿದನು.

ಉಪದಿಶ್ಯ ತತೋ ಧರ್ಮಂ ಬ್ರಹ್ಮಣೇऽಮಿತತೇಜಸೇ ।
ತಂ ಕಾರ್ತಯುಗಧರ್ಮಾಣಂ ನಿರಾಶೀಃಕರ್ಮಸಂಜ್ಞಿತಮ್ ।
ಜಗಾಮ ತಮಸಃ ಪಾರಂ ಯತ್ರಾವ್ಯಕ್ತಂ ವ್ಯವಸ್ಥಿತಮ್ ॥೨೯॥

ಬಳಿಕ ಮಹಾತೇಜಸ್ವಿಯಾದ ಬ್ರಹ್ಮನಿಗೆ ಸಾತ್ವತ ಧರ್ಮವನ್ನು ಉಪದೇಶಿಸಿದನು. ಶ್ರೀಹರಿಯು ಫಲದ ಆಸೆಯನ್ನು ತೊರೆದು ಕರ್ಮವನ್ನು ಮಾಡುವುದರಿಂದ ಭಗವಂತನಿಂದ ಕರ್ಮ ಎಂಬ ಹೆಸರನ್ನು ಪಡೆದು, ಕೃತಯುಗಧರ್ಮವನ್ನು ಚತುರ್ಮುಖ ಬ್ರಹ್ಮನು ಸ್ಥಾಪಿಸಿದನು. ಬಳಿಕ ಕತ್ತಲೆಯಿಂದ ಆಚೆಯಿರುವ ಅವ್ಯಕ್ತ ತತ್ತ್ವವು ನೆಲೆಸಿದ ವೈಕುಂಠ ಲೋಕಕ್ಕೆ ಭಗವಂತನು ತೆರಳಿದನು.

ತತೋऽಥ ವರದೋ ದೇವೋ ಬ್ರಹ್ಮಲೋಕಪಿತಾಮಹಃ ।
ಅಸೃಜತ್ಸ ತದಾ ಲೋಕಾನ್ ಕೃತ್ಸ್ನಾನ್ ಸ್ಥಾವರಜಂಗಮಾನ್ ॥೩೦॥

ಬಳಿಕ ಲೋಕಪಿತಾಮಹನಾದ, ವರದನಾದ ಬ್ರಹ್ಮನು ಸ್ಥಾವರ-ಜಂಗಮಗಳಿಂದ ಕೂಡಿದ ಸಮಸ್ತ ಲೋಕಗಳನ್ನು ಸೃಷ್ಟಿಸಿದನು.

ತತಃ ಪ್ರಾವರ್ತತ ತದಾ ಆದೌ ಕೃತಯುಗಂ ಶುಭಮ್ ।
ತತೋ ಹಿ ಸಾತ್ವತೋ ಧರ್ಮೋ ವ್ಯಾಪ್ಯ ಲೋಕಾನವಸ್ಥಿತಃ ॥೩೧॥

ಆಗ ಮೊದಲನೆಯದ್ದಾದ, ಮಂಗಳವಾದ ಕೃತಯುಗವು ಆರಂಭವಾಯಿತು. ಆ ಸಮಯದಲ್ಲಿ ಸಾತ್ವತ ಧರ್ಮವು ಲೋಕದ ತುಂಬಾ ವ್ಯಾಪಿಸಿ ನೆಲೆಗೊಂಡಿತು.

ತೇನೈವಾದ್ಯೇನ ಧರ್ಮೇಣ ಬ್ರಹ್ಮಾ ಲೋಕವಿಸರ್ಗಕೃತ್ ।
ಪೂಜಯಾಮಾಸ ದೇವೇಶಂ ಹರಿಂ ನಾರಾಯಣಂ ಪ್ರಭುಮ್ ॥೩೨॥

ಸೃಷ್ಟಿಕರ್ತನಾದ ಬ್ರಹ್ಮನು ಆದಿ ಧರ್ಮವೆನಿಸಿದ ಈ ನಿವೃತ್ತಿಧರ್ಮದ ಮೂಲಕವೇ ಪ್ರಭುವಾದ ನಾರಾಯಣನನ್ನು, ಹರಿಯನ್ನು, ದೇವೇಶನನ್ನು ಪೂಜಿಸಿದನು.

ಧರ್ಮಪ್ರತಿಷ್ಠಾಹೇತೋಶ್ಚ ಮನುಂ ಸ್ವಾರೋಚಿಷಂ ತತಃ ।
ಅಧ್ಯಾಪಯಾಮಾಸ ತದಾ ಲೋಕಾನಾಂ ಹಿತಕಾಮ್ಯಯಾ ॥೩೩॥

ಧರ್ಮಪ್ರತಿಷ್ಠಾಪನೆಗಾಗಿ ಲೋಕಗಳಿಗೆ ಹಿತವನ್ನು ಮಾಡುವ ದೃಷ್ಟಿಯಿಂದ ಬ್ರಹ್ಮನು ಸಾತ್ವತ ಧರ್ಮವನ್ನು ಸ್ವಾರೋಚಿಷ ಎಂಬ ಋಷಿಗೆ ಉಪದೇಶಿಸಿದನು.

ತತಃ ಸ್ವಾರೋಚಿಷಃ ಪುತ್ರಂ ಸ್ವಯಂ ಶಂಖಪದಂ ನೃಪ ।
ಅಧ್ಯಾಪಯತ್ ಪುರಾವ್ಯಗ್ರಃ ಸರ್ವಲೋಕಪತಿರ್ವಿಭುಃ ॥೩೪॥

ಬಳಿಕ ಲೋಕಪತಿಯಾದ, ಪ್ರಭುವಾದ, ಅವ್ಯಗ್ರನಾದ ಸ್ವಾರೋಚಿಷ ಮನುವು ಶಂಖಪದ ಎಂಬ ತನ್ನ ಮಗನಿಗೆ ಸಾತ್ವತ ಧರ್ಮವನ್ನು ಅಧ್ಯಯನ ಮಾಡಿಸಿದನು.

ತತಃ ಶಂಖಪದಶ್ಚಾಪಿ ಪುತ್ರಮಾತ್ಮಜಮೌರಸಮ್ ।
ದಿಶಾಪಾಲಂ ಸುಧರ್ಮಾಣಮಧ್ಯಾಪಯತ ಭಾರತ ।
ತತಃ ಸೋಽಂತರ್ದಧೇ ಭೂಯಃ ಪ್ರಾಪ್ತೇ ತ್ರೇತಾಯುಗೇ ಪುನಃ ॥೩೫॥

ನಂತರ ಶಂಖಪದನು ತನ್ನ ಔರಸಪುತ್ರನಾದ, ದಿಕ್ಪತಿಯಾದ ಸುಧರ್ಮನಿಗೆ ಅಧ್ಯಯನ ಮಾಡಿಸಿದನು. ಆದರೆ ತ್ರೇತಾಯುಗದ ಆರಂಭದಲ್ಲಿ ಪುನಃ ಈ ಸಾತ್ವತ ಧರ್ಮವು ಅಂತರ್ಧಾನ ಹೊಂದಿತು.

ನಾಸಿಕ್ಯಜನ್ಮನಿ ಪುರಾ ಬ್ರಹ್ಮಣಃ ಪಾರ್ಥಿವೋತ್ತಮ ।
ಧರ್ಮಮೇತಂ ಸ್ವಯಂ ದೇವೋ ಹರಿರ್ನಾರಾಯಣಃ ಪ್ರಭುಃ॥
ಉಜ್ಜಗಾರಾರವಿಂದಾಕ್ಷೋ ಬ್ರಹ್ಮಣಃ ಪಶ್ಯತಸ್ತದಾ ॥೩೬॥

ಪುನಃ ಆ ಸಮಯದಲ್ಲಿ ನಾರಾಯಣನ ಮೂಗಿನಿಂದ ಐದನೆಯ ಬಾರಿ ಜನ್ಮವನ್ನು ತಾಳಿದ ಚತುರ್ಮುಖನು ಕಮಲಾಕ್ಷನಾದ, ಪ್ರಭುವಾದ ಹರಿನಾರಾಯಣನಿಂದ ಈ ಧರ್ಮವನ್ನು ಉಪದೇಶ ಪಡೆದನು. ಬ್ರಹ್ಮನು ನೋಡುತ್ತಿರುವಾಗಲೇ ಅರವಿಂದಾಕ್ಷನು ಪುನಃ ಉದ್ಧರಿಸಿದನು.

ಸನತ್ಕುಮಾರೋ ಭಗವಾಂಸ್ತತಃ ಪ್ರಾಧೀತವಾನ್ನೃಪ ।
ಸನತ್ಕುಮಾರಾದಪಿ ಚ ವೀರಣೋ ವೈ ಪ್ರಜಾಪತಿಃ ।
ಕೃತಾದೌ ಕುರುಶಾರ್ದೂಲ ಧರ್ಮಮೇತಮಧೀತವಾನ್ ॥೩೭॥

ಬಳಿಕ ಸನತ್ಕುಮಾರನು ಬ್ರಹ್ಮನಿಂದ ಈ ಉಪದೇಶವನ್ನು ಪಡೆದನು.

ಕುರುಶ್ರೇಷ್ಠನೇ, ಕೃತಯುಗದ ಆರಂಭದಲ್ಲಿ ವೀರಣ ಎಂಬ ಪ್ರಜಾಪತಿಯು ಸನತ್ಕುಮಾರನಿಂದ ಈ ಧರ್ಮವನ್ನು ಅಧ್ಯಯನ ಮಾಡಿದನು.

ವೀರಣಶ್ಚಾಪ್ಯಧೀತ್ಯೈನಂ ರೌಚ್ಯಾಯ ಮನವೇ ದದೌ ।
ರೌಚ್ಯಃ ಪುತ್ರಾಯ ಶುದ್ಧಾಯ ಸುವ್ರತಾಯ ಸುಮೇಧಸೇ ॥೩೮॥

ಕುಕ್ಷಿನಾಮ್ನೇಽಥ ಪ್ರದದೌ ದಿಶಾಂ ಪಾಲಾಯ ಧರ್ಮಿಣೇ ।
ತತಃ ಸೋಽಂತರ್ದಧೇ ಭೂಯೋ ನಾರಾಯಣಮುಖೋದ್ಗತಃ ॥೩೯॥

ಈ ಧರ್ಮವನ್ನು ವೀರಣನು ಅಧ್ಯಯನ ಮಾಡಿ ರೌಚ್ಯ ಎಂಬ ಮನುವಿಗೆ ಉಪದೇಶಿಸಿದನು. ರೌಚ್ಯನು ಶುದ್ಧನಾದ, ಸುವ್ರತನಾದ, ಮೇಧಾಶಕ್ತಿಯನ್ನು ಹೊಂದಿರುವ, ಧರ್ಮಿಷ್ಠನಾದ, ರಾಜನಾದ ಕುಕ್ಷಿ ಎಂಬ ಹೆಸರಿನ ತನ್ನ ಮಗನಿಗೆ ಉಪದೇಶಿಸಿದನು. ನಾರಾಯಣನ ಮುಖದಿಂದ ಪ್ರಾದುರ್ಭೂತವಾದ ಈ ಸಾತ್ವತ ಧರ್ಮವು ಪುನಃ ಅಂತರ್ಧಾನ ಹೊಂದಿತು.

ಅಂಡಜೇ ಜನ್ಮನಿ ಪುನರ್ಬ್ರಹ್ಮಣೇ ಹರಿಯೋನಯೇ ।
ಏಷ ಧರ್ಮಃ ಸಮುದ್ಭೂತೋ ನಾರಾಯಣಮುಖಾತ್ ಪುನಃ ॥೪೦॥

ಪುನಃ ಬ್ರಹ್ಮನು ವಿಷ್ಣುವಿನ ಉದರದಿಂದ ಆರನೆಯ ಜನ್ಮವನ್ನು ಪಡೆದನು. ಬ್ರಹ್ಮನಿಗಾಗಿ ಸಾತ್ವತ ಧರ್ಮವನ್ನು ನಾರಾಯಣನು ಪುನಃ ಉಪದೇಶಿಸಿದನು.

ಗೃಹೀತೋ ಬ್ರಹ್ಮಣಾ ರಾಜನ್ ಪ್ರಯುಕ್ತಶ್ಚ ಯಥಾವಿಧಿ ।
ಅಧ್ಯಾಪಿತಾಶ್ಚ ಮುನಯೋ ನಾಮ್ನಾ ಬರ್ಹಿಷದೋ ನೃಪ ॥೪೧॥

ಭಗವಂತನಿಂದ ಧರ್ಮವನ್ನು ಸ್ವೀಕರಿಸಿದ ಚತುರ್ಮುಖ ಬ್ರಹ್ಮನು ಬರ್ಹಿಷದರೆಂಬ ಮುನಿಗಳಿಗೆ ಅಧ್ಯಾಪನ ಮಾಡಿಸಿದನು.

ಬರ್ಹಿಷದ್ಭ್ಯಶ್ಚ ಸಂಕ್ರಾಂತಃ ಸಾಮವೇದಾಂತಗಂ ದ್ವಿಜಮ್ ।
ಜ್ಯೇಷ್ಠಂ ನಾಮ್ನಾಭಿವಿಖ್ಯಾತಂ ಜ್ಯೇಷ್ಠಸಾಮವ್ರತೋ ಹರಿಃ ॥೪೨॥

ಬರ್ಹಿಷದರು ಈ ಧರ್ಮವನ್ನು ಚೆನ್ನಾಗಿ ತಿಳಿದು, ಸಾಮವೇದವನ್ನು ಚೆನ್ನಾಗಿ ಅಧ್ಯಯನ ಮಾಡಿದ, ಜ್ಯೇಷ್ಠ ಎಂಬ ಹೆಸರಿನಿಂದ ವಿಖ್ಯಾತನಾದ ಬ್ರಾಹ್ಮಣನಿಗೆ ಉಪದೇಶಿಸಿದರು. ಜ್ಯೇಷ್ಠಸಾಮವ್ರತನು ಹರಿ ಎಂದು ಪ್ರಸಿದ್ಧನಾದನು.

ಜ್ಯೇಷ್ಠಾಚ್ಚಾಪ್ಯನುಸಂಕ್ರಾಂತೋ ರಾಜಾನಮವಿಕಂಪನಮ್ ।
ಅಂತರ್ದಧೇ ತತೋ ರಾಜನ್ನೇಷ ಧರ್ಮಃ ಪ್ರಭೋರ್ಹರೇಃ ॥೪೩॥

ಸಾತ್ವತ ಧರ್ಮದಿಂದ ಕೂಡಿದ ಜ್ಯೇಷ್ಠನು ಅಭಿಕಂಪನ ಎಂಬ ರಾಜನಿಗೆ ಈ ಧರ್ಮವನ್ನು ಉಪದೇಶಿಸಿದನು. ಭಗವಂತನಿಂದ ಪ್ರಾದುರ್ಭೂತವಾದ ಈ ಧರ್ಮವು ಪುನಃ ಅಂತರ್ಧಾನ ಹೊಂದಿತು.

ಯದಿದಂ ಸಪ್ತಮಂ ಜನ್ಮ ಪದ್ಮಜಂ ಬ್ರಹ್ಮಣೋ ನೃಪ ।
ತತ್ರೈಷ ಧರ್ಮಃ ಕಥಿತಃ ಸ್ವಯಂ ನಾರಾಯಣೇನ ಹಿ ॥೪೪॥

ನಾರಾಯಣನ ನಾಭಿಯಿಂದ ಪುನಃ ಬ್ರಹ್ಮನು ಏಳನೆಯ ಜನ್ಮವನ್ನು ತಾಳಿದನು. ಪುನಃ ಬ್ರಹ್ಮನಿಗೆ ಸ್ವಯಂ ನಾರಾಯಣನು ಈ ಧರ್ಮವನ್ನು ಉಪದೇಶಿಸಿದನು.

ಪಿತಾಮಹಾಯ ಶುದ್ಧಾಯ ಯುಗಾದೌ ಲೋಕಧಾರಿಣೇ ।
ಪಿತಾಮಹಶ್ಚ ದಕ್ಷಾಯ ಧರ್ಮಮೇತಂ ಪುರಾ ದದೌ ॥೪೫॥

ಕೃತಯುಗದ ಆದಿಯಲ್ಲಿ ಲೋಕಧಾರಕನಾದ, ಶುದ್ಧನಾದ ಪಿತಾಮಹನಿಗೆ ಶ್ರೀಹರಿಯು ಸಾತ್ವತ ಧರ್ಮವನ್ನು ಉಪದೇಶಿಸಿದ ಬಳಿಕ ಚತುರ್ಮುಖ ಬ್ರಹ್ಮನು ದಕ್ಷನಿಗೆ ಈ ಧರ್ಮವನ್ನು ಉಪದೇಶಿಸಿದನು.

ತತೋ ಜ್ಯೇಷ್ಠೇ ತು ದೌಹಿತ್ರೇ ಪ್ರಾದಾದ್ದಕ್ಷೋ ನೃಪೋತ್ತಮ ।
ಆದಿತ್ಯೇ ಸವಿತುರ್ಜ್ಯೇಷ್ಠೇ ವಿವಸ್ವಾನ್ ಜಗೃಹೇ ತತಃ ॥೪೬॥

ಬಳಿಕ ದಕ್ಷನು ಅದಿತಿಯ ಮಗನಾದ ಸೂರ್ಯನಿಗಿಂತ ಜ್ಯೇಷ್ಠನಾದ, ತನ್ನ ಮಗಳ ಹಿರಿಯ ಮಗನಾದ ಆದಿತ್ಯನಿಗೆ ಉಪದೇಶಿಸಿದನು. ಅವನಿಂದ ವಿವಸ್ವಂತನು ಧರ್ಮವನ್ನು ಉಪದೇಶ ಪಡೆದನು.

ತ್ರೇತಾಯುಗಾದೌ ಚ ಪುನರ್ವಿವಸ್ವಾನ್ ಮನವೇ ದದೌ ।
ಮನುಶ್ಚ ಲೋಕಭೂತ್ಯರ್ಥಂ ಸುತಾಯೇಕ್ಷ್ವಾಕವೇ ದದೌ ॥೪೭॥

ತ್ರೇತಾಯುಗದ ಆದಿಯಲ್ಲಿ ವಿವಸ್ವಂತನು ತನ್ನ ಮಗನಾದ ಮನುವಿಗೆ ಈ ಧರ್ಮವನ್ನು ಉಪದೇಶಿಸಿದನು. ಮನುವು ಲೋಕಕಲ್ಯಾಣಕ್ಕಾಗಿ ಇಕ್ಷ್ವಾಕುವಿಗೆ ಈ ಧರ್ಮವನ್ನು ಉಪದೇಶಿಸಿದನು.

ಇಕ್ಷ್ವಾಕುಣಾ ಚ ಕಥಿತೋ ವ್ಯಾಪ್ಯ ಲೋಕಾನವಸ್ಥಿತಃ ।
ಗಮಿಷ್ಯತಿ ಕ್ಷಯಾಂತೇ ಚ ಪುನರ್ನಾರಾಯಣಂ ನೃಪ ॥೪೮॥

ಇಕ್ಷ್ವಾಕುವಿನಿಂದ ಈ ಧರ್ಮವು ಲೋಕದಲ್ಲಿ ವ್ಯಾಪಿಸಿ ಪ್ರತಿಷ್ಠಿತವಾಯಿತು. ಪುನಃ ಕಲ್ಪಾಂತ್ಯದಲ್ಲಿ ಲುಪ್ತವಾದ ಧರ್ಮವು ನಾರಾಯಣನನ್ನೇ ಸೇರುತ್ತದೆ.

ವ್ರತಿನಾಂ ಚಾಪಿ ಯೋ ಧರ್ಮಃ ಸ ತೇ ಪೂರ್ವಂ ನೃಪೋತ್ತಮ ।
ಕಥಿತೋ ಹರಿಗೀತಾಸು ಸಮಾಸವಿಧಿಕಲ್ಪಿತಃ ॥೪೯॥

ಯತಿಗಳ ಧರ್ಮ ಯಾವುದೆಂದು ಈ ಹಿಂದೆ ನಿನಗೆ ಸಂಕ್ಷಿಪ್ತವಾಗಿ ಹರಿಗೀತೆಯಲ್ಲಿ ತಿಳಿಸಿರುತ್ತೇನೆ.

ನಾರದೇನ ತು ಸಂಪ್ರಾಪ್ತಃ ಸರಹಸ್ಯಃ ಸಸಂಗ್ರಹಃ ।
ಏಷ ಧರ್ಮೋ ಜಗನ್ನಾಥಾತ್ ಸಾಕ್ಷಾನ್ನಾರಾಯಣಾನ್ನೃಪ ॥೫೦॥

ರಹಸ್ಯದಿಂದಲೂ, ಸಂಗ್ರಹದಿಂದಲೂ ಕೂಡಿರುವ ಈ ಧರ್ಮವನ್ನು ಜಗನ್ನಾಥನಾದ ನಾರಾಯಣನಿಂದಲೇ ನಾರದರು ಪಡೆದುಕೊಂಡರು.

ಏವಮೇಷ ಮಹಾನ್ ಧರ್ಮ ಆದ್ಯೋ ರಾಜನ್ ಸನಾತನಃ ।
ದುರ್ವಿಜ್ಞೇಯೋ ದುಷ್ಕರಶ್ಚ ಸಾತ್ವತೈರ್ಧಾರ್ಯತೇ ಸದಾ ॥೫೧॥

ಈ ಸನಾತನವಾದ ಸಾತ್ವತಧರ್ಮವೇ ಮೊದಲನೆಯ ಧರ್ಮ. ತಿಳಿಯಲು ಕಷ್ಟ, ಆಚರಿಸಲು ದುಷ್ಕರ.ಅನನ್ಯ ಭಕ್ತಿಯುಳ್ಳವರು ಈ ಧರ್ಮವನ್ನು ನಿರಂತರ ಧರಿಸಿರುತ್ತಾರೆ.

ಧರ್ಮಜ್ಞಾನೇನ ಚೈತೇನ ಸುಪ್ರಯುಕ್ತೇನ ಕರ್ಮಣಾ ।
ಅಹಿಂಸಾಧರ್ಮಯುಕ್ತೇನ ಪ್ರೀಯತೇ ಹರಿರೀಶ್ವರಃ ॥೫೨॥

ಈ ಧರ್ಮಜ್ಞಾನವನ್ನು ಚೆನ್ನಾಗಿ ಪಡೆದು, ಸತ್ಕರ್ಮಾನುಷ್ಠಾನವನ್ನು ಚೆನ್ನಾಗಿ ಆಚರಿಸಿದಲ್ಲಿ, ಅಹಿಂಸಾವ್ರತಯುಕ್ತರಾಗಿ ಈ ಧರ್ಮವನ್ನು ಆಚರಿಸಿದಲ್ಲಿ ಸರ್ವೋತ್ತಮನಾದ ಶ್ರೀಹರಿಯು ಪ್ರೀತನಾಗುತ್ತಾನೆ.

ಏಕವ್ಯೂಹವಿಭಾಗೋ ವಾ ಕ್ವಚಿದ್ ದ್ವಿವ್ಯೂಹಸಂಜ್ಞಿತಃ ।
ತ್ರಿವ್ಯೂಹಶ್ಚಾಪಿ ಸಂಖ್ಯಾತಶ್ಚತುರ್ವ್ಯೂಹಶ್ಚ ದೃಶ್ಯತೇ ॥೫೩॥

ಕೆಲವು ಕಡೆ ಭಕ್ತರು ವಾಸುದೇವನೊಬ್ಬನನ್ನೇ ಉಪಾಸನೆ ಮಾಡುತ್ತಾರೆ. ಕೆಲವು ಕಡೆ ವಾಸುದೇವ-ಸಂಕರ್ಷಣನನ್ನು, ಕೆಲವು ಕಡೆ ವಾಸುದೇವ-ಸಂಕರ್ಷಣ-ಪ್ರದ್ಯುಮ್ನರನ್ನು, ಕೆಲವು ಕಡೆ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ರೂಪಗಳನ್ನು ಉಪಾಸನೆ ಮಾಡುವುದು ಕಾಣಿಸುತ್ತದೆ.

ಹರಿರೇವ ಹಿ ಕ್ಷೇತ್ರಜ್ಞೋ ನಿರ್ಮಮೋ ನಿಷ್ಕಲಸ್ತಥಾ ।
ಜೀವಶ್ಚ ಸರ್ವಭೂತೇಷು ಪಂಚಭೂತಗುಣಾತಿಗಃ ॥೫೪॥

ಶ್ರೀಹರಿಯೇ ಕ್ಷೇತ್ರಜ್ಞನೆನಿಸಿದ್ದಾನೆ. ಮಮತಾ ರಹಿತನೂ, ಪ್ರಾಕೃತ ಕಲಾರಹಿತನೂ, ಸಮಸ್ತ ಭೂತಾಂತರ್ಯಾಮಿಯೂ, ಪಂಚಭೂತಗಳನ್ನು ಮೀರಿದವನು ಭಗವಂತನೇ ಆಗಿದ್ದಾನೆ.

ಮನಶ್ಚ ಪ್ರಥಿತಂ ರಾಜನ್ ಪಂಚೇಂದ್ರಿಯಸಮೀರಣಮ್ ।
ಏಷ ಲೋಕನಿಧಿರ್ಧೀಮಾನೇಷ ಲೋಕವಿಸರ್ಗಕೃತ್ ॥೫೫॥

ಪಂಚೇಂದ್ರಿಯಗಳಿಗೆ ಪ್ರೇರಕನಾದವನು ಭಗವಂತನೇ. ಮನಸ್ಸಿನಲ್ಲಿ ನಿಯಾಮಕನು ಭಗವಂತನೇ. ಇವನೇ ಲೋಕಗಳ ಸೃಷ್ಟಿಕರ್ತೃವು, ಲೋಕನಿಧಿಯು ಆಗಿದ್ದಾನೆ.

ಅಕರ್ತಾ ಚೈವ ಕರ್ತಾ ಚ ಕಾರ್ಯಂ ಕಾರಣಮೇವ ಚ ।
ಯಥೇಚ್ಛತಿ ತಥಾ ರಾಜನ್ ಕ್ರೀಡತೇ ಪುರುಷೋವ್ಯಯಃ ॥೫೬॥

ಅಕರ್ತೃವು, ಕರ್ತೃವು, ಕಾರ್ಯವೂ, ಕಾರಣನೂ ಎಲ್ಲವೂ ಆಗಿದ್ದಾನೆ. ಅವ್ಯಯನಾದ ಭಗವಂತನು ಹೇಗೆ ಬಯಸುತ್ತಾನೋ ಹಾಗೆ ಈ ಜಗತ್ತಿನಲ್ಲಿ ಆಟವಾಡುತ್ತಾನೆ.

ಏಷ ಏಕಾಂತಿಧರ್ಮಸ್ತೇ ಕೀರ್ತಿತೋ ನೃಪಸತ್ತಮ ।
ಮಯಾ ಗುರುಪ್ರಸಾದೇನ ದುರ್ವಿಜ್ಞೇಯೋಽಕೃತಾತ್ಮಭಿಃ ।
ಏಕಾಂತಿನೋ ಹಿ ಪುರುಷಾ ದುರ್ಲಭಾ ಬಹವೋ ನೃಪ ॥೫೭॥

ರಾಜನೇ, ನಿನಗೆ ಏಕಾಂತಿಗಳ ಧರ್ಮವನ್ನು ಉಪದೇಶಿಸಿದ್ದೇನೆ. ಪುಣ್ಯವಿಲ್ಲದವರಿಗೆ ಈ ಜ್ಞಾನವು ಲಭಿಸದು. ಗುರು ಅನುಗ್ರಹದಿಂದ ನಿನಗೆ ಹೇಳಿದ್ದೇನೆ. ಈ ಜಗತ್ತಿನಲ್ಲಿ ಏಕಾಂತಭಕ್ತರಾದ ಪುರುಷರು ಅತ್ಯಂತ ದುರ್ಲಭರು.

ಯದ್ಯೇಕಾಂತಿಭಿರಾಕೀರ್ಣಂ ಜಗತ್ ಸ್ಯಾತ್ ಕುರುನಂದನ ।
ಅಹಿಂಸಕೈರಾತ್ಮವಿದ್ಭಿಃ ಸರ್ವಭೂತಹಿತೇ ರತೈಃ ।
ಭವೇತ್ ಕೃತಯುಗಪ್ರಾಪ್ತಿರಾಶೀಃಕರ್ಮವಿವರ್ಜಿತೈಃ ॥೫೮॥

ಈ ಜಗತ್ತೆಲ್ಲವೂ ಒಂದು ವೇಳೆ ಏಕಾಂತಭಕ್ತರಿಂದಲೇ ತುಂಬಿಕೊಂಡರೆ, ಅಹಿಂಸಾವಾದಿಗಳು, ಆತ್ಮಜ್ಞಾನಿಗಳು, ಸರ್ವಭೂತಹಿತಾಸಕ್ತರು ಇವರೆಲ್ಲರಿಂದಲೇ ತುಂಬಿಕೊಂಡರೆ ಆಶಾತ್ಯಾಗಿಗಳಾದ ಸಜ್ಜನರಿಂದ ಕೂಡಿದ ಈ ಜಗತ್ತಿನಲ್ಲಿ ಕೃತಯುಗವೇ ನಿರ್ಮಾಣವಾಗುತ್ತಿತ್ತು.

ಏವಂ ಸ ಭಗವಾನ್ವ್ಯಾಸೋ ಗುರುರ್ಮಮ ವಿಶಾಂ ಪತೇ ।
ಕಥಯಾಮಾಸ ಧರ್ಮಜ್ಞೋ ಧರ್ಮರಾಜ್ಞೇ ದ್ವಿಜೋತ್ತಮಃ ॥೫೯॥

ಋಷೀಣಾಂ ಸನ್ನಿಧೌ ರಾಜನ್ ಶೃಣ್ವತೋಃ ಕೃಷ್ಣಭೀಷ್ಮಯೋಃ ।
ತಸ್ಯಾಪ್ಯಕಥಯತ್ ಪೂರ್ವಂ ನಾರದಃ ಸುಮಹಾತಪಾಃ ॥೬೦॥

ರಾಜನೇ, ಧರ್ಮಜ್ಞರಾದ ನನ್ನ ಗುರುಗಳಾದ ವ್ಯಾಸರು ಧರ್ಮರಾಜನಿಗೆ ಈ ಸಾತ್ವತ ಧರ್ಮವನ್ನು ಋಷಿಗಳ ಸಮಕ್ಷಮದಲ್ಲಿ ಕೃಷ್ಣ-ಭೀಮರು ಕೇಳುತ್ತಿರುವಾಗ ಹೇಳಿದರು. ಅದಕ್ಕಿಂತಲೂ ಹಿಂದೆ ನಾರದರು ಈ ಧರ್ಮವನ್ನು ವ್ಯಾಸರಿಗೆ ಹೇಳಿದ್ದರು.

ದೇವಂ ಪರಮಕಂ ಬ್ರಹ್ಮ ಶ್ವೇತಂ ಚಂದ್ರಾಭಮಚ್ಯುತಮ್ ।
ಯತ್ರ ಚೈಕಾಂತಿನೋ ಯಾಂತಿ ನಾರಾಯಣಪರಾಯಣಾಃ ॥೬೧॥

ನಾರಾಯಣನನ್ನೇ ಆಶ್ರಯಿಸಿರುವ, ಸಾತ್ವತಧರ್ಮವನ್ನು ನಂಬಿರುವ ಅನನ್ಯ ಭಕ್ತರು, ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ ಅಚ್ಯುತನನ್ನು ನಾರಾಯಣ ಪರಾಯಣರಾಗಿ ಹೊಂದುತ್ತಾರೆ.

ಜನಮೇಜಯಃ

ಏವಂ ಬಹುವಿಧಂ ಧರ್ಮಂ ಪ್ರತಿಬುದ್ಧೈರ್ನಿಷೇವಿತಮ್ ।
ನ ಕುರ್ವಂತಿ ಕಥಂ ವಿಪ್ರಾ ಅನ್ಯೇ ನಾನಾವ್ರತೇ ಸ್ಥಿತಾಃ ॥೬೨॥

ಜನಮೇಜಯ– ಪೂಜ್ಯರೇ, ಜ್ಞಾನಿಗಳಿಂದ ಆಚರಿಸುವ ಅನೇಕ ವಿಧ

ಗುಣಗಳಿಂದ ಕೂಡಿದ, ಶ್ರೇಷ್ಠವಾದ ಸಾತ್ವತಧರ್ಮಗಳನ್ನು ಬೇರೆ ವ್ರತಾನುಷ್ಠಾನಗಳಲ್ಲಿ ಆಸಕ್ತರಾದ ಬ್ರಾಹ್ಮಣರು ಏಕೆ ಆಚರಿಸುವುದಿಲ್ಲ?

ವೈಶಂಪಾಯನಃ

ತಿಸ್ರಃ ಪ್ರಕೃತಯೋ ರಾಜನ್ ದೇಹಬಂಧೇಷು ನಿರ್ಮಿತಾಃ ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ಭಾರತ ॥೬೩॥

ವೈಶಂಪಾಯನ– ರಾಜನೇ, ಈ ದೇಹದ ಸಂಬಂಧವನ್ನು ಹೊಂದಿದ ಜೀವರಲ್ಲಿ ಸಾತ್ವಿಕ, ರಾಜಸ, ತಾಮಸರೆಂದು, ಮೂರು ಸ್ವಭಾವದವರಿದ್ದಾರೆ.

ದೇಹಬಂಧೇಷು ಪುರುಷಃ ಶ್ರೇಷ್ಠಃ ಕುರುಕುಲೋದ್ವಹ ।
ಸಾತ್ತ್ವಿಕಃ ಪುರುಷವ್ಯಾಘ್ರ ಭವೇನ್ಮೋಕ್ಷಾರ್ಥನಿಶ್ಚಿತಃ ॥೬೪॥

ಕುರುಕುಲಶ್ರೇಷ್ಠನೇ, ದೇಹಬಂಧನದಲ್ಲಿರುವ ಜೀವರಲ್ಲಿ ಸತ್ತ್ವಗುಣದಿಂದ ಕೂಡಿದ ಪುರುಷರು ಶ್ರೇಷ್ಠರು. ಅವರೇ ಮೋಕ್ಷಕ್ಕೆ ಅರ್ಹರು. ಇದು ನಿಶ್ಚಯವು.

ಅತ್ರಾಪಿ ಸ ವಿಜಾನಾತಿ ಪುರುಷಂ ಬ್ರಹ್ಮವರ್ತಿನಮ್ ।
ನಾರಾಯಣಪರೋ ಮೋಕ್ಷಸ್ತತೋ ವೈ ಸಾತ್ತ್ವಿಕಃ ಸ್ಮೃತಃ ॥೬೫॥

ಸಾತ್ತ್ವಿಕರು ಬ್ರಾಹ್ಮಣರ ಅಂತರ್ಯಾಮಿಯಾದ ಪುರುಷೋತ್ತಮನೇ ಶ್ರೇಷ್ಠವೆಂದೂ, ಮೋಕ್ಷವು ನಾರಾಯಣಪರವೆಂದೂ ತಿಳಿದಿರುತ್ತಾರೆ. ಅವರು ಸಾತ್ತ್ವಿಕರು.

ಮನೀಷಿತಂ ಚ ಪ್ರಾಪ್ನೋತಿ ಚಿಂತಯನ್ ಪುರುಷೋತ್ತಮಮ್ ।
ಏಕಾಂತಭಕ್ತಿಃ ಸತತಂ ನಾರಾಯಣಪರಾಯಣಃ ॥೬೬॥

ಸಾತ್ತ್ವಿಕ ಮನುಷ್ಯನು ಪುರುಷೋತ್ತಮನಾದ ಹರಿಯನ್ನು ಧ್ಯಾನಿಸುತ್ತಾ ಮನೋವಾಂಛಿತಗಳನ್ನು ಪಡೆಯುತ್ತಾನೆ. ಏಕಾಂತಭಕ್ತಿಯು ಎಂದಿಗೂ ನಾರಾಯಣನನ್ನೇ ಆಶ್ರಯಿಸಿರುತ್ತದೆ.

ಮನೀಷಿಣೋ ಹಿ ಯೇ ಕೇಚಿದ್ ಯತಯೋ ಮೋಕ್ಷಕಾಂಕ್ಷಿಣಃ ।
ತೇಷಾಂ ವೈ ಛಿನ್ನತೃಷ್ಣಾನಾಂ ಯೋಗಕ್ಷೇಮವಹೋ ಹರಿಃ ॥೬೭॥

ಮೋಕ್ಷಸಾಧನೆಯಲ್ಲಿ ತೊಡಗಿಸಿಕೊಂಡಿರುವ ಕೆಲವು ಜ್ಞಾನಿಗಳಾದ ಯತಿಗಳು ಯಾರು ಇದ್ದಾರೋ, ಆಶಾತ್ಯಾಗ ಮಾಡಿದ ಅವರ ಯೋಗಕ್ಷೇಮವನ್ನು ಶ್ರೀಹರಿಯೇ ನೋಡಿಕೊಳ್ಳುತ್ತಾನೆ.

ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ತಿ ್ವಕಸ್ತು ಸ ವಿಜ್ಞೇಯೋ ಭವೇನ್ಮೋಕ್ಷೇ ಚ ನಿಶ್ಚಿತಃ ॥೬೮॥

ಹುಟ್ಟು-ಸಾವುಗಳಲ್ಲಿ ಸಿಕ್ಕಿರುವ ಪುರುಷರನ್ನು ಮಧುಸೂದನನು ಕೃಪಾದೃಷ್ಟಿಯಿಂದ ಯಾವಾಗ ನೋಡುತ್ತಾನೋ ಅಂಥವನನ್ನೇ ಸಾತ್ವಿಕನೆಂದು ತಿಳಿಯಬೇಕು. ಅವನೇ ಮೋಕ್ಷಾಧಿಕಾರಿಯು. ಇದು ನಿಶ್ಚಯವು.

ಸಾಂಖ್ಯಯೋಗೇನ ತುಲ್ಯೋ ಹಿ ಧರ್ಮ ಏಕಾಂತಸೇವಿತಃ ।
ನಾರಾಯಣಾತ್ಮಕೇ ಮೋಕ್ಷೇ ತತೋ ಯಾಂತಿ ಪರಾಂ ಗತಿಮ್ ॥೬೯॥

ಏಕಾಂತಭಕ್ತರಿಂದ ಸೇವಿಸಲ್ಪಡುವ ಧರ್ಮವು ಸಾಂಖ್ಯಯೋಗಗಳ ಧರ್ಮಕ್ಕೆ ಸದೃಶವಾದುದು. ನಾರಾಯಣನನ್ನು ಹೊಂದುವುದು, ಮೋಕ್ಷವನ್ನು ಹೊಂದುವುದು ಸಮಾನವಾದುದು. ಆದ್ದರಿಂದ ನಾರಾಯಣನಲ್ಲಿ ಅನನ್ಯವಾದ ಭಕ್ತಿಯನ್ನು ಮಾಡುವವರು ಮೋಕ್ಷವನ್ನೇ ಹೊಂದುತ್ತಾರೆ.

ನಾರಾಯಣೇನ ದೃಷ್ಟಶ್ಚ ಪ್ರತಿಬುದ್ಧೋ ಭವೇತ್ ಪುಮಾನ್ ।
ಏವಮಾತ್ಮೇಚ್ಛಯಾ ರಾಜನ್ ಪ್ರತಿಬುದ್ಧೋ ನ ಜಾಯತೇ ॥೭೦॥

ನಾರಾಯಣನ ಕೃಪಾ ದೃಷ್ಟಿಯು ಜೀವನ ಮೇಲೆ ಬೀಳಲು ಕೂಡಲೇ ಜೀವನು ಜ್ಞಾನಿಯಾಗುತ್ತಾನೆ. ಜ್ಞಾನಿಯಾಗಬೇಕು ಎಂಬ ಇಚ್ಛಾ ಮಾತ್ರದಿಂದ ಜ್ಞಾನಿಯಾಗುವುದಿಲ್ಲ. ನಾರಾಯಣನ ಪ್ರಸಾದಕ್ಕೆ ಪಾತ್ರನಾಗಬೇಕು.

ರಾಜಸೀ ತಾಮಸೀ ಚೈವ ವ್ಯಾಮಿಶ್ರೇ ಪ್ರಕೃತೀ ಸ್ಮೃತೇ ।
ತದಾತ್ಮಕಂ ಹಿ ಪುರುಷಂ ಜಾಯಮಾನಂ ವಿಶಾಂ ಪತೇ ।
ಪ್ರವೃತ್ತಿಲಕ್ಷಣೈರ್ಯುಕ್ತಂ ನಾವೇಕ್ಷತಿ ಹರಿಃ ಸ್ವಯಮ್ ॥೭೧॥

ರಾಜಸ, ತಾಮಸ, ಮಿಶ್ರ ಎಂಬ ವಿಭಾಗಗಳಿವೆ. ರಾಜಸ-ತಾಮಸ ಗುಣಗಳಿಂದ

ಹುಟ್ಟುವ ಮನುಷ್ಯನು ಸಾಮಾನ್ಯವಾಗಿ ಪ್ರವೃತ್ತಿ ಲಕ್ಷಣಗಳನ್ನೇ ಹೊಂದಿರುತ್ತಾನೆ. ಕಾಮ್ಯಕರ್ಮದಲ್ಲಿ ಆಸಕ್ತನಾದ ಅವನನ್ನು ಶ್ರೀಹರಿಯು ಎಂದಿಗೂ ನೋಡಲಾರ.

ಪಶ್ಯತ್ಯೇನಂ ಜಾಯಮಾನಂ ಬ್ರಹ್ಮಾ ಲೋಕಪಿತಾಮಹಃ ।
ರಜಸಾ ತಮಸಾ ಚೈವ ಮಾನುಷಂ ಸಮಭಿಪ್ಲುತಮ್ ॥೭೨॥

ರಜಸ್ಸು, ತಮಸ್ಸುಗಳಲ್ಲಿ ಮುಳುಗಿದ ಮನುಷ್ಯನನ್ನು ಲೋಕಪಿತಾಮಹನಾದ ಬ್ರಹ್ಮನು ಬಾಹ್ಯವಾದ ಫಲಗಳನ್ನು ಕೊಟ್ಟುಸಲಹುತ್ತಾನೆ.

ಕಾಮಂ ದೇವಾಶ್ಚ ಋಷಯಃ ಸತ್ತ್ವಸ್ಥಾ ನೃಪಸತ್ತಮ ।
ಹೀನಾಃ ಸತ್ತ್ವೇನ ಸೂಕ್ಷ್ಮೇಣ ತತೋ ವೈಕಾರಿಕಾಃ ಸ್ಮೃತಾಃ ॥೭೩॥

ಮಹಾರಾಜನೇ, ದೇವತೆಗಳು, ಋಷಿಗಳು ಸತ್ತ್ವಗುಣವನ್ನು ಅವಲಂಬಿಸಿರುತ್ತಾರೆ. ದೇವತೆಗಳು ಸೂಕ್ಷ್ಮವಾದ ಸತ್ತ್ವಗುಣದಿಂದ ಕೂಡಿರುತ್ತಾರೆ. ಸೂಕ್ಷ್ಮವಾದ ಸತ್ತ್ವಗುಣವಿಲ್ಲದ ಸ್ಥೂಲವಾದ ಸತ್ತ್ವಗುಣದಲ್ಲಿ ರತರಾದವರು ವೈಕಾರಿಕರು ಎಂದು ಕರೆಯಲ್ಪಡುತ್ತಾರೆ. ಕೆಲವೊಮ್ಮೆ ಇವರಲ್ಲಿ ವಿಕಾರವು ಉಂಟಾಗುವುದರಿಂದ ವೈಕಾರಿಕರು ಅರ್ಥಾತ್ ಮನುಷ್ಯೋತ್ತಮರು ಎಂದು ಕರೆಸಿಕೊಳ್ಳಲ್ಪಡುತ್ತಾರೆ.

ಜನಮೇಜಯಃ

ಕಥಂ ವೈಕಾರಿಕೋ ಗಚ್ಛೇತ್ ಪುರುಷಃ ಪುರುಷೋತ್ತಮಮ್ ।
ವದ ಸರ್ವಂ ಯಥಾ ದೃಷ್ಟಂ ಪ್ರವೃತ್ತಿಂ ಚ ಯಥಾಕ್ರಮಮ್ ॥೭೪॥

ಜನಮೇಜಯ– ಪೂಜ್ಯರೇ, ವೈಕಾರಿಕನಾದ ಪುರುಷನು ಪುರುಷೋತ್ತಮನನ್ನು ಹೇಗೆ ಹೊಂದುತ್ತಾನೆ? ಈ ವಿಷಯಕ್ಕೆ ಸಂಬಂಧಿಸಿದ ವಿಚಾರವನ್ನು ತಮ್ಮ ಅನುಭವದಲ್ಲಿ ಹೇಳಿರಿ. ಅದರ ಪ್ರವೃತ್ತಿಗಳನ್ನು ತಿಳಿಸಿರಿ.

ವೈಶಂಪಾಯನಃ

ಸುಸೂಕ್ಷ್ಮಸತ್ತ್ವಸಂಯುಕ್ತಂ ಸಂಯುಕ್ತಂ ತ್ರಿಭಿರಕ್ಷರೈಃ ।
ಪುರುಷಃ ಪುರುಷಂ ಗಚ್ಛೇನ್ನಿಷ್ಕಿಯಃ ಪಂಚವಿಂಶಕಮ್ ॥೭೫॥

ವೈಶಂಪಾಯನ– ಅತ್ಯಂತ ಸೂಕ್ಷ್ಮನಾದ, ಸತ್ತ್ವಸಂಪನ್ನನಾದ, ಅಕಾರ, ಉಕಾರ, ಮಕಾರಗಳಿಂದ ಕೂಡಿದ ಪ್ರಣವಸ್ವರೂಪಿಯಾದ ಭಗವಂತನನ್ನು ಪಾಪ-ಪುಣ್ಯಾದಿ

ಕರ್ಮರಹಿತನಾದ ಜೀವನು ಇಪ್ಪತ್ತೈದನೆಯ ತತ್ತ್ವವೆನಿಸಿದ ಪುರುಷನಾಮಕನನ್ನು ಕೊನೆಗೆ ಹೊಂದುತ್ತಾನೆ.

ಏವಮೇಕಂ ಸಾಂಖ್ಯಯೋಗಂ ವೇದಾರಣ್ಯಕಮೇವ ಚ ।
ಪರಸ್ಪರಾಂಗಾನ್ಯೇತಾನಿ ಪಂಚರಾತ್ರಂ ಚ ಕಥ್ಯತೇ ।
ಏಷ ಏಕಾಂತಿನಾಂ ಧರ್ಮೋ ನಾರಾಯಣಪರಾತ್ಮಕಃ ॥೭೬॥

ಹೀಗೆ ಸಾಂಖ್ಯಯೋಗ, ವೇದಾರಣ್ಯಕಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಪಂಚರಾತ್ರವೂ ಇದೇ ವಿಚಾರವನ್ನು ತಿಳಿಸುತ್ತದೆ. ನಾರಾಯಣನ ಪ್ರಾಪ್ತಿಗಾಗಿ ಏಕಾಂತಧರ್ಮಗಳು ಹೀಗೆ ಏಕಾಂತಿಗಳಿಗೆ ಉಪದೇಶಿಸಲ್ಪಟ್ಟಿವೆ.

ಯಥಾ ಸಮುದ್ರಾತ್ ಪ್ರಸೃತಾ ಜಲೌಘಾ-
ಸ್ತಮೇವ ರಾಜನ್ ಪುನರಾವಿಶಂತಿ ।
ಇಮೇ ತಥಾ ಜ್ಞಾನಮಹಾಜಲೌಘಾ
ನಾರಾಯಣಂ ವೈ ಪುನರಾವಿಶಂತಿ ॥೭೭॥

ಸಮುದ್ರದಿಂದ ಮೇಘವಾದ ನೀರಿನ ಸಮೂಹವು ನದ-ನದಿಗಳ ಮೂಲಕ ಹೇಗೆ ಸಮುದ್ರವನ್ನೇ ಸೇರುತ್ತದೋ ಹಾಗೆ ನಾರಾಯಣನಿಂದ ಪ್ರಾದುರ್ಭೂತವಾದ ಜ್ಞಾನರೂಪವಾದ ಮಹಾಜಲಪ್ರವಾಹವು ನಾರಾಯಣನನ್ನೇ ಸೇರುತ್ತದೆ.

ಏಷ ತೇ ಕಥಿತೋ ಧರ್ಮಃ ಸಾತ್ವತೋ ಯದುಬಾಂಧವ ।
ಕುರುಷ್ವೈನಂ ಯಥಾನ್ಯಾಯಂ ಯದಿ ಶಕ್ನೋಷಿ ಭಾರತ ॥೭೮॥

ಯದುಬಾಂಧವನೇ, ನಿನಗೆ ಸಾತ್ವತ ಧರ್ಮವನ್ನು ವಿಸ್ತರಿಸಿ ಹೇಳಿದ್ದೇನೆ. ನೀನು ಈ ಧರ್ಮವನ್ನು ಆಚರಿಸಲು ಶಕ್ತನಾಗಿದ್ದಲ್ಲಿ ವಿಧಿಬದ್ಧವಾಗಿ ಇದನ್ನು ಆಚರಿಸು.

ಏವಂ ಹಿ ಸುಮಹಾಭಾಗೋ ನಾರದೋ ಗುರವೇ ಮಮ ।
ಶ್ವೇತಾನಾಂ ಯತಿನಾಮಾಹ ಏಕಾಂತಗತಿಮವ್ಯಯಾಮ್ ॥೭೯॥

ಹೀಗೆ ಪುಣ್ಯಾತ್ಮರಾದ ನಾರದರು ನನ್ನ ಗುರುಗಳಾದ ವ್ಯಾಸರಿಗೆ ಶ್ವೇತದ್ವೀಪ ನಿವಾಸಿಗಳಾದ ಯತಿಗಳ ನಿತ್ಯವಾದ ಏಕಾಂತ ಮಾರ್ಗವನ್ನು ವಿವರಿಸಿದರು.

ವ್ಯಾಸಶ್ಚಾಕಥಯತ್ ಪ್ರೀತ್ಯಾ ಧರ್ಮಪುತ್ರಾಯ ಧೀಮತೇ ।
ಸ ಏವಾಯಂ ಮಯಾ ತುಭ್ಯಮಾಖ್ಯಾತಃ ಪ್ರಸತೋ ಗುರೋಃ ॥೮೦॥

ವ್ಯಾಸರು ಸಾತ್ವತ ಧರ್ಮವನ್ನು ಧರ್ಮರಾಜನಿಗೆ ಹೇಳಿದರು. ಆ ಸಾತ್ವತ ಧರ್ಮದ ದಿವ್ಯವಾದ ಉಪದೇಶವನ್ನು ನಿನಗೆ ಯಥಾವತ್ತಾಗಿ ಹೇಳಿದ್ದೇನೆ.

ಇತ್ಥಂ ಹಿ ದುಶ್ಚರೋ ಧರ್ಮ ಏಷ ಪಾರ್ಥಿವಸತ್ತಮ ।
ಯಥೈವ ತ್ವಂ ತಥೈವಾನ್ಯೇ ನ ಭಜಂತಿ ವಿಮೋಹಿತಾಃ ॥೮೧॥

ಹೀಗೆ ಧರ್ಮವು ಆಚರಿಸಲು ಕಷ್ಟಸಾಧ್ಯವಾದುದು. ನೀನು ಹೇಗೆ ಧರ್ಮದ ವಿಷಯದಲ್ಲಿ ಮೋಹಿತನಾಗಿರುವೆಯೋ ಹಾಗೆ ಇತರರೂ ಮೋಹಿತರಾಗಿದ್ದಾರೆ.

ಕೃಷ್ಣ ಏವ ಹಿ ಲೋಕಾನಾಂ ಭಾವನೋ ಮೋಹನಸ್ತಥಾ ।
ಸಂಹಾರಕಾರಕಶ್ಚೈವ ಕಾರಣಂ ಚ ವಿಶಾಂ ಪತೇ ॥೮೨॥

ಜನಮೇಜಯನೇ, ಕೃಷ್ಣನೇ ಸಮಸ್ತ ಲೋಕದ ಹಿತೈಷಿಯು. ಅವನೇ ಸಂಹಾರಕನು. ಅವನೇ ಕಾರಣನು. ಅವನನ್ನೇ ಭಜಿಸು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ನಾರಾಯಣೀಯೇ ಏಕಾಶೀತ್ಯುತ್ತರಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆರಡನೆಯ ಅಧ್ಯಾಯ

ವ್ಯಾಸಾವತಾರ.

ಜನಮೇಜಯಃ

ಸಾಂಖ್ಯಂ ಯೋಗಂ ಪಂಚರಾತ್ರಂ ವೇದಾರಣ್ಯಕಮೇವ ಚ ।
ಜ್ಞಾನಾನ್ಯೇತಾನಿ ಬ್ರಹ್ಮರ್ಷೇ ಲೋಕೇಷು ಪ್ಪ್ರರಂತಿ ಹ ॥೧॥

ಜನಮೇಜಯ– ಬ್ರಹ್ಮರ್ಷಿಗಳೇ, ಲೋಕದಲ್ಲಿ ಸಾಂಖ್ಯಶಾಸ್ತ್ರ, ಯೋಗಶಾಸ್ತ್ರ, ಪಂಚರಾತ್ರಾಗಮ, ಉಪನಿಷತ್ತು ಎಂಬ ಜ್ಞಾನಗಳು ಎಲ್ಲರ ಬುದ್ಧಿಯಲ್ಲಿಯೂ ಪ್ರಚಲಿತವಾಗಿವೆ.

ಕಿಮೇತಾನ್ಯೇಕನಿಷ್ಠಾನಿ ಪೃಥಗ್ ನಿಷ್ಠಾನಿ ವಾ ಮುನೇ ।
ಪ್ರಬ್ರೂಹಿ ವೈ ಮಯಾ ಪೃಷ್ಟಃ ಪ್ರವೃತ್ತಿಂ ಚ ಯಥಾಕ್ರಮಮ್ ॥೨॥

ಈ ಶಾಸ್ತ್ರಗಳು ಒಂದೇ ತತ್ತ್ವವನ್ನು ತಿಳಿಸುತ್ತವೋ ಅಥವಾ ಬೇರೆ ಬೇರೆ ತತ್ತ್ವಗಳನ್ನು ತಿಳಿಸುವುದರ ಅಭಿಪ್ರಾಯವಿದೆಯೋ? ಇದರ ಜೊತೆಗೆ ಪ್ರವೃತ್ತಿ ಮಾರ್ಗದ ಕ್ರಮವನ್ನು ಯಥಾವತ್ತಾಗಿ ನನಗೆ ತಿಳಿಸಿರಿ.

ವೈಶಂಪಾಯನಃ

ಜಜ್ಞೇ ಬಹುಜ್ಞಂ ಪರಮರ್ಷ್ಯುದಾರಂ
ಯಂ ದ್ವೀಪಮಧ್ಯೇ ಸುತಮಾತ್ಮವಂತಮ್ ।
ಪರಾಶರಾದ್ ಗಂಧವತೀ ಮಹರ್ಷಿಂ
ತಸ್ಮೈ ನಮೋಜ್ಞಾನತಮೋನುದಾಯ ॥೩॥

ವೈಶಂಪಾಯನ– ದೈವಾನುಗ್ರಹದಿಂದ ಯಮುನಾ ನದಿಯ ದ್ವೀಪದ ನಡುವೆ ಗಂಧವತಿಯಾದ ಸತ್ಯವತಿಯು ಅನೇಕ ಶಾಸ್ತ್ರಜ್ಞನೂ, ಉದಾರಸತ್ತ್ವಸಂಪನ್ನನೂ, ಮಹರ್ಷಿಯೂ ಆದ ಯಾವ ಪುತ್ರನನ್ನು ಪರಾಶರಮುನಿಯಿಂದ ಪಡೆದಳೋ ಅಂತಹ ಅಜ್ಞಾನಾಂಧಕಾರವನ್ನು ಪರಿಹರಿಸುವ ಗುರುಗಳಾದ ವ್ಯಾಸರನ್ನು ನಮಿಸುತ್ತೇನೆ.

ಪಿತಾಮಹಾದ್ಯಂ ಪ್ರವದಂತಿ ಷಷ್ಠಂ
ಮಹರ್ಷಿಮಾರ್ಷೇಯವಿಭೂತಿಯುಕ್ತಮ್ ।
ನಾರಾಯಣಸ್ಯಾಂಶಜಮೇಕಪುತ್ರಂ
ದ್ವೈಪಾಯನಂ ವೇದಮಹಾನಿಧಾನಮ್ ॥೪॥

ವ್ಯಾಸರು ಚತುರ್ಮುಖ ಬ್ರಹ್ಮನಿಗಿಂತ ಮೊದಲನೆಯವನಾದ ನಾರಾಯಣನಿಂದ ಆರಂಭಿಸಿದರೆ ಆರನೆಯ ಅವತಾರ ಪುರುಷರು. ನಾರಾಯಣ, ಬ್ರಹ್ಮ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ- ಎಂಬುದಾಗಿ ಜ್ಞಾನಿಗಳು ಹೇಳುತ್ತಾರೆ. ಋಷಿಗಳಿಗೆ ಸಂಬಂಧಿಸಿದ ಎಲ್ಲ ಐಶ್ವರ್ಯಗಳಿಂದಲೂ ಕೂಡಿದ್ದಾರೆ. ನಾರಾಯಣನ ಅಪಾಂತರತಮ ಎಂಬ ಮೊದಲನೆಯ ಅವತಾರದಲ್ಲಿ ವಾಕ್‌ನ ಉಚ್ಚಾರಣೆಯ ಸಮಯದಲ್ಲಿ ನಾರಾಯಣನ ಮುಖದಿಂದ ಹುಟ್ಟಿದವರು ಇವರೇ. ವೇದಗಳಿಗೆ ಮಹಾನಿಧಿಗಳೆನಿಸಿದ ಅಂತಹ ವ್ಯಾಸರಿಗೆ ನಮಸ್ಕರಿಸುತ್ತೇನೆ.

ತಮಾದಿಕಾಲೇಷು ಮಹಾವಿಭೂತಿ-
ರ್ನಾರಾಯಣೋ ಬ್ರಹ್ಮಮಹಾನಿದಾನಮ್ ।
ಸಸರ್ಜ ಪುತ್ರಾರ್ಥಮುದಾರತೇಜಾ
ವ್ಯಾಸಂ ಮಹಾತ್ಮಾನಮಜಃ ಪುರಾಣಃ ॥೫॥

ಮಹಾವಿಭೂತಿ ಸಂಪನ್ನನಾದ ನಾರಾಯಣನು ಹಿಂದೆ ವೇದಗಳ ಜ್ಞಾನಕ್ಕೆ ಕಾರಣಭೂತನಾದ, ಮಹಾತ್ಮನಾದ, ಜನ್ಮರಹಿತನಾದ, ಪುರಾಣಪುರುಷನಾದ ವ್ಯಾಸರನ್ನು ಮಗನನ್ನಾಗಿ ಪಡೆದನು.

ಜನಮೇಜಯಃ

ತ್ವಯ್ಯೈವ ಕಥಿತಃ ಪೂರ್ವಂ ಸಂಭವೋ ದ್ವಿಜಸತ್ತಮ ।
ವಸಿಷ್ಠಸ್ಯ ಸುತಃ ಶಕ್ತಿಃ ಶಕ್ತೇಃ ಪುತ್ರಃ ಪರಾಶರಃ ॥೬॥

ಜನಮೇಜಯ– ದ್ವಿಜಶ್ರೇಷ್ಠರೇ, ಹಿಂದೆ ಆದಿಪರ್ವದಲ್ಲಿ ವಸಿಷ್ಠರ ಮಗನು ಶಕ್ತಿಯು, ಶಕ್ತಿಯ ಮಗನು ಪರಾಶರರು ಎಂದು ನೀವು ಹೇಳಿದ್ದಿರಿ.

ಪರಾಶರಸ್ಯ ದಾಯಾದಃ ಕೃಷ್ಣದ್ವೈಪಾಯನೋ ಮುನಿಃ ।
ಭೂಯೋ ನಾರಾಯಣಸುತಂ ತ್ವಮೇವೈನಂ ಪ್ರಭಾಷಸೇ ॥೭॥

ಪರಾಶರರ ಮಗನು ಕೃಷ್ಣದ್ವೈಪಾಯನ ಮುನಿಯು ಎಂದು ಹೇಳಿರುತ್ತೀರಿ. ಈಗ ವ್ಯಾಸರು ನಾರಾಯಣನ ಮಗನು ಎಂದು ಹೇಳುತ್ತಿದ್ದೀರಿ.

ಕಿಮತಃ ಪೂರ್ವಜಂ ಜನ್ಮ ವ್ಯಾಸಸ್ಯಾಮಿತತೇಜಸಃ ।
ಕಥಯಸ್ವೋತ್ತಮಮತೇ ಜನ್ಮ ನಾರಾಯಣೋದ್ಭವಮ್ ॥೮॥

ಉತ್ತಮವಾದ ಮತಿಯುಳ್ಳ ವೈಶಂಪಾಯನರೇ, ಅಮಿತತೇಜಸ್ವಿಗಳಾದ ವ್ಯಾಸರಿಗೆ ಹಿಂದೆ ಇನ್ನೊಂದು ಜನ್ಮವಿದೆಯೇ? ನಾರಾಯಣನಿಂದ ವ್ಯಾಸರ ಜನ್ಮವು ಯಾವಾಗ, ಹೇಗೆ ಆಯಿತು?

ವೈಶಂಪಾಯನಃ

ವೇದಾರ್ಥಾನ್ವೇತ್ತುಕಾಮಸ್ಯ ಧರ್ಮಿಷ್ಠಸ್ಯ ತಪೋನಿಧೇಃ ।
ಗುರೋರ್ಮೇ ಜ್ಞಾನನಿಷ್ಠಸ್ಯ ಹಿಮವತ್ಪಾದ ಆಸತಃ ॥೯॥

ವೈಶಂಪಾಯನ– ವೇದಾರ್ಥಗಳನ್ನು ತಿಳಿಯಲು ಇಚ್ಛೆಯುಳ್ಳ ಧರ್ಮಿಷ್ಠರಾದ, ತಪೋನಿಧಿಯಾದ, ಜ್ಞಾನನಿಷ್ಠರಾದ, ನನ್ನ ಗುರುಗಳಾದ ವ್ಯಾಸರು ಹಿಮವತ್ ಪರ್ವತದ ತಪ್ಪಲಿನಲ್ಲಿ ವಾಸ ಮಾಡುತ್ತಿದ್ದರು.

ಕೃತ್ವಾ ಭಾರತಮಾಖ್ಯಾನಂ ತಪಃಶ್ರಾಂತಸ್ಯ ಧೀಮತಃ ।
ಶುಶ್ರೂಷಾಂ ತತ್ಪರಾ ರಾಜನ್ಕತವಂತೋ ವಯಂ ತದಾ ॥೧೦॥

ಮಹಾಭಾರತ ಸಂಹಿತೆಯನ್ನು ರಚನೆ ಮಾಡಿದ ಬಳಿಕ ತಪಸ್ಸಿನಿಂದ ಬಳಲಿದಂತಿರುವ ಜ್ಞಾನಿಯಾದ ವ್ಯಾಸರನ್ನು ಶಿಷ್ಯರಾದ ನಾವೆಲ್ಲರೂ ಸೇವಿಸುತ್ತಿದ್ದೆವು.

ಸುಮಂತುರ್ಜೈಮಿನಿಶ್ಚೈವ ಪೈಲಶ್ಚ ಸುದೃಢವ್ರತಃ ।
ಅಹಂ ಚತುರ್ಥಃ ಶಿಷ್ಯೋ ವೈ ಶುಕೋ ವ್ಯಾಸಾತ್ಮಜಸ್ತಥಾ ॥೧೧॥

ಏಭಿಃ ಪರಿವೃತೋ ವ್ಯಾಸಃ ಶಿಷ್ಯೈಃ ಪಂಚಭಿರುತ್ತಮೈಃ ।
ಶುಶುಭೇ ಹಿಮವತ್ಪಾದೇ ಭೂತೈರ್ಭೂತಪತಿರ್ಯಥಾ ॥೧೨॥

ಸುಮಂತು, ಜೈಮಿನಿ, ಅತ್ಯಂತ ದೃಢವ್ರತನಾದ ಪೈಲ, ನಾಲ್ಕನೆಯವನಾದ ನಾನು, ವ್ಯಾಸರ ಮಗನಾದ ಶುಕ - ಈ ಐದು ಉತ್ತಮ ಶಿಷ್ಯರಿಂದ ಕೂಡಿಕೊಂಡಿರುವ ವ್ಯಾಸರು ಹಿಮವತ್ ಪರ್ವತದ ತಪ್ಪಲಿನಲ್ಲಿ, ಭೂತಗಳಿಂದ ಕೂಡಿದ ಭೂತನಾಥನಾದ ಶಿವನು ಹೇಗೆ ಶೋಭಿಸುತ್ತಾನೋ ಹಾಗೆ ಶೋಭಿಸುತ್ತಿದ್ದರು.

ವೇದಾನಾವರ್ತಯನ್ ಸಾಂಗಾನ್ ಭಾರತಾರ್ಥಾಂಶ್ಚ ಸರ್ವಶಃ ।
ತಮೇಕಮನಸಂ ದಾಂತಂ ಯುಕ್ತಾ ವಯಮುಪಾಸ್ಮಹೇ ॥೧೩॥

ಷಡಂಗ ಸಹಿತವಾದ ವೇದಗಳನ್ನು, ಮಹಾಭಾರತದ ಸಮಗ್ರ ಅರ್ಥಗಳನ್ನು ಮನನ ಮಾಡುತ್ತಾ, ಜಿತೇಂದ್ರಿಯರಾದ, ಏಕಾಗ್ರಚಿತ್ತರಾದ ವ್ಯಾಸರನ್ನು ನಾವೆಲ್ಲರೂ ಸೇವಿಸುತ್ತಿದ್ದೆವು.

ಕಥಾಂತರೇಽಥ ಕಸ್ಮಿಂಶ್ಚಿತ್ ಪೃಷ್ಟೋಽಸ್ಮಾಭಿರ್ದ್ವಿಜೋತ್ತಮಃ ।
ವೇದಾರ್ಥಾನ್ ಭಾರತಾರ್ಥಾಂಶ್ಚ ಜನ್ಮ ನಾರಾಯಣಾತ್ತಥಾ ॥೧೪॥

ವ್ಯಾಸರು ಕಥೆಯನ್ನು ಹೇಳುವಾಗ ಮಧ್ಯದಲ್ಲಿ ನಾವು ಪ್ರಶ್ನಿಸಿದಾಗ ವ್ಯಾಸರು

ತಮಾದಿಕಾಲೇಷು ಮಹಾವಿಭೂತಿ-
ರ್ನಾರಾಯಣೋ ಬ್ರಹ್ಮಮಹಾನಿದಾನಮ್ ।
ಸಸರ್ಜ ಪುತ್ರಾರ್ಥಮುದಾರತೇಜಾ
ವ್ಯಾಸಂ ಮಹಾತ್ಮಾನಮಜಃ ಪುರಾಣಃ ॥೫॥

ಮಹಾವಿಭೂತಿ ಸಂಪನ್ನನಾದ ನಾರಾಯಣನು ಹಿಂದೆ ವೇದಗಳ ಜ್ಞಾನಕ್ಕೆ ಕಾರಣಭೂತನಾದ, ಮಹಾತ್ಮನಾದ, ಜನ್ಮರಹಿತನಾದ, ಪುರಾಣಪುರುಷನಾದ ವ್ಯಾಸರನ್ನು ಮಗನನ್ನಾಗಿ ಪಡೆದನು.

ಜನಮೇಜಯಃ

ತ್ವಯ್ಯೇವ ಕಥಿತಃ ಪೂರ್ವಂ ಸಂಭವೋ ದ್ವಿಜಸತ್ತಮ ।
ವಸಿಷ್ಠಸ್ಯ ಸುತಃ ಶಕ್ತಿಃ ಶಕ್ತೇಃ ಪುತ್ರಃ ಪರಾಶರಃ ॥೬॥

ಜನಮೇಜಯ– ದ್ವಿಜಶ್ರೇಷ್ಠರೇ, ಹಿಂದೆ ಆದಿಪರ್ವದಲ್ಲಿ ವಸಿಷ್ಠರ ಮಗನು ಶಕ್ತಿಯು, ಶಕ್ತಿಯ ಮಗನು ಪರಾಶರರು ಎಂದು ನೀವು ಹೇಳಿದ್ದಿರಿ.

ಪರಾಶರಸ್ಯ ದಾಯಾದಃ ಕೃಷ್ಣದ್ವೈಪಾಯನೋ ಮುನಿಃ ।
ಭೂಯೋ ನಾರಾಯಣಸುತಂ ತ್ವಮೇವೈನಂ ಪ್ರಭಾಷಸೇ ॥೭॥

ಪರಾಶರರ ಮಗನು ಕೃಷ್ಣದ್ವೈಪಾಯನ ಮುನಿಯು ಎಂದು ಹೇಳಿರುತ್ತೀರಿ. ಈಗ ವ್ಯಾಸರು ನಾರಾಯಣನ ಮಗನು ಎಂದು ಹೇಳುತ್ತಿದ್ದೀರಿ.

ಕಿಮತಃ ಪೂರ್ವಜಂ ಜನ್ಮ ವ್ಯಾಸಸ್ಯಾಮಿತತೇಜಸಃ ।
ಕಥಯಸ್ವೋತ್ತಮಮತೇ ಜನ್ಮ ನಾರಾಯಣೋದ್ಭವಮ್ ॥೮॥

ಉತ್ತಮವಾದ ಮತಿಯುಳ್ಳ ವೈಶಂಪಾಯನರೇ, ಅಮಿತತೇಜಸ್ವಿಗಳಾದ ವ್ಯಾಸರಿಗೆ ಹಿಂದೆ ಇನ್ನೊಂದು ಜನ್ಮವಿದೆಯೇ? ನಾರಾಯಣನಿಂದ ವ್ಯಾಸರ ಜನ್ಮವು ಯಾವಾಗ, ಹೇಗೆ ಆಯಿತು?

ವೈಶಂಪಾಯನಃ

ವೇದಾರ್ಥಾನ್ವೇತ್ತುಕಾಮಸ್ಯ ಧರ್ಮಿಷ್ಠಸ್ಯ ತಪೋನಿಧೇಃ ।
ಗುರೋರ್ಮೇ ಜ್ಞಾನನಿಷ್ಠಸ್ಯ ಹಿಮವತ್ಪಾದ ಆಸತಃ ॥೯॥

ವೈಶಂಪಾಯನ– ವೇದಾರ್ಥಗಳನ್ನು ತಿಳಿಯಲು ಇಚ್ಛೆಯುಳ್ಳ ಧರ್ಮಿಷ್ಠರಾದ, ತಪೋನಿಧಿಯಾದ, ಜ್ಞಾನನಿಷ್ಠರಾದ, ನನ್ನ ಗುರುಗಳಾದ ವ್ಯಾಸರು ಹಿಮವತ್ ಪರ್ವತದ ತಪ್ಪಲಿನಲ್ಲಿ ವಾಸ ಮಾಡುತ್ತಿದ್ದರು.

ಕೃತ್ವಾ ಭಾರತಮಾಖ್ಯಾನಂ ತಪಃಶ್ರಾಂತಸ್ಯ ಧೀಮತಃ ।
ಶುಶ್ರೂಷಾಂ ತತ್ಪರಾ ರಾಜನ್ಕೃತವಂತೋ ವಯಂ ತದಾ ॥೧೦॥

ಮಹಾಭಾರತ ಸಂಹಿತೆಯನ್ನು ರಚನೆ ಮಾಡಿದ ಬಳಿಕ ತಪಸ್ಸಿನಿಂದ ಬಳಲಿದಂತಿರುವ ಜ್ಞಾನಿಯಾದ ವ್ಯಾಸರನ್ನು ಶಿಷ್ಯರಾದ ನಾವೆಲ್ಲರೂ ಸೇವಿಸುತ್ತಿದ್ದೆವು.

ಸುಮಂತುರ್ಜೈಮಿನಿಶ್ಚೈವ ಪೈಲಶ್ಚ ಸುದೃಢವ್ರತಃ ।
ಅಹಂ ಚತುರ್ಥಃ ಶಿಷ್ಯೋ ವೈ ಶುಕೋ ವ್ಯಾಸಾತ್ಮಜಸ್ತಥಾ ॥೧೧॥

ಏಭಿಃ ಪರಿವೃತೋ ವ್ಯಾಸಃ ಶಿಷ್ಯೈಃ ಪಂಚಭಿರುತ್ತಮೈಃ ।
ಶುಶುಭೇ ಹಿಮವತ್ಪಾದೇ ಭೂತೈರ್ಭೂತಪತಿರ್ಯಥಾ ॥೧೨॥

ಸುಮಂತು, ಜೈಮಿನಿ, ಅತ್ಯಂತ ದೃಢವ್ರತನಾದ ಪೈಲ, ನಾಲ್ಕನೆಯವನಾದ ನಾನು, ವ್ಯಾಸರ ಮಗನಾದ ಶುಕ - ಈ ಐದು ಉತ್ತಮ ಶಿಷ್ಯರಿಂದ ಕೂಡಿಕೊಂಡಿರುವ ವ್ಯಾಸರು ಹಿಮವತ್ ಪರ್ವತದ ತಪ್ಪಲಿನಲ್ಲಿ, ಭೂತಗಳಿಂದ ಕೂಡಿದ ಭೂತನಾಥನಾದ ಶಿವನು ಹೇಗೆ ಶೋಭಿಸುತ್ತಾನೋ ಹಾಗೆ ಶೋಭಿಸುತ್ತಿದ್ದರು.

ವೇದಾನಾವರ್ತಯನ್ ಸಾಂಗಾನ್ ಭಾರತಾರ್ಥಾಂಶ್ಚ ಸರ್ವಶಃ ।
ತಮೇಕಮನಸಂ ದಾಂತಂ ಯುಕ್ತಾ ವಯಮುಪಾಸ್ಮಹೇ ॥೧೩॥

ಷಡಂಗ ಸಹಿತವಾದ ವೇದಗಳನ್ನು, ಮಹಾಭಾರತದ ಸಮಗ್ರ ಅರ್ಥಗಳನ್ನು ಮನನ ಮಾಡುತ್ತಾ, ಜಿತೇಂದ್ರಿಯರಾದ, ಏಕಾಗ್ರಚಿತ್ತರಾದ ವ್ಯಾಸರನ್ನು ನಾವೆಲ್ಲರೂ ಸೇವಿಸುತ್ತಿದ್ದೆವು.

ಕಥಾಂತರೇಽಥ ಕಸ್ಮಿಂಶ್ಚಿತ್ ಪೃಷ್ಟೋಽಸ್ಮಾಭಿರ್ದ್ವಿಜೋತ್ತಮಃ ।
ವೇದಾರ್ಥಾನ್ ಭಾರತಾರ್ಥಾಂಶ್ಚ ಜನ್ಮ ನಾರಾಯಣಾತ್ತಥಾ ॥೧೪॥

ವ್ಯಾಸರು ಕಥೆಯನ್ನು ಹೇಳುವಾಗ ಮಧ್ಯದಲ್ಲಿ ನಾವು ಪ್ರಶ್ನಿಸಿದಾಗ ವ್ಯಾಸರು

ವೇದಗಳ ಅರ್ಥವನ್ನು, ಭಾರತಾರ್ಥವನ್ನು, ಅದರಂತೆ ನಾರಾಯಣನಿಂದ ಅವರು ಹೊಂದಿದ ಜನ್ಮವನ್ನು ನಮಗೆ ವಿವರಿಸಿದರು.

ಸ ಪೂರ್ವಮುಕ್ತ್ವಾ ವೇದಾರ್ಥಾನ್ ಭಾರತಾರ್ಥಾಂಶ್ಚ ತತ್ತ್ವವಿತ್ ।
ನಾರಾಯಣಾದಿದಂ ಜನ್ಮ ವ್ಯಾಹರ್ತುಮುಪಚಕ್ರಮೇ ॥೧೫॥

ಮೊದಲು ವೇದಗಳ ಅರ್ಥವನ್ನು, ಬಳಿಕ ಜ್ಞಾನಿಗಳಾದ ವ್ಯಾಸರು ಭಾರತಾರ್ಥವನ್ನು, ನಂತರ ನಾರಾಯಣನಿಂದ ಜನ್ಮತಾಳಿದ ತಮ್ಮ ಕಥೆಯನ್ನು ಹೇಳಲು ಆರಂಭಿಸಿದರು.

ಶೃಣುಧ್ವಮಾಖ್ಯಾನವರಮೇತದಾರ್ಷೇಯಮುತ್ತಮಮ್ ।
ಆದಿಕಾಲೋದ್ಭವಂ ವಿಪ್ರಾಸ್ತಪಸಾಧಿಗತಂ ಮಯಾ ॥೧೬॥

ಶಿಷ್ಯರೇ ಕೇಳಿರಿ. ಸೃಷ್ಟಿಯ ಆದಿಯಲ್ಲಿ ನಡೆದ, ಋಷಿಗೆ ಸಂಬಂಧಿಸಿದ ಉತ್ತಮವಾದ ಆಖ್ಯಾನವನ್ನು ಹೇಳುತ್ತೇನೆ. ಈ ವಿಚಾರಗಳನ್ನು ತಪಸ್ಸಿನಿಂದ ನಾನು ತಿಳಿದಿರುತ್ತೇನೆ.

ಪ್ರಾಪ್ತೇ ಪ್ರಜಾವಿಸರ್ಗೇ ವೈ ಸಪ್ತಮೇ ಪದ್ಮಸಂಭವೇ ।
ನಾರಾಯಣೋ ಮಹಾಯೋಗೀ ಶುಭಾಶುಭವಿವರ್ಜಿತಃ ॥೧೭॥

ಸಸೃಜೇ ನಾಭಿತಃ ಪುತ್ರಂ ಬ್ರಹ್ಮಾಣಮಮಿತಪ್ರಭಮ್ ।
ತತಃ ಸ ಪ್ರಾದುರಭವದಥೈನಂ ವಾಕ್ಯಮಬ್ರವೀತ್ ॥೧೮॥

ಏಳನೆಯ ಕಲ್ಪದ ಆರಂಭದಲ್ಲಿ ಚತುರ್ಮುಖ ಬ್ರಹ್ಮನು ಪ್ರಜಾಸೃಷ್ಟಿಗಾಗಿ ಭಗವಂತನಿಂದ ಸೃಷ್ಟನಾದಾಗ, ಪುಣ್ಯ-ಪಾಪಗಳಿಂದ ದೂರನಾದ ಮಹಾ ಯೋಗಿಯಾದ ನಾರಾಯಣನು, ಅಮಿತಪ್ರಭನಾದ ಬ್ರಹ್ಮನೆಂಬ ಮಗನನ್ನು ತನ್ನ ನಾಭಿಯಿಂದ ಸೃಷ್ಟಿಸಿದನು. ಬ್ರಹ್ಮನು ಪ್ರಾದುರ್ಭೂತನಾದ ಬಳಿಕ ಅವನಿಗೆ ಶ್ರೀಹರಿಯು ಹೀಗೆ ಹೇಳಿದನು.

ಮಮ ತ್ವಂ ನಾಭಿತೋ ಜಾತಃ ಪ್ರಜಾಸರ್ಗಕರಃ ಪ್ರಭುಃ ।
ಸೃಜ ಪ್ರಜಾಸ್ತ್ವಂ ವಿವಿಧಾ ಬ್ರಹ್ಮನ್ ಸಜಡಪಂಡಿತಾಃ ॥೧೯॥

ಬ್ರಹ್ಮನ್, ಪ್ರಜೆಗಳನ್ನು ಸೃಷ್ಟಿಮಾಡುವ ಉದ್ದೇಶದಿಂದ ಸಮರ್ಥನಾದ ನೀನು

ನನ್ನ ನಾಭಿಯಿಂದ ಜನ್ಮತಾಳಿರುವೆ. ನೀನು ಅನೇಕ ವಿಧವಾದ ಜಡಜೀವರನ್ನು, ಜ್ಞಾನಿ ಜೀವರನ್ನು ಸೃಷ್ಟಿಸು.

ಸ ಏವಮುಕ್ತೋ ವಿಮುಖಶ್ಚಿಂತಾವ್ಯಾಕುಲಮಾನಸಃ ।
ಪ್ರಣಮ್ಯ ವರದಂ ದೇವಮುವಾಚ ಹರಿಮೀಶ್ವರಮ್ ॥೨೦॥

ಹೀಗೆ ಭಗವಂತನಿಂದ ಆಜ್ಞಪ್ತನಾದ ಬ್ರಹ್ಮನು ಸೃಷ್ಟಿಕಾರ್ಯದಿಂದ ವಿಮುಖನಾಗಿ ಚಿಂತಾಗ್ರಸ್ಥನಾಗಿ ಕಳವಳ ಹೊಂದಿದನು. ಸರ್ವಸಮರ್ಥನಾದ, ವರದನಾದ ಭಗವಂತನನ್ನು ನಮಿಸಿ ಹೀಗೆ ಹೇಳಿದನು.

ಕಾ ಶಕ್ತಿರ್ಮಮ ದೇವೇಶ ಪ್ರಜಾಃ ಸ್ರಷ್ಟುಂ ನಮೋಽಸ್ತು ತೇ ।
ಅಪ್ರಜ್ಞಾವಾನಹಂ ದೇವ ವಿಧತ್ಸ್ವ ಯದನಂತರಮ್ ॥೨೧॥

ದೇವೇಶನೇ, ಪ್ರಜೆಗಳನ್ನು ಸೃಷ್ಟಿಸಲು ನನ್ನಲ್ಲಿ ಯಾವ ಶಕ್ತಿಯಿದೆ? ನಿನಗೆ ನಮಸ್ಕರಿಸುತ್ತೇನೆ. ಸೃಷ್ಟಿಯ ವಿಷಯದಲ್ಲಿ ನನಗೆ ಯಾವ ಜ್ಞಾನವೂ ಇರುವುದಿಲ್ಲ. ಆದ್ದರಿಂದ ಮುಂದೆ ಏನು ಮಾಡಬೇಕೆಂಬುದನ್ನು ನೀನೇ ನನಗೆ ತಿಳಿಸು.

ಸ ಏವಮುಕ್ತೋ ಭಗವಾನ್ ಭೂತ್ವಾಽಽಂತರ್ಹಿತಸ್ತತಃ ।
ಚಿಂತಯಾಮಾಸ ದೇವೇಶೋ ಬುದ್ಧಿಂ ಬುದ್ಧಿಮತಾಂ ವರಃ ॥೨೨॥

ಬ್ರಹ್ಮನು ಹೀಗೆ ಹೇಳಿದ ಬಳಿಕ ಬುದ್ಧಿವಂತರಲ್ಲಿ ಶ್ರೇಷ್ಠನಾದ ಶ್ರೀಹರಿಯು ಅಂತರ್ಧಾನವನ್ನು ಹೊಂದಿ ಜ್ಞಾನದ ಬಗ್ಗೆಯೇ ಧ್ಯಾನಿಸಿದನು.

ಸ್ವರೂಪಿಣೀ ತತೋ ಬುದ್ಧಿರುಪತಸ್ಥೇ ಹರಿಂ ಪ್ರಭುಮ್ ।
ಯೋಗೇನ ಚೈನಾಂ ನಿರ್ಯೋಗಃ ಸ್ವಯಂ ನಿಯುಯುಜೇ ತದಾ ॥೨೩॥

ಶ್ರೀಹರಿಯು ಧ್ಯಾನಾಸಕ್ತನಾದಾಗ ಬುದ್ಧಿಯು ಅರ್ಥಾತ್ ಬುದ್ಧ್ಯಭಿಮಾನಿಯು ಶರೀರವನ್ನು ಧರಿಸಿ ಪ್ರಭುವಾದ ಹರಿಯನ್ನು ಸೇವಿಸಲು ಸಿದ್ಧಳಾಗಿ ನಿಂತಳು. ಆ ಸಮಯದಲ್ಲಿ ಭಗವಂತನು ಬುದ್ಧ್ಯಭಿಮಾನಿ ದೇವತೆಯನ್ನು ಯೋಗಶಕ್ತಿಯ ಜೊತೆಗೆ ಸಂಯೋಜಿಸಿದನು.

ಸ ತಾಮೈಶ್ವರ್ಯಯೋಗಸ್ಥಾಂ ಬುದ್ಧಿಂ ಶಕ್ತಿಮತೀಂ ಸತೀಮ್ ।
ಉವಾಚ ವಚನಂ ದೇವೋ ಬುದ್ಧಿಂ ವೈ ಪ್ರಭುರವ್ಯಯಃ ॥೨೪॥

ನಾಶರಹಿತನಾದ ಪ್ರಭುವಾದ ನಾರಾಯಣನು ಐಶ್ವರ್ಯಯೋಗವನ್ನು ಹೊಂದಿರುವ ಸತಿಯಾದ ಶಕ್ತಿವಂತಳಾದ ಬುದ್ಧಿಯನ್ನು ಕುರಿತು ಈ ರೀತಿಯಾಗಿ ಹೇಳಿದನು.

ಬ್ರಹ್ಮಾಣಂ ಪ್ರವಿಶಸ್ವೇತಿ ಲೋಕಸೃಷ್ಟ್ಯರ್ಥಸಿದ್ಧಯೇ ।
ತತಸ್ತಮೀಶ್ವರಾದಿಷ್ಟಾ ಬುದ್ಧಿಃ ಕ್ಷಿಪ್ರಾಂ ವಿವೇಶ ಸಾ ॥೨೫॥

ಬುದ್ಧ್ಯಭಿಮಾನಿಯೇ, ಲೋಕದ ಸೃಷ್ಟಿಗಾಗಿ ನೀನು ಚತುರ್ಮುಖಬ್ರಹ್ಮನನ್ನು ಪ್ರವೇಶಿಸು. ಹೀಗೆ ಹೇಳಿದ ಕೂಡಲೇ ಬುದ್ಧ್ಯಭಿಮಾನಿಯು ಈಶ್ವರನಿಂದ ಆಜ್ಞಪ್ತಳಾಗಿ ಬ್ರಹ್ಮನನ್ನು ಪ್ರವೇಶಿಸಿದಳು.

ಅಥೈನಂ ಬುದ್ಧಿಸಂಯುಕ್ತಂ ಪುನಃ ಸ ದದೃಶೇ ಹರಿಃ ।
ಭೂಯಶ್ಚೈನಂ ವಚಃ ಪ್ರಾಹ ಸೃಜೇಮಾ ವಿವಿಧಾಃ ಪ್ರಜಾಃ ॥೨೬॥

ಬಳಿಕ ಬುದ್ಧಿಸಂಯುಕ್ತನಾದ ಬ್ರಹ್ಮನನ್ನು ಶ್ರೀಹರಿಯು ಪುನಃ ನೋಡಿದನು. ಅನೇಕ ವಿಧ ಪ್ರಜೆಗಳನ್ನು ಸೃಷ್ಟಿಸುವಂತೆ ಪುನಃ ಅವನಿಗೆ ಆದೇಶಿಸಿದನು.

ಏವಮುಕ್ತ್ವಾ ಸ ಭಗವಾಂಸ್ತತ್ರೈವಾಂತರಧೀಯತ ।
ಪ್ರಾಪ ಚೈವ ಮುಹೂರ್ತೇನ ಸ್ವಸ್ಥಾನಂ ದೇವಸಂಜ್ಞಿತಮ್ ॥೨೭॥

ಈ ರೀತಿಯಾಗಿ ಭಗವಂತನು ಬ್ರಹ್ಮನಿಗೆ ಆದೇಶಿಸಿ, ಅಂತರ್ಧಾನವನ್ನು ಹೊಂದಿ ಒಂದು ಮುಹೂರ್ತದಲ್ಲಿ ತನ್ನ ಮೂಲಸ್ಥಾನವೆನಿಸಿದ ದೇವಲೋಕವನ್ನು ಹೊಂದಿದನು.

ತಾಂ ಚೈವ ಪ್ರಕೃತಿಂ ಪ್ರಾಪ್ಯ ವಿಕೀಭಾವಗತೋಽಭವತ್ ।
ಅಥಾಸ್ಯ ಬುದ್ಧಿರಭವತ್ ಪುನರನ್ಯಾ ತದಾ ಕಿಲ ॥೨೮॥

ಆ ಬುದ್ಧ್ಯಭಿಮಾನಿಯನ್ನು ಚತುರ್ಮುಖ ಬ್ರಹ್ಮನು ತನ್ನಲ್ಲಿ ಸೇರಿಸಿಕೊಂಡನು. ಸ್ವಲ್ಪ ಸಮಯದ ನಂತರ ಭಗವಂತನಿಗೆ ಇನ್ನೊಂದು ಮನಸ್ಸಿನಲ್ಲಿ ವಿಕಾರವು ಮೂಡಿತು.

ಸೃಷ್ಟಾ ಇಮಾಃ ಪ್ರಜಾಃ ಸರ್ವಾ ಬ್ರಹ್ಮಣಾ ಪರಮೇಷ್ಠಿನಾ ।
ದೈತ್ಯದಾನವಗಂಧರ್ವರಕ್ಷೋಗಣಸಮಾಕುಲಾಃ ।
ಜಾತಾ ಹೀಯಂ ವಸುಮತೀ ಭಾರಾಕ್ರಾಂತಾ ತಪಸ್ವಿನೀ ॥೨೯॥

ಚತುರ್ಮುಖ ಬ್ರಹ್ಮನು ಸಮಸ್ತ ವಿಧವಾದ ಪ್ರಜೆಗಳನ್ನೂ ಸೃಷ್ಟಿಸಿದ್ದಾನೆ. ಆದರೆ ದೈತ್ಯ, ದಾನವ, ಗಂಧರ್ವ, ರಾಕ್ಷಸ ಇವರ ಸಮೂಹಗಳಿಂದ ಆಕ್ರಾಂತಳಾಗಿರುವ ತಪಸ್ವಿಯಾದ ಈ ಭೂದೇವಿಯು ಅತಿಯಾದ ಭಾರದಿಂದ ಕುಂಟಿತಳಾಗಿದ್ದಾಳೆ.

ಬಹವೋ ಬಲಿನಃ ಪೃಥ್ವ್ಯಾಂ ದೈತ್ಯದಾನವರಾಕ್ಷಸಾಃ ।
ಭವಿಷ್ಯಂತಿ ತಪೋಯುಕ್ತಾ ವರಾನ್ ಪ್ರಾಪ್ಸ್ಯಂತಿ ಚೋತ್ತಮಾನ್ ॥೩೦॥

ಈ ಭೂಮಿಯಲ್ಲಿ ಬಲಿಷ್ಠರಾದ ಅನೇಕ ದೈತ್ಯ-ದಾನವ-ರಾಕ್ಷಸರು ಇನ್ನೂ ಹುಟ್ಟಲಿದ್ದಾರೆ. ಅವರು ತಪಸ್ಸುಗಳನ್ನು ಆಚರಿಸಿ ಉತ್ತಮವಾದ ವರಗಳನ್ನು ಹೊಂದುತ್ತಾರೆ.

ಅವಶ್ಯಮೇವ ತೈಃ ಸರ್ವೈರ್ವರದಾನೇನ ದರ್ಪಿತೈಃ ।
ಬಾಧಿತವ್ಯಾಃ ಸುರಗಣಾ ಋಷಯಶ್ಚ ತಪೋಧನಾಃ ।
ತತ್ರ ನ್ಯಾಯ್ಯಮಿದಂ ಕರ್ತುಂ ಭಾರಾವತರಣಂ ಮಯಾ ॥೩೧॥

ವರಗಳನ್ನು ಹೊಂದಿರುವ, ದರ್ಪಿಷ್ಟರಾದ ಆ ದೈತ್ಯ-ದಾನವರಿಂದ ತಪೋಧನರಾದ ಋಷಿಗಳು, ದೇವತೆಗಳು ಇವರೆಲ್ಲರೂ ಪೀಡಿತರಾಗುತ್ತಾರೆ. ಆದ್ದರಿಂದ ನಾನು ಅನೇಕ ಅವತಾರಗಳನ್ನು ತಾಳಿ ಭೂಭಾರವನ್ನು ಹರಣ ಮಾಡುವುದು ಯೋಗ್ಯವಾಗಿದೆ.

ಅಥ ನಾನಾಸಮುದ್ಭೂತೈರ್ವಸುಧಾಯಾಂ ಯಥಾಕ್ರಮಮ್ ।
ನಿಗ್ರಹೇಣ ಚ ಪಾಪಾನಾಂ ಸಾಧೂನಾಂ ಪ್ರಗ್ರಹೇಣ ಚ ॥೩೨॥

ನಾನು ಅನೇಕ ಅವತಾರಗಳಿಂದ ಭೂಮಿಗೆ ಆಗಮಿಸಿ, ಪಾಪಿಷ್ಠರನ್ನು ನಿಗ್ರಹಿಸಿ ಸಜ್ಜನರನ್ನು ಉದ್ಧರಿಸುವುದು ಕರ್ತವ್ಯವಾಗಿದೆ.

ಇಮಾಂ ತಪಸ್ವಿನೀಂ ಸತ್ಯಾಂ ಧಾರಯಿಷ್ಯಾಮಿ ಮೇದಿನೀಮ್ ।
ಮಯಾ ಹ್ಯೇಷಾ ಹಿ ಧ್ರಿಯತೇ ಪಾತಾಲಸ್ಥೇನ ಭೋಗಿನಾ ॥೩೩॥

ಈ ತಪಸ್ವಿನಿಯಾದ, ಪೃಥ್ವಿಯನ್ನು ಸತ್ಯರೂಪಳಾದ ನಾನು ಧರಿಸಬೇಕಾಗಿದೆ. ನಾನು ಪಾತಾಳದಲ್ಲಿ ಶೇಷನ ಅಂತರ್ಯಾಮಿಯಾಗಿ ಸಂಕರ್ಷಣರೂಪದಿಂದ ಇವಳನ್ನು ಧರಿಸುತ್ತೇನೆ.

ಮಯಾ ಧೃತಾ ಧಾರಯತಿ ಜಗದ್ಧಿ ಸಚರಾಚರಮ್ ।
ತಸ್ಮಾತ್ ಪೃಥ್ವ್ಯಾಃ ಪರಿತ್ರಾಣಂ ಕರಿಷ್ಯೇ ಸಂಭವಂ ಗತಃ ॥೩೪॥

ನನ್ನಿಂದ ಧರಿಸಲ್ಪಟ್ಟ ಭೂದೇವಿಯು ಈ ಚರಾಚರ ಜಗತ್ತನ್ನು ಧಾರಣೆ ಮಾಡುತ್ತಾಳೆ. ಆದ್ದರಿಂದ ಭೂಮಿಯಲ್ಲಿ ಅವತರಿಸಿ ಭೂಮಿಯನ್ನು ನಾನು ರಕ್ಷಿಸುತ್ತೇನೆ.

ಏವಂ ಸ ಚಿಂತಯಿತ್ವಾ ತು ಭಗವಾನ್ಮಧುಸೂದನಃ ।
ರೂಪಾಣ್ಯನೇಕಾನ್ಯಸೃಜತ್ ಪ್ರಾದುರ್ಭಾವಭವಾಯ ಸಃ ॥೩೫॥

ಈ ರೀತಿಯಾಗಿ ಭಗವಾನ್ ಮಧುಸೂದನನು ಆಲೋಚಿಸಿ ಜಗತ್ತಿನಲ್ಲಿ ಅವತರಿಸುವ ದೃಷ್ಟಿಯಿಂದ ಅನೇಕ ಅವತಾರಗಳನ್ನು ತಾಳಿದನು.

ವಾರಾಹಂ ನಾರಸಿಂಹಂ ಚ ವಾಮನಂ ಮಾನುಷಂ ತಥಾ ।
ಏಭಿರ್ಮಯಾ ನಿಹಂತವ್ಯಾ ದುರ್ವಿನೀತಾಸುರಾರಯಃ ॥೩೬॥

ವರಾಹ, ನಾರಸಿಂಹ, ವಾಮನ, ಮನುಷ್ಯ ಸಂಬಂಧಿಯಾದ ರಾಮ - ಈ ರೂಪಗಳನ್ನು ತಾಳಿ ದುರ್ವಿನೀತರಾದ ದೈತ್ಯರನ್ನು ನಿಗ್ರಹಿಸಬೇಕಾಗಿದೆ.

ಅಥ ಭೂಯೋ ಜಗತ್ಸ್ರಷ್ಟಾ ಭೋಃಶಬ್ದೇನಾನುನಾದಯನ್ ।
ಸರಸ್ವತೀಮುಚ್ಚಚಾರ ತತ್ರ ಸಾರಸ್ವತೋಽಭವತ್ ॥೩೭॥

ನಂತರ ಹೀಗೆ ಯೋಚಿಸಿ ಜಗತ್ ಸೃಷ್ಟಿಕರ್ತನಾದ ಭಗವಂತನು ಭೋಃ ಎಂಬ ಶಬ್ದದಿಂದ ಜಗತ್ತಿನಲ್ಲಿ ಪ್ರತಿಧ್ವನಿಯನ್ನು ಉಂಟು ಮಾಡುತ್ತಾ, ತನ್ನ ಶಬ್ದೋಚ್ಚಾರಣೆಯಿಂದ ಸಾರಸ್ವತನನ್ನು ಸೃಷ್ಟಿಸಿದನು. ಸಾರಸ್ವತನ ಆವಿರ್ಭಾವ ಭಗವಂತನ ಶಬ್ದದ ಮೂಲಕ ಉಂಟಾಯಿತು.

ಅಪಾಂತರತಮಾ ನಾಮ ಸುತೋ ವಾಕ್ಸಂಭವೋ ವಿಭೋಃ ।
ಭೂತಭವ್ಯಭವಿಷ್ಯಜ್ಞಃ ಸತ್ಯವಾದೀ ದೃಢವ್ರತಃ ॥೩೮॥

ವರಾಹಾದಿ ರೂಪಗಳಂತೆ ಜ್ಞಾನಕಾರ್ಯಕ್ಕಾಗಿ ಅಪಾಂತರತಮಾ ಎಂಬ ಭಗವಂತನ ರೂಪವು ಆದಿನಾರಾಯಣನಿಂದಲೇ ಪ್ರಾದುರ್ಭಾವಗೊಂಡಿತು. ಸತ್ಯವಾದಿಯಾದ, ದೃಢವ್ರತನಾದ, ಭೂತ-ಭವ್ಯ-ಭವಿಷ್ಯತ್ ಜ್ಞಾನಿಯಾದ ಅಪಾಂತರತಮನೇ ಮುಂದೆ ವ್ಯಾಸನಾಗುತ್ತಾನೆ.

ತಮುವಾಚ ನತಂ ಮೂರ್ಧ್ನಾ ದೇವಾನಾಮಾದಿರವ್ಯಯಃ ।
ವೇದಾಖ್ಯಾನೇ ಶ್ರುತಿಃ ಕಾರ್ಯಾ ತ್ವಯಾ ಮತಿಮತಾಂ ವರ ।
ತಸ್ಮಾತ್ ಕುರು ಯಥಾಜ್ಞಪ್ತಂ ಮಯೈತದ್ವಚನಂ ಮುನೇ ॥೩೯॥

ಹುಟ್ಟಿದ ಕೂಡಲೇ ತಲೆಬಾಗಿ ನಮಸ್ಕರಿಸಿದ ಅಪಾಂತರತಮನಿಗೆ ದೇವತೆಗಳಿಗೂ ಆದಿಯಾದ, ಅವ್ಯಯನಾದ ಭಗವಂತನು ಹೇಳಿದನು: ಜಾಣರಲ್ಲಿ ಶ್ರೇಷ್ಠನೇ, ವೇದವ್ಯಾಖ್ಯಾನಕ್ಕಾಗಿ ನೀನು ವೇದಗಳನ್ನು ವಿಭಾಗಿಸಬೇಕು. ನನ್ನ ಆದೇಶದಂತೆ ನನ್ನ ಮಾತನ್ನು ನೀನು ನಡೆಸು.

ತೇನ ಭಿನ್ನಾಸ್ತದಾ ವೇದಾ ಮನೋಃ ಸ್ವಾಯಂಭುವೇಂತರೇ ।
ತತಸ್ತುತೋಷ ಭಗವಾನ್ಹರಿಸ್ತೇನಾಸ್ಯ ಕರ್ಮಣಾ ।
ತಪಸಾ ಚ ಸುತಪ್ತೇನ ಯಮೇನ ನಿಯಮೇನ ಚ ॥೪೦॥

ಶ್ರೀಹರಿಯ ಆದೇಶದಂತೆ ಅಪಾಂತರತಮನು ಸ್ವಾಯಂಭುವ ಮನ್ವಂತರದಲ್ಲಿ ವೇದಗಳನ್ನು ವಿಂಗಡಿಸಿದನು. ಇವನ ಈ ಕರ್ಮದಿಂದ, ತಪಸ್ಸಿನಿಂದ, ಯಮ-ನಿಯಮಗಳ ಅನುಷ್ಠಾನದಿಂದ ಸಂತುಷ್ಟನಾದ ಹರಿಯು ಅವನಿಗೆ ಹೀಗೆ ಹೇಳಿದನು.

ಶ್ರೀಭಗವಾನ್

ಮನ್ವಂತರೇಷು ಪುತ್ರ ತ್ವಮೇವಂ ಲೋಕಪ್ರವರ್ತಕಃ ।
ಭವಿಷ್ಯಸ್ಯಚಲೋ ಬ್ರಹ್ಮನ್ನಪ್ರಧೃಷ್ಯಶ್ಚ ನಿತ್ಯಶಃ ॥೪೧॥

ಶ್ರೀಭಗವಾನ್– ಮಗನೇ, ನೀನು ಎಲ್ಲ ಮನ್ವಂತರಗಳಲ್ಲಿಯೂ ಇದೇ ರೀತಿ ಧರ್ಮಪ್ರವರ್ತಕನಾಗು. ಬ್ರಹ್ಮಜ್ಞಾನಿಯೇ, ನೀನು ಅಚಲನೂ, ಬಲಾತ್ಕಾರಕ್ಕೆ ತುತ್ತಾಗದವನೂ ಆಗುತ್ತಿ.

ಪುನಸ್ತಿಷ್ಯೇ ಚ ಸಂಪ್ರಾಪ್ತೇ ಕುರವೋ ನಾಮ ಭಾರತಾಃ ।
ಭವಿಷ್ಯಂತಿ ಮಹಾತ್ಮಾನೋ ರಾಜಾನಃ ಪ್ರಥಿತಾ ಭುವಿ ॥೪೨॥

ದ್ವಾಪರ, ಕಲಿಯುಗದ ಸಂಧಿಕಾಲದಲ್ಲಿ ಭರತವಂಶದಲ್ಲಿ ಕುರುಗಳೆಂಬ ಹೆಸರಿನ ವಿಖ್ಯಾತರಾದ ಕ್ಷತ್ರಿಯರು ಭೂಮಿಯಲ್ಲಿ ಹುಟ್ಟುತ್ತಾರೆ.

ತೇಷಾಂ ತ್ವತ್ತಃ ಪ್ರಸೂತಾನಾಂ ಕುಲಭೇದೋ ಭವಿಷ್ಯತಿ ।
ಪರಸ್ಪರವಿನಾಶಾರ್ಥಂ ತ್ವಾಮೃತೇ ದ್ವಿಜಸತ್ತಮ ॥೪೩॥

ನಿನ್ನಿಂದಲೇ ಜನ್ಮವನ್ನು ತಾಳುವ ಅವರಲ್ಲಿ ನಿನ್ನನ್ನು ಹೊರತುಪಡಿಸಿ ಪರಸ್ಪರ ನಾಶ ಹೊಂದಲು ಅವರಲ್ಲಿ ಕುಲಭೇದ ಉಂಟಾಗುತ್ತದೆ.

ತತ್ರಾಪ್ಯನೇಕಧಾ ವೇದಾನ್ ಭೇತ್ಸ್ಯಸೇ ತಪಸಾನ್ವಿತಃ ।
ಕೃಷ್ಣೇ ಯುಗೇ ಚ ಸಂಪ್ರಾಪ್ತೇ ಕೃಷ್ಣವರ್ಣೋ ಭವಿಷ್ಯಸಿ ॥೪೪॥

ಆ ಸಮಯದಲ್ಲಿಯೂ ತಪೋಬಲದಿಂದ ಕೂಡಿದ ನೀನು ವೇದಗಳನ್ನು ಅನೇಕ ಪ್ರಕಾರವಾಗಿ ವಿಭಾಗಿಸುತ್ತಿ. ಕಲಿಯುಗವು ಪ್ರಾಪ್ತವಾಗಲು ನೀನು ಕೃಷ್ಣವರ್ಣನಾಗುತ್ತಿ.

ಧರ್ಮಾಣಾಂ ವಿವಿಧಾನಾಂ ಚ ಕರ್ತಾ ಜ್ಞಾನಕರಸ್ತಥಾ ।
ಭವಿಷ್ಯಸಿ ತಪೋಯುಕ್ತೋ ನ ಚ ರಾಗಾದ್ ವಿಮೋಕ್ಷ್ಯಸೇ ॥೪೫॥

ನಾನಾ ವಿಧವಾದ ಧರ್ಮಗಳ ಪ್ರವರ್ತಕನಾಗುತ್ತಿ, ತಪೋಯುಕ್ತನಾಗುತ್ತಿ. ಈ ಜಗತ್ತಿನ ಸಂಬಂಧವನ್ನು ಬಿಟ್ಟಿರುವುದಿಲ್ಲ.

ವೀತರಾಗಶ್ಚ ಪುತ್ರಸ್ತೇ ಪರಮಾತ್ಮಾ ಭವಿಷ್ಯತಿ ।
ಮಹೇಶ್ವರಪ್ರಸಾದೇನ ನೈತದ್ವಚನಮನ್ಯಥಾ ॥೪೬॥

ರಾಗದಿಂದ ದೂರನಾದ ನಿನ್ನ ಮಗನು ಭಗವಂತನ ಅನುಗ್ರಹದಿಂದ ಸರ್ವೋತ್ತಮನಾದ ನಾರಾಯಣನಲ್ಲೇ ಮನಸ್ಸುಳ್ಳವನಾಗುತ್ತಾನೆ. ನನ್ನ ಮಾತು ಎಂದಿಗೂ ಸುಳ್ಳಾಗುವುದಿಲ್ಲ.

ಯಂ ಮಾನಸಂ ವೈ ಪ್ರವದಂತಿ ಪುತ್ರಂ
ಪಿತಾಮಹಸ್ಯೋತ್ತಮಬುದ್ಧಿಯುಕ್ತಮ್ ।
ವಸಿಷ್ಠಮಗ್ರ್ಯಂ ತಪಸೋ ನಿಧಾನಂ
ಯಶ್ಚಾಪಿ ಸೂರ್ಯಂ ವ್ಯತಿರಿಚ್ಯ ಭಾತಿ ॥೪೭॥

ತಸ್ಯಾನ್ವಯೇ ಚಾಪಿ ತತೋ ಮಹರ್ಷಿಃ
ಪರಾಶರೋ ನಾಮ ಮಹಾಪ್ರಭಾವಃ ।

ಪಿತಾ ಸ ತೇ ವೇದನಿಧಿರ್ವರಿಷ್ಠೋ
ಮಹಾತಪಾ ವೈ ತಪಸೋ ನಿವಾಸಃ ।
ಕಾನೀನಗರ್ಭಃ ಪಿತೃಕನ್ಯಕಾಯಾಂ
ತಸ್ಮಾದೃಷೇಸ್ತ್ವಂ ಭವಿತಾ ಚ ಪುತ್ರಃ ॥೪೮॥

ಯಾರನ್ನು ಬ್ರಾಹ್ಮಣರು ಬ್ರಹ್ಮನ ಮಾನಸ ಪುತ್ರ ಎಂದು ಹೇಳುತ್ತಾರೋ, ಉತ್ತಮ ಬುದ್ಧಿಯಿಂದ ಕೂಡಿರುತ್ತಾನೋ, ತಪೋನಿಧಿಯೋ, ತೇಜಸ್ಸಿನಿಂದ ಸೂರ್ಯನನ್ನು ಮೀರಿಸಿರುತ್ತಾನೋ ಅಂತಹ ವಸಿಷ್ಠ ಮಹರ್ಷಿಯ ವಂಶದಲ್ಲಿ ಪರಾಶರ ಎಂಬ ಹೆಸರಿನ ಮಹಾಪ್ರಭಾವಶಾಲಿಯಾದ ಮಹರ್ಷಿಯು ಹುಟ್ಟುತ್ತಾನೆ. ವೇದನಿಧಿಯಾದ ಶ್ರೇಷ್ಠನಾದ, ತಪಸ್ವಿಯಾದ, ತಪಸ್ಸುಗಳಿಗೆಲ್ಲ ಆವಾಸಸ್ಥಾನನಾದ ಪರಾಶರನು ನಿನಗೆ ತಂದೆಯಾಗುತ್ತಾನೆ. ತಂದೆಯಾದ ಪರಾಶರರ ಮೂಲಕ ಕನ್ಯೆಯಲ್ಲಿ ನೀನು ಅವತರಿಸುವ ಕಾರಣ ಕಾನೀನಗರ್ಭ ಎಂದು ಪ್ರಸಿದ್ಧನಾಗುತ್ತಿ.

ಭೂತಭವ್ಯಭವಿಷ್ಯಾಣಾಂ ಛಿನ್ನಸರ್ವಾರ್ಥಸಂಶಯಃ ।
ಯೇ ಹ್ಯತಿಕ್ರಾಂತಕಾಃ ಪೂರ್ವಂ ಸಹಸ್ರಯುಗಪರ್ಯಾಯಾಃ ॥೪೯॥

ಭೂತ-ಭವ್ಯ-ಭವಿಷ್ಯತ್ತುಗಳ ಬಗ್ಗೆ ಸಂಶಯವಿಲ್ಲದೆ ಜ್ಞಾನ ಹೊಂದಿರುತ್ತಿ. ಹಿಂದೆ ಕಳೆದು ಹೋದ ಸಾವಿರಾರು ಯುಗಗಳ ವಿಚಾರಗಳನ್ನು ಪ್ರತ್ಯಕ್ಷವಾಗಿಯೇ ನೋಡುತ್ತಿ.

ತಾಂಶ್ಚ ಸರ್ವಾನ್ಮಯೋದ್ದಿಷ್ಟಾನ್ ದ್ರಕ್ಷ್ಯಸೇ ತಪಸಾನ್ವಿತಃ ।
ಪುನರ್ದ್ರಕ್ಷ್ಯಸಿ ಚಾನೇಕಸಹಸ್ರಯುಗಪರ್ಯಾಯಾನ್ ॥೫೦॥

ತಪಸ್ಸಿನಿಂದಲೇ ಕೂಡಿರುವ ನೀನು ನನ್ನಿಂದ ಹೇಳಲ್ಪಟ್ಟ ಎಲ್ಲ ವಿಚಾರಗಳನ್ನು ಅನೇಕ ಸಾವಿರ ಯುಗಗಳು ನಡೆದು ಹೋಗಿದ್ದರೂ ಪುನಃ ನೋಡುವ ಸಾಮರ್ಥ್ಯವನ್ನು ಹೊಂದುತ್ತಿ.

ಅನಾದಿನಿಧನಂ ಲೋಕೇ ಚಕ್ರಹಸ್ತಂ ಚ ಮಾಂ ಮುನೇ ।
ಅನುಧ್ಯಾನಾನ್ಮಮ ಮುನೇ ನೈತದ್ ವಚನಮನ್ಯಥಾ ॥೫೧॥

ಮಹಾಮುನಿಯೇ, ನಿರಂತರ ನನ್ನನ್ನು ಧ್ಯಾನಿಸುವುದರಿಂದ ಅನಾದಿ ನಿಧನನಾದ, ಚಕ್ರಪಾಣಿಯಾದ ನನ್ನನ್ನು ನೋಡುತ್ತಿರುವೆ. ನನ್ನ ಮಾತು ವ್ಯತ್ಯಾಸವಾಗುವುದಿಲ್ಲ.

ಶನೈಶ್ಚರಃ ಸೂರ್ಯಪುತ್ರೋ ಭವಿಷ್ಯತಿ ಮನುರ್ಮಹಾನ್ ।
ತಸ್ಮಿನ್ಮನ್ವಂತರೇ ಚೈವ ಸಪ್ತರ್ಷಿಗಣಪೂರ್ವಕಃ ।
ತ್ವಮೇವ ಭವಿತಾ ವತ್ಸ ಮತ್ಪ್ರಸಾದಾನ್ನ ಸಂಶಯಃ ॥೫೨॥

ಎಪ್ಪತ್ತೊಂದು ಮಹಾಯುಗಗಳ ತನಕ ಸಂಚರಿಸುವುದರಿಂದ ಶನೈಶ್ಚರ ಎನಿಸಿದ ಶ್ರೇಷ್ಠನಾದ ವೈವಸ್ವತ ಮನುವು ನೀನು ಅವತಾರ ಮಾಡುವ ಮನ್ವಂತರದಲ್ಲಿ ಸಪ್ತರ್ಷಿಗಳಿಂದ ಸಹಿತನಾಗಿ ಪ್ರವರ್ತಕನಾಗಿರುತ್ತಾನೆ. ಅವನಿಗೂ ನೀನು ನನ್ನ ಅನುಗ್ರಹದಿಂದ ಮುಖ್ಯನಾಗಿರುತ್ತಿ. ಇದರಲ್ಲಿ ಸಂಶಯವಿಲ್ಲ.

ವ್ಯಾಸಃ

ಏವಂ ಸಾರಸ್ವತಮೃಷಿಮಪಾಂತರತಮಂ ತದಾ ।
ಉಕ್ತ್ವಾ ವಚನಮೀಶಾನಃ ಸಾಧಯಸ್ವೇತ್ಯಥಾಬ್ರವೀತ್ ॥೫೩॥

ವ್ಯಾಸರು– ಹೀಗೆ ಭಗವಂತನು ಸರಸ್ವತಿಯ ಪುತ್ರನಾದ ಅಪಾಂತರತಮನಿಗೆ ಹೇಳಿ ಮುಂದಿನ ಕಾರ್ಯಗಳನ್ನು ಸಾಧಿಸು ಎಂದು ಹೇಳಿದನು.

ಸೋಽಹಂ ತಸ್ಯ ಪ್ರಸಾದೇನ ದೇವಸ್ಯ ಹರಿಮೇಧಸಃ ।
ಅಪಾಂತರತಮಾ ನಾಮ ತತೋ ಜಾತೋಽಽಜ್ಞಯಾ ಹರೇಃ ।
ಪುನಶ್ಚ ಜಾತೋ ವಿಖ್ಯಾತೋ ವಸಿಷ್ಠಕುಲನಂದನಃ ॥೫೪॥

ಆ ಮಹಾವಿಷ್ಣುವಿನ ಅನುಗ್ರಹದಿಂದ ಅಪಾಂತರತಮ ಎಂಬ ಹೆಸರಿನಿಂದ ಹುಟ್ಟಿದೆನು. ಭಗವಂತನ ಆದೇಶದಂತೆ ಪುನಃ ವಸಿಷ್ಠ ಕುಲದಲ್ಲಿ ಪರಾಶರರ ಮಗನಾಗಿ ಅವತರಿಸಿದೆನು.

ತದೇತತ್ ಕಥಿತಂ ಜನ್ಮ ಮಯಾ ಪೂರ್ವಕಮಾತ್ಮನಃ ।
ನಾರಾಯಣಪ್ರಸಾದೇನ ತಥಾ ನಾರಾಯಣಾಂಶಜಮ್ ॥೫೫॥

ಶಿಷ್ಯರೇ, ನಾರಾಯಣನ ಅನುಗ್ರಹದಿಂದ, ನಾರಾಯಣನ ಅಂಶದಿಂದ ಹೇಗೆ ಅವತರಿಸಿದೆ ಎಂಬುದನ್ನು ನಿಮಗೆ ಹೇಳಿದ್ದೇನೆ.

ಮಯಾ ಹಿ ಸುಮಹತ್ತಪ್ತಂ ತಪಃ ಪರಮದಾರುಣಮ್ ।
ಪುರಾ ಮತಿಮತಾಂ ಶ್ರೇಷ್ಠಾಃ ಪರಮೇಣ ಸಮಾಧಿನಾ ॥೫೬॥

ಬುದ್ಧಿವಂತರಲ್ಲಿ ಶ್ರೇಷ್ಠರೇ, ನಾನು ಹಿಂದೆ ಶ್ರೇಷ್ಠವಾದ ಏಕಾಗ್ರತೆಯಿಂದ ಉಗ್ರವಾದ ತಪಸ್ಸನ್ನಾಚರಿಸಿದೆನು.

ಏತದ್ವಃ ಕಥಿತಂ ಸರ್ವಂ ಯನ್ಮಾಂ ಪೃಚ್ಛಥ ಪುತ್ರಕಾಃ ।
ಪೂರ್ವಜನ್ಮ ಭವಿಷ್ಯಂ ಚ ಭಕ್ತಾನಾಂ ಸ್ನೇಹತೋ ಮಯಾ ॥೫೭॥

ನೀವು ಕೇಳಿದ ಪ್ರಶ್ನೆಗನುಗುಣವಾಗಿ ಮಕ್ಕಳೇ, ನಾನು ಉತ್ತರಿಸಿದ್ದೇನೆ. ಗುರುಭಕ್ತರಾದ ನಿಮ್ಮ ಮೇಲಿನ ಪ್ರೀತಿಯಿಂದ ಜನ್ಮಾಂತರದ ಕಥೆಯನ್ನು, ಮುಂದೆ ಆಗುವುದನ್ನೂ ಹೇಳಿದ್ದೇನೆ.

ವೈಶಂಪಾಯನಃ

ಏಷ ತೇ ಕಥಿತಃ ಪೂರ್ವಂ ಸಂಭವೋಽಸ್ಮದ್ಗುರೋರ್ನೃಪ ।
ವ್ಯಾಸಸ್ಯಾಕ್ಲಿಷ್ಟಮನಸೋ ಯಥಾ ಪೃಷ್ಟಃ ಪುನಃ ಶೃಣು ॥೫೮॥

ವೈಶಂಪಾಯನ– ಜನಮೇಜಯನೇ, ನೀನು ಪ್ರಶ್ನಿಸಿದಂತೆ ನನ್ನ ಗುರುವಾದ, ದುಃಖಿತವಲ್ಲದ ಮನಸ್ಸನ್ನು ಹೊಂದಿದ ವ್ಯಾಸರ ವೃತ್ತಾಂತವನ್ನು ಹೇಳಿದ್ದೇನೆ. ಅದಕ್ಕೆ ಸಂಬಂಧಿಸಿದ ಇನ್ನೂ ಕೆಲವು ವಿಷಯಗಳನ್ನು ಹೇಳುತ್ತೇನೆ, ಕೇಳು.

ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ ।
ಜ್ಞಾನಾನ್ಯೇತಾನಿ ರಾಜರ್ಷೇ ವಿದ್ಧಿ ನಾನಾಮತಾನಿ ವೈ ॥೫೯॥

ರಾಜರ್ಷಿಯೇ, ಸಾಂಖ್ಯ , ಯೋಗ, ಆರಣ್ಯಕ, ವೇದಗಳು, ಪಾಶುಪತ - ಈ ಎಲ್ಲ ಜ್ಞಾನಗಳು ಒಂದೇ ಲಕ್ಷ್ಯವನ್ನು ಕುರಿತು ಹೇಳಿದ ನಾನಾ ಪ್ರಕಾರವಾದ ಅಭಿಪ್ರಾಯಗಳೆಂದು ತಿಳಿ.

ವ್ಯಾಖ್ಯಾನ ವಿಶೇಷ– ಇಲ್ಲಿ ಸಾಂಖ್ಯ ಎಂದರೆ ಷಡ್‌ದರ್ಶನದಲ್ಲಿ ಹೇಳಿದ ಸಾಂಖ್ಯಮತವು, ಯೋಗಮತವು ಎಂದು ಅಭಿಪ್ರಾಯ.

ಸಾಂಖ್ಯಸ್ಯ ವಕ್ತಾ ಕಪಿಲಃ ಪರಮರ್ಷಿಃ ಸ ಉಚ್ಯತೇ ।
ಹಿರಣ್ಯಗರ್ಭೋ ಯೋಗಸ್ಯ ವೇತ್ತಾ ನಾನ್ಯಃ ಪುರಾತನಃ ॥೬೦॥

ಸಾಂಖ್ಯಶಾಸ್ತ್ರವನ್ನು ಹೇಳಿದವನು ಕಪಿಲನು. ಅವನನ್ನು ಪರಮರ್ಷಿ ಎನ್ನುತ್ತಾರೆ. ಪುರಾತನವಾದ ಹಿರಣ್ಯಗರ್ಭನೇ ಯೋಗವನ್ನು ಚೆನ್ನಾಗಿ ತಿಳಿದವನು. ಅವನನ್ನು ಬಿಟ್ಟು ಯೋಗಜ್ಞರಾದವರು ಬೇರೆ ಯಾರೂ ಇಲ್ಲ.

ಅಪಾಂತರತಮಾಶ್ಚೈವ ವೇದಾಚಾರ್ಯಃ ಸ ಉಚ್ಯತೇ ।
ಪ್ರಾಚೀನಗರ್ಭಂ ತಮೃಷಿಂ ಪ್ರವದಂತೀಹ ಕೇಚನ ॥೬೧॥

ಅಪಾಂತರತಮನನ್ನು ವೇದಾಚಾರ್ಯನೆಂದೇ ಹೇಳುತ್ತಾರೆ. ಕೆಲವರು ಆ ಋಷಿಯನ್ನು ಪ್ರಾಚೀನಗರ್ಭನೆಂದು ಹೇಳುತ್ತಾರೆ.

ಉಮಾಪತಿರ್ಭೂತಪತಿಃ ಶ್ರೀಕಂಠೋ ಬ್ರಹ್ಮಣಃ ಸುತಃ ।
ಉಕ್ತವಾನಿದಮವ್ಯಗ್ರೋ ಜ್ಞಾನಂ ಪಾಶುಪತಂ ಶಿವಃ ॥೬೨॥

ಬ್ರಹ್ಮನ ಮಗನಾದ, ಭೂತಪತಿಯಾದ, ಶ್ರೀಕಂಠನಾದ, ಉಮಾಪತಿಯಾದ ಶಿವನು ಏಕಾಗ್ರಮನಸ್ಸಿನಿಂದ ಪಾಶುಪತ ಶಾಸ್ತ್ರವನ್ನು ಉಪದೇಶಿಸಿದನು.

ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್ ।
ಜ್ಞಾನೇಷ್ವೇತೇಷು ರಾಜೇಂದ್ರ ಸರ್ವೇಷ್ವೇತದ್ ವಿಶಿಷ್ಯತೇ ॥೬೩॥

ಈ ಎಲ್ಲಾ ಜ್ಞಾನಗಳಲ್ಲಿ ಪಂಚರಾತ್ರಜ್ಞಾನವೇ ಶ್ರೇಷ್ಠವಾದುದು. ಕಾರಣ ಸಮಗ್ರ ಪಂಚರಾತ್ರವನ್ನು ಹೇಳಿದವನು ನಾರಾಯಣನೇ.

ವ್ಯಾಖ್ಯಾನ ವಿಶೇಷ– ಪಂಚರಾತ್ರಾಗಮ, ವೇದಾರಣ್ಯಕಗಳು ಒಂದೇ ಅಭಿಪ್ರಾಯ ಉಳ್ಳವುಗಳು. ಆದ್ದರಿಂದ ಪಂಚರಾತ್ರಾಗಮಕ್ಕೆ ಮಹತ್ವವನ್ನು ಹೇಳಿದುದರಿಂದ ವೇದಾರಣ್ಯಕಗಳಿಗೂ ವೈಶಿಷ್ಟ್ಯವನ್ನು ಹೇಳಿದಂತಾಯಿತು. ವೇದ, ಆರಣ್ಯಕ, ಪಂಚರಾತ್ರ ಇವುಗಳು ಏಕಾರ್ಥಗಳುಳ್ಳವಾದುದರಿಂದ ಪ್ರಾಮಾಣಿಕವಾದವುಗಳು. ಸಾಂಖ್ಯ, ಯೋಗ, ಪಾಶುಪತ – ಈ ಮೂರು ಶಾಸ್ತ್ರಗಳು ಪಂಚರಾತ್ರಕ್ಕೆ ವಿರುದ್ಧವಾದ ಅರ್ಥವನ್ನು ಬೋಧಿಸುವುದರಿಂದ ಅಪ್ರಮಾಣಿಕವಾದವುಗಳು ಎಂದೇ ಅಭಿಪ್ರಾಯ.

ಯಥಾಗಮಂ ಯಥಾಜ್ಞಾನಂ ನಿಷ್ಠಾ ನಾರಾಯಣಃ ಪ್ರಭುಃ ।
ನ ಚೈನಮೇವಂ ಜಾನಂತಿ ತಮೋಭೂತಾ ವಿಶಾಂ ಪತೇ ॥೬೪॥

ಎಲ್ಲ ಶಾಸ್ತ್ರಗಳಲ್ಲಿಯೂ, ವೇದಗಳಲ್ಲಿಯೂ, ಅನುಭವದಲ್ಲಿಯೂ ಪ್ರಭುವಾದ ನಾರಾಯಣನೊಬ್ಬನೇ ಸ್ಥಿರವಾದ ಜ್ಞಾನಿಯು. ಆದರೆ ಭಗವಂತನ ಸರ್ವೋತ್ತಮತ್ವ ಜ್ಞಾನವನ್ನು ಅಜ್ಞಾನಿಗಳಾದವರು ತಿಳಿದಿರುವುದಿಲ್ಲ.

ತಮೇವ ಶಾಸ್ತ್ರಕರ್ತಾರಂ ಪ್ರವದಂತಿ ಮನೀಷಿಣಃ ।
ನಿಷ್ಠಾಂ ನಾರಾಯಣಮೃಷಿಂ ನಾನ್ಯೋಸ್ತೀತಿ ಚ ವಾದಿನಃ ॥೬೫॥

ಶಾಸ್ತ್ರಕರ್ತೃಗಳಾದ ಜ್ಞಾನಿಗಳು ನಾರಾಯಣಋಷಿಯೇ ಸಕಲ ಶಾಸ್ತ್ರಗಳಿಗೂ ಪರಮಲಕ್ಷ್ಯನೆಂದು ಹೇಳುತ್ತಾರೆ. ಅವನಲ್ಲದೆ ಬೇರೆ ಯಾರೂ ಅಲ್ಲವೆಂಬುದೇ ನನ್ನ ಅಭಿಪ್ರಾಯವು.

ನಿಃಸಂಶಯೇಷು ಸರ್ವೇಷು ನಿತ್ಯಂ ವಸತಿ ವೈ ಹರಿಃ ।
ಸಸಂಶಯಾನ್ಹೇತುಬಲಾನ್ನಾಧ್ಯಾವಸತಿ ಮಾಧವಃ ॥೬೬॥

ಜ್ಞಾನದಿಂದ ಯಾರಿಗೆ ಸಂಶಯವು ಪರಿಹಾರವಾಗುತ್ತದೋ ಅಂತಹವರ ಹೃದಯದಲ್ಲಿ ಶ್ರೀಹರಿಯು ನಿತ್ಯವೂ ವಾಸಿಸುತ್ತಾನೆ. ಕುತರ್ಕ ಪ್ರಭಾವದಿಂದ ಪರಮಾತ್ಮನ ಬಗ್ಗೆ ಸಂಶಯವನ್ನು ಹೊಂದಿದವರ ಹೃದಯದಲ್ಲಿ ಮಾಧವನು ಎಂದೂ ವಾಸಿಸುವುದಿಲ್ಲ.

ಪಂಚರಾತ್ರವಿದೋ ಯೇ ತು ಯಥಾಕ್ರಮಪರಾ ನೃಪ ।
ಏಕಾಂತಭಾವೋಪಗತಾ ವಾಸುದೇವಂ ವಿಶಂತಿ ತೇ ॥೬೭॥

ರಾಜನೇ, ಯಾರು ಪಂಚರಾತ್ರಾಗಮವನ್ನು ಚೆನ್ನಾಗಿ ತಿಳಿದಿರುತ್ತಾರೋ, ಅದರಲ್ಲಿ ಹೇಳಿದಂತೆ ಕ್ರಮವಾಗಿ ಭಗವಂತನನ್ನು ಆರಾಧಿಸುತ್ತಾರೋ, ಅನನ್ಯವಾದ ಭಕ್ತಿಯನ್ನು ಮಾಡುತ್ತಾರೋ ಅವರು ವಾಸುದೇವನನ್ನು ಹೊಂದುತ್ತಾರೆ.

ಸಾಂಖ್ಯಂ ಚ ಯೋಗಂ ಚ ಸನಾತನೇ ದ್ವೇ
ವೇದಾಶ್ಚ ಸರ್ವೇ ನಿಖಿಲೇನ ರಾಜನ್ ।
ಸರ್ವೈಃ ಸಮಸ್ತೈರ್ಋಷಿಭಿರ್ನಿರುಕ್ತೋ
ನಾರಾಯಣೋ ವಿಶ್ವಮಿದಂ ಪುರಾಣಮ್ ॥೬೮॥

ಸಮಸ್ತ ಋಷಿಗಳಿಂದ ಸಾಂಖ್ಯ , ಯೋಗ, ವೇದ, ಪಂಚರಾತ್ರಾದಿ ಸಚ್ಛಾಸ್ತ್ರಗಳಿಂದ ನಾರಾಯಣನೇ ಹೇಳಲ್ಪಟ್ಟಿದ್ದಾನೆ. ಅನಾದಿಕಾಲೀನವಾದ ವಿಶ್ವವು ನಾರಾಯಣನಿಂದ ನಿಯಮ್ಯವಾಗಿದೆ ಎಂದು ಋಷಿಗಳು ಹೇಳುತ್ತಾರೆ.

ಶುಭಾಶುಭಂ ಕರ್ಮ ಸಮೀರಿತಂ ಯತ್
ಪ್ರವರ್ತತೇ ಸರ್ವಲೋಕೇಷು ಕಿಂಚಿತ್ ।
ತಸ್ಮಾದೃಷೇಸ್ತದ್ಭವತೀತಿ ವಿದ್ಯಾದ್
ದಿವ್ಯಂತರಿಕ್ಷೇ ಭುವಿ ಚಾಪ್ಸು ಚಾಪಿ ॥೬೯॥

ಸ್ವರ್ಗ, ಅಂತರಿಕ್ಷ, ಭೂಮಿ, ನೀರು, ಸಮಸ್ತ ಸ್ಥಳಗಳಲ್ಲಿಯೂ, ಎಲ್ಲ ಲೋಕಗಳಲ್ಲಿಯೂ, ಶುಭಾಶುಭ ಕರ್ಮಗಳಲ್ಲಿಯೂ ನಾರಾಯಣನೇ ಸನ್ನಿಹಿತನಾಗಿ ವ್ಯಾಪಾರ ಮಾಡುತ್ತಾನೆ ಎಂದು ತಿಳಿಯಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ವ್ಯಾಸಪ್ರಾದುರ್ಭಾವೋ ನಾಮ
ದ್ವ್ಯಶೀತ್ಯುತ್ತರಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ಮೂರನೆಯ ಅಧ್ಯಾಯ

ಬ್ರಹ್ಮನಿಂದ ನಾರಾಯಣನ ಮಹಿಮೆಯ ಕಥನ.

ಜನಮೇಜಯಃ

ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು ।
ಕೋ ಹ್ಯತ್ರ ಪುರುಷಃ ಶ್ರೇಷ್ಠಃ ಕೋ ವಾ ಯೋನಿರಿಹೋಚ್ಯತೇ ॥೧॥

ಜನಮೇಜಯ– ಪುರುಷರು ಅನೇಕರೋ ಅಥವಾ ಒಬ್ಬನೇ ಇರುವನೋ? ಅನೇಕರು ಇರುವುದಾದರೆ ಎಲ್ಲರಿಗಿಂತ ಶ್ರೇಷ್ಠನಾದ ಪುರುಷನಾದವನು ಯಾರು? ಎಲ್ಲರಿಗೂ ಕಾರಣನಾದವನು ಯಾರೆಂದು ಹೇಳುತ್ತಾರೆ?

ವೈಶಂಪಾಯನಃ

ಬಹವಃ ಪುರುಷಾ ಲೋಕೇ ಸಾಂಖ್ಯಯೋಗವಿಚಾರಿಣಾಮ್ ।
ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ ॥೨॥

ವೈಶಂಪಾಯನ– ಕುರುಕುಲಶ್ರೇಷ್ಠನೇ, ಸಾಂಖ್ಯಯೋಗಗಳ ಚಿಂತಕರಲ್ಲಿ ಈ ಜಗತ್ತಿನಲ್ಲಿ ಪುರುಷರು ಅನೇಕರಿದ್ದಾರೆ. ಅವರು ಏಕಪುರುಷ ವಾದವನ್ನು ಹೇಳಲು ಇಚ್ಛಿಸುವುದಿಲ್ಲ.

ಬಹೂನಾಂ ಪುರುಷಾಣಾಂ ಚ ಯಥೈಕಾ ಯೋನಿರುಚ್ಯತೇ ।
ತಥಾ ತಂ ಪುರುಷಂ ವಿಶ್ವಂ ವ್ಯಾಖ್ಯಾಸ್ಯಾಮಿ ಗುಣಾಧಿಕಮ್ ॥೩॥

ನಮಸ್ಕೃತ್ವಾ ತು ಗುರವೇ ವ್ಯಾಸಾಯಾಮಿತತೇಜಸೇ ।
ತಪೋಯುಕ್ತಾಯ ದಾಂತಾಯ ವಂದ್ಯಾಯ ಪರಮರ್ಷಯೇ ॥೪॥

ಪರಮಗುರುಗಳಾದ, ಆತ್ಮಜ್ಞಾನಿಗಳಾದ, ತಪಸ್ವಿಗಳಾದ, ಜಿತೇಂದ್ರಿಯರಾದ, ಸರ್ವವಂದ್ಯರಾದ, ಅಮಿತತೇಜಸ್ವಿಗಳಾದ ವ್ಯಾಸರಿಗೆ ನಮಸ್ಕರಿಸಿ ಅನೇಕ ಪುರುಷರಿಗೂ ಯಾವ ಒಬ್ಬ ಪುರುಷನೇ ಕಾರಣನಾಗಿದ್ದಾನೋ ಅಂಥ ಗುಣಾಧಿಕನಾದ, ವಿಶ್ವಾತ್ಮನಾದ ಪುರುಷೋತ್ತಮನನ್ನು ವರ್ಣಿಸುತ್ತೇನೆ ಕೇಳು.

ಇದಂ ಪುರುಷಸೂಕ್ತಂ ಹಿ ಸರ್ವವೇದೇಷು ಪಾರ್ಥಿವ ।
ಋತಂ ಸತ್ಯಂ ಚ ವಿಖ್ಯಾತಮೃಷಿಸಿಂಹೇನ ಚಿಂತಿತಮ್ ॥೫॥

ಋಷಿಸಿಂಹನಾದ ನಾರಾಯಣನಿಂದ ದೃಷ್ಟವಾದ, ಋತವೂ, ಸತ್ಯವೂ ಎನಿಸಿದ ಪುರುಷಸೂಕ್ತವು ವೇದಗಳಲ್ಲಿ ಕಂಡುಬರುತ್ತದೆ.

ಉತ್ಸರ್ಗೇಣಾಪವಾದೇನ ಋಷಿಭಿಃ ಕಪಿಲಾದಿಭಿಃ ।
ಅಧ್ಯಾತ್ಮಚಿಂತಾಮಾಶ್ರಿತ್ಯ ಶಾಸ್ತ್ರಾಣ್ಯುಕ್ತಾನಿ ಭಾರತ ॥೬॥

ಕಪಿಲಾದಿ ಋಷಿಗಳಿಂದ ಸಾಮಾನ್ಯ-ವಿಶೇಷ ಎಂಬ ಶಾಸ್ತ್ರಗಳ ಹಿನ್ನೆಲೆಯಲ್ಲಿ ಅಧ್ಯಾತ್ಮ ಚಿಂತನೆಯನ್ನು ಮಾಡಿ ಅನೇಕ ಶಾಸ್ತ್ರಗಳನ್ನು ಬೋಧಿಸಿರುತ್ತಾರೆ.

ಸಮಾಸತಸ್ತು ಯದ್ವ್ಯಾಸಃ ಪುರುಷೈಕತ್ವಮುಕ್ತವಾನ್ ।
ತತ್ತೇऽಹಂ ಸಂಪ್ರವಕ್ಷ್ಯಾಮಿ ಪ್ರಸಾದಾದಮಿತೌಜಸಃ ॥೭॥

ಸಂಕ್ಷಿಪ್ತವಾಗಿ ಪುರುಷನಾಮಕನಾದ ಭಗವಂತನ ಏಕತ್ವವನ್ನು ಹೇಗೆ ಹೇಳಿದ್ದಾರೋ ಅದನ್ನೇ ನಾನು ನಿನಗೆ ಮಹಾತೇಜಸ್ವಿಗಳ ಅನುಗ್ರಹದಿಂದ ಹೇಳುತ್ತೇನೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಬ್ರಹ್ಮಣಾ ಸಹ ಸಂವಾದಂ ತ್ರ್ಯಂಬಕಸ್ಯ ವಿಶಾಂಪತೇ ॥೮॥

ಈ ವಿಷಯದಲ್ಲಿ ಹಿಂದೆ ಬ್ರಹ್ಮ-ರುದ್ರರಿಗೆ ನಡೆದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಕ್ಷೀರೋದಸ್ಯ ಸಮುದ್ರಸ್ಯ ಮಧ್ಯೇ ಹಾಟಕಸಪ್ರಭಃ ।
ವೈಜಯಂತ ಇತಿ ಖ್ಯಾತಃ ಪರ್ವತಪ್ರವರೋ ನೃಪ ॥೯॥

ಕ್ಷೀರಸಮುದ್ರದ ನಡುಭಾಗದಲ್ಲಿ ಬಂಗಾರದ ಬಣ್ಣಕ್ಕೆ ಸಮಾನವಾದ ಪ್ರಭೆಯಿಂದ ಕೂಡಿರುವ ವೈಜಯಂತ ಎಂಬ ಹೆಸರಿನಿಂದ ಪ್ರಸಿದ್ಧವಾದ ಶ್ರೇಷ್ಠ ಪರ್ವತವಿದೆ.

ತತ್ರಾಧ್ಯಾತ್ಮಗತಿಂ ದೇವ ಏಕಾಕೀ ಪ್ರವಿಚಿಂತಯನ್ ।
ವೈರಾಜಸದನೇ ನಿತ್ಯಂ ವೈಜಯಂತಂ ನಿಷೇವತೇ ॥೧೦॥

ಅಧ್ಯಾತ್ಮಮಾರ್ಗವನ್ನು ಚೆನ್ನಾಗಿ ಚಿಂತಿಸುತ್ತಾ, ಏಕಾಕಿಯಾಗಿ ಬ್ರಹ್ಮನು ಪ್ರತಿದಿನವೂ ತನ್ನ ಲೋಕದಿಂದ ಈ ವೈಜಯಂತ ಪರ್ವತಕ್ಕೆ ಆಗಮಿಸಿ ಅದನ್ನು ಸೇವಿಸುತ್ತಿದ್ದಾನೆ.

ಅಥ ತತ್ರಾಸತಸ್ತಸ್ಯ ಚತುರ್ವಕ್ತ್ರಸ್ಯ ಧೀಮತಃ ।
ಲಲಾಟಪ್ರಭವಃ ಪುತ್ರಃ ಶಿವ ಆಗಾದ್ಯದೃಚ್ಛಯಾ ।
ಆಕಾಶೇನೈವ ಯೋಗೀಶಃ ಪುರಾ ತ್ರಿನಯನಃ ಪ್ರಭುಃ ॥೧೧॥

ಒಮ್ಮೆ ಜ್ಞಾನಿಯಾದ ಬ್ರಹ್ಮನು ವೈಜಯಂತ ಪರ್ವತದಲ್ಲಿ ವಾಸ ಮಾಡುವ ಸಂದರ್ಭದಲ್ಲಿ ಅವನ ಲಲಾಟದಿಂದ ಹುಟ್ಟಿದ ಮಹಾಯೋಗಿಯಾದ ಮೂರು ಕಣ್ಣಿನ ಪರಶಿವನು ಯದೃಚ್ಛೆಯಿಂದ ಆಕಾಶ ಮಾರ್ಗದಲ್ಲಿ ಆಗಮಿಸಿದನು.

ತತಃ ಖಾನ್ನಿಪಪಾತಾಶು ಧರಣೀಧರಮೂರ್ಧನಿ ।
ಅಗ್ರತಶ್ಚಾಭವತ್ ಪ್ರೀತೋ ವವಂದೇ ಚಾಪಿ ಪಾದಯೋಃ ॥೧೨॥

ಅವನು ವೈಜಯಂತ ಪರ್ವತದಲ್ಲಿ ಕುಳಿತಿರುವ ಬ್ರಹ್ಮನನ್ನು ಕಂಡು ಕೂಡಲೇ ಆಕಾಶದಿಂದ ಪರ್ವತಶಿಖರದಲ್ಲಿಳಿದು, ಬ್ರಹ್ಮನ ಪಾದಗಳಿಗೆ ಪ್ರೀತನಾಗಿ ನಮಸ್ಕರಿಸಿದನು.

ತಂ ಪಾದಯೋರ್ನಿಪತಿತಂ ದೃಷ್ಟ್ವಾ ಸವ್ಯೇನ ಪಾಣಿನಾ ।
ಉತ್ಥಾಪಯಾಮಾಸ ತದಾ ಪ್ರಭುರೇಕಃ ಪ್ರಜಾಪತಿಃ ॥೧೩॥

ಉವಾಚ ಚೈನಂ ಭಗವಾಂಶ್ಚಿರಸ್ಯಾಗತಮಾತ್ಮಜಮ್ ।
ಸ್ವಾಗತಂ ತೇ ಮಹಾಬಾಹೋ ದಿಷ್ಟ್ಯಾ ಪ್ರಾಪ್ತೋಽಸಿ ಮೇಽಂತಿಕಮ್ ॥

ನತಮಸ್ತಕನಾದ ಮಹರುದ್ರನನ್ನು ಚತುರ್ಮುಖ ಬ್ರಹ್ಮನು ಎಡಗೈಯಿಂದ ಹಿಡಿದು ಎಬ್ಬಿಸಿದನು. ಒಬ್ಬನೇ ಪ್ರಭುವೆನಿಸಿದ ಪ್ರಜಾಪತಿಯು ಶಂಕರನನ್ನು ಕುರಿತು ಹೀಗೆ ಹೇಳಿದನು: ಮಹಾಬಾಹುವೇ, ಶಂಕರನೇ, ನಿನ್ನನ್ನು ಪ್ರೀತಿಯಿಂದ ಸ್ವಾಗತಿಸುತ್ತೇನೆ. ನನ್ನ ಅದೃಷ್ಟದಿಂದ ನನ್ನ ಬಳಿಗೆ ನೀನು ಆಗಮಿಸಿರುವೆ.

ಕಚ್ಚಿತ್ತೇ ಕುಶಲಂ ಪುತ್ರ ಸ್ವಾಧ್ಯಾಯತಪಸೋಃ ಸದಾ ।
ನಿತ್ಯಮುಗ್ರತಪಾಸ್ತ್ವಂ ಹಿ ತತಃ ಪೃಚ್ಛಾಮಿ ತೇ ಪುನಃ ॥೧೫॥

ಮಗನೇ ನೀನು ಕ್ಷೇಮದಿಂದಿರುವೆಯಾ? ನಿನ್ನ ಸ್ವಾಧ್ಯಾಯ, ತಪಸ್ಸುಗಳು ಯಾವಾಗಲೂ ನಡೆಯುತ್ತಿವೆಯಾ? ನೀನು ನಿತ್ಯ ಉಗ್ರತಪೋನಿರತನಾದುದರಿಂದ ಪುನಃ ಆ ತಪಸ್ಸಿನ ಕುರಿತೇ ಪ್ರಶ್ನಿಸುತ್ತೇನೆ.

ರುದ್ರಃ

ತ್ವತ್ಪ್ರಸಾದೇನ ಭಗವನ್ ಸ್ವಾಧ್ಯಾಯತಪಸೋರ್ಮಮ ।
ಕುಶಲಂ ಚಾವ್ಯಯಂ ಚೈವ ಸರ್ವಸ್ಯ ಜಗತಸ್ತಥಾ ॥೧೬॥

ರುದ್ರ– ಪೂಜ್ಯನೇ, ನಿನ್ನ ಅನುಗ್ರಹದಿಂದ ನನ್ನ ಸ್ವಾಧ್ಯಾಯ, ತಪಸ್ಸುಗಳು ನಿರಾತಂಕವಾಗಿ ನಡೆಯುತ್ತಿವೆ. ಕ್ಷೇಮದಿಂದ ಇದ್ದೇನೆ. ಸಮಸ್ತ ಜಗತ್ತೂ ಕ್ಷೇಮದಿಂದ ಕೂಡಿದೆ.

ಚಿರದೃಷ್ಟೋ ಹಿ ಭಗವಾನ್ಪ್ರೇರಾಜಸದನೇ ಮಯಾ ।
ತತೋಽಹಂ ಪರ್ವತಂ ಪ್ರಾಪ್ತಸ್ತ್ವಮಂ ತ್ವತ್ಪಾದಸೇವಿತಮ್ ॥೧೭॥

ಬಹಳ ದಿವಸಗಳ ಹಿಂದೆ ಬ್ರಹ್ಮಲೋಕದಲ್ಲಿ ನಿನ್ನನ್ನು ನಾನು ಕಂಡಿದ್ದೆನು. ನಿನ್ನ ಚರಣಗಳಿಂದ ಸೇವಿತವಾದ ಈ ಪರ್ವತಕ್ಕೆ ನಿನ್ನನ್ನು ಪುನಃ ನೋಡಬೇಕೆಂದು ನಾನು ಬಂದಿದ್ದೇನೆ.

ಕೌತೂಹಲಂ ಚಾಪಿ ಹಿ ಮೇ ಏಕಾಂತಗಮನೇನ ತೇ ।
ನೈತತ್ ಕಾರಣಮಲ್ಪಂ ಹಿ ಭವಿಷ್ಯತಿ ಪಿತಾಮಹ ॥೧೮॥

ನೀನು ಏಕಾಂತದಲ್ಲಿರುವುದನ್ನು ಕಂಡು ಕುತೂಹಲವುಂಟಾಗಿದೆ. ತಂದೆಯೇ, ನೀನು ಏಕಾಂತದಲ್ಲಿರುವ ಕಾರಣ ಅಲ್ಪವಾದ ಕಾರಣವಾಗಿರುವುದಿಲ್ಲ ಎನಿಸುತ್ತಿದೆ.

ಕಿಂ ನು ತತ್ ಸದನಂ ಶ್ರೇಷ್ಠಂ ಕ್ಷುತ್ಪಿಪಾಸಾವಿವರ್ಜಿತಮ್ ।
ಸುರಾಸುರೈರಧ್ಯುಷಿತಮೃಷಿಭಿಶ್ಚಾಮಿತಪ್ರಭೈಃ ॥೧೯॥

ಗಂಧರ್ವೈರಪ್ಸರೋಭಿಶ್ಚ ಸತತಂ ಸನ್ನಿಷೇವಿತಮ್ ।
ಉತ್ಸೃಜ್ಯೇಮಂ ಗಿರಿವರಂ ಕಿನ್ನುತ್ಯಂ ಪ್ರಾಪ್ತವಾನಸಿ ॥೨೦॥

ನೀನು ಹಸಿವೆ-ನೀರಡಿಕೆಗಳಿಂದ ದೂರವಾದ, ಸುರ-ಅಸುರರಿಂದ ಸೇವಿತವಾದ, ಅಮಿತ ಪ್ರಭೆಯುಳ್ಳ ಋಷಿಗಳಿಂದ, ಗಂಧರ್ವಾಪ್ಸರೆಯರಿಂದ ನಿರಂತರ ಸೇವಿಸಲ್ಪಡುವ, ಶ್ರೇಷ್ಠವಾದ ಸತ್ಯಲೋಕವನ್ನು ತೊರೆದು ವೈಜಯಂತಗಿರಿಗೆ ಆಗಮಿಸಲು ಏನು ಕಾರಣವು? ಯಾವ ಕಾರಣದಿಂದ ಇಲ್ಲಿಗೆ ಆಗಮಿಸಿರುತ್ತಿ ?

ಬ್ರಹ್ಮಾ

ವೈಜಯಂತೋ ಗಿರಿವರಃ ಸತತಂ ಸೇವ್ಯತೇ ಮಯಾ ।
ಅತ್ಯೇಕಾಗ್ರೇಣ ಮನಸಾ ಪುರುಷಶ್ಚಿಂತ್ಯತೇ ವಿರಾಟ್ ॥೨೧॥

ಬ್ರಹ್ಮಾ- ಮಗನೇ, ವೈಜಯಂತ ಪರ್ವತವನ್ನು ನಾನು ಯಾವಾಗಲೂ ಸೇವಿಸುತ್ತಲೇ ಇದ್ದೇನೆ. ಇಲ್ಲಿ ನಾನು ಏಕಾಕಿಯಾಗಿದ್ದು ಏಕಾಂತವಾದ ಮನಸ್ಸಿನಿಂದ ವಿರಾಟ್ ಪುರುಷನಾಮಕನಾದ ಭಗವಂತನನ್ನು ಧ್ಯಾನಿಸುತ್ತಿರುತ್ತೇನೆ.

ರುದ್ರಃ

ಬಹವಃ ಪುರುಷಾ ಬ್ರಹ್ಮಂಸ್ತ್ವಯಾ ಸೃಷ್ಟಾಃ ಸ್ವಯಂಭುವಾ ।
ಸೃಜ್ಯಂತೇ ಚಾಪರೇ ಬ್ರಹ್ಮನ್ ಸ ಚೈಕಃ ಪುರುಷೋ ವಿರಾಟ್ ॥೨೨॥

ರುದ್ರ– ಬ್ರಹ್ಮದೇವನೇ, ನೀನು ಅನೇಕ ಪುರುಷರನ್ನು ಸೃಷ್ಟಿಮಾಡಿರುವೆ. ಇನ್ನೂ ಸೃಷ್ಟಿ ಮಾಡಲಿರುವೆ. ಆ ವಿರಾಟ್ ಪುರುಷನು ನೀನು ಸೃಷ್ಟಿಸಿರುವ ಪುರುಷರಲ್ಲಿ ಒಬ್ಬನಾಗಿದ್ದಾನೆ.

ಕೋ ಹ್ಯಸೌ ಚಿಂತ್ಯತೇ ಬ್ರಹ್ಮಂಸ್ತ್ವಯಾ ವೈ ಪುರುಷೋತ್ತಮಃ ।
ಏತನ್ಮೇ ಸಂಶಯಂ ಬ್ರೂಹಿ ಮಹತ್ ಕೌತೂಹಲಂ ಹಿ ಮೇ ॥೨೩॥

ಹೀಗಿರಲು ಅಂತಹ ಪುರುಷೋತ್ತಮನನ್ನು ಚಿಂತಿಸಲು ಏನು ಕಾರಣವು? ಅವನ ವೈಶಿಷ್ಟ್ಯವೇನು? ನಿನಗಿಂತಲೂ ಶ್ರೇಷ್ಠನಾದ ಅವನು ಯಾರು? ಈ ವಿಷಯದಲ್ಲಿ ನನಗೆ ಮಹತ್ತಾದ ಕುತೂಹಲವಿದೆ. ನನ್ನ ಸಂಶಯವನ್ನು ಪರಿಹರಿಸು.

ಬ್ರಹ್ಮಾ

ಬಹವಃ ಪುರುಷಾಃ ಪುತ್ರ ಯೇ ತ್ವಯಾ ಸಮುದಾಹೃತಾಃ ।
ಏವಮೇತದತಿಕ್ರಾಂತಂ ದ್ರಷ್ಟವ್ಯಂ ನೈವಮಿತ್ಯಪಿ ।
ಆಧಾರಂ ತು ಪ್ರವಕ್ಷ್ಯಾಮಿ ಏತಸ್ಯ ಪುರುಷಸ್ಯ ತೇ ॥೨೪॥

ಬ್ರಹ್ಮಾ– ಮಗನೇ, ನಾನು ಸೃಷ್ಟಿಸಿರುವ ಅನೇಕ ಪುರುಷರ ವಿಷಯವಾಗಿ ನೀನು ಹೇಳಿರುವೆ. ಆದರೆ ನಿನ್ನ ಈ ಮಾತು ಅತ್ಯಂತ ಕಠಿಣವಾದ ಮಾತಾಗಿರುತ್ತದೆ. ನನ್ನಿಂದ ಸೃಷ್ಟಿಆಗದೆ ಇರುವ, ನನ್ನನ್ನೂ ಮೀರಿ ನಿಂತಿರುವ ಪರದೈವವನ್ನು ನೀನು ಚಿಂತಿಸಬೇಕು. ಅದನ್ನು ನಿರಾಕರಿಸುವುದು ಸರಿಯಾದುದಲ್ಲ. ಅನೇಕ ಪುರುಷರಲ್ಲಿ ನನಗೂ ಆಧಾರನಾದ ಪರಮಪುರುಷನನ್ನು ಹೇಳುತ್ತೇನೆ, ಕೇಳು.

ಬಹೂನಾಂ ಪುರುಷಾಣಾಂ ಸ ಯಥೈಕಾ ಯೋನಿರುಚ್ಯತೇ ।
ತಥಾ ತಂ ಪುರುಷಂ ವಿಶ್ವಂ ಪರಮಂ ಸುಮಹತ್ತಮಮ್ ।
ನಿರ್ಗುಣಂ ನಿರ್ಗುಣಾ ಭೂತ್ವಾ ಪ್ರವಿಶಂತಿ ಸನಾತನಮ್ ॥೨೫॥

ಅನೇಕ ಪುರುಷರಿಗೆ ಮುಖ್ಯಕಾರಣನಾದವನು ಆ ಪರಬ್ರಹ್ಮನೇ ಆಗಿರುತ್ತಾನೆ. ಆ ರೀತಿಯಾಗಿ ಅತ್ಯಂತ ಶ್ರೇಷ್ಠನೆನಿಸಿದ ವಿಶ್ವನಾಮಕನಾದ ಪುರುಷನನ್ನು ನೀನು

ಚಿಂತಿಸಬೇಕು. ಪ್ರಾಕೃತ ಗುಣರಹಿತನಾದ, ಸನಾತನನಾದ ಭಗವಂತನನ್ನು ಚಿಂತಿಸುತ್ತಾ ಇರುವ ಸಾಧಕರು ಪ್ರಾಕೃತ ಗುಣಗಳನ್ನು ಕಳೆದುಕೊಂಡು ಅವನನ್ನೇ ಹೊಂದುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ತ್ರ್ಯಶೀತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ನಾಲ್ಕನೆಯ ಅಧ್ಯಾಯ

ನಾರಾಯಣನ ಮಹಿಮೆಯ ವರ್ಣನೆ

ಬ್ರಹ್ಮಾ

ಶೃಣು ಪುತ್ರ ಯಥಾ ಹ್ಯೇಷ ಪುರುಷಃ ಶಾಶ್ವತೋऽವ್ಯಯಃ ।
ಅಕ್ಷಯಶ್ಚಾಪ್ರಮೇಯಶ್ಚ ಸರ್ವಗಶ್ಚ ನಿರುಚ್ಯತೇ ॥೧॥

ಬ್ರಹ್ಮಾ– ವಿರಾಟ್ ಪುರುಷನು ಹೇಗೆ ಶಾಶ್ವತನೂ, ಅವ್ಯಯನೂ, ಅಕ್ಷಯನೂ, ಅಪ್ರಮೇಯನೂ, ಸರ್ವಾಂತರ್ಯಾಮಿಯೂ ಎನ್ನುವುದನ್ನು ಹೇಳುತ್ತೇನೆ, ಕೇಳು.

ನ ಸ ಶಕ್ಯಸ್ತ್ವಯಾ ದ್ರಷ್ಟುಂ ಮಯಾನ್ಯೈರ್ವಾಪಿ ಸತ್ತಮ ।
ಸಗುಣೋ ನಿರ್ಗುಣೋ ವಿಶ್ವೋ ಜ್ಞಾನದೃಶ್ಯೋ ಹ್ಯಸೌ ಸ್ಮೃತಃ ॥೨॥

ಪ್ರಾಕೃತಗುಣರಹಿತನಾದ, ಗುಣಪರಿಪೂರ್ಣನಾದ, ವಿಶ್ವನೆನಿಸಿದ, ಜ್ಞಾನದಿಂದಲೇ ಗಮ್ಯನಾದ, ಸರ್ವೋತ್ತಮನಾದ ಭಗವಂತನು ನಿನ್ನಿಂದಲೂ ನೋಡಲು ಸಾಧ್ಯವಿಲ್ಲ. ನನ್ನಿಂದಲೂ ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ಬೇರೆ ಯಾರಿಂದಲೂ ಅವನನ್ನು ಪೂರ್ಣವಾಗಿ ನೋಡಲು ಸಾಧ್ಯವಿಲ್ಲ.

ಅಶರೀರಃ ಶರೀರೇಷು ಸರ್ವೇಷು ನಿವಸತ್ಯಸೌ ।
ವಸನ್ನಪಿ ಶರೀರೇಷು ನ ಸ ಲಿಪ್ಯತಿ ಕರ್ಮಭಿಃ ॥೩॥

ಶರೀರವನ್ನು ಹೊಂದಿರುವ ಸಮಸ್ತ ಪ್ರಾಣಿ ಪ್ರಪಂಚದಲ್ಲಿ ಪ್ರಾಕೃತಶರೀರ ರಹಿತನಾದ, ಚಿನ್ಮಯನಾದ ಭಗವಂತನು ಅಂತರ್ಯಾಮಿಯಾಗಿ ವಾಸಿಸುತ್ತಿದ್ದಾನೆ.

ನಮ್ಮ ಶರೀರಗಳಲ್ಲಿ ಅಂತರ್ಯಾಮಿಯಾಗಿ ವಾಸಿಸುತ್ತಿದ್ದರೂ ಈ ಜೀವರಿಗೆ ಸಂಬಂಧಿಸಿದ ಕರ್ಮಲೇಪಗಳು ಅವನಿಗಿರುವುದಿಲ್ಲ.

ಮಮಾಂತರಾತ್ಮಾ ತವ ಚ ಯೇ ಚಾನ್ಯೇ ದೇಹಸಂಜ್ಞಿತಾಃ ।
ಸರ್ವೇಷಾಂ ಸಾಕ್ಷಿಭೂತೋಽಸೌ ನ ಗ್ರಾಹ್ಯಃ ಕೇನಚಿತ್ ಕ್ವಚಿತ್ ॥೪॥

ದೇಹವನ್ನು ಹೊಂದಿರುವ ಯಾವ ಯಾವ ಜೀವರಿದ್ದಾರೋ ಅವರೆಲ್ಲರಲ್ಲಿಯೂ ಇವನೇ ಅಂತರ್ಯಾಮಿಯು. ನನಗೂ ಅಂತರ್ಯಾಮಿಯಾದವನು, ನಿನಗೂ ಅಂತರ್ಯಾಮಿಯಾದವನು ಪುರುಷೋತ್ತಮನೇ ಆಗಿದ್ದಾನೆ. ಎಲ್ಲರಿಗೂ ಸಾಕ್ಷಿಭೂತನಾದ ಶ್ರೀಹರಿಯು ಯಾರಿಂದಲೂ ಎಲ್ಲಿಯೂ ಪೂರ್ಣವಾಗಿ ಗ್ರಾಹ್ಯವೆನಿಸುವುದಿಲ್ಲ.

ವಿಶ್ವಮೂರ್ಧಾ ವಿಶ್ವಭುಜೋ ವಿಶ್ವಪಾದಾಕ್ಷಿನಾಸಿಕಃ ।
ಏಕಶ್ಚರತಿ ಕ್ಷೇತ್ರೇಷು ಸ್ವೈರಚಾರೀ ಯಥಾಸುಖಮ್ ॥೫॥

ವ್ಯಾಪಿಸಿದ ಶಿರಸ್ಸುಳ್ಳವನು, ವ್ಯಾಪಿಸಿದ ಭುಜಗಳುಳ್ಳವನು, ವ್ಯಾಪಿಸಿರುವ ಪಾದ, ಕಣ್ಣು, ಮೂಗುಳ್ಳವನು. ಒಬ್ಬನೇ ಸಮಸ್ತ ಜೀವರ ದೇಹದಲ್ಲಿ ಸ್ವತಂತ್ರನಾಗಿ ಸುಖದಿಂದಲೇ ಸಂಚರಿಸುವವನು.

ಕ್ಷೇತ್ರಾಣಿ ಹಿ ಶರೀರಾಣಿ ಬೀಜಾನಿ ಚ ಶುಭಾಶುಭೇ ।
ತಾನಿ ವೇತ್ತಿ ಸ ಯೋಗಾತ್ಮಾ ತತಃ ಕ್ಷೇತ್ರಜ್ಞ ಉಚ್ಯತೇ ॥೬॥

ಸಮಸ್ತ ಜೀವರ ಶರೀರಗಳನ್ನು, ಜೀವರ ಸ್ವರೂಪಗಳನ್ನು, ಅವರಿಗೆ ಸಂಬಂಧಿಸಿದ ಪುಣ್ಯ-ಪಾಪಗಳ ಕಾರಣಗಳನ್ನು ಯೋಗಾತ್ಮನಾದ ಭಗವಂತನು ತಿಳಿದಿರುವುದರಿಂದಲೇ ಅವನನ್ನು ಕ್ಷೇತ್ರಜ್ಞ ಎನ್ನುತ್ತಾರೆ.

ನಾಗತಿರ್ನ ಗತಿಸ್ತಸ್ಯ ಜ್ಞೇಯಾ ಭೂತೇನ ಕೇನಚಿತ್ ।
ಸಾಂಖ್ಯೇನ ವಿಧಿನಾ ಚೈವ ಯೋಗೇನ ಚ ಯಥಾಕ್ರಮಮ್ ॥೭॥

ಚಿಂತಯಾಮಿ ಗತಿಂ ಚಾಸ್ಯ ನ ಗತಿಂ ವೇದ್ಮಿ ಚೋತ್ತಮಾಮ್ ।
ಯಥಾಜ್ಞಾನಂ ತು ವಕ್ಷ್ಯಾಮಿ ಪುರುಷಂ ತಂ ಸನಾತನಮ್ ॥೮॥

ಅವನ ಆಗಮವನ್ನಾಗಲಿ, ಅವನ ಗಮನವನ್ನಾಗಲಿ ಯಾವ ಪ್ರಾಣಿಗಳಿಂದಲೂ ತಿಳಿಯಲಾಗದು. ಸಾಂಖ್ಯ, ಯೋಗ ವಿಧಿಗಳಿಂದ ಕ್ರಮವಾಗಿ ಚಿಂತಿಸುತ್ತಿದ್ದರೂ

ಮತ್ತೂ ಅವನ ಗತಿಯನ್ನು ಆಲೋಚಿಸುತ್ತಿದ್ದೇನೆ ವಿನಾ ಅವನ ಶ್ರೇಷ್ಠವಾದ ಗತಿಯನ್ನು ಪೂರ್ಣವಾಗಿ ತಿಳಿಯಲಾಗುತ್ತಿಲ್ಲ. ಆದರೂ ಸನಾತನನಾದ ಆ ಪುರುಷನ ಬಗ್ಗೆ ನನಗಿರುವಷ್ಟು ಜ್ಞಾನವನ್ನು ಉಪದೇಶಿಸುತ್ತೇನೆ.

ತಸ್ಯೈಕತ್ವಂ ಮಹತ್ತ್ವಂ ಹಿ ಸ ಚೈಕಃ ಪುರುಷಃ ಸ್ಮೃತಃ ।
ಮಹಾಪುರುಷಶಬ್ದಂ ಸ ಬಿಭರ್ತ್ಯೇಕಃ ಸನಾತನಃ ॥೯॥

ಮಹತ್ತ್ವದಿಂದಲೂ, ಏಕತ್ವದಿಂದಲೂ ಕೂಡಿರುವ ಸರ್ವೋತ್ತಮನು ಪುರುಷ ನಾಮಕನಾದ ಭಗವಂತನು. ಮಹಾಪುರುಷ ಎಂಬ ಶಬ್ದವನ್ನು ಸನಾತನನಾದ ಇವನೊಬ್ಬನೇ ಧರಿಸಿರುತ್ತಾನೆ.

ಏಕೋ ಹುತಾಶೋ ಬಹುಧಾ ಸಮಿಧ್ಯತೇ
ಏಕಃ ಸೂರ್ಯಸ್ತಪಸಾಂ ಯೋನಿರೇಕಾ ।
ಏಕೋ ವಾಯುರ್ಬಹುಧಾ ವಾತಿ ಲೋಕೇ
ಮಹೋದಧಿಶ್ಚಾಂಭಸಾಂ ಯೋನಿರೇಕಃ ।
ಪುರುಷಶ್ಚೈಕೋ ನಿರ್ಗುಣೋ ವಿಶ್ವರೂಪ-
ಸ್ತಂ ನಿರ್ಗುಣಂ ಪುರುಷಂ ಚಾವಿಶಂತಿ ॥೧೦॥

ಒಂದೇ ಬೆಂಕಿ ಅನೇಕ ಪ್ರಕಾರಗಳಿಂದ ಜ್ವಲಿಸುವಂತೆ, ಒಬ್ಬನೇ ಸೂರ್ಯನು ಅನೇಕ ವಿಧವಾದ ಪ್ರಕಾಶಕ್ಕೆ ಕಾರಣನಾಗಿರುವಂತೆ, ಒಬ್ಬನೇ ವಾಯುವು ಅನೇಕ ಪ್ರಕಾರವಾಗಿ ಬೀಸುವಂತೆ, ಸಮುದ್ರವು ಹಲವು ರೂಪದಲ್ಲಿರುವ ಮೀನುಗಳಿಗೆ ಒಂದೇ ಕಾರಣವಾಗಿರುವಂತೆ ಪ್ರಾಕೃತಗುಣರಹಿತನಾದ ವಿಶ್ವರೂಪಿಯಾದ ಭಗವಂತನೊಬ್ಬನೇ ಈ ಜಗತ್ತಿಗೆ ಕಾರಣನಾಗಿದ್ದಾನೆ. ಈ ಪ್ರಾಕೃತಗುಣರಹಿತನಾದ ಪುರುಷನನ್ನೇ ಸಮಗ್ರ ಜಗತ್ತು ಸೇರುತ್ತದೆ.

ಹಿತ್ವಾ ಗುಣಮಯಂ ಸರ್ವಂ ಕರ್ಮ ಹಿತ್ವಾ ಶುಭಾಶುಭಮ್ ।
ಉಭೇ ಸತ್ಯಾನೃತೇ ತ್ಯಕ್ತ್ವಾ ಏವಂ ಭವತಿ ನಿರ್ಗುಣಃ ॥೧೧॥

ದೇಹೇಂದ್ರಿಯಾದಿ ಸಮಸ್ತ ಗುಣಮಯ ಪದಾರ್ಥಗಳಲ್ಲಿ ಮಮತೆಯನ್ನು ಬಿಟ್ಟು ಪುಣ್ಯ-ಪಾಪಗಳನ್ನು ತ್ಯಜಿಸಿ, ಸತ್ಯಾನೃತಗಳನ್ನು ತ್ಯಜಿಸಿದ ಸಾಧಕನು ಪ್ರಾಕೃತ ಗುಣರಹಿತನಾದ ಭಗವಂತನ ಅನುಗ್ರಹದಿಂದ ಪ್ರಾಕೃತಗುಣರಹಿತನಾಗುತ್ತಾನೆ.

ಅಚಿಂತ್ಯಾಂ ಚಾಮಿತಂ ಜ್ಞಾತ್ವಾ ಭಾವಸೂಕ್ಷ್ಮಂ ಚತುಷ್ಟಯಮ್ ।
ವಿಚರೇದ್ ಯೋ ಯತಿರ್ಯತ್ತಃ ಸ ಗಚ್ಛೇತ್ ಪುರುಷಂ ಪ್ರಭುಮ್ ॥

ಚಿಂತಿಸಲು ಅಶಕ್ಯನಾದ, ಅಮಿತನಾದ, ಸಮಸ್ತ ಜೀವರಲ್ಲಿ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಎಂಬ ನಾಲ್ಕು ರೂಪಗಳಿಂದ ಸನ್ನಿಹಿತನಾದ ನಾರಾಯಣನನ್ನು ಚೆನ್ನಾಗಿ ತಿಳಿದು ಯಾವನು ಸಂಚರಿಸುತ್ತಾನೋ ಅವನೂ ಆ ಪ್ರಭುವಾದ ಪುರುಷನನ್ನು ಹೊಂದುತ್ತಾನೆ.

ಏಕಂ ಹಿ ಪರಮಾತ್ಮಾನಂ ಕೇಚಿದಿಚ್ಛಂತಿ ಪಂಡಿತಾಃ ।
ಏಕಾಧ್ಯಾತ್ಮಂ ತಥಾತ್ಮಾನಂ ತಥಾಧ್ಯಾತ್ಮಂ ಚ ಚಿಂತಕಾಃ ॥೧೩॥

ಮೂಲರೂಪದಿಂದ ಕೂಡಿರುವ ಪರಮಾತ್ಮನನ್ನು ಯಾರು ಹೊಂದಲು ಬಯಸುತ್ತಾರೋ ಅವರೇ ನಿಜವಾದ ಪಂಡಿತರು. ಅನೇಕ ಜೀವರ ಅಂತರ್ಗತನಾಗಿದ್ದರೂ ಸ್ವಗತ ಭೇದವಿವರ್ಜಿತನು ಎಂಬ ಅಧ್ಯಾತ್ಮವನ್ನು ಯಾರು ತಿಳಿದಿರುತ್ತಾರೋ, ಸಮಸ್ತ ಜೀವರ ಅಂತರ್ಯಾಮಿಯಾದ ಪರಮಾತ್ಮನನ್ನು ಹೊಂದಲು ಯಾರು ಇಚ್ಛಿಸುತ್ತಾರೋ, ತನ್ನ ದೇಹಕ್ಕೆ ಕಾರಣೀಭೂತನಾದ ಪರಮಾತ್ಮನನ್ನು ಚಿಂತಿಸಲು ಯಾರು ಇಚ್ಛಿಸುತ್ತಾರೋ ಅವರೂ ಪಂಡಿತರೆ. ಕೆಲವರು ಏಕಾಂತಭಕ್ತರು. ಮೂಲರೂಪಿಯಾದ ಪರಮಾತ್ಮನಲ್ಲಿಯೇ ನಿರತರಾಗಿರುತ್ತಾರೆ. ಕೆಲವರು ಪರಾತ್ಪರತತ್ತ್ವ ಚಿಂತಕರಾಗಿರುತ್ತಾರೆ. (ಅವರೆಲ್ಲರೂ ಪರಮಾತ್ಮನನ್ನೇ ಹೊಂದುತ್ತಾರೆ ಎಂದು ಭಾವ).

ತತ್ರ ಯಃ ಪರಮಾತ್ಮಾ ಹಿ ಸ ನಿತ್ಯಂ ನಿರ್ಗುಣಃ ಸ್ಮೃತಃ ।
ಸ ಹಿ ನಾರಾಯಣೋ ಜ್ಞೇಯಃ ಸರ್ವಾತ್ಮಾ ಪುರುಷೋ ಹಿ ಸಃ ।
ನ ಲಿಪ್ಯತೇ ಫಲೈಶ್ಚಾಪಿ ಪದ್ಮಪತ್ರಮಿವಾಂಭಸಾ ॥೧೪॥

ವೈಕುಂಠ ಲೋಕದಲ್ಲಿ ನಿತ್ಯವೂ ಪ್ರಾಕೃತಗುಣರಹಿತನಾದ ಯಾವ ಪರಮಾತ್ಮ ಎಂದು ಕರೆಸಿಕೊಳ್ಳುತ್ತಾನೋ ಆ ಪರಮಾತ್ಮನೇ ನಾರಾಯಣನು. ಅವನೇ ಸರ್ವಾಂತರ್ಯಾಮಿಯಾದ ಪುರುಷನು. ಎಲ್ಲರ ಅಂತರ್ಯಾಮಿಯಾಗಿದ್ದರೂ ಪದ್ಮಪತ್ರದ ನೀರಿನಂತೆ ಜೀವರ ಶುಭಾಶುಭ ಫಲಗಳಿಂದ ಲಿಪ್ತನಾಗುವುದಿಲ್ಲ.

ಕರ್ಮಾತ್ಮಾ ತ್ವಪರೋ ಯೋಽಸೌ ಮೋಕ್ಷಬಂಧೈಃ ಸ ಯುಜ್ಯತೇ ।
ಸಸಪ್ತದಶಕೇನಾಪಿ ರಾಶಿನಾ ಯುಜ್ಯತೇ ಹಿ ಸಃ ।
ಏವಂ ಬಹುವಿಧಃ ಪ್ರೋಕ್ತಃ ಪುರುಷಸ್ತೇ ಯಥಾಕ್ರಮಮ್ ॥೧೫॥

ಪರಮಾತ್ಮನಿಗಿಂತ ವಿಲಕ್ಷಣನಾದ ಕರ್ಮಬಂಧನದಲ್ಲಿ ಸಿಲುಕಿರುವ ಜೀವಾತ್ಮನು ಬಂಧ-ಮೋಕ್ಷಗಳಿಂದ ಕೂಡಿರುತ್ತಾನೆ. ಪಂಚಭೂತಗಳು, ಮನಸ್ಸು, ಬುದ್ಧಿ ಎಂಬ ಏಳರಿಂದ ಸಹಿತವಾದ ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳಿಂದ ಜೀವನು ಕೂಡಿರುತ್ತಾನೆ. ಹೀಗೆ ಹದಿನೇಳರ ಸಮಾಗಮವನ್ನು ಹೊಂದಿದ ಪುರುಷರು ಕ್ರಮವಾಗಿ ಅನೇಕ ಸಂಖ್ಯೆಯಲ್ಲಿದ್ದಾರೆ. (ಇವುಗಳ ಸಮಾಗಮ ಇಲ್ಲದ ಪುರುಷನು ಒಬ್ಬನೇ ಭಗವಂತನು ಎಂದು ಭಾವ).

ಯತ್ತತ್ ಕೃತ್ಸ್ನಂ ಲೋಕತಂತ್ರಸ್ಯ ಧಾಮ
ವೇದ್ಯಂ ಪರಂ ಬೋಧನೀಯಂ ಸಬೋದ್ಧಾ ।
ಮಂತಾ ಮಂತವ್ಯಂ ಪ್ರಾಶಿತಾ ಪ್ರಾಶಿತವ್ಯಂ
ಘ್ರಾತಾ ಘ್ರೇಯಂ ಸ್ಪರ್ಶಿತಾ ಸ್ಪರ್ಶನೀಯಮ್ ॥೧೬॥

ಆ ಪರಬ್ರಹ್ಮ ವಸ್ತುವೇ ಸಮಸ್ತ ಲೋಕದ ಕ್ರಿಯೆಗಳಿಗೆ ಆಧಾರವೆನಿಸಿದೆ. ಸಮಗ್ರ ಜಗತ್ತನ್ನು ವ್ಯಾಪಿಸಿರುವ ಸರ್ವೋತ್ತಮವಾದ ವಸ್ತುವೇ ಪುರುಷೋತ್ತಮ ಎನಿಸಿದೆ. ಅವನನ್ನು ತಿಳಿಯಬೇಕು. ಆದ್ದರಿಂದ ಜೀವರು ಅವನನ್ನು ತಿಳಿಯಲು ಅರ್ಹರೇ ವಿನಾ ಜಡದಿಂದ ತಿಳಿಯಲಾಗದು. ಮನನಶೀಲನೂ, ಮನನ ಮಾಡಲು ಯೋಗ್ಯನು, ಭೋಕ್ತೃವು-ಭೋಜ್ಯನು, ಆಘ್ರಾಣಿಸುವವನು-ಆಘ್ರೇಯನು, ಸ್ಪರ್ಶಿಸುವವನು-ಸ್ಪರ್ಶಿಸುವ ವಸ್ತುವು ಅಂತರ್ಯಾಮಿಯಾದ ಭಗವಂತನೇ ಆಗಿದ್ದಾನೆ.

ದ್ರಷ್ಟಾ ದ್ರಷ್ಟವ್ಯಂ ಶ್ರಾವಿತಾ ಶ್ರಾವಣೀಯಂ
ಜ್ಞಾತಾ ಜ್ಞೇಯಂ ಸಗುಣಂ ನಿರ್ಗುಣಂ ಚ ।
ಯದ್ವೈ ಪ್ರೋಕ್ತಂ ಗುಣಸಾಮ್ಯಂ ಪ್ರಧಾನಂ
ನಿತ್ಯಂ ಚೈತಚ್ಚಾಶ್ವತಂ ಚಾವ್ಯಯಂ ಚ ॥೧೭॥

ನೋಡುವವನು-ನೋಡುವ ಪದಾರ್ಥನು, ಕೇಳುವವನು-ಕೇಳುವ ಶಬ್ದನು, ತಿಳಿಯುವವನು-ತಿಳಿಯುವ ತತ್ತ್ವನು, ಭಗವಂತನ ಧ್ಯಾನದಿಂದ ಪ್ರಾಕೃತ

ಗುಣರಾಹಿತ್ಯವನ್ನು ಹೊಂದುವ ಜೀವನು-ಎಂದಿಗೂ ಪ್ರಕೃತಿಯ ಸಂಬಂಧವನ್ನು ಹೊಂದಿದ ಜಡವು, ಗುಣಸಾಮ್ಯವೆನಿಸಿದ ಪ್ರಕೃತಿ - ಈ ಎಲ್ಲ ವಸ್ತುಗಳಲ್ಲಿ ನಿತ್ಯವೂ, ಶಾಶ್ವತನೂ, ಅವ್ಯಯನೂ ಆದವನು ಭಗವಂತನೇ ಆಗಿದ್ದಾನೆ.

ಯದ್ವೈ ಸೂತೇ ಧಾತುರಾದ್ಯಂ ನಿಧಾನಂ
ತದ್ವೈ ವಿಪ್ರಾಃ ಪ್ರವದಂತೇಽನಿರುದ್ಧಮ್ ।
ಯದ್ವೈ ಲೋಕೇ ವೈದಿಕಂ ಕರ್ಮ ಸಾಧು
ಆಶೀರ್ಯುಕ್ತಂ ತದ್ಧಿ ತಸ್ಯೋಪಭೋಜ್ಯಮ್ ॥೧೮॥

ಯಾವ ಪ್ರಧಾನನೆನಿಸಿದ ಭಗವಂತನು ಬ್ರಹ್ಮನಿಗಿಂತಲೂ ಮೊದಲು ಮೂಲ ಕಾರಣವಾದ ಪ್ರಕೃತಿಯನ್ನು ಸೃಷ್ಟಿಸಿದನೋ ಅದನ್ನೇ ವಿಪ್ರರು ಅನಿರುದ್ಧ ಎಂಬ ಹೆಸರಿನಿಂದ ಕರೆಯುತ್ತಾರೆ. ಲೋಕದಲ್ಲಿ ಕಾಮ್ಯಗಳಾದ ವೈದಿಕ ಶುಭಕರ್ಮಗಳು ಏನು ನಡೆಯುತ್ತವೆಯೋ ಅವೆಲ್ಲವೂ ಅವನಿಂದಲೇ ಉಪಭೋಜ್ಯವಾಗಿವೆ.

ದೇವಾಃ ಸರ್ವೇ ಮುನಯಃ ಸಾಧು ದಾಂತಾ-
ಸ್ತಂ ಪ್ರಾಗ್ವಂಶೇ ಯಜ್ಞಭಾಗಂ ಯಜಂತೇ ।
ಅಹಂ ಬ್ರಹ್ಮಾ ಆದ್ಯ ಈಶಃ ಪ್ರಜಾನಾಂ
ತಸ್ಮಾಜ್ಜಾತಸ್ತ್ವಂ ಚ ಮತ್ತಃ ಪ್ರಸೂತಃ ।
ಮತ್ತೋ ಜಗಜ್ಜಂಗಮಂ ಸ್ಥಾವರಂ ಚ
ಸರ್ವೇ ವೇದಾಃ ಸರಹಸ್ಯಾ ಹಿ ಪುತ್ರ ॥೧೯॥

ಸಮಸ್ತ ದೇವತೆಗಳು, ಮುನಿಗಳು, ಸಾಧುಗಳು, ಇಂದ್ರಿಯನಿಗ್ರಹವುಳ್ಳವರು ಅನೇಕ ಯಜ್ಞಗಳಿಂದ ಯಜ್ಞಭಾಗ ಅರ್ಹನಾದ ಅನಿರುದ್ಧನನ್ನೇ ಆರಾಧಿಸುತ್ತಾರೆ. ಸಮಸ್ತ ಜೀವರಿಗೆ ಆದಿ ಎನಿಸಿದ ಚತುರ್ಮುಖ ಬ್ರಹ್ಮನಾದ ನಾನು ಅವನಿಂದಲೇ ಜನ್ಮವನ್ನು ಹೊಂದಿರುತ್ತೇನೆ. ನೀನು ನನ್ನಿಂದ ಜನ್ಮವನ್ನು ಹೊಂದಿರುತ್ತಿ. ಮಗನೇ, ನನ್ನಿಂದ ಚರಾಚರಗಳಿಂದ ಕೂಡಿದ ಜಗತ್ತು ಮತ್ತು ರಹಸ್ಯಗಳಿಂದ ಕೂಡಿದ ವೇದಗಳು ಹುಟ್ಟಿವೆ.

ಸರ್ವೈರ್ವಿಭಕ್ತಃ ಪುರುಷಃ ಸ ಕ್ರೀಡತಿ ಯಥೇಚ್ಛತಿ ।
ಏವಂ ಸ ಏವ ಭಗವಾನ್ ಜ್ಞಾನೇನ ಪ್ರತಿಬೋಧಿತಃ ॥೨೦॥

ಜೀವ-ಜಡ ಪದಾರ್ಥಗಳಿಗಿಂತಲೂ ಭಿನ್ನನಾದ, ಪುರುಷನಾಮಕನಾದ ಭಗವಂತನು ತಾನು ಹೇಗೆ ಸಂಕಲ್ಪಿಸುತ್ತಾ, ಹಾಗೆ ಅವರಲ್ಲಿ ನಿಂತು ಕ್ರೀಡಿಸುತ್ತಾನೆ. ಆ ಭಗವಂತನು ಜ್ಞಾನವನ್ನು ನೀಡಿದಾಗ ಅವನ ಸ್ವರೂಪವು ಹೀಗೆ ತಿಳಿಯುತ್ತದೆ.

ಏತತ್ತೇ ಕಥಿತಂ ಪುತ್ರ ಯಥಾವದನುಪೃಚ್ಛತಃ ।
ಸಾಂಖ್ಯಜ್ಞಾನೇ ತಥಾ ಯೋಗೇ ಯಥಾವದನುವರ್ಣಿತಮ್ ॥೨೧॥

ಮಹರುದ್ರನೆ, ನಿನ್ನ ಪ್ರಶ್ನೆಗೆ ಅನುಗುಣವಾಗಿ ಉತ್ತರಿಸಿದ್ದೇನೆ. ಸಾಂಖ್ಯ ಯೋಗಗಳಲ್ಲಿ ಭಗವಂತನ ಸ್ವರೂಪವು ಹೇಗೆ ವರ್ಣಿತವಾಗಿದೆಯೋ ಅದರಂತೆ ನಿನಗೆ ತಿಳಿಸಿರುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಉಂಛವೃತ್ತ್ಯುಪಾಖ್ಯಾನೇ
ಚತುರಶೀತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೈದನೆಯ ಅಧ್ಯಾಯ

ಇಂದ್ರನಿಗೆ ನಾರದರು ಉಪದೇಶಿಸಿದ ಬ್ರಾಹ್ಮಣನ ಕಥೆ.

ಯುಧಿಷ್ಠಿರಃ

ಧರ್ಮಾಃ ಪಿತಾಮಹೇನೋಕ್ತಾ ಮೋಕ್ಷಧರ್ಮಾಶ್ರಿತಾಃ ಶುಭಾಃ ।
ಧರ್ಮಮಾಶ್ರಮಿಣಾಂ ಶ್ರೇಷ್ಠಂ ವಕ್ತುಮರ್ಹತಿ ಮೇ ಭವಾನ್ ॥೧॥

ಯುಧಿಷ್ಠಿರ– ಪಿತಾಮಹನೇ, ಮೋಕ್ಷಧರ್ಮಕ್ಕೆ ಸಂಬಂಧಿಸಿದ ಶುಭಕರವಾದ ಅನೇಕ ಧರ್ಮಗಳನ್ನು ಬೋಧಿಸಿರುತ್ತೀರಿ. ಆಶ್ರಮಧರ್ಮಗಳನ್ನು ಪರಿಪಾಲಿಸುವ ವ್ಯಕ್ತಿಗಳಿಗೆ ಶ್ರೇಷ್ಠವಾದ ಧರ್ಮ ಯಾವುದೆಂದು ನನಗೆ ತಿಳಿಸು.

ಭೀಷ್ಮಃ

ಸರ್ವತ್ರ ವಿಹಿತೋ ಧರ್ಮಃ ಸ್ವರ್ಗ್ಯಃ ಸತ್ಯಫಲೋದಯಃ ।
ಬಹುದ್ವಾರಸ್ಯ ಧರ್ಮಸ್ಯ ನೇಹಾಸ್ತಿ ವಿಫಲಾ ಕ್ರಿಯಾ ॥೨॥

ಭೀಷ್ಮ- ಧರ್ಮಜನೇ, ಸಮಸ್ತ ಆಶ್ರಮಗಳಿಗೂ ಇಂತಹ ಧರ್ಮ ಎಂಬುದು ವಿಹಿತವಾಗಿದೆ. ಧರ್ಮಗಳು ಅನೇಕ ದ್ವಾರಗಳಿಂದ ಕೂಡಿವೆ. ಧರ್ಮದ ಕ್ರಮಗಳು ಎಂದೂ ವ್ಯರ್ಥವಾಗುವುದಿಲ್ಲ.

ಯಸ್ಮಿನ್ಯಸ್ಮಿಂಸ್ತು ವಿಷಯೇ ಯೋ ಯೋ ಯಾತಿ ವಿನಿಶ್ಚಯಮ್ ।
ಸ ತಮೇವಾಭಿಜಾನಾತಿ ನಾನ್ಯಂ ಭರತಸತ್ತಮ ॥೩॥

ಯಾವ ಯಾವ ವಿಷಯದಲ್ಲಿ ಯಾವ ಯಾವ ಪುರುಷನು ನಿಶ್ಚಯ ಬುದ್ಧಿಯನ್ನು ಹೊಂದುತ್ತಾನೋ ಆಯಾ ವ್ಯಕ್ತಿಯು ಅದೇ ವಿಷಯವನ್ನು ಶ್ರೇಷ್ಠವೆಂದು, ಉಳಿದದ್ದನ್ನು ಶ್ರೇಷ್ಠವಲ್ಲವೆಂದು ತಿಳಿಯುತ್ತಾನೆ.

ಅಪಿ ಚ ತ್ವಂ ನರವ್ಯಾಘ್ರ ಶ್ರೋತುಮರ್ಹಸಿ ಮೇ ಕಥಾಮ್ ।
ಪುರಾ ಶಕ್ರಸ್ಯ ಕಥಿತಾಂ ನಾರದೇನ ಸುರರ್ಷಿಣಾ ॥೪॥

ನರವ್ಯಾಘ್ರನೇ, ಈ ವಿಷಯದಲ್ಲಿ ಸುರರ್ಷಿಗಳಾದ ನಾರದರು ಇಂದ್ರನಿಗೆ ಹಿಂದೆ ಹೇಳಿದ ಕಥೆಯನ್ನು ನಿನಗೆ ಹೇಳುತ್ತೇನೆ, ಕೇಳು.

ಸುರರ್ಷಿರ್ನಾರದೋ ರಾಜನ್ ಸಿದ್ಧಸ್ತ್ರಿಲೋಕ್ಯಸಮ್ಮತಃ ।
ಪರ್ಯೇತಿ ಕ್ರಮಶೋ ಲೋಕಾನ್ ವಾಯುರವ್ಯಾಹತೋ ಯಥಾ ॥೫॥

ಸಿದ್ಧಪುರುಷರಾದ, ಮೂರುಲೋಕಗಳಿಗೂ ಸಮ್ಮತರಾದ, ದೇವತೆಗಳಿಗೆ ಋಷಿ ಎನಿಸಿದ ನಾರದರು ವಾಯು ಎಡೆಯಿಲ್ಲದೆ ಸಂಚರಿಸುವಂತೆ ಸಮಸ್ತ ಲೋಕಗಳಲ್ಲಿಯೂ ಸಂಚರಿಸುತ್ತಾರೆ.

ಸ ಕದಾಚಿನ್ಮಹೇಷ್ವಾಸ ದೇವರಾಜಾಲಯಂ ಗತಃ ।
ಸತ್ಕೃತಶ್ಚ ಮಹೇಂದ್ರೇಣ ಪ್ರತ್ಯಾಸನ್ನಗತೋಽಭವತ್ ॥೬॥

ರಾಜನೇ, ಅಂತಹ ನಾರದರು ಒಂದು ಬಾರಿ ಸುರರಾಜನ ಮನೆಗೆ ಹೋದರು. ಇಂದ್ರನಿಂದ ಸತ್ಕೃತನಾಗಿ ಅವನ ಸಮೀಪದಲ್ಲಿ ಕುಳಿತರು.

ತಂ ಕೃತಕ್ಷಣಮಾಸೀನಂ ಪರ್ಯಪೃಚ್ಛತ್ಶಚೀಪತಿಃ ।
ಬ್ರಹ್ಮರ್ಷೇ ಕಿಂಚಿದಾಶ್ಚರ್ಯಮಸ್ತಿ ದೃಷ್ಟಂ ತ್ವಯಾನಘ ॥೭॥

ಸತ್ಕೃತರಾದ, ತಮ್ಮ ಬಳಿಯಲ್ಲಿ ಕುಳಿತಿರುವ ನಾರದರನ್ನು ಇಂದ್ರನು ಪ್ರಶ್ನಿಸಿದನು: ಬ್ರಹ್ಮರ್ಷಿಗಳಾದ ನಾರದರೇ, ನೀವು ಜಗತ್ತಿನಲ್ಲಿ ಕಂಡ ಯಾವುದಾದರೂ ಆಶ್ಚರ್ಯಕರ ಸಂಗತಿಯು ಇದೆಯೇ? ಎಂದು.

ಯಥಾ ತ್ವಮಪಿ ವಿಪ್ರರ್ಷೇ ತ್ರೈಲೋಕ್ಯಂ ಸಚರಾಚರಮ್ ।
ಜಾತಕೌತೂಹಲೋ ನಿತ್ಯಂ ಸಿದ್ಧಶ್ಚರಸಿ ಸಾಕ್ಷಿವತ್ ॥೮॥

ವಸ್ತುತಃ ನೀವು ಸಿದ್ಧರೇ ಆಗಿದ್ದರೂ ಕುತೂಹಲದಿಂದ ಚರಾಚರ ಪ್ರಪಂಚಗಳಿಗೆ ಸಾಕ್ಷಿಯಂತೆ ಸಂಚರಿಸುತ್ತಿರುತ್ತೀರಿ.

ನ ಹ್ಯಸ್ಯವಿದಿತಂ ಲೋಕೇ ದೇವರ್ಷೇ ತವ ಕಿಂಚನ ।
ಶ್ರುತಂ ವಾಽಪ್ಯನುಭೂತಂ ವಾ ದೃಷ್ಟಂ ವಾ ಕಥಯಸ್ವ ಮೇ ॥೯॥

ಆದ್ದರಿಂದ ಜಗತ್ತಿನಲ್ಲಿ ತಿಳಿಯದಿರುವ ಸಂಗತಿಗಳು ನಿಮಗೆ ಯಾವುದೂ ಇರುವುದಿಲ್ಲ. ನೀವು ಆಶ್ಚರ್ಯಕರವಾದ ಘಟನೆಯನ್ನು ಕೇಳಿದ್ದರೆ, ನೋಡಿದ್ದರೆ, ಅನುಭವಿಸಿದ್ದರೆ ಅದನ್ನು ನನಗೆ ತಿಳಿಸಿರಿ.

ತಸ್ಮೈ ರಾಜನ್ ಸುರೇಂದ್ರಾಯ ನಾರದೋ ವದತಾಂ ವರಃ ।
ಆಸೀನಾಯೋಪಪನ್ನಾಯ ಪ್ರೋಕ್ತವಾನ್ ವಿಪುಲಾಂ ಕಥಾಮ್ ॥೧೦॥

ಯುಧಿಷ್ಠಿರನೇ, ಹೀಗೆ ಪ್ರಶ್ನಿಸಿದ, ತನ್ನ ಸಮೀಪದಲ್ಲಿ ಕುಳಿತಿರುವ ಇಂದ್ರನಿಗೆ ವಾಗ್ಮಿಗಳಲ್ಲಿ ಶ್ರೇಷ್ಠರಾದ ನಾರದರು ವಿಸ್ತಾರವಾದ ಕಥೆಯೊಂದನ್ನು ಹೇಳಿದರು.

ಯಥಾ ಯೇನ ಚ ಕಲ್ಪೇನ ಸ ತಸ್ಮೈ ದ್ವಿಜಸತ್ತಮಃ ।
ಕಥಾಂ ಕಥಿತವಾನ್ ಪೃಷ್ಟಸ್ತಥಾ ತ್ವಮಪಿ ಮೇ ಶೃಣು ॥೧೧॥

ಇಂದ್ರನಿಂದ ಪ್ರಶ್ನಿಸಲ್ಪಟ್ಟ ದ್ವಿಜಶ್ರೇಷ್ಠರಾದ ನಾರದರು ಯಾವ ಕಲ್ಪಕ್ಕನುಗುಣವಾದ ಕಥೆಯನ್ನು ಇಂದ್ರನಿಗೆ ತಿಳಿಸಿದರೋ ಅದೇ ಕಲ್ಪವನ್ನನುಸರಿಸಿ ನಾನೂ ನಿನಗೆ ಕಥೆಯನ್ನು ಹೇಳುತ್ತೇನೆ, ಕೇಳು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಾಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತಾರನೆಯ ಅಧ್ಯಾಯ

ಮಹಾಪದ್ಮಪುರದ ಬ್ರಾಹ್ಮಣನ ಕಥೆ.

ಭೀಷ್ಮಃ

ಆಸೀತ್ ಕಿಲ ಕುರುಶ್ರೇಷ್ಠ ಮಹಾಪದ್ಮೇ ಪುರೋತ್ತಮೇ ।
ಗಂಗಾಯಾ ದಕ್ಷಿಣೇ ತೀರೇ ಕಶ್ಚಿದ್ ವಿಪ್ರಃ ಸಮಾಹಿತಃ ॥೧॥

ಭೀಷ್ಮ– ಕುರುಶ್ರೇಷ್ಠನೇ, ಗಂಗಾನದಿಯ ದಕ್ಷಿಣ ತೀರದಲ್ಲಿ, ಮಹಾಪದ್ಮವೆಂಬ ಶ್ರೇಷ್ಠವಾದ ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನು ವಾಸಿಸುತ್ತಿದ್ದನು.

ಸೌಮ್ಯಃ ಸೋಮಾನ್ವಯೇ ವೇದೇ ಗತಾಧ್ವಾ ಛಿನ್ನಸಂಶಯಃ ।
ಧರ್ಮನಿತ್ಯೋ ಜಿತಕ್ರೋಧೋ ನಿತ್ಯತೃಪ್ತೋ ಜಿತೇಂದ್ರಿಯಃ ॥೨॥

ಅವನು ಸೌಮ್ಯನು, ಚಂದ್ರವಂಶದಲ್ಲಿ ಅತ್ರಿಗೋತ್ರ ಸಮುದ್ಭೂತನೂ, ಜಿತಕ್ರೋಧನೂ, ಧರ್ಮನಿಷ್ಠನೂ, ನಿತ್ಯತೃಪ್ತನೂ, ಜಿತೇಂದ್ರಿಯನೂ, ಸಂಶಯ ರಹಿತನೂ ಆಗಿದ್ದನು.

ಅಹಿಂಸಾನಿರತೋ ನಿತ್ಯಂ ಸತ್ಯಃ ಸಜ್ಜನಸಮ್ಮತಃ ।
ನ್ಯಾಯಪ್ರಾಪ್ತೇನ ವಿತ್ತೇನ ಸ್ವೇನ ಶೀಲೇನ ಚಾನ್ವಿತಃ ॥೩॥

ಅಹಿಂಸಾಧರ್ಮನಿರತನೂ, ನಿತ್ಯವೂ ಸತ್ಯಶೀಲನೂ, ಸಜ್ಜನರಿಗೆ ಸಮ್ಮತನೂ, ನ್ಯಾಯಪ್ರಾಪ್ತವಾದ ಧನದಿಂದ ಜೀವನವನ್ನು ನಿರ್ವಹಿಸುತ್ತಿದ್ದನು. ಸದಾಚಾರ ಸಂಪನ್ನನೂ ಆಗಿದ್ದನು.

ಜ್ಞಾತಿಸಂಬಂಧಿವಿಪುಲೇ ಮಿತ್ರಾಪಾಶ್ರಯಸಮ್ಮತೇ ।
ಕುಲೇ ಮಹತಿ ವಿಖ್ಯಾತೇ ವಿಶಿಷ್ಟಾಂ ವೃತ್ತಿಮಾಸ್ಥಿತಃ ॥೪॥

ಜ್ಞಾತಿ-ಬಂಧುಗಳಿಂದ ತುಂಬಿರುವ, ಸ್ನೇಹಿತರು ಮುಂತಾದವರಿಂದ ಕೂಡಿರುವ ವಿಖ್ಯಾತವಾದ ಕುಲದಲ್ಲಿ ಧರ್ಮದ ಶ್ರೇಷ್ಠವಾದ ಕರ್ಮಗಳನ್ನೇ ಆಚರಿಸುತ್ತಿದ್ದನು.

ಸ ಪುತ್ರಾನ್ ಬಹುಲಾನ್ ದೃಷ್ಟ್ವಾ ವಿಪುಲೇ ಕರ್ಮಣಿ ಸ್ಥಿತಃ ।
ಕುಲಧರ್ಮಾಶ್ರಿತೋ ರಾಜನ್, ಧರ್ಮಚರ್ಯಾಪರೋಽಭವತ್ ॥೫॥

ಗೃಹಸ್ಥಾಶ್ರಮೋಕ್ತವಾದ ಅನೇಕ ಕರ್ಮಗಳಲ್ಲಿ ತೊಡಗಿದ್ದ ಅವನು ಹಲವಾರು ಮಂದಿ ಮಕ್ಕಳನ್ನು, ಮೊಮ್ಮಕ್ಕಳನ್ನು ಕಂಡನು. ಕುಲಧರ್ಮಗಳನ್ನೇ ಆಶ್ರಯಿಸಿದ್ದ ಅವನು ಧರ್ಮಾಚರಣೆಯಲ್ಲೇ ಯಾವಾಗಲೂ ತತ್ಪರನಾಗಿದ್ದನು.

ತತಃ ಸ ಧರ್ಮಂ ವೇದೋಕ್ತಂ ಯಥಾಶಾಸ್ತ್ರೋಕ್ತಮೇವ ಚ ।
ಶಿಷ್ಟಾಚೀರ್ಣಂ ಚ ಧರ್ಮಂ ಚ ತ್ರಿವಿಧಂ ಚಿಂತ್ಯ ಚೇತಸಾ ॥೬॥

ಹೀಗೆ ಕಾಲ ಕಳೆಯುತ್ತಿರುವಾಗ ಒಮ್ಮೆ ವೇದೋಕ್ತವಾದ ಧರ್ಮಗಳು, ಶಾಸ್ತ್ರೋಕ್ತವಾದ ಧರ್ಮಗಳು, ಶಿಷ್ಟಾಚಾರದಿಂದ ಬಂದಿರುವ ಧರ್ಮಗಳು - ಹೀಗೆ ಮೂರು ವಿಧವಾದ ಧರ್ಮಗಳನ್ನು ಕುರಿತು ಅವನು ಆಲೋಚಿಸಲು ತೊಡಗಿದನು.

ಕಿಂ ನು ಮೇ ಸ್ಯಾಚ್ಛುಭಂ ಕೃತ್ವಾ ಕಿಂ ಕ್ಷಮಂ ಕಿಂ ಪರಾಯಣಮ್ ।
ಇತ್ಯೇವಂ ಖಿದ್ಯತೇ ನಿತ್ಯಂ ನ ಚ ಯಾತಿ ವಿನಿಶ್ಚಯಮ್ ॥೭॥

ಈ ಮೂರು ವಿಧ ಧರ್ಮಗಳಲ್ಲಿ ಯಾವುದನ್ನಾಚರಿಸಿದರೆ ನನಗೆ ಕ್ಷೇಮವಾಗುತ್ತದೆ? ಯಾವುದು ನನ್ನ ಕರ್ತವ್ಯ ? ಯಾವುದು ನನಗೆ ಉತ್ತಮವಾದ ಆಶ್ರಯ? ಹೀಗೆ ಯೋಚಿಸುತ್ತಾ ಚಿಂತಾಗ್ರಸ್ಥನಾಗುತ್ತಿದ್ದನೇ ವಿನಾ ನಿಶ್ಚಯವನ್ನು ಹೊಂದುತ್ತಿರಲಿಲ್ಲ.

ತಸ್ಯೈವಂ ಖಿದ್ಯಮಾನಸ್ಯ ಧರ್ಮಂ ಪರಮಮಾಸ್ಥಿತಃ ।
ಕದಾಚಿದತಿಥಿಃ ಪ್ರಾಪ್ತೋ ಬ್ರಾಹ್ಮಣಃ ಸುಸಮಾಹಿತಃ ॥೮॥

ಒಂದು ದಿನ ಖಿನ್ನನಾಗಿ, ಅದೇ ವಿಷಯವನ್ನು ಯೋಚಿಸುತ್ತಿದ್ದ ಬ್ರಾಹ್ಮಣನ ಮನೆಗೆ ಪರಮಧರ್ಮಾನುಷ್ಠಾನ ಮಾಡುವ, ಏಕಾಗ್ರತೆಯಿಂದ ಕೂಡಿರುವ ಒಬ್ಬ ಬ್ರಾಹ್ಮಣನು ಅತಿಥಿಯಾಗಿ ಆಗಮಿಸಿದನು.

ಸ ತಸ್ಮೈ ಸತ್ಕ್ರಿಯಾಂ ಚಕ್ರೇ ಕ್ರಿಯಾಯುಕ್ತೇನ ಹೇತುನಾ ।
ವಿಶ್ರಾಂತಂ ಚೈನಮಾಸೀನಮಿದಂ ವಚನಮಬ್ರವೀತ್ ॥೯॥

ಆಗಮಿಸಿದ ಅತಿಥಿಗೆ ಶಾಸ್ತ್ರೋಕ್ತವಾದ ವಿಧಿಯಿಂದ ಈ ಬ್ರಾಹ್ಮಣನು ಸತ್ಕಾರವನ್ನು ಮಾಡಿದನು. ಅವನನ್ನು ಕುರಿತು ತನ್ನ ಸಂಶಯದ ಬಗ್ಗೆ ಹೇಳತೊಡಗಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಡಾಶೀತ್ಯುತ್ತರತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೇಳನೆಯ ಅಧ್ಯಾಯ

ಅತಿಥಿಯಿಂದ ಅನೇಕ ಧರ್ಮಗಳ ಕಥನ.

ಬ್ರಾಹ್ಮಣಃ

ಸಮುತ್ಪನ್ನಾಭಿಧಾನೋऽಸ್ಮಿ ವಾಙ್ಮಾಧುರ್ಯೇಣ ತೇऽನಘ ।
ಮಿತ್ರತಾಮಭಿಪನ್ನಸ್ತ್ವಾಂ ಕಿಂಚಿದ್ ವಕ್ಷ್ಯಾಮಿ ತಚ್ಛೃಣು ॥೧॥

ಬ್ರಾಹ್ಮಣ– ಅನಘನೇ, ನಿನ್ನ ಮಧುರವಾದ ಮಾತನ್ನು ಕೇಳಿದ ಬಳಿಕ ಕೆಲವು ವಿಷಯಗಳನ್ನು ಹೇಳಲು ಮನಸ್ಸಾಗಿದೆ. ನಿನ್ನೊಡನೆ ಮೈತ್ರಿಯನ್ನು ಹೊಂದಿರುವೆ. ಕೆಲವು ವಿಷಯಗಳನ್ನು ಹೇಳುತ್ತೇನೆ, ಕೇಳು.

ಗೃಹಸ್ಥಧರ್ಮಂ ವಿಪ್ರೇಂದ್ರ ಕೃತ್ವಾ ಪುತ್ರಗತಂ ತ್ವಹಮ್ ।
ಧರ್ಮಂ ಪರಮಕಂ ಕುರ್ಯಾಂ ಕೋ ಹಿ ಮಾರ್ಗೋ ಭವೇದ್ದ್ವಿಜ ॥

ಬ್ರಾಹ್ಮಣನೇ, ಗೃಹಸ್ಥಧರ್ಮವನ್ನು ಮಕ್ಕಳಿಗೆ ವಹಿಸಿದ ನಾನು ಶ್ರೇಷ್ಠ ಧರ್ಮವನ್ನು ಆಚರಿಸಬೇಕೆಂದಿದ್ದೇನೆ. ಅಂತಹ ಧರ್ಮವನ್ನಾಚರಿಸಲು ಯಾವ ಮಾರ್ಗವಿದೆ?

ಅಹಮಾತ್ಮಾನಮಾತ್ಮಸ್ಥಮೇಕ ಏವಾತ್ಮನಿ ಸ್ಥಿತಃ ।
ಕರ್ತುಂ ಕಾಂಕ್ಷಿಮಿ ನೇಚ್ಛಾಮಿ ಬದ್ಧಃ ಸಾಧಾರಣೈರ್ಗುಣೈಃ ॥೩॥

ನಾನು ಏಕಾಕಿಯಾಗಿದ್ದು, ಅಂತರ್ಯಾಮಿಯಾದ ಶ್ರೀಹರಿಯಲ್ಲಿಯೇ ಆಸಕ್ತನಾಗಿ ಇರಬೇಕೆಂದು ಭಾವಿಸಿದ್ದೇನೆ. ಆದರೆ ಅತಿಥಿ ಸತ್ಕಾರ ಮೊದಲಾದ ಸಾಧಾರಣ ಗುಣಗಳನ್ನು ಅನುಷ್ಠಾನ ಮಾಡಿಕೊಂಡು ಬಂದಿರುವುದರಿಂದ ಒಮ್ಮೆಲೆ ಅವುಗಳನ್ನು ಬಿಡಲು ಮನಸ್ಸಾಗುತ್ತಿಲ್ಲ.

ಯಾವದೇತದತೀತಂ ಮೇ ವಯಃ ಪುತ್ರಫಲಾಶ್ರಿತಮ್ ।
ತಾವದಿಚ್ಛಾಮಿ ಪಾಥೇಯಮಾದಾತುಂ ಪಾರಲೌಕಿಕಮ್ ॥೪॥

ಮಕ್ಕಳೆಂಬ ಫಲವನ್ನೇ ಆಶ್ರಯಿಸಿರುವ ನನ್ನ ಆಯುಷ್ಯವೆಲ್ಲವೂ ಕಳೆದು ಹೋಯಿತು. ನಾನು ಪರಲೋಕ ಗಮನಕ್ಕೆ ಬೇಕಾದ ಬುತ್ತಿಯನ್ನು ಸಂಗ್ರಹಿಸಲು ಇಚ್ಛಿಸುತ್ತಿದ್ದೇನೆ.

ಅಸ್ಮಿನ್ ಹಿ ಲೋಕಸಂತಾನೇ ಪರಂ ಪಾರಮಭೀಪ್ಸತಃ ।
ಉತ್ಪನ್ನಾ ಮೇ ಮತಿರಿಯಂ ಕುತೋ ಧರ್ಮಮಯಃ ಪ್ಲವಃ ॥೫॥

ಈ ಲೌಕಿಕ ವಸ್ತುಗಳ ನಡುವೆ ಸಂಸಾರಸಾಗರವನ್ನು ದಾಟಿಸುವ ಧರ್ಮದ ದೋಣಿ ಯಾವುದು ಎಂದು ನನಗೆ ಜಿಜ್ಞಾಸೆ ಹುಟ್ಟುತ್ತಿದೆ.

ಸಮುಹ್ಯಮಾನಾನಿ ನಿಶಮ್ಯ ಲೋಕೇ
ನಿರ್ಯಾತ್ಯಮಾನಾನಿ ಚ ಸಾತ್ತ್ವಿಕಾನಿ ।
ದೃಷ್ಟ್ವಾ ಚ ಧರ್ಮಧ್ವಜಕೇತುಮಾಲಾಂ
ಪ್ರಕೀರ್ಯಮಾಣಾಮುಪರಿ ಪ್ರಜಾನಾಮ್ ॥೬॥

ಅತಿಥಿಯೇ, ಲೋಕದಲ್ಲಿ ವಿಷಯ ಸಂಪರ್ಕ ಹೊಂದಿದ ಸಜ್ಜನರು ವಿಧವಿಧವಾದ ಯಾತನೆಗಳಿಂದ ಪೀಡಿತರಾಗುತ್ತಿರುವುದನ್ನು ನೋಡುತ್ತಿದ್ದೇನೆ. ಜನರ ಮಧ್ಯೆ ನಾನು ಧರ್ಮಾತ್ಮ ಎಂದು ತೋರಿಸಿಕೊಳ್ಳುವ ವ್ಯಕ್ತಿಗಳನ್ನೂ ಕಾಣುತ್ತಿದ್ದೇನೆ.

ನ ಮೇ ಮನೋ ರಜ್ಯತಿ ಭೋಗಕಾಲೇ
ದೃಷ್ಟ್ವಾ ಯತೀನ್ ಪ್ರಾರ್ಥಯತಃ ಪರತ್ರ ।
ತೇನಾತಿಥೇ ಬುದ್ಧಿಬಲಾಶ್ರಯೇಣ
ಧರ್ಮಾರ್ಥತತ್ತ್ವೈ ವಿನಿಯುಂಕ್ಷ್ವ ಮಾಂ ತ್ವಮ್ ॥೭॥

ಇದನ್ನು ಕಂಡ ಬಳಿಕ ನನಗೆ ಭೋಗವಸ್ತುಗಳಲ್ಲಿ ಮನಸ್ಸು ಸಂತೋಷ ಹೊಂದುವುದಿಲ್ಲ. ವಿರಕ್ತರು ತಮ್ಮ ಜೀವದ ನಿರ್ವಹಣೆಗಾಗಿ ಮತ್ತೊಬ್ಬರನ್ನು ಬೇಡುವುದನ್ನು ಕಂಡು ಸಂನ್ಯಾಸದಲ್ಲಿಯೂ ಅಭಿರುಚಿ ಉಂಟಾಗುತ್ತಿಲ್ಲ. ಆದ್ದರಿಂದ ನಿನ್ನ ಬುದ್ಧಿಯಿಂದ ಧರ್ಮಮಯವಾದ ನನಗೆ ಯೋಗ್ಯವಾದ ಮಾರ್ಗವು ಯಾವುದೆಂದು ತಿಳಿಸಿಕೊಡು.

ಭೀಷ್ಮಃ

ಸೋಽತಿಥಿರ್ವಚನಂ ತಸ್ಯ ಶ್ರುತ್ವಾ ಧರ್ಮಾಭಿಲಾಷಿಣಃ ।
ಪ್ರೋವಾಚ ವಚನಂ ಶ್ಲಕ್ಷ್ಣಂ ಪ್ರಾಜ್ಞೋ ಮಧುರಯಾ ಗಿರಾ ॥೮॥

ಭೀಷ್ಮ- ಧರ್ಮರಾಜನೇ, ಧರ್ಮಯುಕ್ತವಾದ ಆ ಬ್ರಾಹ್ಮಣನ ಮಾತನ್ನು ಕೇಳಿಸಿಕೊಂಡು ಪ್ರಾಜ್ಞನಾದ ಅತಿಥಿಯು ಮಧುರವಾದ ಮಾತುಗಳನ್ನು ಹೇಳಿದನು.

ಅಹಮಪ್ಯತ್ರ ಮುಹ್ಯಾಮಿ ಮಮಾಪ್ಯೇಷ ಮನೋರಥಃ ।
ನ ಚ ಸನ್ನಿಶ್ಚಯಂ ಯಾಮಿ ಬಹುದ್ವಾರೇ ತ್ರಿವಿಷ್ಟಪೇ ॥೯॥

ಬ್ರಾಹ್ಮಣನೇ, ಈ ವಿಷಯದಲ್ಲಿ ನನಗೂ ಮೋಹವಿದೆ. ಶ್ರೇಷ್ಠಧರ್ಮವನ್ನು ಆಚರಿಸಬೇಕೆಂದು ಇಚ್ಛೆಯೂ ನನಗಿದೆ. ಸ್ವರ್ಗಕ್ಕೆ ಧರ್ಮದ ಅನೇಕ ದ್ವಾರವಿದೆ. ಯಾವುದು ಯೋಗ್ಯವಾದ ಧರ್ಮ ಎಂಬ ನಿರ್ಣಯವು ನನ್ನಲ್ಲಿಲ್ಲ.

ಕೇಚಿನ್ಮೋಕ್ಷಂ ಪ್ರಶಂಸಂತಿ ಕೇಚಿದ್ಯಜ್ಞಫಲಂ ದ್ವಿಜಾಃ ।
ವಾನಪ್ರಸ್ಥಾಶ್ರಮಂ ಕೇಚಿದ್ ಗಾರ್ಹಸ್ಥ್ಯಂ ಕೇಚಿದಾಶ್ರಿತಾಃ ॥೧೦॥

ಕೆಲವರು ಮೋಕ್ಷಮಾರ್ಗವನ್ನು ಸ್ತುತಿ ಮಾಡುತ್ತಾರೆ. ಕೆಲವರು ಯಜ್ಞದಿಂದ ಪ್ರಾಪ್ತವಾಗುವ ಪುಣ್ಯಫಲವನ್ನು ಪ್ರಶಂಸೆ ಮಾಡುತ್ತಾರೆ. ಕೆಲವರು ವಾನಪ್ರಸ್ಥಾಶ್ರಮವನ್ನು, ಕೆಲವರು ಗೃಹಸ್ಥಾಶ್ರಮವನ್ನು ಆಶ್ರಯಿಸಿಕೊಂಡು ಇರುತ್ತಾರೆ.

ರಾಜಧರ್ಮಾಶ್ರಯಂ ಕೇಚಿತ್ ಕೇಚಿದಾತ್ಮಫಲಾಶ್ರಯಮ್ ।
ಗುರುಚರ್ಯಾಶ್ರಯಂ ಕೇಚಿತ್ ಕೇಚಿದ್ ವಾಕ್ಯಂ ಯಮಾಶ್ರಯಮ್ ॥

ಕೆಲವರು ರಾಜಧರ್ಮವನ್ನು, ಕೆಲವರು ಅಧ್ಯಾತ್ಮಮಾರ್ಗವನ್ನು, ಕೆಲವರು ಗುರು ಹಿರಿಯರ ಸೇವೆಯನ್ನು, ಕೆಲವರು ಮೌನವ್ರತವನ್ನು ಆಶ್ರಯಿಸಿರುತ್ತಾರೆ.

ಮಾತರಂ ಪಿತರಂ ಕೇಚಿಚ್ಚುಶ್ರೂಷಂತೋ ದಿವಂ ಗತಾಃ ।
ಅಹಿಂಸಯಾ ಪರೇ ಸ್ವರ್ಗಂ ಸತ್ಯೇನ ಚ ತಥಾ ಪರೇ ॥೧೨॥

ಕೆಲವರು ತಂದೆ-ತಾಯಿಗಳನ್ನು ಸೇವಿಸುತ್ತಾ ಸ್ವರ್ಗಕ್ಕೆ ಹೋಗಿರುತ್ತಾರೆ. ಅಹಿಂಸಾ ಧರ್ಮವನ್ನು ಆಶ್ರಯಿಸಿ ಸತ್ಯಮಾರ್ಗದಲ್ಲಿ ಆಸಕ್ತರಾಗಿಯೂ ಸ್ವರ್ಗಕ್ಕೆ ಹೋಗಿರುತ್ತಾರೆ.

ಆಹವೇಽಭಿಮುಖಾಃ ಕೇಚಿನ್ನಿಹತಾಃ ಸ್ವಿದ್ದಿವಂ ಗತಾಃ ।
ಕೇಚಿದುಂಛವೃತ್ತೈಃ ಸಿದ್ಧಾಃ ಸ್ವರ್ಗಮಾರ್ಗಸಮಾಶ್ರಿತಾಃ ॥೧೩॥

ಕೆಲವರು ಯುದ್ಧದಲ್ಲಿ ಶತ್ರುಗಳನ್ನು ಎದುರಿಸಿ, ಅವರಿಂದ ಹತರಾಗಿ ಸ್ವರ್ಗವನ್ನು ಸೇರಿದ್ದಾರೆ. ಉಂಛವೃತ್ತಿಯನ್ನು ಆಶ್ರಯಿಸಿ ಸಿದ್ಧಿಯನ್ನು ಪಡೆದು ಸ್ವರ್ಗಕ್ಕೆ ಹೋಗಿರುತ್ತಾರೆ.

ಕೇಚಿದಧ್ಯಯನೇ ಯುಕ್ತಾ ವೇದವ್ರತಪರಾಃ ಶುಭಾಃ ।
ಬುದ್ಧಿಮಂತೋ ಗತಾಃ ಸ್ವರ್ಗಂ ತುಷ್ಟಾತ್ಮಾನೋ ಜಿತೇಂದ್ರಿಯಾಃ ॥೧೪॥

ಕೆಲವರು ವೇದಾಧ್ಯಯನದಲ್ಲಿ ತೊಡಗಿಸಿಕೊಂಡು, ವೇದವ್ರತ ಪರಾಯಣರಾಗಿ, ಶುಭವಾದ ಕ್ರಿಯೆಗಳಿಂದ ಕೂಡಿದವರಾಗಿ, ಸಂತೃಪ್ತ ಮನಸ್ಸಿನಿಂದ ಜಿತೇಂದ್ರಿಯರಾಗಿ ಸ್ವರ್ಗಕ್ಕೆ ಹೋಗಿರುತ್ತಾರೆ.

ಆರ್ಜವೇನಾಪರೇ ಯುಕ್ತಾ ನಿಹತಾನಾರ್ಜವೈರ್ಜನೈಃ ।
ಋಜವೋ ನಾಕಪೃಷ್ಠೇ ವೈ ಶುದ್ಧಾತ್ಮಾನಃ ಪ್ರತಿಷ್ಠಿತಾಃ ॥೧೫॥

ಕೆಲವರು ಶುದ್ಧರಾದ ಜೀವರು ಸರಳವಾದ ಋಜುಮಾರ್ಗದಲ್ಲೇ ಇದ್ದು ವಂಚಕರಿಂದ ಹತರಾಗಿ ಸ್ವರ್ಗವನ್ನು ಸೇರಿರುತ್ತಾರೆ.

ಏವಂ ಬಹುವಿಧೈರ್ಲೋಕೇ ಧರ್ಮದ್ವಾರೈರನಾವೃತೈಃ ।
ಮಮಾಪಿ ಮತಿರಾವಿಗ್ನಾ ಮೇಘಲೇಖೇವ ವಾಯುನಾ ॥೧೬॥

ಹೀಗೆ ಅನೇಕ ವಿಧವಾದ ದ್ವಾರಗಳಿಂದ ಕೂಡಿರುವ ಧರ್ಮವು ಲೋಕದಲ್ಲಿ ಇರುತ್ತಿರಲು ನನ್ನ ಮನಸ್ಸು ಯಾವ ಮಾರ್ಗವನ್ನು ಅನುಸರಿಸಬೇಕು ಎಂಬುದರ ಬಗ್ಗೆ ವಾಯುಹತವಾದ ಮೇಘಗಳ ಸಾಲಿನಂತೆ ಉದ್ವಿಗ್ನವಾಗಿದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತಾಶೀತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆಂಟನೆಯ ಅಧ್ಯಾಯ

ನಾಗರಾಜನ ಸದಾಚಾರವನ್ನು ವರ್ಣಿಸಿದುದು.

ಅತಿಥಿಃ

ಉಪದೇಶಂ ತು ತೇ ವಿಪ್ರಾ ಕರಿಷ್ಯೇऽಹಂ ಯಥಾಗಮಮ್ ।
ಗುರುಣಾ ಮೇ ಯಥಾಖ್ಯಾತಮರ್ಥತಸ್ತಚ್ಚ ಮೇ ಶೃಣು ॥೧॥

ಅತಿಥಿ– ಬ್ರಾಹ್ಮಣನೇ, ಗುರುಗಳು ಯಾವ ಯಥಾರ್ಥವಾದ ಉಪದೇಶವನ್ನು ನನಗೆ ಮಾಡಿದ್ದಾರೋ ಅದನ್ನೇ ನಿನಗೆ ಉಪದೇಶಿಸುತ್ತೇನೆ. ಆ ಉಪಾಖ್ಯಾನವನ್ನು ಕೇಳು.

ಯತ್ರ ಪೂರ್ವಾಭಿಸರ್ಗೇಣ ಧರ್ಮಚಕ್ರಂ ಪ್ರವರ್ತಿತಮ್ ।
ನೈಮಿಷೇ ಗೋಮತೀತೀರೇ ತತ್ರ ನಾಗಾಹ್ವಯಂ ಪುರಮ್ ॥೨॥

ಹಿಂದಿನ ಕಲ್ಪದಲ್ಲಿ ಆ ಯುಗಕ್ಕೆ ಸಂಬಂಧಿಸಿದಂತೆ ಧರ್ಮಚಕ್ರವು ನಡೆಯುತ್ತಿತ್ತು. ನೈಮಿಷಾರಣ್ಯದಲ್ಲಿ ಗೋಮತೀ ನದಿಯ ತೀರದಲ್ಲಿ ನಾಗ ಎಂಬ ಪಟ್ಟಣವಿತ್ತು.

ಸಮಗ್ರೈಸ್ತ್ರಿದಶೈಸ್ತತ್ರ ಇಷ್ಟಮಾಸೀದ್ ದ್ವಿಜರ್ಷಭ ।
ಯತ್ರೇಂದ್ರಾತಿಕ್ರಮಂ ಚಕ್ರೇ ಮಾಂಧಾತಾ ರಾಜಸತ್ತಮಃ ॥೩॥

ಅಲ್ಲಿ ಸಮಸ್ತ ದೇವತೆಗಳು ಯಾಗ ಮಾಡುತ್ತಿದ್ದರು. ಅದರಂತೆ ಶ್ರೇಷ್ಠ ರಾಜನಾದ ಮಾಂಧಾತ ಎಂಬ ರಾಜನು ಅಲ್ಲಿ ಯಾಗ ಮಾಡುತ್ತಿದ್ದನು. ಅವನು ಯಜ್ಞದಿಂದ ಇಂದ್ರನನ್ನೂ ಮೀರಿಸಿದ್ದನು.

ಕೃತಾಧಿವಾಸೋ ಧರ್ಮಾತ್ಮಾ ತತ್ರ ಚಕ್ಷುಃಶ್ರವಾ ಮಹಾನ್ ।
ಪದ್ಮನಾಭೋ ಮಹಾಭಾಗಃ ಪದ್ಮ ಇತ್ಯೇವ ವಿಶ್ರುತಃ ॥೪॥

ಅದೇ ನಾಗಪುರದಲ್ಲಿ ಧರ್ಮಬುದ್ಧಿಯನ್ನು ಹೊಂದಿರುವ ಸರ್ಪವೊಂದು ವಾಸ ಮಾಡುತ್ತಿತ್ತು. ಆ ಮಹಾನಾಗನ ಹೆಸರು ಪದ್ಮನಾಭ ಎಂದು. ಅವನು ಪದ್ಮ ಎಂದೇ ಪ್ರಸಿದ್ಧನಾಗಿದ್ದನು.

ಸ ವಾಚಾ ಕರ್ಮಣಾ ಚೈವ ಮನಸಾ ಚ ದ್ವಿಜರ್ಷಭ ।
ಪ್ರಸಾದಯತಿ ಭೂತಾನಿ ತ್ರಿವಿಧೇ ವರ್ತ್ಮನಿ ಸ್ಥಿತಃ ॥೫॥

ಆ ಪದ್ಮನು ಮಾತು-ಮನಸ್ಸು-ಕೃತಿಗಳಿಂದ ಕರ್ಮ-ಉಪಾಸನೆ-ಜ್ಞಾನ ಈ ರೀತಿಯಾದ ಧರ್ಮ ಮಾರ್ಗಗಳನ್ನು ಆಶ್ರಯಿಸಿದ್ದನು.

ಸಾಮ್ನಾ ದಾನೇನ ಭೇದೇನ ದಂಡೇನೇತಿ ಚತುರ್ವಿಧಮ್ ।
ವಿಷಮಸ್ಥಂ ಜನಂ ಸ್ವಂ ಚ ಚಕ್ಷುರ್ಧ್ಯಾನೇನ ರಕ್ಷತಿ ॥೬॥

ಸಾಮ-ದಾನ-ಭೇದ-ದಂಡ ಎಂಬ ನಾಲ್ಕು ವಿಧವಾದ ಉಪಾಯಗಳಿಂದ ವಿಭಿನ್ನ ಜನರನ್ನು ಸನ್ಮಾರ್ಗಕ್ಕೆ ತರುತ್ತಿದ್ದನು. ಕಣ್ಣುಗಳನ್ನು ಮುಚ್ಚಿ ಧ್ಯಾನಿಸಿ ಜನರಿಗೆ ಒದಗಿರುವ ಕಷ್ಟಗಳನ್ನು ತಿಳಿದು ರಕ್ಷಣೆ ನೀಡುತ್ತಿದ್ದನು. ಅವನು ಇಂದಿಗೂ ಹೀಗೆ ಕ್ರಿಯೆಗಳನ್ನು ಮಾಡುತ್ತಲೇ ಇದ್ದಾನೆ. ಇಂದಿಗೂ ಜೀವಂತವಾಗಿ ಇದ್ದಾನೆ.

ತಮಭಿಕ್ರಮ್ಯ ವಿಧಿನಾ ಪ್ರಷ್ಟುಮರ್ಹಸಿ ಕಾಂಕ್ಷಿತಮ್ ।
ಸ ತೇ ಪರಮಕಂ ಧರ್ಮಂ ನಮಿಥ್ಯಾ ದರ್ಶಯಿಷ್ಯತಿ ॥೭॥

ನೀನು ಆ ನಾಗರಾಜನ ಸಮೀಪಕ್ಕೆ ಹೋಗಿ ವಿಧಿಬದ್ಧವಾದ ಪ್ರಶ್ನೆಗಳನ್ನು ಕೇಳು. ಅವನು ನಿನಗೆ ಶ್ರೇಷ್ಠವಾದ ಧರ್ಮಗಳನ್ನೇ ಉಪದೇಶಿಸುತ್ತಾನೆ. ಮಿಥ್ಯಾ ಮಾರ್ಗವನ್ನು ಎಂದಿಗೂ ತೋರಿಸುವುದಿಲ್ಲ.

ಸ ಹಿ ಸರ್ವಾತಿಥಿರ್ನಾಗೋ ಬುದ್ಧಿಶಾಸ್ತ್ರವಿಶಾರದಃ ।
ಗುಣೈರನವಮೈರ್ಯುಕ್ತಃ ಸಮಸ್ತೈರಾಭಿಕಾಮಿಕೈಃ ॥೮॥

ಆ ನಾಗನು ಮಹಾಬುದ್ಧಿವಂತನು. ಅತಿಥಿಗಳಲ್ಲಿ ಸತ್ಕಾರ ಬುದ್ಧಿಯುಳ್ಳವನು. ಶಾಸ್ತ್ರವೇತ್ತವು. ಎಲ್ಲರೂ ಬಯಸುವ ಶ್ರೇಷ್ಠವಾದ ಗುಣಗಳಿಂದ ಕೂಡಿದವನು.

ಪ್ರಕೃತ್ಯಾ ನಿತ್ಯಸಲಿಲೋ ನಿತ್ಯಮಧ್ಯಯನೇ ರತಃ ।
ತಪೋದಮಾಭ್ಯಾಂ ಸಂಯುಕ್ತೋ ವೃತ್ತೇನಾನವರೇಣ ಚ ॥೯॥

ಸ್ವಾಭಾವಿಕವಾಗಿಯೇ ನೀರಿನಂತೆ ನಿರ್ಮಲನು. ಅಧ್ಯಯನದಲ್ಲಿ ಆಸಕ್ತನು. ತಪಸ್ಸು ಇಂದ್ರಿಯನಿಗ್ರಹ ಇವುಗಳಲ್ಲಿ ರತನು. ತಪ್ಪಾಗದೆ ಇರುವ ಸದಾಚಾರಗಳಲ್ಲಿ ನಿರತನು.

ಯಜ್ವಾ ದಾನರುಚಿಃ ಕ್ಷಾಂತೋ ವೃತ್ತೇ ಚ ಪರಮೇ ಸ್ಥಿತಃ ।
ಸತ್ಯವಾಗನಸೂಯಶ್ಚ ಶೀಲವಾನಭಿಸಂಶ್ರಿತಃ ॥೧೦॥

ದಾನಶೀಲನೂ, ಯಜ್ಞಶೀಲನೂ, ಕ್ಷಮಾವಂತನೂ, ಸದಾಚಾರಿಯೂ, ಸತ್ಯವಾದಿಯೂ, ಅಸೂಯಾರಹಿತನೂ, ಶೀಲವಂತನೂ, ಜಿತೇಂದ್ರಿಯನೂ ಆಗಿದ್ದಾನೆ.

ಶೇಷಾನ್ನಭೋಕ್ತಾ ವಚನಾನುಕೂಲೋ
ಹಿತಾರ್ಜವೋತ್ಕೃಷ್ಟಕೃತಾಕೃತಜ್ಞಃ ।
ಅವೈರಕೃದ್ ಭೂತಹಿತೇ ನಿಯುಕ್ತೋ
ಗಂಗಾಹ್ರದಾಂಭೋಽಭಿಜನೋಪಪನ್ನಃ ॥೧೧॥

ಯಜ್ಞಶೇಷವೇ ಅವನ ಭೋಜನ. ಯೋಗ್ಯವಾದ ಮಾತುಗಳನ್ನಾಡುತ್ತಾನೆ. ಹಿತವನ್ನು ಮಾಡುತ್ತಾನೆ. ಋಜುಸ್ವಭಾವದವನು. ಕರ್ತವ್ಯಾಕರ್ತವ್ಯ ವಿವೇಕಿಯು. ಯಾರನ್ನೂ ದ್ವೇಷ ಮಾಡನು. ಪ್ರಾಣಿಹಿತಚಿಂತಕನು. ಗಂಗಾನದಿಯಂತೆ ನಿರ್ಮಲವಾದ ಕುಲದಲ್ಲಿ ಹುಟ್ಟಿದವನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಾಶೀತ್ಯುತ್ತರತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂಬತ್ತನೆಯ ಅಧ್ಯಾಯ

ಅತಿಥಿಯ ಮಾತಿನಂತೆ ನಾಗರಾಜನ ಬಳಿ ತೆರಳಿದ ಬ್ರಾಹ್ಮಣ.

ಬ್ರಾಹ್ಮಣಃ

ಅತಿಭಾರೋದ್ಯತಸ್ಯೈವ ಭಾರಾಪನಯನಂ ಮಹತ್ ।
ಪರಾಶ್ವಾಸಕರಂ ವಾಕ್ಯಮಿದಂ ಮೇ ಭವತಃ ಶ್ರುತಮ್ ॥೧॥

ಬ್ರಾಹ್ಮಣ– ಅತಿಥಿದೇವನೇ, ಭಾರವಾದ ನನ್ನ ಮನಸ್ಸಿನ ಭಾರವನ್ನು ಪರಿಹರಿಸಿರುವೆ. ಮತ್ತೊಬ್ಬರಿಗೆ ಸಮಾಧಾನವನ್ನು ನೀಡುವ ಮಾತುಗಳನ್ನು ನಿನ್ನಿಂದ ನಾನು ಕೇಳಿದ್ದೇನೆ.

ಅಧ್ವಕ್ಲಾಂತಸ್ಯ ಶಯನಂ ಸ್ಥಾನಕ್ಲಾಂತಸ್ಯ ಚಾಸನಮ್ ।
ತೃಷಿತಸ್ಯ ಚ ಪಾನೀಯಂ ಕ್ಷುಧಾರ್ತಸ್ಯ ಚ ಭೋಜನಮ್ ॥೨॥

ಪ್ರಯಾಣ ಮಾಡಿ ಬಳಲಿದವನಿಗೆ ಹಾಸಿಗೆ ಕೊಟ್ಟಂತೆ, ನಿಂತು ಬಳಲಿದವನಿಗೆ ಆಸನ ಕೊಟ್ಟಂತೆ, ತೃಷೆಯಿಂದ ಕಂಗೆಟ್ಟವನಿಗೆ ನೀರು ಕೊಟ್ಟಂತೆ, ಹಸಿವೆಯಿಂದ ಕಂಗಾಲಾದವನಿಗೆ ಭೋಜನ ನೀಡಿದಂತೆ ನಿನ್ನ ಮಾತಿನಿಂದ ಸಂತುಷ್ಟನಾಗಿದ್ದೇನೆ.

ಈಪ್ಸಿತಸ್ಯೇವ ಸಂಪ್ರಾಪ್ತಿರನ್ನಸ್ಯ ಸಮಯೇಽತಿಥೇಃ ।
ಏಷಿತಸ್ಯಾತ್ಮನಃ ಕಾಲೇ ವೃದ್ಧಸ್ಯೇವ ಸುತೋ ಯಥಾ ॥೩॥

ಮನಸಾ ಚಿಂತಿತಸ್ಯೇವ ಪ್ರೀತಿಸ್ನಿಗ್ಧಸ್ಯ ದರ್ಶನಮ್ ।
ಪ್ರಹ್ಲಾದಯತಿ ಮಾಂ ವಾಕ್ಯಂ ಭವತಾ ಯದುದೀರಿತಮ್ ॥೪॥

ಹಸಿದ ಅತಿಥಿಗೆ ಯೋಗ್ಯಕಾಲದಲ್ಲಿ ಬಯಸಿದ ಅನ್ನವೇ ದೊರೆತಾಗ ಎಷ್ಟು ಸಂತೋಷವಾಗುತ್ತದೋ, ಮಕ್ಕಳೇ ಇಲ್ಲದ ವೃದ್ಧನಿಗೆ ಪುತ್ರಪ್ರಾಪ್ತಿಯಾದರೆ ಎಷ್ಟು ಸಂತೋಷವಾಗುತ್ತದೋ, ಮನಸ್ಸಿನಲ್ಲಿ ನೆನೆದ ಗೆಳೆಯನು ಪ್ರತ್ಯಕ್ಷವಾಗಿ ಬಂದಾಗ ಎಷ್ಟು ಸಂತೋಷವಾಗುತ್ತದೋ, ನೀನು ಹೇಳಿದ ಮಾತುಗಳು ನನಗೆ ಅಷ್ಟೇ ಸಂತೋಷವನ್ನು ನೀಡಿವೆ.

ದತ್ತಚಕ್ಷುರಿವಾಕಾಶೇ ಪಶ್ಯಾಮಿ ವಿಮೃಶಾಮಿ ಚ ।
ಪ್ರಜ್ಞಾನವಚನಾದ್ಯೋಽಯಮುಪದೇಶೋ ಹಿ ಮೇ ಕೃತಃ ।
ಬಾಢಮೇವಂ ಕರಿಷ್ಯಾಮಿ ಯಥಾ ಮಾಂ ಭಾಷತೇ ಭವಾನ್ ॥೫॥

ನಿನ್ನಿಂದ ಜ್ಞಾನವನ್ನು ಪಡೆದ ನಾನು ಕುರುಡನಿಗೆ ಕಣ್ಣು ಕೊಟ್ಟಂತೆ ಮುಂದಿನ ಮಾರ್ಗವೇನು ಎಂದು ವಿಮರ್ಶೆ ಮಾಡುತ್ತೇನೆ, ಮಾರ್ಗವನ್ನು ನೋಡುತ್ತೇನೆ. ಜ್ಞಾನಮಯವಾದ ಮಾತಿನ ಮೂಲಕ ನನಗೆ ಉಪದೇಶಿಸಿರುವಿ. ನೀನು ಹೇಳಿದಂತೆ ಮಾಡುತ್ತೇನೆ.

ಇಹೇಮಾಂ ರಜನೀಂ ಸಾಧೋ ನಿವಸಸ್ವ ಮಯಾ ಸಹ ।
ಪ್ರಭಾತೇ ಯಾಸ್ಯತಿ ಭವಾನ್ ಪರ್ಯಾಶ್ವಸ್ತಃ ಸುಖೋಷಿತಃ ।
ಅಸೌ ಹಿ ಭಗವಾನ್ ಸೂರ್ಯೋ ಮಂದರಶ್ಮಿರವಾಙ್ಮುಖಃ ॥೬॥

ಈಗ ರಾತ್ರಿಯಾಗಿದೆ. ನೀನು ಇಲ್ಲೇ ವಿಶ್ರಾಂತಿಯನ್ನು ಪಡೆ. ವಿಶ್ರಾಂತಿಯನ್ನು ಪಡೆದು ದಣಿವನ್ನು ನೀಗಿಸಿಕೊಂಡು ಬೆಳಿಗ್ಗೆಯಾದ ಬಳಿಕ ಪ್ರಯಾಣಿಸು. ಸೂರ್ಯನು ಪಶ್ಚಿಮ ದಿಕ್ಕಿಗೆ ಸಾಗುತ್ತಾ ಮಂದರಶ್ಮಿಯಾಗುತ್ತಿದ್ದಾನೆ. ಈಗ ಪ್ರಯಾಣ ಮಾಡಬೇಡ.

ಭೀಷ್ಮಃ

ತತಸ್ತೇನ ಕೃತಾತಿಥ್ಯಃ ಸೋಽತಿಥಿಃ ಶತ್ರುಸೂದನ ।
ಉವಾಸ ಕಿಲ ತಾಂ ರಾತ್ರಿಂ ಸಹ ತೇನ ದ್ವಿಜೇನ ವೈ ॥೭॥

ಭೀಷ್ಮ– ಧರ್ಮಜನೇ, ನಂತರ ಬ್ರಾಹ್ಮಣನಿಂದ ಸತ್ಕೃತನಾದ ಅತಿಥಿಯು ಆ ರಾತ್ರಿಯನ್ನು ಬ್ರಾಹ್ಮಣನ ಮನೆಯಲ್ಲಿಯೇ ಕಳೆದನು.

ತತ್ತಚ್ಚ ಧರ್ಮಸಂಯುಕ್ತಂ ತಯೋಃ ಕಥಯತೋಸ್ತದಾ ।
ವ್ಯತೀತಾ ಸಾ ನಿಶಾ ಕೃತ್ಸ್ನಾ ಸುಖೇನ ದಿವಸೋಪಮಾ ॥೮॥

ಮೋಕ್ಷಧರ್ಮಕ್ಕೆ ಸಂಬಂಧಿಸಿದ ಮಾತುಗಳನ್ನಾಡುತ್ತಿದ್ದ ಅವರಿಬ್ಬರಿಗೂ ಸಮಗ್ರ ರಾತ್ರಿಯು ಹಗಲಿನಂತೆ ಸುಖವಾಗಿ ಕಳೆದುಹೋಯಿತು.

ತತಃ ಪ್ರಭಾತಸಮಯೇ ಸೋಽತಿಥಿಸ್ತೇನ ಪೂಜಿತಃ ।
ಬ್ರಾಹ್ಮಣೇನ ಯಥಾಶಕ್ತ್ಯಾ ಸ್ವಕಾರ್ಯಮಭಿಕಾಂಕ್ಷತಾ ॥೯॥

ಪುನಃ ಪ್ರಾತಃಕಾಲವಾಗುತ್ತಿರಲು ಕಾರ್ಯದ ಸಿದ್ಧಿಗಾಗಿ ಹವಣಿಸಿದ ಬ್ರಾಹ್ಮಣನು ಅತಿಥಿಯನ್ನು ವಿಧಿಬದ್ಧವಾಗಿ ಪೂಜಿಸಿದನು. ಅತಿಥಿಯು ಬ್ರಾಹ್ಮಣನ ಅನುಮತಿಯನ್ನು ಪಡೆದು ಹೊರಟು ಹೋದನು.

ತತಃ ಸ ವಿಪ್ರಃ ಕೃತಧರ್ಮನಿಶ್ಚಯಃ
ಕೃತಾಭ್ಯನುಜ್ಞಃ ಸ್ವಜನೇನ ಧರ್ಮವಿತ್ ।
ಯಥೋಪದಿಷ್ಟಂ ಭುಜಗೇಂದ್ರಸಂಶ್ರಯಂ
ಜಗಾಮ ಕಾಲೇ ಸುಕೃತೈಕನಿಶ್ಚಯಃ ॥೧೦॥

ಧರ್ಮಶೀಲನಾದ ಬ್ರಾಹ್ಮಣನು ತಾನು ಬಯಸಿದ ಕಾರ್ಯವನ್ನು ಹೊಂದಲು ಇಚ್ಛಿಸಿದವನಾಗಿ, ಬಾಂಧವರಿಂದ ಅನುಮತಿಯನ್ನು ಪಡೆದು ಅತಿಥಿಯು ಹೇಳಿದ ಸ್ಥಳಕ್ಕೆ ಪದ್ಮನಾಭನ ನಾಗಪುರಕ್ಕೆ ಪ್ರಯಾಣ ಮಾಡಿದನು. ಸುಕೃತಫಲವನ್ನು ಪಡೆದುಕೊಳ್ಳಬೇಕೆಂಬುದು ಬ್ರಾಹ್ಮಣನ ನಿಶ್ಚಯವಾಗಿತ್ತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತನೆಯ ಅಧ್ಯಾಯ

ಬ್ರಾಹ್ಮಣನು ಪದ್ಮರಾಜನ ಮನೆಗೆ ಆಗಮಿಸಿದುದು. ಅವನ ಪತ್ನಿಯಿಂದ ಸತ್ಕಾರ.

ಭೀಷ್ಮಃ

ಸ ವನಾನಿ ವಿಚಿತ್ರಾಣಿ ತೀರ್ಥಾನಿ ಚ ಸರಾಂಸಿ ಚ ।
ಅಭಿಗಚ್ಛನ್ ಕ್ರಮೇಣ ಸ್ಮ ಕಂಚಿನ್ಮುನಿಮುಪಸ್ಥಿತಃ ॥೧॥

ಭೀಷ್ಮ– ಯುಧಿಷ್ಠಿರನೇ, ಆ ಬ್ರಾಹ್ಮಣನು ಪ್ರಯಾಣ ಮಾಡುತ್ತಾ ಚಿತ್ರವಾದ ವನಗಳನ್ನೂ, ತೀರ್ಥಗಳನ್ನೂ, ಸರೋವರಗಳನ್ನೂ ದಾಟಿ ಒಬ್ಬ ಋಷಿಯ ಬಳಿಗೆ ಹೋದನು.

ತಂ ಸ ತೇನ ಯಥೋದ್ದಿಷ್ಟಂ ನಾಗಂ ವಿಪ್ರೇಣ ಬ್ರಾಹ್ಮಣಃ ।
ಪರ್ಯಪೃಚ್ಛದ್ ಯಥಾನ್ಯಾಯಂ ಶ್ರುತ್ವೈವ ಚ ಜಗಾಮ ಸಃ ॥೨॥

ಆ ಋಷಿಯ ಬಳಿ, ಬ್ರಾಹ್ಮಣನು ಅತಿಥಿಯು ಹೇಳಿದ್ದ ನಾಗರಾಜನ ವಿಷಯವಾಗಿ ಪ್ರಶ್ನಿಸಿದನು. ಅವನಿಂದ ದಾರಿಯನ್ನು ತಿಳಿದು ಹಾಗೆಯೇ ಪ್ರಯಾಣವನ್ನು ಮುಂದುವರೆಸಿದನು.

ಸೋಽಭಿಗಮ್ಯ ಯಥಾಖ್ಯಾತಂ ನಾಗಾಯತನಮರ್ಥವಿತ್ ।
ಪ್ರೋಕ್ತವಾನಹಮಸ್ಮೀತಿ ಭೋಃಶಬ್ದಾಲಂಕೃತಂ ವಚಃ ॥೩॥

ಪ್ರಯಾಣದ ಉದ್ದೇಶವನ್ನು ಅರಿತಿದ್ದ ಬ್ರಾಹ್ಮಣನು ವಿಧಿಪೂರ್ವಕವಾಗಿ ಯಾತ್ರೆಯನ್ನು ಮುಗಿಸಿ ನಾಗರಾಜನ ಮನೆಯನ್ನು ಮುಟ್ಟಿದನು. ಬಾಗಿಲಲ್ಲಿ ನಿಂತು ಭೋಃ ಎಂಬ ಶಬ್ದದಿಂದ ಅಲಂಕೃತವಾದ ಅಹಮಸ್ಮಿ ಎಂಬ ವಾಕ್ಯವನ್ನು ಹೇಳಿದನು. (ನಾನು ಇಲ್ಲಿಗೆ ಬಂದಿದ್ದೇನೆ ಎಂದು ಬಾಗಿಲಿನಲ್ಲಿ ನಿಂತು ಹೇಳಿದನು).

ತತಸ್ತಸ್ಯ ವಚಃ ಶ್ರುತ್ವಾ ರೂಪಿಣೀ ಧರ್ಮವತ್ಸಲಾ ।
ದರ್ಶಯಾಮಾಸ ತಂ ವಿಪ್ರಾಂ ನಾಗಪತ್ನೀ ಪತಿವ್ರತಾ ॥೪॥

ಬ್ರಾಹ್ಮಣನ ಮಾತನ್ನು ಕೇಳಿಸಿಕೊಂಡು ರೂಪವತಿಯಾದ, ಧರ್ಮವತ್ಸಲೆಯಾದ, ಪತಿವ್ರತೆಯಾದ ನಾಗಪತ್ನಿಯು ಆ ವಿಪ್ರನ ದೃಷ್ಟಿಗೆ ಬಿದ್ದಳು.

ಸಾ ತಸ್ಮೈ ವಿಧಿವತ್ ಪೂಜಾಂ ಚಕ್ರೇ ಧರ್ಮಪರಾಯಣಾ ।
ಸ್ವಾಗತೇನಾಗತಂ ಕೃತ್ವಾ ಕಿಂ ಕರೋಮೀತಿ ಚಾಬ್ರವೀತ್ ॥೫॥

ಕೂಡಲೇ ಧರ್ಮಪರಾಯಣೆಯಾದ ನಾಗಪತ್ನಿಯು ಬ್ರಾಹ್ಮಣನನ್ನು ವಿಧಿ ಪೂರ್ವಕವಾಗಿ ಸ್ವಾಗತಿಸಿ ಮನೆಯಲ್ಲಿ ಕರೆದು ಸತ್ಕರಿಸುತ್ತಾ ಬ್ರಾಹ್ಮಣನೇ, ನಿನಗೆ ಹೇಗೆ ಉಪಚರಿಸಲಿ? ನಾನೇನು ಮಾಡಲಿ? ಎಂದು ಪ್ರಶ್ನಿಸಿದಳು.

ಬ್ರಾಹ್ಮಣಃ

ವಿಶ್ರಾಂತೋಭ್ಯರ್ಚಿತಶ್ಚಾಸ್ಮಿ ಭವತ್ಯಾ ಶ್ಲಕ್ಷ್ಣಯಾ ಗಿರಾ ।
ದ್ರಷ್ಟುಮಿಚ್ಛಾಮಿ ಭವತಿ ತಂ ದೇವಂ ನಾಗಮುತ್ತಮಮ್ ॥೬॥

ಬ್ರಾಹ್ಮಣ– ದೇವಿಯೇ, ನೀನು ಮಧುರವಾದ ಮಾತಿನಿಂದ ನನ್ನನ್ನು ಸ್ವಾಗತಿಸಿ ವಿಧಿವತ್ತಾಗಿ ಸತ್ಕರಿಸಿದೆ. ಇದರಿಂದಲೇ ನನ್ನ ಮಾರ್ಗಾಯಾಸವು ಪರಿಹಾರವಾಯಿತು. ನಾನು ಶ್ರೇಷ್ಠನಾದ ನಾಗದೇವನನ್ನು ನೋಡಲು ಆಗಮಿಸಿದ್ದೇನೆ.

ಏತದ್ಧಿ ಪರಮಂ ಕಾರ್ಯಮೇತನ್ಮೇ ಫಲಮೀಪ್ಸಿತಮ್ ।
ಅನೇನಾರ್ಥೇನ ಚಾಸ್ಮ್ಯದ್ಯ ಸಂಪ್ರಾಪ್ತಃ ಪನ್ನಗಾಲಯಮ್ ॥೭॥

ಇದೇ ನನ್ನ ಶ್ರೇಷ್ಠವಾದ ಕಾರ್ಯವಾಗಿದೆ. ನನ್ನ ಮನಸ್ಸಿನ ಅಭಿಲಾಷೆಯೂ ಇದೇ. ಈ ಉದ್ದೇಶದಿಂದಲೇ ನಾನು ನಾಗರಾಜನ ಮನೆಗೆ ಬಂದಿರುತ್ತೇನೆ.

ನಾಗಭಾರ್ಯಾ

ಆರ್ಯ ಸೂರ್ಯರಥಂ ವೋಢುಂ ಗತೋಽಸೌ ಮಾಸಚಾರಿಕಃ ।
ಸಪ್ತಾಷ್ಟಭಿರ್ದಿನೈರ್ವಿಪ್ರ ದರ್ಶಯಿಷ್ಯತ್ಯಸಂಶಯಮ್ ॥೮॥

ನಾಗಪತ್ನಿ– ಬ್ರಾಹ್ಮಣಶ್ರೇಷ್ಠನೇ, ನನ್ನ ಪತಿಯು ವರ್ಷಕ್ಕೆ ಒಂದು ತಿಂಗಳಿನಂತೆ ಸೂರ್ಯನ ರಥವನ್ನು ಹೊರಲು ಅಲ್ಲಿಗೆ ಹೋಗಿದ್ದಾನೆ. ಇನ್ನು ಹದಿನೈದು ದಿನಗಳಲ್ಲಿ ನಿಶ್ಚಿತವಾಗಿಯೂ ಅವನು ಬಂದು ದರ್ಶನವನ್ನು ನೀಡುತ್ತಾನೆ.

ಏತದ್ ವಿದಿತಮಾರ್ಯಸ್ಯ ವಿವಾಸಕರಣಂ ಮಮ ।
ಭರ್ತುರ್ಭವತು ಕಿಂ ಚಾನ್ಯತ್ಕ್ರಿಯತಾಂ ತದ್ವದಸ್ವ ಮೇ ॥೯॥

ಆರ್ಯಪುತ್ರನ ಈ ಪ್ರಯಾಣಕಾರಣವನ್ನು ನಿನಗೆ ತಿಳಿಸಿದ್ದೇನೆ. ನನ್ನ ಪತಿಯ ಸಂದರ್ಶನವನ್ನು ಬಿಟ್ಟು ಬೇರೆ ಯಾವ ಕಾರ್ಯವನ್ನು ಮಾಡಿಕೊಡಲಿ? ನನಗೆ ಹೇಳು.

ಬ್ರಾಹ್ಮಣಃ

ಅನೇನ ನಿಶ್ಚಯೇನಾಹಂ ಸಾಧ್ವಿ ಸಂಪ್ರಾಪ್ತವಾನಿಹ ।
ಪ್ರತೀಕ್ಷನ್ನಾಗಮಂ ದೇವಿ ವತ್ಸ್ಯಾಮ್ಯಸ್ಮಿನ್ ಮಹಾವನೇ ॥೧೦॥

ಬ್ರಾಹ್ಮಣ– ಸಾಧ್ವಿಯಾದ ನಾಗದೇವಿಯೇ, ನಾಗನನ್ನು ದರ್ಶನ ಮಾಡುವ ದೃಷ್ಟಿಯಿಂದಲೇ ನಾನಿಲ್ಲಿಗೆ ಬಂದಿರುತ್ತೇನೆ. ಆದ್ದರಿಂದ ಅವನ ಆಗಮನವನ್ನು ನಿರೀಕ್ಷಿಸುತ್ತಾ ಅರಣ್ಯದಲ್ಲಿ ವಾಸ ಮಾಡಿರುತ್ತೇನೆ.

ಸಂಪ್ರಾಪ್ತಸ್ಯೈವ ಚಾವ್ಯಗ್ರಮಾವೇದ್ಯೋಽಹಮಿಹಾಗತಃ ।
ಮಮಾಭಿಗಮನಂ ಪ್ರಾಪ್ತೋ ವಾಚ್ಯಶ್ಚ ವಚನಂ ತ್ವಯಾ ॥೧೧॥

ಅವನು ಮನೆಗೆ ಬಂದ ಕೂಡಲೇ ನಾನು ಇಲ್ಲಿಗೆ ಬಂದಿರುವ ವಿಷಯವನ್ನು ಶಾಂತಭಾವದಿಂದ ನೀನು ತಿಳಿಸು. ಅವನು ನನ್ನ ಬಳಿ ಬಂದು ದರ್ಶನ ನೀಡುವಂತೆ ನಿನ್ನ ಪತಿಯ ಜೊತೆಗೆ ಮಾತನಾಡು.

ಅಹಮಪ್ಯತ್ರ ವತ್ಸ್ಯಾಮಿ ಗೋಮತ್ಯಾಃ ಪುಲಿನೇ ಶುಭೇ ।
ಕಾಲಂ ಪರಿಮಿತಾಹಾರೋ ಯಥೋಕ್ತಂ ಪರಿಪಾಲಯನ್ ॥೧೨॥

ನಾನು ಗೋಮತಿ ನದಿಯ ಸುಂದರವಾದ ಈ ಪ್ರದೇಶದಲ್ಲಿಯೇ ಮಿತಾಹಾರನಾಗಿ ನೀನು ಹೇಳಿರುವ ಕಾಲವನ್ನು ನಿರೀಕ್ಷಿಸುತ್ತಾ ವಾಸಿಸುತ್ತೇನೆ.

ಭೀಷ್ಮಃ

ತತಃ ಸ ವಿಪ್ರಸ್ತಾಂ ನಾಗೀಂ ಸಮಾಧಾಯ ಪುನಃ ಪುನಃ ।
ತದೇವ ಪುಲಿನಂ ನದ್ಯಾಃ ಪ್ರಯಯೌ ಬ್ರಾಹ್ಮಣರ್ಷಭಃ ॥೧೩॥

ಭೀಷ್ಮ– ಹೀಗೆ ಹೇಳಿ ಶ್ರೇಷ್ಠನಾದ ಆ ಬ್ರಾಹ್ಮಣನು ನಾಗಪತ್ನಿಯನ್ನು ಪುನಃ ಸಮಾಧಾನಪಡಿಸಿ, ಗೋಮತಿ ನದಿಯ ಮರಳಿನ ಪ್ರದೇಶಕ್ಕೆ ಹೊರಟು ಹೋದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೊಂದನೆಯ ಅಧ್ಯಾಯ

ನಾಗರಾಜನ ದರ್ಶನಕ್ಕಾಗಿ ಬ್ರಾಹ್ಮಣನ ತಪಶ್ಚರಣೆ.

ಭೀಷ್ಮಃ

ಅಥ ತೇನ ನರಶ್ರೇಷ್ಠ ಬ್ರಾಹ್ಮಣೇನ ತಪಸ್ವಿನಾ ।
ನಿರಾಹಾರೇಣ ವಸತಾ ದುಃಖಿತಾಸ್ತೇ ಭುಜಂಗಮಾಃ ॥೧॥

ಭೀಷ್ಮ– ನರಶ್ರೇಷ್ಠನೇ, ತಪಸ್ವಿಯಾದ ಬ್ರಾಹ್ಮಣನು ಗೋಮತಿ ನದಿಯ ತೀರದಲ್ಲಿ ಆಹಾರವನ್ನು ತೊರೆದು ತಪಸ್ಸನ್ನಾಚರಿಸಲು ಇವನ ಉಪವಾಸದಿಂದ ಸರ್ಪಗಳೆಲ್ಲವೂ ದುಃಖಿತವಾದವು.

ಸರ್ವೇ ಸಂಭೂಯ ಸಹಿತಾಸ್ತಸ್ಯ ನಾಗಸ್ಯ ಬಾಂಧವಾಃ ।
ಭ್ರಾತರಸ್ತನಯಾ ಭಾರ್ಯಾ ಯಯುಸ್ತಂ ಬ್ರಾಹ್ಮಣಂ ಪ್ರತಿ ॥೨॥

ನಾಗರಾಜನ ಬಂಧು-ಬಾಂಧವರು, ಪತ್ನಿ, ಮಕ್ಕಳು ಎಲ್ಲರೂ ಒಟ್ಟಾಗಿ ಬ್ರಾಹ್ಮಣನ ಬಳಿ ಹೋದರು.

ತೇऽಪಶ್ಯನ್ ಪುಲಿನೇ ತಂ ವೈ ವಿವಿಕ್ತೇ ನಿಯತವ್ರತಮ್ ।
ಸಮಾಸೀನಂ ನಿರಾಹಾರಂ ದ್ವಿಜಂ ಜಪ್ಯಪರಾಯಣಮ್ ॥೩॥

ತೇ ಸರ್ವೇ ಸಮಭಿಕ್ರಮ್ಯ ವಿಪ್ರಮಭ್ಯರ್ಚ್ಯ ಚಾಸಕೃತ್ ।
ಊಚುರ್ವಾಕ್ಯಮಸಂದಿಗ್ಧಮಾತಿಥೇಯಸ್ಯ ಬಾಂಧವಾಃ ॥೪॥

ಗೋಮತಿಯ ತೀರದಲ್ಲಿ ಏಕಾಂತ ಸ್ಥಳದಲ್ಲಿ ಜಿತೇಂದ್ರಿಯನಾಗಿ, ವ್ರತಾನುಷ್ಠಾನ ರತನಾಗಿ, ಆಹಾರವನ್ನು ತೊರೆದು ಮಂತ್ರವನ್ನು ಜಪಿಸುತ್ತಿರುವ ಬ್ರಾಹ್ಮಣನನ್ನು ಕಂಡರು. ಎಲ್ಲರೂ ಒಟ್ಟಾಗಿ ಬಂದು ಬ್ರಾಹ್ಮಣನನ್ನು ಅನೇಕ ಬಾರಿ ಸತ್ಕರಿಸಿ, ಸಂಶಯರಹಿತವಾದ ಮಾತುಗಳನ್ನು ಅತಿಥಿಯಾದ ಬ್ರಾಹ್ಮಣನಿಗೆ ಬಂಧುಗಳೆಲ್ಲ ಹೇಳಿದರು.

ಷಷ್ಠೋ ಹಿ ದಿವಸಸ್ತೇऽದ್ಯ ಪ್ರಾಪ್ತಸ್ಯೇಹ ತಪೋಧನ ।
ನ ಚಾಭಿಲಷಸೇ ಕಿಂಚಿದಾಹಾರಂ ಧರ್ಮವತ್ಸಲ ॥೫॥

ಧರ್ಮವತ್ಸಲನೇ, ತಪೋಧನನೇ, ನೀನು ಇಲ್ಲಿಗೆ ಆಗಮಿಸಿ ಆರು

ದಿವಸಗಳಾದವು. ಆದರೆ ನೀನು ಸ್ವಲ್ಪವೂ ಆಹಾರವನ್ನು ಸ್ವೀಕರಿಸದೆ, ನಮ್ಮಿಂದ ಏನೂ ಬಯಸದೆ ಹಾಗೆ ಕುಳಿತಿರುವಿ.

ಅಸ್ಮಾನಭಿಗತಶ್ಚಾಸಿ ವಯಂ ಚ ತ್ವಾಮುಪಸ್ಥಿತಾಃ ।
ಕಾರ್ಯಂ ಚಾತಿಥ್ಯಮಸ್ಮಾಭಿರ್ವಯಂ ಸರ್ವೇ ಕುಟುಂಬಿನಃ ॥೬॥

ನಮ್ಮ ಮನೆಗೆ ಅತಿಥಿಯಾಗಿ ನೀನು ಆಗಮಿಸಿರುವಿ. ನಾವೆಲ್ಲರೂ ನಿನ್ನ ಬಳಿ ಆಗಮಿಸಿದ್ದೇವೆ. ನಾಗರಾಜನ ಕುಟುಂಬಿಗಳಾದ ನಾವೆಲ್ಲರೂ ನಿನಗೆ ಆತಿಥ್ಯವನ್ನು ಮಾಡುವುದು ಕರ್ತವ್ಯವಾಗಿದೆ.

ಮೂಲಂ ಫಲಂ ವಾ ಪರ್ಣಂ ವಾ ಪಯೋ ವಾ ದ್ವಿಜಸತ್ತಮ ।
ಆಹಾರಹೇತೋರನ್ನಂ ವಾ ಭೋಕ್ತುಮರ್ಹಸಿ ಬ್ರಾಹ್ಮಣ ॥೭॥

ಬ್ರಾಹ್ಮಣನೇ, ಗೆಡ್ಡೆಗಳಾಗಲಿ, ಹಣ್ಣಾಗಲಿ, ಎಲೆಯಾಗಲಿ, ಹಾಲಾಗಲಿ ಆಹಾರಕ್ಕಾಗಿ ಅನ್ನವನ್ನಾಗಲಿ ನೀನು ಸ್ವೀಕರಿಸಲು ಅರ್ಹನಾಗಿರುವಿ.

ತ್ಯಕ್ತಾಹಾರೇಣ ಭವತಾ ವನೇ ನಿವಸತಾ ಸತಾ ।
ಬಾಲವೃದ್ಧಮಿದಂ ಸರ್ವಂ ಪೀಡ್ಯತೇ ಧರ್ಮಸಂಕಟಾತ್ ॥೮॥

ಈ ನಮ್ಮ ವನದಲ್ಲಿಯೇ ವಾಸ ಮಾಡುತ್ತಾ ಆಹಾರವನ್ನು ತ್ಯಜಿಸಿರುವ ನಿನ್ನಿಂದ ಆಬಾಲವೃದ್ಧರಾದ ನಾವೆಲ್ಲರೂ ಧರ್ಮಸಂಕಟದಿಂದ ಪೀಡಿತರಾಗಿದ್ದೇವೆ.

ನ ಹಿ ನೋ ಭ್ರೂಣಹಾ ಕಶ್ಚಿದ್ ರಾಜಾಪಥ್ಯೋಽನೃತೋಽಪಿ ವಾ ।
ಪೂರ್ವಾಶೀ ವಾ ಕುಲೇ ಹ್ಯಸ್ಮಿನ್ ದೇವತಾತಿಥಿಬಂಧುಷು ॥೯॥

ಈ ನಮ್ಮ ಕುಲದಲ್ಲಿ ಭ್ರೂಣಹತ್ಯೆಯನ್ನು ಮಾಡಿದವನಾಗಲಿ, ರಾಜನಿಗೆ ವಿರುದ್ಧವಾಗಿ ವರ್ತಿಸಿದವನಾಗಲಿ, ಸುಳ್ಳು ಮಾತುಗಳನ್ನು ಹೇಳುವವನಾಗಲಿ, ದೇವತೆ, ಅತಿಥಿಗಳಿಗೆ ನೀಡದೆ ಉಣ್ಣುವವನಾಗಲಿ ಯಾರೂ ಇರುವುದಿಲ್ಲ.

ಬ್ರಾಹ್ಮಣಃ

ಉಪದೇಶೇನ ಯುಷ್ಮಾಕಮಾಹಾರೋಽಯಂ ಮಯಾ ವೃತಃ ।
ದ್ವಿರೂನಂ ದಶರಾತ್ರಂ ವೈ ನಾಗಸ್ಯಾಗಮನಂ ಪ್ರತಿ ॥೧೦॥

ಬ್ರಾಹ್ಮಣ– ನಿಮ್ಮ ಹಿತಕರವಾದ ಮಾತುಗಳಿಂದಲೇ ನಾನು ಆಹಾರವನ್ನು ಸ್ವೀಕರಿಸಿದಂತಾಯಿತು. ನಾಗರಾಜನ ಆಹಾರಕ್ಕೆ ಹತ್ತಕ್ಕೆ ಎರಡು ದಿನ ಕಡಿಮೆಯಾದ ರಾತ್ರಿಗಳು ಮಾತ್ರ ಉಳಿದಿರುತ್ತವೆ. (ಅರ್ಥಾತ್ ಎಂಟು ದಿನ ಮಾತ್ರ ಉಳಿದಿವೆ).

ಯದ್ಯಷ್ಟರಾತ್ರೇ ನಿರ್ಯಾತೇ ನಾಗಮಿಷ್ಯತಿ ಪನ್ನಗಃ ।
ತದಾಹಾರಂ ಕರಿಷ್ಯಾಮಿ ತನ್ನಿಮಿತ್ತಮಿದಂ ವ್ರತಮ್ ॥೧೧॥

ಒಂದು ವೇಳೆ ಎಂಟು ದಿವಸ ಕಳೆದ ಬಳಿಕವೂ ನಾಗರಾಜನು ಆಗಮಿಸದಿದ್ದಲ್ಲಿ ನಾನು ಆಹಾರವನ್ನು ಸೇವಿಸುತ್ತೇನೆ. ಅವನನ್ನು ನೋಡುವ ದೃಷ್ಟಿಯಿಂದಲೇ ನನ್ನ ಈ ವ್ರತವು. ನಾನು ವ್ರತನಿಷ್ಠನಾಗಿರುವುದರಿಂದ ನಿರಾಹಾರನಾಗಿದ್ದೇನೆ ಎಂದು ನೀವು ದುಃಖ ಪಡಬೇಡಿರಿ. ಅವನ ಸಂದರ್ಶನಕ್ಕಾಗಿ ಈ ವ್ರತವು.

ಕರ್ತವ್ಯೋ ನ ಚ ಸಂತಾಪೋ ಗಮ್ಯತಾಂ ಚ ಯಥಾಗತಮ್ ।
ತನ್ನಿಮಿತ್ತಂ ವ್ರತಂ ಮಹ್ಯಂ ನೈತದ್ ಭೇತ್ತುಮಿಹಾರ್ಹಥ ॥೧೨॥

ನೀವು ಬಂದಂತೆ ಹೊರಟು ಹೋಗಿರಿ. ನನ್ನ ಕರ್ತವ್ಯಕ್ಕೆ ವಿಘ್ನ ಒಡ್ಡದಿರಿ. ಅವನ ನಿಮಿತ್ತವಾಗಿ ಅನುಷ್ಠಾನ ಮಾಡುವ ವ್ರತವನ್ನು ಭಂಗಪಡಿಸಬೇಡಿ. ಇದು ನಿಮಗೆ ಯೋಗ್ಯವಲ್ಲ.

ಭೀಷ್ಮಃ

ತೇನ ತೇ ಸಮನುಜ್ಞಾತಾ ಬ್ರಾಹ್ಮಣೇನ ಭುಜಂಗಮಾಃ ।
ಸ್ವಮೇವ ಭವನಂ ಜಗ್ಮುರಕೃತಾರ್ಥಾ ನರರ್ಷಭ ॥೧೩॥

ಭೀಷ್ಮ– ಬ್ರಾಹ್ಮಣನು ಹೇಳಿದ ಮಾತನ್ನು ಕೇಳಿ ನಾಗಗಳೆಲ್ಲರೂ ಅವನ ಅನುಮತಿಯನ್ನು ಪಡೆದು ಏನೂ ಮಾಡಲಾಗದೆ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಏಕನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೆರಡನೆಯ ಅಧ್ಯಾಯ

ನಾಗರಾಜನು ಮನೆಗೆ ಆಗಮಿಸಿದುದು. ನಾಗಪತ್ನಿಯು ಬ್ರಾಹ್ಮಣನನ್ನು ನೋಡಲು ಒತ್ತಾಯಿಸಿದುದು.

ಭೀಷ್ಮಃ

ಅಥ ಕಾಲೇ ಬಹುತಿಥೇ ಪೂರ್ಣೇ ಪ್ರಾಪ್ತೋ ಭುಜಂಗಮಃ ।
ದತ್ತಾಭ್ಯನುಜ್ಞಃ ಸ್ವಂ ವೇಶ್ಮ ಕೃತಕರ್ಮಾ ವಿವಸ್ವತಃ ॥೧॥

ಭೀಷ್ಮ– ಯುಧಿಷ್ಠಿರನೇ, ಸೂರ್ಯನ ಬಳಿ ವಾಸ ಮಾಡಬೇಕಾದ ದಿನದ ನಿಯಮಗಳು ಪೂರ್ಣವಾದ ಬಳಿಕ ಕೆಲಸ ಮುಗಿಸಿದ ನಾಗನು ಸೂರ್ಯನ ಅನುಮತಿಯನ್ನು ಪಡೆದು ತನ್ನ ಮನೆಗೆ ಬಂದನು.

ತಂ ಭಾರ್ಯಾ ಸಮಭಿಕ್ರಾಮತ್ ಪಾದಶೌಚಾದಿಭಿರ್ಗುಣೈಃ ।
ಉಪಪನ್ನಾಂ ಚ ತಾಂ ಸಾಧ್ವೀಂ ಪನ್ನಗಃ ಪರ್ಯಪೃಚ್ಛತ ॥೨॥

ಪತಿಯ ಆಗಮನವನ್ನು ಕಂಡ ಕೂಡಲೇ ಸಾಧ್ವಿಯಾದ ನಾಗಪತ್ನಿಯು ಪತಿಗೆ ಕಾಲುತೊಳೆಯಲು ನೀರನ್ನು, ಸತ್ಕಾರಕ್ಕಾಗಿ ಇತರ ಸಾಮಗ್ರಿಗಳನ್ನು ತೆಗೆದುಕೊಂಡು ಪತಿಯ ಬಳಿ ಹೋದಳು. ಪತಿಯು ಸಮೀಪಿಸುತ್ತಲೇ ನಾಗರಾಜನು ಪ್ರಶ್ನಿಸಿದನು.

ಅಪಿ ತ್ವಮಸಿ ಕಲ್ಯಾಣಿ ದೇವತಾತಿಥಿಪೂಜನೇ ।
ಪೂರ್ವಮುಕ್ತೇನ ವಿಧಿನಾ ಯುಕ್ತಾ ಯುಕ್ತೇನ ಮತ್ಸಮಮ್ ॥೩॥

ಕಲ್ಯಾಣಿಯೇ, ನಾನು ಹಿಂದೆ ಹೇಳಿದ ರೀತಿಯಲ್ಲಿಯೇ ವಿಧಿಬದ್ಧವಾಗಿ ದೇವತೆಗಳನ್ನು, ಅತಿಥಿಗಳನ್ನು ಪೂಜಿಸುವುದರಲ್ಲಿ ನನ್ನಂತೆಯೇ ಧರ್ಮದಲ್ಲಿ ನಿರತಳಾಗಿರುವಿಯಷ್ಟೆ?

ನ ಖಲ್ವಸ್ಯಕೃತಾರ್ಥೇನ ಸ್ತ್ರೀಬುದ್ಧ್ಯಾ ಮಾರ್ದವೀಕೃತಾ ।
ಮದ್ವಿಯೋಗೇನ ಸುಶ್ರೋಣಿ ವಿಯುಕ್ತಾ ಧರ್ಮಸೇತುನಾ ॥೪॥

ನಾನು ಇಲ್ಲ ಎಂಬ ಕಾರಣದಿಂದ ಸ್ತ್ರೀ ಸಹಜವಾದ ಬುದ್ಧಿಯಿಂದ ಧರ್ಮ ಮರ್ಯಾದೆಯನ್ನು ಮೀರಿ ವರ್ತಿಸಿಲ್ಲವಷ್ಟೆ?

ನಾಗಭಾರ್ಯಾ

ಶಿಷ್ಯಾಣಾಂ ಗುರುಶುಶ್ರೂಷಾ ವಿಪ್ರಾಣಾಂ ವೇದಪಾರಣಮ್ ।
ಭೃತ್ಯಾನಾಂ ಸ್ವಾಮಿವಚನಂ ರಾಜ್ಞಾಂ ಲೋಕಾನುಪಾಲನಮ್ ॥೫॥

ನಾಗಪತ್ನಿ– ಪತಿದೇವನೇ, ಗುರುಶುಶ್ರೂಷೆಯು ಶಿಷ್ಯರ ಧರ್ಮವು. ವೇದಗಳನ್ನು ಅಧ್ಯಯನ ಮಾಡುವುದು ಬ್ರಾಹ್ಮಣ ಧರ್ಮವು. ರಾಜನ ಆಜ್ಞೆಯನ್ನು ಪಾಲಿಸುವುದು ಸೇವಕರ ಧರ್ಮವು. ಪ್ರಜೆಗಳನ್ನು ಧರ್ಮದಿಂದ ರಕ್ಷಿಸುವುದು ರಾಜರ ಧರ್ಮವು.

ಸರ್ವಭೂತಪರಿತ್ರಾಣಂ ಕ್ಷತ್ರಧರ್ಮ ಇಹೋಚ್ಯತೇ ।
ವೈಶ್ಯಾನಾಂ ಯಜ್ಞಸಂವೃತ್ತಿರಾತಿಥೇಯಸಮನ್ವಿತಾ ॥೬॥

ಸಮಸ್ತ ಪ್ರಾಣಿಗಳಿಗೂ ಜಗತ್ತಿನಲ್ಲಿ ರಕ್ಷಣೆ ನೀಡುವುದು ಕ್ಷತ್ರಿಯ ಧರ್ಮವು. ಅತಿಥಿ ಸತ್ಕಾರದ ಜೊತೆ ಯಜ್ಞವನ್ನಾಚರಿಸುವುದು ವೈಶ್ಯಧರ್ಮವು.

ವಿಪ್ರಕ್ಷತ್ರಿಯವೈಶ್ಯಾನಾಂ ಶುಶ್ರೂಷಾ ಶೂದ್ರಕರ್ಮ ತತ್ ।
ಗೃಹಸ್ಥಧರ್ಮೋ ನಾಗೇಂದ್ರ ಸರ್ವಭೂತಹಿತೈಷಿತಾ ॥೭॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಸೇವಿಸುವುದು ಶೂದ್ರರ ಧರ್ಮವು. ಸಮಸ್ತ ಪ್ರಾಣಿಗಳಿಗೂ ಹಿತ ಚಿಂತಿಸುವುದು ಗೃಹಸ್ಥ ಧರ್ಮವು.

ನಿಯತಾಹಾರತಾ ನಿತ್ಯಂ ವ್ರತಚರ್ಯಾ ಯಥಾಕ್ರಮಮ್ ।
ಧರ್ಮೋ ಹಿ ಧರ್ಮಸಂಬಂಧಾದಿಂದ್ರಿಯಾಣಾಂ ವಿಶೇಷಣಮ್ ॥೮॥

ವಿಧಿವತ್ತಾಗಿ ಮಿತಾಹಾರವನ್ನು ಸೇವಿಸಿ ವ್ರತ ಆಚರಿಸುವುದು ಸಮಸ್ತರ ಧರ್ಮವು. ಈ ಧರ್ಮವು ವಿಶೇಷವಾಗಿ ಇಂದ್ರಿಯಗಳನ್ನು ಧರ್ಮಮಾರ್ಗದಲ್ಲಿಯೇ ಸಾಗುವಂತೆ ಮಾಡುತ್ತದೆ.

ಅಹಂ ಕಸ್ಯ ಕುತೋ ವಾಹಂ ಕಃ ಕೋ ಮೇ ಹ ಭವೇದಿತಿ ।
ಪ್ರಯೋಜನಮತಿರ್ನಿತ್ಯಮೇವಂ ಮೋಕ್ಷಾಶ್ರಮೀ ಭವೇತ್ ॥೯॥

ನಾನು ಯಾರಿಗೆ ಸಂಬಂಧಿಸಿದವನು? ಎಲ್ಲಿಂದ ಬಂದಿದ್ದೇನೆ? ನನ್ನವರು ಯಾರು? ಈ ಜೀವನದ ಪ್ರಯೋಜನವೇನು? ಈ ರೀತಿಯಾಗಿ ಈ ವಿಷಯಗಳನ್ನೇ ಚಿಂತಿಸುತ್ತಾ ಸಂನ್ಯಾಸಿಯಾಗಿರುವುದು ಮೋಕ್ಷಾಶ್ರಮಿಯ ಧರ್ಮವಾಗಿದೆ.

ಪತಿವ್ರತಾತ್ವಂ ಭಾರ್ಯಾಯಾಃ ಪರಮೋ ಧರ್ಮ ಉಚ್ಯತೇ ।
ತವೋಪದೇಶಾನ್ನಾಗೇಂದ್ರ ತಚ್ಚ ತತ್ತ್ವೇನ ವೇದ್ಮಿ ವೈ ॥೧೦॥

ಪಾತಿವ್ರತ್ಯವೇ ಎಲ್ಲಕ್ಕಿಂತ ಶ್ರೇಷ್ಠವಾದ ಪತ್ನಿಯ ಧರ್ಮವಾಗಿದೆ. ನಿನ್ನ ಉಪದೇಶದಿಂದ ಆ ಧರ್ಮವನ್ನು ಯಥಾವತ್ತಾಗಿ ತಿಳಿದಿರುತ್ತೇನೆ.

ಸಾಹಂ ಧರ್ಮಂ ವಿಜಾನಂತೀ ಧರ್ಮನಿತ್ಯೇ ತ್ವಯಿ ಸ್ಥಿತೇ ।
ಸತ್ಪಥಂ ಕಥಮುತ್ಸೃಜ್ಯ ಯಾಸ್ಯಾಮಿ ವಿಷಮೇ ಪಥಿ ॥೧೧॥

ಧರ್ಮಮಾರ್ಗದಲ್ಲಿ ಸ್ಥಿರನಾದ ಪತಿಯನ್ನು ಪಡೆದ, ನಿನ್ನ ಪತ್ನಿಯಾದ ನಾನು ಈ ಧರ್ಮ ಅರಿತಿರುವಾಗ, ಸನ್ಮಾರ್ಗವನ್ನು ತೊರೆದು ದುರ್ಮಾರ್ಗವನ್ನು ಹೇಗೆ ತಾನೆ ಅವಲಂಬಿಸಿಯೇನು?

ದೇವತಾನಾಂ ಮಹಾಭಾಗ ಧರ್ಮಚರ್ಯಾ ನ ಹೀಯತೇ ।
ಅತಿಥೀನಾಂ ಚ ಸತ್ಕಾರೇ ನಿತ್ಯಯುಕ್ತಾಸ್ಮ್ಯತಂದ್ರಿತಾ ॥೧೨॥

ಮಹಾಭಾಗನೇ, ದೇವತಾರಾಧನೆಯ ಧರ್ಮಗಳಲ್ಲಿ ಯಾವ ನ್ಯೂನತೆಯೂ ಉಂಟಾಗಿಲ್ಲ. ಅತಿಥಿ ಸತ್ಕಾರದ ವಿಷಯದಲ್ಲಿಯೂ ನಾನು ಅಜಾಗರೂಕತೆಯಿಂದ ವರ್ತಿಸುತ್ತಿಲ್ಲ.

ಸಪ್ತಾಷ್ಟದಿವಸಾಸ್ತ್ವದ್ಯ ವಿಪ್ರಸ್ಯೇಹಾಗತಸ್ಯ ವೈ ।
ಸ ಚ ಕಾರ್ಯಂ ನ ಮೇ ಖ್ಯಾತಿ ದರ್ಶನಂ ತವ ಕಾಂಕ್ಷತಿ ॥೧೩॥

ಆದರೆ ಇಂದಿಗೆ ಹದಿನೈದು ದಿವಸಗಳ ಹಿಂದೆ ಒಬ್ಬ ವಿಪ್ರನು ಇಲ್ಲಿಗೆ ಆಗಮಿಸಿದ್ದಾನೆ. ಅವನ ಕಾರ್ಯನಿಮಿತ್ತ ಏನು ಎಂಬುದನ್ನು ನನಗೆ ಹೇಳಲಿಲ್ಲ. ನಿನ್ನ ದರ್ಶನಾಕಾಂಕ್ಷಿಯಾಗಿದ್ದಾನೆ.

ಗೋಮತ್ಯಾಸ್ತ್ವೇಷ ಪುಲಿನೇ ತದ್ದರ್ಶನಸಮುತ್ಸುಕಃ ।
ಆಸೀನೋಽಽವರ್ತಯನ್ ಬ್ರಹ್ಮ ಬ್ರಾಹ್ಮಣಃ ಸಂಶಿತವ್ರತಃ ॥೧೪॥

ವ್ರತಶೀಲನಾದ ಬ್ರಾಹ್ಮಣನು ನಿನ್ನನ್ನು ನೋಡಲೆಂದು ವೇದಪಾರಾಯಣ ಮಾಡುತ್ತಾ ಗೋಮತಿಯ ತೀರದಲ್ಲಿ ಆಸಕ್ತಿಯಿಂದ ಕುಳಿತು ಕಾಯುತ್ತಿದ್ದಾನೆ.

ಅಹಂ ತ್ವನೇನ ನಾಗೇಂದ್ರ ಸಾಮಪೂರ್ವಂ ಸಮಾಹಿತಾ ।
ಪ್ರಸ್ಥಾಪ್ಯೋ ಮತ್ಸಕಾಶಂ ಸ ಸಂಪ್ರಾಪ್ತೋ ಭುಜಗೋತ್ತಮಃ ॥೧೫॥

ನಾಗರಾಜನು ಬಂದ ಕೂಡಲೇ ನನ್ನ ಬಳಿ ಕಳುಹಿಸಬೇಕು ಎಂಬ ಸತ್ಯಪ್ರತಿಜ್ಞೆಯನ್ನು ನನ್ನಿಂದ ಮಾಡಿಸಿದ್ದಾನೆ.

ಏತಚ್ಛ್ರುತ್ವಾ ಮಹಾಪ್ರಾಜ್ಞ ತತ್ರ ಗಂತುಂ ತ್ವಮರ್ಹಸಿ ।
ದಾತುಮರ್ಹಸಿ ವಾ ತಸ್ಯ ದರ್ಶನಂ ದರ್ಶನಶ್ರವಃ ॥೧೬॥

ಚಕ್ಷುಶ್ರವಸನಾದ ಸರ್ಪರಾಜನೇ, ನನ್ನ ಮಾತನ್ನು ಕೇಳಿದ ನೀನು ಕೂಡಲೇ ಅವನ ಬಳಿ ಹೋಗುವದು ಯೋಗ್ಯವಾಗಿದೆ. ಆ ಬ್ರಾಹ್ಮಣನಿಗೆ ದರ್ಶನವನ್ನು ನೀಡುವುದು ಉಚಿತವಾದುದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಿನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ಮೂರನೆಯ ಅಧ್ಯಾಯ

ಪತ್ನಿಯ ಮಾತಿನಿಂದ ಪದ್ಮರಾಜನು ಬ್ರಾಹ್ಮಣನ ಬಳಿ ಹೋಗಲು ನಿಶ್ಚಯಿಸಿದುದು.

ನಾಗಃ

ಅಥ ಬ್ರಾಹ್ಮಣರೂಪೇಣ ಕಂ ತಂ ಸಮನುಪಶ್ಯಸಿ ।
ಮಾನುಷಂ ಕೇವಲಂ ವಿಪ್ರಂ ದೇವಂ ವಾಥ ಶುಚಿಸ್ಮಿತೇ ॥೧॥

ನಾಗ– ಶುಚಿಸ್ಮಿತೆಯೇ, ನಾಗಕುಮಾರಿಯೇ, ನೀನು ಬ್ರಾಹ್ಮಣರೂಪದಿಂದ ಯಾರನ್ನು ಕಂಡೆ? ಬ್ರಾಹ್ಮಣರೂಪವನ್ನು ಧರಿಸಿಬಂದಿರುವ ಅವನು ಮನುಷ್ಯನೋ, ದೇವತೆಯೋ?

ಕೋ ಹಿ ಮಾಂ ಮಾನುಷಃ ಶಕ್ತೋ ದ್ರಷ್ಟುಕಾಮೋ ಯಶಸ್ವಿನಿ ।
ಸಂದರ್ಶನರುಚಿರ್ವಾಕ್ಯಮಾಜ್ಞಾಪೂರ್ವಂ ವದಿಷ್ಯತಿ ॥೨॥

ಯಶಸ್ವಿನಿಯೇ, ಮನುಷ್ಯರಲ್ಲಿ ನನ್ನನ್ನು ನೋಡಲು ಯಾವನು ತಾನೇ ಶಕ್ತನು? ಒಂದು ವೇಳೆ ಸಮರ್ಥನಾಗಿದ್ದರೂ ನೋಡಲು ಬಯಸಿದರೂ ತನ್ನ ಬಳಿ ಬಂದು ದರ್ಶನ ನೀಡಬೇಕೆಂದು ಯಾವ ಮನುಷ್ಯನು ಆಜ್ಞಾಪೂರ್ವಕವಾಗಿ ಹೇಳಲು ಸಾಧ್ಯ ?

ಸುರಾಸುರಗಣಾನಾಂ ಚ ದೇವರ್ಷೀಣಾಂ ಚ ಭಾಮಿನಿ ।
ನನು ನಾಗಾ ಮಹಾವೀರ್ಯಾಃ ಸೌರಸೇಯಾಸ್ತರಸ್ವಿನಃ ॥೩॥

ಭಾಮಿನಿಯೇ, ಸುರಸೆಯ ವಂಶದಲ್ಲಿ ಉತ್ಪನ್ನರಾದ, ಅತ್ಯಂತ ವೇಗಶಾಲಿಯಾದ ನಾವು ಸುರಾಸುರರಿಗಿಂತಲೂ, ದೇವರ್ಷಿಗಳಿಗಿಂತಲೂ ಮಹಾವೀರ್ಯರು, ಪರಾಕ್ರಮಿಗಳು.

ವಂದನೀಯಾಶ್ಚ ವರದಾ ವಯಮಪ್ಯನುಯಾಯಿನಃ ।
ಮನುಷ್ಯಾಣಾಂ ವಿಶೇಷೇಣ ನಾವೇಕ್ಷ್ಯಾ ಇತಿ ಮೇ ಮತಿಃ ॥೪॥

ನಮ್ಮನ್ನು ಅನುಸರಿಸುವ ಭಕ್ತರಿಗೆ ವರವನ್ನು ನೀಡುತ್ತೇವೆ. ಹೀಗಿರಲು ಮನುಷ್ಯರಿಂದ ಸುಲಭವಾಗಿ ನೋಡಲು ಯೋಗ್ಯರಲ್ಲ. ಇದು ನನ್ನ ಅಭಿಪ್ರಾಯವು.

ನಾಗಭಾರ್ಯಾ

ಆರ್ಜವೇನಾಭಿಜಾನಾಮಿ ನಾಸೌ ದೇವೋಽನಿಲಾಶನ ।
ಏಕಂ ತ್ವಸ್ಯ ವಿಜಾನಾಮಿ ಭಕ್ತಿಮಾನತಿರೋಷಣ ॥೫॥

ನಾಗಪತ್ನಿ– ವಾಯುಭಕ್ಷಕನೇ, ಭಯಂಕರ ಸಿಟ್ಟುಳ್ಳವನೇ, ಆ ಬ್ರಾಹ್ಮಣನಲ್ಲಿರುವ ಸರಳತೆಯನ್ನು ಕಂಡು ನಾನು ಅವನನ್ನು ದೇವತೆಯಲ್ಲನೆಂದು ತಿಳಿದಿದ್ದೇನೆ. ಅವನು ನಿನ್ನಲ್ಲಿ ಭಕ್ತಿಯುಳ್ಳವನು ಎಂದು ಮಾತ್ರ ತಿಳಿದಿರುತ್ತೇನೆ.

ಸ ಹಿ ಕಾರ್ಯಾಂತರಾಕಾಂಕ್ಷೀ ಜಲೇಪ್ಸುಃ ಸ್ತೋಕಕೋ ಯಥಾ ।
ವರ್ಷಂ ವರ್ಷಪ್ರಿಯಃ ಪಕ್ಷೀ ದರ್ಶನಂ ತವ ಕಾಂಕ್ಷತಿ ॥೬॥

ವರ್ಷಋತುವನ್ನು ಪ್ರೀತಿಸುವ, ನೀರನ್ನು ಬಯಸುವ ಚಾತಕ ಪಕ್ಷಿಯು ಹೇಗೆ ಮಳೆಯಾಗುವುದನ್ನೇ ನಿರೀಕ್ಷಿಸುತ್ತಿರುತ್ತದೋ ಅದರಂತೆ ಯಾವುದೋ ಕಾರ್ಯದ ಸಿದ್ಧಿಗಾಗಿ ಬ್ರಾಹ್ಮಣನು ನಿನ್ನ ದರ್ಶನವನ್ನೇ ಬಯಸುತ್ತಿದ್ದಾನೆ.

ನ ಹಿ ತ್ವಾ ದೈವತಂ ಕಿಂಚಿದ್ ವಿವಿಗ್ನಂ ಪ್ರತಿಪಾಲಯೇತ್ ।
ತುಲ್ಯೇ ಹ್ಯಭಿಜನೇ ಜಾತೋ ನ ಕಶ್ಚಿತ್ ಪರ್ಯುಪಾಸತೇ ॥೭॥

ಅವನು ಪೂಜ್ಯನಾದ ನಿನ್ನ ದರ್ಶನವನ್ನು ಬಿಟ್ಟು ಬೇರೆ ಏನನ್ನೂ ಬಯಸುತ್ತಿಲ್ಲ. ಉತ್ತಮವಾದ ಕುಲದಲ್ಲಿ ಹುಟ್ಟಿರುವ, ನಿನಗೆ ಸಮಾನನಾದ ಯಾವನೇ ಆದರೂ ಅತಿಥಿಯನ್ನು ಉಪೇಕ್ಷಿಸಿ ಮನೆಯಲ್ಲಿ ಇರುವುದಿಲ್ಲ.

ತದ್ರೋಷಂ ಸಹಜಂ ತ್ಯಕ್ತ್ವಾ ತ್ವಮೇನಂ ದ್ರಷ್ಟುಮರ್ಹಸಿ ।
ಆಶಾಛೇದೇನ ತಸ್ಯಾದ್ಯ ನಾತ್ಮಾನಂ ದಗ್ಧುಮರ್ಹಸಿ ॥೮॥

ಆದ್ದರಿಂದ ನಿನಗೆ ಸಹಜವಾಗಿ ಬಂದಿರುವ ಕೋಪವನ್ನು ತ್ಯಜಿಸಿ, ಅವನನ್ನು ನೋಡುವದು ಯೋಗ್ಯವೆನಿಸಿದೆ. ಅವನ ಆಸೆಯನ್ನು ನಾಶಗೊಳಿಸಿ ಅದರ ಪರಿಣಾಮದಿಂದ ನಿನ್ನನ್ನು ಸುಟ್ಟುಕೊಳ್ಳಲು ಹೋಗಬೇಡ.

ಆಶಯಾ ತ್ವಭಿಪನ್ನಾನಾಮಕೃತ್ವಾಶ್ರುಪ್ರಮಾರ್ಜನಮ್ ।
ರಾಜಾ ವಾ ರಾಜಪುತ್ರೋ ವಾ ಭ್ರೂಣಹತ್ಯೈವ ಯುಜ್ಯತೇ ॥೯॥

ಯಾವುದೋ ಅಪೇಕ್ಷೆಯನ್ನು ಇಟ್ಟುಕೊಂಡು ಶರಣಾಗತರಾಗಿ ಬಂದವರ ಕಣ್ಣೀರನ್ನು ಒರೆಸಿ ಸಂತೈಸದಿದ್ದರೆ ಅವನು ರಾಜನಾಗಲಿ, ರಾಜಪುತ್ರನೇ ಆಗಲಿ ಭ್ರೂಣ ಹತ್ಯಾ ಪಾಪದಿಂದ ಯುಕ್ತನಾಗುತ್ತಾನೆ.

ಮೌನಾಜ್ಜ್ಞಾನಫಲಾವಾಪ್ತಿರ್ದಾನೇನ ಚ ಯಶೋ ಮಹತ್ ।
ವಾಗ್ಮಿತ್ವಂ ಸತ್ಯವಾಕ್ಯೇನ ಪರತ್ರ ಚ ಮಹೀಯತೇ ॥೧೦॥

ಮೌನವ್ರತದಿಂದ ಜ್ಞಾನಫಲವು, ದಾನದಿಂದ ಕೀರ್ತಿಯು, ಸತ್ಯವಾಕ್ಯದಿಂದ ವಾಗ್ಮಿತ್ವವು ಉಂಟಾಗುತ್ತದೆ. ಇದರಿಂದ ಪರಲೋಕದಲ್ಲೂ ಪೂಜ್ಯನಾಗುತ್ತಾನೆ.

ಭೂಮಿಪ್ರದಾನೇನ ಗತಿಂ ಲಭತ್ಯಾಶ್ರಮಸಮ್ಮಿತಾಮ್ ।
ನಷ್ಟಸ್ಯಾರ್ಥಸ್ಯ ಸಂಪ್ರಾಪ್ತಿಂ ಕೃತ್ವಾ ಫಲಮುಪಾಶ್ನುತೇ ॥೧೧॥

ಭೂದಾನದಿಂದ ಆಶ್ರಮಧರ್ಮ ಅನುಷ್ಠಾನ ಮಾಡಿದ ಫಲಕ್ಕೆ ಸಮಾನವಾದ ಗತಿಯನ್ನು ಹೊಂದುತ್ತಾನೆ. ನ್ಯಾಯಪೂರ್ವಕವಾಗಿ ಧನಸಂಗ್ರಹಿಸುವುದರಿಂದ ಮಹಾಫಲವನ್ನು ಹೊಂದುತ್ತಾನೆ.

ಅಭಿಪ್ರೇತಾಮಸಂಕ್ಲಿಷ್ಟಾಂ ಕೃತ್ವಾಕಾಮವತೀಂ ಕ್ರಿಯಾಮ್ ।
ನ ಯಾತಿ ನಿರಯಂ ಕಶ್ಚಿದಿತಿ ಧರ್ಮವಿದೋ ವಿದುಃ ॥೧೨॥

ತನ್ನ ಇಷ್ಟಕ್ಕೆ ಅನುಗುಣವಾದ, ಪಾಪದ ಸಂಬಂಧವಿಲ್ಲದ, ತನಗೆ ಯೋಗ್ಯವಾದ ಕಾರ್ಯವನ್ನು ಮಾಡುವುದರಿಂದ ಯಾರೇ ಆಗಲಿ ನರಕ ಹೊಂದುವುದಿಲ್ಲ ಎಂದು ಧರ್ಮಜ್ಞರು ಹೇಳುತ್ತಾರೆ.

ನಾಗಃ

ಅಭಿಮಾನೇನ ಮಾನೋ ಮೇ ಜಾತಿದೋಷೇಣ ವೈ ಮಹಾನ್ ।
ರೋಷಃ ಸಂಕಲ್ಪಜಃ ಸಾಧ್ವಿ ದಗ್ಧೋ ವಾಚಾಗ್ನಿನಾ ತ್ವಯಾ ॥೧೩॥

ನಾಗ– ಸಾಧ್ವಿಯೇ, ವೀರ್ಯ, ಪರಾಕ್ರಮ, ಸತ್ಕುಲದಲ್ಲಿ ಜನ್ಮ ಮುಂತಾದ ಅಭಿಮಾನದಿಂದ ನಾನು ಉನ್ಮತ್ತನಾಗಿಲ್ಲ. ಆದರೆ ಜಾತಿಕೃತವಾದ ಕೋಪವಿದೆ. ಆದರೂ ಸ್ವಾಭಾವಿಕವಾದ ಕೋಪವು ನಿನ್ನ ಮಾತಿನಿಂದ ಭಸ್ಮವಾಗಿ ಹೋಯಿತು.

ನ ಚ ರೋಷಾದಹಂ ಸಾಧ್ವಿ ಪಶ್ಯೇಯಮಧಿಕಂ ತಮಃ ।
ಯಸ್ಯ ವಕ್ತವ್ಯತಾಂ ಯಾಂತಿ ವಿಶೇಷೇಣ ಭುಜಂಗಮಾಃ ॥೧೪॥

ಸಾಧ್ವಿಯೇ, ಕೋಪಕ್ಕಿಂತ ಅಧಿಕವಾದ ಅಂಧಕಾರವನ್ನು ನಾನು ಕಂಡಿಲ್ಲ. ಅದರಲ್ಲಿಯೂ ವಿಶೇಷವಾಗಿ ಸರ್ಪಗಳು ಅತ್ಯಂತ ರೋಷಯುಕ್ತವಾದ ಪ್ರಾಣಿಗಳು ಎಂಬ ಅಪವಾದವನ್ನು ಹೊಂದಿವೆ.

ರೋಷಸ್ಯ ಹಿ ವಶಂ ಗತ್ವಾ ದಶಗ್ರೀವಃ ಪ್ರತಾಪವಾನ್ ।
ತಥಾ ಶಕ್ರಪ್ರತಿಸ್ಪರ್ಧೀ ಹತೋ ರಾಮೇಣ ಸಂಯುಗೇ ॥೧೫॥

ಪ್ರತಾಪವಂತನಾದ ರಾವಣನು ಇಂದ್ರನಿಗೂ ಸ್ಪರ್ಧಿ ಎನಿಸಿದ್ದ. ಆದರೆ ಅವನು ಕ್ರೋಧವಶನಾಗಿ ಯುದ್ಧದಲ್ಲಿ ರಾಮನಿಂದ ಹತನಾದನು.

ಅಂತಃಪುರಗತಂ ವತ್ಸಂ ಶ್ರುತ್ವಾ ರಾಮೇಣ ನಿರ್ಹೃತಮ್ ।
ಧರ್ಷಣಾದ್ರೋಷಸಂವಿಗ್ನಾಃ ಕಾರ್ತವೀರ್ಯಸುತಾ ಹತಾಃ ॥೧೬॥

ಅಂತಃಪುರದಲ್ಲಿಟ್ಟ ಹೋಮಧೇನುವನ್ನು ಪರಶುರಾಮನು ಕೊಂಡೊಯ್ದನು ಎಂಬ ವಾರ್ತೆಯನ್ನು ಕೇಳಿ, ಆಕ್ರಮಣಬುದ್ಧಿಯ ರೋಷವನ್ನು ಹೊಂದಿ ಉದ್ವಿಗ್ನರಾದ ಕಾರ್ತವೀರ್ಯಾರ್ಜುನರ ಮಕ್ಕಳೆಲ್ಲರೂ ಪರಶುರಾಮನಿಂದ ಹತರಾಗಿ ಹೋದರು.

ಜಾಮದಗ್ನ್ಯೇನ ರಾಮೇಣ ಸಹಸ್ರನಯನೋಪಮಃ ।
ಸಂಯುಗೇ ನಿಹತೋ ರೋಷಾತ್ ಕಾರ್ತವೀರ್ಯೋ ಮಹಾಬಲಃ ॥

ಮಹಾಬಲಿಷ್ಠನಾದ ಇಂದ್ರನಂತೆ ಪರಾಕ್ರಮಿಯಾದ ಕಾರ್ತವೀರ್ಯನು ರೋಷದಿಂದಲೇ ಜಮದಗ್ನಿಯ ಮಗನಾದ ಪರಶುರಾಮನಿಂದ ಯುದ್ಧದಲ್ಲಿ ಹತನಾದನು.

ತದೇಷ ತಪಸಾಂ ಶತ್ರುಃ ಶ್ರೇಯಸಶ್ಚ ನಿಪಾತನಃ ।
ನಿಗೃಹೀತೋ ಮಯಾ ರೋಷಃ ಶ್ರುತ್ವೈವ ವಚನಂ ತವ ॥೧೮॥

ನಿಶ್ಚಿತವಾಗಿಯೂ ಕೋಪವೇ ತಪಸ್ಸಿಗೆ ಶತ್ರುವೆನಿಸಿದೆ. ಕಲ್ಯಾಣ ಮಾರ್ಗದಿಂದ ಭ್ರಷ್ಟಗೊಳಿಸುತ್ತದೆ. ನಿನ್ನ ಮಾತಿನಿಂದ ಆ ಕೋಪವನ್ನು ನಿಗ್ರಹಿಸಿಕೊಂಡಿದ್ದೇನೆ.

ಆತ್ಮಾನಂ ಚ ವಿಶೇಷೇಣ ಪ್ರಶಂಸಾಮ್ಯನಪಾಯಿನಿ ।
ಯಸ್ಯ ಮೇ ತ್ವಂ ವಿಶಾಲಾಕ್ಷಿ ಭಾರ್ಯಾ ಸರ್ವಗುಣಾನ್ವಿತಾ ॥೧೯॥

ಅನಪಾಯಿನಿಯೇ, ವಿಶಾಲಾಕ್ಷಿಯೇ, ಸರ್ವಗುಣಸಂಪನ್ನೆಯಾದ ನಿನ್ನನ್ನು ಪತ್ನಿಯನ್ನಾಗಿ ಹೊಂದಿರುವ ನಾನು ನನ್ನನ್ನೇ ವಿಶೇಷವಾಗಿ ಪ್ರಶಂಸೆ ಮಾಡಿಕೊಳ್ಳುತ್ತೇನೆ.

ಏಷ ತತ್ರೈವ ಗಚ್ಛಾಮಿ ಯತ್ರ ತಿಷ್ಠತ್ಯಸೌ ದ್ವಿಜಃ ।
ಸರ್ವಥಾ ಚೋಕ್ತವಾನ್ ವಾಕ್ಯಂ ನಾಕೃತಾರ್ಥಃ ಪ್ರಯಾಸ್ಯತಿ ॥೨೦॥

ಆ ಬ್ರಾಹ್ಮಣನಿದ್ದ ಸ್ಥಳಕ್ಕೆ ಹೊರಡುತ್ತೇನೆ. ಅವನು ಹೇಳಿದಂತೆ ಮಾಡುತ್ತೇನೆ. ಎಲ್ಲ ರೀತಿಯಿಂದಲೂ ಅವನು ಇಲ್ಲಿಂದ ಕೃತಾರ್ಥನಾಗಿ ಪ್ರಯಾಣ ಮಾಡುವಂತೆ ಮಾಡುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬನಾಲ್ಕನೆಯ ಅಧ್ಯಾಯ

ಬ್ರಾಹ್ಮಣ-ನಾಗರಾಜರ ಸಂಭಾಷಣೆ.

ಭೀಷ್ಮಃ

ಸ ಪನ್ನಗಪತಿಸ್ತತ್ರ ಪ್ರಯಯೌ ಬ್ರಾಹ್ಮಣಂ ಪ್ರತಿ ।
ತಮೇವ ಮನಸಾ ಧ್ಯಾಯನ್ಕಾರ್ಯವತ್ತಾಂ ವಿಚಾರಯನ್ ॥೧॥

ಭೀಷ್ಮ- ನಾಗರಾಜನು ಪತ್ನಿಯ ಬಳಿ ಹೀಗೆ ಹೇಳಿ, ಬ್ರಾಹ್ಮಣನ ಉದ್ದೇಶವೇನೆಂಬುದನ್ನು ಯೋಚಿಸುತ್ತಾ ಬ್ರಾಹ್ಮಣನಿದ್ದ ಸ್ಥಳಕ್ಕೆ ಪ್ರಯಾಣ ಮಾಡಿದನು.

ತಮಭಿಕ್ರಮ್ಯ ನಾಗೇಂದ್ರೋ ಮತಿಮಾನ್ ಸ ನರೇಶ್ವರ ।
ಪ್ರೋವಾಚ ಮಧುರಂ ವಾಕ್ಯಂ ಪ್ರಕೃತ್ಯಾ ಧರ್ಮವತ್ಸಲಃ ॥೨॥

ಸ್ವಭಾವತಃ ಧರ್ಮವತ್ಸಲನಾದ, ಬುದ್ಧಿವಂತನಾದ ನಾಗರಾಜನು ಬ್ರಾಹ್ಮಣನ ಬಳಿ ಸಾಗಿ ಮಧುರವಾದ ಈ ಮಾತುಗಳನ್ನು ಹೇಳಿದನು.

ಭೋ ಭೋ ಕ್ಷಾಮ್ಯಾಭಿಭಾಷೇ ತ್ವಾಂ ನ ರೋಷಂ ಕರ್ತುಮರ್ಹಸಿ ।
ಇಹ ತ್ವಮಭಿಸಂಪ್ರಾಪ್ತಃ ಕಸ್ಯಾರ್ಥೇ ಕಿಂ ಪ್ರಯೋಜನಮ್ ॥೩॥

ಭೋ ಭೋ ಬ್ರಾಹ್ಮಣನೇ, ನನ್ನ ಅಪರಾಧವನ್ನು ಮನ್ನಿಸು. ಸಿಟ್ಟಾಗಬೇಡ. ನಿನ್ನನ್ನು ಪ್ರಶ್ನಿಸುತ್ತಿದ್ದೇನೆ. ಯಾರಿಗಾಗಿ ಆಗಮಿಸಿರುವಿ? ಯಾವ ಪ್ರಯೋಜನವನ್ನು ಬಯಸಿ ಬಂದಿರುವೆ?

ಆಭಿಮುಖ್ಯಾದಭಿಕ್ರಮ್ಯ ಸ್ನೇಹಾತ್ ಪೃಚ್ಛಾಮಿ ತೇ ದ್ವಿಜ ।
ವಿವಿಕ್ತೇ ಗೋಮತೀತೀರೇ ಕಿಂ ವಾ ತ್ವಂ ಪರ್ಯುಪಾಸಸೇ ॥೪॥

ಬ್ರಾಹ್ಮಣನೇ, ಹತ್ತಿರ ಬಂದು ಸ್ನೇಹದಿಂದ ಪ್ರಶ್ನಿಸುತ್ತಿದ್ದೇನೆ. ನಿರ್ಜನವಾದ ಗೋಮತಿ ತೀರದಲ್ಲಿ ಯಾರನ್ನು ಉಪಾಸನೆ ಮಾಡುತ್ತಿರುವೆ?

ಬ್ರಾಹ್ಮಣಃ

ಧರ್ಮಾರಣ್ಯಂ ಹಿ ಮಾಂ ವಿದ್ಧಿ ನಾಗಂ ದ್ರಷ್ಟುಮಿಹಾಗತಮ್ ।
ಪದ್ಮನಾಭಂ ದ್ವಿಜಶ್ರೇಷ್ಠಂ ತತ್ರ ಮೇ ಕಾರ್ಯಮಾಹಿತಮ್ ॥೫॥

ಬ್ರಾಹ್ಮಣ– ಬ್ರಾಹ್ಮಣನೇ, ನನ್ನನ್ನು ಧರ್ಮಾರಣ್ಯನೆಂಬ ಹೆಸರಿನವನೆಂದು ತಿಳಿ. ನಾನು ಪದ್ಮನಾಭನೆಂಬ ಹೆಸರಿನ ನಾಗರಾಜನನ್ನು ನೋಡುವ ದೃಷ್ಟಿಯಿಂದ ಬಂದಿರುತ್ತೇನೆ. ನನಗೆ ಅವನಲ್ಲಿ ಸ್ವಲ್ಪ ಕೆಲಸವಿದೆ.

ತಸ್ಯ ಚಾಹಮಸಾನ್ನಿಧ್ಯಂ ಶ್ರುತವಾನಸ್ಮಿ ತಂ ಗತಮ್ ।
ಸ್ವಜನಂ ತಂ ಪ್ರತೀಕ್ಷಾಮಿ ಪರ್ಜನ್ಯಮಿವ ಕರ್ಷಕಃ ॥೬॥

ನಾಗರಾಜನು ನಾಗಪುರದಲ್ಲಿಲ್ಲ ಎಂದು, ದೂರಪ್ರಯಾಣ ಮಾಡಿದ್ದಾನೆಂದು ಅವನ ಬಂಧುಜನರಿಂದ ಕೇಳಿಸಿಕೊಂಡಿದ್ದೇನೆ. ಕೃಷಿಕನು ಮಳೆಯನ್ನು ನಿರೀಕ್ಷಿಸುವಂತೆ ನಾಗರಾಜನ ಆಗಮನವನ್ನು ಪ್ರತೀಕ್ಷಿಸುತ್ತಿದ್ದೇನೆ.

ತಸ್ಯ ಚಾಕ್ಲೇಶಕರಣಂ ಸ್ವಸ್ತಿಕಾರಸಮಾಹಿತಮ್ ।
ವರ್ತಯಾಮ್ಯಯುತಂ ಬ್ರಹ್ಮ ಯೋಗಯುಕ್ತೋ ನಿರಾಮಯಃ ॥೭॥

ರೋಗದಿಂದ ದೂರನಾದ, ಯೋಗಜ್ಞನಾದ ನಾನು ನಾಗರಾಜನಿಗೆ ಯಾವ ಕ್ಲೇಶವೂ ಆಗದೆ ಕುಶಲನಾಗಿ ಮನೆಗೆ ಮರಳಿಬರಲೆಂದು ವೇದಪಠನ ಮಾಡುತ್ತಿದ್ದೇನೆ.

ನಾಗಃ

ಅಹೋ ಕಲ್ಯಾಣವೃತ್ತಸ್ತ್ವಂ ಸಾಧು ಸಜ್ಜನವತ್ಸಲಃ ।
ಶ್ರವಾಢ್ಯಸ್ತ್ವಂ ಮಹಾಭಾಗ ಪರಂ ಸ್ನೇಹೇನ ಪಶ್ಯಸಿ ॥೮॥

ನಾಗರಾಜ– ಮಹಾಭಾಗನೇ, ನಿನ್ನ ಆಚರಣೆಯು ಮಂಗಳವಾದುದು, ನೀನು ಸತ್ಪುರುಷನು, ಸಜ್ಜನ ವತ್ಸಲನು. ಯಾವುದೇ ಕಾರಣದಿಂದ ನೀನು ನಿಂದನೀಯನಲ್ಲ. ಮತ್ತೊಬ್ಬರನ್ನು ಪ್ರೀತಿಯಿಂದಲೇ ಕಾಣುತ್ತಿ.

ಅಹಂ ಸ ನಾಗೋ ವಿಪ್ರರ್ಷೇ ಯಥಾ ಮಾಂ ವಿಂದತೇ ಭವಾನ್ ।
ಆಜ್ಞಾಪಯ ಯಥಾ ಸ್ವೈರಂ ಕಿಂ ಕರೋಮಿ ಪ್ರಿಯಂ ತವ ॥೯॥

ವಿಪ್ರರ್ಷಿಯೇ, ನೀನು ಪ್ರತೀಕ್ಷಿಸಲು ಇಚ್ಛಿಸಿರುವ ಪದ್ಮನಾಭನಾಗನು ನಾನೇ. ನಿನ್ನ ಇಚ್ಛೆಗನುಗುಣವಾಗಿ ನನಗೆ ಆದೇಶ ಮಾಡು. ಯಾವ ಪ್ರಿಯವಾದ ಕಾರ್ಯವನ್ನು ಮಾಡಿಕೊಡಲಿ?

ಭವಂತಂ ಸ್ವಜನಾದಸ್ಮಿ ಸಂಪ್ರಾಪ್ತಂ ಶ್ರುತವಾನಿಹ ।
ಅತಸ್ತಾ ್ವಂ ಸ್ವಯಮೇವಾಹಂ ದ್ರಷ್ಟುಮಭ್ಯಾಗತೋ ದ್ವಿಜ ॥೧೦॥

ದ್ವಿಜಶ್ರೇಷ್ಠನೇ, ನನ್ನ ಬಂಧುಜನರಿಂದ ಆಗಮನದ ಸಮಾಚಾರ ಕೇಳಿದೆನು. ಆದ್ದರಿಂದ ನಾನಾಗಿಯೇ ನಿನ್ನನ್ನು ಸಂದರ್ಶಿಸಲು ಆಗಮಿಸಿದ್ದೇನೆ.

ಸಂಪ್ರಾಪ್ತಶ್ಚ ಭವಾನದ್ಯ ಕೃತಾರ್ಥಃ ಪ್ರತಿಯಾಸ್ಯತಿ ।
ವಿಸ್ರಬ್ಧೋ ಮಾಂ ದ್ವಿಜಶ್ರೇಷ್ಠ ವಿಷಯೇ ಯೋಕ್ತುಮರ್ಹಸಿ ॥೧೧॥

ನನ್ನ ಉದ್ದೇಶದಿಂದ ಆಗಮಿಸಿರುವ ನೀನು ಕೃತಾರ್ಥನಾಗಿ ಹಿಂದಿರುಗುತ್ತಿ, ಸಂಶಯ ಪಡಬೇಡ. ನಂಬಿಕೆಯಿಟ್ಟು ನನ್ನನ್ನು ನಿನ್ನ ಕಾರ್ಯದಲ್ಲಿ ನಿಯೋಜಿಸು.

ವಯಂ ಹಿ ಭವತಾ ಸರ್ವೇ ಗುಣಕ್ರೀತಾ ವಿಶೇಷತಃ ।
ಯಸ್ತ ್ವಮಾತ್ಮಹಿತಂ ತ್ಯಕ್ತಾ ್ವ ಮಾಮೇವೇಹಾನುರುಧ್ಯಸೇ ॥೧೨॥

ನಿನ್ನ ಸುಖವನ್ನು ತೊರೆದು ನನ್ನ ಕಲ್ಯಾಣವನ್ನೇ ಯೋಚಿಸುತ್ತಿರುವ ನೀನು ನನ್ನನ್ನು, ನನ್ನ ಬಂಧು-ಬಾಂಧವರನ್ನು ಗುಣಗಳಿಂದಲೇ ಕೊಂಡುಕೊಂಡಿರುವೆ.

ಬ್ರಾಹ್ಮಣಃ

ಆಗತೋಽಹಂ ಮಹಾಭಾಗ ತವ ದರ್ಶನಲಾಲಸಃ ।
ಕಂಚಿದರ್ಥಮನರ್ಥಜ್ಞಃ ಪ್ರಷ್ಟುಕಾಮೋ ಭುಜಂಗಮ ॥೧೩॥

ಬ್ರಾಹ್ಮಣ– ಮಹಾಭಾಗನೇ, ನಾಗರಾಜನೇ, ನಾನು ನಿನ್ನನ್ನು ನೋಡುವ ಅಭಿಪ್ರಾಯದಿಂದಲೇ ಆಗಮಿಸಿದ್ದೇನೆ. ನನಗೆ ತಿಳಿಯದೆ ಇರುವ ಒಂದು ವಿಷಯವನ್ನು ನಿನ್ನಿಂದ ತಿಳಿಯಲು ಬಯಸುತ್ತೇನೆ.

ಅಹಮಾತ್ಮಾನಮಾತ್ಮಸ್ಥೋ ಮಾರ್ಗಮಾಣೋಽತ್ಮನೋ ಹಿತಮ್ ।
ವಾಸಾರ್ಥಿನಂ ಮಹಾಪ್ರಾಜ್ಞ ಬಲವಂತಮುಪಾಸ್ಮಿ ಹ ॥೧೪॥

ವಿಷಯಗಳ ಚೇಷ್ಟೆಯಿಂದ ವಿರಕ್ತನಾಗಿ ನನ್ನ ಮನಸ್ಸು ಪರಮಾತ್ಮನಲ್ಲೇ ನೆಲೆಗೊಂಡಿರುತ್ತದೆ. ಜೀವರಿಗೆಲ್ಲ ಗತಿ ಎನಿಸಿದ ಪರಬ್ರಹ್ಮನನ್ನು ಹುಡುಕುತ್ತಿದ್ದೇನೆ. ಆದರೆ ನನ್ನ ಮನಸ್ಸಿನಲ್ಲಿ ದ್ವಂದ್ವ ಹುಟ್ಟಿದೆ. ಚಂಚಲವಾಗಿದೆ. ಗೃಹವನ್ನೇ ಬಯಸುತ್ತಿದೆ, ವೈರಾಗ್ಯವನ್ನೂ ಬಯಸುತ್ತಿದೆ.

ಪ್ರಕಾಶಿತಸ್ತ್ವಂ ಸ್ವಗುಣೈರ್ಯಶೋಗರ್ಭಗಭಸ್ತಿಭಿಃ ।
ಶಶಾಂಕಕರಸಂಸ್ಪರ್ಶೈರ್ಹಾರ್ದೈ ರಾತ್ಮಪ್ರಕಾಶಿತೈಃ ॥೧೫॥

ಚಂದ್ರನ ಕಿರಣಗಳಂತೆ ಸುಖಸ್ಪರ್ಶ ನೀಡುವ, ಸ್ವಪ್ರಕಾಶವಾದ, ಯಶಸ್ಸಿಗೆ ಕಾರಣವಾದ ಕಿರಣಗಳಿಂದ ಕೂಡಿದ ನಿನ್ನ ಗುಣಗಳಿಂದ ನೀನು ಅತ್ಯಂತ ಪ್ರಕಾಶಮಾನವಾಗಿ ಕಾಣುತ್ತಿರುವೆ.

ತಸ್ಯ ಮೇ ಪ್ರಶ್ನಮುತ್ಪನ್ನಂ ಛಿಂಧಿ ತ್ವಮನಿಲಾಶನ ।
ಪಶ್ಚಾತ್ ಕಾರ್ಯಂ ವದಿಷ್ಯಾಮಿ ಶ್ರೋತುಮರ್ಹತಿ ಮೇ ಭವಾನ್ ॥

ವಾಯುಭಕ್ಷನೇ, ಈ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆ ಹುಟ್ಟಿದೆ. ನೀನು ಉತ್ತರಿಸಿ ಸಂದೇಹವನ್ನು ಪರಿಹರಿಸು. ಬಳಿಕ ನನ್ನ ಕಾರ್ಯವೇನೆಂದು ಹೇಳುತ್ತೇನೆ, ಕೃಪೆ ತೋರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಚತುರ್ನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೈದನೆಯ ಅಧ್ಯಾಯ

ನಾಗರಾಜನಿಂದ ಬ್ರಾಹ್ಮಣನಿಗೆ ಸೂರ್ಯಲೋಕದ ಆಶ್ಚರ್ಯಸಂಗತಿಗಳ ವಿವರಣೆ.

ಬ್ರಾಹ್ಮಣಃ

ವಿವಸ್ವತೋ ಗಚ್ಛತಿ ಪರ್ಯಯೇಣ
ವೋಢುಂ ಭವಾಂಸ್ತಂ ರಥಮೇಕಚಕ್ರಮ್ ।
ಆಶ್ಚರ್ಯಭೂತಂ ಯದಿ ತತ್ರ ಕಿಂಚಿದ್
ದೃಷ್ಟಂ ತ್ವಯಾ ಶಂಸಿತುಮರ್ಹಸಿ ತ್ವಮ್ ॥೧॥

ಬ್ರಾಹ್ಮಣ– ನಾಗರಾಜನೇ, ನೀನು ಆ ಸೂರ್ಯನ ಏಕಚಕ್ರರಥವನ್ನು ಧರಿಸಲು ನಿಯಮದ ಪ್ರಕಾರ ಅಲ್ಲಿಗೆ ಹೋಗುತ್ತಿ. ಸೂರ್ಯಮಂಡಲದಲ್ಲಿ ನೀನು ಕಂಡ ಆಶ್ಚರ್ಯಕರವಾದ ಘಟನೆಗಳೇನಾದರೂ ಇದ್ದರೆ ನನಗೂ ಹೇಳುವ ಕೃಪೆತೋರು.

ನಾಗಃ

ಯಸ್ಯ ರಶ್ಮಿಸಹಸ್ರೇಷು ಶಾಖಾಸ್ವಿವ ವಿಹಂಗಮಾಃ ।
ವಸಂತ್ಯಾಶ್ರಿತ್ಯ ಮುನಯಃ ಸಂಸಿದ್ಧಾ ದೈವತೈಃ ಸಹ ॥೨॥

ನಾಗ– ಮರದ ಕೊಂಬೆಗಳಲ್ಲಿ ಪಕ್ಷಿಗಳು ಆಶ್ರಯವನ್ನು ಹೊಂದಿರುವಂತೆ ಸಿದ್ಧಿಯನ್ನು ಪಡೆದ ದೇವತೆಗಳಿಂದ ಸಹಿತರಾದ ಮುನಿಗಳು ಸೂರ್ಯನ ಸಾವಿರಾರು ಕಿರಣಗಳಲ್ಲಿ ಆಶ್ರಯವನ್ನು ಹೊಂದಿ ವಾಸ ಮಾಡುತ್ತಿದ್ದಾರೆ.

ಯತೋ ವಾಯುರ್ವಿನಿಃಸೃತ್ಯ ಸೂರ್ಯರಶ್ಮ್ಯಾಶ್ರಿತೋ ಮಹಾನ್ ।
ವಿಜೃಂಭತ್ಯಂಬರೇ ವಿಪ್ರಾ ಕಿಮಾಶ್ಚರ್ಯತರಂ ತತಃ ॥೩॥

ವಾಯುವು ಸೂರ್ಯಮಂಡಲದಿಂದಲೇ ಹೊರಹೊಮ್ಮುತ್ತಾ ಸೂರ್ಯ ಕಿರಣಗಳನ್ನು ಆಶ್ರಯಿಸಿ ಆಕಾಶದಲ್ಲಿ ವಿಜೃಂಭಿಸುತ್ತಾನೆ. ಅದಕ್ಕಿಂತಲೂ ಆಶ್ಚರ್ಯಕರವಾದ ಸಂಗತಿ ಯಾವುದಿದೆ?

ಶುಕ್ರೋ ನಾಮಾಸಿತಃ ಪಾದೋ ಯಸ್ಯ ವಾರಿಧರೋಂಬರೇ ।
ತೋಯಂ ಸೃಜತಿ ವರ್ಷಾಸು ಕಿಮಾಶ್ಚರ್ಯಮತಃ ಪರಮ್ ॥೪॥

ಶುಕ್ರ ಎಂಬ ಹೆಸರಿನ ಕಾಲಮೇಘವು ಆಕಾಶದಲ್ಲಿ ಮಳೆಗಾಲದಲ್ಲಿ ನೀರನ್ನು ಸೃಷ್ಟಿಸುತ್ತದೆ. ಆ ಮೇಘವು ಸೂರ್ಯನಿಂದಲೇ ಉತ್ಪನ್ನವಾದುದು. ಅದಕ್ಕಿಂತಲೂ ಆಶ್ಚರ್ಯಕರವಾದುದು ಏನು?

ಯೋಽಷ್ಟಮಾಸಾಂಸ್ತು ಶುಚಿನಾ ಕಿರಣೇನೋಜ್ಝಿತಂ ಪಯಃ ।
ಪರ್ಯಾದತ್ತೇ ಪುನಃ ಕಾಲೇ ಕಿಮಾಶ್ಚರ್ಯಮತಃ ಪರಮ್ ॥೫॥

ಸೂರ್ಯದೇವನು ಮಳೆಗಾಲದಲ್ಲಿ ಭೂಮಿಗೆ ಸುರಿಸಿದ ನೀರನ್ನು ಪುನಃ ಎಂಟು ತಿಂಗಳ ಕಾಲ ಶುದ್ಧವಾದ ಕಿರಣಗಳಿಂದ ಸಂಗ್ರಹಿಸುತ್ತಾನೆ. ಇದಕ್ಕಿಂತಲೂ ಆಶ್ಚರ್ಯಕರವಾದ ಸಂಗತಿ ಏನು?

ಯಸ್ಯ ತೇಜೋವಿಶೇಷೇಷು ನಿತ್ಯಮಾತ್ಮಾ ಪ್ರತಿಷ್ಠಿತಃ ।
ಯತೋ ಬೀಜಂ ಮಹೀ ಚೇಯಂ ಧಾರ್ಯತೇ ಸಚರಾಚರಮ್ ॥೬॥

ಸೂರ್ಯದೇವನ ಕಿರಣಗಳಲ್ಲಿ ಸಾಕ್ಷಾತ್ ಪರಮಾತ್ಮನೇ ಅಂತರ್ಯಾಮಿಯಾಗಿ ಸನ್ನಿಹಿತನಾಗಿದ್ದಾನೆ. ಸೂರ್ಯನಿಂದಲೇ ಅನೇಕ ವಿಧವಾದ ಬೀಜಗಳು ಹುಟ್ಟುತ್ತವೆ. ಚರಾಚರ ಪ್ರಾಣಿಗಳಿಂದ ಯುಕ್ತವಾದ ಭೂಮಿಯನ್ನು ಸೂರ್ಯನೇ ಧರಿಸಿದ್ದಾನೆ.

ಯತ್ರ ದೇವೋ ಮಹಾಬಾಹುಃ ಶಾಶ್ವತಃ ಪರಮೋಕ್ಷರಃ ।
ಅನಾದಿನಿಧನೋ ವಿಪ್ರಾ ಕಿಮಾಶ್ಚರ್ಯಮತಃ ಪರಮ್ ॥೭॥

ಯಾವ ಸೂರ್ಯಮಂಡಲದಲ್ಲಿ ಮಹಾಬಾಹುವಾದ, ಶಾಶ್ವತನೂ, ಪರಮನೂ, ಅಕ್ಷರನೂ, ಅನಾದಿನಿಧನನೂ ಆದ ಪರಬ್ರಹ್ಮನು ಸನ್ನಿಹಿತನಾಗಿದ್ದಾನೆ. ವಿಪ್ರನೇ, ಇದಕ್ಕಿಂತಲೂ ಆಶ್ಚರ್ಯಕರವಾದುದು ಏನು?

ಆಶ್ಚರ್ಯಾಣಾಮಿವಾಶ್ಚರ್ಯಮಿದಮೇಕಂ ತು ಮೇ ಶೃಣು ।
ವಿಮಲೇ ಯನ್ಮಯಾ ದೃಷ್ಟಮಂಬರೇ ಸೂರ್ಯಸಂಶ್ರಯಾತ್ ॥೮॥

ಸೂರ್ಯನ ಆಶ್ರಯದಿಂದ ನಾನು ಮೂಲವಾದ ಆಕಾಶದಲ್ಲಿ ನೋಡಿದ ಆಶ್ಚರ್ಯಗಳಲ್ಲಿಯೇ ಆಶ್ಚರ್ಯಕರವಾದ ಒಂದು ಸಂಗತಿಯನ್ನು ಹೇಳುತ್ತೇನೆ, ಕೇಳು.

ಪುರಾ ಮಧ್ಯಾಹ್ನಸಮಯೇ ಲೋಕಾಂಸ್ತಪತಿ ಭಾಸ್ಕರೇ ।
ಪ್ರತ್ಯಾದಿತ್ಯಪ್ರತೀಕಾಶಃ ಸರ್ವತಃ ಪ್ರತ್ಯದೃಶ್ಯತ ॥೯॥

ಹಿಂದೆ ಸೂರ್ಯನು ಮಧ್ಯಾಹ್ನದ ಸಮಯದಲ್ಲಿ ಲೋಕಗಳನ್ನು ತನ್ನ ಪ್ರಖರವಾದ ಕಿರಣಗಳಿಂದ ಪ್ರಕಾಶಗೊಳಿಸುತ್ತಿದ್ದಾಗ ಅದೇ ಆಕಾಶದಲ್ಲಿ ಸೂರ್ಯನಂತೆ ಕಂಗೊಳಿಸುತ್ತಿದ್ದ ಮತ್ತೊಬ್ಬ ಪುರುಷನು ಎಲ್ಲ ಕಡೆಯಿಂದಲೂ ಕಾಣಿಸಿದನು.

ಸ ಲೋಕಾಂಸ್ತೇಜಸಾ ಸರ್ವಾನ್ ಸ್ವಭಾಸಾ ನಿರ್ವಿಭಾಸಯನ್ ।
ಆದಿತ್ಯಾಭಿಮುಖೋಭ್ಯೇತಿ ಗಗನಂ ಪಾಟಯನ್ನಿವ ॥೧೦॥

ಅವನಾದರೂ ತನ್ನ ತೇಜಸ್ಸಿನಿಂದ ಎಲ್ಲ ಲೋಕಗಳನ್ನು ಪ್ರಕಾಶಗೊಳಿಸುತ್ತಾ ಆಕಾಶವನ್ನೇ ಸೀಳಿಬಿಡುತ್ತಾನೋ ಎಂಬಂತೆ ವೇಗವಾಗಿ ಸೂರ್ಯನಿಗೆ ಅಭಿಮುಖವಾಗಿ ಬಂದನು.

ನಾಗಃ

ಯಸ್ಯ ರಶ್ಮಿಸಹಸ್ರೇಷು ಶಾಖಾಸ್ವಿವ ವಿಹಂಗಮಾಃ ।
ವಸಂತ್ಯಾಶ್ರಿತ್ಯ ಮುನಯಃ ಸಂಸಿದ್ಧಾ ದೈವತೈಃ ಸಹ ॥೨॥

ನಾಗ– ಮರದ ಕೊಂಬೆಗಳಲ್ಲಿ ಪಕ್ಷಿಗಳು ಆಶ್ರಯವನ್ನು ಹೊಂದಿರುವಂತೆ ಸಿದ್ಧಿಯನ್ನು ಪಡೆದ ದೇವತೆಗಳಿಂದ ಸಹಿತರಾದ ಮುನಿಗಳು ಸೂರ್ಯನ ಸಾವಿರಾರು ಕಿರಣಗಳಲ್ಲಿ ಆಶ್ರಯವನ್ನು ಹೊಂದಿ ವಾಸ ಮಾಡುತ್ತಿದ್ದಾರೆ.

ಯತೋ ವಾಯುರ್ವಿನಿಃಸೃತ್ಯ ಸೂರ್ಯರಶ್ಮ್ಯಾಶ್ರಿತೋ ಮಹಾನ್ ।
ವಿಜೃಂಭತ್ಯಂಬರೇ ವಿಪ್ರಾ ಕಿಮಾಶ್ಚರ್ಯತರಂ ತತಃ ॥೩॥

ವಾಯುವು ಸೂರ್ಯಮಂಡಲದಿಂದಲೇ ಹೊರಹೊಮ್ಮುತ್ತಾ ಸೂರ್ಯ ಕಿರಣಗಳನ್ನು ಆಶ್ರಯಿಸಿ ಆಕಾಶದಲ್ಲಿ ವಿಜೃಂಭಿಸುತ್ತಾನೆ. ಅದಕ್ಕಿಂತಲೂ ಆಶ್ಚರ್ಯಕರವಾದ ಸಂಗತಿ ಯಾವುದಿದೆ?

ಶುಕ್ರೋ ನಾಮಾಸಿತಃ ಪಾದೋ ಯಸ್ಯ ವಾರಿಧರೋಂಬರೇ ।
ತೋಯಂ ಸೃಜತಿ ವರ್ಷಾಸು ಕಿಮಾಶ್ಚರ್ಯಮತಃ ಪರಮ್ ॥೪॥

ಶುಕ್ರ ಎಂಬ ಹೆಸರಿನ ಕಾಲಮೇಘವು ಆಕಾಶದಲ್ಲಿ ಮಳೆಗಾಲದಲ್ಲಿ ನೀರನ್ನು ಸೃಷ್ಟಿಸುತ್ತದೆ. ಆ ಮೇಘವು ಸೂರ್ಯನಿಂದಲೇ ಉತ್ಪನ್ನವಾದುದು. ಅದಕ್ಕಿಂತಲೂ ಆಶ್ಚರ್ಯಕರವಾದುದು ಏನು?

ಯೋಽಷ್ಟಮಾಸಾಂಸ್ತು ಶುಚಿನಾ ಕಿರಣೇನೋಜ್ಝಿತಂ ಪಯಃ ।
ಪರ್ಯಾದತ್ತೇ ಪುನಃ ಕಾಲೇ ಕಿಮಾಶ್ಚರ್ಯಮತಃ ಪರಮ್ ॥೫॥

ಸೂರ್ಯದೇವನು ಮಳೆಗಾಲದಲ್ಲಿ ಭೂಮಿಗೆ ಸುರಿಸಿದ ನೀರನ್ನು ಪುನಃ ಎಂಟು ತಿಂಗಳ ಕಾಲ ಶುದ್ಧವಾದ ಕಿರಣಗಳಿಂದ ಸಂಗ್ರಹಿಸುತ್ತಾನೆ. ಇದಕ್ಕಿಂತಲೂ ಆಶ್ಚರ್ಯಕರವಾದ ಸಂಗತಿ ಏನು?

ಯಸ್ಯ ತೇಜೋವಿಶೇಷೇಷು ನಿತ್ಯಮಾತ್ಮಾ ಪ್ರತಿಷ್ಠಿತಃ ।
ಯತೋ ಬೀಜಂ ಮಹೀ ಚೇಯಂ ಧಾರ್ಯತೇ ಸಚರಾಚರಮ್ ॥೬॥

ಸೂರ್ಯದೇವನ ಕಿರಣಗಳಲ್ಲಿ ಸಾಕ್ಷಾತ್ ಪರಮಾತ್ಮನೇ ಅಂತರ್ಯಾಮಿಯಾಗಿ ಸನ್ನಿಹಿತನಾಗಿದ್ದಾನೆ. ಸೂರ್ಯನಿಂದಲೇ ಅನೇಕ ವಿಧವಾದ ಬೀಜಗಳು ಹುಟ್ಟುತ್ತವೆ. ಚರಾಚರ ಪ್ರಾಣಿಗಳಿಂದ ಯುಕ್ತವಾದ ಭೂಮಿಯನ್ನು ಸೂರ್ಯನೇ ಧರಿಸಿದ್ದಾನೆ.

ಯತ್ರ ದೇವೋ ಮಹಾಬಾಹುಃ ಶಾಶ್ವತಃ ಪರಮೋಕ್ಷರಃ ।
ಅನಾದಿನಿಧನೋ ವಿಪ್ರಾ ಕಿಮಾಶ್ಚರ್ಯಮತಃ ಪರಮ್ ॥೭॥

ಯಾವ ಸೂರ್ಯಮಂಡಲದಲ್ಲಿ ಮಹಾಬಾಹುವಾದ, ಶಾಶ್ವತನೂ, ಪರಮನೂ, ಅಕ್ಷರನೂ, ಅನಾದಿನಿಧನನೂ ಆದ ಪರಬ್ರಹ್ಮನು ಸನ್ನಿಹಿತನಾಗಿದ್ದಾನೆ. ವಿಪ್ರನೇ, ಇದಕ್ಕಿಂತಲೂ ಆಶ್ಚರ್ಯಕರವಾದುದು ಏನು?

ಆಶ್ಚರ್ಯಾಣಾಮಿವಾಶ್ಚರ್ಯಮಿದಮೇಕಂ ತು ಮೇ ಶೃಣು ।
ವಿಮಲೇ ಯನ್ಮಯಾ ದೃಷ್ಟಮಂಬರೇ ಸೂರ್ಯಸಂಶ್ರಯಾತ್ ॥೮॥

ಸೂರ್ಯನ ಆಶ್ರಯದಿಂದ ನಾನು ಮೂಲವಾದ ಆಕಾಶದಲ್ಲಿ ನೋಡಿದ ಆಶ್ಚರ್ಯಗಳಲ್ಲಿಯೇ ಆಶ್ಚರ್ಯಕರವಾದ ಒಂದು ಸಂಗತಿಯನ್ನು ಹೇಳುತ್ತೇನೆ, ಕೇಳು.

ಪುರಾ ಮಧ್ಯಾಹ್ನಸಮಯೇ ಲೋಕಾಂಸ್ತಪತಿ ಭಾಸ್ಕರೇ ।
ಪ್ರತ್ಯಾದಿತ್ಯಪ್ರತೀಕಾಶಃ ಸರ್ವತಃ ಪ್ರತ್ಯದೃಶ್ಯತ ॥೯॥

ಹಿಂದೆ ಸೂರ್ಯನು ಮಧ್ಯಾಹ್ನದ ಸಮಯದಲ್ಲಿ ಲೋಕಗಳನ್ನು ತನ್ನ ಪ್ರಖರವಾದ ಕಿರಣಗಳಿಂದ ಪ್ರಕಾಶಗೊಳಿಸುತ್ತಿದ್ದಾಗ ಅದೇ ಆಕಾಶದಲ್ಲಿ ಸೂರ್ಯನಂತೆ ಕಂಗೊಳಿಸುತ್ತಿದ್ದ ಮತ್ತೊಬ್ಬ ಪುರುಷನು ಎಲ್ಲ ಕಡೆಯಿಂದಲೂ ಕಾಣಿಸಿದನು.

ಸ ಲೋಕಾಂಸ್ತೇಜಸಾ ಸರ್ವಾನ್ ಸ್ವಭಾಸಾ ನಿರ್ವಿಭಾಸಯನ್ ।
ಆದಿತ್ಯಾಭಿಮುಖೋಭ್ಯೇತಿ ಗಗನಂ ಪಾಟಯನ್ನಿವ ॥೧೦॥

ಅವನಾದರೂ ತನ್ನ ತೇಜಸ್ಸಿನಿಂದ ಎಲ್ಲ ಲೋಕಗಳನ್ನು ಪ್ರಕಾಶಗೊಳಿಸುತ್ತಾ ಆಕಾಶವನ್ನೇ ಸೀಳಿಬಿಡುತ್ತಾನೋ ಎಂಬಂತೆ ವೇಗವಾಗಿ ಸೂರ್ಯನಿಗೆ ಅಭಿಮುಖವಾಗಿ ಬಂದನು.

ಹುತಾಹುತಿರಿವ ಜ್ಯೋತಿರ್ವ್ಯಾಪ್ಯ ತೇಜೋಮರೀಚಿಭಿಃ ।
ಅನಿರ್ದೇಶ್ಯೇನ ರೂಪೇಣ ದ್ವಿತೀಯ ಇವ ಭಾಸ್ಕರಃ ॥೧೧॥

ಆಜ್ಯಾಹುತಿಯಿಂದ ಪ್ರಜ್ವಲಿಸಲ್ಪಟ್ಟ ಅಗ್ನಿದೇವನಂತೆ ತೇಜೋಮಯವಾದ ಕಿರಣಗಳಿಂದ ಸಮಸ್ತ ಜ್ಯೋತಿರ್ಮಂಡಲವನ್ನು ವ್ಯಾಪಿಸಿ ನಿರ್ದಿಷ್ಟವಾಗಿ ಇದೆ ಎಂದು ಹೇಳಲಾಗದಿರುವ ರೂಪದಿಂದ ಎರಡನೆಯ ಸೂರ್ಯನಂತೆಯೇ ಕಂಗೊಳಿಸುತ್ತಿದ್ದನು.

ತಸ್ಯಾಭಿಗಮನಪ್ರಾಪ್ತೌ ಹಸ್ತೌ ದತ್ತೌ ವಿವಸ್ವತಾ ।
ತೇನಾಪಿ ದಕ್ಷಿಣೌ ಹಸ್ತೌ ದತ್ತಃ ಪ್ರತ್ಯರ್ಚನಾರ್ಥಿನಾ ॥೧೨॥

ಆ ಮಹಾಪುರುಷನು ಸೂರ್ಯನ ಸಮೀಪಕ್ಕೆ ಬರುತ್ತಿರಲು ಸೂರ್ಯನು ತನ್ನ ಎರಡೂ ಕೈಗಳನ್ನು ಮುಂದಕ್ಕೆ ಚಾಚಿ ಅವನನ್ನು ಸ್ವಾಗತಿಸಿದನು. ಮಹಾಪುರುಷನೂ ಸೂರ್ಯನನ್ನು ಪ್ರತಿಯಾಗಿ ಸಮ್ಮಾನಿಸಲು ಬಲಗೈಯನ್ನು ಮುಂದೆ ನೀಡಿದನು.

ತತೋ ಭಿತ್ತ್ವೈವ ಗಗನಂ ಪ್ರವಿಷ್ಟೌ ರವಿಮಂಡಲಮ್ ।
ಏಕೀಭೂತಂ ಚ ತತ್ತೇಜಃ ಕ್ಷಣೇನಾದಿತ್ಯತಾಂ ಗತಮ್ ॥೧೩॥

ಬಳಿಕ ಮಹಾಪುರುಷನು ಆಕಾಶವನ್ನು ಭೇದಿಸಿಕೊಂಡು ಸೂರ್ಯಮಂಡಲವನ್ನು ಪ್ರವೇಶಿಸಿದನು. ಕ್ಷಣಮಾತ್ರದಲ್ಲಿ ಅವನ ತೇಜಸ್ಸು ಸೂರ್ಯನ ತೇಜಸ್ಸಿನ ಜೊತೆಗೆ ಒಂದಾಗಿ ಆದಿತ್ಯನಂತೆಯೇ ಆಗಿಹೋಯಿತು.

ತತ್ರ ನಃ ಸಂಶಯೋ ಜಾತಸ್ತಯೋಸ್ತೇಜಃಸಮಾಗಮೇ ।
ಅನಯೋಃ ಕೋ ಭವೇತ್ ಸೂರ್ಯೋ ರಥಸ್ಥೋ ಯೋಽಯಮಾಗತಃ॥

ತೇ ವಯಂ ಜಾತಸಂದೇಹಾಃ ಪರ್ಯಪೃಚ್ಛಾಮಹೇ ರವಿಮ್ ।
ಕ ಏಷ ದಿವಮಾಕ್ರಮ್ಯ ಗತಃ ಸೂರ್ಯ ಇವಾಪರಃ ॥೧೫॥

ಆ ಎರಡು ತೇಜಸ್ಸುಗಳು ಪರಸ್ಪರ ಸೇರಿದಾಗ ನಿಜವಾದ ಸೂರ್ಯನು ಯಾರೆಂದು ನಮ್ಮಲ್ಲಿ ಸಂಶಯವುಂಟಾಯಿತು. ರಥದಲ್ಲಿರುವವನು ಸೂರ್ಯನೇ ಅಥವಾ ಈಗ ಬಂದು ಸೇರಿಕೊಂಡವನು ನಿಜವಾದ ಸೂರ್ಯನೇ ಎಂದು ಸಂದೇಹ ಪಟ್ಟೆವು. ಸಂದೇಹದಿಂದ ಭಗವನ್ ಆಕಾಶವನ್ನೇ ತೇಜಸ್ಸಿನಿಂದ ವ್ಯಾಪಿಸಿ ಇಲ್ಲಿಗೆ ಆಗಮಿಸಿದ

ಸೂರ್ಯನಂತೆಯೇ ಕಾಣುತ್ತಿರುವ ಅವನು ಯಾರು ಎಂದು ರಥದಲ್ಲಿರುವ ಸೂರ್ಯನನ್ನು ಪ್ರಶ್ನಿಸಿದೆವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತಾರನೆಯ ಅಧ್ಯಾಯ

ಉಂಛವೃತ್ತಿಯಿಂದ ಸಿದ್ಧಿಯನ್ನು ಪಡೆದ ಸಾಧಕನ ಗತಿಯ ವರ್ಣನೆ.

ಸೂರ್ಯಃ

ನೈಷ ದೇವೋऽನಿಲಸಖೋ ನಾಸುರೋ ನ ಚ ಪನ್ನಗಃ ।
ಉಂಛವೃತ್ತಿವ್ರತೇ ಸಿದ್ಧೋ ಮುನಿರೇಷ ದಿವಂ ಗತಃ ॥೧॥

ಸೂರ್ಯ– ನನ್ನೆದುರು ಬಂದು ಸೂರ್ಯಮಂಡಲವನ್ನು ಸೇರಿದ ವ್ಯಕ್ತಿಯು ವಾಯುಸಖನಾದ ಅಗ್ನಿಯಲ್ಲ, ಅಸುರನೂ ಅಲ್ಲ, ನಾಗನೂ ಅಲ್ಲ. ಉಂಛವೃತ್ತಿಯ ವ್ರತದಿಂದ ಸಿದ್ಧಿಯನ್ನು ಪಡೆದ ಮುನಿಯು ನನ್ನ ಮೂಲಕ ಸ್ವರ್ಗಲೋಕಕ್ಕೆ ಹೋದನು.

ಏಷ ಮೂಲಫಲಾಹಾರಃ ಶೀರ್ಣಪರ್ಣಾಶನಸ್ತಥಾ ।
ಅಬ್ಭಕ್ಷೋ ವಾಯುಭಕ್ಷಶ್ಚ ಆಸೀದ್ ವಿಪ್ರಃ ಸಮಾಹಿತಃ ॥೨॥

ಈ ಬ್ರಾಹ್ಮಣನು ಕಂದಮೂಲಫಲಗಳನ್ನೇ ಆಹಾರವನ್ನಾಗಿ ಸ್ವೀಕರಿಸುತ್ತಿದ್ದನು. ಒಣಗಿದ ಎಲೆಗಳು, ಕೇವಲ ನೀರು ಇವುಗಳನ್ನೇ ಸ್ವೀಕರಿಸುತ್ತಾ, ವಾಯು ಭಕ್ಷಕನಾಗಿಯೂ ಏಕಾಗ್ರಚಿತ್ತನಾಗಿ ಹರಿಯ ಧ್ಯಾನದಲ್ಲೇ ಮುಳುಗಿ ಹೋಗಿದ್ದನು.

ಋಚಶ್ಚಾನೇನ ವಿಪ್ರೇಣ ಸಂಹಿತಾಂತರಭಿಷ್ಟುತಾಃ ।
ಸ್ವರ್ಗದ್ವಾರಕೃತೋದ್ಯೋಗೋ ಯೇನಾಸೌ ತ್ರಿದಿವಂ ಗತಃ ॥೩॥

ಈ ಬ್ರಾಹ್ಮಣನು ಸಂಹಿತೆಗಳ ಮಂತ್ರಗಳಿಂದ ಭಗವಂತನನ್ನು ಸ್ತುತಿಸುತ್ತಿದ್ದನು. ಹೀಗೆ ಸ್ವರ್ಗಕ್ಕೆ ದ್ವಾರಗಳೆನಿಸಿದ ಸತ್ಕರ್ಮಗಳನ್ನು ನಡೆಸಿದ ಕಾರಣ ಇವನು ಸ್ವರ್ಗಕ್ಕೆ ಹೋದನು.

ಅಸನ್ನಧೀರನಾಕಾಂಕ್ಷೀ ನಿತ್ಯಮುಂಛಶಿಲಾಶನಃ ।
ಸರ್ವಭೂತಹಿತೇ ಯುಕ್ತ ಏಷ ವಿಪ್ರೋ ಭುಜಂಗಮ ॥೪॥

ವಾಮಮಾರ್ಗದಲ್ಲಿ ಇವನ ಬುದ್ಧಿಯು ಎಂದೂ ಚಲಿಸಲಿಲ್ಲ. ಯಾವ ಬಯಕೆಗಳನ್ನೂ ಹೊಂದುತ್ತಿರಲಿಲ್ಲ. ನಿತ್ಯವೂ ಉಂಛ-ಶಿಲವೃತ್ತಿಗಳಿಂದ ಜೀವನ ನಡೆಸುತ್ತಿದ್ದನು (ಕಣದಲ್ಲಿ ಬಿದ್ದ ಕಾಳುಗಳನ್ನು ಸಂಗ್ರಹಿಸುವುದು ಉಂಛವೃತ್ತಿಯಾದರೆ, ಉದುರಿಬಿದ್ದ ಸಣ್ಣತೆನೆಗಳನ್ನು ಸಂಗ್ರಹಿಸುವುದು ಶಿಲವೃತ್ತಿ ಎನಿಸಿದೆ). ಸರ್ಪಗಳೇ, ಇವನು ಸರ್ವಭೂತಹಿತಚಿಂತಕನಾಗಿದ್ದನು.

ನ ಹಿ ದೇವಾ ನ ಗಂಧರ್ವಾ ನಾಸುರಾ ನ ಚ ಪನ್ನಗಾಃ ।
ಪ್ರಭವಂತೀಹ ಭೂತಾನಾಂ ಪ್ರಾಪ್ತಾನಾಂ ಪರಮಾಂ ಗತಿಮ್ ॥೫॥

ದೇವ-ದಾನವ-ಗಂಧರ್ವ-ಅಸುರ-ಸರ್ಪಗಳಲ್ಲಿ ಯಾರೇ ಆದರೂ ಸೂರ್ಯಮಂಡಲವನ್ನು ಪ್ರವೇಶಿಸುವ ಇಂತಹ ಉತ್ತಮ ಗತಿಯನ್ನು ಪಡೆದವರಿಗಿಂತ ಉತ್ತಮರೆನಿಸರು ಎಂದು ಹೇಳಿದನು.

ನಾಗಃ

ಏತದೇವಂವಿಧಂ ದೃಷ್ಟಮಾಶ್ಚರ್ಯಂ ತತ್ರ ಮೇ ದ್ವಿಜ ।
ಸಂಸಿದ್ಧೋ ಮಾನುಷಃ ಕಾಯೋ ಯೋಽಸೌ ಸಿದ್ಧಗತಿಂ ಗತಃ ।
ಸೂರ್ಯೇಣ ಸಹಿತೋ ಬ್ರಹ್ಮನ್ ಪೃಥಿವೀಂ ಪರಿವರ್ತತೇ ॥೬॥

ನಾಗ– ಓ ಬ್ರಾಹ್ಮಣನೇ, ನಾನು ನೋಡಿದ ಆಶ್ಚರ್ಯಕರವಿಷಯವೇನೆಂದರೆ ಕೇವಲ ಉಂಛವೃತ್ತಿ ವ್ರತವನ್ನು ಹಿಡಿದು, ಸಿದ್ಧರ ಗತಿಯನ್ನು ಪಡೆದ ಆ ಬ್ರಾಹ್ಮಣನು ಈಗಲೂ, ಸೂರ್ಯನ ಜೊತೆಗೇ ಇದ್ದು ಅವನೂ ಭೂಮಿಯನ್ನು ಸುತ್ತುತ್ತಿದ್ದಾನೆ.

ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಷಣ್ಣವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೇಳನೆಯ ಅಧ್ಯಾಯ

ಉಂಛವೃತ್ತಿಯ ಮಹಿಮೆಯನ್ನು ತಿಳಿದ ಬ್ರಾಹ್ಮಣನು ಹಾಗೆಯೇ ಅನುಷ್ಠಾನ ಮಾಡುವುದಾಗಿ ಹೇಳಿ ಮನೆಗೆ ಹೊರಟನು.

ಬ್ರಾಹ್ಮಣಃ

ಆಶ್ಚರ್ಯಂ ನಾತ್ರ ಸಂದೇಹಃ ಸುಪ್ರೀತೋಽಸ್ಮಿ ಭುಜಂಗಮ ।
ಅನ್ವಥೋಪಗತೈರ್ವಾಕ್ಯೈಃ ಪಂಥಾನಂ ಚಾಸ್ಮಿ ದರ್ಶಿತಃ ॥೧॥

ಬ್ರಾಹ್ಮಣ– ನಾಗರಾಜನೇ, ನೀನು ಹೇಳಿದ ಸಂಗತಿಗಳೆಲ್ಲವೂ ಆಶ್ಚರ್ಯವಾದವುಗಳೇ ಎಂಬುದರಲ್ಲಿ ಸಂಶಯವಿಲ್ಲ. ನಿನ್ನ ಮಾತಿನಿಂದ ಸುಪ್ರೀತನಾಗಿದ್ದೇನೆ. ನನ್ನ ಮನಸ್ಸಿನಲ್ಲಿ ಯಾವ ಅಪೇಕ್ಷೆಯಿತ್ತೋ ಅದಕ್ಕೆ ಅನುಕೂಲವಾದ ಮಾತನ್ನು ಹೇಳಿ ನನಗೆ ಮಾರ್ಗದರ್ಶನ ಮಾಡಿರುವಿ.

ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸಾಧೋ ಭುಜಗಸತ್ತಮ ।
ಸ್ಮರಣೀಯೋಽಸ್ಮಿ ಭವತಾ ಸಂಪ್ರೇಷಣನಿಯೋಜನೈಃ ॥೨॥

ಸರ್ಪರಾಜನೇ, ನಿನಗೆ ಮಂಗಳವಾಗಲಿ. ನಾನು ಹೋಗಿ ಬರುತ್ತೇನೆ. ನಿನಗೆ ಎಲ್ಲಿಗಾದರೂ ಕಳುಹಿಸಿ ಮಾಡಬೇಕಾದ ಕೆಲಸವಿದ್ದಲ್ಲಿ ನನ್ನನ್ನು ಸ್ಮರಿಸು. ಖಂಡಿತ ಬಂದು ಕೆಲಸ ಮಾಡಿಕೊಡುತ್ತೇನೆ.

ನಾಗಃ

ಅನುಕ್ತ್ವಾ ಮದ್ಗತಂ ಕಾರ್ಯಂ ಕ್ವೇದಾನೀಂ ಪ್ರಸ್ಥಿತೋ ಭವಾನ್ ।
ಉಚ್ಯತಾಂ ದ್ವಿಜ ಯತ್ ಕಾರ್ಯಂ ಯದರ್ಥಂ ತ್ವಮಿಹಾಗತಃ ॥೩॥

ನಾಗರಾಜ– ವಿಪ್ರಶ್ರೇಷ್ಠನೇ, ನಿನ್ನ ಮನಸ್ಸಿನ ಕಾರ್ಯವನ್ನು ಹೇಳದೆ ಎಲ್ಲಿಗೆ ಹೋಗುತ್ತಿರುವಿ? ನಿನಗೆ ಆಗಬೇಕಾದ ಕಾರ್ಯ ಯಾವುದು? ಯಾವ ಪ್ರಯೋಜನದ ಉದ್ದೇಶದಿಂದ ಇಲ್ಲಿಗೆ ಬಂದವನಾಗಿದ್ದಿ?

ಉಕ್ತಾನುಕ್ತೇ ಕೃತೇ ಕಾರ್ಯೇ ಮಾಮಾಮಂತ್ರ್ಯ ದ್ವಿಜರ್ಷಭ ।
ಮಯಾ ಪ್ರತ್ಯಭ್ಯನುಜ್ಞಾತಸ್ತತೋ ಯಾಸ್ಯಸಿ ಬ್ರಾಹ್ಮಣ ॥೪॥

ಸುವ್ರತನೇ, ನಿನ್ನ ಮನಸ್ಸಿನ ಆಸೆಯನ್ನು ಹೇಳು ಅಥವಾ ಹೇಳದಿರು. ನೀನು ಬಂದಿರುವ ಕಾರ್ಯವು ಮುಗಿದ ಬಳಿಕವೇ ನನ್ನ ಅನುಮತಿಯನ್ನು ಪಡೆದು ಇಲ್ಲಿಂದ ಪ್ರಯಾಣ ಮಾಡಬೇಕು.

ನ ಹಿ ಮಾಂ ಕೇವಲಂ ದೃಷ್ಟ್ವಾ ತ್ಯಕ್ತ್ವಾ ಪ್ರಣಯವಾನಿಹ ।
ಗಂತುಮರ್ಹಸಿ ವಿಪ್ರರ್ಷೇ ವೃಕ್ಷಮೂಲಗತೋ ಯಥಾ ॥೫॥

ವಿಪ್ರರ್ಷಿಯೇ, ನನ್ನ ಮೇಲೆ ಅತಿಯಾದ ಪ್ರೀತಿಯನ್ನು ಹೊಂದಿರುವ ನೀನು ಮರದ ಬುಡದಲ್ಲೇ ಕುಳಿತು ಪ್ರಯಾಣವನ್ನು ಮುಂದುವರಿಸುವ ದಾರಿಹೋಕನಂತೆ ನನ್ನನ್ನು ದರ್ಶನ ಮಾಡಿ ಹೊರಟು ಹೋಗುವುದು ಉಚಿತವಾದುದಲ್ಲ.

ತ್ವಯಿ ಚಾಹಂ ದ್ವಿಜಶ್ರೇಷ್ಠ ಭವಾನ್ ಮಯಿ ನ ಸಂಶಯಃ ।
ಲೋಕೋಽಯಂ ಭವತಃ ಸರ್ವಃ ಕಾ ಚಿಂತಾ ಮಯಿ ತೇಽನಘ ॥೬॥

ಅನಘನೇ, ಬ್ರಾಹ್ಮಣಶ್ರೇಷ್ಠನೇ, ನನ್ನಲ್ಲಿ ನಿನಗೆ ಪ್ರೀತಿಯಿದೆ, ನಿನ್ನಲ್ಲಿ ನನಗೂ ಪ್ರೀತಿಯಿದೆ. ಇದರಲ್ಲಿ ಸಂಶಯವಿಲ್ಲ. ಈ ನನ್ನ ಲೋಕವೆಲ್ಲವೂ ನಿನ್ನದೇ. ನನ್ನ ಮನೆಯಲ್ಲಿಯೇ ವಾಸಿಸು. ನಿನಗೆ ಯಾವ ಚಿಂತೆ?

ಬ್ರಾಹ್ಮಣಃ

ಏವಮೇತನ್ಮಹಾಪ್ರಾಜ್ಞ ವಿಜ್ಞಾತಾರ್ಥ ಭುಜಂಗಮ ।
ನಾತಿರಿಕ್ತಾಸ್ತ್ವಯಾ ದೇವಾಃ ಸರ್ವಥೈವ ಯಥಾತಥಮ್ ॥೭॥

ಬ್ರಾಹ್ಮಣ– ಮಹಾಪ್ರಾಜ್ಞನೇ, ಆತ್ಮಜ್ಞಾನಿಯೇ, ಸರ್ಪರಾಜನೇ, ನೀನು ಹೇಳಿದಂತೆಯೇ ಆಗಲಿ. ದೇವತೆಗಳೂ ನಿನ್ನನ್ನು ಮೀರರು. ಈ ಮಾತು ಖಂಡಿತವಾಗಿಯೂ ಸತ್ಯವಾದುದು.

ಯ ಏವಾಹಂ ಸ ಏವ ತ್ವಮೇವಮೇತದ್ ಭುಜಂಗಮ ।
ಅಹಂ ಭವಾಂಶ್ಚ ಭೂತಾನಿ ಸರ್ವೇ ಸರ್ವತ್ರಗಾಃ ಸದಾ ॥೮॥

ನೀನು ಸೂರ್ಯಮಂಡಲಾಂತರ್ಗತನಾದ ನಾರಾಯಣನ ಯಾವ ವಿಷಯವನ್ನು ಹೇಳಿದೆಯೋ, ಸಮಸ್ತ ಪ್ರಾಣಿಗಳು ಎಲ್ಲಿಗೆ ಹೋಗಿ ಸೇರುತ್ತಿದ್ದಾರೋ ಅಂತಹ ನಾರಾಯಣನೇ ನಿನ್ನಲ್ಲಿ ಸನ್ನಿಹಿತನಾಗಿದ್ದಾನೆ, ನನ್ನಲ್ಲೂ ಸನ್ನಿಹಿತನಾಗಿದ್ದಾನೆ. ಎಲ್ಲರಲ್ಲಿಯೂ ಆ ಭಗವಂತನೇ ನೆಲೆಸಿದ್ದಾನೆ.

ಆಸೀತ್ತು ಮೇ ಭೋಗಪತೇ ಸಂಶಯಃ ಪುಣ್ಯಸಂಚಯೇ ।
ಸೋಹಮುಂಛವ್ರತಂ ಸಾಧೋ ಚರಿಷ್ಯಾಮ್ಯರ್ಥದರ್ಶನಮ್ ॥೯॥

ನನಗೆ ಪುಣ್ಯಸಂಗ್ರಹ ವಿಷಯದಲ್ಲಿ ಸಂಶಯವುಂಟಾಗಿತ್ತು. ಯಾವ ಸಾಧನೆಯ ಮೂಲಕ ಸದ್ಗತಿಯನ್ನು ಹೊಂದಬೇಕೆಂಬ ನಿಶ್ಚಯವಿರಲಿಲ್ಲ. ಆದ್ದರಿಂದ ಆಗಮಿಸಿದೆ. ನಿನ್ನ ಜೊತೆ ನಡೆಸಿದ ಸಂವಾದದಿಂದ ನನ್ನ ಸಂಶಯವು ಪರಿಹಾರವಾಗಿದೆ. ಉಂಛವ್ರತವನ್ನು ಆಚರಿಸಲು ತೆರಳುತ್ತೇನೆ.

ಏಷ ಮೇ ನಿಶ್ಚಯಃ ಸಾಧೋ ಕೃತಃ ಕಾರಣವತ್ತರಃ ।
ಆಮಂತ್ರಯಾಮಿ ಭದ್ರಂ ತೇ ಕೃತಾರ್ಥೋಽಸ್ಮಿ ಭುಜಂಗಮ ॥೧೦॥

ಸತ್ಪುರುಷನೇ, ಇದು ನನ್ನ ನಿಶ್ಚಯವು. ನಿನ್ನ ಮೂಲಕ ನಾನು ಉದ್ದೇಶಿಸಿದ ಕಾರ್ಯ ನಡೆದಿದೆ. ಕೃತಾರ್ಥನಾಗಿದ್ದೇನೆ. ನಿನಗೆ ಮಂಗಳವಾಗಲಿ. ಪ್ರಯಾಣಿಸಲು ಅನುಮತಿಯನ್ನು ನೀಡು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತನವತ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೆಂಟನೆಯ ಅಧ್ಯಾಯ

ನಾಗರಾಜನ ಅನುಮತಿಯನ್ನು ಪಡೆದು ಚ್ಯವನಮಹರ್ಷಿಯ ಬಳಿ ಸಾಗಿದ ಬ್ರಾಹ್ಮಣನು ಉಂಛವೃತ್ತಿಯ ದೀಕ್ಷೆಯನ್ನು ಸ್ವೀಕರಿಸಿದುದು.

ಭೀಷ್ಮಃ

ಸ ಚಾಮಂತ್ರ್ಯೋರಗಶ್ರೇಷ್ಠಂ ಬ್ರಾಹ್ಮಣಃ ಕೃತನಿಶ್ಚಯಃ ।
ದೀಕ್ಷಾಕಾಂಕ್ಷೀ ತದಾ ರಾಜನ್ ಚ್ಯವನಂ ಭಾರ್ಗವಂ ಶ್ರಿತಃ ॥೧॥

ಭೀಷ್ಮ– ಯುಧಿಷ್ಠಿರನೇ, ನಾಗರಾಜನ ಅನುಮತಿಯನ್ನು ಪಡೆದು ಬ್ರಾಹ್ಮಣನು ತನ್ನ ಊರಿಗೆ ಬಂದು ಉಂಛವೃತ್ತಿಯ ದೀಕ್ಷೆಯನ್ನು ಸ್ವೀಕರಿಸಲು ಭಾರ್ಗವನಾದ ಚ್ಯವನ ಮಹರ್ಷಿಯನ್ನು ಸಮೀಪಿಸಿದನು.

ಸ ತೇನ ಕೃತಸಂಸ್ಕಾರೋ ಧರ್ಮಮೇವೋಪತಸ್ಥಿವಾನ್ ।
ತಥೈವ ಚ ಕಥಾಮೇತಾಂ ರಾಜನ್ಕಥಿತವಾಂಸ್ತದಾ ॥೨॥

ಚ್ಯವನ ಮಹರ್ಷಿಯಾದರೂ ಈ ಧರ್ಮಾರಣ್ಯನೆಂಬ ಬ್ರಾಹ್ಮಣನಿಗೆ ದೀಕ್ಷೆಯನ್ನು ನೀಡಿ, ಅವನನ್ನು ಸತ್ಕರಿಸಿ ಕಳುಹಿಸಿಕೊಟ್ಟನು. ಬಳಿಕ ಧರ್ಮಾರಣ್ಯನು ಉಂಛವೃತ್ತಿಯನ್ನೇ ಆಶ್ರಯಿಸಿ ಜೀವನವನ್ನು ನಿರ್ವಹಿಸುತ್ತಿದ್ದನು.

ಭಾರ್ಗವೇಣಾಪಿ ರಾಜೇಂದ್ರ ಜನಕಸ್ಯ ನಿವೇಶನೇ ।
ಕಥೈಷಾ ಕಥಿತಾ ಪುಣ್ಯಾ ನಾರದಾಯ ಮಹಾತ್ಮನೇ ॥೩॥

ಉಂಛವೃತ್ತಿಯ ಮಹಿಮೆಗೆ ಸಂಬಂಧಿಸಿದ ಕಥೆಯನ್ನು ಬ್ರಾಹ್ಮಣನು ಚ್ಯವನ ಮಹರ್ಷಿಗೆ ಹೇಳಿದನು. ಚ್ಯವನನು ಜನಕನ ಅರಮನೆಯಲ್ಲಿ ಈ ಪುಣ್ಯಕಥೆಯನ್ನು ನಾರದರಿಗೆ ಹೇಳಿದನು.

ನಾರದೇನಾಪಿ ರಾಜೇಂದ್ರ ದೇವೇಂದ್ರಸ್ಯ ನಿವೇಶನೇ ।
ಕಥಿತಾ ಭರತಶ್ರೇಷ್ಠ ಪೃಷ್ಟೇನಾಕ್ಲಿಷ್ಟಕರ್ಮಣಾ ॥೪॥

ಭರತಶ್ರೇಷ್ಠನೇ, ಬಳಿಕ ಈ ಮಂಗಳಪ್ರದವಾದ ಕಥೆಯನ್ನು ನಾರದರು ದೇವೇಂದ್ರನ ಮನೆಯಲ್ಲಿ ಹೇಳಿದರು. ದೇವೇಂದ್ರನು ಈ ಕಥೆಯನ್ನು ನಾರದರ ಮುಖದಿಂದ ಕೇಳಿದನು.

ದೇವರಾಜೇನ ಚ ಪುರಾ ಕಥೈಷಾ ಕಥಿತಾ ಶುಭಾ ।
ಸಮಸ್ತೇಭ್ಯಃ ಪ್ರಶಂಸ್ತೇಭ್ಯೋ ವಸುಭ್ಯೋ ವಸುಧಾಧಿಪ ॥೫॥

ಆ ದೇವೇಂದ್ರನಾದರೂ ಸಮಸ್ತರಾದ, ಪ್ರಶಸ್ತರಾದ ವಸುದೇವತೆಗಳಿಗೆ ಈ ಕಥೆಯನ್ನು ಹೇಳಿದನು.

ಯದಾ ಚ ಮಮ ರಾಮೇಣ ಯುದ್ಧಮಾಸೀತ್ ಸುದಾರುಣಮ್ ।
ವಸುಭಿಶ್ಚ ತದಾ ರಾಜನ್ ಕಥೇಯಂ ಕಥಿತಾ ಮಮ ॥೬॥

ಯಾವಾಗ ನನಗೂ ಪರಶುರಾಮನಿಗೂ ಯುದ್ಧವು ನಡೆಯಿತೋ ಆ ಸಮಯದಲ್ಲಿ ವಸುಗಳು ಈ ಪುಣ್ಯಕಥೆಯನ್ನು ನನಗೆ ಹೇಳಿದರು.

ಪೃಚ್ಛಮಾನಾಯ ತತ್ತ್ವೇನ ಮಯಾ ತುಭ್ಯಂ ವಿಶಾಂಪತೇ ।
ಕಥೇಯಂ ಕಥಿತಾ ಪುಣ್ಯಾ ಧರ್ಮ್ಯಾ ಧರ್ಮಭೃತಾಂ ವರ ॥೭॥

ಧರ್ಮಾತ್ಮರಲ್ಲಿ ಶ್ರೇಷ್ಠನಾದ ಯುಧಿಷ್ಠಿರನೇ, ನೀನು ಧರ್ಮಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದಾಗ ಅದಕ್ಕೆ ಉತ್ತರವಾಗಿ ಪುಣ್ಯಪ್ರದವಾದ ಈ ಕಥೆಯನ್ನು ನಿನಗೆ ಹೇಳಿದ್ದೇನೆ.

ತದೇಷ ಪರಮೋ ಧರ್ಮೋ ಯನ್ಮಾಂ ಪೃಚ್ಛಸಿ ಭಾರತ ।
ಅಸನ್ನಧೀರನಾಕಾಂಕ್ಷೀ ಧರ್ಮಾರ್ಥಕರಣೇ ನೃಪ ॥೮॥

ನೀನು ಯಾವ ಧರ್ಮವು ಶ್ರೇಷ್ಠ ಎಂದು ಕೇಳಿದಾಗ, ಈ ಉಂಛವೃತ್ತಿಯು ಪರಮಧರ್ಮ ಎಂದು ಉತ್ತರಿಸಿದ್ದೇನೆ. ನಿಷ್ಕಾಮನೆಯಿಂದ ಯಾವ ಅಪೇಕ್ಷೆಗಳೂ ಇಲ್ಲದೆ ಧರ್ಮವನ್ನು ಮಾಡಲು ತೊಡಗುವಿಯಾದರೆ ಉಂಛವೃತ್ತಿಯನ್ನೇ ಆಶ್ರಯಿಸಬೇಕು.

ಸ ಚ ಕಿಲ ಕೃತನಿಶ್ಚಯೋ ದ್ವಿಜಾಗ್ರ್ಯೋ
ಭುಜಗಪತಿಪ್ರತಿದೇಶಿತಾರ್ಥಕೃತ್ಯಃ ।
ಯಮನಿಯಮಸಮಾಹಿತೋ ವನಾಂತಂ
ಪರಿಗಣಿತೋಂಛಶಿಲಾಶನಃ ಪ್ರವಿಷ್ಟಃ ॥೯॥

ಆ ದ್ವಿಜಶ್ರೇಷ್ಠನಾದ ಧರ್ಮಾರಣ್ಯನು ತನ್ನ ಧರ್ಮದಲ್ಲಿ ನಿಶ್ಚಯಜ್ಞಾನವನ್ನು ಹೊಂದಿ, ಆ ನಾಗರಾಜನು ಉಪದೇಶಿಸಿದ ಸತ್ಕರ್ಮವೇ ತನ್ನ ಕರ್ತವ್ಯವೆಂದು ಆ ವ್ರತವನ್ನು ಕೈಗೊಳ್ಳಲು ನಿಶ್ಚಯಿಸಿದನು. ನಂತರ ಮತ್ತೊಂದು ಅರಣ್ಯಕ್ಕೆ ಸಾಗಿ ಯಮ-ನಿಯಮಗಳನ್ನು ಪಾಲಿಸುತ್ತಾ, ಉಂಛ ಮತ್ತು ಶಿಲವೃತ್ತಿಯಿಂದ ದೊರಕಿದ ಪರಿಮಿತವಾದ ಆಹಾರವನ್ನು ಸ್ವೀಕರಿಸುತ್ತಾ, ಆ ವ್ರತದಿಂದಲೇ ಸಿದ್ಧಿಯನ್ನು ಹೊಂದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟನವತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನೂರ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಮೋಕ್ಷಧರ್ಮಪರ್ವ ॥

॥ ಪ್ರೀತೋऽಸ್ತು ಕೃಷ್ಣಪ್ರಿಯಃ ॥

★ ★ ★ ★ ★

ಚತುರ್ದ್ವಾರಂ ಪುರುಷಂಚತುರ್ಮುಖಿಂ
ಚತುರ್ಧಾಚೈನಮುಪಯಾತಿ ನಿಂದಾ ।
ಬಾಹುಭ್ಯಾಂ ವಾಚ ಉದರಾದುಪಸ್ಥಾ
ತ್ತೇಷಾಂದ್ವಾರಂದ್ವಾರಪಾಲೋ ಬುಭೂಷೇತ್ ॥

ಮನುಷ್ಯನಿಗೆ ಕೈಕಾಲುಗಳು, ಮಾತು, ಹೊಟ್ಟೆ, ಉಪಸ್ಥ ಎಂಬ ನಾಲ್ಕು ದ್ವಾರಗಳಿವೆ. ಇವುಗಳನ್ನು ಚೆನ್ನಾಗಿ ರಕ್ಷಿಸಬೇಕು. ಇವುಗಳ ನಿಯಂತ್ರಣವನ್ನು ಸಾಧಿಸಿಕೊಂಡಿರ ಬೇಕು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದವೆಂಬ ನಾಲ್ಕು ಮುಖಗಳನ್ನು ಹೊಂದಿರುವ ಪರಮಪುರುಷನನ್ನು ನಾಲ್ಕು ದ್ವಾರಗಳ ನಿಗ್ರಹದಿಂದ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ ಅಷ್ಟಾಂಗ ಯೋಗಗಳಿಂದ ಹೊಂದಬೇಕು.

ISBN: 978-93-88813-34-1